200693

OUP—552—7-7-66—10,000

OSMANIA UNIVERSITY LIBRARY

Call No. Accession No.

Author

Title

This book should be returned on or before the date last marked below.

ಪಂಪರಾಮಾಯಣಂ

ಎಂಬ

ರಾಮಚಂದ್ರ ಚರಿತ ಪುರಾಣಂ

ಪಂಪರಾಮಾಯಣಂ

ಎಂಬ


ರಾಮಚಂದ್ರಚರಿತ ಪುರಾಣಂ



ಅಭಿನವ ಪಂಪನೆಂದು ಹೆಸರುಗೊಂಡ

ನಾಗಚಂದ್ರ ಕವಿಯಿಂದ

ವಿರಚಿತವಾದುದು



ಬೆಂಗಳೂರು

ಕರ್ನಾಟಕ ಸಾಹಿತ್ಯ ಪರಿಷತ್ತು

೧೯೨೧

ಈ ಪುಸ್ತಕದ ಸರ್ವ ಸ್ವಾತಂತ್ರ್ಯವೂ

ಮೈಸೂರು ವಿದ್ಯಾಭ್ಯಾಸದ ಇಲಾಖೆಯನ್ನು

ಸೇರಿರುವುದು

ಉಪೋದ್ಘಾತ

ಪಂಪರಾಮಾಯಣದ ಈ ಮುದ್ರಣವು ಹಿಂದಣ ಮುದ್ರಣಗಳ ಆಧಾರದ ಮೇಲೆ, ಕೈಬರೆಹದ*ಮೂರು ಪ್ರತಿಗಳ ಸಹಾಯದಿಂದ ತಿದ್ದಿದುದಾಗಿದೆ. ಹಿಂದಣ ಮುದ್ರಣಗಳಲ್ಲಿ ಹಲವು ತಪ್ಪುಗಳು ಬಿದ್ದಿದ್ದುವಲ್ಲದೆ ಮುದ್ರಣದ ರೀತಿಯೂ ಸಮರ್ಪಕವಾಗಿರಲಿಲ್ಲ. ಇದರಲ್ಲಿ ಆ ನ್ಯೂನತೆಗಳನ್ನು ಸಾಧ್ಯವಾದ ಮಟ್ಟಿಗೆ ಸರಿಪಡಿಸಲು ಪ್ರಯತ್ನವಾಡಿದೆ. ಹಿಂದಣ ಮುದ್ರಣಗಳಲ್ಲಿ ಪದಗಳನ್ನು ಸರಿಯಾಗಿ ವಿಂಗಡಿಸದೆ ಇರುವುದರಿಂದ ಓದುವುದು ಅಷ್ಟು ಸುಲಭವಲ್ಲವಾಗಿ, ಈ ಮುದ್ರಣದಲ್ಲಿ ಪದಗಳನ್ನು ವಿಂಗಡಿಸಿರುವುದಲ್ಲದೆ ಆವಶ್ಯಕವಾದ ಸ್ಥಳಗಳಲ್ಲಿ ಸಮಸ್ತಪದಗಳನ್ನೂ ಮಧ್ಯೇ ಸ್ವಲ್ಪ ಸ್ಥಳಬಿಡಿಸಿ ಮುದ್ರಿಸಿದೆ. ಪ್ರಮಾದವಶದಿಂದ ಕೆಲವೆಡೆಗಳಲ್ಲಿ ಸ್ಥಳಬಿಡಿಸಿರುವ ಕ್ರಮವು ತಪ್ಪಾಗಿರುವುದು. ಇವುಗಳಲ್ಲಿ ಮುಖ್ಯವಾದ ಕೆಲವನ್ನು ತಿದ್ದಿ, ಕೆಲವನ್ನು ಶುದ್ಧಿಪತ್ರದಲ್ಲಿ ಕೊಟ್ಟಿದೆ. ಪ್ರೂಫುಗಳನ್ನು ಬಹಳ ಜೋಕೆಯಿಂದ ತಿದ್ದಿದರೂ ಕೆಲವು ಕಾರಣಗಳಿಂದ ತಪ್ಪುಗಳು ಬಿದ್ದಿವೆ. ಇವುಗಳಲ್ಲಿ ಕೆಲವನ್ನು ಕೈಯಿಂದ ತಿದ್ದಿ ಮಿಕ್ಕುವನ್ನು ಶುದ್ಧಿಪತ್ರದಲ್ಲಿ ಕೊಡಲಾಗಿದೆ. ಗ್ರಂಥದ ಆದಿಯಲ್ಲಿ ಕಥಾಸಾರಾಂಶವನ್ನೂ ಕೊನೆಯಲ್ಲಿ ಕ್ಲಿಷ್ಟಪದಗಳ ನಿಘಂಟುವನ್ನೂ ಹೊಸದಾಗಿ ಸೇರಿಸಿದೆ.

ಕವಿತೆ.—ಈ ಚಂಪೂ ಗ್ರಂಥಕ್ಕೆ ಕವಿಯು ರಾಮಚಂದ್ರ ಚರಿತ ಪುರಾಣವೆಂಬ ಹೆಸರನ್ನಿಟ್ಟಿದ್ದರೂ ಇದು ಸಾಮಾನ್ಯವಾಗಿ ಪಂಪರಾಮಾಯಣವೆಂದು ಪ್ರಸಿದ್ಧಿಗೊಂಡಿದೆ. ಇದರಲ್ಲಿಯ ಕಥೆಗೂ ವಾಲ್ಮೀಕಿ ರಾಮಾಯಣದ ಕಥೆಗೂ ಸಾಮಾನ್ಯ

---

* ಈ ಪ್ರತಿಗಳಿಗೆ ಕ, ಖ, ಚ ಎಂಬ ಸಂಕೇತಗಳನ್ನು ಕೊಟ್ಟಿದೆ. 'ಕ' ಎಂಬುದು ಮೈಸೂರು ಓರಿಯಂಟಲ್ ಲೈಬ್ರೆರಿಯ ಓಲೆಯ ಪ್ರತಿ; 'ಖ' ಎಂಬುದು ಮೈಸೂರಿನಲ್ಲಿರುವ ಮು॥ ರಾ॥ ಶ್ರೀ ಜಿನಚಂದ್ರಯ್ಯನವರ ಪುಸ್ತಕ ಭಂಡಾರದಲ್ಲಿ ದೊರೆತ ಓಲೆಯ ಪ್ರತಿ; ಇವೆರಡೂ ಸಾಮಾನ್ಯವಾಗಿ ಒಂದೇ ವಿಧವಾಗಿರುವುವು. 'ಚ' ಎಂಬುದು ಹೊಳಲ್ಕೆರೆಯ ಮು॥ ರಾ॥ ಶ್ರೀ ನಗರದ ಬ್ರಹ್ಮಯ್ಯನವರಿಂದ ದೊರೆತ ಕಾಗದದ ಪ್ರತಿ. 'ಗ, ಘ' ಎಂಬುವು ಮೊದಲನೆಯ ಮತ್ತು ಎರಡನೆಯ ಮುದ್ರಣದ ಪ್ರತಿಗಳು. ಈ ಐದು ಪ್ರತಿಗಳ ಸಹಾಯದಿಂದ, ಕರ್ಣಾಟಕ ಸಾಹಿತ್ಯ ಪರಿಷತ್ತಿನವರು ನಿಯಮಿಸಿದ ಮೇರೆ, ಮೈಸೂರಿನಲ್ಲಿರುವ ಮಹಾರಾಜಾ ಕಾಲೇಜಿನ ಪಂಡಿತರಾದ ಬ್ರ॥ ಶ್ರೀ ಕಾನಕಾನಹಳ್ಳಿ. ವರದಾಚಾರ್ಯರು, ಟ್ರೈನಿಂಗು ಕಾಲೇಜಿನ ಪಂಡಿತರಾದ ಬ್ರ॥ ಶ್ರೀ ತಿರುವಳ್ಳೂರು ಶ್ರೀನಿವಾಸರಾಘವಾಚಾರ್ಯರು, ಅದೇ ಕಾಲೇಜಿನ ಪಂಡಿತರಾಗಿದ್ದ ಬ್ರ॥ ಶ್ರೀ ತಿಮ್ಮಪ್ಪಯ್ಯಶಾಸ್ತ್ರಿಗಳು, ಮಹಾರಾಜಾ ಹೈಸ್ಕೂಲು ಪಂಡಿತರಾದ ಬ್ರ॥ ಶ್ರೀ ಸೀತಾರಾಮಶಾಸ್ತ್ರಿಗಳು—ಈ ನಾಲ್ವರೂ ಕಲೆತು ಮೂಲವನ್ನು ಪರಿಶೋಧಿಸಿ ತಿದ್ದಿದರು. ಈ ಮಧ್ಯೇ ಬ್ರ॥ ಶ್ರೀ ತಿಮ್ಮಪ್ಪಯ್ಯಶಾಸ್ತ್ರಿಗಳು ದೈವಾಧೀನರಾದುದರಿಂದ ಅವರ ಸಹಾಯವು ಮೊದಲು ಹತ್ತು ಅಶ್ವಾಸಗಳಿಗೆ ಮಾತ್ರ ದೊರೆಯಿತು.

ವಾದ ಹೋಲಿಕೆಯಿದ್ದರೂ ಕೆಲವೆಡೆಗಳಲ್ಲಿ ಬಹಳ ವ್ಯತ್ಯಾಸಗಳಿರುವುವು. ಕಥಾ ಸಂದರ್ಭವು ಜೈನ ಪದ್ಧತಿಯನ್ನನುಸರಿಸಿರುವುದರಿಂದ ಜೈನ ಧರ್ಮವು ಅಲ್ಲಲ್ಲಿ ವರ್ಣಿತವಾಗಿದೆ. ಕವಿಯು ಸಂಸ್ಕೃತ ಪದಗಳನ್ನು ಹೆಚ್ಚಾಗಿ ಉಪಯೋಗಿಸಿದ್ದರೂ ಪ್ರಕೃತಕ್ಕೆ ತಕ್ಕಂತೆ ಪದಗಳನ್ನು ಜೋಡಿಸಿರುವುದರಿಂದ ಕವಿತೆಯು ಬಹಳ ಗಂಭೀರವಾಗಿಯೂ ಲಲಿತವಾಗಿಯೂ ಇರುವುದು. ವರ್ಣನಾ ಭಾಗವನ್ನು ಷಡಕ್ಷರಿ ಮೊದಲಾದ ಕವಿಗಳಂತೆ ಲಂಬಿಸದೆ ಸಂದರ್ಭಕ್ಕೆ ತಕ್ಕಂತೆ ಹ್ರಸ್ವಮಾಡಿರುವುದು ಕವಿತಾಸ್ವಾರಸ್ಯವನ್ನು ಹೆಚ್ಚಿಸಿರುವುದು. ಭಾಷೆಯು ನಿರ್ದುಷ್ಟವಾಗಿಯೂ ಕೇವಲ ಪ್ರೌಢವಾಗಿಯೂ ಅಚ್ಚ ಹಳಗನ್ನಡ ಶೈಲಿಯುಳ್ಳದ್ದಾಗಿಯೂ ಕ್ಲಿಷ್ಟವಿಲ್ಲದೆಯೂ ಇರುವುದರಿಂದ ಕವಿತೆಯು ಓದುವವರಿಗೆ ಬಹಳ ಮನೋಹರವಾಗಿರುವುದು.

ಈ ಗ್ರಂಥದಲ್ಲಿ ಮುಂದೆ ಹೇಳುವ ವೃತ್ತಗಳು ಕಾಣಬರುವುವು:—ಕಂದ (೧೪೯೧), ಚಂಪಕಮಾಲೆ (೨೮೧), ಮತ್ತೇಭವಿಕ್ರೀಡಿತ (೨೩೮), ಉತ್ಪಲಮಾಲೆ (೧೭೯), ಮಹಾಸ್ರಗ್ಧರ (೭೯), ಶಾರ್ದೂಲವಿಕ್ರೀಡಿತ (೪೦), ಸ್ರಗ್ಧರ (೮), ಪೃಥ್ವಿ (೭), ದ್ರುತವಿಲಂಬಿತ (೩), ಮಾಲಿನಿ (೩), ಮಂದಾಕ್ರಾಂತ (೨), ಸ್ವಾಗತ (೨), ಹರಿಣಿ (೨); ಅಕ್ಕರ, ಉತ್ಸಾಹ, ತರಳ, ನವನಳಿನ, ಮತ್ತಕೋಕಿಲ, ಮಲ್ಲಿಕಾಮಾಲೆ, ರಥೋದ್ಧತ, ಲಲಿತ–ಇವೆಲ್ಲವೂ ಒಂದೊಂದು ಪದ್ಯಮಾತ್ರ ದೊರೆಯುವುವು. ಒಟ್ಟು ಪದ್ಯ ಸಂಖ್ಯೆ ೨೩೪೩.

ಶಬ್ದಾಲಂಕಾರಗಳಲ್ಲಿ ಅನುಪ್ರಾಸವು ಪೂತ್ರ ಅಲ್ಲಲ್ಲಿ ತಕ್ಕಮಟ್ಟಿಗೆ ದೊರೆಯುವುದಲ್ಲದೆ ಯಮಕ ಮೊದಲಾದುವು ಕಡಿಮೆ. ಅರ್ಥಾಲಂಕಾರಗಳಲ್ಲಿ ಬಳಕೆಯಾಗಿರುವ ಉಪಮೆ, ಉತ್ಪ್ರೇಕ್ಷೆ, ರೂಪಕ, ಸ್ವಭಾವೋಕ್ತಿ, ಅರ್ಥಾಂತರನ್ಯಾಸ, ದೃಷ್ಟಾಂತ—ಇವುಗಳು ಹೆಚ್ಚಾಗಿವೆ; ಶ್ಲೇಷ ಮೊದಲಾದ ವಿಕ್ಕುವು ಕಡಿಮೆ. ರಸಗಳಲ್ಲಿ ಶಾಂತರಸವು ಪ್ರಧಾನವಾಗಿಯೂ ಉಳಿದುವು ಅಂಗವಾಗಿಯೂ ಇವೆ. ಅಷ್ಟಾದಶ ವರ್ಣನೆಗಳೆಲ್ಲವೂ ವ್ಯಕ್ತವಾಗಿವೆ. ಈ ಕಾವ್ಯವು ಕನ್ನಡದಲ್ಲಿ ಇದುವರೆಗೆ ದೊರೆತಿರುವ ಅತ್ಯುತ್ತಮ ಕಾವ್ಯಗಳಲ್ಲೊಂದೆಂದು ನಿಸ್ಸಂಶಯವಾಗಿ ಹೇಳಬಹುದು.

ಕವಿ.— ಈ ಗ್ರಂಥಕಾರನ ನಿಜವಾದ ಹೆಸರು ನಾಗಚಂದ್ರನೆಂದು ಗ್ರಂಥದ ಕೊನೆಯ ಎರಡು ಪದ್ಯಗಳಿಂದ ತಿಳಿಯಬರುವುದು. ಆದರೆ ಆತನು ಅಭಿನವ ಪಂಪನೆಂಬ ಹೆಸರಿನಿಂದಲೇ ಪ್ರಸಿದ್ಧಿಗೆ ಬಂದಿರುವುದರಿಂದ, ಸಂಸ್ಕೃತ ಪುರಾತನ ಕವಿಗಳಲ್ಲಿ ಕಾಳಿದಾಸನು ಹೇಗೆ ಪ್ರಸಿದ್ಧಿ ಪಡೆದಿರುವನೋ ಹಾಗೆಯೇ ಪುರಾತನ ಕನ್ನಡ ಕವಿಗಳಲ್ಲಿ ಆದಿಪಂಪನು ಪ್ರಸಿದ್ಧಿಪಡೆದಿರಬೇಕು. * ಅಭಿನವಪಂಪನು ಈ ಗ್ರಂಥವಲ್ಲದೆ ಮಲ್ಲಿನಾಥಪುರಾಣವೆಂಬ ಕಾವ್ಯವನ್ನೂ ರಚಿಸಿರುವನು. 'ಜಿನಮುನಿ

ತನಯ.' 'ಜಿನಾಕ್ಷರಮಾಲೆ' ಮೊದಲಾದ ಇತರ ಗ್ರಂಥಗಳನ್ನೂ ರಚಿಸಿರುವಂತೆ ದೇವ ಚಂದ್ರನು ರಾಜಾವಳೀ ಕಥೆಯಲ್ಲಿ ಹೇಳಿರುತ್ತಾನೆ. ಅಭಿನವ ಪಂಪನ ದೇಶ, ಕಾಲ, ವಂಶ ಮೊದಲಾದುವು ಯಾವುವೂ ಇವನ ಗ್ರಂಥಗಳಿಂದ ತಿಳಿಯಬರುವುದಿಲ್ಲ. ಆದರೆ ಅವನು ವಿಜಯಪುರದಲ್ಲಿ ಮಲ್ಲಿನಾಥ ಜಿನಾಲಯವನ್ನು ಕಟ್ಟಿಸಿ ಮಲ್ಲಿನಾಥಪುರಾಣವನ್ನು ಬರೆದಂತೆ ಆ ಪುರಾಣದಲ್ಲಿ ಹೇಳಿದೆ. ಈ ವಿಜಯಪುರವು ಈಗಿನ ಬಿಜಾಪುರವಾಗಿರಬಹುದು; ಇವನ ಊರೂ ಇದೇ ಇದ್ದಿರಬಹುದು. ಇವನು ಐಶ್ವರ್ಯವಂತನಾಗಿಯೂ ಉನ್ನತಸ್ಥಿತಿಯಲ್ಲಿದ್ದಂತೆಯೂ ತಿಳಿಯಬರುತ್ತದೆ*. ಇವನ ಬಿರುದುಗಳು :—ಕವಿತಾಮನೋಹರ, ಭಾರತೀಕರ್ಣಪೂರ, ಸಾಹಿತ್ಯವಿದ್ಯಾಧರ, ಮೊದಲಾದುವು. ಇವುಗಳಲ್ಲೊಂದನ್ನು ರಾಮಚಂದ್ರಚರಿತಪುರಾಣದ ಪ್ರತಿ ಆಶ್ವಾಸದ ಕೊನೆಯ ಪದ್ಯದಲ್ಲಿ ಕವಿಯು ಕಥಾನಾಯಕನ ಪರವಾಗಿ ಉಪಯೋಗಿಸುತ್ತಾನೆ.

* **ಕವಿಯ ಕಾಲ**.—ಈ ಕವಿಯ ಕಾಲವನ್ನು ಗೊತ್ತುಮಾಡುವುದಕ್ಕೆ ಕೆಲವು ಆಧಾರಗಳಿರುವುವು :—

(೧) ಎರಡನೆಯ ನಾಗವರ್ಮನು (ಸುಮಾರು ಕ್ರಿ. ಶ. ೧೧೪೫) ತನ್ನ ಕರ್ಣಾಟಕ ಭಾಷಾಭೂಷಣದಲ್ಲಿ "ದ್ವಿತೀಯಾರ್ಥೇ ಚತುರ್ಥೀ" ಎಂಬ ಸೂತ್ರಕ್ಕುದಾಹರಣವಾಗಿ "ಬಹುತಾಪಕ್ಕೆ ಬಿಗುರ್ತು ವಿಷ್ಣು ಪಡೆವಂ ಮತ್ಸ್ಯಾವತಾರಕ್ಕೆ" ಎಂಬ ರಾಮಚಂದ್ರಚರಿತಪುರಾಣದ ಪದ್ಯ (೭—೯) ಭಾಗವನ್ನು ಕೊಟ್ಟಿರುವುದರಿಂದ ಅಭಿನವಪಂಪನು ಈ ನಾಗವರ್ಮನ ಕಾಲಕ್ಕೆ ಹಿಂದೆಯೇ ಪ್ರಸಿದ್ಧಿಗೆ ಬಂದಿರಬೇಕು.

(೨) ಕರ್ಣಪಾರ್ಯನು (ಸು. ೧೧೪೦) ತನ್ನ ನೇಮಿನಾಥಪುರಾಣದಲ್ಲಿ—

ಕಂ॥ ಅದ್ಯತನನಾಗಿಯುಂ ನೆಗ।
ಟ್ಟಾದ್ಯರ ದೊರೆಯೆನಿಸಿ ಮೆಱೆದು ಸಾಹಿತ್ಯ ಕಳಾ ॥
ಹೃದ್ಯತೆಯಿನೆಸೆದನಾ ನಿರ।
ವದ್ಯ ಗುಣಂ ಸಂದ ನಾಗಚಂದ್ರ ಕವೀಂದ್ರಂ ॥

ಎಂದು ಹೊಗಳಿರುತ್ತಾನೆ; ಆದುದರಿಂದ ಪಂಪರಾಮಾಯಣವು ೧೧೪೦ ಕ್ಕೆ ಮೊದಲೇ ಹುಟ್ಟಿರಬೇಕು.

(೩) "ಮುನಿನಾಥಂ ದಶಧರ್ಮಧಾರಿ—"ಎಂಬ ರಾಮಚಂದ್ರಚರಿತಪುರಾಣದ ಪದ್ಯವು (೧—೨೦) ಶ್ರವಣಬೆಳ್ಗೊಳದ ೪೭ ನೆಯ ಶಾಸನದಲ್ಲಿ ದೊರೆಯುತ್ತದೆ. ಈ

* ಕರ್ಣಾಟಕ ಕವಿಚರಿತೆ, ೧—ಲಂ—೮೨.

ಶಾಸನವು ಸುಮಾರು ೧೧೧೫ರಲ್ಲಿ ಬರೆದುದು. ಇದರಲ್ಲಿ ಮೇಲಣ ಪದ್ಯದಲ್ಲಿ ಹೇಳಿರುವ ಮೇಘಚಂದ್ರನು ೧೧೧೫ರಲ್ಲಿ ಗತಿಸಿದಂತೆ ತಿಳಿಸಿದೆ. ಆದುದರಿಂದ ಈ ಗ್ರಂಥವು ೧೧೧೫ ಕ್ಕೆ ಮೊದಲೇ ಹುಟ್ಟಿರಬೇಕು.

(೪) ಮದರಾಸಿನ ಪ್ರಾಚ್ಯ ಕೋಶಾಲಯದಲ್ಲಿ ದೊರೆತ, ೧೧೦೫ ರಲ್ಲಿ ತ್ರಿಭುವನಮಲ್ಲನ ಆಳಿಕೆಯಲ್ಲಿ ಬರೆದ, ಒಂದು ಶಾಸನದಲ್ಲಿ ಒಬ್ಬ ಹಂಪಕವಿಯ ಹೆಸರು ದೊರೆಯುತ್ತದೆ. ಈ ಕವಿಯು ನಾಗಚಂದ್ರನೇ ಇರಬಹುದು.

(೫) ಕಂತೀ ಹಂಪನ ಸಮಸ್ಯೆಗಳನ್ನು ಅನೇಕರು ಕೇಳಿರಬಹುದು. ಈ ಕಂತಿಯು ದ್ವಾರಸಮುದ್ರದ ಬಳ್ಳಾಳ ವಿಷ್ಣುವರ್ಧನರಾಯನ (೧೧೦೪—೧೧೪೧) ಆಸ್ಥಾನ ಪಂಡಿತೆಯಾಗಿದ್ದ ಪ್ರಸಿದ್ಧಳಾದ ಒಬ್ಬ ಕಬ್ಬಿಗಿತಿ. ಅಭಿನವ ಪಂಪನೂ ಅದೇ ಆಸ್ಥಾನದಲ್ಲಿ ಪಂಡಿತನಾಗಿದ್ದಿರಬೇಕು.

ಮೇಲೆ ಹೇಳಿರುವ ಕಾರಣಗಳಿಂದ ಅಭಿನವಪಂಪನು ಸುಮಾರು ೧೧೦೫ ರಲ್ಲಿ ಇದ್ದಿರಬೇಕೆಂದು ತೋರುತ್ತದೆ.

ಕಥಾವಿಷಯ.—ವಿಪುಲಾಚಲದಲ್ಲಿ ವೀರಜಿನ ಪಾರ್ಶ್ವದಲ್ಲಿ ಗಣಾಗ್ರಣಿಯಾದ ಗೌತಮನು ಮಗಧಾಧಿಪನಿಗೆ ಹೇಳಿದ ರಾಮಕಥೆಯನ್ನು ತಾನು ವರ್ಣಿಸುವೆನೆಂದು ಕವಿಯು ಹೇಳುತ್ತಾನೆ (೧—೪೦). ಈ ಕಥೆಯು ಗುರುಪರಂಪರಾಗತವಾಗಿ ಬಂದಂತೆ ತಿಳಿಯಬರುತ್ತದೆ. ಮೇಲೆ ಹೇಳಿದಂತೆ ಕಥೆಯು ಸಾಮಾನ್ಯವಾಗಿ ವಾಲ್ಮೀಕಿ ರಾಮಾಯಣವನ್ನು ಹೋಲುವುದಾದರೂ ಇವೆರಡಕ್ಕೂ ಅನೇಕ ವ್ಯತ್ಯಾಸಗಳಿರುವುವು. ಅಭಿನವಪಂಪನ ಕಥೆಯಲ್ಲಿ ಅನೇಕ ಮಂದಿಗೆ ಜಿನಮುನಿಗಳು ಜನ್ಮಾಂತರ ನಿರೂಪಣವನ್ನು ಮಾಡಿ ಇಹಲೋಕದಲ್ಲಿಯ ಆಶೆಗಳನ್ನು ತಪ್ಪಿಸಿ ದೀಕ್ಷೆಗೊಳ್ಳುವಂತೆ ಮಾಡುವರು. ಆದರೆ ವಾಲ್ಮೀಕಿಯು ರಾಮನನ್ನು ಯಾವಕುಂದೂ ಇಲ್ಲದವನನ್ನಾಗಿಯೂ ಕಥೆಗೆ ಮುಖ್ಯನಾಯಕನನ್ನಾಗಿಯೂ ವರ್ಣಿಸಿರುವಂತೆ ಅಭಿನವಪಂಪನು ವರ್ಣಿಸದೆ ಲಕ್ಷ್ಮಣನನ್ನೇ ಮುಖ್ಯನನ್ನಾಗಿ ವರ್ಣಿಸಿ, ಇತರ ರಾಜರು ಉಲ್ಕಾಪಾತವನ್ನೋ ತಮ್ಮ ನರೆತ ಕೂದಲನ್ನೋ ನೋಡಿದ ಮಾತ್ರದಿಂದಲೇ ಪ್ರಪಂಚದ ಸುಖಗಳು ನಶ್ವರವೆಂದು ತಿಳಿದು ತಪಸ್ಸಿಗೆ ನಿಲ್ಲುವಂತೆ ವರ್ಣಿಸಿರುವಾಗ ರಾಮನಿಗೆಮಾತ್ರ ಕಡೆಯವರೆಗೂ ಈ ನೆನಪೇ ಇಲ್ಲದೆ ಲಕ್ಷ್ಮಣನು ಸತ್ತಾಗ ಅವನ ದೇಹವನ್ನು ಬಹುಕಾಲ ಬಿಡಲಾರದೆ ಅಪ್ಪಿಕೊಂಡಿದ್ದಂತೆ ವರ್ಣಿಸಿರುವುದು ಅಷ್ಟು ಸಮಂಜಸವಾಗಿ ತೋರುವುದಿಲ್ಲ. ಇಷ್ಟೇ ಅಲ್ಲದೆ, ಅಭಿನವಪಂಪನು ಲಕ್ಷ್ಮಣನಿಗೆ ಅನೇಕ ಸ್ಥಳಗಳಲ್ಲಿ ಮದುವೆಮಾಡಿಸಿ ರಾಮನಿಗೆ ಮೂರುಕಡೆ ಮಾತ್ರ ಮದುವೆಮಾಡಿಸುವುದರಿಂದ ಕಥಾಸಂದರ್ಭಕ್ಕೆ ಹೇಗೆ ಹೆಚ್ಚು ಅನುಕೂಲ್ಯವು ದೊರೆತಿರುವುದೋ

ಎರಡು ಕಥೆಗಳಿಗೂ ಇರುವ ಕೆಲವು ಮುಖ್ಯವಾದ ವ್ಯತ್ಯಾಸಗಳನ್ನು ಇಲ್ಲಿ ತೋರಿಸಿರುವೆವು :—ಪಂಪರಾಮಾಯಣದಲ್ಲಿ

(೧) ಪುತ್ರಕಾಮೇಷ್ಟಿ ಯಾಗದ ವಿಷಯವೇ ಇಲ್ಲ; ರಾಮನ ತಾಯಿ ಅಪರಾಜಿತೆ, ಲಕ್ಷ್ಮಣನೊಬ್ಬನೇ ಸುಮಿತ್ರೆಯ ಮಗ, ಶತ್ರುಘ್ನನ ತಾಯಿ ಸುಪ್ರಭೆ.

(೨) ರಾಮಲಕ್ಷ್ಮಣರು ಬಲಾಚ್ಯುತರೆಂದೂ ಕಾರಣಪುರುಷರೆಂದೂ ಹೇಳಿದೆ. ಲಕ್ಷ್ಮಣನಿಗೆ ಎಂಟನೆಯ ಕೇಶವ, ಉಪೇಂದ್ರ, ವಾಸುದೇವ, ಕೃಷ್ಣ, ನಾರಾಯಣ, ಲಕ್ಷ್ಮೀಧರ, ಪುರುಷೋತ್ತಮ, ಜನಾರ್ದನ—ಎಂಬ ಹೆಸರುಗಳೂ ಉಂಟು; ಇವನೇ ನಿಜವಾದ ಕಥಾನಾಯಕನು. ರಾಮನ ವರ್ಣವು ಬಿಳುಪು, ಲಕ್ಷ್ಮಣನದು ಕಪ್ಪು.

(೩) ವಿಶ್ವಾಮಿತ್ರನ ಪ್ರಸ್ತಾವನೇ ಇಲ್ಲ. ನಾರದನು ಸೀತಾದೇವಿಯನ್ನು ಮೋಹಿಸಿದನೆಂದು ಹೇಳಿದೆ.

(೪) ಸೀತಾದೇವಿಗೆ ಪ್ರಭಾಮಂಡಲನೆಂಬ ಅಣ್ಣನಿದ್ದನೆಂದೂ ಅವನು ಖಚರಪತಿಯಾದ ಇಂದುಗತಿಯ ಸಾಕುಮಗನೆಂದೂ, ಅವನು ನಾರದನು ಬರೆದಿಟ್ಟಿದ್ದ ಸೀತೆಯ ಪಟವನ್ನು ನೋಡಿ, ತಿಳಿಯದೆ ಅಕೆಯನ್ನು ಮೋಹಿಸಿ, ಕಡೆಗೆ ನಿಶ್ಚಯಾಂಶವನ್ನು ತಿಳಿದು ವ್ಯಸನಪಟ್ಟನೆಂದೂ ಹೇಳಿದೆ.

(೫) ಖಚರಪತಿಯಾದ ಇಂದುಗತಿಯ ಬಳಿಯಲ್ಲಿದ್ದ ವಜ್ರಾವರ್ತ ಸಾಗರಾವರ್ತಗಳೆಂಬ ಧನುಸ್ಸುಗಳನ್ನು ಆತನು ಜನಕನೊಡನೆ ಮಿಥಿಲೆಗೆ ಕಳುಹಿಸಿದನೆಂದೂ ಅವುಗಳಲ್ಲಿ ಮೊದಲನೆಯದನ್ನು ರಾಮನು ಬಗ್ಗಿಸಿ ಸೀತೆಯನ್ನೂ, ಎರಡನೆಯದನ್ನು ಲಕ್ಷ್ಮಣನು ಬಗ್ಗಿಸಿ ಚಂದ್ರಧ್ವಜನ ಇಬ್ಬರು ಮಕ್ಕಳನ್ನೂ ಪಡೆದರೆಂದು ಹೇಳಿದೆ.

(೬) ಭರತನು ರಾಮಲಕ್ಷ್ಮಣರಿಗುಂಟಾದ ವೈಭವದಿಂದ ವಿಷಾದಪಟ್ಟು ವೈರಾಗ್ಯಪರನಾದಂತೆಯೂ, ಕೈಕೆಯ ಸಲಹೆಯ ಮೇರೆಗೆ ಅವನಿಗೆ ಜನಕನ ತಮ್ಮನಾದ ಕನಕನ ಮಗಳನ್ನು ಮದುವೆ ಮಾಡಿದಂತೆಯೂ ಹೇಳಿದೆ.

(೭) ವಿಜಯ ಯಾತ್ರೆಯಲ್ಲಿ ಲಕ್ಷ್ಮಣನಿಗೆ ಅನೇಕ ಮದುವೆಗಳಾಗುತ್ತವೆ.

(೮) ವಾಲ್ಮೀಕಿಯು ಹೇಳಿರುವಂತೆ ಏಕಪತ್ನೀವ್ರತವುಳ್ಳ ರಾಮನಿಗೆ ಪಂಪರಾಮಾಯಣದಲ್ಲಿ ಸುಗ್ರೀವನ ಮಕ್ಕಳನ್ನೂ ದಧಿಮುಖನಗರದ ದೊರೆಯ ಮಕ್ಕಳನ್ನೂ ರತ್ನಪುರದರಸನ ಮಗಳನ್ನೂ ಕೊಟ್ಟು ಮದುವೆಯಾದಂತೆ ಹೇಳಿದೆ.

(೯) ಮಾರೀಚನು ಮಾಯಾಮೃಗವಾಗಿ ರಾಘವನ ದನಿಯನ್ನನುಕರಿಸಿ ಆರ್ತಧ್ವನಿಮಾಡಿದನೆಂಬುದಕ್ಕೆ ಬದಲಾಗಿ ರಾವಣನ ವಶವಾದ ಅವಲೋಕಿನೀ ವಿದ್ಯೆಯು ಲಕ್ಷ್ಮಣನ ದನಿಯಂತೆ ಸಿಂಹನಾದ ಮಾಡಿದಹಾಗೆ ಹೇಳಿದೆ.

(೧೦) ಸುಗ್ರೀವ ಮೊದಲಾದವರು ಕಪಿಧ್ವಜಕೆಂದೂ ಋೇಚರರೆಂದೂ ಹೇಳಿದೆ.

(೧೧) ಸುಗ್ರೀವನ ತಂಗಿಯಾದ ಶ್ರೀಪ್ರಭೆಯನ್ನು ರಾವಣನು ಮದುವೆಯಾಗಿದ್ದನೆಂದಿದೆ.

(೧೨) ವಾಲಿಯು ಕೈಲಾಸಪರ್ವತದಲ್ಲಿ ತಪಸ್ಸು ಮಾಡುತ್ತಿರುವಾಗ ಆ ಪರ್ವತವನ್ನು ರಾವಣನು ಎತ್ತಲು, ವಾಲಿಯು ತನ್ನ ಹೆಜ್ಜೆರಳಿನಿಂದ ತುಳಿದನೆಂದೂ ಆದರಿಂದ ರಾವಣನಿಗೆ ಬಹು ಬಾಧೆಯಾಗಿ ಅವನು ಅರಚಿಕೊಂಡನೆಂದೂ ಆ ಕಾರಣದಿಂದ ಅವನಿಗೆ ರಾವಣನೆಂಬ ಹೆಸರು ಬಂದಿತೆಂದೂ ಹೇಳಿದೆ.

(೧೩) ಕಾರ್ತವೀರ್ಯಾರ್ಜುನನಿಗೆ "ಸಹಸ್ರಬಾಹು" ಎಂಬ ಹೆಸರಿದೆ. ರಾವಣನನ್ನು ಸಹಸ್ರಬಾಹು ಸೆರೆಹಿಡಿದನೆಂಬುದಕ್ಕೆ ಬದಲಾಗಿ ರಾವಣನೇ ಅವನನ್ನು ಸೆರೆಹಿಡಿದನೆಂದಿದೆ.

(೧೪) ರಾವಣನ ತಂಗಿಯಾದ ಚಂದ್ರನಖಿಯ ಮಗಳಾದ ಅನಂಗಪುಷ್ಪೆಯನ್ನು ಹನುಮಂತನು ಮದುವೆಯಾಗಿ ರಾವಣನು ಕೊಟ್ಟ ಕರ್ಣಕುಂಡಲಪುರಕ್ಕೆ ದೊರೆಯಾಗಿ ಅವನ ಸ್ನೇಹಿತನಾಗಿದ್ದನೆಂದೂ ರಾವಣನು ಸೀತೆಯನ್ನು ಅಪಹರಿಸಿದುದಕ್ಕಾಗಿ ಅವನಿಗೆ ಹಗೆಯಾಗಿ ರಾಮನಿಗೆ ಸಹಾಯಮಾಡಿದನೆಂದೂ ಹೇಳಿದೆ.

(೧೫) ರಾವಣನನ್ನು ಸಂಹರಿಸಿದವನು ಲಕ್ಷ್ಮಣನೆಂದು ಹೇಳಿದೆ.

ಇಲ್ಲಿ ಹೇಳಿರುವುವಲ್ಲದೆ ಇತರ ವ್ಯತ್ಯಾಸಗಳೂ ಮುಂದೆ ಕೊಟ್ಟಿರುವ ಕಥಾಸಂಗ್ರಹದಿಂದ ತಿಳಿಯಬರುವುವು.

ಉತ್ತಮವಾದ ಈ ಕಾವ್ಯವನ್ನು ಕನ್ನಡಿಗರು ಆದರದಿಂದ ಓದಿ ಆನಂದಪಡುವರೆಂದು ಹಾರೈಸುತ್ತೇವೆ.

ಕರ್ನಾಟಕ ಸಾಹಿತ್ಯ ಪರಿಷತ್ತು
ಬೆಂಗಳೂರು
ರೌದ್ರಿನಾಮ ಸಂ॥ ಮಾಘ ಶು॥ ೧೪
ಗುರುವಾರ

ಸಂಪಾದಕರು.

ವಿಷಯಾನುಕ್ರಮಣಿಕೆ

	ಪುಟಗಳು
ಉಪೋದ್ಘಾತ	v—x
ಪಂಪರಾಮಾಯಣದ ಕಥೆ	1—74
ಪ್ರಥಮಾಶ್ವಾಸ—ಪೀಠಿಕಾ ಪ್ರಕರಣ	೧
ದ್ವಿತೀಯಾಶ್ವಾಸ—ದಶರಥನ ವಂಶ ವರ್ಣನೆ	೨೭
ತೃತೀಯಾಶ್ವಾಸ—ಕುಮಾರೋದಯ ವರ್ಣನೆ	೪೩
ಚತುರ್ಥಾಶ್ವಾಸ—ಜನಕ ಜಿನಭವನ ದರ್ಶನ ವರ್ಣನೆ ..	೭೫
ಪಂಚಮಾಶ್ವಾಸ—ಸೀತಾ ಸ್ವಯಂವರ ವರ್ಣನೆ	೧೦೧
ಷಷ್ಠಾಶ್ವಾಸ—ವನ ಪ್ರವೇಶ ವರ್ಣನೆ	೧೪೮
ಸಪ್ತಮಾಶ್ವಾಸ—ಶರದ್ವರ್ಣನೆ	೧೬೫
ಅಷ್ಟಮಾಶ್ವಾಸ—ಚಾರಣ ಯುಗಳ ದರ್ಶನ ವರ್ಣನೆ ..	೨೦೦
ನವಮಾಶ್ವಾಸ—ಸೀತಾಹರಣ ವರ್ಣನೆ	೨೧೯
ದಶಮಾಶ್ವಾಸ—ದಶವದನ ವಂಶ ವರ್ಣನೆ	೨೬೧
ಏಕಾದಶಾಶ್ವಾಸ—ಲಂಕಾದಹನ ವರ್ಣನೆ	೩೧೪
ದ್ವಾದಶಾಶ್ವಾಸ—ಲಂಕಾ ದಿಗ್ವಿಜಯ ಪ್ರಯಾಣ ವರ್ಣನೆ ..	೩೪೭
ತ್ರಯೋದಶಾಶ್ವಾಸ- ಬಲಾಚ್ಯುತ ಪುಣ್ಯಪ್ರಭಾವೋದಯ ವರ್ಣನೆ..	೩೭೬
ಚತುರ್ದಶಾಶ್ವಾಸ—ರಘುವೀರ ವಿಜಯ ವರ್ಣನೆ	೪೦೪
ಪಂಚದಶಾಶ್ವಾಸ—ಸೀತಾ ಪರಿತ್ಯಾಗ ವರ್ಣನೆ	೪೫೪
ಷೋಡಶಾಶ್ವಾಸ—ಪರಿನಿರ್ವಾಣ ಕಲ್ಯಾಣೋತ್ಸವ ವರ್ಣನೆ ..	೪೮೦
ಕ್ಲಿಷ್ಟ ಪದಗಳ ನಿಘಂಟು	1—25
ಶುದ್ಧಿ ಪತ್ರ	27

ಅಭಿನವ ಪಂಪನ

ರಾಮಚಂದ್ರ ಚರಿತ ಪುರಾಣದ ಕಥೆ



ಆಶ್ವಾಸ ೧— ಪೀಠಿಕೆ

ತ್ರಿಭುವನ ಲಕ್ಷ್ಮಿಗೆ ನಾಭಿಮಂಡಲದಂತಿರುವ ಜಂಬೂದ್ವೀಪವು ಪ್ರಪಂಚದಲ್ಲೆಲ್ಲ ಬಹಳ ಮನೋಹರವಾಗಿ ಮೆರೆಯುತ್ತಿರುವುದು. ಅದರ ನಟ್ಟನಡುವೆ ಜಿನಜನ್ಮೋತ್ಸವಾಭಿಷೇಕದ ರನ್ನಗದ್ದುಗೆಯಾದ ಪೊಂಬೆಟ್ಟವು ಹೊಳೆಯುತ್ತಿರುವುದು. ಅದರ ದಕ್ಷಿಣ ದಿಕ್ಕಿನಲ್ಲಿ ಚಂದ್ರಮಂಡಲದಂತೆ ಕಣ್ಗಳಿಗೆ ಸೊಬಗನ್ನು ಬೀರುತ್ತಿರುವ ದಕ್ಷಿಣ ಭರತ ತ್ರಿಖಂಡದ ಆರ್ಯಾಖಂಡವು ವಿರಾಜಿಸುತ್ತಿರುವುದು. ಅದರಲ್ಲಿ ಕಾಲಾನುಗತವಾಗಿ ಅನೇಕ ಕಲ್ಪಗಳು ಕಳೆದನಂತರ ಕುಲಧರಾವತಾರದಲ್ಲಿ ಪರಂಪರೆಯಾಗಿ ಹದಿನಾಲ್ಕು ಮಂದಿ ಮನುಗಳು ಹುಟ್ಟಿದರು. ಈ ಮನುಗಳ ಕಾಲದಲ್ಲಿ ಜನರ ಸ್ಥಿತಿಯು ಮೊದಲಿದ್ದ ನಿರ್ಜರಾವಸ್ಥೆಯಿಂದ ಕ್ರಮೇಣ ಮಾರ್ಪಡುತ್ತ ಬಂದಿತು. ಕಡೆಯ ಮನುವಾದ ನಾಭಿರಾಜನು ಜನರ ಜೀವನಕ್ಕಾಗಿ ಕೃಷಿ ವಿಷಯವನ್ನು ಬೋಧಿಸಿ ಕಬ್ಬನ್ನು ಬೆಳೆದು ಉಪಯೋಗಿಸುವ ಉಪಾಯವನ್ನು ಜನರಿಗೆ ಕಲಿಸಿದನು. ಈ ಕಾರಣದಿಂದ ಇವನ ವಂಶಕ್ಕೆ ಇಕ್ಷ್ವಾಕು ವಂಶವೆಂಬ ಹೆಸರಾಯಿತು; ಈತನ ವಲ್ಲಭೆ ಮರುದೇವಿ; ಇವರಿಗೆ ಪುರುದೇವನೆಂಬ ಮಗನು ಹುಟ್ಟಿ ಅಯೋಧ್ಯೆಗಧಿಪತಿಯಾದನು. ನಾಡುಗಳಲ್ಲೆಲ್ಲ ಕೌಶಲದೇಶವೂ ಪುರಗಳಲ್ಲೆಲ್ಲ ಸಾಕೇತಪುರವೂ ಹೇಗೆ ಪ್ರಸಿದ್ಧಿಪಡೆದುವೋ ಹಾಗೆಯೇ ರಾಜರುಗಳಲ್ಲೆಲ್ಲ ಪುರುದೇವನು ಪ್ರಖ್ಯಾತನಾದನು. ಆ ವಂಶದಲ್ಲಿ ಅಪ್ರತಿಮನಾದ ವಿಜಯರಥನು ಹುಟ್ಟಿದನು; ಈತನ ಮಗನು ಸುರೇಂದ್ರಮನ್ಯು; ಈತನಿಗೆ ವಜ್ರಬಾಹು ಪುರಂದರರೆಂಬಿಬ್ಬರು ಮಕ್ಕಳು ಹುಟ್ಟಿದರು.

ಆಶ್ವಾಸ ೨— ದಶರಥನ ವಂಶಾನುಕ್ರಮಣಿಕೆ

ವಿಜಯರಥನು ರಾಜ್ಯಭಾರ ಮಾಡುತ್ತಿರುವಾಗ ಒಂದು ದಿನ ನಾಗಪುರದ ದೊರೆಯಾದ ಇಭವಾಹನನ ಮಗನಾದ ಉದಯಸುಂದರನು ಆತನ ಸಭೆಗೆ ಬಂದ. ಕಾಣಿಕೆಯನ್ನೊಪ್ಪಿಸಿ ತನ್ನ ತಂಗಿಯಾದ ಅನಂಗೋನ್ಮಾದೆಯನ್ನು ವಿಜಯರಥನ ಮೊಮ್ಮಗನಾದ ವಜ್ರಬಾಹುವಿಗೆ ಕೊಟ್ಟು ಮನುವೆ ಮಾಡಬೇಕೆಂಬ ಉತ್ಸಾಹದಿಂದ

ತನ್ನ ತಂದೆಯು ತನ್ನನ್ನು ಕಳುಹಿಸಿದನೆಂದು ಹೇಳಲು, ದೊರೆಯು ಸಂತೋಷ ಪಟ್ಟು ಅದಕ್ಕೆ ಸಮ್ಮತಿಸಿದನು. ಕೂಡಲೆ ಶುಭದಿನ ಮುಹೂರ್ತದಲ್ಲಿ ವಿವಾಹ ಮಂಗಳೋಪಕರಣಗಳೊಡನೆ ವಜ್ರಬಾಹುವು ಆನೆಯನ್ನೇರಿ ಉಚಿತ ಪರಿವಾರ ದೊಡನೆ ಪ್ರಯಾಣವನ್ನು ಬೆಳೆಯಿಸಿ ವಸಂತಗಿರಿಯ ಬಳಿಗೆ ಬಂದು ಅದರ ಸೊಬಗ ನ್ನು ನೋಡುತ್ತಿರುವಲ್ಲಿ, ತಪಸ್ಸುಮಾಡುತ್ತಿರುವ ಗುಣಸಾಗರ ಭಟ್ಟಾರಕನೆಂಬ ಒಬ್ಬ ಮುನಿಯು ಆತನ ಕಣ್ಣಿಗೆ ಬಿದ್ದನು. ವಜ್ರಬಾಹುವು ಆ ಮುನಿಯನ್ನು ಕಂಡು ಅತ್ಯಂತ ಭಕ್ತಿಯಿಂದ ಕೂಡಲೆ ಆ ಮುನಿಯ ಬಳಿಯಲ್ಲಿ ದೀಕ್ಷೆಗೊಂಡನು. ಇದನ್ನು ನೋಡಿ ಉದಯಸುಂದರನೂ ಇಪ್ಪತ್ತುಮೂವರು ಅರಸುಮಕ್ಕಳೂ ತಪಕ್ಕೆ ನಿಂತರು. ಅಣ್ಣನು ದೀಕ್ಷೆಗೊಂಡ ವಾರ್ತೆಯನ್ನು ಕೇಳಿ ಅನಂಗೋನ್ಮಾದೆಯೂ ದೀಕ್ಷೆ ಗೊಂಡಳು. ಮದುವೆಗಾಗಿ ಹೊರಟ ಮೊಮ್ಮಗನು ಪ್ರಪಂಚದ ಸುಖವನ್ನು ಬಿಟ್ಟು ತಪೋರಾಜ್ಯದಲ್ಲಿ ನಿಂತದ್ದನ್ನು ಕೇಳಿ ವಿಜಯರಥನು ತನ್ನ ಮೊಮ್ಮಗನಾದ ಪುರಂದರ ನಿಗೆ ಪಟ್ಟವನ್ನು ಕಟ್ಟಿ ತಾನೂ ದೀಕ್ಷೆಗೊಂಡನು. ಪುರಂದರನು ಸಕಲ ಸಾಮ್ರಾಜ್ಯ ಸುಖ ಸುಧಾರಸದಿಂದ ತಣಿದು ಮಗನಾದ ಕೀರ್ತಿಧರನಿಗೆ ಪಟ್ಟವನ್ನು ಕಟ್ಟಿ ತಾನೂ ದೀಕ್ಷೆಗೊಂಡನು. ಕೀರ್ತಿಧರನು ಒಂದು ದಿನ ಸೂರ್ಯಗ್ರಹಣವನ್ನು ನೋಡಿ ಜಗತ್ತನ್ನು ಬೆಳಗುವ ಸೂರ್ಯನಿಗೂ ರಾಹುವಿನಿಂದ ಈ ಸ್ಥಿತಿಯು ಬಂದಿತಲ್ಲವೆ ಎಂದು, ಭೂಮಂಡಲವನ್ನು ಹುಲ್ಲುಕಡ್ಡಿಗೆ ಸಮವಾಡಿ, ವೈರಾಗ್ಯಪರನಾದನು. ಆಗ ಮಂತ್ರಿಗಳು ರಾಜ್ಯವು ಅನಾಯಕವಾಗುವುದೆಂದು ಭಯಪಟ್ಟು ದೊರೆಯನ್ನು ತನಗೊಬ್ಬ ಮಗನು ಹುಟ್ಟುವವರೆಗೂ ರಾಜ್ಯಭಾರ ಮಾಡುವಂತೆ ಒಡಂಬಡಿಸಿ ದರು. ಮಗನು ಹುಟ್ಟಿದ ಕೂಡಲೆ, ಸುಕೌಶಲನೆಂಬ ಆ ತೊಟ್ಟಿಲ ಮಗುವಿಗೆ ಪಟ್ಟ ವನ್ನು ಕಟ್ಟಿ, ಕೀರ್ತಿಧರನು ಜಿನದೀಕ್ಷೆಗೊಂಡನು. ಸುಕೌಶಲನು ತನ್ನ ಕೀರ್ತಿಯನ್ನು ನಾಲ್ಕು ಕಡೆಗಳಲ್ಲಿಯೂ ಹಬ್ಬಿಸಿ ಅರಸುಗೆಯ್ಯುತ್ತಿರುವಲ್ಲಿ ಒಂದು ದಿನ ಆತನ ತಾಯಿ ಯಾದ ಸಹದೇವಿಯು ಸಹಚರಿಯರೊಡನೆ ಮಣಿಮಂಟಪದಲ್ಲಿಯ ಮಣಿಮಯಾ ಸನದ ಮೇಲೆ ಲೀಲೆಯಿಂದ ಕುಳ್ಳಿರಲು, ಕಾಂತಿಯುತನಾದ ಒಬ್ಬ ಯತಿಯು ಅರ ಮನೆಯನ್ನು ಹೊಕ್ಕನು. ಇದನ್ನು ನೋಡಿ ಗುಣಹೀನೆಯಾದ ಸಹದೇವಿಯು ತನ್ನ ಮಗನು ಎಲ್ಲಿ ದೀಕ್ಷೆಗೊಳ್ಳುವನೋ ಎಂಬ ಭಯದಿಂದ ಪಾಪಕ್ಕಂಜದೆ ಆ ಯತಿ ಯನ್ನು ಪಟ್ಟಣದಿಂದ ಅಟ್ಟಿಸಿಬಿಟ್ಟಳು. ಸುಕೌಶಲನ ದಾದಿಯೊಬ್ಬಳು ಈ ಯತಿ ಯು ಕೀರ್ತಿಧರನೆಂದರಿತು ನೊಂದು ಎದೆಯನ್ನು ಗುದ್ದಿಕೊಳ್ಳುತ್ತ ಅಳತೊಡಗಿ ದಳು. ಸುಕೌಶಲನು ಇದಕ್ಕೆ ಕಾರಣವನ್ನು ತಿಳಿದು ಬಹಳ ದುಃಖಪಟ್ಟು, ಇಹ ಲೋಕ ಸೌಖ್ಯವು ಮುಖ್ಯವಲ್ಲೆಂದು ತಿಳಿದು, ಕೀರ್ತಿಧರ ಮುನೀಂದ್ರರ ಪಾದಾರ ವಿಂದದಲ್ಲಿ ಮುಕ್ತಿಸುಖವನ್ನು ಪಡೆಯುವೆನೆಂದು ನಿಶ್ಚಯಿಸಿ ಅರಮನೆಯನ್ನು ಬಿಟ್ಟು ಹೊರಟು, ಉಪವನವನ್ನು ಸೇರಿ ಕೀರ್ತಿಧರ ಭಟ್ಟಾರಕರ ಮುಂದೆ ನಿಂತನು. ಅವನ ಮಾಂಡಲಿಕರೂ ಸಾಮಂತರೂ ಮಂತ್ರಿಗಳೂ ಅಂತಃಪುರ ಸ್ತ್ರೀಯರೂ ತಮಗಿನ್ನೇನು

ಗತಿಯೆಂದು ಗೋಳಿಡುತ್ತಿರುವಲ್ಲಿ, ತನ್ನರಸಿಯ ಗರ್ಭದಲ್ಲಿರುವ ಮಗುವೇ ಅವರನ್ನು ಸಲಹುವನೆಂದು ಎಲ್ಲರನ್ನೂ ಸಮಾಧಾನಪಡಿಸಿ ತಾನು ದೀಕ್ಷೆಗೊಂಡನು. ಕಾಲಾನುಕ್ರಮದಲ್ಲಿ ಸಹದೇವಿಯು ಹೆಣ್ಣುಹುಲಿಯಾಗಿ ಹುಟ್ಟಿ ಈ ಮುನಿಗಳಿಬ್ಬರೂ ಅಡವಿಯಲ್ಲಿ ಹೋಗುತ್ತಿರುವಾಗ ಅವರ ಮೇಲ್ಬಿದ್ದು ಅವರನ್ನು ಕೊಂದಳು.

ಇತ್ತ, ಸುಕೌಶಲನ ಮಗನಾದ ಹಿರಣ್ಯಗರ್ಭನು ವೈಭವದಿಂದ ರಾಜ್ಯಭಾರ ಮಾಡಿ ಅಂತರಿಸಿದನಂತರ ಅವನ ನ್ಯಗನ್ನಾದ ನಹುಷನೂ ತರ್ಜುನ್ಯಾಯ ಅವನ ವಂಶದವರಾದ ಸಂವಾಸ, ಸಿಂಹರಥ, ಚತುರ್ಮುಖ, ಹೇಮರಥ, ಭಾನುರಥ, ಮಯ, ಮಾಂಧಾತೃ, ವೀರಸೇನ, ಕಮಲಬಂಧು, ವಸನ್ತತಿಲಕ, ಕುಬೇರದತ್ತ, ಮೃಗಾರಿದಮನ, ದ್ವಿಪರಥ, ಹಿರಣ್ಯಕಶಿಪು, ಅರ್ಕರಥ, ದಿಲೀಪ, ರಘುವೀರ ಮೊದಲಾದ ಹಲವರು ದೊರೆಗಳು ಅನುಕ್ರಮವಾಗಿ ರಾಜ್ಯಭಾರಮಾಡಿದರು. ಅವರಲ್ಲಿ ಅನರಣ್ಯನೆಂಬರಸು ಬಹಳ ಪ್ರಖ್ಯಾತನು. ಈತನಿಗೆ ಅನಂತರಥ ದಶರಥರೆಂಬ ಇಬ್ಬರು ಮಕ್ಕಳು ಹುಟ್ಟಿದರು. ಅನರಣ್ಯನು ಧರ್ಮಾರ್ಥ ವಿರುದ್ಧವಾಗದಂತೆ ವಿಷಯಸುಖವನ್ನನುಭವಿಸುತ್ತಿರುವಲ್ಲಿ, ಒಂದಾನೊಂದು ದಿನ ಬಹಳ ಬಲಶಾಲಿಯಾದ ಮಾಹಿಷ್ಮತೀ ವಲ್ಲಭನು ದಶಾನನನೊಡನೆ ಕಾದಿ ಸೋತನೆಂದು ಕೇಳಿ ತಾನು ದೀಕ್ಷೆಪಡೆಯುವೆನೆಂದು ನಿಶ್ಚಯಿಸಲು, ಅವನ ದೊಡ್ಡ ಮಗನಾದ ಅನಂತರಥನು ರಾಜ್ಯವನ್ನು ವಹಿಸುವುದಕ್ಕೊಡಂಬಡದೆ ತಾನೂ ದೀಕ್ಷೆಗೊಳ್ಳಲುದ್ಯುಕ್ತನಾದನು. ಇದನ್ನು ಕಂಡು ಅನರಣ್ಯನು ಒಂದು ತಿಂಗಳ ಮಗುವಾದ ದಶರಥನಿಗೆ ಪಟ್ಟವನ್ನು ಕಟ್ಟಿ ತಾನೂ ತನ್ನ ಹಿರಿಯಮಗನೂ ಅಭಯಘೋಷ ಭಟ್ಟಾರಕರ ಪಾದಗಳಿಡೆಯಲ್ಲಿ ದೀಕ್ಷೆಗೊಂಡರು.

ಆಶ್ವಾಸ ೩—ದಶರಥನ ಮಕ್ಕಳು

ದಶರಥನು ಪ್ರವರ್ಧಮಾನನಾಗಿ ಧರ್ಮದಿಂದಲೂ ಶೌರ್ಯದಿಂದಲೂ ರಾಜ್ಯಪರಿಪಾಲನೆಮಾಡುತ್ತ ಅಪರಾಜಿತೆ, ಸುಮಿತ್ರೆ, ಸುಪ್ರಭೆ ಎಂಬ ಮೂವರು ಪಟ್ಟಮಹಿಷಿಯರೊಡನೆ ಸುಖದಿಂದಿದ್ದನು. ಒಂದು ದಿನ ಆತನ ಸಭೆಗೆ ನಾರದನು ಬಂದು ಆತನೊಡನೆ ಏಕಾಂತವಾಗಿ ಹೀಗೆ ಹೇಳಿದನು : "ಅಯ್ಯಾ! ನಾನು ಲಂಕೆಯಲ್ಲಿರುವ ಶಾಂತಜಿನೇಶ್ವರನನ್ನು ಪೂಜಿಸುವುದಕ್ಕಾಗಿ ಹೋಗಿದ್ದೆನು. ಅಲ್ಲಿ ರಾವಣನರಮನೆಯಲ್ಲಿ ನಡೆದ ವೃತ್ತಾಂತವನ್ನು ನಿನಗೆ ಹೇಳುವೆನು ಕೇಳು: ರಾವಣನು ಜಾನಕಿಯ ನಿಮಿತ್ತವಾಗಿ ಯುದ್ಧಮಾಡಿ ದಾಶರಥಿಯ ಕೈಯಲ್ಲಿ ಮರಣವನ್ನು ಹೊಂದುವನೆಂಬ ವಿಷಯವನ್ನು ವಿಭೀಷಣನು ತನ್ನ ಜ್ಯೋತಿಷ್ಯನ ಮೂಲಕ ತಿಳಿದು ದಾಶರಥಿಯೂ ಜಾನಕಿಯೂ ಹುಟ್ಟದಂತೆ ಮಾಡುವುದಕ್ಕಾಗಿ ನಿನ್ನನ್ನೂ ಜನಕನನ್ನೂ ಕೊಲ್ಲಲು ನಿಶ್ಚಯಿಸಿರುವನು. ಇದಕ್ಕೆ ತಕ್ಕ ಉಪಾಯವನ್ನು ಆಲೋಚಿಸು; ಇನ್ನು ನಾನು ಈ ಸುದ್ದಿ

ಯನ್ನು ಜನಕನಿಗೆ ತಿಳಿಸಲು ಹೊರಡುವೆನು" ಎಂದು ಹೇಳಿ ನಾರದನು ಮಿಥಿಲೆಗೆ ಪ್ರಯೋಣಮಾಡಿದನು.

ಬಳಿಕ ದಶರಥನು ಈ ಸಂದರ್ಭವನ್ನು ತನ್ನ ಮಂತ್ರಿಗೆ ತಿಳಿಸಲು ಆತನು ಯಾರೂ ಅರಿಯುದಂತೆ ಬಹಳ ಕುಶಲನಾದ ಒಬ್ಬ ಚಿತ್ರಗಾರನನ್ನು ಕರೆಯಿಸಿ ಲೆಪ್ಪದಿಂದ ದಶರಥನ ಆಕಾರವನ್ನು, ಸ್ವಲ್ಪವೂ ವ್ಯತ್ಯಾಸಕಾಣದಂತೆ, ಮಾಡಿಸಿ ಅದನ್ನು ಸಭಾಮಂಟಪದಲ್ಲಿಟ್ಟು, ಆ ಬೊಂಬೆಯನ್ನೇ ಮಂತ್ರಿ ಮೊದಲಾದವರೆಲ್ಲರೂ ಓಲಗಿಸುತ್ತ ದಶರಥನನ್ನು ಮರೆಮಾಡಿದರು. ವಿಥಿಲೆಯಲ್ಲಿ ಜನಕನ ಮಂತ್ರಿಯೂ ಇದೇ ರೀತಿಯಾಗಿ ನಡೆಯಿಸಿದನು. ವಿಭೀಷಣನು ನಿಯಮಿಸಿದ್ದ ಘಾತುಕರು ಮೋಸದಿಂದ ಅರಮನೆಯನ್ನು ನುಗ್ಗಿ ಲೆಪ್ಪದರಸನ ತಲೆಯನ್ನು ಕತ್ತರಿಸಿಕೊಂಡು ಹೋಗಿ ವಿಭೀಷಣನಿಗೆ ತೋರಿಸಿ ಬಹುಮಾನವನ್ನು ಪಡೆದರು.

ಇತ್ತ, ದಶರಥನೂ ಜನಕನೂ ವೇಷಾಂತರದಿಂದ ವಿನೋದಾರ್ಥವಾಗಿ ದೇಶಾಟನಕ್ಕೆ ಹೊರಟು ಮಾರ್ಗದಲ್ಲಿ ದೊರೆತ ಕೌತುಕಮಂಗಳಪುರವನ್ನು ಹೊಕ್ಕು, ಅಲ್ಲಿ ಅನೇಕ ಮಂದಿ ರಾಜಕುಮಾರರು ಸೇರಿರುವ ಸ್ವಯಂವರ ಮಂಟಪವೊಂದನ್ನು ಕಂಡು, ಅಲ್ಲಿಗೆ ತಾವೂ ಹೋಗಿ ಕುಳಿತುಕೊಂಡರು. ರಾಜಕನ್ಯೆಯಾದ ಕೈಕೆಯು ಹೂಮಾಲೆಯನ್ನು ಹಿಡಿದುಕೊಂಡು ಸ್ವಯಂವರ ಮಂಟಪಕ್ಕೆ ಬಂದು ಅಲ್ಲಿ ನೆರೆದಿರುವ ರಾಜಕುಮಾರರಲ್ಲಿ ದಶರಥನನ್ನು ಮೆಚ್ಚಿ ಆತನ ಕೊರಳಿಗೆ ಹೂಮಾಲೆಯನ್ನು ಹಾಕಿದಳು. ಇದನ್ನು ನೋಡಿ ಮಿಕ್ಕ ರಾಜಕುಮಾರರು ದಶರಥನಮೇಲೆ ಯುದ್ಧಕ್ಕೆ ನಿಲ್ಲಲು ಆತನು ಇವರನ್ನು ಲಕ್ಷ್ಯಮಾಡದೆ ಕೈಕೆಯೊಡನೆ ರಥವನ್ನೇರಿ ಅವರನ್ನು ಎದುರಿಸಿದನು. ಯುದ್ಧದಲ್ಲಿ ದಶರಥನ ಸಾರಥಿಯು ಮೂರ್ಛೆ ಹೋಗಲು, ಕೈಕೆಯೇ ಸಾರಥ್ಯವನ್ನು ವಹಿಸಿದಳು. ಈ ಸಹಾಯದಿಂದ ದಶರಥನು ಶತ್ರುಗಳೆಲ್ಲರನ್ನೂ ಸೋಲಿಸಿ ಓಡಿಸಿಬಿಟ್ಟನು. ತರುವಾಯ ದಶರಥನಿಗೂ ಕೈಕೆಗೂ ವೈಭವದಿಂದ ವಿವಾಹವು ನಡೆಯಿತು. ದಶರಥನು ಕೈಕೆಯೊಡನೆ ಅಯೋಧ್ಯೆಯನ್ನು ಸೇರಿದನು. ಜನಕನು ವಿಥಿಳೆಗೆ ಹೊರಟುಹೋದನು. ಕೈಕೆಯು ಯುದ್ಧಕಾಲದಲ್ಲಿ ಇಂತಹ ಅಸಾಧಾರಣವಾದ ಸಹಾಯವನ್ನು ಮಾಡಿದುದಕ್ಕಾಗಿ ದಶರಥನು ಒಂದು ದಿನ ಆಕೆಯನ್ನು ಬಹಳವಾಗಿ ಕೊಂಡಾಡಿ ಬೇಕಾದ ವರವನ್ನು ಬೇಡೆಂದು ಹೇಳಿದನು. ಆಕೆಯು ತನಗೆ ಬೇಕಾದಾಗ ಬೇಡುವೆನೆಂದು ಉತ್ತರಕೊಟ್ಟಳು

ದಶರಥನು ತನ್ನ ಹಿರಿಯ ಹೆಂಡತಿಯಾದ ಅಪರಾಜಿತೆಯೊಡನೆ ಒಂದು ದಿನ ರಾತ್ರಿ ಶಯ್ಯಾಗೃಹದಲ್ಲಿ ಮಲಗಿರುವಾಗ ಅಪರಾಜಿತೆಗೆ ಆನೆ, ಸಿಂಹ, ಸೂರ್ಯ, ಚಂದ್ರ—ಇವನ್ನು ಕಂಡಂತೆ ಕನಸುಬಿದ್ದಿತು. ಆಕೆಯು ಈ ಕನಸನ್ನು ಗಂಡನಿಗೆ ತಿಳಿಸಲು ಆತನು, ಈ ಶುಭ ಸ್ವಪ್ನದಿಂದ ಚಕ್ರವರ್ತಿಯಾಗುವ ಮಗನು

ಆಕೆಯು ಹೊಟ್ಟೆಯಲ್ಲಿ ಹುಟ್ಟುವನೆಂದು ಹೇಳಿದನು. ಕಾಲಕ್ರಮದಲ್ಲಿ ಅಪರಾಜಿತೆಯು ಗರ್ಭವನ್ನು ಧರಿಸಿ ರಾಮನನ್ನು ಹೆತ್ತಳು. ಸುಮಿತ್ರೆಯು ಲಕ್ಷ್ಮಣನನ್ನೂ ಕೈಕೆಯು ಭರತನನ್ನೂ ಸುಪ್ರಭೆಯು ಶತ್ರುಘ್ನನನ್ನೂ ಹಡೆದರು. ಈ ನಾಲ್ವರೂ ಬಳೆದು ವಿದ್ಯಾಭ್ಯಾಸಮಾಡಿ ಸಕಲ ಶಸ್ತ್ರಶಾಸ್ತ್ರ ನಿಶಾರದರಾದರು.

ಆಶ್ವಾಸ ೪ —ಜನಕ ಜಿನಭವನ ಸಂದರ್ಶನ

ಮಿಥಿಳಾಪುರದಲ್ಲಿ ಜನಕನ ಅರಸಿಯಾದ ವಿದೇಹಿಯು ಗರ್ಭವನ್ನು ಧರಿಸಿದಳು. ಪೂರ್ವಜನ್ಮದ ವೈರದಿಂದ ಒಬ್ಬ ನಿಶಾಚರನು ಆಕೆಯ ಗರ್ಭವನ್ನು ನಾಶಮಾಡಬೇಕೆಂದು ಕಾದಿದ್ದನು. ವಿದೇಹಿಯು ಅವಳಿ ಮಕ್ಕಳನ್ನು ಹೆತ್ತಳು; ಅವುಗಳಲ್ಲಿ ಒಂದು ಗಂಡು, ಮತ್ತೊಂದು ಹೆಣ್ಣು. ನಿಶಾಚರನು ವಿದೇಹಿಗೂ ಹೆಣ್ಣುಮಗುವಿಗೂ ಯಾವ ಬಾಧೆಯನ್ನೂ ಉಂಟುಮಾಡದೆ ಗಂಡುಕೂಸನ್ನು ಮಾತ್ರ ಅಪಹರಿಸಿಕೊಂಡು ಆಕಾಶಮಾರ್ಗದಲ್ಲಿ ಹೋಗುತ್ತ ಅದನ್ನು ಕೊಲ್ಲಬೇಕೆಂಬ ಆಲೋಚನೆಯಿಂದ ಅದರ ಮುಖವನ್ನು ಕ್ರೂರದೃಷ್ಟಿಯಿಂದ ನೋಡಲು, ಆ ಮಗುವು ಪೂರ್ವಜನ್ಮದಲ್ಲಿ ಮಾಡಿದ್ದ ಅಣುವ್ರತದ ಪ್ರಭಾವದಿಂದಲೂ ಈ ನಿಶಾಚರನು ಮಾಡಿದ್ದ ಮಹಾವ್ರತದ ಸಂಸ್ಕಾರ ಬಲದಿಂದಲೂ ಅವನಿಗೆ ಉಪಶಾಂತಿಯುಂಟಾಗಿ ದ್ವೇಷವು ತೊಲಗಿತು. ಕೂಡಲೆ ನಿಶಾಚರನು ತನ್ನ ಕಿವಿಯಲ್ಲಿದ್ದ ಕುಂಡಲಗಳನ್ನು ಆ ಮಗುವಿನ ಕಿವಿಗಿಟ್ಟು ಪರ್ಣಲಘುವಿದ್ಯೆಯಿಂದ ಆ ಮಗುವಿಗೆ ಯಾವ ಬಾಧೆಯೂ ಉಂಟಾಗದಂತೆ ಅದನ್ನು ಬಿಸುಟು ಹೊರಟು ಹೋಗಲು, ಅದು ಮೆಲ್ಲನೆ ಬಂದು ರಥನೂಪುರಚಕ್ರವಾಳಪುರದ ಒಡೆಯನಾದ ಇಂದುಗತಿಯೆಂಬ ವೇಚರೇಂದ್ರನ ಹಾಸಿಗೆಯಮೇಲೆ ಬಿದ್ದಿತು. ಕಾಂತಿಯಿಂದ ಹೊಳೆಯುತ್ತಿರುವ ಆ ಮಗುವನ್ನು ನೋಡಿ ಆತನು ಪರಮಾನಂದಭರಿತನಾಗಿ ತನ್ನರಸಿಯಾದ ಪುಷ್ಪವತಿಯು ಫಲವತಿಯಾದಳೆಂದು ಆಕೆಗೆ ಆ ಮಗುವನ್ನೊಪ್ಪಿಸಿ ಅದಕ್ಕೆ ಪ್ರಭಾಮಂಡಲನೆಂಬ ಹೆಸರನ್ನಿಟ್ಟನು.

ಇತ್ತ, ಮಿಥಿಲೆಯಲ್ಲಿ ವಿದೇಹಿಯು ತನ್ನ ಮಗುವನ್ನು ರಾಕ್ಷಸನು ಎತ್ತಿಕೊಂಡು ಹೋದುದಕ್ಕಾಗಿ ಬಹಳ ವ್ಯಸನಪಟ್ಟಳು. ಆಗ ಜ್ಯೋತಿಷ್ಕರು ಶುಭಮುಹೂರ್ತದಲ್ಲಿ ಹುಟ್ಟಿದ ಆ ಮಗುವಿಗೆ ಯಾವ ಅಪಾಯವೂ ಸಂಭವಿಸದೆಂದು ಆಕೆಯ ದುಃಖವನ್ನು ಕಳೆದರು. ಜನಕನು ವಿಭವದಿಂದ ಹೆಣ್ಣುಮಗುವಿಗೆ ಜಾತಕರ್ಮೋತ್ಸವವನ್ನು ಮಾಡಿ, ಸರ್ವಲಕ್ಷಣ ಸಸ್ಯಸಂಪತ್ತಿಗೆ ಸೀತೆಯಾದುದರಿಂದ, ಸೀತೆಯೆಂಬ ಹೆಸರನ್ನಿಟ್ಟು ಬಹಳ ಪ್ರೀತಿಯಿಂದ ಸಾಕುತ್ತಿರಲು ಆಕೆಯು ದಿನಕ್ರಮವಾಗಿ ಮೋಹನಾಕಾರದಿಂದ ಬಳೆದು, ಭರತಶಾಸ್ತ್ರಾದಿ ಸಕಲ ಕಲೆಗಳಲ್ಲಿಯೂ ಪರಿಣತಿಯನ್ನು ಪಡೆದಳು.

ಹೀಗಿರುವಲ್ಲಿ, ಒಂದು ದಿನ ಚಾರನೊಬ್ಬನು ಭೀತಿಯಿಂದೋಡಿಬಂದು ದೊರೆಗೆ ನಮಸ್ಕರಿಸಿ, ಲೆಕ್ಕವಿಲ್ಲದಷ್ಟು ಬೇಡರ ಪಡೆಯು ಭೂಮಂಡಲವನ್ನೇ ಸೂರೆ ಮಾಡುತ್ತಿರುವುದೆಂದು ತಿಳಿಸಲು, ಜನಕನು ಅವರನ್ನಡಗಿಸಿ ಜನರ ಕಷ್ಟಗಳನ್ನು ಕೂಡಲೆ ನಿವಾರಣೆಮಾಡಬೇಕೆಂದು ಆಲೋಚಿಸಿ ತನಗೆ ಸಹಾಯವಾಗಿ ಬರುವಂತೆ ದಶರಥನಿಗೆ ಹೇಳಿಕಳುಹಿಸಿದನು. ದಶರಥನು ಸೇನಾಸಮೇತನಾಗಿ ಹೊರಡುವುದಕ್ಕೆ ಸನ್ನದ್ಧನಾದುದನ್ನು ಬಲಾಚ್ಯುತರಾದ ರಾಮಲಕ್ಷ್ಮಣರಿತು ದಶರಥನ ಸಭೆಗೆ ಬಂದರು. ರಾಮನು ತಾನೂ ಎಂಟನೆಯ ಕೇಶವನಾದ ಲಕ್ಷ್ಮಣನೂ ಇರುವಾಗ ಯುದ್ಧಕ್ಕೆ ದಶರಥನು ಹೊರಡಬೇಕಾದ ಆವಶ್ಯಕವಿಲ್ಲವೆಂದೂ ತಾವು ಚಿಕ್ಕವರೆಂದು ಸಂಶಯಪಡಲವಶ್ಯಕವಿಲ್ಲವೆಂದೂ ತಿಳಿಸಿ ತಮ್ಮನ್ನು ಕಳುಹಿಸುವಂತೆ ಕೇಳಿಕೊಳ್ಳಲು, ದಶರಥನು ಅದಕ್ಕೊಪ್ಪಿದನು. ಇವರು ದೊಡ್ಡಸೇನೆಯೊಡನೆ ಹೊರಟು ಕೆಲವು ದಿನಗಳಲ್ಲಿ ಜನಕನೊಡನೆ ಕಲೆತರು. ಜನಕನೂ ಅವನ ತಮ್ಮನಾದ ಕನಕನೂ ದೊಡ್ಡ ಬಲದೊಡನೆ ತೆರಳಿ, ಎಲ್ಲರೂ ಕಿರಾತ ಸೈನ್ಯದ ಮೇಲೆ ಯುದ್ಧಮಾಡಿದರು. ರಾಮಲಕ್ಷ್ಮಣರು ಶಬರ ಸೇನಾಧಿಪತಿಯಾದ ತರಂಗತಮನನ್ನು ಸೋಲಿಸಿ ಶರಣಾಗತನನ್ನಾಗಿ ಮಾಡಿದರು. ಜನಕನು ರಾವಣನ ಪರಾಕ್ರಮಕ್ಕೆ ಮೆಚ್ಚಿ ತನ್ನ ಮಗಳಾದ ಸೀತೆಯನ್ನು ಆತನಿಗೆ ಕೊಟ್ಟೆನೆಂದು ಹೇಳಿ ರಾಮಲಕ್ಷ್ಮಣರನ್ನು ಅನೇಕೋಪಚಾರಗಳೊಡನೆ ಅಯೋಧ್ಯೆಗೆ ಕಳುಹಿಸಿದನು.

ಜನಕನು ಸೀತೆಯನ್ನು ರಾವಣನಿಗೆ ಕೊಟ್ಟನೆಂಬ ವಾರ್ತೆಯನ್ನು ಕೇಳಿ ನಾರದನು ಜಾನಕಿಯನ್ನು ನೋಡಬೇಕೆಂಬ ಕುತೂಹಲದೊಡನೆ ಮಿಥಿಲೆಗೆ ಬಂದು ಸೀತೆಯನ್ನು ನೋಡಿ ಮೋಹಿಸಲು, ಆಕೆಯು ಇವನ ಬೋಳತಲೆ ಮೊದಲಾದ ವಿಕೃತವೇಷವನ್ನು ನೋಡಿ ಹೆದರಿ ಓಡಿಹೋದಳು. ಆಕೆಯ ಹಿಂದೆಯೇ ನಾರದನೂ ಓಡುತ್ತಿರಲು ಅಲ್ಲಿದ್ದವರೆಲ್ಲರೂ ನಾರದನನ್ನು ಬೈದರು. ಸೈನಿಕರು ಈ ಕಳಕಳವನ್ನು ಕೇಳಿ ಕತ್ತಿಗಳನ್ನು ಝಳಪಿಸುತ್ತ ಬರಲು ನಾರದನು ಭಯಪಟ್ಟು ಆಕಾಶಕ್ಕೆ ನೆಗೆದು ಕೈಲಾಸ ಪರ್ವತವನ್ನು ಸೇರಿದನು. ಅಲ್ಲಿಯ ಉಪವನದಲ್ಲಿ ತನ್ನ ಬಳಲಿಕೆಯನ್ನು ತೀರಿಸಿಕೊಂಡು ತನಗುಂಟಾದ ಅಪಮಾನಕ್ಕೆ ಕಾರಣಳಾದ ಸೀತೆಗೆ ಕೇಡನ್ನು ಮಾಡಬೇಕೆಂದು ನಿಶ್ಚಯಿಸಿ, ವಿಚಿತ್ರ ಚಿತ್ರಕಲಾ ವಿಶಾರದನಾದ ನಾರದನು ಚಲುವೆಯಾದ ಸೀತೆಯ ಚಿತ್ರವನ್ನು, ಆಕೆಯ ಪ್ರತಿಬಿಂಬವೋ ಎಂಬಂತೆ, ಒಂದು ಪಟದಮೇಲೆ ಬರೆದು ಅದನ್ನು ವಿದ್ಯಾಧರ ರಾಜಧಾನಿಯಾದ ರಥನೂಪುರಚಕ್ರವಾಳಪುರದ ವಿನೋದವನದಲ್ಲಿಯ ಮಣಿಭವನದಲ್ಲಿ ತೂಗ ಹಾಕಿ ಹೊರಟುಹೋದನು. ಅಲ್ಲಿಗೆ ಪ್ರಭಾಮಂಡಲನು ಬಂದು ಆ ಪಟವನ್ನು ನೋಡಿ ಮದನ ಮೋಹಕ್ಕೊಳಗಾಗಿ ಮೋಹಮೂರ್ಛೆ ಹೊಂದಿದನು. ಇದನ್ನು ಕೇಳಿ ಆತನ ತಂದೆಯು ಅಲ್ಲಿಗೆ ಓಡಿಬಂದು ಮಗನನ್ನು ಮೂರ್ಛೆಯಿಂದೆಬ್ಬಿಸಿ, ಕಾರಣವನ್ನು ತಿಳಿದು, ಆ ಪಟವನ್ನು ಅಲ್ಲಿಗೆ ತಂದವರಾರೆಂದು ವಿಚಾರಿಸುತ್ತಿರು

ವಲ್ಲಿ ಅಲ್ಲಿಗೆ ನಾರದನು ಬಂದು ಆ ಪಟವನ್ನು ಅಲ್ಲಿಗೆ ತಂದವನು ತಾನೆಂದೂ ಆ ಲಲನಾಮಣಿಯು ಮಿಥಿಲಾಧಿಪನಾದ ಜನಕನ ಮಗಳೆಂದೂ ಆ ಕನ್ಯೆಗೆಣೆಯಾದವರು ಸುರ ವಿದ್ಯಾಧರ ಕನ್ಯಕೆಯರಲ್ಲಿ ಯಾರೂ ಇಲ್ಲವೆಂದೂ ಹೇಳಿ ಅವರನ್ನು ಹರಸಿ ಹೊರಟುಹೋದನು.

ಪ್ರಭಾಮಂಡಲನು ಸೀತೆಯ ಮೇಲಣ ಮೋಹದಿಂದ ದಿಗ್ಭ್ರಮೆಹೊಂದಿರುವುದನ್ನು ಇಂದುಗತಿಯು ಕಂಡು ಮಾನವ ಕನ್ಯೆಯನ್ನು ಬಯಸಿ ಅಷ್ಟು ಚಿಂತೆಗೊಳ್ಳಲೇಕೆಂದು ನುಡಿದು ಜಾನಕಿಯನ್ನು ಸುಲಭವಾಗಿ ಅವನಿಗೆ ಮದುವೆ ಮಾಡಿಸುವೆನೆಂದು ಹೇಳಿ ಪ್ರಭಾಮಂಡಲನನ್ನು ಸಮಾಧಾನಗೊಳಿಸಿದನು. ಇದಕ್ಕೆ ಉಪಾಯವೇನೆಂದು ಆಲೋಚಿಸುತ್ತಿರುವಲ್ಲಿ ವಿಯಚ್ಚರನೊಬ್ಬನು ಮಿಥಿಲೆಗೆ ಹೋಗಿ ಜನಕನನ್ನು ಬೆದರಿಸಿ ಸೀತೆಯನ್ನು ಎತ್ತಿಕೊಂಡುಬರುವುದೇ ಸರಿಯೆಂದು ಹೇಳಲು, ಅದಕ್ಕೆ ಇಂದುಗತಿಯು ಒಪ್ಪದೆ, ಅದು ಖೇಚರವಂಶಕ್ಕೆ ಶ್ರೇಯಸ್ಕರವಲ್ಲವೆಂದೂ, ಖೇಚರರಿಗೆ ಭೂಚರರೊಡನೆ ಸಂಬಂಧವನ್ನು ಬೆಳೆಯಿಸುವುದು ಸಮನಲ್ಲದಿದ್ದರೂ ಮಗನಮೇಲಣ ಮೋಹದಿಂದ ಆ ಸಂಬಂಧವನ್ನು ಸರಿಯಾದ ರೀತಿಯಲ್ಲಿ ಬೆಳೆಯಿಸಬೇಕೆಂದೂ ಹೇಳಿದನು. ಇದನ್ನು ಕೇಳಿ ಚಪಲವೇಗನೆಂಬ ವಿದ್ಯಾಧರನು ಆಪ್ಪಣೆಪಡೆದು ಉಲ್ಕಾಪಾತದಂತೆ ಕೂಡಲೆ ಮಿಥಿಲೆಗಿಳಿದು ಜನಕನು ಹಯಪ್ರಿಯನಾಗಿರುವುದನ್ನರಿತು ಕುದುರೆಯ ರೂಪನ್ನು ಹೊಂದಿ ಉಪವನವನ್ನು ತುಳಿದು ಹಾಳುಮಾಡಿ ಪಟ್ಟಣವನ್ನು ನುಗ್ಗಿ ದಾರಿಯಲ್ಲಿ ಸಿಕ್ಕಿದವರನ್ನು ಯಮಪುರಿಗಟ್ಟುತ್ತಿರುವಲ್ಲಿ ಜನಕನನ್ನು ಕಂಡು ಸೌಮ್ಯರೂಪವನ್ನು ತಾಳಿದನು. ಜನಕನು ಆ ಕುದುರೆಗೆ ಜೀನು ಹಾಕಿಸಿ ಕಡಿವಾಣ ಮುಂತಾದುವನ್ನಳವಡಿಸಿ ಸವಾರಿಮಾಡುವುದಕ್ಕಾಗಿ ಹತ್ತಲು ಆ ಕುದುರೆಯು ಥಟ್ಟನೆ ಆಕಾಶಕ್ಕೆ ನೆಗೆದು ರಥನೂಪುರಚಕ್ರವಾಳಪುರದ ಉಪವನವನ್ನು ಸೇರಿ ಅಲ್ಲಿ ಅವನನ್ನು ಇಳಿಸಿತು. ಜನಕನು ತನಗೊದವಿದ ವಿಪತ್ತಿಗೆ ವ್ಯಸನಪಟ್ಟು ಆ ಉದ್ಯಾನದ ಸೊಬಗನ್ನು ನೋಡುತ್ತ ಸಂಚರಿಸುತ್ತಿರುವಲ್ಲಿ ಅಲ್ಲಿಯೊಂದು ಜಿನಮಂದಿರವು ಕಾಣಿಸಲು ಅದನ್ನು ಪ್ರದಕ್ಷಿಣೆಮಾಡಿ ಭಕ್ತಿಯಿಂದ ಒಳಹೊಕ್ಕನು.

ಆಶ್ವಾಸ ೫ — ಸೀತಾಸ್ವಯಂವರ

ಜನಕನು ಜಿನೇಶ್ವರನನ್ನು ಹಲವು ಬಗೆಯಲ್ಲಿ ಸ್ತುತಿಸಿ ತನಗೊದವಿದ ಕಷ್ಟವನ್ನೆಲ್ಲ ಮರೆತು ಹರುಷದಿಂದಿದ್ದನು. ಇತ್ತ, ಚಪಲವೇಗನು ಕುದರೆಯಾಕಾರವನ್ನುಳಿದು ಮುನ್ನಿನಾಕೃತಿಯಲ್ಲಿ ಖಚರೇಂದ್ರನನ್ನು ಕಂಡು ತಾನು ಜನಕನನ್ನು

ತಂದ ತೆರನನ್ನು ತಿಳಿಸಿದನು. ಇದನ್ನು ಕೇಳಿ ಇಂದುಗತಿಯು ಸಂತೋಷಪಟ್ಟು, ಮಂಗಳವಾದ್ಯಧ್ವನಿಯು ನಾಲ್ಕುದಿಕ್ಕನ್ನೂ ತುಂಬುತ್ತಿರಲು, ಪರಿವಾರ ಸಮೇತ ನಾಗಿ ಪೂಜಾಪರಿಕರದೊಡನೆ ಜಿನಮಂದಿರವನ್ನು ಹೊಕ್ಕು ದರ್ಶನ ಸ್ತುತಿಗೈದು ಜಿನೇಶ್ವರನನ್ನಾರಾಧಿಸಿ ಅಭ್ಯಾಗತನಾದ ಜನಕನನ್ನು ಸ್ವಾಗತ ಸಂಭಾಷಣಗಳಿಂದ ಮನ್ನಿಸಿ ತನ್ನ ಮಗನಿಗೆ ಅನುರೂಪಳಾದ ಸೀತೆಯನ್ನು ಮದುವೆಮಾಡಿಕೊಟ್ಟು ತನ್ನೊಡನೆ ಬಾಂಧವ್ಯವನ್ನು ಬೆಳೆಯಿಸಬೇಕೆಂದು ಕೇಳಿದನು. ಅದಕ್ಕೆ ಜನ ಕನು ಕನ್ಯೆಯನ್ನು ಇಂದುಗತಿಯ ಮಗನಿಗೆ ತಾನು ಸಂತೋಷದಿಂದ ಕೊಡ ಬಹುದಾದರೂ ಸೀತೆಯನ್ನು ಆಗಲೇ ಪರಾಕ್ರಮಶಾಲಿಯಾದ ರಾಮನಿಗೆ ಕೊಟ್ಟಿರುವೆನಾದುದರಿಂದ ತನ್ನ ಮಾತನ್ನು ಹಿಂದಕ್ಕೆ ತೆಗೆದುಕೊಂಡಲ್ಲಿ ಲೋಕವು ಮೆಚ್ಚದೆಂದು ಉತ್ತರಕೊಟ್ಟನು. ಇದಕ್ಕೆ ಇಂದುಗತಿಯೂ ಇತರ ಖಚರರೂ ಜನಕನನ್ನು ದೂರಿ, ಖೇಚರಾಧಿಪತಿಯು ಮಗಳನ್ನು ಕೇಳುತ್ತಿರುವಲ್ಲಿ ಸಾಮಾನ್ಯ ಭೂಚರನಿಗೆ ಕೊಡುವುದುಂಟೇ ಎಂದು ಮೂದಲಿಸಲು, ಜನಕನು ಮುನಿದು ಆತ್ಮಪ್ರಶಂಸೆಯೂ ಪರನಿಂದೆಯೂ ತಕ್ಕುದಲ್ಲವೆಂದು ಹೇಳಿ, ಅತ್ಯಂತ ಪರಾಕ್ರಮ ಶಾಲಿಗಳಾದ ರಾಮಲಕ್ಷ್ಮಣರು ಬಲಾಚ್ಯುತರಲ್ಲವೆ? ಅವರ ಸಮಾನರು ಮತ್ತಾ ರಿರುವರು? ಎಂದು ಕೇಳಲು, ಇಂದುಗತಿಯು ಕೋಪಗೊಂಡು ರಾಮನು ಅಂತಹ ಬಲಶಾಲಿಯಾಗಿದ್ದಲ್ಲಿ ವಜ್ರಾವರ್ತ ಚಾಪವನ್ನು ಏರಿಸಿದ ಪಕ್ಷಕ್ಕೆ ವೈದೇಹಿ ಯನ್ನು ಅವನಿಗೇ ಕೊಡೆಂದೂ ಇಲ್ಲದಿದ್ದರೆ ತನ್ನ ಮಗನಿಗೆ ಕೊಡೆಂದೂ ಹೇಳಲು, ರಾಮನ ಪರಾಕ್ರಮವನ್ನು ಬಲ್ಲ ಜನಕನು ಅದಕ್ಕೊಪ್ಪಿದನು.

ಅನಂತರ ಜನಕನನ್ನು ವಿಚಿತ್ರವಸ್ತ್ರಾದಿಗಳಿಂದಲಂಕರಿಸಿ ವಿದ್ಯಾಧರ ಕುಲಕ್ಕೆ ಮೊದಲಿಗರಾದ ನಮಿ ವಿನಮಿಗಳಿಗೆ ನಾಗರಾಜನಿತ್ತ ವಜ್ರಾವರ್ತ ಸಾಗ ರಾವರ್ತಗಳೆಂಬ ಬಿಲ್ಲುಗಳನ್ನು ತರಿಸಿಕೊಟ್ಟು ಅವಕ್ಕೆ ಚಂದ್ರವರ್ಧನನೆಂಬ ಮಹ ತ್ತರನನ್ನು ಕಾವಲಾಗಿ ನಿಯಮಿಸಿ ವಿಯಚ್ಚರ ಸೇನೆಯೊಡನೆ ಜನಕನನ್ನು ಮಿಥಿಲಾಪುರಕ್ಕೆ ಕಳುಹಿಸಿದನು. ಮಿಥಿಲೆಯ ಜನರು ತಮ್ಮ ದೊರೆಯು ಹಿಂದಿ ರುಗಿ ಬರುವುದನ್ನು ಕಂಡು ಅತ್ಯಂತ ಸಂತೋಷಪಟ್ಟರು. ಜನಕನು ಪಟ್ಟಣ ವನ್ನು ಸೇರಿದ ಕೂಡಲೆ ಚಂದ್ರವರ್ಧನಾದಿಗಳನ್ನು ಉಚಿತ ಮರ್ಯಾದೆಗಳಿಂದ ಸತ್ಕರಿಸಿ ಬಿಲ್ಲುಗಳನ್ನಿಡುವುದಕ್ಕೆ ತಕ್ಕ ಸ್ಥಳವನ್ನೇರ್ಪಡಿಸಿದನು.

ಜನಕನು ಆ ದಿನ ರಾತ್ರಿ ಶಯ್ಯಾಗೃಹದಲ್ಲಿ ತನ್ನರಸಿಗೆ ತಾನು ಹೋಗಿ ಬಂದ ವೃತ್ತಾಂತವನ್ನು ಸವಿಸ್ತಾರವಾಗಿ ತಿಳಿಸಲು ಆಕೆಯು ಬಹಳ ಭಯಪಟ್ಟು ಬಿಲ್ಲುಗಳ ನೆಪದಿಂದ ತನ್ನ ಮಗಳನ್ನು ಖೇಚರರು ಹೊತ್ತುಕೊಂಡು ಹೋಗುವ ರೆಂದು ಅಳತೊಡಗಿದಳು. ರಾಮಲಕ್ಷ್ಮಣರು ಕಾರಣಪುರುಷರೆಂದೂ ಆ ಬಿಲ್ಲುಗಳನ್ನು ಬಗ್ಗಿಸಲು ಅವರೇ ತಕ್ಕ ಸಮರ್ಥರೆಂದೂ ಆಕೆಗೆ ತಿಳಿಸಿ ಜನಕನು ಆಕೆಯನ್ನು

ಸಮಾಧಾನಪಡಿಸಿದನು. ತರುವಾಯ ಜನಕನು ಸ್ವಯಂವರ ಗೃಹವನ್ನು ನಿರ್ಮಾಣ ಮಾಡಿಸಿ ಸ್ವಯಂವರಕ್ಕೆ ಬರುವಂತೆ ಎಲ್ಲ ರಾಜಕುಮಾರರುಗಳಿಗೂ ಹೇಳಿಕಳು ಹಿಸಲು, ಅನೇಕ ದೇಶಗಳಿಂದ ರಾಜಕುಮಾರರು ಬಂದು ಸ್ವಯಂವರ ಮಂಟಪ ವನ್ನಲಂಕರಿಸಿದರು. ದಶರಥನೂ ರಾಮ ಲಕ್ಷ್ಮಣ ಭರತ ಶತ್ರುಘ್ನರೊಡನೆ ಬಂದು ಸಭೆಯಲ್ಲಿ ಕುಳಿತು ರತ್ನದುಂಗುರದ ನಾಯಕ ಮಣಿಯಂತೆ ಪ್ರಕಾಶಿಸುತ್ತಿದ್ದನು.

ಆ ಹೊತ್ತಿಗೆ ಸೀತೆಯು ಸಕಲಾಲಂಕಾರ ಭೂಷಿತಳಾಗಿ ಸ್ವಯಂವರ ಮಂಟಪವನ್ನು ಹೊಕ್ಕು ಅಲ್ಲಿದ್ದವರನ್ನೆಲ್ಲ ಮೋಹಪಾಶದಲ್ಲಿ ತೊಡರಿಸಿದಳು. ವೃದ್ಧ ಕಂಚುಕಿಯೊಬ್ಬಳು ರಾಜಕುಮಾರರೆಲ್ಲರನ್ನೂ ವರ್ಣಿಸಿ ಸೀತೆಗೆ ತೋರಿಸಿದಳು. ಸೀತಾದೇವಿಯ ಮನಸ್ಸು ಮತ್ತಾರಲ್ಲಿಯೂ ನಿಲ್ಲದೆ ರಾಮನಲ್ಲಿಯೇ ನಿಂತಿತು. ಆ ಸಮಯದಲ್ಲಿ ವಿದ್ಯಾಧರ ಮಹತ್ತರನು ಧನುಸ್ಸನ್ನು ಯಥಾವಿಧಿಯಾಗಿ ಪೂಜಿ ಸಲು, ವಜ್ರಾವರ್ತ ಚಾಪವು ಭಯಂಕರವಾದ ಕಾಲಾಹಿಯ ರೂಪವನ್ನು ಪಡೆದು ಭಯವನ್ನುಂಟುಮಾಡಿತು. ಎರಡು ಧನುಸ್ಸುಗಳೂ ಸಿಡಿಲಂತೆ ಮೊಳಗಿ ನೆಲವನ್ನು ಜಡಿದು ರಭಸಮಾಡಿದುವು. ಇದನ್ನು ಖೇಚರರು ನೋಡಿ ಸೀತೆಯು ಪ್ರಭಾಮಂಡಲ ನ ವಶಳಾದಳೆಂದು ನಂಬಿದರು. "ಈ ವಜ್ರಾವರ್ತ ಚಾಪಕ್ಕೆ ಹೆದೆಯನ್ನೇರಿಸಲು ಸಾಮರ್ಥ್ಯವುಳ್ಳಾತನು ಜನಕಜೆಗೆ ವರನಾಗುವನು" ಎಂಬ ಶಬ್ದವು ಆ ಸಭೆಯಲ್ಲಿ ಕೇಳಿಸಲು, ಕೆಲವರು ರಾಜಪುತ್ರರು ಬಂದು ಬಿಲ್ಲುಗಳನ್ನು ಕಂಡು ಭಯಪಟ್ಟು ಹಿಮ್ಮೆಟ್ಟಿದರು. ಆಗ ರಾಮನು ಎದ್ದು ಬಂದು ಆ ವಿಷಮ ಕೋದಂಡವನ್ನು ಹರಳು ಕಡ್ಡಿಯಂತೆ ಬಗೆದು ಕೊಪ್ಪನ್ನು ಎಡಗೈಯಿಂದೊತ್ತಿ ಹೆದೆಯನ್ನೇರಿಸಿ ನೀವಿ ಟಂಕಾರ ಮಾಡಲು ಭೂಮಿಯು ಅದುರಿತು. ಇದನ್ನು ನೋಡಿ ಸೀತೆಗೆ ರೋಮಾಂಚವೂ ಜನಕನಿಗೆ ಸಂತೋಷವೂ ಖೇಚರರಿಗೆ ಖೇದವೂ ರಾಜಕುಮಾರರಿಗೆ ವ್ಯಥೆಯೂ ಲಲನಾ ಜನಕ್ಕೆ ಸಮ್ಮೋಹವೂ ಪುರಜನಕ್ಕಾಶ್ಚರ್ಯವೂ ಹುಟ್ಟಿದುವು. ಸೀತೆಯು ರಾಮನ ಕೊರಳಿಗೆ ಹೂಮಾಲೆಯನ್ನು ಹಾಕಿದಳು.

ತರುವಾಯ, ಎಂಟನೆಯ ಕೇಶವನಾದ ಲಕ್ಷ್ಮಣನು ಸಾಗರಾವರ್ತ ಚಾಪಕ್ಕೆ ದಿವ್ಯಬಾಣವನ್ನು ಹೂಡಲು ಖೇಚರ ಬಲವು ತಲ್ಲಣಿಸಿಹೋಯಿತು. ಆಗ ಚಂದ್ರ ಧ್ವಜನು, ರೂಪಿನಲ್ಲಿ ದೇವೇಂದ್ರ ಸ್ತ್ರೀಯರನ್ನು ಜಯಿಸಿದ ತನ್ನ ಹದಿನೆಂಟು ಮಂದಿ ಹೆಣ್ಣುಮಕ್ಕಳನ್ನು ಲಕ್ಷ್ಮಣನಿಗೆ ಕಾಣಿಕೆಯಾಗಿತ್ತನು. ದಶರಥನು ಸೀತೆಯನ್ನೂ ರಾಮಲಕ್ಷ್ಮಣರನ್ನೂ ಮುಂದಿಟ್ಟುಕೊಂಡು ಮಿಥಿಲಾಪಟ್ಟಣವನ್ನು ಪ್ರವೇಶಿಸಿದನು. ಜನಕನು ಅತಿ ವೈಭವದಿಂದ ಸೀತೆಯನ್ನು ರಾಮನಿಗೆ ಧಾರೆ ಯೆರೆದು ಕೊಟ್ಟನು.

ಆಶ್ವಾಸ ೬–ವನ ಪ್ರಯಾಣ

ರಾಮ ಲಕ್ಷ್ಮಣರಿಗುಂಟಾದ ಅಗಣ್ಯ ಪುಣ್ಯಪ್ರಭಾವವನ್ನು ಕಂಡು ಭರತನು ಅವರಂತೆ ಸಿರಿಯೂ ಮಹಿಮೆಯೂ ತನಗಾಗಲಿಲ್ಲವೆಂಬ ಮನೋವ್ಯಥೆಯಿಂದ ತಪಸ್ಸಿಗೆ ಹೋಗಲು ಆಲೋಚಿಸುತ್ತಿರುವನೆಂದು ಕೈಕೆಯು ತಿಳಿದು ಆ ವೃತ್ತಾಂತವನ್ನು ಪತಿಯೊಡನೆ ಏಕಾಂತದಲ್ಲಿ ಹೇಳಿ, ಭರತನಿಗೆ ಕನಕನ ಮಗಳನ್ನು ಮದುವೆ ಮಾಡಿಸಿ ಅವನನ್ನು ಮೋಹಪಾಶದಲ್ಲಿ ತೊಡರಿಸುವಂತೆ ಕೇಳಿಕೊಂಡಳು. ದಶರಥನು ಅದಕ್ಕೆ ಒಪ್ಪಿ ಕನಕನನ್ನು ಕೇಳಲು, ಆತನೂ ಈ ಸಂಬಂಧಕ್ಕೆ ಸಂತೋಷದೊಡನೆ ಅನುಮತಿಕೊಟ್ಟನು. ಶುಭಮುಹೂರ್ತದಲ್ಲಿ ಬಹಳ ವೈಭವದಿಂದ ಮದುವೆಯು ನಡೆಯಿತು.

ಇತ್ತ, ಜನಕನೊಡನೆ ಮಿಥಿಲೆಗೆ ಬಂದಿದ್ದ ವಿದ್ಯಾಧರ ಮಹತ್ತರನು ರಥನೂಪುರಚಕ್ರವಾಳಪುರಕ್ಕೆ ಹಿಂದಿರುಗಿ ಹೋಗಿ ರಾಮಲಕ್ಷ್ಮಣರ ಪ್ರಭಾವವನ್ನು ಇಂದುಗತಿಗೆ ತಿಳಿಸಲು ಆತನು ನಿಶ್ಚಯವಾಗಿ ಅವರು ಕಾರಣಪುರುಷರೆಂದರಿತು ಭರತ ತ್ರಿಖಂಡಕ್ಕೆಲ್ಲ ಪ್ರಭುಗಳಾದಾರೆಂಬ ಭಯದಿಂದ ಕಳೆಗುಂದಿದನು. ಪ್ರಭಾಮಂಡಲನು ಸೀತಾ ವಿರಹದಿಂದ ವಿಷಾದಗೊಂಡು ರಾಮಲಕ್ಷ್ಮಣರ ಮಹಿಮೆಯನ್ನು ಸಹಿಸಲಾರದೆ ಅವರನ್ನು ಜಯಿಸಿ ಸೀತೆಯನ್ನು ತರುವೆನೆಂದು ಗರ್ಜಿಸಿ ತಕ್ಕ ಪರಿವಾರದೊಡನೆ ಹೊರಟು ಗಗನಮಾರ್ಗದಲ್ಲಿ ಹೋಗುತ್ತ ದಿಕ್ಕುಗಳನ್ನು ನೋಡಲು ಪೂರ್ವಜನ್ಮದ ಸ್ಮರಣೆ ಬಂದು ಮೂರ್ಛೆಹೋದನು. ಆಗ ಪರಿಜನರು ಆತನನ್ನು ಇಂದುಗತಿಯ ಬಳಿಗೆ ಕರೆತಂದರು. ಶೈತ್ಯೋಪಚಾರಗಳಿಂದ ಮೂರ್ಛೆ ತಿಳಿದು ಪ್ರಭಾಮಂಡಲನು ತನ್ನ ಪೂರ್ವವೃತ್ತಾಂತವನ್ನು ತಂದೆಗೆ ತಿಳಿಸಿ ಸೀತೆಯು ತನ್ನ ತಂಗಿಯೆಂದರಿಯದೆ ಆಕೆಯನ್ನು ಮೋಹಿಸಿದುದಕ್ಕಾಗಿ ವ್ಯಥೆಪಟ್ಟನು. ಇಂದುಗತಿಯು ಇದೆಲ್ಲವನ್ನೂ ನೋಡಿ ವಿಸ್ಮಯಪಟ್ಟು ಪ್ರಭಾಮಂಡಲನಿಗೆ ರಾಜ್ಯವನ್ನೊಪ್ಪಿಸಿ ತಾನು ಸರ್ವಭೂತಹಿತ ಭಟ್ಟಾರಕರ ಬಳಿಯಲ್ಲಿ ದೀಕ್ಷೆಗೊಂಡನು.

ಮಿಥಿಲೆಯಲ್ಲಿ ಜನಕನು ಸೀತೆಗೆ ವಸ್ತುವಾಹನಾದಿಗಳನ್ನು ಬಳಿವಳಿ ಕೊಟ್ಟು ಆಕೆಯನ್ನು ದಶರಥನೊಡನೆ ಅಯೋಧ್ಯೆಗೆ ಪ್ರಯಾಣಮಾಡಿಸಿದನು. ದಶರಥನು ಕೆಲವು ದಿನಗಳಲ್ಲಿ ವಿನೀತಾನಗರವನ್ನು ಸೇರಿರಲು, ಒಂದು ದಿನ ಚಾರನೊಬ್ಬನು ಬಂದು ಸರಯೂ ನದೀ ತೀರದ ಮಹೇಂದ್ರೋದ್ಯಾನ ವನದಲ್ಲಿ ಸರ್ವಭೂತಹಿತ ಭಟ್ಟಾರಕರು ಮಹಾಮುನಿಗಳ ಸಮುದಾಯದೊಡನೆ ಯೋಗನಿಷ್ಠೆಯಿಂದಿರುವರೆಂದು ತಿಳಿಸಿದನು. ದಶರಥನು ಬಹಳ ಭಕ್ತಿಯಿಂದೆದ್ದು ಆ ಕಡೆಗೆ ಕೈಮುಗಿದು ಕೂಡಲೆ ಹೊರಟು ಉದ್ಯಾನವನಕ್ಕೆ ಬಂದು ಮುನಿಯನ್ನರ್ಚಿಸಿ ವಂದನೆ ಮಾಡಿ ರಾಮ ಲಕ್ಷ್ಮಣ ಭರತ ಶತ್ರುಘ್ನರೊಡನೆ ಸಮುಚಿತಾಸನದಲ್ಲಿ ಕುಳಿತು, ದೀಕ್ಷಿತನಾದ ಇಂದುಗತಿಯನ್ನೂ ಬಾಡಿದ ಮುಖವುಳ್ಳ ಪ್ರಭಾಮಂಡಲನನ್ನೂ

ಆ ಮುನಿಯ ಬಳಿಯಲ್ಲಿ ಕಂಡನು. ದಶರಥನು ಇಂದುಗತಿಯು ದೀಕ್ಷೆಗೊಂಡು ದಕ್ಕೆ ಕಾರಣವನ್ನು ಮುನಿಮುಖದಿಂದ ತಿಳಿದ ತರುವಾಯ ಪ್ರಭಾಮಂಡಲನು ತನ್ನನ್ನು ಅಷ್ಟು ಅಕ್ಕರೆಯಿಂದ ಇಂದುಗತಿಯು ಸಲಹಿದುದಕ್ಕೆ ಕಾರಣವನ್ನು ತಿಳಿಸ ಬೇಕೆಂದು ಮುನಿಯನ್ನು ಭಕ್ತಿಯಿಂದ ಬೇಡಿಕೊಳ್ಳಲು, ಮುನಿಯು ಆ ವೃತ್ತಾಂತ ವನ್ನು ವಿಸ್ತಾರವಾಗಿ ತಿಳಿಸಿದನು. ಇದನ್ನು ಕೇಳಿ ಅಲ್ಲಿ ನೆರೆದಿದ್ದ ರಾಜಸಭೆಯೂ ಪ್ರಭಾಮಂಡಲನೂ ಸೀತೆಯೂ ಬೆರಗಾಗಿ ಹರ್ಷವನ್ನು ತಾಳಿದರು. ಪ್ರಭಾ ಮಂಡಲನು ದಶರಥನಿಗೆ ಸಾಷ್ಟಾಂಗ ನಮಸ್ಕಾರಮಾಡಿ ರಾಮ ಲಕ್ಷ್ಮಣ ಭರತ ಶತ್ರುಘ್ನರೊಡನೆ ವಿನಯವೃತ್ತಿಯಿಂದಿರಲು, ಸೀತೆಯು ಅಣ್ಣನಾದ ಪ್ರಭಾಮಂಡಲ ನಿಗೆ ನಮಸ್ಕಾರ ಮಾಡಿದಳು. ಆತನು ಆಕೆಯನ್ನು ಅಖಂಡಿತ ಪುಣ್ಯಭಾಗಿನಿ ಯಾಗೆಂದು ಹರಸಿ ಪರಮಾನಂದ ಭರಿತನಾಗಿದ್ದನು. ದಶರಥ ಮೊದಲಾಗಿ ಎಲ್ಲರೂ ಅಲ್ಲಿಂದ ಹೊರಟು ಸಾಕೇತಪುರವನ್ನು ಸೇರಿದರು. ತರುವಾಯ ದಶರಥನು ಈ ವೃತ್ತಾಂತವನ್ನು ಜನಕನಿಗೆ ಹೇಳಿಕಳುಹಿಸಲು ಆತನೂ ವಿದೇಹಿಯೂ ಬಹಳ ತವಕದಿಂದ ಅಯೋಧ್ಯೆಗೆ ಬಂದು ಪ್ರಭಾಮಂಡಲನನ್ನು ಕಂಡು ಮಗನನ್ನು ಆಗ ತಾನೆ ಪಡೆದಂತೆ ಸಂತೋಷ ಸಾಗರದಲ್ಲಿ ಮುಳುಗಿದರು. ದಶರಥನು ಸಾಕೇತ ಪುರಕ್ಕೆ ಬಂದಿದ್ದ ತನ್ನ ಬಂಧುವರ್ಗವನ್ನೆಲ್ಲ ಬಹಳ ಪ್ರೀತಿಯಿಂದ ನೋಡಿ ಕೊಂಡಿದ್ದನು. ಪ್ರಭಾಮಂಡಲನು ರಾಮಲಕ್ಷ್ಮಣರೊಡನೆ ಕೂಡಿ ಅನೇಕ ವಿನೋದ ಗಳಿಂದ ಒಂದು ತಿಂಗಳನ್ನು ಒಂದು ಕ್ಷಣದಂತೆ ಕಳೆದು ಮಿಥಿಲೆಗೆ ಹೋಗಿ ಜನಕನ ರಾಜ್ಯವನ್ನು ತನ್ನ ಚಿಕ್ಕಪ್ಪನಾದ ಕನಕನಿಗೆ ಕೊಟ್ಟು ತಾಯಿತಂದೆ ಗಳೊಡನೆ ರಥನೂಪುರಚಕ್ರವಾಳಪುರವನ್ನು ಸೇರಿ ಸುಖದಿಂದಿದ್ದನು.

ಒಂದು ದಿನ ದಶರಥನು ಸರ್ವಭೂತಹಿತ ಭಟ್ಟಾರಕರನ್ನು ಕಂಡು ಭಕ್ತಿ ಯಿಂದ ಪೂಜಿಸಿ ತನ್ನ ಭವಾವಳಿಯನ್ನು ತಿಳಿಸಬೇಕೆಂದು ಬೇಡಿಕೊಳ್ಳಲು ಆ ಮುನಿಪತಿಯು ಅದನ್ನು ವಿಶದವಾಗಿ ತಿಳಿಸಿದನು. ಅದನ್ನು ಕೇಳಿ ದಶರಥನು ತಾನು ಸುಕೃತ ದುಷ್ಕೃತ ಕರ್ಮವಿಪಾಕ ಸುಖ ದುಃಖಗಳನ್ನನುಭವಿಸಿ ರಾಟಳದ ಗುಂಡಿಗೆಯಂತಾದೆನೆಂದೂ ಪುಣ್ಯ ಪಾಪಗಳಿರಡಲ್ಲದೆ ಭಂಡಾರ ವಸ್ತು ವಾಹನಾದಿ ಗಳಾವುವೂ ಒಡನೆ ಬರಲಾರವೆಂದೂ ತಿಳಿದು ಮೋಕ್ಷಸುಖವನ್ನು ಬಯಸಿ ಮುನೀಂದ್ರನಪ್ಪಣೆಯನ್ನು ಪಡೆದು ಅಯೋಧ್ಯೆಗೆ ಬಂದನು. ಆ ದಿನ ದಶರಥನು ನಿತ್ಯನಿಯಮಗಳನ್ನು ನೆರವೇರಿಸಿದನಂತರ ಸಿಂಹಾಸನವನ್ನೇರಿ ಒಡ್ಡೋಲಗಂಗೊಟ್ಟು ತನ್ನ ಕುಮಾರರನ್ನು ಬರಹೇಳಿದನು. ಎಲ್ಲರೂ ಬಂದು ತಂದೆಗೆ ದಂಡಪ್ರಣಾಮ ವನ್ನು ಮಾಡಿ ಆತನ ಆಶೀರ್ವಾದವನ್ನು ಪಡೆದು ಸಿಂಹಾಸನದ ಪಕ್ಕದಲ್ಲಿದ್ದ ಮಣಿಮಯಾಸನಗಳ ಮೇಲೆ ಕುಳಿತುಕೊಂಡರು. ದಶರಥನು ರಾಮಚಂದ್ರನ ಮುಖವನ್ನು ನೋಡಿ, "ಮಗುವೇ! ಹಣೆಯಲ್ಲಿ ಕಣ್ಣನ್ನು ಪಡೆವಂತೆ ತೇಜೋ

ಮಯನಾದ ನಿನ್ನನ್ನು ಪಡೆದಿರುವೆನು. ನನ್ನ ತಂದೆಯು ಒಂದು ತಿಂಗಳ ಕೂಸಾದ ನನಗೆ ಪಟ್ಟವನ್ನು ಕಟ್ಟಿ ತಪೋರಾಜ್ಯವನ್ನು ಪಡೆದನು. ನೀನು ಪ್ರಾಪ್ತವಯಸ್ಕನಾಗಿರುವುದರಿಂದ ರಾಜ್ಯಭಾರವನ್ನು ವಹಿಸು; ತಪಃಶ್ರೀಯನ್ನು ಸೇರಬೇಕೆಂದಿರುವ ನನ್ನ ಕೋರಿಕೆಯನ್ನು ಈಡೇರಿಸು; ತಂದೆಯ ಮಾತನ್ನು ಮೀರುವುದು ನಮ್ಮ ವಂಶಕ್ಕೆ ಬಂದುದಲ್ಲ" ಎಂದು ಹೇಳಿ ಮರುಮಾತಿಗೆಡೆಗುಡದೆ ನುಡಿದು ರಾಮನನ್ನು ಒಪ್ಪಿಸಿದನು. ಆಗ ಭರತನು ತಂದೆಯೊಡನೆ ತಾನೂ ತಪಸ್ಸಿಗೆ ಹೊರಡುವೆನೆಂದು ನಿಶ್ಚಯಿಸಿ ಬಿನ್ನವಿಸಲು ಈ ವಾರ್ತೆಯನ್ನು, ಆ ಸಭೆಯಲ್ಲಿದ್ದವನೊಬ್ಬನು ಓಡಿಹೋಗಿ ಕೈಕೆಗೆ ತಿಳಿಸಿದನು. ಆಕೆಯು ಇದನ್ನು ಕೇಳಿ ವಿಕಲೆಯಾಗಿ ತನಗಿನ್ನುಮೇಲೆ ಕಿಂಕರಭಾವವು ಬರುವುದೆಂದು ಹಂಬಲಿಸುತ್ತಿರಲು ಪತಿಯು ಆಕೆಗೆ ಕೊಟ್ಟಿದ್ದ ವರವು ನೆನಪಿಗೆ ಬಂದಿತ್ತು. ಆಕೆಯು ಕೂಡಲೆ ಹೊರಟು ದಶರಥನ ಬಳಿಗೆ ಬಂದು ತನಗೆ ವಾಗ್ದಾನಮಾಡಿದ್ದ ವರವನ್ನು ಕೊಡೆಂದು ಆತನನ್ನು ಕೇಳಿದಳು. ಆಗ ದಶರಥನು ತನ್ನ ತಪೋವನ ಗಮನಕ್ಕೆ ವಿಘ್ನಕರವಲ್ಲದುದನ್ನು ಬೇಡಿಕೊಳ್ಳಿನಲು, ಆಕೆಯು ಭರತನಿಗೆ ರಾಜ್ಯವನ್ನು ಹದಿನಾಲ್ಕು ವರುಷಗಳ ಪರ್ಯಂತ ಕೊಡೆಂದು ಕೇಳಿದಳು. ಈ ಮಾತು ಕಿವಿಗೆ ಬೀಳುತ್ತಲೆ ದಶರಥನು ಮನನೊಂದು ಚಿಂತಾಕ್ರಾಂತನಾದನು. ಭರತನು ತನ್ನ ತಾಯಿಯು ಇಂತಹ ತಪ್ಪುಕೆಲಸವನ್ನು ಮಾಡಿದಳಲ್ಲಾ ಎಂದು ನೊಂದನು; ಸಭೆಯಲ್ಲಿದ್ದವರೆಲ್ಲರೂ ಕೈಕೆಯನ್ನು ದೂಷಿಸಿದರು.

ಇದೆಲ್ಲವನ್ನೂ ನೋಡಿ ಹಲಾಯುಧನಾದ ರಾಮನು ತಂದೆಯ ಭಾಷೆ ತಪ್ಪದಂತೆಯೂ ಚಿಕ್ಕತಾಯಿಯಾದ ಕೈಕೆಯ ಮನೋರಥವು ಈಡೇರುವಂತೆಯೂ ರಾಜ್ಯವನ್ನು ಸಂತೋಷದಿಂದ ಭರತನಿಗೆ ಕೊಟ್ಟು ಕೃತಾರ್ಥನಾಗುವೆನೆಂದು ಹರ್ಷವನ್ನು ತಾಳಿ ಕೈಕೆಗೆ ಅದನ್ನು ತಿಳಿಸಿದನು. ತರುವಾಯ ಆತನು ತಂದೆಯನ್ನು ನೋಡಿ ರಾಜ್ಯವು ತನಗಾದರೇನು ಭರತನಿಗಾದರೇನು? ಅಣ್ಣ ತಮ್ಮಂದಿರಲ್ಲಿ ಭೇದಭಾವವಿಲ್ಲವೆಂದು ನುಡಿದು, ಭಾಷೆಗೆ ತಪ್ಪುವುದು ಸರ್ವಥಾ ಸರಿಯಲ್ಲವೆಂದು ತಿಳಿಸಿ, ತಾನು ಆ ಹದಿನಾಲ್ಕು ವರ್ಷಗಳು ದಿಗ್ವಿಜಯ ಯಾತ್ರೆಗೆ ಹೋಗಿ ಬರುವೆನೆಂದೂ ಭರತನಿಗೆ ಕೂಡಲೆ ಪಟ್ಟವನ್ನು ಕಟ್ಟಬೇಕೆಂದೂ ಹೇಳಿದನು. ಆಗ ಭರತನು ಕಿರಿಯನಾದ ತಾನು ಹಿರಿಯನ ರಾಜ್ಯವನ್ನು ಬಯಸುವುದು ತಕ್ಕದ್ದಲ್ಲವೆಂದೂ ತಪೋರಾಜ್ಯವೇ ತನ್ನ ಮನಸ್ಸಿಗೊಪ್ಪಿದುದೆಂದೂ ತಂದೆಗೆ ತಿಳಿಸಿದನು. ಅದಕ್ಕೆ ದಶರಥನು ಅಣ್ಣನ ಮಾತಿಗವಿಧೇಯವಾಗಿ ನುಡಿವುದು ಸರಿಯಲ್ಲವೆಂದು ಭರತನಿಗೆ ಹೇಳಲು, ಆತನು ಮರುಮಾತಾಡಲಾರದೆ ನಿಂತಿರುವಲ್ಲಿ ರಾಮನು "ಭರತನೇ, ಭಾಷೆಗೆ ತಪ್ಪಿದರೆ ತಂದೆಯ ಯಶಸ್ಸು ಹೋಗುವುದು; ನಿನ್ನ ಅಗಲಿಕೆಯಿಂದ ನಿನ್ನ ತಾಯಿಗೆ ಪ್ರಾಣ ಹಾನಿಯಾಗುವುದು; ಆದುದ

ರಿಂದ ಪಿತೃವಾಕ್ಯ ಪರಿಪಾಲನವೇ ನಿನ್ನ ಕರ್ತವ್ಯವು. ತಂದೆಯು ಕ್ರಮದಿಂದ ನನಗಿತ್ತ ರಾಜ್ಯವನ್ನು ನಾನು ನಿನಗೆ ಕೊಡುವೆನು; ಆದುದರಿಂದ ರಾಜ್ಯಭಾರವನ್ನು ವಹಿಸುವುದು ನಿನಗೆ ಸ್ವಲ್ಪವೂ ಅಕ್ರಮವಲ್ಲ" ಎಂದು ಹೇಳಿ ಭರತನನ್ನೊಡಂಬಡಿಸಿದನು. ಇದನ್ನು ನೋಡಿ ಸಭಾಜನರು ರಾಮನ ಸತ್ಯಸಂಧತೆಯನ್ನೂ ಔದಾರ್ಯವನ್ನೂ ಕೊಂಡಾಡುತ್ತಿರಲು ಲಕ್ಷ್ಮಣನು ರಕ್ತೇಕ್ಷಣನಾಗಿ ಭರತನ ಮೇಲೆ ಕೋಪಗೊಂಡನು. ರಾಮನು ತನ್ನ ಕಣ್ಣೋಟದಿಂದ ಲಕ್ಷ್ಮಣನ ಕೋಪವನ್ನು ಶಾಂತಮಾಡಿ ತಂದೆಯ ಪಾದಗಳಿಗೆರಗಿ ಶತ್ರುಗಳನ್ನು ಜಯಿಸಿಕೊಂಡು ಬರುವೆನೆಂದು ಆತನೊಡನೆ ಹೇಳಿ ಸಭೆಯಿಂದೆದ್ದು ಹೊರಡಲು ದಶರಥನು ಮೂರ್ಛೆಹೋದನು. ಇದನ್ನು ನೋಡಿ ಕೈಕೆಯು ಇದೆಲ್ಲವೂ ತನ್ನಿಂದಾಯಿತಲ್ಲಾ ಎಂದು ವ್ಯಥೆಪಟ್ಟು ಅಳುತ್ತ ಹೊರಟುಹೋದಳು. ಲಕ್ಷ್ಮಣನು ರಾಮನ ಸಹಾಯಕ್ಕಾಗಿ ಅವನೊಡನೆ ತಾನೂ ಹೋಗುವ ಆಲೋಚನೆಯಿಂದ ರಾಮನನ್ನು ಸೇರಿದನು. ಈ ವೃತ್ತಾಂತವೆಲ್ಲವನ್ನೂ ಸುಮಿತ್ರೆಯೂ ಅಪರಾಜಿತೆಯೂ ಕೇಳಿ ಭಯಭ್ರಾಂತರಾಗಿ ವ್ಯಸನಪಡುತ್ತಿರುವಲ್ಲಿ ರಾಮಲಕ್ಷ್ಮಣರು ಬಂದು ಅವರನ್ನು ನಮಸ್ಕರಿಸಿ ಕುಳಿತುಕೊಂಡರು. ಅಪರಾಜಿತೆಯು ರಾಮನ ವನವಾಸವನ್ನು ನೆನೆನೆನೆದು ಗಟ್ಟಿಯಾಗಿ ಅಳತೊಡಗಿದಳು. ಲಕ್ಷ್ಮಣನು ತಕ್ಕ ಮಾತುಗಳಿಂದ ಆಕೆಯನ್ನು ಸಮಾಧಾನ ಗೊಳಿಸಲು, "ಸೀತೆಯೂ ನಿಮ್ಮೊಡನೆ ಬರುವಳು, ಇಲ್ಲಿರುವವಳಲ್ಲ" ಎಂದು ಆಕೆಯು ಹೇಳಿದಳು. ಸುಮಿತ್ರೆಯು ಲಕ್ಷ್ಮಣನನ್ನು ಕುರಿತು, ತಾನು ತನ್ನ ಕಷ್ಟವನ್ನೂ ಲಕ್ಷಿಸದೆ ಅಣ್ಣನನ್ನೂ ಅತ್ತಿಗೆಯನ್ನೂ ಭಕ್ತಿಯಿಂದ ಸೇವಿಸುತ್ತಿರೆಂದು ಬುದ್ಧಿವಾದವನ್ನು ಹೇಳಿದಳು.

ರಾಮಲಕ್ಷ್ಮಣರು ತಾಯಿಯರ ಅಪ್ಪಣೆಯನ್ನು ಪಡೆದು ಸೀತೆಯೊಡನೆ ಅಯೋಧ್ಯೆಯ ಅಂಗಡಿಯ ಬೀದಿಯಲ್ಲಿ ಪಾದಚಾರಿಗಳಾಗಿ ಬರುತ್ತಿರುವಲ್ಲಿ ಪುರಜನರು ತಂಡತಂಡವಾಗಿ ನೆರೆದು ಕೌತುಕಗೊಂಡು ನೋಡುತ್ತ ಅರಸುಮಕ್ಕಳು ಈ ತೆರನಾಗಿ ಹೋಗುವುದಕ್ಕೆ ಕಾರಣವನ್ನು ತಿಳಿಯದೆ ನಾನಾ ವಿಧವಾಗಿ ಮಾತನಾಡಿಕೊಳ್ಳುತ್ತಿದ್ದರು. ಈ ಮಾತುಗಳನ್ನು ಕೇಳುತ್ತ ಅವರು ಸಾಯಂಕಾಲದ ಹೊತ್ತಿಗೆ ಪಟ್ಟಣದ ಹೊರಗಣ ಅರಭಟ್ಟಾರಕರ ಬಸದಿಯನ್ನು ಹೊಕ್ಕು ಪ್ರದಕ್ಷಿಣನಮಸ್ಕಾರವನ್ನು ಮಾಡಿದರು.

ಆಶ್ವಾಸ ೭—ಶರದ್ವರ್ಣನೆ

ಶ್ರೀರಾಮನು ಅಖಿಲಾರಾಧ್ಯನ ರತ್ನಭವನವನ್ನು ಬಲಗೊಂಡು ಒಳಹೊಕ್ಕು ಕೈಮುಗಿದು ದರ್ಶನಸ್ತುತಿಗೈದು ಕುಳಿತಿರಲು ಸೂರ್ಯನಸ್ತಮಿಸಿದನು. ಆಗ ರಾಮನು, ವ್ಯಸನದಿಂದ ಅಲ್ಲಿಗೆ ಬಂದ ತಾಯಿಯರೊಡನೆ ವಿನಯ ವಚನಗಳನ್ನು ನುಡಿದು ಸಮಾ

ಧಾನಪಡಿಸಿ ಅವರನ್ನು ಹಿಂದಕ್ಕೆ ಕಳುಹಿಸಿದನು. ತರುವಾಯ ತಾವೆಲ್ಲರೂ ಮಲಗಿ ನಿದ್ದೆಮಾಡಿ ಮಧ್ಯರಾತ್ರಿಯಲ್ಲೆದ್ದು ಜನಪತಿಯನ್ನು ಬೀಳ್ಕೊಂಡು ಬಿಲ್ಲನ್ನೂ ಅಂಬುಗಳನ್ನೂ ಪಿಡಿದು ಸೀತೆಯನ್ನು ನಡಿಸಿಕೊಂಡು ಪಟ್ಟಣದ ದಿಡ್ಡಿಯ ಬಾಗಿಲಿಂದ ಹೊರಟು ದಕ್ಷಿಣಾಭಿಮುಖವಾಗಿ ಪ್ರಯಾಣಮಾಡಿದರು. ಅವರ ಹಿಂದೆಯೇ ಬರುತ್ತಿರುವ ಅನೇಕ ಸಾಮಂತರೊಡನೆ ಮಾತನಾಡುತ್ತ ಅವರನ್ನು ನಿಲ್ಲುವಂತೆ ಹೇಳುತ್ತ ರಾಮನು, ಸೀತೆ ನಡೆಯಲಾರಳೆಂದು ಮೆಲ್ಲಗೆ ನಡೆಯುತ್ತಿರುವೆವೆಂದು ತಿಳಿಸಿ, ಗಂಭೀರ ತರಂಗಿಣಿಯು ಅಡ್ಡವಾಗಿ ಬರಲು, ಸಾಮಂತಾದಿಗಳನ್ನು ಅಲ್ಲಿ ನಿಲ್ಲುವಂತೊಡಂಬಡಿಸಿ ಹರಿಗೋಲಿನಲ್ಲಿ ತೊರೆಯನ್ನು ದಾಟಿ ಸೀತಾಲಕ್ಷ್ಮಣರೊಡನೆ ಹೊರಟುಹೋದನು. ಹಿಂದೆ ಬರುತ್ತಿದ್ದ ಕೆಲವರು, ಈ ಕಾರಣದಿಂದ ವೈರಾಗ್ಯಪರರಾಗಿ, ಅಲ್ಲಿಯ ಜಿನಾಗಾರದಲ್ಲಿದ್ದ ಶತಕೇತು ಗಣಧರರ ಬಳಿಯಲ್ಲಿ ದೀಕ್ಷೆಗೊಂಡರು; ಉಳಿದವರು ಸಾಕೇತಪುರವನ್ನು ಸೇರಿದರು.

ಇದನ್ನು ಕೇಳಿ ದಶರಥನು ದೀಕ್ಷೆಗೊಂಡನು; ಭರತನು ರಾಜ್ಯಸುಖನಿರತನಾದನು. ಅಪರಾಜಿತೆಯು ಉದಾತ್ತ ರಾಘವನ ವನಪ್ರವೇಶ ಕ್ಲೇಶಾಯಾಸವನ್ನು ನೆನೆ ನೆನೆದು ಕಣ್ಣೀರು ಸುರಿಸುತ್ತ ಗದ್ಗದ ಕಂಠೆಯಾಗಿ ಸುಕುಮಾರಿಯಾದ ಸೀತೆಯು ಆ ಕಷ್ಟವನ್ನು ಹೇಗೆ ಸೈರಿಸುವಳೆಂದು ಹಂಬಲಿಸತೊಡಗಿದಳು. ಇದನ್ನು ನೋಡಿ ಸುಮಿತ್ರೆಯೂ ಶೋಕಿಸುತ್ತಿರಲು, ಕೈಕೆಯು ಕೇಳಿ "ನನ್ನಿಂದ ಇಷ್ಟು ದುಃಸ್ಥಿತಿ ಬಂದಿತಲ್ಲವೆ! ಪತಿಯು ದೀಕ್ಷೆಗೊಂಡನು, ಅಪರಾಜಿತೆಗೆ ದುಃಖವು ಸಹಿಸದಂತಾಯಿತು, ಮಗನು ರಾಜ್ಯಸುಖವನ್ನು ಲೆಕ್ಕಿಸದೆ ಹೋದನು, ಇವೆಲ್ಲವನ್ನೂ ಸ್ತ್ರೀತದ ಜಡತ್ವದಿಂದ ಮಾಡಿದೆನಲ್ಲವೆ?" ಎಂದು ಹೆಚ್ಚಾಗಿ ಶೋಕಗೊಂಡು ತನ್ನನ್ನು ತಾನೇ ನಿಂದಿಸಿಕೊಂಡಳು; ಆಗ ಭರತನನ್ನು ಕರೆಯಿಸಿ ರಾಮಲಕ್ಷ್ಮಣರಿಲ್ಲದೆ ರಾಜ್ಯವು ಶೋಭಿಸದೆಂದೂ ಅವರ ತಾಯಿಯರು ಅವರ ವಿಯೋಗದಿಂದ ಪ್ರಾಣತ್ಯಾಗಮಾಡುವರೆಂದೂ ಹಾಗಾಗದಂತೆ ತಾನು ಬೇಗ ಹೋಗಿ ರಾಮಲಕ್ಷ್ಮಣರು ಮುಂದಕ್ಕೆ ಹೋಗದಂತೆ ತಡೆಯಬೇಕೆಂದೂ ತಾನೂ ಜೊತೆಯಲ್ಲಿ ಬರುವೆನೆಂದೂ ಹೇಳಿದಳು. ಅದಕ್ಕೆ ಭರತನು ಒಪ್ಪಿ ತಾಯಿಯೊಡಗೂಡಿ ಸಾಮಂತರೊಡನೆ ತೊರೆಯನ್ನು ದಾಟಿ ಅಡವಿಯಲ್ಲಿ ಜಾನಕಿಯ ಮಾರ್ಗಾಯಾಸವನ್ನು ಆರಿಸುತ್ತಿದ್ದ ರಾಮನನ್ನು ಕಂಡು ಅವನ ಕಾಲ ಮೇಲೆ ಬಿದ್ದು ಮೂರ್ಛೆಹೋಗಿ ಕೂಡಲೆ ಎಚ್ಚತ್ತು ಸೀತೆಗೂ ರಾಮನಿಗೂ ನಮಸ್ಕಾರಮಾಡಿ, ಅಕ್ರಮದಿಂದ ಬಂದ ರಾಜ್ಯವನ್ನು ತಾನೊಲ್ಲೆನೆಂದು ಹೇಳುತ್ತಿರುವಲ್ಲಿ, ಕೈಕೆಯು ಬರುತ್ತಿರುವುದನ್ನು ರಾಮನು ಕಂಡನು. ಕೂಡಲೆ ಎದ್ದು ಹೋಗಿ ರಾಮನು ಭಕ್ತಿಯಿಂದ ಕೈಕೆಯ ಪಾದಗಳಿಗೆರಗಲು ಕೈಕೆಯು ತಾನು ಮಾಡಿದ ಅನ್ಯಾಯಕ್ಕಾಗಿ ಬಹಳನೊಂದು ಮಗನನ್ನು ಎತ್ತಿ ಪ್ರೀತಿಸಿ ಬಹಳವಾಗಿ ಪ್ರಲಾಪಿಸಿ, ತಾನು ಮಾಡಿದ

ಅನ್ಯಾಯವನ್ನು ಸೈರಿಸಿ ರಾಜ್ಯವನ್ನು ಕೈಕೊಳ್ಳಬೇಕೆಂದು ಕೇಳಿಕೊಂಡಳು. ಇದಕ್ಕೆ ರಾಮನು ಕೈಮುಗಿದುಕೊಂಡು "ತಾಯೇ! ಅಕಳಂಕ ಚರಿತ್ರನಾದ ಅಯ್ಯನ ನನ್ನಿಗೆ ಕುಂದನ್ನುಂಟುಮಾಡಿ ರಾಜ್ಯವನ್ನು ನಾನು ಪಡೆದರೆ ನನ್ನ ಮಾತು ಹುಸಿಯಾಗುವುದು; ಸುಳ್ಳಿಗಿಂತಲೂ ಹೆಚ್ಚಾದ ಪಾತಕವಿಲ್ಲ; ಆದುದರಿಂದ ತಾವು ಮರು ಮಾತಾಡದಿರಿ" ಎಂದು ಹೇಳಿ, ಭರತನು ತನ್ನ ಮಾತಿಗೆ ಪ್ರತಿಯಾಡಿದರೆ ತನ್ನ ಆಜ್ಞೆಗೆ ವಿಮಾರಿದವನಾಗುವನೆಂದು ನಿಲಿಸುಡಿದನು. ಇದಕ್ಕೆ ಭರತನು ರಾಮನ ಆಜ್ಞೆಗೆ ಕಟ್ಟುಬಿದ್ದು, ಆತನು ಹಿಂದಿರುಗಿ ಬರುವವರೆಗೂ ತಾನು ರಾಜ್ಯವನ್ನು ಪರಿಪಾಲಿಸುವೆನೆಂದೂ ತನ್ನ ಮನಸ್ಸಾಕ್ಷಿಯಾಗಿಯೂ ರಾಜ್ಯವನ್ನಪೇಕ್ಷಿಸುವವನಲ್ಲ ವೆಂದೂ ಹೇಳಿದನು. ರಾಮನು ಭರತನನ್ನೂ ತಾಯಿಯನ್ನೂ ತಕ್ಕಂತೆ ಮನ್ನಿಸಿ ಅಯೋಧ್ಯೆಗೆ ಕಳುಹಿಸಿ ಸೀತೆಯೊಡನೆ ತಾನೂ ಲಕ್ಷ್ಮಣನೂ ಮುಂದಕ್ಕೆ ತೆರಳಿದರು.

ಸೀತೆಯು ದಾರಿಯಲ್ಲಿ ಕಲ್ಲುಮುಳ್ಳುಗಳನ್ನು ತುಳಿದರೂ ಬಿಸಲಿನ ಬೇಗೆಯಲ್ಲಿ ಬಳಲಿದರೂ ಪತಿಯು ತನ್ನೊಡನೆ ಇರುವನಲ್ಲಾ ಎಂಬ ಸಂತೋಷದಿಂದ ಆ ಬಾಧೆಗಳನ್ನು ಲಕ್ಷ್ಯಮಾಡದೆ ನಡೆದಳು. ಅವರು ಅನೇಕ ದೇಶಗಳನ್ನೂ ಗ್ರಾಮಗಳನ್ನೂ ದಾಟಿ ಚಿತ್ರಕೂಟ ಪರ್ವತವನ್ನು ಬಲಕ್ಕೆ ಬಿಟ್ಟು ಅವಂತೀದೇಶದಲ್ಲಿ ಬರುತ್ತ ಒಂದು ಆಲದ ಮರದ ಕೆಳಗೆ ವಿಶ್ರಮಿಸಿಕೊಂಡು ಸುತ್ತಲೂ ನೋಡುವಲ್ಲಿ, ಹಣ್ಣುಗಳ ಭಾರದಿಂದ ಜಗ್ಗುತ್ತಿರುವ ಫಲವೃಕ್ಷಗಳುಳ್ಳ ತೋಟಗಳು ಕಾಯುವವರಾರೂ ಇಲ್ಲದೆ ಆ ಪ್ರಾಂತವೆಲ್ಲ ನಿರ್ಜನಪ್ರದೇಶವಾಗಿರುವಂತೆ ಕಂಡುಬಂದಿತು. ದಾರಿಹೋಕನೊಬ್ಬನು ಬಂದು ರಾಮಲಕ್ಷ್ಮಣರಿಗೆರಗಿ ಭಯಪಟ್ಟು ನಿಂತಿರಲು, ಲಕ್ಷ್ಮಣನು ಅಂಜದಿರೆಂದು ಹೇಳಿ ಆ ನಾಡು ಏಕೆ ಪಾಳಾಯಿತೆಂದು ಅವನನ್ನು ಕೇಳಿದನು. ಅದಕ್ಕವನು ಕೈಮುಗಿದುಕೊಂಡು "ಮಹಾಸ್ವಾಮಿ! ಇದು ಅವಂತೀದೇಶವು; ಇದರಲ್ಲಿಯ ಉಜ್ಜಯಿನಿಯೆಂಬ ಪಟ್ಟಣವನ್ನಾಳುವ ಸಿಂಹೋದರನೆಂಬ ಪರಾಕ್ರಮಶಾಲಿಯು, ತನ್ನ ಸಾಮಂತನಾದ ವಜ್ರಕರ್ಣನು ಸಕಲಜ್ಞನಿಗಲ್ಲದೆ ಮತ್ತಾರಿಗೂ ಕೈಮುಗಿಯೆನೆಂಬ ಪ್ರತಿಜ್ಞೆಯಿಂದ ತನಗೆ ಸುಳ್ಳುಮರ್ಯಾದೆಯನ್ನು ಮಾಡುತ್ತಿರುವುದನ್ನು ಕರ್ಣಪರಂಪರೆಯಾಗಿ ಕೇಳಿ ವಮಿನಿದು, ಅವನಿದ್ದ ಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಅವನ ಭಯಕ್ಕಾಗಿ ಈ ದೇಶವೆಲ್ಲವೂ ಹಾಳಾಗಿಹೋಯಿತು. ವಜ್ರಕರ್ಣನಿರುವ ದಶಪುರವು ಇಲ್ಲಿಗೆ ಸಮೀಪದಲ್ಲಿಯೇ ಇರುವುದು" ಎಂದು ಹೇಳಿ ಅಪ್ಪಣೆಪಡೆದು ಹೊರಟು ಹೋದನು. ರಾಮಲಕ್ಷ್ಮಣರು ವಜ್ರಕರ್ಣನ ಭಕ್ತಿಗೆ ಮೆಚ್ಚಿ ದುರ್ಮತಿಯಾದ ಸಿಂಹೋದರನನ್ನು ದಂಡಿಸುವುದು ತಮ್ಮ ಕರ್ತವ್ಯವೆಂದಾಲೋಚಿಸಿ ದಶಪುರವನ್ನು ಸೇರಿದರು. ವಜ್ರಕರ್ಣನು ಇವರನ್ನು ತನ್ನ ಅರಮನೆಯಿಂದ ನೋಡಿ ಇವರು ಕಾರಣಪುರುಷರೆಂದರಿತು ಬಲನಾರಾಯಣರೇ ಇರಬೇಕೆಂದು

ನಿಶ್ಚಯಿಸುತ್ತಿರುವಲ್ಲಿ ಅವರು ಜಿನೇಂದ್ರಮಂದಿರವನ್ನು ಹೊಕ್ಕು ಪ್ರದಕ್ಷಿಣಪೂರ್ವಕ ವಾಗಿ ನಮಸ್ಕಾರವನ್ನು ಮಾಡಿ ಜಿನೇಶ್ವರನ ದರ್ಶನಸ್ತುತಿ ಮಾಡಿದರು. ಅಷ್ಟರಲ್ಲಿ ವಜ್ರಕರ್ಣನು ಕಳುಹಿಸಿದ ಚಾರರು ಆಹಾರವಸ್ತುಗಳೊಡನೆ ಬಂದು, ಶತ್ರು ಸೈನ್ಯವು ಪಟ್ಟಣವನ್ನು ಮುತ್ತಿರುವುದರಿಂದ ತಾನು ಇಲ್ಲಿಗೆ ಬರುವುದಕ್ಕೂ ತಮ್ಮನ್ನು ಕರೆಯಿಸಿಕೊಳ್ಳುವುದಕ್ಕೂ ತಿಳಿಯದವನಾಗಿ ದೊರೆಯು ನಮ್ಮನ್ನು ಕಳುಹಿಸಿರುವ ನೆಂದು ತಿಳಿಸಿ, ಅರ್ಘ್ಯಪಾದ್ಯಗಳನ್ನು ಕೊಟ್ಟು ಸತ್ಕರಿಸಲು, ರಾಮಲಕ್ಷ್ಮಣರು ಊಟಮಾಡಿ ಗಂಧ ತಾಂಬೂಲಗಳನ್ನು ಸ್ವೀಕರಿಸಿ, ಬಂದಿದ್ದವರನ್ನು ಹಿಂದಕ್ಕೆ ಕಳುಹಿಸಿದರು.

ದಾಶರಥಿಯು ಲಕ್ಷ್ಮಣನನ್ನು ನೋಡಿ, ಅನಿಮಿತ್ತವಾಗಿ ವಜ್ರಕರ್ಣನು ತಮಗೆ ಮರ್ಯಾದೆಮಾಡಿದುದರಿಂದ ಅವನು ಮಾನ್ಯನೆಂದೂ, ಅವನ ಹಗೆ ಯಾದ ಸಿಂಹೋದರನನ್ನು ದಂಡಿಸಬೇಕೆಂದೂ ತಿಳಿಸಲು, ಕೂಡಲೆ ಲಕ್ಷ್ಮಣನು ಹೊರಟು ಸಿಂಹೋದರನ ಅರಮನೆಯ ಬಾಗಿಲಿಗೆ ಬಂದು "ನೀನು ಜಿನೇಶ್ವರ ನಲ್ಲಿರುವ ಮಾತ್ಸರ್ಯವನ್ನು ತೊರೆದು ಜಿನಭಕ್ತನಾದ ವಜ್ರಕರ್ಣನನ್ನು ಮನ್ನಿಸ ತಕ್ಕದ್ದು" ಎಂಬ ಈ ನಾಡಿಗೊಡೆಯನಾದ ಭರತನ ಆಜ್ಞೆಯನ್ನು ದೊರೆಗೆ ತಿಳಿ ಸೆಂದು ಬಾಗಿಲ ಕಾಯುವವನಿಗೆ ಹೇಳಿದನು. ಅವನು ಹಾಗೆ ತಿಳಿಸಲು, ಸಿಂಹೋ ದರನು ಸಿಂಹದಂತೆ ಮುನಿದು ಭರತನನ್ನು ಹಿಯ್ಯಾಳಿಸಿ ಕತ್ತಿಯನ್ನು ಹಿರಿದನು. ಅದಕ್ಕೆ ಲಕ್ಷ್ಮಣನು ಕೋಪಗೊಂಡು ದೊರೆಯ ಪರಿವಾರವನ್ನು ನಾಶಪಾಡಲು, ಸಿಂಹೋದರನು ಸಿಂಹದಂತೆ ಲಕ್ಷ್ಮಣನ ಮೇಲಕ್ಕೆ ಹಾರಿದನು. ಆಗ ಲಕ್ಷ್ಮಣನು ಬಾಲಕನನ್ನು ಹಿಡಿಯುವಂತೆ ಅವನನ್ನು ಹಿಡಿದು ಎಳೆದುಕೊಂಡು ಹೋಗಲು ಮಾರ್ಬಲವು ಅವನ ಮೇಲೆ ಬಿದ್ದಿತು. ಅದನ್ನೆಲ್ಲ ನಾಶಮಾಡಿ ಸಿಂಹೋದರನನ್ನು ಸೆರೆಹಿಡಿದುಕೊಂಡು ಆತನು ರಾಮನ ಬಳಿಗೆ ಬಂದನು. ಲಕ್ಷ್ಮಣನು ಬರಿಗೈಯಲ್ಲಿ ಮಾಡಿದ ಸಾಹಸವನ್ನು ವಜ್ರಕರ್ಣನೂ ಪುರಜನರೂ ನೋಡಿ ಆಶ್ಚರ್ಯಪಟ್ಟರು. ಸಿಂಹೋದರನು ಇವರು ಬಲಾಚ್ಯುತರೆಂದರಿತು ರಾಮಲಕ್ಷ್ಮಣರಿಗೆ ಭಕ್ತಿಯಿಂ ದೆರಗಲು, ರಾಮನು ಅವನ ಭಯವನ್ನು ಕಳೆದು, ವಜ್ರಕರ್ಣನಲ್ಲಿ ಪುನಃ ಸ್ನೇಹ ವನ್ನು ಮಾಡಿ ಬಾಳುವಂತೆ ಅವನಿಗೆ ಹೇಳಿದನು. ಅದಕ್ಕೆ ಅವನು ಈ ಪ್ರಸಂಚದ ಸೌಖ್ಯವನ್ನೊಲ್ಲೆನೆಂದೂ ತಪಕ್ಕೆ ನಿಲ್ಲುವೆನೆಂದೂ ತಿಳಿಸಿದನು.

ಇತ್ತ ಕಡೆ, ವಜ್ರಕರ್ಣನು ಮಿತಪರಿವಾರದೊಡನೆ ಬಸದಿಯನ್ನು ಹೊಕ್ಕು ಬಲಗೊಂಡು ದರ್ಶನಸ್ತುತಿಮಾಡಿ ರಾಮಲಕ್ಷ್ಮಣರಿಗೆರಗಿ ಉಚಿತಸ್ಥಾನದಲ್ಲಿ ಕುಳಿತು ಕೊಂಡನು. ರಾಮದೇವನು ವಜ್ರಕರ್ಣನ ನಿಜವ್ರತ ಪರಿಪಾಲನೆಗೆ ಮೆಚ್ಚಿ ತನಗೆ ಬೇಕಾದುದನ್ನು ಬೇಡಿಕೊಳ್ಳೆಂದು ಹೇಳಲು, ಸಿಂಹೋದರನಿಗೆ ಕರುಣೆಯನ್ನು ತೋರಬೇಕೆಂದು ಅವನು ಕೇಳಿಕೊಂಡನು. ಇದನ್ನು ನೋಡಿ ರಾಮನು ಅವನ

ಸುಗುಣಕ್ಕೆ ಮೆಚ್ಚಿ ಸಿಂಹೋದರನಿಗೂ ವಜ್ರಕರ್ಣನಿಗೂ ಪರಸ್ಪರ ಸ್ನೇಹವನ್ನುಂಟು ಮಾಡಿ ರಾಜ್ಯವನ್ನು ಭಾಗವಾಡಿ ಕೊಟ್ಟನು. ವಜ್ರಕರ್ಣನು ರಾಮಲಕ್ಷ್ಮಣರನ್ನು ಬಹಳವಾಗಿ ಸತ್ಕರಿಸಿ ತನ್ನ ಎಂಟುಮಂದಿ ಹೆಣ್ಣುಮಕ್ಕಳನ್ನು ಲಕ್ಷ್ಮಣನಿಗೆ ಕೊಟ್ಟು ಮದುವೆಮಾಡಿದನು. ಉಳಿದ ರಾಜರು ತಮ್ಮ ಮುನ್ನೂರುಮಂದಿ ಕನ್ನಿಕೆಯರನ್ನು ಲಕ್ಷ್ಮಣನಿಗೆ ಮದುವೆಮಾಡಿ ಕೊಟ್ಟರು. ರಾಮಲಕ್ಷ್ಮಣರು ಸಿಂಹೋದರನನ್ನು ಉಜ್ಜಯಿನಿಗೆ ಕಳುಹಿ ದಶಪುರದಲ್ಲಿ ಕೆಲವು ದಿನವಿರುವಲ್ಲಿ ಬೇಸಗೆ ಬಂದಿತು.

ಆಗ ರಾಮಲಕ್ಷ್ಮಣರು ಸೀತಾಸಮೇತರಾಗಿ ದಕ್ಷಿಣ ದಿಕ್ಕನ್ನು ಹಿಡಿದು ಒಂದು ದೊಡ್ಡ ಕಾಡುದಾರಿಯಲ್ಲಿ ಹೊರಟರು. ಬಿಸಿಲಿನ ಬೇಗೆಯು ಹೆಚ್ಚಿ ಸೀತೆಯು ಬಳಲಿ ಬಾಯಾರಿ ಒಂದು ಆಲದ ಮರದ ಕೆಳಗೆ ನಿಂತಿರಲು ಲಕ್ಷ್ಮಣನು ನೀರನ್ನು ತರುವ ನಿಮಿತ್ತವಾಗಿ ಮುಂದಿದ್ದ ಒಂದು ವನಕ್ಕೆ ಹೋಗಿ ಅಲ್ಲಿದ್ದ ಕೊಳದಲ್ಲಿ ನೀರನ್ನು ಮೊಗೆದುಕೊಂಡು ಬರುತ್ತಿರುವಲ್ಲಿ, ಅವನೆದುರಿಗೆ ಕಾಮನ ಪ್ರತಿರೂಪೆಂಬಂತೆ ಬರುತ್ತ ಅವನನ್ನು ನೋಡಿ ಮೋಹಗೊಂಡ ಗಂಡುವೇಷ ಹಾಕಿಕೊಂಡಿರುವ ಒಬ್ಬ ಬಾಲೆಯನ್ನು ಕಂಡನು. ಅವಳ ವೃತ್ತಾಂತವನ್ನು ವಿಚಾರಿಸಲು, ಆ ಪುರವನ್ನಾಳುತ್ತಿದ್ದ ಆಕೆಯ ತಂದೆಯಾದ ವಾಲಖಿಲ್ಯನನ್ನು ಮ್ಲೇಚ್ಛ ರಾಜನೊಬ್ಬನು ಸೆರೆ ಹಿಡಿದುಕೊಂಡು ಹೋಗಿರುವನೆಂತಲೂ ಅದನ್ನು ಅವಂತೀ ಪುರದೊಡೆಯನಾದ ಸಿಂಹೋದರನು ಕೇಳಿ, ವಾಲಖಿಲ್ಯನಿಗೆ ಗಂಡುಮಕ್ಕಳಿಲ್ಲದುದರಿಂದ, ಗರ್ಭಿಣಿಯಾಗಿರುವ ವಾಲಖಿಲ್ಯನ ರಾಣಿಯು ಗಂಡುಮಗುವನ್ನು ಹೆತ್ತರೆ ಅವನೇ ನೆಲಕ್ಕೊಡೆಯನಾಗಬಹುದೆಂದೂ ಇಲ್ಲವಿದ್ದರೆ ತಾನು ರಾಜ್ಯವನ್ನು ಆಕ್ರಮಿಸಿಕೊಳ್ಳುವೆನೆಂದೂ ಹೇಳಿ ಹೋಗಲು, ರಾಣಿಯು ಹೆಣ್ಣುಮಗುವನ್ನು ಹೆತ್ತದ್ದರಿಂದ ವಾಲಖಿಲ್ಯನ ಮಂತ್ರಿಯು ಉಪಾಯಮಾಡಿ ಆ ಮಗುವನ್ನು ಗಂಡೆಂದು ಪ್ರಸಿದ್ಧಿಪಡಿಸಿ ನಡೆಯಿಸುತ್ತಿರುವನೆಂದೂ, ಆಕೆಯನ್ನು ಹೆಣ್ಣೆಂದು ತಿಳಿದು ಕೈಹಿಡಿದವನೇ ವಾಲಖಿಲ್ಯನನ್ನು ಬಂಧನದಿಂದ ಬಿಡಿಸುವನೆಂದು ಒಬ್ಬ ದಿವ್ಯಜ್ಞಾನಿಯು ಹೇಳಿರುವನೆಂದೂ ತಿಳಿಯಬಂದಿತು. ಲಕ್ಷ್ಮಣನು ಇದನ್ನು ಕೇಳಿ ಆ ಹುಡುಗಿಯನ್ನೂ ಆಕೆಯ ತಾಯಿಯನ್ನೂ ಸಮಾಧಾನಗೊಳಿಸಿ, ವಾಲಖಿಲ್ಯನನ್ನು ಸೆರೆಯಿಂದ ಬಿಡಿಸಿಕೊಂಡು ಬಂದು ಆ ಕನ್ಯೆಯನ್ನು ಮದುವೆಮಾಡಿಕೊಳ್ಳುವೆನೆಂದು ಸೀತಾದೇವಿಗೆ ತಿಳಿಸಿ ಹೊರಟು, ಆ ಪ್ರಬಲರಾದ ಬೇಡರ ಸೈನ್ಯವನ್ನು ನಿರ್ಮೂಲಮಾಡಲು, ಅವರೊಡೆಯನಾದ ರೌದ್ರಭೂತಿಯು ಭಯಗೊಂಡು ಲಕ್ಷ್ಮಣನಿಗೆ ಶರಣಾಗತನಾದನು. ಆಗ ವಾಲಖಿಲ್ಯನನ್ನು ಸೆರೆಯಿಂದ ಬಿಡಿಸಿ ಕರೆತರುವಂತೆ ಅವನಿಗೆ ಹೇಳಲು ಅವನು ಮಹಾಪ್ರಸಾದವೆಂದು ಹೇಳಿ ಕೂಡಲೆ ವಾಲಖಿಲ್ಯನನ್ನು ಕರೆತಂದನು. ವಾಲಖಿಲ್ಯನು ರಾಮಲಕ್ಷ್ಮಣರಿಗೆ ಭಕ್ತಿಯಿಂದೆರಗಿ ಅವರನ್ನು ಸಹಸ್ರಮುಖದಿಂದ ಸ್ತುತಿಸಿ ಅವರೊಡನೆ ತನ್ನ ರಾಜ್ಯವನ್ನು ಸೇರಿ ಶುಭಮುಹೂರ್ತದಲ್ಲಿ ತನ್ನ ಮಗಳನ್ನು ಲಕ್ಷ್ಮಣನಿಗೆ ಬಹಳ ವೈಭವದಿಂದ ಮದುವೆಮಾಡಿಕೊಟ್ಟು ಸುಖವಾಗಿ ರಾಜ್ಯಭಾರಮಾಡುತ್ತಿದ್ದನು.

ಅಲ್ಲಿಂದ ರಾಮಲಕ್ಷ್ಮಣರು ಸೀತೆಯೊಡನೆ ದಕ್ಷಿಣಾಭಿಮುಖವಾಗಿ ಹೊರಟು ವಿಂಧ್ಯಾಚಲದ ಬಳಿಗೆ ಬಂದರು. ಆ ವಿಂಧ್ಯಾಟವಿಯಲ್ಲಿದ್ದ ಕ್ರೀಡಾಪೂತನೆಂಬ ಯಕ್ಷರಾಜನು ಇವರ ಪ್ರಭಾವವನ್ನರಿತು ಇವರಿಗಾಗಿ ಆ ಪ್ರದೇಶದಲ್ಲಿ ಅಳಕಾಪುರಕ್ಕೆ ಸಮನಾದ ಪಟ್ಟಣವೊಂದನ್ನು ಕೂಡಲೆ ನಿರ್ಮಾಣಮಾಡಿ ತನ್ನ ಪರಿವಾರದೊಡನೆ ರಾಮಲಕ್ಷ್ಮಣರನ್ನು ಕಂಡು ಪೂಜಿಸಿ, ಮಳೆಗಾಲವು ಸಮಾಪಿಸಿದುದರಿಂದ ತಾನು ನಿರ್ಮಾಣಮಾಡಿರುವ ಪಟ್ಟಣದಲ್ಲಿ ಮಳೆಗಾಲ ಕಳೆಯುವವರೆಗೂ ವಾಸವಾಗಿರಬೇಕೆಂದು ಪ್ರಾರ್ಥಿಸಿ ರಾಮನಿಗೆ ಆ ರಾಜ್ಯಾಭಿಷೇಕವನ್ನು ಮಾಡಿದನು. ಸೀತಾ ರಾಮ ಲಕ್ಷ್ಮಣರು ಆ ಪಟ್ಟಣದಲ್ಲಿದ್ದು ಮಳೆಗಾಲವನ್ನು ಕಳೆಯಲು, ಶರತ್ಕಾಲವು ಬಂದೊದಗಿತು.

ಆಶ್ವಾಸ ೮—ಚಾರಣಯುಗಳ ದರ್ಶನ

ರಾಮ ಲಕ್ಷ್ಮಣ ಸೀತಾದೇವಿಯರು ಯಕ್ಷನಿರ್ಮಿತವಾದ ಪುರದಿಂದ ಹೊರಡುವಾಗ ಯಕ್ಷನು ಅವರಿಗೆ ಅಮೂಲ್ಯವಾದ ಆಭರಣಗಳನ್ನು ಕೊಟ್ಟು ಓಲಗಿಸಿ, ಎಡರೊದವಿದಾಗ ತನ್ನನ್ನು ನೆನೆಯುವಂತೆ ಹೇಳಿ, ಆ ಪುರವನ್ನದೃಶ್ಯಮಾಡಿ ತನ್ನರಮನೆಗೆ ಹೋದನು. ರಾಮಲಕ್ಷ್ಮಣರು ನಿತ್ಯ ಪ್ರಯಾಣಗಳಿಂದ ವಿಜಯಪುರವೆಂಬ ಸ್ಥಳಕ್ಕೆ ಬಂದು ಅಲ್ಲಿಯ ಉದ್ಯಾನವನದಲ್ಲಿ ಸೀತೆಯೊಡನೆ ವಿಶ್ರಮಿಸಿಕೊಂಡರು. ಆ ಪುರದರಸನ ಮಗಳಾದ ವನಮಾಲೆಯು ಹಿಂದೆ ಲಕ್ಷ್ಮಣನ ವರ್ಣನೆಯನ್ನು ಕೇಳಿ ಆತನನ್ನಲ್ಲದೆ ಮತ್ತಾರನ್ನೂ ವರಿಸೆನೆಂದು ಶಪಥಮಾಡಿ ಆತನು ದೊರೆಯದುದರಿಂದ ಆ ದಿನ ರಾತ್ರಿ ಅಕಸ್ಮಾತ್ತಾಗಿ ಅದೇ ವನಕ್ಕೆ ಬಂದು ಒಂದು ಬಳ್ಳಿಯನ್ನು ಕೊರಳಿಗೆ ಸುತ್ತಿಕೊಂಡು ಪ್ರಾಣವನ್ನು ಬಿಡಬೇಕೆಂದಿದ್ದಳು. ಆ ಹೊತ್ತಿಗೆ ಸರಿಯಾಗಿ ಲಕ್ಷ್ಮಣನು ಅದೇ ಸ್ಥಳಕ್ಕೆ ಬಂದು ಅದನ್ನು ನೋಡಿ ಆ ಬಾಲೆಯನ್ನು ಬಿಡಿಸಿ ಅವಳನ್ನು ಸೀತಾರಾಮರಿದ್ದೆಡೆಗೆ ಕರೆತಂದನು. ಈ ವಾರ್ತೆಯು ಆ ಪುರದ ದೊರೆಯಾದ ಪೃಥ್ವೀಧರನಿಗೆ ತಿಳಿದಕೂಡಲೆ ಆತನು ಬಹಳ ಸಂಭ್ರಮದಿಂದ ಅಲ್ಲಿಗೆ ಬಂದು ಅವರನ್ನು ಬಹಳ ಮರ್ಯಾದೆಯಿಂದ ತನ್ನರಮನೆಗೆ ಕರೆದುಕೊಂಡು ಹೋಗಿ ಸತ್ಕರಿಸಿ ಶುಭ ಮುಹೂರ್ತದಲ್ಲಿ ತನ್ನ ಮಗಳನ್ನು ಲಕ್ಷ್ಮಣನಿಗೆ ಕೊಟ್ಟು ಮದುವೆಮಾಡಿದನು.

ಈ ಸಮಯದಲ್ಲಿ ನಂದ್ಯಾವರ್ತಪುರದೊಡೆಯನಾದ ಅತಿವೀರ್ಯನ ದೂತನೊಬ್ಬನು ಪೃಥ್ವೀಧರನ ಬಳಿಗೆ ಬಂದು, ತಮ್ಮೊಡೆಯನು ಅನೇಕ ಮಂದಿ ರಾಜರೊಡನೆ ಅನೇಕಾಕ್ಷೌಹಿಣೀ ಬಲ ಸಮೇತನಾಗಿ ಭರತನ ಮೇಲೆ ದಂಡೆತ್ತಿ ಹೋಗಬೇಕೆಂದಿರುವನೆಂದೂ ಪೃಥ್ವೀಧರನೂ ತನ್ನ ಸೈನ್ಯದೊಡನೆ ಆತನನ್ನು ಸೇರ

ಬೇಕೆಂಬ ರಾಜಾಜ್ಞೆಯನ್ನು ತಂದಿರುವೆನೆಂದೂ ತಿಳಿಸಿದನು. ಇದನ್ನು ಕೇಳಿ ಲಕ್ಷ್ಮಣನು ಬಹಳ ಕೋಪಗೊಂಡು ಭರತನ ವೃತ್ತಾಂತವೇನೆಂದು ಕೇಳಲು, ಆತನು ಚತುರಂಗಬಲ ಸಮೇತನಾಗಿ ನಂದ್ಯಾವರ್ತಪುರಕ್ಕೆ ಹೊರಟಿರುವನೆಂದೂ ಕನಕನೂ ಸಿಂಹೋದರನೂ ಸೇನಾಸಮೇತರಾಗಿ ಅವನನ್ನು ಸೇರಿರುವರೆಂದೂ ಹೇಳಿದನು. ಇದನ್ನು ಕೇಳಿ ಪೃಥ್ವೀಧರನು ಅತಿವೀರ್ಯನ ದೂತನನ್ನು ಮರ್ಯಾದೆ ಮಾಡಿ ಕಳುಹಿಸಿ ತಾನೂ ರಾಮಲಕ್ಷ್ಮಣರೂ ರಥವನ್ನೇರಿ ನಂದ್ಯಾವರ್ತ ನಗರವನ್ನು ಸೇರಿದರು. ಲಕ್ಷ್ಮಣನು ಅತಿವೀರ್ಯನ ಅರಮನೆಯ ಬಾಗಿಲಿಗೆ ಹೋಗಿ ದೊರೆಗೆ ಹೇಳಿಕಳುಹಿಸಿ ಅವನ ಅನುಮತಿಯ ಮೇರೆಗೆ ಒಳಹೊಕ್ಕು ಅವನಿಗೆ ನಮಸ್ಕರಿಸದೆ ನಿಂತಿರಲು, ದೊರೆಯು ಕೋಪಗೊಂಡು ಭರತನನ್ನು ಹಿಯ್ಯಾಳಿಸಿ ಮಾತನಾಡಿದನು. ಅದಕ್ಕೆ ಲಕ್ಷ್ಮಣನು ಕಿಡಿಕಿಡಿಯಾಗಿ ದೊರೆಯಮೇಲೆ ಬಿದ್ದು ಅವನನ್ನು ಚೆನ್ನಾಗಿ ಹೊಡೆದನು. ಅವನಿಗೆ ಸಹಾಯವಾಗಿ ಬಂದಿದ್ದ ಇತರ ರಾಜರು ಲಕ್ಷ್ಮಣನ ಪರಾಕ್ರಮವನ್ನು ನೋಡಿ ಭೀತರಾದರು. ಲಕ್ಷ್ಮಣನು ಅತಿವೀರ್ಯನನ್ನೆಳೆದುಕೊಂಡು ಬಂದು ಭರತನಿಗೊಪ್ಪಿಸಿದನು. ಅತಿವೀರ್ಯನು ತನ್ನ ರಾಜ್ಯವನ್ನು ರಾಮ ಲಕ್ಷ್ಮಣರಿಗೊಪ್ಪಿಸಿ ಜಿನದೀಕ್ಷೆಗೊಂಡನು. ರಾಮನು ಅತಿವೀರ್ಯನ ಮಗನಾದ ವಿಜಯರಥನಿಗೆ ಆ ರಾಜ್ಯದ ಪಟ್ಟವನ್ನು ಕಟ್ಟಲು ಆತನು ತನ್ನ ತಂಗಿಯನ್ನು ಲಕ್ಷ್ಮಣನಿಗೆ ಕೊಟ್ಟು ಮದುವೆ ಮಾಡಿದನು.

ಅನಂತರ ಅವರು ಅಲ್ಲಿಂದ ಹೊರಟು ಕ್ಷೇಮಾಂಜಲಿಪುರಕ್ಕೆ ಬಂದು ಊರ ಹೊರಗಣ ಉದ್ಯಾನವನದಲ್ಲಿ ರಾಮನೂ ಸೀತೆಯೂ ವಿಶ್ರಮಿಸಿಕೊಂಡಿರುವಲ್ಲಿ ಲಕ್ಷ್ಮಣನು ಪಟ್ಟಣವನ್ನು ನೋಡುವುದಕ್ಕಾಗಿ ರಾಜಬೀದಿಯಲ್ಲಿ ಹೊರಟನು. ಒಂದೆಡೆಯಲ್ಲಿ ಜನರು ಗುಂಪುಕೂಡಿ, ಜಿತಪದ್ಮೆಯ ವಿಷಯವಾಗಿ ಮಾತನಾಡುತ್ತಿದ್ದರು. ಆಕೆಯು ಯಾರೆಂದು ಲಕ್ಷ್ಮಣನು ಅವರನ್ನು ಕೇಳಲು, ಆಕೆಯು ಅಲ್ಲಿಯ ದೊರೆಯಾದ ಶತ್ರುಂದಮನ ಮಗಳೆಂದೂ ಆಕೆಯು ಹುಟ್ಟಿದಾಗ ಶಸ್ತ್ರಶಾಲೆಯಲ್ಲಿ ಒಂದು ಶಕ್ತಿ ಹುಟ್ಟಿತೆಂದೂ, ಆಗ ಆಕಾಶವಾಣಿಯು "ಶತ್ರುಂದಮನು ಈ ಶಕ್ತಿಯಿಂದಿಟ್ಟರೆ ಸಂಚಲಿಸದೆ ಅದನ್ನು ನಿರ್ಭಯದಿಂದ ಹಿಡಿದ ಮಹಾಸತ್ವನು ಈ ಕನ್ಯೆಗೂ ದಕ್ಷಿಣ ಭರತ ದೇಶಕ್ಕೂ ರಮಣನಾಗುವನು" ಎಂದು ನುಡಿಯಿತೆಂದೂ, ದೊರೆಯು ಈರೀತಿಯಿಂದಲ್ಲದೆ ಮಗಳಿಗೆ ಮದುವೆಮಾಡೆನೆಂದು ನಿಶ್ಚಯಿಸಲು ಅನೇಕ ರಾಜಕುಮಾರರು ಬಂದು ಶಕ್ತಿಪ್ರಹಾರದಿಂದ ಯಮಪುರವನ್ನು ಸೇರಿದರಿಂದೂ ಒಬ್ಬ ಮುದುಕನು ಹೇಳಿದನು. ಲಕ್ಷ್ಮಣನು ಇದನ್ನು ಕೇಳಿ ಅರಮನೆಯ ಬಳಿಗೆ ಬಂದು ಕನ್ಯಾರ್ಥಿಯಾಗಿ ರಾಜಕುಮಾರನೊಬ್ಬನು ಬಂದಿರುವನೆಂದು ಹೇಳಿಕಳುಹಿಸಿ ಅಪ್ಪಣೆಪಡೆದು ರಾಜಸಭೆಯನ್ನು ಹೊಕ್ಕು, ಕನ್ಯಾಮಣಿಗೆ ಮನಸೋತು ರಾಜನಿಗೆರಗದೆ ಮಣಿಪೀಠದಮೇಲೆ ಕುಳಿತುಕೊಂಡನು. ದೊರೆಯು

ಈತನ ಸುಂದರಾಕಾರವನ್ನು ನೋಡಿ, ಶಕ್ತಿಯಿಂದಿಡುವುದಕ್ಕೆ ಇಷ್ಟವಿಲ್ಲದಿರಲು, ಲಕ್ಷ್ಮಣನು ಆ ಶಕ್ತಿಯ ಬಲವನ್ನು ನೋಡುವೆನೆಂದು ಹೇಳಿ ಅದನ್ನು ತರಿಸಿದನು. ಆಗ ಅದನ್ನು ಲಕ್ಷ್ಮಣನಮೇಲೆ ಪ್ರಯೋಗಿಸಲು, ಕಡೆಗಾಲದ ಸಿಡಿಲಂತೆ ಕಿಡಿಯನ್ನು ಕಾರುತ್ತ ಬರುವ ಆ ಶಕ್ತಿಯನ್ನು ಲಕ್ಷ್ಮಣನು ತನ್ನ ಎಡಗೈಯಿಂದ ಬಲಗುಂದಿಸಿದನು. ಅದನ್ನು ನೋಡಿ ಶತ್ರುಂದಮನು ಭಯಪಟ್ಟು ಲಕ್ಷ್ಮಣನಿಗೆ ನಮಸ್ಕಾರ ಮಾಡಿ, ಕ್ಷಮಿಸಬೇಕೆಂದು ಬೇಡಿಕೊಂಡು, ಸೀತಾರಾಮರಿದ್ದಲ್ಲಿಗೆ ತನ್ನ ಪರಿವಾರದೊಡನೆ ಹೋಗಿ ಅವರನ್ನು ಪೂಜಿಸಿ ತನ್ನರಮನೆಗೆ ಕರೆದುಕೊಂಡು ಬಂದು ಶುಭ ಮುಹೂರ್ತದಲ್ಲಿ ಲಕ್ಷ್ಮಣನಿಗೆ ಜಿತಪದ್ಮೆಯನ್ನು ಕೊಟ್ಟು ವೈಭವದಿಂದ ಮದುವೆ ಮಾಡಿದನು.

ಅಲ್ಲಿ ಕೆಲವು ದಿನಗಳಿದ್ದು ಮೂವರೂ ಪೂರ್ವಾಭಿಮುಖವಾಗಿ ಪ್ರಯಾಣ ಹೊರಟು ವಂಶಸ್ಥಲವೆಂಬ ಪಟ್ಟಣವನ್ನು ಸೇರಿದರು. ಆ ಸಮಾಪದಲ್ಲಿದ್ದ ಬೆಟ್ಟದ ಕಡೆಯಿಂದ ಸಂಜೆಯ ಹೊತ್ತಿನಲ್ಲಿ ದಿಸೆಗೆಟ್ಟೊಡುವ ಪುರಜನರನ್ನು ನೋಡಿ ರಘು ವೀರನು ಇದೇನು ಕಾರಣವೆಂದು ಕೇಳಲು, ಮೂರು ದಿನಗಳಿಂದ ರಾತ್ರಿಯ ವೇಳೆ ಆ ಬೆಟ್ಟದ ಶಿಖರದಲ್ಲಿ ಅತಿ ಭಯಂಕರವಾದ ಸಿಡಿಲ ದನಿಯಾಗುತ್ತಿರುವುದೆಂದೂ ಇದಕ್ಕಂಜಿ ಪಟ್ಟಣದಲ್ಲಿರುವವರೆಲ್ಲರೂ ಓಡಿಹೋಗುತ್ತಿರುವರೆಂದೂ ಹೇಳಿದರು. ಈ ಶಬ್ದವನ್ನು ಮಾಡುವರು ಯಾರಿರಬಹುದೆಂದು ತಿಳಿಯುವುದಕ್ಕಾಗಿ ಇವರು ಬೆಟ್ಟವನ್ನು ಹತ್ತಿದರು. ಅಲ್ಲಿ ನಿಶ್ಚಲನಾಗಿ ತಪಸ್ಸುಮಾಡುತ್ತಿದ್ದ ಋಷಿಯೊಬ್ಬನನ್ನು ಕಂಡು ಅವನ ಬಳಿಗೆ ಬರಲು, ಅವನನ್ನು ಸುತ್ತಿ ಮುತ್ತಿದ್ದ ಹಾವುಗಳೂ ಚೇಳುಗಳೂ ರಾಮಲಕ್ಷ್ಮಣರ ಪುಣ್ಯಪ್ರಭಾವದಿಂದ ಮಾಯವಾದುವು. ರಾತ್ರಿಯಾಗುತ್ತಲೆ ಬಹಳ ಭಯಂಕರವಾದ ಭೂತ ಭೇತಾಳಗಳೂ ಸಿಂಹ ಶರಭ ಶಾರ್ದೂಲಗಳೂ ಮಿಂಚು ಗುಡುಗಿನೊಡನೆ ಸುರಿಯುವ ಬಿಸುನೆತ್ತರ ಮಳೆಯೂ ಕಾಣಿಸಿಕೊಂಡುವು. ಆಗ ರಾಮಲಕ್ಷ್ಮಣರು ಆ ಮುನಿಗೆ ಈ ರೀತಿಯಾಗಿ ತೊಂದರೆ ಕೊಡುತ್ತಿರುವವನ ಬಲವನ್ನು ಮುರಿಯಬೇಕೆಂದು ತಮ್ಮ ಧನುಸ್ಸುಗಳನ್ನೇರಿಸಿ ಟಂಕಾರವನ್ನು ಮಾಡಲು-ಅಗ್ನಿಪ್ರಭನೆಂಬ ಆ ದೇವನು ಭಯಪಟ್ಟು, ಭಗ್ನಾಶನಾಗಿ ಇವರು ಎಂಟನೆಯ ಬಲದೇವ ವಾಸುದೇವರೆಂದು ಜ್ಞಾನದೃಷ್ಟಿಯಿಂದ ತಿಳಿದು ತನ್ನ ಜ್ಯೋತಿರ್ಲೋಕಕ್ಕೆ ಓಡಿಹೋದನು. ಈ ತೊಂದರೆಗಳಾವುವನ್ನೂ ಲಕ್ಷ್ಯ ಮಾಡದೆ ಬೆಟ್ಟದಂತೆ ನಿಶ್ಚಲನಾಗಿದ್ದ ದೇಶಭೂಷಣ ಮುನಿಯನ್ನು ಕಂಡು ರಾಘವನು ಕೈಮುಗಿದುಕೊಂಡು ಈ ತೊಂದರೆಗಳಿಗೆ ಕಾರಣವೇನೆಂದು ಕೇಳಲು, ಆ ಮುನಿಯು ಜನ್ಮಾಂತರದ ಕಾರಣಗಳನ್ನು ವಿಶದವಾಗಿ ತಿಳಿಸಿ ತನ್ನ ಪೂರ್ವಜನ್ಮದ ಶತ್ರುವಾದ ಅಗ್ನಿಪ್ರಭದೇವನು ತನ್ನ ತಪವನ್ನು ಕೆಡಿಸುವ ಪ್ರಯತ್ನದಲ್ಲಿದ್ದನೆಂದೂ ಪುಣ್ಯಪುರುಷನಾದ ರಾಮನು ಬಂದುದರಿಂದ ಆತನಿಗೆ ಹೆದರಿ ಓಡಿಹೋದನೆಂದೂ ಹೇಳಲು ರಾಮನು ಸಂತೋಷಪಟ್ಟನು. ಮುನಿಯು ರಾಮನ ಪ್ರತಿಜ್ಞಾಪರಿ

ಪಾಲನೆಗೂ ಶಕ್ತಿಸಂಪತ್ತಿಗೂ ಮೆಚ್ಚಿ, ಆತನು ನೆನೆದಾಗ ಬರುವೆನೆಂದು ವರವನ್ನು ಕೊಟ್ಟು, ತನ್ನ ಲೋಕಕ್ಕೆ ತೆರಳಿದನು. ಇದನ್ನೆಲ್ಲ ತಿಳಿದು ಆ ದೇಶದ ರಾಜನಾದ ಸುಪ್ರಭನು ಅಲ್ಲಿಗೆ ಬಂದು ರಾಮಲಕ್ಷ್ಮಣರನ್ನು ಪೂಜಿಸಿ ಆ ಬೆಟ್ಟದಮೇಲೆ ಅವರಿಗಾಗಿ ಒಂದು ಪಟ್ಟಣವನ್ನು ಕಟ್ಟಿಸಿ ಅಲ್ಲಿ ಅವರನ್ನು ಸೇವಿಸುತ್ತಿದ್ದನು. ಈ ಕಾರಣದಿಂದ ಆ ಬೆಟ್ಟಕ್ಕೆ ರಾಮಗಿರಿಯೆಂಬ ಹೆಸರಾಯ್ತು.

ಅಲ್ಲಿಂದ ಅವರು ದಕ್ಷಿಣಮಾರ್ಗವಾಗಿ ಹೊರಟು ದೊಡ್ಡ ಕಾಡನ್ನು ಹೊಕ್ಕು ಕರ್ಣರವೆಯೆಂಬ ತೊರೆಯ ದಡದಲ್ಲಿ ವಿಶ್ರಮಿಸಿಕೊಂಡಿರಲು ಅಲ್ಲಿಗೆ ಸುಗುಪ್ತಿ ಗುಪ್ತರೆಂಬ ಗಗನಚಾರಣರಿಬ್ಬರು ಆಕಾಶದಿಂದಿಳಿದು ಬಂದರು; ರಾಮನು ಅವರನ್ನು ಕಂಡು ನಮಸ್ಕರಿಸಿ ಭಕ್ತಿಯಿಂದ ಪೂಜಿಸಿದನು.

ಆಶ್ವಾಸ ೯—ಸೀತಾಪಹರಣ

ರಾಮಲಕ್ಷ್ಮಣರು ಚಾರಣರಿಗೆ ಆತಿಥಿಸತ್ಕಾರವನ್ನು ಮಾಡಲು ಅವರು "ಅಕ್ಷಯದಾನಮಸ್ತು" ಎಂದು ಹರಸಿದರು. ಆಗ ಹೂಮಳೆ ಕರೆಯಿತು, ಸುರಭೇರೀಧ್ವನಿಯಾಯಿತು, ದೇವತೆಗಳ ಜಯಘೋಷವು ಮೊಳಗಿತು. ರಾಮಾದಿಗಳು ಚಾರಣರ ತಪಸ್ಸಾಮರ್ಥ್ಯಕ್ಕೆ ಮೆಚ್ಚಿ ಪುಲಕಾಂಕಿತರಾಗಿ ಧರ್ಮಕಥಾಪ್ರಸಂಗದೊಳಿದ್ದರು. ಆಗ ಅಲ್ಲಿ ಸಾಲವೃಕ್ಷದ ಮೇಲಿದ್ದ ಒಂದು ಹದ್ದು ಮುನಿದರ್ಶನಮಾತ್ರದಿಂದ ತನ್ನ ಹಿಂದಣ ಜನ್ಮದ ಅರಿವನ್ನು ಪಡೆದು ತನ್ನ ಪಾಪಸಂಚಯವನ್ನು ಕಳೆದುಕೊಳ್ಳುವೆನೆಂದಾಲೋಚಿಸಿ ಮುನಿಗಳ ಪಾದೋದಕದಲ್ಲಿ ಹೊರಳಿ ಶಾಂತಚಿತ್ತತೆಯಿಂದಿದ್ದುದನ್ನು ಕಂಡು, ರಾಮನು ಸೀತೆಗೂ ಲಕ್ಷ್ಮಣನಿಗೂ ಮುನಿಗಳ ತಪಸ್ಸಮೃದ್ಧಿಯನ್ನು ವರ್ಣಿಸಿ ಹೇಳಿ, ಮುನಿಗಳಿಗೆ ಕೈಮುಗಿದುಕೊಂಡು ಹಿತಾಹಿತ ವಿವೇಕವಿಲ್ಲದ ಪಕ್ಷಿಯು ಈ ರೀತಿಯಾಗಿ ಉಪಶಮ ಹೊಂದಿದುದಕ್ಕೆ ಕಾರಣವೇನೆನ್ನಲು, ಚಾರಣ ಋಷಿಯರು ಅದರ ಜನ್ಮಾಂತರ ವೃತ್ತಾಂತವನ್ನು ತಿಳಿಸಿದರು. ಅದನ್ನು ಕೇಳಿ ಆ ಹದ್ದು ಬಹಳ ಖೇದಗೊಳ್ಳಲು, ತಮ್ಮ ದರುಶನವಾದುದರಿಂದ ಅದಕ್ಕೆ ಕರ್ಮಬಂಧವು ಶಿಥಿಲವಾದುದೆಂದರಿಪಿ ಅದಕ್ಕೆ ಅಣುವ್ರತವನ್ನು ಕೊಟ್ಟು ರಾಮಲಕ್ಷ್ಮಣರನ್ನೂ ಸೀತೆಯನ್ನೂ ಹರಸಿ ಗಗನಚಾರಣರು ಹೊರಟುಹೋದರು. ಆಗ ಸೀತೆಯು ಆ ಹದ್ದನ್ನು ತನ್ನ ಕಂದನೆಂದು ಹೇಳಿ ಅದಕ್ಕೆ ತನ್ನ ಒಡವೆಗಳನ್ನಿಡಲು ಅವುಗಳ ಕಾಂತಿಲೇಖೆಯು ಜಡೆಗೊಂಡು ಹರಿದು, ಕವಲಾಗಿ ಕಣ್ಣುಗಳನ್ನರಳಿಸಿತು. ಈ ಕಾರಣದಿಂದ ರಘುರಾಮನು ಅದಕ್ಕೆ ಜಟಾಯುವೆಂಬ ಹೆಸರನ್ನಿತ್ತನು.

ಮರುದಿವಸ ಅವರು ದಂಡಕಾರಣ್ಯದಲ್ಲಿ ದಕ್ಷಿಣಾಭಿಮುಖವಾಗಿ ನಡೆಯುತ್ತ ಕ್ರೌಂಚನದಿಯನ್ನು ದಾಟಿ ದಡದಲ್ಲಿಯ ಒಂದು ಲತಾಗೃಹದಲ್ಲಿ ವಿಶ್ರಮಿಸಿ ಕೊಂಡರು. ಆ ನದಿಯ ಸಮೀಪವಲ್ಲಿರುವ ದಂಡಕ ಗಿರಿಯ ಗುಹೆಯಲ್ಲಿ ಒಂದು ಯೋಜನದೆಂಟನೆಯ ಭಾಗವು ಖಾತವಾಗಿರುವುದು. ಅಲ್ಲಿ ಪಾತಾಳಲಂಕೆಯೆಂಬ ಪುರ ವಿರುವುದು. ಅದನ್ನು ಖರನೆಂಬುವನು ಆಳುತ್ತಿರುವನು. ಅವನ ಹೆಂಡತಿಯೂ ರಾವಣನ ತಂಗಿಯೂ ಆದ ಚಂದ್ರನಖಿಯೆಂಬವಳಿಗೆ ಶಂಭುಕ ಸುಂದರರೆಂಬ ಇಬ್ಬರು ಮಕ್ಕಳಿರುವರು. ಅವರಲ್ಲಿ ಹಿರಿಯವನಾದ ಶಂಭುಕನು ಹನ್ನೆರಡು ವರುಷ ಗಳಿಂದ ಸೂರ್ಯಹಾಸಾಸಿಯನ್ನು ಪಡೆಯುವುದಕ್ಕಾಗಿ ತಪಸ್ಸುಮಾಡುತ್ತಿರಲು ಅವನಿಗೆ ಆ ಕತ್ತಿಯನ್ನು ಕೊಟ್ಟು ಅನುಗ್ರಹಿಸುವುದಕ್ಕೆ ಬಂದ ಯಕ್ಷಾಮರ ಸಹಸ್ರವು ಅವನು ತಪಸ್ಸುಮಾಡುತ್ತಿದ್ದ ಬಿದಿರ ಮೆಳೆಯಲ್ಲಿ ಆ ಕತ್ತಿಯನ್ನಿಟ್ಟು ಸುರಮಂದಾರ ಪುಷ್ಪ ಗಳಿಂದ ಅರ್ಚಿಸುತ್ತಿದ್ದಿತು. ಆಗ ಲಕ್ಷ್ಮಣನು ವನವಿಲಾಸವನ್ನು ನೋಡುವ ಕುತೂಹಲವುಳ್ಳವನಾಗಿ ಅಲ್ಲಿಗೆ ಬಂದು ಬಿದಿರಿನ ಮೆಳೆಯಲ್ಲಿದ್ದ ಅಮೋಘವಾದ ಕತ್ತಿಯನ್ನು ನೋಡಿ ಕೈಗೆ ತೆಗೆದುಕೊಂಡು ಅದರ ತೀಕ್ಷ್ಣತೆಯನ್ನು ಪರೀಕ್ಷಿಸುವ ಉದ್ದೇಶದಿಂದ ಅದನ್ನು ಬೀಸಿದನು. ಆ ಹೊಡೆತಕ್ಕೆ ಬಿದಿರಿನ ವನವು ನೆಯ್ದಿಲ ದಂಟಿನ ಪೊದೆಯನ್ನು ಕಡಿದಂತೆ ಕತ್ತರಿಸಿಹೋಯಿತು. ಅದರೊಡನೆ ಒಂದು ತಲೆಯೂ ಮುಂಡದಿಂದ ಬೇರೆಯಾಗಿ ಹಾರಿತು. ಇದನ್ನು ಕಂಡು ಲಕ್ಷ್ಮಣನು ತಪಸ್ಸುಮಾಡುತ್ತಿದ್ದ ನಿರಪರಾಧಿಯನ್ನು ಕೊಂದೆನೆಂದು ವ್ಯಸನಪಡುತ್ತಿರುವಲ್ಲಿ ಆ ಕತ್ತಿಯ ಕಾವಲುಗಾರರಾದ ಯಕ್ಷಾಮರರು ತಮಗಿನ್ನು ಲಕ್ಷ್ಮಣನೇ ಪತಿ ಯೆಂದು ಹೇಳಿ ನಮಸ್ಕರಿಸಿ ಅವನನ್ನು ಪೂಜಿಸಿ ಹೊರಟುಹೋದರು. ಲಕ್ಷ್ಮಣನು ಅಣ್ಣನ ಬಳಿಗೆ ಬಂದು ಖಡ್ಗದ ವೃತ್ತಾಂತವನ್ನು ಹೇಳಿದನು.

ಇತ್ತ, ಚಂದ್ರನಖಿಯು ತನ್ನ ಮಗನು ಆ ದಿನ ಸೂರ್ಯಹಾಸಾಸಿಯನ್ನು ಪಡೆಯುವನೆಂಬ ಉತ್ಸಾಹದೊಡನೆ ಆಕಾಶದಿಂದ ಭೂಮಿಗಿಳಿದಳು. ಆಗ ತಲೆ ಯೊಂದೆಡೆಯಲ್ಲಿಯೂ ಮುಂಡವು ಮತ್ತೊಂದೆಡೆಯಲ್ಲಿಯೂ ಬಿದ್ದಿರುವ ತನ್ನ ಮಗನ ದೇಹವನ್ನು ನೋಡಿ ಬಹಳ ವ್ಯಸನದಿಂದ ಎದೆಯನ್ನು ಗುದ್ದಿಕೊಂಡು ಅಳತೊಡಗಿ ಮೂರ್ಛೆಹೋದಳು. ಸ್ವಲ್ಪ ಹೊತ್ತಿಗೆ ಎಚ್ಚತ್ತು ತನ್ನ ಮಗನನ್ನು ಕೊಂದವನನ್ನು ನಾಶಮಾಡುವೆನೆಂದು ಶೋಕದೊಡನೆ ಕೂಡಿದ ಕೋಪವನ್ನು ತಾಳಿ ಅಲ್ಲಿಂದ ಹೊರಟು ಅವಳು ರಾಮಲಕ್ಷ್ಮಣರಿರುವ ಸ್ಥಳಕ್ಕೆ ಬಂದು ಲಕ್ಷ್ಮಣನ ಸೊಬಗನ್ನು ನೋಡಿ, ತನ್ನ ಶೋಕವನ್ನು ಮರೆತು, ಅವನನ್ನು ಮೋಹಿಸಿದಳು. ಕೂಡಲೆ ರೂಪ ಪರಾವರ್ತನ ವಿದ್ಯೆಯಿಂದ ಅತಿ ಸುಂದರವಾದ ದೇವಕನ್ಯಕೆಯ ರೂಪವನ್ನು ಧರಿಸಿ ಕಣ್ಣೀರು ಸುರಿಸುತ್ತ ಅವಳು ಸೀತೆಯ ಬಳಿಗೆ ಬರಲು ಆಕೆಯು ಅವಳನ್ನು ತನ್ನ ಬಳಿಯಲ್ಲಿ ಕುಳ್ಳಿರಿಸಿಕೊಂಡು ಅವಳ ಕಣ್ಣೀರನ್ನೊರಸಿದಳು.

ಆಗ ರಾಘವನು ಅವಳನ್ನು ಕಾರುಣ್ಯದೊಡನೆ ನೋಡಿ ಅಂತಹ ಭಯಂಕರವಾದ ದಟ್ಟಡವಿಗೆ ನಿರ್ಭಯವಾಗಿ ಒಬ್ಬಳೇ ಹೇಗೆ ಬಂದೆ ಎಂದು ಕೇಳಲು ಆ ಮೋಸಗಾರ್ತಿಯು "ನನ್ನ ತಾಯಿತಂದೆಗಳು ಮೊದಲೇ ಸತ್ತುಹೋದುದರಿಂದಲೂ ನನಗೆ ಯಾರೂ ಸಹಾಯವಿಲ್ಲದೆ ಬದುಕುವುದು ಕಷ್ಟವಾದುದರಿಂದಲೂ ಅಡವಿಯನ್ನಾದರೂ ಹೊಕ್ಕು ಪ್ರಾಣವನ್ನು ಬಿಡಬೇಕೆಂದು ಬರುತ್ತಿರುವಲ್ಲಿ ನನ್ನ ಪುಣ್ಯೋದಯದಿಂದ ನಿಮ್ಮನ್ನು ಕಂಡೆನು; ನಿಮ್ಮಲ್ಲೊಬ್ಬರು ನನ್ನನ್ನು ಗಂಧರ್ವವಿವಾಹ ವಿಧಿಯಿಂದ ಮದುವೆಮಾಡಿಕೊಳ್ಳಬೇಕು" ಎಂದು ಕೇಳಿಕೊಳ್ಳಲು, ಸೀತೆಯು ರಾಮಲಕ್ಷ್ಮಣರ ಮುಖವನ್ನು ನೋಡಿ ಮುಗುಳ್ನಗೆ ನಕ್ಕಳು.

ಇದನ್ನು ನೋಡಿ ಚಂದ್ರನಖಿಯು ನಾಚಿಕೆಗೊಂಡು ಮಗನ ಸಾವಿನಿಂದುಂಟಾದ ವ್ಯಥೆಯನ್ನೂ ಬಗೆಯದೆ ಪರಪುರುಷನೊಡನೆ ಸೇರುವ ಅಭಿಲಾಷೆಪಟ್ಟುದು ನಿಷ್ಫಲವಾದುದರಿಂದ ಉದ್ವೇಗವು ಇಮ್ಮಡಿಸಿ, ಅವರಿಗೆ ತಕ್ಕದ್ದನ್ನು ಮಾಡುವೆನೆಂಬ ಆಗ್ರಹದಿಂದ ನಡೆದು ಅವರು ಕಣ್ಮರೆಯಾದೊಡನೆಯೇ ಆಕಾಶಕ್ಕೆ ನೆಗೆದು ತನ್ನರಮನೆಯನ್ನು ಹೊಕ್ಕು, ತಲೆಯನ್ನು ಬಿರಿಯಹಾಕಿಕೊಂಡು ಎದೆಯನ್ನು ಹೊಡೆದುಕೊಳ್ಳುತ್ತ ಗಟ್ಟಿಯಾಗಿ ಅಳುತ್ತಿರಲು, ಖರನು ಇದೇಕೆಂದು ಕೇಳಿದನು. ಮಗನಿಗುಂಟಾದ ವಿಪತ್ತನ್ನು ಅವನೊಡನೆ ಹೇಳಿ, ಕವಚವನ್ನು ತೊಟ್ಟಿರುವ ಇಬ್ಬರು ಮನುಷ್ಯರು ಅಂಬುಗಳನ್ನೂ ಬಿಲ್ಲುಗಳನ್ನೂ ಹಿಡಿದು ಬಲಶಾಲಿಗಳೆಂಬ ಗರ್ವದಿಂದ ಮಗನನ್ನು ಕೊಂದು ತನ್ನನ್ನು ಅವಮಾನ ಮಾಡಿದರೆಂದೂ ಖರನಿಗೆ ಸತಿಯಾಗಿಯೂ ತ್ರಿಭುವನ ವಿಜಯಿಯಾದ ರಾವಣನೊಡನೆ ಹುಟ್ಟಿಯೂ ತನಗೆ ಇಂತಹ ದುಃಸ್ಥಿತಿಯು ಬಂದಿತಲ್ಲಾ ಎಂದೂ ರೋದನ ಮಾಡಿದಳು. ಅದನ್ನು ಕೇಳಿ ದೈತ್ಯನು ರೋಷಾವೇಶವುಳ್ಳವನಾಗಿ ಅವರನ್ನು ಕೂಡಲೆ ಕೊಂದುಬರುವೆನೆಂದು ಹೇಳಲು ಅವನ ಮಂತ್ರಿಗಳು ಅವನನ್ನು ಸಮಾಧಾನಮಾಡಿ ರಾಮಲಕ್ಷ್ಮಣರು ಸಾಮಾನ್ಯ ಪುರುಷರಲ್ಲವೆಂದು ತಿಳಿಸಿದರು. ಈ ವಿಷಯವನ್ನು ದಶಕಂಧರನಿಗೆ ಬಿನ್ನವಿಸುವಂತೆ ದೂತರನ್ನಟ್ಟಿ ಅಸಂಖ್ಯಾತ ಖಚರಸೇನೆಯೊಡನೆ ಖರದೂಷಣರು ರಾಮಲಕ್ಷ್ಮಣರ ಬಳಿಗೆ ಬಂದರು. ಅದನ್ನು ನೋಡಿ ರಾಮನು ತನ್ನ ದಿವ್ಯಚಾಪಕ್ಕೆ ಕೈ ಹಾಕಲು ಲಕ್ಷ್ಮಣನು ಅಂತಹ ಸೈನ್ಯಕ್ಕೆ ತಾನೇ ಸಾಕೆಂದೂ ಆ ಸೈನ್ಯವನ್ನು ನಿಮಿಷದಲ್ಲಿ ಧ್ವಂಸ ಮಾಡಿಬರುವೆನೆಂದೂ ನುಡಿದು, ಸೀತಾದೇವಿಯನ್ನು ಅಂತಹ ಅಪಾಯದೆಡೆಯಲ್ಲಿ ಅಗಲದೆ ಇರಬೇಕೆಂದು ಬಿನ್ನವಿಸಿ, ಯುದ್ಧವು ಸಹಿಸಲಸಾಧ್ಯವಾದಲ್ಲಿ ತಾನು ಸಿಂಹನಾದ ಮಾಡುವೆನೆಂದೂ ಆಗ ತನ್ನ ಸಹಾಯಕ್ಕೆ ಬರಬೇಕೆಂದೂ ಹೇಳಿ ಅಪ್ಪಣೆಪಡೆದು ಹೊರಟನು. ಹೀಗೆ ಯುದ್ಧಸನ್ನದ್ಧನಾಗಿ ಹೊರಟ ಕೃಷ್ಣನು ಖರನ ಸೈನ್ಯವನ್ನು ಸೂರ್ಯಹಾಸಾಸಿಯಿಂದ ತರಿದೊಟ್ಟಿ ರೌದ್ರಾಕಾರವನ್ನು ತಾಳಿರಲು ಮಿಕ್ಕ ಬಲವು ದೆಸೆದೆಟ್ಟು ಓಡಿಹೋಯಿತು.

ಇತ್ತ, ರಾವಣನು ಖರದೂಷಣರು ಹೇಳಿಕಳುಹಿಸಿದ ಸುದ್ದಿಯನ್ನು ಕೇಳಿ, ಶಂಭುಕನ ಸಾವಿಗೆ ವ್ಯಸನಪಟ್ಟು ಕೆಡಿಕೆಡಿಯಾಗಿ, ಶಂಭುಕನನ್ನು ಕೊಂದ ವನನ್ನು ಕೂಡಲೆ ಸಂಹರಿಸುವೆನೆಂದು ವಿಮಾನಾರೂಢನಾಗಿ ದಂಡಕಾರಣ್ಯಕ್ಕೆ ಬಂದು ಬಲಭದ್ರನ ಪಕ್ಕದಲ್ಲಿದ್ದ ಸೀತಾದೇವಿಯನ್ನು ಕಂಡು ಮೋಹಪರವಶನಾಗಿ, ತನ್ನ ಯಶಸ್ಸು ಮಲಿನವಾಗುವುದೆಂಬ ಲಕ್ಷ್ಯವೂ ಇಲ್ಲದೆ, ಸೀತೆಯನ್ನು ಮೋಸದಿಂದ ಕೊಂಡುಹೋಗಬೇಕೆಂದಾಲೋಚಿಸಿ ತನ್ನ ಅವಲೋಕಿನೀ ವಿದ್ಯೆಯನ್ನು ಸ್ಮರಿಸಲು, ದೇವತೆಯು ಕೂಡಲೆ ಪ್ರತ್ಯಕ್ಷನಾಗಿ ಅಪ್ಪಣೆಯೇನೆಂದು ಕೇಳಿದಳು. ಅದಕ್ಕೆ ಅವರಾರೆಂದು ಕೇಳಿ ಆವರ ವಿಷಯವನ್ನರಿತು ಸೀತೆಯನ್ನು ರಾಮನಿಂದ ಅಗ ಲಿಸುವ ಉಪಾಯವೇನೆಂದು ಕೇಳಲು, ದೇವತೆಯು ಭಯಪಟ್ಟು ಕಾರಣಪುರುಷ ರಾದ ಈ ಮಹಾತ್ಮರಲ್ಲಿ ವಿರೋಧವಮಾಡುವುದು ಸರಿಯಲ್ಲವೆಂದೂ ಸಕಲ ಲೋಕದ ಅಧರ್ಮನಿರತರನ್ನು ದಂಡಿಸುವ ತಾನು ಇಂತಹ ಕೆಲಸಕ್ಕೆ ನುಗ್ಗುವುದು ತಕ್ಕುದ್ದಲ್ಲವೆಂದೂ ಹದಿನಾಲ್ಕು ಸಾವಿರ ಮುಖ್ಯ ನಾಯಕರೊಡನೆಯೂ ಅಸಂಖ್ಯಾತ ಬಲದಿಂದಲೂ ಬಂದಿರುವ ಖರದೂಷಣರನ್ನು ಲಕ್ಷ್ಯಮಾಡದೆ ಲಕ್ಷ್ಮಣನು ಕಾದು ತ್ತಿರುವಲ್ಲಿ ರಾಮನು ವಿನೋದದಿಂದಿರುವನೆಂದೂ ಅಂಥವರಲ್ಲಿ ದ್ವೇಷವಮಾಡುವುದು ತಪ್ಪೆಂದೂ ನುಡಿಯಲು ರಾವಣನು ಬಹಳ ಕೋಪಗೊಂಡು "ನಾನೊಂದನ್ನು ಕೇಳಿದರೆ ನೀನೊಂದನ್ನು ಏಕೆ ಹೇಳುವೆ? ಹುಚ್ಚಳೆ! ಮನುಷ್ಯಮಾತ್ರದವರು ಲಂಕಾಪತಿಯ ಎದುರಿಗೆ ನಿಲ್ಲುವರೆ?" ಎಂದು ಗರ್ಜಿಸಿ ಹೇಳಿದನು. ಅದಕ್ಕೆ ದೇವತೆಯು ಸಿಟ್ಟಾಗಿ, ಸೀತೆಯನ್ನು ಕದ್ದುಕೊಂಡುಹೋದರೆ ದಶರಥನ ಮಕ್ಕ ಳಿಂದ ಇವನಿಗೆ ಸಾವು ಉಂಟಾಗಬೇಕೆಂದು ಪುರಾಕೃತ ಕರ್ಮವಿರುವುದನ್ನು ತಪ್ಪಿಸುವುದು ಸಾಧ್ಯವಲ್ಲವೆಂದು ತಿಳಿದು, ಶತ್ರುಬಲವನ್ನು ಗೆಲ್ಲಲು ಕಷ್ಟವಾದರೆ ಸಿಂಹನಾದವನ್ನು ಮಾಡುವೆನೆಂದೂ, ಆಗ ತನಗೆ ಬೆಂಬಲವಾಗಿ ಬರುವುದೆಂದೂ ವಾಸುದೇವನು ಬಲದೇವನಿಗೆ ಹೇಳಿಬಂದಿರುವ ವಿಷಯವನ್ನು ದೇವತೆಯು ರಾವಣ ನಿಗೆ ತಿಳಿಸಿದಳು. ಆಗ, ರಣಭೂಮಿಗೆ ಹೋಗಿ ಲಕ್ಷ್ಮಣನಿಗೆ ತಿಳಿಯದಂತೆ ಸಿಂಹ ನಾದವನ್ನು ಮಾಡೆಂದು ರಾವಣನು ದೇವತೆಗೆ ನಿಯಮಿಸಲು, ದೇವತೆಯು ಹಾಗೆಯೇ ಮಾಡಿದಳು. ರಾಮನು ಅದನ್ನು ಕೇಳಿ ಲಕ್ಷ್ಮಣನಿಗೆ ಯುದ್ಧವು ವಿಷಮವಾಗಿರಬಹುದೇ ಎಂಬ ವಿಸ್ಮಯದಿಂದ ಜಾನಕಿಗೆ ಜಟಾಯುವನ್ನು ಕಾವ ಲಿಟ್ಟು ರಣರಂಗಕ್ಕೆ ತೆರಳಿದನು.

ಇತ್ತ, ರಾವಣನು ಕೂಡಲೆ ಅಂತರಿಕ್ಷದಿಂದ ಸೀತೆಯಿರುವ ಸ್ಥಳಕ್ಕಿಳಿದು ಆಕೆಯನ್ನು ಹಿಡಿದು ತನ್ನ ವಿಮಾನದಲ್ಲಿಟ್ಟುಕೊಂಡು ಹೊರಡುತ್ತಿರುವಲ್ಲಿ ಕಾವ ಲಿದ್ದ ಜಟಾಯುವು ಔದಾತ್ರಕಾರನಾಗಿ ರಾವಣನಮೇಲೆ ಯುದ್ಧಕ್ಕೆ ಬರಲು, ರಾವಣನು ನಸುನಕ್ಕು ಅವನನ್ನು ಕೈಯಿಂದ ಹೊಡೆಯಲು ಜಟಾಯುವಿನ ರೆಕ್ಕೆಗಳೆರಡೂ ಮುರಿದು ಅವನು ಕೆಳಕ್ಕೆ ಬಿದ್ದು ಸೀತಾಪಹರಣಕ್ಕಾಗಿ ಬಹಳ

ವ್ಯಥೆಪಟ್ಟನು. ಸೀತೆಯು ಸಿಂಹದ ಕೈಗೆ ಸಿಕ್ಕಿದ ಜಿಂಕೆಯಂತೆ ಎದೆಗೆಟ್ಟು ಅಳುತ್ತ ಮೂರ್ಛೆಹೋಗಿ ಮರಳಿ ಎಚ್ಚತ್ತು ಹಂಬಲಿಸಿದಳು. ರಾವಣನು ಅನಂತವೀರ್ಯ ಕೇವಲಿಗಳ ಬಳಿಯಲ್ಲಿ ಕೈಕೊಂಡಿದ್ದ ಪರಾಂಗನಾವಿರತಿ ವ್ರತದ ಭಂಗವನ್ನು ಲಕ್ಷಿಸಿ ಮಾಡದೆ ಸೀತೆಯನ್ನು ಅಪಹರಿಸಿಕೊಂಡು ಹೋದನು.

ಇತ್ತ, ರಾಮನು ರಣಭೂಮಿಗೆ ಬರಲು ಲಕ್ಷ್ಮಣನು ಸೀತಾದೇವಿಯನ್ನಗಲಿ ಏಕೆ ಬಂದಿರೆಂದು ಕೇಳಿದನು. ರಾಮನು ಅವನ ಸಿಂಹನಾದವನ್ನು ಕೇಳಿ ಬಂದೆನೆಂದೆನಲು ಲಕ್ಷ್ಮಣನು ಯಾವನೋ ಮಾಯಾವಿಯು ಆ ತೆರನಾಗಿ ಮಾಡಿರಬಹುದೆಂದು ಹೇಳಿ ತಾನು ಯುದ್ಧವನ್ನು ಮುಗಿಸಿಕೊಂಡು ಕೂಡಲೆ ಬರುವೆನೆಂದೂ ರಾಮನು ಕೂಡಲೆ ಹಿಂದಕ್ಕೆ ಹೊರಡಬೇಕೆಂದೂ ಬಿನ್ನವಿಸಿದನು. ರಾಮನು ಸೀತೆಯ ವಿಷಯವಾಗಿ ಭಯಪಟ್ಟು, ತಾನಿದ್ದ ಸ್ಥಳಕ್ಕೆ ಬಂದು ನೋಡುವಲ್ಲಿ ಸೀತೆಯು ಅಲ್ಲಿಲ್ಲದಿರಲು ಧೈರ್ಯಗೆಟ್ಟು, ಹಾ ಹಾ! ಸೀತೇ! ಜನಕಜೇ! ವೈದೇಹೀ! ಎಂದು ಪ್ರಲಾಪಿಸುತ್ತ ಮೂರ್ಛೆಹೋಗಿ ಸ್ವಲ್ಪಹೊತ್ತಿಗೆ ಎಚ್ಚತ್ತು ಕಾಡಿನಲ್ಲಿ ಅಲೆಯುತ್ತ, ಪ್ರಾಣಬಿಡುತ್ತಿರುವ ಜಟಾಯುವನ್ನು ಕಂಡು ಸೀತೆಯ ನಿಮಿತ್ತದಿಂದ ಅದಕ್ಕೆ ಸಾವು ದೊರೆತಿತೆಂದು ವ್ಯಸನಪಟ್ಟು ಅದಕ್ಕೆ ಅಮರಗತಿಯನ್ನೈದಿಸಿ ಕಾಡಿನಲ್ಲಿ ಹುಚ್ಚನಂತೆ ಸುತ್ತುತ್ತಿದ್ದನು.

ಲಕ್ಷ್ಮಣನ ಪೆಟ್ಟನ್ನು ತಾಳಲಾರದೆ ವಿರಾಧಿತನು ಶರಣಹೊಕ್ಕು ಖರನನ್ನು ಎದುರಿಸಿದನು. ವಿರಾಧಿತನೊಡನೆ ಯುದ್ಧಕ್ಕೆ ನಿಲ್ಲದೆ ಖರನು ತನ್ನ ಮಗನನ್ನು ಕೊಂದದ್ದಕ್ಕೂ ಹೆಂಡತಿಯನ್ನು ಅಪಮಾನ ಮಾಡಿದುದಕ್ಕೂ ಲಕ್ಷ್ಮಣನ ಮೇಲೆ ಘೋರಯುದ್ಧಮಾಡಲು ಲಕ್ಷ್ಮಣನು ಅವನನ್ನು ಸಂಹರಿಸಿ, ತರುವಾಯ ಮೇಲೆಬಿದ್ದ ಅವನ ತಮ್ಮನಾದ ದೂಷಣನನ್ನೂ ಕೊಂದನು. ಇದನ್ನು ನೋಡಿ ಶರಣಾಗತರಾದ ವಿರೋಧಿ ಸೈನಿಕರನ್ನು ಲಕ್ಷ್ಮಣನು ವಿರಾಧಿತಂಗೊಪ್ಪಿಸಿ ರಾಮನ ಬಳಿಗೆ ಬಂದು ಸೀತೆಯಿಲ್ಲದುದನ್ನು ನೋಡಿ ವ್ಯಥೆಗೊಂಡು ರೌದ್ರಾಕಾರವನ್ನು ತಾಳಿ ಆಕೆಯನ್ನಪಹರಿಸಿದ ಮಾಯಾವಿಯನ್ನು ಹುಡುಕಿ ಕೊಲ್ಲುವೆನೆಂದು ಹೇಳುತ್ತಿರಲು, ಆ ಹೊತ್ತಿಗೆ ವಿರಾಧಿತನು ಸೇನೆಯೊಡನೆ ಅಲ್ಲಿಗೆ ಬಂದು ರಾಮನ ಪಾದಗಳಿಗೆರಗಿ, ಪಾತಾಳಲಂಕೆಯ ದೊರೆಯಾದ ತನ್ನ ತಂದೆಯನ್ನು ಖರನು ಕೊಂದು ರಾಜ್ಯವನ್ನಾಕ್ರಮಿಸಿಕೊಂಡಿದ್ದರಿಂದ ತಾನು ಅಂದಿನಿಂದಲೂ ವನಪ್ರದೇಶದಲ್ಲಿಯೇ ಇರುವೆನೆಂದೂ, ಅತಿ ಬಲರ ಸಹಾಯದಿಂದ ತನ್ನ ರಾಜ್ಯವು ಮರಳಿ ತನಗೆ ದೊರೆಯುವಂತೆ ದಿವ್ಯಜ್ಞಾನಿಗಳು ಹೇಳಿರುವರೆಂದೂ ತಿಳಿಸಿದನು. ಲಕ್ಷ್ಮಣನು ಅವನಿಗೆ ಸೀತಾಪಹರಣದ ವಿಷಯವನ್ನು ತಿಳಿಸಲು, ವಿರಾಧಿತನು ಸಿಟ್ಟುಗೊಂಡು ಸೀತೆಯನ್ನು ಹುಡುಕುವುದಕ್ಕಾಗಿ ಕಾರ್ಯಧುರಂಧರರಾದ ವಿದ್ಯಾಧರರನ್ನು ಅಟ್ಟಿದನು.

ವಿರಾಧಿತನು ರಾಮಲಕ್ಷ್ಮಣರನ್ನು ಪಾತಾಳಲಂಕೆಗೆ ಕರೆದುಕೊಂಡು ಹೋಗಿ, ಸೀತೆಯ ಅಣ್ಣನಾದ ಪ್ರಭಾಮಂಡಲನನ್ನು ಕರೆಯಿಸುವೆನೆಂದೂ ತರುವಾಯ ಮುಂದಣ ಕಾರ್ಯವನ್ನು ನೆರವೇರಿಸುವೆನೆಂದೂ ಹೇಳಿದನು.

ರಾವಣನು ಸೀತೆಯನ್ನೆತ್ತಿಕೊಂಡು ಸಮುದ್ರದ ಮೇಲೆ ಹೋಗುತ್ತಿರುವಲ್ಲಿ, ತನ್ನ ವಿಷಯವನ್ನು ಹೇಳಿಕೊಳ್ಳುತ್ತ ಪ್ರಲಾಪಿಸುತ್ತಿರುವ ಸೀತೆಯ ದನಿಯನ್ನು ಅರ್ಕಜಟೆಯ ಮಗನಾದ ರತ್ನಜಟೆಯು ಕೇಳಿ ರಾವಣನ ವಿಮಾನವನ್ನಡ್ಡಗಟ್ಟಿ ಅವನ ಪಾಪ ಕೃತ್ಯಕ್ಕಾಗಿ ಅವನ ಮರ್ಮೋದ್ಘಾಟನ ಮಾಡಲು, ರಾವಣನು ಅವನೊಡನೆ ಕಾದದೆ ಕರುಣಿಸಿ ವಿದ್ಯಾಚ್ಛೇದ ಮಾಡಿದುದರಿಂದ ರತ್ನಜಟೆಯು ಕಂಬುದ್ವೀಪದಲ್ಲಿ ಬಿದ್ದು ಮೂರ್ಛೆಹೋದನು. ತರುವಾಯ ರಾವಣನು ಲಂಕೆಗೆ ಗಭಿಮುಖವಾಗಿ ಹೋಗುತ್ತ ವೋಹಚೇಷ್ಟೆಗಳನ್ನು ತೋರಿಸಲು, ಸೀತೆಯು ತನ್ನನ್ನು ಮುಟ್ಟಿದರೆ ನಾಲಗೆಯನ್ನು ಕಿತ್ತುಕೊಂಡು ಸಾಯುವೆನೆಂದು ನುಡಿದಳು. ಹಸ್ತಪ್ರಹಸ್ತರು ಯುದ್ಧದಲ್ಲಿ ಸೋತು ಓಡಿಬಂದು ರಾವಣನನ್ನು ಆಕಾಶದಲ್ಲಿ ಕಂಡು ಜಯಧ್ವನಿ ಮಾಡಲು ಸೀತೆಯು ತನ್ನನ್ನೆತ್ತಿಕೊಂಡು ಬಂದವನು ರಾವಣನೆಂದರಿತು ತಾನು ರಾಮನ ಕುಶಲವಾರ್ತೆಯನ್ನು ಕೇಳುವವರೆಗೂ ಊಟ ಮಾಡುವುದಿಲ್ಲವೆಂದು ಶಪಥಮಾಡಿದಳು. ರಾವಣನು ಲಂಕೆಯ ಬಳಿಗೆ ಬಂದು ನಿರ್ವಾಣರಮಣವೆಂಬ ತನ್ನ ವಿನೋದವನದಲ್ಲಿಯ ರತ್ನಗೃಹದಲ್ಲಿ ಸೀತೆಯನ್ನಿಟ್ಟು ತಾನು ತನ್ನರಮನೆಗೆ ಹೋದನು. ಆಗ ಖರದೂಷಣರ ಮರಣವಾರ್ತೆಯನ್ನು ಕೇಳಿದ ಚಂದ್ರನಖಿಯು ಅಣ್ಣನ ಬಳಿಗೆ ಮಂಡೋದರಿ ಮೊದಲಾದವರೊಡನೆ ಬಂದು ಬಹಳವಾಗಿ ಅಳಲು, ರಾವಣನು ಖರದೂಷಣರನ್ನು ಕೊಂದವನನ್ನು ತಾನು ಕೊಲ್ಲುವೆನೆಂದು ಹೇಳಿ ಜಿನಾಲಯಗಳಲ್ಲಿ ಮಹಾ ಪೂಜೆಗಳನ್ನು ಮಾಡಿಸಿ, ಮಲಗುವ ಮನೆಯನ್ನು ಹೊಕ್ಕು ಸೀತೆಯ ಮೇಲಣ ಮೋಹದಿಂದ ಮರವಾನಸನಂತಿದ್ದನು. ಇದನ್ನು ನೋಡಿ ಮಂಡೋದರಿಯು ಕಾರಣವೇನೆಂದು ಕೇಳಲು, ರಾವಣನು ನಾಚಿಕೆಗೊಂಡು, ಸೀತೆಯನ್ನು ತಂದ ವಿಷಯವನ್ನು ತಿಳಿಸಿ, ಅವಳು ತನ್ನ ವಶವಾಗದಿದ್ದರೆ ತಾನು ಸಾಯುವೆನೆಂದು ಹೇಳಲು ಮಂಡೋದರಿಯು ಭಯಗೊಂಡು ರಾವಣನಿಗೆ ಧೈರ್ಯವನ್ನು ಹೇಳಿ ಅಂತಃಪುರ ಸ್ತ್ರೀಯರೊಡನೆ ಸೀತೆಯ ಬಳಿಗೆ ಬಂದು ಆಕೆಯ ರೂಪ ಲಾವಣ್ಯಗಳನ್ನು ಹೊಗಳಿ ಆಕೆಗೆ ರಾವಣನೇ ತಕ್ಕ ವರನೆಂದೂ ಅವನೊಡನೆ ಕೂಡಿ ಲಂಕೆಯನ್ನಾಳೆಂದೂ ಅನೇಕ ವಿಧವಾಗಿ ಬೋಧಿಸಿದಳು. ಇದನ್ನು ಕೇಳಿ ಜಾನಕಿಯು ಕೋಪಗೊಂಡು ಆ ಮಾತುಗಳು ಕುಲಸ್ತ್ರೀಯರಾಡತಕ್ಕವಲ್ಲವೆಂದೂ, ಮಂಡೋದರಿಯಂಥವರು ತಮ್ಮ ವಂಶದ ಕೇಡನ್ನೂ ನೋಡದೆ ಸೂರ್ಯವಂಶದ ವನಿತೆಯರಲ್ಲಿ ಈ ರೀತಿಯಾಗಿ ಮಾತನಾಡುವುದು ಅನುಚಿತವೆಂದೂ ಹೇಳಿದಳು.

ಆ ಹೊತ್ತಿಗೆ ರಾವಣನು ಅಲ್ಲಿಗೆ ಬಂದು ತನ್ನ ಸ್ತ್ರೀಯರನ್ನು ಕಣ್ಸನ್ನೆಯಿಂದ ಹೋಗುವಂತೆ ಮಾಡಲು, ಜಾನಕಿಯು ಹೆದರಿದಳು. ರಾವಣನು ಆಕೆಯ ಎದುರಿಗೆ ಆತ್ಮಸ್ತುತಿಯನ್ನೂ ಪರನಿಂದೆಯನ್ನೂ ಮಾಡಿ ತನ್ನ ಕೋರಿಕೆಯನ್ನೀಡೇರಿಸೆಂದು ಕೇಳಿಕೊಂಡನು. ಆ ದುರಾತ್ಮನ ದುರುಕ್ತಿಗೆ ಸೀತೆ ಮನಸ್ಸಿನಲ್ಲಿ ಮುಳಿದು ಹೊರಕ್ಕೆ ತೋರಿಸದೆ ಅಂಥ ಪಾಪದ ಮಾತುಗಳನ್ನಾಡುವುದು ತಕ್ಕದ್ದಲ್ಲವೆಂದೂ ಪರಸ್ತ್ರೀಯನ್ನು ಪೇಕ್ಷಿಸುವುದರಿಂದ ಅಧೋಗತಿಯು ಬರುವುದೆಂದೂ ಹೇಳಿ ರಾಮಲಕ್ಷ್ಮಣರಿಲ್ಲದ ವೇಳೆ ತನ್ನನ್ನು ಕದ್ದು ತಂದುದಕ್ಕೆ ಅನಂತ ವೀರ್ಯರಾದ ಅವರು ರಾವಣನನ್ನು ಕೊಲ್ಲದೆ ಬಿಡರೆಂದೂ ನುಡಿದಳು. ಆಗ ರಾವಣನು ಸೀತೆಯನ್ನು ಭಯಗೊಳಿಸಿ ಸ್ವಾಧೀನ ಮಾಡಿಕೊಳ್ಳಲು ಯತ್ನಿಸಿದನು. ಅದುವರೆಗೆ ಹೊತ್ತು ಮುಳುಗಿತು. ರಾವಣನನ್ನು ನೋಡುವುದಕ್ಕಾಗಿ ಅಲ್ಲಿಗೆ ಬಂದ ವಿಭೀಷಣನು, ಸೀತೆಯು ತನ್ನ ವಿಷಯವನ್ನು ಹೇಳಿಕೊಂಡು ಹಲುಬಿ ಅಳುತ್ತಿರುವುದನ್ನು ಕೇಳಿ ಭಯಪಟ್ಟು, ಪರಸ್ತ್ರೀಯನ್ನು ಈ ರೀತಿಯಾಗಿ ತೊಂದರೆಪಡಿಸುವುದು ಧರ್ಮವಲ್ಲವೆಂದೂ ಅದರಿಂದ ದುರ್ಗತಿಯೊದಗುವುದೆಂದೂ ತಾನೂ ಮಾರಿಚನೂ ರಾವಣನೊಡನೆ ಹೇಳಿದರು. ಅದಕ್ಕೆ ರಾವಣನು ಅವರನ್ನು ಹಿಯ್ಯಾಳಿಸಿ ಜಾನಕಿಯನ್ನು ಪುಷ್ಪಕ ವಿಮಾನವನ್ನೇರಿಸಿ ತಾನು ಪಟ್ಟದಾನೆಯನ್ನೇರಿ ಸಾಮಂತ ಸೇನೆಯೊಡನೆ ಪಟ್ಟಣದಲ್ಲಿ ಮೆರವಣಿಗೆ ಮಾಡಿಸಿದನು. ದುಃಖದಿಂದ ಬೇಯುತ್ತಿರುವ ಸೀತೆಯು ಇವು ಯಾವುವನ್ನೂ ನೋಡದಿರಲು ಆಕೆಯನ್ನು ರಾವಣನು ಪ್ರಮದವನದಲ್ಲಿ ಸೆರೆಯಿಟ್ಟನು.

ಸಂಭಿನ್ನನೆಂಬ ಮಂತ್ರಿಮುಖ್ಯನು ರಾವಣನಿಗೆ ಖರದೂಷಣರ ವಿಷಯವನ್ನೂ ರಾಮಲಕ್ಷ್ಮಣರು ವಿರಾಧಿತನನ್ನು ಪಾತಾಳಲಂಕೆಯಲ್ಲಿ ನಿಲ್ಲಿಸಿರುವುದನ್ನೂ ಅವರು ಸೀತೆಯನ್ನು ಹುಡುಕುತ್ತಿರುವುದನ್ನೂ ಆದುವರೆಗೂ ರಾವಣನಿಗೆ ಮಿತ್ರರಾಗಿದ್ದ ಸುಗ್ರೀವನೂ ಹನುಮನೂ ತಮ್ಮಿಂದ ಬೇರೆಯಾಗಿರುವುದನ್ನೂ ತಿಳಿಸಿದನು. ಅದಕ್ಕೆ ರಾವಣನು ಪರಿಹಾಸದ ನಗೆಯನ್ನು ನಕ್ಕು "ಸಮುದ್ರದಲ್ಲಿ ಒಂದೆರಡು ಜಲಕಣಗಳು ನಷ್ಟವಾದರೇನು?" ಎಂದು ಹೇಳಲು ಸಹಸ್ರಮತಿಯೆಂಬ ಮಂತ್ರಿಯು ಹಾಗೆ ಅವರನ್ನು ಏಳಿಸುವುದು ಸರಿಯಲ್ಲವೆಂದೂ ಸುಗ್ರೀವಾದಿಗಳನ್ನು ದಾನ ಸನ್ಮಾನಗಳಿಂದ ತಮ್ಮ ಪಕ್ಷವನ್ನೇ ವಹಿಸುವಂತೆ ಮಾಡಬೇಕೆಂದೂ ಲಂಕೆಯು ಅಭೇದ್ಯವಾಗುವಂತೆ ವಿದ್ಯಾಪ್ರಾಕಾರವನ್ನು ಕಟ್ಟಬೇಕೆಂದೂ ಹಾಗೆ ಮಾಡಿದಲ್ಲಿ ರಾಮಲಕ್ಷ್ಮಣರು ಸೀತಾವಿರಹದಿಂದ ಪ್ರಾಣವನ್ನು ಕಳೆದುಕೊಳ್ಳುವರೆಂದೂ ತಿಳಿಸಿದನು. ವಿಭೀಷಣನು ಅದೇ ರೀತಿಯಾಗಿ ಮಾಡಲು ಪ್ರಯತ್ನಪರನಾದನು.

ಇತ್ತ, ಸುಗ್ರೀವನು ಸತಿ ವಿಯೋಗದಿಂದ ವ್ಯಥೆಪಡುತ್ತ ಖರದೂಷಣರ ಬಳಿಗೆ ಹೋಗಬೇಕೆಂದು ಬರುತ್ತಿರುವಲ್ಲಿ ಅಡನಿಯಲ್ಲೊಂದು ಯುದ್ಧರಂಗವನ್ನು ಕಂಡು ಇದೇನೆಂದು ಕೇಳಲು ಅದನ್ನರಿತ ಒಬ್ಬನು ಖರದೂಷಣರು, ವಿರಾಧಿತ,

ರಾಮಲಕ್ಷ್ಮಣರು—ಇವರ ವಿಷಯಗಳನ್ನು ತಿಳಿಸಿ ಕಾರಣಪುರುಷರು ಪಾತಾಳ ಲಂಕೆಯಲ್ಲಿರುವರೆಂದು ಹೇಳಿದನು.

ಆಶ್ವಾಸ ೧೦—ದಶವದನ ವಂಶ ವರ್ಣನೆ

ಸುಗ್ರೀವನು ಮಹಾನುಭಾವರಾದ ರಾಮಲಕ್ಷ್ಮಣರಿಂದ ತನ್ನ ಹಗೆಯನ್ನೂ ಬಗೆಯನ್ನೂ ತೀರಿಸಿಕೊಳ್ಳಬೇಕೆಂದು ನಿಶ್ಚಯಿಸಿ ವಿರಾಧಿತನ ಬಳಿಗೆ ದೂತನನ್ನು ಕಳುಹಿಸಿ ತರುವಾಯ ತಾನೂ ಬರಲು ಆತನಾರೆಂದು ಲಕ್ಷ್ಮಣನು ವಿರಾಧಿತನನ್ನು ಕೇಳಿದನು. ಆತನು ಕಿಷ್ಕಿಂಧನಗರಕ್ಕೊಡೆಯನೂ ಕಪಿಧ್ವಜ ಕುಲಧ್ವಜನೂ ಸೂರ್ಯಂಜಯ ತನೂಜನೂ ವಾಲಿಭಟ್ಟಾರಕರ ತಮ್ಮನೂ ಅಂಗದನ ತಂದೆಯೂ ಆದ ಸುಗ್ರೀವನೆಂದೂ ಅವರನ್ನೋಲಗಿಸುವುದಕ್ಕೆ ಬಂದಿರುವನೆಂದೂ ತಿಳಿಸಿದನು. ಸುಗ್ರೀವನು ರಾಮಲಕ್ಷ್ಮಣರ ಪಾದಗಳಿಗೆರಗಿ ನಿಯಮಿತಾಸನದಲ್ಲಿ ಕುಳಿತುಕೊಂಡನು. ಕುಶಲಪ್ರಶ್ನೆಗಳಾದ ತರುವಾಯ ಲಕ್ಷ್ಮೀಧರನು ಇವರೇನು ನಿಮಿತ್ತವಾಗಿ ಬಂದಿರುವರೆಂದು ಕೇಳಲು ಜಾಂಬವನು ಕೈಮುಗಿದು ನಿಂತು, ಸುಗ್ರೀವನ ಹೆಂಡತಿಯಾದ ಸುತಾರೆಯ ಮೇಲಣ ಆಗ್ರಹದಿಂದ ಸುಗ್ರೀವನ ರೂಪನ್ನು ಧರಿಸಿ ಒಬ್ಬ ಖಳನು ಸುಗ್ರೀವನ ಅರಮನೆಯನ್ನು ಹೊಕ್ಕನೆಂದೂ, ಎಲ್ಲರೂ ಮೋಸಹೋದರೂ ಸುತಾರೆಯು ಕೆಲವು ಗುರುತುಗಳಿಂದ ತಾನು ಮೋಸಹೋಗದೆ ಒಳಗೆ ಅಡಗಿಕೊಂಡಳೆಂದೂ, ಆಗ ನಿಜವಾದ ಸುಗ್ರೀವನು ಬರಲು ಇಬ್ಬರಿಗೂ ಯುದ್ಧವು ನಡೆಯಿತೆಂದೂ, ಅಂಗದಕುಮಾರನು ಮಾಯಾ ಸುಗ್ರೀವನನ್ನು ತಂದೆಯೆಂದು ಸ್ವೀಕರಿಸಿ ನಿಜವಾದ ಸುಗ್ರೀವನನ್ನು ಸೆರೆಯಲ್ಲಿಡುವಂತೆ ಹೇಳಲು ಈತನು ಹನುಮನಲ್ಲಿಗೆ ಹೋಗಿ ತನ್ನ ವೃತ್ತಾಂತವನ್ನು ಹೇಳಿಕೊಂಡನೆಂದೂ, ಅವನು ಬಂದು ನಿಜವಾದ ಸುಗ್ರೀವನು ಯಾರೆಂದು ತಿಳಿಯದೆ ಕೋಪಗೊಂಡು ಹಿಂದಕ್ಕೆ ಹೋದನೆಂದೂ, ಆದುದರಿಂದ ತಮ್ಮಗಳ ಪರಾಕ್ರಮವನ್ನು ಕೇಳಿ ಸಹಾಯಕ್ಕಾಗಿ ತಮ್ಮಲ್ಲಿಗೆ ಬಂದಿರುವನೆಂದೂ ತಿಳಿಸಿದನು. ರಾಮನು ತಮ್ಮಂತೆಯೇ ವ್ಯಥೆಗೆ ಸಿಕ್ಕಿರುವ ಸುಗ್ರೀವನ ವ್ಯಸನವನ್ನು ಕಳೆಯುವಂತೆ ಲಕ್ಷ್ಮಣನೊಡನೆ ಹೇಳಲು, ಸುಗ್ರೀವನು ಸವಾಹಿತ ಚಿತ್ತನಾಗಿ ವಿರಾಧಿತನ ಮುಖವನ್ನು ನೋಡಿ ರಾಮಲಕ್ಷ್ಮಣರು ವ್ಯಾಕುಲಚಿತ್ತರಾಗಿರಲು ಕಾರಣವೇನೆಂದು ಕೇಳಿದನು. ಅದಕ್ಕೆ ವಿರಾಧಿತನು ವನದಲ್ಲಿ ಮೋಸದಿಂದ ಸೀತಾಹರಣವಾದ ವಿಷಯವನ್ನೂ ಯುದ್ಧದಲ್ಲಿ ಖರದೂಷಣರು ಜನಾರ್ದನನ ಕೈಯಿಂದ ಸತ್ತ ವಿಷಯವನ್ನೂ ತಿಳಿಸಿದನು. ಇದನ್ನು ಕೇಳಿ ವಾನರಚಿಹ್ನನಾದ ಸುಗ್ರೀವನು ಏಳು ದಿವಸಗಳೊಳಗಾಗಿ ಸೀತಾದೇವಿಯ ಸುದ್ದಿಯನ್ನು ತರಿಸುವೆನೆಂದು ಪ್ರತಿಜ್ಞೆಮಾಡಿ ಬಿನ್ನವಿಸಲು, ಬಲಾಚ್ಯುತರೂ ವಿರಾಧಿತನೂ ಸುಗ್ರೀವನೊಡನೆ ಕಿಷ್ಕಿಂಧಪುರಕ್ಕೆ

ಹೊರಟರು. ಅಲ್ಲಿಗೆ ಬಂದಮೇಲೆ ಸುಗ್ರೀವನಿಗೂ ಮಾಯಾ ಸುಗ್ರೀವನಿಗೂ ಯುದ್ಧವಾಗಿ ಸುಗ್ರೀವನು ಮೂರ್ಛೆಹೋದನು. ಅವನು ಮೂರ್ಛೆ ತಿಳಿದ ಬಳಿಕ. ರಾಮನು ಸುಗ್ರೀವನ ಹಗೆಯನ್ನು ತಾನು ಮರುದಿನ ತೀರಿಸಿಕೊಳ್ಳುವೆ ನೆಂದು ಸುಗ್ರೀವನೊಡನೆ ಹೇಳಿ ಸಾಹಸಗತಿಯೆಂಬ ಮಾಯಾಸುಗ್ರೀವನನ್ನು ಕೊಂದನು. ಕಪಿಧ್ವಜನಾದ ಸುಗ್ರೀವನು ರಾಮಲಕ್ಷ್ಮಣರನ್ನು ಮರ್ಯಾದೆ ಯೊಡನೆ ಕಿಷ್ಕಿಂಧಪುರಕ್ಕೆ ಕರೆದುಕೊಂಡುಹೋಗಿ ಸತ್ಕರಿಸಿ ತನ್ನ ಹೆಣ್ಣುಮಕ್ಕಳು ರಾಮನನ್ನಲ್ಲದೆ ಮತ್ತಾರನ್ನೂ ಮದುವೆಯಾಗೆವೆಂದಿರುವುದರಿಂದ ಅವರನ್ನು ಪರಿ ಗ್ರಹಿಸಬೇಕೆಂದು ಬೇಡಿಕೊಂಡು ಶುಭಮುಹೂರ್ತದಲ್ಲಿ ತನ್ನ ಹನ್ನೆರಡು ಮಂದಿ ಕನ್ನೆಯರನ್ನು ರಾಮನಿಗೆ ಮದುವೆಮಾಡಿಕೊಟ್ಟನು. ಆದರೆ ರಾಮನಿಗೆ ಸೀತೆಯ ನೆನೆಪಿನಿಂದ ಅವರಲ್ಲಿ ಅನುರಾಗ ಹುಟ್ಟಲಿಲ್ಲ.

ಸುಗ್ರೀವನು ಸೀತೆಯನ್ನು ಕಂಡುಹಿಡಿಯುವ ಪ್ರಯತ್ನವನ್ನು ಕೈಕೊಂಡು, ಮೊದಲು ಪ್ರಭಾಮಂಡಲನಲ್ಲಿಗೆ ದೂತರನ್ನಟ್ಟಿ, ತಾನು ಕೆಲವರು ಅನುಚರರೊಡನೆ ಪೂರ್ವದಿಕ್ಕಿಗೆ ಹೊರಟು ವಾಯುವೇಗದಿಂದ ಹೋಗುತ್ತ ಒಂದು ಬೆಟ್ಟದ ಶಿಖರದ ಮೇಲೆ ಒಂದು ಧ್ವಜವನ್ನು ಕಂಡು ಯಾರಿರುವರೋ ನೋಡೋಣವೆಂದು ಅಲ್ಲಿಗೆ ಹೋಗಲು ಅಲ್ಲಿದ್ದ ರತ್ನಜಟೆಯು ಇವನು ರಾವಣನ ದೂತನಿರಬಹುದೆಂದು ಹೆದರಿದನು. ಸುಗ್ರೀವನು ಅವನ ಭಯವನ್ನು ಹೋಗಲಾಡಿಸಿ ಅವನ ವೃತ್ತಾಂತ ವನ್ನೆಲ್ಲ ತಿಳಿದು ಸೀತೆಯನ್ನು ರಾವಣನು ಲಂಕೆಗೆ ಹೊತ್ತುಕೊಂಡು ಹೋದ ಸಂಗತಿ ಯನ್ನರಿತವನಾಗಿ ಸಂತೋಷಪಟ್ಟು ರತ್ನಜಟೆಯನ್ನು ರಾಮಲಕ್ಷ್ಮಣರ ಬಳಿಗೆ ಕರೆ ತರಲು ಸೀತೆಯನ್ನು ರಾವಣನೆತ್ತಿಕೊಂಡು ಹೋದ ವಿಷಯವನ್ನು ಜನಾರ್ದ ನನು ರತ್ನಜಟೆಯಿಂದ ವಿಶದವಾಗಿ ತಿಳಿದನು. ಸೀತೆಯ ಸುದ್ದಿಯನ್ನು ತಿಳಿಸಿ ದುದಕ್ಕಾಗಿ ರಾಮಲಕ್ಷ್ಮಣರು ರತ್ನಜಟೆಯ ಶತ್ರುಗಳನ್ನೋಡಿಸಿ ಅವನನ್ನು ಮರಳಿ ಅವನ ರಾಜ್ಯಕ್ಕರಸುಮಾಡಿ ಕಿಷ್ಕಿಂಧಪುರಕ್ಕೆ ಬಂದರು. ಒಂದು ದಿನ ಸುಗ್ರೀವನು ನಳ ನೀಲ ಅಂಗದ ಜಾಂಬವ ಮುಂತಾದ ಸೇನಾನಾಯಕರೊಡನೆಯೂ ಮಂತ್ರಿ ಮಂಡಲ ಬಂಧುಜನಗಳೊಡನೆಯೂ ತನ್ನ ಆಸ್ಥಾನದಲ್ಲಿ ರಾಮಲಕ್ಷ್ಮಣರನ್ನು ಸೇವಿಸುತ್ತಿರುವಲ್ಲಿ ಲಕ್ಷ್ಮಣನು ಸುಗ್ರೀವನನ್ನು ನೋಡಿ, ಲಂಕೆಗೆ ಹೋಗಿ ರಾವಣ ನನ್ನು ಜಯಿಸುವ ಪ್ರಯತ್ನವನ್ನು ಮಾಡಬೇಕೆಂದು ಹೇಳಿದನು. ರಾಮನು ಜೈನಾಗಮ ಕೋವಿದನಾದ ಜಾಂಬೂನದನನ್ನು ನೋಡಿ ರಾವಣನ ವಂಶವನ್ನೂ ಲಂಕಾನಗರದ ತೆರನನ್ನೂ ತಿಳಿಸುವಂತೆ ಕೇಳಲು ಅವನು ಕೈಮುಗಿದುಕೊಂಡು ಆ ವಿಷಯವನ್ನು ವಿಶದವಾಗಿ ಹೇಳುವುದಕ್ಕೆ ಪ್ರಾರಂಭಿಸಿದನು:—

ತ್ರಿಲೋಕಾಧಿಪತಿಯಾದ ಪುರುಪರಮೇಶ್ವರನ ಅನಂತರದಲ್ಲಿ ಕೆಲವು ಕಾಲದ ಮೇಲೆ ಅದೇ ಕುಲದ ತ್ರಿದಶಂಜಯನು ಭೂಮಂಡಲಕ್ಕಧಿಪತಿಯಾದನು. ಅವ

ನಿಗೆ ಜಿತಶತ್ರು ವಿಜಯಸಾಗರರೆಂಬಿಬ್ಬರು ಮಕ್ಕಳು. ತ್ರಿದಶಂಜಯನು ಹಲವು ಕಾಲ ರಾಜ್ಯಭಾರಮಾಡಿ ಜಿತಶತ್ರುವಿಗೆ ಪಟ್ಟವನ್ನು ಕಟ್ಟಿ ತಪೋರಾಜ್ಯದಲ್ಲಿ ನಿಂತನು. ಜಿತಶತ್ರುವಿನ ಮಗ ಅಜಿತಭಟ್ಟಾರಕನು; ವಿಜಯಸಾಗರನ ಮಗ ಸಗರ ಚಕ್ರೇಶ್ವರನು. ಹೀಗೆ ಜನಪತಿಯನ್ನೊಬ್ಬನೂ ಜನಪತಿಯನ್ನೊಬ್ಬನೂ ಪಡೆದರು. ಆ ಕಾಲದಲ್ಲಿ ವಿಜಯಾರ್ಧದ ರಥನೂಪುರಚಕ್ರವಾಳಪುರದ ವಿಯಚ್ಚರ ರಾಜನಾದ ಪೂರ್ಣಘನನಿಗೆ ತೋಯದವಾಹನನೆಂಬ ಮಗನು ಹುಟ್ಟಿದನು. ಉತ್ತರ ಪ್ರಾಂತದಲ್ಲಿಯ ಅಂಬರತಿಲಕವೆಂಬ ಪುರದ ಸುಲೋಚನನಿಗೆ ಸಹಸ್ರಲೋಚನನೆಂಬ ಮಗನೂ ಉತ್ಪಲನೇತ್ರೆಯೆಂಬ ಮಗಳೂ ಹುಟ್ಟಿದರು. ಈ ಹುಡುಗಿಯನ್ನು ಪೂರ್ಣಘನನು ತೋಯದವಾಹನನಿಗೆ ಕೊಡೆಂದು ಸುಲೋಚನನಿಗೆ ಹೇಳಿಕಳುಹಿಸಲು, ಆತನು ಚಕ್ರವರ್ತಿಯಾಗುವ ಸಗರನಿಗೆ ಈಕೆಯು ಪಟ್ಟಮಹಿಷಿಯಾಗುವಳೆಂದು ನೈಮಿತ್ತಿಕರು ಹೇಳಿರುವ ಕಾರಣ ತೋಯದವಾಹನನಿಗೆ ಕೊಡಲಾಗುವುದಿಲ್ಲವೆಂದು ಹೇಳಿದುದರಿಂದ, ಪೂರ್ಣಘನನು ಬಹಳ ಸಿಟ್ಟುಗೊಂಡು ದಂಡೆತ್ತಿಬಂದು ಅಂಬರ ತಿಲಕವನ್ನು ಮುತ್ತಲು, ಸುಲೋಚನನು ಮಗನನ್ನೂ ಮಗಳನ್ನೂ ತನ್ನ ವಿದ್ಯೆಯಿಂದ ಪಕ್ಷಿಗಳನ್ನಾಗಿ ಮಾಡಿ ಹೊರಡಿಸಿ ತಾನು ಪೂರ್ಣಘನನೊಡನೆ ಕಾದಿ ಸತ್ತನು. ಪೂರ್ಣಘನನು ಪಟ್ಟಣವನ್ನು ಹೊಕ್ಕು ಕನ್ನೆಯನ್ನು ಹುಡುಕಿ ಕಾಣದೆ ತನ್ನ ಪಟ್ಟಣಕ್ಕೆ ಹಿಂದಿರುಗಿ ಹೋದನು.

ಇತ್ತ, ಸಹಸ್ರಲೋಚನನೂ ಉತ್ಪಲನೇತ್ರೆಯೂ ಶರಭಾಟವಿಯನ್ನು ಹೊಕ್ಕು ವೇತ್ರಾವತೀ ತೀರದೊಳಿರುವಲ್ಲಿ ಆ ಸಮಯಕ್ಕೆ ಸಗರನನ್ನು ಅವನ ದುಷ್ಟಾಶ್ವವು ಎಳೆದು ತಂದು ಆ ಕಾಡಿನಲ್ಲಿಳಿಸಿ ಹೋಯಿತು. ಸಗರನು ಅಲ್ಲಿದ್ದ ಅಣ್ಣ ತಂಗಿಯರನ್ನು ನೋಡಿ ಅವರ ರೂಪ ಲಾವಣ್ಯಗಳಿಗೆ ಬೆರಗಾಗಿ ಅಂತಹ ಭಯಂಕರವಾದ ಅಡವಿಗೆ ಅವರು ಬರಲು ಕಾರಣವೇನೆಂದು ಕೇಳಲು ಸಹಸ್ರ ಲೋಚನನು ತಮ್ಮ ವೃತ್ತಾಂತವನ್ನು ತಿಳಿಸಿ ಭೂನಾಥನಾಗಿ ತೋರುವ ಅವನು ಅಲ್ಲಿಗೆ ಬಂದ ಕಾರಣವೇನೆಂದು ಕೇಳಿದನು. ಅದಕ್ಕೆ ತಾನು ಅಯೋಧ್ಯಾ ಪತಿಯಾದ ಸಗರನೆಂದು ಹೇಳಿ ತಾನು ಬಂದ ತೆರನನ್ನು ತಿಳಿಸಲು ಸಹಸ್ರ ಲೋಚನನು ಆಶ್ಚರ್ಯಪಟ್ಟು, "ಸಗರನನ್ನಾಶ್ರಯಿಸಿದಲ್ಲಿ ಹಗೆಗಳು ನಾಶವಾಗುವರು, ಇಷ್ಟಾರ್ಥವು ಈಡೇರುವುದು" ಎಂದು ತಮ್ಮ ತಂದೆಯು ಅಪ್ಪಣೆ ಕೊಡಿಸಿದ್ದ ನೆಂದು ಹೇಳಿದನು. ಇದನ್ನು ಕೇಳಿ ಸಗರನು ಅವರ ತಂದೆಯು ಹೇಳಿದಂತೆಯೇ ಮಾಡುವೆನೆಂದೂ ದುಃಖವನ್ನುಳಿದು ಸಂತೋಷವಾಗಿರೆಂದೂ ಹೇಳಿ, ತನ್ನ ದುಷ್ಟಾಶ್ವದ ಹಜ್ಜೆ ಹಿಡಿದು ಹೋಗುತ್ತಿರುವಲ್ಲಿ ಹಸ್ತ್ಯಶ್ವ ರಥಪದಾತಿಗಳ ಕಳಕಳವು ಕೇಳಿಸಿತು. ಹೀಗೆ ತನ್ನ ಸೈನ್ಯವು ಬಂದು ಸೇರಲು ಸಗರನು ಸಹಸ್ರ ಲೋಚನನನ್ನೂ ಉತ್ಪಲನೇತ್ರೆಯನ್ನೂ ತನ್ನ ಪಟ್ಟದಾನೆಯ ಮೇಲೆ ಕೂಡಿಸಿಕೊಂಡು

ಹೊರಟು ಅಯೋಧ್ಯೆಯನ್ನು ಸೇರಿ ಉತ್ಪಲನೇತ್ರೆಯನ್ನು ಮದುವೆಮಾಡಿಕೊಂಡು ವಿದ್ಯಾಧರಲೋಕವನ್ನು ಸಹಸ್ರಲೋಚನನಿಗೆ ಕೊಟ್ಟನು. ಸಹಸ್ರಲೋಚನನು ತನ್ನ ತಂದೆಯನ್ನು ಕೊಂದವನನ್ನು ಕೊಂದಲ್ಲದೆ ಬಿಡೆನೆಂದು ದೊಡ್ಡ ಸೈನ್ಯದೊಡನೆ ಬಂದು ರಥನೂಪುರಚಕ್ರವಾಳಪುರವನ್ನು ಮುತ್ತಲು ಪೂರ್ಣಘನನು ಹೆದರಿ ಮಗನಾದ ತೋಯದವಾಹನನನ್ನು ತನ್ನ ವಿದ್ಯೆಯಿಂದ ಹಂಸವನ್ನಾಗಿ ಮಾಡಿ ಕಳುಹಿಸಿ ತಾನು ಮಹಾಯುದ್ಧವನ್ನು ಮಾಡಿ ಸತ್ತನು. ಸಹಸ್ರಲೋಚನನು ತೋಯದವಾಹನನನ್ನು, ತೆಕ್ಕೆ ಹಾಕಿಕೊಂಡಿದ್ದ ಹಾವಿನಂತೆ, ಅಟ್ಟಿಕೊಂಡು ಬಂದು, ಇಬ್ಬರೂ ಅಜಿತಭಟ್ಟಾರಕರ ಸಮವಸರಣ ಭೂಮಿಯನ್ನು ಸೇರಲು, ಅವರಿಗಿದ್ದ ವೈರವು ನಾಶಹೊಂದಿತು. ಆಗ ಸಹಸ್ರಲೋಚನನು ಗಣಧರರನ್ನು ಕುರಿತು ತನ್ನ ತಂದೆಗೂ ತೋಯದವಾಹನನ ತಂದೆಗೂ ಹುಟ್ಟಿದ ವೈರವು ಈಜನ್ಮದ್ದೋ ಹಿಂದಣ ಜನ್ಮದ್ದೋ ತಿಳಿಸಬೇಕೆಂದು ಬೇಡಿಕೊಳ್ಳಲು ಅಜಿತ ಭಟ್ಟಾರಕರು ಹಿಂದಣ ಜನ್ಮಗಳ ಕಥೆಯನ್ನು ಸವಿಸ್ತಾರವಾಗಿ ಹೇಳಿದರು. ತರುವಾಯ ಅಲ್ಲಿಯೇ ಇದ್ದ ಸಗರನು ತನಗೆ ಸಹಸ್ರಲೋಚನನಲ್ಲುಂಟಾದ ಒಲವಿಗೆ ಕಾರಣವನ್ನು ಕೇಳಿ ತಿಳಿದುಕೊಂಡನು.

ಈ ಕಥೆಯನ್ನು ಜಿನಮುಖದಿಂದ ಕೇಳುತ್ತಿದ್ದ ಭೀಮನೆಂಬ ರಾಕ್ಷಸನು ತಾನು ತೋಯದವಾಹನನ ಪೂರ್ವಜನ್ಮದ ತಂದೆಯೆಂದರಿತು ಪ್ರೇಮಹುಟ್ಟಲು, ವಿಜಯಾರ್ಧನಗದಲ್ಲಿ ಹಗೆಗಳ ಮಧ್ಯದಲ್ಲಿದ್ದರೆ ಅವನಿಗೆ ಕೇಡುಂಟಾಗುವುದೆಂದು ಅವನೊಡನೆ ಹೇಳಿ ದಕ್ಷಿಣ ಸಮುದ್ರದಲ್ಲಿ ಏಳುನೂರು ಯೋಜನ ವಿಸ್ತೀರ್ಣವುಳ್ಳ ಅತಿ ರಮಣೀಯವಾದ ರಾಕ್ಷಸದ್ವೀಪದ ನಡುವೆ ಏಳು ಕನಕ ಪ್ರಾಕಾರಗಳುಳ್ಳ ತ್ರಿಕೂಟಾಚಲದ ಶಿಖರದಲ್ಲಿ ಮುನ್ನೂರು ಯೋಜನ ವಿಸ್ತೀರ್ಣವುಳ್ಳ ನಿರಾತಂಕವಾದ ಲಂಕೆಯಲ್ಲಿ ಸುಖವಾಗಿ ರಾಜ್ಯಭಾರ ಮಾಡೆಂದು ಪೂರ್ವಜನ್ಮದ ಸ್ನೇಹದಿಂದ ತೋಯದವಾಹನನನ್ನು ತನ್ನ ಪಟ್ಟಣಕ್ಕೆ ಕರೆದುಕೊಂಡು ಹೋಗಿ ರಾಜ್ಯಾಭಿಷೇಕ ಮಾಡಿ ಪಟ್ಟವನ್ನು ಕಟ್ಟಿ ರಾಕ್ಷಸವಿದ್ಯೆ ಮೊದಲಾದ ಹಲವು ವಿದ್ಯೆಗಳನ್ನೂ ನವಮುಖಾಭರಣ ಮೊದಲಾದ ಅನೇಕ ದಿವ್ಯಾಭರಣಗಳನ್ನೂ ನವನಿಧಿವೈರಸು ಪಾತಾಳಲಂಕೆಯನ್ನೂ ಕೊಟ್ಟು ಅವನಿಗೆ ರಾಕ್ಷಸಕುಲವೇ ಕುಲವಾಗುವುದೆಂದು ನಿಯಮಿಸಿ ತನ್ನ ಪರಿವಾರದೊಡನೆ ದ್ವೀಪಾಂತರಕ್ಕೆ ಹೋದನು.

ತೋಯದವಾಹನನು ವಿಜಯಾರ್ಧದ ಕಿನ್ನರಪುರವನ್ನಾಳುವ ರತಿಮಯೂಖನ ಮಗಳನ್ನು ಮದುವೆಮಾಡಿಕೊಂಡು ರಾಜ್ಯಭಾರ ಮಾಡುತ್ತ ಕೆಲವು ಕಾಲದ ಮೇಲೆ ವೈರಾಗ್ಯಪರನಾಗಿ ತನ್ನ ಹಿರಿಯ ಮಗನಾದ ಮಹಾರಾಕ್ಷಸನಿಗೆ ರಾಜ್ಯವನ್ನೊಪ್ಪಿಸಿ ದೀಕ್ಷೆಗೊಂಡು ಮೋಕ್ಷಕ್ಕೆ ಹೋದನು. ಮಹಾರಾಕ್ಷಸನು ವಿಭವದಲ್ಲಿ

ಸಹಸ್ರಾಕ್ಷನಿಗೆ ಸಮನೆನಿಸಿ ರಾಜ್ಯಭಾರ ಮಾಡುತ್ತ ಅಮರರಾಕ್ಷಸ ಭಾನು ರಾಕ್ಷಸರೆಂಬಿಬ್ಬರು ಮಕ್ಕಳನ್ನು ಪಡೆದು ಒಂದು ದಿನ ಕ್ರೀಡಾವನಕ್ಕೆ ಬಂದು ಮಕರಂದದ ಆಸೆಗಾಗಿ ಬಂದು ರಾತ್ರಿಯಲ್ಲಿ ಮುಚ್ಚಿಕೊಂಡ ಕಮಲದಿಂದ ಹೊರಕ್ಕೆ ಹೊರಡಲರಿಯದೆ ಅಲ್ಲಿಯೇ ಸತ್ತ ಭೃಂಗವೊಂದನ್ನು ನೋಡಿ ಸಂಸಾರ ವೈರಾಗ್ಯ ಪರನಾಗಿ ಶ್ರುತಸಾಗರ ಚಾರಣರನ್ನು ಕಂಡು ತನ್ನ ವಿಭವಕಾರಣವನ್ನು ಕೇಳಲು ಅವರು ಅದನ್ನು ವಿಶದವಾಗಿ ತಿಳಿಸಿದರು. ಇದನ್ನು ಕೇಳಿ ಮಹಾರಾಕ್ಷಸನು ತನ್ನ ಮಗನಾದ ಅಮರರಾಕ್ಷಸನಿಗೆ ಲಂಕೆಯನ್ನು ಕೊಟ್ಟು ತಪಸ್ಸುಮಾಡಿ ಮುಕ್ತಿಯನ್ನು ಪಡೆದನು. ಅಮರರಾಕ್ಷಸನಿಗೂ ಅವನ ತಮ್ಮನಾದ ಭಾನುರಾಕ್ಷಸನಿಗೂ ಹತ್ತು ಹತ್ತು ಮಂದಿ ಗಂಡುಮಕ್ಕಳು ಹುಟ್ಟಿದರು. ಅವರಲ್ಲೊಬ್ಬೊಬ್ಬರನ್ನು ಒಂದೊಂದು ಪಟ್ಟಣಕ್ಕೆ ಅರಸುಮಾಡಿ ಅಣ್ಣತಮ್ಮಂದಿರಿಬ್ಬರೂ ವೈರಾಗ್ಯಪರರಾಗಿ ನಿರ್ವಾಣಕ್ಕೆ ಸಂದರು. ಆ ಸಂತತಿಯಲ್ಲಿ ಅನೇಕ ಮಂದಿ ಅರಸುಗಳ ರಾಜ್ಯಭಾರವು ಕಳೆದಮೇಲೆ ಬಹಳ ತೇಜಸ್ವಿಯಾದ ಘನಪ್ರಭನೆಂಬುವನು ಲಂಕಾಪುರಕ್ಕರಸಾದನು. ಅವನ ಮಗನಾದ ಧವಳಕೀರ್ತಿಯು ಬಹಳ ಯಶಸ್ವಿಯಾಗಿ ರಾಜ್ಯವನ್ನಾಳುತ್ತಿರುವಲ್ಲಿ ರತ್ನಪುರದ ಪೂರ್ವೋತ್ತರನು ತನ್ನ ಮಗನಾದ ಪುಷ್ಪೋತ್ತರನಿಗೆ ಮೇಘಪುರದರಸನಾದ ಅತೀಂದ್ರನೆಂಬ ವಿಯಚ್ಚರನ ಮಗಳಾದ ದೇವಿಲೆಯನ್ನು ಬೇಡಲು, ಅತೀಂದ್ರನು ಅವನಿಗೆ ಮಗಳನ್ನು ಕೊಡದೆ ಧವಳಕೀರ್ತಿಗೆ ಕೊಟ್ಟು ಮದುವೆಮಾಡಿದನು.

ಅತೀಂದ್ರನ ಮಗನಾದ ಶ್ರೀಕಂಠಕುಮಾರನು ಒಂದು ದಿನ ಜಿನವಂದನಾನಿಮಿತ್ತವಾಗಿ ಮಂದರಕಂದರಕ್ಕೆ ಹೋಗಿ ರತ್ನಪುರದಮೇಲೆ ಮೇಘಪುರಕ್ಕೆ ಬರುತ್ತಿರುವ ಸಮಯದಲ್ಲಿ ಪುಷ್ಪೋತ್ತರನ ತಂಗಿಯಾವ ಪದ್ಮೋತ್ತರೆಯು ರಾಣಿವಾಸದಲ್ಲಿ ಸುಸ್ವರದಿಂದ ಹಾಡುತ್ತಿರುವುದನ್ನು ಕೇಳಿ ಮೋಹಪರವಶನಾಗಿ, ಗಾನಕ್ಕೆ ಸೋತುಬರುವ ಜಿಂಕೆಯಂತೆ, ಅಲ್ಲಿಗೆ ಬರಲು ಕನ್ನೆಯು ಅವನನ್ನು ನೋಡಿ ಮೋಹಿಸಿದಳು. ಹೀಗೆ ತನ್ನ ವಶವಾದ ಕನ್ನೆಯನ್ನು ಶ್ರೀಕಂಠಕುಮಾರನು ಲಂಕೆಗೆತ್ತಿಕೊಂಡುಹೋಗಿ ಧವಳಕೀರ್ತಿಯ ಬಳಿಯಲ್ಲಿರಲು ಪುಷ್ಪೋತ್ತರನು ಅದನ್ನು ತಿಳಿದು ತನಗೆ ಮಗಳನ್ನು ಕೊಡದೆ ಹೋದುದಕ್ಕೂ ಕುಲಾಚಾರವನ್ನು ಬಗೆಯದೆ ಈ ರೀತಿಯಾಗಿ ತನ್ನ ತಂಗಿಯನ್ನು ಅಪಹರಿಸಿದುದಕ್ಕೂ ರೋಷಾವಿಷ್ಟನಾಗಿ ಲಂಕೆಯಮೇಲೆ ದಂಡೆತ್ತಿಬಂದನು. ಧವಳಕೀರ್ತಿಯು ಸಾಮೋಪಾಯವನ್ನು ಮಾಡಲೆಳಸಿ ತನ್ನ ಮಂತ್ರಿಗಳನ್ನು ಅತನ ಬಳಿಗೆ ಕಳುಹಿಸಿ ಅತನ ತಂಗಿಯನ್ನು ತನ್ನ ಮಗನಿಗೆ ಕೊಟ್ಟು ಮದುವೆ ಮಾಡಬೇಕೆಂದು ಕೇಳಿಕೊಂಡನು. ಪುಷ್ಪೋತ್ತರನು ಅದಕ್ಕೊಪ್ಪಿ ಶುಭ ಮುಹೂರ್ತದಲ್ಲಿ ಪದ್ಮೋತ್ತರೆಯನ್ನು ಶ್ರೀಕಂಠನಿಗೆ ಮದುವೆಮಾಡಿಕೊಟ್ಟು ತನಗೆ ಸಮೀಪವಾಗಿರುವ ಅನೇಕ ದ್ವೀಪ ಮುಖ್ಯ

ವಾದ ವಾನರದ್ವೀಪದೊಳಿರುವಂತೆ ಆತನನ್ನೊಡಂಬಡಿಸಲು, ಆತನು ಒಂದು ದಿನ ಆ ದ್ವೀಪವನ್ನು ನೋಡುವ ನಿಮಿತ್ತವಾಗಿ ಬರುತ್ತ ಒಂದೆಡೆಯಲ್ಲಿ ವಾನರಗಳನ್ನು ಕಂಡು ಅವನ್ನು ತನ್ನ ಬಳಿಗೆ ಬರಮಾಡಿಕೊಂಡು ಕಿಷ್ಕಿಂಧಗಿರಿಯಮೇಲೆ ಹದಿನಾಲ್ಕು ಯೋಜನ ವಿಸ್ತಾರದ ಪಟ್ಟಣವನ್ನು ಕಟ್ಟಿಸಿ ಅದಕ್ಕೆ ಕಿಷ್ಕಿಂಧಪುರವೆಂಬ ಹೆಸರನ್ನಿಟ್ಟು ಅಲ್ಲಿ ಹಲವು ಕಾಲ ರಾಜ್ಯಭಾರ ಮಾಡುತ್ತಿದ್ದನು. ಹೀಗಿರಲು, ಶ್ರೀಕಂಠನು ಒಂದು ದಿನ ನಂದೀಶ್ವರ ಪೂಜೆಗೆ ಅಚ್ಯುತೇಂದ್ರನೊಡನೆ ಹೋಗುತ್ತ, ಮಾನುಷೋತ್ತರ ದ್ವೀಪದಿಂದತ್ತಕಡೆಗೆ ಮನುಷ್ಯರಿಗೆ ಪ್ರವೇಶವಿಲ್ಲದುದರಿಂದ ತನ್ನ ವಿಮಾನವು ಹೋಗದಿರಲು ಹಿಂದಿರುಗಿ ಬಂದು ಅದೇ ನಿರ್ವೇಗ ಕಾರಣವಾಗಿ ತನ್ನ ಮಗನಾದ ವಜ್ರಕಂಠನಿಗೆ ರಾಜ್ಯವನ್ನು ಕೊಟ್ಟು ತಪಸ್ಸಿಗೆ ಹೋದನು. ಈತನೂ ಕೆಲವು ಕಾಲ ರಾಜ್ಯಭಾರಮಾಡಿ ತನ್ನ ಮಗನಾದ ಇಂದ್ರಾಯುಧನಿಗೆ ಪಟ್ಟಕಟ್ಟಿ ದೀಕ್ಷೆಗೊಂಡನು.

ಆ ಕಪಿಕುಲದ ಕಿಷ್ಕಿಂಧಾಧಿಪರಲ್ಲಿ ಅಪ್ರತಿಹತನಾದ ಅಮರಪ್ರಭನು ಹುಟ್ಟಿದನು. ಅತ್ತ, ಲಂಕಾಧಿಪನಾದ ಧವಳಕೀರ್ತಿಯ ಕುಲದಲ್ಲಿ ಅನೇಕರು ಹುಟ್ಟಿ ರಾಜ್ಯಭಾರ ಮಾಡಿದಮೇಲೆ ತ್ರಿಕೂಟನೆಂಬುವನು ದೊರೆಯಾದನು. ಆತನ ಮಗಳಾದ ಗುಣವತಿಯನ್ನು ಅಮರಪ್ರಭನಿಗೆ ಮದುವೆಮಾಡಲೆಂದು ಕಿಷ್ಕಿಂಧಪುರಕ್ಕೆ ಕರೆದುಕೊಂಡು ಹೋದರು. ಅಲ್ಲಿ ಆಕೆಯು ವಿವಾಹವೇದಿಕೆಯಲ್ಲಿ ಪಂಚರತ್ನವರ್ಣ ಚೂರ್ಣದಿಂದ ಬರೆದ ಲತೆಗಳಲ್ಲಿ ವಾನರಗಳನ್ನು ನೋಡಿ ಹೆದರಿ ಕೂಳ್ಳಲು ಇದನ್ನು ಬರೆದವರು ಯಾರೆಂದು ದೊರೆಯು ಕೇಳಿದ್ದಕ್ಕೆ ಗೃಹಮಹತ್ತರನು ದೊರೆಯ ಪೂರ್ವಜನಾದ ಶ್ರೀಕಂಠನು ಕಪಿಗಳನ್ನು ಕೊಂಡಾಡಿದನಾದುದರಿಂದ ಆ ಕುಲದಲ್ಲಿ ಉತ್ಸವಗಳಲ್ಲಿ ಹಾಗೆ ಬರೆಯುವರೆಂದು ತಿಳಿಸಿದನು. ಅದನ್ನು ಕೇಳಿ ದೊರೆಯು ಸಮಾಹಿತ ಚಿತ್ತನಾಗಿ, ಮೆಟ್ಟುವ ಸ್ಥಳದಲ್ಲಿ ಏಕೆ ಬರೆದಿರೆಂದಾಕ್ಷೇಪಿಸಿ, ಪತಾಕೆಗಳಲ್ಲಿಯೂ ಕಿರೀಟಗಳಲ್ಲಿಯೂ ಜಿನ್ನದಿಂದಲೂ ರತ್ನಗಳಿಂದಲೂ ವಾನರಗಳನ್ನು ವಿರಚಿಸಿ ಕೊಂಡಾಡಿ, ತನ್ನ ಕುಲದವರನ್ನು ವಾನರಧ್ವಜರೆಂದೂ ವಾನರಕುಲದವರೆಂದೂ ರೂಢಿಮಾಡಿ ತನ್ನ ಮಗನಾದ ಕಪಿಕೇತುವಿಗೆ ರಾಜ್ಯವನ್ನು ಕೊಟ್ಟು ಸಂನ್ಯಾಸವನ್ನು ವಹಿಸಿದನು. ಈ ಕುಲದಲ್ಲಿ ಹುಟ್ಟಿದ ಕಿಷ್ಕಿಂಧ ಅಂಧ್ರಕರೆಂಬಿಬ್ಬರು ಅಣ್ಣತಮ್ಮಂದಿರು ದೊರೆಗಳಾದರು. ವಿದ್ಯುತ್ಕೇಶನ ತರುವಾಯ ಆತನ ಮಗನಾದ ಸುಕೇಶನು ಲಂಕೆಗೆ ದೊರೆಯಾದನು. ಆ ಕಾಲದಲ್ಲಿ ವಿಜಯಾರ್ಧ ನಗೋಪತ್ಯಕದ ಆದಿತ್ಯನಗರವನ್ನಾಳುವ ಮಂದರಮಾಲಿಯ ಮಗಳಾದ ಶ್ರೀಮಾಲೆಯು ಸೌಂದರ್ಯದಲ್ಲಿ ರತಿಯನ್ನು ಮೀರಿಸಿ ಪ್ರಾಪ್ತವಯಸ್ಕಳಾಗಲು ಆ ಕನ್ನೆಯ ಸ್ವಯಂವರಕ್ಕೆ ನಾನಾ ದಿಕ್ಕುಗಳ ಖಚರ ಕುಮಾರರೂ ವಿದ್ಯಾಧರ ಚಕ್ರವರ್ತಿಯಾದ ಅಶನಿವೇಗನ ಮಗನಾದ ವಿಜಯಸಿಂಹನೂ ಕಪಿಕೇತುಗಳಾದ ಕಿಷ್ಕಿಂಧಾಂಧ್ರಕರೂ ಲಂಕಾಧಿಪನಾದ ಸುಕೇಶನೂ ಮೊದಲಾದ ಹಲವರು ವಿಯಚ್ಚರಾಧಿರಾಜರು

ಬಂದು ಮಣಿಮಯಾಸನಗಳಲ್ಲಿ ಕುಳಿತುಕೊಂಡರು. ಶ್ರೀಮಾಲೆಯು ಮನ್ಮಥ ರೂಪನಾದ ಕಿಷ್ಕಿಂಧನಿಗೆ ಮಾಲೆಯನ್ನು ಹಾಕಲು ಆಹವ ಸಿಂಹನಾದ ವಿಜಯ ಸಿಂಹನು ಕಾಳಿಗಕ್ಕುದ್ಯುಕ್ತನಾದನು. ಆಗ ಅಂಧ್ರಕ ಸುಕೇಶರು ಕಿಷ್ಕಿಂಧ ನನ್ನೂ ಶ್ರೀಮಾಲೆಯನ್ನೂ ಕಿಷ್ಕಿಂಧಪುರಕ್ಕೆ ಕಳುಹಿಸಿ ವಿಜಯಸಿಂಹನೊಡನೆ ಕಾದಿ ಅವನನ್ನು ಕೊಂದರು. ಅಶನಿವೇಗನು ತನ್ನ ಮಗನ ಸಾವನ್ನು ಕೇಳಿ ವ್ಯಸನದಿಂದಲೂ ಕೋಪದಿಂದಲೂ ಗಗನಮಾರ್ಗದಲ್ಲಿ ಬಂದು ಕಿಷ್ಕಿಂಧಪುರವನ್ನು ಮುತ್ತಿ ಅಂಧ್ರಕನನ್ನು ಕೊಲ್ಲಲು ಕಿಷ್ಕಿಂಧ ಸುಕೇಶರು ಬಹಳ ಭಯಪಟ್ಟು ಪಾತಾಳ ಲಂಕೆಯನ್ನು ಸೇರಿದರು. ಅಶನಿವೇಗನು ಸುಕೇಶನ ರಾಜಧಾನಿಯಾದ ಲಂಕೆ ಯನ್ನು ನಿರ್ಘಾತನೆಂಬುವನಿಗೆ ಕೊಟ್ಟು ತನ್ನ ರಾಜಧಾನಿಗೆ ಹೋಗಿ, ಸಾಮ್ರಾಜ್ಯ ತೃಷ್ಣೆಯು ಕರಗಿಹೋಗಲು, ತನ್ನ ಮಗನಾದ ಸಹಸ್ರಾರನಿಗೆ ಪಟ್ಟವನ್ನು ಕಟ್ಟಿ ಜಿನೇಂದ್ರಮುನಿ ರೂಪವನ್ನು ತಾಳಿದನು.

ಇತ್ತ, ಕಿಷ್ಕಿಂಧನು ಮಧುಪರ್ವತದ ಮೇಲೆ ಪುರವನ್ನು ಕಟ್ಟಿ ಶ್ರೀಮಾಲೆ ಯೊಡನೆ ಸುಖದಿಂದಿರುತ್ತ ಋಕ್ಷಜ ಸೂರ್ಯಜರೆಂಬ ಗಂಡುಮಕ್ಕಳನ್ನೂ ಸೂರ್ಯ ಮಾಲೆಯೆಂಬ ಮಗಳನ್ನೂ ಪಡೆದನು. ಆಕೆಯನ್ನು ಮೇಘಪುರದೊಡೆಯನಾದ ಮೇರುವಿನ ಮಗನಾದ ಸಿಂಹಮರ್ದನನು ಮದುವೆಮಾಡಿಕೊಂಡು ಕರ್ಣಪರ್ವತ ದಲ್ಲಿ ಕರ್ಣಕುಂಡಲವೆಂಬ ಪುರವನ್ನು ಕಟ್ಟಿಕೊಂಡು ಸುಖವಾಗಿದ್ದನು. ಸುಕೇಶನಿಗೆ ಮಾಲಿಸುಮಾಲಿ ಮಾಲ್ಯವಂತರೆಂಬ ಮಕ್ಕಳು ಹುಟ್ಟಿ ಪ್ರಾಪ್ತವಯಸ್ಕರಾಗಿ ಸಕಲ ವಿದ್ಯೆಗಳನ್ನೂ ಸಾಧಿಸಿ ಅವಾರ್ಯವೀರ್ಯರಾದುದರಿಂದ ಮೆಚ್ಚಿದ ದೆಸೆಯಲ್ಲಿ ಮೆಚ್ಚಿದಂತೆ ಕ್ರೀಡಿಸುತ್ತಿರಲು ಸುಕೇಶನು ಅವರನ್ನು ಕರೆದು ದಕ್ಷಿಣಸಮುದ್ರಕ್ಕೆ ಹೊಗಬೇಡಿ ರೆನ್ನಲು ಅವರು ಅದಕ್ಕೆ ಕಾರಣವೇನೆಂದು ಕೇಳಿದರು. ಅದಕ್ಕೆ ಸುಕೇಶನು ತೋಯದವಾಹನನಿಂದ ಅನ್ವಯಾಗತವಾಗಿ ತಮಗೆ ಬಂದ ಲಂಕಾಪುರವನ್ನು ಅಶನಿವೇಗನು ಕಿತ್ತುಕೊಂಡು ನಿರ್ಘಾತನಿಗೆ ಕೊಟ್ಟನೆಂದೂ ಅವನು ಅನೇಕ ವಿದ್ಯೆಗಳಿಂದ ಅದನ್ನು ಪುಗಲು ಯಾರಿಗೂ ಸಾಧ್ಯವಾಗದಂತೆ ಕಾಪುಮಾಡಿ ಬಲಿಷ್ಠನಾಗಿರುವನೆಂದೂ ಅವನು ಅವರನ್ನು ಕಂಡರೆ ಕೊಲ್ಲುವನೆಂದೂ ಎಚ್ಚರಿಕೆ ಹೇಳಿದೆನೆಂದು ತಿಳಿಸಿದನು. ಅದಕ್ಕೆ ಅವರು ಕೋಪಗೊಂಡು ಅಸಂಖ್ಯಾತ ಬಲ ಸಮೇತರಾಗಿ ಹೊರಟು ಆಕಾಶಮಾರ್ಗದಿಂದ ಬಂದು ಲಂಕೆಯನ್ನು ಮುತ್ತಿ ನಿರ್ಘಾತನನ್ನು ಕೊಂದು ಲಂಕಾಪುರವನ್ನು ಸ್ವಾಧೀನಪಡಿಸಿಕೊಂಡು ತಾಯಿತಂದೆ ಗಳನ್ನು ಅಲ್ಲಿಗೆ ಕರೆತರಿಸಿ ಸುಖದಿಂದಿದ್ದರು. ಹೀಗೆ ಕೆಲವು ಕಾಲವು ಕಳೆಯಲು ಸುಕೇಶನು ಮಕ್ಕಳಿಗೆ ರಾಜ್ಯವನ್ನಿತ್ತು ಕಿಷ್ಕಿಂಧನೊಡಗೂಡಿ ತಪಸ್ಥನಾದನು.

ಅತ್ತ, ರಥನೂಪುರಚಕ್ರವಾಳಪುರವನ್ನಾಳುವ ಸಹಸ್ರಾರನ ಪಟ್ಟದರಸಿಗೆ ಎಳವಸಿರಿನಲ್ಲಿ ಇಂದ್ರನ ವಿಭೂತಿಯನ್ನು ನೋಡುವ ಬಯಕೆ ಹುಟ್ಟಲು ಸಹಸ್ರಾರ

ನು ವಿದ್ಯೆಯಿಂದ ಆ ವಿಭೂತಿಯನ್ನು ತೋರಿಸಿ ಬಯಕೆಯನ್ನು ತೀರಿಸಲು ನವ ಮಾಸ ಪೂರ್ತಿಯಾದ ಮೇಲೆ ಆಕೆಯು ಗಂಡು ಮಗನನ್ನು ಹೆತ್ತಳು. ಆ ಕೂಸಿಗೆ ಸಹಸ್ರಾರನು ತಾಯಿಯ ಬಯಕೆಯ ಕಾರಣದಿಂದ ಇಂದ್ರನೆಂದು ನಾಮಕರಣ ಮಾಡಿದನು. ಆ ಹುಡುಗನು ಕಾಲಕ್ರಮವಾಗಿ ಬೆಳೆದು ಸಕಲ ವಿದ್ಯೆಗಳನ್ನೂ ಕಲಿತು ಬಹಳ ಪರಾಕ್ರಮಿಯಾಗಿ ಸಕಲಚಕ್ರವರ್ತಿ ಪದವನ್ನು ಪಡೆದು ತನ್ನ ಪಟ್ಟಣವನ್ನು ಸ್ವರ್ಗವೆಂದೂ, ತನ್ನ ಖಚರ ಕಾಂತೆಯರನ್ನು ರಂಭೆ ಊರ್ವಶಿ ಮೊದಲಾದ ದೇವಕಾಂತೆಯರೆಂದೂ, ತನ್ನ ವಾರಣವನ್ನು ಐರಾವಣವೆಂದೂ, ತನ್ನ ಮಂತ್ರಿಮುಖ್ಯನನ್ನು ಬೃಹಸ್ಪತಿಯೆಂದೂ ಮೊದಲಾಗಿ ಕರೆದು ತಾನೇ ಇಂದ್ರನೆಂದು ಭಾವಿಸಿ ಸುಖವನ್ನನುಭವಿಸುತ್ತಿದ್ದನು.

ಇತ್ತ, ಮಾಲಿಗೆ ಕಪ್ಪವನ್ನು ಕೊಡುತ್ತಿದ್ದ ಖಚರರು ಇಂದ್ರನನ್ನು ಹೊಂದಿ ಮಾಲಿಯನ್ನು ತಿರಸ್ಕರಿಸಲು ಆತನು ಬಹಳ ಕೋಪಗೊಂಡು ಇಂದ್ರನನ್ನು ನಿರ್ಮೂಲಮಾಡುವುದಕ್ಕಾಗಿ ಸುಮಾಲಿ ಮಾಲ್ಯವಂತ ಋಕ್ಷಜ ಸೂರ್ಯಜ ರೊಡಗೂಡಿ ಅಸಂಖ್ಯಾತ ಸೇನಾಸಮೇತನಾಗಿ ಬರುವುದನ್ನು ಕೇಳಿ ಇಂದ್ರನು ಅವರನ್ನಡ್ಡಗಟ್ಟಿ ಮಹಾಯುದ್ಧವನ್ನು ಮಾಡಿ ಮಾಲಿಯನ್ನು ಕೊಂದನು; ಮಿಕ್ಕವರು ಓಡಿಹೋಗಿ ಪಾತಾಳಲಂಕೆಯನ್ನು ಸೇರಿದರು. ಇಂದ್ರನು ತನ್ನ ಪಟ್ಟಣಕ್ಕೆ ಬಂದು ಲಂಕೆಯನ್ನು ವೈಶ್ರವಣನಿಗೂ ಕಿಷ್ಕಿಂಧಪುರವನ್ನು ಯಮಧರನಿಗೂ ಕೊಟ್ಟು ತಾನು ಇಂದ್ರನಂತೆ ಸುಖವಾಗಿದ್ದನು.

ಪಾತಾಳಲಂಕೆಯಲ್ಲಿ ಸುಮಾಲಿಗೆ ಜಗದ್ವಿಖ್ಯಾತನಾಗುವ ರತ್ನಶ್ರವನೆಂಬ ಮಗನು ಹುಟ್ಟಿದನು. ಆತನು ಅತಿ ಪ್ರಖ್ಯಾತನಾಗಿ ವಿದ್ಯೆಗಳನ್ನು ಸಾಧಿಸಿ ಸಿದ್ಧ ಪರಮೇಷ್ಠಿಗಳನ್ನು ಸ್ತುತಿಸುತ್ತಿದ್ದಕಾಲದಲ್ಲಿ ವ್ಯೋಮಭಾನುವೆಂಬ ವಿಯಚ್ಚರನು ತನ್ನ ಮಗಳಾದ ಕೈಕಸಿಯೆಂಬ ಕನ್ಯಾರತ್ನವನ್ನು ದಿವ್ಯಮುನಿಮುಖ್ಯರ ಆದೇಶದಿಂದ ಆತನಿಗೆ ಕೊಡಲು, ಅಲ್ಲಿಯೇ ವಿದ್ಯೆಯಿಂದ ಪುಷ್ಪೋತ್ತರವೆಂಬ ಪುರವನ್ನು ಮಾಡಿಸಿ ತಾಯಿ ತಂದೆಗಳನ್ನು ಅಲ್ಲಿಗೆ ಬರಿಸಿ ಶುಭ ಮುಹೂರ್ತದಲ್ಲಿ ಕೈಕಸಿಯನ್ನು ಮದುವೆನಿಂದು ನಿರಂತರೋತ್ಸವದಲ್ಲಿದ್ದನು. ಕೈಕಸಿಯು ಕಾಲಕ್ರಮದಲ್ಲಿ ಗರ್ಭವನ್ನು ಧರಿಸಿ ಬಹು ಪರಾಕ್ರಮಿಯಾಗುವ ಮಗನನ್ನು ಹೆತ್ತಳು. ಹತ್ತನೆಯ ದಿನ ಭೀಮನೆಂಬ ರಾಕ್ಷಸನು ಕೊಟ್ಟ ನವಮುಖ ರತ್ನ ಭೂಷಣದ ಮಾಣಿಕಗಳಲ್ಲಿ ಕೂಸಿನ ಮುಖವು ಪ್ರತಿಬಿಂಬಿಸಲು ಆ ಮಗುವಿಗೆ ದಶಮುಖನೆಂಬ ಹೆಸರನ್ನಿಟ್ಟರು. ಕೈಕಸಿಯು ಅನುಕ್ರಮವಾಗಿ ಭಾನುಕರ್ಣ ಚಂದ್ರನಖಿ ವಿಭೀಷಣರೆಂಬ ಮೂವರು ಮಕ್ಕಳನ್ನು ಹೆತ್ತಳು. ಮೂವರು ಗಂಡುಮಕ್ಕಳೂ ಬಾಲ್ಯವನ್ನತಿಕ್ರಮಿಸಿ ಪ್ರಭುಮಂತ್ರೋತ್ಸಾಹ ಶಕ್ತಿತ್ರಯವೇ ಮೂರ್ತಿಗೊಂಡಂತೆ ಅಖಿಲ ಶಾಸ್ತ್ರ ಪಾರಂಗತರಾದರು.

ಒಂದು ದಿನ ಈ ಮೂವರೂ ಆಸ್ಥಾನದಲ್ಲಿ ನಾಯಕ ರತ್ನಗಳಂತಿರುವಾಗ, ವೈಶ್ರವಣನು ಒಹಳ ವೈಭವದಿಂದ ತೃಣೀಕೃತ ತ್ರಿಭುವನನಾಗಿ ಆಕಾಶದಲ್ಲಿ ಹೋಗುತ್ತಿರಲು, ಇಷ್ಟು ವೈಭವದಿಂದ ಹೋಗುತ್ತಿರುವನಾರೆಂದು ದಶಗ್ರೀವನು ಕೇಳಿದುದಕ್ಕೆ ಕೈಕಸಿಯು, "ಈತನು ನಮ್ಮ ಅಕ್ಕನ ಮಗನಾದ ವೈಶ್ರವಣನು, ಉಭಯ ಶ್ರೇಣಿಗರಸನಪ್ಪ ಇಂದ್ರನೆಂಬ ವಿದ್ಯಾಧರ ಚಕ್ರವರ್ತಿಯು ನಿಮ್ಮ ಹಿರಿಯ ಮುತ್ತಪ್ಪನಾದ ಮಾಲಿಯನ್ನು ಕೊಂದು ನನ್ನ ವಂಶಕ್ಕೆ ಬಂದ ಲಂಕೆಯನ್ನು ವೈಶ್ರವಣನಿಗೆ ಕೊಡಲು, ಇವನು ಅದನ್ನಾಳುತ್ತಿರುವನು. ನಾವು ಇವನಿಗೆ ಭೀತರಾಗಿರುವೆವು" ಎಂದು ಹೇಳಿ ವ್ಯಸನಪಡಲು, "ದಶವದನನು ನಿಮ್ಮ ಹಗೆಯನ್ನು ತೀರಿಸಿ ನಿಮಗೆ ಸಂತೋಷಮಾಡುವನು" ಎಂದು ಹೇಳಿ ವಿಭೀಷಣನು, ಅವರವರೆಗೂ ತಮ್ಮ ಕುಲಕ್ಕೆ ತಕ್ಕ ವಿದ್ಯೆಗಳನ್ನು ಸಾಧಿಸುವೆವೆಂದು ತಾಯಿಗೆ ಬಿನ್ನವಿಸಿ, ಶುಭ ದಿನ ಮುಹೂರ್ತದಲ್ಲಿ ತಾಯಿತಂದೆಗಳಿಗೆರಗಿ ಅಪ್ಪಣೆಪಡೆದು ಮೂವರೂ ಅತ್ಯದ್ಭುತವಾದ ಅರಣ್ಯವನ್ನು ಹೊಕ್ಕು ದಶಕೋಟಿ ಮಂತ್ರದಲ್ಲಿ ಕೂಡಿದ ಷೋಡಶಾಕ್ಷರ ಮಹಾವಿದ್ಯೆಯನ್ನು ಸಾಧಿಸುವುದಕ್ಕಾಗಿ ತಪಸ್ಸಿಗೆ ನಿಂತರು. ಇದನ್ನು ಕಂಡು ಜಂಬೂದ್ವೀಪಾಧಿಪತಿಯಾದ ಅನಾದೃತನೆಂಬ ದೇವನು ಅವರ ವಿದ್ಯಾಸಾಧನೆಗೆ ವಿಘ್ನಹೇತುಗಳಾದ ಅನೇಕ ತೊಂದರೆಗಳನ್ನು ಮಾಡಿದರೂ ಅವರು ಮಂದರಪರ್ವತದಂತೆ ಅಚಲಿತ ಧೈರ್ಯರಾಗಿದ್ದು ವಿದ್ಯೆಗಳನ್ನು ಸಾಧಿಸಿ ಪಂಚಪರಮೇಷ್ಠಿಗಳನ್ನು ಪೂಜಿಸಿದರು. ರಾವಣನು ಚಂದ್ರಹಾಸವನ್ನು ಸಾಧಿಸಿ ವಿದ್ಯೆಯಿಂದ ಸ್ವಯಂಪ್ರಭವೆಂಬ ಪಟ್ಟಣವನ್ನು ಮಾಡಿ ತನ್ನ ಬಂಧುಜನರನ್ನೂ ಪರಿಜನರನ್ನೂ ಬರಿಸಿ ಸುಖದಿಂದಿದ್ದನು.

ಹೀಗಿರುವಲ್ಲಿ, ಸುರಸಂಗೀತಕ ಪುರದರಸನಾದ ಘಯನು ತನ್ನ ಮಗಳಾದ ಮಂಡೋದರಿಯನ್ನು ನೈಮಿತ್ತಕರ ಅನುಜ್ಞೆಯಿಂದ ಸ್ವಯಂಪ್ರಭನಗರಕ್ಕೆ ಕರೆತಂದು ರಾವಣನಿಗೆ ಮದುವೆಮಾಡಿಕೊಟ್ಟನು. ರಾವಣನು ವಿಹಾರಾರ್ಥವಾಗಿ ಹೋಗುತ್ತ ಸುರಸುಂದರನೆಂಬ ದೊರೆಯ ಮಕ್ಕಳಾದ ಐನೂರು ಮಂದಿ ಬಾಲೆಯರು ಒಂದು ಕಮಲ ಸರೋವರದಲ್ಲಿ ನೀರಾಟವಾಡುತ್ತಿರುವುದನ್ನು ಕಂಡು ಅವರನ್ನು ಮೋಹಿಸಲು, ಮೇಲೆತ್ತಿಬಂದ ಅವರ ತಂದೆಯನ್ನು ಸೋಲಿಸಿ ಆ ದೊರೆಯ ಅನುಮತಿಯಿಂದ ಅವರನ್ನು ಮದುವೆಯಾಗಿ ತನ್ನ ಪಟ್ಟಣಕ್ಕೆ ಬಂದನು. ತರುವಾಯ ಭಾನುಕರ್ಣನಿಗೆ ಕುಂಭಪುರದ ಮಹೋದರನ ಮಗಳಾದ ವಿದ್ಯುದ್ವೇಗೆಯನ್ನು ಮದುವೆಮಾಡಿದನು. ಆತನು ಆಕೆಯೊಡನೆ ಬಹಳ ಪ್ರೀತಿಯಿಂದಿರುತ್ತ ಕುಂಭಪುರದ ಮಾತುಗಳನ್ನು ಯಾವಾಗಲೂ ಮೆಚ್ಚಿ ಕೇಳುತಿದ್ದುದರಿಂದ ಆತನಿಗೆ ಕುಂಭಕರ್ಣನೆಂಬ ಹೆಸರಾಯಿತು. ವಿಭೀಷಣನಿಗೆ ಜ್ಯೋತಿಃಪ್ರಭ ಪುರವನ್ನಾಳುವ ಶುದ್ಧ ಕಮಲನ ಮಗಳಾದ ರಾಜೀವಸರಸೆಯನ್ನು ಕೊಟ್ಟು ಮದುವೆಯಾಯಿತು. ಮಂಡೋ

ದರಿಯು ಮೊದಲು ಇಂದಗಿಯನ್ನೂ ಬಳಿಕ ಮೇಘವಾಹನನನ್ನೂ ಶತ್ರುಂದಮ ನನ್ನೂ ಹೆತ್ತಳು.

ತನ್ನ ಪಿತಾಮಹನಾದ ಮಾಲಿಯನ್ನು ಕೊಂದು ತಮಗೆ ಅನ್ವಯಾಗತ ವಾಗಿ ಬಂದ ಲಂಕೆಯನ್ನು ಕಿತ್ತುಕೊಂಡವನನ್ನಿಕ್ಕಿದ ಹೊರತು ತನ್ನ ಬಾಹುವೀರ್ಯಕ್ಕೆ ಸಾರ್ಥಕ್ಯ ಉಂಟಾಗಲಾರದೆಂದೆಣಿಸಿ ದಶಾನನನು ಮುಳಿದು ಲಂಕೆಯನ್ನು ಮುತ್ತಿ ಕಾದಿ ವೈಶ್ರವಣನನ್ನು ಮೂರ್ಛಿಹೊಂದುವಂತೆ ಹೊಡೆದು ತನ್ನ ಪಟ್ಟಣಕ್ಕೆ ಹಿಂದಿರು ಗಿದನು. ವೈಶ್ರವಣನು ಮೂರ್ಛೆತಿಳಿದು, ಸೋತುಹೋದುದರಿಂದ ವೈರಾಗ್ಯಪರ ನಾಗಿ, ಜೈನದೀಕ್ಷೆಯನ್ನು ಕೈಕೊಂಡನು. ರಾವಣನು ಸಕಲ ರಾಜರನ್ನೂ ಸೋಲಿಸಿ ಕಪ್ಪವನ್ನು ಪಡೆದು ಕೈಲಾಸ ನಗದ ಸಮೀಪ್ಯದ ಗಿರಿಯ ನಡುವಣ ಸುರದಾರು ವನೋಪಕಂಠದಲ್ಲಿ ಬೀಡನ್ನು ಬಿಟ್ಟಿರಲು ಅಲ್ಲಿಗೆ ವಾನರಧ್ವಜಾನುಚರನೊಬ್ಬನು ಬಂದು "ದೇವ! ಸೂರ್ಯಜನೂ ಋಕ್ಷಜನೂ ನಿನಾನ್ಯಜ್ಞೆಯನ್ನು ಪಡೆದು ಪಾತಾಳಲಂಕೆ ಯಿಂದ ಹೊರಟು ನಿಜಾನ್ವಯಾಗತವಾದ ಕಿಷ್ಕಿಂಧಪುರವನ್ನು ಕೊಳ್ಳಲೆಂದು ಮುತ್ತಿ ಕಾದುತ್ತಿರುವಲ್ಲಿ ಯಮರಾಜನು ಋಕ್ಷಜನನ್ನು ಸೆರೆಪಿಡಿದು ಸೂರ್ಯಜ ನನ್ನು ಗಾಯಪಡಿಸಿದನು" ಎಂದು ಪೇಳಲು ದಶವದನನು ಅದನ್ನು ಕೇಳಿ ಸೈರಿಸದೆ ಕಿಷ್ಕಿಂಧಪುರಕ್ಕೆ ಹೋಗಿ ಅದನ್ನು ಮುತ್ತಿ ಯಮನನ್ನು ಸೋಲಿಸಲು ಅವನು ಅಂಜಿ ತನ್ನ ಪತಿಯಾದ ಇಂದ್ರನನ್ನು ಕಂಡು ದಶಮುಖನ ಪರಾಕ್ರಮವನ್ನು ತಿಳಿಸಿದನು. ಅದಕ್ಕೆ ಅವನು ದಶವದನನ ಮೇಲೆ ದಂಡೆತ್ತಿಬರಬೇಕೆಂದಿರುವಲ್ಲಿ ಅವನ ಮಂತ್ರಿಮುಖ್ಯರು ಬೇಡವೆಂದು ಅವನನ್ನೊಡಂಬಡಿಸಲು ಯಮನಿಗೆ ಸುರ ಸಂಗೀತಕಪುರವನ್ನು ಕೊಟ್ಟು ವಿಷಯಾಸಕ್ತನಾಗಿ ಮೈಮರೆದಿದ್ದನು. ದಶಮುಖನು ಋಕ್ಷಜ ಸೂರ್ಯಜರಿಗೆ ಕಿಷ್ಕಿಂಧಪುರವನ್ನು ಕೊಟ್ಟು ತಾಯಿ ತಂದೆ ಅಜ್ಜಂದಿ ರೊಡನೆ ಪುಷ್ಪಕ ವಿಮಾನಾರೂಢನಾಗಿ ನಿಜಾನ್ವಯಾಗತವಾದ ಲಂಕೆಯನ್ನು ಮಹಾವೈಭವದಿಂದ ಹೊಕ್ಕು ಸುಖದಿಂದಿದ್ದನು.

ಹೀಗಿರುವಲ್ಲಿ, ಸೂರ್ಯಜನ ಅರಸಿಯು ಲೋಕೋತ್ತರೆನಿಸುವ ವಾಲಿ ಸುಗ್ರೀವರನ್ನೂ ಶ್ರೀಪ್ರಭೆಯನ್ನೂ ಋಕ್ಷಜನ ಅರಸಿಯು ನಳ ನೀಲರನ್ನೂ ಯಥಾ ಕ್ರಮವಾಗಿ ಪಡೆದರು. ಕೆಲವು ಕಾಲ ಕಳೆದಮೇಲೆ ವಾಲಿ ಸುಗ್ರೀವರನು ಆಧಿರಾಜ ಯುವರಾಜ ಪದವಿಯಲ್ಲಿ ನಿಲ್ಲಿಸಿ ಸೂರ್ಯಜನು ದೀಕ್ಷೆಗೊಂಡನು. ಇತ್ತ, ದಶಶಿರನು ಲಂಕೆಯಲ್ಲಿಲ್ಲದ ಸಮಯದಲ್ಲಿ ಖರನು ಲಂಕಾಪುರವನ್ನು ಹೊಕ್ಕು ಚಂದ್ರನಖಿಯನ್ನು ಕದ್ದುಕೊಂಡು ಹೋಗಿ, ರಾವಣನಿಗವಿಧೇಯನಾಗಿದ್ದ ಚಂದ್ರೋ ದರನನ್ನು ಕೊಂದು ಪಾತಾಳಲಂಕೆಯನ್ನು ಸ್ವಾಧೀನ ಮಾಡಿಕೊಂಡು ಸುಖ ದಿಂದಿದ್ದನು. ರಾವಣನು ಲಂಕೆಗೆ ಬಂದು, ತನ್ನ ಭಯವು ಸ್ವಲ್ಪವೂ ಇಲ್ಲದೆ ತನ್ನ ತಂಗಿಯನ್ನು ಕದ್ದುಕೊಂಡು ಹೋದುದಕ್ಕಾಗಿ ಬಹಳ ಕೋಪಗೊಂಡು,

ಖರನಿಗೆ ತಕ್ಕದ್ದನ್ನು ಮಾಡುವೆನೆಂದು ಗರ್ಜಿಸಲು ಮಂಡೋದರಿಯು ಅವನನ್ನು ಸಮಾಧಾನಮಾಡಿ ಖರನು ರಾವಣನಿಗವಿಧೇಯನಾಗಿದ್ದ ಚಂದ್ರೋದರನನ್ನು ಕೊಂದಿರುವನೆಂದೂ ಅಂಥವನನ್ನು ಕೊಂದು ತಂಗಿಯನ್ನು ವಿಧವೆಯನ್ನಾಗಿ ಮಾಡುವುದು ಸರಿಯಲ್ಲವೆಂದೂ ಹೇಳಲು ರಾವಣನು ಅದಕ್ಕೊಪ್ಪಿ ಸುಮ್ಮನಾದನು. ಗರ್ಭಿಣಿಯಾಗಿದ್ದ ಚಂದ್ರೋದರನ ಪತ್ನಿಯಾದ ಅನುರಾಧೆಯು ಗಂಡು ಮಗುವನ್ನು ಹೆತ್ತು, ಇವನು ಗರ್ಭದೊಳಿರುವಾಗ ಹಗೆಗಳಿಂದ ತೊಂದರೆ ಪಟ್ಟದ್ದಕ್ಕಾಗಿ ಅವನಿಗೆ ವಿರಾಧಿತನೆಂದು ಹೆಸರಿಟ್ಟಳು. ಅವನು ಅನುಕ್ರಮವಾಗಿ ಬಳೆದು ಹಗೆಯನ್ನು ಸಾಧಿಸುವ ಉಪಾಯವನ್ನು ಮಾಡುತ್ತಿದ್ದನು.

ಜಿನಾಗಮ ಕೋವಿದನಾದ ವಾಲಿಯು ಜೈನಮುನಿಗಲ್ಲದೆ ಮತ್ತೊಬ್ಬರಿಗೆ ಕೈಮುಗಿಯೆನೆಂದು ನಿಯಮಸ್ಥನಾಗಿ ಸುಖದಿಂದಿರುವಲ್ಲಿ, ಒಂದು ದಿನ ಆತನ ತಂಗಿಯಾದ ಶ್ರೀಪ್ರಭೆಯನ್ನು ತನಗೆ ಮದುವೆ ಮಾಡಿಕೊಡುವಂತೆ ರಾವಣನು ಓಲೆಯನ್ನು ಬರೆದು ಕಳುಹಿಸಿದನು. ಇದನ್ನು ನೋಡಿ ವಾಲಿಯು ಸುಗ್ರೀವನೊಡಗೂಡಿ ಮಂತ್ರಶಾಲೆಯನ್ನು ಹೊಕ್ಕು ಮಂತ್ರಿಮಂಡಲವನ್ನೂ ಆಪ್ತಜನರನ್ನೂ ಬರಿಸಿ ದುರ್ಮಾರ್ಗಿಯೂ ಮದಾಂಧನೂ ಆದ ರಾವಣನಿಗೆ ತಂಗಿಯನ್ನು ಕೊಟ್ಟರೆ ಇಹದಲ್ಲಿ ಕೇಡೂ ಪರದಲ್ಲಿ ಪಾತಕವೂ ಉಂಟಾಗುವುದೆಂದು ಹೇಳಿ ಅವನಿಗೆ ಕೂಸನ್ನು ಕೊಟ್ಟಲ್ಲಿ ಅವನಿಗೆ ನಮಸ್ಕಾರ ಮಾಡಬೇಕಾಗುವುದೆಂದೂ, ಹಾಗೆ ಮಾಡಿದಲ್ಲಿ ತನ್ನ ವ್ರತವು ಕೆಡುವುದೆಂದೂ, ಕೊಡದೆ ಯುದ್ಧಕ್ಕೆ ನಿಂತಲ್ಲಿ ಬಹು ಕಾಲದಿಂದ ಬಂದ ರಾಕ್ಷಸ ವಾನರ ವಂಶಗಳ ಸ್ನೇಹವು ತನ್ನಿಂದ ನಾಶವಾಗುವುದೆಂದೂ ನಾನಾ ವಿಧವಾಗಿ ಆಲೋಚನೆ ಮಾಡಿ ಪಾಪಕ್ಕೂ ನಿಂದೆಗೂ ಎಡೆಗೊಡದ ತಪಸ್ಸನ್ನು ಮಾಡುವುದಕ್ಕೆ ನಿಂತಲ್ಲಿ ತನ್ನ ಕುಲವೂ ಚಲವೂ ವ್ರತವೂ ಕೆಡದೆ ನಡೆಯುವುವೆಂದು ನಿಶ್ಚಯಿಸಿ ಸುಗ್ರೀವನಿಗೆ ರಾಜ್ಯವನ್ನು ಕೊಟ್ಟು ತಪಸ್ಸಿಗೆ ಹೋದನು. ಸುಗ್ರೀವನು ತಂಗಿಯನ್ನು ರಾವಣನಿಗೆ ಪಾಣಿಗ್ರಹಣ ಮಾಡಿಕೊಟ್ಟು ಸುಖದಿಂದಿದ್ದನು.

ರಾವಣನು ನಿತ್ಯಾಲೋಕನೆಂಬ ವಿದ್ಯಾಧರನ ಮಗಳಾದ ರತ್ನಾವಳಿಯನ್ನು ಮದುವೆ ಮಾಡಿಕೊಂಡು ಹಿಂದಕ್ಕೆ ಬರುತ್ತಿದ್ದ ಸಮಯದಲ್ಲಿ ಕೈಲಾಸದ ಮೇಲಣ ತಪ್ಪಲಲ್ಲಿದ್ದ ಮಹಾಮುನಿಯಮೇಲೆ ತನ್ನ ವಿಮಾನವು ನಡೆಯದೆ ನಿಲ್ಲಲು ವಿಸ್ಮಯ ಪಟ್ಟು, ಅವಲೋಕಿನೀ ವಿದ್ಯೆಯಿಂದ ವಾಲಿದೇವನೆಂದರಿತು, ತನ್ನಮೇಲಣ ಮುನಿಸಿನಿಂದ ತನ್ನ ವಿಮಾನವನ್ನು ಹಾಗೆ ನಿಲ್ಲಿಸಿದನೆಂದು ತಿಳಿದು, ಆ ಪರ್ವತವನ್ನು ಕಿತ್ತು ತೆಗೆದುಕೊಂಡು ಹೋಗಿ ಸಮುದ್ರದಲ್ಲಿ ಹಾಕುವೆನೆಂದಾಲೋಚಿಸಿ ವಿಮಾನದಿಂದ ಭೂಮಿಗೆ ಬಂದು ರಸಾತಳಕ್ಕಿಳಿದು ಆ ನಗದ ಬುಡವನ್ನು ಸೇರಿ ಸಾವಿರ ವಿದ್ಯೆಗಳಿಂದಲೂ ವಿಕುರ್ವಿಸಿದ ಅನೇಕ ಭುಜಗಳಿಂದಲೂ ಕೈಲಾಸವನ್ನೆತ್ತಲು

ವಾಲಿಮುನಿಯು ತನ್ನ ಅಂಗುಷ್ಠದಿಂದ ಅದನ್ನೊತ್ತಿದನು. ರಾವಣನು ಬೆಟ್ಟದ ಕೆಳಗೆ ಸಿಕ್ಕಿ ಅಳುವುದಕ್ಕೆ ಮೊದಲುಮಾಡಲು ಮಂಡೋದರಿಯು ಪರಿಜನರೊಡನೆ ಅಲ್ಲಿಗೆ ಬಂದು ರಕ್ಷಿಸೆಂದು ಮುನಿಯನ್ನು ಬೇಡಿಕೊಂಡಳು. ದಶಮುಖನು ಅಳುವ ಈ ದನಿಯೇ ರಾವಣನೆಂಬ ಹೆಸರಿಗೆ ಕಾರಣವಾಯಿತು. ಮಂಡೋದರಿಯ ಅಭೀಷ್ಟವನ್ನು ಸಲ್ಲಿಸಿ ವಾಲಿಯು ತನ್ನ ಅಂಗುಷ್ಠವನ್ನು ಮೇಲಕ್ಕೆತ್ತಲು ರಾವಣನು ರಸಾತಲದಿಂದ ಹೊರಟು ಬಂದು ವಾಲಿಭಟ್ಟಾರಕರನ್ನು ಪೂಜಿಸಿ ನಮಸ್ಕರಿಸಿ ತನ್ನ ತಪ್ಪನ್ನು ಮನ್ನಿಸಬೇಕೆಂದು ಬೇಡಿಕೊಂಡು ಅಲ್ಲಿಯ ಜಿನಾಲಯವನ್ನು ಹೊಕ್ಕು ನಿರ್ಭರ ಭಕ್ತಿಯಿಂದ ದೇವನನ್ನು ಅರ್ಚಿಸುತ್ತಿರುವಲ್ಲಿ ಆದಿಶೇಷನಿಗೆ ಆಸನಕಂಪವಾಗಲು ಅವನು ಕೈಲಾಸನಗಕ್ಕೆ ಬಂದು ರಾವಣನ ದೈವಭಕ್ತಿಗೆ ಮೆಚ್ಚಿ ಸಮಸ್ತ ದೇವಾಸುರ ಮುಖ್ಯನಾಯಕರಿಗೆ ಜೀವ ವಿಮುಕ್ತಿಯನ್ನೀವ ಶಕ್ತಿಯನ್ನಿತ್ತು ಹೊರಟುಹೋದನು. ವಾಲಿಮುನಿಯು ಶುಕ್ಲಧ್ಯಾನಾಯತ್ತನಾಗಿ ಮುಕ್ತಿಯನ್ನು ಪಡೆದನು.

ಇತ್ತ, ರಾವಣನು ನಂದ್ಯಕಾ ಸುವೇಲಾದಿ ದ್ವೀಪಗಳನ್ನಾಳುವ ಮಹಾಬಲ ವಿಜ್ಞಾನಧರರನ್ನು ಬಾಯ್ಕೇಳಿಸಿ ಆಪ್ತಜನ ಪರಿಜನರಿಂದೊಡಗೂಡಿ ಉತ್ತರಾಭಿಮುಖವಾಗಿ ಇಂದ್ರನ ಮೇಲೆ ದಂಡೆತ್ತಿ ಹೊರಟು ರೈವತ ನದೀತೀರದಲ್ಲಿ ಬೀಡನ್ನು ಬಿಟ್ಟು ಆ ತೊರೆಯ ಮಳಲಿನ ಪ್ರದೇಶದಲ್ಲಿ ರತ್ನಮಂಟಪವನ್ನೆತ್ತಿಸಿ ಸಿಂಹಾಸನದ ಮೇಲೆ ಮಣಿಮಯ ಜಿನಪ್ರತಿಮೆಯನ್ನು ಪ್ರತಿಷ್ಠೆಮಾಡಿ ಪೂಜಿಸುತ್ತಿದ್ದನು. ಆಗ ಹೊಳೆಯು ತುಂಬಿ ಭೋಂಕನೆ ಪ್ರವಾಹ ಬರಲು ರಾವಣನು ಸಂಭ್ರಮಾಕುಲನಾಗಿ ಆಕಾಶಕ್ಕೆ ನೆಗೆದು ಕಾಲವಲ್ಲದ ಕಾಲದಲ್ಲಿ ಪ್ರವಾಹ ಬಂದ ಕಾರಣವೇನೆಂದರಿಯುವುದಕ್ಕಾಗಿ ದೂತನನ್ನಟ್ಟಿದನು. ಅವನು ತಿಳಿದುಕೊಂಡು ಬಂದು ಮಾಹಿಷ್ಮತೀಪುರದೊಡೆಯನಾದ ಸಹಸ್ರಬಾಹುವು ಆ ತೊರೆಯನ್ನು ಜಂತ್ರಗಳಿಂದ ಕಟ್ಟಿ ತನ್ನ ಅಂತಃಪುರ ಸ್ತ್ರೀಯರೊಡನೆ ನೀರಾಟವಾಡಿ ಜಂತ್ರಗಳನ್ನು ಕಳೆಯಲು ಹೊಳೆಯು ಆ ತೆರನಾಗಿ ಬಂದಿತೆಂದು ತಿಳಿಸಿದನು. ಅದಕ್ಕೆ ರಾವಣನು ಮುನಿದು ತನ್ನ ಪಟ್ಟದಾನೆಯನ್ನೇರಿ ಹೊರಟು ಸಹಸ್ರಬಾಹುವನ್ನು ಸೆರೆಹಿಡಿದು ತಂದನು. ಇದನ್ನು ಕೇಳಿ ಆತನ ತಂದೆಯಾದ ಶತಬಾಹುವೆಂಬ ಜಂಘಾಚಾರಣನು ಧರ್ಮವಾತ್ಸಲ್ಯದಿಂದ ಬರಲು ದಶಮುಖನು ಆತನಿಗೆ ಭಕ್ತಿಯಿಂದೆರಗಿ ವಂದಿಸಿ ಮಣಿಪೀಠದಲ್ಲಿ ಕುಳ್ಳಿರಿಸಿ ಕೈಮುಗಿದುಕೊಂಡು ಅಪ್ಪಣೆ ಏನೆಂದು ಕೇಳಲು ತಾನು ಸೆರೆಗೆಯ್ದ ಸಹಸ್ರಬಾಹುವನ್ನು ಬಿಟ್ಟುಬಿಡೆಂದು ಹೇಳಿದನು. ರಾವಣನು ಮಹಾಪ್ರಸಾದವೆಂದು ಹೇಳಿ ಸಹಸ್ರಬಾಹುವನ್ನು ಕರೆಕಳುಹಿಸಲು ಆತನು ಬಂದು ದಿವ್ಯಮುನಿಗೆರಗಿ ಅಪ್ಪಣೆಪಡೆದು ಕುಳಿತುಕೊಂಡನು. ರಾವಣನು ಆತನ ಕೈಹಿಡಿದು ವಿನಯ ವಚನಗಳನ್ನಾಡಿ ತನ್ನ ರಾಜ್ಯದಲ್ಲಿ ತಾನು

ನಿಲ್ಲುವುದೆನ್ನಲು ಆತನು ತಪೋರಾಜ್ಯವನ್ನಲ್ಲದೆ ಇಹರಾಜ್ಯವನ್ನೊಲ್ಲೆನೆಂದು ಹೇಳಿ ಮಗನಾದ ಸುಬಾಹುವಿಗೆ ರಾಜ್ಯವನ್ನಿತ್ತು ತನ್ನ ತಂದೆಯ ಬಳಿ ದೀಕ್ಷೆಗೊಂಡನು.

ತರುವಾಯ, ರಾವಣನು ವಿಜಯ ಯಾತ್ರೆ ಹೊರಟು ಸಮಸ್ತ ಭೂಪಾಲಕರನ್ನೂ ಜಯಿಸಿ ಕಪ್ಪವನ್ನು ಕೊಳ್ಳುತ್ತ ಧರ್ಮವನ್ನು ಪ್ರತಿಪಾಲಿಸುತ್ತ ಬರುತ್ತಿರಲು, ಮರುತ್ತನೆಂಬರಸನು ಜೀವವಧೆ ಮಾಡುವ ಯಜ್ಞವನ್ನು ಮಾಡಿ, ಇತರರಾರನ್ನೂ ನಮಸ್ಕರಿಸದೆ, ಹಲವು ಪ್ರಾಣಿಗಳನ್ನು ಕೊಲ್ಲುತ್ತಿರುವನೆಂದು ಕೇಳಿ ಅಲ್ಲಿಗೆ ಬಂದು ಯಾಗ ನಿಮಿತ್ತವಾಗಿ ಆವನು ಪಶುಗಳನ್ನು ಯೂಪಸ್ತಂಭಗಳಲ್ಲಿ ಕಟ್ಟಿ ಗೋಳಿಡುತ್ತಿರುವುದನ್ನು ಕಂಡು ಯೂಪಸ್ತಂಭಗಳನ್ನು ಕಡಿದು ಕುಂಡಗಳನ್ನೊಡೆದು ಶಾಲೆಗಳನ್ನು ಕೆಡವಿ ಸಂವರ್ತನೇ ಮೊದಲಾದ ಋತ್ವಿಜರನ್ನು ಬಡಿದು ಕೊಲ್ಲಲೆಂದಿರುವ ಸಮಯದಲ್ಲಿ ಮರುತ್ತನು ಅತಿ ಸಂಭ್ರಮದಿಂದ ಬಂದು ರಾವಣನ ಕಾಲಮೇಲೆ ಬಿದ್ದು ಕ್ಷಮೆಯನ್ನು ಬೇಡಿ ತನ್ನ ಮಗಳಾದ ಕನಕಪ್ರಭೆಯನ್ನು ಆತನಿಗೆ ಕೊಟ್ಟು ಮದುವೆಮಾಡಿದನು. ರಾವಣನು ಹದಿನೆಂಟು ಪರ್ವತ್ತೆ ವಿನೀತಾ ಖಂಡವನ್ನು ಬಾಯ್ಕೀಳಿಸಿ ಕೈಲಾಸ ಪರ್ವತವನ್ನು ಸೇರಿ ನಾಲಿದೇವರ ಸಾಮರ್ಥ್ಯವನ್ನು ನೆನೆದು ಹೊಗಳುತ್ತ ಆ ಬೆಟ್ಟದ ತಪ್ಪಲಲ್ಲಿ ಬೀಡನ್ನು ಬಿಟ್ಟಿದ್ದನು.

ರಾವಣನು ಇಂದ್ರನ ಮೇಲೆ ದಂಡೆತ್ತಿ ಬರುವ ವಿಷಯವನ್ನು ನಳಕೂಬರ ದಿಕ್ಪತಿಯು ಇಂದ್ರನಿಗೆ ಹೇಳಿಕಳುಹಿಸಲು ಆತನು ತನ್ನ ಭುಜಬಲ ಗರ್ವದಿಂದ ದಶಗ್ರೀವನನ್ನು ಲಕ್ಷ್ಯಮಾಡದೆ ರಾವಣನು ಏನು ಮಾಡಿಯಾನೆಂದೂ ಆತನೊಡನೆ ವಿದ್ಯಾವಷ್ಟಂಭದಿಂದ ಕಾದುವುದೆಂದೂ ನಳಕೂಬರನಿಗೆ ಹೇಳಿಕಳುಹಿಸಿದನು ಇದನ್ನು ಕೇಳಿ ನಳಕೂಬರನು ಒಂದು ಯೋಜನಾಂತರದಲ್ಲಿರುವವರನ್ನು ನುಂಗುವ ಬೇತಾಳ ಯಂತ್ರಗಳಿಂದಲೂ, ಎಬ್ಬಿಸಿ ತಿನ್ನುವ ಮಹೋರಗಗಳಿಂದಲೂ, ಅತಿ ದೂರದಲ್ಲಿ ಅಟ್ಟಿ ಸುಡುವ ಕೇಸುರಿಯ ಪ್ರಾಕಾರಗಳಿಂದಲೂ, ನಾನಾ ತೆರದ ಉಪದ್ರವಗಳನ್ನು ಮಾಡುವ ರೌದ್ರ ಮೃಗಗಳಿಂದಲೂ ತುಂಬಿಸಿ ಶತಯೋಜನ ಪರಿಮಿತಿಯುಳ್ಳ ವಜ್ರಸಾಲವೆಂಬ ಕೋಟೆಯನ್ನು ಕಟ್ಟಿಸಿ ಆ ಪಟ್ಟಣಕ್ಕೆ ದುರ್ಲಂಘ್ಯಪುರವೆಂಬ ಹೆಸರನ್ನು ಅನ್ವರ್ಥವಾಗಿ ಮಾಡಿದನು. ದಶವದನನ ಸೇನಾನಾಯಕನಾದ ಪ್ರಹಸ್ತನು ಇದನ್ನು ತಿಳಿದು ಬಂದು, ಆ ಯಂತ್ರಗಳಿಂದ ತಮ್ಮ ಸೇನೆಗೆ ಉಪದ್ರವವಾಗದಂತೆ ದೂರದಲ್ಲಿರಬೇಕೆಂದೂ ಬಳಿಕ ಅದನ್ನು ತೆಗೆದು ಕೊಳ್ಳುವ ಉಪಾಯವನ್ನು ಆಲೋಚನೆ ಮಾಡತಕ್ಕದ್ದೆಂದೂ ರಾವಣನಿಗೆ ಅರಿಕೆ ಮಾಡಲು ರಾವಣನು ಉಪಾಯವೇನೆಂದು ಆಲೋಚಿಸುತ್ತಿದ್ದನು.

ಹೀಗಿರುವಲ್ಲಿ ನಳಕೂಬರನ ಹೆಂಡತಿಯಾದ ಉಪರಂಭೆಯು ಬಹುಕಾಲದಿಂದ ರಾವಣನಲ್ಲಿ ಕಾಮಾತುರೆಯಾಗಿ ತನ್ನ ದೂತಿಯನ್ನು ರಾವಣನ ಬಳಿಗೆ

ಅಟ್ಟಿದಳು. ರಾವಣನು ಅವಳ ಮಾತುಗಳನ್ನು ಕೇಳಿ ಪಾಪಕ್ಕೂ ನಿಂದೆಗೂ ಮನಸ್ಸೊಪ್ಪದೆ ವಿಭೀಷಣನನ್ನು ಬರಿಸಿ ರಹಸ್ಯದಲ್ಲಿ ಇದನ್ನು ತಿಳಿಸಲು, ಆತನು ವಿದ್ಯಾ ಪ್ರಾಕಾರವನ್ನು ಕೆಡಿಸುವ ಪ್ರತಿವಿದ್ಯೆಯನ್ನು ಕಲಿತುಕೊಳ್ಳುವುದಕ್ಕಾಗಿ ಆಕೆಯನ್ನು ಕರೆಯಿಸಿ ಹುಸಿಮಾತಿನೊಡನೆ ನಂಬಿಸಿ ವಿದ್ಯೆಯನ್ನು ಕಲಿತುಕೊಳ್ಳುವುದು ಸರಿಯೆಂದು ಹೇಳಿದನು. ಆಗ ರಾವಣನು ದೂತಿಯ ಮಾತಿಗೆ ಒಡಂಬಟ್ಟೆನೆಂದು ಹೇಳಿ ಉಪರಂಭೆಯನ್ನು ಕರೆತರುವಂತೆ ತಿಳಿಸಲು ಕೂಡಲೆ ಅವಳು ಹೋಗಿ ಕರೆತಂದಳು. ರಾವಣನು ಉಪರಂಭೆಗೆ ಹುಸಿಯಾದ ಪ್ರೀತಿಯನ್ನು ತೋರಿಸಿ ತನಗೂ ಅವಳಿಗೂ ದುರ್ಲಂಘ್ಯಪುರದಲ್ಲಿ ಕೂಟವಾಗುವಂತೆ ಮಾಡೆಂದು ಹೇಳಲು, ಅವಳು ಕುಲಹಾನಿಯನ್ನೂ ಪತಿಗಾಗುವ ಕೇಡನ್ನೂ ಬಗೆಯದೆ ಹಾಗೆಯೇ ಮಾಡುವೆನೆಂದು ಹೇಳಿ ಸಾಲವಿದ್ಯಾ ಭೇದಿನಿಯಾದ ಪ್ರತಿವಿದ್ಯೆಯನ್ನು ರಾವಣನಿಗೆ ಕೊಟ್ಟಳು. ಮರು ದಿವಸ ರಾವಣನು ಈ ಪ್ರತಿವಿದ್ಯೆಯ ಸಹಾಯದಿಂದ ದುರ್ಲಂಘ್ಯ ಪುರವನ್ನು ಮುತ್ತಲು ನಳಕೂಬರನು ಯುದ್ಧಸನ್ನದ್ಧನಾಗಿ ಬಂದು ಲಕ್ಷ್ಯಮಾಡದೆ ಯುದ್ಧಮಾಡುತ್ತಿರುವಲ್ಲಿ ವಿಭೀಷಣನು ಅವನನ್ನು ಸೆರೆಹಿಡಿದನು. ಆ ಸಮಯದಲ್ಲಿ ರಾವಣನ ಆಯುಧಾಗಾರದಲ್ಲಿ ಮಹತ್ತರವಾದ ಸುದರ್ಶನ ಚಕ್ರವು ಹುಟ್ಟಿತು. ರಾವಣನು ಅದನ್ನು ಮಹೋತ್ಸವದಿಂದರ್ಚಿಸಿ ಉಪರಂಭೆಯನ್ನು ರಹಸ್ಯವಾಗಿ ಕರೆಯಿಸಿ ಅವಳು ವಿಶುದ್ಧವಾದ ಕುಲದಲ್ಲಿ ಹುಟ್ಟಿದವಳಾದುದರಿಂದ ಶೀಲ ಪರಿಪಾಲನೆಯನ್ನು ಮಾಡುವುದು ತಕ್ಕದ್ದೆಂದೂ ತನಗೆ ವಿದ್ಯೋಪದೇಶವನ್ನು ಮಾಡಿದುದರಿಂದ ಆಕೆಯು ಗುರುವಾದಳೆಂದೂ ತಿಳಿಸಿ ಮತ್ತೇನನ್ನೂ ಬಗೆಯದೆ ನಳಕೂಬರನಲ್ಲಿ ಕೂಡಿ ಸುಖದಿಂದಿರೆಂದು ಹೇಳಿ ಅವಳ ದುಷ್ಪರಿಣಾಮವನ್ನು ತಪ್ಪಿಸಿದನು. ಕೂಡಲೆ ನಳಕೂಬರನನ್ನು ಬರಿಸಿ ತನ್ನ ಹಿರಿಯ ಮಗನಾದ ಇಂದಗಿಗಿಂತಲೂ ಹೆಚ್ಚಾಗಿ ಮನ್ನಿಸಿ ಅವನ ಭಯವನ್ನು ಕಳೆದು ಅವನನ್ನು ತನ್ನ ಸಾಮಂತನನ್ನಾಗಿ ಮಾಡಿ ಅವನೊಡನೆ ಇಂದ್ರನಮೇಲೆ ದಂಡೆತ್ತಿಹೋದನು.

ಇಂದ್ರನಿಗೂ ರಾವಣನಿಗೂ ಘೋರ ಯುದ್ಧವು ನಡೆದು ರಾವಣನು ಇಂದ್ರನನ್ನು ಸೆರೆಹಿಡಿದುಕೊಂಡು ಹೋದನು. ಆಗ ಇಂದ್ರಜಿತ್ಕುಮಾರನು ಇಂದ್ರನ ಮಗನಾದ ಜಯಂತನನ್ನು ಸೆರೆಹಿಡಿದು ತಂದು ರಾವಣನಿಗೊಪ್ಪಿಸಲು ಎಲ್ಲರೂ ಸೇರಿ ಹೊರಟು ಮಹಾ ವಿಭವದಿಂದ ಲಂಕೆಯನ್ನು ಹೊಕ್ಕು ಸುಖದಿಂದಿದ್ದರು. ಸಹಸ್ರಾರನು ಮಗನ ಮೇಲಣ ಮೋಹದಿಂದ ಲಂಕೆಗೆ ಬರಲು ಆತನನ್ನು ರಾವಣನು ತಕ್ಕ ಮರ್ಯಾದೆಯೊಡನೆ ಕಂಡು ತನ್ನ ತಂದೆಗಿಂತಲೂ ಹೆಚ್ಚಾಗಿ ಮರ್ಯಾದೆ ಮಾಡಿ ಕುಳ್ಳಿರಿಸಿ ಅಪ್ಪಣೆಯೇನೆಂದು ಕೇಳಲು ಇಂದ್ರನನ್ನು ಬಿಟ್ಟುಬಿಡೆಂದು ಹೇಳಿದನು. ಅದಕ್ಕೆ ರಾವಣನು ಮಹಾಪ್ರಸಾದವೆಂದು ಹೇಳಿ ಇಂದ್ರನನ್ನು ಬರಿಸಿ ತನ್ನ ರಾಜ್ಯದಲ್ಲಿ ತಾನು ಸುಖವಾಗಿರುವಂತೆ ಹೇಳಿ ಕಳುಹಿಸಿದನು. ಇಂದ್ರನು

ತನ್ನ ಪಟ್ಟಣಕ್ಕೆ ಬಂದು ಇಂದುವೆಂಬ ತನ್ನ ಹಿರಿಯ ಮಗನಿಗೆ ರಾಜ್ಯವನ್ನಿತ್ತು ಜಯಂತನೊಡನೆಯೂ ತನ್ನ ಲೋಕಪಾಲರೊಡನೆಯೂ ದೀಕ್ಷೆಗೊಂಡನು.

ಇತ್ತ, ರಾವಣನು ವರುಣನಮೇಲೆ ನಡೆಯಬೇಕೆಂದು ಸಮಸ್ತ ಸಾಮಂತರನ್ನೂ ಬರಿಸಿ ಹನುಮರದ್ವೀಪಕ್ಕೆ ದೂತನನ್ನಟ್ಟಲು ಅವನು ಬಂದು ಪ್ರತಿಸೂರ್ಯನನ್ನೂ ಪವನಂಜಯನನ್ನೂ ಕಂಡು ತಾನು ಬಂದ ವಿಷಯವನ್ನು ತಿಳಿಸಿದನು. ಪವನಂಜಯನು ಮಗನಾದ ಆಂಜನೇಯನನ್ನು ಕರೆಯಿಸಲು ಅವನು ತಂದೆಯ ಅಪ್ಪಣೆಯನ್ನು ಪಡೆದು ಅಸಂಖ್ಯಾತ ಬಲ ಸಮೇತನಾಗಿ ಆಕಾಶ ಮಾರ್ಗದಲ್ಲಿ ಹೊರಟನು. ರಾವಣನು ಹನುಮನ ಬರವನ್ನು ಕಂಡು ಅವನನ್ನು ಎದುರುಗೊಳ್ಳುವುದಕ್ಕೆ ಬರಲು ಹನುಮನು ರಾವಣನ ಪಾದಕ್ಕೆರಗಿದನು. ರಾವಣನು ಹನುಮನನ್ನು ಎತ್ತಿ ಆಲಿಂಗಿಸಿ ಇನ್ನು ಶತ್ರುಗಳನ್ನು ಜಯಿಸುವುದು ಸುಲಭಸಾಧ್ಯವಾಯಿತೆಂದು ಹರುಷಪಟ್ಟು ದೊಡ್ಡ ಸೇನೆಯೊಡನೆ ಹೊರಟು ಪಾತಾಳಪುಂಡರೀಕ ಪುರವನ್ನು ಮೂರು ಸುತ್ತಾಗಿ ಬಳಸಿದನು. ಇದನ್ನು ಕಂಡು ವರುಣನ ಮಕ್ಕಳಾದ ನೂರು ಮಂದಿ ಅಸಹಾಯ ಶೂರರು ಬಂದು ಭಯಂಕರವಾಗಿ ಯುದ್ಧ ಮಾಡುತ್ತಿರುವಲ್ಲಿ ಹನುಮನು ಹೊಕ್ಕು ವಾನರ ವಿದ್ಯೆಯನ್ನು ತಳೆದು ವಾನರ ರೂಪನ್ನು ತಾಳಿ ಹಗೆಯ ಬಲವನ್ನು ದೊಡ್ಡ ಕಲ್ಲು ಗುಂಡುಗಳಿಂದಲೂ ದೊಡ್ಡ ಮರಗಳ ಸಮೂಹದಿಂದಲೂ ನಾಶಮಾಡಿ ವರುಣನ ನೂರುಮಂದಿ ಮಕ್ಕಳನ್ನೂ ಸೆರೆ ಹಿಡಿದನು. ಇದನ್ನು ನೋಡಿ ವರುಣನು ಯುದ್ಧಕ್ಕೆ ಬರಲು ಅವನನ್ನು ರಾವಣನು ಹಿಡಿದು ಕುಂಭಕರ್ಣನಿಗೊಪ್ಪಿಸಿ ತರುವಾಯ ಅವನನ್ನು ಬರಿಸಿ ಮನ್ನಿಸಿ ಮೊದಲಿನಂತೆಯೇ ರಾಜ್ಯಭಾರ ಮಾಡಿಕೊಂಡಿರೆಂದು ನಿಯಮಿಸಲು ವರುಣನು ಹನುಮನ ಪರಾಕ್ರಮವನ್ನು ಮೆಚ್ಚಿ ರಾವಣನಿಗೆ ಸತ್ಯವತಿಯೆಂಬ ತನ್ನ ಮಗಳನ್ನು ಕೊಟ್ಟು ಮದುವೆಮಾಡಿದನು. ರಾವಣನು ಲಂಕೆಗೆ ಬಂದು ಚಂದ್ರನಖಿಯ ಮಗಳಾದ ಅನಂಗಪುಷ್ಪೆಯನ್ನು ಶ್ರೀಶೈಲನೆಂದೂ ಹೆಸರುಳ್ಳ ಹನುಮನಿಗೆ ಕೊಟ್ಟು ಮದುವೆಮಾಡಿ ಕರ್ಣಕುಂಡಲಪುರವನ್ನು ಆತನಿಗೆ ರಾಜ್ಯಾಭಿಷೇಕ ಮಾಡಿಕೊಡಲು ಆತನು ಅಲ್ಲಿ ಸಹಸ್ರ ಮಂದಿ ಅಂತಃಪುರ ಸ್ತ್ರೀಯರಿಗೊಡೆಯನಾಗಿ ಸುಗ್ರೀವನಿಗೂ ಸುತಾರೆಗೂ ಹುಟ್ಟಿದ ಪದ್ಮರಾಗೆಯನ್ನು ಮದುವೆಯಾಗಿ ಸುಖದಿಂದಿದ್ದನು.

ಜಾಂಬವಂತನು ರಾಮಚಂದ್ರನ ಅಪ್ಪಣೆಯ ಮೇರೆಗೆ ಈ ವೃತ್ತಾಂತವನ್ನು ಹೇಳಿ, "ಈಗ ರಾವಣನು ಭರತ ತ್ರಿಖಂಡಕ್ಕೊಡೆಯನಾಗಿ ತ್ರಿಜಗದ್ಭೂಷಣ ಗಜವನ್ನು ಹೊಂದಿ ಚಕ್ರಾಯುಧವನ್ನೂ ಚಂದ್ರಹಾಸಾಸಿಯನ್ನೂ ಪಡೆದು ಸಮಸ್ತ ವಿದ್ಯಾಧರ ರಾಜರನ್ನೂ ಆಜ್ಞಾನುವರ್ತಿಗಳನ್ನಾಗಿ ಮಾಡಿ ಅತ್ಯಂತ ಪರಾಕ್ರಮಶಾಲಿಯಾಗಿರುವನು. ಭೀಷಣ ಬಲರಾದ ಕುಂಭಕರ್ಣ ವಿಭೀಷಣರು ಅವನೊಡಹುಟ್ಟು

ದವರು. ಸುರಾಸುರ ವಿಯಚ್ಚರ ಸೇನೆಯಲ್ಲಿ ಯಾರಿಗೂ ಯುದ್ಧದಲ್ಲಿ ಸೋಲದ ಮೇಘವಾಹನನೂ ಇಂದಗಿಯೂ ರಾವಣನ ಕುಮಾರರು. ಅವನ ವಿಯಚ್ಚರ ಸೇನೆಯು ಅಸಾಧಾರಣವಾದುದು. ಭುಜಬಲದಲ್ಲಿಯೂ ವಿದ್ಯಾಬಲದಲ್ಲಿಯೂ ಮನೋಬಲದಲ್ಲಿಯೂ ಯಾವ ರಾಜನೂ ರಾವಣನನ್ನು ಜಯಿಸಲಾರನು. ದೇವೇಂದ್ರನಿಗೂ ಇವನನ್ನು ಗೆಲ್ಲಲು ಸಾಧ್ಯವಲ್ಲ" ಎಂದು ನುಡಿಯಲು, ಲಕ್ಷ್ಮಣನು ಕೋಪದಿಂದ ಕೂಡಿದ ಮುಗುಳ್ನಗೆಯನ್ನು ನಕ್ಕು ಪರಿಹಾಸದ ಮಾತಿನಿಂದಿಂತೆಂದನು :—

"ಅಯ್ಯಾ! ರಾವಣನ ಪರಾಕ್ರಮವನ್ನು ಇಷ್ಟು ವರ್ಣಿಸಲೇಕೆ? ಅವನು ಸೀತಾದೇವಿಯನ್ನು ಕದ್ದುಕೊಂಡು ಹೋದುದೇ ಅವನ ಭೀತಿಯನ್ನು ತೋರಿಸುವುದಿಲ್ಲವೆ? ಇಕ್ಷ್ವಾಕು ವಂಶದವರನ್ನು ಗೆಲ್ಲಲು ರಾವಣನಿಗೆ ಸಾಧ್ಯವೆ? ರಾಮ ರಾವಣರ ಬಲ್ಮೆಯನ್ನು ನಾಳೆ ಯುದ್ಧರಂಗದಲ್ಲಿ ನೋಡುವಿರಿ. ಸಿಂಹವು ಆನೆಗಳನ್ನು ಗೆದ್ದಮಾತ್ರಕ್ಕೆ ಶರಭವನ್ನು ಗೆಲ್ಲಲಾಪುವುದೆ? ಕತ್ತಲೆಯು ದಟ್ಟವಾಗಿದ್ದ ಮಾತ್ರಕ್ಕೇ ಅದು ಸೂರ್ಯನಿಗೆ ತಕ್ಕ ಹಗೆಯಾದೀತೆ? ಅಜೇಯನಾದ ಬಲದೇವನಿಗೆ ರಾವಣನು ಎಷ್ಟು ಮಾತ್ರದವನು?"

ಆಶ್ವಾಸ ೧೧—ಲಂಕಾ ದಹನ

ಲಕ್ಷ್ಮಣನು ರಾವಣನನ್ನು ಹಿಯ್ಯಾಳಿಸಿ ಮಾತನಾಡಿದುದನ್ನು ಕೇಳಿ ಜಾಂಬವನೇ ಮೊದಲಾದ ಸುಗ್ರೀವನ ಪ್ರಧಾನರು ತಮಗಧಿರಾಜನಾಗಿಯೂ ಖಚರೋರ್ವಿಗೆ ವಲ್ಲಭನಾಗಿಯೂ ಇರುವ ರಾವಣನ ಮುಂದೆ ಇತರರ ಪರಾಕ್ರಮವು ಉಪಯೋಗವಾಗಲಾರದೆಂದೂ ಇತರ ರಾಜರು ಅವನಿಗೆ ಭಯಪಟ್ಟು ಅವನನ್ನು ಎದುರಿಸಲಾರರೆಂದೂ ಆದಕಾರಣ ದೇವಿಯನ್ನು ಭೇದೋಪಾಯದಿಂದಲೇ ತರತಕ್ಕದ್ದೆಂದೂ ಹೇಳಿದರು. ಇದಕ್ಕೆ ರಘುವೀರನು ಅಂತಹ ಭೀತರ ಸಹಾಯವು ತನಗೆ ಆವಶ್ಯಕವಿಲ್ಲವೆಂದೂ ಲಕ್ಷ್ಮಣನು ರಾವಣನನ್ನು ದಂಡಿಸಲು ಶಕ್ತನೆಂದೂ ಅನ್ಯಸ್ತ್ರೀಯನ್ನು ಬಯಸಿದ ದುರಾತ್ಮನನ್ನು ದೆಸೆಬಲಿ ಕೊಡುವೆನೆಂದೂ, ಆದರೆ ಭಯಪಟ್ಟು ಜಾನಕಿಯನ್ನು ತಂದೊಪ್ಪಿಸಿದರೆ ರಾವಣನನು ಕಾಯುವೆನೆಂದೂ ಉತ್ತರಕೊಟ್ಟನು. ಇದನ್ನು ಕೇಳಿ ಜಾಂಬೂನದನು, ಹಿಂದೆ ದಶಗ್ರೀವನು ತನಗೆ ಯಾರ ಕೈಯಿಂದ ಮರಣವಾಗುವುದೆಂದು ಅನಂತವೀರ್ಯ ಕೇವಲಿಗಳನ್ನು ಕೇಳಿದಾಗ ಅವರು ಸಿದ್ಧಶೈಲವನ್ನೆತ್ತಿದವನ ಕೈಯಲ್ಲಿ ಮರಣವಾಗುವುದೆನ್ನಲು ಅಂತಹ ಮಹಾ ಸತ್ವನು ಯಾವನೂ ಇಲ್ಲದುದರಿಂದ ತನಗೆ ಮರಣವಿಲ್ಲವೆಂದು ರಾವಣನು ಹರುಷಚಿತ್ತನಾದ ವೃತ್ತಾಂತವನ್ನು ತಿಳಿಸಿದನು.

ಇದನ್ನು ಕೇಳಿ ಲಕ್ಷ್ಮಣನು ನಿರ್ವಾಣ ಶೈಲವನ್ನೆತ್ತುವುದು ತನಗೆ ಕಷ್ಟವಲ್ಲೆಂದು ಹೇಳಲು ಜಾಂಬೂನದ ಸುಗ್ರೀವ ಮೊದಲಾದವರು ರಾಮಲಕ್ಷ್ಮಣರನ್ನು ವಿಮಾನವನ್ನೇರಿಸಿಕೊಂಡು ಗಗನ ಮಾರ್ಗದಲ್ಲಿ ಹೋಗಿ ನಿರ್ವಾಣ ನಗವನ್ನು ಸೇರಿದರು. ಲಕ್ಷ್ಮಣನು ಸಿದ್ಧಗುಣ ಸ್ತವನವನ್ನು ಮಾಡಿ ಸಿದ್ಧಶೈಲವನ್ನು ಕಿತ್ತು ಬಲ ಭುಜದ ಮೇಲೆ ಹೊತ್ತು ಎತ್ತಿದನು. ಆಗ ದೇವದುಂದುಭಿ ಮೊಳಗಿತು, ಹೂಮಳೆ ಕರೆಯಿತು. ಇದನ್ನು ನೋಡಿ ವಾನರಚಿಹ್ನರು ಆಶ್ಚರ್ಯಪಟ್ಟು ರಾಮಲಕ್ಷ್ಮಣರನ್ನು ಪೂಜಿಸಿ ಎಲ್ಲರೂ ಹೊರಟು ಕಿಷ್ಕಿಂಧಪುರವನ್ನು ಸೇರಿದರು.

ಮರು ದಿನ ರಾಮದೇವನು ಸುಗ್ರೀವ ಮೊದಲಾದವರೊಡನೆ, ಲಂಕೆಗೆ ದಂಡೆತ್ತಿ ಕೂಡಲೆ ಹೊರಡಬೇಕೆಂದು ತಿಳಿಸಲು, ಶುದ್ಧಾಚಾರನಾಗಿಯೂ ವಿಚಾರ ಪರನಾಗಿಯೂ ಇರುವ ವಿಭೀಷಣನು ರಾವಣನಿಗೆ ಬುದ್ಧಿವಾದವನ್ನು ಹೇಳಿ ಸೀತೆಯನ್ನು ರಾಮನಿಗೆ ಒಪ್ಪಿಸುವಂತೆ ಮಾಡಲು ಸಮರ್ಥನಾದುದರಿಂದ ಆತನ ಬಳಿಗೆ ದೂತರನ್ನು ಬೇಗನೆ ಕಳುಹಿಸುವುದುಚಿತವೆಂದು ಜಾಂಬವನು ಹೇಳಿದನು. ಇದಕ್ಕೆ ಮಹೋದಧಿಯು "ಅಯ್ಯಾ! ಲಂಕಾಪುರಕ್ಕೆ ವಿದ್ಯಾಪ್ರಾಕಾರವನ್ನು ಕಟ್ಟಿರುವುದರಿಂದ ಅದನ್ನು ಹೊಗಲು ಇಲ್ಲಿಯ ವಿದ್ಯಾಧರರಾರೂ ಸಮರ್ಥರಲ್ಲ; ಆದರೆ ಅಜೇಯ ಬಲನಾದ ಆಂಜನೇಯನೊಬ್ಬನು ಮಾತ್ರ ಸಮರ್ಥನಿರುವನು; ಆತನು ಲಂಕೆಗೆ ಹೋಗಿ ದೇವಿಯನ್ನು ಬಿಡಿಸಿಕೊಂಡು ತರಲು ಶಕ್ತನು, ಇತರರಾರಿಗೂ ಈ ಕೆಲಸವು ಸಾಧ್ಯವಲ್ಲ" ಎಂದು ಹೇಳಲು ಸುಗ್ರೀವನು ಹನುಮನಲ್ಲಿಗೆ ದೂತನನ್ನಟ್ಟಿ ಅವನನ್ನು ಕರೆಯಿಸಿದನು. ಆಂಜನಾಸುತನು ದೂತರಿಂದ ರಾಮಲಕ್ಷ್ಮಣರ ಪರಾಕ್ರಮವನ್ನರಿತು ತನ್ನಿಂದಲೂ ಸಾಧ್ಯವಾಗದ ಮಾಯಾ ಸುಗ್ರೀವನನ್ನು ಅವರು ಕೊಂದು ಉಪಕಾರಮಾಡಿದುದಕ್ಕಾಗಿ ತಾನು ರಾಮಲಕ್ಷ್ಮಣರ ಸೇವಕನಾಗಿರುವೆನೆಂದು ನಿಶ್ಚಯಿಸಿ ಅವರನ್ನು ಭಕ್ತಿಯಿಂದ ನಮಸ್ಕರಿಸಲು ರಾಮನು ಅವನ ಧೀರಪ್ರಕೃತಿಗೂ ನಯವಿನಯಗಳಿಗೂ ಮೆಚ್ಚಿ ಅವನಿಗೆ ರತ್ನ ಕರ್ಣಕುಂಡಲಗಳನ್ನು ಮೆಚ್ಚುಗೊಟ್ಟನು.

ಮರುತ್ತನಯನು ತಾನು ನಯದಿಂದಾಗಲಿ ಭಯದಿಂದಾಗಲಿ ಸೀತಾದೇವಿಯನ್ನು ತರುವೆನೆಂದೂ, ಅಲ್ಲದೆ ನೋಡಿಬರುವುದೆಂದು ಮಾತ್ರ ಹೇಳಿದರೆ ಮಾಯಾರೂಪದಿಂದ ಹೋಗಿ ಆಕೆಯ ಸುದ್ದಿಯನ್ನು ಕೊಂಡುಬರುವೆನೆಂದೂ, ರಾವಣನನ್ನು ಕೊಂದು ದೇವಿಯನ್ನು ತರುವುದು ತನಗಸಾಧ್ಯವಲ್ಲೆಂದೂ ತಿಳಿಸಲು ರಾಮನು ಜನಕಜೆಯ ಸುದ್ದಿಯನ್ನು ತರುವ ಕೆಲಸವು ಆಂಜನೇಯನದೆಂದೂ ದಶಮುಖನನ್ನು ಕೊಂದು ಸೀತಾದೇವಿಯನ್ನು ತರುವ ಕೆಲಸವು ಲಕ್ಷ್ಮಣನದೆಂದೂ ನಿಯಮಿಸಿ ಜಾನಕಿಗೆ ತಿಳಿಸುವುದಕ್ಕಾಗಿ ಕೆಲವು ಗುರುತುಗಳನ್ನು ಅಣುವನಿಗೆ ಹೇಳಿ ಆಕೆಯ ವಿರಹ ಖೇದವನ್ನು ಕಳೆಯುವುದಕ್ಕೋಸ್ಕರ

ತನ್ನ ರವಿಮಂಡಲವನ್ನು ಅವನ ಕೈಯಲ್ಲಿ ಕೊಟ್ಟು ಆಕೆಯ ಚೂಡಾಮಣಿಯನ್ನು ತನಗೆ ತಂದುಕೊಡುವಂತೆ ಅಪ್ಪಣೆಮಾಡಿದನು. ವಾಯುಪುತ್ರನು ಮಹಾಪ್ರಸಾದವೆಂದು ಹೇಳಿ ಬಲಾಚ್ಯುತರ ಅಪ್ಪಣೆಯನ್ನು ಪಡೆದು ವಿಮಾನವನ್ನೇರಿ ಆಕಾಶಮಾರ್ಗದಲ್ಲಿ ಹೋಗುತ್ತ ಮಹೇಂದ್ರಾಚಲದ ಮಧ್ಯದಲ್ಲಿರುವ ಮಹೇಂದ್ರಪುರವನ್ನು ಕಂಡನು. ಅದು ತನ್ನ ಜನ್ಮಭೂಮಿಯೆಂದೂ, ತಾನು ತಾಯಿಯ ಗರ್ಭದಲ್ಲಿರುವಾಗ ಆಕೆಯ ಮೇಲೆ ಅತ್ತೆಮಾವಂದಿರು ಇಲ್ಲದ ದೋಷವನ್ನಿಟ್ಟು ಆಕೆಯನ್ನು ಹೊರಡಿಸಲು, ಆ ಪುರವನ್ನಾಳುತ್ತಿದ್ದ ತನ್ನ ಮುತ್ತಾತನ ಬಳಿಗೆ ಆಕೆಯು ರಕ್ಷಣೆಗಾಗಿ ಹೋದಳೆಂದೂ, ಅತನೂ ನಿರ್ದಯನಾಗಿ ಆಕೆಯನ್ನು ಕಳೆದನೆಂದೂ, ಈ ವಿಷಯಗಳನ್ನು ತನ್ನ ತಾಯಿಯು ತನ್ನೊಡನೆ ಹೇಳಿದ್ದುದು ಆಂಜನೇಯನ ನೆನಪಿಗೆ ಬಂದು ಬಹಳ ಸಿಟ್ಟನ್ನುಂಟುಮಾಡಿತು. ಕೂಡಲೆ ಅವನು ತನ್ನ ಸೇನೆಯೊಡನೆ ಆ ಪುರವನ್ನು ಸುತ್ತಿ ಮುತ್ತಲು ಮಹೇಂದ್ರನು ರೋಷಾವೇಶದಿಂದ ಬಂದು ಹನುಮನೊಡನೆ ಕಾದುತ್ತಿರುವಲ್ಲಿ ಹನುಮನು ಅವನ ಸೈನ್ಯವನ್ನು ನಾಶಮಾಡಿದನು. ಇದನ್ನು ಕಂಡು ಪ್ರಸನ್ನಕೀರ್ತಿಯು ಸಿಟ್ಟುಗೊಂಡು ಯುದ್ಧಕ್ಕೆ ಬರಲು ಶ್ರೀಶೈಲನು ಅವನನ್ನು ಸೆರೆಹಿಡಿದನು. ಇದನ್ನು ನೋಡಿ ಮಹೇಂದ್ರನು ಹನುಮನೊಡನೆ ಅಚಿಂತ್ಯ ಯುದ್ಧವನ್ನು ಮಾಡಲು ಹನುಮನು ಅವನನ್ನೂ ಹಿಡಿದು ತನ್ನ ಶಿಬಿರಕ್ಕೆ ಕರೆದುಕೊಂಡು ಹೋಗಿ ಸಿಂಹಾಸನದ ಮೇಲೆ ಕುಳ್ಳಿರಿಸಿ ಬಹಳ ವಿನಯದಿಂದ ನಮಸ್ಕರಿಸಿ ತಾನು ಮಹೇಂದ್ರನ ಮೊಮ್ಮಗನೆಂದೂ ಅಂಜನಾದೇವಿಗೂ ಪ್ರಭಂಜನನಿಗೂ ಹುಟ್ಟಿದ ಹನುಮನೆಂದೂ ತಿಳಿಸಲು ಅತನು ತನಗೆ ಇಂದ್ರಪದವಿ ದೊರೆತಷ್ಟು ಸಂತೋಷ ಚಿತ್ತನಾಗಿ ಹನುಮಂತನ ಶೌರ್ಯವನ್ನೂ ಪರಾಕ್ರಮವನ್ನೂ ಮನೋಹರಾಕಾರವನ್ನೂ ಹೊಗಳಿ ಹಲವು ಬಗೆಯಾಗಿ ಅವನನ್ನು ಹರಸಿದನು. ಮಾರುತಿಯು ಅತನಿಗೆ ಕೈಮುಗಿದು ಬಾಲಕನ ತಪ್ಪನ್ನು ಕ್ಷಮಿಸಬೇಕೆಂದು ಬೇಡಿಕೊಂಡು ತಮ್ಮ ಕಪಿಧ್ವಜ ಕುಲಕ್ಕೆ ಪರಮೋಪಕಾರವನ್ನು ಮಾಡಿದ ರಘುವೀರನ ಆಜ್ಞೆಯ ಮೇರೆಗೆ ತಾನು ಲಂಕೆಗೆ ಹೋಗುತ್ತಿರುವೆನೆಂದೂ ತಾನು ಬರುವವರೆಗೂ ಮಹೇಂದ್ರಾದಿಗಳು ಕಿಷ್ಕಿಂಧಪುರಕ್ಕೆ ಹೋಗಿ ರಾಮಲಕ್ಷ್ಮಣರ ಸೇವೆಯನ್ನು ಮಾಡುತ್ತಿರುವುದೆಂದೂ ನಿಯಮಿಸಿ ತಾನು ವಾಯುವೇಗದಿಂದ ದಕ್ಷಿಣಾಭಿಮುಖವಾಗಿ ಹೊರಟನು. ಮಹೇಂದ್ರನು ಪ್ರಸನ್ನಕೀರ್ತಿ ಮೊದಲಾದವರೊಡನೆ ಹನುಮರ ದ್ವೀಪಕ್ಕೆ ಹೋಗಿ ಹನುಮನರಮನೆಯನ್ನು ಹೊಕ್ಕು ಅಂಜನಾದೇವಿಯನ್ನು ಕಂಡು ಬಹಳ ಹರುಷಗೊಂಡನು. ತಾಯಿ ತಂದೆಗಳನ್ನೂ ಬಂಧುವರ್ಗವನ್ನೂ ನೋಡಿ ಅಂಜನಾದೇವಿಯೂ ಸಂತೋಷ ಚಿತ್ತಳಾದಳು. ತರುವಾಯ ಮಹೇಂದ್ರನೂ ಪ್ರಸನ್ನಕೀರ್ತಿಯೂ ಕಿಷ್ಕಿಂಧಪುರಕ್ಕೆ ಹೋಗಿ ಬಲನಾರಾಯಣರನ್ನು ಕಂಡು ಆಳ್ತನವನ್ನು ಕೈಕೊಂಡು ಕಪಿಧ್ವಜರೊಡನೆ ಕೂಡಿ ಸುಖದಿಂದಿದ್ದರು.

ಇತ್ತ, ಆಂಜನೇಯನು ಹಾದಿಯಲ್ಲಿ ದಧಿಮುಖ ಪರ್ವತವನ್ನೂ ಆ ಪರ್ವತದ ಮೇಲೆ ಅಪ್ರತಿಮರಾದ ಚಾರಣರನ್ನೂ ಅವರ ಬಳಿಯಲ್ಲಿ ದಿವ್ಯಮಂತ್ರಗಳನ್ನು ಜಪಿಸುತ್ತಿದ್ದ ಬಹಳ ಚೆಲುವೆಯರಾದ ಮೂವರು ಕನ್ನೆಯರನ್ನೂ ಕಂಡನು. ಆಗ ಇವರನ್ನು ದಾರುಣವಾದ ದಾವಾನಲನು ಸುಡಲು ಯತ್ನಿಸಿದುದನ್ನು ಕಂಡು ಹನುಮಂತನು ಜಲವರ್ಷ ವಿದ್ಯೆಯಿಂದ ಅದನ್ನು ನಾಶಪಡಿಸಿ ಮುನಿಗಳ ಪಾದಾರವಿಂದವನ್ನು ಭಕ್ತಿಯಿಂದ ಪೂಜಿಸಿದನು. ಆ ಕನ್ನೆಯರು ಹನುಮಂತನ ಮಹೋಪಕಾರಕ್ಕಾಗಿ ಅವನನ್ನು ಸ್ತೋತ್ರಮಾಡಿ ಕೈಮುಗಿದು ಕೊಂಡು ನಿಂತಿರುವಲ್ಲಿ ಅವರು ಆ ಮಹಾಟವಿಯಲ್ಲಿರಲು ಕಾರಣವೇನೆಂದು ಆತನು ಕೇಳಿದನು. ಅದಕ್ಕೆ ತಾವು ದಧಿಮುಖ ನಗರದರಸಾದ ಗಂಧರ್ವನೆಂಬ ಖಚರಪತಿಯ ಮಕ್ಕಳೆಂದೂ, ಅನೇಕ ಮಂದಿ ವಿದ್ಯಾಧರರು ತಮ್ಮನ್ನು ಮದುವೆ ಮಾಡಿಕೊಡೆಂದು ಕೇಳಿದರೂ ತಮ್ಮ ತಂದೆಯು ತಮ್ಮನ್ನು ಯಾರಿಗೂ ಕೊಡದೆ ಇರುವಲ್ಲಿ ಅಂಗಾರವೇಗನೆಂಬ ವಿದ್ಯಾಧರನು ಕೇಳಲು ಅವನನ್ನೂ ಉದಾಸೀನ ಮಾಡಿ ಜಿನಭವನಕ್ಕೆ ಹೋಗಿ ತನ್ನ ಮಕ್ಕಳಿಗೆ ಅನುರೂಪನಾದ ವರನಾವನೆಂದು ಅಲ್ಲಿದ್ದ ಮಹಾಮುನಿಯನ್ನು ಕೇಳಿ ಉತ್ತರಶ್ರೇಣಿಗೆ ಪ್ರಧಾನನಾದ ಸಾಹಸಗತಿಯನ್ನು ಕೊಂದವನೇ ತನ್ನ ಮಕ್ಕಳಿಗೆ ಪತಿಯಾಗುವನೆಂದು ತಿಳಿದು ಸಂತೋಷಪಟ್ಟನೆಂದೂ, ತಾವು ಈ ಕಾಡಿನಲ್ಲಿ ಹನ್ನೆರಡು ವರುಷಗಳಿದ್ದು ಮನೋವೇಗವೆಂಬ ವಿದ್ಯೆಯನ್ನು ಸಾಧಿಸಿದೆವೆಂದೂ ಕಾಡುಕಿಚ್ಚಿನ ಕೇಡನ್ನು ತಮಗೆ ಆಗ ಒದವಿಸಿದವನು ತಮ್ಮನ್ನು ಪಡೆಯಬೆ ಹೋದ ಅಂಗಾರವರ್ಮನೆಂದೂ ತಿಳಿಸಿದರು. ಹನುಮಂತನು ಸಾಹಸಗತಿಯನ್ನು ಕೊಂದ ರಾಘವನು ಕಿಷ್ಕಿಂಧಪುರದಲ್ಲಿರುವನೆಂದು ಹೇಳಿ ಮುಂದಕ್ಕೆ ಹೊರಟನು. ಗಂಧರ್ವನು ಸಿದ್ಧವಿದ್ಯೆಯರಾದ ತನ್ನ ಮಕ್ಕಳನ್ನು ಕಂಡು ಸಂತೋಷಪಟ್ಟು ಹನುಮಂತನು ಹೇಳಿದ ವೃತ್ತಾಂತವನ್ನು ಅವರಿಂದ ತಿಳಿದು ಅವರನ್ನೊಡಗೊಂಡು ಉಚಿತ ಪರಿವಾರದೊಡನೆ ಕಿಷ್ಕಿಂಧಕ್ಕೆ ಹೋಗಿ ಪ್ರಶಸ್ತ ದಿನದಲ್ಲಿ ಅವರನ್ನು ರಾಮನಿಗೆ ಮದುವೆ ಮಾಡಿಕೊಟ್ಟು ಬಲು ಹರುಷದಿಂದಿದ್ದನು.

ಇತ್ತ, ಹನುಮಂತನು ಲಂಕೆಯನ್ನು ಸೇರಿ ಪಟ್ಟಣದ ಹೊರಗಡೆ ಬೀಡನ್ನು ಬಿಟ್ಟು ಮರುದಿನ ಪುರವನ್ನು ಹೊಗಬೇಕೆಂದಿರುವಲ್ಲಿ ವಿದ್ಯಾತ್ಮಕವಾದ ಕೋಟೆಯು ಅಡ್ಡಿಯಾಗಲು ಕೋಪಾವಿಷ್ಟನಾಗಿ ದಿವ್ಯ ವಜ್ರಕವಚವನ್ನು ತೊಟ್ಟು ದೈವಿಕವಾದ ತನ್ನ ಗದಾಯುಧದಿಂದ ವಿದ್ಯಾಪ್ರಕಾರವನ್ನೊಡೆದು ದ್ವಾರಪಾಲಕನಾದ ವಜ್ರಮುಖನೆಂಬ ದನುಜನನ್ನು ಕೊಂದನು. ಇದನ್ನು ಕಂಡು ಆ ದನುಜನ ಮಗಳಾದ ಲಂಕಾಸುಂದರಿಯು ಕಡು ಮುಳಿದು ತನ್ನ ತಂದೆಯನ್ನು ಕೊಂದವನನ್ನು ಸಂಹರಿಸುವೆನೆಂದು ಬಂದು ಹನುಮಂತನನ್ನು ನೋಡಿ ಮೋಹಗೊಂಡು

ಶೋಕವನ್ನೂ ಮುಳಿಸನ್ನೂ ತೊರೆದು ತನ್ನನ್ನೂ ತನ್ನ ವಿದ್ಯೆಗಳಿಲ್ಲವನ್ನೂ ಹನು ಮಂತನಿಗೆ ಕೊಡುವೆನೆಂದು ತಿಳಿಸಲು ಹನುಮನು ಅವಳನ್ನು ಮದುವೆಯಾದನು. ಅವಳ ಸಹಾಯದಿಂದ ಆತನು ಲಂಕೆಯನ್ನು ಸುಲಭವಾಗಿ ಹೊಕ್ಕು ಅವಳು ಹೇಳಿದಂತೆ ವಿಭೀಷಣನನ್ನು ಕಂಡು, ರಾವಣನಿಗೆ ಬುದ್ಧಿ ಹೇಳಿ ಸೀತಾದೇವಿಯನ್ನು ರಾಮನಿಗೆ ಒಪ್ಪಿಸುವಂತೆ ಮಾಡಿ ರಾವಣನ ದುರ್ಯಶಸ್ಸನ್ನು ಕಳೆಯುವುದು ವಿಭೀ ಷಣನ ಕರ್ತವ್ಯವೆಂದು ತಿಳಿಸಿದನು. ಅದಕ್ಕೆ ವಿಭೀಷಣನು ತಾನು ಉದಾಸೀನ ನಾಗಿಲ್ಲವೆಂದೂ ಪರಸ್ತ್ರೀ ಪ್ರೇಮವು ಕೇಡನ್ನುಂಟುಮಾಡುವುದೆಂದು ತನ್ನ ಅಣ್ಣ ನಿಗೆ ಆಗಲೇ ತಿಳಿಸಿರುವೆನೆಂದೂ ಆತನು ತನ್ನ ಮಾತನ್ನು ಲಕ್ಷ್ಯಮಾಡದೆ ಇರುವನೆಂದೂ ಸೀತಾದೇವಿಯು ಹನ್ನೊಂದು ದಿನಗಳಿಂದಲೂ ನಿರಶನ ವ್ರತವನ್ನು ಆಚರಿಸುತ್ತಿರುವಳೆಂದೂ ಆದರೂ ರಾವಣನಿಗೆ ವೈರಾಗ್ಯ ಹುಟ್ಟಲಿಲ್ಲವೆಂದೂ ಹೇಳಿದನು. ಇದನ್ನು ಕೇಳಿ ಆಂಜನೇಯನು ಅಲ್ಲಿಂದ ಹೊರಟು ಅದೃಶ್ಯನಾಗಿ ಸೀತಾದೇವಿಯಿದ್ದ ವನವನ್ನು ಹೊಕ್ಕು ಮಂಡೋದರಿ ಮೊದಲಾದ ಹಲವರು ಖಚರ ಸ್ತ್ರೀಯರು ಬಳಸಿ ಕಾಂತಿಗೆಟ್ಟಿದ್ದ ಸೀತೆಯನ್ನು ಕಂಡು, ಮತ್ತಾರೂ ಕಾಣದಂತೆ ಅಕೆಯ ಬಳಿಗೆ ಬಂದು ರಾಮನ ಮುದ್ರೆಯುಂಗುರವನ್ನು ಅಕೆಗೆ ಕೊಟ್ಟು ಭಕ್ತಿಯಿಂದ ನಮಸ್ಕಾರಮಾಡಿದನು. ಸೀತೆಯು ಇದನ್ನು ನೋಡಿ ಪರಮಾನಂದ ಹೊಂದಲು, ಸುತ್ತಲಿದ್ದ ಮಂಡೋದರಿ ಮೊದಲಾದವರು ಅಕೆಯು ರಾವಣನನ್ನು ಮೆಚ್ಚಿದಳೆಂದು ಹೇಳಿಕೊಂಡರು. ಇದನ್ನು ಕೇಳಿ ಸೀತಾದೇವಿಯು ಸಿಟ್ಟುಗೊಂಡು ಅವರಂಥ ಕುಲಸ್ತ್ರೀಯರು ಅಂತಹ ಮಾತುಗಳನ್ನಾಡಬಾರದೆಂದೂ ರಾಮಚಂದ್ರನಟ್ಟಿದ ದೂತನು ಬಂದುದರಿಂದ ತನಗೆ ಸಂತೋಷವುಂಟಾಯಿ ತೆಂದೂ ತಿಳಿಸಿದಳು. ಆದಕ್ಕೆ ಮಂಡೋದರಿಯು ಲಂಕೆಯನ್ನು ಹೊಗಲು ಯಾರಿಗೂ ಅಸಾಧ್ಯವಾದುದೆಂದೂ ಸೀತೆಗೆ ಸುದ್ದಿಯನ್ನು ಹೇಳಿದುದು ಕರ್ಣ ಪಿಶಾಚವಿರಬಹುದೆಂದೂ ಮಾತನಾಡುತ್ತಿರುವಲ್ಲಿ, ಹನುಮಂತನು ತನ್ನ ನಿಜ ಸ್ವರೂಪವನ್ನು ತೋರಲು ಖಚರ ಸ್ತ್ರೀಯರೆಲ್ಲರೂ ಭಯಪಟ್ಟು ಸೀತೆಯ ಮರೆ ಯನ್ನು ಹೊಕ್ಕರು. ಆಗ ವಾಯುಪುತ್ರನು ತನ್ನ ವೃತ್ತಾಂತವೆಲ್ಲವನ್ನೂ ವಿಶದ ವಾಗಿ ತಿಳಿಸಿ, ರಾಮನು ಸೀತಾದೇವಿಯ ಅಗಲಿಕೆಗೆ ಬಹಳ ವ್ಯಥೆಪಡುತ್ತಿರುವ ನೆಂದು ಬಿನ್ನವಿಸಿ, ತನ್ನಲ್ಲಿ ಸೀತೆಗೆ ನಂಬಿಕೆ ಹುಟ್ಟುವುದಕ್ಕಾಗಿ ಅವರ ವನವಾಸ ದಲ್ಲಿ ನಡೆದ ಅನೇಕ ವಿಷಯಗಳನ್ನು ಗುರುತಿಗಾಗಿ ಹೇಳಿ ಸೀತಾಪಹರಣವಾದ ಮೇಲೆ ನಡೆದ ವೃತ್ತಾಂತವನ್ನೆಲ್ಲ ಅರಿಕೆಮಾಡಿದನು. ಅದನ್ನು ಕೇಳಿ ಜಾನಕಿಯು ಬಹಳವಾಗಿ ಸಂತೋಷಪಟ್ಟು ಹನುಮಂತನ ಪರಾಕ್ರಮವನ್ನು ಹೊಗಳಿದಳು. ಇದಕ್ಕೆ ಮಂಡೋದರಿಯು ಆಂಜನೇಯನಿಗೆ ಸಮಾನರಾದವರು ಹಿಂದಿನವ ರಲ್ಲಿಯೂ ಈಗಿನವರಲ್ಲಿಯೂ ಯಾವ ಲೋಕದಲ್ಲಿಯೂ ಯಾರೂ ಇಲ್ಲವೆಂದು ಹೇಳಿ ಅವನ ಪರಾಕ್ರಮವನ್ನು ಉಗ್ಗಡಿಸಿ, ರಾವಣನಿಗೆ ಅವನಲ್ಲಿರುವ ಪ್ರೀತಿ

ಯನ್ನೂ ಅವನು ಮಾಡಿರುವ ಉಪಕಾರವನ್ನೂ ಅವನಲ್ಲಿರುವ ದೇಹಸಂಬಂಧವನ್ನೂ ಲಕ್ಷ್ಯಮಾಡದೆ ಆಂಜನೇಯನು ಅಸೇವ್ಯರಾದ ಭೂಚರರಲ್ಲಿ ಈ ರೀತಿಯಾಗಿ ಸೇವಾವೃತ್ತಿಗೆ ನಿಂತಿರುವುದು ಅನ್ಯಾಯವೆಂದು ಹೇಳಿದಳು. ಆದಕ್ಕೆ ಹನುಮಂತನು ಕಪಿಧ್ವಜಕುಲಕ್ಕೆ ರಾಘವನು ಮಾಡಿದ ಉಪಕಾರಕ್ಕಾಗಿ ಪ್ರತ್ಯುಪಕಾರವನ್ನು ಮಾಡಬೇಕೆಂಬ ಉದ್ದೇಶದಿಂದ ಬಂದೆನೆಂದೂ ರಾವಣನು ಪರಸ್ತ್ರೀಗೆ ಆಸೆಪಟ್ಟು ಲೋಕನಿಂದೆಯನ್ನೂ ಲಕ್ಷ್ಯಮಾಡದೆ ಈ ತೆರನಾಗಿ ನಡೆದಿರುವುದು ಕುಲ ನಾಶಕರವೆಂದೂ ಹೇಳಲು ಮಂಡೋದರಿಯು ಲಯಕಾಲದ ಚಂಡಿಕೆಯಂತೆ ಕೋಪಾವಿಷ್ಟಳಾಗಿ ರಾವಣನ ಬಳಿಗೆ ಹೋದಳು.

ಇತ್ತ, ಸೀತಾದೇವಿಯು ಪಂಚ ಪರಮೇಷ್ಠಿಗಳನ್ನು ಸ್ತುತಿಸಿ ಭಕ್ತಿಯಿಂದ ರಾಮನ ಪಾದಗಳನ್ನು ನೆನೆದು ಯತಿವರರಿಗೆ ಮನಸ್ಸಿನಲ್ಲಿ ಆಹಾರದಾನವನ್ನಿತ್ತು ಪಾರಣೆಯನ್ನು ಮಾಡಿದಳು. ಆಂಜನೇಯನು ಸೀತಾದೇವಿಯನ್ನು ರಾಮನಲ್ಲಿಗೆ ಕರೆದುಕೊಂಡು ಹೋಗುವೆನೆಂದು ಬಿನ್ನವಿಸಲು ಆಕೆಯು ರಾಮನಪ್ಪಣೆಯಿಲ್ಲದೆ ಹೊರಡುವುದು ಉಚಿತವಲ್ಲವೆಂದೂ ಹನುಮಂತನು ಕೂಡಲೆ ಹೊರಟು ಹೋಗಿ ತನ್ನ ವೃತ್ತಾಂತವನ್ನು ರಾಮಚಂದ್ರನಿಗೆ ತಿಳಿಸಬೇಕೆಂದೂ ಹೇಳಿ ಅವನಿಗೆ ತನ್ನ ಚೂಡಾರತ್ನವನ್ನು ಕೊಟ್ಟಳು. ಆಗ ಆಂಜನೇಯನು ತಾನು ಅಲ್ಲಿಗೆ ಬಂದದ್ದೂ ಹೋದದ್ದೂ ಯಾರಿಗೂ ತಿಳಿಯದೆ ಹೋದಲ್ಲಿ ತನ್ನ ಪರಾಕ್ರಮಕ್ಕೆ ಕೀಳನ್ನುಂಟು ಮಾಡುವುದೆಂದು ತಿಳಿದು, ಅಲ್ಲಿಯ ಖಳರನ್ನು ಕೊಂದು ಉದ್ಯಾನವನ್ನು ಕೆತ್ತು ಪುರವನ್ನು ಸುಟ್ಟು ರಾವಣನಿಗೆ ತಾನು ಬಂದಿರುವುದನ್ನು ಈ ರೀತಿಯಾಗಿ ತಿಳಿಯಿಸುವೆನೆಂದು ಆಲೋಚನೆಮಾಡಿದನು.

ಅತ್ತ, ಮಂಡೋದರಿಯು ಹನುಮಂತನ ವಿಷಯವನ್ನು ರಾವಣನಿಗೆ ತಿಳಿಸಲು ಅವನು ರೋಷಾವೇಶವುಳ್ಳವನಾಗಿ ಕದನ ಸಮರ್ಥರಾದ ರಾಕ್ಷಸರನ್ನು ಕರೆದು ಹನುಮಂತನನ್ನು ಕೊಂದುಬನ್ನಿರೆಂದು ನಿಯಮಿಸಿದನು. ಅವರು ತಂಡೋಪತಂಡವಾಗಿ ವನಕ್ಕೆ ಬಂದು ಆಂಜನೇಯನ ಮೇಲೆ ಬೀಳಲು, ಆತನು ಅಲ್ಲಿಯ ಮರಗಳನ್ನು ಕಿತ್ತು ಅವುಗಳಿಂದ ಎಲ್ಲರನ್ನೂ ಕೊಂದನು. ಈ ವಾರ್ತೆಯನ್ನು ಒಬ್ಬ ನಿಶಾಚರನು ರಾವಣನಿಗೆ ತಿಳಿಸಲು ಅವನು ಕಿಡಿಕಿಡಿಗೊಂಡು ಸಿಂಹಾಸನದಿಂದೆದ್ದು ತಾನೇ ಯುದ್ಧಕ್ಕೆ ಹೊರಡಬೇಕೆಂದಿರುವಲ್ಲಿ ಮಗನಾದ ಇಂದಗಿಯು ಬಂದು ಏಕಾಕಿಯಮೇಲೆ ಯುದ್ಧಮಾಡಲು ಲೋಕಾಧಿಪತಿಯಾದ ರಾವಣನು ಹೊರಡುವುದು ಲೋಕಾಪವಾದಕ್ಕೆ ಗುರಿಮಾಡುವುದೆಂದು ತಿಳಿಸಿ, ತಾನು ಹೋಗಿ ಹನುಮಂತನನ್ನು ಸೆರೆಹಿಡಿದು ತಂದೊಪ್ಪಿಸುವೆನೆಂದು ಹೇಳಿ ಅಪ್ಪಣೆಪಡೆದು ಹೊರಟನು. ಇದನ್ನು ತಿಳಿದು ಹನುಮಂತನು ತಾನು ಹೊರಗೆ ನಿಲ್ಲಿಸಿ ಬಂದಿದ್ದ ಸೈನ್ಯವನ್ನು ಬರಿಸಿ ವಿಜಯರಥಾರೂಢನಾಗಿ ಲಂಕಾಪುರವೆಲ್ಲವೂ

ತಲ್ಲಳಿಸುವಂತೆ ಕಾದಿ ಹೆಸರಾದ ನಾಯಕರನೇಕರನ್ನು ಕೊಲ್ಲಲು ಇಂದಗಿಯು ಮುಳಿದು ಹನುಮಂತನ ಮೇಲೆ ಬಿದ್ದನು. ಆಗ ಹನುಮಂತನು ತನಗೆ ರಾಘವನು ತನ್ನ ಪರಾಕ್ರಮವನ್ನು ತೋರಿಸುವ ಅಪ್ಪಣೆಯನ್ನು ಕೊಡಲಿಲ್ಲವೆಂದೂ ಆದುದರಿಂದ ತಾನು ಇಂದಗಿಗೆ ಸಿಕ್ಕಿ ರಾವಣನ ಬಳಿಗೆ ಹೋಗಿ ಲಂಕಾದಹನ ಮಾಡುವೆನೆಂದೂ ಆಲೋಚಿಸಿ ತನ್ನ ಸೈನ್ಯವನ್ನು ಬೀಡಿಗೆ ಕಳುಹಿಸಿ ತಾನು ಯುದ್ಧಕ್ಕೆ ಭಯಪಟ್ಟವನಂತೆ ಸೆರೆಸಿಕ್ಕಿದನು. ಅವನನ್ನು ಇಂದಗಿಯು ರಾವಣನ ಬಳಿಗೆ ತೆಗೆದುಕೊಂಡುಹೋಗಿ ಅವನ ವೃತ್ತಾಂತವೆಲ್ಲವನ್ನೂ ತಿಳಿಸಿ ಅವನಿಗೆ ತಕ್ಕ ಶಿಕ್ಷೆಯನ್ನು ಮಾಡಬೇಕೆಂದು ಬಿನ್ನವಿಸಲು ರಾವಣನು ಬಹಳ ಕೋಪದಿಂದ, "ಎಲೈ ಹನುಮಂತನೇ! ನೀನು ನಿನ್ನ ವಂಶದ ಉನ್ನತಿಯನ್ನೂ ಪದ್ಧತಿಯನ್ನೂ, ನಾನು ನಿನ್ನನ್ನು ಇಂದಗಿಗೆ ಸಮಾನವಾಗಿ ಭಾವಿಸಿ ಮಾಡಿರುವ ಮನ್ನಣೆಯನ್ನೂ ಲಕ್ಷ್ಯಮಾಡದೆ ಲಜ್ಜೆಯನ್ನು ತೊರೆದು ಮನುಷ್ಯಮಾತ್ರದವನಿಗೆ ಚರನಾಗಿ ಬರುವುದು ನ್ಯಾಯವೇ? ಹಗೆಗಳೊಡನೆ ಕೂಡಿದ ದುರಾತ್ಮನಾದ ನಿನ್ನನ್ನು ದಂಡಿಸಲೇ ಬೇಕು" ಎನ್ನಲು, ಸುತ್ತಲಿದ್ದ ಕೆಲವರು, ಆಂಜನೇಯನನ್ನು ಸ್ವಾಮಿದ್ರೋಹಿಯೆಂದು ಮೂದಲಿಸಿದರು. ಇದಕ್ಕೆ ಮಾರುತಿಯು ಮುಳಿದು, "ಅಯ್ಯಾ! ಪರಸ್ತ್ರೀಯನ್ನು ಹಿಡಿತಂದು ತೋಯದವಾಹನನ ವಂಶಕ್ಕೆ ಕೆಟ್ಟ ಹೆಸರನ್ನು ತಂದ ರಾವಣನ ಅನ್ಯಾಯವನ್ನು ಆಲೋಚಿಸದೆ ದೋಷಕ್ಕೆಡೆಗೊಟ್ಟ ನೀವು ಪಾಪಿಗಳಲ್ಲವೇ? ನಿಮಗೂ ರಾವಣನಿಗೂ ವಿಧಿಯು ಸೌಮಿತ್ರಿಯ ಕೈಯಿಂದ ರಣರಂಗದಲ್ಲಿ ಸಾವನ್ನು ಬರೆದಿರುವಾಗ ಅದನ್ನು ತೊಡೆಯುವುದು ಯಾರಿಂದಾಗುವುದು?" ಎಂದು ಪಲತೆರನಾಗಿ ಮೂದಲಿಸಲು ದಶಮುಖನು ಬಹಳ ಸಿಟ್ಟಾಗಿ, ಅವನ ಹರಟೆಗೆ ಎಡೆಗುಡದೆ ಅವನನ್ನು ರಾಮದೂತನೆಂದು ಡಂಗುರ ಹೊಡೆಯಿಸಿ ಅವಮಾನ ಪಡಿಸಿ ಅಟ್ಟಿಬಿಡಿರೆಂದು ತನ್ನವರಿಗೆ ಹೇಳಿದನು. ಅದನ್ನು ಕೇಳಿ ಹನುಮಂತನು ಕಣ್ಣಿನಿಂದ ಕಿಡಿಗಳನ್ನು ಸುರಿಸುತ್ತ ಕೋಪದಿಂದ ಉರಿದುಬಿದ್ದು ಅಲ್ಲಿದ್ದ ಕೆಲವರನ್ನು ತುಳಿದು, ಕೆಲವರನ್ನು ಹೊಡೆದು, ಕೆಲವರನ್ನು ಎಲುಬು ಮುರಿದು, ಮತ್ತೆ ಕೆಲವರನ್ನು ಕಾಲುಹಿಡಿದೆತ್ತಿ ಅಪ್ಪಳಿಸಿ ಕೊಂದು, ಸಿಂಹಲಂಘನದಿಂದ ಆಕಾಶಕ್ಕೆ ನೆಗೆದು ತನ್ನ ದಹನ ವಿದ್ಯೆಯಿಂದ ಲಂಕಾಪಟ್ಟಣದಲ್ಲಿಯ ಎಲ್ಲ ಮನೆಗಳನ್ನೂ ರಾವಣನ ಅರಮನೆಯನ್ನೂ ಸುಟ್ಟನು. ತರುವಾಯ ಆತನು ತನ್ನ ಸೇನೆಯೊಡಗೂಡಿ ಹೊರಟು ಕಿಷ್ಕಿಂಧಪುರವನ್ನು ಸೇರಿ ರಾಮಚಂದ್ರನ ಬಳಿಗೆ ಬರುತ್ತಿರುವಲ್ಲಿ ಅವನ ಮುಖಚಿಹ್ನೆಗಳಿಂದ ಕಾರ್ಯಸಿದ್ಧಿಯಾಯಿತೆಂದು ಎಲ್ಲರೂ ತಿಳಿದರು. ಹನುಮಂತನು ರಾಮಚಂದ್ರನಿಗೆ ಪೊಡಮಟ್ಟು ಚೂಡಾರತ್ನವನ್ನು ಕೊಡಲು ರಾಮನ ಕಣ್ಣುಗಳಿಂದ ಆನಂದಬಾಷ್ಪಗಳು ಸುರಿದುವು; ಸೀತೆಯ ವೃತ್ತಾಂತವನ್ನು ಕೇಳಬೇಕೆಂಬ ಕುತೂಹಲವು ಹಿಡಿಯದಂತಾಯಿತು. ಆಂಜನೇಯನು ಸೀತಾರಾಮರಿಗೆ ತಿಳಿದಿದ್ದ ಕೆಲವು ಗುರುತುಗಳನ್ನು ಸೀತೆಯಿಂದ

ತಿಳಿದವನಾಗಿ ಅವನ್ನು ರಾಮನಿಗೆ ಹೇಳಿದನು. ಆಂಜನೇಯನ ಪ್ರಧಾನ ಮಂತ್ರಿಯಾದ ಪೃಥುಮತಿಯು ಆಂಜನೇಯನು ಲಂಕೆಯಲ್ಲಿ ತೋರಿಸಿದ ಪರಾಕ್ರಮವನ್ನು ವಿಸ್ತರಿಸಿ ಹೇಳಲು ಎಲ್ಲರೂ ಆಂಜನೇಯನನ್ನು ಹೊಗಳಿದರು. ಲಕ್ಷ್ಮಣನು ಇನ್ನು ತಡವೇತಕ್ಕೆಂದು ಸುಗ್ರೀವನೊಡನೆ ಹೇಳಲು ಆತನು ತನ್ನ ಸೈನ್ಯವು ನಭೋಗಮನ ವಿದ್ಯೆಯಿಂದ ಸಮುದ್ರವನ್ನು ದಾಟುವುದಕ್ಕೆ ಸಾಮರ್ಥ್ಯವುಳ್ಳದ್ದೆಂದೂ ಹೇಳಿ ಅಜೇಯರಾದ ತನ್ನ ಯೋಧರೊಡನೆ ವಿಜಯ ಪ್ರಯಾಣಕ್ಕೆ ಸಿದ್ಧನಾದನು.

ಆಶ್ವಾಸ ೧೨—ಲಂಕಾ ದಿಗ್ವಿಜಯ ಪ್ರಯಾಣ

ಶ್ರೀರಾಮನು ಪ್ರಾತಃಕಾಲದಲ್ಲಿ ಜಿನಪೂಜೆಯನ್ನು ಮಾಡಿ ಓಲಗ ಸಾಲೆಗೆ ಬಂದು ಸಿಂಹಾಸನವನ್ನಲಂಕರಿಸಿ ಕುಳಿತಿರಲು, ಪಕ್ಕದ ಮಣಿಮಯಾಸನದಲ್ಲಿ ಲಕ್ಷ್ಮಣನೂ, ಸುತ್ತಲೂ ಸುಗ್ರೀವ ಅಂಗದ ನಳ ನೀಲ ಜಾಂಬವ ಹನುಮ ಮೊದಲಾದ ಖಚರ ಪರಿವೃಢರೂ ಸೇನಾನಾಯಕರೂ ಸಮುಚಿತಾಸನಗಳಲ್ಲಿ ಕುಳಿತುಕೊಂಡರು. ಆಗ ಪುರೋಹಿತನು ಸ್ವಸ್ತಿಯನ್ನು ಹೇಳಿ ದಿಗ್ವಿಜಯ ಪ್ರಯಾಣ ಲಗ್ನವು ಸವಿಾಪಿಸಿತೆಂದು ವಿನ್ನವಿಸಲು ಸೇನಾಧಿಪತಿಯಾದ ನಳನು ವಿಜಯ ದುಂದುಭಿಯನ್ನು ಹೊಡೆಯಿಸಿದನು. ಆಗ ಕುಲವೃದ್ಧರೂ ಕುಲಾಂಗನೆಯರೂ ಆಶೀರ್ವಾದಮಾಡಲು ರಾಮಚಂದ್ರನು ಸಿಂಹಾಸನದಿಂದೆದ್ದು ಲಕ್ಷ್ಮಣನೊಡನೆ ಪರಿವಾರ ಸಮೇತನಾಗಿ ಹೊರಟು ಜಯಘೋಷವು ದಿಕ್ತಟಗಳನ್ನು ತುಂಬುತ್ತಿರುವಲ್ಲಿ ರಥವನ್ನೇರಿ ದಕ್ಷಿಣಾಭಿಮುಖವಾಗಿ ನಡೆದನು. ಆಗ ಲಕ್ಷ್ಮಣನು ಸೇನಾನಾಯಕರನ್ನು ತಂತಮ್ಮ ಸೈನ್ಯದೊಡನೆ ತಕ್ಕ ಸ್ಥಳಗಳಲ್ಲಿರುವಂತೆ ನಿಯಮಿಸಿ ತಾನೂ ಹನುಮನೂ ರಥಾರೂಢರಾಗಿ ಸಕಲ ವಿದ್ಯಾಧರ ನಾಯಕರೊಡನೆ ದಾಶರಥಿಯ ಎರಡು ಪಕ್ಕಗಳಲ್ಲಿಯೂ ಮೆಯ್ಗಾವಲಾಗಿ ನಡೆದರು. ಹೀಗೆ ನಡೆಯುತ್ತ ಸೇನೆಯು ವೇಲಾಂಧಪುರದ ಸವಿಾಪಕ್ಕೆ ಬರಲು, ಆ ಪುರಾಧಿಪತಿಯಾದ ಸಮುದ್ರನೆಂಬ ಹೆಸರುಳ್ಳ ವಿದ್ಯಾಧರನು ಮುಂದೆ ನಡೆಯುತ್ತಿದ್ದ ನಳನ ಸೈನ್ಯವನ್ನಡ್ಡಗಟ್ಟಿ ಯುದ್ಧಕ್ಕೆ ಸಿದ್ಧಲು ಅವನನ್ನು ನಳನು ಸೋಲಿಸಿ ರಾಮಚಂದ್ರನಿಗೆ ತಂದೊಪ್ಪಿಸಿದನು. ಆತನು ಸಮುದ್ರನಿಗೆ ಅಭಯವನ್ನು ಕೊಟ್ಟು ಮನ್ನಿಸಲು, ಸಮುದ್ರನು ತನ್ನ ನಾಲ್ವರು ಮಕ್ಕಳನ್ನು ಲಕ್ಷ್ಮಣನಿಗೆ ಕೊಟ್ಟು ಮದುವೆಮಾಡಿ ಭೃತ್ಯ ಪದವಿಯಲ್ಲಿ ನಿಂತು ತನ್ನ ಪೂರ್ವ ಪದವಿಯನ್ನು ಪಡೆದನು. ತರುವಾಯ ಸುವೇಲಾಚಲದೊಡೆಯನಾದ ಸುವೇಲನು ರಾಮನಿಗೆ ಶರಣಾಗತನಾದನು. ರಾಮನು ಸೇನಾಸಮೇತನಾಗಿ ಆ ದಿನ ಸುವೇಲಾಚಲವಲ್ಲಿದ್ದು ಮರುದಿನ ಲಂಕಾದ್ವೀಪದ ಸವಿಾಪದಲ್ಲಿರುವ ಹಂಸದ್ವೀಪದ ಬಳಿಗೆ ಬರುತ್ತಿರುವಲ್ಲಿ ಆ ದ್ವೀಪಾಧಿಪತಿಯಾದ ನಭಶ್ಚರನು ಅಸಂಖ್ಯಾತ ಬಲ ಸಮೇತನಾಗಿ ಮೇಲೆ ಬೀಳಲು ನಳನು ಅವನನ್ನು

ಜಯಿಸಿ ಶರಣಾಗತನನ್ನಾಗಿ ಮಾಡಿದನು. ಲಕ್ಷ್ಮಣನು ಆ ದ್ವೀಪದಲ್ಲಿ ಬೀಡನ್ನು ಬಿಟ್ಟು ಪ್ರಭಾಮಂಡಲನನ್ನು ಬರುವಂತೆ ಹೇಳಿಕಳುಹಿಸಿ, ಸುತ್ತಮುತ್ತಲಿರುವ ದ್ವೀಪಾಂತರಗಳ ವಿದ್ಯಾಧರಾಧಿರಾಜರನ್ನು ಆಜ್ಞಾವಿಧೇಯರನ್ನಾಗಿ ಮಾಡಿದನು.

ಇತ್ತ, ರಾವಣನು ಸಿಂಹಾಸನವನ್ನೇರಿ ಒಡ್ಡೋಲಗಂಗೊಟ್ಟಿರುವಲ್ಲಿ ಚಾರನೊಬ್ಬನು ಬಂದು ಕೈಮುಗಿದು ನಿಂತು, ಮನುಷ್ಯಮಾತ್ರದವರಾದ ರಾಮ ಲಕ್ಷ್ಮಣರು ಅನೇಕ ಸಾವಿರ ಮಂದಿ ಖೇಚರರಿಂದಲೂ ರಾವಣನನ್ನು ಬಿಟ್ಟುಳಿದ ಸಾಮಂತರಿಂದಲೂ ಕೂಡಿ ಯುದ್ಧಕ್ಕೆ ಬರುತ್ತಿರುವರೆಂದು ಬಿನ್ನವಿಸಲು, ರಾವಣನು ಮುಗುಳ್ನಗೆ ನಕ್ಕು ತನ್ನ ಸಾಮಂತರು ಕಪ್ಪ ಕೊಡುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಏಕಾಕಿಗಳಾದ ರಾಮಲಕ್ಷ್ಮಣರನ್ನು ಮುಂದಿಟ್ಟುಕೊಂಡು ಸಂಧಾನ ಮಾಡಿ ಬರುತ್ತಿರುವಂತಿದೆಯೆಂದು ಹೇಳಲು ಮೇಘವಾಹನ ಮೊದಲಾದ ಸಭಾಸದರೆಲ್ಲರೂ ಮಾರ್ದನಿಗೊಟ್ಟರು. ಆದರೆ ವಿಭೀಷಣನು ಮಾತ್ರ ಅದಕ್ಕೊಪ್ಪಿ ಸುಮ್ಮನಿರದೆ ಅಣ್ಣನಿಗೆ ಬುದ್ಧಿವಾದವನ್ನು ಹೇಳಿ ಪರಸ್ತ್ರೀಯ ದೆಸೆಯಿಂದ ನಾನಾ ವಿಧವಾದ ಕ್ಲೇಶಗಳುಂಟಾಗುವುವೆಂದೂ ಕುಲನಾಶವಾಗುವುದೆಂದೂ ಸೀತೆಯನ್ನು ರಾಮನಿಗೊಪ್ಪಿಸಿದರೆ ತಾವೆಲ್ಲರೂ ಒಂದೇ ಕಡೆ ಸುಖದಿಂದಿರಬಹುದೆಂದೂ ತಿಳಿಸಿದನು. ಇದಕ್ಕೆ ಇಂದಗಿಯು ಕೋಪಾವಿಷ್ಟನಾಗಿ ವಿಭೀಷಣನನ್ನು ದೂಷಿಸಿ, ತಾರಾದ್ರಿಯನ್ನು ತೋಳಬಲದಿಂದೆತ್ತಿದ ರಾವಣನನ್ನು ಮನುಷ್ಯಮಾತ್ರದವರು ಗೆಲ್ಲುವುದು ಸಾಧ್ಯವಲ್ಲೆಂದೂ ಸುಮ್ಮನೆ ಭಯಪಡುವುದು ಅನುಚಿತವೆಂದೂ ನುಡಿದನು. ಇದನ್ನು ಕೇಳಿ ವಿಭೀಷಣನು ಸಿಟ್ಟಾಗಿ ತಂದೆಯ ರಾಜ್ಯಕ್ಕಾಸೆಪಟ್ಟು ದುರ್ಯಶಸ್ಸಿಗಂಜದೆ ಬಲ್ಲಿದರಲ್ಲಿ ಕಲಹವನ್ನು ಬಯಸುವುದು ತಪ್ಪೆಂದೂ ಖರದೂಷಣರನ್ನು ಸುಲಭವಾಗಿ ಸಂಹರಿಸಿ ಪ್ರಸಿದ್ಧರಾದ ಖೇಚರರನ್ನು ಸಾಮರ್ಥ್ಯದಲ್ಲಿ ವಿಚಾರಿಸಿದ ಸೌಮಿತ್ರಿಗೆ ಎಣೆ ಯಾರೂ ಇಲ್ಲವೆಂದೂ ರಣಭೂಮಿಯಲ್ಲಿ ರಾಮ ಬಾಣವು ಯಾರನ್ನೂ ಉಳಿಯಲೀಯದೆಂದೂ ಆದುದರಿಂದ ಸೀತೆಯನ್ನೊಪ್ಪಿಸಿ ರಾಮಲಕ್ಷ್ಮಣರೊಡನೆ ಸಂಧಿಮಾಡಿಕೊಳ್ಳುವುದೇ ಸರಿಯೆಂದೂ ಹಾಗೆ ಮಾಡದೆ ಕಾದಿದಲ್ಲಿ ಅಪವಾದವು ಶಾಶ್ವತವಾಗಿ ನಿಲ್ಲುವುದೆಂದೂ ತಿಳಿಸಿದನು.

ಈ ಮಾತನ್ನು ಕೇಳಿ ರಾವಣನು ರೌದ್ರಾಕಾರನಾಗಿ ಚಂದ್ರಹಾಸಾಸಿಯನ್ನು ಒರೆಯಿಂದ ಸೆಳೆಯಲು ವಿಭೀಷಣನು ಗದಾದಂಡವನ್ನು ಹಿಡಿದು ರಾವಣನೆದುರಿಗೆ ಅದಿರದೆ ನಿಂತನು. ಇದನ್ನು ನೋಡಿ ಕುಲವೃದ್ಧರು ಅಡ್ಡವಾಗಿ ಬಂದು ರಾವಣನನ್ನು ಸಮಾಧಾನಪಡಿಸಲು ಅವನು ಮುಗುಳ್ನಗೆ ನಕ್ಕು, "ಅಯ್ಯಾ! ಮನುಷ್ಯ ಮಾತ್ರದವನು ನನಗಿಂತಲೂ ಬಲಿಷ್ಠನೇ? ಅಂಥವನ ಮಾತನ್ನು ಕೇಳಿ ಅವನಲ್ಲಿ ಆಳ್ತನಕ್ಕೆ ನಿಂತು ನನ್ನಲ್ಲಿ ದಾಯಾದಿತ್ವವನ್ನು ತೋರಿಸುತ್ತಿರುವ ಈ ವಿಭೀಷಣನ ಪುಂಡನ್ನಡಗಿಸುವೆನು; ಮುಕ್ಕಣ್ಣನಾದರೂ ನನ್ನ

ಮಾತಿಗಡ್ಡವಾಗಿ ಬಂದು ಬದುಕುವನೇ? ಆದರೆ ಗೋತ್ರವಧೆಯು ಸರಿಯಲ್ಲ ವಾದುದರಿಂದ ವಿಭೀಷಣನನ್ನು ಲಂಕೆಯಿಂದ ಅಟ್ಟಿಬಿಡಿರಿ; ಇವನು ಇಲ್ಲಿದ್ದರೆ ಯುದ್ಧೋತ್ಸಾಹಿಗಳಿಗೆ ಭಯವನ್ನುಪದೇಶಮಾಡುವನು" ಎಂದು ಹೇಳಿದನು. ಇದನ್ನು ಕೇಳಿ ವಿಭೀಷಣನು ತನ್ನ ಸಾಮಂತರಿಂದೊಡಗೂಡಿ ದೊಡ್ಡ ಸೈನ್ಯ ದೊಡನೆ ಲಂಕೆಯಿಂದ ಹೊರಟು ಹಂಸದ್ವೀಪದ ಸಮೀಪಕ್ಕೆ ಬಂದು ತನ್ನ ಮಹ ತ್ತರನನ್ನು ರಾಮನ ಬಳಿಗಟ್ಟಲು ಅವನು ಬಂದು, ರಾವಣನು ಬುದ್ಧಿ ವಾದವನ್ನು ಕೇಳದೆ ಹೋದುದರಿಂದ ವಿಭೀಷಣನು ರಾಮನ ಶರಣಹೊಗಲು ಬಂದಿರುವನೆಂದು ತಿಳಿಸಿದನು. ಆಗ ಮತಿಕ್ರಾಂತ ಮೊದಲಾದ ಮಂತ್ರಿಮುಖ್ಯರು ಇದು ಅಣ್ಣತಮ್ಮಂದಿರಿಗೆ ಹುಸಿ ಜಗಳವಿರಬಹುದೆಂದೂ ತಮಗೆ ಅಪಾಯವನ್ನುಂಟು ಮಾಡುವುದಕ್ಕಾಗಿ ಈರೀತಿ ಬಂದಿರಬಹುದೆಂದೂ ಹೇಳಲು, "ಅಯ್ಯಾ! ನನ್ನಿದುರಿಗೆ ಬರಲು ಅಳುಕಿ ಮೋಸದಿಂದ ಸೀತೆಯನ್ನು ಹೊತ್ತುಕೊಂಡು ಹೋದ ದಶಕಂಠನಿಗೆ ಹೆದರುವುದೇ? ಬೇಡಿದವರಿಗೆ ಕೊಡದೆ, ಎದುರುಬಿದ್ದವರನ್ನಿಕ್ಕದೆ, ಮರೆಹೊಕ್ಕವರನ್ನು ಕಾಯದೆ ಬಾಳುವ ಅರಸುಮಗನ ಭುಜಬಲವು ನಿರರ್ಥಕವು, ಅವನ ಪಾರ್ಥಿವ ಜನ್ಮವು ವ್ಯರ್ಥವು" ಎಂದು ರಾಮನು ಉತ್ತರಕೊಟ್ಟನು. ಆಗ ಅಂಜನಾಸುತನು ವಿಭೀಷಣನ ಗುಣಸ್ತವನಮಾಡಿ, ಅಣ್ಣತಮ್ಮಂದಿರಿಗಿರುವ ದ್ವೇಷ ವನ್ನು ಜನಪ್ರವಾದದಿಂದ ತಾನರಿತಿರುವೆನೆಂದೂ ವಿಭೀಷಣನು ತನಗೆ ಲಂಕೆ ಯಲ್ಲಿ ಸಹಾಯಮಾಡಿ ಮರ್ಯಾದೆಯೊಡನೆ ತನ್ನನ್ನು ಕಳುಹಿಸಿದನೆಂದೂ ಹೇಳಲು ರಾಮನು ಚಾರನನ್ನು ಕರೆಯಿಸಿ ವಿಭೀಷಣನನ್ನು ಬರುವಂತೆ ಹೇಳಿ ಕಳುಹಿಸಿ ದಿವ್ಯವಸ್ತ್ರಾಭರಣಗಳೊಡನೆ ಸುಗ್ರೀವಾಂಗದ ಮೊದಲಾದವರನ್ನು ಎದುರುಗೊಳ್ಳುವುದಕ್ಕಾಗಿ ಮುಂದೆ ಕಳುಹಿಸಿದನು. ವಿಭೀಷಣನು ರಾಜಸಭೆ ಯನ್ನು ಹೊಕ್ಕು ರಾಮನಿಗಡ್ಡಬೀಳಲು ಆತನನ್ನು ರಾಮನು ತಕ್ಕ ಮರ್ಯಾದೆ ಯೊಡನೆ ಕಂಡು ಉಚಿತ ಸಂಭಾಷಣದಿಂದ ತೃಪ್ತಿಪಡಿಸಿ ಬಿಡಾರಕ್ಕೆ ಕಳುಹಿಸಿ ದನು. ಆ ಹೊತ್ತಿಗೆ ಪ್ರಭಾಮಂಡಲನು ಸಹಸ್ರಾಕ್ಷೌಹಿಣೀ ಬಲದೊಡನೆ ಬಂದು ಸೇರಲು ಮರುದಿನ ಎಲ್ಲರೂ ಹೊರಟು ಸಮುದ್ರತೀರಕ್ಕೆ ಬಂದರು.

ಆಗ ನಳನು ನಭೋಗಮನ ವಿದ್ಯೆಯೇ ಸೇತುವಾದುದೆಂಬಂತೆ ಚತು ರಂಗ ಬಲವನ್ನು ಆಕಾಶದಲ್ಲಿ ನಡೆಯಿಸಿದನು. ಜಾಂಬವ ಸುಷೇಣ ವಿಭೀಷಣ ಚಂದ್ರರಶ್ಮಿ ಸುಗ್ರೀವ ಹನುಮ ಮೊದಲಾದವರ ರತ್ನ ವಿಮಾನಗಳು ರಾಮ ಲಕ್ಷ್ಮಣರ ವಿಮಾನಗಳನ್ನು ಸುತ್ತಿ ಬರಲು ಎಲ್ಲ ಸೈನ್ಯವೂ ಕ್ಷಣಮಾತ್ರದಲ್ಲಿ ಸಮುದ್ರವನ್ನು ದಾಟಿ ದಡದಲ್ಲಿದ್ದ ಒಂದು ವನದಲ್ಲಿಳಿದು ತರುವಾಯ ಲಂಕಾಭಿ ಮುಖವಾಗಿ ಹೊರಟು ರಣಭೂಮಿಯನ್ನು ಸೇರಿತು. ಆಗ ಅವರವರಿಗೆ ತಕ್ಕುಂತೆ ಬಿಡಾರಗಳು ಸಿದ್ಧವಾದುವು.

ಆಶ್ವಾಸ ೧೩—ಬಲಾಚ್ಯುತ ಪುಣ್ಯಪ್ರಭಾವ ವರ್ಣನೆ

ರಾಮಚಂದ್ರನ ಸೇನೆಯ ಕೋಲಾಹಲವು ಕಿವಿಗೆ ಬೀಳಲು ರಾವಣನು ಮುನಿದು ಸನ್ನಾಹ ಭೇರಿಯನ್ನು ಹೊಯಿಸಿ ಮನುಷ್ಯಮಾತ್ರದವನು ತನ್ನ ಮೇಲೆ ಎತ್ತಿಬಂದನಲ್ಲವೇ ಎಂದು ಕಿಡಿಕಿಡಿಯಾದನು. ರಾವಣನ ಸಾಮಂತರೆಲ್ಲರೂ ತಂತಮ್ಮ ಸೇನೆಗಳೊಡನೆ ಬಂದು ಸೇರಲು ಅವನು ಮೂವತ್ತುನಾಲ್ಕು ಸಾವಿರ ದಕ್ಷೌಹಿಣೀ ಬಲದೊಡನೆ ಯುದ್ಧಕ್ಕೆ ಸಿದ್ಧನಾದನು. ರಾತ್ರಿ ಕಳೆದು ಬೆಳಗಾಗಲು ಇಂದಗಿ ಮಾರೀಚ ಜಿತಶತ್ರು ಮೇಘವಾಹನ ಕುಂಭಕರ್ಣ ಮೊದಲಾದ ಮಹಾ ರಥರೊಡನೆ ಕೂಡಿ ರಾವಣನು ರಣಭೂಮಿಗೆ ಬರುತ್ತಿರುವಲ್ಲಿ ಉತ್ಪಾತಗಳೂ ಅಪಶಕುನಗಳೂ ತೋರಿದರೂ ಅವನ್ನು ರಾವಣನು ಲಕ್ಷ್ಯಮಾಡದೆ ಬಂದು ಒಡ್ಡಿ ನಿಂತನು. ಆಗ ನಳ ನೀಲ ಅಂಗದಕುಮಾರ ಸುಷೇಣ ಜಾಂಬವ ಮೊದಲಾದ ವಾನರ ಪ್ರಮುಖರೂ ಪ್ರಭಾಮಂಡಲ ಹನುಮ ಮೊದಲಾದ ಖೇಚರ ನಾಯಕರೂ ವಿಭೀಷಣನೂ ಸುಗ್ರೀವನೂ ತಂತಮ್ಮ ಸೈನ್ಯಗಳೊಡನೆ ರಾಮ ಲಕ್ಷ್ಮಣರ ಸುತ್ತಲೂ ತಕ್ಕ ರೀತಿಯಲ್ಲಿ ನಿಂತರು. ಆಗ ರಾಮನ ಸೈನ್ಯದಿಂದ ನಳ ನೀಲರೂ ರಾವಣನ ಸೈನ್ಯದಿಂದ ಹಸ್ತ ಪ್ರಹಸ್ತರೂ ಇದಿರಾಗಿ ಕಾದಿ ನಳನು ಹಸ್ತನನ್ನು ಕೊಲ್ಲಲು ಪ್ರಹಸ್ತನು ಕೋಪಾವೇಶದಿಂದ ನಳನಮೇಲೆ ಬಿದ್ದನು. ಅದನ್ನು ಕಂಡು ನೀಲನು ನಳನನ್ನು ಒಂದಕ್ಕೆ ಬಿಟ್ಟು ತಾನು ಮುಂದಕ್ಕೆ ನುಗ್ಗಿ ಪ್ರಹಸ್ತನನ್ನು ಕೊಂದನು. ಆ ಹೊತ್ತಿಗೆ ಸೂರ್ಯನಸ್ತಮಿಸಲು ಉಭಯ ಬಲದವರೂ ಆಪಹಾರ ತೂರ್ಯವನ್ನು ಹೊಯಿಸಿ ತಂತಮ್ಮ ಬೀಡಿಗೆ ಹೋಗಿ ಸಮರ ಪರಿಶ್ರಮವನ್ನಾರಿಸಿಕೊಳ್ಳುತ್ತಿದ್ದರು.

ಬೆಳಗಾದ ಕೂಡಲೆ ಉಭಯ ಸೈನಿಕರೂ ಯುದ್ಧಸನ್ನದ್ಧರಾಗಿ ಬಂದು ಕಾದುತ್ತಿರುವಲ್ಲಿ ಮಾರೀಚನು ಸಂತಾಪನನ್ನೂ ಮಕರನು ಮಹೋದಧಿಯನ್ನೂ ಗಂಭೀರನು ಉದ್ವಾಮನನ್ನೂ ಸಿಂಹಕಟಿಯು ಪ್ರಥಿತನನ್ನೂ ಕೊಲ್ಲಲು ರಾವಣನ ಸೇನೆಯು ಜಯಘೋಷವನ್ನು ಮಾಡಿತು. ರಾಮನ ಸೇನೆಯು ಭಯಗೊಂಡಿತು. ಕೂಡಲೆ ರಾಮನ ಸೈನ್ಯದಲ್ಲಿಯ ಇತರ ಸಾಮಂತರು ಪ್ರಳಯಕಾಲದ ಭೈರವನ ಭೀಕರಾಕಾರವನ್ನು ತಾಳಿ ರಾವಣನ ಸಾಮಂತರನೇಕರನ್ನು ಕೊಂದರು. ಅದು ವರೆಗೆ ಹೊತ್ತು ಮುಳುಗಲು ಯುದ್ಧವನ್ನು ನಿಲ್ಲಿಸಿ ಅವರವರು ಅವರವರ ಬಿಡಾರಕ್ಕೆ ಹೋದರು. ಮರುದಿನ ಹೊತ್ತು ಮೂಡಿದೊಡನೆಯೇ ಯುದ್ಧವಾರಂಭವಾಗಿ ಉಭಯ ಪಾರ್ಶ್ವಗಳ ನಾಯಕರೂ ಅದ್ಭುತವಾಗಿ ಕಾದಿದರು. ಹೀಗೆ ಕೆಲವು ದಿನಗಳು ನಡೆದಮೇಲೆ ಹನುಮನು ಯುದ್ಧಕ್ಕೆ ನಿಂತು ಅನೇಕ ಮುಂದಿ ಶೂರರನ್ನು ಕೊಂದು ತನ್ನ ರಥವನ್ನು ರಾವಣನಿದ್ದೆಡೆಗೆ ಓಡಿಸಲು ರಾವಣನು ಬಹಳ ಸಿಟ್ಟುಗೊಂಡು ಅವನೊಡನೆ ಕಾದಲು ಸಿದ್ಧನಾಗುತ್ತಿರುವಲ್ಲಿ, ಮಯನ

ಮಕ್ಕಳಾದ ಮಹೋದರ ವಜ್ರೋದರರು ಆಡ್ಡವಾಗಿ ಬಂದು, ಮಹೋದರನು ಅಂಗದನೊಡನೆಯೂ ವಜ್ರೋದರನು ಹನುಮನೊಡನೆಯೂ ಕಾದಿ ಸತ್ತರು. ಹನುಮನು ಕುಂಭಕರ್ಣನ ಮಕ್ಕಳಾದ ಮಾಲಿ ಜಂಬುಮಾಲಿಯೆಂಬವರನ್ನು ಕೊಲ್ಲಲು ಕುಂಭಕರ್ಣನು ಹನುಮನಮೇಲೆ ಬಿದ್ದನು. ಇದನ್ನು ಕಂಡು ರಾಘವನ ಸಾಮಂತರು ಕೆಲವರು ಬಂದು ಹನುಮನನ್ನು ಹಿಂದಿಟ್ಟು ತಾವು ಕಾದಿದರು. ಆಗ ಕುಂಭಕರ್ಣನು ಬಹಳ ಸಿಟ್ಟಾಗಿ ಪ್ರಕ್ಷೋಭಣ ವಿದ್ಯಾ ಶರದಿಂದ ಕಪಿಧ್ವಜರ ಸೈನ್ಯವು ಮೈಮರೆತು ನೆಲಕ್ಕೆ ಬೀಳುವಂತೆ ಮಾಡಲು ಸುಗ್ರೀವನು ನಿದ್ರಾ ಪ್ರಬೋಧಿನಿಯೆಂಬ ದಿವ್ಯಬಾಣದಿಂದ ಹನುಮ ಮೊದಲಾದವರ ನಿದ್ರೆಯನ್ನು ಕಳೆದನು. ಆಗ ರಾವಣನು ಕೋಪಾವಿಷ್ಟನಾಗಿ ಸುಗ್ಗಿಬರಲು ಇಂದಗಿಯು ತಂದೆಯನ್ನು ತಡೆದು ಆತನಪ್ಪಣೆಯನ್ನು ಪಡೆದು ಯುದ್ಧಕ್ಕೆ ನಿಂತು ಸುಗ್ರೀವನನ್ನು ಮೂದಲಿಸಿ ಕಾದುತ್ತಿರುವಲ್ಲಿ ಮೇಘವಾಹನನು ಜನಕಾತ್ಮಜನಮೇಲೆ ಬಿದ್ದನು. ಇಂದಗಿಯು ಸುಗ್ರೀವನನ್ನು ವಿರಥನನ್ನಾಗಿ ಮಾಡಿ ಪನ್ನಗಾಸ್ತ್ರದಿಂದ ಬಿಗಿದನು; ಮೇಘವಾಹನನು ಪ್ರಭಾಮಂಡಲನನ್ನು ಮೂರ್ಛಿತನನ್ನಾಗಿ ಮಾಡಿದನು. ಮತ್ತೊಂದು ಕಡೆಯಲ್ಲಿ ಕುಂಭಕರ್ಣನಿಗೂ ಹನುಮಂತನಿಗೂ ಭಯಂಕರವಾದ ಯುದ್ಧವು ನಡೆದು ಕುಂಭಕರ್ಣನು ಹನುಮಂತನನ್ನು ಹಿಡಿದು ನಾಗಪಾಶವಿದ್ಯೆಯಿಂದ ಕಟ್ಟಿಹಾಕಿದನು. ಆಗ ಅಂಗದನು ಬಂದು ಘೋರ ಯುದ್ಧವನ್ನು ಮಾಡಿ ಕುಂಭಕರ್ಣನನ್ನು ಗೆದ್ದು ಹನುಮಂತನನ್ನೆತ್ತಿಕೊಂಡು ಬಂದು ರಾಘವನಿಗೊಪ್ಪಿಸಿದನು. ವಿಭೀಷಣನು ಇಂದಗಿ ಮೇಘವಾಹನರೊಡನೆ ಯುದ್ಧಕ್ಕೆ ನಿಲ್ಲಲು ಅವರು ತಮ್ಮ ಚಿಕ್ಕಪ್ಪನೊಡನೆ ಕಾದುವುದು ತಕ್ಕದ್ದಲ್ಲವೆಂದು ಹಿಂಜರಿದರು. ಆಗ ವಿಭೀಷಣನು ಪನ್ನಗಶರ ವೇಷ್ಟಿತರಾಗಿದ್ದ ಸುಗ್ರೀವ ಪ್ರಭಾಮಂಡಲರನ್ನು ಕಂಡು ಏನು ಮಾಡಲೂ ತೋರದೆ ವ್ಯಥೆಪಡುತ್ತಿರುವಲ್ಲಿ ಸೂರ್ಯನಸ್ತಮಿಸಲು ರಾವಣನು ಯುದ್ಧವನ್ನು ನಿಲ್ಲಿಸಿದನು. ಆಗ ಲಕ್ಷ್ಮಣನು ಪನ್ನಗಶರ ಮೂರ್ಛಾಗತರಾಗಿದ್ದ ಹನುಮಂತ ಸುಗ್ರೀವ ಪ್ರಭಾಮಂಡಲರನ್ನು ಪ್ರಜ್ಞೆಗೆ ತರುವ ಉಪಾಯವನ್ನು ಅಪ್ಪಣೆಕೊಡಿಸಬೇಕೆಂದು ರಾಮನನ್ನು ಕೇಳಲು, ಆತನು ಹಿಂದೆ ವರವಿತ್ತ ದಿವಿಜನನ್ನು ನೆನೆದಲ್ಲಿ ಅವರ ಉಪದ್ರವವು ಕ್ಷಣ ಮಾತ್ರದಲ್ಲಿ ಪರಿಹಾರವಾಗುವುದೆಂದು ತಿಳಿಸಿದನು. ಲಕ್ಷ್ಮಣನು ರಾಮನಪ್ಪಣೆಯಂತೆ ಮಾಡಲು ಗರುಡಾಧಿಪನಾದ ಮಹಾಲೋಚನನೆಂಬ ದೇವನಿಗೆ ಆಸನ ಕಂಪವಾಗಿ ರಣಪ್ರಪಂಚದಲ್ಲಿರುವ ರಘುವೀರನು ತನ್ನನ್ನು ನೆನೆದನೆಂದು ಅವಧಿಜ್ಞಾನದಿಂದ ಆತನು ತಿಳಿದು, ಸಿಂಹವಾಹಿನಿ ಗರುಡವಾಹಿನಿಯೆಂಬೆರಡು ವಿದ್ಯೆಗಳನ್ನೂ ದಿವ್ಯಾಸ್ತ್ರಗಳನ್ನೂ ಕೊಟ್ಟುಬರುವಂತೆ ತನ್ನನುಚರನಾದ ಚಿಂತಾವೇಗನೆಂಬ ದೇವನಿಗೆ ಅಪ್ಪಣೆಮಾಡಲು ಆತನು ಬಂದು ಸಿಂಹವಾಹಿನಿಯನ್ನು ಶ್ರೀರಾಮನಿಗೂ ಗರುಡವಾಹಿನಿಯನ್ನು ಲಕ್ಷ್ಮೀಧರನಿಗೂ ಸದ್ಭಾವದಿಂದಿತ್ತನು.

ಬಲಾಚ್ಯುತರು ಆ ದೇವನನ್ನು ಮನ್ನಿಸಿ ಜೈನಪೂಜೆ ಮಾಡಿ ಧ್ಯಾನಿಸಿ ತಮ್ಮ ಮನೋರಥ ಸಿದ್ಧಿಯಾದುದಕ್ಕಾಗಿ ಪುಲಕಾಂಕಿತರಾದರು.

ಆಶ್ವಾಸ ೧೪---ರಘುವೀರ ವಿಜಯ ವರ್ಣನೆ

ರಾಮಲಕ್ಷ್ಮಣರು ಚಿಂತಾವೇಗ ದೇವನನ್ನು ನಿರ್ಭರ ಭಕ್ತಿಯಿಂದ ಸ್ತುತಿಸಲು ಆತನು ಸಂತೋಷ ಚಿತ್ತನಾಗಿ ಅವರಿಗೆ ಅನೇಕ ದಿವ್ಯಬಾಣಗಳನ್ನೂ ಧವಳ ಛತ್ರ ಚಾಮರಗಳನ್ನೂ ಸಿಂಹ ಗರುಡ ಧ್ವಜಗಳನ್ನೂ ಅಭೇದ್ಯ ಕವಚಗಳನ್ನೂ ಅನರ್ಘ್ಯ ರತ್ನಭೂಷಣಗಳನ್ನೂ ಕೊಟ್ಟು ತನ್ನ ಸ್ಥಾನಕ್ಕೆ ತೆರಳಿದನು. ಅನಂತರ ಗರುಡವಾಹನಿಯ ಪ್ರಭಾವದಿಂದ ನಾಗಪಾಶವಿದ್ಯೆಯು ಸಡಿಲಿಹೋಗಲು ಹನುಮ ಸುಗ್ರೀವ ಪ್ರಭಾಮಂಡಲರು ಮೂರ್ಛೆಯಿಂದೆಚ್ಚತ್ತು ಸಿಂಹ ಗರುಡ ವಾಹನಾರೂಢರಾಗಿದ್ದ ರಾಮಲಕ್ಷ್ಮಣರಲ್ಲಿಗೆ ಬಂದು ಅವರ ಪುಣ್ಯಪ್ರಭಾವಕ್ಕೆ ಸಂತೋಷಪಟ್ಟು ಆ ವೃತ್ತಾಂತವನ್ನವರಿಂದ ತಿಳಿದು ಎಲ್ಲರೂ ಬೀಡಿಗೆ ಹೋಗಿ ಆ ರಾತ್ರಿ ಸುಖದಿಂದಿದ್ದರು. ಬೆಳಗಾಗುತ್ತಲೆ ಎಂದಿನಂತೆ ರಾವಣನು ರಣಭೂಮಿಗೆ ಬಂದು ಒಡ್ಡಿ ನಿಲ್ಲಲು ರಾಮಲಕ್ಷ್ಮಣರು ನಿತ್ಯ ನಿಯಮಗಳನ್ನು ತೀರಿಸಿ ದೇವನಿತ್ತ ಕವಚಗಳನ್ನು ತೊಟ್ಟು ದಿವ್ಯಾಭರಣ ಭೂಷಿತರಾಗಿ ಸಿಂಹ ಗರುಡ ವಾಹನಗಳನ್ನೇರಿ ಸಿಂಹ ಗರುಡ ಧ್ವಜಗಳನ್ನೆತ್ತಿಸಿ ಧವಳ ಛತ್ರ ಚಾಮರಗಳನ್ನು ಹಿಡಿಯಿಸಿ ಸುಗ್ರೀವ ಪ್ರಭಾಮಂಡಲ ಮರುತ್ಸುತ ವಿಭೀಷಣ ಮೊದಲಾದ ವಿದ್ಯಾಧರರು ಸುತ್ತಿಬರಲು ರಣಭೂಮಿಗೆ ಬಂದು ಒಡ್ಡಿನಿಂತರು.

ಆಗ ಎರಡು ಸೇನೆಗಳೂ ಭಯಂಕರವಾಗುವಂತೆ ಕಾದಿದುವು. ರಾವಣನು ಬಹಳ ರೋಷದಿಂದ ವಾನರ ಸೇನೆಯನ್ನು ಎದುರಿಸಲು ಅದು ಬೆಚ್ಚಿ ಓಡಿಹೋಯಿತು. ಇದನ್ನು ನೋಡಿ ವಿಭೀಷಣನು ರಾವಣನಮೇಲೆ ಯುದ್ಧಕ್ಕೆ ನಿಲ್ಲಲು, ಆತನು ತಮ್ಮನನ್ನು ನೀಚನೆಂದು ಬೈದು ದೊರೆಗೆಟ್ಟ ಮನುಷ್ಯನಿಗೆ ಆಳಾದುದಕ್ಕಾಗಿ ನಾನಾವಿಧವಾಗಿ ಮೂದಲಿಸಿ ಒಡಹುಟ್ಟಿದವನ ಮೇಲೆ ಯುದ್ಧ ಮಾಡಿ ಗೋತ್ರವಧ ಮಹಾಪಾತಕವನ್ನು ಹೇಗೆ ಕಟ್ಟಿಕೊಳ್ಳಲಿ ಎಂದು ಹೇಳಿ ತನ್ನ ಮುಂದೆ ನಿಲ್ಲದೆ ತೊಲಗಿಹೋಗೆಂದನು. ದಶವದನನ ಈ ದುರುಕ್ತಿಗೆ ವಿಭೀಷಣನು ಕೋಪಾವಿಷ್ಟನಾಗಿ ತಾನು ಹೇಳಿದ ಹಿತವನ್ನು ಕೇಳದೆ, ಮೂರು ಲೋಕದಲ್ಲಿಯೂ ಪ್ರಖ್ಯಾತಿಹೊಂದಿದ ತೋಯದವಾಹನನ ವಂಶಕ್ಕೆ ಕುಂದು ಉಂಟಾಗುವಂತೆ ಪರಸ್ತ್ರೀಯನ್ನು ಬಯಸಿದ ದುರ್ಬುದ್ಧಿಯನ್ನುಳಿದು ಜಗನ್ಮಾತೆಯಾದ ಸೀತಾದೇವಿಯನ್ನು ರಾಮಸ್ವಾಮಿಗೊಪ್ಪಿಸಿ ಸಾಮ್ರಾಜ್ಯ ಪದವಿಯಲ್ಲಿ ಸುಖದಿಂದ ನಿಲ್ಲೆಂದು ಬುದ್ಧಿಯನ್ನು ಹೇಳಲು ರಾವಣನು ಬಹಳ ಸಿಟ್ಟಾಗಿ

ವಿಭೀಷಣನೊಡನೆ ಯುದ್ಧಕ್ಕೆ ನಿಂತನು. ಇಬ್ಬರೂ ಕಾದಾಡುತ್ತಿರುವಲ್ಲಿ ಇಂದ್ರ ಜಿತ್ತುಮಾರನು ಪ್ರವೇಶಿಸಿ ವಿಭೀಷಣನೊಡನೆ ಕಾದಲುದ್ಯುಕ್ತನಾಗಲು ಲಕ್ಷ್ಮಣನು ಅವನನ್ನೆದುರಿಸಿದನು. ರಾಘವನು ಕುಂಭಕರ್ಣನ ಮೇಲೆಯೂ ಹನುಮಂತ ಸುಗ್ರೀವ ಪ್ರಭಾಮಂಡಲ ಮೊದಲಾದ ನಾಯಕರು ತಮ್ಮ ಸಮಾನರಾದ ರಾಕ್ಷಸ ಬಲದ ನಾಯಕರ ಮೇಲೆಯೂ ಮಹಾ ಯುದ್ಧವನ್ನು ಹೂಡಿದರು. ಲಕ್ಷ್ಮಣನು ಇಂದಗಿಯನ್ನು ವಿರಥನನ್ನಾಗಿ ಮಾಡಿ ನಾಗಪಾಶದಲ್ಲಿ ಕಟ್ಟಿ ವಿರಾಧಿತನ ಕೈಯಲ್ಲಿ ತನ್ನ ಬೀಡಿಗೆ ಕಳುಹಿಸಿದನು. ರಾಮನು ಕುಂಭಕರ್ಣನನ್ನು ಗೆದ್ದು ಪ್ರಭಾಮಂಡಲನಿಗೊಪ್ಪಿಸಲು ಆತನು ಮೇಘವಾಹನನನ್ನು ನಾಗಪಾಶದಲ್ಲಿ ಕಟ್ಟಿ ಅವನನ್ನೂ ಕುಂಭಕರ್ಣನನ್ನೂ ಬೀಡಿಗೆ ಕೊಂಡುಹೋದನು.

ಇತ್ತ, ರಾವಣನು ವಿಭೀಷಣನೊಡನೆ ಮಹಾಯುದ್ಧವನ್ನು ಮಾಡಿ ಅವನನ್ನು ಕೊಲ್ಲಬೇಕೆಂದಿರಲು ಲಕ್ಷ್ಮಣನು ಕಂಡು ವಿಭೀಷಣನನ್ನು ಮರೆಮಾಡಿ ತಾನು ರಾವಣನೊಡನೆ ಯುದ್ಧಕ್ಕೆ ನಿಂತನು. ಆಗ ರಾವಣನು ಲಕ್ಷ್ಮಣನನ್ನು ದಿವ್ಯಶಕ್ತಿಯಿಂದಿಡಲು ಆ ಶಕ್ತಿಯು ಲಕ್ಷ್ಮಣನನ್ನು ನಿಶ್ಯಕ್ತನನ್ನಾಗಿ ಮಾಡಿ ಮೂರ್ಛೆಗೊಳಿಸಿತು. ಇದನ್ನು ಕೇಳಿ ರಾಮನಿಗೆ ವ್ಯಸನವೂ ಕೋಪಾಟೋಪವೂ ಉಂಟಾಗಲು ಆತನು ರಾವಣನಮೇಲೆ ಬಿದ್ದು ಅವನನ್ನು ಏಳು ಸಾರಿ ವಿರಥನನ್ನಾಗಿ ಮಾಡಿ ಅವನ ಕವಚವನ್ನು ಕತ್ತರಿಸಿ ವ್ರಣಕಾಯನನ್ನಾಗಿ ಮಾಡಿದರೂ ಅವನು ಲಕ್ಷ್ಯ ಮಾಡದಿರಲು ರಾಮನು, ಕುಲಾದ್ರಿಯನ್ನೇ ಭೇದಿಸುವ ತನ್ನ ದಿವ್ಯ ಬಾಣಗಳು ರಾವಣನ ದೇಹವನ್ನು ಸ್ವಲ್ಪವೂ ಭೇದಿಸದೆ ಹೋದುದಕ್ಕೆ ಆಶ್ಚರ್ಯಪಟ್ಟು ದನುಜನು ಅಲ್ಪಾಯುವಲ್ಲವೆಂದು ಬಗೆದನು. ಆ ಹೊತ್ತಿಗೆ ಸೂರ್ಯಾಸ್ತಮಯವಾಗಲು ಎರಡು ಸೇನೆಗಳೂ ತಂತಮ್ಮ ಬೀಡಿಗೆ ಹೋದುವು. ರಾವಣನಿಗೆ ಲಕ್ಷ್ಮಣನನ್ನು ಮೂರ್ಛೆಗೊಳಿಸಿದೆನೆಂಬ ಸಂತೋಷವೂ ತನ್ನ ಮಕ್ಕಳಾದ ಇಂದಗಿ ಮೇಘವಾಹನರೂ ತಮ್ಮನಾದ ಕುಂಭಕರ್ಣನೂ ಸೆರೆಸಿಕ್ಕಿದುದಕ್ಕೆ ವ್ಯಸನವೂ ಉಂಟಾಯಿತು. ಲಕ್ಷ್ಮಣನು ಮೂರ್ಛೆಬಿದ್ದಿರುವುದಕ್ಕಾಗಿ ರಾಮನು ವ್ಯಸನಾಕ್ರಾಂತನಾಗಿರಲು ಜಾಂಬವ ಸುಷೇಣ ಮೊದಲಾದ ಮಂತ್ರಿಗಳು ರಾಮನಿಗೆ ಧೈರ್ಯಹೇಳಿ ಎಂಟನೆಯ ಕೇಶವನಾದ ಲಕ್ಷ್ಮಣನಿಗೆ ಯಾವ ಅಪಾಯವೂ ಉಂಟಾಗದೆಂದೂ ಆತನಿಂದಲೇ ರಾವಣನಿಗೆ ಅಪಾಯವಾಗುವುದೆಂದೂ ಹೇಳಿದರು. ಸುಗ್ರೀವನು ಲಕ್ಷ್ಮಣನ ಸುತ್ತಲೂ ವಿದ್ಯಾಮಯವಾದ ಏಳು ಪ್ರಾಕಾರಗಳನ್ನು ನಿರ್ಮಿಸಿ ಒಂದೊಂದು ಬಾಗಿಲಲ್ಲಿ ಒಬ್ಬೊಬ್ಬ ನಾಯಕನನ್ನು ಸೇನಾಸಮೇತನಾಗಿ ಕಾವಲು ನಿಲ್ಲಿಸಿ ತಾನೂ ಒಂದು ಬಾಗಿಲಲ್ಲಿ ಕಾಯುತ್ತಿದ್ದನು.

ಇತ್ತ, ರಾವಣನು ಆ ರಾತ್ರಿ ಲಕ್ಷ್ಮಣನು ಸಾಯದೆ ಬದುಕನೆಂದೂ ಸತ್ತಲ್ಲಿ, ಸೆರೆಯಾಗಿರುವ ತನ್ನ ಮಕ್ಕಳನ್ನೂ ತಮ್ಮನನ್ನೂ ಹಗೆಗಳು ಉಳಿಸರೆಂದೂ

ವ್ಯಥೆಪಡುತ್ತಿದ್ದನು. ಲಕ್ಷ್ಮೀಧರನು ಮೂರ್ಛೆಹೋದುದನ್ನು ಸೀತಾದೇವಿಯು ಕೇಳಿ ಹಲವು ತೆರನಾಗಿ ಪ್ರಲಾಪಿಸುತ್ತಿರಲು ಖಚರಕಾಂತೆಯಾದ ವಿನೀತೆ ಎಂಬವಳು ಆಕೆಯನ್ನು ಸಮಾಧಾನಪಡಿಸಿ ಲಕ್ಷ್ಮಣನು ವಾಸುದೇವನಾದುದರಿಂದ ಸಾಯುವನಲ್ಲವೆಂದು ಹೇಳಿದಳು. ಆ ಸಮಯಕ್ಕೆ ಜನಕನು ಕಳುಹಿಸಿದ ಗಗನಚರನೊಬ್ಬನು ಕಾಳೆಗದ ಸುದ್ದಿಯನ್ನು ತಿಳಿಯುವುದಕ್ಕಾಗಿ ಬಂದು ಲಕ್ಷ್ಮಣನ ಮೂರ್ಛಾವೃತ್ತಾಂತವನ್ನರಿತು ಆ ಮೂರ್ಛೆಯನ್ನು ಪರಿಹರಿಸುವ ಉಪಾಯವನ್ನು ತಾನು ಬಲ್ಲೆನೆಂದು ಹೇಳಲು ಪ್ರಭಾಮಂಡಲನು ಅತ್ಯಂತ ಸಂತೋಷದಿಂದ ಅವನನ್ನು ರಾಮಸ್ವಾಮಿಯ ಬಳಿಗೆ ಕರೆದುಕೊಂಡು ಹೋದನು. ಆ ಗಗನಚರನು ರಾಮಸ್ವಾಮಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿ ಲಕ್ಷ್ಮೀಧರನಿಗೆ ಸರ್ವಕ್ಷೇಮವಾಗುವುದೆಂದು ಹೇಳಿ ತನ್ನ ಬಿನ್ನಪವನ್ನು ಕೇಳಬೇಕೆಂದು ಈ ರೀತಿಯಾಗಿ ಹೇಳತೊಡಗಿದನು:—

"ನಾನು ದೇವನೀತಪುರದೊಡೆಯನಾದ ಶಶಿಮಂಡಲನ ಮಗನು, ಅತಿಚಂದ್ರನೆಂಬ ಖೇಚರನು. ಒಂದಾನೊಂದು ದಿನ ವಾಯುಪಥದಲ್ಲಿ ನಾನು ವಿಹರಿಸುತ್ತಿರುವಾಗ ಸಹಸ್ರವಿಜಯನೆಂಬ ನನ್ನ ಹಗೆಯೊಬ್ಬನು ನನ್ನಮೇಲೆ ಬಿದ್ದು ಶಕ್ತಿಯಿಂದಿಡಲು ಸತ್ವವುಡುಗಿ ಆಕಾಶಮಾರ್ಗದಿಂದ ಬಿದ್ದು ಸಾಕೇತದ ಮಹೇಂದ್ರೋದ್ಯಾನವನವನ್ನು ಸೇರಿದೆನು. ಅಲ್ಲಿಗೆ ಆಗ ಭರತನು ನನ್ನ ಪುಣ್ಯವಶದಿಂದ ಬಂದು ನನ್ನನ್ನು ಕರುಣದಿಂದ ಕಂಡು ದಿವ್ಯ ಸುಗಂಧ ತೋಯವನ್ನು ತರಿಸಿ ನನ್ನ ಮೈಗೆ ಹಚ್ಚಲು ಶಕ್ತಿಯು ಶಕ್ತಿಗುಂದಿ ನಾನು ಮೂರ್ಛೆಯಿಂದೆಚ್ಚತ್ತೆನು. ಆ ಗಂಧ ಸಲಿಲಕ್ಕೆ ಅಷ್ಟು ಸಾಮರ್ಥ್ಯವಿರುವುದರ ಕಾರಣವೇನೆಂದು ನಾನು ಭರತನನ್ನು ಕೇಳಲು ಆತನು ತನ್ನ ಮಾವನಾದ ದ್ರೋಣಮೇಘನ ಹೆಂಡತಿಯು ಅನೇಕ ವ್ಯಾಧಿಗಳಿಂದ ಪೀಡಿತಳಾಗಿರುವಾಗ ಗರ್ಭವನ್ನು ಧರಿಸಿ ಒಂದು ಹೆಣ್ಣು ಮಗುವನ್ನು ಹೆರಲು ವ್ಯಾಧಿಯು ನಾಶವಾಯಿತೆಂದೂ ಆ ಕೂಸಿಗೆ ಆ ಕಾರಣದಿಂದ ವಿಶಲ್ಯಸೌಂದರಿಯೆಂಬ ಹೆಸರಾಯಿತೆಂದೂ ಆ ಮಗುವಿನ ಮಜ್ಜನ ಜಲದಿಂದ ತನ್ನ ದೇಶವೆಲ್ಲವೂ ವ್ಯಾಧಿರಹಿತವಾಯಿತೆಂದೂ ದ್ರೋಣಮೇಘನು ತನಗೆ ತಿಳಿಸಿದನೆಂದು ಹೇಳಿದನು. ಇಷ್ಟೇ ಅಲ್ಲದೆ ವಿಶಲ್ಯಸೌಂದರಿಗೂ ಲಕ್ಷ್ಮಣನಿಗೂ ಪೂರ್ವಜನ್ಮದ ಸಂಬಂಧವಿರುವುದೆಂದು ಸರ್ವಭೂತಹಿತ ಭಟ್ಟಾರಕರು ಭರತನಿಗೆ ತಿಳಿಸಿದುದನ್ನೂ ಆತನು ನನಗೆ ತಿಳಿಸಿದನು."

ಹೀಗೆಂದು ಅತಿಚಂದ್ರವಿಯಚ್ಚರನು ಬಿನ್ನವಿಸಲು ರಾಮಚಂದ್ರನು ಮೆಚ್ಚಿ ಆತನಿಗೆ ಮೆಚ್ಚುಗೊಟ್ಟು ಹನುಮ ಅಂಗದ ಪ್ರಭಾಮಂಡಲ—ಇವರನ್ನು ಗಂಧೋದಕವನ್ನು ತರುವುದಕ್ಕಾಗಿ ಭರತನ ಬಳಿಗೆ ಅಟ್ಟಿದನು. ಅವರು ವಿಮಾನಗಳ

ನ್ನೇರಿ ಮನೋವೇಗದಿಂದ ಸಾಕೇತಪುರವನ್ನು ಹೊಕ್ಕು ಭರತನನ್ನು ಕಂಡು ರಣವಾರ್ತೆಯನ್ನು ಸಂಕ್ಷೇಪವಾಗಿ ತಿಳಿಸಿ ತಾವು ಬಂದ ಕಾರ್ಯವನ್ನು ಹೇಳಿ ಆ ರಾತ್ರಿಯೇ ವಿಶಲ್ಯಸೌಂದರಿಯು ಮಿಂದ ಗಂಧೋದಕವನ್ನು ತಂದು ಕೊಡಬೇಕೆಂದೂ ಇಲ್ಲದಿದ್ದರೆ ಹೊತ್ತು ಹುಟ್ಟಿದೊಡನೆಯೇ ಲಕ್ಷ್ಮಣನ ಪ್ರಾಣವು ಹೋಗುವುದೆಂದೂ ಹೇಳಲು ಭರತ ಶತ್ರುಘ್ನರು ರಾವಣನಮೇಲೆ ಯುದ್ಧಕ್ಕೆ ಹೊರಡಲು ಸನ್ನದ್ಧರಾದರು. ಅದಕ್ಕೆ ಪ್ರಭಾಮಂಡಲನು ರಾಮನಪ್ಪಣೆಯಿಲ್ಲದೆ ಅವರನ್ನು ಕರೆದುಕೊಂಡು ಹೋಗುವುದು ಅನುಚಿತವೆಂದು ತಿಳಿಸಿ ಗಂಧೋದಕವನ್ನು ತರಿಸಿ ಕೊಡೆಂದು ಕೇಳಲು ಭರತನು ವಿಶಲ್ಯಸೌಂದರಿಗೆ ಲಕ್ಷ್ಮೀಧರನೇ ವರನೆಂಬುದನ್ನು ಮುನಿಮುಖದಿಂದ ತಿಳಿದಿರುವೆನಾದುದರಿಂದ ಗಂಧೋದಕದೊಡನೆ ಆಕೆಯನ್ನೂ ಕರೆದುಕೊಂಡುಹೋಗಿರೆಂದು ಹೇಳಿ ದ್ರೋಣಮೇಘನ ಬಳಿಗೆ ತನ್ನ ಪ್ರಧಾನರನ್ನಟ್ಟಿದನು. ದ್ರೋಣಮೇಘನು ಭರತನ ಮಾತಿಗನುಸಾರವಾಗಿ ವಿಶಲ್ಯಸೌಂದರಿಯನ್ನೂ ನೂರುಮಂದಿ ಕನ್ಯೆಯರನ್ನೂ ಕೊಟ್ಟು ಕಳುಹಿಸಲು ಅವರೆಲ್ಲರನ್ನೂ ಪ್ರಭಾಮಂಡಲನು ವಿಮಾನವನ್ನೇರಿಸಿಕೊಂಡು ಹೊರಟು ನಕ್ಷತ್ರಮಾರ್ಗವಾಗಿ ಕ್ಷಣಮಾತ್ರದಲ್ಲಿ ರಣಭೂಮಿಯನ್ನು ಸೇರಿದನು. ವಿಶಲ್ಯಸೌಂದರಿಯು ಲಕ್ಷ್ಮಣನನ್ನು ನೋಡುತ್ತ ನೋಡುತ್ತ ಶಕ್ತಿಯ ಶಕ್ತಿಯು ಕುಂದುತ್ತ ಬಂದು ಕಡೆಗೆ ಶಕ್ತಿಯು ಕಿಡಿಗಳನ್ನುಗುಳುತ್ತ ಜನಾರ್ದನನ ವಕ್ಷಸ್ಥಳವನ್ನು ಬಿಟ್ಟು ಮೇಲಕ್ಕೆ ಹೋಗುತ್ತಿರುವಾಗ ಪವನಜನು ಶಕ್ತಿಯನ್ನು ಹಿಡಿದನು. ಆಗ ಶಕ್ತಿಯು ದಿವ್ಯಸ್ತ್ರೀ ರೂಪವನ್ನು ಧರಿಸಿ ತಾನು ವಿಶಲ್ಯಸೌಂದರಿಯಿಂದಲ್ಲದೆ ಹೋಗತಕ್ಕವಳಲ್ಲೆಂದೂ ತನ್ನನ್ನು ಬಿಟ್ಟುಬಿಡಿರೆಂದೂ ಕೇಳಿಕೊಳ್ಳಲು ಹನುಮನು ಬಿಟ್ಟುಬಿಟ್ಟನು. ಆಗ ವಿಶಲ್ಯಸೌಂದರಿಯ ಕರಸ್ಪರ್ಶನದಿಂದಲೂ ಸುರಭಿಸಲಿಲ ಸೇಚನದಿಂದಲೂ ಲಕ್ಷ್ಮಣನು ಮೂರ್ಛೆಯಿಂದೆಚ್ಚತ್ತು ಎದ್ದು ಕುಳಿತುಕೊಂಡು ವಿಶಲ್ಯಸೌಂದರಿಯನ್ನು ನೋಡಿ ಮನ್ಮಥ ಬಾಧೆಯನ್ನು ಪಡೆದನು. ಹನುಮದಾದಿಗಳು ಆಕೆಯನ್ನೂ ಆಕೆಯೊಡನೆ ಬಂದ ನೂರ್ವರು ಕನ್ಯೆಯರನ್ನೂ ಮದುವೆಯಾಗುವಂತೆ ಲಕ್ಷ್ಮಣನನ್ನೊಡಂಬಡಿಸಿ ಶುಭಮುಹೂರ್ತದಲ್ಲಿ ಪಾಣಿಗ್ರಹಣ ಮಾಡಿಸಿದರು.

ಅತ್ತ, ದಶಶಿರನು ಲಕ್ಷ್ಮಣನ ಪುಣ್ಯಪ್ರಭಾವವನ್ನು ಕೇಳಿ, ಸೀತೆಯನ್ನೊಪ್ಪಿಸಿ ಸಂಧಿಗೊಡಂಬಡುವಂತೆ ಸಲಹೆಯನ್ನು ಕೊಟ್ಟ ತನ್ನ ಮಂತ್ರಿಗಳ ಮೇಲೆ ಬಹಳ ಸಿಟ್ಟಾಗಿ ತನ್ನ ಯಶಶ್ಚಂದ್ರಿಕೆಗೆ ಕಳಂಕವಾಗದಂತೆ ಮಾಡುವೆನೆಂದು ನುಡಿದು, ರಾಮಲಕ್ಷ್ಮಣರು ಅಸಾಧಾರಣರಾದುದರಿಂದ ಬಹುರೂಪಿಣೀ ವಿದ್ಯೆಯನ್ನು ಸಾಧಿಸಿ ಹಗೆಯನ್ನು ಗೆಲ್ಲುವೆನೆಂದು ಬಗೆದು ಲಂಕಾಪಟ್ಟಣದಲ್ಲಿಯೂ ದೇಶದ ಎಲ್ಲಕಡೆಗಳಲ್ಲಿಯೂ ಹಿಂಸೆ ಬೇಡೆಂದು ಡಂಗುರ ಹೊಯಿಸಿ ಜಿನಪೂಜೆಯನ್ನು ಪ್ರತಿದಿನವೂ ಮಾಡುವಂತೆ ನಿಯಮಿಸಿ, ಪಟ್ಟಣಕ್ಕೆ ಯಾರು ಎಷ್ಟು

ತೊಂದರೆಯನ್ನು ಕೊಟ್ಟರೂ ತಮ್ಮ ಸೈನ್ಯವು ಪ್ರತಿಮಾಡದಂತೆ ಕಟ್ಟು ಮಾಡುವು ದೆಂದು ಮಂಡೋದರಿಗೆ ಹೇಳಿ ತನ್ನರಮನೆಯೊಳಗಣ ಜಿನಮಂದಿರಕ್ಕೆ ಬಂದು ಶಾಂತೀಶ್ವರನನ್ನು ದಿವ್ಯಾರ್ಚನೆಯಿಂದರ್ಚಿಸಿ ಪದ್ಮಾಸನಸ್ಥಿತನಾಗಿ ಸ್ಫಟಿಕಾಕ್ಷ ಮಾಲೆಯನ್ನು ಹಿಡಿದು ದಿವ್ಯ ಮಂತ್ರಗಳನ್ನು ಜಪಿಸುತ್ತಿದ್ದನು. ಆಗ ಉಭಯ ಬಲವೂ ತಭಯ ಘೋಷಣೆಯನ್ನು ಮಾಡಿ ಯುದ್ಧವನ್ನು ನಿಲ್ಲಿಸಿತು.

ವಿಭೀಷಣನು ರಾವಣನ ವೃತ್ತಾಂತವನ್ನರಿತು ರಾಮನ ಬಳಿಗೆ ಬಂದು ರಾವಣನು ಬಹುರೂಪಿಣೀ ವಿದ್ಯೆಯನ್ನು ಸಾಧಿಸುತ್ತಿರುವನೆಂದೂ ಒಬ್ಬ ರಾವಣ ನನ್ನು ಗೆಲ್ಲುವುದೇ ಅಷ್ಟು ಕಷ್ಟವಾಗಿರುವಲ್ಲಿ ರಾವಣಕೋಟಿಯನ್ನು ಎದುರಿಸಲು ಸಾಧ್ಯವಾಗದೆಂದೂ ಆದಕಾರಣ ಅವನು ವಿದ್ಯೆಯನ್ನು ಸಾಧಿಸುವುದಕ್ಕೆ ಮೊದ ಲೇ ಅವನಿಗೆ ಕೇಡನ್ನುಂಟುಮಾಡಿ ಲಂಕಾಪುರವನ್ನು ಕೈಕೊಳ್ಳುವುದು ಯುಕ್ತ ವೆಂದೂ ಹೇಳಿದನು. ಅದಕ್ಕೆ ರಾಘವನು "ಅಯ್ಯಾ ವಿಭೀಷಣನೇ! ವನಿತೆಯ ಮೇಲೆಯೂ, ಆಯುಧವನ್ನು ಬಿಸುಟವನ ಮೇಲೆಯೂ, ಎದುರಾಗದವನ ಮೇಲೆ ಯೂ ಪರಾಕ್ರಮವನ್ನು ತೋರಿಸುವುದು ಭೂಪಾಲರಿಗೆ ತಕ್ಕುದಲ್ಲ; ದಶಾನನನು ನಿಯಮಸ್ಥನಾಗಿ ಜಿನೇಂದ್ರನ ಮರೆಹೊಕ್ಕು ವಿದ್ಯೆಯನ್ನು ಸಾಧಿಸುತ್ತಿರುವಾಗ ಆತನಿಗೆ ಬಾಧೆಯನ್ನುಂಟುಮಾಡುವುದು ನ್ಯಾಯವೇ? ಇಂತಹ ಅನ್ಯಾಯದ ಮಾತುಗಳನ್ನಾಡಬಹುದೇ?" ಎಂದು ಹೇಳಲು, ವಿಭೀಷಣಾಂಗದಾದಿಗಳು "ಮಹಾಸತ್ವನಾದ ರಾಘವನು ಅನಾಚಾರವನ್ನು ಮಾಡುವನೇ? ಆತನರಿಯ ದಂತೆ ರಾವಣನ ವಿದ್ಯಾಸಾಧನೆಗೆ ವಿಘ್ನವನ್ನುಂಟುಮಾಡಬೇಕು" ಎಂದು ನಂದೀ ಶ್ವರವನ್ನು ಕಳಿಸಿ ವಿಭೀಷಣನೊಡನೆ ಬಲಾಧಿಕರಾದ ಕಪಿಧ್ವಜ ಸೈನಿಕರು ಲಂಕೆ ಯನ್ನು ಪೊಕ್ಕು ಮಾಡಗಳನ್ನೊಡೆದು ವನಗಳನ್ನು ಕೆತ್ತು ಹಾಳುಮಾಡುತ್ತಿರು ವಲ್ಲಿ ಮಯನು ಕೋಪಗೊಂಡು ಕಾಳೆಗಕ್ಕೆ ನಿಲ್ಲಲು ಮಂಡೋದರಿಯು ತಂದೆ ಯನ್ನು ಸುಮ್ಮನಿರುವಂತೆ ಮಾಡಿದಳು. ವಾನರಸೇನೆಯು ಅರಮನೆಯನ್ನು ಹೊಕ್ಕು ರಾವಣನ ಕುಲವನಿತೆಯರನ್ನು ಎಳೆದು ತಂದು ಹೊಡೆದು ಹಾಹಾಕಾರ ವನ್ನು ಹುಟ್ಟಿಸಿದರೂ ಕಿವಿಗೊಡದೆ ರಾವಣನು ಏಕಾಗ್ರಚಿತ್ತದಿಂದ ಜಪಿಸುತ್ತಿ ದ್ದನು. ಆಗ ಅಂಗದನು ರಾವಣನ ಅರಮನೆಯ ಜಿನಭವನವನ್ನು ಹೊಕ್ಕು ದರ್ಶನ ಸ್ತುತಿಗೈದು ಬೆಟ್ಟದಂತೆ ನಿಶ್ಚಲನಾಗಿದ್ದ ರಾವಣನನ್ನು ನೋಡಿ ಹಲವು ತೆರನಾಗಿ ಅವನನ್ನು ಮೂದಲಿಸಿ ಹೊಡೆದು ಕೈಯಲ್ಲಿಯ ಸ್ಫಟಿಕದ ಅಕ್ಷಮಾಲೆ ಯನ್ನೀಡಾಡಿ ಆತನ ಹೆಂಡಂದಿರ ಆಭರಣಗಳನ್ನು ಕಳೆದು ಬೀಸಾಡಿ ಅಲ್ಲದುದನ್ನು ನುಡಿಯುತ್ತ ಯುವತಿಯರನ್ನು ತೊಂದರೆಮಾಡುತ್ತ ಮಂಡೋದರಿಯನ್ನು ಎಳೆದು ಕೊಂಡು ಹೋಗಿ ತನ್ನ ತಂದೆಗೆ ಚಾಮರಹಾಕಲು ನಿಯಮಿಸುವೆನೆಂದು ಹೇಳುತ್ತ ಅವರನ್ನು ಅಪಮಾನ ಪಡಿಸುತ್ತಿದ್ದನು.

ಆಗ ಮಂಡೋದರಿ ಮೊದಲಾದ ಅಂತಃಪುರ ಸ್ತ್ರೀಯರು, ಜಪವನ್ನು ನಿಲ್ಲಿಸಿ ತಮ್ಮನ್ನು ಸಲಹೆಂದು ಅಳುತ್ತ ಕೇಳಿಕೊಂಡರೂ ರಾವಣನು ಚಲಿಸದೆ ಚಿತ್ತ ನಿರೋಧದಿಂದ ವಿದ್ಯೆಯನ್ನು ಸಾಧಿಸಿದನು. ಆ ವಿದ್ಯಾದೇವತೆಯು ಪ್ರತ್ಯಕ್ಷವಾಗಿ ಅಪ್ಪಣೆಯೇನೆಂದು ರಾವಣನನ್ನು ಬೇಡಿ ರಾಮಲಕ್ಷ್ಮಣರನ್ನುಳಿದು ಮಿಕ್ಕವರು ಯಾರನ್ನೂ ಉಳಿಯಲೀಯೆನೆಂದು ಹೇಳಲು ರಾವಣನು ಅದರಿಂದ ತನಗೇನೂ ಫಲವಿಲ್ಲವೆಂದು ಹೇಳಿ ವಿದ್ಯಾದೇವತೆಗೆ ನಮಸ್ಕರಿಸಿ ಹೊರಡುವಷ್ಟರಲ್ಲಿ ಅಂಗದಾದಿಗಳು ತಮ್ಮ ಬಿಡಾರವನ್ನು ಸೇರಿದರು. ರಾವಣನು ಅಂಗದ ಮೊದಲಾದವರು ತನ್ನ ಅಂತಃಪುರ ಸ್ತ್ರೀಯರಿಗೆ ಮಾಡಿದ ಅಪಮಾನವನ್ನೂ ತೊಂದರೆಯನ್ನೂ ತಿಳಿದು ಅವರನ್ನು ಕ್ಷಣಮಾತ್ರದಲ್ಲಿ ಸೆರೆಗೊಂಡು ತಂದು ಪರಿಭವಿಸುವೆನೆಂದು ತನ್ನ ಸ್ತ್ರೀಯರನ್ನು ಸಮಾಧಾನಗೊಳಿಸಿ ಜಿನಭವನದಲ್ಲಿ ಮಹಾಪೂಜೆಯನ್ನು ಮಾಡಿಸಿದನು.

ತರುವಾಯ ರಾವಣನು ತಾನು ಸಾಧಿಸಿದ ವಿದ್ಯೆಗಾಗಿ ಬಹಳ ಸಂತೋಷಪಟ್ಟು ಸೀತೆಯ ಮೇಲಣ ಮೋಹದಿಂದ ಪ್ರಮದವನಕ್ಕೆ ಬಂದು ತನ್ನನ್ನು ಇನ್ನುಮೇಲೆ ಯಾರೂ ಜಯಿಸಲಾರರೆಂದೂ ಆದುದರಿಂದ ರಾಮನ ಹಂಬಲನ್ನು ಬಿಟ್ಟು ತನ್ನನ್ನು ಸೇರಿ ಸಾಮ್ರಾಜ್ಯ ಸುಖವನ್ನನುಭವಿಸೆಂದೂ ಸೀತೆಗೆ ಹೇಳಲು ಆಕೆಯು ಬಹಳ ವ್ಯಸನದಿಂದ ರಾಮನ ಪ್ರಾಣವಿರುವವರೆಗೂ ತನ್ನ ಬಳಿಗೆ ಬರಬೇಡೆಂದು ಹೇಳಿ ಮೂರ್ಛೆಹೊಂದಿದಳು. ಅದನ್ನು ನೋಡಿ ರಾವಣನಿಗೆ ಕರುಣೆ ಹುಟ್ಟಿ ಸೀತೆಯ ವಿಷಯದಲ್ಲಿ ವೈರಾಗ್ಯಪರನಾಗಿ ಆಕೆಯ ಗುಣಸ್ತವನ ಮಾಡಿ ತಾನು ಮಾಡಿದ ಪಾಪಕೃತ್ಯಗಳಿಗಾಗಿ ತನ್ನನ್ನು ತಾನೇ ದೂಷಿಸಿಕೊಂಡು ರಾಮಲಕ್ಷ್ಮಣರನ್ನು ಯುದ್ಧದಲ್ಲಿ ಸೋಲಿಸಿ ಸೆರೆಹಿಡಿದು ತಂದು ಅವರಿಗೆ ಸೀತೆಯನ್ನು ಕೊಡುವೆನೆಂದು ನಿಶ್ಚಯಿಸಿ ತನ್ನರಮನೆಗೆ ಬಂದನು. ಆಗ ಅಂಗದ ಪ್ರಭಾಮಂಡಲ ಸುಗ್ರೀವ ಹನುಮದಾದಿಗಳು ಮಾಡಿದ ದುರಾಚಾರವ್ರ ನೆನಪಿಗೆ ಬಂದು ರಾವಣನು ಅವರನ್ನು ಕೂಡಲೆ ಕೊಲ್ಲುವೆನೆಂದು ಶಪಥಮಾಡಿದನು. ಆ ಸಮಯದಲ್ಲಿ ಭೂಮಿಯು ಗುಡುಗುವುದು, ಕರುಮಾಡದ ಕಲಶಗಳು ಬೀಳುವುದು, ಹಗಲಿನಲ್ಲಿ ಉಲ್ಕಾಪಾತವಾಗುವುದು—ಇವೇ ಮೊದಲಾದ ಅನೇಕ ಉತ್ಪಾತಗಳು ಸಂಭವಿಸಲು ನೈಮಿತ್ತಿಕರು ನಾಳಿನ ಕದನದಲ್ಲಿ ರಾವಣನಿಗಪಾಯವಾಗುವುದೆಂದು ನಿಶ್ಚಯಿಸಿ ನುಡಿಯುತ್ತಿರುವಲ್ಲಿ ರಾವಣನು ಸಿಂಹಾಸನಾರೂಢನಾಗಿದ್ದು ಸೆರೆಯಲ್ಲಿದ್ದ ತನ್ನ ಮಕ್ಕಳನ್ನೂ ತಮ್ಮನನ್ನೂ ನೆನೆದು ಮುಳಿದು ಕಾಳೆಗಕ್ಕೆ ಹೊರಡಲು ಸನ್ನದ್ಧನಾದನು. ಆಗ ಮಂಡೋದರಿಯು ಬಂದು ಪತಿಯನ್ನು ನಮಸ್ಕರಿಸಿ ತಾನು ಸೀತೆಯನ್ನು ರಾಮನಿಗೆ ಕೊಟ್ಟು ಇಂದಗಿ ಮೇಘನಾದ ಕುಂಭಕರ್ಣರನ್ನು ತರುವೆನೆಂದೂ ಯುದ್ಧಕ್ಕೆ ನಿಂತರೆ ಅವರಿಗೆ ಸಾವು

ಒದಗುವುದೆಂದೂ ಬಂಧು ಸಂತಾನಕ್ಕೆ ಈ ರೀತಿಯಾಗಿ ಸಾವನ್ನು ತರುವುದು ಸರಿಯಲ್ಲವೆಂದೂ ಹೇಳಿಕೊಳ್ಳಲು ರಾವಣನು ರೋಷಾವೇಶದಿಂದ ಮಂಡೋದರಿಯನ್ನು ತೊಲಗಿಹೋಗೆಂದು ಗರ್ಜಿಸಿದರೂ ಆಕೆಯು ಹೊರಡದೆ ಮರಳಿ ಕೇಳಿಕೊಳ್ಳಲು ರಾವಣನು ಕಾಳಿಗದಲ್ಲಿ ತನ್ನೆದುರಿಗೆ ನಿಲ್ಲುವ ಗಂಡರು ಯಾರೂ ಇಲ್ಲವೆಂದೂ ಆ ವಿಷಯವಾಗಿ ತಾನು ಅಂಜಬೇಡವೆಂದೂ ನುಡಿದು ಸನ್ನಾಹಭೇರಿಯನ್ನು ಹೊಯಿಸಿ ರಣಭೂಮಿಗೆ ಬಂದು ಒಡ್ಡಿನಿಂತನು.

ರಣಭೂಮಿಯಲ್ಲಿ ಭೀಕರಾಕಾರವಾಗಿ ನಿಂತಿದ್ದ ರಾವಣನ ರಥವನ್ನು ಕಂಡು ಸೀತಾರಮಣನು ಎದುರಿಗೆ ಕಾಣುವುದು ಪರ್ವತವೋ ಜೀಮೂತವೋ ಎಂದು ಜಾಂಬವನನ್ನು ಕೌತುಕದಿಂದ ಕೇಳಲು ಅದು ರಾವಣನ ಬಹುರೂಪಿಣೀ ವಿದ್ಯಾ ವಿನಿರ್ಮಿತವಾದ ವರೂಥವೆಂದು ಆತನು ಹೇಳಿದನು. ಅದನ್ನು ಕೇಳಿ ರಾಮಲಕ್ಷ್ಮಣರು ಸಿಂಹ ಗರುಡ ವಾಹಿನೀ ರಥಗಳನ್ನೇರಿ ಚತುರಂಗ ಬಲದೊಡನೆ ಶುಭಶಕುನಗಳನ್ನಿದಿರ್ಗೊಂಡು ರಣಭೂಮಿಗೆ ಬಂದು ನಿಲ್ಲಲು ಯುದ್ಧವು ಪ್ರಾರಂಭವಾಯಿತು. ಮಯನು ಭಯಂಕರವಾಗಿ ಯುದ್ಧಮಾಡಿ ಹನುಮಂತನನ್ನೂ ಪ್ರಭಾಮಂಡಲನನ್ನೂ ಸುಗ್ರೀವನನ್ನೂ ಸೋಲಿಸಲು ದಾಶರಥಿಯು ಮುಳಿದು ಮಯನನ್ನು ಗೆದ್ದು ಸೆರೆಹಿಡಿದನು. ಇದನ್ನು ಕಂಡು ರಾವಣನು ರಾಮನಮೇಲೆ ಎತ್ತಿಬರಲು ಲಕ್ಷ್ಮಣನು ರಾಘವನ ರಥವನ್ನು ಹಿಂದಿಕ್ಕಿ ತಾನು ಯುದ್ಧಕ್ಕೆ ನಿಂತನು. ರಾವಣ ಲಕ್ಷ್ಮಣರಿಗೆ ಘೋರಯುದ್ಧವು ನಡೆದು ಲಕ್ಷ್ಮಣನನ್ನು ಹೇಗೆಯೂ ಗೆಲ್ಲಲಾರದೆ ರಾವಣನು ಬಹುರೂಪಿಣೀ ವಿದ್ಯೆಯಿಂದ ಅಪಾರವಾದ ದೇಹಗಳನ್ನು ಪಡೆಯಲು ಭೂಮಿಯೂ ಆಕಾಶವೂ ದಿಕ್ಕುಗಳೂ ರಾವಣಮಯವಾದುವು. ಇವರೆಲ್ಲರೂ ಲಕ್ಷ್ಮಣನನ್ನು ಮುತ್ತಿ ಭಯಂಕರವಾಗಿ ಕಾದುತ್ತಿರುವಲ್ಲಿ ಲಕ್ಷ್ಮಣನು ರಾವಣಕೋಟಿಯನ್ನು ನಿರ್ಮೂಲಮಾಡಲು ರಾವಣನು ಬಹುರೂಪಿಣೀ ವಿದ್ಯೆಯನ್ನುಳಿದು ಚಂದ್ರಹಾಸದಿಂದಿರಿಯಲು ಲಕ್ಷ್ಮಣನು ಸೂರ್ಯಹಾಸದಿಂದ ಅದನ್ನು ಭಂಗಪಡಿಸಿದನು. ಆಗ ರಾವಣನು ಸುದರ್ಶನ ದಿವ್ಯಚಕ್ರದಿಂದ ಲಕ್ಷ್ಮಣನ್ನಿಡಲು ಅದು ಲಕ್ಷ್ಮಣನನ್ನು ಮೂರುಸಾರಿ ಬಲಗೊಂಡು ಆತನ ಬಲಭುಜದ ಬಳಿ ನಿಂತಿತು. ಆಗ ರಾಮಚಂದ್ರನು ಲಕ್ಷ್ಮಣನಿಗೆ ಬೊರೆತ ಚಕ್ರದಿಂದ ರಾವಣನನ್ನು ಇಡೆಂಪು ಹೇಳಲು ಲಕ್ಷ್ಮಣನು ರಾವಣನಿಗೆ ಮರಳಿ ಬುದ್ಧಿವಾದವನ್ನು ಹೇಳಿ ಸೀತೆಯನ್ನೊಪ್ಪಿಸಿ ಬದುಕೆನ್ನಲು ರಾವಣನು ನಂದುವ ಸೊಡರಿನಂತೆ ಕೋಪದಿಂದ ಪ್ರಜ್ವಲಿಸಿ ರಥದಿಂದಿಳಿದು ಚಂದ್ರಹಾಸಾಸಿಯನ್ನು ಜಡಿಯುತ್ತ ಬರಲು ಲಕ್ಷ್ಮಣನು ಕೋಪದಿಂದ ಅವನಮೇಲೆ ಚಕ್ರವನ್ನೆಸೆದನು. ಆ ಚಕ್ರವು ರಾವಣನ ಎದೆಯನ್ನು ಸೀಳಿ ಬೆನ್ನಿನಲ್ಲಿ ಹೊರಡಲು ದಾನವೇಂದ್ರನು ಪ್ರಾಣವನ್ನುಳಿದು ನೆಲಕ್ಕೆ ಬಿದ್ದನು. ಆಗ ಪುಷ್ಪವೃಷ್ಟಿ ಸುರಿಯಿತು, ಸುರದುಂದುಭಿ

ಮೊಳಗಿತು, ಸುರಗಣವು ಉಪೇಂದ್ರನನ್ನು ಹರಸಿತು, ಜಯಧ್ವಜವೇರಿತು, ನಿಶಾಚರ ಬಲವೋಡಿತು, ವಾನರ ಸೈನ್ಯದಲ್ಲಿ ವಿಜಯಾನಕ ಧ್ವನಿಯುಣ್ಮೈತು.

ಆಗ ವಿಭೀಷಣನು ಭೂಮಿಯ ಮೇಲೆ ಬಿದ್ದಿದ್ದ ತನ್ನ ಅಣ್ಣನ ದೇಹವನ್ನು ನೋಡಿ ಸಹೋದರ ಪ್ರೇಮದಿಂದ ಮೂರ್ಛೆಹೋಗಿ, ಶೀತಲ ಕ್ರಿಯೆಯಿಂದೆಚ್ಚತ್ತು ಬಹಳವಾಗಿ ಅಳುತ್ತಿರಲು ಮಂಡೋದರಿ ಮೊದಲಾದ ನಾಲ್ವತ್ತೈಂಟು ಸಾವಿರ ಮಂದಿ ಅಂತಃಪುರ ಸ್ತ್ರೀಯರು ರಾವಣನ ಮರಣವಾರ್ತೆಯನ್ನು ಕೇಳಿ ರಣ ಭೂಮಿಗೆ ಬಂದು ಅವನ ದೇಹವನ್ನು ಕಂಡು ಹಲವು ತೆರನಾಗಿ ಹಂಬಲಿಸುತ್ತ ಅಳತೊಡಗಿದರು. ಅದನ್ನು ನೋಡಿ ರಾಮಸ್ವಾಮಿಯು ಅವರನ್ನು ಕರುಣಿಸಿ ರಾವಣನಿಗೆ ಮರಣವು ಆತನ ದುರ್ವ್ಯಸನದಿಂದಾದುದಲ್ಲದೆ ತಮ್ಮಿಂದಾದುದಲ್ಲವೆಂದು ಹೇಳಿ ಯಾರಿಗಾದರೂ ಸಂಸಾರ ಸ್ವರೂಪವು ಅದೇ ರೀತಿಯೆಂದರಿಪಿ ಅವರನ್ನೂ ವಿಭೀಷಣನನ್ನೂ ಸಮಾಧಾನಪಡಿಸಿದನು. ತರುವಾಯ ರಾವಣನ ದೇಹವನ್ನು ಕರ್ಪೂರಾಗರು ಗೋಶೀರ್ಷ ಚಂದನಾದಿಗಳಿಂದ ಯಥಾವಿಧಿಯಾಗಿ ಸಂಸ್ಕರಿಸಿ ಇಂದಗಿ ಮೇಘವಾಹನ ಕುಂಭಕರ್ಣ ಮಯ ಮಾರೀಚಾದಿಗಳನ್ನು ಬರಿಸಿ ಸೆರೆಯನ್ನು ಬಿಡಿಸಿ ಅವರ ಶೋಕವನ್ನುಪಶಮಿಯಿಸಿ ವಿಭೀಷಣನಲ್ಲಿ ಸದ್ಭಾವದಿಂದಿರಿರೆಂದು ಬೋಧಿಸಿದನು. ಅದನ್ನು ಕೇಳಿ ಕುಂಭಕರ್ಣಾದಿಗಳು ರಾಮಲಕ್ಷ್ಮಣರ ಯೋಗ್ಯತೆಗೂ ಧೈರ್ಯಕ್ಕೂ ಪರಾಕ್ರಮಕ್ಕೂ ಮೆಚ್ಚಿ ಹೊಗಳಿ ತಮಗೆ ಸಂಸಾರಸುಖವು ಸಾಕೆಂದು ಭೋಗ ನಿರ್ವೇಗಪರರಾಗಿ ನುಡಿದು ರಾಮಲಕ್ಷ್ಮಣರೊಡನೆ ಪದ್ಮ ಸರೋವರದಲ್ಲಿ ಜಲದಾನ ಕ್ರಿಯೆಯನ್ನು ತೀರಿಸಿದರು; ಅಷ್ಟರಲ್ಲಿ ಸಂಜೆಯಾಯಿತು. ಆ ಸಮಯಕ್ಕೆ ಐನೂರು ಮಂದಿ ಮುನಿಗಳೊಡನೆ ಅಪ್ರಮೇಯ ಭಟ್ಟಾರಕರು ಸೂರ್ಯಪಥದಿಂದ ಬಂದು ಲಂಕೆಯ ನಂದನವನದ ಮಧ್ಯದಲ್ಲಿಳಿದರು. ಅವರ ದರುಶನಕ್ಕಾಗಿ ರಾಮಲಕ್ಷ್ಮಣರು ಇಂದ್ರಜಿನ್ಮೇಘವಾಹನ ಕುಂಭಕರ್ಣಾದಿಗಳೊಡನೆ ಕೂಡಿ ಹೊರಟು ವನಕ್ಕೆ ಬಂದು ಅಪ್ರಮೇಯ ಭಟ್ಟಾರಕರನ್ನು ಭಕ್ತಿಯಿಂದರ್ಚಿಸಿದರು.

ಆಶ್ವಾಸ ೧೫—ಸೀತಾ ಪರಿತ್ಯಾಗ

ರಾಮಚಂದ್ರನು ಅಪ್ರಮೇಯ ಭಟ್ಟಾರಕರನ್ನು ಭಕ್ತಿಯಿಂದ ವಂದಿಸಿ ಸಂಸಾರ ಕ್ಷಯ ಕಾರಣವಾದ ಧರ್ಮವನ್ನೂ ಆಪ್ತಗುಣಗಳನ್ನೂ ಜೀವಾದಿ ತತ್ವ ಭೇದಗಳನ್ನೂ ಅವರಿಂದ ತಿಳಿದು ಸಂತೋಷಚಿತ್ತನಾದನು. ಇಂದ್ರಜಿತು ಮೇಘವಾಹನ ಕುಂಭಕರ್ಣ ಮಯ ಮಾರೀಚಾದಿಗಳು ತಂತಮ್ಮ ಭವಾಂತರವನ್ನು ಕೇಳಿ ತಿಳಿದುಕೊಂಡು ಅಲ್ಲಿಯೇ ದೀಕ್ಷೆಗೊಂಡರು. ಮಂಡೋದರಿಯು ನಲವ

ತ್ತೆಂಟು ಸಾವಿರ ವಿದ್ಯಾಧರಿಯರೊಡನೆ ಶಶಿಕಾಂತಾರ್ಯಿಕಾ ಸಮಕ್ಷದಲ್ಲಿ ದೀಕ್ಷೆ ಗೊಂಡಳು. ರಾಮಲಕ್ಷ್ಮಣರು ಭಟ್ಟಾರಕರಿಗೆ ಪುನರ್ನಮಸ್ಕಾರಮಾಡಿ ಸುಗ್ರೀವಾಂಗದ ಪ್ರಭಾಮಂಡಲ ಮರುತ್ಸುತ ವಿರಾಧಿತ ಪ್ರಮುಖ ವಿದ್ಯಾಧರರೊಡನೆ ಕೂಡಿ ತ್ರಿಜಗದ್ಭೂಷಣ ಗಜಾರೂಢರಾಗಿ ಸಮಸ್ತ ಮರ್ಯಾದೆಗಳೊಡನೆ ಲಂಕಾಪುರವನ್ನು ಸೇರಿ ನಂದನವನದಲ್ಲಿದ್ದ ಸೀತಾದೇವಿಯನ್ನು ನೋಡುವ ಕುತೂಹಲದಿಂದ ಅಲ್ಲಿಗೆ ಬಂದರು. ರಾಮಸ್ವಾಮಿಯು ಬಾಡಿದ ಕಮಲ ಲತೆಯಂತಿದ್ದ ಸೀತಾದೇವಿಯನ್ನು ಕಂಡು ಪಟ್ಟದಾನೆಯಿಂದಿಳಿದು ಬರುತ್ತಿರುವಲ್ಲಿ ಆಕೆಯು ವಲ್ಲಭನನ್ನು ನೋಡುವ ಸಂಭ್ರಮದಿಂದ ಎಂತಾದ ಆಕಂಪನದಿಂದ ಪತಿಯನ್ನು ಎದುರುಗೊಂಡು ಕೈಗಳನ್ನು ಮುಗಿದು ಆತನ ಪಾದಗಳಿಗೆರಗಿದಳು. ಆ ಸಮಯದಲ್ಲಿ ಆಕೆಯ ಪತಿವ್ರತಾಗುಣ ಸಮೃದ್ಧಿಗೆ ದೇವತೆಗಳು ಆಕೆಯನ್ನು ಸ್ತುತಿಸಿ ಪೂಮಳೆಗರೆದು ದಿವ್ಯಭೂಷಣಗಳಿಂದರ್ಚಿಸಿದುದನ್ನು ಖಚರಾಧಿನಾಯಕರು ನೋಡಿ ಬೆರಗಾಗಿ ಜಾನಕಿಗೆ ಕೈಗಳನ್ನು ಮುಗಿದರು; ರಾಮಚಂದ್ರನಿಗೆ ಆನಂದ ಪುಲಕವುಂಟಾಯಿತು. ಅನಂತರ ಲಕ್ಷ್ಮೀಧರನು ನಮಸ್ಕರಿಸಲು, ಸೀತಾದೇವಿಯು ಆತನನ್ನು ಹರಸಿ ತನ್ನ ನಿಮಿತ್ತವಾಗಿ ಅಷ್ಟು ತೊಂದರೆ ಪಟ್ಟದ್ದಕ್ಕೆ ಶೋಕಿಸುತ್ತಿರುವಲ್ಲಿ ರಾಮಲಕ್ಷ್ಮಣರು ಆಕೆಯನ್ನು ಸಂತಯಿಸಿದರು. ತರುವಾಯ ಸೀತೆಯು ಪ್ರಭಾಮಂಡಲನನ್ನು ಕಂಡು ನಮಸ್ಕರಿಸಲು ಆತನು ಅತಿ ಪ್ರೀತಿಯಿಂದ ಆಕೆಯನ್ನು ಹರಸಿ ಸುಗ್ರೀವ ನಲ ನೀಲಾಂಗದ ಮರುತ್ಸುತ ಜಾಂಬವಾದಿಗಳನ್ನು ಒಬ್ಬೊಬ್ಬರನ್ನಾಗಿ ಹೆಸರು ಹೇಳಿ ಆಕೆಗೆ ತೋರಿಸಿ ಆಕೆಯನ್ನು ಸಂತೋಷಪಡಿಸಿದನು.

ತದನಂತರ, ರಾಘವನು ಜಾನಕಿಯನ್ನು ಪಟ್ಟದಾನೆಯ ಮೇಲೆ ಕುಳ್ಳಿರಿಸಿಕೊಂಡು ಲಕ್ಷ್ಮಣನೊಡನೆ ಸಕಲ ಪರಿವಾರವೂ ಸುತ್ತಿ ಬರಲು ರಾವಣನ ಅರಮನೆಯನ್ನು ಹೊಕ್ಕು ಅಲ್ಲಿಯ ಶಾನ್ತಿಜಿನಭವನವನ್ನು ಬಲಗೊಂಡು ಜಿನಪತಿಯನ್ನು ಸ್ತುತಿಸಿ ದಿವ್ಯಾರ್ಚನೆಗಳಿಂದರ್ಚಿಸಿದನು. ಆಗ ಸಹಸ್ರಾಂತಃಪುರ ಪ್ರಧಾನೆಯಾದ ವಿದಗ್ಧೆಯೆಂಬ ವಿಭೀಷಣನ ಮಹಾದೇವಿಯು ಆತನಪ್ಪಣೆಯ ಮೇರೆಗೆ ಬಂದು ರಾಮಲಕ್ಷ್ಮಣರಿಗೂ ಸೀತಾದೇವಿಗೂ ನಮಸ್ಕರಿಸಿ ತಮ್ಮರಮನೆಗೆ ದಯೆಮಾಡಿ ಬರಬೇಕೆಂದು ಕೇಳಿಕೊಳ್ಳುತ್ತಿರುವಲ್ಲಿ ವಿಭೀಷಣನು ಬಂದು ರಾಮಚಂದ್ರನನ್ನು ಲಕ್ಷ್ಮಣ ಸೀತಾದೇವಿಯರೊಡನೆ ಮಹಾ ವೈಭವದಿಂದ ತನ್ನ ಅರಮನೆಗೆ ಬಿಜಯಮಾಡಿಸಿ ಸಿಂಹಾಸನದ ಮೇಲೆ ಕುಳ್ಳಿರಿಸಿ ಅರ್ಘ್ಯ ಪಾದ್ಯವನ್ನು ಕೊಟ್ಟು ಅತ್ಯುತ್ಸವದಿಂದ ಔತಣಮಾಡಿ ದಿವ್ಯ ಮಣಿಭೂಷಣ ದಿವ್ಯಾನುಲೇಪನ ದಿವ್ಯಾಂಬರಗಳಿಂದೋಲಗಿಸಿ ತನ್ನ ವಿನಯವನ್ನು ಪ್ರಕಟಿಸಿದನು. ಹೀಗೆ ನಿರಂತರೋತ್ಸವದಿಂದ ಕೆಲವು ದಿನಗಳು ಕಳೆದಮೇಲೆ ವಿಭೀಷಣ ಸುಗ್ರೀವಾದಿಗಳು ರಾಮಲಕ್ಷ್ಮಣರಿಗೆ ಶುಭಮುಹೂರ್ತದಲ್ಲಿ ರಾಜ್ಯಾಭಿಷೇಕ ಮಾಡಿದರು. ಆಗ

ರಾಮಲಕ್ಷ್ಮಣರು ತಮ್ಮ ಪ್ರಯಾಣಮಾರ್ಗದಲ್ಲಿ ಮದುವೆಯಾಗಿದ್ದ ಅನೇಕ ಮಂದಿ ಅರಸಿಯರನ್ನು ಕರೆಯಿಸಿ ಲಂಕೆಯಲ್ಲಿ ಕೆಲವು ಕಾಲ ಸುಖದಿಂದಿದ್ದರು.

ಇತ್ತ, ಅಪರಾಜಿತೆಯು ರಾಮನನ್ನು ನೆನೆದು ಅತಿ ಶೋಕದಿಂದಿರುವಲ್ಲಿ ನಾರದನು ಆಕಾಶಮಾರ್ಗದಿಂದಿಳಿದು ಅರಮನೆಗೆ ಬರಲು ಅಪರಾಜಿತೆಯು ಅತನನ್ನೆದುರುಗೊಂಡು ನಮಸ್ಕರಿಸಿ ಮರ್ಯಾದೆ ಮಾಡಿದಳು. ನಾರದನು ಅಪರಾಜಿತೆಯ ಶೋಕ ಕಾರಣವನ್ನು ತಿಳಿದು ರಾಮಲಕ್ಷ್ಮಣರ ಕ್ಷೇಮವಾರ್ತೆಯನ್ನು ಆ ದಿನವೇ ತರುವೆನೆಂದು ಹೇಳಿ ಆಕಾಶಕ್ಕೆ ನೆಗೆದು ಲಂಕೆಯನ್ನು ಹೊಕ್ಕು ಬಲ ನಾರಾಯಣರ ಸಭೆಯನ್ನು ಪ್ರವೇಶಿಸಲು ರಾಮಸ್ವಾಮಿಯು ಮುನಿಯನ್ನೆದುರುಗೊಂಡು ಮಣಿಪೀಠದಲ್ಲಿ ಕುಳ್ಳಿರಿಸಿ ಅರ್ಘ್ಯ ಪಾದ್ಯಗಳನ್ನು ಕೊಟ್ಟನು. ಕುಶಲಪ್ರಶ್ನೆಗಳಾದ ತರುವಾಯ ನಾರದನು,-ಅಪರಾಜಿತಾದೇವಿ ಸುಮಿತ್ರಾದೇವಿಯರನ್ನು ಕಂಡಿದ್ದೆನೆಂದೂ ಅವರು ರಾಮಲಕ್ಷ್ಮಣರನ್ನು ಬೇಗನೆ ಕಾಣದಿದ್ದರೆ ಶರೀರತ್ಯಾಗ ಮಾಡುವರೆಂದೂ ತಿಳಿಸಿದನು. ಅದನ್ನು ಕೇಳಿ ರಾಮಲಕ್ಷ್ಮಣರು ವ್ಯಥೆಪಟ್ಟು ತಾವು ಕೃಪಾಶೂನ್ಯರೆಂದು ತಮ್ಮನ್ನು ತಾವೇ ನಿಂದಿಸಿಕೊಂಡು ವಿಭೀಷಣನನ್ನು ಕರೆಯಿಸಿ ತಮ್ಮ ಅವಧಿಯ ವರ್ಷಗಳು ತೀರಿದುವೆಂದೂ ತಾವು ಅಯೋಧ್ಯೆಗೆ ಹೋಗದಿದ್ದರೆ ತಮ್ಮ ತಾಯಂದಿರೂ ಬಾಂಧವರೂ ಖೇದಗೊಳ್ಳುವರೆಂದೂ ಹೇಳಿ ಲಂಕೆಯಲ್ಲಿಯ ಅಸಂಖ್ಯಾತವಾದ ಜಿನಭವನಗಳಲ್ಲೆಲ್ಲ ವಿಶೇಷೋತ್ಸವವನ್ನು ಮಾಡಿಸಿ ಸೀತೆಯೊಡನೆ ಪುಷ್ಪಕ ವಿಮಾನವನ್ನೇರಿ ಖಚರ ಪರಿವೃಢ ಪರಿವೃತರಾಗಿ ಪ್ರಯಾಣ ಹೊರಟು ಸಮುದ್ರವನ್ನು ದಾಟಿ ದಂಡಕಾರಣ್ಯಕ್ಕೆ ಬಂದು ಅಲ್ಲಿ ತಾವಿದ್ದ ಸ್ಥಳಗಳನ್ನು ಸೀತಾದೇವಿಗೆ ತೋರಿಸಿ ಅಯೋಧ್ಯೆಯ ಬಳಿಗೆ ಬರಲು ಭರತ ಶತ್ರುಘ್ನರು ಆನೆಗಳನ್ನೇರಿ ರಾಮನನ್ನೆದುರುಗೊಳ್ಳುವುದಕ್ಕಾಗಿ ಊರಹೊರಕ್ಕೆ ಬಂದರು. ಆಗ ರಾಮಸ್ವಾಮಿಯು ವಿಮಾನದಿಂದಿಳಿದು ತನಗೆ ಸಾಷ್ಟಾಂಗ ನಮಸ್ಕಾರವಾಡಿದ ಭರತ ಶತ್ರುಘ್ನರನ್ನು ತೆಗೆದಪ್ಪಿಕೊಂಡು ಹರಸಿದನು. ತರುವಾಯ ಅವರು ಸೀತಾದೇವಿಗೂ ಲಕ್ಷ್ಮಣನಿಗೂ ಅನುಕ್ರಮವಾಗಿ ನಮಸ್ಕರಿಸಿ ಆಶೀರ್ವಾದವನ್ನು ಪಡೆದು ಕುಶಲವಾರ್ತೆಗಳಿಂದ ಸಂತೋಷಚಿತ್ತರಾದರು. ಬಳಿಕ ರಾಮಲಕ್ಷ್ಮಣರು ಎಲ್ಲರೊಡನೆಯೂ ಕೂಡಿ ತೋರಣ ಪತಾಕಾದಿಗಳಿಂದಲಂಕೃತವಾದ ಅಯೋಧ್ಯೆಯನ್ನು ಪ್ರವೇಶಿಸಿ ಅವರೂ ಸೀತಾದೇವಿಯೂ, ಅಪರಾಜಿತೆ ಸುಮಿತ್ರೆ ಕೈಕೆ ಸುಪ್ರಭೆಯರನ್ನು ಕಂಡು ಎರಗಿ ನಮಸ್ಕರಿಸಿ ಅವರ ಆಶೀರ್ವಾದವನ್ನು ಪಡೆದರು.

ಹೀಗೆ ಸುಖಾತಿಶಯದಿಂದ ಕೆಲವು ದಿನಗಳು ಕಳೆದಮೇಲೆ ಶುಭ ಮುಹೂರ್ತದಲ್ಲಿ ರಾಮಸ್ವಾಮಿಯು ರಾಕ್ಷಸದ್ವೀಪಸಹಿತವಾಗಿ ಲಂಕೆಯನ್ನು ವಿಭೀಷಣನಿಗೂ ದೇವಾಸೀಕಪುರವನ್ನು ರತ್ನಜಟಿಗೂ ಕಿಷ್ಕಿಂಧನಗರವನ್ನು ಸುಗ್ರೀವನಿಗೂ

ಶ್ರೀಪರ್ವತ ನಗರವನ್ನು ಹನುಮಂತನಿಗೂ ಪಾತಾಳಲಂಕೆಯನ್ನು ವಿರಾಧಿತನಿಗೂ ರಥನೂಪುರಚಕ್ರವಾಳಪುರವನ್ನು ಪ್ರಭಾಮಂಡಲನಿಗೂ ರಾಜ್ಯಾಭಿಷೇಕ ಮಾಡಿ ಕೊಟ್ಟು ತಮಗೆ ಉಪಕಾರಮಾಡಿದ ಅನೇಕರಿಗೆ ನಾಡು ಬೀಡುಗಳನ್ನು ಕೊಟ್ಟು ಲಕ್ಷ್ಮಣನನ್ನು ತ್ರಿಖಂಡಮಂಡಲಕ್ಕಧಿರಾಜನನ್ನಾಗಿ ಮಾಡಿ ಭರತನನ್ನು ಮುನ್ನಿನಂತೆ ಅಯೋಧ್ಯೆಯನ್ನಾಳುವುದೆಂದು ಅಪ್ಪಣೆಯಿತ್ತನು. ಅದಕ್ಕೆ ಭರತನು ಅದುವರೆಗೂ ರಾಮನ ಆಜ್ಞೆಯನೇರೆಗೆ ಭೂಮಿಯನ್ನು ಕಾದುಕೊಂಡಿದ್ದೆನೆಂದೂ ಇನ್ನುಮುಂದೆ ವಿಷಯಸುಖವನ್ನು ತಾನೊಲ್ಲನೆಂದೂ ಮೋಕ್ಷಲಕ್ಷ್ಮಿಯನ್ನು ಪಡೆಯುವುದಕ್ಕೆ ಅಪ್ಪಣೆಕೊಡಬೇಕೆಂದೂ ಕೈಮುಗಿದು ಬೇಡಿಕೊಳ್ಳಲು, ರಾಮನು ಭೂಚರರಲ್ಲದೆ ಖೇಚರರೂ ತಮ್ಮ ಆಜ್ಞಾನುವರ್ತಿಗಳಾಗಿರುವುದರಿಂದ ಮತ್ತೆ ಕೆಲವು ಕಾಲ ರಾಜ್ಯಭಾರಮಾಡಿದರೆ ತರುವಾಯ ತಾವೆಲ್ಲರೂ ಕೂಡಿ ತಪಕ್ಕೆ ಹೋಗೋಣವೆಂದು ಎಷ್ಟು ವಿಧವಾಗಿ ಹೇಳಿದರೂ ಭರತನು ಕೇಳದೆಹೋದನು.

ಆಗ ಋಷಿನಿವೇದಕನು ಬಂದು ನಮಸ್ಕರಿಸಿ ಮಹೇಂದ್ರೋದ್ಯಾನವನಕ್ಕೆ ದೇಶಭೂಷಣ ಭಟ್ಟಾರಕರು ಬಿಜಯಮಾಡಿರುವರೆಂದು ತಿಳಿಸಲು ರಾಮನು ಸಿಂಹಾಸನದಿಂದೆದ್ದು ಆ ಕಡೆಗೆ ಕೈಮುಗಿದು ಕೂಡಲೆ ಸಕಲ ಬಂಧು ಪರಿವಾರದೊಡನೆ ಹೊರಟು ಉದ್ಯಾನವನವನ್ನು ಸೇರಿ ರಾಜಚಿಹ್ನೆಗಳನ್ನು ದೂರದಲ್ಲಿರಿಸಿ ಭಟ್ಟಾರಕರನ್ನು ಬಲಗೊಂಡು ಸಾಷ್ಟಾಂಗ ನಮಸ್ಕಾರಮಾಡಿ ನಿಯನಿತಾಸನದಲ್ಲಿ ಕುಳಿತುಕೊಂಡನು. ಆಗ ರಾಮನು ತನ್ನ ತ್ರಿಜಗದ್ಭೂಷಣ ಗಜವು ನಾಲ್ಕು ದಿನಗಳಿಂದಲೂ ಆಹಾರವನ್ನು ತೆಗೆದುಕೊಳ್ಳದೆ ಇರಲು ಕಾರಣವೇನೆಂದು ಕೇಳಲು ಭಟ್ಟಾರಕರು ಅದು ತನ್ನ ಪೂರ್ವಜನ್ಮವನ್ನು ತೀಡಿ ಉಪಶಮವನ್ನು ತಾಳಿತೆಂದು ಹೇಳಿ ಹಿಂದಣ ಜನ್ಮಗಳ ವೃತ್ತಾಂತವನ್ನು ವಿಶದವಾಗಿ ತಿಳಿಸಿದರು. ಇದನ್ನು ಕೇಳಿ ಭರತನೂ ಕೈಕೆಯೂ ತಪಸ್ಸಕ್ತರಾದರು; ತ್ರಿಜಗದ್ಭೂಷಣ ಗಜವೂ ಅಲ್ಲಿಯೇ ಅಣುವ್ರತವನ್ನು ಕೈಕೊಂಡು ಹಲವು ನೋಂಪಿಗಳನ್ನು ನೋಂತು ಬ್ರಹ್ಮೋತ್ತರಕಲ್ಪಗತವಾಯ್ತು.

ರಾಮಲಕ್ಷ್ಮಣರು ಸಂಸಾರಸುಖವನ್ನನುಭವಿಸುತ್ತಿರಲು ಲಕ್ಷ್ಮಣನಿಗೆ ಎಂಟು ಮಂದಿ ಮಕ್ಕಳು ಹುಟ್ಟಿ ಅನುದಿನ ಪ್ರವರ್ಧಮಾನರಾಗಿ ಮನೋಹರಾಕಾರದಿಂದ ಬಳೆಯುತ್ತಿದ್ದರು. ಹೀಗಿರಲು, ಸೀತಾದೇವಿಯು ಒಂದು ದಿನ ಋತುಸ್ನಾನಮಾಡಿ ಶಯ್ಯಾಗೃಹವನ್ನು ಸೇರಿ ಸುಖನಿದ್ರೆಗೈದು ಬೆಳಗಿನ ಜಾವದಲ್ಲಿ ಶರಭ ದ್ವಿತಯವು ತನ್ನ ಮುಖವನ್ನು ಹೊಗುವಂತೆಯೂ ತಾನು ಪುಷ್ಪಕದಿಂದ ಭೂಮಿಗೆ ಬೀಳುವಂತೆಯೂ ಎರಡು ಕನಸನ್ನು ಕಂಡು ಅದನ್ನು ರಾಮಸ್ವಾಮಿಗೆ ತಿಳಿಸಲು ಆತನು ಶರಭ ದರ್ಶನದಿಂದ ಸೀತೆಗೆ ಅಮಿತ ಪರಾಕ್ರಮಿಗಳಾದ ಇಬ್ಬರು ಮಕ್ಕಳು ಹುಟ್ಟುವರೆಂದೂ ಎರಡನೆಯ ಕನಸು ಭೇದವನ್ನು ಹುಟ್ಟಿಸುವುದೆಂದೂ ತಿಳಿಸಿದನು.

ಕಾಲಕ್ರಮವಾಗಿ ಸೀತೆಗೆ ಗರ್ಭಚಿಹ್ನೆಗಳು ತೋರಿಬಂದು ಜಿನಪೂಜೋತ್ಸವವನ್ನು ಮಾಡುವ ಬಯಕೆಯು ಹುಟ್ಟಿ ಪ್ರತಿದಿನವೂ ಪೂಜೆಗೈಯುತ್ತಿರುವಲ್ಲಿ ಒಂದು ದಿನ ಆ ಸತಿಗೆ ಬಲಗಣ್ಣು ದುರಿತು. ಈ ದುಶ್ಶಕುನಕ್ಕೆ ಆಕೆ ಭಯಪಟ್ಟು ಗೃಹಮುಹತ್ತರನನ್ನು ಕರೆಯಿಸಿ ಯಾರು ಏನು ಬೇಡಿದರೂ ಅವರಿಗೆ ಅದನ್ನು ಕೊಡುವುದೆಂದು ಅಪ್ಪಣೆಕೊಟ್ಟು ತಾನು ಪ್ರತಿದಿನವೂ ಜಿನಪೂಜೆಯನ್ನು ಮಾಡುತ್ತಿದ್ದಳು.

ಹೀಗಿರುವಲ್ಲಿ, ಒಂದು ದಿನ ಹಳ್ಳಿಯ ಜನರು ಬಂದು ಭಯದಿಂದ, ಮಾತನಾಡದೆ ಸುಮ್ಮನಿರಲು ರಾಮಸ್ವಾಮಿಯು ಅಂಜಬೇಡಿರೆಂದು ಅವರಿಗೆ ಹೇಳಿ, ಬಂದ ಕಾರ್ಯವೇನೆಂದು ಕೇಳಿದನು. ಅದಕ್ಕೆ ಪ್ರಜೆಗಳನುಮತಿಯಿಂದ ವಿಜಯನೆಂಬ ಮಹತ್ತರನು " ಮಹಾಸ್ವಾಮಿ ! ದುರಾತ್ಮನಾದ ರಾವಣನು ಬಲುಚಿಲುವೆಯಾದ ಸೀತಾದೇವಿಯನ್ನು ಮೋಹಿಸಿ ಹಿಡಿದುಕೊಂಡು ಹೋಗಲು ಆಕೆಯು ಇದುವರೆಗೂ ಖಳನ ಮನೆಯಲ್ಲಿದ್ದಳು; ತಾವು ವಿಚಾರಮಾಡದೆ ಆಕೆಯನ್ನೊಡಗೂಡಿ ಮುನ್ನಿನಂತಿರುವುದು ಧರ್ಮವೇ? ಭೂಮಿಗಧಿಪರಾದ ತಾವು ಈ ರೀತಿಯಾಗಿ ಮಾಡಿದರೆ ಧರ್ಮವನ್ನು ಪರಿಪಾಲಿಸುವರಾರು?" ಎಂದು ಹೇಳಲು ರಾಮನು ಜನವಾರ್ತೆಯಂತೆ ತಾನು ಆಲೋಚನೆಮಾಡದೆ ಅನ್ಯಾಯವನ್ನು ಮಾಡಿದೆನೆಂದು ಪಶ್ಚಾತ್ತಾಪಪಟ್ಟು ಸೀತೆಯನ್ನು ಪರಿತ್ಯಾಗಮಾಡಲು ನಿಶ್ಚಯಿಸಿದನು. ಆಗ ಲಕ್ಷ್ಮಣನನ್ನು ಬರಿಸಿ ಕಟ್ಟೀಕಾಂತದಲ್ಲಿ ಈ ವೃತ್ತಾಂತವನ್ನು ಆತನಿಗೆ ತಿಳಿಸಲು ಆತನು ಕಡುಮುಳಿದು ತಾವು ಅವಿವೇಕಿಗಳಂತೆ ಈರೀತಿಯಾಗಿ ನುಡಿವುದು ಅನುಚಿತವೆಂದೂ ಪತಿವ್ರತಾ ಶಿರೋಮಣಿಯಾದ ಸೀತಾದೇವಿಯಲ್ಲಿ ಅವಗುಣವನ್ನು ತಮ್ಮಂತಹ ಯೋಗ್ಯರು ಕಲ್ಪಿಸಬಾರದೆಂದೂ ಹೇಳಲು ರಾಮಸ್ವಾಮಿಯು, ಪುರುದೇವ ಮೊದಲಾದ ಇಕ್ವಾಕುವಂಶದ ರಾಜರಲ್ಲಿ ಇದುವರೆಗೂ ದುಶ್ಚರಿತ್ರವಿಲ್ಲವೆಂದೂ ಅದು ಈಗ ಸಂಭವಿಸಿದರೆ ತನ್ನ ಪೌರುಷಕ್ಕೆ ಕುಂದು ಬರುವುದೆಂದೂ ಉತ್ತರವಿತ್ತು ತನಗಡ್ಡಿಯಾಗಿ ಬರಬೇಡವೆಂದು ಲಕ್ಷ್ಮಣನಿಗೆ ಹೇಳಿದನು. ಇದಕ್ಕೆ ಲಕ್ಷ್ಮಣನು ಸೀತಾದೇವಿಯು ದುಶ್ಚರಿತ್ರಳಾದಲ್ಲಿ ಭೂತಲವೆಲ್ಲವೂ ಕೂಡಲೆ ನಾಶವಾಗುವುದೆಂದೂ ಆಕೆಯನ್ನು ದೇವತೆಗಳು ಅರ್ಚಿಸಿ ಹೂಮಳೆಗರೆದುದೇ ಆಕೆಯ ಸುಶೀಲತೆಯನ್ನು ಪ್ರಕಟಗೊಳಿಸುವುದೆಂದೂ ಅಂತಹ ಪತಿವ್ರತಾ ಶಿರೋಮಣಿಯ ವಿಷಯವಾಗಿ ಕೆಟ್ಟಮಾತನ್ನು ಹರಡಿದ ಒಕ್ಕಲಿಗರ ನಾಲಗೆಯನ್ನು ಕೆತ್ತಿಕ್ಕುವೆನೆಂದೂ ರೋಷಾವಿಷ್ಟನಾಗಿ ನುಡಿಯಲು ರಾಮಸ್ವಾಮಿಯು ಆತನ ಕೈಯನ್ನು ಹಿಡಿದು ತನ್ನಮೇಲೆ ಆಣೆಯನ್ನಿಟ್ಟುಕೊಂಡು ಲಕ್ಷ್ಮಣನನ್ನು ಮರುಮಾತಾಡದಂತೆ ಮಾಡಿದನು.

ಆಗ ರಾಮಸ್ವಾಮಿಯು ಕೃತಾಂತವಕ್ತ್ರನನ್ನು ಕರೆದು ಅಯೋಧ್ಯಾನಗರದ ಸಮೀಪ ಪರ್ವತದ ಸಮಾಪದಲ್ಲಿರುವ ಜಿನಾಲಯಗಳನ್ನು ವಂದಿಸಬೇಕೆಂಬ

ಆಕೆಯ ಬಯಕೆಯನ್ನು ತೀರಿಸಿಬರುವ ನೆಪದಿಂದ ಸೀತಾದೇವಿಯನ್ನು ಕರೆದು ಕೊಂಡು ಹೋಗಿ ಭೀಮಾಟವಿಯಲ್ಲಿ ನಿರ್ಜಂತುಕ ಪ್ರದೇಶದಲ್ಲಿ ಬಿಟ್ಟುಬರು ವಂತೆ ಆಜ್ಞೆಮಾಡಿದನು. ಕೃತಾಂತವಕ್ತ್ರನು ಸೇವಾವೃತ್ತಿಯು ಬಹು ಕಷ್ಟ ವೆಂದೆಂದುಕೊಂಡು ಅಂತಹ ಕ್ರೂರಕೃತ್ಯವನ್ನು ಮಾಡಲು ಇಷ್ಟವಿಲ್ಲದಿದ್ದರೂ ಯತ್ನವಿಲ್ಲದೆ ಸೀತೆಯ ಬಳಿಗೆ ಬಂದು ರಾಮಚಂದ್ರನು ಹೇಳಿಕೊಟ್ಟಂತೆ ಹುಸಿ ನುಡಿದು ಸೀತಾದೇವಿಯನ್ನು ರಥದ ಮೇಲೆ ಕುಳ್ಳಿರಿಸಿಕೊಂಡು ಭಯಂಕರವಾದ ಅಡವಿಯನ್ನು ಹೊಕ್ಕು ಒಂದು ಬೆಟ್ಟದ ತಪ್ಪಲಲ್ಲಿ ಆಕೆಯನ್ನಿಳಿಸಿ ಗದ್ಗದ ಕಂಠನಾಗಿ ಕಣ್ಣೀರನ್ನು ಸುರಿಸುತ್ತ ಸೀತಾದೇವಿಗೆ ವೃತ್ತಾಂತವೆಲ್ಲವನ್ನೂ ತಿಳಿ ಸಲು ಆಕೆಯು ಮೂರ್ಛೆಹೋಗಿ ಮರಳಿ ಎಚ್ಚತ್ತು ಕೃತಾಂತವಕ್ತ್ರನೊಡನೆ "ಅಯ್ಯಾ! ರಾಮದೇವರು ನನ್ನ ಮೇಲೆ ದಯೆಯಿಡುವವರಾದರೆ ಭೂತಲವ ನ್ನೆಲ್ಲ ನ್ಯಾಯದಿಂದ ಪರಿಪಾಲಿಸುವಂತೆಯೂ ದೇವ ಗುರು ಪೂಜೆಯನ್ನು ಮರೆಯ ದಿರುವಂತೆಯೂ ಜನಾಪವಾದದಿಂದ ನನ್ನನ್ನು ಬಿಸುಟಂತೆ ಮಿಥ್ಯಾದೃಷ್ಟಿ ಗಳ ಮಾತನ್ನು ಕೇಳಿ ಧರ್ಮಿಷ್ಠರನ್ನು ತೊರೆಯದಿರುವಂತೆಯೂ ನಾನು ಬೇಡಿ ಕೊಂಡೆನೆಂದು ತಿಳಿಸು" ಎಂದು ಕಣ್ಣೀರು ಸುರಿಸುತ್ತ ಹೇಳಿದಳು. ಅದನ್ನು ಕೇಳಿ ಕೃತಾಂತವಕ್ತ್ರನು, "ಗರ್ಭಿಣಿಯಾದ ಅರಸಿಯನ್ನು ಅರಣ್ಯದಲ್ಲಿ ಬಿಟ್ಟು ಬರುವಂತೆ ದೊರೆಯು ಆಜ್ಞೆಕೊಟ್ಟಲ್ಲಿ ಅಂತಹ ಆಜ್ಞೆಯನ್ನು ನಡೆಯಿಸುವ ನಾನು ಎಂತಹ ಅಯೋಗ್ಯನು? ಸೇವಾವೃತ್ತಿಗಿಂತಲೂ ಅಯೋಗ್ಯವಾದುದುಂಟೇ?" ಎಂದು ತನ್ನನ್ನು ತಾನೇ ನಿಂದಿಸಿಕೊಂಡು ಕಣ್ಣೀರು ಸುರಿಸುತ್ತ ಸೀತಾದೇವಿಗೆ ಅಡ್ಡಬಿದ್ದು ಅಪ್ಪಣೆಪಡೆದು ಅಯೋಧ್ಯೆಗೆ ಹೋದನು.

ಇತ್ತ, ಸೀತಾದೇವಿಯು ರಾಮಲಕ್ಷ್ಮಣರನ್ನು ನೆನೆ ನೆನೆದು ಶೋಕ ದಿಂದ ತಪಿಸುತ್ತ ಕಣ್ಣೀರು ಸುರಿಸುತ್ತ ದೆಸೆಗೆಟ್ಟು ಯಾವ ದಿಕ್ಕಿನಲ್ಲಿಯೂ ಯಾರನ್ನೂ ಕಾಣದೆ ಈ ಅವಸ್ಥೆಯು ತನ್ನ ಪೂರ್ವಜನ್ಮದ ಫಲವೆಂದು ತನ್ನನ್ನು ತಾನೇ ನಿಂದಿಸಿಕೊಳ್ಳುತ್ತ, ಜಿನಾಗಮ ಕೋವಿದಳಾದುದರಿಂದ ಕೊನೆಗೆ ಧೈರ್ಯವನ್ನು ತಾಳಿ ಮಹಾಮುನಿಗಳು ಮಹಾಟವಿಗಳಲ್ಲಿ ತಪಸ್ಸುಮಾಡಿ ಮೋಕ್ಷ ವನ್ನು ಸಾಧಿಸುವಂತೆ ತಾನೂ ಆ ಅಡವಿಯಲ್ಲಿ ನಿರಶನ ವ್ರತವನ್ನು ಕೈಕೊಂಡು ಸಂನ್ಯಸನದಿಂದ ಪರಲೋಕವನ್ನು ಸಾಧಿಸುವೆನೆಂದು ನಿಶ್ಚಯಿಸಿದಳು. ಆಗ ಜನಕಜೆಯ ಸುಕೃತವೇ ಮನುಷ್ಯರೂಪಿನಿಂದ ಬಂದಂತೆ ವಜ್ರಜಂಘನೆಂಬ ಅರಸುಮಗನೊಬ್ಬನು ಬಲಸಹಿತವಾಗಿ ಆನೆಯ ಬೇಟೆಗೆ ಬಂದು ದೂರದಲ್ಲಿ ವನಲಕ್ಷ್ಮಿಯಂತೆ ಮೆರೆಯುತ್ತಿದ್ದ ಸೀತಾದೇವಿಯನ್ನು ಕಂಡು ಆಶ್ಚರ್ಯಪಟ್ಟು ಹತ್ತಿರಕ್ಕೆ ಬಂದು "ತಾಯೇ! ತಾವು ಯಾರು? ಈ ಅಡವಿಗೆ ಏನು ಕಾರಣ ದಿಂದ ಬಂದಿರಿ?" ಎಂದು ಕೇಳಲು, ತಾನು ಜನಕನ ಮಗಳೆಂದೂ ಪ್ರಭಾ

ಮಂಡಲನ ತಂಗಿಯೆಂದೂ ರಾಮಚಂದ್ರನ ಭಾರ್ಯೆಯಾದ ಸೀತಾದೇವಿಯೆಂದೂ, ಲೋಕಾಪವಾದಕ್ಕಾಗಿ ರಾಮಸ್ವಾಮಿಯು ನಿರಾಪರಾಧಿಸಿಯಾದ ತನ್ನನ್ನು ಈ ರೀತಿಯಾಗಿ ಅಡವಿಗೆ ಕಳುಹಿಸಿದನೆಂದೂ ಹೇಳಿ ಕಣ್ಣೀರನ್ನು ಸುರಿಸಲು ವಜ್ರಜಂಘನು ಆಕೆಯ ಶೋಕವನ್ನು ತನ್ನ ವಿನಯೋಕ್ತಿಗಳಿಂದ ಆರಿಸಿ, ತಾನು ಪುಂಡರೀಕಿಣೀಪುರವನ್ನಾಳುವ ವಜ್ರಜಂಘನೆಂದೂ ಜಿನಧರ್ಮದ ದೆಸೆಯಿಂದ ಆಕೆಯು ತನಗೆ ತಂಗಿಯೆಂದೂ ತನ್ನೊಡನೆ ಬಿಜಯಮಾಡಿರೆಂದೂ ಹೇಳಿ ಅಂದಳದಲ್ಲಿ ಕುಳ್ಳಿರಿಸಿಕೊಂಡು ಪುಂಡರೀಕಿಣೀಪುರವನ್ನು ಸೇರಿ ತನ್ನ ದೊಡ್ಡ ಮಗಳಾದ ಶೀಲವತಿಯ ಮಾಡಕ್ಕೆ ಕರೆದುಕೊಂಡು ಹೋಗಿ ಆಕೆಗೆ ಒಪ್ಪಿಸಿ ತಾನು ಪ್ರಭಾಮಂಡಲಸಿಗಿಂತಲೂ ಅಧಿಕವಾದ ಗೌರವದಿಂದ ಸೀತಾದೇವಿಯನ್ನು ನೋಡಿಕೊಂಡಿರುವೆನೆಂದು ಹೇಳಿ ತನ್ನ ಅರಮನೆಗೆ ಹೋದನು. ಸೀತಾದೇವಿಯು ಶೀಲವತಿಯೊಡನೆ ಪ್ರತಿದಿನವೂ ಜಿನಮುನಿಗಾಹಾರವನ್ನಿತ್ತು ಜಿನಪೂಜೆಯನ್ನು ಮಾಡುತ್ತ ಕಾಲವನ್ನು ಕಳೆದಳು.

ಇತ್ತ, ಕೃತಾಂತವಕ್ತ್ರನು ಹಿಂದಕ್ಕೆ ಹೋಗಿ ರಾಘವನನ್ನು ಕಂಡು ಸೀತಾದೇವಿಯು ಹೇಳಿದ ಮಾತುಗಳೆಲ್ಲವನ್ನೂ ಹೇಳಲು ರಾಮಸ್ವಾಮಿಯು ಮೂರ್ಛೆ ಹೋಗಿ ಬೇಗನೆಯೆಚ್ಚತ್ತು ಬಹಳವಾಗಿ ಪ್ರಲಾಪಿಸಿದನು. ಇದನ್ನು ನೋಡಿ ಲಕ್ಷ್ಮಣನೂ ಶೋಕವಶಗತನಾಗಲು ಕೃತಾಂತವಕ್ತ್ರನು ಇಬ್ಬರನ್ನೂ ಸಮಾಧಾನ ಪಡಿಸಿದನು. ಆಗ ರಾಮಚಂದ್ರನು ಚಂದ್ರಕಲಚನೆಂಬ ಸೀತಾ ಮಹತ್ತರನನ್ನು ಕರೆಯಿಸಿ ಸೀತಾದೇವಿಯು ಹೇಳಿದ ತೆರನಾಗಿ ಜಿನಪತಿ ಪೂಜೆಯನ್ನೂ ಮುನಿಜನಕ್ಕೆ ಚತುರ್ವಿಧ ದಾನವನ್ನೂ ಮಾಡಿಸೆಂದು ಅಪ್ಪಣೆಕೊಟ್ಟನು.

ಆಶ್ವಾಸ ೧೬—ಪರಿನಿರ್ವಾಣ ಕಲ್ಯಾಣೋತ್ಸವ

ಸೀತಾದೇವಿಯು ವಜ್ರಜಂಘನ ಪೋಷಣೆಯಲ್ಲಿದ್ದು ನವಮಾಸಗಳು ತುಂಬಲು ಶ್ರಾವಣಮಾಸದ ಹುಣ್ಣಿಮೆಯ ಹಗಲಿನಲ್ಲಿ ಚಂದ್ರದೇವೇಂದ್ರರಿಗೆಣೆಯಾದ ಅವಳಿ ಮಕ್ಕಳನ್ನು ಹೆತ್ತಳು. ಅವರಿಗೆ ಮಹಾ ವೈಭವದಿಂದ ಜಾತಕರ್ಮ ನಾಮಕರಣಗಳನ್ನು ಮಾಡಿಸಿ ಲವ ಕುಶರೆಂಬ ಹೆಸರನ್ನಿಟ್ಟರು. ಅವರು ಶುಕ್ಲ ಪಕ್ಷದ ಚಂದ್ರನಂತೆ ದಿನದಿನಕ್ಕೆ ಪ್ರವರ್ಧಮಾನರಾಗಿ ಶೈಶವವನ್ನು ಕಳೆಯಲು ಸಿದ್ಧಾರ್ಥನಿಂದ ಅರುವತ್ತುನಾಲ್ಕು ಕಲೆಗಳನ್ನೂ ಶಸ್ತ್ರಾಸ್ತ್ರವಿದ್ಯೆಗಳಿಲ್ಲವನ್ನೂ ಕಲಿತು ಅಸಮಾನರಾದರು. ಆಗ ವಜ್ರಜಂಘನು ಶಶಿಮಾಲೆಯೆಂಬ ತನ್ನ ಮಗಳೊಡನೆ ಮೂವತ್ತೆರಡುಮಂದಿ ಕನ್ನಿಕೆಯರನ್ನು ಲವನಿಗೆ ಮದುವೆಮಾಡಿ ಪೃಥ್ವೀಪುರವನ್ನಾಳುವ ಪೃಥುವಿನ ಮಗಳಾದ ಕನಕಮಾಲೆಯನ್ನು ಕುಶನಿಗೆ ಕೊಡುವಂತೆ

ಪೃಥುವಿಗೆ ಹೇಳಿಕಳುಹಿಸಲು, ಆತನು ಅವಜ್ಞಾತ ಕುಲದವನಿಗೆ ಕೂಸನ್ನು ಕೊಡೆನೆಂದು ಗರ್ಜಿಸಿ ಹೇಳಿದನು. ಅದನ್ನು ಕೇಳಿ ವಜ್ರಜಂಘನು ಕಡಮುಳಿದು ಪೃಥುವಿನಮೇಲೆ ದಂಡೆತ್ತಿ ಹೋದುದನ್ನು ತಿಳಿದು ಲವಾಂಕುಶರೂ ಹೊರಟು ವಜ್ರಜಂಘನನ್ನು ಸೇರಿ ಪೃಥುವಿನಮೇಲೆ ಯುದ್ಧಮಾಡಿ ಅವನನ್ನು ಸೋಲಿಸಲು ಅವನು ಓಡಿಹೋದನು. ಆಗ ಲವಾಂಕುಶರು ಹಿಂದಟ್ಟಿಕೊಂಡು ಹೋಗಿ ಅರಿಯದ ಕುಲದವರಿಗೆ ಬೆಂಗೊಟ್ಟೋಡುವುದು ಯುಕ್ತವಲ್ಲವೆಂದು ಪೂಡಲಿಸಲು ಪೃಥುವು ಎಡೆಗೆಟ್ಟು ಕೈಮುಗಿದು ತನ್ನ ದೋಷಕ್ಕೆ ಕ್ಷಮಿಸಬೇಕೆಂದು ಬೇಡಿಕೊಂಡು ಅವರನ್ನು ತನ್ನ ಪಟ್ಟಣಕ್ಕೆ ಕರೆದುಕೊಂಡು ಹೋಗಿ ಕನಕಮಾಲೆಯನ್ನು ಕುಶನಿಗೆ ಮದುವೆಮಾಡಿ ಕೊಟ್ಟನು.

ತರುವಾಯ, ಲವಾಂಕುಶರು ವಜ್ರಜಂಘನನ್ನು ಪುಂಡರೀಕಿಣೀಪುರಕ್ಕೆ ಕಳುಹಿಸಿ ದಿಗ್ವಿಜಯ ಪ್ರಯಾಣ ಭೇರಿಯನ್ನು ಹೊಯ್ಸಿ ವಂಗ ಮಗಧ ಮೊದಲಾದ ಸಕಲ ದೇಶಗಳನ್ನೂ ಬಾಯ್ತೆಳಿಸಿ ಗಂಗಾನದಿಯನ್ನು ದಾಟಿ ಕ್ಪೈಲಾಸ ನಗರದ ಉತ್ತರ ಭಾಗವನ್ನು ಸೇರಿ ಸಿಂಧುವಿನ ಬಳಿಗೆ ಬಂದು ಪಶ್ಚಿಮ ಸಮುದ್ರ ತೀರವನ್ನು ಹಿಡಿದು ನಡೆದು ಅಲ್ಲಿಯ ರಾಜರುಗಳಿಂದ ಕಪ್ಪವನ್ನು ಕೊಂಡು ಸಿದ್ಧ ದಿಗ್ವಿಜಯರಾಗಿ ಬಂದು ಪುಂಡರೀಕಿಣೀಪುರವನ್ನು ಸೇರಿ ಸುಖದಿಂದಿದ್ದರು. ಆ ಸಮಯದಲ್ಲಿ ಹಿಂಸಾನಂದನಾದ ನಾರದನು ಸೀತೆಯಿದ್ದ ತಾವನ್ನರಿತು ಪುಂಡರೀಕಪುರವನ್ನು ಹೊಗಲು ಲವಾಂಕುಶರು ಆತನನ್ನು ಕಂಡು ಭಕ್ತಿಯಿಂದೆರಗಿ ಮಣಿಮಯಾಸನದಲ್ಲಿ ಕುಳ್ಳಿರಿಸಿದರು. ಅದಕ್ಕೆ ಸಂತೋಷಪಟ್ಟು ನಾರದನು ರಾಮಲಕ್ಷ್ಮಣರಂತೆ ಮಹಾನುಭಾವರಾಗಿರೆಂದು ಅವರನ್ನು ಹರಸಲು ಲವಾಂಕುಶರು ಆ ರಾಮಲಕ್ಷ್ಮಣರು ಯಾರೆಂದು ಕೇಳಿ, ಅವರ ವೃತ್ತಾಂತವನ್ನು ವಿಶದವಾಗಿ ತಿಳಿಸಬೇಕೆಂದು ಆ ಮಾಯ ಜೋಗಿಯನ್ನು ಬೇಡಿದರು. ಅದಕ್ಕೆ ನಾರದನು ರಾಮಲಕ್ಷ್ಮಣರ ವೃತ್ತಾಂತವನ್ನು ಸವಿಸ್ತಾರವಾಗಿ ಹೇಳಲು, ಅದನ್ನು ಕೇಳಿ ನಿರಂಕುಶನಾದ ಅಂಕುಶನು "ಮುನಿವರ್ಯರೇ! ಅಯೋಗ್ಯರ ಮಾತನ್ನು ಕೇಳಿ ತನ್ನ ಘನತೆಯನ್ನಳಿದು ಪಾಪಕ್ಕಂಜದೆ ಗುಣವತಿಯಾದ ಸತಿಯನ್ನು ತೊರೆದ ನಿರ್ಗುಣನಾದ ಜಡಮತಿಯನ್ನು ತಮ್ಮಂಥವರು ಹೊಗಳಬಹುದೇ?" ಎಂದು ಹೇಳಿ ಆ ಅಯೋಧ್ಯೆಯು ಎಷ್ಟು ದೂರವಿರುವುದೆಂದು ಕೇಳಿದನು. ನಾರದನು ನೂರೈವತ್ತು ಯೋಜನವೆನ್ನಲು ಕೂಡಲೆ ಲವಾಂಕುಶರು ಸಮಸ್ತ ಬಲಸೊಡನೆ ಅಲ್ಲಿಗೆ ಹೊರಟು ಕೆಲವು ದಿನಗಳಿಗೆ ಅಯೋಧ್ಯೆಯನ್ನು ಸೇರಿ ಊರಹೊರಗೆ ಬೀಡನ್ನು ಬಿಟ್ಟರು. ಕ್ಷುಲ್ಲಕನಾದ ನಾರದನು ಪ್ರಭಾಮಂಡಲನ ಬಳಿಗೆ ಹೋಗಿ ಲವಾಂಕುಶರ ತೆರನೆಲ್ಲವನ್ನೂ ತಿಳಿಸಲು ಅದಕ್ಕೆ ಆತನು ಮನನೊಂದು ಜನಕ ವಿದೇಹಿಗಳೊಡನೆ ಪುಂಡರೀಕಿಣೀಪುರಕ್ಕೆ ಬಂದು ಸೀತಾದೇವಿಯನ್ನು ಕಂಡನು. ಆಕೆಯು ತಾಯಿ ತಂದೆ ಅಣ್ಣಂದಿರಿಗೆ

ನಮಸ್ಕರಿಸಿ ದುಃಖಪಡಲು, ಪ್ರಭಾಮಂಡಲನು ರಾಮಲಕ್ಷ್ಮಣರ ದೆಸೆಯಿಂದ ಮಕ್ಕಳಿಗೆ ಪ್ರಮಾದವಾಗಬಹುದೆಂದು ಹೇಳಿ ಸೀತಾದೇವಿಯನ್ನೂ ಲವಾಂಕುಶರ ಅರಸಿಯರನ್ನೂ ತನ್ನ ವಿಮಾನವನ್ನೇರಿಸಿಕೊಂಡು ಆಕಾಶಮಾರ್ಗದಿಂದ ಬಂದು ಲವಾಂಕುಶರನ್ನು ಸೇರಿದನು.

ಇತ್ತ, ಬಲಾಚ್ಯುತರು ತಮ್ಮ ಪರಾಕ್ರಮವನ್ನು ಲೆಕ್ಕಿಸದೆ ಪರಸೈನ್ಯವು ಬಂದಿತೆಂದು ಕುಪಿತರಾಗಿ ತಮ್ಮ ಸೇನೆಯೊಡನೆ ಹೊರಟು ಲವಾಂಕುಶರನ್ನು ಎದುರಿಸಿ ಕಾದಿ ಗೆಲ್ಲಲಾರದೆ ಹೋದರು. ಲವನು ರಾಘವನ ಧ್ವಜವನ್ನೂ ಧನುಸ್ಸನ್ನೂ ರಥವನ್ನೂ ಮುರಿದುಹೋಗುವಂತೆ ಹೊಡೆದು ರಾಮನನ್ನು ವಿರಥನನ್ನಾಗಿ ಮಾಡಿದನು. ಆಗ ರಾಮನು ಮತ್ತೊಂದು ರಥವನ್ನೇರಿ ಮಹಾಯುದ್ಧವನ್ನು ಮಾಡಿ ದಿವ್ಯಾಸ್ತ್ರಗಳಿಂದಲೂ ಲವನನ್ನು ಸೋಲಿಸಲಾರದೆ ವಿಸ್ಮಿತಚಿತ್ತನಾಗಿರುವಲ್ಲಿ, ಲಕ್ಷ್ಮಣನು ಕುಶನೊಡನೆ ಹೋರಾಡಿ ಗೆಲ್ಲಲಾರದೆ ಕಡೆಗೆ ಚಕ್ರದಿಂದಿಡಲು ಆ ಚಕ್ರವು ಕುಶನನ್ನು ನೆಡಲೊಲ್ಲದೆ ಅಲ್ಲಿಯೇ ಸುತ್ತಾಡುತ್ತಿತ್ತು. ಲಕ್ಷ್ಮಣನು ಕುಶನಿಂದ ಸೋತವನಾಗಿ ತಮ್ಮ ಪುಣ್ಯಪ್ರಭಾವವು ತೊಲಗಿತೆಂದೆಣಿಸಿ ಅವರು ಬಲದೇವ ವಾಸುದೇವರಾದರೆಂದೂ ತಮಗಜೇಯರೆಂದೂ ನಿಶ್ಚಯಿಸಿ ಯುದ್ಧವನ್ನು ನಿಲ್ಲಿಸಿರಲು, ಆ ಸಮಯದಲ್ಲಿ ನಾರದನು ನಭದಲ್ಲಿದ್ದುನಗುತ್ತ, "ಅಯ್ಯಾ! ಬಲದೇವ ವಾಸುದೇವರೆಂಬ ಮಹಿಮೆ ನಿಮಗಲ್ಲದೆ ಇತರರಿಗೆ ಸಲ್ಲುವುದುಂಟೆ? ಇವರು ಸೀತಾದೇವಿಯ ಕುಮಾರರು, ಲವಾಂಕುಶರೆಂಬವರು; ತಮ್ಮ ತಾಯಿಯನ್ನು ಅವಿಚಾರದಿಂದ ಹೊರಡಿಸಿ ಕಳೆದುದಕ್ಕಾಗಿ ಮುನಿದು ನಿಮ್ಮನ್ನು ಈ ತೆರದಿಂದ ಕಾಣುವುದಕ್ಕೆ ಬಂದಿರುವರು" ಎಂದು ಹೇಳಲು, ಲಕ್ಷ್ಮಣನು ಸಂತೋಷಾತಿಶಯದಿಂದ ರಾಮನ ಬಳಿಗೆ ಬಂದು ಈ ವೃತ್ತಾಂತವನ್ನು ತಿಳಿಸಿದನು. ಇದನ್ನು ಕೇಳಿ ರಾಮಸ್ವಾಮಿಯು ಅತ್ಯಾಶ್ಚರ್ಯದಿಂದಲೂ ಸಂತೋಷದಿಂದಲೂ ಮೈಮರೆತವನಾಗಿ ಮಕ್ಕಳನ್ನು ಆಗ ತಾನೆ ಪಡೆದವನಂತೆ ಅನುರಾಗ ಹೊಂದಿ ರಥದಿಂದಿಳಿದು ಲಕ್ಷ್ಮಣನೊಡನೆ ಲವಾಂಕುಶರಿರುವ ಸ್ಥಳಕ್ಕೆ ಬರುತ್ತಿರಲು ಅವರು ಆನೆಗಳಿಂದಿಳಿದು ಸಂಭ್ರಮದಿಂದ ಎದುರಾಗಿ ಬಂದು ರಾಮನ ಪಾದಗಳ ಮೇಲೆ ಬಿದ್ದರು. ರಾಮಚಂದ್ರನು ಅವರನ್ನೆತ್ತಿ ಬಿಗಿದಪ್ಪಿಕೊಂಡು ಸಂತೋಷ ಸಾಗರದಲ್ಲಿ ಮುಳುಗಿದನು. ಲವಾಂಕುಶರು ತರುವಾಯ ಲಕ್ಷ್ಮಣನನ್ನು ನಮಸ್ಕರಿಸಿ ಆಶೀರ್ವಾದವನ್ನು ಪಡೆದರು. ಹೀಗೆ ರಾಮಲಕ್ಷ್ಮಣರು ಸುಖಾನುಭವದಿಂದ ತಣಿದು ಆನಂದ ಬಾಷ್ಪಗಳನ್ನು ಸುರಿಸುತ್ತ ಪುಳಕಾಂಕಿತರಾಗಿರುವಲ್ಲಿ ವಿಮಾನಾರೂಢೆಯಾದ ಸೀತಾದೇವಿಯು ಮಕ್ಕಳ ಪರಾಕ್ರಮವನ್ನೂ ಅವರು ತಂದೆಯೊಡನೆ ಸೇರಿದುದನ್ನೂ ಕಂಡು ಸಂತೋಷಪಟ್ಟು ಪುಂಡರೀಕಿಣೀಪುರಕ್ಕೆ ಹಿಂದಿರುಗಿ ಹೋದಳು. ರಾಮಲಕ್ಷ್ಮಣರು ಲವಾಂಕುಶರೊಡನೆ ಮಹಾವೈಭವದಿಂದ ಸಾಕೇತಪುರವನ್ನು ಹೊಕ್ಕು ಸುಖದಿಂದಿದ್ದರು.

ಆಗ ಸುಗ್ರೀವ ಮೊದಲಾದವರು ರಾಮನ ಬಳಿಗೆ ಬಂದು ಸಚ್ಚರಿತೆಯಾದ ಜಾನಕಿಯನ್ನು ಪರದೇಶದಲ್ಲಿ ಬಿಟ್ಟಿರುವುದು ಸರಿಯಲ್ಲವೆಂದೂ ಕೂಡಲೆ ಅಲ್ಲಿಗೆ ಕರೆಯಿಸುವುದೆಂದೂ ಬೇಡಿಕೊಳ್ಳಲು ರಾಮನು ತಾನು ಲೋಕಾಪವಾದ ಭಯದಿಂದ ಆಕೆಯನ್ನು ಕಳೆದೆನಲ್ಲದೆ ಅವಗುಣಾರೋಪಣದಿಂದಲ್ಲವೆಂದೂ ಸಚ್ಚರಿತದಲ್ಲಿ ಆಕೆಗೆ ಸಮನಾದವರು ಮತ್ತಾರೂ ಇಲ್ಲವೆಂಬ ವಿಷಯವನ್ನು ತಾನು ಅರಿತಿರುವೆನೆಂದೂ ಹೇಳಿ ಆಕೆಯ ಅಪವಾದವನ್ನು ಕಳೆಯುವುದಕ್ಕಾಗಿ, ಎಲ್ಲರೂ ನೋಡುವಂತೆ, ಅಗ್ನಿಪ್ರವೇಶ ಪರೀಕ್ಷೆಯನ್ನು ಮಾಡುವುದೆಂದು ತಿಳಿಸಿದನು. ಅದಕ್ಕೆ ಸುಗ್ರೀವಾದಿಗಳು ಒಪ್ಪಿ ಅಪ್ಪಣೆಪಡೆದು ಪುಂಡರೀಕಣೀಪುರಕ್ಕೆ ಹೋಗಿ ಸೀತಾದೇವಿಯೊಡನೆ ಈ ವಿಷಯವನ್ನು ತಿಳಿಸಲು, ವಿಷಯ ವಿರಕ್ತೆಯಾದ ಸೀತಾದೇವಿಯು ತಾನು ಅಗ್ನಿಪ್ರವೇಶ ಮಾಡಿ ಶುದ್ಧೆಯಾಗಿ ತಪಸ್ಸ್ಥೆಯಾಗುವೆನೆಂದು ಮನಸ್ಸಿನಲ್ಲಿ ನಿಶ್ಚಯಿಸಿ ವಿಮಾನವನ್ನೇರಿ ಅಯೋಧ್ಯೆಗೆ ಬಂದಳು. ಆ ದಿನ ಮಹೇಂದ್ರೋದ್ಯಾನದಲ್ಲಿ ರಾತ್ರಿಯನ್ನು ಕಳೆದು ಮರು ದಿನ ರಾಘವನನ್ನು ಕಂಡು ಅವಿಚಾರದಿಂದ ತನ್ನನ್ನು ಬಿಸುಟು ತನಗೆ ಬಹಳ ನೋವನ್ನುಂಟುಮಾಡಿದಿರೆಂದು ಹೇಳಲು, ರಾಮಚಂದ್ರನು ತಾನು ಲೋಕಾಪವಾದಕ್ಕಾಗಿ ಭಯಪಟ್ಟು ಆ ರೀತಿಯಾಗಿ ಮಾಡಿದೆನಲ್ಲದೆ ಆಕೆಯ ಸುಚರಿತೆಯ ವಿಷಯವಾಗಿ ಯಾರಿಗೂ ಸಂಶಯವಿಲ್ಲೆಂದು ತಿಳಿಸಿ ಲೋಕಪ್ರಖ್ಯಾತವಾಗುವಂತೆ ಅಗ್ನಿಪ್ರವೇಶಮಾಡಿಬಾರೆಂದು ಹೇಳಲು ಆಕೆಯು ಮಹಾಪ್ರಸಾದವೆಂದು ಒಪ್ಪಿದಳು. ಆಗ ಚಂದನಾಗರು ಸುಗಂಧ ದ್ರವ್ಯಗಳಿಂದ ದೊಡ್ಡ ಅಗ್ನಿಕುಂಡವನ್ನು ರಚಿಯಿಸಿದುದನ್ನು ದೇವೇಂದ್ರನು ತಿಳಿದು ಮಹಾ ಸತಿಯಾದ ಸೀತಾದೇವಿಗೆ ಕೇಡುಂಟಾಗದಂತೆ ಮಾಡಿ ಬರಲು ಮೇಘಕೇತನನೆಂಬ ದೇವನನ್ನು ನಿಯಮಿಸಿದನು.

ಸೀತಾದೇವಿಯು ಅಲ್ಲಿ ನೆರೆದಿದ್ದ ವಿಯಚ್ಚರಾಮರ ನರ ಪ್ರಮುಖರು ಕೇಳುವಂತೆ ಸುಸ್ವರದಿಂದ "ನಾನು ವಸುಂಧರಾವಲ್ಲಭನಾದ ರಾಘವನಲ್ಲದೆ ರಾವಣಾದಿಯಾದ ಮಿಕ್ಕವರಲ್ಲಿ ಪ್ರೀತಿಯನ್ನು ಮನಸ್ಸಿಗೆ ತಂದಿದ್ದರೆ ಈ ಯಜ್ಞೇಶ್ವರನಿಂದ ನನಗೆ ಮರಣವುಂಟಾಗಲಿ" ಎಂದು ಪ್ರತಿಜ್ಞೆಗೈದು ಪಂಚಪರಮೇಷ್ಠಿಗಳಿಗೆ ನಮಸ್ಕಾರಮಾಡಿ ಧಗಧಗಿಸುತ್ತಿರುವ ಉರಿಯಲ್ಲಿ ಬಿದ್ದಳು. ಆಗ ಸುತ್ತಲಿರುವವರೆಲ್ಲರೂ ಬೆಚ್ಚುಬಿದ್ದಿರಲು, ಸೀತಾದೇವಿಯು ತಿಳಿಗೊಳದಲ್ಲಿರುವಂತೆ ನಿಶ್ಚಲೆಯಾಗಿ ಜಿನಪತಿಯ ಚರಣವನ್ನು ಧ್ಯಾನಿಸುತ್ತಿದ್ದಳು. ಪತಿವ್ರತಾ ಮಹಿಮೆಯಿಂದುಂಟಾದ ಈ ಆಶ್ಚರ್ಯವನ್ನು ಕಂಡು ಎಲ್ಲರೂ ಬೆರಗಾದರು. ಆಗ ದೇವೇಂದ್ರನಾಜ್ಞೆಯ ಮೇರೆಗೆ ನಿಯಮಿತನಾಗಿದ್ದ ದೇವನು ಆ ಕುಂಡವನ್ನು ಪದ್ಮಸರೋವರವನ್ನಾಗಿ ಮಾಡಿ ತನ್ನ ದೇವಿಯರಿಂದ ಆ ಕೊಳದಲ್ಲಿದ್ದ ಸೀತಾದೇವಿಯನ್ನೆತ್ತಿ ತರಿಸಿ ಸಿಂಹಾಸನದಲ್ಲಿ ಕುಳ್ಳಿರಿಸಿ ತಾನು ಆಕಾಶದಲ್ಲಿದ್ದು ಲೋಕಕ್ಕೆಲ್ಲ ಆಶ್ಚರ್ಯವಾಗುವಂತೆ ಹೂಮಳೆಗರೆಯಿಸಿ

ದನು. ಅದನ್ನು ಕಂಡು ಜನರೆಲ್ಲರೂ ಒಂದೇ ಕೊರಳಿನಲ್ಲಿ ಸೀತಾದೇವಿಯ ಪಾತಿವ್ರತ್ಯವನ್ನು ಕೊಂಡಾಡಿದರು, ಲವಾಂಕುಶರು ಪುಲಕಾಂಕಿತರಾದರು, ರಾಮಲಕ್ಷ್ಮಣರು ಸಂತೋಷ ಸಾಗರದಲ್ಲಿ ಮುಳುಗಿದರು. ಬಂಧುವರ್ಗವೂ ಪರಿಜನವೂ ಹರ್ಷವನ್ನು ತಾಳಿತು, ದೇವದುಂದುಭಿ ಮೊಳಗಿತು, ಗಂಧವಾಹನು ದಿವ್ಯಾಮೋದದೊಡನೆ ಸುಳಿದನು, ರಾಜಲೋಕವು ಸ್ತೀತಿಯಿಂದ ಹರಸಿತು.

ಆಗ ರಾಮಸ್ವಾಮಿಯು ಸೀತಾದೇವಿಯ ಬಳಿಗೆ ಬಂದು, ತನ್ನನ್ನು ಕ್ಷಮಿಸಿ ಮೊದಲಿದ್ದ ತೆರನಾಗಿಯೇ ತನ್ನ ವಲ್ಲಭೆಯಾಗಿದ್ದು ಸಾಮ್ರಾಜ್ಯ ಸುಖವನ್ನನುಭವಿಸಬೇಕೆಂದು ಹೇಳಲು ಸೀತಾದೇವಿಯು, ಕ್ಲೇಡುಳ್ಳ ಸಂಸಾರದಲ್ಲಿನ್ನು ಉಪಯೋಗವಿಲ್ಲೆಂದೂ ಕೇಡಿಲ್ಲದ ಮೋಕ್ಷಸುಖಕ್ಕೆ ಕಾರಣವಾಗಿರುವ ತಪಸ್ಸನ್ನು ಕೈಕೊಳ್ವೆನೆಂದೂ ಹೇಳಿ ತನ್ನ ತಲೆಗೂದಲನ್ನು ಕತ್ತರಿಸಿ ಆತನ ಮುಂದಿಟ್ಟಳು. ಈ ತೆರನಾದ ಸತಿಯ ವೈರಾಗ್ಯವನ್ನು ಕಂಡು ರಾಘವನು ಮೂರ್ಛಿತನಾಗಿ ಸ್ವಲ್ಪ ಹೊತ್ತಿನಮೇಲೆ ಎಚ್ಚೆತ್ತನು. ಅಷ್ಟರಲ್ಲಿ ಸೀತಾದೇವಿಯು ಪೃಥುಮತಿ ಕಂತಿಯರ ಪಕ್ಕದಲ್ಲಿ ತಪಸ್ಸಿಗೆ ನಿಂತು ಮಹೇಂದ್ರೋದ್ಯಾನ ವನಕ್ಕೆ ಹೋಗಿ ಸಕಲಭೂಷಣ ಕೇವಲಿ ಭಟ್ಟಾರಕರ ಸಭೆಯನ್ನು ಸೇರಿದಳು. ರಾಮನು ಅತಿ ವ್ಯಾಮೋಹದಿಂದ ಹೊರಟು ಸಕಲ ಲೋಕಾಧಿಪರಿಂದ ಕೂಡಿದ್ದ ಸಕಲಭೂಷಣ ಕೇವಲಿಗಳ ಸಭೆಯನ್ನು ಹೊಕ್ಕು ಕೇವಲಿಗಳಿಗೆ ನಮಸ್ಕರಿಸಿ ಕುಳಿತುಕೊಂಡನು: ಲಕ್ಷ್ಮಣಾದಿಗಳು ಸೀತಾದೇವಿಯನ್ನು ಬಗೆಬಗೆಯಾಗಿ ಸ್ತೋತ್ರಮಾಡಿ ಭಕ್ತಿಯಿಂದೆರಗಿ ನಮಸ್ಕಾರ ಮಾಡಿದರು. ಆಗ ವಿಭೀಷಣನು ಎದ್ದು ನಿಂತು ಕೈಮುಗಿದುಕೊಂಡು ಭಟ್ಟಾರಕರನ್ನು ಕುರಿತು ರಾಮಲಕ್ಷ್ಮಣರ ಪೂರ್ವಜನ್ಮದ ಪುಣ್ಯಪ್ರಭಾವವನ್ನೂ ಶೌಚಾಚಾರ ಪರಾಯಣನಾದ ರಾವಣನು ಸೀತಾದೇವಿಗೆ ಮರುಳುಗೊಳ್ಳುವುದಕ್ಕೆ ಪೂರ್ವಜನ್ಮದ ಪಾಪಕಾರಣವನ್ನೂ ವಿವರಿಸಿ ಹೇಳಬೇಕೆಂದು ಬೇಡಿಕೊಳ್ಳಲು ಕೇವಲಿಗಳು ಅವನ್ನೂ ಇತರರ ಭವಾವಳಿಯನ್ನೂ ವಿಶದವಾಗಿ ತಿಳಿಸಿದರು. ತರುವಾಯ ರಾಮಲಕ್ಷ್ಮಣರು ಲವಾಂಕುಶರೊಡನೆ ಅಯೋಧ್ಯೆಯನ್ನು ಹೊಕ್ಕು ರಾಜ್ಯಸುಖಾಯತ್ತ ಮನರಾಗಿ ಅನೇಕ ವರ್ಷ ಸಂತೋಷದಿಂದಿದ್ದರು.

ಹೀಗಿರುವಾಗ ಸುರ ಪರಿಷತ್ತಿನಲ್ಲಿ ಮಧ್ಯವರ್ತಿಯಾದ ಸೌಧರ್ಮೇಂದ್ರನು ಧರ್ಮನಿರೂಪಣಮಾಡುವಲ್ಲಿ, ಗತಿಗಳೆಲ್ಲ ಮನುಜ ಗತಿಯೇ ಪಾವನವಾದುದೆಂದೂ ಮಿಕ್ಕ ಗತಿಗಳು ಮುಕ್ತಿ ಸುಖವನ್ನು ಕೊಡಲಾರವೆಂದೂ ಹೇಳಲು, ಆ ಸಭೆಯಲ್ಲಿದ್ದ ನಿರ್ವಾಣನೊಬ್ಬನು "ರಾಮನು ಮನುಜ ಗತಿಯನ್ನು ಪಡೆದು ಉತ್ತಮನೆನಿಸಿಕೊಂಡಿದ್ದರೂ ದೀಕ್ಷೆಗೊಳ್ಳಲಿಲ್ಲವಲ್ಲಾ! ಆದುದರಿಂದ ಮನುಷ್ಯ ಭವವೇ ದೀಕ್ಷೆಗೆ ಕಾರಣವೆಂದು ಹೇಗೆ ಹೇಳುವಿರಿ?" ಎಂದು ಕೇಳಿದನು. ಅದಕ್ಕೆ ವಿಭಾವಸುವೆಂಬ ದೇವನು ರಾಮನಿಗೆ ಲಕ್ಷ್ಮಣನಲ್ಲಿರುವ ಸ್ನೇಹ ಕಾರಣದಿಂದ ತಪವ

ನ್ನುಪೇಕ್ಷಿಸಿರುವನೆಂದೂ ಆತನಿಗೆ ಲಕ್ಷ್ಮಣನ ವಿಯೋಗವಾದರೂ ಲಕ್ಷ್ಮಣನಿಗೆ ರಾಮನ ವಿಯೋಗವಾದರೂ ಪರಸ್ಪರವಾಗಿ ಅತಿ ವಿಷಾದಪಡುವರೆಂದೂ ಹೇಳಲು ರತ್ನಚೂಲ ಅಮೃತಚೂಲರೆಂಬ ಇಬ್ಬರು ದೇವರುಗಳು ರಾಮಲಕ್ಷ್ಮಣರ ಸ್ನೇಹವನ್ನು ನೋಡುವ ಕುತೂಹಲವುಳ್ಳವರಾಗಿ ಅಯೋಧ್ಯೆಗೆ ಬಂದು ಅರಮನೆಯನ್ನು ಹೊಕ್ಕು ರಾಮನು ಪರಲೋಕ ಪ್ರಾಪ್ತನಾದಂತೆಯೂ, ರಾಜಾಲಯವೆಲ್ಲವೂ ಶೋಕ ಸಮುದ್ರದಲ್ಲಿ ಮುಳುಗಿದಂತೆಯೂ, ರಾಮನಾಕೃತಿಯನ್ನು ಪ್ರಾಣವಳಿದಂತೆಯೂ ತಮ್ಮ ವಿದ್ಯಾಬಲದಿಂದ ನಿರ್ಮಿಸಿದರು. ಇದನ್ನು ಕಂಡು ಲಕ್ಷ್ಮಣನು ಅತ್ಯಂತ ಶೋಕದಿಂದ ಕ್ಷಣಮಾತ್ರದಲ್ಲಿ ಪ್ರಾಣವನ್ನು ಬಿಟ್ಟನು; ಅರಮನೆಯೆಲ್ಲವೂ ದುಃಖಮಯವಾಯಿತು. ರಾಮನು ಈ ವಾರ್ತೆಯನ್ನು ಕೇಳಿ ಲಕ್ಷ್ಮಣನ ಬಳಿಗೆ ಬಂದು ಮೂರ್ಛೆಹೋಗಿ ಎಚ್ಚತ್ತು ಮರಳಿ ಮೂರ್ಛೆಗೊಂಡು ಬಹು ವಿಧವಾಗಿ ಪ್ರಲಾಪಿಸಿದನು. ಇದನ್ನು ಕಂಡ ಲವಾಂಕುಶರು ಅದೇ ತಮಗೆ ನಿರ್ವೇಗ ಕಾರಣವಾಗಲು ರಾಮಸ್ವಾಮಿಗೆ ನಮಸ್ಕರಿಸಿ ಅಪ್ಪಣೆಪಡೆದು ಅಮೃತೇಶ್ವರ ಭಟ್ಟಾರಕರ ಬಳಿಯಲ್ಲಿ ದೀಕ್ಷೆಗೊಂಡರು. ವಿಭೀಷಣನು ಈ ಸುದ್ದಿಯನ್ನು ಕೇಳಿ ರಾಮಚಂದ್ರನ ಶೋಕವನ್ನು ಉಪಶಮಿಸಲೆಂದು ಬಂದು ಆತನೂ ಸುಗ್ರೀವಾದಿಗಳೂ ಲಕ್ಷ್ಮಣನ ಶವಕ್ಕೆ ದಹನ ಸಂಸ್ಕಾರವನ್ನು ಮಾಡಿಸಲುದ್ಯುಕ್ತರಾದರು. ಇದನ್ನು ಕಂಡು ರಾಮನು ಅವರನ್ನು ಬಲು ತೆರನಾಗಿ ಬಯ್ದು ಹೊಯ್ದು ಕೂಡಲೆ ಲಕ್ಷ್ಮಣನ ಶವವನ್ನೆತ್ತಿಕೊಂಡು ಹೋಗಿ ಅದಕ್ಕೆ ವಸ್ತ್ರಾಭರಣಗಳನ್ನು ತೊಡಿಸಿ ಚಂದನವನ್ನು ಹಚ್ಚಿ ಅದನ್ನು ಆರು ತಿಂಗಳ ಕಾಲ ಹಾಗೆಯೇ ಹೊತ್ತುಕೊಂಡಿದ್ದನು.

ಈ ರೀತಿಯಾಗಿ ರಾಮಸ್ವಾಮಿಯು ಲಕ್ಷ್ಮಣನ ವಿಯೋಗದಿಂದ ರಾಜ್ಯರಕ್ಷಣೆಯನ್ನು ಮರೆತು ವಿಕಲನಾಗಿರಲು ಇಂದಗಿಯ ಮಗನಾದ ವಜ್ರಮಾಲಿ ಮೊದಲಾದವರು ಅಯೋಧ್ಯೆಗೆ ಮುತ್ತಿಗೆ ಹಾಕಿದರು. ರಾಮನು ಈ ವಾರ್ತೆಯನ್ನು ಕೇಳಿ ಲಕ್ಷ್ಮಣನ ದೇಹವನ್ನು ಬಿಡಲಾರದೆ ತನ್ನ ವಜ್ರಾವರ್ತ ಚಾಪವನ್ನೂ ಅಗ್ನಿಮುಖ ಶಿಲೀಮುಖವನ್ನೂ ನೋಡುತ್ತಿರುವಲ್ಲಿ ದೇವಗತಿವಡೆದ ಜಟಾಯುವಿಗೂ ಕೃತಾಂತವಕ್ತ್ರನಿಗೂ ಅಸನಕರ್ಪವಾಯಿತು. ಅವರು ಅವಧಿ ಬೋಧೆಯಿಂದ ಅಯೋಧ್ಯೆಯ ವೃತ್ತಾಂತವನ್ನರಿತು ಅಲ್ಲಿಗೆ ಬಂದು ಶತ್ರು ಸೈನ್ಯವನ್ನೋಡಿಸಿ ರಾಮನ ಬಳಿಗೆ ಬಂದು ರಾಮನಿಗೆ ಹೇಗಾದರೂ ಧರ್ಮ ಬೋಧೆಯನ್ನು ಮಾಡಿ ಆತನ ವಿಕಲತೆಯನ್ನು ಕಳೆಯಬೇಕೆಂದು ಪ್ರಯತ್ನಿಸಿ ಹಲವು ದೃಷ್ಟಾಂತಗಳನ್ನು ಕೊಟ್ಟು ಕಡೆಗೆ ರಾಮನ ಮೋಹಾಂಧಕಾರವನ್ನು ಹೋಗಲಾಡಿಸಿ ತಮ್ಮ ದಿವ್ಯ ಸ್ವರೂಪವನ್ನು ತೋರಿಸಿ, ನಡೆದ ವೃತ್ತಾಂತವನ್ನು ತಿಳಿಸಲು ರಾಮನು ತನ್ನನ್ನು ತಾನರಿಯದೆ ಈ ತೆರನಾಗಿ ಮರುಳಾದೆನೆಂದು

ಚಿಂತಿಸಿ ವೈರಾಗ್ಯ ಪರನಾಗಿ ವಿಭೀಷಣ ಸುಗ್ರೀವ ನಳ ನೀಲ ಜಾಂಬವ ಮೊದ
ಲಾದವರನ್ನೂ ಹಲವರು ಪ್ರಧಾನ ಪುರುಷರನ್ನೂ ಕರೆಯಿಸಲು ಅವರು ಲಕ್ಷ್ಮಣನ
ಶವವನ್ನು ಸರಯೂನದೀ ತೀರದಲ್ಲಿ ಯಥಾವಿಧಿಯಾಗಿ ಸಂಸ್ಕರಿಸಿ ಬಂದರು.
ರಾಮನು ಲವನ ಹಿರಿಯ ಮಗನಿಗೆ ರಾಜ್ಯ ಪಟ್ಟವನ್ನು ಕಟ್ಟಿ ಹಲವರು ಅರಸುಮಕ್ಕ
ಳೊಡನೆ ಸುವ್ರತರೆಂಬ ಚಾರಣರ ಪಕ್ಕದಲ್ಲಿ ತಪಸ್ಥನಾದನು. ವಿಭೀಷಣ ಸುಗ್ರೀವ
ಶತ್ರುಘ್ನ ನಳ ನೀಲ ವಿರಾಧಿತ ಮೊದಲಾದವರೂ ಅವರ ಅಂತಃಪುರ ಸ್ತ್ರೀಯರೂ
ದೀಕ್ಷೆಗೊಂಡರು.

ರಾಮ ಯತಿಯು ಪರಮಾಗಮ ಪ್ರಣೀತ ಮಾರ್ಗದಲ್ಲಿ ನಡೆದು ಉಗ್ರೋಗ್ರ
ತಪಶ್ಚರಣ ನಿರತನಾಗಿ ಕಾನನಕ್ಕೆ ಹೊರಟು ಲಕ್ಷ್ಮಣನೆತ್ತಿದ ಸಿದ್ಧಶಿಲೆಯನ್ನೇರಿ
ಪ್ರತಿಮಾ ಯೋಗದಿಂದ ಕರ್ಮಕ್ಷಯಂಗೈಯುವುದನ್ನು ಸೀತೇಂದ್ರನು ಅವಧಿ
ಜ್ಞಾನದಿಂದರಿತು ಆತನ ತಪಸ್ಸಿಗೆ ವಿಘ್ನ ಮಾಡುವುದಕ್ಕಾಗಿ ಆತನಿದ್ದೆಡೆಗೆ ಬಂದು
ತಾನು ಸೀತೆಯ ರೂಪನ್ನು ಧರಿಸಿ, ವಿದ್ಯಾಧರ ಕನ್ಯೆಯರು ಸುತ್ತಿ ಬರಲು,
ರಾಮ ಯತಿಯ ಸಮೀಪಕ್ಕೆ ಬಂದು, "ನೀವು ಇನ್ನೂ ವಯಸ್ಸು ಕಳೆದವರಲ್ಲ,
ನಿಮ್ಮ ಮನೋಹರಾಕಾರವನ್ನು ಕೆಡಿಸದೆ ನನ್ನಲ್ಲಿಯೂ ಈ ವಿದ್ಯಾಧರ ಕನ್ಯೆಯ
ರಲ್ಲಿಯೂ ಕೂಡಿ ಸುಖದಿಂದಿರಿ; ತರುವಾಯ ಎಲ್ಲರೂ ತಪಸ್ಸಿಗೆ ನಿಲ್ಲೋಣ"
ಎಂದು ತಪೋವಿಘ್ನ ಕಾರಣಗಳನ್ನು ತೋರಿಸಿ ನುಡಿದರೂ ರಾಮಭಟ್ಟಾರಕನು
ನಿಶ್ಚಲ ಚಿತ್ತದಿಂದ ಶುಕ್ಲಧ್ಯಾನ ಪ್ರವಿಷ್ಟನಾಗಿ ಮಾಘ ಶುದ್ಧ ದ್ವಾದಶಿಯ
ಬೆಳಗಿನ ಜಾವದಲ್ಲಿ ಕೇವಲಜ್ಞಾನವನ್ನು ಪಡೆದನು. ಆಗ ದೇವಸಂಕುಲಕ್ಕೆ
ಆಸನಕಂಪವಾಗಲು ಅವರು ಅವಧಿಜ್ಞಾನದಿಂದರಿತು ರಾಮ ಕೇವಲಿಯ ಪೂಜೆಗೆ
ಬಂದರು. ಅವರಲ್ಲೊಬ್ಬನಾದ ಸೀತೇಂದ್ರನು ದಶರಥಾದಿಗಳ ಗತಿಯನ್ನು ಕೇಳಲು
ರಾಮ ಕೇವಲಿಯು ಅದನ್ನು ವಿಶದವಾಗಿ ತಿಳಿಸಿದನು. ರಾಮಭಟ್ಟಾರಕನು
ಇಪ್ಪತ್ತೈದು ಸಂವತ್ಸರಗಳು ದೇವ ಮರ್ತ್ಯ ಖಚರ ಕ್ಷ್ವಾಪಾಲಕರಿಂದ ಪೂಜೆಯನ್ನು
ಹೊಂದಿ ತರುವಾಯ ಶಾಶ್ವತವಾದ ಮುಕ್ತಿಶ್ರೀಯನ್ನು ಪಡೆದನು.

ಶ್ರೀ

ರಾಮಚಂದ್ರ ಚರಿತ ಪುರಾಣಂ



ಪ್ರಥಮಾಶ್ವಾಸಂ

ಶಾ ॥ ಶ್ರೀಕೇಳೀ ನಿಲಯಂ ನಿಜಾಂಘ್ರಿಕಮಲಂ। ವಿದ್ಯಾನಟೀ ನಾಟ್ಯ ವೇ ।
ದೀಕಲ್ಪಂ ಮುಖ ಚ್ಚಂದ್ರಬಿಂಬವಮಿಲೇಂದ್ರೋತ್ತಂಸ ಮಾಣಿಕ್ಯ ದೀ ॥
ಪಾಕೀರ್ಣಂ ಹರಿಸೀಕ ಪಾರ್ಶ್ವವಿನಿಪಂ ಪೂಜಾರ್ಹನಾರ್ಹಂತ್ಯ ಲ ।
ಕ್ಷ್ಮೀಕಾಂತಂ ಮುನಿಸುವ್ರತಂ ನಮಗೆ ಮಾಟಿಷ್ಟಾರ್ಥ ಸಂಸಿದ್ಧಿಯಂ ॥ ೧ ॥

ಸ್ರ ಏನಸ್ಸಂತಾನಮೆಂಟುಂ ಕಿಡೆ ನಿಜಗುಣಮೆಂಟುಂ ಮೊಗಂದೋಜಿ[1]ವೆಯ್ಯಿಂ।
ದೇನಾನುಂ ಕುಂದೆ ಲೋಕಾಗ್ರದೊಳಿರೆ ಸಹಜಾನಂದ ಚೈತನ್ಯ ರೂಪಂ॥
[2] ಜ್ಞಾನಂ ಜ್ಞೇಯ ಪ್ರಮಾಣಂ ಪಸರಿಸೆ ಗಣನಾತೀತರಾಗಿರ್ದ ಮುಕ್ತಿ ।
ಶ್ರೀನಾಥರ್ ಸಿದ್ಧರಾತ್ಯಂತಿಕಸುಖ ಪದವೀಸಿದ್ಧಿಯಂ ಮಾಟಿಸ್ಪಿ ನಮ್ಮೊಳ್ ॥೨॥

ಮ ॥ ಮನಮಂ ಕಟ್ಟಿ ಗುಣಂಗಳಿಂ। ತುಟಿದು ಪಂಚಾಚಾರದಿಂ ಪಂಚಬಾ।
ಣನ ಬಾಹಾಬಲಮಂ। ಸಮುಗ್ರತರ ಶಿಷ್ಯಾನುಗ್ರಹ ಪ್ರೌಢಿವೆ ॥
ತ್ತನವದ್ಯರ್ ದಯೆಗೆಯ್ವರಕ್ಕೆ ದಯೆಯಿಂ ಭವ್ಯಾಳಿಗುದ್ಯತ್ತಪೋ।
ಧನ ವಿದ್ಯಾಧನದಿಂ ಮಹಾಮಹಿಮೆವೆತ್ತಾ ಚಾರ್ಯರಾಚಾರಮಂ ॥ ೩ ॥

ಶಾ ॥ ಪಾತ್ರೀಭೂತ ವಿನೇಯ ಸಂತತಿಗೆ ಸಮ್ಯಗ್ದರ್ಶನ ಜ್ಞಾನ ಚಾ ।
ರಿತ್ರಂಗಳ್ ನಿಜಮಪ್ಪನಂತ ಸುಖಮಂ। ರಾಗಾದಿಗಳ್ ಜನ್ಮವ್ಯ ॥
ತ್ಯ ತ್ರಾಸಂಗಳನೀವುವೆಂದು ಸದಸದ್ಭೇದಂಗಳಂ ಪೇಟ್ಪಿವರ್ ।
ಸೂತ್ರಪ್ರಾಯರಜೇಯರೀಗೆಮಗುಪಾಧ್ಯಾಯರ್ ಸುಖೋಪಾಯಮಂ ॥ ೪ ॥

ಮ ॥ ತಪಮಂ ಶೀಲಮನಪ್ಪುಕೆಯ್ದು। ಕರಣಗ್ರಾಮಂಗಳಂ ಗೆಲ್ದು ಚಿ ।
ತ್ತಪದೈಕಾತಿಥಿಮಾಡಿ ಶಾಂತರಸಮಂ। ಕಾರುಣ್ಯಮಂ ತಾಳ್ದಿ ತ ॥
ತ್ತ್ವಪರಿಜ್ಞಾನಮನಪ್ಪಮತ್ತಚರಿತ ಪ್ರಸ್ತಾನಮಂ ಸಾರ್ದ ಸಾ ।
ಧುಪದ್ಯಂಗಳ್ ನಮಗೀಗೆ ಸಾಧುಪದಮಪ್ಪು ಕೈವಲ್ಯ ಮಾಂಗಲ್ಯಮಂ ॥ ೫ ॥

---

1. ಮೆಯ್ಯಂ ದೇನಾನುಂಗುಂದೆ. ಫ.
2. ಜ್ಞಾನ ಜ್ಞೇಯ. ಕ. ಖ. ಗ. ಘ.

ರಮಬ್ರಹ್ಮಶರೀರಪುಷ್ಟಿ ಜನತಾಂತರ್ದೃಷ್ಟಿ ಕೈವಲ್ಯಬೋ ।
ಧ ರಮಾ ಮೌಕ್ತಿಕಹಾರಯಷ್ಟಿ, ಕವಿತಾವಲ್ಲೀ ಸುಧಾವೃಷ್ಟಿ, ಸ ॥
ರ್ವ ರಸೋತ್ಪಾದ ನವೀನಸೃಷ್ಟಿ, ಬುಧಹರ್ಷಾಕೃಷ್ಟಿ, ಸರ್ವಾಂಗ[1]ಸುಂ ।
ದರಿ ವಿದ್ಯಾನಟಿ ನಾಟಕಂನಲಿಗೆ ಮತ್ತಾವ್ಯಸ್ಥಲೀ ರಂಗದೊಳ್

ಕಂ ॥ ಅನಘರನುಬದ್ಧ ಕೇವಲ
ರೆನಿಸಿದ ಗೌತಮ ಸುಧರ್ಮ ಜಂಬೂಗಣಭೃ ॥
ದ್ವಿನುತರೆಮಗೀಗೆ ಶಾಶ್ವತ
ಧನಮೆನಿಸಿದ ವಿಶ್ರುತ ಶ್ರುತಾರಾಧನಮಂ ॥ ೬ ॥

ಶ್ರುತಕೇವಲಿ ವಿಷ್ಣುವ್ರತಿ
ಪತಿ ಚರಣಂ ನಂದಿ ಪರಮಮುನಿ ಪದವುಪರಾ ॥
ಜಿತ ಪಾದಂ ಗೋವರ್ದ್ಧನ
ಯತಿ ಕ್ರಮಂ ಭದ್ರಬಾಹು ಚರಣಂ ಶರಣಂ ॥ ೮ ॥

ದಶಪೂರ್ವಧರರುಮೇಕಾ
ದಶಾಂಗಧಾರಿಗಳುಮೆನಿಪ ಮುನ್ನಿಪದ ನಖ ದೀ ॥
ಪ್ತಿ ಶರಚ್ಚಂದ್ರಿಕೆ ದರ್ಶನ
ವಿಶುದ್ಧಿಯಂ ಮಾಡುಗಘತಮೋ ವಿಘಟನಮಂ ॥ ೯ ॥

ಭೂತಬಲಿ ಪುಷ್ಪದಂತ
ಖ್ಯಾತರ ಜಿನಸೇನ ವೀರಸೇನ ಮುನೀಂದ್ರ ॥
ಖ್ಯಾತರ ಸಮಂತಭದ್ರ
ಖ್ಯಾತರ ಪದಪಾಂಸು ಕೆಡಿಸುಗಘಪಾಂಸುಗಳಂ ॥ ೧೦ ॥

ಕವಿ ಪರಮೇಷ್ಠಿಗಳ ಗುಣ
ಸ್ತವನಂಗಳ್ ಪೂಜ್ಯಪಾದ ಯತಿಪತಿಯ ಗುಣ ॥
ಸ್ತವನಂಗಳೊರ್ಮೆ ನಾಲಗೆ
ಗೆ ವಂದ ಮಾನವನ ವಾಙ್ಮಲಂ ನಿಂದಘುದೇ ॥ ೧೧ ॥

ಚತುರಂಗುಲ ಚಾರಣ ಋ
ದ್ಧಿ ತಮಗೆ ಸಮನಿಸಿದುದೆನಿಪ ತಪದುನ್ನತಿಯಿಂ ॥
ಶ್ರುತದಿಂ ಭೂಮಂಡಲ ವಿ
ಶ್ರುತರೆನಿಸಿದರಲ್ತೆ ಕುಂಡಕುಂದಾಚಾರ್ಯರ್ ॥ ೧೨ ॥

1. ಸೌಂದರಿ. ೧೨ ನೆಯ ಪದ್ಯವು ಕ. ಖ. ಪ್ರತಿಗಳಲ್ಲಿಲ್ಲ.

ಕಂ ॥ ಅಕಳಂಕಚಂದ್ರ ವಾಕ್ಚಂ
ದ್ರಿಕೆಯಿಂ ಧವಳಿಸೆ ದಿಗಂಬರಶ್ರೀ ಭವ್ಯ ॥
ಪ್ರಕರ ಚಕೋರಂ ನಲಿದುದು
ಮುಕುಳಿತವಾಯ್ತನ್ಯವಾದಿ ವದನಾಂಭೋಜಂ ॥

ಉ ॥ ಚಾರು ಚರಿತ್ರ ತೀರ್ಥಜಲದಿಂದಘಕರ್ದಮಮಂ ಕಟಲ್ಚಿ|ಸಂ।
ಸಾರ ಸಮುದ್ರಮಂ ತೃಣಪಯ್ಯಕ್ಷಣದಿಂದಿಟಿಕೆಯ್ದು|ದಿವ್ಯಭಾ ॥
ಷಾರಸ ಪೂರ್ಣಮಂ ಶ್ರುತಪಯೋಧಿಯನೀಸಿದ ವರ್ಧಮಾನ ಭ।
ಟ್ಟಾರಕರಂ ವಚಸ್ಸುರಭಿ ಚಂದನ ಚರ್ಚೆಗಳಿಂದಮರ್ಚಿಪೆಂ

ಕಂ ॥ ವಿಮಲ[1] ಶ್ರೌತಂ ಕೈವ
ಲ್ಯಮೆಂಬ ಸಂಕಲ್ಪಮಿನಿತೆ|ನ್ನೇರ್ಗಿಜಿಯಂ ವಿ ॥
ಶ್ವಮನಜಿವ ಮಹಿಮೆಯಿಂ ವ
ರ್ಧಮಾನ ಜಿನಪತಿಗೆ ವರ್ಧಮಾನ ಮುನೀಂದ್ರಂ ॥ ೧೫ ॥

ಮ ॥ ಪುರಿದಂತಾದುವು ಪೂವಿನಿಂಬು [2]ನಿನಿವಿಲ್ ನಿಸ್ಸಾರಮಾದತ್ತು|ಸೀ।
ಕರಿವೋದತ್ತು ಮೃಣಾಳತಂತು ರಚಿತ ಜ್ಯಾಲೇಖೆ|ವಿಾನಧ್ವಜಂ ॥
ಕೊರಗಿತ್ತಗ್ಗದ ಕಂತು [3]ಸೀದ ಕರಿಯಂತಾದಂ|ತಪೋರಾಜ್ಯ ತ।
ತ್ಪರ ಯೋಗೀಶ್ವರ ಬಾಲಚಂದ್ರ ಮುನಿನಾಥ ಜ್ಞಾನನೇತ್ರಾಗ್ನಿಯಿಂ ॥ ೧೬ ॥

ಮ॥ಸ್ರ। ಅರವಿಂದ ಸ್ಮೇರವಸ್ತ್ರಸ್ಯಂ ತಿಳಿಪೆ ಹೃದಯ ಸಂಶುದ್ಧಿಯಂ|ಮಾನಸಂ ಶಾಂ।
ತ ರಸಾಧೀನಂ ಸಮಾಧಾನಮನಜಿಪೆ|ತಪಸ್ತಪ್ತಮುತ್ತಪ್ತ ಕಾರ್ತ್ತ ॥
ಸ್ವರ [4]ಶಾಖಾ ಲೀಲೆಯಂ ಪಾಲಿಸೆ ತನು|ನಯನಂ ಕಾಪ್ಪಿರಂಮಾಡೆ ಕಾರು।
ಣ್ಯ ರಸ ಸ್ರೋತಂಗಳಿಂ|ಲೋಕಮನೆಜಿಗಿಸಿದಂ ಬಾಲಚಂದ್ರ ವ್ರತೀಂದ್ರಂ॥೧೭॥

ಕಂ ॥ ಪ್ರಚುರ ಕಲಾನ್ವಿತರೆಕ್ಕುಟಿಲ
ರಚಂಚಲರ್ ಶುದ್ಧಪಕ್ಷ ವೃತ್ತರ್|ದೋಷಾ ॥
ಪಚಯ ಪ್ರಕಾಶಕನೆ ಬಾ
ಲಚಂದ್ರದೇವ ಪ್ರಭಾವಮೇನಚ್ಚರಿಯೋ ॥ ೧೮ ॥

---

1. ಶ್ರುತಂ ಬಹು. ಗ. ಘ.
2. ನನಿವಿಲ್ ಎಂದು ಮಲ್ಲಿನಾಥ ಪುರಾಣದ ಮೊದಲನೆಯಾಶ್ವಾಸದ ೧೯ನೆಯ ಪದ್ಯದಲ್ಲಿದೆ.
3. ಸೀದ ಗಜಿ. ಗ. ಘ. ೧೬ ನೆಯ ಪದ್ಯವು ಕ. ಘ. ಚ. ಗಳಲ್ಲಿಲ್ಲ.
4. ಶೋಭಾ. ಗ. ಘ

ಕಂ ॥ ಮೂವತ್ತಾಱುಂ ಗುಣದಿಂ
ಭಾವಜನಂಕಟ್ಟಿ [1]ಪಟ್ಟವೆಟ್ಟಿದರ್ ವೃಷಭದ್ರಿ
ಭಾವಿಸೊಡೆ ಮೇಘಚಂದ
ತ್ರೈವಿದ್ಯರದೆಂತೊ ಶಾಂತರಸಮಂ ತಳೆದರ್

ಮ ॥ ಮುನಿನಾಥಂ ದಶಧರ್ಮ್ಮಧಾರಿ।ದೃಢಷಟ್ಕಾಂಶದ್ಯುಣಂ। ದಿವ್ಯ ಬಾ
ಣ ನಿಧಾನಂ।ನಿನಗಿಕ್ಷ್ವಾಪಣ್ಮುಳಿನೀ ಜ್ಯಾಸೂತ್ರಮೋರೊಂದೆ। ಪೂ
ವಿನ ಬಾಣಂಗ್ಗಳವಯ್ದೆ।ಹೀನನಧಿಕಂಗಾಕ್ಷೇಪಮಂ ಮಾಟ್ಟುದಾ
ವ ನಯಂ। ದರ್ಪ್ಪಕ, ಮೇಘಚಂದ್ರ ಮುನಿಯೊಳ್ ಮಾಣ್ ನಿನ್ನ ದೋರ್ದ
ರ್ಪಮಂ॥

ಕಂ ॥ ಅಭಿನವ ಗಣಧರರೆನೆ ದಿ
ವ್ಯ ಭಾಷೆಯಂ ತಾಳ್ದಿ ಕುಮತಮಂ ತೂಳ್ದಿದರಂ ॥
[3]ಶುಭಕೀರ್ತಿ ದೇವರಂ ಸಕ
ಲ ಭುವನಜನ ಪೂಜ್ಯಪಾದರೆನ್ನದರೊಳರೇ ॥ ೨೧ ॥

ಚ ॥ ಮದನನ ದರ್ಪಮಂ ಕೆಡಿಸಿ ಮಾಣ್ದರ್ಕೆ।ತಮ್ಮ ತಪಃಪ್ರಭಾವದಿಂ।
ಮದಯುತರಪ್ಪ ವಾದಿಗಳ ದರ್ಪಮನೋವದ್ಗಡಿಸ್ದಿ ತತ್ಸಭಾ ॥
ಸದರಭಿವರ್ಣ್ಣಿಪಂತು ತಪದಿಂ ಶ್ರುತದಿಂ ಭುವನಪ್ರಸಿದ್ಧಿಗಾ।
ಸ್ಪದರೆನಿಸಿರ್ದರೆಂಬೆನಱಿಯೆಂ ಪೊಗಳಲ್ ಶುಭಕೀರ್ತಿದೇವರಂ ॥ ೨೨ ॥

ಉ ॥ ಕೋಡಿಡೆ ವಾಸುಪೂಜ್ಯಮುನಿಯೊಳ್ ಮರುಳಾದಪೆ ಚಿತ್ತಜನ್ಮ।ನೀಂ।
ನೋಡ ನಿಜಾಪ್ತ ವರ್ಗದಳವಂ।ಮಳಯಾನಿಲನಸ್ಥಿರಂ ರಣ ॥
ಕ್ರೀಡೆಗೆ ನಿಲ್ವನೇ। ಪರಭೃತಂ ನಿನಗಪ್ಪನೆ। ಯುದ್ಧದೊಳ್ ಬಿಗು।
ರ್ಕೊಡದೆ ಮಾಣ್ಬನೇ ಮೃಗಧರಂ।ಮಧುಪಂ ಪ್ರಥನಕ್ಕೆ ಯೋಗ್ಯನೇ॥ ೨೩॥

ಶಾ ॥ ಆವೊಂ ವಾದಿ ಕಥಾತ್ರಯ ಪ್ರವಣದೊಳ್ ವಿದ್ವಜ್ಜನಂ ಮೆಚ್ಚೆ ವಿ।
ದ್ಯಾವಷ್ಟಂಭಮನಪ್ಪುಕೆಯ್ದು।ಪರವಾದಿ ಕ್ಷ್ಮೋಣಿಭೃತ್ಪಕ್ಷಮಂ ॥
ದೇವೇಂದ್ರಂ ಕಡಿದಂದದಿಂದೆ ಕಡಿದಂ ಸ್ಯಾದ್ವಾದ ವಿದ್ಯಾಸ್ತ್ರದಿಂ।
ತ್ರೈವಿದ್ಯಶ್ರುತಕೀರ್ತಿ ದಿವ್ಯಮುನಿವೋಲ್ ವಿಖ್ಯಾತಿಯಂ ತಾಳ್ದಿದಂ ॥ ೨೪ ॥

---

1. ಪೆಟ್ಟವೆಳದರ್. ಕ. ಖ.; ಪೆಟ್ಟವೇಳದ. ಗ. ಘ. ಚ. ೧೯ನೆಯ ಪದ್ಯವು ಮುಳ್ಳಿನಾಥ ಪುರಾಣದಲ್ಲಿ ಮೊದಲನೆಯಾಶ್ವಾಸದ ೨೧ನೆಯ ಪದ್ಯವಾಗಿದೆ; ಮತ್ತು ಶ್ರವಣಬೆಳ್ಗೊಳದ ಶಾಸನದ ೪೨ನೆಯ ಪದ್ಯದಲ್ಲಿದೆ.

2. ಳುನೆಯ್ದೆ ೨. ಗ. ಘ. ೨೦ನೆಯ ಪದ್ಯವು ಶ್ರ॥ ಬಿ॥ ಶಾ॥ ೩೪ನೆಯ ಪದ್ಯದಲ್ಲಿದೆ.

3. ಶುಭಚಂದ್ರ. ಕ. ಖ.

೨೪ನೆಯ ಪದ್ಯವು ಶ್ರ॥ ಬಿ॥ ಶಾ॥ ೧೪ನೆಯ ಪದ್ಯದಲ್ಲಿದೆ.

ಕಂ ॥ ಶ್ರುತಕೀರ್ತಿ ತ್ರೈವಿದ್ಯ
ವ್ರತಿ ರಾಘವಪಾಂಡವೀಯಮುಂ ವಿಬುಧ ಚಮ ॥
ತ್ಕೃತಿಯೆನಿಸಿ ಗತಪ್ರತ್ಯಾ
ಗತದಿಂ ಪೇೞ್ದ[1]ಮಲಕೀರ್ತಿಯಂ ಪ್ರಕಟಿಸಿದಂ ॥ ೨೫ ॥

ಗಣಧರರಂ ಶ್ರುತದೊಳ್ ಚಾ
ರಣ ಋಷಿಯರನಮಲ ಚರಿತದೊಳ್ ಯೋಗಿಜನಾ ॥
ಗ್ರಣಿಗೆಣೆಯೆನ್ನದೆ ಮಿಕ್ಕರ
ನೆಣೆಯೆಂಬುದೆ ವೀರಣಂದಿ ಸೈದ್ಧಾಂತಿಕರೊಳ್ ॥ ೨೬ ॥

ಹರಿ ಹರ ಹಿರಣ್ಯಗರ್ಭರ
ನುರವಣೆಯಿಂ ಗೆಲ್ದ ಕಾಮನಂ ದೀಪ್ತ ತಪೋ ॥
ಭರದಿಂದುರಿಪಿದರೆನೆ ಬಿ
ತ್ತರಿಸದರಾರ್ ವೀರಣಂದಿ ಸೈದ್ಧಾಂತಿಕರಂ ॥ ೨೭ ।

ಮ॥ಸ್ರ॥ ಉಪದೇಶಂಗೆಯ್ದು ಕಾವ್ಯಚ್ಛಲದಿನಖಿಲ ಧರ್ಮ್ಮಂಗಳಂ ಲೋಕಮಂ ಧ ।
ರ್ಮಪಥ ಪ್ರಸ್ಥಾನದೊಳ್ ಯೋಜಿಸಿ,ಪರಮ ಪುರಾಣಂಗಳಂ ಪೇೞ್ದು ಕಲ್ಪಾಂ॥
ತ[2]ಪರೀತಖ್ಯಾತಿಯಂ, ತಾಳ್ದಿದ ಪರಮ ಕವಿಜ್ಯೇಷ್ಠರಾದರ್ ತದೀಯಾಂ ।
ಘ್ರಿಪ್ರಯೋಜಂಗಳ್ ಮದೀಯಾಶಯ ಮಣಿಭವನಕ್ಕಕ್ಕೆ ಪುಷ್ಪೋಪಹಾರಂ
॥ ೨೮ ॥

ಚ ॥ ಮೃದುಪದ[3]ಬಂಧಮುಂ, ಬಗೆಯ ಭಾವದ ಮೆಯ್ಸಿರಿಯಂ, ರಸಪ್ರವಾ ।
ಹದ ನೆಲೆವೆರ್ಚಿ ಕೈರಬಿೞ್ದು ಭಾವಿಸಿ ಭಾವಿಸಿ, ಮೆಚ್ಚಿ ಮೆಚ್ಚಿ, ಪೊ ॥
ಣ್ಮಿದ ಪುಲಕಂಗಳಿಂ, ನಯನದೊಳ್ ಕರೆಗಣ್ಮಿದ ಹರ್ಷಬಾಷ್ಪವ ।
ರ್ಷದಿನನುರಾಗಮುಂ ಪಡೆವ ಸಜ್ಜನ ಸಂಸ್ಪವಮೊಂದೆ ಸಾಲದೇ ॥ ೨೯ ॥

ಕಂ ॥ ವಾರಾಶಿಯ ಮೃಣ್ಮಿಗ್ಗಣಮುಂ
ಕ್ರೂರ ಕುಳೀರಕ್ಕೆ ಸುಗಿದು ಸಾಂಯಾತ್ರಿಕನೇಂ ॥
ತಾರನೆ ಕೃತಿವೇೞಲ್ ಬಗೆ
ದಾರನೆ ಸತ್ಕವಿ ನಿಸರ್ಗ ದುರ್ಜನ ಭಯದಿಂ ೩೦

---

1. ಮುರಕೀರ್ತಿ. ಚ. ೨೫ನೆಯ ಪದ್ಯವು ಶ್ರ॥ಬೆ॥ ಶಾ॥ ೧೪ ನೆಯ ಪುಟದಲ್ಲಿದೆ.
2. ಪವಿತ್ರ. ಕ. ಖ. ಗ. ಘ. ೨೬, ೨೭ ನೆಯ ಪದ್ಯಗಳು ಶ್ರ॥ಬೆ॥ ಶಾ॥ ೧೪ ನೆಯ
3. ಪಾಕಮುಂ. ಕ. ಖ. ಚ. [ಪುಟದಲ್ಲಿವೆ.

ಚ ॥ ವಿಕಸಿತ[1]ಚಂಪಕ ಕೈಱಿಗಿ ಬಂಡುಣಲೊಲ್ಲದ ಚಂಚರೀಕ ನಾ
ನಿಕಮನಶೇಷಮಂ ಬೆಳಗೆ ತಿಗ್ಮಕರಂ ದೆಸೆಗಾಣದಿರ್ಪ ಕ್ರಿಂ ॥
ತಿಕ ನಯನಂಗಳಂ ಸುಕವಿ ಕಾವ್ಯಮನಾಲಿಸಿ ಕಾಯ್ವ ದುರ್ಜನ
ಪ್ರಕರದ ಕರ್ಣ ಕೋಟರಮಶೇಕೆಯೊ ಮಾಡಿದನಬ್ಜವಿಷ್ಟರಂ

ಪಡೆದಂ ರಜೋಧಿಕಂ ವಿಧಿ
ಪಡೆವಣಿಯಂ ಫಣಿಯನಮೃತ ರಸಮಂ ವಿಷಮಂ ॥
ಕಡಲಂ ಸುಟಿಯಂ ಮಟಿಯಂ
ಪಿಡಿಲಂ ಪಡೆದಂತೆ ಸುಜನರಂ ದುರ್ಜನರಂ

ಮ ॥ ರಸಮಂ ಭಾವಮನರ್ಥಮಂ ರಚನೆಯಂ ಕಾವ್ಯಜ್ಞರಾರಯ್ದು ಭಾ ।
ಸಿ ನಾಂದೀಪದ ನಾಯಕಾಭ್ಯುದಯ ಪರ್ಯಂತಂಬರಂ ಕೂಡೆ ಶೋ ॥
ಸಿ ನೋಟ್ಟಿಗೀ ರಘುವಂಶರಾಮ ಕೃತಿಯೊಳ್ ಪತ್ತೆಂಟು ಪದ್ಯಂಗಳಂ ।
ಪೊಸವೆಂ[2]ಯತ್ನದಿನಾದ್ಯರಧ್ಯತನರ್[3]ಕೇಕಾರಾದೊಡಂ ಪೇಟಿರೇ ॥ ೩೩ ॥

ಶಾ ॥ ರಾಗ ದ್ವೇಷ ನಿಬಂಧಮಪ್ಪ ಕೃತಿಯಂ ನಿರ್ಬಂಧದಿಂ ಬಂಧಮಿಂ ।
ಬಾಗರ್ಥಂ ಪೊಸತಾಗೆ ಪೇೞ್ದಖಿಲಮಂ ರಾಗಾವಿಲಂಮಾೞ್ಪಿ ವಿ ॥
ದ್ಯಾಗರ್ವಗ್ರಹ ಪೀಡಿತರ್ ಸ್ವಪರ ಬಾಧಾಹೇತ್ತುವಂ ದುಸ್ತರೋ ।
ದ್ಯೋಗ ಕ್ಲೇಶಿತರಾಗಿ ಬಿತ್ತಿ ಬೆಳೆವಂತಕ್ಕುಂ ವಿಷೋದ್ಯಾನಮಂ ॥ ೩೪ ॥

ಚ ॥ ಪೊಗೞ್ದಿ ಮಹಾತ್ಮರುಜ್ಜ್ವಲಮೆನಿಪ್ಪ ಗುಣಂಗಳನುಜ್ಜ್ವಲ ಪ್ರಸಿ ।
ದ್ಧಿಗೆ ಪೊಲನಾಗದುಜ್ಜ್ವಲಿಸಿದಪ್ರತಿಮ ಪ್ರತಿಭಾ ಪ್ರಭಾವದಿಂ ॥
ಪೊಗೞ್ದಿ ದುರಾತ್ಮರಂ ವೊಗದೊಳಿರ್ದುಗುಳಂ ಪೊಱಿಗಿಕ್ಕಲಾದ ನಾ ।
ಲಿಗೆಯನಶೆತ್ತು ನಾಲಗೆಯೊಳೋದಿದವಂ ಕೃತಿಯೇ ಕೃತಾರ್ಥನೇ ॥ ೩೫ ॥

ಭೀದಸ ಭಾನ್ತು ಭಾನ್ತು ತಮಮುಂ ತಜ್ಞಾಸಂದು ಪದಾರ್ಥಮುಂ ಪಂ ।
ಜೈೀದಿಸಿ ಕಾಣ್ಬವೋಲ್ ಜನವಿಲೋಚನಮಪ್ರತಿಮ ಪ್ರಭಾವರ ॥
ಪ್ಪಾದಿ ಕವೀಶ್ವರರ್ ನಡೆವ ಪದ್ಧತಿಯಿಂ ತನಗರ್ಥಶುದ್ಧಿವೆ ।
ತ್ತಾದೊರೆಯಂಗಮೇಂ ನಡೆವುದಚ್ಚರಿಯೇ ಕವಿರಾಜ ವೀಥಿಯೊಳ್ ॥ ೩೬

---

1. ಕ್ಕೆಳಸಿಬಂದುಣ. ಕ. ಘ. ಗ. ಘ.
2. ಪೊಸವಂ. ಚ.
3. ರಾರೇನೆಂದೊಡಂ. ಗ. ಘ: ರಾರೇಕಾದೊಡಂ. ಚ. ೩೩ನೆಯ ಪದ್ಯವು ಕ. ಖ. [ಗಳಲ್ಲಿಲ್ಲ.

ಉ ॥ ನಾಯಕನನ್ಯನಾಗೆ ಕೃತಿ ವಿಶ್ರುತಮಾಗದುದಾತ್ತ ರಾಘವಂ ।
ನಾಯಕನಾಗೆ ವಿಶ್ರುತಮೆನಿಪ್ಪುದು ವಿಸ್ಮಯಕಾರಿಯಲ್ತು ಕಾ ॥
ಲಾಯಸದಿಂ ವಿನಿರ್ಮಿಸಿದ ಕಂಠಿಕೆ ಕಾಂಚನ ಮಾಲೆಯಂತುಪಾ ।
ದೇಯಮೆನಿಕ್ಕುಮೇ ವಿಷಯವೊಪ್ಪದೊಡಾವುದುವೊಪ್ಪಲಾರ್ಕುಮೇ ॥೩೭॥

ಮ ॥ ಏಗತಾಷ್ಟಾದಶ ದೋಷರಪ್ಪ ಜಿನರುಂ ಜ್ಞಾನರ್ಧಿ ಸಂಪನ್ನರ ।
ಪ್ಪ ಗಣಾಧೀಶ್ವರರುಂ ಕ್ರಮಂಬಿಡದೆ ಮುನ್ನಂ ಪೇೞ್ದುದಂ ಶ್ರಾವ್ಯ ಕಾ ॥
ವ್ಯಗುಣ ಖ್ಯಾತಿ ನಿಮಿತ್ತಮಲ್ಲದೆ ಶುಭ[1]ಧ್ಯಾನಾರ್ಥಿಯೆಂ ಪೇೞಲಾಂ ।
ಬಗೆದಂದೆಂ ರಘುವಂಶ ರಾಮಕಥೆ ಪೇೞ್ವಂತನ್ನ ಸಾಮಾನ್ಯಮೇ ॥೩೮॥

ರವಿ ಮಾಜುಟ್ಟಲಿದಿರ್ದ್ದಂ ವಿಯ್ಯತ್ತಳಮನಾಶಾ[2]ಸೀಮೆಯುಂ ದಾಂಟುವ ।
ನ್ನೆವರಂ ತನ್ನ ಕರಂಗಳಿಂದೆನೆ ಪೆಱಂಗೇಂ ವ್ಯೊಗ್ಗಿ ಮುನ್ನಂ ಗಣ ॥
ಪ್ರವರರ್ ಗೌತಮರಾದಿಯಾಗೆ ಮುನಿಮುಖ್ಯರ್ ಪೇೞ್ದರೆಂದಂದು ಮಾ ।
ನವರೆಮ್ಮಿಂದಿಗರಾರ್ಪರೇ ರಚಿಯಿಸಲ್ ರಾಮಾನ. ಯ ಖ್ಯಾತಿಯಂ ॥೩೯॥

ಕಂ ॥ ವಿಪುಲಾಚ್ಛಲದೊಳ್ ವೀರ ಜಿ
ನ ಪಾರ್ಶ್ವದೊಳ್ ಗೌತಮಂ ಗಣಾಗ್ರಣಿ ಮಗಧಾ ॥
ಧಿಪನಜಿಯೆ ನೆಜಿಯೆ ಪೇೞ್ದುದ
ನಪೂರ್ವಮೆನೆ ರಾಮಕಥೆಯನಭಿವರ್ಣಿಸುವೆಂ ॥ ೪೦ ॥

ಜಗಮಂ ಯುಗಮಂ ಮನ್ವಾ
ದಿಗಳಂ ಕಾಲ ಸ್ವರೂಪಮಂ ಜಿನರಂ ಚ ॥
ಕ್ರಿಗಳಂ ಹಲಧರ ಕೃಷ್ಣಾ
ದಿಗಳಂ ಶ್ರೀರಾಮ ಚರಿತದೊಳ್ ವರ್ಣಿಸುವೆಂ ॥ ೪೧ ॥

ಅದೆಂತೆನೆ—

ಮ॥ ಸ್ರ॥ ಕಡೆದೋಜುತ್ತಿಲ್ಲೆನಿಪ್ಪಾಗಸದ ನಡುವೆ ವಾಯುತ್ರಯಂ ಸುತ್ತೆ ಪೇಜ್ಗಾರ್
ಪಡೆವನ್ನರ್ ತನ್ನನೆಂಬಗ್ಗಳಿಕೆವಡೆದಧಸ್ತಿರ್ಯಗೂರ್ಧ್ವ ತ್ರಿಭೇದಂ ॥
ಬಡೆದಾಜುಂ ದ್ರವ್ಯದಿಂ ಮೆಯ್ವಡೆದಖಿಲ ಜಗಂ ರಜ್ಜುವೀರೇೞಿಜುದ್ದಂ ।
ಬಡೆದತ್ಯಾಪ್ತಂ ಜಿನಂ ಕೇವಲ ವಿಪುಲ ತುಲಾಕೋಟಿಯಿಂ ತೂಗೆ ತನ್ನಂ ॥೪೨॥

---

1. ಧ್ಯಾನಾರ್ಥಿಯಿಂ. ಕ. ಖ. ಗ. ಘ.
2. ರಿಮ್ಮಿಂದಿಗ. ಕ. ಖ. ಘ. ಚ.; ರೀಂ ಮುಂದಿಗ.

ಕಂ॥ ಅನತಿಶಯಮಾದುದಾ ತ್ರಿಭು
ವನ ಲಕ್ಷ್ಮಿಗೆ ಮಧ್ಯಮೆನಿಸೆ ಮಧ್ಯಮ ಲೋಕಂ॥
ಜನಹೃದಯ ಹಾರಿ ಗಂಭೀ
ರ ನಾಭಿಮಂಡಲಮಿದೆನಿಸಿ ಜಂಬೂದ್ವೀಪಂ ॥ ೪೩ ॥

ಆ ಜಂಬೂದ್ವೀಪದ ನಟ್ಟನಡುವೆ—

ಕಂ॥ ಮುಟ್ಟಿದುದು ಮೊದಲ ದಿವಮಂ,
ಮೆಟ್ಟಿದುದೆರಡನೆಯ ವಜ್ರೆಯಂ, ಮೇಖಲೆಯಿಂ॥
ದಿಟ್ಟಿಗೆ ಪೊಲ್ಲನಾದುದು ಪೊಂ
ಬೆಟ್ಟಂ, ಜಿನ ಜನ್ಮಸವನ ಮಣಿಮಯ[1]ಪಟ್ಟಂ ॥ ೪೪ ॥

ಆ ಕ್ಷ್ಮಾಣೀಧರ ವಲ್ಲಭ
ದಕ್ಷಿಣ ದಿಙ್ಮುಖದೊಳೆಸೆದು ಶಶಿಖಂಡದವೋ॥
ಲೀಕ್ಷಣ ಸುಖಮಯಮಿರ್ಪುದು
ದಕ್ಷಿಣ ಭರತ ತ್ರಿಖಂಡಧಾರ್ಯಾಖಂಡಂ ॥ ೪೫ ॥

ಅಲ್ಲಿ ವರ್ತಿಸುವುತ್ಸರ್ಪಣಾವಸರ್ಪಣ ಯುಗಸ್ವರೂಪ ನಿರೂಪಣ ವಿವಕ್ಷೆಯಿಂ ವ್ಯವಹಾರ ನಯದೊಳುಭಯಾತ್ಮಕಮೆನಿಪ್ಪ ಕಾಲಸ್ವರೂಪಮೆಂತೆನೆ—

ಕಂ॥ ಜೀವಾಜೀವ ದ್ರವ್ಯ ಪ
ರಾವರ್ತನ ಹೇತುವರ್ತನಾ ಲಕ್ಷಣ ಸ॥
ದ್ಭಾವಂ ನಿತ್ಯಮಮೂರ್ತಂ
ಕೇವಲ ಗಮ್ಯಂ, ಸದಾನುಮೇಯಂ, ಕಾಲಂ ॥ ೪೬ ॥

ಧಾರಾ ಹತಿಯಿಂ ಖಂಡಿಸ
ದಾರಂ ಜಿನನಾಥನುಟ್ಟಿಯಲುಟ್ಟಿದರನೇಕಾ
ಕಾರಂ ಲೋಕಾಕಾರದೊ
ಳೋರಗಲವೆನಿಪ್ಪ ಕಾಲಚಕ್ರಮೆಮೋಘಂ ॥ ೪೭ ॥

ವ್ಯವಹಾರ ಕಾಲ ಭೇದಮ
ನವರಿವರೆತ್ತಜೀವರಾಪ್ತರಲ್ಲರ್ ಜಿನಪುಂ॥
ಗವರಲ್ಲಧಣುವನಣು ದಾಂ
ಟುವ ಪೊಲ್ತಿಂ ಸಮಯಮೆಂದು ಪೇಳ್ವವನಾವಂ ॥ ೪೮ ॥

---

1. ಸ್ತ್ರೀಯಂ

ಕಂ ॥ ಸಮಯ ಸಮೂಹಮಸಂಖ್ಯಾ
ತಮಾದೊಡಾವಳಿಯೆನಿಕ್ಕುಮಾವಳಿ ಸಂಖ್ಯಾ ॥
ತಮೆನಿಪ್ಪುದಾದೊಡುಚ್ಛ್ವಾ
ಸಮೆನಿಕ್ಕುಂ ಸ್ತೋಕಮಕ್ಕುಮೀಟುಚ್ಛ್ವಾಸಂ

ಸ್ತೋಕಂ ನೆಜ[೩]ದೀಟಾಗೆ [1]ಲ
ವಾಕಾಲಂ ಮೂವತೆಂಟುವರೆಯೆನಿಪ [2]ಲವಾ ॥
ನೀಕಂ ನಾಳಿಕೆ ತನ್ನಾ
ಳೀಕಾಲ ಯುಗಂ ಮುಹೂರ್ತಮೆನೆ ವರ್ತಿಸುಗುಂ ॥ ೫೦ ॥

ಸಮಯಂ ಕುಂದೆ ಮುಹೂರ್ತದೊ
ಳಮೋಘಮಂತರ್ಮುಹೂರ್ತಮಕ್ಕುಂ ಮೂವ ॥
ತ್ತು ಮುಹೂರ್ತಮಾಗೆ ದಿವಸಂ
ಕ್ರಮದಿಂ ಪದಿನೈದು ದಿವಸಮಾದೊಡೆ ಪಕ್ಷಂ ॥ ೫೧ ॥

ಮಾಸಂ ಪಕ್ಷದ್ವಿತಯಂ
ಮಾಸದ್ವಯಮೊಂದೆ ಋತು ಋತುತ್ರಯವಯನ ॥
ನ್ಯಾಸಯನ ದ್ವಯಂ ಜಿನ
ಶಾಸನದೊಳ್ ವರ್ಷಮಯ್ದು ವರ್ಷದೊಳೆ ಯುಗಂ ॥ ೫೨ ॥

ಎರಡು ಯುಗಂ ದಶವರ್ಷಂ
ತರತರದಿಂದಿಂತು ದಶಗುಣಂ ಪೆರ್ಚುತ್ತುಂ ॥
ಬರೆ ಪೆರ್ಚುವ ಕಾಲಕಲಾ
ಪರಿಸಂಖ್ಯೆಯನಾವನಱಿವನಾತನೆ ದೇವಂ ॥ ೫೩ ॥

[3]ತವುತಾರವು ನಿನ್ನೆಗಳುಂ
ಸವೆಯವು ನಾಳೆಗಳುಳ್ಳುದಱಿ[4]ನ್ನೆಳೆ ನೆಜ[೩]ಯದು ಲೆ ॥
ಕ್ಕವಿಡಲ್ ಶಬ್ದಂ ನೆಜ[೩]ಯವು
ಪವಣಿಸಳೆನೆ ಕಂಡರಾರೊ ಕಾಲದ [5]ಪವಣಂ ॥ ೫೪ ॥

1. ಲತಾಕಾಲಂ. ಚ. 2. ಲತಾನೀಕಂ. ಚ.
3. ತವೆ ಸಾರವು. ಕ. ಖ. ಗ. ಘ.; ತನೆತಾರವು. ಚ.
4. ನೆಲೆ. ಕ. ಖ. ಗ. ಘ.
5. ಕಡೆಯಂ. ಗ. ಘ.

ಕಂ ॥ ಅವಸರ್ಪಣದೊಳ್ ಕಾಲ
ವ್ಯವಸ್ಥೆ ಷಡ್ವಿಧಮೆನಿಕ್ಕುಮುತ್ಸರ್ಪಣದಂ ॥
ತೆವೊಳ್ಗಲ್ಲಿ ಮೊದಲ ಕಾಲಂ
ಪ್ರವರ್ತಿಕುಂ ಸುಷಮಸುಷಮಮೆಂಬೀ ಪೆಸರಿಂ ॥ ೫೫ ॥

ಎರಡನೆಯ ಸುಷಮ ಕಾಲದ
ಪೊರೆಯೊಳ್ ಮೂಜಿನೆಯ ಸುಷಮದುಷ್ಪಮ ಕಾಲಂ ॥
ಚರಿಯಿಸುಗುಂ ನಾಲ್ಕನೆಯದು
ಪರಿವಿಡಿಯಿಂದಪ್ಪುದಲ್ತಿ ದುಷ್ಪಮಸುಷಮಂ

ಅನುಸಂಧಾನಂಗಿಡದೈ
ದನೆಯದು ದುಷ್ಪಮಮೆನಿಪ್ಪ ಕಾಲಂ ಬಲಿಕಾ ॥
ಜಿನೆಯದತಿದುಷ್ಪಮಂ ವ
ರ್ತನಮಿಂತೀ ತೆಱನೆ ರಹಟಘಟಿಕಾ ನ್ಯಾಯಂ ॥ ೫೭ ॥

ತನು, ಭೋಗಾಯುಷ್ಯಂಗಳ್,
ಮನುಷ್ಯರೊಳ್ ಪೆರ್ಚುವಡೆಗುಮುತ್ಸರ್ಪಣದೊಳ್ ॥
ತನು, ಭೋಗಾಯುಷ್ಯಂಗಳ್,
ಮನುಷ್ಯರೊಳ್ ಕುಂದುವಡೆಗುಮವಸರ್ಪಣದೊಳ್ ॥ ೫೮ ॥

ಎರಡು ಯುಗಮೊಂದೆ ಕಲ್ಪಂ,
ನಿರಂತರಂ [1]ಶುಕ್ಲ ಕೃಷ್ಣ ಪಕ್ಷಂಗಳವೋಲ್ ॥
ಪರಿವರ್ತಿಸುಗುಂ ತತ್ಕ
ಲ್ಪ[2]ರಾಜಿಗಾರಯ್ವೊಡಿಲ್ಲ ಮೊದಲುಂ ತುದಿಯುಂ ॥ ೫೯ ॥

[3]ಇಂತನಂತಾನಂತ ಕಲ್ಪ ಪರಿವರ್ತನಮಪ್ಪುಕೆಯ್ದ ಆರ್ಯಾಖಂಡದವಸರ್ಪಣದ ದಲ ಕಾಲದೊಳ್ತ

ಸ್ರ॥ ಸುರಭೂಜಂ ಜ್ಯೋತಿರಂಗಂ ಬೆಳಗೆ ತಮದ ಮಾತಿಲ್ಲ ಚಂದ್ರಾರ್ಕರುಂ
ವೈಗರೆದಿರ್ಪರ್ ತೋಜಿವಾಜ್ಞುಂ ಋತುಪಗಲಿರ್ಳಿಂಬೀ ವಿಭೇದಂಗಳಲ್ಲಾ॥
ಳರಸೆಂಬೀ ಪಂಬಲಿಲ್ಲಿ ರ್ಜನವರೆ ಮನುಜರೆಲ್ಲಂ ಜರಾತಂಕಮಿಲ್ಲಾ
ತುರಮಿಲ್ಲಾಶ್ಚರ್ಯಭೂತಂ ಸುಷಮಸುಷಮ ಕಾಲಸ್ವಭಾವ ಪ್ರಭಾವಂ ॥ ೬೦ ॥

1. ಕೃಷ್ಣ ಶುಕ್ಲ. ಚ.
2. ರಾಶಿ. ಕ. ಖ. ಗ. ಘ.
3. ಅಂತನಂತ. ಕ. ಖ.

ಕಂ ॥ ದಂಪತಿಗಳಿ ಪುಟ್ಟುವರಾ
ರ್ಗಂ।ಪೊಲ್ಲಮೆ ಪುಟ್ಟದನತಿಶಯ ರೂಪ ಕಲಾ ॥
ಸಂಪನ್ನರೆನಿಸಿ ಸುರಗತಿ
ಯಂ ಪಡೆವರ್ ಕಡೆಯೊಳುಚಿತ ಭಾಷಾವೇಷರ್ ॥

ಅಪಮೃತ್ಯು ವಿರಹಿತಂ।ಮೂ
ಜಿ ಪಳಿತಮಾಯುಷ್ಯಮುದ್ದಮಜುಸಾಸಿರ ಬಿ ॥
[1]ಲ್ಲಪಸಾರಿತ ಮಲ ಮೂತ್ರಾ
ದಿ ಪರೀಷಹ ದೋಷವುಪಷ್ಟನ್ನಂ ದಂಪತಿಯಾ ॥ ೬೨ ॥

ಮಾಲಿನಿ ॥ ತ್ರಿದಿನಧೃನಿತು ಕಾಲಕ್ಕೊರ್ಮೆ ಸಂಸಾರ ಸೌಖ್ಯ।
ಪ್ರದಮಿದೆನಿಪ ದಿವ್ಯಾಹಾರಮಂ ಭೋಜನಾಂಗಂ॥
ಬದರಫಲ ಸಮಾನಾಕಾರಮಂ ಕೊಟ್ಟುದಂ ಕೊಂ।
[1]ಡುದಱ ಬಲ ವಿಲಾಸಂಬೆತ್ತು ಯುಗ್ಮಂಗಳಿರ್ಕುಂ ॥ ೬೩ ॥

ಕಂ ॥ ಸಿರಿಯು [2]ಮೊಗರಸದ ಪೊಸ ಮೈ
ಸಿರಿಯೆನಿಕುಂ ಪೂಗೊಳಂಗಳಾ ನೆಲನನಿತುಂ ॥
ಸುರಚಾಪದ ಬೆಳಸಿನ ಹರ
ವರಿಯೆನಿಕುಂ ಪಂಚರತ್ನರುಚಿ ವಲ್ಲರಿಯಿಂ ॥ ೬೪ ॥

ಚತುರಂಗುಲ್ಯಮೆನಿಸಿದ ತರು
ಣ ತೃಣ ಗ್ರಾಸದೊಳೆ ತಣಿದು।ತಿಳಿನೀರಂ ಪೀ ॥
ರ್ದತನುಕ್ರೀಡಾ ರತ ಮೃಗ
ತತಿಗಳ್ ದಂಪತಿಗಳಲ್ಲಿ ನಲಿಯುತ್ತಿರ್ಕುಂ ॥ ೬೫ ॥

ಮ ॥ ಕುಸುಮ್ಮ ಸ್ನಗ್ವಸನಾನ್ನ ಪಾನ್ಯವಿವಿಧಾತೋದ್ಯ।ಪ್ರಕಾಶ ಪ್ರದೀ।
ಪ ಸುಧೌಸದ್ಮ।ವಿಚಿತ್ರ ಭಾಜನ।ವಿಭೂಷಾನೀಕಮಂ ಕೊಟ್ಟು ಸಂ ॥
ತಸಮಂ ಮಾಡೆ ದಶಾಂಗ ಕಲ್ಪತರುಗಳ್, ಸ್ವರ್ಗಕ್ಕೆ ಸಂಸಾರ ಸಾ।
ರ ಸುಖಕ್ಕಗ್ಗಳಮೆನ್ನದಾ ಪ್ರಥಮಕಾಲ ಶ್ರೀಯನೇವಣ್ಣಿಪೆಂ ॥ ೬೬ ॥

ಆಂತಾ।ಕಾಲಮುತ್ತಮಭೋಗ ಭೂಮಿಸ್ಥಿತಿಯಿಂ ನಾಲ್ಕು ಕೋಟಿ ಕೋಟಿ ಸಾಗರೋಪಮವನುಕ್ರಮದಿಂ ಕುಂದುತ್ತುಂ ಬಂದನಂತರಂ ಸುಷಮಮೆಂಬೆರಡನೆಯ ಕಾಲದ ಮಧ್ಯಮಭೋಗ ಭೂಮಿಸ್ಥಿತಿಯೊಳ್—

---

1. ಡುದರ ಬಲ ನಿವಾಸಂಬೆತ್ತು. ಗ ; ಡದರ ಬಲಬೆ ವಾಸಂಬೆತ್ತು. ಘ.
2. ಪೊಸವೊಗದ ಮೈಸಿರಿ। ಸಿರಿ. ಕ. ಖ. ಗ. ಘ.

ಕಂ ॥ ತನು ನಾಲ್ಸಾಸಿರ ವಿಲ್ಲಿಡಿ
ದೆನಿಕ್ಕುಮಾಯುಷ್ಯಮೆರಡು ಪಳಿತೋಪಮಮಕ್ಕುಂ ॥
ದಿನ ಮನುಜರಕ್ಷ ಫಲದನಿ
ತೆನಿಪ ರಸಾಯನಮನೆರಡು ದಿವಸಕ್ಕುಣ್ಬರ್ ॥ ೬೭ ॥

ಮತ್ತಮಾಕಾಲಂ ಮೂಜು ಕೋಟಿ ಕೋಟಿ ಸಾಗರೋಪಮಂ ಕಟ್ಟಿದಿಂಬಟ್ಟಿಯಂ ಸುಷಮದುಷ್ಷಮಮೆಂಬ ಮೂಜನೆಯ ಕನಿಷ್ಠ ಭೋಗ ಭೂಮಿಸ್ಥಿತಿಯಾದುದಂದಿನ ಮಿಥುನಂಗಳ್—

ಕಂ ॥ ಅಳವಿಯ ಲೆಕ್ಕಂ ತಪ್ಪೊಳ್
ಪಳಿತೋಪಮವಾಗೆ ದೇಹಮಿರ್ಪಾಸಿರ ವಿಲ್ ॥
ಬಳಿಯೆ ಸುಧಾ[1]ಸಾರಮನಾ
ಮಳಕಫಲ ಪ್ರತಿಮಮಂ ದಿನಾಂತರಮುಣ್ಬರ್ ॥ ೬೮ ॥

ಮತ್ತಮಾ ಜಘನ್ಯ ಭೋಗ ಭೂಮಿಪ್ರವರ್ತನಮೆರಡು ಕೋಟಿ ಕೋಟಿ ಸಾಗರೋಪಮದ ಕಡೆಯ ಪಳಿತೋಪಮದೆಂಟನೆಯ ಭಾಗಮುಳಿಯೆ ಬಟ್ಟಿಯಂ ಕುಲಧರಾವತಾರಮಕ್ಕುಮದೆಂತೆನೆ—

ಕಂ ॥ [1]ಅಜ್ಞಾನತ್ರಯ ರಹಿತರ್
[2]ತ್ರಿಜ್ಞಾನ ಧರರ್ ವಿದೇಹದಿಂ ಬಂದಧಿಕ
ಪ್ರಜ್ಞರ್ ಪುಟ್ಟುವರೀ ನೆಲ
ನಾಜ್ಞಾಮುದ್ರಿತಮೆನಲ್ ಚತುರ್ದಶ ಮನುಗಳ್

ಅಲ್ಲಿ ಮೊದಲ ಕುಲಧರಂ ಪ್ರತಿಶ್ರುತಿಯೆಂಬಂ—

ಕಂ ॥ ಬಲವರ್ಪ ಕಾಲಪುರುಷನ
ಕಲಧೌತ ವಿಶಾಲ ಕರ್ಣಕುಂಡಲ ಯುಗಮಂ ॥
ಗೆಲೆವಂದು ಸೂರ್ಯ ಶಶಿ ಮಂ
ಡಲಮಾಸುರಮಾಗೆ ಗಗನದೆರಡುಂಕೆಲದೊಳ್ ॥ ೭೦ ॥

ಅವಂ ಕಾಣಲೊಡಮುಂದಿನ ಯುಗಳಮುತ್ಪಾತ ಯುಗಳವೊಗೆದುದೆಂದು ಭೀತಮಪ್ಪುದುಂ ಜ್ಯೋತಿರಂಗ ತರು ತೇಜೋಭಂಗದಿಂ ಕಾಣಲಾದುವಿವು ಚಂದ್ರಾದಿತ್ಯ ವಿಮಾನಂಗಳ್ಗೆಂದುವ್ಮೊಳವಿಲ್ಲಿಂದಿತ್ತಲ್ಗಿಂತೆ ತೋರ್ಕುಮಿವರ್ಕೆ ಬೆರ್ಚದಿರಿವ್ಮೆಂದವರ ಮನದ ಸಂಕೆಯಂ ಕಳೆದನಾತನಿಂ ಬಟ್ಟಿಯಮೆರಡನೆಯ ಕುಲಧರಂ ಸನ್ಮತಿಯೆಂಬಂ

ಕಂ ॥ ಕಿಸುಸಂಜೆ [1]ಪರ್ವಿ,ಮರ್ವ
ರ್ವಿಸೆ,ತಾರಾನಿಕರಮೊಗೆಯೆ,ಬೆಟ್ಟುತ್ತರ್ ಬೆ ॥
ಕ್ಕಸಮುತ್ತರ್,ಭಯರಸದಿಂ
ದೆಸೆಗೆಟ್ಟರ್,ಕಂಡದೃಷ್ಟ ಪೂರ್ವಮನಾರ್ಯ್ಯರ್ ॥ ೭೧ ॥

ಅಂತು ಭಯಸ್ಥರಾದಾರ್ಯ್ಯರಂ ಕಂಡು ಸೂರ್ಯ ಕಿರಣಮಸ್ತಮಯ ಸಮಯದೊಳ್,ತಪ್ತ ತಪನೀಯಮಯಮೆನಿಪ್ಪ ನಿಷಧ ನಗದ ನೆಗೆದ ಕೆಂಬೊಳಪಿನೊಳ್ ಪಳಂಚೆ,ರಂಜಿಸಿದ ಸಂಜೆ,ಪರೆಯೆ,ಕವಿದ ಕತ್ತಲೆಯೊಡನೆ ತಾರಾ ಗ್ರಹ ನಕ್ಷತ್ರಂ ತಲೆದೋಱುಗುಮಿಲ್ಲಿಂದಿತ್ತಲ್ಲಹೋರಾತ್ರ ಭೇದಮಕ್ಕುಮೆಂದವರ ಮ್ಮನೋವಿಷಾದಮಂ ಕಳೆದನಾತನಿಂ ಬಟ್ಟಿಯಂ ಮೂಜನೆಯ ಕುಲಧರಂ ಕ್ಷೇಮಂಕರನೆಂಬಂ ಸಿಂಹ ಶರಭ ಶಾರ್ದೂಲ ವ್ಯಾಳ ಮೃಗ ವಿಥುನಂಗಳ್ ಕಾಲಸ್ವಭಾವದಿಂ ಋಜುಸ್ವಭಾವಮಂ ಪತ್ತುವಿಟ್ಟು ವಿಷಮ ಸ್ವಭಾವಮನಪ್ಪುಕೆಯ್ವುದುಂ—

ಕಂ ॥ ವಿಪರೀತಮಾದ ಮೃಗಕುಲ
ದುಪದ್ರವಂ ನಿಮಗೆ ದಂಡ ಪಾಶಾದಿಗಳಿಂ ॥
ದಪಹರಿಸುಗುಮೆಂದಾರ್ಯ
ರ್ಗುಪದೇಶಂಗೆಯ್ದು ಕಳಿದನವರೆರ್ದವಲಂ ॥ ೭೨ ॥

ಆತನಿಂ ಬಟ್ಟಿಯಂ ನಾಲ್ಕನೆಯ ಕುಲಧರಂ ಕ್ಷೇಮಂಧರನೆಂಬನಂಧಕಾರಮಪ್ಪುದುಂ ಪ್ರಜೆಗುಪದ್ರವಮುಂ ಕ್ಷುದ್ರ ಪಶುಮೃಗ ಯುಗಂಗಳೊಡರಿಸೆ—

ಕಂ ॥ ರವಿರಶ್ಮಿಗಳಿಂ ಪುಟ್ಟಿಸಿ
ರವಿಕಾಂತೋಪಲ ಕೃಶಾನುವಂ, ಕೋಟ್ಯಾಗಮಂ ॥
ದಿವಸದವಸಾನ ಸಮಯದೊ
ಳವನಂಜಿಸುವೊಂದುಪಾಯಮಂ ಪ್ರಜೆಗಿತ್ತಂ ॥ ೭೩ ॥

ಆತನಿಂ ಬಟ್ಟಿಯಮಯ್ದನೆಯ ಕುಲಧರಂ ಸೀಮಂಕರನೆಂಬಂ ಕಲ್ಪತರುಗಳಲ್ಪ ಫಲದಂಗಳಾಗೆ ಭೋಗಭೂಮಿಜರ್ ತಮತಮಗೆ ನೆಲೆಯೆಂಬ ಸಂಕಲ್ಪದಿಂ—

ಕಂ ॥ ಓರೊರ್ವರ ಸುರತರುಗಳ
ನೋರೊರ್ವರಿವೆಮ್ಮವೆಂಬುದುಂ,ಪೂರ್ವ ಸ್ವೀ ॥
ಕಾರ ವ್ಯವಸ್ಥೆ ನಿಲ್ಪಸಾ
ಧಾರಣ ಸೀಮಾವಿವಾದಮಂ ಬಾರಿಸಿದಂ ॥ ೭೪ ॥

---

1. ಪೆರ್ಚಮರ್ವಿಸೆ. ಕ. ಖ. ; ಪೆರ್ಚನುರ್ವಿಸೆ । ನಿಸಿ. ಸ. ಫ.
2. ನಿಮಿಂ. ಕ. ಖ. ಗ. ಘ.

ಆತನಿಂ ಬಟ್ಟಿಯಮಾಜನೆಯ ಕುಲಧರಂ ಸೀಮಂಧರನೆಂಬಂ—

ಕಂ ॥ ಕಲುಷಾಂಧರ್ ಸುರತರು ಸಂ
ಕುಲವೆಮ್ಮವು ತಮ್ಮವೆಂದು ತಮ್ಮೊಳಗಾರ್ಯರ್ ॥
ತಲೆ[1]ಯೊತ್ತಿ ಕುಟ್ಟಿ ಪೊಯ್ವವ
ರಲವರಿಕೆಯೊಳಾದ ತೋಟಿಯಂ ತೊಲಗಿಸಿದಂ ॥ ೭೫ ॥

ಆತನಿಂ ಬಟ್ಟಿಯಮೇಜನೆಯ ಕುಲಧರಂ ವಿಮಲವಾಹನನೆಂಬಂ—

ಕಂ ॥ ಅಡಿದಳಿಗೆ ಧರಾವಲಯಂ
ಕಡ್ಡುವೆಟ್ಟತ್ತಾಗೆ ನಡೆಯಲಱಿಯದೆ ಮನುಜರ್ ॥
ಸೆಡೆಯೆ ಹಯಾದಿಗಳಿಂದಂ
ನಡೆಯಿಸಿದಂ ಕಲಿಸಿ ವಾಹನಾರೋಹಣಮಂ ॥ ೭೬ ॥

ಆತನಿಂ ಬಟ್ಟಿಯಮೆಂಟನೆಯ ಕುಲಧರಂ ಚಕ್ಷುಷ್ಮನೆಂಬನಂದಿನ ಮಿಥುನಂ ಸುತಮುಖ ವಿಲೋಕನದಿನತಿ ಕುತೂಹಲಮನಪ್ಪುಕೆಯ್ವುದುಂ—

ಉ॥ಸ್ರ॥ಯುಗಳಂಗಳ್ಪುಟ್ಟಿ ಸೀಂತಾಗುಳಿಸಿ ಪಿತೃಯುಗಂ ಸತ್ತು ಸಗ್ಗಂಗಳೊಳ್ ಪು
ಟ್ಟುಗುಮಿಲ್ಲಿಂ ಮುನ್ನಮಿತ್ತಲ್ ಕತಿಪಯ ದಿನದಿಂ ಮಕ್ಕಳಂ ನೋಡಿ ಸಾವೆ ॥
ಯ್ದುಗುವಿಭಾಗಳ್ ಕರ್ಮಭೂಮಿ ಸ್ಥಿತಿ ವೊಗಸಿದುದ್ದಿಂ ಬಾಲಕಾಲೋಕದಿಂದಿ
ಬ್ಬಿಗಮಿಲ್ಲೆಂದಿಂತು ಕಾಲಸ್ಥಿತಿಯನವಗತಿ ವ್ಯಕ್ತಮಪ್ಪಂತು ಪೇೞ್ದಿಂ ॥ ೭೭ ॥

ಆತನಿಂ ಬಟ್ಟಿಯಮೊಂಬತ್ತನೆಯ ಕುಲಧರಂ ಯಶಸ್ವಿಯೆಂಬಂ—

ಕಂ ॥ ಅವರಿವರೆನ್ನದೆ ಮುನ್ನಾ
ರ್ಯವೆಸರ್ ಪೆಸರಾಗೆ ಬೇೞ್ಕುವೇೞಂದಿನ ಮಾ ॥
ನವರ್ಗೆ ಪೆಸರಿಟ್ಟು ನಾಮ
ವ್ಯವಸ್ಥೆಯಂ ಪಡೆದು ಮನ್ನುಗಳೊಳ್ ಪೆಸರ್ವಡೆದಂ ॥ ೭೮ ॥

ಆತನಿಂ ಬಟ್ಟಿಯಂ ಪತ್ತನೆಯ ಕುಲಧರನಭಿಚಂದ್ರನೆಂಬನಾ ಕಾಲದೊಳ್—

ಕಂ ॥ ಉಡುಪತಿಯುಮನುಡು ಗಣಮುಮ
ನೆಡೆಯುಡುಗದೆ ತೋಱಿ ತೋಱಿ ಕಿಱುಗೂಸುಗಳಂ ॥
ನುಡಿಗಲಿಸಿದಂ ತೊದಲ್ನುಡಿ
ಪಡೆವಿನೆಗಂ ಪಿತೃಯುಗಕ್ಕೆ ಕರ್ತವ್ಯಮೃತಮಂ ॥ ೭೯ ॥

ಆತನಿಂ ಬಟ್ಟಿಯಂ ಪನ್ನೊಂದನೆಯ ಕುಲಧರಂ ಚಂದ್ರಾಭನೆಂಬಂ—

---

1. ಪೊತ್ತೆಗುಟ್ಟವೊಯ್ವವ. ಗ. ಘ.
2. ದಚ್ಚಿಗ. ಚ.

ಮ॥ಸ್ರ॥ ಇನನಂ ಶೀತಾಂಶುವಂ ಮಂಜಿನ ಮುಗಿಲ ಪೊಡರ್ಪಿಂ ಜನಂ ಕಾಣದಾಕಂ।
ಪನಮಂ ಕೈಕೊಳ್ವುದುಂ,[1] ಬೆಳ್ಳನೆ ಬೆಳಗಲೊಡಂ ತೋಱುಗುಂ ಕರ್ಮಭೂ ವ ॥
ರ್ತನಮತ್ಯಾಸನ್ನಮೆಂದಾ ಸ್ಥಿತಿಯನಱಿಪಿ ಸಂತೈಸಿ ಸಂತಾಪ ವಿಚ್ಛೇ।
ದನಮಂ ತಂದಂ ಯಶಶ್ಚಂದ್ರಿಕೆಗೆ ನೆಱಿಯದೆಂಬನ್ನಮೌಶಾಂತರಾಳಂ ॥೮೦॥

ಆತನಿಂ ಬಱಿಯಂ ಪನ್ನೆರಡನೆಯ ಕುಲಧರಂ ಮರುದ್ದೇವನೆಂಬಂ—

ಕಂ ॥ ಸರಿ ಸುರಿಯೆ, ಮಿಂಚು ಮಿಳ್ಪಿಸೆ,
ಸುರಚಾಪಂ ನೆಗೆಯೆ, ಬೆಗಡುಗೊಂಡವರಂ ಸಂ ॥
ವರಿಸಿ ಘನಾಘನ ಸಮಯ -
ಸ್ವರೂಪಮಂ ತಿಳಿಪಿ ಕಳೆದನವರುಮ್ಮಳಮಂ. ॥ ೮೧ ॥

ಆತನಿಂ ಬಱಿಯಂ ಪದಿಮ್ಮೂರನೆಯ ಕುಲಧರಂ ಪ್ರಸೇನಜಿತ್ತೆಂಬನಾ ಕಾಲ
ದೊಳ್ ದರಿಯುಮುಳ್ದರಿಯುಂ ಕುಱಿಯುಂ ಕುತ್ತುಱುಂ ಬೆಟ್ಟಮುಂ ಘಟ್ಟಮು
ಮುಪನದಿಯುಮುಪಸಮುದ್ರಮುಂ ಪುಟ್ಟ ಸಲಿಲ[2]ಸಂಘಾತದಿನಪಮೃತ್ಯು ಪುಟ್ಟಿ
ಮಾನಸರಸಹ್ಯ ಶೋಕಾನಲ ದಂದಹ್ಯಮಾನ ಮಾನಸರಾಗೆ—

ಕಂ ॥ ತ್ತವೆ ತೈಲಂ ದೀಪಂ ನಂ
ದುವಂತೆ ಗಳಿಯಿಸೆ ನಿಷೇಕಮಱಿವರ್ ಮುನ್ನಂ
ಪವನ ಪ್ರಹಾರದಿಂ ತೈ
ಲವುಳ್ಕೊಡಂ ನಂದುವಂತೆ ಪೊಂದುವರೀಗಳ್

ಬಡಿಕೊಳೆ ಕಾಯ್ವುಂ ಪಣ್ಣುಂ
ತೊಡಂಬೆ ಪಱಿದುದಿರ್ವ ಪಾಟಿಸ್ಕೆಯಿಂ, ಕಿಱಿವಿರಿಯರ್ ॥
ಮಡಿವರನುಕ್ರಮದಿಂ ಸಾ
ವೊಡರಿಸದೊಡರಿಸುವುದಲ್ತೆ ಕದಳೀಘಾತಂ ॥ ೮೩ ॥

ಉದಯಿಸಿ, ನಡುವಗಲಪ್ಪುದು
ಮುದಿತೋದಿತನಾಗಿ, ಸೂರ್ಯನಸ್ತಮಿಸುವವೋಲ್ ॥
ಉದಯಿಸಿ, ಜೌವನಮಂ ತಳೆ
ದೊದವಿದ ಮುಪ್ಪಿನೊಳೆ ಕಱಿವರಿಲ್ಲಿಂ ಬಱಿಯಂ ॥ ೮೪ ॥

---

1. ಬೆಳ್ಪನೆ. ಕ. ಖ. ಗ. ಘ.
2. ಸಂಪಾತದಿನಪಮೃತ್ಯು ಮರಣಮಾಗೆ. ಚ.

ಎಂದು ಕಾಲಸ್ವರೂಪ ನಿರೂಪಣಂಗೆಯ್ದುವರ ಶೋಕ ಪ್ರತ್ಯನೀಕಮನದಿರ್ದಿದಂ ಈ ಪೇೞ್ದಿ ಕುಲಧರ ಸಂಕ್ಕುಲಕ್ಕೆ—

ಕಂ ॥ ಒಂದು ಪಳಿತದ ದಶಾಂಶದೊ
ಳೊಂದಂಶಂ ಮೊದಲ ಮನುಗೆ, ಪದಿಮೂವರೊಳಂ ॥
ಪಿಂದಣವರ್ಗಳ ದಶಾಂಶದೊ
ಳೊಂದಂಶಂ ಮುಂದಣವರ್ಗೆ, ಪರಮಾಯುಷ್ಯಂ ॥ ೮೫ ॥

ಸಾಸಿರಮುಮೆಂಟುನೂಱು ಶ
ರಾಸನಮೊರ್ವಂಗೆ, ಪಂಚಶತ ಹೀನಂ ಬಾ॥
ಣಾಸನಮಿರ್ವರ್ಗರ್ಟಿದ
ರ್ಗೋಸರಿಕುಂ ಕ್ರಮದಿನುದ್ದಮಿರ್ಪತ್ತೈವಿಲ್ ॥ ೮೬ ॥

ಮನು ಚಂದ್ರಾಭಂ ಪ್ರಾಂಡುರ
ತನುವೆ ಯಶಸ್ವಿ ಪ್ರಸೇನಜಿಚ್ಚಕ್ಷುಷ್ಮರ್
ವನಜ ದಳಚ್ಛವಿಗಳ್ ಕ್ರಾಂ
ಚನ ರೋಚಿಷ್ಣುಗಳೆ ಮಿಕ್ಕ ಕುಲಧರರೆಲ್ಲಂ ॥ ೮೭ ॥

ಮಂತಣಮೇನಾದಿಯ ಮ
ನ್ವಂತರದೊಳಶೀತಿ[1]ಭಾಗಿ ಪಲ್ಯದೊಳ್ಭವ:
ನ್ವಂತರ [2]ದಶಮಾಂಶಂ ಮ
ನ್ವಂತರಮಕ್ಕುಂ ಪ್ರಸೇನಜಿತ್ಪರ್ಯಂತಂ ॥ ೮೮ ॥

ಕ್ರಮದಯ್ವರಿಂದೆ ಹಾ ದಂ
ಡಮಯ್ವರುಂ ಮನುಗಳಿಂದೆ ಹಾಮಾದಂಡಂ
ಸಮನಿಸೆ ಹಾಮಾ ಧಿಗ್ದಂ
ಡಮಯ್ವರಿಂದಾಯ್ತು ಭರತನಿಂ ತನ್ಮುದಂಡ ॥ ೮೯ ॥

ತದನಂತರಂ ಪದಿನಾಲ್ಕನೆಯ ಕುಲಧರಂ ನಾಭಿರಾಜನೆಂಬಂ ಪಂಚವಿಂಶ ತ್ಯುತ್ತರ ಪಂಚಶತ ಶರಾಸನೋತ್ಸೇಧನುಂ ಪೂರ್ವಕೋಟಿ ಪರಮಾಯುಷ್ಯನುಮೆನಿಸಿ

ಕಂ ॥ ಮುನ್ನಿನ ಜನ್ಮದ ಸುಕೃತಮೆ
ಸನ್ನಿದಮಾಯ್ತೆನೆ ಮತಿ ಶ್ರುತಾವದಿಬೋಧಂ ॥
ತನ್ನೊಡನೆ ಪುಟ್ಟಿ, ಪುಟ್ಟಿದ
ನೇನ್ನಾಭಿ ಯಶಸ್ಸನಾಭ್ಜಿಯೋ ಕುಲಧರರೊಳ್ ॥ ೯೦ ॥

---

1. ಭಾಗ. ಚ. 2. ದಶಮಾಸಂ. ಕ. ಖ.

ಶಾ ॥ ಓರೊಂಭಂ ಕುಡುಗುಂ ದಶಾಂಗ ಸುರಭೂಜಂ ಬೇಟ್ಪುದಂ ಭೂತಲ ।
ಕ್ಯಾರೇನು ಪಡೆದೆಂತು ಜೀವಿಸುವರೆಂಬೀ ಕರ್ಮಭೂ ವರ್ತನ ॥
ಪ್ರಾರಂಭೋಚಿತ ಜೀವನೋಪಕರಣೋಪಾಯಂಗಳಂ ತೋಱಿ ಕೊ ।
ಟ್ಟಾರಾತೀಯ ಮನುಪ್ರಧಾನರನುದಾತ್ತಂ ನಾಭಿ ಕೀರ್ತ್ಯಾಡಿದಂ ॥

ಕಂ ॥ ಮೊದಲಿಗನವನೀಶ್ವರರೊಳ್
ಪದಿನಾಲ್ಕನೆಯಂ ಮನುಪ್ರಧಾನರೊಳಿಂಬೊ ॥
ಳ್ಪುದಿತೋದಿತಮೆನೆ ಮಹಿಮಾ
ಸ್ಪದನಾದಂ ನಾಭಿ ನಾಭಿಖಂಡನ ಕುಶಲಂ ॥

ಭುವನ ಜನ ಜೀವನೋಪಾ
ಯ ವೃತ್ತಿಯಂ ತೋಱಿಕೊಟ್ಟು ಕೃತ ಕೃಷಿಕರ್ಮ ॥
[1]ವ್ಯವಹೃತಿಯಿಂ ಕೃತಯುಗಮೆಂ
ಬ ವಿಕಲ್ಪಮನಾದಿಕಾಲದೊಳ್ ಪುಟ್ಟಿಸಿದಂ ॥

ಪಿಂಡಿ ಪಿಟಿದಿಕ್ಷುರಸಮಂ
ಕೊಂಡುಪಯೋಗಿಸುವುಪಾಯಮಂ ತೋರ್ಪುದುಮಾ ॥
ದಂಡಧರ ವಂಶಮವನೀ
ಮಂಡನವಿಕ್ಷ್ವಾಕುವಂಶಮೆನಿಸಿತ್ತಿಳೆಯೊಳ್ ॥

ಉ ॥ ನಯನಂ ನೀಲಸರೋಜಮಂ ಸೆಣಸುಗುಂ ವಕ್ಷಸ್ಥಳಂ ವಜ್ರವ್ಯೇ
ದಿಯ [2]ನಾಳಪ್ಪಿಸುಗುಂ ಮುಖಂ ಕಮಲಮಂ ಕೀರ್ತ್ಯಾಡುಗುಂ ಕೈಗಳಾ ।
ನೆಯ ಕೈಯಂ [3]ನಖಮಿಂದುವಂ ನಗುಗುವಾನನಮ್ಯಾಡುಗುಂ ಜಾನು ಬಾ
ಳೆಯ ಕಂಭಂಗಳನೆಂದೊಡೇವೊಗಳ್ವೆನೋ ಭಾನಾಭಿಯಂ ನಾಭಿಯಂ ॥೯೫॥

ಕಂ ॥ ಮರುದೇವಿಯೆ ತಕ್ಕಳ್ ನಾ
ಭಿರಾಜವಲ್ಲಭೆ ಯೆನಿಸಲ್ ॥
ಮರುದೇವಿಗೆ—
ಭಿರಾಜ

---

1. ವ್ಯ
2. ನಾ
3. ನ

ಕಂ॥ ಪರಿಚಾರಿಕೆಯರ್ ಸುರಸುಂ
ದರಿಯರ್ ಪೊಡೆವಟ್ಟು ಪೂಜಿಪಂ ಪುರುಹೂತಂ ॥
ಪುರುದೇವನೆ ಪೆರ್ಮಗನೆನೆ
ಮರುದೇವಿಯ ಮಹಿಮೆ ಬಣ್ಣಿಸಲ್ಬಂದಪುದೇ ॥

ಅವತಂಸಂ ತನ್ನಗುಣ
ಸ್ತವನಂ ಧರೆಗೆನಿಸಿ ನಾಭಿರಾಜಂ ಧರಣೀ ॥
ಯುವತಿಗೆ ಮರುದೇವಿಯೆ ದಲ್
ಸವತಿಯೆನಲ್ ಸುಖದಿನರಸುಗೆಯ್ಯುತ್ತಿರ್ದಂ ॥ ೯೮ ।

ಅಂತಿರ್ಪುದುಂ—

ಕಂ॥ ಮರುದೇವಿಗೆ ಪುಟ್ಟಿದಪಂ
ಪುರುದೇವಂ ಬಂದು ದಿವದಿನೆಂಬವಧಿಯಿನಾ ॥
ಪುರುಹೂತನಯೋದಯೋಧ್ಯಾ
ಪುರಮಂ ನಾಡಾಡಿಯಲ್ಲದಂತಿರೆ ಪಡೆದಂ ॥ ೯೯ ॥

ನಾಡೊಳ್ ಕೌಶಲದೇಶಮೊಂದೆ ಪುರದೊಳ್ ಸಾಕೇತಮೊಂದೀಕ್ಷಣ ।
ಕ್ರೀಡಾವಾಸಮೆನಲ್ ಪುರಂದರನಲಂಪಿಂ ನಾಭಿರಾಜಂಗವಂ ॥
ಮೂಡಿಟ್ಟಂ ಕರುಣಿಟ್ಟು ಮನ್ಮಥನೆ ಬಣ್ಣಂಗೆಯ್ದನಂದೆಂದೊಡಾ।
ನಾಡಂ ಬೀಡುಮನೊಂದೆ ನಾಲಗೆಯೊಳನ್ನೇವಣ್ಣಿಪಂ ಬಣ್ಣಿಪಂ ॥ ೧೦೦ ॥

ಕಂ॥ ಬೀಡು ಸ್ತುಕ್ಕತಕ್ಕೆ ಚಿಲ್ವಿ
ಗಾಡುಂಬೊಲನಾಶ್ರಯಂ ಸ ಖಕ್ಕೆನೆ ಪೆಜತೇಂ ॥
ನಾಡಾಡಿಯ ನಾಡಲ್ಲದು ।
ನಾಡೊಳಗುತ್ಕೃಷ್ಟಮಪ್ಪ ಕೌಶಲದೇಶಂ ॥ ೧೦೧ ॥

ಪರ್ವತಸಾನು ಸರ್ವಮಣಿಯಿಂ ಮುಂಗಳಿಂ ।
ದೊರ್ವರೆ ಸರ್ವಸಸ್ಯದೊದವಿ ಲಂ॥
ಸರ್ವಋತು ಪ್ರವೇಶದಿಂ ।
ಸರ್ವಗುಣಂಗಳಿಂದೆಸೆ ॥ ೧೦೨ ॥

ಅಮರ್ದಂ ಮ ಬೀಱಿ ತೋ ।
ಳ ಮೊದಲ್ಗೆ ಪ್ಪ ತೊ

ಯಮನಾಲೋಕನವೂತ್ರದಿಂ ಮಱೆದು ಪಾಂಥಶ್ರೇಣಿ ನೀರಟ್ಟೆಯಂ,
ಶ್ರಮಮಂ[1] ತೀರಮೈಯಂ ಪ್ರಪಾಂಗನೆಯರಂ ಕಣ್ಗಾವುದಾದೇಶದೊಳ್ ॥೧೦೩॥

ಕಂ॥ ತೀವಿದ ತಿಳಿಗೊಳದಿಂ ಪೊ
ನ್ಪಾವರೆಗೊಳದಿಂದರಲ್ಪ ನೆಯಿಲ್ಗೊಳದಿಂ॥
ದ್ಗಾವಲ್ಗೊಳದಿಂ ಚೆಲ್ವಿಂ
ಗಾವಾಸಮ್ಮೆನಿಪುವೊಪ್ಪುವಾ ನಾಡೊಗರ್ಗಳ್ ॥ ೧೦೪ ॥

ಕಲಕಂಠಕ್ಕತನುಗ್ಗಾ
ಪಲತಾರೋಹಣ ವಿಕಾರವಳಿಗಾಮ್ರ ಕುಜಾ
ವಲಿಗೆ ಮಧುವಿಕೃತಿ ಮಾನವ
ಕುಲಕ್ಕೆ ಕನಸಿನೊಳಮಿಂತಿವಿಲ್ಲಾ ನಾಡೊಳ್

ಸಮರತ ಸಂಜನಿತ ಪರಿ
ಶ್ರಮಮಂ ದಂಪತಿಗೆ ಕಳೆದು ಮಗುಟ್ಟುಂ ರತಿರಾ॥
ಗಮ[2]ನಿರದೊದವಿಪುದು ನವೋ
ದ್ಗಮ ಪರಿಮಳವಿಷಯಮೆನಿಪ ವಿಷಯಸವಿಸಾರಂ

ಆ ವಿಷಯವಿಲಾಸಿನಿಗೆ ಮಣಿಮಯ ಮುಕುರಮೆನಿಸಿ-

[3]ಕಣ್ಣೆಮೆಯಿ-ಕ್ಕದಾಜು ಋತುವುಂ ಬನಮಂ ಸಿರಿ ಕೆಯ್ವೊಲಂಗಳಂ
ಕಣ್ಣೆಮೆಯಿಕ್ಕುಳಲ್ಲಿ ಪಥಿಕರ್ಗಿಳಿಸೋವಬಲಾಜನಂಗಳಂ ॥
ಕಣ್ಣೆಸೆಯಿಕ್ಕಬೀಕ್ಷಿಸಿ ಪುರಂ ಸುರಲೋಕಮನೇಕೆ ಜಿಕ್ಕಟಂ
ಕಣ್ಣೆಮೆಯಿಕ್ಕದೆಂದು ನಗುಗುಂ ನಿಜರತ್ನಗೃಹಾಂಶು ಜಾಲದಿಂ ॥ ೧೦೬ ॥

ಆ ಪುರದುಪವನದೊಳಸಮಶರ ಕೆಶೋರಕೇಸರಿ ಗಜಜು ಗರ್ಜಿಸದ ಕೃತಕಗಿರಿ ಗಳಿಲ್ಲ, ಮನೋಜರಾಜ ವಿಜಯಕೇತನ ಶಫರ ಸಂಚಾರಮಿಲ್ಲದ ಸರೋವರಂಗಳಿಲ್ಲ, ರತಿಪತಿಯ ಪೂಗಣೆಯ ದೊಣೆಗೆದಱದ ಪೂದೋಂಟಮಿಲ್ಲ, ಕುಸುಮಶರ ಕೋಪ ಶಿಖಿಯನುದ್ದಮುರಿಪದ ತಣ್ಗಾಳಿಯಿಲ್ಲ, ರತಿಯ ಲಾವಣ್ಯರಸಪ್ರವಾಹದಿಂ ಪಲ್ಲವಿಸದ

---

1. ಮೆಯಿಂ ಗ. ಘ.
2. ನೋಲಗಿಸುವುದು. ಚ.
3. ಕಣ್ಣೆಮೆಯಿಕ್ಕುವಾಜು ಋತುವುಂ ಬನದಿಂ ಸಿರಿಕೆಯ್ವೊಲಂಗಳಂ
ಕಣ್ಣೆಮೆಯಿಕ್ಕುಳಲ್ಲಿ ಪಥಿಕರ್ಗಿಳಿಸೋವಬಲಾಜನಂಗಳಂ।
ಕಣ್ಣೆಮೆಯಿಕ್ಕುರೀಕ್ಷಿಸೆ. ಕ. ಖ. ಗ. ಘ.

ಚೂತವನಮಿಲ್ಲ, ಕಾಮರಾಗ ರಸಮಂ ಕಾಚ್ಪಿರಂ ಮಾಡದಶೋಕವನಮಿಲ್ಲ, ಕಂದರ್ಪ ದಂದಶೂಕವಾವರಿಸದ ಚಂದನ ನಂದನಂಗಳಿಲ್ಲ, ಮನೋಜರಾಜ ದೀಪಕಲಿಕೆಯಂ ಬೆಳಗದ ಚ್ಚಂಪಕವನಮಿಲ್ಲ, ಪಂಚಬಾಣ[1] ಕೃಪಾಣ ಪಟ್ಟದೊಳ್ ಕೊನೆಯ ಬಿಣ್ಪಿಂ ತೊನೆದು ತೂಗದ ಪೂಗವನಮಿಲ್ಲ, ಮದನಮೋಹಾಂಧಕೆದಱಿದ ತಮಾಲವನಮಿಲ್ಲ, ರತಿಯ ಮಧುಪಾನಗೋಷ್ಠಿಯ ಸುವರ್ಣಜ್ಞಕರ್ಣಿಸದ ಕರ್ಣಿಕಾರಮಿಲ್ಲ, ಮಕರಧ್ವಜ ವಿಜಯಲಕ್ಷ್ಮಿ ನಲಿದು ನರ್ತಿಸದ[2] ಮಂದವನದ ವೇದಿಕೆಗಳಿಲ್ಲ, ಮಧುಮಹಾದೇವಿ ಪಟ್ಟಂಗಟ್ಟದ ಮಾಳಿಗೆಗಳಿಲ್ಲ, ಕಂತು ದಂತಿ ವಿಸಟಂಬರಿಯದೇಲಾವನ ವೀಥಿಗಳಿಲ್ಲ, ಮದನ ಜಗದ್ವಶೀಕರಣ ತಿಲಕಮೆನಿಸದ ತಿಲಕವನಮಿಲ್ಲ, ಮನೋಭವ ವಿಜಯಮಂ ನಿರ್ಣಾಕ್ಷಳಂಗೈವಾಡದ ವಕುಳವನಮಿಲ್ಲ, ಚಿತ್ತಜನ ಕೀರ್ತಿಲತೆಯ ಬಿತ್ತು ಮೊದಲೆನಿಸದ ವಿಕಚ ವಿಚಕ್ಷಿಲವಲ್ಲರಿಗಳಿಲ್ಲ, ಪುಷ್ಪಶರ ವಶೀಕರಣಮಂತ್ರಮಂ ಪದಂಗುಟ್ಟದ ಕೋಗಿಲೆಗಳಿಲ್ಲ, ಸ್ಮರನ ಬಿರುದಿನಂಕಮಾಲೆಯನೋದದರಗಿಳಿಗಳಿಲ್ಲ, ಅಂತಃಕರಣ ಸಮುದ್ಭವಚಾಪ ಟಂಕೃತ ಮನಲಂಕರಿಸದ ಮಧುಕರರಂಗಳಿಲ್ಲ, ಜಲದೇವತೆಗೆ ಕಲಕೊಜನಮನುಪದೇಶಂಗೆಯ್ಯದ ಸಾರಸಂಗಳಿಲ್ಲ, ಮನ್ಮಥಂಗೆ ಪಥಿಕರಂ ಪಿಸುಣ್ಬೇಬದ ಪಾರಾವತಂಗಳಿಲ್ಲ, ದರ್ಪಕನ ದರ್ಪಾವಲೇಪಮನುದ್ದೀಪನಂಮಾಡದ ರಥಾಂಗಮಿಥುನಂಗಳಿಲ್ಲ, ವನದೇವತೆಗೆ ಪೀಲಿದಱಿಯನೆತ್ತದ ಸೋಗೆನವಿಲ್ಗಳಿಲ್ಲ. ಅದಲ್ಲದೆಯುಂ

ಉ ॥ ಪೌರವನಂಗಳೊಳ್ ಕುಸುಮ ಸೌರಭ ಸಾರ ಸಮೀರ ಮಂದ ಸಂ।
ಚಾರಮೆ ಪಾಂಥರಳ್ಕಿರ್ದೆಯನಾರ್ದಿಸುವಂಗಜ ಬಾಣಮೋಕ್ಷ ಹುಂ॥
ಕಾರಮೆ ಬಂಡನುಂಡು ನನೆಗೊಂಬುಗಳಿಂ ಮೊರೆದೇಪ್ಪ ಭೃಂಗರುಂ।
ಕಾರಮೆ ಮಾಪ್ಪುದಾರ ಬಗೆಗಂ ಮದನೋತ್ಸವ ಹರ್ಷಭಾರಮಂ ॥೧೦೪ ॥

ಮ॥ ಸ್ರ॥ ಸಹಕಾರಾಶ್ಲೋಕ ರಂಭಾ ತಿಲಕ ವಕುಳ ಪುನ್ನಾಗ ಕರ್ಪೂರವಲ್ಲೀ।
ಗೃಹದೊಳ್ ಬಾಲಪ್ರವಾಳಾಸ್ತರಣ ಮೆರೆದಳನ್ಮಲ್ಲಿಕಾತಲ್ಪ ಶೋಭಾ ॥
ವಹದೊಳ್ಮೆಯ್ವೆರ್ಚಿ ನಾನಾ ವನವಿಹಗ ರವಂ ತಮ್ಮ ಸಂಭೋಗಕೇಳೀ।
ಕುಹರವ್ಯಾಪಾರದಿಂದಿರ್ಪುದು ಪುರವನದೊಳ್ ವಾರನಾರೀಕದಂಬಂ ॥ ೧೦೯ ॥

೧೧೦ ॥ ಪದಿಪಂ ಬೀಜುಗುಮಾಪುರೋಪವನದೊಳ್ ಪೆಣ್ಪಂಬಿವಿಂಡಿಂ ಕಜಿಂ।
ಗಿದ ನೆಯ್ದಿಲ್ಲೊಳನಂಚೆವಿಂಡನೊಳಕೊಂಡಂಭೋಜಷಂಡಂ ತಳಿ॥
ರ್ಪುದಿದೇಲಾವನವೊಡ್ಡುಗೊಂಡ ಕದಳೀಕಾಂಡಂ ತರಂಗೊಂಡ ಚೂ
ತದ ಸಾಲ್ ಚಂದನವೀಧಿ ಸಂಪಗೆಯ ಜೊಂಪಂ ಮಾಧ್ಯವೀಮಂದಿರಂ॥ ೧೧೦ ॥

1. ನಿಷಾಣ. ಕ. ಖ.
2. ಮಂಡಪ. ಕ. ಖ.

ಕಂ॥ ವನಜ ವನರಾಜಿ ಕೂಜ
ದ್ವನವಿಹಗವಿ ರಾಜಿ ಪುರ ಬಹಿಃಪುರ
ವನದೊದವು ರತಿಯ ಪೊಸಜಾ
ವನದೊದವೆನೆ ನೆಜಿಯಿ ಪೊಗಟಿಲಾವಂ ನೆಜಿವಂ ॥ ೧೧೧ ॥

ಬೇರ್ವಿಡಿದು ಕಾಯ್ತ ಪಲಶಿಳ
ನೀರ್ವೊನಲಂ ಕಜಿವ ತೆಂಗು [1]ಪೊಂಬಾಳೆಗಳಿಂ ॥
ಸೋರ್ವಡಕೆಯ ಸಸಿ ಬೆಳಗಂ
ಪೇರ್ವೆಲೆವಳ್ಳಿಗಳೆ ಸೊಗಯಿಕುಂ ಪುರವನದೊಳ್ ॥ ೧೧೨ ॥

ಅಂತು ಕಂತುಗಜ ವಿಹಾರವೀಥಿಯುಂ ಸುಕೃತ ಸುರಭಿ ಸಂಚಾರಕ್ಷೇತ್ರಮುಂ ನೇತ್ರಪುತ್ರಿಕಾ ಪ್ರಸಾಧನ ಸದನಮುಂ ಲಕ್ಷ್ಮೀಲೀಲಾಲಾಸ್ಯ ಮಾಂಗಲ್ಯರಂಗಮು ಮೆನಿಪ ಪುರ ಬಹಿಃಪುರದಿಂದೊಳಗೆ–

ಕಂ॥ ಬಡಬಾನಲಂಗೆ ಸೆಡೆದಿಂ
ಗಡಲೆ ಸರಣ್ಬೊಕ್ಕುಡಮರಶೈಲಮನೆಂಬೀ ॥
ಪಡೆಮಾತಂ ನೀರ್ಗಾದಿಗೆ
ಪಡೆಯುತ್ತುಂ ಪೊನ್ನ ಕೋಂಟೆಯಂ ಬಳಸಿರ್ಪುಂ ॥ ೧೧೩ ॥

ಚೆಂಬೊನ್ನ ಕೋಂಟೆ ಪರಿವೇ
ಷಂಬೆತ್ತೆಳನೇಸಱಂತೆ ನೀರ್ಗಾದಿಗೆಯಂ ॥
ತುಂಬಿದ ನೀರ್ವೂಗಳ ಪಲ
ವುಂ ಬಣ್ಣದಿನಾರ ಕಣ್ಣಮಂ ಸೆಜಿಗೆಯ್ಗುಂ ॥ ೧೧೪ ॥

ಮಂದರ ಕಂದರಮೆಂಬೀ
ಸಂದೆಗದಿಂ ವಿಾಜಿ ಸೂತನಂ ಕೇಜಿನಿಜ ॥
ಸ್ಯಂದನಮಂ ಕೋಂಟ್ಗೆ ಭರ
ದಿಂದೆಟಿಗುಂ ಕರ್ಚಿ ಕೀಟಿನಿನನ ಹಯಂಗಳ್ ॥ ೧೧೫ ॥

ಮುಗಿಲಟ್ಟಳಿಗಳ ಕೆಲದಂ
ಬುಗಂಡಿಯಿಂ ನುಸುಳ್ದು ನಡೆವ ದಿನಕರನ ಹಯಂ ॥
ಗಗನಾಧ್ವ ಖೇದಮಂ ಪ್ರಟಿ
ಯಿಗಳ ತಣ್ಣೆಲರ ತೀಟದಿಂ [2]ತೊಲಗಿಸುಗುಂ ॥ ೧೧೬ ॥

1. ಪೂಂಬಳಿಯಮದಂ, ಕ. ಖ. ಚ.
2. ದಾಜಿ ಚ.

ಅಂತಲಂಘ್ಯಮುಮಭ್ರಂಕಷ ವಿವಿಧಾಟ್ಟಾಲಕಮುಮನಿಷ ಕನಕ ಪ್ರಾಕಾರ ದಿಂದೊಳಗೆ—

ಚ ॥ ಭರಿದ ವಿಚಿತ್ರಪತ್ರನಿಚಯಂ, ನಿಜಲೋಚನ ಚಂದ್ರಿಕಾಪರಂ ।
ಪರೆ[1]ನಡೆನಟ್ಟು ಸೋರ್ವ ಶಶಿಕಾಂತದ ಕೇರ್ಗಳ ನೀರ್ವೊನಲ್ಗಳಿಂ ॥
ಪರೆಯೆ, ಕನಲ್ದು ಕಣ್ಗೆ ಕಿಸುಗಣ್ಣಿ ಹರಿನ್ಮಣಿಭಿತ್ತಿಭಾಗದೊಳ್ ।
ಪುರವನಿತಾಜನಂ ಬರೆಯುತಿರ್ಪುದಭಂಗುರ ಪತ್ರಭಂಗಮಂ ॥ ೧೧೭ ॥

ಒದವಿದ ತಮ್ಮ ಕಂದಳದ ಕೆಂಪುಗಳಿಂ ಗಿಳಿ ಪದ್ಮರಾಗ ರ ।
ತ್ನದ ಗಿಳಿಯಂತೆ, ತಮ್ಮ ನಯನಾಂಚಲ ಚಂದ್ರಿಕೆಯಿಂ ನವೇಂದುಕಾ ॥
ನ್ತದ ಗಿಳಿಯಂತೆ, ಕೌತುಕಮನಾಕ್ಷಣದೊಳ್ ಕುಡೆ ನೋಡಿ ನೋಡಿ ಮಾ
ಯದ ಗಿಳಿಯಿಂದೆ ಪಂಜರದೊಳಿಕ್ಕುವರೋದಿಸಲಂಜಿ ಮುಗ್ದೆಯರ್ ॥ ೧೧೮ ॥

ಲಲಿತವೃತ್ತಂ ॥ ತುಂಗ ಕುಚಕುಂಭಯುಗವಂಗಜಗಜಂ ಮೊಗವಡಂಗಳೆದುದೆನಿಸೆ
ವಿಗತಾಂಚಲಮಪಾಂಗಂ ।
ವಿಾಂಗೆಳಸುವಿಂದುಕಿರಣಂಗಳಿನೆ ಕರ್ಣಯುಗಳಂಗಳವತಂಸ ಮಣಿಯಂ
ಬಳಸೆ[2]ಘರ್ಮೋ ॥
ದಂಗಳಿರೆ ನೊಸಲೊಳೆಳೆದಿಂಗಳಮರ್ದಿನ ಪನಿಯ ಪಾಂಗನೊಳಕೊಂಡು ನ್ನಳಿ
ತೋಳ್‌ನಲಿದು ನೀಳ್ದು +
ತ್ತುಂಗಭವ ಪಾಶಮೆನೆ ಪೊಂಗದರೆವುದು ಘಟಿಯಂ ಗಡಣದಿಂ ಘಟ್ಟಿವಳ್ತಿಯರ
ತಂಡಂ ॥ ೧೧೯ ॥

ಮಃ ಸ್ರ॥ ನಜುಸುಯ್ಗಂ ಮಾಲೆಗಂ ಸೂಬಿಱಿದೆಱಿಗುವಿನಂ ತುಂಬಿಗಳ್‌ನೋಡಿದರ್ಮೆ ।
ಯ್ಮಜಿವನ್ನಂ ಬಾಹುಮೂಲಂ ಪೊಗರನುಗುಟ್ಟಿನಗ್ಗಕಣ್ಮಲರ್ ಬಳ್ಕಿಮಿಂಚಂ ॥
ಕಜಿವನ್ನಂ ಮಾಲೆವೂವಂ ನೆಗಪಿ ಸೊಗಯಿಕುಂ, ನೀಱುರೊಳ್ ಪುಷ್ಪಚಾಪಂ ।
ಗುಱಿಯೇಸಂ ತೋಱಲಂಬಂ ಪೊದೆಗೆದಱಿದವೋಲ್ ಪುಷ್ಪಲಾವೀಕದಂಬಂ ॥

ಚಂ ॥ ಸುರಪನ ವಜ್ರಮುಂ ಹರಿಯ ಕೌಸ್ತುಭಮುಂ ಹರನಿಂದುಲೇಖೆಯುಂ
ವರುಣನ ಮುತ್ತಿನೆಕ್ಕಸರಮುಂ ಗರುಡಾಂಗದ ಪಚ್ಚೆಯುಂ ಫಣೀ ॥
ಶ್ವರ ಫಣರತ್ನಮುಂ ಬೆಲ್ಲಿಗೆ ಬಿಣ್ಪಿದುವಲ್ಲಮೆನಿಪ್ಪ[2] ಪೆಂಪಿನಿಂ ।
ದೆರಡನೆಯಬ್ಧಿರತ್ನವಸರಂ ಗೆಲೆವಂದುದು ರೋಹಣಾದ್ರಿಯಂ ॥ ೧೨೧ ॥

118, 119—ಈ ಪದ್ಯಗಳು ಗ, ಘ ಗಳಲ್ಲಿಲ್ಲ.

1. ನಡೆವಟ್ಟು. ಕ. ಖ. (ಗಳವಟ್ಟು. ಘ.)

2. ರತ್ನ ದಿಂದೆರಡನೆಯಬ್ಧಿಯನ್ನ.

ಮ॥ಸ್ರ॥ ವನಜಂ ಪಂಕ್ರಾಂಕಿತಂ ಗೋವಳಿತಿಯ ಮೊಲೆಯೊತ್ತಿಂಗೆ ಘಕ್ಕಾಯ್ತು ಗೋವ
ರ್ಧನ ವಕ್ಷೋಭಾಗವೌರ್ವಜ್ವಲನ ಬಹುಲ ಧೂಮಾಕುಲಂ ಪಾಲ ಮುನ್ನೀ ॥
ನಪಾಯಸ್ಥಾನಮೆಂದಾ ಪುರವರದ ವಣಿಗ್ವಾಟ ಹರ್ಮ್ಯಂಗಳೊಳ್ ಮು ।
ನ್ನಿನ ಸಂಚಾರಸ್ಯಭಾವಂ ಪಱುಪಡೆ ಪದ್ಮಿಪಿಂ ಲಕ್ಷ್ಮಿ ನಿಶ್ಚಿಂತಮಿರ್ಪಳ್ ॥೧೨೩॥

ಕಂ॥ ದಿವಿಜ ವಿಮಾನಂ ಮಾಡದ
ಫಿವು ಮಾಡಿದುವೆಂಬ ಭೇದಮಲ್ಲದ್ದೆಜೆಲ್ವಿಂ ॥
ನವರತ್ನರಚನೆಯಿಂ, ಭೇ
ದವಿಲ್ಲ, ತತ್ಪುರದ ಭವನಮೆನಿತನಿತಜೊಳಂ ॥೧೨೪॥

ಇರುಳುಂ ಪಗಲುಂ ಪುರದೊಳ್
ಬೆರಸಿರ್ಪುವು ಪದ್ಮರಾಗಗೃಹದೆಳವಿಸಿಲಿಂ,॥
ಹರಿನೀಲಗೃಹದ ತಮದು
ಬ್ಬರದಿಂ, ಶಶಿಕಾಂತಗೃಹದ ಚಂದ್ರಾತಪದಿಂ, ॥೧೨೫॥

ಶಿಲ್ಪಿ ಗಡ ಕಲ್ಪಪತಿಸಂ
ಕಲ್ಪಂ ರತ್ನೋಪಲಂದಳಂ ಗಡ ಶೋಭಾ ॥
ತಲ್ಪಮಿದೆನ್ನದೆ ಬೇಱೆ ವಿ
ಕಲ್ಪಿಸುವನೆ ಗಾಂಪನೆನಿಸುಗುಂ ಕರುಮಾಡಂ ॥೧೨೬॥

ನೆಲೆಮಾಡದ ಪೊಸದೇಸಿಯ
ನೆಲೆ ನೂಡದ, ಕಲ್ಪಸದನಮೆಯ್ದಣಂ
ನೆಲೆಯಾದುದಿದಱ ತೆಱದಿಂ
ನೆಲೆಯಾದುದೆ ಸಕಲಜನದ ಕಣ್ಗಂ ಮನಕಂ ॥೧೨೭॥

ಉ॥ ಬಾಳತೃಣಂಗಳೆಂದೆಳಸುಗುಂ ಪಸುರ್ಗಲ್ಲಳ ಕಾಂತಿಯಂ ಮೃಗೀ ।
ಜಾಳಕಮಲ್ಲಿ ಮಾಣಿಕದ ಕೆಂಬೊಳಪಂ ಬಿಸಿಲೆಂದು [1]ನಟ್ಟಿರುಳ್
ಮೇಳಿಸುಗುಂ ರಥಾಂಗಮಿಱಲಿಕ್ಕಿದ ಮುತ್ತಿನ ಸೂಸಕಂಗಳಂ ।
ಬಾಳಮೃಣಾಳಮೆಂದು ಕರ್ದುಕಲ್ ಬಗೆಗುಂ ಕಲಹಂಸ ಪೋತಕಂ ॥೧೨೮॥

ಚಂ॥ ಗಿಳಿ ಗಿಳಿನೆಣ್ಗೆ ಚೂತ್ತಫಲಮಂ, ಕಲಹಂಸಿಗೆ ಹಂಸನಬ್ಜಕಂ ।
ದಳಮಳಿಭಂ ಕರೇಣುಗೆ ಲವಂಗ ದಳಂಗಳಳೀವ [2]ಚಿತ್ರಮಂ ॥
ತಳೆದು ವಿಲಾಸಮಂ ಮೆಱಿವ ರಾಣಿಯುವಾಪದ ಬಳ್ಳಿಮಾಡದು ।
ಜ್ವಳ ಮಣಿಭಿತ್ತಿ ಜೆಲ್ವನೊಳಕೊಂಡೊಳಕೊಂಡುದಪೂರ್ವ ಭಿತ್ತಿಯಂ ॥೧೨೯॥

1. ಕಟ್ಟಿರುಳ್. ಕ. ಖ.
2. ಭಾವಮಂ. ಗ. ಘ.

ಕಂ ॥ ಬೆರಲಂ ಮಿಡಿಯಿಪ್ಪ ಪುಲಕಾಂ
ಕುರಮಂ ಪುಟ್ಟಿಸುವನ್ನೋಡೆ ತಲೆದೂಗಿಪ್ಪಸುಂ ॥
ದರಮೆನಿಪ ಕುಸುರಿವೆಸದಿಂ
ದರಮನೆ ಮಾಟ್ಟುದು ಮಯಂಗಮತಿವಿಸ್ಮಯಮಂ ॥ ೧೬೯ ॥

॥ ನೆರೆದಿರ್ಪರ್ ಚತುರಾನ್ನನರ್ ಪಲಬರ್ನ್ನೋಳ್ ರ್ನ್ನಾಜಭಾಧಾಪರಂ ।
ಪರೆಯುಂ ಕಂಟಕರಾಜಿಯುಂ ರಜಮುಮೆನ್ನೋಳ್ ಪೊರ್ದವೆನ್ನೋಳ್ ನಿರಂ ॥
ತರಮೊಪ್ಪಂ ಕಿಡದೆಂದು ನಾಭಿಕಮಲಾವಾಸಂ ಪುರಂ ನಾಭಿಪಂ ।
ಕರುಹಕ್ಕೀವುದು ನೀಲರತ್ನಗೃಹಕಾಂತಿ ಧ್ವಾಂತದಿಂ ದೈನ್ಯಮಂ ॥ ೧೩೦ ॥

ಅಂತತಿಶಯವೆನಿಪಯೋಧ್ಯಾ ಪುರದಧಿಪತಿ—

॥ ಮನುಚೂಡಾಮಣಿ ನಾಭಿ! ನಾಭಿಸುತನಾದಿಬ್ರಹ್ಮನಾ ಬ್ರಹ್ಮನಂ ।
ದನ ನಾರ್ಗಂ ಮಿಗಿಲಾದನಾದಿಭರತಂ ಷಟ್ಖಂಡ ಭೂನಾಥನಾ ॥
ಮನುಜೇಂದ್ರಾತ್ಮಜನರ್ಕಕೀರ್ತಿ ನೆಗಟ್ಟಂ । ತದ್ವಂಶಮತ್ಯಂತ ಪಾ ।
ವನಮತ್ಯುನ್ನತಮಾಯ್ತು ಸದ್ಗುಣ ಪತಾಕಾವಂಶಮೆಂಬನ್ನೆಗಂ ॥ ೧೩೧ ॥

॥ಸ್ರ॥ ನೆಲನಂ ಮರ್ಯ್ಯದೆಯಿಂ ಪಾಲಿಸಿ ನಿಯಮಿಸಿ ವರ್ಣಾಶ್ರಮಾಚಾರಮಂ ದೋ।
ಷ ಲವಂ ಮೆಯ್ವೆರ್ಚದಂತಿಂದ್ರಿಯ ಸುಖದೊದವಂ ತೀರ್ಚಿ ಸಾಮ್ರಾಜ್ಯದೊ
ಳ್ಮು ।
ನ್ನಲಿಥಲ್ಲಿಂದತ್ತಲಾತ್ಯಂತಿಕ ಸುಖಪದಮಂ ಪೆತ್ತ ರಾಜಾಧಿರಾಜರ್ ।
ಪಲರಿಂದಿಕ್ವಾಕುವಂಶಂ ಕುಲನದಿಯವೊಲಾಯ್ತವ್ಯವಚ್ಛಿನ್ನರೂಪಂ ॥೧೩೨॥

ಕಂ ॥ [1] ಮನುನಾಭಿ ನರೇಂದ್ರನಿನ್ನಿ
[2] ತ್ತನುಕ್ರಮಂಗಿಡದೆ ಪೆರ್ಚುವಡೆದಾ ವಂಶಂ ॥
ಮುನಿಸುವ್ರತ ಜಿನಪತಿ ವರ
ವ್ಮನೂನಮಾದತ್ತುದಾತ್ತ ಶಾಖಾಕೇಣ

ಕ್ಷಿತಿನಾಥಂ ತನ್ಮನಿ ಸು
ವ್ರತನಾಥನ ಕಾಲದಂದು ತದ್ವಂಶದೊಳ ।
ಪ್ರತಿಮಂ ವಿಜಯರಥಂ ತ
ತ್ಸತಿ ಹೇಮಲತಾಂಗ ಹೇಮಮಾಲಿನಿ ಯೆಂಬಳ್ ॥ ೧೩೪ ॥

---

1. ಜನಿಯಿಸನಾಭಿನರೇಂದ್ರನ
2 ನನು. ಗ. ಘ.

ಕಂ ॥ ವಿಜಿಗೀಷುವೃತ್ತಿಯಿಂ ಭೂ
ಭುಜರಂ ಬೆಸಕೆಯಿಸಿ ಕೊಂಡು ಭೂಮಂಡಲಮಂ ॥
ಭುಜದಂಡದೊಳಿರಿಸಿದನೇ
ನಜಯ್ಯಭುಜಬಲನೋ ವಿಜಯರಥ ನರನಾಥಂ ॥ ೧೩೫ ॥

ಆ ನರೇಂದ್ರನ ನಂದನಂ—

ಕಂ ॥ ಜಿತರಿಪು ಸುರೇಂದ್ರಮುನ್ಯ
ಕ್ಷಿತಿಪತಿ ರಿಪುನೃಪಕುಲಾಂಗನಾಜನಮುನ್ಯಾ ॥
ದ್ಧತಬಾಷ್ಪ ಸಲಿಲಧಾರಾ
ಪ್ರತಾನದಿಂ ಕೀರ್ತಿವಲ್ಲಿಯಂ ಬೆಳೆಯಿಸಿದಂ ॥ ೧೩೬ ॥

ಆ ವಿಶದಕೀರ್ತಿಗೆ ಕೀರ್ತಿಶ್ರೀಯೆಂಬಳರಸಿಯಾಗೆ—

ಕಂ ॥ ಆಂದಮುದಟಲೆಯೆ ಮನಸಿಜ
ನಂದಮನಳವಳವಿಗಳ್ದು ಕೇಸರಿಯಳವಂ ॥
ಬೆಂದಗುಳೆ ವಜ್ರಬಾಹು ಪು
ರಂದರರೆಂಬಿರ್ವರವರ್ಗೆ ನಂದನರಾದರ್ ॥ ೧೩೭ ॥

ಕಡಿದು ವಿಪಕ್ಷಮನಿಂದ್ರಂ
ಕಡಿದಂತೆ ಕುಲಾದ್ರಿಪಕ್ಷಮಂ ತೋಳ್ವಲಮಂ ॥
ಪಡೆದಂ ಪರಪ್ರತಾಪಂ
ಪೊಡಪರ್ಪುಗಿಡುವಂತೆ ವಜ್ರಬಾಹು ಕುಮಾರಂ ॥ ೧೩೮ ॥

ಪರಪುರಮನ್ನುರಿಪಿ ದಸೆಗ್ಗುರಿ
ವರಿವಿನೆಗಂ ತನ್ನ ತೇಜಮುರಿನೃಪವದನಾಂ
ಬುರುಹಂ ಕರಿಂಕುವರಿದಿರೆ
ಪುರಂದರಂ ನೃಪಪುರಂದರಂ ಪೊಗಟಿಸಿದಂ ॥ ೧೩೯ ॥

ಮಗನೊರ್ವಂ ತನಗೊರ್ವರ್
ಮಗಂಗೆ ಸುತರಾಗೆ ಮೂಜುಕಣ್ಣಿನೆ ಮೂಜುಂ ॥
ಜಗಮಂ ತನಗೆಱಗಿಸಿದಂ
ತ್ರಿಗುಣಿಸೆ ತನ್ನೊಳ್ಮನೋರಥಂ ವಿಜಯರಥಂ ॥ ೧೪೦ ॥

ಚಂ॥ ವಿಜಯರಥಂ ಧರಿತ್ರಿಗೆ ಮನೋರಥ ಸಿದ್ಧಿಯನಿತ್ತು ವಕ್ತ್ರಪಂ।
[1]ಕಜ ವರರಾಜಹಂಸವಧು ವಾಗ್ವಧು ರಂಜಿಸೆ ತನ್ನ ಕೀರ್ತಿ ದಿ ॥
ಗ್ಗಜ ರದನಕ್ಕೆ ಕೀರ್ತಿಮುಖವಾಗೆ ಜಗಜ್ಜನಕಂಠಭೂಷಣಂ।
ನಿಜಗುಣನಾಮವಾಗಿರೆ ವಿರಾಜಿಸಿದಂ ಕವಿತಾಮನೋಹರಂ ॥

ಇದು ಪರಮಜಿನಸಮಯ ಕುಮುದಿನೀ ಶರಚ್ಚಂದ್ರ
ಬಾಲಚಂದ್ರ ಮುನೀಂದ್ರ ಚರಣ ನಖ ಕಿರಣ
ಚಂದ್ರಿಕಾ ಚಕೋರ ಭಾರತೀ ಕರ್ಣಪೂರ-
ಶ್ರೀಮದಭಿನವಪಂಪ ವಿರಚಿತಮಪ್ಪ
ರಾಮಚಂದ್ರಚರಿತಪುರಾಣದೊಳ್
ಪೀಠಿಕಾ ಪ್ರಕರಣಂ
ಪ್ರಥಮಾಶ್ವಾಸಂ.

ಕಂ ॥ ಶ್ರೀಯಂ ವಿತರಣದೊಳ್, ವಾಕ್
ಶ್ರೀಯಂ ರಾಜನ್ಯವೃತ್ತಿಯೊಳ್, ವಿಮಲಯಶ ॥
ಶ್ರೀಯಂ ಜಿನಪ್ರವಚನ
ಶ್ರೇಯದೊಳತಿಶಯಿಸಿ ನೆಗಪ್ಪನಭಿನವಪಂಪಂ ॥ ೧ ॥

ಆ ವಿಜಯನರನಾಥನೊಂದು ದಿವಸ ವೊಡ್ಡೋಲಗಂಗೊಟ್ಟಿರ್ದುದುಂ—

ಮ ॥ ಸಕಲಕ್ಷತ್ರಕಿರೀಟತಾಡಿತ ಪದಾಂಭೋಜಾತನಾಸ್ಥಾನ ವೇ ।
ವಿಕೆಗ್ಗುತ್ತಾನಿತ ಚಿತ್ರವೇತ್ರಲತನೂರ್ವಂ ಕಾರ್ಯವಿಜ್ಞಾಪನೋ ॥
ತ್ಸುಕಚಿತ್ತಂ ಧವಲೋತ್ತರೀಯವಸನಂ ಲಂಬೋದರಂ ಲಂಬಕೂ ।
ರ್ಚಕಲಾಪಂ ಸಿತಕಂಚುಕಂ ತ್ವರಿತದಿಂ ಬಂದಂ ಪ್ರತೀಹಾರಕಂ ॥

ಅಂತು ಬ್ಬಂದು ಮೊಗಸಾಲೆಯೊಳ್ಮೈಯ್ಯಿಕ್ಕಿ ಮೊಗಸುತ್ತಿನ ದುಗುಲದ ಬಿನ್ನ ಪದ ಸೆಱಗನಧರಪಲ್ಲವಕ್ಕೆ ತೆಗೆದು, ದೇವ! ನಾಗಪುರಮನಾಳ್ವಿಭವಾಹನನ ತನೂಭವನುದಯಸುಂದರಕುಮಾರನರಮನೆಯ ಬಾಗಿಲೊಳ್ಬಂದು ನಿಂದಿರ್ದಪನೆಂದು ಬಿನ್ನವಿಸೆ ಬರವೇೞಿಂಬುದುಂ—

ಮ ॥ ಸ್ರ ॥ ದಿವದೊಳ್ಬೆಳ್ದಿಂಗಳಂ ಬಿತ್ತರಿಸೆ ತ್ವರ್ಲ್ಲಮುಕ್ತಾವತಂಸಪ್ರಭಾ ಪ
ಲ್ಲವಮಾಕಾರಂ ಸ್ಮರಾಕಾರಮನಜನಿಸೆ ಪೊಕ್ಕಂ ನೃಪಾವಾಸಮಂ ವಾ ॥
ಸವಸೌಂದರ್ಯಂ ಧರಾವಲ್ಲಭಸುಭಗ ಸಭಾಲೋಕನಾಕರ್ಷಣಂ ಮಾ ।
ಡೆ ವಿಶಾಲೋರಸ್ಸ್ಥಲೀ ನಿಸ್ತುಲ ಚಕಚಕಿತ ಸ್ಫಾರಹಾರಂ ಕುಮಾರಂ ॥ ೩ ॥

ಕಂ ॥ ಕತಿಪಯ ಪರಿಜನ ಪರಿವೃತ
ನತಿಲಲಿತಾಕೃತಿ ಸಿತಾತಪತ್ರದ ನೆೞಲೊಳ್ ॥
ಸಿತ ಶತಪತ್ರಚ್ಛಾಯಾಂ
ಚಿತ ಬಾಲ ಮರಾಲ ಲೀಲೆಯಂ ಪಾಲಿಸಿದಂ

ಅಂತು ಬಂದು ನೃಪಸಭಾಸದನಮಂ ಪೊಕ್ಕು—

ಕಂ ॥ ಓಲಗಿಸಿ ವಸ್ತುವಾಹನ
ಮಾಲೆಯನುತ್ತುಂಸ ಮಣಿ ಮರೀಚಿಗಳಿಂ ಭೂ ॥
ಪಾಲನ ಚರಣಸರೋಜ
ಕ್ಕೋಲಗಿಸಿದನುದಯಸುಂದರಂ ತಣ್ಣಿಸಿಲಂ ॥ ೫ ॥

ಅಂತು ವಿನತನಾದನಂತರಂ ಸುರೇನ್ದ್ರಮನ್ಯು ವಜ್ರಬಾಹು ಪುರಂದರರೊಳಂ ವಿನಯವೃತ್ತಿಯಂ ಮೆಱೆದು ಸಮುಚಿತಾಸನದೊಳ್ ಕುಳ್ಳಿರ್ದು ಮುಕುಲಿತಾಂಜಲಿಪುಟನಾಗಿ—

ಮ ॥ ಸಕಲಕ್ಷತ್ರಪವಿತ್ರ ನಿನ್ನ ಚರಣಾಂಭೋಜಾತ ಸೇವಾಸಮು।
ತ್ಸುಕನಸ್ಮತ್ಪಿತೃನೆನ್ನ ತಂಗೆಯನನಂಗಶ್ರೀನಟೀನಾಟ್ಯವೇ ॥
ದಿಕೆಯಂ ತನ್ನ ಮಗಳ್‌ಗುಣೋದೆಯನನಂಗೋನ್ನಾದೆಯಂ ವಜ್ರಬಾ।
ಹು ಕುಮಾರಂಗಿಭವಾಹನಂ ಮದುವೆಮಾಱ್ಪುತ್ತಾಹದಿಂದಟ್ಟದಂ ॥ ೬ ॥

ಎಂದು ಬಿನ್ನವಿಸೆ ವಿಜಯರಥ ಮಹೀನಾಥನುದಯಸುಂದರನ ಮುಖಾರವಿಂದಮಂ ನೋಡಿ—

ಉ ॥ ಕನ್ಯಕೆ ವಜ್ರಬಾಹುಗನುರೂಪೆ ಗಡಂ ಕುಡುವಂ ಗಡಂ ಜಗ।
ನ್ಮಾನ್ಯನೆನಿಪ್ಪುದಾತ್ತನಿಭವಾಹನವಲ್ಲಭನಿಂತಿದನ್ಯ ಸಾ ॥
ಮಾನ್ಯಮೆ ನಮ್ಮ ಕೊಳ್ಕೊಡೆಗೆ ತಕ್ಕೆಡೆಯಂ ಸಮಕಟ್ಟ ಕೊಟ್ಟನ್ನೇಂ
ಧನ್ಯನೊ ಧಾತ್ರನೆಂದು ನುಡಿದಂ ಪ್ರಿಯಮಂ ವಿಜಯಾಂಗನಾಪ್ರಿಯಂ ॥ ೭ ॥

ಕಂ ॥ ಅಧಿರಾಜಂ ವದನಾಂಬುಜ
ಮಧುವೆನಿಸಿದ ಮಧುರ ವಚನದಿಂ ತಣಿಪೆ ನುನೋ ॥
ಮಧುಕರಮನುದಯಸುಂದರ
ನಧಿಕೋತ್ಸವ ರಸತರಂಗಿತಾಶಯನಾದಂ ॥

ಅಂತಾತನಂ ಸಂತೋಷಂಬಡಿಸಿ ವಿಜಯರಥಂ ವಿವಾಂಗಳೋಪಕರಣ ಪುರಸ್ಸರಮಾಶೀರ್ನಿನದಮೊದವೆ ಶುಭದಿನ ಮುಹೂರ್ತದೊ

ಕಂ ॥ ಓರನ್ನರೆನಿಪ ರಾಜಕು
ಮಾರಕರೊಡನೇಱಿ ವಜ್ರಬಾಹುಕುಮಾರಂ।
ವಾರಣಮನೇಱಿದಂ ದಿ
ಗ್ವಾರಣಮಂ ದಿಕ್ಕುಮಾರರೇಱುವ ತೆಱದಿಂ ॥

1. ನೆಂದನ್ಯನೊ ದಾತ್ರನೆಂದು. ಕ ಖ. ಚ. ನೆಂದುನ್ನತಚಿತ್ತನೊಪ್ಪು.

ಪಟುಪಟಹ ಶಂಖ ರುತಿ ದಿ
ಕ್ತಟಮಂ ತಳ್ಪೊಯ್ಯೆ ಗಂಡವುಂಡಲತಟದೊಳ್ ॥
ನಟಿಯಿಸೆ ಮಣಿಕುಂಡಲ್ಲ ರುಚಿ
ಪಟಲಂ ನ್ನಪನಣೆದ್ದು ನೂಂಕಿದಂ ವಾರಣಮಂ ॥ ॥ ೧೦ ॥

ಮ ॥ ಎರಡುಂಪಕ್ಕದೆ ಪಣ್ಣಿದ್ದೋಜೆವಿಡಿಯಂ ಕೈಗೆಯ್ದು ಬಂದಿಜ್ಜಾ ಸಾ
ಮರಮಂ ಕನ್ನೆಯರಿಕ್ಕೆ ಲೋಹಖುರವಾಹಂ ಸುತ್ತಿ ಕಾಲ್ಗಾಪಿನೊಳ್
ಬರೆ ಬಂದಂ ಧವಳಾತಪತ್ರದಡಿಯೊಳ್ ಕಾಲ್ತೋದ್ದು ಗಂಧಾಂಧ ಸಿಂ।
ಧುರಮಂ ಮೆಯ್ಗಲಿ ನಜ್ರಬಾಹುಮಹಿಪಂ ವಜ್ರಾಯುಧಂ ಬರ್ಪವೋಲ್॥೧೧॥

ಕಂ॥ ಕೆಲಕೆಲದೊಳ್ ರಾಜಸುತರ್
ಕೆಲಬರ್ ಬರೆ ರಾಜಚಿಹ್ನ ಪ್ರಾಳಿಧ್ವಜ ಸಂ ॥
ಕುಲಮುಂ ಭಟಕಟಕಮುಮೊ
ದಲ್ಗೆಯೊಳ್ಳರೆ ವಜ್ರಬಾಹು ಪಯಣಂಬಂದಂ ॥ ೧೨ ॥

ಅಂತು ಬರುತ್ತುಂ—

ಮ ॥ ಮುಗಿಲಂ ಮುಟ್ಟಿದ ರತ್ನಕೂಟರುಚಿಯಿಂ ಜ್ಯೋತಿರ್ವಿಮಾನಂಗಳಂ ।
ನಗುವಂತಿರ್ದುತ ನಿರ್ಝರಪ್ಲವನದಿಂ ಗಂಗಾಸ್ಮರ್ಬ್ಬಾಪ್ಲಾರಮ್ಮಂ ॥
ನಗುವಂತನ್ನತಿವೆತ್ತ ಕಲ್ಪತರು ಸಾನೋದ್ಯಾನದಿಂ ಮೇರುವಂ ।
ನಗುವಂತೊಪ್ಪುವುದಂ ವಸಂತಗಿರಿಯಂ ಕಂಡಂ ಮಹೀಮಂಡನಂ

ಆ ವಸಂತಗಿರಿಯೊಳೆಡೆಯಾಡುವ ವಿದ್ಯಾಧರ ವಧೂಜನದ ಸೋರ್ಮುಡಿಯಿಂ ಸೂಸಿದ ಪೊಂಗೇದಗೆಯ ಕುತ್ತುಂಗಜಿಯ ತ್ತುಜುಂಗಲತೆಯಂ, ಸಿದ್ಧ ಕಾಮಿನಿಯರ ಕಪೋಲಪತ್ರದಿಂ ಮದನಕೇಳಿಯೊಳುದಿರ್ದ ಕತ್ತುರಿಯುಮಂ, ಕನಕ ಕದಳೀದಳದ ಪತ್ರಭಂಗಂಗಳುಮಂ, ಕಿಂಪುರುಷ ದ್ವಂಪತಿಗಳ್ಗೆ ಸುರತಕೋಲಾಹಲದಿಂದನಂಗ ಸಂಗೀತಕ ಸದನನೆನಿಸುವೆಳಲತೆಯ ಜೊರಪಂಗಳುಮಂ, ಕಿನ್ನರ ನಿತಂಬಿನಿಯರ್ ಚೆಂಬೊನ್ನಶಿಲೆಯ ಮೇಲೆ ವಿರಚಿಸಿದ ಚೆನ್ನೆಯ್ದಿಲೆಸಳ ಪಸೆಗಳುಮಂ, ಗಂಧರ್ವಗಣಿಕೆಯರ ಬಹುಳಪರಿಮಳಕ್ಕೆಳಸಿ ಬಳಸುವೆಳದುಂಬಿಗಳ ನಾದಕ್ಕೆ ಬೆರ್ಚಿ ಬಿಸುಟ ಕರ್ಣಪೂರ ಪಾರಿಜಾತ ಸ್ತಬಕ್ಕಗಳುಮಂ, ಓರೊಂದೆಡೆಯೊಳ್ ಕೆಸುಸಂಜ್ಞೆಯ್ಯುಂ ಪಸರಿಸುವ ಕೆಸುಗಲ್ಲ ಕೂಟಂಗಳುಮಂ, ಓರೊಂದೆಡೆಯೊಳಂಧಕಾರಮಂ ಕೆದಱುವಿಂದ್ರನೀಲದೊಡ್ಡುಂಗಲ್ಲುಗಳುಮಂ, ಅಲ್ಲಿಗಲ್ಲಿಗೆ ನಿರ್ದ್ರವಜಲದ್ಯುತಿಯನೊಡರಿಸುವ ವೈಡೂರ್ಯಶಿಖರಂಗಳುಮಂ, ಅತ್ತಲಿತ್ತ ಲೆಳವೆಳ್ದಿಂಗಳಂ ಬಿತ್ತರಿಸುವ ಚಂದ್ರಕಾಂತದ ಪಾಸಱೆಗಳುಮಂ, ಎಲ್ಲದೆಸೆಗಂ ತಣ್ಪಿಸಿಲಸವಟಯಿಸುವ ವಜ್ರಶಿಲಾತಲಂಗಳುಮಂ, ಬೇಱೆವೇಱೆ ಮಾಣಿ

ಕದ ಪೊಳಪು ಮುಟ್ಟಿ ಕೆಡಿಯಿಡುವ ಸೂರ್ಯಕಾಂತದ ಶಿಲೆಗಳುಮಂ ಅತಿಕುತೂಹಲದಿಂ ನೋಡುತ್ತೆ ಮುಟ್ಟಿಬರ್ಪ ಸಮಯದೊಳ್ ತೊಟ್ಟನೆ ಕಟ್ಟಿದಿರೊಳ್.

ಮ॥ ಸ್ರ॥ ಮನಮುಂ ಮುಟ್ಟಿಸಿ, ಮಧ್ಯಂದಿನದ ಬಿಸಿಲೆ ಬೆಳ್ದಿಂಗಳಂತಾಗೆ, ತನ್ನಿಂ।
ತನುವಂ ಬೇರ್ಕೆಯ್ದು ಬಾಹ್ಯೇಂದ್ರಿಯಮನುಡುಗಿ, ಕೈಯಿಕ್ಕಿ ನಿರ್ವಾಣಸಾಮ್ರಾ॥
ಜ್ಯ ನಿವಾಸಕ್ಕೊರ್ವನಂತರ್ಮುಖಶುಭಮುಖನಾದಿತ್ಯಬಿಂಬಕ್ಕೆ ಯೋಗೀಂ।
ದ್ರನತಂದಂ ನಿರ್ಸಿ ಮೇಷಂ ನಗನಿಕಟ ಹಟದತ್ನಕೂಟಂಬೊಲಿರ್ದಂ॥ ೧೪ ॥

ಅಂತಾಮಹಾತಿಥಿ ನಯನಾತಿಥಿಯಾಗಿರ್ಪುದುಂ—

ಕಂ ॥ ಮುಗಿದುವು ಕರಕಮಲಂಗಳ್,
ಬಗೆಯಿಂ ಮುಂಬರಿದು ಮುನಿಮುಖಾಂಬುಜಮಂ ತುಂ ॥
ಬಿಗಳಂತೆ ಮುಸುಱಿದುವು ದಿ
ಟ್ಟಗಳ್ನೀನಭಿನುತನೊ ವಜ್ರಬಾಹುಕುಮಾರಂ ॥ ೧೫ ॥

ದಾರುಣ ಸಂಸರಣ [1]ವಿಷೋ
ರ್ವಿರುಹಮಂ ಕೀಲ್ವಿ ಬವಸೆಯಿಂದಿರ್ದಪನೀ ॥
ಧೀರನೆನುತ್ತುಂ ರಾಜಕು
ಮಾರಕ್ಕನಾಮುನಿಯ ಬಗೆದ ಬಗಯಂ ಬಗದಂ ॥ ೧೬ ॥

[2]ದಿನಮುಖದರ್ಶನದಿಂ ತೊ
ಟ್ಟನೆ ಕಲ್ತಿಲೆ ಪಿಂಗುವಂತೆ ಮುನಿಪತಿ ಮುಖ ದ ॥
ರ್ಶನದಿಂ ಚಿತ್ತದ ಕಲ್ತಳಿ
ಜನಪತಿಗೊರ್ವೊದಲೆ ಪಿಂಗಿಪೋದತ್ತಾಗಳ್ ॥ ೧೭ ॥

ಏನಯ್ಯಾ ಖಡ್ಗಧಾರೆಯ
ಜೇನೆಯ್ಯಂ ನಕ್ಕುವಂತೆ, ಸಂಸಾರಸುಖ
ಕ್ಕಾನಳಿಪ ವಿಷಯಲೋಭದಿ
ನೇನಸ್ತಂತಾನಮೆನ್ನನ್ನೇನ್ನಲಿಸದೋ ॥ ೧೮ ॥

ಎಂದು ತಱಿಸಂದು ಮನದಱಿಕದಿಂದವಲೋಕಿಸುತ್ತಿರ್ಪುದುಮುದಯ ಸುಂದರಂವಜ್ರಬಾಹುಕುಮಾರನ ಮುಖಾರವಿಂದಮಂ ನೋಡಿ—

---

1. ಮಹೋ. ಕ. ಖ. ಗ ಘ.
2. ಇನ. ಗ. ಘ.

ಉ॥ ಭಾಮ ಮುನೀಂದ್ರರಂ ಬಿಡದೆ ನೋಡಿದಪೈ ಮನವೊಲ್ದೊಡಂ ತಪ।
ಶ್ರೀವಧು ಕಾಮಿನೀಜನದವೋಲ್ ನಿನಗೀವಳೆ ಕೂರ್ತು ವಸ್ತ್ರಭೂ।
ಷಾವಳಿಯಂ ಕಚಾವಳಿಯ ಭೂವಧು ಗರ್ವದ ಗಾಳು ವಸ್ತ್ರಭೂ।
ಷಾವಳಿಯಂ ಕಚಾವಳಿಯನಿತ್ತರನಲ್ಲದೆ ಪೊರ್ದಲೀವಳೇ

ಎಂದು ಸರಸಮಂ ನುಡಿದೊಡರಸನುದಯಸುಂದರಂಗೆಂದನಾಂ ತಪಮುಂ ಕೈಕೊಂಡೊಡೆ ನೀನೇಗೆಯ್ವೆಯೆನೆ ನಿನ್ನೊಡನಾನುಂ ತಪಮುಂ ಕೈಕೊಳ್ವೆನೆಂಬುದುಂ—

ಪೃಥ್ವಿ॥ ಒಡಂಬಡಿಸಿ ವಾಗ್ವಿಡಂಬನದಿನಾತನಂ ಬಂಧಮುಂ
ಪಡಲ್ವಡಿಪ ಬೇಗದಿಂದಿಱಿದು ವಾರಣಸ್ಕಂಧದಿಂ॥
ತೊಡರ್ಪಱಿದ ವನ್ಯವಾರಣದ ಮಾಟಿಕ್ಕಿಯಿಂದೇಱಿದಂ
ತೊಡರ್ದನಿನಿಸಾನುವಂ ಬಗೆಯದಾಕುಭೃತ್ಸಾನುವಂ ॥ ೨೦ ॥

ಆಗಳಾತನ ಮನದ ತಱಿಸಲವಂ ಕಂಡು—

ಕಂ॥ ನಗೆ ದಿಟವಾದೊಡೆ ನಾಡೆಯು
ಮಗಿದು ಸುಹೃಜ್ಜನಮುಮುದಯಸುಂದರನುಂ ಕೈ
ಮುಗಿದೆಱಗೆ ಮಾಣ್ಬನಲ್ಲಿಂ
ಬಗೆಯದಿರಿಂ ಪೆಱತನೆಂದು ಪಱಿಪಡೆ ನುಡಿದಂ ॥ ೨೧ ॥

ಈ ಮುನಿಯುಮ್ಮನೀಮನಮುಮ
ನ್ನೀನೆಯ್ಯುಮನ್ನೀಮನುಷ್ಯಗತಿಯುಮನಾಂಮು॥
ನ್ನೇಮಾತೊ ಪಡೆದೆನಿಲ್ಲೀ
ಸಾಮಗ್ರಿಯೊಳಪ್ಪುಕೆಯ್ವೆನಘವಿಘಟನಮಂ ॥ ೨೨ ॥

ಎಂದು ಮನದ ಪರಿಚ್ಛೇದಮಂ ನಾಲಗೆಗೆ ತಂದು ಪರಿಜನಮನೊಡಂಬಡಿಸಿ—

ಉ ॥ ಕರ್ವಿನ ಬಿಲ್ಲನಿಕ್ಕಿ ಭಯದಿಂ ಮದನಂ ಪರಿದೇಱಿ ಪುತ್ತನಾ
ಪರ್ವತಮಂ ನರೇಂದ್ರಸುತನೇರಿ ವಿರಾಜಿತಕೇಶಪಾಶಮಂ
ಪರ್ವಿದ ಮೋಹಪಾಶದೊಡನೊರ್ಮೊದಲೊಳ್ ಪಱಿದಿಕ್ಕಿದಂ ಜಸಂ
ಪರ್ವುವಿನಂ ಜಗತ್ತ್ರಯಮನಾ ಮುನಿಮುಖ್ಯನ ಪಾದಪಾರ್ಶ್ವದೊಳ್

ಅಂತು ವಜ್ರಬಾಹುಕುಮಾರಂ ಗುಣಸಾಗರಭಟ್ಟಾರಕರ ಚರಣೋಪಾಂತದೊಳ್ ತಪಶ್ಚರಣ ನಿರತನಪ್ಪುದುಂ—

ಕಂ॥ ಎನ್ನೊಡವಂದಂತಕನಂ
ಬೆನ್ನಟ್ಟಲೊಡರ್ಚಿದಂ ಜಿತಾತ್ಮ್ಯಂ ಸೆಡೆದಂ ॥
ದೆನ್ನ ಜಸಮಟ್ಟಿಗುನ್ಮೆನಗದೆ
ಬನ್ನಂ ಬನ್ನಕ್ಕೆ ಬೇರೆ ಕೋಡೆರಡೊಳವೇ ॥ ೨೪ ॥

ಎಂದುದಯಸುಂದರನುಂ ಪರಿಚ್ಛೇದಿಸಿ ತನ್ನೊಡನೆ ತಪಕ್ಕೆ ತಱಿಸಂದಿರ್ಪತ್ತು ಮೂವರರಸುಮಕ್ಕಳ್ ವೆರಸು ತಪೋನಿಧಿಯ ಸನ್ನಿಧಿಯೊಳ್ ಜಾತರೂಪಧರನಪ್ಪುದುಂ–

ಕಂ॥ ಅಗ್ರಜನೊಳಾದ ಜಿನದೀ
ಕ್ಷಾಗ್ರಹಣಮನನುಜೆ ಕೇಳ್ದು ತಾನುಂ ಜಿನದೀ ॥
ಕ್ಷಾಗ್ರಹಮಂ ಪಡೆದಳ್ ಲ
ಬ್ಧಿಗ್ರಹಣದಿನೊಳ್ಪವಡೆವುದೊಂದಚ್ಚರಿಯೇ ॥ ೨೫ ॥

ಅಂತು ಗುಣೋದೆಯುಂ ವಿರ್ಭರ ತಪೋಭರಮಂ ತಳೆದಳಿತ್ತಲ್ ವಿಜಯರಥ ಮಹೀನಾಥಂ ತನ್ನೊಮ್ಮನಪ್ಪ ವಜ್ರಬಾಹುಕುಮಾರನ ತಪಃಪ್ರಪಂಚಮಂ ತಿಳಿದು-

ಚಂ ॥ ಮದುವೆಗೆ ಸೋಪುದೆತ್ತ ಗಿರಿಕಂದರದೊಳ್ಮುನಿಯಂ ಮನಸ್ಸಿ ಕ ।
ಟ್ಟಿದಿರೊಳೆ ಕಾಣ್ಬದೆತ್ತದುವೆ ಕಾರಣಮಾಗೆ ಕಡಂಗಿ ಮೋಹಪಾ ॥
ಶದ ತೊಡರಂ ಬಿದಿರ್ಚಿ ದೆಸೆ[1]ಯಂ ತ್ರುವರಂ ನಿಜಕೀರ್ತಿಯಂ ನಿಮಿ
ರ್ಚಿದನೆನೆ ವಜ್ರಬಾಹುವ ನೆಗಟ್ಟಿ ಪೊಗಟ್ಟಿಗಳುರ್ಬಿಮಾಗದೇ ॥ ೨೬ ॥

ಕಂ॥ ಯುವರಾಜಂ ನವಯೌವನ
ನವಯುವದಿಂ ದೀಕ್ಷೆಗೊಡ್ಡಿದಂ ತನುವನಿದೇ ॥
[2]ನವಿಚಲನೊ ಕುಮಾರಂ ಪೋ
ಹವಿಷಾಹಿಯ ಕಾಲಕೂಟ ರದಮಂ ಕಚ್ಚಂ ॥ ೨೭ ॥

ಕಿಜುಗೂಸು ವಿಷಯ ಸುಖಮಂ
ತೊಜೆದು ತಪಂಬಟ್ಟನ್ನಿನ್ನೆವರಮಟ್ಟಿಪಿಂದಾಂ ॥
ಮಜಿದಿರ್ದನ್ತೆಂದು ತಂದಂ
ತಜಿಸಲವಂ ತನ್ನ ಚಿತ್ತದೊಳ್ ವಿಜಯರಥಂ ॥ ೨೮ ॥

ಅಂತು ವಿಜಯರಥನರೇಂದ್ರಂ ನಿಜತನೂಜನಪ್ಪ ಸುರೇಂದ್ರ ಮನ್ಯುವೆರಸು

1. ಯಿಂಟು. ಗ.
2. ಸವಕಲನೊ .ಚ.

ತನ್ನ ಮೊಮ್ಮನಪ್ಪ ಪುರಂದರಂಗೆ ನಿಜರಾಜ್ಯಮನಿತ್ತು ನಿರ್ವಾಣಘೋಷರೆಂಬ ಮುನಿ ಮುಖ್ಯರ ಸಮೀಪದೊಳ್ ತಪೋರಾಜ್ಯದೊಳ್ ನಿಂದನಿತ್ತಲಾ ಪುರಂದರಂ ಸಕಲ ಸಾಮ್ರಾಜ್ಯಸುಖ ಸುಧಾರಸದಿಂ ತಣಿದು ವಿಷಯವೈರಾಗ್ಯತತ್ಪರಂ ಕ್ಷೇಮಂಕರ ಮುಮ್ಮುಕ್ಕುಗಳ ಸಮಕ್ಷದೊಳ್ ದೀಕ್ಷೆಯಂ ಕೈಕೊಂಡು ನಿಲ್ವುದುಂ—

ಕಂ॥ ಕೀರ್ತಿಮುಖದಂತೆ ಕೀಲಿಸೆ
ಕೀರ್ತಿ ದಿಶಾದಂತಿದಂತಮುಂ ತದಪತ್ಯಂ ॥
ಕೀರ್ತಿಧರನೆಂಬನರಸಂ
ಕ್ಷಾರ್ತಸ್ವರ ಕುಧರದಂತಿರಿಳೆಯಂ ತಳೆದಂ ॥ ೨೯ ॥

ಆ ಕೀರ್ತಿಧರ ನರೇಂದ್ರನೊಂದುದಿವಸಂ ಮಣಿಮಾಡದ ಮೇಲೆ ಮಣಿಮಯಾ ಸನದೊಳಾಪ್ತ ಪರಿಜನ ಪರಿವೃತನೊಡ್ಡೋಲಗದೊಳಿರ್ಪುದುಮಾ ಸಮಯದೊಳ್—

ಕಂ ॥ ಇನಮಂಡಲಮುಂ ಸ್ಫಟಿಕ
ನು ನುಂಗೆ ಕಡುಗಂದಿ ಕುಂದುಗೊಂಡಿರ್ಪುದುಮಾ ॥
ಜನನಾಥನದುವೆ ನಿರ್ಜೇ
ಗ ನಿಮಿತ್ತಮೆನಲ್ ವಿರಾಗಮಂ ಕೊಂಡಂ ॥ ೩೦ ॥

ಜಗಮುಂ ಬೆಳಗುವ ಚಂಡಾಂ
ಶುಗಮಿಾ ಸ್ಥಿತಿ ರಾಹುವಿಂಪಮಾದತ್ತೆನಲ್ಕೇ ॥
ನುಗಿಬ್ಬಗಿಮಾಡದೆ ಕಾಲೋ
ರಗಮುಸ್ಮದ್ವಿಧಮನನ್ಯ ರಾಜನ್ಯಕಮಂ ॥ ೩೧ ॥

ಬ್ಬಂದು ವೈರಾಗ್ಯ ಪರಿಣತಿಯಿಂ ಚತುರುದಧಿ ವಲಯ ವಲಯಿತ ಧರಿತ್ರಿಯಂ ತೃಣಮುಂ ಬಗೆವಂತೆ ಬಗೆಯೆ ಮಂತ್ರಿಮಂಡಲ ಮಹಾ ಸಾಮಂತರತಿ ಚಕಿತ ಚಿತ್ತರಾಗಿ—

ಮ ॥ ಪರಚಕ್ರಕ್ಕೆಡೆಮಾಡಿ ಭೂವಲಯಮುಂ,ಬಂಡಾರಮುಂ ಬಾಲ ವೈ
ಭ್ಯರನೀಡಾಡ್ಗಿತಪಕ್ಕೆ ಪೋಪುದನಯಂ ಭೂಪಾಲ ನಿನ್ನಂ ಪುರಂ॥
ದರನೀ ರಾಜ್ಯಭರಕ್ಕೆ ಯೋಜಿಸಿ ತಪೋರಾಜ್ಯಕ್ಕೆ ಮೆಯ್ವಂದನ್ಯಂ
ತಿರೆ ನೀನಾಚರಿಸಲ್ಲದಂದು ಧರೆ ಮಾತ್ಸ್ಯನ್ಯಾಯಮೇನಾಗ್ದುದೇ

ಅದಱಿನನ್ನಯ ರಾಜ್ಯ ರಕ್ಷಣಾರ್ಥಮಾತ್ಮಜನಂ ಪಡೆದು ತಪಂಬಡುವುದೆಂದು ಮಂತ್ರಿಮಂಡಲಮೊಡಂಬಡಿಸೆ ಕೀರ್ತಿಧರನೊಡಂಬಟ್ಟು ಪಲವುಕಾಲಮರಸುಗೆಯ್ಯುತಿರಲಾ ಮಹೀವಲ್ಲಭನ ಸಹದೇವಿವೆಸರ ಮಹಾದೇವಿಗೆ—

ಕಂ ॥ ಪೀನ್ನ ಕುಚಾನನದೊಳ್ ಕ
ರ್ಣಾನನದೊಳ್ ಬೆಳ್ಪು ತೋಜಿತೆ ತೋಜಿದುದಾ ಚಂ॥
ದ್ರಾನನೆಗೆ ಗರ್ಭಚಿಹ್ನಂ
ಮಾನಸದೊಳ್ತೋಜಿತೆ ಬೇಜಿತೆ ಹರ್ಷವಿಷಾದಂ ॥ ೩೩ ॥

ಉ ॥ ಸಂತತಿ ರಾಜ್ಯರಕ್ಷಣೆಗೆ ಪುಟ್ಟಿದ ಸಂತಸಮುಂ ಮಹೀಭುಜಂ।
ಸಂತತಿ ಪುಟ್ಟಿ ಬಿಟ್ಟು ಧರೆಯಂ ತಪದೊಳ್ ತಜಿಸಲ್ಕಮೆಂಬ ಚಿಂ॥
ತಾಂತರಮುಂ ಮನಕ್ಕೆ ಬರೆ ಮ್ಯಾಡಿದಳಾಕ್ಷಣದೊಳ್ ನರೇಂದ್ರಸೀ।
ಮಂತಿನಿ ತದ್ವಿರುದ್ಧ ರಸ ನಾಟಕ ರಂಗಮನಂತರಂಗಮುಂ[1] ॥ ೩೪ ॥

ಅಂತಾಕೆ ಗೂಢಗರ್ಭದಿಂ ಕೆಲವಾನುಂ ದಿವಸಕ್ಕೆ ಬಡವಂ ನಿಧಾನಮುಂ ಪಡೆದಂತೆ ಮಗನಂ ಪಡೆದು ಪೆಜರಜ್ಯಯದಂತೆ ನಡಪುತಿರ್ಪುದುಂ→

ಕಂ ॥ ಭೇದಿಸಿ ಸಹದೇವಿಗೆ ಮಗ
ನಾದುದನೊರ್ವಂ ಧನಾರ್ಥಿ ಮೆಚ್ಚುಂ ಪಡೆವೊಂ॥
ದಾಪರದಿನಜ್ಜಿಪೆ ಭೂಪತಿ
ಗಾಮದು ಬಗೆ ತ್ತೀರ್ದುದೀಗಳೆಂಬನುರಾಗಂ ॥ ೩೫ ॥

ಮ ॥ ಮಗನಾದಂ ಸಹದೇವಿಗೆಂದೊಸಗೆ[2]ದಂದಾತಂಗೆ ಚೆಂಬೊನ್ನರಾ।
ಶಿಗಳಂ ವಸ್ತ್ರವಿಲೇಪನಾಭರಣಮುಂ ಸಾಲ್ವನ್ನೆಗಂ ಕೊಟ್ಟನಾ॥
ಜಗತೀ ವಲ್ಲಭನೆನ್ನ ಪ್ರೂಣ್ಮೆ ಶುದಿಗೆಯ್ತ್ತೆಂಬ ಸಂಪ್ರೀತಿ ಕೈ।
ಮಿಗೆ ಸಂಸಾರ ಶರೀರಭೋಗ ಪರಿನಿರ್ವೇಗಂ ತಪಃಪ್ರೀತಿಯಿಂ ॥ ೩೬ ॥

ಕಂ ॥ ತೊಟ್ಟಿಲ ಮಗಂಗೆ ಪಟ್ಟಂ
ಗಟ್ಟಿ ಜರತ್ತೃಣ ಸಮಾನಮೆನೆ ವಸುಮತಿಯಂ॥
ಬಿಟ್ಟು ಜಿನದೀಕ್ಷೆಗೊಂಡಂ
ಮುಟ್ಟುವಿನಂ ಕೀರ್ತಿ ದೆಸೆಗಳಂ ಕೀರ್ತಿಧರಂ ॥ ೩೭ ॥

ಉ ॥ ಇತ್ತ ಸುಕೌಶಲಕ್ಕೊಡೆಯನಾಗಿ ಸುಕೌಶಲನೆಂಬ ನಾಮಮಂ।
ಪೆತ್ತು ನಿರಂತರೋಪಚಯದಿಂ ನವಯೌವನನಾಗಿ ವಿಖ್ಯಾದ್ದು॥
ದ್ವೃತ್ತರನಿಕ್ಕಿ ಸುತ್ತಣ ಕಡಲ್ವರೆಗಂ ನೆಲನಂ ನಿಮಿರ್ಚಿ ಭೂ।
ಪೋತ್ತಮನಿಂತು ತನ್ನ ಜಸಮಂ ದೆಸೆಯಂತುವರಂ ನಿಮಿರ್ಚಿದಂ ॥ ೩೮ ॥

---

1 ಪೊಳ್. ಕ. ಖ. ಗ. ಘ.

2. ಪೇಳ್ದ. ಗ. ಘ

ಕಂ ॥ ಚತುರುದಧಿ ಮೇಖಲಾಲಂ
ಕೃತ ವಸುಧಾದೇವಿಗಜ್ಜ ಗಾಪಿನವರ್ ದಿ ॥
ಕ್ಷತಿಗಳೆನೆ ಸಾರ್ವಭೌಮೋ
ನ್ನತಿಯಂ ತಳೆದಂ ಸುಕೌಶಲ ಕ್ಷ್ಮಿನಾಥಂ ॥ ೩೯ ॥

ಆ ಸುಕೌಶಲನ ಜನನಿಯಪ್ಪ ಸಹದೇವಿ ಸಹಚರೀಸಮನ್ವಿತೆ ಮಣಿಮಾಡದ ನೆಲೆಯ ಮಣಿಮಯಾಸನದ ಮೇಲೆ ಲೀಲೆಯಿಂ ಕುಳ್ಳಿರ್ದುದುವೊಂದುದಿವಸಂ—

ಕಂ ॥ ಊರಡವಿಯೆಂಬ ಬಗೆಯಂ
ತಾರಥ್ಯತಿತ್ವರಿತ ಮಂದಮಲ್ತೆನೆ ಗತಿ ಬಂ ॥
ದೂರಂ ಯತಿಪತಿ ಪೊಕ್ಕಂ
ತಾರಾಪತಿಯಂತೆ ಪಡೆದು ನಯ ನೋತ್ಸವಮಂ ॥ ೪೦ ॥

ಕಂ ॥ ಮುನಿಯಂ ಕಂಡಾ ಕ್ಷಣದೊಳೆ
ತನೂಭವಂ ದೀಕ್ಷೆಗೊಳ್ಗುಮೆಂಬಾವೇಶಂ ॥
ಮನದೊಳಿರೆ ಲೋಚನಾತಿಥಿ
ಯನತಿಥಿಯಂ ಕಂಡು ಕಲುಷಮಂ ಕೈಕೊಂಡಳ್ ೪೧ ॥

ಗುಣಹೀನೆ ಧರ್ಮಹಾನಿಯ
ನೆಣಿಸದೆ ಪಾಪಕ್ಕೆ ಮಣಿಯದುಪವಾಸದ ಪಾ ॥
ರಣೆಯೊಳೆ ಪೊಬಲಿಂದ್ರತಿ ದಾ
ರುಣಮತಿ ಪೊಜಮಡಿಸಿ ಕಳೆದಳಾ ಯತಿಪತಿಯಂ ೪೨ ॥

ಮ ॥ ಪತಿ ಮುನ್ನಂ ತನಗೆಂಬಿದಂ ಬಗೆದಳಿಲ್ಲಿಕ್ಷ್ವಾಕುವಂಶಾವನ್ಯೀ ।
ಪತಿ ಲೋಕ ಸ್ತುತನೆಂಬುದಂ ನೆನೆದಳಿಲ್ಲೀಗಳ್ ತಪೋಮಾರ್ಗ ವಿ ॥
ಶ್ರುತನೆಂಬುನ್ನತಿಯಂ ವಿಚಾರಿಸಿದಳಲ್ಲಿ ಕಾಂತೆ ದುರ್ಮೋಹದಿಂ ।
ಮತಿಗೆಟ್ಟಾ ಯತಿಯಂ ಪರಾಭವಿಸಿ ಚರ್ಯಾವಿಘ್ನಮಂ ಮಾಡಿದಳ್ ॥ ೪೩ ॥

ಆಗಳದಂ ಕಂಡು ಸುಕೌಶಲನ ದಾದಿಯಪ್ಪ ವಸಂತಮಾಲೆ ಕೀರ್ತಿಧರ ನರೇಂದ್ರನಪ್ಪುದನಱಿದು—

ಕಂ ॥ ಅಪಮಾನಮಂ ಸುಕೌಶಲ
ನೃಪಾಲ ಜನಕಂಗೆ, ಪತಿಗೆ, ಕೀರ್ತಿಧರ ಕ್ಷ ॥
ತ್ರ ಪವಿತ್ರಂಗೊಡರಿಸಿದಳ್
ವಿಪರೀತಮಿದೆಂದು ನೊಂದು ಶೋಕಂಗೆಯ್ದಳ್ ॥ ೪೪ ॥

ಆಗಳ್—

ಮ ॥ ಬಸಿಱಂ ಮೋದಿಕೊಳುತ್ತುಮಲ್ಲಿ ನಿಜಧಾತ್ರೀವಕ್ತ್ರಮಂ ನೋಡಿ ಜೇ ।
ವಸಮುಂ ನಿಮ್ಮ ಮನಕ್ಕೆ ನಿರ್ಭಯದಿನಾವಂ ತಂದನಾತಂಗೆ ಸೈ ॥
ರಿಸೆನಾನೆಂದು ಸುಕೌಶಲ ಕ್ಷಿತಿಭುಜಂ ಕಟ್ಟಾಗ್ರಹಂಗೆಯ್ಯೆ ಸೂ ।
ಚಿಸಿದಳ್ ಕಾಂತೆ ವಸಂತಮಾಲೆ ನಿಜ ಶೋಕೋದ್ರೇಕ ವೃತ್ತಾಂತಮಂ ॥ ೪೫ ॥

ಅದಂ ನೆಜಱಿಯೆ ಕೇಳ್ದು—

ಮ ॥ ಪಸುಗೂಸಿಂಗೆನಗಿತ್ತು ರಾಜ್ಯಪದಮುಂ ನಿಂದಂ ತಪೋರಾಜ್ಯದೊಳ್ ।
ವಸುಧಾವಲ್ಲಭನಟ್ಟ ಮುನೀಶ್ವರನ ಪಾದೋಪಾಂತಮಂ ಪೊರ್ದಿ ಸಾ ।
ಧಿಸುವೆಂ ನಿರ್ವೃತಿಸೌಖ್ಯಮುಂ,ವಿಷಯಿಸೌಖ್ಯಂ ಮುಖ್ಯಮುಲ್ಲಿಂನು ಭಾ ।
ವಿಸಿ ಬಿಟ್ಟಂ ಸಿರಿಯಂ ಸುಕೌಶಲನದೇಂ ವೈರಾಗ್ಯಸಂಪನ್ನನೋ ॥ ೪೬ ॥

ಕಂ ॥ ಮುನಿಭೋಜನವಿಘ್ನಂ ಮ
ಜ್ಜನನಿಯಿನಾಯ್ತೆನ್ನ ದೂಸಜಱಂ[1] ತಾಯ್ಗೀನಾಂ ॥
ಮ-ನಿವೆನೊ ಮುನಿಯಪ್ಪನ್ನೆಗ
ಮನಶನಮೆನಗೆಂದು ಚಿತ್ತದೊಳ್ ತಜಿಸಂದಂ ॥ ೪೭ ॥

ಅಂತು ಪರಿಚ್ಛೇದಿಸಿ—

ಕಂ ॥ ಧವಲಾತಪತ್ರ ವಾರಣ
ವಿವಿಧ ಧ್ವಜ ಚಾಮರಂಗಳಂ ರಾಜ್ಯಶ್ರೀ ॥
ಗಿವು ತೊಡವೆಂದವಸೊಲ್ಲದೆ
ಭುವನೇಶಂ ರಾಜಭವನಮಂ ಪೊಜಮಟ್ಟಂ ॥ ೪೮ ॥

ಅಂತು ಪೊಜಮಟ್ಟು ಪಾದಮಾರ್ಗ್ಗದಿನುಪವನಮನೆಯ್ದಿ ಕೀರ್ತಿಧರ ಭಟ್ಟಾರ ಕರಂತ್ರಿಃ ಪ್ರದಕ್ಷಿಣಂಗೆಯ್ದು ದೀಕ್ಷಾಪ್ರಸಾದಮೆಂದು ವಂದಿಸಿ ಕುಳ್ಳಿರ್ದುಮಾಗ ಳಖಿಲಪರಿಜನಂ ಸಂಭ್ರಮಂಬೆರಸು ಬಂದು—

ಮ ॥ ಎಮಗಿನ್ನಾರ್ ಶರಣೆಂದು ಮಾಂಡಲಿಕರುಂ ಸಾಮಂತರುಂ ಮಂತ್ರಿ ವ ।
ರ್ಗಮುಮಂತಃಪುರಮುಂ ವಿಲಾಸಿನಿಯರುಂ ಬಾಯ್ಪಿಟ್ಟು ಪುಯ್ಯಲ್ಟಿ ಶೋ ।
ಕಮಿದೇಕೀಕೆಯ ಗರ್ಭದರ್ಭಕನೆ ನಿಮ್ಮಂ ರಕ್ಷಿಸಲ್ಸಾಲ್ಗುಮೆಂ ।
ದು ಮಹಾದೇವಿಗೆ ಚಿತ್ರಮಾಲೆಗವರಂ ಭೂಪಾಲನಪ್ಪೈಸಿದಂ ॥ ೪೯ ॥

---

1 ತಾಯಿನ್ನಂ. ಕ. ಏ; ತಾಯ್ಗೀನಂ. ಗ. ಘ. ಚ.

ಕಂ॥ ಸ್ತ್ರೀ ಬಾಲ ಸಾಧ್ಯಮಿಳೆ ನಿ
ಮ್ಮಾ ಬಾಹಾಬಲದಿನಾದುದೆನಗಾ ತೆಱದಿಂ ॥
ದೀ ಬಾಲೆಯ ಗರ್ಭದೊಳಿ
ರ್ದಾ ಬಾಲನನರಸುಮಾಟ್ಪುದಿದು ನಿಮಗೆ ಬೆಸಂ ॥ ೫೦ ॥

ಎಂದು ಪರಿಜನಮನೊಡಂಬಡಿಸಿ ಕೀರ್ತಿಧರ ಮುಮುಕ್ಷುಗಳ ಸಮಕ್ಷದೊಳ್ ದೀಕ್ಷೆಯಂ ಕೈಕೊಂಡು—

ಕಂ॥ ಶ್ರುತದಗ್ಗಳಿಕ್ಕೆ ತಪದು
ನ್ನತಿಕ್ಕೆ ತನ್ನೊಳೆ ನೆಗಟ್ಟಿ ವೆತ್ತಿರೆ ಭೂವಿ ॥
ಶ್ರುತನೆನೆ ಸುಕೌಶಲ ವ್ರತಿ
ಪತಿ ತಪದಿಂ ಶ್ರುತದಿನಾರುಮಂ ಗೆಲೆವಂದಂ ॥ ೫೧ ॥

ಅಂತವಿಶ್ವಾನ್ತತಪಶ್ಶ್ರೀಯನಪ್ಪುಕೆಯ್ದಿರ್ದಿನಂ—

ಕಂ॥ ಕಡವಲದರ್ದುವು ಮೊಲ್ಲೆಯ ಪೂ
ಗುಡಿ ನಿಮಿರ್ದುವು ಸೋಗೆ ಕೇಗಿದುವು ಕೇದಗೆ ಬೆ ॥
ಳ್ಪುಡಿಪೋದುವ ಚಾದಗೆಗಳ್
ಕಡಂಗಿ ನುಂಗಿದುವು ತೋರವನಿಯಂ ಕಾರೊಳ್ ॥ ೫೨ ॥

ಆ ಘನಸಮಯ ಪ್ರವೇಶದೊಳ್ ತನ್ಮುನಿಯುಗಳಂ ವೃಕ್ಷಮೂಲನಿಯೋಗ ನಿರ್ವರ್ತನಾನಂತರಂ ಯೋಗ್ಯಕಾಲಾವೇಕ್ಷೆಯಿಂ ಕಾಂತಾರಭಿಕ್ಷೆಗೆ ಬರುತಿರೆ—

ಉ॥ ಕಣ್ಬಂಗಬ್ಬು ದವ್ಯಮುನಿಗತ್ತಪಮಾನದಿನಾರ್ತರೌದ್ರದಿಂ ।
ಪೆಣ್ಬಲಿಯಾಗಿ ಪುಟ್ಟಿ ಸಹದೇವಿ ಬರುತ್ತಿರೆ ಕಂಡಶಂಕಿತರ್
ಕಣ್ಣೊಬಲದೊಳ್ ನಿವೃತ್ತಿಪರಿಣಾಮಮೊಡಂಬಡೆ ಧರ್ಮಶುಕ್ಲದೊಳ್
ಜಾಣ್ಗಡೆದಿಕ್ಕಿ ಕೈಯನುಪಸರ್ಗ ಸಹಿಷ್ಣುಗಳಿರ್ದರಿರ್ವರುಂ ॥ ೫೩ ॥

ಮ॥ ಸ್ರ॥ ತನುವಂ ಬೇರ್ಕೆಯ್ದು ತಮ್ಮಿಂ ಮುನಿಪತಿಗಳನುಪ್ರೇಕ್ಷೆಯಂ ತಾಳ್ದಿ ಸನ್ಯಾ।
ಸನಯುಕ್ತರ್ಚಿತ್ತದೊಳ್ ನಿಶ್ಚಲವಿರಿಸಿ ಜಿನಶ್ರೀ ಪದಾಬ್ಜಂಗಳಂ। ಪಂ ॥
ಚನಮಸ್ಕಾರಿಂಗಳಂ ನಾಲಗೆ ಜಪಿಯಿಸೆ। ಗುಂಜದ್ಗುಹಾ ರಂಜಿತಂ ಕಾಂ ।
ಚನಶೈಲದ್ವಂದ್ವಮಿರ್ಪಂತಿರೆ ಶುಭಚರಿತರ್ ಪೂಣ್ದು ಕೈಯಿಕ್ಕಿ ನಿಂದರ್ ॥ ೫೪ ॥

ಅಂತು ನಿಂದ ಮುನಿಯುಗಳಮಂ ಕಂಡು ಕಡು ಮುಳಿದು—

ಮ ॥ ಜಡಿಯುತ್ತುಂ ಬಾಲಮಂ, ಕಣ್ಣುರಿಯನುಗುಳ್ಗೆ ಜಿಹ್ವಾನಲಂ ಪೆರ್ಚ್ಗೆ ಬಾಯ್ವಿ।
ಟ್ಟೊಡೆವನ್ನಂ ಗರ್ಜಿಸುತ್ತುಂ ಪವನಜವದೆ ಮೇಲ್ವಾಯ್ವು ಪೊಯ್ವತ್ತು ಕೈಯೇ॥
ಜಿಡೆಯಿಂ ಬಾಯೇಜ್ಜೆ ಬಾಯಿಂದೊಡನೆ ರುಧಿರಮುಂ ಕಂಡಮುಂ ಸೂಸುವನ್ನಂ,
ಸಿಡಿಲೆಂಬಾಶಂಕೆಯಂ ಪೆಣ್ಬಲಿ ಪಡೆದು ವೆಸಗೀರ್ಕ್ತಸೇವಾನುರಕ್ತಂ ॥ ೫೫ ॥

ಅಂತಾಪುಲಿ ಮುನೀಂದ್ರಯುಗಳದ ಮೇಲೆ ಪಾಯ್ದುಗಿಬಗಿಮಾಟ್ಪುದುಮಾ ಮು
ಹೋಪಸರ್ಗಮಂ ಸ್ಮೆರಿಸಿ→

ಕಂ ॥ ಘಾತಿಯುಮನ್ಘಾತಿಯುಮುಂ
ಘಾತಿಸಿ ಕೀರ್ತಿಧರ ಯೋಗಿ1 ಮುಕ್ತಿಗೆ ಸಂದಂ॥
ಘಾತಿಕ್ಷಯದಿಂ ಕೈವ
ಲ್ಯಾತಿಶಯಂಬೆತ್ತ ನಾ ಸುಕೌಶಲ ಮುನಿಪಂ, ॥ ೫೬ ॥

ಉ ॥ ಇತ್ತ ವಿಚಿತ್ರಮಾಲೆಗೆ ತನೂಭವನಾಗೆ, ಹಿರಣ್ಯಗರ್ಭನೆಂ।
ದತ್ತು ಧರಿತ್ರಿಗರ್ಭದೊಳೆ ವಲ್ಲಭನಾಗೆ ಸಮಸ್ತರಾಜ್ಯಸಂ॥
ಪತ್ತಿಗೆ(ತತ್ಸುತಂ ಬಳೆದು ಚಾಗದ ಬೀರದ ಪೆರ್ಮೆಯಿಂ ದಿಶಾ।
ಭಿತ್ತಿಯನೆಂಟನೆಯ್ದೆ ತೆರೆಸುತ್ತಿದನಾತ್ಮ ಯಶೋ ದುಕೂಲದಿಂ ॥ ೫೭ ॥

ಕಂ ॥ ಸರಸ ಬಿಸಗರ್ಭ ಗರ್ಭರಂ
ಪರೆಯೆ ಜಸಂ, ಪ್ರಥಪುರಕ್ಕೆ ಗರ್ಭಸ್ಥಾವಂ ॥
ದೊರೆಕೊಳೆ, ಹಿರಣ್ಯಗರ್ಭಂ
ಧರಿತ್ರಿಯಂ ಹರ್ಷಗರ್ಭಮೆನೆ ಪಾಲಿಸಿದಂ, ॥ ೫೮ ॥

ತದಪತ್ಯಂ ನಹುಷಂ ಚತು
ರುದಧಿವರಂ ವಸುಧೆಯಂ ನಿಮಿರ್ಚ್ಚಿ, ಭುಜಾಗ ॥
ರ್ವದಗುರ್ವಿಂ ಮಾಣ್ದನೆ ಚತು
ರುದಧಿಯೊಳುದವಾಸಮಿರಿಸಿದಂ ರಿಪುನೃಪರಂ ॥ ೫೯ ॥

ಈ ಸಕಲಧರೆಯನುಗ್ರಭು
ಜಾಸಿಯೊಳಳವಡಿಸಿ ನಹುಷನಗ್ಗಸುತಂ ಸಂ ॥
ವಾಸಂ ರಿಪು ದ್ವಾರಕರಂ ।
ದಾಸೇರಕರೆನೆ ಪೊಡರ್ಪುಗಿಡೆ ನಡೆಯಿಸಿದಂ ॥ ೬೦ ॥

ತತ್ತನೂಭವಂ—

1- ಕೇವಲಿಯಾದಂ. ಚ.

ಕಂ ॥ ಸಂಹರಿಸಿ ರಿಪು ಮದದ್ವಿಪ
ಸಂತತಿಯಂ, ಬೀರಸಿರಿಗೆ ವಲ್ಲಭನಾದಂ।
ಸಿಂಹ ಪರಾಕ್ರಮನೆನಿಸಿದ
ಸಿಂಹರಥಂ ಸಾರ್ವಭೌಮವಿಭವ ಸನಾಥಂ ॥ ೬೧ ॥

ಆ ಸಿಂಹರಥನ ಸುತನಯೋಧ್ಯಾಸಿಂಹಾಸನಮನಲಂಕರಿಸಿ—

ಕಂ ॥ ಒರ್ವನೆ ಧನ್ವಿಯೆನಲ್ ಸಕ
ಲೋರ್ವರೆಯಂ ಕಾದು ತನ್ನ ಬಾಣದ ಮೊನೆಯೊಳ್ ॥
ಮೂರ್ವಲಮಂ ತವಿಸಿದನೆನೆ
ದೋರ್ವಲಮೇಂ ಬ್ರಹ್ಮರಥನೊಳ ವಿತಥಮಾಯ್ತೋ ॥ ೬೨ ॥

ತತ್ತನಯಂ—

ಕಂ ಸಮರ ಮುಖದೊಳ್ ವಿರೋಧಿ
ಪ್ರಮುಖರನೆಯ್ದಿಸೆ ಶಿಲೀಮುಖಂ ಯಮ ಮುಖಮಂ।
ಕ್ಷ್ಮೆಯಂ ತಳೆದಂ ಚಾಪಾ
ಗಮ ಚತುರ್ಭಚತುರ್ಮುಖಂ ಚತುರ್ಮುಖನೆಂಬಂ ॥ ೬೩ ॥

ಭೂಮಂಡಲಮಂ ತಳೆದಂ
[1]ಕ್ಷೇಮಾಸ್ಪದಮಾಗೆ, ನಾಮಮಹಿಮೋನ್ನತಿಯಿಂ ॥
ಹೇಮಾಚಲಮಂ ಮೆಚ್ಚಂ,
ಹೇಮರಥಂ ಶ್ರುತಿಮುಖಂ ಚತುರ್ಮುಖತನಯಂ ॥ ೬೪ ॥

ಆ ರಾಜಸುತಂ ಕೀರ್ತಿ ಸು
ಧಾರಸದಿಂ ತಣ್ಪುವಡೆದು ಪರಿಪೂರ್ಣಕಲಾ ॥
ಧಾರಂ ಸಕಲೇಂದುರಥಂ
ವೈರಿ ಮನೋರಥ ರಥಾಂಗಘ್ನಂ ವಿಘಟಿಸಿದಂ ॥ ೬೫ ॥

ಆ ಮಹೀಭುಜನ ತನೂಭವಂ—

ಕಂ ॥ ತೇಜಂ ಪುದುವಿಲ್ಲೆನಿಸಿ ವಿ
ರಾಜಿಸೆ, ಪರರಾಜಮಂಡಲಂ ತನ್ನಿಂ ನಿ ॥
ಸ್ತೇಜಂ ಬೆತ್ತಿರೆ, ಬೆಳಗಿದ
ನೀ ಜಗಮಂ ಭಾನುವೆಂಬಿನಂ ಭಾನುರಥಂ ॥ ೬೬ ॥

---

1. ಪ್ರೇಮಾ. ಕ. ಖ. ಚ.

ಮತ್ತಂ ತದನ್ವಯದೊಳ್ ಮಯಮಾಂಧಾತೃ ವೀರಸೇನ ಕಮಲಬಂಧು ವಸನ್ತ ತಿಲಕ ಕುಬೇರದತ್ತ[1] ಮೃಗಾರಿದಮನ ದ್ವಿಪರಥ ಹಿರಣ್ಯಕಶಿಪ್ವರ್ಕರಥ[2] ದಿಲೀಪ ರಘು ವೀರ ಪ್ರಮುಖರೆನಿಬರಾನುಮ್ಮರಸುಗಳನುಕ್ರಮದಿಂ ರಾಜ್ಯಂಗೆಯ್ದು ಕೆಲಬರಮರ ಕಾಮಿನೀ ಕಚಗ್ರಹಣಮಂ ಕೆಲಂಬರಮೃತಲಕ್ಷ್ಮೀಪಾಣಿಗ್ರಹಣಮಂ ಪಡೆವುದುಂ—

ಕಂ ॥ ಧರಣೀಪ್ರಾಕಾರಂ ವೀ
ರ ರಸಾರ್ಣವ ಸೇತು ದಾನಗುಣಭೂಷಣ ದಿ ॥
ಕ್ಕರಿ ಧರ್ಮರತ್ನರೋಹಣ
ಗಿರೀಂದ್ರಮುಕ್ವ್ವಾಕು ವಂಶಮಾಯ್ತು ಪ್ರತಿಮಂ ॥ ೬೭ ॥

ಆ ವಂಶದೊಳ್ ವಿನೀತಾಪುರಮನಾಳ್ವನನರಣ್ಯನೆಂಬರಸನಖಿಲ ರಾಜಕುಲ ಮಣಿಮಕುಟ ಮಕರಿಕಾಪತ್ರ ವಿಚಿತ್ರಚಿತ್ರಿತ ಪಾದಪೀಠಂ—

ಕಂ ॥ ನೆನೆಯಿಸುವಂ ಮಾನ್ಯಪುರಾ
ತನ ರಾಜನ್ಯಕಮನತುಲ ಬಾಹಾ ಬಲದಿಂ ॥
ದನರಣ್ಯಂ ಕೃತಪುಣ್ಯಂ
ಮನುವಂಶ ವರೇಣ್ಯನಖಿಲ ಭುವನ ಶರಣ್ಯಂ ॥ ೬೮ ॥

ಅನರಣ್ಯನೆಂಬ ಪೆಸರಂ,
ಜನಪತಿದೇಶದೊಳರಣ್ಯಮಿಲ್ಲೆನೆ, ನಾನಾ ॥
ಜನಪ್ರದಮಂ ಪಡೆದು, ಜಗ
ಜ್ಜನಂ ಕೂಡಲ್ ಪಡೆದನ್ತು ಪಡದನ ಪಸರಂ ॥ ೬೯ ॥

ನ್ಯಾಯಾರ್ಜಿತವಿತ್ತಂ ಧ
ರ್ಮಾಯತ್ತಮೆನಿಪ್ಪ ರಾಜವೃತ್ತಂ ತನಗೇ ॥
ಕಾಯತ್ತಮಾಗೆ ಧರೆಯಂ
ಜೀಯೆನಿಸಿದನಿಂತುದಾತ್ತ ಚರಿತರುಮೊಳರೇ ॥ ೭೦ ॥

ಆ ವಸುಧಾವಲ್ಲಭನ ಮ
ನೋವಲ್ಲಭೆ ರೂಪವತಿ ಕಲಾವತಿ ಪೃ ॥
ಥ್ವೀವಧು ಧೈರ್ಯದೊಳಂ ಪೃ
ಥ್ವೀವನಿತೆಗೆ ಯುವತಿ ಸವತಿಯೆನೆ ಪೆಸರ್ವಡೆದಳ್ ॥ ೭೧ ॥

---

1. ವ್ಯಗಾರಿ ಮದನದ್ವಿಪ. ಚ. ಮೃಗಾರಿ ಮದದ್ವಿಪ. ಕ. ಖ.
2. ದಿಲೀಪ ಪುರೂರವ ರಘುವೀರ ಗ. ಘ.

ಕಂ ॥ ಕಡುಚೆಲ್ವಿಂ ರತಿಗೆಗ್ಗಂ
ಪಡೆದು ವಿಲಾಸಕ್ಕೆ ದೇಸಿವಡೆದವನಿಪನೊಳ್
ಪಡೆದು ಪಿರಿಯರಸಿತನಮಂ
ಪಡೆದಳ್ ತನಯರನೆನಂತರಥ ದಶರಥರಂ

ಆ ಪೃಥ್ವೀವಧೂಮಹಾದೇವಿಯೊಳಖಿಲ ಪೃಥ್ವೀವಲ್ಲಭಂ ಧರ್ಮಾರ್ಥವಿರುದ್ಧ ಮಾಗದಂತು ವಿಷಯಸುಖಮನನುಭವಿಸುತ್ತಿರ್ದೊಂದು ದಿವಸಂ—

ಮ ॥ ಭುವನ ಸ್ತುತ್ಯಪದಂ ಸಹಸ್ರಕಿರಣಂ ಸ್ವರ್ಭಾನುವಿಂದಂ ಪರಾ ।
ಭವಮಂ ಪೊರ್ದುವವೋಲ್ / ಸಹಸ್ರಕಿರಣಂ ಮಾಹಿಷ್ಮತೀವಲ್ಲಭಂ ॥
ಬವರಂಗೆಯ್ದು ದಶಾನನಂಗೆ ರಣದೊಳ್ ಸೋಲ್ತೇವದಿಂ ಕ್ಷತ್ರ ಪು ।
ತ್ರವರೇಣ್ಯಂ ಜಿನದೀಕ್ಷೆಗೊಂಡನನರಣ್ಯಂ ಕೇಳ್ದನಾ ವಾರ್ತೆಯಂ ॥ ೭೩ ॥

ಅಂತು ಕೇಳ್ದದುವೆ ತನಗೆ ನಿರ್ವೇಗನಿಮಿತ್ತಮಾಗೆ—

ಕಂ ॥ ಕೆಳೆಯಂ ಸಹಸ್ರಕಿರಣಂ
ತಳೆದಂ ದೀಕ್ಷೆಯನುಪೇಕ್ಷಿಸಲ್ ಪದನಲ್ಲೀ
ಯೆಳೆಯನಪೇಕ್ಷಿಸೆನೆಂದಾ
ಗಳನಂತರಥಂಗೆ ನುಡಿದನಿಂತನರಣ್ಯಂ ॥ ೭೪ ॥

ನ ಸ್ಯ॥ಪಡೆದೆಂ ನಿನ್ನನ್ನನಂ ರಕ್ಷಿಸಲಪಿಲಧರಾಚಕ್ರಮಂ ಪುತ್ರ ನೀಂ ಬೆ ।
ಳ್ಕೊಡೆಯಂ ಕೈಕೊಳ್ ಧರಾಭಾರಮನಿಟಿಪೆನಗೆಂದಂಗೆ ದಂತಾಂಶು ಜಾಲಂ॥
ಕುಡಿಮಿಂಚಂ ಬೀಜಿ ಕೈಯಂ ಮುಗಿದು ನುಡಿದನ್ದೇಮಾತೊ ನಿರ್ವಾಣಮಾರ್ಗ।
ಕ್ಕೊಡಸಲ್ಪೆಂ ನಿಮ್ಮ ಚಿತ್ತಕ್ಕೆಡಜಿದ ನೆಲನಂ ದೇವ ಕೈಕೊಳ್ವನಲ್ಲೆಂ ॥ ೭೫ ॥

ಎಂದು ತನ್ನೊಡನೆ ತಪಂಬಡಲೊಡಂಬಟ್ಟು ತಜಿಸಂದು ನುಡಿವುದುಮೊಂ ದುತಿಂಗಳ ಮಗನಪ್ಪ ದಶರಥಂಗೆ ಪಟ್ಟಂಗಟ್ಟಿ ತಾನುಮನಂತರಥನುಂ ಅಭಯಘೋಷ ಭಟ್ಟಾರಕರ ಪಾದೋಪಾಂತದೊಳ್ ತಪಂಬಟ್ಟು—

ಕಂ ॥ ಅನರಣ್ಯಂ ಮುಕ್ತಿಶ್ರೀ
ವನಿತಾವರನಾದನಂತನಂತರಥಂ ಚಿ ॥
ತ್ತನಿರೋಧದಗ್ಧಕರ್ಮೇಂ
ಧನ ಭಾರನನಂತ ವೀರ್ಯಕೇವಲಿಯಾದಂ ॥ ೭೬ ॥

ಆ ಮಹಾಮಹಿಮೆಯೊಳ್—

ಮ ॥ ಸ್ರ॥ ಅಮರೇಂದ್ರೋದ್ಯಾನದಿಂ ಪೂಮಟೆ ಕಱೆಯೆ ಸುರೇಂದ್ರಾಗಮಂ
ರಾಗಮುಂ ಬೀ।
ಱೆ ಮುರ್ರುದ್ಗಂಭೀರ ಭೇರೀನಿನದಮೊದವೆ ನಿರ್ವಾಣ[1]ಕೈವಲ್ಯಮಾಂಗ ॥
ಲ್ಯ ಮಹೋತ್ಸಾಹ ಪ್ರಮೋದಾಮರ ಕಲಕಲಮಾನಂದನುಂ ಮಾಡೆರೋಮಾಂ।
ಚಮನಾನಂದಾಶ್ರುವಂ ತಾಳ್ದಿದನಮಲಯಶಂ ಭಾರತೀಕರ್ಣಪೂರಂ ॥ ೭೭ ॥

ಇದು ಪರಮಜಿನಸಮಯ ಕುಮುದಿನೀ ಶರಚ್ಚಂದ್ರ ಬಾಲಚಂದ್ರ
ಮುನೀಂದ್ರ ಚರಣನಖಕಿರಣ ಚಂದ್ರಿಕಾಚಕೋರ
ಭಾರತೀಕರ್ಣಪೂರ ಶ್ರೀಮದಭಿನವಪಂಪ
ವಿರಚಿತಮಪ್ಪ ರಾಮಚಂದ್ರ ಚರಿತ
ಪುರಾಣದೊಳ್ ವಂಶವರ್ಣನಂ
—ದ್ವಿತೀಯಾಶ್ವಾಸಂ—

ತ್ರಿಶ್ರೀಯಾಶ್ವಾಸಂ

ಕಂ ॥ ಶ್ರೀವನಿತೆ ವಕ್ಷದೊಳ್ ಮು
ಕ್ತಾವಳಿಯಂತೆಸೆಯೆ ತೊಟ್ಟಲೊಳ್ ಪಟ್ಟತ್ತ ॥
ಲ್ಲಾವಳಯಂ ಭುಜದೊಳ್ ಶೋ
ಭಾವಹವೆನೆ ಪೆಂಪುವೆತ್ತನಭಿನವಪಂಪಂ

ಎಳನೇಸಱಂತೆ ಜಗಮಂ
ಬೆಳಗಿದನೆಳದಿಂಗಳಂತೆ ಸಕಲ ಧರಿತ್ರೀ ॥
ತಳಮನೆಱಗಿಸಿದನೆಳವೆಯೊ
ಳೆಳೆ ಬಣ್ಣಿಸೆ ದಶರಥಂ ಭಗೀರಥ ಚರಿತಂ

ಆ ವಂಶಜರ ಗುಣಂಗಳ
ನಾವಗಮೊಳಕೊಂಡು ತನ್ನವಿಶದ ಯಶೋ ಮು ॥
ಕ್ತಾವಳಿಯಂ ಧರೆಗಿತ್ತು ಧ
ರಾವಲ್ಲಭನತ್ಯುದಾತ್ತನೆನೆ ಪೆಸರ್ವಡೆದಂ,

ಚಿರಕಾಲದ ಕಟ್ಟುವೊವೆಂ
ದಿರದೆ ವಿರಿಂಚಿಯ್ದ್ದ ಮುಖಾರವಿಂದಮನುಟ್ಟಿದಾ ॥
ದರದಿಂದಿರ್ದಳ್ ಸಿತಮಧು
ಕರವಧು ವಾಗ್ವಧು ನರೇಂದ್ರ ಮುಖಸರಸಿಜದೊಳ್,

ಜಡಧ್ಥಿಯ ರತ್ನಂಗಳ್ಗೊಂ
ದೊಡವಿನುಪಾಶ್ರಯದಿನೆಸೆವವೋಲ್ ದಶರಥನಿಂ ॥
ಜಡಜಜನ ವಿದ್ಯೆಗಳ್ ನೂ
ರ್ಮಡಿಸಿದುವಾಶ್ರಯ ವಿಶೇಷಮೇಂ ಕೇವಲಮೇ

ಅಱುವತ್ತುನಾಲ್ಕು ವಿದ್ಯೆಯ
ನಱಿದುಂ ದಶರಥನ ಚಿತ್ತಮನುರಾಗದಿನೇ ॥
ನೆಱಗಿದುದೊ ಧರ್ಮಶಾಸ್ತ್ರ
ಕ್ಕಱುವುಳ್ಳಂ ವಿಕಥೆಯೊಳ್ ಮನಂ ನಿಱಿಸುಗುಮೇ

ಕಂ ॥ ಓದಿದೊಡೇನರಗಿಳಿ ಕ
ಲ್ತೋದುವವೋಲ್ ಧರ್ಮಶಾಸ್ತ್ರಮಂ ದಶರಥನಂ ॥
ತೋದಿ ತಿಳಿದವನಿಪತಿ ಮ
ರ್ಯಾದೆಯೊಳಿಸಗುವುದು ಧರ್ಮಪರನೆನೆ ಲೋಕಂ ॥ ೭ ॥

ಕಾದಳ್ ವರ್ಣಾಶ್ರಮ[1]ಧ
ರ್ಮಾದಿಗಳಂ ಮಾಜದಂತು ನೆಲನಂ ನೃಪನಾ ॥
ಜ್ಞಾ ದೇವತೆ ವೇದಿಕೆ ಮ
ರ್ಯಾದೆಯೊಳ್ಕಂಭೋನಿಧಾನಮಂ ನಿಲಿಸುವವೋಲ್ ॥ ೮ ॥

ಚ ॥ ಮನಮೆಳದಾಗೆ ವೈರಿಗೆ, ಮುನೀಷಿಜನಂ ಮನಮಾಯೆ, ಮಾನಿನೀ
ಜನಮಭಿಮಾನಮಂ ಮಜಿಯೆ, ಭೂಭುವನ ಸ್ತವನೀಯಮಾದುದಾ ॥
ತನ ಬಲಗೈಯೊಳಿರ್ಪ ಜಯಲಕ್ಷ್ಮೀಗ್ಗವಾತನ ಸೊಲ್ಲೊಳಿರ್ಪ ವಾ
ಗ್ವನಿತೆಗವಾ ಮಹೀಪತಿಗಮಪ್ರತಿಮಂ ಪರಿಪೂರ್ಣ ಯೌವನಂ ॥ ೯ ॥

ಅಂತು ದಶರಥನರನಾಥಂ ನವಯೌವನಲಕ್ಷ್ಮೀಯನಪ್ಪುಕೆಯ್ದು ಲಾವ ಣ್ಯಲಕ್ಷ್ಮೀ ವಿರಾಜಿತೆಯೆನಿಸ್ಪಪರಾಜಿತೆಯುಂ, ಮದನ ಮೋಹನ ವಿದ್ಯಾದೇವತೆಯ ಮಿತ್ರೆಯೆನಿಪ್ಪ ಸುಮಿತ್ರೆಯುಂ, ಕಂತು ಸಂತಾಪನ ದೀಪ ಕಳಿಕಾ ಪ್ರಭೆಯೆನಿಪ್ಪ ಸುಪ್ರ ಭೆಯುಂ, ಓರೊರ್ವೆ ಪೇರುರದೊಳಿರ್ಪ ಸಿರಿಯಂ ಗಾಢಾಲಿಂಗನದ ನೆವದಿಂ ನೆಲೆಮೊಲೆ ಯೊಳಿಟ್ಟೊತ್ತುವಂತೆರ್ದವತ್ತುಗೆವೆತ್ತು, ಕಲಭಾಷಿತ ಸುಧಾಜಲದಿಂ ಸರಸ್ವತಿಯ ಕಲಾ ವಲೇಪಮಂ ಕರ್ಚಿ ಕಳೆವಂತೆ ಮೊಗಂಬಡೆದು, ಪ್ರಣಯಕಲಹ ಕೇಳಿಯಿಂ ವಿಜಯ ಶ್ರೀಯಂ ಜನಿಸುವಂತೆ ತೋಳ್ವೆರಗನಪ್ಪುಕೆಯ್ದು, ತನಗೆ ಮನೋನಯನ ವಲ್ಲಭೆ ಯರೆನಿಸೆ—

ಕಂ ॥ ಕುಲಸತಿಯರಿಂ ನೃಪಂ ದಾ ।
ನ ಲೀಲೆಯಿಂ ದಿಗಿಭಮನ್ಮತಕಳಿಯಿಂ ಶಶಿ ಮೇ ॥
ಖಲೆಯಿಂ ಮಂದರಶೈಲಂ,
ವಿಲಾಸಮಂ ತಳೆದುದೆನೆ ಬೆಡಂಗಂ ತಳೆದಂ ॥ ೧೦ ॥

ಇನನೆಂತು ಬೆರಸಿ ಸಂಜೆಯೊ
ಳನುರಾಗಿಯೆನಿಪ್ಪನಂತೆ ನೃಪನಾನೃಪನಂ ॥
ದನೆಯರೊಳನುರಾಗದಿನಿ
ರ್ದನವರತಂ ತೊಳಗಿ ಬೆಳಗಿದಂ ಸತ್ಪಥಮಂ ॥ ೧೧ ॥

ಕಂ ॥ ನೀರೊಳಗಿರ್ದಂ ಪೊರ್ದದು
ನೀರಂ ನೀರೇಜಮೆಂಬವೋಲಬಲಾ ಶೃಂ ॥
ಗಾರರಸ ಮಗ್ನನಾಗಿಯು
ಮಾರಳವೆನೆ ತಳಿದನರಸನಿಂದ್ರಿಯ ಜಯಮಂ ॥ ೧೨ ॥

ಮ ॥ ಸ್ರ ॥ ಕುಳಭೂಭೃತ್ಕೂಟದೊಳ್ ಮಾಣಿಕದೆಳವಿಸಿಲಿಂತಂತೆ ದಿಕ್ಕುಂಭಿ ಕುಂಭ ।
ಸ್ಥಳದೊಳ್ಸಿಂದೂರಮೆಂತಂತಮರನದಿಯೊಳಾರಕ್ತ ನೀರೇಜ ಪತ್ರಾ ॥
ವಳಿಯೆಂತಂತಬ್ಜಿಯೊಳ್ವದ್ರುಮ ಸಮುದಯಮೆಂತಂತೆ ಪರ್ವಿತ್ತು ರಾಗಾ ।
ವಿಳಮಪ್ಪಂತುರ್ವಿಯೆಲ್ಲಂ ದಶರಥ ವಸುಧಾಧೀಶ ತೇಜಃಪ್ರಕಾಶಂ ॥ ೧೩ ॥

ಉ ॥ ಖಂಡಿಸಿ ವೈರಿವಂಶವನಮಂ ಕಡಿದುದ್ಧತ ಶಾಖೆಯಂ ಭುಜಾ ।
ದಂಡ ಕೃಪಾಣದಿಂ ಸಮಜಿ ಕಂಟಕಮಂ ಸಮೆದಾತಪತ್ರದಿಂ ॥
ಚಂಡಕರ ಪ್ರತಾಪಮಖಿಲೋರ್ವರೆಗಿಲ್ಲೆನೆ ತಣ್ಪುಮಾಡಿದಂ ।
ದಂಡಧರೋತ್ತಮಂ ದಶರಥಂ ಸಫಲೀಕೃತ ಸನ್ಮನೋರಥಂ ॥ ೧೪ ॥

ಚ ॥ ಅನಿಮಿಷ ಗಾಯಕರ್ದಶರಥ ಕ್ಷಿತಿನಾಯಕನಂಕಮಾಲೆಯಂ ।
ತನತನಗೊಲ್ದು ಪಾಡುವೆಡೆಯೊಳ್ಪುಳಕಂ ಪೊಜಪೊಣ್ಮೆ ಸೋಲ್ತು ಕೇ ॥
ಳ್ದನಿಮಿಷ ನಾಯಕಂ ತನಗೆ ಚ್ಛಾಮರಮಿಕ್ಕುವ ದೇವಕಾಮಿನೀ ।
ಜನ ಮಣಿಕಂಕಣ ಧ್ವನಿಗೊನಲ್ದವರಂ ಕಿಸುಗಣ್ಣಿ ನೋಡುವಂ ॥ ೧೫ ॥

ಉ ॥ ನೋಡಿರೆ ಕಿನ್ನರರ್ದಶರಥ ಕ್ಷಿತಿನಾಥನ ಬೀರದೇಳ್ಗೆಯಂ ।
ಪಾಡ್ದೆಮರುಳ್ದು ಕೇಳ್ವ ಪದದೊಳ್ಕವಿಸಾರ್ದು ಜಿನುಂಗೆ ಸೌರಭ ॥
ಕ್ಕಾಡುವ ತುಂಬಿಗಳ್ಕವಿಜನಾಥನವರ್ಕೆ ಕನಲ್ದು ಮಾಣದೀ ।
ಡಾಡುವನಾ ನವ್ಯೋದು ಕುಸುಮಸ್ರಬ್ಕಂಗಳ ಕರ್ಣಪೂರಮಂ ॥ ೧೬ ॥

ಕಂ ॥ ಬಾಲ್ಬಿಸಿಲಿನನ ತೇಜಮ
ನೇಳಿಸೆ ನೆಲನಂ ಪಯೋಧಿಪರ್ಯಂತಂ ಬಾಯ್
ಕೇಳಿಸಿ ದಶರಥನೊಳ್ಪಂ
ಪಾಳಿಸಿ ಸುಖದಿಂದಮರಸುಗೆಯ್ಯುತ್ತಿರ್ದಂ ॥ ೧೭ ॥

ಆ ನಿಖಿಲರಾಜ ಕಿರೀಟಕೀಲಿತ ಹರಿನೀಲ ಮದಾಳಿಮಾಲಾ ಪರಿಚುಂಬಿತ ಚರಣಾರವಿಂದನೊಂದು ದಿವಸಮಾಪ್ತಪರಿಜನಂಬೆರಸು ಕರುಮಾಡದೆರಡನೆಯ ನೆಲೆ

---

1. ಮುಗುಳ್ವ. ಕ. ಖ. ಗ. ಘ.

ಯ ಮೊಗಸಾಲೆಯೊಳಿಕ್ಕಿದ ಮಣಿಮಯಾಸನನಮನಲಂಕರಿಸಿ ಕರ್ಣಪೂರ ಪಾರಿಜಾತ ಸ್ತಬಕ ಪರಿಮಳಕ್ಕೆಳಸಿ ಬಳಸುವೆಳದುಂಬಿಯ ಕಳರವಮನಾಲಿಸುತಿರ್ಪುದುಮಾ ಸಮಯದೊಳ್—

ಮ ॥ ನಯನೋತ್ಸಾಹಮನಿತ್ತು ದೇಹ ರುಚಿಯಿಂದೆಯ್ತಂದನಾಕಾಶ ಗಂ।
ಗೆಯ ನೀರ್ಮಾನಿಸನೆಂಬಿನಂ ದಶರಥ ಕ್ಷ್ಮೋಣೀಶನಾಸ್ಥಾನ ಭೂ ॥
ಮಿಯನಾ ನೀರದಮಾರ್ಗದಿಂದಿಳಿದು ಸ್ವರ್ನಾರ್ಗಕ್ಕೆ ಮೆಯ್ದಾರದ।
ನಯಮಂ ನಾರದನಾವ ಕಾಳೆಗದೊಳಂ ಕಣ್ಣಾರದಂ ನಾರದಂ ॥ ೧೮ ॥

(೧೯)

ಕಂ ॥ ಬಿಸಸೂತ್ರದ ಕಟಿಸೂತ್ರಂ,
ಪೊಸದುಗುಲದ ಕೋವಣಂ, ಕಮಂಡಲು ರಾರಾ ॥
ಜಸೆ/ದಂಡಪಾಣಿ ಪೊಕ್ಕಂ
ಕಿಸುರಟ್ಟಿಪಂ, ಪಿಸುಣ ಪಸರಿಗಂ. ನೃಪಸಭೆಯಂ ॥ ೧೯ ॥

ಅಂತಾ ನಾರದಂ ನಭೋಮಂಡಲದಿಂ ಸಭಾಮಂಡಲಕ್ಕವತರಿಸೆ—

ಕಂ ॥ ಇದಿರೆಬ್ಬಿ ಚ್ಛಾಕಾರಮ
ನುದಾತ್ತನೇನಿತ್ತು ಮಾಣ್ಪನೇ/ಕಾಂಚನ ಪೀ ॥
ಠದೊಳಿರಿಸಿ, ಮುಕುಳಿತಾಂಜಲಿ
ಸದರ್ಘ್ಯ ಸಾಕ್ಷತಮನರ್ಘ್ಯಪಾದ್ಯಮನಿತ್ತಂ ॥ ೨೦ ॥

ಬಂದ ಬರವಾವುದೀ ಬರ
ವಿಂದಂ ಚರಿತಾರ್ಥನಾದೆನಾನೆಲ್ಲಿಂದಂ ॥
ಬಂದಿರೆನೆ ನೃಪತಿ, ನಾರದ
ನೆಂದಂ ದಶನಾಂಶು ಕೆದಜಟಿ'ಚಂದ್ರಾತಪಮಂ ॥ ೨೧ ॥

ಆನೀ ಜಂಬೂದ್ವೀಪದ ಪೂರ್ವವಿದೇಹದ ಪುಂಡರೀಕಿಣೀಪುರದ ಸೀಮಂಧರಸ್ವಾಮಿಗಳ ಪರಿನಿಷ್ಕ್ರಮಣ ಕಲ್ಯಾಣ ವಿಭೂತಿಯಂ ನೋಡಿ ಬಂದೆನೆಂದು ಸಭ್ಯರಿಯಂ ಕಣ್ಣನ್ನೆಯಿಂ ತೊಲಗಿಸಿ ದಶರಥಂಗೆ ಕಟ್ಟೀಕಾಂತದೊಳಿಂತೆಂದಂ—

ಉ ॥ ಲಂಕೆಗೆ ಪೋಗಿ ಶಾಂತಿ ಜಿನಭಕ್ತಿಯೊಳ್ಗಾಂ ಸ್ಮರ ದಾನದಂತಿ ವ।
ಜ್ರಾಂಕುಶ ದರ್ಶನ ಸ್ತವನದಿಂ/ಚರಿತಾರ್ಥನೆನಾದೆನಾಗಿ/ವೀ ॥
ತಾಂಕುಶನಪ್ಪ ರಾವಣನೊಳಂ ನೆರೆದೀನುಡಿಗೇಳ್ದು ನಾಡೆಯುಂ।
ಶಂಕೆಯೊಳೊಂದಿ ಬಂದೆನಜಿಪಲ್ಪೆಜತೇಂ ನಿಮಗಾ ಪ್ರಪಂಚಮಂ ॥ ೨೨ ॥

ಅದೆಂತೆನೆ ವಿಭೀಷಣಂ ಸಾಗರಬುದ್ಧಿವೆಸರ ನೈಮಿತ್ತಿಕನಂ ಬರಿಸಿ ರಾವಣನ ಮರಣಕಾರಣಮುಂ ಬೆಸಗೊಳ್ವುದುಂ—

ಕಂ॥ ಏನುಂ ತೊದಳಿಲ್ಲಿದುವೆ ಶಿ
ಲಾನಿಕ್ಷಿಪ್ತಾಕ್ಷರಂ ವಿಭೀಷಣ ಶರಣದೊಳ್ ॥
ಜಾನಕಿಯ ದೂಸಱಿಂ ಲಂ
ಕಾನಾಥಂ ದಾಶರಥಿಯ ಕೈಯೊಳ್ ಮುಡಿಗುಂ ॥ ೨೩ ॥

ಎನೆ ವಿಭೀಷಣಂ ವಿಷಣ್ಣನಾಗಿ—

ಕಂ ॥ ಆರಯಿಲವರುತ್ಪತ್ತಿಗೆ
ಕಾರಣಮೆನಿಸಿರ್ದ ಜನಕನಂ ದಶರಥನಂ ॥
ಮಾರಣಮುಂ ಪೊರ್ದಿಸುವೆಂ'
ಕಾರಣ ವಿಘಟನಮೆ ಕಾರ್ಯ ವಿಘಟನಮಲ್ತೇ ॥ ೨೪ ॥

ಎಂದು ತಱಿಸಂದು—

ಚ ॥ ಎನಗಿದಯುಕ್ತಮಿನ್ನ ಬಗೆ ಪಾಪನಿಬಂಧನಮೇವುದೆಂಬಿದಂ।
ನೆನೆಯದೆ ತನ್ನ ಸೋದರನೊಳಪ್ಪ ವಿಪತ್ತಿಗಣಂ ವಿಭೀಷಣಂ ॥
ಮನದೊಳಬಿಲ್ದು ನಿಮ್ಮನಱಿಯಲ್ಬಗೆದಂದನಿದರ್ಕೆ ತಕ್ಕುದಂ।
ನೆನೆದಿರಿಮಾನಿದಂ ತಡೆಯದಿಂ ಜನಕಂಗಱಿಪಲ್ಕೆ ಪೋದಪೆಂ ॥ ೨೫ ॥

ಎಂದು ನಾರದಂ ನೀರದಪಥಕ್ಕೆ ನೆಗೆದು ಮಿಥಿಳೆಯನೆಯ್ದಿ ಜನಕಂಗಮಾ ಸ್ವರೂಪಮನಱಿಪಿಸೋಪುದುಮಿತ್ತಲ್ ದಶರಥನಾ ವಾರ್ತೆಯೆಲ್ಲಮಂ ಸಮುದ್ರ ಹೃದಯನೆಂಬ ತನ್ನ ಮಂತ್ರಿಮುಖ್ಯಂಗಱಿಪುವುದುಮಾತನಿದರ್ಕೆ ಕಾಲವಂಚನಮೆ ಕಾರ್ಯಮೆಂದು ನಿಶ್ಚಯಂಗೆಯ್ದು ದಶರಥನಂ ಕಳಿಪಿ ಚಿತ್ರಕನುಂ ತಾನುಮಲ್ಲದೆ ಪೆಱರಱಿಯದಂತು ಕರುವಿಡಿಸಿ ಲಾಕ್ಷಾರಸಾದಿಗಳಿಂ ಸಪ್ತ ಧಾತುಗಳಂ ಪಡೆದು ವರ್ಣ ಕ್ರಮಂ ಗೆಯ್ಯೆ—

ಕಂ ॥ ಇದು ಭೂಪನ ರೂಪಿದು ಲೆ
ಪ್ಪದ ರೂಪೆನಲೆಂತುಮಱಿಯಲರಿದೆನೆ ಬಗೆಗೊಂ ॥
ಡುದು ನಡೆವ ನುಡಿವ ತೆಱದಿಂ
ಪ್ರದೇಶಸೌಷ್ಠವಮದೇಂ ವಿಚಿತ್ರಮೊ ಚಿತ್ರಂ ॥ ೨೬ ॥

ಅಂತು ಪರವಿದ್ಧಮಂ ಪ್ರತ್ಯಕ್ಷಮಂ ಮಾಡಿದ ಚಿತ್ರಕನ ಪರಿಣತಿಯಂ ಮನದೆ

ಕೊಂಡು ಲೆಪ್ಪದರಸನಂ ಕರುಮಾಡದೆರಡನೆಯ ನೆಲೆಯೊಳಿರಿಸಿ ಪರಿಜನಮುಂ ತಾನುಮೋಲಗಿಸುತ್ತಿರೆ—

ಕಂ ॥ ಜನಕನ ಮಂತ್ರಿಯುಮಿಾ ಕ್ರಮ
ದಿನನುಷ್ಮಿಸಿ ಕಳಿಪೆ ಜನಕನುಂ ದಶರಥನುಂ ॥
ದಿನಕರನುಂ ಹಿಮಕರನುಂ
ಘನಾಘನಾಂತರಿತರಾದರೆನೆ ತಲೆಗರೆದರ್ ॥ ೨೭ ॥

ಅನ್ನೆಗಮಿತ್ತ ವಿಭೀಷಣಾದೇಶದಿಂ ಬಂದ ತೀಕ್ಷ್ಣ ಪುರುಷರ್ ಪುರಮಂಪೊಕ್ಕು ಕರುಮಾಡನುಂ ಪುಗಲ್ಪಡೆಯದೆ ತಡೆದಿರ್ದುದುಂ—

ಉ ॥ ಅಟ್ಟಿದ ಜಟ್ಟಿಗರ್ತಡೆದುದರ್ಕೆ ಕನಲ್ದು ವಿಭೀಷಣಂ ಮುಗಿ।
ಲ್ವಟ್ಟಿಯಿನಟ್ಟ ತಿಂಬ ಜವನಂ[1]ತಿರಲೋಧ್ಯೆಗೆ ಬಂದು ಪೊಕ್ಕು ಪೊಂ ॥
ಬೆಟ್ಟವೆನಿಪ್ಪ ಪೊನ್ನಕರುಮಾಡಮನಂದಿರುಳಲ್ಲಿ ಕಂಡು ಕ।
ಣ್ಮುಟ್ಟಿನೊಳಿರ್ದ ಲೆಪ್ಪದರಸಂ ಕೊಲವೇಟ್ಟನಸಾರ ಚೇತನಂ ॥ ೨೮ ॥

ಅಂತುಸೇಟ್ವಿದುಂ

ಕಂ ॥ ಬೆಸನಂ ವಿದ್ಯುದ್ವಿಳಸಿತ
ವೆಸರ ವಿಯಚ್ಚರ ಭಟೋತ್ತಮಂ ಪಡೆದು ಜವಂ॥
ಮಸಗಿದನೆನೆ ಕಾಪಿನವ
ರ್ದೆಸೆಗಿಡೆ ಪೊಕ್ಕಿಜ್ಜಿದು ಕೊಂದು ತಲೆಯಂ ತಂದಂ ॥ ೨೯ ॥

ಆ ಸಮಯದೊಳ್—

ಕಂ ॥ ಪರಿಜನದ।ಭೂಪನಂತಃ
ಪುರದಬಳಾಜನದ।ನೆಗೆದ ಹಾಹಾರವಮೆ ॥
ಯ್ತರೆ ಕಿವಿಗೆ ಕೇಳ್ದು ನಲಿದಂ।
ಕರುಣಾರಸ ರಹಿತನಸ್ತಾವನಾಖಚರನವೋಲ್ ॥ ೩೦ ॥

ಕಂ ॥ ಕೊಲಲೆಂದು ಬಂದು ಲೆಪ್ಪದ
ತಲೆಯಂ ಕೊಂಡುಯ್ದನಾ ವಿಭೀಷಣನಾರುಂ ॥
ಕೊಲಲಾರ್ಪರೆ ಸಾಯದರಂ।
ಲಲಾಟದೊಳ್ ವಿಧಿಯ ಬರೆದ ಲಿಪಿ ಜಲಲಿಪಿಯೇ ॥ ೩೧ ॥

---

1. ತೆವಿನೀತೆಗೆ. ಗ.

ಅಂತವನ ತಂದ ತಲೆಯಂ ಕಡಲೊಳೀಡಾಡಿ ಜನಕನುಮನಂತೆವೞಾಡಿ ಮಗುಟಿ ಲಂಕೆಗೆ ಪೋಗಿ—

ಮ ॥ ಮನದೊಳ್ತನ್ನ ನೆಗಟ್ಟಿಯಂ ನೆನೆದು ಕಷ್ಟಂಗೆಯ್ದನಾಕ್ಷೀ ದಶಾ ।
ನನನಂ ಕೊಲ್ವನನಾವನೀ ಕಡಲನಾವಂ ದಾಂಟುವಂ ಲಂಕೆಗಾ ॥
ವನೊ ಬರ್ಪಂ ಗಡ ಭೂಮಿ ಗೋಚರನಿದಂ ನೈಮಿತ್ತಿಕಂ ಪೇೞ್ದೊಡಾ ।
ತನ ಮಾತಿಂಗವಿಚಾರಿತಂ ನೆಗಟ್ಟಿದ್ದಿನೆಂದುಬ್ಬೆಗಮುಂ ತಾಳ್ದಿದ್ದಂ ೮

ಕಂ ॥ ಜಿನಗೃಹಮಂ ಪ್ರಾಯಶ್ಚಿ
ತ್ತ ನಿಮಿತ್ತಂ ನಿರತಿಶಯಮೆನಲ್ಯಾಡಿಸಿದಂ ॥
ತನಗೆ ಕಷಾಯೋದಯದಿಂ
ಜನಿಯಿಸೆ ಪೊಲ್ಲಮೆಯನೊಳ್ಕಿದಂ ಸ್ಮರಿಪನೇ ॥ ೩೩ ॥

ಅನ್ನೆಗಮಿತ್ತ ದಶರಥನ ಜನಕನ ಪರಿಜನಂ ಲೆಪ್ಪದರಸನಪ್ಪುದನೞಿದು ಸಂತೋಷಂಬಟ್ಟಿರ್ಪುದುಂ, ಅತ್ತ ದಶರಥನುಂ ಜನಕನುಂ ರೂಪ ಪರಾವರ್ತನದಿನನೇಕ ದೇಶಂಗಳಂ ನೋಡುವುದೆ ತಮಗೆ ವಿನೋದಮಾಗೆ ತೊಟಲುತ್ತುಂ ಬಂದು—

ಕಂ ॥ ಸಕಲರ್ತುಕ ವನದಿಂ ದೀ
ರ್ಘಿಕೆಯಿಂ ಪುಷ್ಕರಿಣಿಯಿಂ ಸರೋವರದಿಂ ಕೌ ॥
ತುಕಮನವರ್ಕಂಡರ್ಕೌ
ತುಕ ಮಂಗಳಪುರಮನುರ್ವರಾ ನೂಪುರಮಂ ॥ ೩೪ ॥

ಚ ॥ ಮಿಸುಗುವ ಪೊನ್ನಕೋಂಟೆ ಮುಗಿಲಂ ತುಡುಕುತ್ತಿರೆ ಪೆಂಪುವೆತ್ತಗಟ್ ।
ಬಿಸರುಹಮುಳ್ಳರಲ್ದು ಸಿರಿ ಕಣ್ಪೆಱೆದಂತಿರೆ ಸುತ್ತಲುಂ ಬನಂ ॥
ಕುಸುಮಶರಂಗೆ ಪೊಚ್ಚಪೊಸ ಜೌವನದಂತಿರೆ ರಾಜಧಾನಿ ಕ ।
ಣ್ಗಸದಳಮೊಪ್ಪಿ ತೋೞಿದುದು ಕೌತುಕ ಮಂಗಳಮಾತ್ತ ಮಂಗಳಂ ॥ ೩೫ ॥

ಆ ಪುರದ ಪೊೞಲಿವೊಲಿನೆಯ್ದಿವರ್ಪಾಗಳ್—

ಕಂ ॥ ಲಲನಾ ರತ್ನದೊಳಂ ಜಯ
ಲಲನಾ ರತ್ನದೊಳಮಪ್ಪ ತೋಳ್ವೆರಗನ್ನನಾ ॥
ಕುಲಮೞಿಪುವಂತೆ ಬಲಗ
ಣ್ಣಲಗೈ ಕೆತ್ತಿದುವು ದಶರಥಂಗೊರ್ಮೊದಲೊಳ್ ॥ ೩೬ ॥

ಅಂತೆಯ್ದಿವರ್ಪುದುಮಾಪುರದ ಬಹಿಃಪುರೋದ್ಯಾನ ಪ್ರದೇಶದೊಳ್ ಕನಕ

ಪ್ರಾಕಾರ ಕಮನೀಯಮುಮ್ಮುಂಬರ ತಳ ಚುಂಬಿ ಚಂಚದ್ಧ್ವಜರಾಜಿ ವಿರಾಜಮಾನ ಮುಮನೇಕ ಮಣಿಭವನ ಭಾಸುರಮುಮೆನಿಸಿ ಜನಮನೋಹರಂ ಸ್ವಯಂವರ ಭೂಮಿ ನಯನಾಭಿರಾಮಮಾದುದಲ್ಲಿ—

ಕಂ ॥ ಪಳುಕಿನ ಚಾಖಂಡಂಗಳ
ಕೆಳಗಣ ಚೆಂಬೊನ್ನ ಮತ್ತವಾರಣದೊಳ್ ಕ ॥
ಣ್ಗೊಳಿಸಿದರನೇಕ ದೇಶಂ
ಗಳ ರಾಜತನೂಜರೋಳ್ಳಿಯಿಂದಿರ್ಕೆಲದೊಳ್ ॥ ೩೭ ॥

ಆಗಳಲ್ಲಿ—

ಮ ॥ ನಯನಾಕರ್ಷಣವಿದ್ಯೆ ಗಂಡುವರಿಜಂ ಕೈಕೊಂಡುದೋ,ಗಂಡಗಾ।
ಡಿಯನೀತಂಗೆ ಮನೋಜನೊಪ್ಪಿಸಿದನೋ ನೇಲ್ಕಿಂಬಿನಂ ಬಣ್ಣಿಸಲ್ ॥
ಬಯಸಲ್ತಕ್ಕ ಬೆಡಂಗು ಕಣ್ಗೊಳಿಸೆ ತನ್ನಂ ಕಂಡಣಂ ಕನ್ನೆಯಾ।
ಸೆಯನಾ ರಾಜಕುಮಾರಕರ್ತೊಜ್ಜಿವಿನಂ ಪೊಕ್ಕಂ ಸಭಾಸದ್ಮಮಂ ॥ ೩೮ ॥

ಚ ॥ ತೊಡವುಗಳೆಡ್ಡಮಾದನಿತಱಿಂ ತನಗಕ್ಕುಮೆ ಗಾಡಿ/ಗಾಡಿ ಮೆ।
ಯ್ದೊಡವೆನೆ,ಮಾಸಿ ರೂಪುಗರೆದಿರ್ದೊಡವಹಾತನ ರೂಪಿದೊಂದು ಕ ॥
ಣ್ದೊಡವೆನೆ.ಬೇಱದೊಂದು ಬಗೆಗಿಕ್ಕಿದ ಟಕ್ಕೆನೆ.ವಶ್ಯದೊಂದು ತ
ಣ್ದೊಡರೆನೆ.ನೋಲ್ಪ ನೋಟಕರ ಕಣ್ಗೊಳಗಾದುದು ಕಣ್ಣಪಾಪೆವೋಲ್ ॥ ೩೯ ॥

ಆಂತು ದಶರಥಂ ಸ್ವಯಂವರ ಸಭಾಸದನಮುಂ ಪೊಕ್ಕು ತಾನುಂ ಜನಕನು ಮೊಂದು ಕಡೆಯ ಪಟ್ಟ ಕಾಂಚನಮುಂಜೋಪಾಂತದೊಳ್ ನಿಂದು ನೋಡುತ್ತುಮಿರೆ—

ಕಂ॥ ಏಱಿ ಮಣಿವೆಸದ ಸಿವಿಗೆಯ್ದು
ನೇಱಿಸಿ ಕುಡುವಿಲ್ಲನೊಡನೆ ಬರೆ ಕಂದರ್ಪಂ॥
ನೀಱಿ ಮುಗಿಲ್ವೊರೆಯೊಳ್ ಮೆ
ಯ್ವೀಱುವ ಶಶಿಕಳೆಯ ಗಾಡಿಯಂ ಗೆಲೆವಂದಳ್ ॥ ೪೦ ॥

ಯುವತೀರತ್ನದ ಕೆಲದೊಳ್,
ಧವಳ ವಿಲ್ತೋಚನ ಮರೀಚಿ ತಿಂಗಳ ಬೆಳಗಂ ॥
ಕವರ್ದು ಕೊಳ್ಳೆ ಕುಂಚದಡಪದ
ಡವಕೆಯ ಕನ್ನಡಿಯ ಕನ್ನೆಯರ್ಕಣ್ಗೆಸೆದರ್। ॥ ೪೧ ॥

ಎಳವೆಱ್ಪಿಂ ಪೊನ್ನ ಪುತ್ತಳಿಗೆ.ರನ್ನದ ದೀವಿಗೆ,ತನ್ನ ಪುಷ್ಪ ಕೋ।
ಮಳ ತನು ಬೇಱಿಂ ಬೀಱಿ ನಯನೋತ್ಸವಮಂ,ನಿಜಲೋಚನಂಗಳು ॥

ತ್ಪಳ ದಳ ದಾಪ್ತುಮಂ ಕೆದಱಿ ಕಣ್ಗೆಸೆದಳ್ | ನವರತ್ನಮಾಲೆ ಕೆಂ।
ದ್ಪಳದೊಳನಂಗಪಾಶಮೆನೆ ಕೈಕೆ ಮನೋಜನ ಬಯ್ತು ಬಯ್ಕೆವೋಲ್ ॥ ೪೨ ॥

ಆ ಸಮಯದೊಳಖಿಳ ರಾಜಕುಲದುಭಯ ವಿಶುದ್ಧಿಯುಮನನ್ವಯ ಪ್ರಸಿದ್ಧಿಯುಮನಱಿಪಿ—

ಕಂ ॥ ಕಂಚುಕಿ ಪರಿವಿಡಿಯಿಂ ನೃಪ
ಸಂಚಯಮಂ ತೋಱಿ ನಿಂದುದಿಲ್ಲವಳ ತಟಿ ॥
ತ್ಸಂಚಲ ನಯನಯುಗಂ ನಿಜ
ದಿಂ ಚಳವೊಂದೆಡೆಯೊಳೆಂತುಮೀಂ ನಿಂದಪುದೇ ॥ ೪೩ ॥

ಉ ॥ ಆ ನೆರೆದಿರ್ದ ರಾಜಸುತರಂ ಪರಿದೆಯ್ದಿ ಬಟಿಲ್ದು ವಿಶ್ರಮ।
ಸ್ಥಾನಮನನ್ಯಾ ಮಹೀಭುಜನ ಮೆಯ್ಸಿರಿಯಂ ಸೆಜಿಗೈಯ್ಯೆ ತತ್ಸರೋ।
ಜಾನನೆ ತನ್ನ ಲೋಲ ನಯನೋತ್ಪಲಮಾಲೆ ನೃಪಂಗೆ ಮಾಲೆಯಂ।
ತಾನೊಸೆದಿಕ್ಕಿದಳ್ಖಿಲ ರಾಜಕುಲಂ ಮನಮ್ಮಿಕ್ಕುವನ್ನೆಗಂ ॥ ೪೪ ॥

ಕಂ ॥ ಆ ರಾಜನ್ಯಕಮಿರೆ ಕ
ನ್ಯಾರತ್ನಂ ರೂಪುಗರೆದೊಡಂ ನಿಜಪುಣ್ಯ ॥
ಪ್ರೇರಣೆಯಿಂ ಕೈಸಾರ್ದ
ತ್ತ್ಯ ರಘುವೀರಂಗೆ ಪುಣ್ಯದೊಳ್ ಪುರುಡುಂಟೇ ॥ ೪೫ ॥

ಉ ॥ ಎತ್ತಿದುವಾತಪತ್ರಶತಖಿಕ್ಕಿದುವಾಗಳೆ ಹೇಮಚಾಮರಂ।
ಮುತ್ತಿನ ಸೇಸೆಯಂ ತಳಿದರಂಗನೆಯರ್ ಗಗನಾಂತರಾಳಮಂ ॥
ಮುತ್ತಿದುದುತ್ಸವಾನಕ ರವಂ ದ್ವಿಜಮಂಗಳ ಮಂತ್ರ ನಾದಮು।
ಣ್ಮೈತ್ತಿನಿತುಂ ವಿಭೂತಿ ಪತಿಗಾದುದು [1] ಬಾಲಿಕೆ ಸೂಡೆ ಮಾಲೆಯಂ ॥ ೪೬ ॥

ಅಂತಾತಂಗೆ ಕನ್ನೆ ಕೈಸಾರ್ವುದುಂ—

ಉ ॥ [1]ಬಾಲಿಕೆ ಮುಗ್ಧೆ ತಕ್ಕುದಱಿಯಳ್ ಪಲರಂ ಪೆಱಗಿಕ್ಕಿ ಸೂಡಿದಳ್
ಮಾಲೆಯನಾಕೆಯುಂ ಕಳೆದುಕೊಳ್ವುದು ದೇಸಿಗನಂ ತಗಳ್ವುದೀ ॥
ಕಾಲವಿಳಂಬಮೇವುದೆನುತುಂ ರಣಬಾಲಕರಾ ಸಮಸ್ತ ಭೂ।
ಪಾಲಕ ಬಾಲಕರ್ ಕದನಕೇಳಿಗೆ ಮಚ್ಚರದಿಂದೊಡರ್ಚಿದರ್ ॥ ೪೭ ॥

---

1. ಬಾಲಕಿ. ಕ. ಖ. ಗ. ಘ. ಚ.

ಚ ॥ ಅನರಣ್ಯ ಪ್ರಿಯನಂದನಂ ದಶರಥಂ ಸಾಕೇತನಾಥಂ ಶರಾ ।
ಸನ ವಿದ್ಯಾಗುರು ವೀರನೆಂದಱಿದುದಿಲ್ಲೀಕಾಕಿ ಸಾಮಾನ್ಯನೆಂ ॥
ದನಿತುಂ ರಾಜಸಮಾಜಮಾಜಿಗೆಱಿದೆಯ್ತಂದತ್ತು ನೀರ್ಗೆತ್ತು ಬೆ ।
ಳ್ತನದಿಂ ಕತ್ತರಿವಾಣಿಯಂ ಜಡಜನಂ ಕೈಗುತ್ತಲೇಟ್ಟರ್ಪವೋಲ್ ॥ ೪೪ ॥

ಅಂತು ರಣ ಪಟಹ ಪಟು ನಿನದಮೊದವೆ ವಿಳಯ ಜಳಧಿಯಂತೆ ನೆಲೆಯಿಂ ತಳರ್ದ ರಾಜಕುಲಮಂ ಕಂಡು ಕೈಕೆಯ ಜನಕಂ ಭಯಚಕಿತ ಚಿತ್ತನಾಗಿ—

ಚ ॥ ಶುಭಮತಿ ಸ್ರೂಡಿ ತಂದು ರಥಮಂ ತಡೆಯಲ್ ಪದನಲ್ಲ, ಸಾಮದಿಂ ।
ಶುಭಮನೊಡರ್ಚಲಾಂ ನೆಜೆವೆನ್ನೇಱಿಸಿ ಕೈಕೆಯನ್ನೀ ವರೂಥಮಂ ॥
ಸಭೆಯನಗಲ್ವು ಪೋಪುದೆನೆ ಕೇಳ್ವಿನಿಸಂ ನಸುನಕ್ಕು ಭೂಭುಜ ।
ಪ್ರಭು ನುಡಿದಂ ಮುಖೇಂದುಕಿರಣಂ ನಿರ್ಮಿರ್ವಂತಿರೆ ದಂತಕಾಂತಿಗಳ್ ॥೪೯॥

ಉ ॥ ಆನೆ ಕಲಂಕುವಂತೆ ಕೊಳನಂ ಬಿಡದಾನೆ ಕಲಂಕುವೆಂ ಕರು ।
ತ್ತೀನೆರೆದ್ದಾಂತ ರಾಜಕವನೆಲ್ಲಂದಿನಿಸಂ ನಡೆ ನೋಟ್ಪುದೆಂದು ಪ್ಪಂ ॥
ಚಾನನದಂತೆ ಗರ್ಜಿಸಿ ರಘೂದ್ವಹನೇಱಿ ವರೂಥಮಂ ಘನ ।
ಜ್ಯಾ ನಿನದಂ ಭಯಂಗೊಳಿಸೆ ಜೇವ್ಗೊಡ್ಡಿದಂ ನಿಜ ಚಾಪದಂಡಮಂ ॥ ೫೦ ॥

ಚ ॥ ಅತಿಶಯಮಾಗೆ ತನ್ನ ಮುಖಚಂದ್ರಬಲಂ ಮಣಿವೆಲ್ಲಿಲ್ಲಾರನಂ ।
ಶ್ರುತಿಪಥಮಂ ಪಳಂಚಿ ಜಯ ಡಿಂಡಿಮ ನಿಸ್ವನದಂತೆ ಮೇಲುದು ॥
ದ್ಗತ ಜಯ ಕೇತುವಂ ಮಿಗೆ ಮನೋರಥ ಸಾರಥಿ ಕೈಕೆ ಬಂದು ಭೂ ।
ಪತಿಯೊಡನೇಱಿದಳ್ ರಥಮನಾ ರಘುವೀರನ ವೀರಲಕ್ಷ್ಮಿವೋಲ್ ॥ ೫೧ ॥

ಆಗಳಕಾಲ ಜಲಧರಂಗಳಂತೆ ನಿಖಿಲ ನೃಪಸುತರ್ ಸುತ್ತಿಮುತ್ತಿ ಶರವರ್ಷಮಂ ಕಜಿಯೆ—

ಕಂ ॥ ತಾಗೆ ಸರಲ್, ಪಾವಿನ ಪಲ್
ತಾಗಿದವೋಲ್ ಮೂರ್ಛೆವೋಗೆ ಸಾರಥಿ,ರಥಮಂ ॥
ಬೇಗಂ ಜೋದಿಸಿದಳ್ ನಧು,
ರಾಗರಸಂ ದಶರಥಂಗೆ ನೆಲೆವೆರ್ಚುವ ವೋಲ್ ॥ ೫೨ ॥

ವಿಾಜುದೆ ಕೇಜುದೆ ನೇಣಂ
ತೋಜುದದೆಸೆಗಾಕೆಗಂ ಹಯಕ್ಕಂ ಚಿತ್ತಂ ॥
ಬೇಜುಲ್ಲೆನೆ ಪರಿದುದು ಜವ
ನೇಜುದ ರಥಮಿಂತಿದೆನೆ ರಥಂ ದಶರಥನಾ ॥ ೫೩ ॥

ಚ ॥ ದೆಸೆ ಮಸುಳ್ವನ್ನೆಗಂ ಮಸಗಿ ರಾಜತನೂಭವರೆಚ್ಚ ಬಾಣಮುಂ ।
ಪೊಸಮುಸೆಯಂಬಿನಿಂ ಕಡಿದು ಕಟ್ಟಿಲೆಯಂ ಬೆದಱಟ್ಟಿ ಕಣ್ಗಗು ॥
ರ್ವಿಸುವಿನ ಮುಂಡಲಕ್ಕೆ ಪರಿವೇಷಮದಾಯ್ತೆನೆ ತೀವ್ರತೇಜಮಂ ।
ಪಸರಿಸಿ ಕಣ್ಗೆ ಕುಂಡಲಿತ ಚಾಪಮಗುರ್ವಿಸಿದಂ ಮಹೀಭುಜಂ

ಕೆಲರ ವರೂಥಮುಂ ಕೆಲರ ವಾಜಿಗಳಂ ಕೆಲರುಗ್ರ ಬಾಣಮುಂ ।
ಕೆಲರ ಕಿರೀಟಮುಂ ಕೆಲರ ಚಾಪಮನಿರ್ಕಡಿ ಮಾಡಿ ತನ್ನ ದೋ ॥
ರ್ಬಲದ ಪೊಡರ್ಪು ಜೀಯೆನಿಸೆ ಮಾರ್ಪಡೆಯಂ ಕೊಲಲೊಲ್ಪನಿಲ್ಲವೆ ।
ಯ್ಗಲಿ ರಘುವೀರ ನಾಥನ ಶರಾಸನ ವಿದ್ಯೆಗಿದಾವ ವಿಸ್ಮಯಂ ॥ ೫೫ ॥

ಕಂ ॥ ಗಜಿಯಿಂ [1]ಸೋಜ್ಜಿದುದೆನ್ನೆ ಕೆಂ
ಗಜಿಯಂ ಬೆಬ್ಬಟ್ಟಿ ರಾಜಸುತ ಸಂದೋಹಂ ॥
ಗಜಿ ಸೋಂಕದೆ ಬೆಳ್ಕೆರಲೆಗೆ
ಗಜಿ ಮೂಡಿದ ತೆಱದಿನೋಡಿ ಪೋದತ್ತಾಗಳ್ ॥೫೬॥

ಮ ॥ ಮೃಗರಾಜಂಗಗಿದೋಡುವಾನೆಗಡುಪಂ ಕೈಕೊಂಡು ಯೂಥಾಧಿಪಂ ।
ಮಗುಟ್ಟುಂ ಸಿಂಹದ ಮೇಲೆ ಪಾಯ್ವ ತೆಱದಿಂ ಹೇಮಪ್ರಭಂ ರಾಜಸೂ ॥
ನುಗಳಂ ತನ್ನೊಡಗೂಡಿಕೊಂಡು ಕಱೆದಂ ಜ್ಯಾಘಾತ ಮೇಘಧ್ವನಿ ।
ಸ್ಫಗಿತಾಶಾಮುಖನುನ್ಮುಖಾಂಶು ಚಪಲಾವೇಗಂ ಶರಾಸಾರಮಂ ॥ ೫೭ ॥

ಆ ಸಮಯದೊಳ್—

ಕಂ ॥ ಇದ್ದು ಮಾಯ್ದಾ ಮಯಮೊಂದ
ಲ್ಲಿದ್ದು [2]ಕೋಟ್ಯನುಕೋಟಿ ರಥಮೆನಲ್ ವೈರಿಬಲಂ ॥
ಬೆದಱೆ ಮನ್ನೋಜವದಿಂ ಪರಿ
ದ್ದುದು ಪೂರ್ಣಮನೋರಥಂ ರಥಂ ದಶರಥನಾ ॥ ೫೮ ॥

ಅಂತು ಪರಿದು ನೆರೆದ ರಾಜನ್ಯಕಮುಂ ಪಟಿಯಂತೆ ಪಲಾಯನಶೀಲಮ್ಮಾಡಿ ಹೇಮಪ್ರಭನಂ ಮುಟ್ಟಿವಂದು—

---

1. ನೊಚ್ಚಿದರೆನೆ. ಚ; ನೋರ್ಚಿದರೆನೆ. ಗ.

2 ಕೋಟಾಕೋಟಿ. ಕ. ಖ. ಗ. ಘ. ಚ

ಕಂ॥ [1]ಕಡುಕೆಯ್ವು ಗಂಡವಾತಂ
ನುಡಿದಿದ್ದಿರಾದಂತೆ ಗಂಡನಾಗೆನ್ನುತುಂ [2]ಕೈ ॥
ಮುಡಗದೆ ದಶರಥನೆಚ್ಚಂ
ಪಿಡಿ[3]ಲಲ್ಲಿಡಿಗಳವೊಲಂಬನಂಬಟ್ಟುವಿನಂ ॥ ೫೯ ॥

ಅಂತಿಸುವುದುಂ

ಕಂ॥ ಉಡಿಯೆ ಪಟಿಯಿಗೆ, ವರೂಥಂ
ಕೆಡೆಯೆ, ಭುಜಾದಂಡ ವಜ್ರಮಯ ಕೋದಂಡಂ ॥
ಕಡಿಕಂಡಮಾಗೆ, ಪಜ್ಜಿಪಡೆ
ಪೊಡವ್ರ್ಗ, ಹೇಮಪ್ರಭಂ ಹತಪ್ರಭನಾದಂ ॥ ೬೦ ॥

ಆ ಸಮಯದೊಳ್ ದಶರಥನಭಯಘೋಷಣೆಯೊಡನೆ ಜಯಪತಾಕೆ ನಭಮು ನಳ್ಳಿಜ್ಜಿಯೆ ಬೀರಸೇಸೆಯೊಡನೆ ಸೊಯಂಬರ ಸೇಸೆಯನಾಂತು ಪೌರಜನದ ಮನ ದೊಡನೆ ಕೌತುಕಮುಂಗಳ ಪುರಮುಂ ಪುಗುವಾಗಳ್—

ಉ॥ ಓಡಿಸಿದ್ದಾತನೀತನಿದಿರಾದ ವಿರೋಧಿಗಳಂ ವಿಲಾಸದಿಂ ।
ಜೋಡಿಸಿದಾತನೀತನಸಮಾಯುಧನಂ, ತನಗೊಲ್ದು ಮಾಲೆಯಂ ॥
ಸೂಡಿಸಿದಾತನೀತನವನೀಶ್ವರ ಕನ್ಯೆಯನೆಂದು ತೋಜಿ ಮಾ ।
ತಾಡಿದುದೊಲ್ದು ನೋಡಿದುದು ಪೌರ ವಧೂಜನಮಾದಿರಾಜನಂ ॥ ೬೧ ॥

ಅಂತು ಪುರಮುಂ ಪೊಕ್ಕರಮನೆಗೆ ಬಿಜಯಂಗೆಯ್ವುದುಂ ದಶರಥಮಹೀ ನಾಥನಪುದನಜ್ಜಿದು—

ಉ॥ ನೋಡಿರೆ, ಕನ್ನೆಯಂ, ದಶರಥಂಗನುರೂಪೆಯನ್ನೆವ ಸೈಪು ಕೈ ।
ಗೂಡಿದುದೆಂದು ತನ್ನ ವಿಭವಕ್ಕನುರೂಪಮೆನಲ್ವಿವಾಹಮಂ ॥
ಮಾಡಿದನುತ್ಸವಕ್ಕೆ ಪೊಱಗೊರ್ವರುಮಿಲ್ಲೆನೆ ಕೊಟ್ಟು ಸಂತಸಂ ।
ಮಾಡಿದನಾರೊಳಂ ಶುಭಮತಿ ಕ್ಷಿತಿನಾಥನಿದೇನುದಾತ್ತನೋ ॥ ೬೨ ॥

ಆಗಳಾ ವಿವಾಹಾನಂತರಂ ಕೈಕೆವೆರಸು ದಶರಥನಯೋಧ್ಯೆಗೆ ಜನಕಂ ಮಿಥಿಳೆಗೆ ಪೋಗಿ ಮುನ್ನಿನಂತೆ ಸುಖದಿನರಸುಗೆಯ್ಯುತ್ತಿರ್ದರಿತ್ತಲ್ ದಶರಥ ನರೇಂದ್ರನೊಂದು ದಿವಸಂ—

---

1. [illegible] ಕ. ಖ. ಚ.
2. ತಾಂ ಮುಡುಗದೆ ಕ. ಖ; ತಾಂ ಮುಡುಗದೆ. ಘ. ; ಕೈಮುಡಗದೆ. ಗ. ಚ.
3. ಲಲ್ಲಿಡಿ. ಗ. ಪ.

ಕಂ॥ ಪರಿಮಿತ ಪರಿಜನ ಪರಿವೃತ
ನರಸಂ,ಬಗೆದರಸಿ ತೇರನೆಸಗಿದ ಗೆಲವಂ,॥
ತರವೇಱಿ,ವೃದ್ಧಕಂಚುಕಿ
ತರೆ, ಬಂದಳ್ ಕೈಕೆ ಬಳಸಿಬರೆ ಸಹಚರಿಯರ್ ॥ ೬೩ ॥

ತರಳಕಟಾಕ್ಷಂ ಮೋಹನ
ಶರಮೆನೆ, ಮೇಖಲೆಯ,ಪಾರಿಹಾರ್ಯದ,ಮಣಿನೂ ॥
ಪುರದ, ಮಧುರಸ್ವನಂ ಮು
ಪ್ಪುರಿಗೂಡಿದ ಮದನಪಾಶಮೆನೆ, ನಡೆತಂದಳ್ ॥ ೬೪ ॥

ಅಂತುಬಂದು—

ಕಂ ॥ [1]ತನಿಸೋಂಕು ಸೋಂಕಿ ಸಿಂಹಾ
ಸನದೊಳ್ತನ್ನೊಡನೆ ಕೈಕೆ ಕುಳ್ಳಿರೆ ಪುಳಕಂ ॥
ತನಗೆ ತಲೆದೋಱಿ ದಶರಥ
ಜನಪತಿ ಕೈವಂವ ಕಲ್ಪತರುವಂ ಪೋಲ್ತಂ ॥ ೬೫ ॥

ಅನಂತರಮಾಕೆಯ ಮುಖಾರವಿಂದಮನಾನಂದ ವಿಸ್ಫಾರಿತ ವಿಲೋಚನನಾಗಿ ನೋಡಿ—

ಕಂ ॥ ಈಕೆ ರಥಮೆಸಗೆ ವೈರಿ ಪ
ತಾಕಿನಿಯಂ ಗೆಲ್ದೆನೀಕೆ ಗೆಯ್ಪುಪಕೃತಿಗಾ ॥
ನೀಕೆಯ ಬೇಡಿದುದಂ ನಿ
ರ್ವ್ಯಾಕುಳಮಿಾಯದೊಡೆ ಮೆಚ್ಚು ಪೊಳ್ಪಾಗಿರದೇ ೬೬ ॥

ಎಂದು ಪರಿಜನದ ಮೊಗಮಂ ನೋಡಿ ಕೈಕೆಯಂ ನಿನ್ನ ಮೆಚ್ಚಿದುದಂ ಬೇಡಿಕೊಳ್ಳೆಂಬುದುಂ—

ಕಂ ॥ ಏನಂ ಬೇಡುವೆನೆಂದ
ಬ್ಜಾನನೆ ಬಗೆ ಬೆದಱಿ,ಬಗೆಗೆ ಬಂದ್ಮೊಡಮೆಯನ್ಮೊ ॥
ಲ್ಲಾನ್ಮೆರೆದಾಗಳೆ ಕುಡಿಮೆಂ
ದ್ಧಾನೃಪತಿಗೆ ಕೈಕೆ ಬೈಕೆಗೊಟ್ಟಳ್ ಮೆಚ್ಚಂ ॥ ೬೭ ॥

---

[1] ತನು. ಗ; ತನುಸೋಂಕು ಸೋಂಕೆ. ಘ; ತನುಸೋಂಕೆ. ಚ.

ಅನಂತರಂ ನಿಜಪ್ರಿಯನ ನಿಯಮದಿನರ್ಘಾಸನದಿನೆಬ್ಬು ಪೂಮಾಲೆಯು ಮನವನಿಪತಿಯ ನಯನಕುವಲಯ ಮಾಲೆಯುಮನ್ತಾಂತು, ಬಲಿಲ್ಮುಡಿ ಜೆಲ್ವಿಂಗೆ ನ್ಮುಡಿಗವಿದ್ದಂತೆ ಸೊಗಯಿಸೆಯುಂ, ಕೊರಲೊಳಿಕ್ಕಿದೆಕ್ಕಸರದ ಕೆಂಬಟ್ಟೆಯ ತೊಂಗಲ ನಂಗ ಜಂಗಮಲತೆಯ ತಳಿರ ತೊಂಗಲಂತೆ ಪೊಳೆಯೆಯುಂ, ಮೇಲುದಱ ಸೆಱಂಗ ನುಱಿ ಸೆಱಿಗೆಯ್ದು ಪೊಱಪೊಣ್ಮುವ ಪ್ರಭಾಗದ ಶರೀರಕಾಂತಿ ಲಾವಣ್ಯರಸದ ತಂದ ಲನಗುಂದಲೆಮಾಡೆಯುಂ, ಘನನಿತಂಬಬಿಂಬಮಂ ಬಳಸಿದ [1]ನೂಲತೊಂಗಲ ಮಧುರಧ್ವನಿ ಮನುಜ ಮಕರಧ್ವಜನ ಮನಮನೊಡನೊಡನೆ ಕರೆವಂತಡಿಗಡಿಗೆ ಪೊಣ್ಮೆಯುಂ, ಮನೋಜರಾಜನ ನೀರಾಜನ ದೀಪಕಳಿಕೆಯಂತೆ ಕೈಕೆ ನಿಜ ನಿವಾಸಕ್ಕೆ ಬಿಜಯಂಗೆಯ್ವುದುಂ—

ಚ ॥ ನೆನೆಯಿಸೆ ಪೂವಿನಂಬನಪರಾಜಿತೆ ಕಣ್ಗೆ,ಸುಮಿತ್ರೆ ಮೈತ್ರಿಯಂ ।
ಜನಿಯಿಸೆ,ಬೀಜೆ ಸುಪ್ರಭೆ ತನುಪ್ರಭೆಯಂ, ಗೆಲೆ ಕೈಕೆ ಕಂತುರಾ ॥
ಜನ ಜಯಲಕ್ಷ್ಮಿಯಂ,ನಿಜಕುಲಾಂಗನೆಯರ್ಪೆಸರ್ವೆತ್ತ ನಾಲ್ವರಿಂ ।
ಜನಪನ ರಾಜಲೀಲೆ ಗೆಲೆವಂದುದು ಮನ್ಮಥರಾಜ ಲೀಲೆಯಂ ॥ ೬೮ ॥

ಅಂತು ದಶರಥಮಹೀನಾಥನಿಷ್ಟ ವಿಷಯಸುಖ ಸಂತುಷ್ಟನಾಗಿರ್ಪುದುಂ

ಕಂ॥ ಅಪರಾಜಿತಾ ಮಹಾದೇ
ವಿ ಪತಿವ್ರತೆ ಶೀಲ ಗುಣ ಕಳಾ ಪರಿಣತಿಯಿಂ ॥
ನೃಪನ ಮನಂಬಡೆದುಂ ಧ
ರ್ಮಪತ್ನಿಯೆನೆ ಪಡೆದಳಗ್ರಮಹಿಷೀ ಪದಮಂ, ॥ ೬೯ ॥

ಅಂತಾ ಕಾಂತೆ ದಶರಥನ ಮನೋರಥ ಜನ್ಮಭೂಮಿಯೆನಿಸಿರ್ದೊಂದುದಿವಸಂ–

ಚ ॥ ಋತುಮತಿ ದೇವಿ ರನ್ನದ ವಿತರ್ದಿಕಯೊಳ್ನಿಲಸಿರ್ದು ಮಾಧವೀ ।
ಲತೆಯ ಬೆಡಂಗುವೆತ್ತ ಸೆಳೆಯಂ ಪಿಡಿದಂಗಜ ಮೋಹಪಾಶಮಂ ॥
ರತಿ ಪಿಡಿದಂತೆ ದೇಸೆವಡೆದಳ್ ಪಡೆವಂತು ಮದಾಲಸಂಗಳಾ ।
ಯತ ನಯನಂಗಳಾತ್ಮ ರುಚಿ ಮುಂಜರಿಯಿಂ ಕುಸುಮೋಪಹಾರಮಂ ॥ ೭೦ ॥

ಕಂ॥ ಕಮಳಾನನೆಗೆ ದರಸ್ಮಿತ
ಕುಮುದಾಕ್ಷಿಗೆ ಕರ್ಣಿಕಾರಕೋಮಳೆಗೆ ವಿಚಿ ॥
ತ್ರಮೆ ಪುಷ್ಪವತಿಗೆ ನೇತ್ರ
ಭ್ರಮರಾಕರ್ಷಣ ವಿಲಾಸಮೆನೆ ಸೊಗಯಿಸಿದಳ್ ॥ ೭೧ ॥

1. ಮೇಖಲಾವೃತ ಮಣಿಕಿಂಕಿಣೀ. ಗ. ಘ.

ಅನಂತರಂ ಕೌಶಲ್ಯೆ ಚತುರ್ಥಸ್ನಾನ ಮಾಂಗಲ್ಯಮನಪ್ಪಕೆಯ್ದು—

ಚ ॥ ಮುಳ್ಳೆಯಜದಣ್ಪು ಮಲ್ಲಿಗೆಯ ಸೋರ್ಮುಡಿ [1]ನಿಪ್ಪೊಸತಪ್ಪ ಮೌಕ್ತಿಕಂ ।
ಗಳ ತೊಡವುಟ್ಟ ಪಟ್ಟಳಿಗೆ ದಂತಮುರೀಚಿಗಳಿಂ ಬೆಳರ್ತ ಬಾ ॥
ಯ್ಪಳಿಕಿನ ಪೆಣ್ಣಿ ಪಾಸಟಿಯೆನಿಪ್ಪ ವಿಲಾಸಮನೀಯೆ ಪುಷ್ಪಕೋ ।
ಮಳಿ ವಧು ಕೊಂಡ ಬೆಳ್ಪಸದನಂ ಸೆಱಿಗೊಂಡುದನಂಗನಾಜ್ಞೆಯಂ ॥ ೭೨ ॥

ಅಂತು ಕೈಗೆಯ್ದು–

ಮ ॥ ಕಡೆಗಣ್ಗಾಮಶರಂಗಳಂ ಕೆದಱಿ, ಭೃಂಗಾಳ್ಗೃಷ್ಟಿಯಂ ಮಾಡೆ ಸೋ ।
ರ್ಮುಡಿ ಲಾವಣ್ಯ ರಸ ಪ್ರವಾಹ ಭರಮಂ ತುಂಗಸ್ತನಂ ತಾಳಿ ಕ್ಕೇ ॥
ಸಡಿಗಳ್ಕೇಸರ ಪಾಂಸುವಂ ಕೆದಱಿ ಬಂದಳ್ ದೋರ್ಲತಾಂದೋಳನಂ ।
ಪಡೆವನ್ನಂ ಮಣಿಪಾರಿಹಾರ್ಯ ರವದಿಂ ಕರ್ಣಾಮೃತಾಸಾರಮಂ / ॥ ೭೩ ॥

ಕಂ ॥ ಶಶಿಲೇಖೆ ಬಂದು ಪುಗುವಂ
ತೆ ಶರದ್ಧನ ಕೂಟ ಸದನಮಂ ಲೀಲೆಯಿನಾ ॥
ಶಶಿವದನೆ ಬಂದು ಪೊಕ್ಕಳ್
ವಿಶಾಲ ಶಶಿಕಾಂತ ಕಾಂತ ಶಯ್ಯಾಗೃಹಮಂ ॥ ೭೪ ॥

ಅಂತುಪೊಕ್ಕು—

ಕಂ ॥ ಪಳಿಕಿನ [2]ಪಟಿವಾವುಗೆಯಿಂ,
ತೊಳಗುವ ಹಂಸೋಪಧಾನ ಕಲ್ಪಿತ ತಲ್ಪ ॥
ಸ್ಥಳದಿಂ ರಂಜಿಪ ರನ್ನದ
ಸೆಳೆಮಂಚದಮೇಲೆ ಲೀಲೆಯಿಂ ಕ್ಕುಳ್ಳಿರ್ದಳ್ ॥ ೭೫ ॥

ಆಗಳಾ ಗೃಹಾಧಿದೇವತೆಯಧರಮಣಿಯಂತೆ ಜಲಜಲಿಸುವ ಮಾಣಿಕದ ಸೊಡರ್ಗುಡಿಗಳುಂ, ಇಕ್ಷ್ವಾಪ ಶರಮೋಕ್ಷ ಹುಂಕಾರದಂತೆ ಶಿಲೀಮುಖ ಝಂಕಾರ ಮುಖರಂಗಳೆನಿಸುವುಪಹಾರ ಕುಸುಮುಂಗಳುಂ, ಸ್ಮರ ಗುರುಶಿಷ್ಯರಂತೆ ಸಮ್ಮೋಹನ ಮಂತ್ರಮಂ ಪದಂಗುಟ್ಟುವ ಶುಕಶಾರಿಕೆಗಳುಂ, ಸಂಭೋಗ ರಸತರಂಗಿಣಿಯ ತೆರೆಯುಲಿಪದಂತೆ ಮಧುರಮಾದ ಪಾರಿವದುಲಿಪಂಗಳುಂ, ಮದನಮೋಹನ ಮೂರ್ಛೆಯಂ ಬೀಱುವಂತೆ ದಂತಿದಂತದಿಂ ಕಂಡರಿಸಿದಂಚೆವಿಂಡನೇಳಿಸಿ ಸುಟಿವ

---

1. ನೀರ್ಪೊಸ. ಘ.
2. ಪೊಳೆ. ಕ. ಖ; ಪಾವುಗೆಯಿಂದಂ. ಗ. ಘ.

ಬಾಲ ಮೃಣಾಳಂಗಳುಂ, ಕಾಮಕಾಳೋರಗ ಲೇಖೆಯಂತೆ ನಿಮಿರ್ದ ನೀಲಮಣಿಸ್ತಂಭ ದುನ್ಮುಖ ಮಯೂಖಲೇಖೆಯಂ ಕರ್ದುಂಕುವ ದೀವದ ನವಿಲ್ಗಳುಂ, ಪಚ್ಚೆಯ ಜಗ ಲಿಯ ಚೆಲ್ವಿಂಗೆ ಕಣ್ಪೆಜವಿಯಾದಂತೆ ತೆಱಂಬೊಳೆವ ದೀವದ ಹರಿಣಿಗಳ ಲೋಚನ ಪ್ರತಿಬಿಂಬಂಗಳುಂ, ಚಂದ್ರಾತಪಕ್ಕೆ ತನಿಗಂಪಾದಂತೆ ಚಂದ್ರಕಾಂತದ ಚಷಕಂಗ ಳೊಳ್ ಮುಗಮಗಿಸುವ ಚಂದನಕರ್ದಮಮುಂ, ಮಣಿಭಾಜನಂಗಳೊಳ್ ಕುಸುಮ ಶರ ಕೃಶಾನುವಿನ ಪೊಗೆಯುಮುರಿಯುಮೆಂಬಂತೆ ಮೇಗೆ ನೆಗೆವ ಮಱಿದುಂಬಿಯ ಬಂಬಲಿಂದೆಸೆವ ಕುಂಕುಮಪಂಕಮುಂ, ಕಂದರ್ಪ ಘಟಸರ್ಪದಂತೆ ಧೂಪಘಟದಿ ನೊಗೆವಗರುವಿನ ಪೊಗೆಯುಮತಿ ರಮಣೀಯಮಾಗೆ—

ಕಂ॥ ಪಳಿಕಿನ ಶುಕ್ತಿಕೆಯೊಳ್ ಕ
ಣ್ಗೊಳಿಸುವ ಕತ್ತುರಿಯ ಕರ್ದಮಂ ಹಿಮಕರಮಂ ॥
ಡಳದ ಕ್ಷಯಿಯಂತೆ ನಯನೋ
ತ್ಪಳಮನಲರ್ಚಿದುದು ಸೌಧ ಶಯ್ಯಾಗೃಹದೊಳ್ ॥ ೭೬ ॥

ಚ॥ ಉಗಿಬಗಿ ಮಾಡಿ ಧೂಪದ ಕವಲ್ಪೊಗೆಯೊಳ್ ತನಿಗಂಪನುಂಡು ತ ।
ಣ್ಣಗೆ ತಣಿದೊಯ್ಯನೊಯ್ಯನಿದಿರ್ದುಂ ಬಱಿಯುಂ ನೆಗೆಯುತ್ತುಮಿರ್ಪ ತುಂ ॥
ಬಿಗಳಱಿಪಂ ಮನಕ್ಕೆ ತರಲಾರ್ತುವು ತದ್ಗೃಹದೇವತಾಜನಂ ।
ಸೊಗಯಿಸುವಿಂದ್ರನೀಲ ಮಣಿಯಿಂ ತಿಱಿಕಲ್ಲನಾಡುವಂತೆವೋಲ್ ॥ ೭೭ ॥

ಅಂತು ಸೊಗಯಿಸುವ ಸೆಜ್ಜೆವನೆಯೊಳಪರಾಜಿತಾ ಮಹಾದೇವಿ ಸರೋವರ ದೊಳಿರ್ಪ ಜಲದೇವತೆಯಂತೆ ವಿಲಾಸತಲ್ಪತಳದೊಳಿರ್ದುದುಮಾಗಳುಪಚರಿತ ಗರ್ಭಾ ಧಾನ ಮಂಗಳವಿಧಾನಂ ದಶರಥಮಹೀನಾಥಂ ನಿಜ ನಿರತಿಶಯರೂಪಂ ದರ್ಪಕನ ರೂಪದರ್ಪಮನ್ನದಿರ್ಪೆ ಭೂಷಣಮಯೂಖಲೇಖೆ [1]ಚಿತ್ರಭಿತ್ತಿಗೆ ನಿರ್ವಾಣಲೇಖೆ ಯೆನಿಸೆ ಚರಣ ನಖಕಿರಣದಿನುಪಹಾರ ಕುಸುಮಂಗಳಂ ದ್ವಿಗುಣಿಸುತ್ತುಮೊಳವುಗು ವುದುಂ—

ಮ॥ ನ್ನುದನಂ ಜೇವೊಡೆಗೆಯ್ದುವೋಲ್ ಕನಕ ಕಾಂಚೀ ನಿಸ್ವನಂ ಪೊಣ್ಮೆ ಮೇ ।
ಲುದನೊಟ್ಟಿಸಿ ಕುಚ್ಚಂ ಕದಕ್ಕದಿಸೆ ಮುಗ್ಧಾಲೋಕನಂ ಲಜ್ಜೆಯಂ ॥
ಪದೆಪಂ ಮುಂದಿಡೆ ಮೇರೆದಪ್ಪೆ ನಿಜಲಾವಣ್ಯಾರ್ಣವಂ ಭೂಭುಜಂ ।
ಗಿದಿರೆಲ್ದಳ್ ಸತಿ ಪುಷ್ಪಚಾಪ ಚತುರಂಗಂ ಮಾಱಿ ಮೇಲೇಱ್ವವೋಲ್ ॥೭೮॥

ಆಗಳರಸನರಸಿಯ ಮನಃಕುಮುದಿನಿಯಂ ಚತುರಪರಿಹಾಸ ವಚನಚಂದ್ರಿಕೆ ಯಿಂದಲರ್ಚಿ—

1. ಚಿತ್ರವನಿತೆಗೆ. ಚ.

ಕಂ॥ ಮರಕತಮಣಿ ಮುದ್ರಿಕೆಯಿಂ
ನರೇಂದ್ರನಂಗನೆಯ ಕೋಮಳಾಂಗುಲಿಯನಲಂ ॥
ಕರಿಸುವ ನೆವದಿಂ ಮೆಲ್ಲನೆ
ಬರೆ ತೆಗೆದುತ್ಸಂಗ ತಳ್ಪಮಂ ದಯೆಗೆಯ್ದಂ ॥ ೭೯ ॥

ಅನಂತರಂ—

ಕಂ॥ ಓರೊರ್ವರ ತನಿಸೋಂಕಿಂ
ದೋರೊರ್ವರ ಮೆಯ್ಯೊಳೊಗೆಯೆ ರೋಮಾಂಚಂ ಶೃಂ ॥
ಗಾರ ಸುಧಾರಸ ವಾರಿಧಿ
ತೀರ ಲತಾದ್ರುಮದೊಳೊಗೆದ ಕೊನರೆಂಬಿನೆಗಂ ॥ ೮೦ ॥

* * * * *

ಅಂತು ಸೂಟ್ಸಿವಂದು ನಿದ್ರಾವಸರ ನಿಮಿಾಲಿತ ಲೋಚನೆಯಾಗಿ—

ಕಂ॥ ದಾನ ದ್ವಿರದನಮುಂ ಪ್ರಂ
ಚಾನನಮುಂ, ಚಂಡಭಾನುವುಂ ಚಂದ್ರಮನಂ ॥
ಮಾನಿನಿ ನಿಶಾವಸಾನದೊ
ಳೀ ನಾಲ್ಕುಂ ಶುಭದಮಪ್ಪ ಕನಸಂ ಕಂಡಳ್ ॥ ೮೧ ॥

ಆ ಸಮಯದೊಳ್ ನಿಜರಾಜಸದನ ಸರಸೀ ಸರೋಜ ರಜಮನೊಟ್ಟಿಕೊಂಡು ಸುಟಿವ ಸುಪ್ರಭಾತ ಪ್ರಭಂಜನನುಂ, ಮದನ ಮದಕುಂಜರದ ಮಣಿಯೇಱಿಂ ವಿಾಱುವ ರಾಜಹಂಸ ಕೂಜಿತಮುಂ, ದಿನಮುಖ ದರ್ಶನಾತುರತೆಯಿಂ ಬರ್ಪ ಸಂಧ್ಯಾದೇವತೆಯ ನೂಪುರನಿನದಮಂ ನೆನೆಯಿಸುವ ಚಂಚರೀಕದಿಂಚರಮುಂ, ಉದಯನಗ ನಿಕುಂಜಮನೇಱುವ ರವಿಯ ರಥಚಕ್ರಚೀತ್ಕಾರಮಂ ಚಲ್ಲುವಾಡುವ ರಥಾಂಗರವಮುಂ, ನೈಯ್ದಿಲ್ಗೊಳದ ಸೊಬಗು ಸೊಪ್ಪಾಗೆ ಕಮಳಿನಿಗೆ ಪುಟ್ಟಿದಟ್ಟ ಹಾಸಮನುದಾಸೀನಂ ಮಾಪ್ಪ ಕೊಳರ್ವಕ್ಕಿಯ ಕಳಕಳಧ್ವನಿಯುಮನುಕೂಲಮಾಗೆ—

ಕಂ॥ ಮಂಗಳ ಪಾಠಕ ರವಮುಂ
ಮಂಗಳ ಗಾಯಿನಿಯ ಗೀತರವಮುಂ ಪರಿಚ ॥
ರ್ಯಾಂಗನೆಯರ ನೂಪುರದ ರ
ವಂಗಳುಮಿತ್ತುವು ಸುಖಪ್ರಬೋಧಮನಾಗಳ್ ॥ ೮೨ ॥

ಅಂತುಪ್ಪವಡಿಸಿ—

ಇಲ್ಲಿ ಗ್ರಂಥಪಾತವಾದಂತೆ ತೋರುತ್ತದೆ

ಕಂ॥ ವ್ಯವಹಾರ ಮಂಗಳಾಚಾ
ರವೆಲ್ಲವಂ ತೀರ್ಚಿ,ಮುಖ್ಯ ಮಾಂಗಲ್ಯಮನಾ ॥
ಯುವತಿ ಜಿನಪೂಜೆಯಂ ಮಾ
ಡಿ ವಿಚಿತ್ರಮೆನಿಪ್ಪ ಚಿತ್ರಶಾಲೆಗೆ ಬಂದಳ್ ॥ ೮೩ ॥

ಅಂತು ಬಂದು ಮರಕತಮಣಿ ವೇದಿಕೆಯ ನಡುವಣ ಚೆಂಬೊನ್ನ ಪಟ್ಟವಣೆಯ ಮೇಲೆ ರೋಹಣನಗ ನಿತಂಬದೊಳ್ಪೊಳೆವ ರತ್ನ[1]ಶಲಾಕೆಯಂತೆ ನಿಜಶರೀರ ಕಾಂತಿ ಪಸರಿಸೆ,ಸ್ಫಟಿಕಳ್ಳಿರ್ಪುದುಂ, ಆಗಳುಭಯಪಾರ್ಶ್ವದೊಳಂ ಚಾಮರಗ್ರಾಹಿಣಿಯರ್ಕಳ್ ಕಾಶ ಕಣಿಶಂಗಳಿಂದೆಸೆವ ಶರಲ್ಲಕ್ಷ್ಮಿಯಂ ನೆನೆಯಿಸೆ,ಕುಂಚದಡಪದ ಡವಕೆಯ ಕನ್ನಡಿಯ ಪರಿಚಾರಿಕೆಯರ್ ಕುಸುಮಶರ ವಶೀಕರಣ ಮಂತ್ರಾಧಿದೇವತೆಯ ಪರಿವಾರ ದೇವತೆಯರೆನಿಸೆ—

ಕಂ ॥ ಕರ ಕಿಸಲಯ ರುಚಿಯಿಂದಂ
ಪರಭಾಗಂಬಡೆದು ರಾಗಮಂ ಬೀಜುವಿನಂ ॥
ಚರಣ ಮಣಿವಲಯ,ಮಣಿನೂ
ಪುರಮಂ ನೃಪವಧುಗೆ ತುಡಿಸಿದಳ್ ಮತ್ತೊರ್ವಳ್ ॥ ೮೪ ॥

ಗೆಲೆವಂದುವಲರ್ದ ಕರ್ನೆ
ಯ್ದಿಲ ಪೂಗಳ ಚೆಲ್ವನೀಗಳೆನೆ. ಕೆನ್ನೆಗಳ್ತಾ ॥
ದಲೆಗೆಯ್ದಿದ ಚೆನ್ನೆಯ ಕ
ಣ್ಮಲರೊಳ್ ಕಾಡಿಗೆಯನೆಚ್ಚಿದಳ್ ಮತ್ತೊರ್ವಳ್ ॥ ೮೫ ॥

ಅಂಬುಜದ ಬಂಡನುಣ್ಬೆಳ
ದುಂಬಿಯನಜನಿಸೆ ಮನೋಜ ಗಜಗಮನೆಯ ವ ॥
ಕ್ತ್ರಾಂಬುಜದೊಳ್ ಮತ್ತೊರ್ವಳ್
ಬಿಂಬಾಧರೆ ಮೃಗಮದಾಂಬು ತಿಲಕಮನಿಟ್ಟಳ್ ॥ ೮೬ ॥

ತೊಳಗುವವತಂಸ ಮುಕ್ತಾ
ಫಳ ರುಚಿಯೊಳ್ ಕೆಲದ ಕನ್ನೆಯರ ನಗೆಗಣ್ಗಳ್ ॥
ಪೊಳೆದುವು ಪೊಸವೆಳ್ದಿಂಗಳ
ಬಳಸಿಂಗೊಳಗಾದ ಚಳ ಚಕೋರಂಗಳವೋಲ್ ॥ ೮೭ ॥

---

1 ಮಾಲೆಯಂತೆ. ಕ. ಖ. ಚ.

ಉ ॥ ಒಂದಲೆವೋದಶೋಕೆಯೆರ[1]ಡಳ್ಗುಡಿಬಾಲತಮಾಲ ಷಂಡದೊಳ್ ।
ಮುಂದ ಸವಿಾರನಿಂ ಪೊಳೆವವೋಲ್ ತಳಮುಂ ನಳಿತೋಳುಮಂದಮಂ ॥
ಮುಂದಿಡೆ ಪಿಕ್ಕಿಪಿಕ್ಕಿ ಪುಡಿಗತ್ತುರಿಯಂ ತಳಿದಳ್ಪಿಜಳ್ ಲತಾ ।
ಸುಂದರಿ ಕಾಮಪಾಶದವೊಲಿರ್ದ ಲತಾಂಗಿಯ ಕೇಶಪಾಶದೊಳ್ ॥ ೮೮ ॥

ಅಂತು ಕೈಗೆಯ್ದು ಮಣಿದರ್ಪಣಮನವಲೋಕಿಸುತಿರ್ಪುದುಮಾ ಪ್ರಸ್ತಾವದೊಳ್

ಉ ॥ ಚಿತ್ರಲಯ ಪ್ರಗಲ್ಭ ಹಯವಲ್ಗನದಿಂ ಮಣಿಕುಂಡಲಾಂಶುಗಳ್
ಚಿತ್ರಿಸೆ ಗಂಡಭಿತ್ತಿಯನ್ನುರಸ್ಥಳ ರಂಗದೊಳಂಗಹಾರಮಂ ॥
ಸೂತ್ರಿಸೆ ತಾರಹಾರ ರುಚಿ ಮಂಜರಿಗಳ್ ನಿಜರೂಪಮಂಗನಾ ।
ನೇತ್ರ ವಿಕಾಸಮಂ ಪಡೆಯೆ ಪೊಕ್ಕನಿಳಾಧಿಪನಾ ನಿವಾಸಮಂ ॥ ೮೯ ॥

ಅಂತು ಪೊಕ್ಕು ಪರಿಮಿತ ಪರಿಜನಂ ದಶರಥ ಮಹೀನಾಯಕನುಚ್ಚೈಶ್ರವದಿ ನಿಳಿವ ನಿಳಿಂಪ ನಾಯಕನಂತೆ ವಾಹನದಿನಿಳಿದು ಬಂದು ನಿಜಸತಿಯಂಗಮಂ ಸೋಂಕಿ ಕುಳ್ಳಿರ್ಪುದುಂ—

ಕಂ॥ ಅರಸಿ, ಸುಲಿಪಲ್ಲ ಪಸರಿಪ
ಮುರ್ವೀಚಿ ಮನಸಿಜನ ಜಸಮಿದೆನಲಮರ್ದಿನ ಬ ॥
ಲ್ಸರಿ ಸುರಿದಪುದೆನಲ್ಕವನೀ
ಶ್ವರಂಗಿರುಳ್ ತನ್ನ ಕಂಡ ಕನಸಂ ಪೇಳ್ದಿಳ್ ॥ ೯೦ ॥

ಆಗಳವನೀಪತಿ ನಿಜಮನೋವಲ್ಲಭೆಯ ಶುಭಸ್ವಪ್ನದರ್ಶನಕ್ಕೆ ಹರ್ಷಚಿತ್ತನಾಗಿ-

ಮ ॥ ಸತತಂ ದಾನಿ ಮದೇಭದಿಂ, ಸಕಲ ಭೂಭೃನ್ಮಸ್ತಕನ್ಯಸ್ತ ಪಾ।
ದತಳಂ, ಕೇಸರಿಯಿಂ, ಪ್ರತಾಪನಿಲಯಂ ತಿಗ್ಮಾಂಶುವಿಂ, ಸತ್ಕಲಾ ॥
ಚತುರಂ ಚಂದ್ರನಿನಾದಪಂ ನಿನಗೆ ನೇತ್ರಾನಂದನಂ ನಂದನಂ।
ಸತಿ ನೀನಲ್ಲದರಿನ್ನವಪ್ಪ ಕನಸಂ ಕಾಣ್ಬಂತು ಮುಂ ನೋಂತರಾರ್ ॥ ೯೧ ॥

ಎಂದು ತತ್ಫಲ ಸ್ವರೂಪ ನಿರೂಪಣಂ ಮಾಡ್ಪುದುಂ—

ಕಂ ॥ ಶ್ರುತಿಪಥಮಂ ಸಾರ್ತರೆ ಘನ
ರುತಿ ರಾಗಮನಪ್ಪುಕೆಯ್ವವೋಲ್ ಸೋಗೆನವಿಲ್ ॥
ಸುತ ಲಾಭವಾರ್ತೆಯಂ ಕೇ
ಳ್ದು ತನೂದರಿ ರಾಗರಸ ತರಂಗಿತೆಯಾದಳ್ ॥ ೯೨ ॥

1. ಡೊಲ್ಲುಡಿವೋದ. ಗ. ಘ.

ಅನಂತರಮವನಿಪತಿ ಸತಿಗೆ ಸಮಯೋಚಿತ ಪರಿಚರ್ಯಾಚತುರೆಯರಂ ನಿಯೋಜಿಸಿ ಬಿಜಯಂಗೆಯ್ವುದುಂ ಕತಿಪಯ ದಿವಸಂಗಳ್ ನಿರತಿಶಯ ಸುಖಸ್ವರೂಪಂಗಳಾಗಿ ಪೋಗೆ—

ಕಂ॥ ಎಳವಸಿಜಿಂಜೊಳ್ ಸತಿಯ ಮೊಗಂ,
ಬೆಳರ್ತುಥನ್ವರ್ಥಮಾಯ್ತು ಚಂದ್ರಾನನೆಯೆಂ ॥
ದಿಳೆ ಪೊಗಟ್ಪ ಮಾತು ನೀಳ್ದುದು
ಲಳಿತಾಳಕಮಾಳೆ ಸುಯ್ಗೆ [1]ಸಾರ್ವಳಿಗಳವೋಲ್ ॥ ೯೩ ॥

ಮಕರಾಂಕ ದ್ವಿಪ್ಪಮದ ಪ
ಟ್ಟಿಕೆಯೆನಿಸಿ ಕಪೋಲಮೂಲಮಂ ಮುಟ್ಟಿದುವಾ॥
ಚಕಿತಾಕ್ಷಿಯ ಹರಿನೀಳಾ
ಳಕಂಗಳ್ಗಾನನ ಸರೋಜಿನೀ ಮಧುಪಂಗಳ್ ॥ ೯೪ ॥

ತೋರಮೊಲೆಗಳ ಮೊಗಂಗಳ್
ರಾರಾಜಿಸಿ ಕರ್ಪುವೆತ್ತು ಮೋಹನ ಧೂಮೋ ॥
ದ್ಗಾರಿಗಳಂ ಕಾಂಚನ ಭೃಂ
ಗಾರಿಗಳಂ ಪೋಲ್ತುವರಸಿಗಂದೆಳವಸಿಜಿಂಜೊಳ್ ॥ ೯೫ ॥

ಬಟ್ಟಿದುವೆನಿಪ್ಪ ಮೊಲೆಗಳ
ತೊಟ್ಟು ಕಜಿಂಗುವುದುಮೊಡನೆ ಸರ್ವಸ್ವಮುಮಂ ॥
ಕೊಟ್ಟು ಕಜಿಂಗಿದರಹಿತರ್
ಕೆಟ್ಟುವು ವಳಿಯೊಡನೆ ವೈರಿವಂಶ್ಯಾವಳಿಗಳ್ ॥ ೯೬ ॥

ಚ ॥ ಉದರದೊಳಿರ್ದ ಬಾಲಕನಶೇಷ ಕಲಾನಿಧಿ ತಪ್ಪನಪ್ಪನ ।
ಲ್ಲದೊಡೊಗೆದೊಂದೆ ನಾಳದೊಳೆ ಹೇಮಸರೋಜಮಮಳ್ಳಾಗಿಪು॥
ಟ್ಟಿದುವವಜಿಂಜೊಳ್ ಮದಾಳಿ ನೆಲಸಿರ್ದಪುವೆಂ[2]ತೆನೆ ನೀಳ್ದಬ್ಜಾಸೆ ಬೀ ।
ಗಿದಮೊಲೆ ನೀಳಚೂಚಕಮಿವೇಂ ಬಗೆಗೊಂಡುವೊ ಲೋಲನೇತ್ರೆಯಾ ॥ ೯೭ ॥

ಕಂ॥ ಉದರದೊಳಿರ್ದ ತನೂಭವ
ನುದಾರತಾ ಗುಣದ ಪೆರ್ಮೆಯಂ ಪೇಳ್ವವೊಲಾ ॥
ಸುದತಿಗೆ ನಿರಂತರಂ ಪಾ
ತ್ರದಾನಮಂ ಮಾಪ್ಪ ಭಯಕೆ ಪುಟ್ಟಿತ್ತಾಗಳ್ ॥ ೯೮ ॥

---

1 ಪಾರ್ವ. ಗ. ಘ.
2. ದಿನೆ. ಕ. ಖ

ಕಂ ॥ ಉಭಯ ಶ್ರೇಣಿಯ ಖಚರ
ಪ್ರಭುಗಳ ಸಿಂಹಾಸನಂಗಳೊಳ್ ಕುಳ್ಳಿರಲಂ ॥
ದಿಭ ಗಮನೆ ಬಯಸಿದಳ್ ಸಾ
ರ್ವಭೌಮನೀ ತನಯನೆಂಬುದಂ ಸೂಚಿಪವೋಲ್ ॥ ೯೯ ॥

ಪರ ಭೂಪಾಲದ್ವೀಪಾಂ
ತರಾಳ ಕೇಳೀವನಂಗಳಂ ಕೆಟ್ಟು ತ ॥
ತ್ಪುರಮನುರಿಪುವುದನೀಕ್ಷಿಸ
ಲರವಿಂದಾನನೆಗೆ ಬಯಕೆಯಾಯ್ತಿಳವಸಿಜಿಂಳ್ ॥ ೧೦೦ ॥

ಕುಲ ಕುಧರಮನೇಱಿ ದಿಶಾ
ವಲೋಕನಂ ಮಾಡುವಖಿಲಕುಲವಾಹಿನಿಯೊಳ್ ॥
ಜಲಕೇಳಿಯನಾಡುವ ಬಯ
ಕೆ ಲತಾಕೋಮಲೆಗೆ ಪುಟ್ಟಿದತ್ತಿಳವಸಿಜಿಂಳ್ ॥ ೧೦೧ ॥

ಬಸಿಜ ಮಗಂಗಿಲ್ಲಿವರಂ
ವಸುಧಾತಳಮೇಕ ಭೋಗ್ಯಮೆಂದಱಿಪುವವೋಲ್ ॥
ವಸುಧೆಯ ನಾಲ್ಕುಂಕಡೆಯೆಡೆ
ಯ ಸುರಭಿ ವೃತ್ತಿಕೆಯನಟ್ಟಿಯಿಂ ಸೇವಿಸುವಳ್ ॥ ೧೦೨ ॥

ಅವನೀಶ್ವರನಾಗಳ್ ಪುಂ
ಸವನಂ ಮೊದಲಾದ ಸಕಲ ಮಾಂಗಲ್ಯ ಮಹೋ ॥
ತ್ಸವಮಂ ಮೆಱೆದಂ ತಣಿವ
ನ್ನವಿತ್ತು ವಸುಮತಿಗೆ ವಸ್ತ್ರಭೂಷಾವಳಿಯಂ ॥ ೧೦೩ ॥

ಅಂತು ನೆಗಟ್ಟಿ ಮಹೋತ್ಸವಂಗಳೊಡನೆ ಗರ್ಭಮುಂ[1] ಬಂಧುಜನ ಹರ್ಷ ಗರ್ಭಮುಂ[1] ಪರಿಪೂರ್ಣಮಾಗೆ—

ಚ ॥ ಮರಕತ ರಂಗದೊಳ್ ರಮಣಿ ತೀವಿದ ಗರ್ಭದ ಬಿಣ್ಪಿನಿಂ ನಯಂ ।
ಬೆರಸೆಡೆಯಾಡುವಾಗಳಡಿಯೂಡಿದ ಮೆಲ್ಲಡಿವಜ್ಜೆಗಳ್ ಮನೋ ॥
ಹರಮೆನಿಸಿರ್ದುವೀ ಸತಿಯ ಗರ್ಭದೊಳಿರ್ದ ತನೂಜನಾದಪಂ ।
ವರನೆನಗೆಂದಿಳಾವಧುಗೆ ಪಲ್ಲವಿಸಿತ್ತನುರಾಗಮೆಂಬಿನಂ ॥ ೧೦೪ ॥

---

1. ಇದು ಚ. ಪುಸ್ತಕದಲ್ಲಿಲ್ಲ.

ಉ ॥ ಹಾರಮನಿಕ್ಕಿ ಮಿಕ್ಕ ಕನಕಾಭರಣಂಗಳ ಬಿಣ್ಪನೇನುಮಂ ।
ಸೈರಿಸದಿರ್ಪುದಪ್ಪುದೆ ವಲಂ/ಕನಕಾದ್ರಿಯ ಬಿಣ್ಪನಪ್ಪೊಡಂ ॥
ಸೈರಿಸದರ್ಭಕಂ ಬಳೆಯೆ ಗರ್ಭಸರೋಜದೊಳಾ ವಿನೀಳ।
ನೀರೇರುಹನೇತ್ರೆ ತತ್ಕನಕಮಾತ್ರದ ಬಿಣ್ಪನದೇಕೆ ಸೈರಿಸಳ್ ॥ ೧೦೫ ॥

ಚ ॥ ತನು ತನುವಾದ ಗರ್ಭಿಣಿಗೆ ತತ್ಸಮಯೋಚಿತ ಮಂಗಳ ಪ್ರಸಾ।
ಧನಮೆಸೆದತ್ತು ಕಪ್ಪುರದ ಕಂಠಿಕೆ ಬಣ್ಣದ ಸಣ್ಣಮಾಲೆ ತೆಂ ॥
ಗಿನ ತಿರುಳೋಲೆ ತಾವರೆಯನೂಲುಡೆನೂಲ್ ಸಿರಿಕಂಡದಣ್ಪು ಮು।
ತ್ತಿನ ತಿಸರಂ ಮೃಣಾಳಿಕೆಯ ಮುದ್ರಿಕೆ ಪೂವಿನ ಪಿಂಡುಗಂಕಣಂ ॥ ೧೦೬ ॥

ಘನಕುಚೆ ನೋಳ್ಪದಂಗನೆಯ ಮೇಲೆ ಮಲಂಗಿ ಸರೋಜಪತ್ರ ವಿ।
ಜನಪವನಂ ವಿಕಾಸಮನೊಡರ್ಚಿ ಮನಕ್ಕೆ ಸುಧಾಪ್ರವಾಹಮೆಂ ॥
ಬಿನಮೆರಡುಂ ಕೆಲಂಬಿಡಿದು ಬಾಜಿಪ ವಾದ್ಯದಿನೋಜ್ಜೆವೆತ್ತ ಗಾ।
ಯನಿಯರ ಸೀಯನಪ್ಪ ರಸಗೇಯಮನಾಲಿಸುತಿರ್ಪಳೊರ್ಮೆಯುಂ ॥ ೧೦೭ ॥

ಉ ॥ ಸೋರ್ಮುಡಿ ಮಾಲೆಯಿಂ ಕದಪುಗಳ್ ಮಲಯೋದ್ಭವ ಪತ್ರಭಂಗದಿಂ
ಪೆರ್ಮೊಲೆ ಹಾರದಿಂದೆಸೆಯೆ ಬಂಬಲಬಾಡಿದ ರೂಪು ಗಾಡಿಯಂ ॥
ನೂರ್ಮಡಿ ಮಾಡೆ ಮೇಳದವಳಂ ಸತಿ ನಿರ್ಭರ ಗರ್ಭಭಾರದಿಂ ।
ನೆರ್ಮೆ ನಿಮಿಚ್ಛ್ರುವಳ್ ಪುರುಳಿಯೊಳ್ ಪರಿಹಾಸ ವಚೋವಿಲಾಸಮಂ ॥೧೦೮॥

ಅಂತು ವಿವಿಧವಿಲಾಸಂಗಳಿಂ ದಿವಸಂಗಳಭಿಲಷಿತ ಫಲಪ್ರಸವಂಗಳಾಗೆ ಸುಖ ಪ್ರಸವ ಸಮಯದೊಳ್—

ಕಂ ॥ ಉರ್ವರೆ ಮಣಿಪರ್ವತಮಂ
ಶಾರ್ವರಿ ಪರಿಪೂರ್ಣಚಂದ್ರನಂ ಪಡೆವಂತಂ ॥
ತ್ಪರ್ವತ್ಪಿ ಸರ್ವಲಕ್ಷಣ
ಸರ್ವಗುಣಾನ್ವಿತನೆನಿಪ್ಪ ಸುತನಂ ಪಡೆದಳ್ ॥ ೧೦೯ ॥

ನೀರಜಮಾದುದು ಮೇದಿನಿ
ನೀರಜವಿಾತನ ಚರಿತ್ರಮಿಂದಱಿಪುವವೋಲ್ ॥
ನೀರಚ್ಛಮಾದುದೀ ವಸು
ಧಾರಮಣಂ ಸ್ವಚ್ಛಹೃದಯನೆಂದಱಿಪುವವೋಲ್

ಕಂ ॥ ಉದಯಿಸಿದ ತನೂಜನ ತೇ
ಜದೊಳೀನುಂ ಮಲಿನಭಾವ ಲಾಂಛನ ವಿಲ್ಲಂ ॥
ಬುದನಜಾಪುವಂತೆ ಪೊಗೆಯಿ
ಲ್ಲದೆ ಪೊಣ್ಮಿತ್ತಗ್ನಿ ದಕ್ಷಿಣಾವರ್ತಮುಖಂ ॥ ೧೧೧ ॥

ಈ ತನಯನೆ ಸಕಲೋತ್ಸವ
ಹೇತು ಜಗತ್ತಾಪ ಶಮನನೆಂದಜಾಪುವವೋಲ್ ॥
ಶೀತಲ ಸಮೀರನೆಸಗಿ
ತ್ತಾತನ ಜಸದಂತೆ ವಿಶದಮಾಯ್ತಾಕಾಶಂ ॥ ೧೧೨ ॥

ಎಳವಿಸಿಲುಂ ಬೆಳ್ದಿಂಗಳು
ಮೆಳಸಿದುವೆನೆ ರಮ್ಯ ಹರ್ಮ್ಯಶಿಖರ ಸ್ಥಳಿಯೊಳ್ ॥
ಪೊಳೆದುವು ಪೊಂಗಳಸಂಗಳ
ಪೊಳೆಪುಂ ಕೇತನ ದುಕೂಲ ಚೇಲಾಂಚಲಮುಂ ॥ ೧೧೩ ॥

ಅವಿರಳಮೆನೆ ಪೂವಲಿ ಪುದಿ (೬೦)
ದುವು ಗುಡಿಯುಂ ತೋರಣಂಗಳುಂ ತಳ್ತುವು ಬ ॥
ದ್ದವಣಂ ಬಾಜಿಸಿದುವು ವೀ
ಧಿವೀಧಿಯೊಳ್ ಕೇರಿಕೇರಿಯೊಳ್ ಮನೆಮನೆಯೊಳ್ ॥ ೧೧೪ ॥

ಉ ॥ ರಾಗದ ಬಳ್ಳವಳ್ಳಿಯೆನೆ ರನ್ನದ ತೋರಣಮಾಲೆ ಕೂಡೆ ಚೆ ।
ಲ್ವಾಗಿರೆ ದಾನಮೇಘ ರುತಿಯಂತಿರೆ ಮಂಗಳ ತೂರ್ಯನಾದಮಾ ॥
ಶಾಗಜ ಕರ್ಣಪೂರಮೆನ್ನೆರಾಗ ರಸಾಮೃತವಾಧಿ ಘೋಷದಂ ।
ತಾಗಿರೆ ಪುಣ್ಯಪಾಠಕ ರವಂ ಪೊಸತಾದುದು ರಾಜಮಂದಿರಂ ॥ ೧೧೫ ॥

ದೇಸೆ ವಿಲಾಸಮಂ ಪಡೆಯೆ ಗೊಂದಳವಕ್ಕಣವಾಗಳಾ ನೃಪಾ ।
ವಾಸದೊಳಾಡಿದತ್ತೆಸೆಯೆ ಪಾಣಿತಲಂ ಪಡೆವಂತೆ ಕುಂಕುಮ ॥
ಸ್ತಾಸಕಮಂ ಕುರುಳ್ ಕೆದಱುವಂತೆ ತಮಾಲ ನವ ಪ್ರವಾಳಮಂ ।
ಕೇಸಡಿ ಪಾಸುವಂತೆ ತಳಿರಂ ನಗೆಗಣ್ಣುಗುಳ್ವಂತೆ ನೆಯ್ದಿಲಂ ॥ ೧೧೬ ॥

ಚ ॥ ಉದಯಿಪುದುಂ ತ್ರಿಲೋಕತಿಲಕಂ ಗೃಹದೇವತೆಯರ್ ಪ್ರಸನ್ನವೇ ।
ಷದಿನೊಸೆದಾಡುವಂತೆ ಮಣಿಭಿತ್ತಿಗಳಂ ಮಣಿಕುಟ್ಟಿಮಂಗಳಂ ॥
ಪುದಿದು ಮನಕ್ಕೆ ಸಂತಸಮನಿತ್ತುವು ನೃತ್ಯರಸಾಮೃತ ಪ್ರವಾ ।
ಹದೊಳವಗಾಹಮಿರ್ದ ಗಣಿಕಾಪ್ರಚಯ ಪ್ರತಿಬಿಂಬ ಲಕ್ಷ್ಮಿಗಳ್ ॥ ೧೧೭ ॥

ಆ ಪ್ರಸ್ತಾವದೊಳ್ ದಶರಥಮಹೀನಾಥಂ ಸುತಮುಖ ನಿರೀಕ್ಷಣ ಭರದಿಂ ಪಾರಿಜಾತಂ ಕೋರಕಿತಮಾದಂತೆ ಪುಲಕಿತಶರೀರನಾಗಿ—

ಮ ॥ ಜಿನ ಪೂಜೋತ್ಸವಮಂ ಸುರೇಂದ್ರನಳವಲ್ತೆಂಬನ್ನೆಗಂ ಮಾಡಿ ಬೇ।
ಪ್ಪಿನಿತಂ ಬೇಪ್ಪಿವರ್ಗಿತ್ತು ಕಲ್ಪಕುಜಮಂ ಕೀಟ್ಯಾಡಿ ಸನ್ಮಾನಭಾ॥
ಜನರಂ ಸಜ್ಜನರಂ ವಿಚಿತ್ರ ವಸನ ಸ್ರಗ್ಭೂಷಣಾಲೇಪದಿಂ।
ಜನಪಂ ಮನ್ನಣೆಮಾಡಿ ತತ್ತನಯ ಜನ್ಮೋತ್ಸಾಹಮಂ ಮಾಡಿದಂ॥ ೧೧೮ ॥

ಚ ॥ ದಿವಿಜ ಕುಜಂಗಳ್ಗಾರ್ಧವೆಗಳಾದುವು ಸ್ನಿಗ್ಧರಸಂ ತಟ್ಟಾಕಮಾ।
ದುವು ಸುರಧೇನು ಪಿಂಡಲಿಯದೊಂದೆಡೆಯೊಳ್ ನೆರೆದಿರ್ದುವೆಂಬಿನಂ॥
ಭುವನ ಜನಕ್ಕೆ ಬಾಂಧವ ಜನಕ್ಕಖಿಲಾರ್ಥಿಜನಕ್ಕೆ ಹರ್ಷದಿಂ।
ದವರಿವರೆನ್ನದಿತ್ತು ಮೆಜ್ಜಿದಂ ಜನಪಂ ಸುತ ಜಾತಕರ್ಮಮಂ॥ ॥ ೧೧೯ ॥

ಅಂತು ಜಾತಕರ್ಮೋತ್ಸವಮಂ ಮಾಡಿ ದಶಮದಿನದೊಳ್ ಪದ್ಮಾಲಂಕೃತ ವಿಶಾಲವಕ್ಷಸ್ಸ್ಥಲನಪ್ಪುದಱಿಂ ಪದ್ಮನುಂ, ಸಕಲ ಶುಭ ಲಕ್ಷಣಾಭಿರಾಮನಪ್ಪುದಱಿಂ ರಾಮಚಂದ್ರನುಮೆಂದಿವು ಮೊದಲಾಗೆ ಸೆಜವುಮನ್ವರ್ಥನಾಮಂಗಳನಿಟ್ಟು ಕತಿಪಯ ದಿನಂಗಳೊಳ್—

ಕಂ ॥ ರವಿಕಿರಣಂ ಸೋಂಕದೆ ಹಾ
ಸ ವಿಲಾಸಂಬಡೆದ ಕಮಲಮಂ ನೆನೆಯಿಸುಗುಂ
ನೆವಮಿಲ್ಲದ ನಗೆಯಿಂದೊ
ಪ್ಪುವಾಸ್ಯಮುತ್ತಾನಶಯ್ಯೆಯೊಳ್ ಬಾಲಕನಾ ೨೦ ॥

ನಿರಪೇಕ್ಷಕಮೆನಿಸಿಯುಮೇಂ
ಪರಿದತ್ತಲಿ ಪರಿವ ಸುತನ ಕಣ್ಬೊಳಪಿಂದಂ॥
ತೆರೆಮಸಗಿದುದರಸಿಯ ಮೋ
ಹ ರಸಂ ಚಂದ್ರಿಕೆಯಿನಮೃತ ಜಲರಾಶಿಯವೋಲ್ ॥ ೧೨೧ ॥

ಹರಿನೀಲೋಪಲ ವಿರಚಿತ
ಸ್ಫುರಳಿಲೆ ಬಾಲಕನ ನಿಟ್ಟಿಲದೊಳ್ ನಯನ ಮನೋ॥
ಹರಮಾದುದರ್ಧಚಂದ್ರೋ
ದರದೊಳ್ ಕಣ್ಗೊಳಿಸಿ ತೋರ್ಪ ಕರ್ಪಿಂಬಿನೆಗಂ ॥ ೧೨೨ ॥

ಕಂ ॥ ಅರುಣಮಣಿ ಕರ್ಣಭೂಷಣ
ಮರೀಚಿ [1]ಪಸರಿಸಿದ ರಾಮಚಂದ್ರ ಶರೀರಂ ॥
ಪರಿಭವಿಸಿದುತ್ಪಲವಿಸಿಲಾ
ವರಿಸಿದ ಕಮನೀಯ ಪುಂಡರೀಕ ಶ್ರೀಯಂ ॥ ೧೩೩ ॥

ಅರಸಿಯ ಮನದೊಳ್ ಕೆಂಜಡೆ
ದೊರೆಕೊಳಿಸುವುದುಚಿತವೆಂಬಡನೆ ಕಜ್ಜಲರುಚಿಯೊಳ್ ॥
ಸ್ಫೋರಿದ ನಯನೋತ್ಪಲಂಗಳ್
ದೊರೆಕೊಳಿಪುದು ಚಿತ್ರಮಲ್ತೆ ರಾಗೋತ್ಸವಮಂ ॥ ೧೩೪ ॥

ಧಾತ್ರಿಯೊಳನ್ಯರ ತೇಜೋ
ಮಾತ್ರಮನಾಂ [2]ಸಲಿಸೆನೆಂಬ ತೆಱದಿಂ ಪೊಯ್ಲ್ ॥
ಧಾತ್ರಿಯ ಕಯ್ಯಂ ನಿರ್ವ್ಯಂ
ಕ್ಷತ್ರಶಿಖಾಮಣಿ ಮಣಿಪ್ರದೀಪಾಂಕುರಮಂ ॥ ೧೩೫ ॥

ಕಿವಿಗಿನಿದೆನಿಪ್ಪ ವೀಣಾ
ರವದೊಳನಾದರಮನುಂಟುಮಾಡಿತು ತನೂ ॥
ಭವನ ತಳರ್ನಡೆಯೊಳ್ ಪೊ
ಣ್ಮುವ ಮೃದುಪದ ಕನಕ ಕಿಂಕಿಣೀಝಂಝಣಿತಂ ॥ ೧೩೬ ॥

ಶ್ರವಣಕ್ಕರ್ಥವ್ಯಕ್ತಿಯ
ನವಗ್ಗುಯಿಸದೆ ನೆಗಟ್ಟ ವಶ್ಯಮಂತ್ರಾಕ್ಷರದಂ ॥
ತಿವೊಳಿಲ್ಲರುಮಂ ಸೋಲಿಸಿ
ದುವು [3]ತೊದಲಂನುಡಿವ ರಾಮಚಂದ್ರನ ನುಡಿಗಳ್ ॥ ೧೩೭ ॥

ತಿಳಿಗೊಳದೊಳಗೆಡೆಯಾಡುವ
ಕಳಹಂಸನ ಬಾಲಕೇಳಿ ಪುದುವೆನೆ ಮಧುಪಾ ॥
ಟಳನೇತ್ರಂ ಧವಳಾಂಗಂ
ಪಳಿಕಿನ ಕುಟ್ಟಿಮದಮೇಲೆ ದಟ್ಟಡಿಯಿಟ್ಟಂ ॥ ೧೩೮ ॥

---

1. ಪರಿಕಲಿಸೆ. ಚ.
2. .ಸಹಿಸೆ. ಘ.
3. ತೊದಳೊಳ್ನುದಿದ. ಗ. ಘ.

ನಡೆಗಲ್ವಂದುಂ ಬಿನ್ನಿಂ ।
ಕೊಡೆ ನೆಗೆದಪುದುರ್ವಿಯೆಂದು ವಾಸುಗಿ ಪಲವುಂ ॥
ಪೆಡೆಯಂ ಶಿಶುನಡೆವೆಡೆಯೊಳ್ ।
ಪಡೆದಾಂತು ಸಹಸ್ರಫಣನೆನಲ್ ಪೆಸರ್ವಡೆದಂ ॥೧೪೯॥

ಮಣಿಯೇಱುಂ ಚೆಂಬೊನ್ನುಡೆ
ಮಣಿಯುಲಿಗೆಲ್ಕೆ ಗೆಲ್ವನಂಗರುಚಿಯಿಂದೈರಾ
ವಣಮಂ ಕುಮಾರ ಚೂಡಾ
ಮಣಿ ಲಾಲಾಜಲದೊಳಂ ಚತುರ್ದಂತದೊಳಂ ॥ ೧೫೦ ॥

ಅಮೃತಾಂಶು ಪೆರ್ಚಿ ಪೆರ್ಚುವ
ಸಮುದ್ರಮೆಂತಂತೆ ರಾಮಚಂದ್ರಂ ದಿವಸ ॥
ಕ್ರಮದಿನಭಿವೃದ್ಧಿವೆತ್ತಾ
ಕ್ರಮಿಸಿದನತಿಮುಗ್ಧಭಾವಮಂ ಶೈಶವಮಂ ॥ ೧೫೧ ॥

ಅಂತು ರಾಮಚಂದ್ರನಾದಿತ್ಯನಂತೆ ನಿತ್ಯೋದಯಮನಪ್ಪುಕೆಯ್ವುದುಂ—

ಕಂ ॥ ಬಾಲತ್ವದೊಳಮುದಾತ್ತ ಗು
ಣಾಲಯಮೆನಿಸಿದ ತನೂಜ ಮುಖಚಂದ್ರಮನಂ ॥
ಲೀಲೆಯಿನೀಕ್ಷಿಸಿ ದಶರಥ
ನೋಲಾಡಿದನಧಿಕ ರಾಗರಸ ವಾರಿಧಿಯೊಳ್ ॥ ೧೫೨ ॥

ಅಂತು ಸಂತೋಷದ ಪರಮಪದಮನೆಯ್ದಿರ್ದುಮದಲ್ಲದೆಯುಮಾ ಮಹೀವಲ್ಲಭನ ಮೋಹವಲ್ಲರಿಗಳೇ ಪೂತುಪೆಂಬಂತೆ ಪುಷ್ಪವತಿಯರಾಗಿ ನಾಲ್ಕು ನೀರ್ಮಿಂದು ಬೆಳ್ವಸದನದ ಪೊಸದೇಸೆ ವಿಳಾಸಂಬಡೆಯೆ ಸೂಚಿಸ್ಸಿ ವಂದು ಶುಭಸ್ವಪ್ನ ದರ್ಶನಾನಂತರಂ ಕೆಲವು ದಿವಸನಿರ್ಪಿನಂ—

ಕಂ ॥ ಕುಲದೊದವಿಂಗೀ ಸತಿಯರೆ
ಕುಲದೇವತೆಯರ್ಕಳೆಂಬ ಬಗೆ ಪುಟ್ಟುವಿನಂ ॥
ತಲೆದೋಜುಂ ಗರ್ಭಚಿಹ್ನಂ
ತಲೆದೋಜುದುದವನಿಪತಿಗೆ ರಾಗೋದ್ರೇಕಂ ॥ ೧೫೩ ॥

ಆಗಳಾಕೆಗಳ ಪಸುರ್ಪೆಸೆವಸಿಯ ಬಾಸೆ ಲಾವಣ್ಯನದಿಯ ಶೈವಾಲಲತೆಯ ಲಾಸ್ಯ ಮನಪಹಾಸ್ಯಂಗೆಯ್ಯುಮಾಕೆಗಳ ಕಜ್ಜಂಗಿದ್ದ ಕ್ಕುಚ ಚೂಚ್ಚುಕಂಗಳಿಂದೆಸೆದು ತೋಳ್ ಮೊದಲಿಂ ಜಕ್ಕುಲಿಸುವ ಪೆರ್ಮೊಲೆ ಕರ್ನೆಯ್ದಿಲೆಸಳಂ ನಲಿದು ಕರ್ಚುವ ಜಕ್ಕವಕ್ಕಿ

ಯ ವಿಲಾಸಮನಿಕ್ಕಿ ಮೆಟ್ಟಿಯುಮಾಕೆಗಳ ಮುಖರಸದೊಳ್ಮೂಡಿ ಮುಳ್ಳಾಡುವ ಕಪೋಲ ಯುಗಳಂ ತಿಳಿಗೊಳದೊಳ್ಗಣ ಬಿಳಿಯ ತಾವರೆಯೆಸಳಂ ಸರಸವಾಡೆಯು ಮಾಕೆಗಳ ಪೆಜಿನೊಸಲಂ ಮೆಟ್ಟಿ ನಿಮಿರ್ದ ತೋರ್ಪಗುರುಳ ತೊಂಗಲೆಳವೆಜಿಯನಂ ಧಕಾರವ್ಯಾವರಿಸಿದಂತೆ ತೋಜಿಯುಂ, ಅನಂತರಮವರ್ಗೆ ಪುಂಸವನ ಸೀಮಂತೋನ್ನಯನಾದಿಸಕಲ ಮಂಗಳವಂ ದಶರಥನರನಾಥಮ್ಮಾಟ್ಟುದುಮನುಕ್ರಮದಿಂ ಶುಭ ದಿನಮುಹೂರ್ತದೊಳ್ ಸುಮಿತ್ರೆ ಲಕ್ಷ್ಮಣನಂ, ಕೈಕೆ ಭರತನಂ, ಸುಪ್ರಭೆ ಶತ್ರುಘ್ನನಂ ಪಡೆವುದುಂ-

ಕಂ ॥ ಪಸರಿಸೆ ಪೂವಲಿಗಳ್ ಬಾ
ಜಿಸೆ ಬದ್ದವಣಂಗಳೊಡನೆ ಮಿಳ್ಮಿಸೆ ಗುಡಿಗಳ್ ॥
ದೆಸೆಬಿದ್ದವಾಡೆ ತರುಣಿಯ
ರೋಸಗೆಯಮೇಲೊಸಗೆಯಾದುದಂದರಮನೆಯೊಳ್ ॥ ೧೩೪ ॥

ಆಸಮಯದೊಳ್ ದಶರಥಂ ಸುತಮುಖದರ್ಶನೋತ್ಸುಕಂ ಕತಿಪಯಾಪ್ತ ಪರಿಜನ ಪರಿವೃತಂ ಸುಮಿತ್ರಾದೇವಿಯ ಸೂತಿಕಾಸದನಮಂ ಪೊಕ್ಕು—

ಮ ॥ ಸಿರಿ ಸಿಂಹಕ್ಕಭಿಷೇಕಮಂ ಪಡೆವುದಂ ರತ್ನಾಕರಂ ಸುತ್ತಿದು।
ರ್ವರೆಯಂ ಭಾಸುರಚಕ್ರಮಂ ಕನಸಿನೊಳ್ ಪೊಂಬೆಟ್ಟ ಸೇಜುರ್ದುದಂ ॥
ಹರಿಣೀನೇತ್ರೆ ಸುಮಿತ್ರೆ ಕಂಡುವಜುನಾಳ್ಗಂ ಬೆಳ್ಳಿವೆಟ್ಟಂಬರಂ ।
ಭರತಕ್ಷೇತ್ರಮನೆಂದು ಕಣ್ ತಣಿವಿನಂ ಸೌಮಿತ್ರಿಯಂ ನೋಡಿದಂ ॥ ೧೩೫ ॥

ಕಂ ॥ ಬಾಲಾರ್ಕ ಮರೀಚಿಯೆನಲ್
ಬಾಲಕನ ಶರೀರಕಾಂತಿ ಪಸರಿಸೆ ಹರ್ಷೋ ॥
ನ್ಮೀಲನದಿಂ ದಶರಥ ನರ
ಪಾಲಕ ಮುಖಕಮಳಮೇಂ ಮನಂಗೊಳಿಸಿದುದೋ ॥ ೧೩೬ ॥

ಅನಂತರಂ ಭರತಶತ್ರುಘ್ನರ ಜನ್ಮೋತ್ಸವ ಮಂಗಳಮನಾಚರಿಸಿ—

ಮ ॥ ಮನುವಂಶಾಂಬರಭಾನು, ಕಲ್ಪತರು ಕೈವಂದಂತೆ, ರೈವೃಷ್ಟಿ [1]ಪ ।
ಳ್ತನೆ ಕೊಂಡಂತೆ, ಸುರೇಂದ್ರಧೇನು ಕಜಿತೆದಂತಾ ನನ್ನ ಕೂರ್ತಿತ್ತು, ಸ ॥
ಮ್ಮನದಿಂದಿತ್ತು, ಸುಹೃಜ್ಜನಂ ಪರಿಜನಂ ವಿದ್ವಜ್ಜನಂ ॥ ಮೀರೆ ಘನಲ್ ।
ತನಯರ್ ಮೂವರ ಜಾತಕರ್ಮಮುಮನತ್ಯುತ್ಸಾಹದಿಂ ಮಾಡಿದಂ ॥ ೧೩೭

---

1. ತೊಟ್ಟನೆ ಕೊಂಡಂತೆ. ಗ. ಘ. ; ಳಚ್ಚನೆ ಕೊಂಡಂತೆ ಕ ಖ

ಅಂತು ದಶರಥಮಹೀನಾಥಂ ಸಂತಾನ ಸಮೃದ್ಧಿಯಿನತಿಪ್ರವರ್ಧಮಾನಸುಖಾಧೀನ ಮಾನಸನಾಗಿರ್ಪುದುಂ—

ಕಂ ॥ ಅವನೀವಲ್ಲಭ ತನಯರ್
ನವ ಶಶಿಕಲೆಯಂತೆ ಪಡೆದು ನಯನೋತ್ಸವಮಂ ॥
ದಿವಸಕ್ರಮದಿಂದಂ ವೃ ।
ದ್ಧಿವಡೆದರಮರಾವನೀಜದಗೆಯೆಂಬಿನೆಗಂ ॥ ೧೩೮ ॥

ನಸುನಗೆ ಕಮಳದ ಸಿರಿಯಂ
ನಸುನಗೆ ಜನನಿಯರ ಲೋಚನಭ್ರಮರಂಗಳ್ ॥
ಮುಸುಱಿದುವು ಮೋಹವಲ್ಲರಿ
ಪಸರಿಸಿ ಪರ್ವಿದುದು ಸುತರ ಲಾಲಾಜಲದಿಂ ॥ ೧೩೯ ॥

ತಳರಡಿ ಯಿಡುವತ್ತಲೆ ಪರಿ
ದೆಳಸುವ ಜನನಿಯರ ದಿಟ್ಟಿ ಮಣಿಕುಟ್ಟಿಮಮಂ ॥
ಬಳಸೆ ಪೊಸತಲರ್ದ ನೆಯ್ದಿ
ಲ್ಗೊಳದೊಳಗಣ ರಾಜಹಂಸನಂ ನೆನೆಯಿಸಿದರ್ ॥ ೧೪೦ ॥

ಚ ॥ ಅರಳೆಲೆ ಮತ್ತಿಗಾಯ್ ಪುಲಿಯುಗುರ್ ನವರತ್ನದ ಕಂಕಣಂಗಳುಂ ।
ಗುರವುಡೆನ್ನೂಲ ಪೊನ್ನ ಮಣಿಕಿಂಕಿಣಿ ರನ್ನದ ಘಂಟೆ ನೂಪುರಂ ॥
ವರ ವಲಯಂಗಳೆಂಬ ಪಲವಂದದ ಚಂದದ ಬಾಳ್ವೆವಂದವೊ ।
ಪ್ಪಿರೆ ಪಿತೃಮಾತೃಗಳ್ಗೆ ಪಡೆದರ್ ತನಯರ್ ನಯನೋತ್ಸವಂಗಳಂ ॥ ೧೪೧ ॥

ಅಂತು ದಶರಥ ಮಹೀನಾಥನ ಸಾಮ್ರಾಜ್ಯಶ್ರೀಯ ಮಣಿಮಯಾಭರಣದಂತೆ ಸೊಗಯಿಸುವ ಸುತರ ಬಾಲಕೇಳೀದರ್ಶನದಿಂ ಸುಮಿತ್ರೆಯ ನಯನಪುತ್ರಿಕೆನಲಿದು ನರ್ತಿಸೆಯುಂ, ಕೈಕೆಯ ತನುಲತಿಕೆ ಪುಳಕ ಕಳಿಕೆಯ್ದುಂ ತಳೆಯೆಯುಂ, ಸುಪ್ರಭೆಯ ಮನಃಪ್ರಮೋದಮುದಿತೋದಿತಮಾಗೆಯುಂ ರಾಮ ಲಕ್ಷ್ಮಣ ಭರತ ಶತ್ರುಘ್ನರನುಕ್ರಮದಿಂ ಶೈಶವಮನತಿಕ್ರಮಿಸೆ—

ಕಂ ॥ ವಸುಮತಿದಾನ ನ್ವರ್ಥಂ
ವಸುಧೆಗೆಲ್ ಕಱೆದು ಪೊನ್ನ ಮಟೆಯಂ ದಾನ ॥
ವ್ಯಸನಿ ದಶರಥನದೇಂ ಪೊಸ
ಯಿಸಿದನೊ ಚೌಲೋಪನಯನ ಮಹಿಮೋತ್ಸವಮಂ ॥ ೧೪೨ ॥

ಕಂ ॥ ಪರಮ ಪ್ರೇಮಂ ಜನ್ಮಾಂ
ತರದಿಂದೊಡವಂದುದಿನಿಸಿ ಗೆಡೆ ಬೆಚ್ಚವೊಲ
ಚ್ಚರಿಯಾಗೆ ರಾಮ ಲಕ್ಷ್ಮೀ
ಧರರೊಳವಾದತ್ತು ಭರತಶತ್ರುಘ್ನರೊಳಂ ॥ ೧೪೩ ॥

ಅಮಳ್ಳಳಿವರೆಂಬಿನಂ ತಮ
ಗಮಳ್ವಿಸರಮರ್ದಿಸೆಯಿ, ತಾಯ ತಂದೆಯ ಚಿತ್ತ ॥
ಕ್ಕಮರ್ದಿನ ಮಟಿಯಂ ಕಱಿದರ್
ಕುಮಾರಕರ್ ಮೂರ್ತಿಗೊಂಡ ಪುರುಷಾರ್ಥದವೋಲ್ ॥ ೧೪೪ ॥

ಮ ॥ ಸುರಧೇನು ಸ್ತನಭಾರದಂತೆ ಪುರುಷಾರ್ಥಂ ಮೂರ್ತಿಗೊಂಡಂತೆ ನಾ।
ಲ್ವರುಮೊಂದಾಗಿರೆ ನಂದನರ್, ದಶರಥಂ ನಾಲ್ಕುಂ ಸಮುದ್ರಂಬರಂ ॥
ಧರೆಯಂ ಕೂಡೆ ನಿಮಿರ್ಚಿ ನಾಲ್ದೆಸೆಯೊಳಂ ನಾಲ್ಕುಂ ಜಯಸ್ತಂಭಮಂ।
ಚರಿತಾರ್ಥರ್ ನಿಲಿಸಲ್ ಸಮರ್ಥರಿವರೆಂದುತ್ಸಾಹಮಂ ತಾಳ್ದಿದಂ ॥ ೧೪೫ ॥

ಮತ್ತಂ ನಿಜ ತನೂಭವರ ನಿರ್ಜಿತ ಮನೋಜಾಕಾರಮುಮಂ, [1]ತಿಳ ಮಸೂರಿ ಕಾದಿ ಶುಭ ವ್ಯಂಜನರಂಜಿತ ಪ್ರಶಸ್ತಾವಯವಂಗಳುಮಂ, ಹಲ ಕ್ರುಲಿಶ ಶಂಖ ಚಕ್ರ ಲಾಂಛನಂಗಳಪ್ಪ ಕರ ಚರಣಂಗಳುಮಂ ನೋಡಿ ಸಕಲ ಸಾಮ್ರಾಜ್ಯಶ್ರೀಯನಪ್ಪು ಕೆಯ್ದಂತೆ ಸಂತೋಷದಂತಮನೆಯ್ದಿ—

ಕಂ॥ ಸವಿವವಸರಮಿದು ವಿದ್ಯಾ
ಯುವತಿಯ ವದನಾರವಿಂದ ಮಧುವನೆನುತ್ತುಂ ॥
ವಿವಿಧ ಕಳಾಚಾರ್ಯರನಾ
ರ್ಯವರ್ಯರಂ ಗುರು ನಿಯೋಗದೂಳ್ ಯೋಜಿಸಿದಂ ॥ ೧೪೬ ॥

ಶುಭದಿನ ಮುಹೂರ್ತದೊಳ್ ಪು
ಣ್ಯಭಾಗಿಗಳ್ ಕಲಿಸೆ ಗುರುಗಳ್ಕೊಡವಂದುದೊ ಪೂ ॥
ರ್ವ ಭವೋಪಾರ್ಜಿತ ವಿದ್ಯಾ
ವಿಭವಮೆನಲ್ ಸಕಲಶಾಸ್ತ್ರ ಪರಿಣತರಾದರ್ ॥ ೧೪೭ ॥

ರೋಮಾಂಚಮನೊಡರಿಸೆಯುಂ
ರಾಮನ ಲಕ್ಷ್ಮಣನ ಭರತ ಶತ್ರುಘ್ನರ ವಿ
ದ್ಯಾ ಮಹಿಮೆ ಚತುಷ್ಷಷ್ಟಿಕ
ಲಾ ಮಹಿತರ ಮನದೊಳೀರ್ಷ್ಯೆಯಂ ಪುಟ್ಟಿಸುಗುಂ ॥ ೧೪೮ ॥

1. ಮುಡಿಳ. ಘ. ; ತೀಳಿಳ. ಚ.

ಮ॥ ಸೊಡರಂ ಪೊತ್ತಿಸಿಕೊಂಡು ಪೋಗೆ ಸೊಡರೊಳ್ ತೇಜಂ ಗುಣಾಧಿಕ್ಯದಿಂ ।
ಕಡುಗೊರ್ವಂ ಪಡೆವಂತೆ। ತಮ್ಮ ವಿಶದಪ್ರಜ್ಞಾ ಗುಣೋತ್ಕರ್ಷದಿಂ ॥
ಪಡೆಮಾತೇನಜುವತ್ತುನಾಲ್ಕು ಕಳೆಯುಂ ತತ್ಕೋವಿದರ್ ಮೆಚ್ಚೆ ನೂ ।
ರ್ಮಡಿ ಮೇಲಾದುವು ರಾಮಲಕ್ಷ್ಮಣರೊಳೀಂ ಸತ್ಕೀವೆ ಸಾಮಾನ್ಯಮೇ

ಚ॥ ಕಲಿತನಮುಂ ಮಹಾಬಲಮುವಳ್ಳನ ಕಯ್ವುವೆ ಕಯ್ವು। ಪಂದೆದು ।
ರ್ಬಲನೆನಿಸಿರ್ದವಂ ಪಿಡಿದ ಕೈದುವದೇತರ ಕೈದುವೆಂಬಿನಂ॥
ಕಲಿಸಿದ ಭಾರ್ಗವಾ[1]ತ್ಮಜರನೋಡಿದ ತಜ್ಜರ ಮುಯ್ವು ನೆತ್ತಿಯಂ ।
ಗೆಲಿ ಸಲೆ ರಾಮಲಕ್ಷ್ಮಣರದೇಂ ನೆರೆ ಕಲ್ತರೊ ಕ್ಕೈದುವೆಲ್ಲಮುಂ ॥ ೧೫೦ ॥

ಮ ॥ ಮಿಗೆ ವಂದೆಲ್ಲರ ಬಿಲ್ಲ ಬಿನ್ನಣದ ಬಿಣ್ಪಂ। ರಾಮನೇಸೆಂಬಿನಂ,
ಪ್ಪಿಗೆ ತನ್ನೇಸ್ಸುಪಮಾನಮಾದುದೆನೆ। ರಾಮಂ ಕಲ್ತ ಬಿಲ್ಬಲ್ಮೈಯಂ ॥
ಪೊಗಲಲ್ವೇಟ್ಟುದೆ। ರಾಮನೊಳ್ ಸದೃಶವೆಂಬನ್ನಂ ಧನುರ್ವಿದ್ಯೆಯಿಂ ।
ಜಗಮಂ ಮೆಚ್ಚಿಸಿ ಚಾಪ ಚಾಪಲತೆಯಂ ಕೊಂಡಾಡಿದಂ ಲಕ್ಷ್ಮಣಂ ॥ ೧೫೧ ॥

ಅಂತವರ್ ಸಕಲಶಸ್ತ್ರ ಶಾಸ್ತ್ರ ವಿದ್ಯಾವಿಶಾರದರಾಗಿ ಕುಮಾರ ದಶ್ಚಾತಿಶಯ ಮನಪ್ಪಕೆಯ್ವುದುಂ—

ಚ । ಹಿಮಕರ ಬಿಂಬದಿಂ ಕಡೆದುದೋ। ಪಳಕಿಂ ಪಡೆದತ್ತೊ। ಪೂಗಳಿಂ ।
ಸಮೆದುದೊ। ಚಂದ್ರಕಾಂತಮಣಿಯಿಂ ಬೆಸಕೆಯ್ದುದೊಮೌಕ್ತಿಕಂಗಳಿಂ ॥
ಸಮನಿಸಿದತ್ತೊ। ಕೋಮಲವ್ಯಾಳಿಕೆಯಿಂ ಪರಿಪೂರ್ಣಮಾಯ್ತೊ ಪೇ ।
ಟ್ಟಮಿದೆನೆ ರಂಜಿಸಿತ್ತು ರಘುರಾಮನ ಪಾಂಡುರ ದೇಹಮಂಡಲಂ ॥ ೧೫೨ ॥

ಕಂ॥ ಉನ್ನತ ಲಲಾಟ ಪಟ್ಟಂ,
ಮನ್ನಿಸದಷ್ಟಮಿಯ ಚಂದ್ರನಂ ನಗೆಗಣ್ಗಳ್ ॥
[2]ಮುನ್ನಡೆವಿಡಿದುವು ಕಮಳಮ
ನಿನ್ನೇವಣ್ಣಿಪುದೊ ರಾಮನಭಿರಾಮತೆಯಂ ॥ ೧೫೩ ॥

ಚ ॥ ತೆರೆ ಕರೆಗಣ್ಮೆದಿಂಗಡಲ ಗಾಡಿಯನೇಳಿಸ। ತೋರಮುತ್ತಿನೈ ।
ಸರದ ಮರೀಚಿಯಿಂ। ಸಿರಿಯ ತಾಯ್ವನೆ ರಾಮನ। ಸ್ಫೇರುರಂ ಮನೋ ॥
ಹರನೆನಿಸಿತ್ತು। ವಾರವನಿತಾಜನ ವಶ್ಯವಿಧಾನ ವೇದಿಯೊಳ್ ।
ದೊರೆಯೆನಿಸಿತ್ತು। ಧೈರ್ಯಗುಣ ರೋಹಣಶೈಲ ಶಿಲಾತಲೋಪಮಂ ॥ ೧೫೪ ॥

---

1. ತ್ಮಜನಿಸೋದಿತ ತಜ್ಜರ ಮುಯ್ವು ನೆತ್ತಿಯುಂ. ಚ.
2. ಮುನ್ನುರಿ ಕ. ಖ. ಗ ಘ.

ಕಂ ಏಳಿಸಿದುವು ಲಕ್ಷ್ಮಣನ ವಿ
ಶಾಳ ವಿಲೋಚನ ಯುಗಂಗಳಂಗ ಪ್ರಭೆಯಿಂ ॥
ಮೇಳಿಸಿ ನಗೆಯಂ ಪಾಳಿಸಿ
ಕಾಳಿಂದಿಯೊಳಲರ್ದ ಪುಂಡರೀಕ ಶ್ರೀಯಂ ॥ ೧೫೫ ॥

ಹರಿನೀಲ ರತ್ನಮಂ ಕಂ
ಡರಿಸಿದ ಕಣ್ಪಿಜವಿ[1]ಗೆಯ್ದು ಜೀವಂಬೊಯಂ ॥
ತಿರೆತೋರ್ಪ ಗಂಡಗಾಡಿಗೆ
ಪುರುಷೋತ್ತಮನೆಂದು ಕೊಂಡು ಕೊನೆದುದು ಲೋಕಂ ॥ ೧೫೬ ॥

ಚ ॥ ಮನಮನಲರ್ಚಿದತ್ತು ಪುರುಷೋತ್ತಮನುಚ್ಚ ಲಲಾಟ ಲೇಖೆ ಕೃ
ಷ್ಣನ ಕುರುಳೋಳಿ ವಿಷ್ಣುವಿನ ಪೇರುರವತ್ತಯತಿವೆತ್ತ ವಾರಿಜಾ ॥
ಕ್ಷನ ಧವಳೇಕ್ಷಣಂ ಪುರುಷಸಿಂಹನ ಸಿಂಹ ಕಟೀತಟಂ ಜನಾ ।
ರ್ದನನ ಭುಜಾಗ್ರ ಭೀಮ ಭುಜವಂಬುಜನಾಭನ ನಾಭಿಮಂಡಲಂ ॥ ೧೫೭ ॥

ಪೊಳೆಯೆ ನಖಾಂಶುಮಂಡಲ ಫಣಾಮಣಿ ಪಂಚಫಣಾಸಿತಾಹಿಗಳ್
ಬಳೆದಪುವೀಂಟಲೆಂದು ದಶಕಂಠನ ಬಲ್ಲುಸಿರಂತದೀಯ ನಿ ॥
ರ್ಮಳತರ ಕೀರ್ತಿ ದುರ್ಗ್ಗರಸಪಾನಮನಂಬಿನೆಗಂ ಪೊದಟ್ಟು ಕೋ ।
ಮ್ಮಳಿಕೆಯನಾಳ್ದು ನೀಳ್ದು ಬಗೆಗೊಂಡುವು ಕೃಷ್ಣನ ಬಾಹುಶಾಖೆಗಳ್ ॥ ೧೫೮ ॥

ಉ ॥ ಹಾರ ಮರೀಚಿಯಂ ಮುರಕತಚ್ಛವಿಯಂ ಗೆಲೆ ದೇಹದೀಪ್ತಿ ನೀ
ಹಾರ ಮರೀಚಿಯಂ ಕುಸುಮ ಸಾಯಕನಂ ಗೆಲೆ ಗಂಡಗಾಡಿ ।
ಭೀರವ ನಾದಮಂ ಜಲಧರಧ್ವನಿಯಂ ಗೆಲೆ ಬೇಜಿಬೇಜಿ ಗಂ ।
ಭೀರರವಂ ಬಲಾಚ್ಯುತರದೇನೆಸೆದಿರ್ದರೊ ರಾಮಲಕ್ಷ್ಮಣರ್

ಮ ॥ ರಣದೊಳ್ ರಾವಣನಂ ಜವಂಗೆ ಪೊಸತಿಕ್ಕಲ್ ತಾರಶೈಲಕ್ಕೆ ತೆಂ
ಕಣದಂ ಕಂಕಣದಂತೆ ಕೈಗೆವರಿಸಲ್ ಭೂಚಕ್ರಮಂ ಚಕ್ರಮಂ ॥
ರಣದೊಳ್ ಸಾಧಿಸಲೆಂದು ಪುಟ್ಟಿದವರೇಂ ಸಾಹಾಯ್ಯರೇ ರಾಮ ।
ಲಕ್ಷ್ಮಣರಪ್ರಾಕೃತವಿಕ್ರಮರ್ ತ್ರಿಭುವನ ಪ್ರಖ್ಯಾತ ಕೀರ್ತಿಧ್ವಜರ್ ॥ ೧೬೦ ॥

ಅಂತು ರಾಮ ಲಕ್ಷ್ಮಣ ಭರತ ಶತ್ರುಘ್ನರೆಂಬ ನಾಲ್ವರ್ ತನೂಭವರುಂ ನಾಲ್ಕುಂ ರತ್ನಶಿಲಾಸ್ತಂಭಂಗಳಂತೆ ರಘುಕುಲ ಸಮುದ್ಧರಣ ಸಮರ್ಥರಾಗೆ ದಶರಥಂ ಪರಿಪೂರ್ಣ ಮನೋರಥನಾಗಿ—

---

1. ಗೆಯ್ದು. ಕ. ಖ. ಗೆಯ್ದು. ಚ.

ಮ॥ಸ್ರ॥ ಧನಮಂ ಮರ್ಯ್ಯಾದೆಯಿಂದಾರ್ಜಿಸಿ/ವಿಷಯಸ್ಸುಖಾಸ್ವಾದನಂ ದೋಷ ನಿಷ್ಠಾ।
ದನಮುಳ್ತೆಂಬಂತೆ ಚಿತ್ತಕ್ಕೊದವಿಸೆ ಪದೆಪಂ/ಭಾರತೀ ಹಂಸಿ ವಕ್ತ್ರಾ॥
ಬ್ಜಿನಿಯೊಳ್ ನಾನಾವಿಧಂ ನರ್ತಿಸೆ/ಹಿಮಕರ ಭಾಸ್ವದ್ಯಶೋ ವಲ್ಲಿಗಾಲಂ।
ಬನಪುಂಭೋರಾಶಿ ವೇಲಾವನಮೆನೆ ನೆಗಲ್ದಿಂ ಭಾರತೀಕರ್ಣಪೂರಂ॥೧೬೧॥

ಇದು ಸರಮ ಜಿನಸಮಯ ಕುಮುದಿನೀ ಶರಚ್ಚಂದ್ರ ಬಾಲಚಂದ್ರ
ನುನೀಂದ್ರ ಚರಣನಖಕಿರಣ ಚಂದ್ರಿಕಾಚಕೋರ ಭಾರತೀ
ಕರ್ಣಪೂರ ಶ್ರೀಮದಭಿನವಪಂಪ ವಿರಚಿತಮಪ್ಪ
ರಾಮಚಂದ್ರ ಚರಿತ ಪುರಾಣದೊಳ್
ಕುಮಾರೋದಯವರ್ಣನಂ
—ತೃತೀಯಾಶ್ವಾಸಂ—

ಚತುರ್ಥಾಶ್ವಾಸಂ

ಕಂ॥ ಶ್ರೀಸುದತಿ ತನ್ನುರಸ್ಸರ
ಸೀ ಸದನದೊಳಿರ್ದು ಪಾತ್ರದಾನ ವಿನೋದ ॥
ವ್ಯಾಸಂಗಮನೊದವಿಸೆ ಸೌ
ಖ್ಯಾಸೀನಂ ಪೆಂಪುವೆತ್ತನಭಿನವಪಂಪಂ ॥ ೧ ॥

ಅನ್ನೆಗಮಿತ್ತಲ್—

ಕಂ॥ ಮಿಥಿಳಾ ಪುರಾಧಿನಾಥಂ
ಪ್ರಥಿತಯಶಂ ಜನಕನಾಮಹೀಭುಜನ ಮನೋ ॥
ರಥ ಭೂಮಿ ವಿದೇಹಿಗದೇಂ
ಪೃಥು ಕುಚ[1]ಯುಗದೊಡನೆ [2]ಕೊರ್ವುವಡೆದುದೊ ಮಧ್ಯಂ ॥ ೨ ॥

ಶಶಿಕಾಂತ ಮುಕುರದಂತಿರೆ
ಶಶಿಮುಖಿಯ ಕದಂಪುಗಳ್ ಬೆಳರ್ತುವು ಹರಿನೀ ॥
ಲ ಶಲಾಕೆಯಂತೆ ಬಾಸೆಗೆ
ವಿಶೇಷಮೆನೆ ಪಸರಿಸಿತ್ತು ಕರ್ಪೆಳವಸಿಱೊಳ್ ॥ ೩ ॥

ವಳಿರೇಖೆ ಮಸುಳೆ ಗರ್ಭಂ
ಬಳೆವುದುಮೊಡವಳೆದು ಸತಿಯ ಮಧ್ಯಂ ಚೆಲ್ವಂ ॥
ತಳೆದುದು ನಯನಾನಂದಮ
ನೆಳವೆಱೆ ಪರಿಪೂರ್ಣಮಾದೊಡಂ ಪುಟ್ಟಿಪವೋಲ್ ॥ ೪ ॥

ಆ ಸಮಯದೊಳ್—

ಕಂ॥ ಭವ ಭದ್ಧ ವೈರದಿಂ ಕಾ
ದು ವಿದೇಹಿಯ ಗರ್ಭಮಂ ನಿಶಾಚರನಿರ್ದಂ ॥
ವಿವಿಧೋಪಸರ್ಗಮಂ ಪಡೆ
ಯವೆ ಮುಳಿಸಂ ಪಡೆವ ಮುಳಿವ ದುಶ್ಚರಿತಂಗಳ್ ॥ ೫ ॥

---

1. ಭರ. ಗ. ಚ.
2. ತೋರ್ವು. ಗ

ಆ ವಿದೇಹಿಯ ಗರ್ಭಮನಾನಿಶಾಚರನದೇಂಕಾರಣದಿಂ ಕಾದಿರ್ದನೆಂದೊಡೆ ಚಂದ್ರಪುರಮನಾಳ್ವಂ ಚಂದ್ರಧ್ವಜನಾತನರಸಿ ಮನಸ್ವಿನಿಯೆಂಬಳಾಕೆಗೆ ಪುಟ್ಟಿದ ಚಿತ್ತೋತ್ಸವೆಯೆಂಬ ಬಾಲಿಕೆಯುಮಾನೃಪನ ಪುರೋಹಿತನ ಮಗನಪ್ಪ ಕಪಿಳನೆಂಬ ಬಾಲಕನುಂ—

ಕಂ ॥ ಒಡನಾಡಿಯುಮೊಡನೋದಿಯು
ಮೊಡನಳೆದುಂ ಪಲವುಕಾಲದಿಂದನುಬಂಧಂ ॥
ಗಿಡದೊಡಲೆರಡಸುವೊಂದೆನೆ
ಗೆಡೆವಕ್ಕಿಗಳಂತೆ ಕೂಡಿ ನಲಿಯುತ್ತಿರ್ದರ್ ॥ ೬ ।

ಅಂತವರೋರೊರ್ವರಂ ಮಚ್ಚಿ—

ಮ ॥ ಪದೆಪಿಂ ಚುಂಬಿಸದುಮ್ಮಳಂ ಬಯಸಿದಾಗಳ್ಮನ್ಮಥಕ್ರೀಡೆ ಕೂ ।
ಡದಟಿಲ್ ಕಳ್ವೊಡಗೂಡು[1]ವಂಜಿಕೆ ಮನಕ್ಕುದ್ವೇಗಮಂ ಮಾಡೆ ನೋ ॥
ಡದೆ ತಾಯ್ತಂದೆಯಗಲ್ಕೆಯಂ ಮದನ ರಾಗೋನ್ಮಾದದಿಂ ಮುಂದುಗಾ ।
ಣದೆ ಮುಗ್ಧಾಶಯರಾ ವಿದರ್ಭಪುರಮಂ ಪೊಕ್ಕಿರ್ದರಾಯಿರ್ವರುಂ ॥ ೭ ।

ಕಂ ॥ ಅನಿತಿಂದ್ರಿಯ ಸುಖಮುಂ ಸ್ಪ
ರ್ಶನ ಸುಖಮೊಂದಱಿಪೊಳಡಂಗಿದತ್ತೆನೆ ನೃಪ ನಂ ॥
ದನೆಯುಂ ದ್ವಿಜ ನಂದನನುಂ
ಮನೋಜ ಸುಖರಸ ವಿಲೀನ ಮಾನಸರಿರ್ದರ್ ॥ ೮ ॥

ಅಂತಿರ್ಪುದುಮೊಂದುದಿವಸಂ ಪ್ರತಾಪಸಿಂಹನ ಮಗಂ ತತ್ಪುರಾಧಿಪತಿ—

ಚ ॥ ಕೊಡೆವಿಡಿದಂತೆ ಮಂಡಳಿಸೆ ಮೇಲೆ ಕಿರೀಟಮರೀಚಿ ಸುತ್ತಲುಂ ।
ಕಡಿತಲೆಯಾಳ್ ಕಡಂಗಿಬರೆ ಮಾರ್ಗಮೊಡಂಬಡೆ ರಾಜಮಾರ್ಗದೊಳ್ ॥
ನಡೆಯೆ ಹಯಂ ವಿಳಂಬಿತದೆ ಕುಂಡಳಮಂಡಿತನೇಂ ವಿಳಾಸಮಂ ।
ಪಡೆದನೊ ಪದ್ಮರಾಗ ಮಣಿಕುಂಡಲ ಮಂಡಿತ ಗಂಡಮಂಡಲಂ ॥ ೯ ।

ಅಂತು ಬರುತ್ತುಂ—

ಚ ॥ ಶರದದ ಚಂದ್ರನಂ ನಗೆಮೊಗಂ ನಗೆ ಚಂದ್ರಮರೀಚಿಮಾಲೆಯಂ ।
ತರಳ ಕಟಾಕ್ಷಮಾಲೆ ಗೆಲೆ ಬಂದು ಗೃಹಾಂಗಣದೊಳ್ ಲತಾ ತನೂ ॥

---

1 ವಜ್ಜುಗ. ಖಿ. ಗ. ಘ.; ವಂಜನೆ. ಚ.

ದರಿ ನಡೆನೋಡೆ ಕಂತು ನಡೆ ಪೂಡಿದ ಪೂಗಣೆಗೆತ್ತು ನಾಡೆ ಕಾ।
ತರತೆಯನಪ್ಪುಕೆಯ್ಯೆ ಬಗೆ ನೋಡಿದನಾಕೆಯನಾ ಕುಮಾರಕಂ ॥ ೧೦ ॥

ಅಂತಾತಂ ಕಣ್ಸೋಲ್ತುನೋಡಿ ದೂದವಿಯನಟ್ಟುವುದುಂ—

ಚ ॥ ಬಗೆಯದೆ ತನ್ನ ಮುನ್ನಿನೊಲವಂ ನೆಲೆಯಿಂದೊಡಗೂಡಿ ಬಂದುದಂ।
ಬಗೆಯದೆ ಪಾಟಿಯಂ ಪಸುಗೆಯಂ ಗುಣಹಾನಿಯನಪ್ಪಸಿದ್ದಿಯಂ ॥
ಬಗೆಯದೆ ಬಂದ ದೂದವಿಗೆ ಚಿತ್ತಮನೊಪ್ಪಿಸಿ ಕೂಟದಾಸೆಯಂ।
ಬಗೆದಳಿದಾವ ವಿಸ್ಮಯಮೊ ನಾರಿಗೆ ನಚ್ಚಿನ ಕೆಯ್ವ ಕೈತವಂ ॥ ೧೧ ॥

ಅಂತಾಕೆಯನಾ ಕುಮಾರಂ ಬರಿಸಿ ತನಗರಸಿಮಾಡಿ ಕಪಿಳನಂ ಮರುಳ್ಮಾಡಿ ಕಳೆವುದುಮಾತನದುವೆ ನಿರ್ವೇಗಕಾರಣಮಾಗೆ ಕೆಲವುಕಾಲದಿನಾರ್ಯಗುಪ್ತರೆಂಬಾಚಾರ್ಯರ ಸಮಕ್ಷದೊಳ್ ಬಾಹ್ಯತಪೋರೂಪಮಂ ತಳೆದು—

ಕಂ ॥ ಆ ಸುದತಿ ನೆಲಸೆ ಚಿತ್ತ ನಿ
ವಾಸದೊಳಾ ಕಪಿಳಮುನಿ ತಪಶ್ರ್ರೀ ತನುವಂ ॥
ಬಾಸಣಿಸೆ [1]ತೇದು ಪೊನ್ನಂ
ಪೂಸಿದ ಕರ್ಬೊನ್ನ ಪಾಪೆಯಂತೆವೊಲಿರ್ದಂ ॥ ೧೨ ॥

ಒಪ್ಪಿಸಿ ಮನಮಂ ಮಾನಿನಿ
ಗೊಪ್ಪಿಸಿ ತನುವಂ ತಪಕ್ಕೆ ಮುನಿ ಮನಸಿಜನಿಂ ॥
ಸೊಪ್ಪಾಗಿರ್ದೊರ್ಚವಡಿಯ
ಕುಪ್ಪಸಮಂ ಪೋಲ್ತು ಪೊಜಗೆ ನೇರಿದನಾದಂ ॥ ೧೩ ॥

ಮುನಿ ನಡೆದಾ ತಪದೊಳ್ ಜೀ
ವನಮಂ ತನೆ ಪೀರ್ದು ದೇವಗತಿ ಸಮನಿಸೆ ಮು ॥
ನ್ನಿನ ಪಗೆಯಂ ಕುಂಡಲನಂ
ನೆನೆವವಧಿಯಿನಳವಿಗಟ್ಟಿದ ಮುಳಿಸಂ ತಳೆದಂ ॥ ೧೪ ॥

ಆತಂ ನಿಜವಿರೋಧಿಯಪ್ಪ ಕುಂಡಲಮಂಡಿತಂ ಪೆಜತೊಂದು ಪೆಣ್ಗೂಸುವೆರಸು ವಿದೇಹಿಯ ಗರ್ಭದೊಳ್ ಬಳೆವುದಂ ತಿಳಿದು—

---

1. ತೆಗದು. ಕ. ಖ. ಗ. ಘ.

ಕಂ ॥ ಗರ್ಭದ ಪೆಣ್ಗೂಸಿಂಗಂ
ಗರ್ಭಿಣಿಗಂ ಬಾಧೆ ಪಿಂಗೆ ಪೆತ್ತಾಗಡೆ ಗ ॥
ರ್ಭಾರ್ಭಕನನುಯ್ವೆನೆಂಬೀ
ದುರ್ಭಾವನೆಯಿಂ ವಿದೇಹಿಯಂ ಕಾದಿರ್ದಂ ॥ ೧೫ ॥

ಮ ॥ ಹರಿದಿಕ್ಕಾಂತೆಗೆ ಚಾರು ಚಂದ್ರಕಳೆಯುಂ ಚಂಡಾಂಶುವುಂ ಪುಟ್ಟುವಂ।
ತಿರೆ ಭೂವಲ್ಲಭ ಚಿತ್ತವಲ್ಲಭೆಗೆ ಪುತ್ರೀಪುತ್ರರೊಂದಾಗಿ ರಾ ॥
ಗ ರಸಂ ಕೈಮಿಗೆ ಪುಟ್ಟಿ ಪೂರ್ವಭವ ಬದ್ಧಕ್ರೋಧದಿಂ ಬಾಲನಂ।
ಸುರ[1]ನುರ್ವಿಂ ಪಿಡಿದೆಯ್ದನುಯ್ವ ತೆಱದಿಂ ಸ್ವರ್ಭಾನು ಬಾಲಾರ್ಕನಂ ॥೧೬॥

ಅಂತು ನೆಗೆದು ಗಗನಮಾರ್ಗದೊಳ್ ಪೋಗುತ್ತುಂ—

ಚ ॥ ಒಗೆವೆನೊ ಬೀಸಿ ಪಾಸಜಲೆಯೊಳಟ್ಟುವೆನೋ ಕಡಲೊಳ್ ಕರುಳ್ಗಳಂ।
ತೆಗೆವೆನೊ ಕುತ್ತಿ ಕತ್ತಿಗೆಯೊಳಿಕ್ಕುವೆನೋ ವಿಪಿನಾಗ್ನಿಯೊಳ್ಕರು ॥
ತ್ತುಗಿವೆನೊ ಕೂಡೆ ಮೆಯ್ವೊವಲನಲ್ಲದೊಡೆನ್ನಬಿಲಾಜಿದೆಂದು ದಿ।
ಟ್ಟಿಗಳೊಳೆ ನುಂಗುವಂತೆ ನಡೆನೋಡಿದನಾ ಶಿಶುವಂ ನಿಶಾಚರಂ ॥೧೭॥

ಅಂತು ನೋಡಲೊಡಮರ್ಭಕನ ಪೂರ್ವಭವದಣುವ್ರತ ಸಾಮರ್ಥ್ಯದೊಳಂ ನಿಜಮಹಾವ್ರತ ಸಂಸ್ಕಾರದೊಳಂ—

ಕಂ ॥ ಫಣಿ ಗರುಡಾಂಕದ[2] ಪಚ್ಚೆಯ
ಮಣಿಯಂ ಕಂಡಂತೆ ಮಣಿಯೆ ಶಿಶುವದನ ನಿರೀ ॥
ಕ್ಷಣದಿಂದಾಕ್ಷಣದೊಳ್ ದಾ
ರುಣಭಾವಂ ದೇವನುಪಶಮಕ್ಕೆಡೆಯಾದಂ ॥ ೧೮ ॥

ಒಡಲೊಳಗುಡಿದ ಸರಲ್ ಪೊಱ
ಮಡುವುದಯಸ್ಥಾಂತ ಸನ್ನಿಧಾನದೊಳೆಂತಂ ॥
ತೊಡಲಿಂ ಪೋದುದು ಮುನಿಸಿನ
ಪೊಡವ್ರು ನಕ್ತಂಚರಂಗೆ ಶಿಶುಸನ್ನಿಧಿಯೊಳ್ ॥ ೧೯ ॥

ಅಂತುಪಶಮ ಭಾವಮುಂ ಪಾಪಭೀರುತ್ವಮುಂ ತನಗೆ ತೊಟ್ಟನೆ ಪುಟ್ಟಿ ತನ್ನ

---

1. ನೊರ್ವಂ. ಕ. ಖ. ಗ. ಘ. ಚ.
2. ಡಾಂಡದ. ಚ.; ಡಾಂಗದ. ಕ. ಖ. ಗ. ಘ.

ಕರ್ಣಕುಂಡಲಮುಂ ಬಾಲಕನ ಕರ್ಣಯುಗಳಂಗಳೊಳಮರ್ಚಿ ಪರ್ಣಲಘುವಿದ್ಯೆಯಿ
ನೀಡಾಡಿ ಪೋಪುದುಂ—

ಚ॥ ತನುರುಚಿ ಕರ್ಣಕುಂಡಲಮರೀಚಿ ವಿಯತ್ತಳಮೆಲ್ಲಮಾ ಪಳ।
ಚ್ಚನೆ ಬೆಳಪಂತು ಪರ್ಣಲಘುವಿದ್ಯೆಯೊಳೊಯ್ಯನೆ ಬಂದು ಖೇಚರೇಂ॥
ದ್ರನ ಮೃದುತಲ್ಪದೊಳ್ ಸುರ ಕುಮಾರಕನಂದುಪಪಾತ ತಲ್ಪದೊಳ್।
ಜನಿಯಿಸಿದಂತೆ ಕಣ್ಗೆ ಪಡೆದಂ ಶಿಶು ನಿರ್ಭರ ಹರ್ಷ ಭಾರಮಂ ॥ ೨೦ ॥

ಅಂತಾ ಶಿಶುವಂ ದಕ್ಷಿಣಶ್ರೇಣಿಯ ರಥನೂಪುರಚಕ್ರವಾಳಪುರಮನಾಳ್ವಿಂದುಗತಿ
ವಿಯಚ್ಚರೇಂದ್ರನಂದಿನ ಸೂಚ್ಯಿವಂದ ಪುಷ್ಪವತಿ ಪೆಸರ ಮಹಾದೇವಿ ಫಲವತಿಯಾದ
ಳೆನಿಸಿ ಕೊಟ್ಟು ಕುಂಡಲ ಪ್ರಭಾ ಮಂಡಲ ವಿಳಾಸಮುಂ ತಳೆದನಪ್ಪುದಱಿಂ ಪ್ರಭಾ
ಮಂಡಲನೆಂದು ಪೆಸರನಿಟ್ಟನನ್ನೆಗಮಿತ್ತಲ್—

ಉ॥ ಈಗಳೆ ಪುಟ್ಟಿದೆನ್ನ ಶಿಶುವಂ ಕರುಣಂ ತನಗಿಲ್ಲದೆತ್ತಿಕೊಂ।
ಡಾಗಸದತ್ತಲಂತಕನ ದೂತನವೋಲ್ ಪಿಡಿದುಯ್ವನೊರ್ವನಿ॥
ನ್ನೀ ಗಳ ಗೆಯ್ವೆನೆಂದಬಿ ವಿದೇಹಿ ನವೋತ್ಪಲಮಾಲೆ ಕಾಱುವಂ।
ತಾಗೆ ಕದುಷ್ಣ ವಾರಿಗಳನುಣ್ಮಿದುವಾಕೆಗೆ ಬಾಷ್ಪವಾರಿಗಳ್ ॥ ೨೧ ॥

ಕಂ॥ ಬಡವಂ ಚಿಂತಾಮಣಿಯಂ
ಪಡೆವಂತೆಂತಾನುಮೊರ್ವನಂ ತನಯನನಾಂ॥
ಪಡೆದಾಗಳೆ ಮತ್ತೊರ್ವಂ
ಪಿಡಿದುಯ್ದಂ ದನುಜನೆಂದು ಶೋಕಂಗೆಯ್ದಳ್ ॥ ೨೨ ॥

ರಕ್ಷಾವಿಧಾನಮುಂ ತನು
ರಕ್ಷಕರಂ ಬಗೆಯದೆನ್ನ ತನಯನನುಯ್ದಂ॥
ರಾಕ್ಷಸನೆಂದಬ್ಬಿಳ್ ಧವ
ಳೇಕ್ಷಣೆ ದಳದಳಿಸಿ ಸುರಿಯೆ ಬಾಷ್ಪಜಲಂಗಳ್ ॥ ೨೩ ॥

ಕುಳವೃದ್ಧೆಯರುಂ ಧಾತ್ರೀ
ಕುಳಮುಂ ಶುದ್ಧಾಂತ ಕಾಂತೆಯರ್ಕಳುಮಟ್ಟಲಿಂ॥
ದಬಿ ಕಂಡು ಜನಕನತಿ ವಿ
ಹ್ವಳ ಚಿತ್ತಂ ಶೋಕರಸಮನೊಳಕೊಂಡಿರ್ದಂ ॥ ೨೪ ॥

ಆಗಳ್ ಮೌಹೂರ್ತಿಕರೀ ಶುಭಮುಹೂರ್ತದೊಳ್ ಪುಟ್ಟಿದ ಬಾಲಕಂಗ ನೋ
ಪುಮಪಾಯಮಾಗದೀಕೆಯುಮಗಣ್ಯ ಪುಣ್ಯವತಿಯಕ್ಕುಮೆಂದು ಶೋಕಮನದಿರ್ದೆ

ವಿದೇಹಿ ಸಂತೋಷಂಬಟ್ಟು ನಿಜ ತನೂಜೆಯ ಮುಖ ಸರೋಜಮುಂ ನೋಟ್ಪುದುಂ–

ಕಂ॥ ಆ ಸತಿಗೆ ಪುಟ್ಟಿ ಹರ್ಷ ವಿ
ಕಾಸಂ ಮಧುಬಿಂದುಮಾಲೆ ನೀಲೋತ್ಪಲದಿಂ ॥
ಸೂಸುವವೋಲ್ ನಗೆಗಣ್ಣಿಂ
ಸೂಸಿದುವಾನಂದಬಾಷ್ಪಬಿಂದುನಿತಾನಂ ॥ ೨೫ ॥

ತದನಂತರಂ—

ಕಂ॥ ಆ ರಾಜಭವನದೊಳ್ ಮಣಿ
ತೋರಣಮೊಡರಿಸಿದುವೀಕ್ಷಣಾಕರ್ಷಣಮಂ ॥
ಭಾರತಿಕನಾಗೆ ಮುಂದ ಸ
ವಿಾರಂ ಕೈಸಱಿದುವುತ್ಸವ ಧ್ವಜ ತತಿಗಳ್ ॥ ೨೬ ॥

ಕೆದಱಿದ ಪಿಷ್ಟಾತಕದಿಂ
ದೊದವಿದ ಪಟ್ಟವಾಸ ಚೂರ್ಣದಿಂದಳವಡೆ ಕ ॥
ಟ್ಟಿದ ರನ್ನದ ಮೇಲ್ಕಟ್ಟಂ
ಪದೆಪಂ ಪುಟ್ಟಿಸಿದುದಿಟ್ಟಳಂ ನೃಪಸದನಂ ॥ ೨೭ ॥

ಬದ್ವಣಂ ಬಾಜಿಸೆ ದೆಸೆ
ಬಿದ್ವಂ ಕುಣಿದಾಡೆ ಗಣಿಕೆಯರ್ ಪೂವಲಿಯೊಳ್ ॥
ಮುದ್ವಾಡೆ ತುಂಬಿಗಳ್ಮುಗಿ
ಲುದ್ವಂ ಪರಿದತ್ತು ಹರ್ಷರಸಮಾ ಪುರದೊಳ್ ॥ ೨೮ ॥

ಚ॥ ಪಡೆಪುದು ಗಾಯನೀಮಧುರ ಮಂಗಳ ಗೇಯಮುಪಾಯನಂಗಳಂ ।
ಕುಡಲೆಡೆಯಾಡುತಿರ್ಪ ಗಣಿಕಾ ಮಣಿನೂಪುರ ಕಿಂಕಿಣೀರವಂ ।
ಕುಡಿದುಪಹಾರ ಪುಷ್ಪರಸಮಂ ಮೊರೆದೇಲ್ವಳಿನೀ ರವಂ ಮಗ ।
ಳ್ವಡೆಯೆ ವಿದೇಹಿ ಪೌರಜನ ಕರ್ಣರಸಾಯನದೊಂದು ತಂದಲ್ತಂ ॥ ೨೯ ॥

ಅಂತು ಜಾತಕರ್ಮೋತ್ಸವಮಂ ಮಾಡಿ ದಶಮದಿನದೊಳ್ ಸರ್ವಲಕ್ಷಣ ಸಸ್ಯಸಂಪತ್ತಿಗೆ ಸೀತೆಯಪ್ಪುದಱಿಂ ಸೀತೆಯೆಂದು ಪೆಸರನಿಟ್ಟು ಕೊಂಡಾಡಿ ನಡ ಪುತ್ತುವಿರೆ ಮದನನೋಹನ ದೀಪಕಳಿಕೆಯಂತೆಯುಂ, ಕಾಮ ಕಲ್ಪಲತೆಯಂತೆ ಯುಂ, ನಿರಂತರೋಪಚಯಮನಪ್ಪುಕೆಯ್ದು ಭರತಶಾಸ್ತ್ರಾದಿ ಸಕಲ ಕಲೆಯೊಳತಿ ಪರಿಣತಿವಡೆದು–

ಕಂ ॥ ಶಶಿಲೇಖೆಯೆನಲ್ ಕರ್ಪೂ
ರ ಶಲಾಕೆಯೆನಲ್ ವಿಳೋಚನೋತ್ಸವಮಂ ಮಾ ॥
ಡಿ ಶಿಲೀಮುಖಕುಂತಳೆ ಮದ
ನ ಶಿಲೀಮುಖದಂತೆ ಭುವನಮಂ ಸೋಲಿಸಿದಳ್ ॥ ೩೦ ॥

ಮನಸಿಜನಾಜ್ಞಾರೂಪಮಿ
ದೆನೆ ಕರ್ವಿನಬಿಲ್ಲನೊಲ್ಲದುರ್ಚುವ ಸಮ್ಮೋ ॥
ಹನ ಶರಮೆನೆ ಬಾಜಿಸಿದುದು
ಜನಕಜೆಯ ಬೆಡಂಗು ಮದನ ಜಯ ಡಿಂಡಿಮಮುಂ ॥ ೩೧ ॥

ಉ ॥ ಲೀಳೆಯನಪ್ಪುಕೆಯ್ದು ನಯನೋತ್ಸವಮಂ ದಯೆಗೆಯ್ದ ಗಾಡಿಯಿಂ ।
ದೇಳಿಸಿ ಕಾಮ ಕಲ್ಪಲತೆಯಂ ಪರಿಪೂರ್ಣ ಕಳಾವಿಳಾಸದಿಂ ॥
ದೇಳಿಸಿ ಚಾರು ಚಂದ್ರಕಲೆಯಂ ನೆಲೆವೆರ್ಚಿಸಿದಳ್ ಮರಾಳ ಲೀ ।
ಲಾಳಸಯಾನೆ ಜಾನಕಿ ವಿದೇಹಿಗೆ ಮೋಹರಸ ಪ್ರವಾಹಮಂ ॥ ೩೨ ॥

ಕಂ ॥ ಜನಕಂಗೆ ಹರ್ಷದೊದವಂ
ಜನಿಯಿಸಿ ಜಾನಕಿಯ ರೂಪವಿಭವಂ ಮಾಡಿ ॥
ತ್ತನುರೂಪಂ ನೃಪಸುತನಾ
ವನೊ ವರನೀ ವನಿತೆಗೆಂಬ ಮನದುಮ್ಮಳಮಂ ॥ ೩೩ ॥

ಚಂ ॥ ಜನಕಜೆ ವಿಾಜಿ ಶೈಶವಮನೇಂ ತಲೆದೋಜಿದುದೋ ನವೀನ ಯೌ ।
ವನ ವಿಭವಂ ಮುಗುಳ್ನಗೆಯನೊಂದೆರಡಂ ನಿಜ ಪಲ್ಲವಾಧರಂ ॥
ನನೆಯ ಸರಲ್ಗಳೊಂದೆರಡುಮಂ ಕಡೆಗಣ್ ಕುಡುವುರ್ವು ಕಾಮದೇ ।
ವನ ಕುಡುವಿಲ್ಲನೊಂದೆರಡುಮಂ ಪಡೆದೊಪ್ಪಮನಪ್ಪುಕೆಯ್ವಿನಂ ॥ ೩೪ ॥

ಅಂತು ಜಾನಕಿ ಜನನೀಜನಕರ ಮನಕ್ಕೆ ಸಂತೋಷಮನೊದವಿಸುತಿರ್ಪಿನ ವೊಂದುದಿವಸಂ—

ಮ॥ಸ್ರ॥ ಚರನೊರ್ವಂ ಬಂದು ಬೇಗಂ ಜನಕನ ಸಭೆಯಂ ಪೊಕ್ಕು ಮೆಯ್ಯಿಕ್ಕಿ ಭೀತಾ।
ತುರ ಚಿತ್ತಂ ಚೀನ ಚೇಲಾಂಚಲಮನಧರದತ್ತುಯ್ದು ಚಿತ್ತೈಸಿದೊಂದಂ ॥ ೩
ಹರಿವಂಶೋತ್ತಂಸ ಲೋಕಾದ್ಭುತಮನಸಮಯೋತ್ಪಾತಮಂ ಲೋಕಲುಂಟಾ।
ಕರಸಂಖ್ಯಾತರ್ ಕಿರಾತರ್ ನೆರೆದು ನಿಖಿಲ ಭೂಚಕ್ರಮಂ ಸೂಜಿಗೊಂಡರ್ ॥

ಕಂ॥ ಇಜಿದು ತವಿಸುವೊಡೆ ಪಡೆ ನಾ
ಡೆಜಿಯರ ಕೈಯಳವಿಯಲ್ತು ಕಂಡಂತುಟನೆ ॥

ನ್ನಜೀವಂತುಟನುಳ್ಳಂತುಟ
ನಜೀವುವೆನವಧರಿಪುದೆಂದು ಚರನಿಂತೆಂದಂ ॥ ೩೬ ॥

ಕಂ ॥ [1]ಧನದಾಚಲಕ್ಕೆ ಬಡಗಣ
ದೆನೆ ವಿಜಯಾರ್ಧಾಚಲಕ್ಕೆ ತೆಂಕಣದೆನೆ ದು ॥
ಷ್ಟ ನಿವಾಸಮರ್ಧ[2]ಪರಮೆಂ
ಬ ನಾಮದಿಂ ಮ್ಲೇಚ್ಛದೇಶಮಿರ್ಪುದಪಾರಂ ॥ ೩೭ ॥

ಅಲ್ಲಿ ಮಯೂರಮಾಲೆಯೆಂಬ ಶಬರ ಶಿಬಿರಮನಾಳ್ವ ತರಂಗತಮನೆಂಬ ಶಬರ ನಾಯಕಂ ತನ್ನಾಳ್ವನಾಡ ಬೇಡವೆಡೆಯೆಲ್ಲಮಂ ಕೂಡಿಕೊಂಡು ಕಪೋತ ಕಾಂಭೋಜ ಕಣಾದಿ ದೇಶಂಗಳಂ ಕೆಡಿಸುತ್ತುಂ ಬಂದು—

ಉ ॥ ನಾಡರಸಂ ತಗುಳ್ದು ತಡೆಗಾಲದ ಮಾರಿಯ ಮೂರಿಯಂತೆ ಕ ।
[3]ಣ್ಗೋಡದೆ ಬಾಲ ವೃದ್ಧ ವನಿತಾ ವಧೆಗೆಯ್ದು ಕವರ್ತೆಗೊಂಡು ಸು ॥
ಟ್ಟೋಡಿಸಿ ಜಾತಿಯಂ ಕೆಡಿಸಿ ನಾಡನವಂ ಕಡಿದಿಕ್ಕಿ ಮೆಚ್ಚಿದಂ ।
ಬೇಡರಸಂ ತರಂಗತಮನಾನಿರೆ ಬೇಡರಸೆಂಬ ಗರ್ವದಿಂ ॥ ೩೮ ॥

ಎಂದು ಬಿನ್ನವಿಸೆ—

ಕಂ ॥ ಚರ ವಚನಮನಾಲಿಸಿ ತುಂ
ಬುರಕೊಳ್ಳಿಯ ತೆಱದಿನಂಬರಕ್ಕೆ ಸಿಡಿಲ್ದಾ ॥
ಹರಿವಂಶಕೇತು ಕಣ್ಣಿಸು
ಸೆರೆವರಿಯೆ ಕೃತಾಂತನಂತೆ ಮುಳಿದಿಂತೆಂದಂ ॥ ೩೯ ॥

ಉ ॥ ಒಂದೆ ಕುಠಾರದಿಂದಡವಿಯಂ ಕಡಿವಂತಿರೆ ಪೋಡುಗಾಜನೆ ।
ನ್ನೊಂದೆ ಭುಜಾಸಿಯಿಂ ಶಬರಕೋಟಿಯನಿಕ್ಕಿ ಪಿಶಾಚ ಕೋಟಿಗಾ ॥
ನಂದಮನುಂಟುಮಾಱ್ಪಿನುಬ್ಬುದಾನಂದನೇಳಿಸಿದೆಂದು ದುರ್ಯಶೋ ।
ದುಂದುಭಿ ನಾದಮಾವರಿಸದಿರ್ಕುಮೆ ಕೂಡೆ ಜಗಂಗಳೆಲ್ಲಮಂ ॥ ೪೦ ॥

ಕಂ ॥ ಇಜೀಯದೆ ಬೇಡಿದೊಡೀಯದೆ
ಬಜೀದೆ ಕುಲೀನತೆಗೆ ಬೆಸೆದು ಪಾರ್ಥಿವ ಶಬ್ದ ॥
ಕ್ಕೆಜೀವಟ್ಟಿನಿಸಿ ಧರಿತ್ರಿಗೆ
ಪೊಜೀಯೆನಿಪಂ ರಾಜ ನಾಮಧಾರಕನಲ್ತೇ ॥ ೪೧ ॥

---

1. ಕನಕಾ. ಚ. ; 2. ಪುರ. ಗ. 3. ; ಣ್ಣೂಡದೆ. ಚ.

ಎಂದು ಪರಿಚ್ಛೇದಿಸಿ ನುಡಿಯೆ—

ಕಂ॥ ನಿನಗೆ ಸಹಾಯಂ ದಶರಥ
ಜನನಾಥಂ ತತ್ಸಹಾಯದಿಂ ಲುಬ್ಧಕ ವಾ ॥
ಹಿನಿಯಂ ಮರ್ದಿಸು ಧುರದೊಳ್
ನಿನಗಂ ತನಗಂ ಜವಂಗಮಿದಿರಾಂಪವರಾರ್ ॥೪೨॥

ಎಂದು ಮಂತ್ರಿಮಂಡಲಂ ಬಿನ್ನವಿಸೆ ಜನಕಂ ದಶರಥನಲ್ಲಿಗೆ ಲೇಖವಾಹಕರ ನಟ್ಟಿ ಸಮರಸನ್ನದ್ಧನಾಗಿ ಬೇಗಮೊಂದೆರಡು ಪಯಣಮಂ ನಡೆದನಿತ್ತಲ್—

ಕಂ॥ ಬಾರಿಸಿ ಲೇಖಾರ್ಥಮನವ
ಧಾರಿಸಿ ದಶರಥಮಹೀಭುಜಂ ಪೊಯಿಸುವುದುಂ ॥
ಭೇರಿಯ ಬಂಭಾರವಮದು
ಭೈರವ ರವದಂತೆ ತೀವೆ ಗಗನೋದರಮಂ ॥ ೪೩ ॥

ಆ ವೃತ್ತಾಂತಮಂ ತಿಳಿದು—

ಚಂ॥ ಪುದಿಯೆ ವಿಭೂಷಣಾಂಶು ನಭಮಂ ತನುದೀಧಿತಿ ಬೇಱದೊಂದು ಜೊ ।
ನ್ನದ ಸಿರಿ ಕಾರ ಕಾರಿರುಳ ಮೆಯ್ಸಿರಿ ತಪ್ಪದೆನಲ್ ದಿಗಂತಮಂ ॥
ಪುದಿಯೆ ಬಲಾಚ್ಯುತರ್ ತರುಣಕೇಸರಿವೋಲ್ ಪುಗುತಂದರಿರ್ವರುಂ ।
ಕದನ ಮದೋದ್ಧತರ್ ದಶರಥಕ್ಷ್ಮಿತಿನಾಥ ಸಭಾಂತರಾಲಮಂ ॥ ೪೪ ॥

ಅಂತು ಬಂದು ತಂದೆಯ ಪಾದಾರವಿಂದಕ್ಕೆಱಗಿ—

ಕಂ॥ ಬಲದೆಡಗೆಲದಾಸನದೊಳ್
ಬಲಾಚ್ಯುತರ್ ನೆಲಸಿ ಮೇರುನಗದುಪನಗಮಂ ॥
ಗೆಲೆವಂದರ್ಪಸರಿಸೆ ನಿ
ಸ್ತುಲ ಮುಕ್ತಾಭರಣ ಕಿರಣ ನಿರ್ಝರ ನೀರಂ ॥ ೪೫ ॥

ಅನಂತರಂ—

ಕಂ॥ ಗೆಲೆ ನಿಟಿಲಮರ್ಧಚಂದ್ರನ
ವಿಲಾಸಮಂ ನೊಸಲೊಳಿಸೆಯೆ ಕರ ಸರಸಿಜ ಕು ॥
ಟ್ಮಲಮಮೃತಕಳಿಗೆ ದಂತಾಂ
ಶು ಲೀಖೆ ಮಾರ್ಪೊಳೆಯೆ ರಾಮಚಂದ್ರಂ ನುಡಿದಂ ॥ ೪೬ ॥

ಕಂ॥ ದೇವರ್ ದಿಗ್ವಿಜಯ ವ್ಯಸ
ನಾವಷ್ಟಂಭದೊಳೆ ನಡೆಯದಾಟವಿಕರೊಳಾ ॥
ದೀವಿಗ್ರಹಕ್ಕೆ ನಡೆವುದಿ
ದಾವುದೊ ಜಸಮಿಱುಪೆಗಾನೆ ಮೊಗಮಿಕ್ಕುವುದೇ ॥ ೪೭ ॥

ಅದರಿಂ ದೇವರೀ ಬೆಸನನೆಮಗೆ ದಯೆಗೆಯ್ವುದಿವರನಾಸ್ಫಾದಿತ ರಣ ರಸರ್ ಕಿಱಿಯರೆಂದು ಬಗೆಯವೇಡದೆಂತೆನೆ—

ಚ॥ ಕಿಡಿ ಕಿಱಿದಾದೊಡಂ ಸುಡದೆ ಕಾನನಮಂ ತರುಣಾರ್ಕನಾದೊಡಂ।
ಕಿಡಿಸನೆ ತೀವ್ರಮಪ್ಪ ತಮಮಂ ಹರಿ ಬಾಲಕನಾದೊಡಂ ಪಡ ॥
ಲ್ಗಡಿಸನೆ ಗಂಧಸಿಂಧುರ ಘಟಾವಳಿಯಂ ಕಿಱುಗೂಸೆನಲ್ಕೆವೇ।
ಡೆಡಱಿದರಂ ಜವಂಗೆ ಪೊಸತಿಕ್ಕನೆ ವಿಕ್ರಮಶಾಲಿ ಲಕ್ಷ್ಮಣಂ ॥ ೪೮ ॥

ಕಂ॥ ಮಾತೇನೊ ಕೆಂಕೆರಾತಂ
ಪೂತಂತೆ ಕಿರಾತಸೇನೆ ಪುಣ್ಬಡೆ ಶರ ಸಂ ॥
ಘಾತದ ಸವಿದೋರ್ಕುಂ ರಘು
ಜಾತಂಗೆಂಟನೆಯ ಕೇಶವಂಗಿದಿರುಂಟೇ ॥ ೪೯ ॥

ಸ್ರ॥ ಅಂಬೇಱಿಂ[1]ಗಾಂತರಂ ತತ್ತ್ರಿದಱಿದು ಭುಜಾಗರ್ವಮಂ ಬಿಟ್ಟು ಬಾಯ್ವಿ।
ಟ್ಟಿಂ ಬೇಯೆಂಬನ್ನೆಗಂ ಬೆಂದಗುಳ್ದು ಮೆಱಿದು ಬಿಲ್ಬಲ್ಮೆಯಂ ನಾಡನಿನ್ನೆಂ॥
ದುಂ ಬೇಡಪ್ಪೊರ್ದದಂತಾಗಿರೆ ನಿಯಮಿಸಿ ಬಂದಪ್ಪೆನಾನೆಂದು ಶೌರ್ಯಾ।
ಲಂಬಂ ರಾಮಂ ರಣಕ್ಕುಲ್ಕಿಗನೆನೆ ಬೆಸನಂ ತಂದೆಯಂ ಬೇಡಿಕೊಂಡಂ॥ ೫೦ ॥

ಅಂತು ಬೆಸನಂ ಬೇಡಿಕೊಂಡು ತಂದೆಯಂ ಬೀಳ್ಕೊಂಡು—

ಕಂ॥ ಅಪರಿಮಿತಮೆನಿಪ ಚತುರಂ
ಗ ಪತಾಕಿನಿ ತಮಗೆ ಕದನಕೇಳಿಗೆ ನೆರಮು ॥
ಲ್ಲುಪಕರಣಮೆನಿಪ ಕೋದಂ
ಡಪಾಣಿಗಳ್ ದಂಡಪಾಣಿಗೆಣೆಯೆನೆ ತಳರ್ದರ್ ॥ ೫೧ ॥

ಗೆಲಲರಿದಿವರೆರ್ವರ ದೋ
ರ್ಬಲಮಂ ತ್ರಿಭುವನದೊಳೆವರ್ಗೆ ನೆರಮಲ್ತು ಚತು ॥
ರ್ಬಲಮೆನಿತುಂ ನುಡಿ ನೆರವೆನೆ
ಬಲಾಚ್ಯುತರ್ ನಿಚ್ಚವಯಣದಿಂದೆಯ್ತಂದರ್ ॥ ೫೨ ॥

---

1. ದಾಂತರಂ. ಫ.

ಅಂತೆಯ್ದೆವರ್ದುಮವರನುಚಿತ ಪ್ರತಿಪತ್ತಿಯಿಂ ಮನ್ನಿಸಿ—

ಪೃ॥ ನೆಲಂ ಬೆಸಲೆಯಾದವೋಲ್ ನೆರೆದ ಲುಬ್ಧಕವ್ಯೂಹಮಂ ।
ಗೆಲಲ್ ನೆಱೆದೆನ್ನೀಗಳೆಂಬ ಬಲಗರ್ವಮಂ ತಾಳ್ದಿದಂ ॥
ಬಲಾಚ್ಯುತರ ಕೂಟದಿಂ ಜನಕನುಗ್ರ ವನ್ಯದ್ವಿಪಂ ।
ಬಲಂಬಡೆದುದೆಂಬಿನಂ ವಿಕಟ ದಂತಕೂಟಂಗಳಿಂ ॥ ೫೩ ॥

ಅನಂತರಮುದಾತ್ತರಾಘವನಮೋಘ ಶರಾಸನಾದಿ ವಿವಿಧಾಯುಧ ಸನಾಥನಾಗಿ ರಥಮನೇಱಿ ಲಕ್ಷ್ಮಣಂ ಕಾಲ್ನಾಪಿನೊಳ್ ನೆರೆದುಬರೆ ಜನಕ ಕನಕರಿರ್ವರ್ ವಿಜಯ ಗಜಮನೇಱಿ ಮುಂ[1]ಗೋಲೊಳ್‌ನಡೆಯೆ ನಾಡ ಗಡಿಯನೆಯ್ದಿ ಬರ್ಪ ಸಮಯದೊಳ್—

ಮ॥ ಒಲಭಾರಕ್ಕೆ ಬಿಗುರ್ತು ಸುಯ್ಯೆ ಫಣಿರಾಜಂ ಸುಯ್ದುಸುಯ್ಸಿಂ ಧರಾ ।
ವಲಯಂ ಕೆಟ್ಟು ನಭಕ್ಕೆ ಪಾಱಿದಪುದೋ ಪೇಟಂಬಿನಂ ಭಾನು ಮಂ ॥
ಡಲಮಂ ಮಂಡಳಿಸಿತ್ತು ತದ್ಬಲ ಪದ ಪ್ರೋದ್ಭೂತ ಧೂಳೀಚ್ಛಟಾ ।
ವಲಿ ಕಲ್ಪಾಂತ ಕೃಶಾನುಧೂಮ ಪಟಲೀ ಶಂಕಾ ಸಮುತ್ಪಾದಕಂ ॥ ೫೪ ॥

ಅನಂತರಂ ನೆಲಂ ಬೆಸಲೆಯಾದಂತೆ ಬರ್ಪ ಬೇಡವಡೆ ರಸೆಯಿನೊಗೆವಸುರಗ ಪಡೆಯಂತೆಯುಂ, ವ್ಯೋಮತಳದಿನಿಱಿವ ಧೂಮಕೇತುಗಳಂತೆಯುಂ, ಕಡೆಗಾಲದೊಳ್ಕಡೆವೊತ್ತಿ ಸುತ್ತಲುಂ ನೆಗೆವನಲನ ಪೊಗೆಯಂತೆಯುಂ, ನಡೆವ ನಂಜಿನ ಬಿಂಜದಂತೆಯುಂ, ಕರ್ಬುಲಿಯ ಪಿಂಡಿನಂತೆಯುಂ, ಸಿಂಗದ ಜಂಗುಳಿಯಂತೆಯುಂ, ಜವನೆರ್ಮೆವೋರಿವಿಂಡಿನಂತೆಯುಂ, ಬರಸಿಡಿಲ ಬಳಗದಂತೆಯುಂ, ಕಾಲಾಯಸ ಕಾಳ ಪುರುಷ ಪರಿಷಜ್ಜನದಂತೆಯುಂ, ಕಾಳರಕ್ಕಸನ ಸಂತಾನದಂತೆಯುಂ, ಕುಲನಗ ಮಹತ್ತರ ಕುಲದಂತೆಯುಂ, ಅರ್ಧಪ್ರಹಾರವರ್ಧನದಂತೆಯುಂ, ಯಮ [2]ಘಂಟಾ ಸಂಘಾತದಂತೆಯುಂ, ಮಾರಿಯ ಮೂರಿಯಂತೆಯುಂ, ಕ್ರೂರಗ್ರಹ ಪರಿಗ್ರಹದಂತೆಯುಂ, ಅಗುರ್ವುಮದ್ಭುತಮುಮಾದುದಲ್ಲಿಂಬಱಿಯಂ—

ಚ ॥ ಕರಿಗಳ್ಕಿಂಕೆವೆಟ್ಟುಗಳವೋಲ್ ನಡೆತಂದುವು ವಾಜಿರಾಜಿಗಳ್ ।
ತೆರೆಗಳ ತೆರ್ಕೆಯಂತೆ ಕವಿತಂದುವು ಲುಬ್ಧಕ ಸೈನಿಕಾಬ್ಧಿಯೊಳ್ ॥
ಕರಿ ಮಕರಂಗಳಂತೆ ರಥಕೋಟಿಗಳಾಸುರಮಾಗೆ ಬಂದುವಾ ।
ವರಿಸಿದುವಾವಗಂ ಗಗನಮಂ ವೃಕ ಕಾಕ ಸೃಗಾಲ ಕೇತುಗಳ್ ॥ ೫೫ ॥

---

1. ಗೋಳೊಳ್. ಕ. ಖ. ಗ. ಘ. ಚ ; 2. ಘಂಟ. ಚ.

ಕಂ॥ ರುಂಜೆಯ ದನಿ ದಿಕ್ಪಾಲರ
ನಂಜಿಸೆ ತಳ್ತೊಗೆವ ಕೋಡ ಕಾಳೆಯ ದನಿ ದಿ ॥
ಕ್ಕುಂಜರಮುಂ ಬೆದರಿಸೆ ನಭ
ಮುಂ ಜೇವೊಡೆಯುಲಿಪು ಸುತ್ತಿ ಮುತ್ತಿತ್ತಾಗಳ್ ॥ ೫೬ ॥

ಪಲದಿವಸಕ್ಕೆಂತಾನುಂ
ಕಲಹಂ ದೊರೆಕೊಂಡುದೆಂದು ಕೆಲಬರ್ ಬಿಲ್ಲಂ ॥
ಗೊಲೆಗೊತ್ತಿ ತೀವಿ ತೆಗೆದೇಂ
ನಲಿವರಿದರೊ ಜವನ ದೂತರೆನಿಸಿ ಕಿರಾತರ್ ॥ ೫೭ ॥

ಕರಿಘಂಟಾನಾದಂ ಹಯ
ಖುರಪುಟ ನಿನದಂ ವರೂಥ ಚೀತ್ಕಾರಂ ಕಿಂ ॥
ಕರ ಚಾಪ ಟಂಕೃತಂ ಭೋ
ರ್ಗರವಿನಮಾರ್ದೆತ್ತಿದತ್ತು ವನಚರ ಸೈನ್ಯಂ ॥ ೫೮ ॥

ಮತ್ತಿತ್ತ ರಾಮಚಂದ್ರನ ಬಲಮೆ ಚಂದ್ರಬಲಮಾಗೆ—

ಕಂ॥ ಆನೆ ಹಯಂ ತೇರಾಳೆಂ
ಬೀನಾಲ್ಕುಂ ಸೇನೆ ಬೇಡವಡೆಯೊಡೆಯನ ಪೇ ॥
ರಾನೆ ಹಯಂ ತೇರಾಳೆಂ
ಬೀನಾಲ್ಕುಂಸೇನೆಯೊಡನೆ ತಾಗಿದುವಾಗಳ್ ॥ ೫೯ ॥

ಉ॥ ಪಂದಲೆ ಪಾಜಿ ಪುಟ್ಟಿ ಬಿಸುನೆತ್ತರ ಸುಟ್ಟುರೆ ಬಾಣಜಾಲದಿಂ ।
ಪಂದರವಿಕ್ಕಿದಂತಿರೆ ನಭಂ ಮದದಾನೆಯ ದಂತ ಶಲ್ಯಮೆಂ ॥
ಟುಂದಿಸೆಗುಳ್ಳದಂತೆಸೆಯೆ ಕೂರಸಿ ಕೂರಸಿಯೊಳ್ಪಳಂಚೆ ಭೋ ।
ರೆಂದೊಡನುಣ್ಮೆ ತೋರಗಿಡಿ ತಾಗಿದುವಂದೆರಡುಂ ಚತುರ್ಬಲಂ ॥ ೬೦ ॥

ಅಂತು ಕಾದುವಾಗಳ್—

ಚ ॥ ಇನಿತು ಸಿಡಿಲ್ಗೆ ಕಾಯ್ಪಿನಿತು ನಂಜಿನ ಗಾಳಿಗೆ ವೇಗವಿಲ್ಲೆನಲ್ ।
ಕನಕನನಾಜಿಯೊಳ್ ಪಿಡಿದು ಕಟ್ಟಿದನಳ್ಕುಱಿ ಸುತ್ತಿ ಮುತ್ತಿದಂ ॥
ಜನಕನನೆಚ್ಚನಚ್ಚುಡಿಯೆ ಲಕ್ಷ್ಮಣನೇಱಿದ ತೇರನಾವನಾಂ ।
ಪನೊ ಯಮನಂತರಂಗ ಸುಭಟೋತ್ತಮನಂ ಮಹಾಜಿಯೊಳ್ ॥ ೬೧ ॥

ಶಾ॥ ತೇರಚ್ಚಂ ಮುಱಿಯೆಚ್ಚು ಬಿಲ್ಲನುಡಿಯೆಚ್ಚಶ್ವಂಗಳಂ ಸೂತನಂ ।
ಕೂರಂಬಿಂ ಕೆಡೆಯೆಚ್ಚು ತಾಂ ಗಡಿನಗಂ ಮಾಱುಾಂಪ ಗಂಡಂ ಗಡಿಂ ॥

ದಾರುತ್ತುಂ ಗೆಲೆ ಕಾದೆ ಲಕ್ಷ್ಮಣನೊಳಂ ಕಂಡಂತದಂ ಲೋಕ ಸಂ।
ಹಾರಂಮಾಟ್ಪಿ ಕೃತಾಂತನಂತೆ ರಘುಜಂ ಕೊಂಡಂ ಧನುರ್ದಂಡಮಂ॥ ೬೨॥

ಚ॥ ಒದವಿದ ಚಾಪಟಂಕೃತಿ ಭಯಂಕರಮಾಗೆ ವರೂಥಭಾರದಿಂ।
ದದಿರೆ ನೆಲಂ ಮನಃಪವನವೇಗದಿನೆಯ್ದಿ ಬಲಂ ಮಹಾಬಲಂ॥
ಕದನ ಮದಾವಿಲಂ ಕಱಿಯೆ ಬಲ್ಸರಿಯೆಂಬಿನಮಂಬನಂಬು ನ।
ಟ್ಟುದೆ ನೆಱನಾಗೆ ಕೂಡೆ ಗತಜೀವಿತಮಾಯ್ತು ಕಿರಾತ[1]ಸಾಧನಂ ॥ ೬೩॥

ಆಗಳ್—

ಕಂ॥ ಗೆಲ್ವಾರೆ ಜನಕಸೇನೆ, ಸ
ಡಿಲ್ದಗಿಯೆ ಕಿರಾತಸೇನೆ, ದಶರಥರಾಮಂ॥
ಬಿಲ್ದೆಗೆದಿಸೆ, ಮಾರ್ಪಡೆಯೊಳ್
ಬಲ್ದಲೆಯರ್ ಶಬರನಾಯಕರ್ ಪಡಲಿಟ್ಟರ್ ॥ ೬೪॥

ಆ ಸಮಯದೊಳ್ ಲಕ್ಷ್ಮಣಂ ಲಯಸಮಯ ಸಮುತ್ಪಾದನ ಸಮಗ್ರ ವೀರ ಗ್ರಹಾವೇಶಮನಪ್ಪುಕೆಯ್ದು—

ಕಂ॥ ಪಾರದೆ ಕೈದುವ ಬಲಮಂ
ಪಾರದೆ ನೆರವಲಮನೊಂದೆ ತೋಳ್ವಲದಿಂ ಸಂ॥
ಹಾರಿಸಿದಂ ಮಾರ್ಬಲಮಂ
ವಾರಿಜನಾಭಂಗೆ ಸಂಗರಕ್ಕಿದಿರುಂಟೇ ॥ ೬೫॥

ಅಂತು ರಾಮಲಕ್ಷ್ಮಣರ್ ಕಡಂಗಿ ಕಾದುವಾಗಳವರ ಬಲಕ್ಕೆ ಸುಗಿದು ಮೆಯ್ದೆಗೆವ ಬೇಡವಡೆಯಂ ಕೂಡಿಕೊಂಡು—

ಚ॥ ಅದಿರದಿದಿರ್ಚಿ ತಾಗಿದ ತರಂಗತಮಂ ದಿನನಾಯಕಂಗೆದಿ।
ರ್ಚಿದ ತಮದಂತೆ ಮೆಯ್ದೆಗೆಯೆ ಮಾರ್ಬಲದಾನೆಗೆ ಕೂಟಪಾಕಳಂ॥
ಕುದುರೆಗೆ [2]ಕರ್ಣದೂಷಿಕೆ ರಥಕ್ಕೆ ಸಿಡಿಲ್ ಭಟಮಂಡಲಕ್ಕೆ ಕೆಂ।
ಡದ ಮಱಿಯೆಂಬಿನಂ ಕಱಿದನಂಬಿನ ಪೆರ್ಮಱಿಯಂ ಹಲಾಯುಧಂ॥ ೬೬॥

ಉ॥ ಕಾದಲಿದಿರ್ಚಿ ಕೈದುವಿಡಿಯಲ್ಬಗೆದರ್ಪುದು ಮೊಗ್ಗೆ ಮಂಜಿನಂ।
ತಾದುದು ನಂಜನೆಂಜಲಿಸಿದಂತೆವೊಲಾದುದು ಬೇಗೆ ಪರ್ವಿದಂ॥

---

1. ಸಂಕುಲಂ. ಕ. ಖ.; ಸೈನಿಕಂ ಗ. ಘ.
2. ದಂತ. ಚ.

ತಾದುದು ಗಾಳಿಗೊಡ್ಡಿದ ಮುಗಿಲ್ಗಿಣಿಯಾದುದು ಕೂಡೆಯೊಕ್ಕಿದಂ।
ತಾದುದು ರಾಮಬಾಣ ಹತಿಯಿಂದಿದಿರಾದ ವಿರೋಧಿಸಾಧನಂ ॥ ೬೭ ॥

ಆಗಳ್—

ಕಂ ॥ ಬಲವಟ್ಟಿಯೆ ತರಂಗತಮಂ
ಪಲಾಯನೋದ್ಯುಕ್ತನಾಸೆವಟ್ಟಂ ಜಂಘಾ ॥
ಬಲಮುಂ ದಶರಥರಾಮನ
ಶಿಲೀಮುಖಕ್ಕೆಡಜುವಂತವಂ ದಶಮುಖನೇ ॥ ೬೮ ॥

ಓಡಲೊಡರಿಸುವೊಡಂ ತೊಡೆ
ಸೇಡೊಡರಿಸಿದಪ್ಪುದೆಂದು ಭಯರಸದಿಂದ ॥
ಲ್ಲಾಡೆ ಮನಂ ಕೈದುವನೀ
ಡಾಡಿದನಂಜಿಸುಗುಮೊರುಮಂ ರಾಮಶರಂ ॥ ೬೯ ॥

ತುಟ್ಟಿಲಾಳ್ತನಕ್ಕವಂ ನೀ
ರಿಟ್ಟಿವಂತಳವಟ್ಟಿದು ಸೂಸೆ ಕಣ್ಣೀರ್ತೀರಿಂ ॥
ದಿಟ್ಟಿದಂ ನೆಲಕ್ಕೆ ಜಸಮಡಿ
ಗಿಟ್ಟಿವಿನೆಗಂ ಲುಬ್ಧಕಂ ನೆಲಂ ಪಟ್ಟಿವಿನೆಗಂ ॥ ೭೦ ॥

ಚ ॥ ಸುಗಿದಿರೆ ಚಂದ್ರವಂಡಲದಮುಂದೆ ತಮಂ ಕೆಡೆದಿರ್ದುದೆಂಬಿನಂ।
ಮುಗಿಯೆ ಕರಾಂಬುಜಂ ಕುವಲಯಂ ನಗುವಂತಿರೆ ರಾಮಚಂದ್ರನೇ ॥
ಟ್ಟಿಗೆ ದೆಸೆಗೆಟ್ಟು ತೊಟ್ಟನೆ ತರಂಗತಮಂ ಶರಣೆಂದು ಬೀಟ್ಟುದುಂ।
ಗಗನಮನಾಗಳಾವರಿಸಿದತ್ತಪಹಾರ ಘನಾನಕ ಸ್ವನಂ ॥ ೭೧ ॥

ಕಂ ॥ ಅಂಬರಮುಂ ವಿಜಯಪತಾ
ಕಾಂಬರವೊಡನೊಡನೆ ಸಕಲ ದಿಗ್ವನಿತಾವ ॥
ಕ್ತ್ರಾಂಬುಜಮನಭಯಘೋಷಂ
ಚುಂಬಿಸಿದುವು ಕಱಿದುದಮರ ಕುಸುಮಾಸಾರಂ ॥ ೭೨ ॥

ಅಂಜದಿರಂಜದಿರೆನೆ ಮುಗಿ
ದಂಜಲಿಪುಟಮಂ ತರಂಗತಮನಿದಿರೊಳ್ನಿಂ ॥
ದಂಜನಗಿರಿಯವೊಲಿರೆ ಕೊ
ಟ್ಟಂ ಜಯಜಾಯಾಸಹಾಯನಭಯಮನಾಗಳ ॥ ೭೩ ॥

ಉ ॥ ಮುತ್ತಿನ ಪೊನ್ನ ಪೆರ್ದುಡುಗೆಯಂ ವಸನಂಗಳನಿತ್ತರಣ್ಯದೊಳ್ ।
ನಿತ್ತರಿಪಂತು ನಾಡ ಗಡಿಯಂ ಮಱಿದುಂ ಪುಗದಂತವಂಗೆ ಭೂ ॥
ಪೋತ್ತಮನಾಜ್ಞೆಯೆಂಬ ಮಣಿಮಂಡನಮಂ ನಡುನೆತ್ತಿಗಿತ್ತು ದಿ ।
ಗ್ಭಿತ್ತಿಗೆ ಕೀರ್ತಿಚಂದನ ವಿಲೇಪಮನಿತ್ತನಿದೇನುದಾತ್ತನೋ ॥ ೭೪ ॥

ಕಂ ॥ ಪ್ರಬಲನಬಲನವ್ವೊಲಂತಾ
ಶಬರಂ ಬೀಟಿಕ್ಕೊಂಡು ಬೇಗಮೆಂದುದನೇಗೊಂ ॥
ಡು ಬರ್ದುಂಕಿ ಪೋದನೆನೆ ರಾ
ಮಬಾಣಮಂ ಕದನಭೂಮಿಯೊಳ್ ವಿಸಾಜುವರಾರ್ ॥ ೭೫ ॥

ಆಗಳನೇಕಮಂಗಳ್ತಾನಕ್ಕ ರವಂಗಳೊಡನೆ—

ಕಂ ॥ ನಗುವಂತೆ ಪೆಱರ ಬಿಲ್ಬ
ಲ್ಮೆಗಳಂ ತಣ್ಪೆಳಗನುಗುಳೆ ಪೂಜಿಪ ನೆವದಿಂ ॥
ಜಗದಧಿಪ ಧನುರ್ಗುಣಮಂ
ತ್ರಿಗುಣಿಸಿದಂ ತೋರಮುತ್ತಿನೇಕಾವಳಿಯಿಂ ॥ ೭೬ ॥

ಅಂತು ಪೂಜಿಸಿ—

ಉ ॥ ಮಾರಣಮಂತ್ರ ನಾದಮೆನಿಸಿತ್ತು ವಿರೋಧಿಗೆ ಶಾಂತಿಕಕ್ರಿಯಾ ।
ಕಾರಣ ಮಂತ್ರನಾದಮೆನಿಸಿತ್ತು ಧರಿತ್ರಿಗೆ ಮೃತ್ಯು ವಂಚನೋ ॥
ಚ್ಚಾರಣ ಮಂತ್ರನಾದಮೆನಿಸಿತ್ತೆಮಗೆಚ್ಚರಿ ನಿನ್ನ ಚಾಪ ಟಂ ।
ಕಾರ ನಿನಾದಮೊಂದೆ ಫಲವುಂ ತೆಱನಂ ತಳೆದಂದಮಾವುದೋ ॥ ೭೭ ॥

ಕಂ ॥ ಏನಂ ಪ್ರತ್ಯುಪಕಾರಮ
ನಾನೊಡರಿಸುವೆಂ ಕುಮಾರ ಕನ್ನೆಯನಿತ್ತೆಂ ॥
ಮೇನಕೆಯಿಂ ಮಿಗಿಲೆನಿಸಿದ
ಜಾನಕಿಯಂ ಮದನ ವಶ್ಯ ಮಣಿದೀಪಿಕೆಯಂ ॥ ೭೮ ॥

ಅನುಬಂಧಮನ್ವಯಾ ಗತ
ಮೆನಿಸಿದುದದನಧಿಕಮಾಗೆ ಮಾಟ್ಪಿನುನಯದಿಂ ॥
ದನೆನುಗುಣ ಸಸ್ಯ ಸಂಪಾ
ದನ ಸೀತೆಯೆನಿಪ್ಪ ಸೀತೆಯಂ ನಿನಗಿತ್ತೆಂ ॥ ೭೯ ॥

ಎಂದು ನುಡಿದು ರಾಮನನುಮಂ ಸೌಮಿತ್ರಿಯುಮಂ ವಿಚಿತ್ರ ವಸ್ತ್ರಭೂಷಣಾದಿ

ಗಳಿಂದರ್ಚಿಸಿ ಜನಕಂ ಕತಿಪಯ ಪ್ರಯಾಣಂಗಳಿಂ ಕಟಿಪುವುದುಂ ರಾಮಲಕ್ಷ್ಮಣ ರಯೋಧ್ಯೆಯಂ ಪೊಕ್ಕು ಸುಖದಿನಿರ್ಪುದುಮೊಂದುದಿವಸಂ—

ಕಂ ॥ ಜನಕಂ ತನುಜೆಯನಿತ್ತಂ
ಮನುವಂಶ ಲಲಾಮನಪ್ಪ ರಾಮಂಗೆಂಬೀ ॥
ಜನವಾರ್ತೆಗೇಳ್ದು ನಾರದ
ಮುನಿಗಾದುದು ನೋಟ್ಪ ಕೌತುಕಂ ಜಾನಕಿಯಂ ॥ ೮೦ ॥

ಉ ॥ ಪೆಂಡಿರ ಲೀಲೆಯಂ ಯತಿಗೆ ನೋಟ್ಪುದು ಪಾಟಿಯೆ ಮುಂಜಿ ಕಚ್ಚಟಂ।
ಗುಂಡಿಗೆ ಬೋಳಮಂಡೆ ಮಣಿದಂಡಮಿವೀಕ್ಷಣ ಸೌಖ್ಯ ಹೇತುವೇ ॥
ಕಂಡೊಡೆ ಬಾಲೆಯರ್ ತಮಗೆ ಪೇಸದೆ ಮಾಣ್ಬರೆ ನಾರದಂ ಮರು।
ಳ್ಗೊಂಡವೊಲಾಗಸಕ್ಕೆ ನೆಗೆದಂ ವೃಥೆಯಲ್ತೆ ಸವಾಗ ಸಂಯಮಂ ॥ ೮೧ ॥

ಅಂತು ನಾರದಂ ಗಗನವೀಥಿಯಿಂ ಮಿಥಿಲೆಗೆ ಬಂದು ಕನ್ನೆವಾಡದ ಬಾಗಿಲ್ವಾಡಮಂ ಪುಗುವಾಗಳ್—

ಕಂ ॥ ಬಿರಿಮುಗುಳಿಂ ತುಜುಗಿದ ತಾ
ವರೆಗೊಳದೊಳಗಾಡುವಂಚೆವೆಣ್ಣನದೇಂ ಚ ॥
ಪ್ಪರಿಸಿವಳೊ ಸೀತೆ ಕನ್ಯಾ
ಪರೀತೆ ವೈಡೂರ್ಯ ರತ್ನಮಯವೇದಿಕೆಯೊಳ್ ॥ ೮೨ ॥

ಆಗಳ್ದೃಷ್ಟಪೂರ್ವಮಂ ನಾರದನ ವಿಕೃತಾಕಾರಮಂ ಕಂಡು ತರುಣಿ ಹರಿಣಿಯಂತೆ ಬೆರ್ಚಿ ಬಿಜುತೋಡುವುದುಂ—

ಕಂ ॥ ತತ್ತರುಣಿಯ ಬಚ್ಚಿವಚ್ಚಿಯಂ
ಪತ್ತಿ ಹಿತಾಹಿತ ವಿವೇಕ ವಿಕಲಂ ಪಟಿಯಂ ॥
ಪೆತ್ತಾಮುನಿಪಂ ಭ್ರಾಮಕ
ದತ್ತೆಳಸುವ ಪಚ್ಚೆಗರ್ಬುನಕ್ಕೆಣೆಯಾದಂ ॥ ೮೩ ॥

ನಾರದನೇಂ ತಳೆದನೊ ಕ
ನ್ಯಾರತ್ನಮನೆಳಸಿ ಪರಿವ ಪರಿಣತಿಯಿಂ ನಿ ॥
ಸ್ಸಾರಮನಂ ನೀಲ ಶಲಾ
ಕಾರತ್ನಮನೆಳಸಿ ಪರಿವ ತೃಣ ಪರಿಣತಿಯಂ ॥ ೮೪ ॥

ಅಂತು ಬಟವಟಿಯನುಟಿಯದೆಯ್ತಪ್ಪುದುಂ—

ಕಂ ॥ ಧಾತ್ರಿ ಪಟ್ಟಿವಂತು ತನ್ನಂ
ಧಾತ್ರೀಜನಮಡಸಿ ಪಿಡಿದು ಪರಿಭವಿಸುವುದುಂ ॥
ಮಿತ್ರಂ ಶಲಭಕ್ಕೆನೆ ಮುನಿ
ನೇತ್ರೇಂದ್ರಿಯ ಲೋಭದಿಂದಮಂದಘವಟ್ಟಂ ॥ ೮೫ ॥

ಆಗಳಾ ಕಳಕಳಮಂ ಕೇಳ್ದು—

ಕಂ ॥ ಕಡಿತಲೆಯಂ ತೂಗುತ್ತುಂ
ಕಡುಗಲಿಗಳ್ಮುಟ್ಟಿ ಬರ್ಪುದುಂ ಭಯರಸದಿಂ ॥
ನಡುಗುತ್ತುಂ ನಾರದಮುನಿ
ಕುಡುಮಿಂಚಿನ ಗೊಂಚಲಂತೆ ಗಗನಕ್ಕೊಗೆದಂ ॥ ೮೬ ॥

ಅಂತು ಪೊಳೆದು ಪಾಱಿ—

ಶಾ ॥ ಪಿಂದಂ ಬೆನ್ದಗುಳ್ಪಪ್ಪರೆಂದು ಪೆಱಗಂ ನೋಡುತ್ತುವೋಡುತ್ತುಮೆ ।
ಯ್ತಂದಂ ಗಾಳಿಗೆಱಂಕೆ ಮೂಡಿದವೊಲಾಕಾಶಂಬರಂ ನೀಳ್ದುದಂ ॥
ಕುಂದೇಂದು ಪ್ರಭೆಯಂ ಮನಂಗೊಳಿಪುದಂ ವಿದ್ಯಾಧರೀ ಲೋಚನಾ ।
ನಂದಸ್ಯಂದಿ ತಟೀ ವಿಲಾಸ ವನಮಂ ಕೈಲಾಸಮಂ ನಾರದಂ ॥ ೮೭ ॥

ಅಂತಾ ನಗಮನೆಯ್ದಿ ಸಾನು ನಂದನ ಲತಾಮಂದಿರದೊಳಗಣಿಂದುಕಾಂತ ಶಿಲಾತಲದೊಳ್ ವಿಶ್ರಮಿಸಿ ಮನೋವಿಷಾದಮುಮಂ ಗಗನಾಧ್ವಖೇದಮುಮಂ ತಳೆದು ತನ್ನೊಳಿಂತೆಂದಂ—

ಕಂ ॥ ಖೇದಮನೆನಗಿನಿತಂ ಸಂ
ಪಾದಿಸಿದಾ ಕನ್ನಿ[1]ಗಳವಿಗಟ್ಟಿದಟಿಲಂ ಸಂ ॥
ಪಾದಿಸುವೆನೆಂದು ಪರಪೀ
ಡಾ ದುಶ್ಚರಿತಕ್ಕೆ ನಾರದಂ ಬಗೆದಂದಂ ॥ ೮೮ ॥

ಅಂತು ಬಗೆದಂದು—

ಉ ॥ ನೂಲ ಪ[2]ವಣ್ಪವಣ್ಗೆಬರೆ ನಿಮ್ನ ಘನೋನ್ನತಮಂ ಪ್ರದೇಶಮಂ ।
[3]ಪೋಲಿಸಿ ನಾರದಂ ವಿಷಮ ಚಿತ್ರ ವಿಚಿತ್ರ ಕಲಾ ವಿಶಾರದಂ ॥

---

1. ಗಳಲನದವಳಲಂ. ಕ. ಖ. ಗ. ಘ.
2. ವಣ್ಗೆಕಣ್ಗೆ. ಕ. ಗ. ಘ.
3. ಪಾಲಿಸಿ. ಖ. ಗ. ಘ.

ಬಾಲೆಯ ಮುದ್ದುಗೆಯ್ತ್ತಮುಮನಾಕೆಯ ಸುಂದರ ರೂಪುಮಂ ಮಹಾ ।
ಲೀಲೆಯುಮಂ ದುಕೂಲ ಪಟಪೊಳ್ ಬರಿದಂ ಪ್ರತಿಬಿಂಬಮೆಂಬಿನಂ ॥೮೯॥

ಅಂತು ಪರವಿದ್ಧ ಪರಿಣತಿಯಂ ಮೆಜ್ಜಿದಾಪಟಮುಂ ವಿದ್ಯಾಧರರಾಜಧಾನಿಯಪ್ಪ ರಥನೂಪುರಚಕ್ರವಾಳಪುರದ ಪೊಜವೊಲಿಲ ವಿನೋದ ವನದೊಳಗಣ ಮಣಿಭವನಮೊಳಗೆ [1]ನೇಜು ಪೋಪುದುಮಿತ್ತಲ್—

ಮ ॥ ಕೆಲಬರ್ ಖೇಚರ ರಾಜಕರ್ ಬಳಸಿಯುಂ ಕೇಳೀವನ ಸ್ಥಾನದೊಳ್ ।
ಚಲನ ನ್ಯಾಸ ವಿಲಾಸಮಂ ಮೆಜ್ಜಿದು ದೇಹಚ್ಛಾಯೆಯುಂ ರತ್ನಕುಂ ॥
ಡಲ ಭೂಷಾ ರುಚಿಯುಂ ಪಳಂಚೆ ವೆಸೆಯಂ ಸೌಂದರ್ಯದಿಂ ಮನ್ಮಥಂ ।
ಗಲಗಿಕ್ಕಲ್ ನಡೆವಂತೆ ಮಂದಗತಿಯಿಂ ಬಂದಂ ಪ್ರಭಾಮಂಡಲಂ ॥ ೯೦ ॥

ಅಂತು ಬರುತ್ತುಮ್ಮಾನಿಕೇತನದೊಳಿರ್ದ ಚಿತ್ರಪಟಮಂ ನೋಡಿ—

ಕಂ ॥ ಸಮುದಾಯಶೋಭೆ ವರ್ಣ
ಕ್ರಮದಿಂ ಪ್ರತ್ಯೇಕಶೋಭೆ ಚೆಲ್ವಿಂ ನಯನ ॥
ಕ್ಕಮರ್ದಂ ಮುಂದಿಡೆ ಖೇಚರ
ನೆನೆಯಿಕ್ಕದೆ ಬಯಸಿನೋಡಿ ಬರೆಪದ ಪೆಣ್ಣಂ ॥ ೯೧ ॥

ಮ ॥ ಅನುರಾಗಂ ತನಗಾಗೆ ಕಂಡನಿತಜಂದಾವಿದ್ಧಮಂ ತನ್ನ ಮು ।
ನ್ನಿನ ಜನ್ಮಾಂತರದಚ್ಚಿಜಂ ಪೊಸಯಿಪಂತಾಲೋಕಿಸುತ್ತಿರ್ದುದುಂ ॥
ನನೆಯಂಬಿಂದಿಸೆ ನಿರ್ದಯಂ ಮನಸಿಜಂ ಕರ್ಣಾಂತ ವಿಶ್ರಾಂತಲೋ ।
ಚನ ಯುಗ್ಮಂ ನಸುಮುಚ್ಚೆ ಮುಚ್ಚೆಗೊಳಗಾಗಿರ್ದಂ ಪ್ರಭಾಮಂಡಲಂ॥ ೯೨॥

ಕಂ ॥ ಬರೆದುರಗಲೇಖೆ ಮೂರ್ಛಾ
ಪರಿಣತಿಯಂ ಮಂತ್ರಶಕ್ತಿಯಿಂ ಪುಟ್ಟಿಪವೋಲ್ ॥
ಬರೆಪದ ಕನ್ನೆ ಭವಾಂತರ
ಪಂಚಯದಿಂ ಮೋಹಮೂರ್ಛೆಯಂ ಪುಟ್ಟಿಸಿದಳ್ ॥ ೯೩ ॥

ಅದನಾತನ ತಂದೆಯಪ್ಪಿಂದುಗತಿ ಕೇಳ್ದ ಸಂಭ್ರಮದಿಂ ಬಂದು ಶೀತಲ ಕ್ರಿಯೆಗಳನೊಡರ್ಚಿ—

---

1. ನೆರಪಿ. ಪ. ಗ. ಘ.

ಕಂ ॥ ಶಿಶಿರೋಪಚಾರದಿಂ ಖಚ
ರ ಶಿರೋಮಣಿ ನಯನ ಕುವಲಯಂ ಬಿರ್ಕೆ ಮನೋ ॥
ಜ ಶಿಲೀಮುಖ ಕೀಲಿತ ಹೃ
ತ್ಸುಶೇಶಯಂ ತಡೆದು ಮೂರ್ಛೆಯಿಂದೆಚ್ಚಿತ್ತರ್ತಂ ॥ ೯೪ ॥

ತದನಂತರಮಾವಿಯಚ್ಚರಾಧಿರಾಜನೀಪಟಮನಿಲ್ಲಿಗಾರ್ತಂದರೆಂದುಮ್ಮಳಿಸು
ತ್ತುಮಿರೆ ನಾರದನಾಗಳಲ್ಲಿಗೆ ಬಂದುಚಿತಾಸನದೊಳಿರ್ದು ಖಚರಪತಿಗಿಂತೆಂದಂ—

ಕಂ ॥ ಜನಕಂ ಮಿಥಿಲಾಧಿಪನಾ
ತನ ವನಿತೆ ವಿದೇಹಿಯೆಂಬಳಾಕೆಗೆ ವಿಯದಂ ॥
ಗನೆಗೆ ತುಹಿನಾಂಶು ಕಳೆಯೆನೆ
ಜನಿಯಿಸಿದಳ್ ಸೀತೆಯೆಂಬ ಕನ್ಯಾರತ್ನಂ ॥ ೯೫ ॥

ಮ ॥ ಸುರ ವಿದ್ಯಾಧರ ಕನ್ಯಕಾ ಜನದೊಳಾ ಸ್ತ್ರೀರತ್ನಮಂ ಪೋಲ್ವರೊ ।
ರ್ವರುಮಿಲ್ಲೀ ನೃಪರತ್ನವಾಕೆಗನುರೂಪಂ ರತ್ನ ಮೇಳಾಪಕಂ ॥
ದೊರೆವೆತ್ತಿರ್ಕುಮಿದಂ ನಿವೇದಿಸುವೆನೆಂದಾ ಕನ್ಯಕಾ ವಿದ್ಧಮಂ ।
ಬರೆದಾನಿಲ್ಲಿಗೆ ತಂದೆನಕ್ಕೆ ನಿಮಗಂ ಭದ್ರಂ ಶುಭಂ ಮಂಗಳಂ ॥ ೯೬ ॥

ಎಂದು ನಾರದಂ ಪರಸಿ ಪೋಪುದುಮಿತ್ತಲ್—

ಉ ॥ ಏನುಮನಾರೊಳಂ ನುಡಿಯದುಮ್ಮಳದಿಂ ವಿರಹಾಕುಲಂ ಮನೋ ।
ಗ್ಲಾನಿಯನೊಂದಿ ಪೆಣ್ಣಬರೆಪಂ ಬರೆದಂತಿರೆ ಚಿತ್ತಭಿತ್ತಿಯೊಳ್ ॥
ಜಾನಿಸಿ ಚಿತ್ತಮಂ ಪುದಿಯೆ ಮೋಹತಮಂ ಬೆಮರುಣ್ಮೆ ಪೊಣ್ಮೆ ।
ಜ್ಞಾನಮಿತಾನನಂ ತಳೆದನಾ ಖಚರಾಗ್ರಣಿ ಮೌನಮುದ್ರೆಯಂ ॥ ೯೭ ॥

ಅಂತು ದಿಜ್ಮೂಢನಾದ ಮಗನ ಮೊಗಮನಿಂದುಗತಿ ನೋಡಿ—

ಉ ॥ ಮಾನವ ಕನ್ಯೆಯಂ ಬಯಸಿ ನಂದನ ನಿನ್ನ ಮನಕ್ಕೆ ಚಿಂತೆಯಂ ।
ಮ್ಲಾನತೆಯಂ ಮುಖಕ್ಕೆ ತರವೇಱ್ಪುದೆ ಕೊಳ್ಕೊಡೆಗಱ್ತುವಟ್ಟಿನೆಂ ॥
ದಾನೆರೆದಟ್ಟಿ ನಿನ್ನ ದೊರೆಯಂ ವರನಂ ಪಡೆದಿರ್ಕ್ಕೆ ಕೇಳ್ವೆನೇ ।
ಜಾನಕಿಯಂ ವಿವಾಹವಿಧಿಯಿಂ ಜನಕಂ ನಿನಗೀಯದಿರ್ಪನೇ ॥ ೯೮ ॥

ಎಂದು ನಿಜನಂದನನ ಮನೋವಿಷಾದಮಂ ಕಳೆದು ನಮಗಿಲ್ಲಿಗೆ ತಕ್ಕುದಾ
ವುದೆನೆ ವಿಯಚ್ಚರ ವೀರನೊರ್ವನಿಂತೆಂದಂ—

ಕಂ ॥ ಇದು ಮಂತ್ರಾಲೋಚಂಬರ
ಮುದಾತ್ತ[1]ಮೆಣಮಲ್ತು ಮಿಥಿಳೆಯಂ ಜನಕನುಮಂ ॥
ಬೆಸಱಿಸಿ ಜಾನಕಿಯಂ ತ
ರ್ಪುದು ಮಾಟ್ಪುದು ದೇವ ಸುತ ವಿವಾಹೋತ್ಸವಮಂ ॥ ೯೯ ॥

ಎನೆ ವಿಯಚ್ಚರೇಂದ್ರನಿಂತೆಂದಂ—

ಕಂ ॥ ಈಯೆ ತರವೇಟ್ಪುದಬಲೆಯ
ನೀಯದೆ ತಂದಂದು ತನಗದತ್ತಾದಾನಂ ॥
ಸ್ತೇಯಮದಱಿಂದಮದನ
ಶ್ರೇಯಮನಾಚರಿಸದಲ್ತೆ ಖೇಚರವಂಶಂ ॥ ೧೦೦ ॥

ಸಮನೆನಿಪನೊಡನೆ ಕೊಳ್ಕೊಡೆ
ಸಮನಿಸೆ ಸಮುದತ್ತಿ ಭೂಚರರ್ ಖೇಚರರೊಳ್ ॥
ಸಮನಲ್ಲರ್ಸುತವೋಹದಿ
ನೆಮಗಮದಶ್ರೇಯಮಾದೊಡಂ ಕರಣೀಯಂ ॥ ೧೦೧ ॥

ಎಂಬುದುಮಿಂದುಗತಿ ವಿಯಚ್ಚರೇಂದ್ರಂಗೆ ಕುಲಮಹತ್ತರಂ ಚಂದ್ರವರ್ಧನನಿಂತೆಂದಂ—

ಕಂ ॥ ಎರೆದಟ್ಟಿದೊಡೀಯರ್ ಭೂ
ಚರರೆಂತುಂ ನೀಚರದಱಿನಿಲ್ಲಿಗುಪಾಯಾಂ ॥
ತರದಿಂ ತಂದೆರೆಯೆ ಭಯಾ
ತುರಂ ನಿಜಾತ್ಮಜೆಯನೀವೊಡೀವಂ ಜನಕಂ ॥ ೧೦೨ ॥

ಎಂಬುದುಮಾಬೆಸನಂ ಚಪಲವೇಗನೆಂಬ ವಿದ್ಯಾಧರಂ ಬೇಡಿಕೊಂಡು—

ಕಂ ॥ ಗಗನೇಚರ ತೇಜಶ್ಶಿಖಿ
ಪಗೆವರ ಭಾಸುರ ಯಶೋ ವಿತಾನಮನುರಿಪಲ್ ॥
ನೆಗೆದುದೆನೆ ಚಪಲವೇಗಂ
ನೆಗೆದಂ ಗಗನಕ್ಕೆ ವಿಜಿತ ಚಪಲಾವೇಗಂ ॥ ೧೦೩ ॥

ಭೋಂಕನೆ ಬಡಗಣ ದೆಸೆಯಿಂ
ತೆಂಕಣದೆಸೆಗಾಗಿ ನಡೆದುದುಳ್ಳವಿದೆಂಬಾ ॥
ಶಂಕೆಯನೊಡರಿಸಿ ಮಿಥಿಲೆಗ
ಶಂಕಿತನಾ ಖಚರನಿಳಿದನಂಬರ ತಳದಿಂ ॥ ೧೦೪ ॥

---

1. ಗುಣ. ಚ.

ಅಂತವನಿಗವತರಿಸಿ ಪುರಶ್ರೀಯ ಮುಖಶ್ರೀಯನನುಕರಿಸುವ ಕಮಲವನ ಸಮೀಪದೊಳ್ ವಿಶ್ರಮಿಸಿ ಜನಕಂ ಹಯಪ್ರಿಯನಪ್ಪುದಂ ತಿಳಿದು:—

ಮ ॥ ನೃಪನೀತಂ ತುರಗಪ್ರಿಯಂ ವಿಷಮ ವಾಹಾರೋಹಣಾತ್ಯಂತ ಲೋ ।
ಲುಪನೊಲ್ಪೇಱಿದೆ ಮಾಣನೇಱಿದೊಡೆ ಸಾಲ್ಗಂ ಕೊಂಡು ಪೋಪೆಂ ಮದೀ॥
ಯಪುರಕ್ಕೆನ್ನಯ ಪೂಣ್ಕೆ ತೀರ್ಗುಮಿದಱಿಂ ಪೋಗೆಂದು ನಿಶ್ಚೈಸಿ ರೂ ।
ಪ ಪರಾವರ್ತನ ವಿದ್ಯೆಯಿಂ ತುರಗರೂಪಾದಂ ಚರಂ ಖೇಚರಂ ॥ ೧೦೫ ॥

ಅಂತು ವಿಷಮ ಹಯ ವೇಷಮಂ ತಳೆದು—

ಕಂ ॥ ಎಯ್ದುದೆಡೆಯೆಲ್ಲಮಂ ಪರಿ
ದೆಯ್ದಿ ಪುರೋಪವನಮೆಲ್ಲಮಂ ತುಳಿದು ಪಲರ್ ॥
ಬಾಯ್ದೆಱೆದು ಪುಯ್ಯಲಿಡೆ ಕಡು
ಕೆಯ್ದುಕ್ಕೆವಗುದುರೆ ಪೊಟಿಲನಟಿಲಿಸಿತಾಗಳ್ ॥ ೧೦೬ ॥

ಅದು ತಿಗುರಿಯಂದದಿಂ ತಿರಿ
ದುದು ಮುಂದಂ ನೆಗೆದು ಪಿಂದನೀಡಾಡಿ ಬಿಸಿ ॥
ಲ್ಗುದುರೆಯವೋಲ್ ಬಿಜುವರಿವರಿ
ದುದು ಕೆಳರ್ದ ಕೃತಾಂತನಿಂತಿದೆನೆ ಕೃತಕಾಶ್ವಂ ॥ ೧೦೭ ॥

ಕತ್ತರಿಸಿ ಕಿವಿಗಳಂ ನಸು
ಗುತ್ತುತ್ತುಂ ಮೆಯ್ಯ ಖಂಡಮಂ ಘುರುಘುರೆನು ॥
ತ್ತೊತ್ತರಿಸೆ ಘೋಣ ಪವನನು
ದಾತ್ತಂ ಮಸಗಿತ್ತು ವಾಜಿ ಪೆರ್ಮಾರಿಯವೋಲ್ ॥ ೧೦೮ ॥

ಖರ ಖುರ ಹತಿಯಿಂ ಖರಮಂ
ಕರಭಂಗಳನಟ್ಟಿ ಮುಟ್ಟಿ ದಂತಾಹತಿಯಿಂ ॥
ಪರಿದೊರಸಿ ಮನುಷ್ಯರನಾ
ತುರಗಂ ಪುಗಿಸಿತ್ತು ನಿಮಿಷದಿಂ ಯಮಪುರಮಂ ॥ ೧೦೯ ॥

ಇಡೆ ಗುಂಡೆಯ್ದುವು [1]ಪೊಯ್ದೊಡೆ
ಬಡಿಕೊಳ್ಳವು ತುತ್ತೆ ಕಯ್ದುವುರ್ಚವು ಮನದಿಂ ॥
ಕಡುಗಡಿದು ಮಿಥಿಲೆಯಂ ಕೂ
ಗಿಡಿಸಿದುದೆದ್ಭುತ ತುರಂಗಮಂ ಸಿಂಗದವೋಲ್ ॥ ೧೧೦ ॥

1. ಪಾಯ್ದೊಡೆ. ಚ.

ಮ॥ಸ್ರ॥ ಕರೆ,ವ್ರೋಯೆಂಬತ್ತಲಿತ್ತಲ್ ತೊಲಗು ತೊಲಗು ಪೋಗೆಂಬ ಬಾಯೆಂಬ ಬಿದ್ದಂ,
ಬರಿಯೆಂಬೋವೋವೊ ಕೂಕೂಗುಗಿದೆನುಡಿದೆನೇಗೆಯ್ವೆನೆಂಬುಚ್ಚಸೀಚಂ ॥
ಪುರುಷ ಸ್ತ್ರೀ ಬಾಲ ವೃದ್ಧ ಸ್ಥವಿರ ಯುವ ಜನಾತಂಕ ಶಂಕಾತಿರೇಕಂ।
ಪುರದೊಳ್ಪೊಣ್ಮಿತ್ತು ವಿದ್ಯಾಧರ ಕೃತಕ ಹಯಾಟೋಪ ಘೋರ ಪ್ರಲಾಪಂ ॥

ಉ ॥ ಬಾಲಕರಂ ಕೆಲರ್ ಮುದುಪರಂ ಕೆಲರಕ್ಷಿವಿಹೀನರಂ ಕೆಲರ್।
ಬಾಲೆಯರಂ ಕೆಲರ್ಪಿಡಿದು ಚೆಚ್ಚರದಿಂದರರೀ ಪುಟಂಗಳಂ ॥
ಕೀಲಿಸಿ ತಮ್ಮತಮ್ಮ ಮನೆವೊಕ್ಕಿರೆ ತತ್ಪುರಮೆಲ್ಲಮುಲ್ಲಕ।
ಲ್ಲೋಲಮಕಾಲವೃತ್ಯು ಭಯ ವಿಹ್ವಲಮಾದುದು ಸೂಕಳಾಶ್ವದಿಂ ॥೧೧೨॥

ಆ ಸಮಯದೊಳ್—

ಚ ॥ ಕಳಕಳನಾದಮಾದ ತೆಜಿನಂ ಜನಕಂ ತಿಳಿದಾ ಸವಾರಿಗಳ್।
ತಳಿದು ಖಲೀನಮುಂ ತುರಿಪದಿಂ ಬರೆ ಸಂದಿಸಿ ಪಿಂದೆ ರಾಜ ಮುಂ ॥
ಡಳಿ ಬರೆ ಬಂದು ನಿಂದು ಹಯಮುಂ ನಡೆ ನೋಟ್ಪುದುಮಾಕ್ಷಣಾಂಶುಮಂ।
ಡಳಿಸಿದುದಿಂದು ರಶ್ಮಿಯೊಳೆ ತೀರ್ಚಿತೊಡರ್ಚಿದ ಕೀಲ ನೇಣವೋಲ್ ॥೧೧೩॥

ಅಂತು ನೋಡಲೊಡಂ—

ಕಂ ॥ ಸ್ರೂಕಳಮುಲ್ತಿದು ಸಕಲ ಗು
ಣಾಕರಮೆನೆ ಜನಕ ಮುಖ ವಿಲೋಕನದಿಂದು ॥
ದ್ರೇಕಮನುಬ್ಬಿದಿರೆ ವಾಹಕ
ರಾಕುಟಿಲಾಶ್ವಕ್ಕೆ ಖರ ಖಲೀನಮನಿಟ್ಟರ್ ॥೧೧೪॥

ಉ ॥ ಒಟ್ಟಜಿಗೆಟ್ಟು ಕಾರ್ಯವಶದಿಂ ಖಚರಂ ಪಿಡಿಪಟ್ಟು ಪಲ್ಲಣಂ।
ಗಟ್ಟಿಸಿಕೊಂಡುಮೇನೊ ಮುಖಲೀನ ಖಲೀನ ಕಶಾಭಿಘಾತದಿಂ ॥
ತೊಟ್ಟನೆ ನೋವನೆಯ್ದಿದನಿದಾವುದು ಚೋದ್ಯಮೊ ಕೈತವಕ್ಕೆ ಕೈ।
ಗೊಟ್ಟ ಖಳಂಗೆ ತೀವ್ರ ಪರಿವೇದನ ಬಂಧನಮಾಗದಿರ್ಕುಮೇ ॥೧೧೫॥

ಅಂತು ಮಾಯಾಹಯಮುಂ ಮಂದುರಂಬುಗಿಸುವುದುಮಾಸಮಯದೊಳ್—

ಕಂ ॥ ವೃಗನಾಭಿಯನಾನೆಯ ಕೊಂ
ಬುಗಳಂ ಪೆರ್ವಿದಿರ ತೋರಮುತ್ತಂ ಕಣ್ಬೇ ॥
ಲಿಗಳಂ ಮುಂದಿಟ್ಟೊರ್ವಂ
ಪುಗುತಂದಂ ರಾಜಭವನದೊಳಗಂ ಶಬರಂ ॥೧೧೬॥

ಅಂತು ಬಂದು ತನ್ನ ತಂದುಪಾಯನಮುಂ ಕೊಟ್ಟಿಱಿಗಿ ಪೊಡೆವಟ್ಟು ದೇವ! ನಮ್ಮ ಬನದೊಳೊಂದು ಭದ್ರಗಜಮಿರ್ದುದೆಂದು ಬಿನ್ನವಿಸೆ—

ಕಂ ॥ ಜನಕಂ ವನ್ಯ ಗಜಾಲೋ
ಕನ ಕೌತುಕ ಚಿತ್ತನಾದನುಚಿತಮೆ ವಲಮಾ ॥
ವನೊ ಭೂಭುಜಂ ಗಜಪ್ರಿಯ
ನೆನಿಸದನರಸಾನೆಯಿಲ್ಲದೇನೊಪ್ಪುಗುಮೇ ॥ ೧೧೭ ॥

ಅನಂತರಂ—

ಕಂ ॥ ಪರಿಜನಮುಮಾಪ್ತ ಜನಮುಂ
ಪರಿಕಾಱುರುಮೋಜೆವಿಡಿಯುಮೊಡವರೆ ವನ್ಯ ॥
ದ್ವಿರದನ ಬಂಧನ ಕೌತುಕ
ನರಣ್ಯಮಂ ಮುಟ್ಟಿವಂದನಂದು ನರೇಂದ್ರಂ ॥ ೧೧೮ ॥

ಆ ಮಹಾಗಹನ ಸರಲ ಸಲ್ಲಕೀ ಪ್ರದೇಶದೊಳ್—

ಮ ॥ ಮುಗಿಲೊಡ್ಡಂ ಗೆಲಿವಂದ ಕಾಯಭರದಿಂ ಪೊಂಬಟ್ಟನೊಟ್ಟೈಪ ದಿ ।
ಟ್ಟಗಳಂ ಕಾಳಿಗನಾಗನಂ ನಗುವ ಕೈಯಿಂ ಕಾರ ತಂದಲ್ಲೊಲ ॥
ಲ್ಲುಗುವೆಂಟುಂ [1]ಮದವಟ್ಟಿಯಿಂ ಪೆಱೆಯ ಸೌಭಾಗ್ಯಕ್ಕೆ ತೋಡಾದ ಕೋ ।
ಡುಗಳಿಂದೇಂ ಜನಕಂಗೆ ಹರ್ಷಜನಕಂ ತಾನಾಯ್ತೊ ವನ್ಯದ್ವಿಪಂ ॥ ೧೧೯ ॥

ಆಗಳಾ ಗಜದ ಬಟಿಸಂದು [2]ನಡೆವಾನೆ ವಾಹಕರೊಡನೆ ಪ್ರೋಗಲೆಂದು ಪಲ್ಲಣಿಸಿ ಕೆಲದೊಳಿರ್ದ ಕೃತಕ ತುರಂಗಮಂ ತರಿಸಿ—

ಕಂ ॥ ಉಂಗುಟಮನಂಕ[3]ವಣಿಗೆ ಕ
ರಾಂಗುಳಿಯಿಂ ಸ್ಕಂಧ ಸಂಧಿಗುಯ್ದೀಱಿದನು ॥
ತ್ತುಂಗ ತುರಂಗಮಮಂ ನೃಪ
ತುಂಗಂ ಸೂಕಳಮಿದೆಂದು ಸೆಡೆದನೆ ಮನದೊಳ್ ॥ ೧೨೦ ॥

ಅಂತು ಬೆಂಗೆವಂದು ಕೀಟನಳವಡೆ ಪಿಡಿದು ತೊಡೆಯೊ[4]ಳವುಂಕಿ ನೂಂಕು

---

1. ಮದವರ್ಕಿ. ಚ.
2 ದಾನೆಯುಂ ತರಲಾನೆ ವಾಹಕ. ಚ.; ತರಲ್ಕಡೆವಾನೆವಾಂಕ. ಕ. ಖ.
3. ವಣಿ. ಕ.; 4. ಳವುಂಚಿ. ಚ.

ವುದುಂ, ಬಿಸಿಲ್ಗುದುರೆಯಂತೆ ಪೊಳೆದುಚ್ಚೈಶ್ರವದಂತೆ ನಭಕ್ಕೆ ನೆಗೆದ- ರವಿರಥ ವಾಜಿಯಂತೆ ಪವನ ಪಥದೊಳ್ ಪರಿವುದುಂ—

ಕಂ ॥ ತ್ರಿದಶಂ ಮೇಣ್ ಖಚರಂ ಮೇಣ್
ಕುದುರೆಯ ರೂಪಿಂದಮರಸನಂ ಮುನ್ನಿನ ಜ ॥
ನ್ಮದ ಪಗೆವನುಯ್ದನಂತ
ಲ್ಲದೊಡೆ ವಿಯದ್ಗಾಮಿಯಪ್ಪ ಕುದುರೆಗಳೊಳವೇ ॥ ೧೮೧ ॥

ಎಂದು ಸಕಳ ಪರಿಜನಂ ವಿಕಳಮಾಗಿಯುಂ ನೈಮಿತ್ತಿಕನಿಂದರಸನ ಬರವ ನಱಿದುವ್ಯಳಮನುಟ್ಟಿದಿರ್ಪುದುಮಿತ್ತಲ್—

ಕಂ ॥ ಎಡೆಯೆಡೆಯ ಬೆಟ್ಟನೆಡೆಯೆಡೆ
ಯಡವಿಯನೆಡೆಯೆಡೆಯ ನಾಡನೆಡೆಯೆಡೆಯೂರಂ ॥
ಮಿಡಿದನಿತು ಬೇಗದಿಂ ಕಟಿ
ದೊಡರಿಸಿದುದು ನೃಪತಿಗಾಹಯಂ ವಿಸ್ಮಯಮುಂ ॥ ೧೮೨ ॥

ಚ ॥ ತ್ವರಿತದಿನೆಯ್ದೆವಂದು ಪುರಮುಂ ರಥನೂಪುರಚಕ್ರವಾಳಮುಂ ।
ಪುರ ವನ ವೀಥಿಯೊಳ್ ನಡೆಯೆ ವಾಜಿ ವಿಳಂಬಿತದಿಂ ಧರಾಧಿಪಂ ॥
ಧರಣಿಗೆ ಪಾಯ್ದು ಕಯ್ಯ ಕರವಾಳಳಿಮಾಳೆ ಸರೋಜ ಕೋಶದೊಳ್ ।
ಮೊರೆಯದೆ [1]ನೀಳ್ವವೋಲಿರೆ ವಸಂತನನೇಳಿಸಿದಂ ವನಾಂತದೊಳ್ ॥ ೧೮೩ ॥

ಕಂ ॥ ಇಡಿದಡರೆ ಕಾಯ್ತು ಮಾಮರ
ದಡಿಯೊಳ್ ವಿಶ್ರಮಿಸಿ ಪಥ ಪರಿಮ್ಲಾನತೆಯಂ ॥
ಕೆಡಿಸಿ ನರೇಂದ್ರಂ ತನ್ನೊಳ್
ನುಡಿದಂ ಸಂಸೃತಿಯ ಕರ್ಮ ವಿಷಮ ಸ್ಥಿತಿಯಂ ॥ ೧೮೪ ॥

ಅಮೃತಂ ವಿಷಮಕ್ಕುಂ ವ
ಕ್ರಮಾದೊಡಾವಿಷಮುಮಮೃತಮಕ್ಕುಂ ವಿಧಿವ ॥
ಕ್ರಮನುಟ್ಟಿದೊಡಂತೆ ಹಯನೆ
ನ್ನಮನಿಲ್ಲಿಗೆ ತಂದುದಿನ್ನವಘಟಿತವೊಳವೇ ॥ ೧೮೫ ॥

ಆನೆಲದಿಂ ಮಾಯಾ ಹಯ
ವಾನೆಲದತ್ತಿನ್ನನೆಟ್ಟಿದು ತರ್ಪುದುಮಾಕ ॥

---

1. ನೀಂದ.

ಟ್ಟಾನೆಯುಮಾಕುದುರೆಯುಮಾ
ಸೇನೆಯುಮೇನೆನಗೆ ಮಾಡಲಾರ್ತುವೆ ಹಿತಮಂ ॥ ೧೨೬ ॥

ಕಂ ॥ ಸಮನಿಸಿದನಿಷ್ಟ ಸಂಯೋ
ಗಮನಿಷ್ಟವಿಯೋಗಮಂ ಚತುರ್ಗತಿಗಳೊಳಂ ॥
ಭ್ರಮಿಯಿಸಿ ಕೈಕೊಳ್ಗುಂ ತಾ
ನೆ ಮಿಕ್ಕವರ್ ನೆರೆದು ತನಗೆ ನೆರವಾದಪರೇ ॥ ೧೨೭ ॥

ಉದಯಿಸಿದ ಶುಭಾಶುಭ ಕ
ರ್ಮದ ಫಲಮಂ ಸದೃಶಮಾಗೆ ಕಾಣ್ಬುದು ಸಮಚಿ ॥
ತ್ತದೊಳಿರ್ದುದು ತಕ್ಕುದು ತ
ಕ್ಕುದಲ್ತು[1] ತಕ್ಕುಂಗೆ ತಗದ ಹರ್ಷ ವಿಷಾದಂ ॥ ೧೨೮ ॥

ಎಂದು ಉದಾತ್ತಚಿತ್ತನಲ್ಲಿಂ ತಳರ್ದು ವನವಿಳಾಸಮಂ ನೋಡಿ ಮೆಚ್ಚುತ್ತುಂ ನಡೆಯೆ ಮುಂದೆ ಮಾಕಂದ ನಂದನದ ಬಳಸಿನೊಳಮಶೋಕವನದ ಪುದಿವಿನೊಳಂ ನಾಗಚಂಪಕ ವನದ ಸುತ್ತಿನೊಳಮತಿ ರಮಣೀಯಮಾಗಿ—

ಮ ॥ ಪದೆಪಂ ಕಣ್ಗೆ ಮನಕ್ಕೆ ಸಂತಸಮನಿತ್ತೋಂ ಮಾಣ್ಬುದೇ ಮಾಣ್ಬುದಿ ।
ಲ್ಲದು ಬೀಜಂಗೊಂದಮರಾಚಲೇಂದ್ರಮೆನೆ ನಾನಾರತ್ನ ಕೂಟಾಂಶು ಜಾ ॥
ಲದಿನಾಶಾವಧುಗಿತ್ತು ಚಿತ್ರಪಟಮಂ ಜೈತ್ರಾಲಯಂ ಮತ್ತಮಿ ।
ತ್ತುದು ಸಪ್ತಾಶ್ವನ ಸಪ್ತಸಪ್ತಿಗೆ ಸಮಗ್ರ ಪ್ರಗ್ರಹಾಶಂಕೆಯಂ ॥ ೧೨೯ ॥

ಪೃಥ್ವಿ ॥ ಇರುಳ್ ಕುಮುದನೇತ್ರದಿಂ, ಕಮಳನೇತ್ರದಿಂದಂ ಪಗಲ್ ।
ನಿರೀಕ್ಷಿಸುವಪೇಕ್ಷೆಯಿಂ ವಸುಧೆ ತಜ್ಜಿನಾವಾಸಮಂ ॥
ದರಸ್ಮಿತ ಮುಖಂಗಳಂ ಪಲವನಪ್ಪುಕೆಯ್ದಿರ್ಪವೋಲ್ ।
ಸರಸ್ಸಮಿತಿ ಸುತ್ತಿ ಪೊಮ್ಮಗಿಲ ಸುತ್ತಲುಂ ರಂಜಿಕುಂ ॥ ೧೩೦ ॥

ಅಂತತಿಶಯಮಪ್ಪ ಜಿನಭವನಮಂ ಕಂಡು ಬಲಗೊಂಡು—

ಮ ॥ ಅಳಿ ಮಾಳಾ ಮಿಳಿತ ಪ್ರಸೂನ ಸುರಭಿ ದ್ರವ್ಯಂಗಳಿಂದರ್ಚನಾ ।
ಫಳ ಶಾಲ್ಯಕ್ಷತ ಧೂಪ ದೀಪ ಚರು ಸಂದೋಹಂಗಳಿಂ ಸರ್ವಮಂ ॥

---

1. ದಲ್ತೆ. ಕ. ಖ. ಚ.

ಗಳ ಸಂಪೂರ್ಣಮೆನಿಪ್ಪ ಜೈನಗೃಹಮಂ ಪೊಕ್ಕಂ ಜಿನಸ್ತೋತ್ರ ಚಾ ।
ಪಳ ಜಿಹ್ವಾಗ್ರ ಸಮಗ್ರ ನಾಟಕ ನಟಂ ಸಾಹಿತ್ಯವಿದ್ಯಾಧರಂ ॥೧೩೧॥

ಇದು ಪರಮಜಿನಸಮಯ ಕುಮುದಿನೀ ಶರಚ್ಚಂದ್ರ ಬಾಲಚಂದ್ರ
ಮುನೀಂದ್ರ ಚರಣನಖಕಿರಣ ಚಂದ್ರಿಕಾಚಕೋರ ಭಾರತೀ
ಕರ್ಣಪೂರ ಶ್ರೀಮದಭಿನವಪಂಪ ವಿರಚಿತಮಪ್ಪ
ರಾಮಚಂದ್ರ ಚರಿತ ಪುರಾಣದೊಳ್
ಜನಕ ಜಿನಭವನದರ್ಶನ ವರ್ಣನಂ
—ಚತುರ್ಥಾಶ್ವಾಸಂ—

ಪಂಚಮಾಶ್ವಾಸಂ

ಕಂ ॥ ಶ್ರೀ ಜಿನ ಗೃಹಮುಂ ತ್ರಿಭುವನ
ಪೂಜಿತಮುಂ ಪದ್ಮರಾಗ ಮಣಿ ತೋರಣ ವಿ ॥
ಭ್ರಾಜಿತಮುಂ ಪೊಕ್ಕುಂ ಜನ
ತಾ ಜಂಗಮ ಕಲ್ಪವೃಕ್ಷನಭಿನವಪಂಪಂ ॥ ೧ ॥

ಅಂತು ಪೊಕ್ಕು ಪದ ಪಯೋರುಹ ಮರೀಚಿಯಿಂ ಮಧ್ಯರಂಗಮನಳಂಕರಿಸಿ ಮುಕುಳಿತ ಕರಾಂಬುಜಂ ತ್ರಿಭುವನ ಪ್ರಭುಗಭಿಮುಖನಾಗಿ—

ಉ ॥ ಕೇವಲ ಬೋಧದಿಂದಱಿದು ಪಾತ್ರಮಪಾತ್ರಮಿದೆಂಬ ಭೇದಮುಂ ।
ದೇವರ ದೇವ ಸಂಚಕರಮಕ್ಷಯ ಮೋಕ್ಷಸುಖಕ್ಕೆನಲ್ ವಿನೇ ॥
ಯಾವಳಿಗಿತ್ತುದಾತ್ತ ದ್ವಿಜೇಂದ್ರ ನರೇಂದ್ರ ಫಣೀಂದ್ರ ರಾಜ್ಯ ಲ ।
ಕ್ಷ್ಮೀ ವಿಭವಂಗಳಂ ತಳೆದೆ ನೀಂ ಜಸಮುಂ ಜಗದೊಳ್ ಜಿನೇಶ್ವರಾ ॥ ೨ ॥

ಉ ॥ ಇತ್ತಪೆ ನೀನೆ ದೇಹಿಗನುರೂಪಮೆನಲ್ ಸುಖ ಲೇಶಮಾದಿಯಾ ।
ಗತ್ತಲನಂತ ಸೌಖ್ಯಮವಸಾನಮೆನಲ್ ಪೆಱರಾರುವಿಾವರಿ ॥
ಲ್ಲಿತ್ತಪರನ್ಯರೆಂದು ಬಹಿರಂಗ ನಿಮಿತ್ತದಿನೆಂಬರೆನ್ನೆ ದೇ ।
ವೋತ್ತಮ ನೀನೆ ಚಾಗಿವೆಸರಂ ಪಡೆದೈ ಜಗದೊಳ್ ಜಿನೇಶ್ವರಾ ॥ ೩ ॥

ಚ ॥ ಪಗೆಕೆಳೆಯೆಂಬ ಭೇದದಱಿತಂ ತವುಗಿಲ್ಲದೆ ತವ್ಮ ನಂಟರಂ ।
ಪಗೆವರೆ ಗೆತ್ತು ಕೊಂದು ಕಲಿಯಪ್ಪವರಕ್ಕೆವು ಘಾತಿ ಕರ್ಮಮಂ ॥
ಪಗೆವಡೆಯಂ ಪಡಲ್ವಡಿಸಿ ಕೀಱು ಕೃತಾಂತನನಿಕ್ಕಿ ವೀರಲ ।
ಕ್ಷ್ಮಿಗೆ ನೆಲೆಯಾದ ಮೆಯ್ಗಲಿಯೆ ನೀನೆ ವಲಂ ಜಗದೊಳ್ ಜಿನೇಶ್ವರಾ ॥ ೪ ॥

ಚ ॥ ನನೆಗಣೆಯಿಂ ಜಗತ್ತ್ರಯವುನಂಡಲೆದಂಗಭವಂಗೆ ಭಂಗಮಂ ।
ಜನಿಯಿಸಿದೈ ಚರಾಚರರುಮಂ ತವೆ ನುಂಗಿದ ಕಾಲ ದಂದಶೂ ॥
ಕನ ರದಮಂ ಕಱಿಲ್ಚಿ ಕಳೆದೈ ಕಡು ಬಲ್ಲಿದನಪ್ಪ ಮೋಹಮ ।
ಲ್ಲನ ಬಲಗಯ್ಯನಯ್ಯ ಮುರಿದೈ ಕಲಿ ನೀನೆ ವಲಂ ಜಿನೇಶ್ವರಾ ॥ ೫ ॥

ಉ ॥ ನೀಱಿಯರುನ್ನತ ಸ್ತನ ಭರಂಗಳ ಭಾರಮುವುಂಕೆ ಸೋಂಕೆ ನೀ ।
ರೇಱುದರೇಱುದರ್ಪೆಱವು ಪೀಠಮನನ್ಯರೊಳಾಪ್ತರೆಂಬ ಮಾ ॥
ತೇಱಿದು ಭಾರತೀ ಸ್ತನ ಭರಂಗಳ ಭಾರಮವುಂಕೆ ಸೋಂಕೆ ನೀ ।
ರೇಱಿದೆ ಸಿಂಹ ವಿಷ್ಟರಮನೇಱಿದೆ ನೀನೆ ವಲಂ ಜಿನೇಶ್ವರಾ ॥ ೬ ॥

ಚ॥ ಸುಗತಿಗೆ ಭಕ್ತಿ ದುರ್ಗತಿಗೆ ನಿನ್ನ ಪದ ಪ್ರತಿಕೂಲ ವೃತ್ತಿ ಮು।
ಕ್ತಿಗೆ ನಿಜತತ್ವ ಭಾವನೆಯೆ ಕಾರಣಮೆಂದೊಡೆ ನೀನೆ ದೇಹ ಯಾ॥
ತ್ರಿಗೆ ಸುಖ ದುಃಖ ಯೋಜನೆಗೆ ದೇಹಿಗೆ ಮುಖ್ಯನೆ ನಿನ್ನನಂತಜಿಂ।
ಜಗಮನಶೇಷಮಂ ಪಡೆವೆನೆಂಬುದು ಯುಕ್ತಿ ವಲಂ ಜಿನೇಶ್ವರಾ ॥ ೭ ॥

ಕೊಲೆಯ ವಿಕಲ್ಪ ಕೋಟಿಗಳೆ ದುಷ್ಕೃತಮೆಲ್ಲಮಬಾಧೆಯೊಂದೆ ಬಂ।
ಬಲ ಸುಕೃತಂಗಳೆಲ್ಲಮವನಿರ್ಬಗೆಯಾಗಿರೆ ಮಾಡಿ ಮಾನವರ್॥
ಪೊಲೆಗಿಡದಂತು ದುಃಖ ಸುಖ ಹೇತುಗಳಂ ನಿಜ ದಿವ್ಯ ಭಾಷೆಯಿಂ।
ಜಲಕನೆ ತೋಱಿದೈ ಸಕಲ ದೇಹಿಗೆ ನೀನೆ ಶರಣ್ ಜಿನೇಶ್ವರಾ ॥ ೮ ॥

ಮದನ ಪತತ್ರಿ ನಿನ್ನ ದೆಸೆಗಾಣದು ಮೋಹ ಮಹಾಹಿ ನಿನ್ನ ನ।
ಣ್ಮದು ಕಲುಷಾನಲಂ ನಿಜದಯಾರಸದಿಂ ಮಸಿಯಾಯ್ತು ಪಾಪವಿ॥
ಲ್ಲದ ಪಯಣಕ್ಕೆ ನಿನ್ನ ನುಡಿ ಸಂಬಳಮಾಯ್ತೆನೆ ಪೆಣ್ಣ ಮಣ್ಣ ಮೋ।
ಹದ ಪರಮಾತ್ಮರಂತಿರಲಿ ನೀನೆ ಜಗತ್ಸ್ತುತನೈ ಜಿನೇಶ್ವರಾ ॥ ೯ ॥

ಉ॥ ನೋಟದ ತೀಟದಾಲಿಸುವ ಸೇವಿಪ ವಾಸನೆಗೊಳ್ವ ಸೌಖ್ಯಮುಂ।
ಮಾಟದ ಸೌಖ್ಯಮೆಂದು ಪೆಸರ್ಗೊಳ್ಳದೆ ನಿನ್ನೊಳಭೇದಮಾದ ಕೊಂ॥
ಡಾಟದನಂತಸೌಖ್ಯಮನೆ ಮರ್ಚಿದ ಮರ್ಚುಗೆಯೊಳ್ ತೊಡರ್ಚು ಮಾ।
ಜೂಟದಿನೆನ್ನ ದರ್ಶನವಿಶುದ್ಧಿಯೆ ಮೂಲ್ಯಮೆನಲ್ ಜಿನೇಶ್ವರಾ ॥ ೧೦ ॥

ಎಂದು ದರ್ಶನಸ್ತುತಿಗೆಯ್ದು—

ಕಂ॥ ಜಿನ ಮುಖ ದರ್ಶನದಿಂದಂ
ಜನಕಂ ಮುನ್ನಾದ ಖೇದಮಂ ಮಱೆದು ಸುಧಾ॥
ವನನಿಧಿಯೊಳ್ ಮುಳುಗಿದವೋಲ್
ತನುಪುಳಕಿತಮಾಗೆ ಹರ್ಷರಸಮಯನಾದಂ ॥ ೧೧ ॥

ಅನ್ನೆಗಮಿತ್ತಲ್—

ಚ॥ ಕೃತಕ ತುರಂಗಮಾಕೃತಿಯನಂದುಪಸಂಹೃತಿ ಮಾಡಿ ಮುನ್ನಿನಾ।
ಕೃತಿಯೊಳೆ ಪೋಗಿ ಪೊಕ್ಕನುಚರಂ ಖಚರಂ ಖಚರೇಂದ್ರಸದ್ಮಮಂ॥

---

* ೭, ೮, ೯, ೧೦—ಈ ನಾಲ್ಕು ಪದ್ಯಗಳೂ ಗ. ಚ. ಗಳಲ್ಲಿಲ್ಲ; ಇವು ಮಲ್ಲಿನಾಥಪುರಾಣದ ೧೨ ನೆಯಾಶ್ವಾಸದ ಅಂತ್ಯದಲ್ಲಿ ಇವೆ.

ಪತಿಯು ಪದಾರವಿಂದಮನರಿಂದಮನರ್ಚಿಸಿದಂ ಕಿರೀಟ ಕೇ ।
ಲಿತ ಹರಿನೀಲ ರತ್ನ ರುಚಿ ಮುಂಜರಿ ಯೆಂಬ[1]ತಸೀ ಲತಾಂತದಿಂ ॥ ೧೨ ॥

ಅಂತು ಸರ್ವಾಂಗಪ್ರಣತನಾಗಿ—

ಕಂ ॥ ತಂದೆಂ ರಮ್ಯಕ ವನ ಜಿನ
ಮಂದಿರದ ಕೆಲಕ್ಕೆ ಮಿಥಿಳೆಯಿಂ ಜನಕನನೆಂ ॥
ದಿಂದುಗತಿಗನುಚರಂ ಪೋ
ದಂದಮುಮಂ ಬಂದತೆಱನುಮಂ ನೆಱೆ ಪೇೞ್ದಿಂ ॥ ೧೩ ॥

ಆಗಳಾ ವಿಯಚ್ಚರಾಧಿರಾಜನತಿಹರ್ಷಚಿತ್ತನಂಗಚಿತ್ತಮನಿತ್ತು—

ವ॥ ಸ್ರ ॥ ಗಗನಾಂತರ್ಭಾಗದೊಳ್ ಪೂಗೊಳನಲರ್ದವೊಲಿಂಬಾಗೆ ಚಿತ್ರಾತಪತ್ರಂ।
ಪಗಲಂ ಭೂಷಾಂಶು ಜಾಲಂ ದ್ವಿಗುಣಿಸೆ ಮುಗಿಲಂ ಮುಟ್ಟಿ ನಾನಾಧ್ವಜಂ
ಗಳ್ ॥
ಭಗವಜ್ಜೈನಾಂಘ್ರಿ ಪೂಜಾ ಪರಿಕರ ಸಹಿತಂ ಮಂಗಳಾತೋದ್ಯ ನಾದ ।
ಸ್ಥಗಿತಾಶಾ ಖಂಡನಾಖಂಡಲ ವಿಭವದಿನೇೞ್ತಿಂದನಾ ಖೇಚರೇಂದ್ರಂ ॥ ೧೪ ॥

ಆಸಮಯದೊಳ್—

ಕಂ ॥ ಇದು ಖಚರ ಲೋಕವಿಾ ಬ
ರ್ಪುದೆ ಖೇಚರ ನಿಚಯಮೆಂದು ಮನದೊಳ್ ಜನಕಂ ॥
ಪದೆದೀಕ್ಷಿಸುವನ್ನೆಗಮದು
ಪುದಿದುದು ಮಣಿ ಮಕುಟ ಕಿರಣದಿಂದಾಬನಮಂ ॥ ೧೫ ॥

ಅಂತು ಗಗನ ತಳದಿನವನೀ ತಳಕ್ಕವತರಿಸಿದಿಂದುಗತಿ ಮಂದಗತಿಯಿಂ ಜಿನ ಮಂದಿರಮಂ ಬಲಗೊಂಡೊಳಗಂ ಪೊಕ್ಕು ದರ್ಶನ ಸ್ತುತಿಗೆಯ್ದನೇಕಾರ್ಚನೆಗಳಿನರ್ಚಿಸಿ—

ಕಂ ॥ ಆ ಗಗನ ಚರ ಪ್ರವರಂ
ಸ್ವಾಗತ ಸಂಭಾಷಣಂಗಳಿಂ ಜನಕನನ ॥
ಭ್ಯಾಗತನಂ ಮನ್ನಿಸಿದಂ
ಶ್ರೀಗೆಂತುಂ ವಿನಯಮೊಂದೆ ಭೂಷಣಮಲ್ತೇ ॥ ೧೬ ॥

---

1. ಸಿತಾಲತಾಂತದಿಂ. ಕ. ಖ. ; ಲತಾಂತಮಾಲೆಯಂ. ಗ. ಘ.

ಅಂತು ಮನ್ನಿಸಿ---

ಚ ॥ ಅಲರ್ದ ಮುಖಾಬ್ಜಮಂದರಿಪೆ ಚಿತ್ತದ ಪತ್ತುಗೆಯಂ ಕಡಂಗಿ ಕ ।
ಣ್ಮಲರನುರಾಗಮಂ ಕೆದಱಿ ನೋಡಿ ನರೇಂದ್ರ ಮುಖಾರವಿಂದಮಂ ॥
ಜಲಜಲಿಸುತ್ತುಮಿರ್ಪ ದಶನಾಂಶು ಪೊದಟ್ಟಿ ತಟದ್ವಿಳಾಸಮಂ ।
ಗೆಲೆ ನುಡಿದಂ ಘನ ಧ್ವನಿ ಘನಧ್ವನಿಯಂ ಮಿಗೆ ಖೇಚರಾಧಿಪಂ ॥ ೧೭ ॥

ಕಂ ॥ ಎನ್ನ ತನಯಂಗೆ ತಕ್ಕಳ್
ನಿನ್ನ ತನೂಜಾತೆ ರೂಪವತಿ ಸೀತೆ ಗಡಾ ॥
ಕನ್ನೆಯನೆನ್ನ ಮಗಂಗಿ
ತ್ತೆನ್ನೊಡನೊಡರಿಸು ಧರಾಧಿಪತಿ ಕೊಳ್ಕೊಡೆಯಂ ॥ ೧೮ ॥

ಎನೆ ಜನಕನಿಂತೆಂದಂ—

ಕಂ ॥ ನಿನ್ನ ತನಯಂಗೆ ನಮಿವಂ
ಶೋನ್ನತ ಕುಡಲಪ್ಪುದಾದೊಡಂ ಕನ್ನೆಯನಾಂ ॥
ಮುನ್ನಮೆ ರಾಮಂಗಿತ್ತೆನ
ದನ್ನಿಲೆ ನುಡಿಯದೊಡೆ ಮೆಚ್ಚಲಱಿಗುಮೆ ಲೋಕಂ ॥ ೧೯ ॥

ಎನೆ ಸನ್ಮತಿವೆಸರ ವಿದ್ಯಾಧರನಿಂತೆಂದಂ—

ಕಂ ॥ ದೊರೆಕೊಂಡ ನಿಧಿಯನೊಲ್ಲದೆ
ಜರಗಂ ಕರ್ಚುವುದೆ ತನ್ನ ತನಯಂಗೆ ವಿಯ ॥
ಚ್ಚರ ರಾಜನೆರೆದೊಡೀಯದೆ
ದೊರೆಯಲ್ಲದ ಮಾನವಂಗೆ ಕುಡುವುದೆ ಕೂಸಂ ॥ ೨೦ ॥

ಆರಾದೊಡಮೆರೆವರ್ಕ
ನ್ಯಾರತ್ನಮನೆರೆದೊಡೀಯೆಮೆಂಬರೆ ಕುಡುವಂ ॥
ತಾರಾಮನೊಳೇ[1] ಗಂಡ್ಯೆ
ಪೌರುಷಮಂ ತಕ್ಕುದಱಿದು ನೆಗಟಲ್ವೇಡಾ ॥ ೨೧ ॥

ಎನೆ ಜನಕಂ ಮುನಿಸಂ ಮನಕ್ಕೆ ತಾರದೆ ರಾಮನ ಭುಜ ಪ್ರತಾಪಮಿಲ್ಲದಂದುತ
ರಂಗತಮನೆಂಬ ಶಬರ ನಾಯಕನಿಂ ವಿನೀತಾಖಂಡಮನಿತುಂ ಮ್ಲೇಚ್ಛ ದೇಶಮಕ್ಕು

---

1. ಳೇ ಕಂಡ್ಯೆ. ಫ

ಮುಂತಾಗದಂತೆಮ್ಮುಮನೆಮ್ಮಭಿಮಾನಮುಮುಂ ಕಾದೊಡೆಮ್ಮ ಮಗಳಂ ಕನ್ಯಾ ರತ್ನಮುಂ ಸೀತೆಯನಿತ್ತೆನೆನೆ ಮತ್ತೊರ್ವಖಚರನಿಂತೆಂದಂ;

ಕಂ ॥ ಎರಲೆಯುಮುಂ ಬೇಡನುಮುಂ
ಧುರದೊಳ್ ಬೆಂಕೊಂಡನೆಂದದಂ ಸಾಹಸಮಾ ॥
ಗಿರೆ ಪೊಗಟ್ಟೆ ಸಕಳ ವಿದ್ಯಾ
ಧರ ವಲ್ಲಭ ಸಭೆಯೊಳಿದು ಪೊಗಟ್ಟೆಗೆ ಪೊಲನೇ ॥ ೨೨ ॥

ಗಗನಾಂಗಣದೊಳ್ ನಡೆವರ್
ಬಗೆದೆಡೆ[1]ಗೇಂಬಾಟ್ಟೆಯಾದುದಾವೊಡಮೆಗಳಂ ॥
ಬಗೆದಾಗಡೆ ಕುಡುಗುಂ ವಿ
ದ್ಯೆಗಳೆನೆ ಖೇಚರರ ಮಹಿಮೆ ಭೂಚರರ್ಗುಂಟೇ ॥ ೨೩ ॥

ಎನೆ ಜನಕಂ ಮುನಿದು—

ಚ ॥ ಪುರು ಜಿನನಾದಿಯಾಗೆ ಜಿನಪುಂಗವರುಂ ಭರತೇಶನಾದಿಯಾ ।
ಗಿರೆ ಸಕಲಾರ್ಧ ಚಕ್ರಿಗಳುಮೇಂ ಗಳ ಭೂಚರರಲ್ಲದಾರೊ ಖೇ ॥
ಚರರದನೇಕೆ ನೀ[2]ನಱಿಯೆ ಪಾಱಿದೊಡೇಂ ಫಲಮುಂಟೆ ಪಕ್ಕಿಯಂ ।
ತಿರೆ ಪುರುಷಾರ್ಥಮಲ್ತು ಪರ ನಿಂದೆಯುಮಾತ್ಮ ಗುಣ ಪ್ರಶಂಸೆಯುಂ ॥೨೪॥

ನಿಮಗವರೇತಱಿಂದುಱುದರೆಂದಿಟ್ಟಿಕೆಯ್ವಿರೊ ವಂಶ ವೀರ್ಯದಿಂ ।
ಸಮನವರ್ಗಾರುಮಿಲ್ಲವರಶೇಷ ಕಲಾ ಕುಶಲರ್ ಪ್ರಚಂಡ ವಿ ॥
ಕ್ರಮರವರೀ ತ್ರಿಖಂಡ ಭರತೋರ್ವರೆಯಂ ಭುಜ ದಂಡದಿಂಹಮಾ ।
ಕ್ರಮಿಸುವ ಗಂಡಗರ್ವದ ಬಲಾಚ್ಯತರಲ್ಲರೆ ರಾಮ ಲಕ್ಷ್ಮಣರ್ ॥ ೨೫ ॥

ಎಂಬುದುಮಿಂದುಗತಿ ವಿಯಚ್ಚರೇಂದ್ರನಾನುಡಿಗೆ ಕನಲ್ದು—

ಮ ॥ ದೆಸೆಬಿದ್ದಂ ಬಲಗರ್ವಮಂ ಪೊಗಟ್ಟಿ ವಜ್ರಾವರ್ತಮುಂ ರಾಮನೇ ।
ಱಿಸೆ ವೈದೇಹಿಯನೀವುದಾಱಿದೊಡೆ ಮತ್ಪುತ್ರಂ ಪ್ರಭಾಮಂಡಲಂ ॥
ಗೆ ಸರೋಜಾಕ್ಷಿಯನೀವುದೀ ನುಡಿಯನೇಗೊಳ್ಳೆಂಬುದುಂ ರಾಮ ಸಾ ।
ಹಸಮಂ ಬಲ್ಲುದಱಿಂದಮಾನುಡಿಯನೇಗೊಂಡಂ ಮಹೀವಲ್ಲಭಂ ॥ ೨೬ ॥

---

1. ಗಂ ಬಾಳ್ಕೆಯಾದೊಡಾವೊಡಮೆಂ. ಚ
2 ನಱಿಯಮ. ಗ. ಘ ಚ.

ಅನಂತರಂ ಜನಕನಂ ವಿಚಿತ್ರ ವಸ್ತ್ರಾದಿಗಳಿನರ್ಚಿಸಿ ವಿದ್ಯಾಧರ ಕುಲಕ್ಕೆ ಮೊದಲಿಗರಪ್ಪ ನಮಿ ವಿನಮಿಗಳ್ಗೆ ನಾಗರಾಜನಿತ್ತ ನಾಗ [1]ವಿದ್ಯಾಧಿಷ್ಠಿತಂಗಳಪ್ಪ ವಜ್ರಾವರ್ತ ಸಾಗರಾವರ್ತಂಗಳೆಂಬ ಬಿಲ್ಗಳಂ ಹಲಾಯುಧ ಗದಾಯುಧ ಸಮನ್ವಿತಂಗಳಂ ತರಿಸಿ ಕೊಟ್ಟವರ್ಕೆ ಚಂದ್ರವರ್ಧನನೆಂಬ ಮಹತ್ತರನಂ ಕಾಪುವೇಟ್ದು ಕಟ್ಟಿಪುವುದುಂ ವಿಯಚ್ಚರ ಬಲಂಬೆರಸವರಿರ್ವರುಂ ಮಣಿಮಯ ವಿಮಾನಂಗಳನೇಱಿ ಪವನ ಪಥದೊಳ್ ಮನಃಪವನವೇಗದಿಂ ಮಿಥಿಳೆಗೆ ಬರುತ್ತಿರ್ಪುದುಂ—

ಚ॥ ಗಗನದೊಳೊಡ್ಡುಗಟ್ಟಿ ಬೆಳಗಾ ಬರುತಿರ್ಪುದದಲ್ತು ರೋಹಣಾ ।
ದ್ರಿಗಳಿಟ್ಟಿತರ್ಪುವಲ್ಲವು ನವಗ್ರಹ ಮಂಡಲಮಲ್ತು ಕಲ್ಪ ವಾ॥
ಸಿಗರ ವಿಮಾನಮಲ್ತು ಜನಕಂ ಬರುತಿರ್ದಪನೆಂದು ಕಣ್ಬೊಲಂ ।
ಬುಗೆ ನಲಿದತ್ತು ದಿಟ್ಟವೆಳಗಿಂ ಗುಡಿಗಟ್ಟಿ ಪುರಾಂಗನಾಜನಂ ॥ ೨೭ ॥

ಉ॥ ಎಲ್ಲಿಗೆ ಪೋದನೆಮ್ಮರಸನಿನ್ನೆಮಗಾರ್ ಶರಣೆಂಬ ಭೇದಮಂ ।
ತಲ್ಲಳಮಂ ಮೊದಲ್ಗಿಡಿಸಲಾ ಬರುತಿರ್ದನೆ ನಮ್ಮ ಸೈಪಿನಿಂ॥
ದಿಲ್ಲಿಗೆ ಭೂಪನೆಂದು ನಡೆ ನೋಟ್ಪಿಡೆಯೊಳ್ ನಿಜ ಲೋಚನ ಪ್ರಭಾ ।
ಪಲ್ಲವದಿಂ ವಿಪಲ್ಲವಮನಿತ್ತುದು ಚಂದ್ರಿಕೆಗಂಗನಾಜನಂ ॥ ೨೮ ॥

ಅಂತು ಜನಕಂ ಮಿಥಿಲೆಯಂ ಪೊಕ್ಕು ಚಂದ್ರವರ್ಧನಾದಿಗಳನುಚಿತ ಪ್ರತಿಪತ್ತಿಯಿಂ ಮನ್ನಿಸಿ ಬೀಡಿಂಗೆ ಬೆಸಸೆ ಪುರದ ಬಹಿರ್ಭಾಗದ ರಮ್ಯಪ್ರದೇಶದೊಳ್—

ಮ॥ ನೆಲೆಮಾಡಂಗಳನೇಕಮಾಗೆ ನೆಲೆವೀಡಂ ವಿದ್ಯೆಯಿಂ ಮಾಡಿ ಮೆ ।
ಯ್ಗಲಿ ತಳ್ವಿಲ್ಲದೆ ಚಂದ್ರವರ್ಧನವನ[2]ಭೀಷ್ಮಾವಲ್ಲರೀ ವರ್ಧನಂ॥
ಬಲ ನಾರಾಯಣ ಬಾಹು ದಂಡದಳವಂ ನೋಡಲ್ ಗದಾದಂಡದಿಂ ।
ಹಲದಿಂ ಕೂಡಿದ ಚಾಪ ದಂಡ ಯುಗಮಂ ಬೈತಲ್ಲಿ ಕಾದಿರ್ಪುದುಂ ॥೨೯॥

ಅನ್ನೆಗಮಿತ್ತಲ್—

ಕಂ॥ ಪ್ರಿಯ ಸಂಭಾಷಣ ಸಹಿತಂ
ಬಯಸಿದುದಂ ಪರಿಜನಕ್ಕೆ ಸಾಲ್ವಿನಮಿತ್ತ ॥
ಪ್ರಿಯಮಂ ಪುಟ್ಟಿಸಿದಂ ಸುರ
ಭಿಯೊಳೇನೌದಾರ್ಯ ನಿಧಿಯೊ ಜನಕ ನರೇಂದ್ರಂ ॥ ೩೦ ॥

ಅನಂತರಂ ಮಜ್ಜನ ಭೋಜನಾದಿ ದಿವಸ ವ್ಯಾಪಾರಮಂ ತೀರ್ಚಿ ಸೆಜ್ಜೆವನೆ

---

1. ವಿದ್ಯಾನೇಷ್ಟಿತಂ ಚ. 2. ಭೀಷ್ಮಾ . ಕ. ಖ. ಚ.

ಯೊ[1]ಳುಪಧಾನವಿರಾಜಮಾನ ಹಂಸ ತೂಲ ತಲ್ಪದೊಳ್ ವಿಶ್ರಮಿಸಿ ನಿಜಮನೋ
ವಲ್ಲಭೆಗೆ ತನ್ನ ಪೋದ ಬಂದ ವೃತ್ತಾಂತಮಂ ನೆಱೆಯೆ ಪೇೞೆ ಘನ ನಿನದಮಂ
ಕೇಳ್ದ ಹಂಸವನಿತೆಯಂತೆ ವಿಕಳೆಯಾಗಿ—

ಉ ॥ ನೋಡಿರೆ ಪುಟ್ಟದಾಗಳೆ ಖಳಂ ಶಿಶುವಂ ಪಿಡಿದುಯ್ದೊಡೀಕೆಯಂ ।
ನೋಡಿ ತನೂಜನಂ ಮಱೆದೆನೀಕೆಯುಮಂ ಗಡ ಬಿಲ್ಗಳಂ ನೆವಂ ॥
ಮಾಡಿ ವಿಯಚ್ಚರಾನುಚರರುಯ್ದುಪರೆಂದು ವಿದೇಹಿ ಮೆಯ್ಯನೀ ।
ಡಾಡಿ ಕಪೋಲಮುಂ ತೊಳೆದಳುಣ್ಮೆದ ಲೋಚನ ವಾರಿಧಾರೆಯಿಂ ॥ ೩೧ ॥

ಅಂತು ವಿಕಳೆಯಪ್ಪುದುಂ—

ಉ ॥ ಅಂಬುಜ ನೇತ್ರೆ ನಿನ್ನ ಮನದುಮ್ಮಳಮಂ ಬಿಡು ತನ್ನ ತೋಳ್ಗೆ ಪಾ ।
ಱುಂಬಳೆ ಭೂರಿ ಭೂವಳಯಮೆಂಬಳವಂ ತಳೆದಿರ್ದನನಂತ ವೀ ॥
ರ್ಯಂ ಬಲಭದ್ರನೇಱಿಸುಗುಮಂಕದಬಿಲ್ಲನಳುರ್ಕೆಗೆಟ್ಟು ಬಿ ।
ಲ್ಲುಂಬೆಱಗಾಗಿ ಪತ್ತುವಿಡೆ ಕನ್ನೆಯ ಲೋಭಮನನ್ಯರಾಜಕಂ ॥ ೩೨ ॥

ಮ ॥ ಸ್ರ ॥ ಋಣವಿಲ್ಲೀಬಿಲ್ಗೆ ವಿದ್ಯಾಧರರರ್ಗಿವು ಋಣಸಂಬಂಧದಿಂ ರಾಮನಂ ಲ ।
ಕ್ಷ್ಮಣನಂ ಪೊರ್ದಲ್ಕೆ ವೇಡಿರ್ದುವು ನೆವದೊಳೆ ಕೈ ಸಾರ್ದುವೀಬಿಲ್ಗಳಿಂ ಧಾ ॥
ರಿಣಿಯಂ ಬಾಯ್ಗೇಳಿಸಲ್ ಕಾರಣಪುರುಷರಿವರ್ ಪುಟ್ಟಿದರ್ ಪಕ್ಷ್ಮವಿ ಕ್ಷ್ಮೇ ।
ಪಣಮಾತ್ರಂ ಕಾರ್ಮುಕಾರೋಪಣಮವರ್ಗದಱಿಂದೇಕೆ ಶೋಕಾತಿರೇಕಂ ॥

ಎಂದು ಸತಿಯ ಶಂಕೆಯಂ ಕಳೆದು ಗೃಹ ಮಹತ್ತರಂಗೆ ಬೆಸಸುವುದುಂ—

ಕಂ ॥ ಬಹಿರುದ್ಯಾನದ ಕೆಲದೊಳ್
ಬಹು ರತ್ನ ಸುವರ್ಣಮಯಮೆನಲ್ ನಯನ ಸುಖಾ ॥
ವಹಮಂ ಮಾಡಿಸಿದಂ ಗೃಹ
ಮಹತ್ತರಂ ನಿಮಿಷದಿಂ ಸ್ವಯಂವರ ಗೃಹಮಂ ॥ ೩೪ ॥

ಆ ಸ್ವಯಂವರ ಭೂಮಿ ಪೂರ್ವಾ ಪರಾಯತ ಚತುರಶ್ರಮೆನಿಸಿ ಪೊಳೆವ ಪೊ
ಮ್ಮಗಿಲ ಬಳಸಿನೊಳಂ, ದಕ್ಷಿಣೋತ್ತರ ಮುಖಂಗಳಾಗಿ ತೋರ್ಕೆವೆತ್ತ ಕರ್ಕೇತನದ
ನೆಲೆಮಾಡಂಗಳೊಳಮವಱಿ ಮುಂದಣಿಂದುಕಾಂತದ ಬಯಲ ಮಂಡಪಂಗಳೊಳಂ,
ಅವಱಿರ್ಕೆಲದ ಕರ್ಕೇತನದ ಚೌಪಳಿಗೆಗಳೊಳಂ, ಅವಂ ಸುತ್ತಿ ಮುತ್ತಿದ ಮಾಣಿಕದ

---

1. ಳ್ದಿತಾನೋಪಧಾನಾದಿ. ಗ. ಘ.

ಮತ್ತವಾರಣಂಗಳೊಳಮಲ್ಲಿಂ ಪೊಱಗೆ ಶೋಣ ಮಣಿ ಕಳಶ ಕರ ಕಿಸಲಯಂಗಳಾ
ನಭಶ್ರೀಯ ನಾಲಿಂಗಿಸುವ ಬಾಗಿಲ್ವಾಡಂಗಳೊಳಮವಱ ಮುಂದೆ ಸಂದಣಿಸಿದ
ಮರಕತ ಮಕರ ತೋರಣಂಗಳೊಳತಿ ರಮಣೀಯವಾಗಿ—

ಮ ॥ ದಿವಿಜೋರ್ವೀರುಹಮಿತ್ತ ದೇವರ ಮನೋವ್ಯಾಪರದಿಂದಾದ ದೇ।
ವ ವಿಮಾನಂಗಳಿವೆಂಬ ಭೇದದೊಳೆ ಭೇದಂ ಮಾಟ ಕೂಟಂಗಳಿಂ॥
ನವರತ್ನೋಪಲ ಕರ್ಮದಿಂ ಮಣಿವಿತಾನಶ್ರೇಣಿಯಿಂ ಭೇದಮೆಂ।
ಬವರಾರೆಂಬಿನೆಗಂ ಸ್ವಯಂವರಗೃಹಂ ಕಣ್ಗೇಂ ಬೆಡಂಗಾದುದೋ ॥ ೩೫ ॥

ಆ ಸ್ವಯಂವರವಿಹಾರಕ್ಕೆ ಜನಕಂ ಪ್ರಧಾನ ಪುರುಷ ಪುರಸ್ಸರಂ—

ಕಂ ॥ ಪುರುವಂಶದ ಕುರುವಂಶದ
ಹರಿವಂಶದ ನಾಥವಂಶ ದುಗ್ರಾನ್ವಯದು ॥
ರ್ವರೆಯೊಡೆಯರಾದಿಯಾಗಿರೆ
ನರನಾಥ ಸುತರ್ಕಳೆನಿಬರಾನುಂ ಬಂದರ್ ॥ ೩೬ ॥

ನಾನಾ ವಾಹನಮುಂ ನಾ
ನಾನಕಮುಂ ವಂಶ ವಿಧೃತ ನಾನಾ ಧ್ವಜ ಸಂ ॥
ತಾನಮುವೆಸೆದಿರೆ ಬಂದರ್
ನಾನಾ ದೇಶಾಧಿನಾಥ ನಂದನರನಿಬರ್ ॥ ೩೭ ॥

ಆ ಸಮಯದೊಳ್ ದಶರಥಂ ರಾಮ ಲಕ್ಷ್ಮಣ ಭರತ ಶತ್ರುಘ್ನರ್ವೆರಸು ಬಂ
ದೊಂದು ಪಳಿಕಿನ ಚೌಪಳಿಗೆಯೊಳ್ ರತ್ನಮುದ್ರಿಕೆಯ ಮಧ್ಯ ನಾಯಕ ರತ್ನದಂತಿ
ರ್ಪುದುಂ—

ಚ ॥ ಶರನಿಧಿ ರತ್ನರಾಶಿಗಳಿನುರ್ವರೆ ರೋಹಣ ಪರ್ವತಂಗಳಿಂ।
ಸುರಗಿರಿ ಸಾನು ಕಲ್ಪಕುಜದಿಂ ಗಗನಸ್ಥಳಿ ತಟ್ಟಿ ತಾರಕಾ ॥
ಪರಿಕರದಿಂ ಸರೋಜಿನಿ ಮರಾಳದಿನೊಪ್ಪುವ ಮಾಟ್ಕೆಯಿಂ ಸ್ವಯಂ।
ವರ ಗೃಹಮೊಪ್ಪಮಂ ತಳೆದುದೊಪ್ಪುವ ರಾಜ ತನೂಜ ರಾಜಿಯಿಂ ॥ ೩೮ ॥

ಅನ್ನೆಗಮಿತ್ತಲ್—

ಚ ॥ ಮಳಯಜ ಮಿಶ್ರ ತೀರ್ಥ ಜಲ ಧಾರೆಗಳಿಂ ಶಶಿ ಕಾಂತ ಕಾಂತಮಂ।
ಗಳ ಕಲಶಾಂಶು ಧಾರೆಗಳಿನಿರ್ಮಡಿಸಿತ್ತು ವಿವಾಹ ಮುಖ್ಯ ಮಂ ॥

ಗಳ ಸವನಂ ವಿಳಾಸವತಿ ಸೀತೆಗೆ ದಿಕ್ತಟಮುಂ ಪಳಂಚಿ ಮುಂ।
ಗಳ ಪಟಹ ಸ್ವನಂ ಪುದಿಯೆ ಮುಂಗಳ ಗಾಯಕ ಗೀತ ನಿಸ್ವನಂ ॥ ೩೯ ॥

ಕಂ ॥ ಹಿಮ ಕಿರಣ ಮೂಲೆ ಮುಸುಕಿದ
ಕುಮುದಿನಿಯ ಬಿಡಂಗು ತನಗೆ ಪುದುವೆನೆ ಮೃಗನೇ ॥
ತ್ರೈ ಮನಂಗೊಂಡಳ್ ಮಲಯಜ
ಹಿಮ ಕರ್ದಮ ಕಲಿಲ ಸಲಿಲ ಸವನೋತ್ಸವದೊಳ್ ॥ ೪೦ ॥

ಆ ಮಂಗಲಸವನ ಸಮಯಾನಂತರಂ ಜಾನಕಿ ನೀರಾಜನ ವಿರಾಜಮಾನೆ ಧಾರಾನಿಳಯ ಜಲಯಂತ್ರ ಪುತ್ರಿಕೆಯಂತೆ ನಯನ ಪುತ್ರಿಕೆಗೆ ಮಣಿಭೂಷಣಮೆನಿಸಿ ಪಳಿಕಿನ ಪಟ್ಟವಣೆ ಕೇಸಡಿಯ ಕೆಂಪಿನಿಂದರುಣಮಣಿಯನೊಟ್ಟಿ ಸೆ ಮೆಟ್ಟ ನಿಲ್ವ ದುಮಾ ನಿತಂಬಿನಿಯ ನಿತಂಬ ಸೂತ್ರದೊಳ್ ತೊಡರ್ಚಿದ ತೋರಮುತ್ತುಗಳಂತೆ ಯುಂ, ಆ ವೃತ್ತಕುಚೆಯ ಕುಚಕಳಶದೊಳೊಸರ್ವ ಲಾವಣ್ಯರಸ ಬಿಂದುಗಳಂತೆ ಯುಂ, ಆ ಕನಕ ಕೇತಕೀ ದಳನಖೆಯ ನಖಮುಖದೊಳುಣ್ಮುವ ಮಯೂಖ ಮಂಜರಿ ಯಂತೆಯುಂ, ಆ ಪಲ್ಲವಾಧರೆಯಧರಪಲ್ಲವದೊಳ್ ಪೊಳೆವ ದರಹಾಸ ಕಳಿಕೆಯಂತೆ ಯುಂ, ಆ ಚಳಾಳಕೆಯಳಕವಲ್ಲರಿಯೊಳ್ ಬೆಳರ್ತ ಬಿರಿಮುಗುಳಂತೆಯುಂ, ಓರೊಂದೆ ಜಲಬಿಂದು ಬಿಡುತಪ್ಪುದುಂ—

ಕಂ ॥ ಆ ರಮಣಿಯ ತನುಲತೆಯಿಂ
ವಾರಿಕಣ ಪ್ರಚಯಮಂ ದುಕೂಲಾಂಚಲದಿಂ ॥
ವಾರಾಂಗನೆಯರ್ ತೊಡೆದರ್
ನೀರಂಜಿಸುವಂತೆ ಮಣಿಶಲಾಕೆಯನಾಗಳ್ ॥ ೪೧ ॥

ಮ ॥ ನಗೆಗಣ್ಸೂಸೆ ವಿಳಾಸಮಂ ನಗೆಮೊಗಂ ಲಾವಣ್ಯಮಂ ಬೀಱಿ ಸಾ।
ವಗಿಸುತ್ತುಂ ಕಚಬಂಧಮಂ ಶಿಥಿಲ ನೀವೀಬಂಧಮಂ ಕಾಂಚಿಯೊಳ್ ॥
ತೆಗೆಯುತ್ತುಂ ಸ್ಮರಮಂತ್ರ ದೇವತೆಯವೋಲ್ ಬಾಹಾ ಲತಾಂದೋಳನಂ।
ಬಗೆಯಂ ಬಲ್ಸೆಜಿಗೆಯ್ಯೆ ಬಾಲೆ ಮೆಱೆದಳ್ ಲೀಲಾ ಪದನ್ಯಾಸಮಂ॥೪೨

ಅಂತು ಬಂದು ಜೆಂಬೊನ್ನ ಕನ್ನೆಮಾಡದ ಮೊಗಸಾಲೆಯೊಳಕ್ಕಿದ ಮುತ್ತಿನ ಬಿತ್ತರಿಕೆಯೊಳ್ಕುಳ್ಳಿರ್ಪುದುಂ ಮೇಳದಂಗನೆಯರ್ ಮಂಗಳ ಪಸದನಂಗೊಳಿಸಲ ವಸರಂಬಡೆದು ವಿಚಿತ್ರ ಚೀನಾಂಬರಮಂ ನಿಱಿವಿಡಿದುಡಿಸಿ, ಕೆಂದಾವರೆಯನೆಳವಿಸಿ ಲೆಳಸಿದಂದಮಾಗೆ ಲಾಕ್ಷಾರಸದಿನಡಿಯೂಡಿಯುಂ, ಚರಣನಖ ಚಂದ್ರ ಮಾಲೆಗೆ ನಕ್ಷತ್ರಮಾಲೆಯನೋಲಗಿಸುವಂತೆ ಮುಕ್ತಾಫಲ ನೂಪುರಮಂ ತುಡಿಸಿಯುಂ, ಪುಳಿನ ವಳಯಮುಂ ಪೊಂದಾವರೆಯ ಬಳ್ಳಿ ಬಳಸಿದಂತೆ ನಿತಂಬ ವಳಯದೊಳ್ ಮಣಿ

ಮೇಖಲೆಯಂ ತೊಡರ್ಚಿಯುಂ, ಮದನ ಮದ ರದನಿ ರದನದೊಳ್ ಕೀರ್ತಿಮುಖಮಂ ಕೀಲಿಸುವಂತೆ ಶತಪತ್ರ ಭಂಗಮಂ ತುಂಗಸ್ತನಾಭೋಗದೊಳ್ ಸಂಗಳಿಸಿಯುಂ, ಪೀವರ ಪಯೋಧರ ಮಂಡಳಕ್ಕೆ ಪರಿವೇಷಮಂ ಪಡೆವಂತೆ ಪಂಚರತ್ನದ ಬಣ್ಣಸರಮಂ ಕೊರಲೊಳಿಕ್ಕಿಯುಂ, ಬಾಹುಲತೆಯ ಬಿಟಲಂತೆ ರತ್ನಕಾಂತಿ ಕವಲ್ವರಿವಿನಮುಂ ಗದಮ್ ನಳವಡಿಸಿಯುಂ, ಸಿರಿಸದ ಬಾಸಿಗಮಂ ಭೃಂಗಮಾಲೆ ಬಳಸುವಂತೆ ನಳತೋಳೊಳ್ ಪಚ್ಚೆಯ ಪಿಂಡುಗಂಕಣಮನೇಱಿಸಿಯುಂ, ನನೆಗಣೆಗೆ ಗಱಿಗಟ್ಟುವಂತಂಗುಲಿಯೊಳ್ ರತ್ನಮುದ್ರಿಕೆಯಂ ಮುದ್ರಿಸಿಯುಂ, ಸ್ಮರ ವಶೀಕರಣ ಯಂತ್ರಮಂ ಬರೆವಂತೆ ಕಪೋಲ ತಳದೊಳ್ ಮಕರಿಕಾ ಪತ್ರಮಂಬರೆದುಂ, ಪೊಸಮಸೆಯ ಪೂಗಣೆಗೆ ಪೊಗರಂ ಪಡೆವಂತೆ ನಗೆಗಣ್ಗ ಕೊಳಂಜನಮನಞ್ಜೆಗೆಯ್ವುಂ, ಕರ್ಣಾಂತ ವಿಶ್ರಾಂತ ವಿಲೋಚನದೊಳ್ ಪಡಿಯಿಟ್ಟು ನೋಟ್ಪಿಂತೆ ಕವಿಯೊಳವತಂಸೋತ್ಪಲಮುಂ ತೊಡರ್ಚಿಯುಂ—

ಚ ॥ ಸ್ವರ್ಗಳ ಕಾಂತಿಯಿಂದಳಕವಲ್ಲಿಗೆ ನೀರ್ದಳಿವಂತೆ ಮೆಲ್ಲಮೆ ।
ಲ್ಲಗೆ ತಲೆವಿಕ್ಕಿ ಚಂದ್ರ ಕಿರಣಂಗಳನಾಗಳೆ ರಾಹು ನುಂಗಿ ವು ॥
ತ್ತುಗುಳ್ದಪುದೆಂಬಿನಂ ಮುಡಿಸಿ ಬಾಲೆಯ ಸೋರ್ಮುಡಿಯುಂ ಲಲಾಟದೊಳ್ ।
ಮೃಗಮದ ಬಿಂದುವಂ ಪೆಱೆಗೆ ನುಣ್ಗಱಿಯಂ ಪಡೆವಂತೆ ತಿರ್ದಿದರ್ ॥೪೩॥

ಆಗಳಾಕೆಯ ವುಂಗಳವಸದನಮೇ ತನಗೆ ಬೀರವಸದನಮಾಗೆ—

ಕಂ ॥ ಬಾಲೆಯ ಕಡೆಗಣ್ಣೋಟಮೆ
ಸಾಲದೆ ನನೆಗಣೆಗಳೇವುವೆಂದು ಮನೋಜಂ ॥
ಶೂಲಿಯನೊಸಲುರಿಗಣ್ಣಂ
ಪೀಲಿಯ ಕಣ್ಣೆಂಬನಾವನೆನಗಿದಿರೆಂಬಂ ॥ ೪೪ ॥

ಮನಸಿಜನೆನೆ ರತಿಯೆನೆ ಕ
ರ್ಮಿನ ಬಿಲ್ಲೆನೆ ಕುಸುಮ ಬಾಣಮೆನೆ ಕೋಕಿಲ ನಿ ॥
ಸ್ವನಮೆನೆ ಮಧುಕರ ಝಂಕೃತ
ಮೆನೆ ಸೀತೆಯ ಪಸದನಕ್ಕೆ ಪರ್ಯಾಯಂಗಳ್ ॥ ೪೫ ॥

ಅಂತು ಕೈಗೆಯ್ದುಮಾ ಸಮಯದೊಳ್—

ಕಂ ॥ ಹರಿವಂಶ ನಿಯಮದಿಂ ಹಿತ
ಪುರೋಹಿತಂ ಶುಭಮುಹೂರ್ತದೊಳ್ ಕನ್ಯಕೆಯಂ ॥
ತರವೇಟೆ ವೃದ್ಧ ಕಂಚುಕಿ
ವೆರಸು ಮನೋರಥಮೆನಿಪ್ಪ ರಥಮಂ ತಂದರ್ ॥ ೪೬ ॥

ಆಗಳಾಪುರೋಹಿತಾದೇಶದಿನನೇಕ ಮಂಗಳಾನಕ ನಿನದಮೊದವೆ ರಥಮನೇರಿ–

ಕಂ ॥ ರಮಣಿಯರೆರಡುಂ ಕೆಲದೊಳ್
ಚಮರರುಹಮನಿಕ್ಕೆ ಬೀಟಿ ಬೆಳ್ಗೊಡೆ ಬೇರೊಂ ॥
ದಮೃತಾಂಶುವನಾಕ್ಷಣದೊಳ್
ಹಿಮಾಂಶುಮುಖಿ ಮೆಱೆದಳೀಕ್ಷಣಾಕರ್ಷಣಮಂ ॥ ೪೭ ॥

ಆಗಳಾಸ್ಯಂದನಮುಂ ಸುತ್ತಿಮುತ್ತಿ ಕುಂಚದಡಪದ ಡವಕೆಯ ಕನ್ನಡಿಯ ಪರಿಚಾರಿಕೆಯರುವೊಡನಾಡಿಗಳಪ್ಪಯ್ನೂರ್ವರ್ ಕನ್ನೆಯರುಂ ಮಂಗಳೋಪಕರಣ ದ್ರವ್ಯಂಗಳಂ ಪಿಡಿದು ನಡೆಯೆ—

ಚ ॥ ಮದನ ಪತಾಕೆ ಚುಂಬಿಸೆ ವಿಯನ್ಮುಖಮುಂ ಸ್ಮರಚಾಪ ಟಂಕೃತಂ।
ಪುದಿಯೆ ದಿಗಂತಮುಂ ಕುಸುಮಸಾಯಕ ಸಾಯಕಮುರ್ಕೆ ರಾಜಲೋ ॥
ಕದ ಮನಮುಂ ಮನೋಜ ವಿಜಯಾಂಗನೆ ಜಾನಕಿ ಪೊಕ್ಕಳಾ ಸಭಾ।
ಸದನ ಸುವರ್ಣ ಗೋಪುರಮನೇಱಿ ಹಿರಣ್ಮಯಮುಂ ವರೂಥಮುಂ ॥ ೪೮ ॥

ಕಂ ॥ ಕನ್ನೆಯರಖಿಲ ಕಲಾ ಸಂ
ಪನ್ನೆಯರಯ್ನೂರ್ವರಲರ್ದ ತಾವರೆಗಳವೋಲ್ ॥
ತನ್ನೊಡವರೆ ಬಂದಳ್ ಸಿರಿ
ಸನ್ನಿದಮಾದಂತೆ ಸೀತೆ ಕನ್ಯಾರತ್ನಂ ॥ ೪೯ ॥

ಅಂತುಬಂದು—

ಚ ॥ ಜನಕಜೆ ವಶ್ಯದೀಪ ಕಲಿಕಾಕೃತಿಯಿಂ ಪುಗೆ ತತ್ಸಭಾ ನಿಕೇ।
ತನ ಕುಸುಮೋಪಹಾರ ಮಣಿರಂಗಮನಂಗಣಮಂ ನರೇಂದ್ರನಂ ॥
ದನರ್ಗೆ ಮನೋವಿಕಾರದೊಡನಂಗ ವಿಕಾರಮುದೇಂ ಪೊದಟ್ಟುದೋ।
ನನೆಕೊನೆಯೇಱುವಂತೆ ವನರಾಜಿ ಮಧು ಪ್ರಥಮ ಪ್ರವೇಶದೊಳ್ ॥ ೫೦ ॥

ಕಂ॥ ಉದಯಿಸೆ ಶಶಿಕಳೆ ತೆರೆಮಸ
ಗಿದ ಪಾಲ್ಗಡಲಂತೆ ನೃಪಕುಮಾರ ಕದಂಬಂ ॥
ಸುದತಿ ಪುಗೆ ಸಭೆಯನೊಳಕೊಂ
ಡುದು ಮದನ ವಿಕಾರ ಚೇಷ್ಟೆಯಂ ಬಹುವಿಧಮಂ ॥ ೫೧ ॥

ದಿನಲಕ್ಷ್ಮಿಯ ಪುಗಿಲೊಳ್ಕೊಂ
ಕನದಾಕರ ನಿಕರಮೊಡನೆಸಳ್ಮಸಗುವವೋಲ್ ॥

ಜನಕಾತ್ಮಜೆ ಪುಗೆ ಸಭೆಯಂ
ಜನಿಯಿಸಿದುದು ಮದನ ಚೇಷ್ಟೆ ರಾಜನ್ಯಕದೊಳ್ ॥ ೫೨ ॥

ಆಗಳಾಕೆಯ ಲಾವಣ್ಯ ಮದಿರಾರಸ ಸೇವನೆಯಿಂ ಕರಂ ಸೊಕ್ಕಿ—

ಕಂ ॥ ದ್ವಿಗುಣಿಸೆ ನಖರುಚಿ ಪೂಮಾ
ಲೆಗಳಂ ಕಾರಿರುಳೊಳೊಗೆದ ತಾರಾವಳಿಯಂ ॥
ನಗೆ ತೋರದುರುಂಬಂ ಸಾ
ವಗಿಸಿದನಡಿಗಡಿಗೆ ನೃಪಕುಮಾರಕನೊರ್ವಂ ॥ ೫೩ ॥

ಪರಭಾಗಂಬೆತ್ತಿರೆ ಪ
ದ್ಮರಾಗ ಮಣಿ ಪಾಣಿಪದ್ಮರಾಗದಿನೊರ್ವಂ ॥
ನರನಾಥ ಸುತಂ ಮೆಱೆದಂ
ಕಿರೀಟಮಂ ತಿರ್ದುವಂತೆ ಭುಜಶಾಖೆಗಳಿಂ ॥ ೫೪ ॥

ತಾರಾವಳಿಯಂ ತಳೆದ ನ
ಭೋರಂಗದ ಭಂಗಿ ತನಗೆ ಪುದುವೆನ್ನಿಸಿದುದಂ ॥
ಪೇರುರಮನದೇಂ ಮೆಱೆದನೊ
ಹಾರಮನೋಸರಿಸುವಂತೆ ನೃಪಸುತನೊರ್ವಂ ॥ ೫೫ ॥

ಮಂಗಳ ಮಣಿಪೀಠಂ ವಿಜ
ಯಾಂಗನೆಗೆನೆ ಕೊರ್ವುವೆತ್ತುದಂ ಮತ್ತೊರ್ವಂ ॥
ತುಂಗ ಭುಜ ಶಿಖರಮುಂ ರ
ತ್ನಾಂಗದಮಂ ಸಾರ್ಚುವೊಂದುನೆವದಿಂ ಮೆಱೆದಂ ॥ ೫೬ ॥

ಮ ॥ ತೀವಿಬೆಡಂಗುವೆತ್ತ ಕಮಲಾಕರದೊಳ್ ರಮಣೀಯಮಾದ ಕೆಂ ।
ದಾವರೆ ಪೂವಿನೊಳ್ ಸೆಣಸಿದತ್ತು ಕುಮಾರ ವಿಶಾಲ ವಕ್ಷದೊಳ್ ॥
ಸಾವಗಿಸುತ್ತುಮಿರ್ಪ ಪದದೊಳ್ ಪೊಳೆದೊಪ್ಪುವ ತೋರಮುತ್ತಿನೆ ।
ಕ್ಕಾವಳಿ ಸೂಸುವಂಶುಜಲದಿಂ ಬೆಳಗರ್ಗಿಂಪಳವಟ್ಟ ಕೆಂದಳಂ ॥ ೫೭ ॥

ಆಗಳಾ ಸ್ವಯಂವರ ಮಧ್ಯಭೂಮಿಗೆ ಮಣಿಭೂಷಣಮೆನಿಸಿ ಮನಂಗೊಳಿಸುವ ಪಳಿಕಿನ ಚೌಪಳಿಗೆಯ ನೀಲ ಶಿಲಾಸ್ತಂಭಮಂ ಮಲಂಗಿ ಪೊನ್ನ ಪುತ್ತಳಿಗೆಯ ವಿಳಾಸಮನಸಕಟ್ಟಿದು ತಟಿದ್ವಲ್ಲರಿ ಬಳಸಿದ ಶರಲ್ಲಕ್ಷ್ಮ್ಯಯಂತೆಯುಂ, ತಾರಾವಳಿ ಬಳಸಿದಿಂದುಕಳೆಯಂತೆಯುಂ, ವಿದ್ರುಮ ಲತೆ ಬಳಸಿದ ಲಾವಣ್ಯರಸ ಸಮುದ್ರ

ಯಂತೆಯುಂ ಕನ್ಯಕಾ ಕದಂಬದ ಬಳಸಿಂ ಬಗೆಗೊಳಿಸಿ ನಿಖಿಲಜನ ಮನಃಪೀಠ ದೊಳ್. ಮನಸಿಜಂ ಪ್ರತಿಷ್ಠೆಗೆಯ್ದು ರತಿಯಂತೆ ನಿರತಿಶಯಮಾಗಿರ್ಪುದುಂ—

ಕಂ ॥ ಸಕಳೇಂದು ಮುಖಿಯನಾ ಕ
ನ್ನಿಕೆಯಂ ಕಣ್ಸೋಲ್ತು ನೋಡಿ ಮತ್ತೊರ್ವಂ ಕೌ ॥
ತುಕದಿಂದೆಮೆಯಿಕ್ಕದೆ ರಾ
ಜ ಕುಮಾರಂ ಸುರ ಕುಮಾರನಂ ಗೆಲೆವಂದಂ ॥ ೫೮ ॥

ತರುಣಿಯ ಲಾವಣ್ಯ ರಸಾಂ
ಬುರಾಶಿಯೊಳ್ ತೇಂಕೆ ತನ್ನ ಕಣ್ಣುಂ ಮನಮುಂ ॥
ಮರವಾನಸನಂತೊರ್ವಂ
ಸ್ಮರ ಸಮ್ಮೋಹನ ಶರಕ್ಕೆ ಗುಱಿಯಾಗಿರ್ದಂ ॥ ೫೯ ॥

ಅಳವಡಿಸುವಂತೆ ಮಣಿಕುಂ
ಡಳಮಂ ನಸು ಮುರಿದು ಜನಕಸುತೆಯ ಕಪೋಲ ॥
ಸ್ಥಳಮಂ ಮೃಗಮದ ಪತ್ರಾ
ವಳಿ ವಿಳಸಿತಮಂ ಮರುಳ್ದು ನೋಡಿದನೊರ್ವಂ ॥ ೬೦ ॥

ತಳವೆಳಗಾದಂ ವನಿತಾ
ತಿಳಕದ ಪೆಱೆ ನೊಸಲ ರೋಚನಾ ತಿಲಕದ ಚೆ ॥
ಲ್ವೆಱೆಕುಳಿಗೊಳೆ ಸಮ್ಮೋಹನ
ತಿಳಕದವೋಲ್ ಮನಮನವನಿಪಾಲಕ ತಿಲಕಂ ॥ ೬೧ ॥

ಬಾಳೆಯ ಸೋರ್ಮುಡಿ ಮನಸಿಜ
ಕಾಳೋರಗನಂತೆ ಮನದೊಳಾ ಕಂಪನಮುಂ ॥
ಮೇಳಿಸೆ ಮತ್ತೊರ್ವಂ ಭೂ
ಪಾಳಂ ಪಾವಡರ್ದನಂತೆ ಬೆಱಗಾಗಿರ್ದಂ ॥ ೬೨ ॥

ಮ ॥ ತನು ರೋಮಾಂಚಮನಪ್ಪುಕೆಯ್ಯೆ ನೃಪನೊರ್ವಂ ಕನ್ಯಕಾರೂಪ ದ ।
ರ್ಶನದಿಂ ತತ್ಪುಲಕಂಗಳಂ ಕಲ ವಿಸಂಚೀ ನಾದಮಂ ಕೇಳ್ದು ಭೋಂ ॥
ಕನೆ ಮೆಯ್ವೆರ್ಚಿದುವೆಂದು ಬಂಚಿಸಿಯುಮೇಂ ಮೇಲ್ವಾಯ್ವುದಂಲೋಲಲೋ।
ಚನಮಂ ತಾಂಗಿದನಿಲ್ಲ ಜಾನಕಿಯ ಸೌಂದರ್ಯಕ್ಕಿದಾಶ್ಚರ್ಯಮೇ ॥ ೬೩ ॥

ಉ ॥ ಪಲ್ಲವ ಪಾಟಲಾಧರೆಯ ಪೀನ ಪಯೋಧರ ಮಂಡಲಂಗಳಾ ।
ಪಲ್ಲಹರೀ ಪರಂಪರೆಯನೀಯೆ ಸಮುತ್ಸುಕ ಲೋಚನ ಪ್ರಭಾ ॥

ಪಲ್ಲವದಿಂ ದುಕೂಲ ನವ ಪಲ್ಲವ ಶೋಭೆಯನಾಗಳೊರ್ವನಿ ।
ತ್ತಲ್ಲಿಯೆ ಕಣ್ವಳಂಚಲೆಯೆ ಜಾನಕಿಯಂ ಮನವೊಲ್ದು ನೋಡಿದಂ ॥ ೬೪ ॥

ಮ ॥ ಕೆಲರಾಗಳ್ ಋಜುವಿಂದಮರ್ಧಋಜುವಿಂದಂ ಸಾಚಿಯಿಂದಂ ಕೆಲರ್ ।
ಪಲವುಂ ಭಂಗಿಯಿನಿರ್ದು ಜಾನಕಿಯ ರೂಪಾಶ್ಚರ್ಯಮಂ ನೋಡಿ ಕ ॥
ಣ್ಮಲರಂ ಚಿತ್ತಮನಿತ್ತು ಚಿತ್ರಿಸಿದವೋಲ್ ನಿಷ್ಪಂದರಾಗಿರ್ದುದುಂ ।
ಗೆಲೆವಂದತ್ತು ವಿಚಿತ್ರ ಚಿತ್ರಸಭೆಯಂ ಭೂಭೃತ್ಸಭಾಮಂಡಲಂ ॥ ೬೫ ॥

ಕಂ ॥ ಅನಿತಿಂದ್ರಿಯಮುಂ ವಿಷಯಮು
ನನಾಕುಲಂ ಬಿಟ್ಟು ದರ್ಶನೇಂದ್ರಿಯಮೊಂದ ॥
ರ್ಕನುವಶಮಾದುವೆನಲ್ ನೃಪ
ತನಯರ್ ಜಾನಕಿಯಮೇಲೆ ಕಣ್ಣಾಗಿರ್ದರ್ ॥ ೬೬ ॥

ಕರಣಂ ನಯನಮೆ ವಿಷಯಂ
ತರುಣಿಯೆ ಪೆಜತೇನುಮಿಲ್ಲೆನಲ್ ರಾಜತನೂ ॥
ಜರ ಕಣ್ಗಳಿಳಸಿ ಬಳಸಿದು
ವುರವಣಿಸಿದುವಟ್ಟಿ [1]ಮುಟ್ಟಿದುವು ಜಾನಕಿಯಂ ॥ ೬೭ ॥

ಅನಂತರಂ—

ಕಂ ॥ ಬಿಸುಹ ನೇತ್ರೆಗೆ ಜಾನಕಿ
ಗೆ ಸುಟ್ಟಿ ತೋಜುತ್ತು [2]ಮಜ್ಜಿಪಿದಳ್ ಪರಿವಿಡಿಯಿಂ ॥
ಪೆಸಗೊಂಡು ವೃದ್ಧ ಕಂಚುಕಿ
ಪೆಸರ ನೃಪಾತ್ಮಜರ ವಂಶ ವೀರ್ಯ ಶ್ರುತಮಂ ॥ ೬೮ ॥

ಅಂತಜ್ಜಿಪುತ್ರದುಂ—

ಕಂ ॥ ಕಡು ಮಂದಮಪ್ಪ ಕಣ್ಣೆಮೆ
ಕುಡುವುರ್ವಂ ತ-ಡುಕೆ ನೋಡೆ ಮೊಗರಸವೆಂಬಿಂ ॥
ಗಡಲೊಳ್ ಪೊಳೆವೆಳವಾಳೆಯ
ಬೆಡಂಗನೊಳಕೊಂಡುವಕ್ಷಿಗಳ್ ಜಾನಕಿಯಾ ॥ ೬೯ ॥

---

1. ಪತ್ರಿ. ಚ.
2 ಮಜ್ಜಿಪಿದಂ ಗ. ಚ.

ಚ ॥ ನನೆಯ ಸರಲ್ಗಳಂತೆ ನೆಱಿದಿಂಗಳ ತಣ್ಗದಿರಂತೆ ಕಂತುರಾ ।
ಜನ ಕರವಾಳವೆಯ್ವೊಳಪಿನಂತೆ ನವೋತ್ಪಲ ದಾಮದಂತೆ ಪೂ ॥
ವಿನ ಮಟಿಯಂತೆ ತುಂಬಿಗಳ ಮಾಲೆ ತೆಱಂಬೊಳೆವಂತೆ ಲೋಲಲೋ ।
ಚನ ರುಚಿ ಸುತ್ತಿಮುತ್ತಿದುದಶೇಷ ನೃಪಾಲ ಸಭಾಂತರಾಳಮಂ ॥ ೭೦ ॥

ಅಂತು ನೋಡಿ—

ಚ ॥ ಎಱಗದೆ ಪೂತ ಚಂಪಕವನಕ್ಕೆ ನಮೇರು ಮಹೀರುಹಕ್ಕೆ ಬಂ ।
ದೆಱಗುವ ಚಂಚರೀಕದವೊಲಾಕೆಯ ಕೇಕರಮನ್ಯರಾಜಕ ॥
ಕ್ಕೆಱಗದೆ ರಾಘವಂಗೆಱಗೆ ಕಂಚುಕಿ ಕಣ್ಣಱಿದಾ ಲತಾಂಗಿಗ ।
ಟ್ಟಿಱಿಸೊಳಭಿವರ್ಣಿಸಲ್ ಬಗೆದ[1]ಳಾ ಧರಣೀಶ ಗುಣೈಕ ದೇಶಮಂ ॥ ೭೧ ॥

ಉ ॥ ಪ್ರಾಕೃತನಲ್ಲನೀ ದಶರಥಾಗ್ರತನೂಭವನೇಕವಾಕ್ಯನಾ ।
ಶಾಕರಿ ಕರ್ಣ ಚಾಮರಯಶಂ ಚರಮಾಂಗನನಂತವೀರ್ಯನಿ ॥
ಕ್ವಾಕು ಕುಲಾಮೃತಾರ್ಣವ ಸುಧಾಕಿರಣಂ ರಣಮೇರು ಲೋಕ ಲುಂ ।
ಟಾಕ ನಿದಾಘ ತಾಪ ಹರ ವರ್ಷಣ ಮೇಘನುದಾತ್ತರಾಘವಂ ॥ ೭೨ ॥

ಕಂ ॥ ಕರಿಯಂ ಕಾಮಂ ಬಿಸ ಪಾಂ
ಡುರವರ್ಣಂ ರಾಮನಿದುವೆ ಭೇದಮಭೇದಂ ॥
ನಿರತಿಶಯಮಪ್ಪರೂಪಿಂ
ವರನಾಗಲ್ ನಿನಗೆ ತಕ್ಕನೀ ರಘುವೀರಂ ॥ ೭೩ ॥

ಎಂಬುದುಮಾಸಮಯದೊಳಾ ವಿದ್ಯಾಧರ ಮಹತ್ತರಂ ವಿಧಿಪೂರ್ವಕಮಾ ವಿಷಮ ಚಾಪಮನರ್ಚಿಸುವುದುಂ—

ಮ ॥ ರಸನಾ ಶಂಪಾ ಶತಂ ಸಂಚಳಿಸೆ ಪುದಿಯೆ ಘೂತ್ಕಾರಮಾಶಾಂತಮಂ ದ ।
ಳ್ಳಿಸೆ ವಹ್ನಿಜ್ವಾಲೆ ದೀರ್ಣಾನನ ಕುಹರ ಸಹಸ್ರಂಗಳಂ ಕಣ್ಗಳಿಂದೆ ॥
ಣ್ಪಿಸೆಗಂಗಾರಂಗಳೆತ್ತಂ ಕೆದಱಿ ಫಣಸಹಸ್ರಂಗಳಂ ಬಿರ್ಚಿ ಕಣ್ಗ ।
ರ್ನಿಸಿ ವಜ್ರಾವರ್ತ ಚಾಪಂ ಪಡೆದುದು ಭಯಮಂ ಕಾಳ ಕಾಳಾಹಿ ರೂಪಂ॥೭೪॥

ಕಂ ॥ ಸಿಡಿಲಂತೆ ಮೊಳಗಿ ನೆಲನಂ
ಪೊಡೆಯುತ್ತುಂ ಪತ್ತು ದೆಸೆಗಮುವ್ವಳಿಸುತ್ತುಂ ॥
ಪಡೆದುವಗುರ್ವಂ ಜವನೆರ್ದೆ
ಗಿಡೆ ವಜ್ರಾವರ್ತ ಸಾಗರಾವರ್ತಂಗಳ್ ॥ ೭೫ ॥

1. ನಾ ಚ.

ಆಗಳವರ ಮಸಕಮುಂ ಕಂಡು ಭಯಂಗೊಂಡು ಖಚರ ಮಂಡಲಂ ಪ್ರಭಾ ಮಂಡಲಂಗೆ ಕನ್ನೆ ಕೈಸಾರ್ದಳೆಂದು ಪೆಱಸಾರ್ದು ನೋಡುತಿರ್ಪುದುಂ—

ಸ್ರ ॥ ಈ ವಜ್ರಾವರ್ತ ಕೋದಂಡಮನವಯವದಿಂದೇಱಿಸಲ್ ಸಾಲ್ವ ದೋರ್ದಂ ।
ಡಾವಷ್ಟಂಭ ಪ್ರಚಂಡಂ ಜನಕಜೆಗೆ ವರಂ ಬರ್ಪುದೆಂಬೀ ವ್ಯವಸ್ಥಾ ॥
ರಾವಂ ಕರ್ಣಾವತಂಸಂ ಪಸರಿಸೆ ನಿಜಪೀಠಂಗಳಿಂದೆಟ್ಟುದಾಗಳ್ ।
ತೀವುತ್ತಿರ್ಪನ್ನೆಗಂ ಭೂಷಣ ರುಚಿ ಕಕುಭಾನೀಕಮುಂ ರಾಜಲೋಕಂ ॥೭೬॥

ಕಂ ॥ ಮನಸಿಜನುಂ ಚಂದ್ರಮನುಂ
ದಿನಕರನುಮನೇಕರೇಕೆ ನೆರೆದರೊ ಪೇೞಿಂ ॥
ಬಿನೆಗಂ ನೃಪತನಯರ್ಬಿ
ಲ್ಲನೇಱಿಸಲ್ ತಮ್ಮ ಬೆಳಗೆ ಬೆಳಗೆನೆ ಬಂದರ್ ॥ ೭೭ ॥

ಅಂತು ಬಂದಗುರ್ವುಪರ್ವೆ ಬಿಗುರ್ವಿಸಿದ ಬಿಲ್ಗಳಂ ಕಂಡು ಭಯಂಗೊಂಡು—

ಮ ॥ ಉರಿಯಂ ಕಾೞುವ ಕೆಂಡಮುಂ ಕೞಿವ ಬಿಲ್ಲಂ ಕಂಡೆವಿಲ್ಲುಕ್ಕೆವಂ ।
ತರುಣೀರತ್ನಮನಿಟ್ಟುಕೊಳ್ವ ಸಮಕಟ್ಟಿಂದಟ್ಟಿದಂ ಖೇಚರಂ ॥
ಮರುಳಾದಂ ಜನಕಂ ವ್ಯವಸ್ಥೆಯನೊಡಂಬಟ್ಟಾರೊ ಕಲ್ಯಾಣ ತ ।
ತ್ಪರರೀ ಮಂಗಳ ಲಗ್ನದೊಳ್ ಕುಳಿಕದಂಷ್ಟ್ರಾ ಲಗ್ನಮಂ ಸೈರಿಪರ್ ॥ ೭೮ ॥

ಕಂ ॥ ಅಹಿದರ್ಶನಮಲ್ತು ಶುಭಾ
ವಹಂ ವಿವಾಹಕ್ಕೆ ವಿಷಮಮಿಮಾ[1]ಮಾರ್ಗಮಹಿ ॥
ಗ್ರಹಣಂ ಮುನ್ನಂ ಪಾಣಿ
ಗ್ರಹಣಂ ಬಟ್ಟಿಯಂ ಗಳಿನ್ನವಘಟಿತಮೊಳವೇ ॥ ೭೯ ॥

ಮಧುಪರ್ಕಮಲ್ತು ಮಂಗಳ
ವಿಧಾನದೊಳಗೊಂದುಮಲ್ತು ಪಾವಂ ಪಿಡಿವೀ ॥
ವಿಧಿ ಕನ್ಯಾ ಪರಿಣಯನ
ಪ್ರಧಾನ ಕಾರ್ಯಂಗಡಿನ್ನವಘಟಿತಮೊಳವೇ ॥ ೮೦ ॥

ಕುಡುವೆಂ ಜಾನಕಿಯಂ ಪಿಡಿ
ದೊಡಜಗರಮನೆಂದು ಮುನ್ನ ಪೇೞ್ದೊಡೆಯಾಗಾ ॥
ರುಡಮಂ ಕಲ್ತು ವಿವಾಹ
ಕ್ಕೊಡರಿಸುವಂ ಬಱಿದೆ ಪಿಡಿವನಾವನೊ ಪಾವಂ ॥ ೮೧ ॥

---

1. ವಿಷಮಾಹಿ. ಚ; * ಈ ಪದ್ಯವು ಕ. ಖ. ಚ. ಗಳಲ್ಲಿಲ್ಲ.

ಉ ॥ ದೂರದೊಳಂಜದೀಕ್ಷಿಸುವ ಕಣ್ಗಳಿಗಳ್ ನೃಪರಾರುಮಿಲ್ಲೆನಲ್ ।
ಸಾರೆವರಲ್ ಮನಂಗಿಡದ ಮೆಯ್ಗಳಿಯಾವನೊ ಬಾಹುವೀರ್ಯದಿಂ ॥
ದಾರಿವನೆತ್ತಲಾರ್ಪನೆನಲೇಱಿಸುವುದ್ಧತ ವೃತ್ತಿ ನಾಡೆಯುಂ ।
ದೂರಮಿವರ್ಕೆ ಬಿಲ್ಪೆಸರನಿಟ್ಟವನುರ್ವಿಗೆ ನಂಜನಿಟ್ಟವಂ ॥ ೮೨ ॥

ಎಂದು ನೆರೆದರಸುಮಕ್ಕಳಿಲ್ಲರಾಬಿಲ್ಲಂ ಕಂಡು ಬಲ್ಗರಂ ಪೊಡೆದಂತೆ ಪೆಡಂ ಮಗುಳೆ—

ಶಾ ॥ ದೇಶಾಧೀಶ ತನೂಭವರ್ ಸೆಡೆವ್ವುದುಂ ಸಾಕೇತ ಸಿಂಹಾಸನಾ ।
ಧೀಶಂ ಕಂಡು ದರಸ್ಮಿತಂ ದಶರಥಂ ಭ್ರೂವಲ್ಲರೀ ಪಲ್ಲವಾ ॥
ದೇಶಂ ನೋಡೆ ಮುಖಾಬ್ಜಮಂ ಸಭೆಯಿನೆಟ್ಟಿಂ ತುಂಗವಂಶಂ ಸುರೇಂ ।
ದ್ರಾಶಾದಂತಿ ಬಲಂ ಜಿತಾಹಿತಬಲಂ ದುರ್ವಾರ ಬಾಹಾಬಲಂ ॥ ೮೩ ॥

ಅಂತು ತಳರ್ವುದುಂ—

ಕಂ ॥ ಜನ ನಯನ ಪ್ರತಿಬಿಂಬಂ
ತನುರುಚಿಯೊಳ್ಸೊಳೆಯೆ ನಡೆವ ನೆಯ್ದಿಲ್ಗೊಳನಂ ॥
ನೆನೆಯಿಸಿ ಮಾಣ್ದನೆ ರಾಮಂ
ನೆನೆಯಿಸಿದನನುಕ್ಷಣಂ ಸಹಸ್ರೇಕ್ಷಣನಂ ॥ ೮೪ ॥

ಮ ॥ ಬಲಭದ್ರಂ ರಜತಾದ್ರಿ ಬರ್ಪತೆಱದಿಂ ಬಂದಂ ಧನುರ್ದರ್ಶನಾ ।
ಕುಲರಂ ರಾಜತನೂಜರಂ ಸ್ಮಿತಮುಖಂ ನೋಡುತ್ತಮುದ್ಯೂಲತಂ ॥
ಕೆಲರಂ ಮೂರ್ಛೆಗೆ ಸಂದರಂ ಕೆಲಬರಂ ಬೆಳ್ಕುತ್ತು ಬೆನ್ನಿತ್ತರಂ ।
ಕೆಲರಂ ಬೆಕ್ಕಸಮುತ್ತರಂ ಕೆಲಬರಂ ಶಂಕಾ ವಿಷಾತಂಕರಂ ॥ ೮೫ ॥

ಅಂತೆಯ್ದೆವರ್ಪುದುಂ—

ಚ ॥ ಪದನಖ ದೀಪ್ತಿ ಮಂಜರಿ ನಿಚೋಳಕದಂತಿರೆ ತನ್ನನಾವಗಂ ।
ಪುದಿಯಲೊಡಂ ಬಿಗುರ್ವಣೆ ರಘೂದ್ವಹ ಸನ್ನಿಧಿಯಿಂದದೃಶ್ಯಮ ॥
ಪ್ಪುದುಮಿಳಿದಾಯ್ತು ಚಾಪಲತೆ ರೋಹಣಶೈಲ ವಿಷಾಪಹಾರ ರ ।
ತ್ನದ ವಿತತಾಂಶು ತಳ್ತಡರೆ ನಿರ್ವಿಷಮಾದ ಮಹಾ ವಿಷಾಹಿವೋಲ್ ॥ ೮೬ ॥

ಆಗಳಾ ವಿಷಮ ಕೋದಂಡಮನೇರಂಡ ಕಾಂಡಮಂ ಬಗೆವಂತು ಬಗೆದು—

ಮ ॥ ಪದುಳಂ ನಿಂದೆಡಗಯ್ಯೊಳೊತ್ತಿ ರಘುಜಂ [1]ಕೊಪ್ಪಂ ಪದಾಂಗುಷ್ಠಮೂ ।
ಲದೊಳಿಟ್ಟೇಱಿಸೆ ಕಾಲದಂಡ ನಿಭಮಂ ಕೋದಂಡಮಂ ಭೂತಳಂ ॥

1. ಕೊಳ್ಪಂ. ಚ.

ಪದುಳಂನಿಂದುದೆ ಶೇಷಕಂಠ ಕಠಿನಾಸ್ಥಿ ಶ್ರೇಣಿ ನುರ್ಗಾಗದಿ।
ರ್ದುದೆ ಕೂರ್ಮೋನ್ನತ ಕರ್ಪರಂ ನಳದು ಬೆನ್ನಂ ಪತ್ತದೇಂ ಮಾಣ್ಬುದೇ॥೪೭॥

ಕಂ॥ ಇರ್ಮೆ ಭರಂಗೆಯ್ದನೆ ಗೊಲೆ
ಗೊರ್ಮೊದಲೊತ್ತಿದನಗುರ್ವು ಮೆಯ್ವೆತ್ತುದನಾ॥
ಕಾರ್ಮುಕಮಂ ರಘುವೀರನ
ದೋರ್ಮಂಡಳ ಶಕ್ತಿ ಮನುಜ ಸಾಧಾರಣಮೇ ॥ ೪೪ ॥

ಮ॥ ಪುಲಕಂ ಜಾನಕಿಗುತ್ಸವಂ ಜನಕರಾಜಂಗುಮ್ಮಳಂ ಖೇಚರಾ।
ವಲಿಗುದ್ವೇಗಭರಂ ನರೇಂದ್ರ ಸುತ ಸಂದೋಹಕ್ಕೆ ಸಮ್ಮೋಹನಂ॥
ಲಲನಾಶ್ರೇಣಿಗೆ ವಿಸ್ಮಯಂ ಪುರಜನಕ್ಕಾಕರ್ಷಣಂ ಲೋಚನಾ।
ವಲಿಗಾಯ್ತೀಱಿಸಿ ನೀವಿ ಜೇವೊಡೆಯೆ ವಜ್ರಾವರ್ತಮಂ ರಾಘವಂ॥ ೪೫ ॥

ತದನಂತರಂ—

ಮ॥ ಸಮದಂ ಲೀಲೆಯಿನೆತ್ತೆ ಖೇಚರಬಲಂ ಕೆಟ್ಟೊತ್ತಿ ಪಾಱಿತ್ತನು।
ಕ್ರಮದಿಂದಾನತಮಾಗೆ [1]ಕೊಪ್ಪು ಪಿರಿದುಂ ಲಜ್ಜಾನತಂ ರಾಜಲೋ॥
ಕಮಣಂ ಬೆಕ್ಕಸಮುತ್ತು ದೇಱಿಸುವುದುಂ ಕೋದಂಡಮಂ ರಾಮನ।
ಶ್ರಮದಿಂ ಮನ್ಮಥನಾಗಳೀಱಿಸನೆ ಮಾಱಿಚ್ಚಂ ಪುರಸ್ತ್ರೀಯರಂ ॥ ೪೦ ॥

ಕಂ॥ ಅವತಂಸಮಾದುವಮರ
ಸ್ತವನಂಗಳ್ ಸಕಳ ಜನದ ಜಯಜಯ ನಿನದಂ॥
ಕವಿಸದ್ವಂ ಕೆಡಿಸಿದುದು
ತ್ಸವ ಪಟಹ ಧ್ವನಿಗಳುರ್ಮ್ಮೆ ಪೊಣ್ಮಿದುವಾಗಳ್ ॥ ೪೧ ॥

ಎತ್ತಿದುವು ಮಂಗಲಧ್ವಜ
ಮೆತ್ತಿದುದು ಸಿತಾತಪತ್ರವಾಗಸಮಂ ಪೊ॥
ತ್ತೆತ್ತಿದುದಾಶೀರ್ವಾದಂ
ಮುತ್ತಿನ ಸೇಸೆಗಳನಿಕ್ಕಿದರ್ ಮಾನಿನಿಯರ್ ॥ ೪೨ ॥

ಆಗಳಾ ಬಳನ ದೋರ್ಬಲಕ್ಕೆ ಕಂಚುಕಿ ರೋಮಾಂಚ ಕಂಚುಕಿತ ಶರೀರೆ ಯಾಗಿ ಜಾನಕೀದೇವಿ ನಿಜಮನೋರಥಂ ಸಫಲವಾದುದಿದುವೆ ಪುಣ್ಯಾವಹ ಸಮಯ ಮಖಿಲ ರಾಜಕುಲ ಶೇಖರನಂ ಕುಸುಮಶೇಖರನಂ ಮಾಟ್ಪುದೆಂದು ಬಿನ್ನವಿಸೆ—

---

1. ಕೊಳ್ಪು. ಚ

ಉ ॥ ಆವೆಡೆ ಹಂಸಿಗೀನಡೆಯ ಜೆಲ್ವಿನೆ ನೂಪುರದಿಂಚರಂ ಸ್ಮರಂ ।
ಜೀವೊಡೆದಂದಮಾಗೆ ಮೃದುಪಾದತಳಂಗಳ ಕೆಂಪು ಕೂಡೆ ಕೆಂ ॥
ದಾವರೆವೂಗಳಂ ಕೆದಱುವಂತಿರೆ ಕುಂತಳ ಸೌರಭಕ್ಕೆ ಭೃಂ ।
ಗಾವಳಿ ಮೇಲೆ ಪೀಲಿದಟೆಯಂತಿರೆ ಬಂದಳದೊಂದುಲೀಲೆಯಿಂ ॥ ೯೩ ॥

ಕಂ ॥ ಅಲಗರ್ಗಣೆಯನನಂಗಜಂಗೀ
ಯಲೆಂದು ರತಿ ಬರ್ಪ ಮಾಟಕ್ಕೆಯಿಂ ಮಾಲೆಯನಾ ॥
ಲಲಿತಾಂಗಿ ಪಿಡಿದು ಕಣ್ಗಂ
ಕೆಲಕ್ಕಮಾ ದಾಶರಥಿಯ ಬಗೆಗಂ ಬಂದಳ್ ॥ ೯೪ ॥

ಅಂತುಬಂದು—

ಉ ॥ ಮಾಲೆಯಮೇಲೆ ತುಂಬಿಗಳಮಾಲೆ ತೆಱಂಬೊಳೆದಾಡೆ ಬೇಱೆ ಪೂ ।
ಮಾಲೆಯ ಲೀಲೆಯಂ ಕೆದಱೆ ಕೇಕರಮಾಲೆ ಶಿರೀಷಮಾಲೆಯಂ ॥
ಸೋಲಿಸೆ ನೀಳ್ದ ಬಾಹುಲತೆ ತೋಳ ಮೊದಲ್ ಮದನಾನುರಾಗಮಂ ।
ಸಾಲಿಡೆ ಸಾರ್ದು ಸೀತೆ ರಘುವಂಶ ನಮೇರುಗೆ ಮಾಲೆಸೂಡಿದಳ್ ॥ ೯೫ ॥

ಮ॥ ಸ್ರ॥ [1]ತನಿಸೋಂಕಿಂ ಮೆಯ್ಗೆ ರೋಮಾಂಚಮನೊದವಿಸಿ ರಾಮಂಗೆ ವೈದೇಹಿ ನೀರೇ।
ಜನಿಸರ್ಗಾಮೋದ ಗಂಧೋದಕ ಸವನನವನಿತ್ತಟ್ಟಿಱುಂ ಬಾಹುಮೂಲಂ ॥
ಸ್ತನಮೂಲಂ ನಾಭಿಮೂಲಂ ತ್ರಿಗುಣಿಸೆ ಸುಮನಶ್ಶೇಖರಂ ಮಾಡಿ ಕಂದ ।
ರ್ಪನ ವಾಮೋಪಾಂತದೊಳ್ ರಂಜಿಸುವ ರತಿಯ ಸೌಂದರ್ಯಮಂ ಸೂಱೆ
[ಗೊಂಡಳ್ ॥ ೯೬ ॥

ಕಂ ॥ ಬಲದೇವಂಗೇವುದೋ ಬೆಂ
ಬಲಮಾತನೊಳಾದ ಮೋಹದಿಂ ಕೃಷ್ಣಂ ದೋ ॥
ರ್ಬಲದೃಪ್ತಂ ಸೆಣಸಿದರಂ
ಕೊಲಲುಂ ಗೆಲಲುಂ ಕಡಂಗಿ ಪಿಂದನೆ ಬಂದಂ ॥ ೯೭ ॥

ಆಕಾರಮಲ್ತು ವಜ್ರ
ಪ್ರಾಕಾರಮಿದೆನಿಸಿ ಲಕ್ಷ್ಮಣಂ ಬರೆ ಚಾಪಂ ॥
ವೈಕುರ್ವಣ ವಿಷಮ ಫಣೀಂ
ದ್ರಾಕೃತಿಯಂ ಬಿಟ್ಟು ಮಟ್ಟಮಿರ್ದತ್ತಾಗಳ್ ॥ ೯೮ ॥

ಗರುಡೋದ್ಗಾರ ಮಣಿಚ್ಛವಿ
ಗರುಡಧ್ವಜನೆನಿಪ ಕೃಷ್ಣನಿದಿರೊಳ್ ಧನು ತ ॥

---

1 ತನು.....ವಿಸಿ ಗ ಘ ಚ.

ನ್ನುರಗಾಕಾರಮನುಪಸಂ
ಹರಿಸಿ ನಿಜಾಕೃತಿಯಿನಿರ್ಪುದೊಂದಚ್ಚರಿಯೇ ॥ ೯೯ ॥

ಅಂತುಬಂದು—

ಚ ॥ ನಗಧರನೆತ್ತನೇ ಧನುವನೇಱಿಸನೇ ನಗಸಾನು ಕೂಟಮಂ ।
ಪಗೆವರನೇಱಿಸಲ್ ನೆಱಿವಲಂಘ್ಯಬಲಂ ಬಲಗರ್ವದಿಂದದಂ ॥
ಬಗೆದನೆ ಪುರ್ಬನೇಱಿಸುವ ಮಾಟ್ಕೆಯಿನಶ್ರಮದಿಂ ಪೊಡರ್ಪು ಕೈ ।
ಮಿಗೆ ರಿಪುಮರ್ದನಂ ಧನುವನೆತ್ತಿದನೇಱಿಸಿದಂ ಜನಾರ್ದನಂ ॥ ೧೦೦ ॥

ಪೃಥ್ವೀ ॥ ಪರಾಭವಿಸಿದಂ ಗುಣ ಪ್ರಗುಣ ಚಂಡ ಕೋದಂಡದಿಂ ।
ಪರಿಸ್ಫುರಿತ ಪಂಚರತ್ನ ರುಚಿ ಸಾಗರಾವರ್ತದಿಂ ॥
ವಿರೋಧಿಬಲ [1]ಪೋತ ವೀರರಸ ಸಾಗರಾವರ್ತದಿಂ ।
ಸುರೇಂದ್ರಧನು ಮೂಡಿದಂಬರಮನಂದು ಪೀತಾಂಬರಂ ॥ ೧೦೧ ॥

ಚ ॥ ಉದಧಿ ಕಲಂಕಿದತ್ತು ದೆಸೆ ತಲ್ಲಳಿಸಿತ್ತಮರಾದ್ರಿ ಗಾಳಿಗೊ ।
ಡ್ಡಿದ ಸೊಡರಂತೆ ಸಂಚಲಿಸಿದತ್ತು ನೆಲಂ ನಡುಗಿತ್ತು ದಿಗ್ಗಜಂ ॥
ಮದಮುಡುಗಿತ್ತು ಖೇಚರಬಲಂ ಪೆಳಱಿತ್ತು ಕರುತ್ತು ದಿವ್ಯ ಚಾ ।
ಪದ ತಿರುವಾಯ್ಗೆ ದಿವ್ಯಶರಮಂ ತರೆ ದೋರ್ಬಲಶಾಲಿ ಲಕ್ಷ್ಮಣಂ ॥ ೧೦೨ ॥

ಚ ॥ ಕರ ಕಮಲಂಗಳಂ ಮುಗಿದು ಲಕ್ಷ್ಮಣದೇವ ಶರಣ್ಯ[2]ಮೆಂಬ ದೇ ।
ವರ ನುಡಿ ಪೊಣ್ಮಿದತ್ತಲರ ಪೆರ್ಮಟಿ ಕೊಂಡುದು ದೇವದುಂದುಭಿ ॥
ಸ್ವರಮೊಗೆದತ್ತವರ್ಕಗಿದು ಖೇಚರ ರಾಜ ಮಹತ್ತರಂ ಭಯಾ ।
ತುರನೆಮೆಯಿಕ್ಕದೆಂಟನೆಯ ಕೇಶವನಂ ಬೆಱಗಾಗಿ ನೋಡಿದಂ ॥ ೧೦೩ ॥

ಕಂ ॥ ಅದಟಂ ವಜ್ರಾವರ್ತ
ಕ್ಕೆ ದಿವ್ಯಮೆನಿಸಿದ ಹಲಾಯುಧಂಬೆರಸು ಬಲಂ ॥
ಗದೆವೆರಸು ಸಾಗರಾವ
ರ್ತ ದಿವ್ಯ ಚಾಪಕ್ಕುಪೇಂದ್ರನಧಿಪತಿಯಾದಂ ॥ ೧೦೪ ॥

ಚಂದ್ರಾಸ್ಯೆಯರಂ ಮನದೊಳು
ಪೇಂದ್ರಂಗೀರೊಂಬದಿಂಬರಂ ನಿರ್ಜಿತ ದೇ ॥
ವೇಂದ್ರ ಗಣಿಕೆಯರನಂಕದ
ಚಂದ್ರಧ್ವಜನಳ್ಕ ಕಪ್ಪಮಿಾವವೊಲಿತ್ತಂ ॥ ೧೦೫ ॥

1. ಪಾತ. ಕ. ಖ. ಚ; ದೈತ್ಯ. ಗ. ಘ 2. ನೆಂಬ. ಘ.

ಆಗಳನೇಕಾರ್ಚನೆಗಳಿಂ ಧನುರ್ಯುಗಲಮುಂ ಜನಕನರ್ಚಿಸುವುದುಂ—

ಕಂ॥ ಅನರಣ್ಯಸುತಂ ದಶರಥ
ಜನಪತಿ ಕರಿಘಟೆಯೊಳಶ್ವದಟದೊಳುಪೇಂದ್ರಂ ॥
ಜನಕ ತನೂಜೆಯುಮಂ ರಾ
ಮನುಮಂ ಮುಂದಿಟ್ಟು ಮಿಥಿಳೆಗಭಿಮುಖರಾದರ್ ॥ ೧೦೬ ॥

ಅಂತು ಸ್ವಯಂವರಶಾಲೆಯಿಂ ತಳರ್ವುದುಂ—

ಉ॥ ಅಟ್ಟಳೆಯಂ ಪಳಂಚಿ ಪುರ ಗೋಪುರಮಂ ಪರಿದೇಱಿ ಕೋಂಟೆಯಂ।
ಮೆಟ್ಟಿ ಸುಧಾ ಗೃಹಾವಳಿಗೆ ಲಂಘಿಸಿ ಹರ್ಮ್ಯತಳಕ್ಕೆ ಪಾಯ್ದು ಚೌ॥
ವಟ್ಟಮನೆಯ್ದಿ ದೇವಗುಲದಾದಲೆಯಿಂ ಗಗನೋದರಕ್ಕೆ ದಿಂ।
ಕಿಟ್ಟುದು ದುಂದುಭಿಸ್ವನಮನೇಱಿಸಿ ಭೋಂಕನೆ ಶಂಖನಿಸ್ವನಂ ॥ ೧೦೭ ॥

ಆಗಳಾ ಪುರಜನಂಗಳುತ್ತುಂಗ ಮಾಟ ಕೂಟ ಪ್ರಾಸಾದಂಗಳನೇಱಿ—

ಚ॥ ತಲೆವಱಿದಾನೆ ಸುತ್ತಿ ಪಲವುಂ ಬರೆ ತಳ್ತಿರೆ ಮೇಘಡಂಬರಂ।
ಲಲನೆಯರಿಕ್ಕೆ ಚಾಮರಮನಿರ್ಕೆಲದಾನೆಯ ಪುಷ್ಪಕಂಗಳೊಳ್॥
ನೆಲಸಿ ಕುಳಾಚಳಾಕೃತಿಯನೇಱಿ ಗಜೇಂದ್ರಮನಿಂದ್ರನಂತೆ ಬ।
ರ್ಪಲಘುಪರಾಕ್ರಮಂ ದಶರಥಂ ಪರಿಪೂರ್ಣಜಗನ್ಮನೋರಥಂ ॥ ೧೦೮ ॥

ವನಧಿತರಂಗದಂತಿರೆ ತುರಂಗದಟಿಂ ಬರೆ ವಾಜಿರಾಜವ।
ಲ್ಗನದಿನುರಸ್ಸ್ಥಲಂಬಿಡಿದು ಲಕ್ಷ್ಮಿಯ ಕೇಕರದಂತೆ ತೋರಮು॥
ತ್ತಿನ ತಿಸರಂ ತೆಱಂಬೊಳೆಯೆ ಮಿಂಚಿನವೋಲ್ ಮಣಿಕುಂಡಲಾಂಶುಗಳ್।
ತೊನೆಯೆ ಕದಂಪಿನೊಳ್ ಮದನನಂತಿರೆ ಬರ್ಪವನಲ್ತೆ ಲಕ್ಷ್ಮಣಂ ॥೧೦೯॥

ಮ॥ ತನಿಸೋಂಕಿಂ ತನಗೀಯೆ ಹರ್ಷಭರಮಂ ಲಜ್ಜಾಭರಾಕುಂಚಿತಾ।
ನನೆ ವೈದೇಹಿ ತದೀಯ ಕುಂತಳ ಸಹಸ್ರಕ್ಕಿತ್ತು ತಿರ್ಯಗ್ವಿಳೋ॥
ಕನಮಂ ಹೇಮ ವರೂಥದೊಳ್ ನೆಲಸಿ ನೇತ್ರಾನಂದಮಂ ಮಾಪ್ಪ ರೂ।
ಪಿನ ಜೆಲ್ವಿಂ ಮದನಂಗೆ ಲಾಘವಮನಿತ್ತಾ ಬರ್ಪವಂ ರಾಘವಂ ॥ ೧೧೦ ॥

ಚಲ ನೀಲಾಚಲ ರತ್ನಕೂಟಮೆನೆ ಕಾಲ್ಗೋದಾನೆಯಂ ದೋರ್ಭುಜಂ।
ಗ ಲತಾ ದಂಷ್ಟ್ರಿಕೆ ಕಣ್ಗಗುರ್ವಿಸುವಿನಂ ವಜ್ರಾಂಕುಶಂ ಮೌಕ್ತಿಕಾ॥
ವಲಿ ವಕ್ಷಸ್ಸರಸೀಮೃಣಾಳಿಕೆ ಬೆಡಂಗಂ ಬೀಱೆ ಚಂದ್ರಾರ್ಕರಂ।
ಗೆಲೆವಂದಾ ಬರುತಿರ್ಪವರ್ ಭರತಶತ್ರುಘ್ನರ್ ಪುರೋಭಾಗದೊಳ್॥ ೧೧೧॥

ಎಂದು ಪುರಜನ ಪರಿಜನಂಗಳೋರ್ವರೊಳ್ ನುಡಿಯೆ ಪುರಮಂ ಪೊಕ್ಕು ಕರುಮಾಡದ ಮುಂದಣ ವಿವಾಹಮಂಡಪದ ಮುಂದೆ ವಾಹನಂಗಳನಿಟ್ಟಿದು ಪುಣ್ಯ[1]ಪುಣ್ಯಾಂಗನಾಜನದ ತಳೆವ ಸಜಳ ಧವಳ ಕಳಮಾಕ್ಷತಂಗಳಿನಳಕ ವಲ್ಲರಿಯಂ ಕುಸುಮಿಸುತ್ತುಮೊಳಗಂ ಪುಗುವುದುಂ—

ಮ ॥ ಹರಿನೀಲ ಸ್ತಂಭಮಂ [2]ಜಾಗದ ಪಡಲಿಗೆಯುಂ ತುಂಗ ಭೃಂಗಾರಮುಂ ನೆ।
ರ್ಮ್ಮಿರೆ ಭಾಸ್ವದ್ಭಿತ್ತಿಯಂ ಸುತ್ತಿರೆ ಸುರುಚಿರ ಚಿತ್ರಂ ಹರಿದ್ರತ್ನ ಮಧ್ಯಾ ॥
ಜಿರಮಂ ಮುಕ್ತಾವಲೀ ರಂಗವಲಿ ಬಳಸೆ ಕರ್ಕೇತನ ದ್ವಾರ ಶಾಖಾಂ।
ತರಮಂ ರತ್ನ ಸ್ಫುರತ್ತೋರಣಮೆಳಸೆ ಬೆಡಂಗಾದು[3]ದುದ್ವಾಹ ಗೇಹಂ ॥ ೧೧೨ ॥

ಕಂ ॥ ಸುರ ದಂಪತಿಗಳ ವಿದ್ಯಾ
ಧರ ದಂಪತಿಗಳ ನರೇಂದ್ರ ದಂಪತಿಗಳ ಕಿ ॥
ನ್ನರ ದಂಪತಿಗಳ ವಿದ್ಧಂ
ವಿರಾಜಿಸಿತ್ತದಜಿ ಪೊಳೆವ ಪಳಕಿನ ಕೇರೊಳ್ ॥ ೧೧೩ ॥

ಪುರು ಜಿನ ಚರಿತಂ ಭರತೇ
ಶ್ವರ ಚರಿತಂ ಸಗರ ಚಕ್ರವರ್ತಿಯ ಚರಿತಂ ॥
ಹರಿವಂಶ ವೀರಪುರುಷರ
ಚರಿತಂ ಬರೆದಿರ್ದುವಲ್ಲಿ ಕೆಲಕೆಲವೆಡೆಯೊಳ್ ॥ ೧೧೪ ॥

ಆಮೋದ ಮುದಿತ ಮಧುಕರ
ದಾಮಕದೊಳ್ ನೀಲರತ್ನ ದಾಮಂ ಮಲ್ಲೀ ॥
ದಾಮಕದೊಳ್ ಮುಕ್ತಾಫಲ
ದಾಮಂ ತಡವಾದುವೊಡನೆ ಮಣಿಮಂಡಪದೊಳ್ ॥ ೧೧೫ ॥

ಆಲಂಬಿತ ಮಣಿ ಘಂಟಾ
ಜಾಲಕದೆಡೆಯೆಡೆಯೊಳಿಟಲೆ ಕಟ್ಟಿದ ಮುಕ್ತಾ ॥
ಮಾಲಕೆಯಂ ನವ ವಿಚಕಿಲ
ಮಾಲಕೆಗೆತ್ತಿಳಿಸಿ ಸುಟಿವುವಳಿ ಕಳಭಂಗಳ್ ॥ ೧೧೬ ॥

ಮಂಗಳ ಗಾಯನಿಯರ ಗೀ
ತಂಗಳನುಪಹಾರ ಕುಸುಮ ಮಧುಪಾನ ವ್ಯಾ ॥
ಸಂಗದೊಳಿರ್ದಳದುಂಬಿಗ
ಳಿಂಗೊರಲಿರ್ಮಡಿಸಿದತ್ತು ರಾಜಾಂಗಣದೊಳ್ ॥ ೧೧೭ ॥

---

1 ಪಣ್ಯಾಂಗನಾ. ಕ ಖ 2. ಪೊನ್ನದ. ಚ 3. ಡತ್ಸಾಹ ಚ

ಕಂ ॥ ಪಳಿಕಿನ ಕಂಭಂಗಳ್ ಕ
ಣ್ಗೊಳಿಸುವ ಮಾಣಿಕದ ಸೊಡರ್ಗಳಿಂ ನಾಡೆಮನಂ ॥
ಗೊಳಿಸಿದುವು ಲಸಿತ ಭಸಿತೋ
ಜ್ಜ್ವಲಗಾತ್ರಂ ಸ್ಥಾಣು ನೊಸಲ ಕಣ್ದೋಱಿದವೋಲ್ ॥ ೧೯೪ ॥

ಅರುಣಮಣಿ ದೀಪ ರುಚಿಯಿಂ
ಪರಭಾಗಂಬಡೆದ ನೀಲರತ್ನ ಸ್ತಂಭಾಂ ॥
ತರದಬಲಾಪ್ರತಿಬಿಂಬಂ
ಸಿರಿ ನೆರ್ಮಿದಳೆನಿಸಿದತ್ತು ಪೀತಾಂಬರನಂ ॥ ೧೯೫ ॥

ಚ ॥ ಉಗುಳ್ದಪುದಿಂದ್ರಚಾಪ ಲತೆಯಂ ನವರತ್ನ ವಿತಾನಮಾಡಿದ ।
ತ್ತಗುರುವ ಧೂಪಧೂಮ ಲತೆ ತುಂಬಿಯ ನೀಲದ ಮೆಯ್ಗೆ ಹಾಸ್ಯಮಂ ॥
ಪಗಲನಿರುಳ್ಗೆ ಮಾಣಿಕದ ದೀವಿಗೆ ಕೈಸೆಜ್ಜೆಗೊಟ್ಟುದುತ್ಪತಾ ।
ಕೆಗಳನಿಲಂಗೆಮಾಡಿದುವು ಮಾರ್ಗ ನಿರೋಧಮನಾ ನಿವಾಸದೊಳ್ ॥ ೧೯೦ ।

ಆ ಮಂಟಪದ ಮಧ್ಯಪ್ರದೇಶದೊಳ್—

ಕಂ ॥ ಮರಕತ ಮಂಗಲ ವೇದಿಕೆ
ಧರಾಂಗನಾ ಕೇಶಬಂಧದಂತಿರೆ ಮುಕ್ತಾ ॥
ವಿರಚಿತ ರಂಗವಲಿ ಮನೋ
ಹರಮಾದುದು ತೊಳಗಿ ಪೊಳೆವ ತಲೆದುಡುಗೆಯವೋಲ್ ॥ ೧೯೧ ॥

ಪಸುರ್ವರಲ ಜಗಲಿಯೊಳ್ ರಂ
ಜಿಸಿದುದು ಚೆಂಬೊನ್ನ ಪಟ್ಟವಣೆ ಪಸುರೆಲೆಯಿಂ ॥
ಮುಸುಕಿದ ತಾವರೆಗೊಳದೊಳ್
ಪಸುರ್ಗಟ್ಟಿದು ಮರಲ್ದರಲ್ದ ಪೊಂದಾವರೆವೋಲ್ ॥ ೧೯೨ ॥

ಎಳ ಅಡಕೆಯ ಗೊನೆಯಿಂ ಮಾ
ತುಳುಂಗದಿಂ ನಾರಿಕೇಳಫಲದಿಂ ದ್ರಾಕ್ಷಾ ॥
ಫಳದಿಂ ಕಾಂಚನ ಕದಳೀ
ಫಳದಿಂದೊಪ್ಪಿದುದು ವೇದಿಕಾಂತರ್ಭಾಗಂ ॥ ೧೯೩ ॥

ಮ ॥ ಬಿಸಸೂತ್ರ ತ್ರಿತಯಂ ಯವಾಂಕುರ ಕೃತ ಗ್ರೈವೇಯಕಂ ಪಲ್ಲವೋ ।
ಲ್ಲಸಿತಾದರ್ಶ ಸುದರ್ಶನೀಯಮಮಲ ಸ್ರಕ್ಸ್ಯಂದರಂ ಪಂಚರ ॥

ತ್ನ ಸಮುಸ್ತೌಷಧಿ ಗರ್ಭಮುಕ್ಷತ ಯುತಂ ದೂರ್ವಾಂಚಿತಂ ಸರ್ವಥಾ ।
ನ್ಯ ಸಮುತ್ತುಂಭಿತ ಪೂರ್ಣ ಕುಂಭಮೆಸೆದತ್ತಾವೇದಿಕಾ ಮಧ್ಯದೊಳ್ ॥ ೧೨೪ ॥

ಅನುರೂಪಂ ಸ್ಫಟಿಕಾಬ್ಜದೊಳ್ ದಧಿ ಸುವರ್ಣ ಕ್ರೌಂಚದೊಳ್ ರೋಚನಂ ।
ಘನ ಹಾರೀತಕ ಹಂಸಿಯೊಳ್ ಹರಿತ ದೂರ್ವಂ ರಾಜತ ದ್ರೋಣಿಯೊಳ್ ॥
ಘನಸಾರಂ ಹರಿನೀಲ ಶುಕ್ತಿಕೆಗಳೊಳ್ ಕಸ್ತೂರಿ ಮಾಣಿಕ್ಯ ಭಾ ।
ಜನದೊಳ್ ಕುಂಕುಮ ಪಂಕಮೇಂ ಮೆಱೆದುವೋ ಮಾಂಗಲ್ಯ ಸಾಕಲ್ಯಮಂ॥

ಕಂ ॥ ಮಿಸುಗುವ ಕೆಂಪಳಿರಂ ದ್ವಿಗು
ಣಿಸೆ ಮೇಗೊಗೆವಂಶುಮಾಲೆ ವೇದಿಕೆಯೊಳ್ ರಂ ॥
ಜಿಸಿದುವೆಳನೇಸಱಿಂ ನೆನೆ
ಯಿಸುವ ಚತುಷ್ಕೋಣ[1] ಶೋಣ ಮಣಿಕಲಶಂಗಳ್ ॥ ೧೨೬ ॥

ಆ ಸಕಲ ಮಂಗಲದ್ರವ್ಯ ಸಂಸೇವ್ಯಮಾನ ಮಣಿವೇದಿಕಾ ಮಧ್ಯ ವಿಶಾಲ ಕಲ ಧೌತ ಪೀಠದೊಳ್ ರತಿಯುಂ ರತಿಪತಿಯುಮಿರ್ಪವೋಲ್ ದಂಪತಿಗಳಿರ್ದರಲ್ಲಿ ಪೂರ್ವ ಭಾಗದೊಳ್ ದಶರಥನಿಂದ್ರನಂದದಿನುಪೇಂದ್ರ ಭರತ ಶತ್ರುಘ್ನ ಸಮನ್ವಿತನು ಮನೇಕ ಮಕುಟಬದ್ಧ ಪರಿವೃತನುಮಾಗಿರ್ದಂ; ಮತ್ತಮಪರಭಾಗದೊಳಪರಾಜಿತಾ ಮಹಾದೇವಿ ಸುಮಿತ್ರೆ ಸುಪ್ರಭೆ ಕೈಕೆವೆರಸನಂತ ಸಾಮಂತ ಸೀಮಂತಿನಿಯರ ನಡುವೆ ಸುರ ಪುರಂಧ್ರಿಯರ್ಬಳಸಿದಿಂದ್ರಾಣಿಯಂತೆ ಮಹಾ ಮಹಿಮೆವೆತ್ತಿರ್ದುದುಮಿತ್ತಲ್–

ಉ ॥ ರನ್ನದ ಬಾಯಿನಕ್ಕೆ ಪಲವಂದದ ಚಂದದ ಸೀರೆಗೆನ್ನವ ।
ರ್ತನ್ನವರೆನ್ನದಿತ್ತೊಸಗೆಗೀ ನೆಲದೊಳ್ ಪೊಱಗಾರುಮಿಲ್ಲೆನಲ್ ॥
ಮನ್ನಿಸಿ ಮೈಮೆಯಂ ಮೆಱೆದಳಂದು ವಿದೇಹಿ ವಿವಾಹ ಗೇಹದೊಳ್ ।
ಸನ್ನಿದಮಾದ ಕಲ್ಪಲತೆಯೋ ಸುರಧೇನುವೊ ಪೇಟ್ಪಿಮೆಂಬಿನಂ ॥ ೧೨೭ ॥

ಅಂತಪಾರಪುಣ್ಯ [2]ಪುಣ್ಯಾಂಗನಾಜನಕ್ಕೆ ಪಂಚರತ್ನದುಪಾಯನಮನಿತ್ತು ಪಳಂಚಿನುಂಗುರದ ನೂಪುರದ ನೂಲ ತೊಂಗಲ ಸಂಕಲೆಯ ಪಿಂಡುಗಂಕಣದ ಕಲ ಕಲ ನಿನದಮತನು ಚಾಪ ಲತಾ ಟಂಕಾರ ಶರಮೋಕ್ಷ ಹೂಂಕಾರದಂತೆ ಕಿವಿಸದ್ದಂ ಕಿಡಿಸೆ, ಕಡೆಗಣ್ಣ ಕಾಂತಿ ಕುಡಿಮಿಂಚಿನ ಗೊಂಚಲಂತೆ ಸಂಚಲಿಸೆ, ಪೆಂಡವಾಸದ ವಿಲಾಸಿನೀ ಜನಂಗಳಂಗಜ ಜಂಗಮ ಲತೆಯಂ ಸುತ್ತಿದೆಳಲತೆಗಳಿನೆ ವಿವಿಧೋಪಾ ಯನ ರತ್ನ ಪಟಲಿಕೆಗಳಂ ಪಿಡಿದೊಡನೆ ಬರೆ ಬಂದು—

---

1. ಪೂರ್ಣ. ಚ.
2. ಪಣ್ಯಾಂಗನಾ. ಕ. ಖ. ಗ.

ಉ ॥ ಕತ್ತುರಿಬೊಟ್ಟನಿಟ್ಟು ಬಿಡುಮುತ್ತಿನ ಸೇಸೆಯನಿಕ್ಕಿ ಮಾಲೆವೂ ।
ವೆತ್ತಿ ವಿಚಿತ್ರ ವಸ್ತ್ರ ಮಣಿಭೂಷಣಮಂ ಮಣಿಭಾಜನಂಗಳಿಂ ॥
ದಿತ್ತು ವಿದೇಹಿ ಸಾರ ಘನಸಾರದ ರನ್ನದ ಬಾಯಿನಂಗಳಿಂ ।
ಚಿತ್ತ ವಿಕಾಸಮುಂ ಪಡೆದಳಂದಪರಾಜಿತೆಗಂ ಸುಮಿತ್ರೆಗಂ ॥ ೧೨೮ ॥

ಆ ಸಮಯದೊಳ್ ಜನಕನಭಿಜನ ಸನಾಭಿಜನ ಸಮನ್ವಿತಂ ಗಣಕ ಗಣ ಪುನಃಪುನರುಚ್ಚರಿತ ಪುಣ್ಯಾಹ ಪ್ರಶಸ್ತ ರವದೊಡನೆ ಅಗಣ್ಯ ಪುಣ್ಯ ಪುಣ್ಯಾಂಗನಾ ಜನದಾಶೀರ್ವಾದನಾದವೊದವೆಯುಂ, ಮಾಂಗಲ್ಯ ಗೀತ ಮಧುರ ಧ್ವನಿಗಳೊಡನೆ ಮುಂಗಲ ಪಾಠಕ ಪಠನ ಧ್ವನಿಗಳುಣ್ಮೆ ಪೊಣ್ಮೆಯುಂ, ರಘುಕುಲ ರಾಜ ಭವನ ಕಲ ಶೋದ್ಧರಣಮೆ[1]ನಿಸಿ ಶುಚಿ ಸುರಭಿ ಸಲಿಲ ಪೂರ್ಣ ಸುವರ್ಣ ಕಲಶಮನೆತ್ತಿ—

ಮ ॥ ಜಗತೀ ಜಂಗಮ ಕಲ್ಪವೃಕ್ಷಮಿದೆ ಕೈವಂದತ್ತೆನಲ್ ಬಾಹು ಶಾ ।
ಖೆಗಳೊಳ್ ಪೊಂಗಳಸಂ ಮನಂಗೊಳಿಸೆ ಭೂಪಂ ತನ್ನ ಸಂತಾನ ವೃ ॥
ದ್ಧಿಗೆ ಪೊಯ್ನಾರೆಱಿವಂತೆ ಹರ್ಷ ಪುಲಕಂ ಕೈಗಣ್ಮೆ ಹರ್ಷಾಶ್ರು ಕೈ ।
ಮಿಗೆ ಕೈನೀರೆಱಿದಂ ಪಳಂಚೆ ದಿಸೆಯಂ ಮಾಂಗಲ್ಯ ತೂರ್ಯ ಸ್ವನಂ ॥ ೧೨೯ ॥

ಅಂತು ಪಾಣಿಗ್ರಹಣಂಗೆಯಿಸುವುದುಂ—

ಕಂ ॥ ತೆಂಕಣ ಗಾಳಿಯ ಸೋಂಕಿನೊ
ಳಂಕುರಿಸಿದ ಚೂತಲತೆಯವೋಲ್ ಕೆಂದಳಮಂ ॥
ಸೋಂಕೆ ಬಲ ಕರತಳಂ ಪುಳ
ಕಾಂಕುರವೊದವಿದುವು ಜಾನಕಿಯ ತನುಲತೆಯೊಳ್ ॥ ೧೩೦ ॥

ಅಪಮಾನಿಸಿದಂ ಬಾಲಾ
ತಪಮೆಳಸಿದ ಪುಂಡರೀಕ ಷಂಡದ ಸೊಬಗಂ ॥
ಚಪಲಾಕ್ಷಿಯ ಕೋಮಳ ಪಾ
ಣಿಪಲ್ಲವ ಸ್ಪರ್ಶ ಹರ್ಷದಿಂ ರಘುರಾಮಂ ॥ ೧೩೧ ॥

ಅತಿ ಲಲಿತಾಕೃತಿಯಂ ದಂ
ಪತಿಯಂ ನೋಡಿದುದು ಪುರಜನಂ ನೋಡುವವೋಲ್ ॥
ಶತಮಖನಂ ಶಚಿಯಂ ರತಿ
ಪತಿಯಂ ರತಿಯಂ ಹಿಮಾಂಶುವಂ ರೋಹಿಣಿಯಂ ॥ ೧೩೨ ॥

ಅಂತು ನೆರೆದು ನೋಟ್ಟಾಗಳ್—

1. ನಿಸಿದ ರಾಮಚಂದ್ರಂಗೆ ಸುರುಚಿರ. ಗ. ಘ.

ಕಂ ॥ ಅನುವಿಸಿದುದು ರಜತಾಚಲ
ದನರ್ಘ್ಯ ಮಣಿ ವಿಕಟ ಕೂಟಮಂ ದಶರಥರಾ ॥
ಮನ ಮಣಿಮಯ ಮಕುಟಂ ಕಾ
ಮನ ಬಿಲ್ಲಂ ಬೀಱೆ ಬೇಱೆ ನಿಜದೀಧಿತಿಗಳ್ ॥ ೧೩೩ ॥

ಮರಕತ ಮಣಿ ಕುಂಡಲ ರ
ಶ್ಮಿರೇಖೆಯಿಂ ಗಂಡ ಮಂಡಳಂ ಸೇವಾಳಂ ॥
ಬೊರೆದ ಸಿತಕಮಲದಂತಿರೆ
ಕರಮೆಸೆದಂ ನೃಪಕುಮಾರ ಚೂಡಾರತ್ನಂ ॥ ೧೩೪ ॥

ಜಯಲಕ್ಷ್ಮಿಯ ಮಣಿಪೀಠಂ
ಭಯಾನತ ಕ್ಷತ್ರ ವಜ್ರಪಂಜರಮಿದೆನಲ್ ॥
ನಯನೋತ್ಸವಮಂ ಪಡೆದುವು
ಜಯಧೀರನ ಬಾಹುಯುಗಲದಂಗದ ಯುಗಳಂ ॥ ೧೩೫ ॥

ಉಭಯ ಪ್ರಕೋಷ್ಠ ಶಾಖಾ
ಸುಭಗ ಧನುರ್ಗುಣ ಕಿಣಂಗಳುಂ ಮಣಿಮುದ್ರಾ ॥
ಪ್ರಭೆಯುಂ ಗೆಲೆವಂದುವು ಬಾ
ಹು ಭುಜಂಗನ ಕೊರಲ ಕಱೆಯ ಫಣಮಣಿ ರುಚಿಯಂ ॥ ೧೩೬ ॥

ಜಳ ಬುದ್ಬುದ ಮಾಲೆಗಳವಿ
ಚಳಂಗಳಿಂಗಡಲ ಮಡುವಿನೊಳ್ ಪೊಳೆವವೊಲೇಂ ॥
ಪೊಳೆದುವೊ ನಿಸ್ತುಲ ಮುಕ್ತಾ
ವಳಿಗಳ್ ಹಲಧರ ವಿಶಾಲ ವಕ್ಷಸ್ಸ್ಥಲದೊಳ್ ॥ ೧೩೭ ॥

ಉ ॥ ಪಿಂಗಿದುದಂಗಜಂಗೆ ಕಡುಗಾಡಿಯ ಗರ್ವಮಪೂರ್ವಸೃಷ್ಟಿ ಚೆ ।
ಲ್ವಿಂಗಿನಿ[1]ತೆಡ್ಡಮಪ್ಪರೆ ಫಣೀಂದ್ರ ಸುರೇಂದ್ರ ಕುಮಾರರೆಂದು ಕ ॥
ಣ್ಪಿಂಗದೆ ಪತ್ತೆ ಚಿತ್ತದೊಡನೀಕ್ಷಿಸಿದತ್ತು ಪುರಾಂಗನಾ ಜನಂ ।
ಮಂಗಳ ಭೂಷಣ ಪ್ರಚಯದಿಂದಭಿರಾಮನೆನಿಪ್ಪ ರಾಮನಂ ॥ ೧೩೮ ॥

ರಾಜಕುಮಾರರಿರ್ಕೆ ಸುರರಾಜ ಕುಮಾರಕರೊಳ್ ಮನುಷ್ಯ ಕ ।
ನ್ಯಾ ಜನಮಿರ್ಕೆ ಮಿಕ್ಕ ಸುರಕನ್ಯೆಯರೊಳ್ ದೊರೆಯಪ್ಪರಾರೊ ಪೇ ॥

---

1. ತಪ್ಪೊಡಪ್ಪರೆ. ಚ.

ಟೀ ಜಿತಕಂತುಗೀ ಜಿತ ಮನೋಭವಕಾಂತೆಗೆನುತ್ತುಮಂಗನಾ ।
ರಾಜಿ ನಿರೀಕ್ಷಿಸಿತ್ತು ರಘುನಂದನನಂ ಜನಕಾತ್ಮಜಾತೆಯಂ ॥ ೧೩೯ ॥

ಚ ॥ ತೊಡವುಗಳೀ ಸರೋಜದಳ ನೇತ್ರೆಯ ಮೆಯ್ವೆಳಗಿಂದುಪಾಶ್ರಯಂ ।
ಬಡೆದುವು ನೋಟ್ಪರುಮ್ಮಳಿಸುವಂತಿರೆ ರತ್ನವಿಭೂಷಣಂಗಳಿ ॥
ರ್ದೆಡೆಯ ವಿಳಾಸಮಂ ಮಱಿಪಿದಪ್ಪುವೆನಲ್ ತೊಡವಾಕೆಗೊಪ್ಪಮುಂ ।
ಪಡೆವೆಡೆಗಲ್ಲಮಾ ವಧುಗೆ ಮಂಗಳಕಾರಣಮಲ್ತೆ ಭೂಷಣಂ ॥ ೧೪೦ ॥

ಎಂದು ಪುರಜನಂಗಳತಿ ಕುತೂಹಲದಿನವಲೋಕಿಸುತ್ತಿರ್ಪುದುಮಾ ವಿವಾಹ ಮಂಗಲ ಮಹೋತ್ಸವ ಮಹಾಮಹಿಮೆಯೊಳ್—

ಮ ॥ ಸ್ರ ॥ ಪೆಱರಾರಿಂತೀವರೆಂಬೀ ಜನದ ಕಳಕಳಂ ಪೊಣ್ಮೆ ಸಾಮ್ರಾಜ್ಯಚಿಹ್ನಂ।
ಪೊಱಗಾಗತ್ಯಂತ ವಸ್ತ್ರಾದಿಗಳನಖಿಲ ಲೋಕಕ್ಕೆ ಸಂಕಲ್ಪವರ್ಷಂ ॥
ಕಱೆದತ್ತೆಂಬಂತು ಧಾತ್ರೀಪತಿ ಜನಕನುದಾತ್ತಂ ಮಹೋತ್ಸಾಹಚಿತ್ತಂ ।
ನೆಱೆದತ್ತಿಲ್ಲೆನ್ನ ದಾನಕ್ಕಖಿಲ ಜನಮೆನುತ್ತುಂ ಮೊಗಂನೋಡದಿತ್ತಂ॥ ೧೪೧॥

ಅಂತು ಜನಕಂ ಬೀಯದ ಛಾಗದ ಪೆರ್ಮೆಯಂ ಮೆಱೆವುದುಂ ರಾಮ ಚಂದ್ರಂ ಚಂದ್ರೋದಯದ ಸಮುದ್ರದಂತೆ ಪೆರ್ಚುವಡೆದು—

ಮ ॥ ಪಡೆದಂ ಶಾಶ್ವತಲಕ್ಷ್ಮ್ಯಯಂ ಪರಹಿತ ವ್ಯಾಪಾರಮಂ ಪಾಲಿಸಲ್ ।
ಪಡೆದಂ ಪನ್ನಗರಾಜ ದಿವ್ಯ ಧನುವಂ ಭೂಚಕ್ರಮಂ ರಕ್ಷಿಸಲ್ ॥
ಪಡೆದಂ ದರ್ಪಕ ರೂಪ ದರ್ಪಮನದಿರ್ಪಲ್ ಮೂರ್ತಿಯಂ ಕೀರ್ತಿಯಂ ।
ಪಡೆದಂ ಕೇಟ್ಪಡಿಸಲ್ ಸುಧಾಜಲಧಿಯಂ ಸಾಹಿತ್ಯವಿದ್ಯಾಧರಂ ॥ ೧೪೨ ॥

ಇದು ಪರಮ ಜಿನಸಮಯ ಕುಮುದಿನೀ ಶರಚ್ಚಂದ್ರ ಬಾಳಚಂದ್ರ
ಮುನೀಂದ್ರ ಚರಣ ನಖ ಕಿರಣ ಚಂದ್ರಿಕಾಚಕೋರ ಭಾರತೀ
ಕರ್ಣಪೂರ ಶ್ರೀಮದಭಿನವಪಂಪ ವಿರಚಿತಮಪ್ಪ
ರಾಮಚಂದ್ರ ಚರಿತ ಪುರಾಣದೊಳ್
ಸೀತಾ ಸ್ವಯಂವರ ವರ್ಣನಂ
—ಪಂಚಮಾಶ್ವಾಸಂ—

ಷಷ್ಠಾಶ್ವಾಸಂ

ಕಂ ॥ ಶ್ರೀರಾಮಂ ವಿಶದ ಯಶ
ಶ್ರೀರಾಮಾ ರಮಣನರ್ಥಿಜನತಾ ಸುರಭೂ ॥
ಜಾರಾಮಂ ಧರ್ಮೋದ್ಯಮ
ಧೌರೇಯನುದಾತ್ತ ಚಿತ್ತನಭಿನವಪಂಪಂ ॥ ೧ ॥

ಅಂತು ರಾಮಲಕ್ಷ್ಮಣರೊಳುದಿತೋದಿತಮಾದಗಣ್ಯ ಪುಣ್ಯ ಪ್ರಭಾವಮುಂ ಕಂಡು—

ಮ ॥ ಸಿರಿಯುಂ ಮೈಮೆಯುಮಾದುವಗ್ರಜರೊಳಾಯ್ತಿಲ್ಲಿನ್ನೊಳಿಂಬೇವದಿಂ ।
ಭರತಂ ಲೋಭರತಂ ವಿಷಾದಭರ ತಂದ್ರೀಭೂತ ಚಿತ್ತಂ ತಪೋ ॥
ಭರ ತೃಷ್ಣಾ[1]ಪರನಪ್ಪುದಂ ತಿಳಿದು ತದ್ವೃತ್ತಾಂತಮುಂ ಕೈಕೆ ಮೋ ।
ಹರಸಂ ಕೈಮಿಗೆ ಕಾದಲಂಗೆ ಪತಿಗಂದಿಂತೆಂದಳೇಕಾಂತದೊಳ್ ॥ ೨ ॥

ಕಂ ॥ ಭರತನ ವದನಾಂಭೋಜಂ
ಕೊರಗಿದುದು ಮನಸ್ಸರೋಜದೊಡನೆತ್ತಾನುಂ ॥
ಪರಿಣಯನೋತ್ಸವ ಚಿಂತಾ
ಭರಮಾತನ ಬಗೆಗೆ ಬಂದುದಾಗಲಿವೇಟ್ಕುಂ ॥ ೩ ॥

ಕನಕಂಗಂ ಸುಪ್ರಭೆಗಂ
ಜನಿಯಿಸಿದ ವಿಶಾಲನೇತ್ರೆ ಕನಕಪ್ರಭೆಯಂ ॥
ಜನನಾಥ ಮದುವೆಮಾಡಾ
ತನನಿರದೆ ತೊಡರ್ಚು ಮೋಹಪಾಶದ ತೊಡರೊಳ್ ॥ ೪ ॥

ಎನೆ ಮನದೆಕೊಂಡು ಜನಕನುಮಂ ಕನಕನುಮಂ ಬರಿಸಿ—

ಕಂ ॥ ಅನುಬಂಧ ಪರಂಪರೆಯಂ
ಜನಿಯಿಸಲೆಮಗಟ್ಟಿಯಾದುದೀವುದು ನಿಜನಂ ॥
ದನೆಯನನುರೂಪೆಯಂ ಮ
ತ್ತನಯಂಗೆನೆ ದಶರಥಂಗೆ ಕನಕಂ ನುಡಿದಂ ॥ ೫ ॥

---

1. ಭರನಪ್ಪುದಂ. ಕ. ಖ. ಚ.

ಕಂ ॥ ಮುನ್ನಮೆ ಭರತಂಗೀವೆಂ
ಕನ್ನೆಯನೆಂಬಟ್ಟಿಪು ಮನದೊಳಿರೆ ಮನದಟ್ಟಿಪಂ ॥
ಬಿನ್ನವಿಸಲಿರ್ದೆನಾ ಬೆಸ
ನನ್ನಿಮ್ಮಡಿ ಬೆಸಸೆ ಬಯಕೆ ಕೂಡಿದುದೀಗಳ್ ॥ ೬ ॥

ಎಂದಂದಿನ ದಿನದೊಳೆ ಮೌಹೂರ್ತಿಕ ನಿರೂಪಿತ ಶುಭಮುಹೂರ್ತದೊಳ್—

ಕಂ ॥ ಇನಿವಿರಿದು ವಿಭವಮಾದುದೆ
ಜನಕ ತನೂಭವೆಯ ಮದುವೆಯೊಳಮೆಂಬಿನೆಗಂ ॥
ಕನಕಪ್ರಭೆಯಂ ಪದೆಪಿಂ
ಕನಕಂ ಭರತಂಗೆ ಮದುವೆಮಾಡಿದನಾಗಳ್ ॥ ೭ ॥

ಆ ವಿವಾಹ ವಿಭವದೆಸಕಕ್ಕುಮವರ ಭುಜಬಲದ ಮಸಕಕ್ಕುಂ ವಿದ್ಯಾಧರಮಹತ್ತರಂ ವಿಸ್ಮಿತಚಿತ್ತನಾಗಿ ಮಿಥಿಲೆಯಿಂ ರಥನೂಪುರಚಕ್ರವಾಳಪುರಕ್ಕೆ ಬಂದು ನಿಜ ಪತಿಯನಿಂದುಗತಿಯಂ ಕಂಡು—

ಚ ॥ ಗಣನೆಗಳುಂಬವಾಗೆ ಮೊದಲಿಂ ತುದಿಯೆಯ್ದಿ ತಗುಳ್ದು ರಾಮಲ ।
ಕ್ಷ್ಮಣರ[1] ಮಹಾಪ್ರಭಾವಮನದಂ ನೆರೆ ಬಣ್ಣಿಸೆ ಕೇಳ್ದು ಖೇಚರಾ ॥
ಗ್ರಣಿ ಕಿಱಿದಾಯ್ತು ನಮ್ಮದಸೆ ಕೇವಲರಲ್ಲರವರ್ ದಿಟಕ್ಕೆ ಕಾ ।
ರಣ ಪುರುಷರ್ ತ್ರಿಖಂಡ ಭರತೋರ್ವಿಗೆ ವಲ್ಲಭರಾಗದಿರ್ಪರೇ ॥ ೮ ॥

ಎಂದು ಬಗೆಬೆದಱಿ ವಿದ್ಯಾಧರಾಧಿರಾಜನುಷಸ್ಸಮಯದ ರಾಜಮಂಡಲದಂತೆ ನಿಸ್ತೇಜನಾಗಿರ್ಪುದುಮಾ ಖಚರವಲ್ಲಭ ತನೂಭವಂ ಪ್ರಭಾಮಂಡಲಂ ಮನಃಕರಂಡಕದೊಳಾ ಕನ್ಯಾರತ್ನಮುಂ ತಳೆದು—

ಕಂ ॥ ಅಯ್ದು ಮಲರ್ಗಣೆಗಳಂ [2]ಕಡು
ಕೆಯ್ದಿಸೆ ಮದನಂ ವಿಯೋಗಿ ಯೋಗಿಯ ತೆಱದಿಂ ॥
ದಯ್ದುಂ ವಿಷಯ ಸುಖಕ್ಕಂ
ಮೆಯ್ದೆಗೆದಾಕೆಯನೆ ಬಿಡದೆ ಜಾನಿಸುತಿರ್ದಂ ॥ ೯ ॥

ಅಂತು ಕನ್ಯಾಸಕ್ತಿಯಿಂ ಕನ್ಯಾಸಕ್ತನಾದಾದಿತ್ಯನಂತೆ ಪ್ರಭಾಮಂಡಲಂ ಹತಪ್ರಭಾಮಂಡಲನಾಗಿ ವಸಂತಧ್ವಜನೆಂಬ ಸಹಚರಂಗೆ ಸೀತಾ ವಿರಹದಿಂದಾದ ತನ್ನ ಮನೋವಿಷಾದಮನಱಿಪಿ—

---

1. ಮಹತ್ವಮಂ ಮಹಿಮೆಯಂ. ಕ. ಖ. ಗ. ಘ. 2. ಕಡಿ.

ಕಂ ॥ ಆರಮಣಿಯಧರಮಣಿಯ ಸು
ಧಾರಸದಿಂದಲ್ಲದೆನ್ನ ಮನಸಿಜ ತಾಪಂ ॥
ತೀರದು ತೀರ್ಚು[1]ವುದೆನ್ನ ಮ
ನೋರಥಮನಿದರ್ಕೆ ನೀನೆ ಸಖ ಸಾರಥಿಯೈ ॥ ೧೦ ॥

ಎಂಬುದುಮಾತನ ಕೆಲದೊಳಿರ್ದ ಬೃಹತ್ಕೇತುವೆಂಬ ವಿದ್ಯಾಧರನಿಂತೆಂದಂ–

ಉ ॥ ಪೋದುವು ನಮ್ಮಬಿಲ್ಗಳಿರಡುಂ ಜನಕಾತ್ಮಜೆಗಗ್ನಿಸಾಕ್ಷಿಯಿಂ ।
ದಾದುದು ರಾಮನಾಳ್ಕದುವೆ ಬಿಲ್ದೆಱೆದೆತ್ತು ಬರ್ದುಂಕೆ ಪುಣ್ಯದಿಂ ॥
ಪೋದ ಮಹತ್ತರಂ ಮಗುಟ್ಟಿನಾಕೆಯ ಪಂಬಲೊಳಪ್ಪುದೇಂ ರಣಾ
ಸ್ವಾದನ ಲಂಪಟರ್ ನೆರೆದು ಕಾದುವಮಪ್ಪೊಡೆ ರಾಮಲಕ್ಷ್ಮಣರ್ ॥ ೧೧ ॥

ಎನಲೊಡಂ—

ಕಂ ॥ ಪುರ್ವಿನ ಗಂಟುಂ ಕಣ್ಣೊಳ್
ಪರ್ವಿದ ಕಿಸುಸೆರೆಗಳುಂ ಕಪೋಲ ಸ್ಥಲದೊಳ್ ॥
ಕೊರ್ವಿದ ಬೆಮರ್ವನಿಯುಂ ಕರ
ಮರ್ವಿಸೆ ಮುನಿಸಿಂ ಕುಮಾರನಂದಿಂತೆಂದಂ ॥ ೧೨ ॥

ಉ ॥ ಮಾನವರೆನ್ನೊಳಯ್ಯ ಕಲಿಗಳ್ ರಣಕೇಳಿಗೆ ಸಾಲ್ವರೆಂಬಿದಂ ।
ನೀನುಟಿ ರಾಮಲಕ್ಷ್ಮಣರನಶ್ರಮದಿಂ ಬೆದಜಿಟ್ಟೆ ತಂದಪೆಂ ॥
ಜಾನಕಿಯಂ ಕುಲಾಗತ ಧನುರ್ಯುಗಳಂಬೆರಸೆಂದು ಕೀಜಿ ಪಂ
ಚಾನನದಂತೆ ಗರ್ಜಿಸಿ ವಿಮಾನಮನೇಱಿದನಾಕುಮಾರಕಂ ॥ ೧೩ ॥

ಚ ॥ ಕುಲಮದವೊಂದು ರೂಪಮದವೊಂದು ವಯೋಮದವೊಂದು ತನ್ನದೋ ।
ರ್ಬಲಮದವೊಂದು ಜಾತಿಮದವೊಂದು ಕಲಾಮದವೊಂದು ದೇವತಾ ॥
ಬಲಮದವೊಂದು ರಾಜ್ಯಮದವೊಂದಿನಿತಲ್ಲದೆ ಬೇಱೆ ರಾಗಮು ।
ಗ್ಗಳಿಸಿದ ದೋಷದೃಷ್ಟಿ ವಿಷಯಾತುರರೇಂ ಗಡ ಮುಂದುಗಾಣ್ಬರೇ ॥ ೧೪ ॥

ಅದಱಿಕ್ಕಾಮದಾ[2]ವಿಲಂಬಲನನಬಲನಂ ಬಗೆವಂತೆ ಬಗೆದು ಕತಿಪಯ ಖಚರ ಪರಿಜನಂಬೆರಸು ಗಗನಮಾರ್ಗದಿಂ ಪೋಗುತ್ತುಂ ದಿಗವಲೋಕನಂಗೆಯ್ದು ತನ್ನ ಮುನ್ನಿನ ಜನ್ಮದೊಳ್ ಕುಂಡಲ ಮಂಡಿತನಾಗಿರ್ದಂದಿನ ವಿದರ್ಭ ನಗರಮಂ ಕಾಣ

---

1. ವೆನೆಸ್ನ. ಚ. 2. ವಲಂಬನನವರನಬಲರಂ. ಫ.

ಲೊಡಂ ಜಾತಿಸ್ಮರನಾಗಿ ಮೂರ್ಛೆಗೆ ಸಲ್ವುದುಮೊಡ[1]ನೆ ವಿಯಚ್ಚರರಾತನಂ ರಥ ನೂಪುರಚಕ್ರವಾಳಪುರಕ್ಕಿಂದುಗತಿ ಖಚರ ಚಕ್ರವರ್ತಿಯ ಕೆಲಕ್ಕೆ ತರ್ಪುದುಂ—

ಕಂ ॥ ಘನಸಾರ ಸಲಿಲಮುಂ ಚಂ
ದನ ರಸಮುಂ ತಳಿದು ಬೀಸೆ ಬಿಜ್ಜಣಿಗೆಯ ತ ॥
ಣ್ಣನೆ ತೀಡುವೆಲರ ತೀಟದಿ
ನಿನಿಸಾನುಂ ತಡೆದು ಮೂರ್ಛೆಯಿಂದೆಚ್ಚತ್ತಂ ॥ ೧೫ ॥

ಆಗಳಾ ವಿಯಚ್ಚರಾಧಿಪತಿ ಕುಮಾರನ ಮುಖಾರವಿಂದಮಂ ನೋಡಿ—

ಕಂ ॥ ಜನಕಜೆಯಿಂ ನೂರ್ಮಡಿ ಮಿಗಿ
ಲೆನಿಪ್ಪ ಕಡುಚೆಲ್ವುವೆತ್ತ ಖೇಚರ ಕನ್ಯಾ ॥
ಜನದೊಳ್ ವಿವಾಹ ಮಂಗಲ
ಮನೊಡರ್ಚುವೆನಮ್ಮ ಬಿಸುಡು ಮನದುಮ್ಮಳಮಂ ॥ ೧೬ ॥

ಎಂಬುದುಂ ಪ್ರಭಾಮಂಡಲಂ ಕಿಂಚಿದುನ್ನಮಿತ ಕಂಧರನಿಂದುಗತಿಯ ವದನೇಂದುವಂ ನೋಡಿ ಮುಕುಳಿತ ಕರ ಕಮಲನೆಂದನೆನ್ನ ಮೂರ್ಖಾಪ್ರಪಂಚಕ್ಕಿದು ನಿಮಿತ್ತವಲ್ತೀ ಪೋದ ಭವದೊಳಾಂ ಪ್ರತಾಪಸಿಂಹನೆಂಬ ದೇಶಾಧೀಶಂಗೆ ಕುಂಡಲ ಮಂಡಿತನೆಂಬೆನಾಗಿ ಪುಟ್ಟಿ ತಂದೆಗವಿಧೇಯನಾಗಿ ಪೋಗಿ—

ಕಂ ॥ ಬಿಟ್ಟಜನನೆನೆಗೆ ಪಾಪದ
ಬಟ್ಟೆಯೆ ಪೆರ್ವಟ್ಟಿಯಾಗೆ ನಾಡಂ ಬೀಡಂ ॥
ಸುಟ್ಟಜಿದು ಕಟ್ಟಿ ಕವರ್ದಾಂ
ಕಟ್ಟಾಳ್ತನದಿಂ ವಿದರ್ಭ ನಗರದೊಳಿರ್ದಂ ॥ ೧೭ ॥

ಎನಗರಸಿ ಮಾಡಿದೆಂ ಕಪಿ
ಲನೆಂಬನಾಪುರದೊಳಿರ್ಪನೊರ್ವಂ ದ್ವಿಜನಾ ॥
ತನಪೆಂಡತಿಯಂ ದರ್ಪಾಂ
ಧನೆನಾಡದ ಗೊಡ್ಡಮೇನುಮಿಲ್ಲೆಂಬಿನೆಗಂ ॥ ೧೮ ॥

ಅಂತಿರ್ಪುದುಂ—

---

1. ನೆಯ. ಕ. ಖ. ಗ.

ಕಂ ॥ ಅನರಣ್ಯನ ಪಡೆವಳ್ಳಂ ನಾನಾಂಬುಕ
ಮುನಿದಿಱುದೋಡಿಸಿದೊಡೋಡಿ ಪರ ಮಂಡಲದೊಳ್ ॥
ಜಿನಮುನಿ ಮುಖ್ಯಂ ಕುಡೆ ಪಡೆ
ದೆನಣುವ್ರತಮಂ ವಿನೇಯಜನ ಸಮ್ಮತಮಂ ॥ ೧೯ ॥

ಅಂತಾಮಾರ್ಗಮಂ ಪತ್ತುವಿಡದೆ ನಡೆದು ಜೀವಿತಾವಧಿಯೊಳ್ ದೇವಗತಿ ವಡೆದಾನುಮೆನ್ನ ದೇವಿಯುಮಾ ದೇವಲೋಕದಿಂ [1]ಬಟ್ಟಿಲ್ಲಿ ಬಂದಿಲ್ಲಿ ಜನಕನ ಮಹಾದೇವಿಯಪ್ಪ ವಿದೇಹಿಯ ಗರ್ಭದೊಳಮುಳ್ಗಳಾಗಿಪುಟ್ಟಿ ಬಳೆವುದುಮಾಸಮಯದೊಳೆನ್ನ ಮುನ್ನಿನ ಪಗೆವನಪ್ಪ ಕಪಿಳಂ ದೇವಗತಿವಡೆದೆನ್ನಂ ಪಿಡಿದುಯ್ದು ಕೊಲಲೊಡರ್ಚಿ ಕಾಣಲೊಡಂ ಕರುಣೆಸಿ ತನ್ನ ಮಣಿಕುಂಡಲಮನೆನ್ನ ಕಿವಿಯೊಳಿಟ್ಟು ಪರ್ಣಲಘು ವಿದ್ಯೆಯಿಂ ನಿಮ್ಮ ತಲ್ಪದೊಳಿರಿಸಿ ಪೋಗೆ ದೇವರೆನ್ನಂ ಪಿರಿಯರಸಿಗೆ ದಯೆಗೆಯ್ದು ಕೊಂಡಾಡಿ ನಡಪಿ ಯುವರಾಜ ಪದವಿಯಂ ದಯೆಗೆಯ್ದಿರಾನುವೆನ್ನ ತಂಗೆಯಪ್ಪುದನಱಿಯದೆ ಸೀತಾದೇವಿಗಾಟಿಸಿದೆನೆಂದು ಬಿನ್ನವಿಸೆ—

ಕಂ ॥ ಖಚರಪತಿ ವಿಸ್ಮಯಾಕುಲಿ
ತ ಚಿತ್ತನಜ್ಞಾನ ತಿಮಿರ ವಿಘಟನ ದೀಪ ॥
ಪ್ರಚುರ ರುಚಿಯೆನಿಸೆ ಮಣಿ ಮಕು
ಟ ಚಂಕನ್ನತ್ಕಾಂತಿ ತಲೆಯನೇಂ ತೂಗಿದನೋ ॥ ೨೦ ॥

ಅಂತು ಬಗೆಯೊಳಿಗೆದ ವಿಸ್ಮಯಮೆ ತನಗೆ ವೈರಾಗ್ಯ ಹೇತುವಾಗೆ—

ಕಂ ॥ ದೊರೆಕೊಳ್ಳದೊಳ್ಳಿತಾದುದು
ತರುಣಿಯ ಸಂಬಂಧಮಿಾ ಸುತಂಗೆತ್ತಾನುಂ ॥
ದೊರೆಕೊಂಡೊಡೆನ್ನ ವಂಶಂ
ದುರಂತ ದುಷ್ಕೀರ್ತಿ ದಾವಶಿಖಿಗೊಳಗಕ್ಕುಂ ॥ ೨೧ ॥

ಉಪಕಾರಮನೊಡರಿಸುವಂ
ಗಪಕಾರಮನುಂಟುಮಾಟ್ಕುಮಪಕಾರಿಗೆ ತಾ ॥
ನುಪಕಾರಮನೊಡರಿಸುಗುಂ
ವಿಪರೀತಂ ಬಗೆದುನೋಡೆ ಕರಣ ಗ್ರಾಮಂ ॥ ೨೨ ॥

ಉ ॥ ಪೋದುವು ಮತ್ಕುಲಾಗತ ಧನುರ್ಯುಗವೆನ್ನ ಮಹೋನ್ನತಿಕ್ಕೆ ಕೇ ।
ಟಾದುದು ರಾಮಲಕ್ಷ್ಮಣರ ತೇಜಮಗುಂದಲೆಯಾದುದೆಂದು ನಿ ॥

1. ಬಳ್ಳಿ. ಚ.

ರ್ವೇದಮನಪ್ಪುಕೆಯ್ದು ಗಗನೇಚರಸಂಪದಮಂ ಪೊಗಟ್ಟಿವೆ ।
ತ್ತಾದೊರೆತಂ ಜರತ್ತೃಣ ಸಮಾನವೆನಲ್ ಬಗೆದಂ ವಿಯಚ್ಚರಂ ॥ ೨೩ ॥

ಅಂತು ವೈರಾಗ್ಯಪರಂ ನಿಜ ವಿಯಚ್ಚರಾಧಿರಾಜ ವಿಭವಮಂ ಪ್ರಭಾಮಂಡ ಲಂಗಿತ್ತಂದಿನದಿನದೊಳ್ ಮಹೇಂದ್ರೋದ್ಯಾನದೊಳಿರ್ಪ ಸರ್ವಭೂತಹಿತ ಭಟ್ಟಾರ ಕರ ಪದಪಯೋರುಹದ ಸಮಕ್ಷದೊಳ್ ದೀಕ್ಷೆಗೊಳ್ವುದುಂ—

ಕಂ ॥ ಇಂದುಗತಿಯಂತೆ ರಾಜ್ಯಮು
ನೊಂದರ್ಕಂ ಬಾಟ್ಟಿಗೆಯ್ಯದಾವನೊ ತೊಱೆದಂ ॥
ಮಂದರಧೈರ್ಯಂ ನೃಪನೆಂ
[1]ದೊಂದೇತೆಱಮಮುಸಮಿತಿ ಪೊಗಟ್ಟಿತ್ತಾಗಳ್ ॥ ೨೪ ॥

ಅಂತು ವಿಯಚ್ಚರಾಧಿರಾಜಂ ಮುನಿರಾಜ ಪದವಿಯನಪ್ಪುಕೆಯ್ವುದುಮಿತ್ತಲ್ ಜನಕಂ ಸಕಲ ಸಾಮ್ರಾಜ್ಯ ರಾಜ್ಯ ಚಿಹ್ನಮುಟ್ಟಿಯಲುಟ್ಟಿದ ವಸ್ತುವಾಹನಾದಿಗಳಂ ಸೀತೆಗೆ ಬಟ್ಟಿವಟ್ಟಿಗೊಟ್ಟು ಅಯೋಧ್ಯೆಗೆ ಕಟ್ಟಿಪುವುದುಂ ದಶರಥಂ ಕತಿಪಯ ಪ್ರಯಾಣಂಗಳಿಂ ವಿನೀತಾನಗರಮಂ ಪೊಕ್ಕಿರಲೊಂದುದಿವಸಂ—

ಕಂ ॥ ಸುಕೃತ ಸುರದ್ರುಮ ವನಪಾ
ಲಕನೆಂಬಿನಮತುಲ ವಿಚಕಿಲೋದ್ಗಮಮಂತಂ ॥
ದಕಲುಷ ಚಿತ್ತಂ ದಶರಥ
ಸಕಲೋರ್ವೀಶಂಗೆ ಋಷಿನಿವೇದಕನಿತ್ತಂ ॥ ೨೫ ॥

ಅಂತು ಸಮಯೋಚಿತ ಸುಮನೋದರ್ಶನಮನಿತ್ತು ದೇವ! ನಮ್ಮ ಸರಯೂ ನದೀತೀರದ ಮಹೇಂದ್ರೋದ್ಯಾನದೊಳ್ ಮನಃಪರ್ಯಯಜ್ಞಾನಿಗಳಪ್ಪ ಸರ್ವಭೂತ ಹಿತಭಟ್ಟಾರಕರ್ ಮಹಾಋಷಿ ಸಮುದಾಯಂಬೆರಸು ಯೋಗ ನಿಯೋಗದಿಂದಿರ್ದ ರೆಂದು ಬಿನ್ನವಿಸೆ—

ಕಂ ॥ ನೊಸಲೊಳ್ ಕರಪಲ್ಲವ ಪುಟ
ಮೆಸೆದಿರೆ ದಶರಥನೃಪಂ ಮುನೀಶ್ವರರಿರ್ದಾ ॥
ದೆಸೆಗೆ ಮೊಗಮಿತ್ತು ತನ್ನಿ
ರ್ದ ಸಿಂಹವಿಷ್ಟರದಿನೆಟ್ಟು ವಿನಮಿತನಾದಂ ॥ ೨೬ ॥

ಆಗಿ ಪರಿಮಿತ ಪರಿಜನಂಬೆರಸು ಮುನೀಂದ್ರರಿರ್ದ ಮಹೇಂದ್ರೋದ್ಯಾನಕ್ಕೆ ಬಂದು—

---

1. ದೊಂದುತ್ತರ. ಚ.

ಉ ॥ ದೀಪ ಕಳಾಪಮಂ ತಳೆದು ಬಾಲಿಕೆಯರ್ಬರೆ ಸುತ್ತಿ ಮುತ್ತಿ ತಾ।
ರಾಪತಿ ತಾರೆಗಳ್ವೆರಸು ಮುಂದರಮಂ ಬಲಗೊಳ್ವ ಮಾಟಿಸ್ಕೆಯಿಂ ॥
ಭೂಪತಿ ಸರ್ವಭೂತ ಹಿತ ದಿವ್ಯಮುನೀಂದ್ರರನಂದು ಬಾಲಚಂ।
ದ್ರಾಪರನಾಮಧೇಯರನದೇಂ ಬಲಗೊಂಡನೊ ಭಕ್ತಿಪೂರ್ವಕಂ ॥ ೨೭ ॥

ಅಂತು ಬಲಗೊಂಡಷ್ಟವಿಧಾರ್ಚನೆಗಳಿಂದರ್ಚಿಸಿ ಗುರುಭಕ್ತಿ ಪೂರ್ವಕಂ ವಂದಿಸುವುದುಂ—

ಕಂ ॥ ಮದನಫಣಿ ನಿರ್ವಿಷೀಕರ
ಣ ದಿವ್ಯಮಂತ್ರ ಸ್ನಪನಂ ಜರಾಮರಣ ಶಿಲಾ ॥
ವಿದಳನ ಟಂಕಧ್ವನಿ ಪೊ
ಣ್ಮಿದತ್ತು ಮುನಿ ಪರಸೆ ಧರ್ಮವೃದ್ಧಿ ನಿನಾದಂ ॥ ೨೮ ॥

ಕ್ಷುಭಿತ ದಯಾರ್ಣವ ಘೂರ್ಣಿತ
ರಭಸಮೆನಲ್ ಪರಸಿದತ್ತನಂತರವಾ ಸ ॥
ತ್ಸಭೆ ವಿನತ ಮಕುಟ ಮಣಿ ರುಚಿ
ವಿಭಾಸಿಯಂ ನೃಪಪುರಸ್ಸರಂ ರಾಜಕಮಂ ॥ ೨೯ ॥

ಅನಂತರಂ ದಶರಥಂ ಸಮುಚಿತಾಸನದೊಳ್ ರಾಮ ಲಕ್ಷ್ಮಣ ಭರತ ಶತ್ರುಘ್ನರ್ವೆರಸು ಕುಳ್ಳಿರ್ದು ದೀಕ್ಷಿತನಾದ ಇಂದುಗತಿಯುಮಂ ಪರಿಮ್ಲಾನ ದೀನಾನನನಾಗಿ ತನ್ಮನಿಯ ಸಮಕ್ಷದೊಳಿರ್ದ ಪ್ರಭಾಮಂಡಲನುಮಂ ಕಂಡು ಮುನಿ ಮುಖ್ಯಂಗೆಱಗಿ ಮುಕುಳಿತಾಂಜಲಿ ಪುಟನಾಗಿ—

ಉ ॥ ಬಾಲ ಮೃಣಾಳಮಂ ಪಿಡಿದು ಕೇಲ್ವವೊಲಶ್ರಮದಿಂ ಮನೋಭವ।
ವ್ಯಾಲ ಗಜೇಂದ್ರ ದಂತ ಯುಗಳಂಗಳನೇಕೆಯೊ ಕೆಟ್ಟಿನೇಕೆ ನಿ ॥
ರ್ಮೂಲಿಸಿದಂ ಭವಾಟವಿಯನೀಜಿನರೂಪ ಕುಠಾರದಿಂ ಪ್ರಭೋ।
ಧಾಲಯ ಪೇಱಿವಿಾ ಖಚರ ಚಕ್ರಿಯೊಳಾದ ತಪಃಪ್ರಪಂಚಮಂ ॥ ೩೦ ॥

ಎಂದು ಬಿನ್ನವಿಸೆ—

ಕಂ ॥ ಶ್ರುತ ದೇವತಾ ಕಟಾಕ್ಷ
ದ್ಯುತಿ ಪಸರಿಸಿ ಪರ್ವುವಂದದಿಂ ನಿಜದಂತ ॥
ದ್ಯುತಿ ಪಸರಿಸೆ ದಯೆಯಿಂ ಯತಿ
ಪತಿ ನುಡಿದಂ ಮಧುರ ಮೃದು ಗಭೀರ ಧ್ವನಿಯಿಂ ॥ ೩೧ ॥

ಈ ಖಚರ ಪ್ರಭು ಪ್ರಭಾಮಂಡಲನ ಪೋದ ಭವದೊಳಾದ ವೃತ್ತಾಂತಮುಮು ನೀಭವದೊಳಾದ ಸೀತಾಪ್ರಪಂಚಮುಮುಂ ಕೇಳ್ದು ತಿಳಿದದುವೆ ನಿರ್ವೇಗಕಾರಣ ಮಾಗೆ ದೀಕ್ಷೆಗೊಂಡನೆಂಬುದುಂ ಪ್ರಭಾಮಂಡಲಂ ವಿನಯ ವಿನಮಿತ ಶಿರಸ್ಸರೋಜ ನಾಗಿ—

ಕಂ ॥ ಇಂದುಗತಿ ಖಚರಪತಿ ಪಿರಿ
ದೊಂದಲ್ಕಿಜನೆನಗೆ ಮಾಟ್ಪುದಂ ಬೆಸಸಿಂ ನೀ ॥
ಮೆಂದು ಮುಕುಳಿತ ಕರಂ ಮುನಿ
ವೃಂದಾರಕರಂ ಕುಮಾರಕಂ ಬೆಸಗೊಂಡಂ ॥ ೩೨ ॥

ಅಂತು ಬೆಸಗೊಳ್ವುದುಮವರಿಂತೆಂದು ಬೆಸಸಿದರ್ : ಧಾಮ ನಾಮಧೇಯ ಗ್ರಾಮದೊಳಿರ್ಪಂ ಧರಾಮರಂ ವಿಮುಂಚಿಯೆಂಬನಾತನ ಕುಲವಧು [1] ವಸುಮತಿ ವೆಸರವಳವರ್ಗತಿಭೂತಿಯೆಂಬ ತನಯನಾದಂ—

ಕಂ ॥ ಆತಂಗೆ ಸರಸೆಯೆಂಬಳ್
ಪಾತಕಿ ಕುಲವನಿತೆಯೆನಿಸಿ ಕಯನೆಂಬ ಮಹಾ ॥
ಪಾತಕನೊಳ್ ಪುದುವಾಟ್ದಿಳ್
ಜಾತಿಯ ನೀತಿಯ ನೆಗಟ್ತೆ ನೆಲೆಗಿಡುವಿನೆಗಂ ॥ ೩೩ ॥

ಆಯುರ್ದಶೆಯಟ್ಟಿಗುಂ ನರ
ಕಾಯುಷ್ಯಂ ಕಟ್ಟುಗುಂ ಪರಾಭವಮಕ್ಕುಂ ॥
ಶ್ರೀಯಟ್ಟಿಗುಮೆನ್ನದನ್ಯ
ಪ್ರೇಯಸಿಯಂ ಸರಸೆಯಂ ಕಯಂ ಕಳ್ದುಯ್ದುಂ ॥ ೩೪ ॥

ಅಂತಾಕೆಯಂ ಕಯಂ ಕಸವರಂಬೆರಸುಯ್ವುದುಂ ಅತಿಭೂತಿ ಮತಿವಿಕಲ ನಾಗಿ—

ಕಂ ॥ ಸುಡು ಪೊಲ್ಲಳನೆನ್ನದೆ ತ
ನ್ನೊಡಮೆಯ ಕೇಡಿಂಗಮವಳಪೋಗಿಂಗಂ [2]ನಿ ॥
ರ್ಗಡಿ ಬೆನ್ನೊಳಱಿಸಿ ಪೋದಂ
ಕಡು ಮೋಹಿತರಾರುಮುಚಿತಮಂ ನೆನೆದಪರೇ ॥ ೩೫ ॥

---

1. ಮನುಪತಿ. ಚ.
2 ನಿಳ್ದಡಿ. ಚ. ; ನಿಗ್ಗೆಡಿ ಗ. ಘ. ; ನಿರ್ಗಡೆ. ಕ. ಙ.

ಮತ್ತಿತ್ತ ವಿಮುಂಚಿಯುಂ ದಾನಾರ್ಥಿಯಾಗಿ ಮಗುಟ್ಟಿ ಬಂದು ಮಗನ ವಾರ್ತೆಯಂ ಕೇಳ್ದು ತಾನುಂ ತನ್ನ ಪೆಂಡತಿಯಪ್ಪನುಮತಿಯುಂ ಸರಸೆಯ ತಾಯಪ್ಪುರಿಯುಂ ಕಪ್ಪಡಮನುಟ್ಟತಿಭೂತಿಯನಱಿಸುತ್ತಂ ಬಂದಂಬರಪುರದೊಳ್ ಸರ್ವಮುನಿಗಳೆಂಬ ದಿವ್ಯಜ್ಞಾನಿಗಳ ಪಕ್ಕದೆ ಧರ್ಮಮಂ ಕೇಳ್ದು ವಿಮುಂಚಿ ಮುಂಚಿ ತೊಱೆದನನುಮತಿಯುಂ ಉರಿಯುಂ ಕನಕಶ್ರೀಕಂತಿಯರ ಪಕ್ಕದೆ ತೊಱೆದು ದೇವಗತಿವಡೆದರ್—

ಕಂ ॥ ಅಪವರ್ಗ ಲಕ್ಷ್ಮ್ಯಾಯಂ ಕುಡು
ವ ಪರಮಜಿನ ಚರಣ ಸೇವೆಗರಿದಾದುದೆ ನಾ ॥
ಕಪದ ಪ್ರಾಪ್ತಿಯನೊದವಿಸು
ವ ಪೆರ್ಮೆಯೆನೆ ದಿವದೊಳನಿಬರುಂ ಜನಿಯಿಸಿದರ್ ॥ ೩೬ ॥

ಮತ್ತಿತ್ತ ಸರಸೆ ದುರಾಚಾರದಿಂ ಕಾಲಮುಂ ಕಟಿಪಿ ನರಕ ತಿರ್ಯಗ್ಗತಿಗಳೊಳ್ ತಿರಿಯುತ್ತುಂ ಬಂದು ಬಲಾಹಕವೆಂಬಬೆಟ್ಟದೊಳ್ ಪುಲಿಯಾಗಿ ಪುಟ್ಟಬೇಗೆಗಿರ್ಚಿನೊಳ್ ಸತ್ತು ಚಂದ್ರಧ್ವಜನೆಂಬರಸನರಸಿ ಮನಸ್ವಿಗೆ ಚಿತ್ರೋತ್ಸವೆಯೆಂಬ ಮಗಳಾಗಿ ಪುಟ್ಟಿದಳದಲ್ಲದೆಯುಮತ್ತಲ್—

ಮ ॥ ಮಕರಾಂಕದ್ವಿಪ ದಂತದಂಡ ದಳಿತ ಸ್ವಾಂತಂ ಪರ ಪ್ರೇಯಸೀ ।
ವಿಕಲಂ ದುರ್ಗತಿಯೊಳ್ ಕಯಂ ತಿರಿತರುತ್ತುಂ ಬಂದು ಮತ್ತಂ ಕ್ರಮೇ॥
ಳಕನಾದಂ ಕಟಿದಲ್ಲಿಯುಂ ಕಪಿಳನೆಂಬಂ ಧೂಮಕೇಶಂಗೆ ದಾ ।
ರಕನಾದಂ ಕಡೆಯೊಳ್ ವಿಚಾರಿಸೆ ವಿಚಿತ್ರಂ ಕರ್ಮ ನಿರ್ಮಾಪಣಂ ॥ ೩೭ ॥

ಮತ್ತಿತ್ತಲತಿಭೂತಿಯುಂ ನರಕಾಯುಷ್ಯಾದಿ ಭವಾಟವಿಯೊಳ್ ತೊಟಲುತ್ತುಂ ಬಂದು ತಾರಾಕ್ಷನೆಂಬ ಹಂಸವನದೊಳ್ ಕಲಹಂಸನಾಗಿ ಜಿನ ಸ್ತವನ ಶ್ರವಣದಿಂದುಪಶಮ[1] ಚಿತ್ತನಾಗಿ ಕಿನ್ನರಗತಿವಡೆದನಂತರಂ ಕುಂಡಲ ಮಂಡಿತನಾಗಿ [2]ವಿದಗ್ಧಪುರಮನಾಳುತ್ತಿರೆ ಕಪಿಳಂ ಚಿತ್ರೋತ್ಸವೆಯಂ ತನಗೆ ಪೆಂಡತಿಮಾಡಿ ತಂದಾಪುರದೊಳಿರ್ಪುದುಂ ನಿನಗೆ ಮುನ್ನಿನ ಪೆಂಡತಿಯಾದನುಬಂಧಂ ಕಾರಣಮಾಗೆ ನೀನಾಕೆಯಂ ಕಪಿಳನ ಕೈಯಿಂ ಕಳೆದುಕೊಂಡೈ; ಮುಂಪೇಳ್ದ ವಿಮುಂಚಿಯುಂ ಸುರಲೋಕದಿಂ ಬಂದಿಂದುಗತಿಯಾದನಾತನ ಪೆಂಡತಿಯಪ್ಪಂದಿನನುಮತಿ ಪುಷ್ಪವತಿಯಾದಳದುಕಾರಣದಿಂದಿವರ್ ನಿನಗತಿಸ್ನೇಹಿತರಾದರಂದಿನ ಕಯಂ ಕಪಿಳದೇವನಾಗಿ ನೀಂ

---

1. ಭಾವನದಿಂ. ಚ.
2. ವಿದಗ್ಧ ನಗರದೊಳ್ ಕಪಿಲನ ಕೈಯಿಂ ಚಿತ್ರೋತ್ಸವೆಯಂ ಅತಿಭೂತಿಯಾದಂದಿನನು ಬಂಧಂ ಕಾರಣಮಾಗೆ ನೀಂ ಕಳೆದುಕೊಂಡೆ. ಚ.

ಪುಟ್ಟದಾಗಳೆ ನಿನ್ನಂ ಕೊಂಡುಪೋದಂ; ನೀನತಿಭೂತಿಯಾದಂದಿನುರಿಯೆಂಬ ನಿಮ್ಮತ್ತೆ ದೇವಗತಿಯಿಂ ಬಂದು ಜನಕನ ಮಹಾದೇವಿ ವಿದೇಹಿಯಾಗಿ ನಿನಗೀಗಳಬ್ಬೆಯಾದಳೆಂದು ಭಟ್ಟಾರಕರ್ ಬೆಸಸುವುದುಂ—

ಮ ॥ ಅಱಿದಾತ್ಮೀಯ ಸುಹೃದ್ಭವಾಂತರಮನಾದ್ಯಂತಂ ಪ್ರಭಾಮಂಡಳಂ।
ಬೆಱಿಗಾದಂ ರಘುರಾಮನುಂ ದಶರಥ ಕ್ಷ್ಮಾಣೀಶನುಂ ಸೈಪು ಕ ॥
ಣ್ಬೆಱಿದಂತುತ್ಸುಕರಾದರುಣ್ಮೆ ಪುಳಕಂ ಕೈಗಣ್ಮೆ ಹರ್ಷಾಶ್ರು ಮೆ।
ಯ್ಮಱಿದಳ್ ಜಾನಕಿ ಕೇಳ್ದುಕೇಳ್ದು ತಲೆಯಂ ತೂಗಿತ್ತು ರಾಜನ್ಯಕಂ॥೩೮॥

ಕಂ ॥ ಅಮೃತದ ಕಡಲೊಳ್ಮುಳುಗಿ
ತ್ತಮೃತಾಂಶು ಮಯೂಖ ಲೇಖೆಯಂ ತಬ್ಬಿಸಿ ॥
ತ್ತಮರ್ದಂ ಮುಕ್ಕುಳಿಸಿತ್ತೆನೆ
ಸಮನಿಸಿದುದು ರಾಜಸಭೆಗೆ ಹರ್ಷೋತ್ಕರ್ಷಂ ॥ ೩೯ ॥

ಅಲ್ಲಿಂ ಬಟ್ಟಯಂ—

ಕಂ ॥ ಮಣಿಕುಂಡಲ ಕಿರಣಂಗಳ್
ಸೆಣಸುವಿನಂ ನಖಮಯೂಖದೊಳ್ ದಶರಥ ಧಾ ॥
ರಿಣಿಪತಿಯ ಪದ ಪಯೋಜ
ಪ್ರಣಮನಮನೊಡರ್ಚಿದಂ ವಿಯಚ್ಚರತಿಲಕಂ ॥ ॥ ೪೦ ॥

ಅನಂತರಂ ರಾಮ ಲಕ್ಷ್ಮಣ ಭರತ ಶತ್ರುಘ್ನರೊಳ್ ವಿನಯವೃತ್ತಿಯಂ ಮೆಱೆವುದುಂ—

ಕಂ ॥ ಅನುಜೆ ನಿಜಾಗ್ರಜ ಪದ ಕೋ
ಕನದಕ್ಕಾನಂದ ಬಾಷ್ಪ ಮಧು ಬಿಂದುವನಿ ॥
ತ್ತನುನಯದಿನೆಱಗಿದಳ್ ಸೀ
ತೆ ನಗುವಿನಂ ಭ್ರಮರಕಂ ಭ್ರಮದ್ಭ್ರಮರಕಮಂ ॥ ೪೧ ॥

ಅಂತು ವಿನಯಭರದಿನೆಱಗಿದನುಜೆಯಂ ಪ್ರಭಾಮಂಡಳನಖಂಡಿತ ಪುಣ್ಯ ಭಾಗಿನಿಯಾಗೆಂದು ಪರಸಿ ಪರಮಾನಂದ ಪರಂಪರೆಯನಪ್ಪುಕೆಯ್ದಿರ್ದುದುಂ—

ಸ್ರ॥ ಆದಿವ್ಯಜ್ಞಾನಿಯಿಂದಂ ತಿಳಿದು ಪದ ಪದಾರ್ಥಂಗಳಂ ಪೂರ್ವ ಜನ್ಮ।
ಪ್ರಾದುರ್ಭಾವ ಪ್ರಪಂಚಂಗಳನಧಿಕ ಮನೋರಾಗದಿಂ ತನ್ಮನಿ ಶ್ರೀ ॥
ಪಾದಾಂಭೋಜಂಗಳಂ ಪೂಜಿಸಿ ವಿನಯದೆ ಬೀಱ್ಕೊಂಡು ಭೇರೀನಿನಾದಂ।
ರೋದೋಂತರ್ಭಾಗಮಂ ಜಕ್ಕುಲಿಸೆ ನೃಪತಿ ಸಾಕೇತಮಂ ಬಂದು ಪೊಕ್ಕಂ॥

ಮ ॥ ಮಣಿಘಂಟಾ ಮಣಿಕಿಂಕಿಣೀ ಮಣಿವಿತಾನ ಸ್ವರ್ಣ ಲಂಭೂಷ ಭೂ ।
ಷಣಮಂ ರತ್ನ ವಿಮಾನಮಂ ಭರತನುಂ ಶತ್ರುಘ್ನನುಂ ರಾಮಲ ॥
ಕ್ಷ್ಮಣರುಂ ತನ್ನೊಡನೇಱಿ ಸೋಂಕಿ ಬರೆ ಸೋತ್ಸಾಹಂ ಹರಿದ್ರತ್ನ ತೋ ।
ರಣ ಶೋಭಾವಹಮಂ ನರೇಂದ್ರ ಗೃಹಮಂ ಪೊಕ್ಕಂ ಪ್ರಭಾಮಂಡಲಂ ॥೪೩॥

ಅಂತು ಪುಗುವುದುಂ ಕುಮಾರನಂ ಮಣಿಮಯಾಸನದೊಳಿರಿಸಿ ಮಧುಪರ್ಕ ಪೂರ್ವಕಮಪಾರ ಸಾರ ವಸ್ತ್ರಾಭರಣ ವಸ್ತುವಾಹನಂಗಳಿಂ ಪೂಜಿಸಿ ಬಱಿಯಂ ಜನಕಂಗೆ ಬಱಿಯನಟ್ಟುವುದುಂ ವಿದ್ಯಾಧರಮಹತ್ತರಂ ಪವನವೇಗನೆಂಬಂ ಮನಃ ಪವನವೇಗದಿಂ ಮಿಥಿಳೆಯನೆಯ್ದಿ ರಾಜಮಂದಿರಮಂ ಪೊಕ್ಕು—

ಕಂ ॥ ನಮಿತಂ ಖಚರಾನುಚರಂ
ಕ್ರಮದಿಂ ತಿಳಿವಂತು ತನಗೆ ತನಯನ ವೃತ್ತಾಂ ॥
ತಮನಱಿಪೆ ಜನಕನತಿ ಸಂ
ಭ್ರಮಚಿತ್ತಂ ಪಡೆದು ಪಲವುಸೂಟ್ಬಿಸಗೊಂಡಂ ॥ ೪೪ ॥

ಮ ॥ ಕೊಲಲೆಂದುಯ್ದ ನಿಶಾಚರಂ ಖಚರರಾಜಂಗುಯ್ದುಕೊಟ್ಟಂ ಗಡಂ ।
ಕುಲ[1]ನಿಸ್ತಾರಕನೆನ್ನ ದಾರಕನನಾತಂ ಬಂದು ಸಾಕೇತದೊಳ್ ॥
ನೆಲಸಿರ್ದಂ ಗಡ ಸೈಪು ಕಣ್ದೆಱೆದುದೆಂದಾನಂದಬಾಷ್ಪಾಂಬು ಕ ।
ಣ್ಮಲರಿಂ ಕೈಗಱಿವಾಗಿ ಪೊಣ್ಮೆ ಜನಕಂ ರೋಮಾಂಚಮಂ ತಾಳ್ದಿದಂ ॥ ೪೫ ॥

ಅಂತು ಹರ್ಷರಸ ತರಂಗಿತಾಂತರಂಗನಾಗಿ—

ಕಂ ॥ ತನುಜಾಗಮನೋತ್ಸವಮಂ
ತನಗಱಿಪಿದ ಖೇಚರಂಗೆ ನಿಜರಾಜ್ಯಮನೀ ॥
ವನಿತುವರಮಧಿಕರಾಗಂ
ಜನಿಯಿಸೆ ಜನಕಂ ನಿಜಾಂಗಚಿತ್ತಮನಿತ್ತಂ ॥ ೪೬ ॥

ಅನಂತರಂ—

ಕಂ ॥ ರವಿರಥಮನುತ್ಸವ ಧ್ವಜ
ನಿವಹಂ [2]ತುಡುಕಿದುವು ಕೆದಱಿದುವು ಪೂವಲಿಗಳ್ ॥
ಕವಿ ಶಬ್ದಂಗೆಟ್ಟಿರೆ ಬ
ದ್ದವಣಂ ಬಾಜಿಸಿದುವೊಡನೆ ಮಿಥಿಳಾಪುರದೊಳ್ ॥ ೪೭ ॥

---

1. ವಿಸ್ತಾರಕ. ಗ. 2. ವೆತ್ತಿದುವು. ಚ.

ಚ ॥ ತನಯ ಮುಖೇಂದು ಮಂಡಲಮನೀಕ್ಷಿಸುವುತ್ಸುಕ ವೃತ್ತಿ ಚಿತ್ತದೊಳ್ ।
ನನೆಕೊನೆವೋಗೆ ಸಜ್ಜನ ಸುಭಾಷಿತದೊಳ್ ಪುದುವೊಕ್ಕು ಸೇಸೆಯಂ ॥
ಮನಮೊಸೆದಾಂತು ಬಾಂಧವಜನಂಬೆರಸುತ್ಸವದಿಂ ವಿದೇಹಿಯುಂ ।
ಜನಕನುಮೇಱಿದರ್ ಮಣಿವಿತಾನ ವಿರಾಜಿತಮಂ ವಿಮಾನಮಂ ॥ ೪೮ ॥

ಅಂತು ವಿಮಾನಾರೂಢರಾಗಿ ಕೆಱಿದಾನುಂ ಬೇಗದಿಂದಯೋಧ್ಯೆಗೆ ಬಂದು ರಾಜಭವನಮಂ ಪೊಕ್ಕು ಜನಕನುಂ ವಿದೇಹಿಯುಂ ದಶರಥಂಗಮಪರಾಜಿತಾ ಮಹಾದೇವಿಗಂ ತುಱಿಲ್ಗೆಯ್ವುದುಂ, ರಾಮಾದಿಗಳವರ್ಗೆ ವಿನಯವಿನತರಾಗಿ ಪರಕೆಯಂ ಕೈಕೊಳ್ವುದುಂ, ಜಾನಕಿಯುಂ ಜನನೀಜನಕರಂ ನಿಬಿಡಾಲಿಂಗನಂಗೆಯ್ದು ವರ ಪದ ಪಯೋರುಹಕ್ಕೆಱಗೆ ಪ್ರಭಾಮಂಡಳಂ ತಂದೆಯ ಪಾದಾರವಿಂದಮುಂ ಮಣಿಕುಂಡಲ ಪ್ರಭಾಮಂಡಲ ಬಾಲಾತಪದಿನರ್ಚಿಸುವುದುಂ, ಜನಕಂದಿಕ್ಕರಿ ಕರಾನುಕಾರಿಗಳಪ್ಪ ತೋಳ್ಗಳಿಂ ತೆಗೆದು ತಱಿಸ್ಕೈಸಿ, ಮಗನ ಮೊಗಮನಱಿತ್ತು ನೋಡಿ, ಕಲ್ಪತರು ಕೋರಕಿತವಾದಂತೆ ಪುಳಕಮಂ ತಳೆದು, ಆನಂದಬಾಷ್ಪ ಬಿಂದು ಸಂದೋಹದಿಂ ನಂದನನ ಸಹಸ್ರ ಕುಂತಳ ಕಲಾಪಕ್ಕೆ ಬಿಡುಮುತ್ತಿನ ತಲೆದುಡುಗೆಯಂ ಪಡೆದು, ಮೋಹರಸ [1]ಸುಧಾಪೂರದೊಳವಗಾಹಮಿರ್ಪುದುಂ—

ಕಂ ॥ ಅಂಬಿರಿವಿಡೆ ಭೋಂಕನೆ ನಯ
ನಾಂಬುಗಳತಿವಿಹ್ವಲಂ ಪ್ರಭಾಮಂಡಲನಾ ॥
ತ್ಯಂಬಿಕೆಯ ಪದಕ್ಕೆಱಗಿದ
ನಂಬುರುಹಕ್ಕೆಱಗಿದಳಿಗಳೆನಿಸೆ ಕುರುಳ್ಗಳ್ ॥ ೪೯ ॥

ಆಗಳಾ ವಿದೇಹಿಸುತ ಪರಿಷ್ವಂಗ ಸುಖಾನುಭವಮನಪ್ಪುಕೆಯ್ವುದುಂ—

ಮ ॥ ಮೊಲೆವಾಲಂಬಿರಿವಿಟ್ಟು ಸೂಸೆ ಮೊಲೆಯುಂ ಬಾಷ್ಪಾಂಬು ಕೈಗಣ್ಮೆ ಕ ।
ಣ್ಮಲರಿಂ ಮೆಯ್ನವಿರ್ಗಳ್ ಪೊದಟ್ಟೊಗೆಯೆ ಮೆಯ್ಯಿಂ ಗದ್ಗದಂ ಕಂಠ ಕಂ॥
ದಲದಿಂದುದ್ಗತಮಾಗೆ ಮನ್ಯುವಿಗೆ ನಾನಾಚೇಷ್ಟೆ ನಾನಾರಸಂ ।
ತಲೆದೋಱಿತ್ತು ವಿದೇಹಿಗಚ್ಚರಿ ಸುತ ವ್ಯಾಮೋಹ ಕೌತೂಹಲಂ ॥ ೫೦ ॥

ಚ ॥ ಉದಯಿಸಿದಾಗಳಾತನನಗಲ್ದಬಲಾತನ ಬಾಲಕೇಳಿಯಂ ।
ಪದೆದವಲೋಕಿಸಲ್ ಪಡೆಯದುಮ್ಮಳವಾತನ ಸೋಂಕಿನೊಳ್ ವೊದ ॥
ಟ್ಟೊದವಿದ ಮೋಹವಾತನ ಮುಖಾಬ್ಜ ವಿಲೋಕನ ಜಾತಕೌತುಕಂ ।
ಸುದತಿವಿದೇಹಿಗೇಂ ಪಡೆದುದೋ ರಸಸಂಕರ ಚಿತ್ರ ಚೇಷ್ಟೆಯಂ ॥ ೫೧ ॥

---

1. ಸುಧಾರಸ. ಕ. ಖ ಗ. ಘ.

ಚ ॥ ತನಯನನಾಗಳಂತೆ ಪಡೆದಂತೆ ಮನೋಮುದಮಂ ವಿದೇಹಿಯುಂ ।
ಜನಕನುಮಪ್ಪುಕೆಯ್ಯೆ ರಘುವಂಶ ನವೇರುಗೆ ಚಿತ್ರರತ್ನಮಂ ॥
ಡನ ವಸನಂಗಳಿಂದೊಸೆದು ಮನ್ನಿಸೆ ಹರ್ಷಮಳುಂಬಮಾಯ್ತು ಚಂ ।
ದನರಸ ಮಗ್ನರಪ್ಪವರನಪ್ಪಿದುವಿಂದು ಕರಂಗಳೆಂಬಿನಂ ॥ ೫೨ ॥

ಅಂತು ದಶರಥನಭ್ಯಾಗತ ಪ್ರತಿಪತ್ತಿಯಂ ಮಾಟ್ಪುದುಮನುದಿನಂ ಪ್ರಭಾ ಮಂಡಲಂ ರಾಮಲಕ್ಷ್ಮಣರೊಡನೆ ಕೂಡಿ ವಿವಿಧ ವಿನೋದಂಗಳಿಂ ದಿವಸಂಗಳನೇಕ ವಾಗೆಯುಮೇಕಕ್ಷಣದಂತೆ ನಿರಂತರೋತ್ಸವಮನೊದವಿಸೆ ಸುಖದಿನೊಂದುತಿಂಗ ಳ್ವರಮಯೋಧ್ಯೆಯೊಳಿರ್ದು, ಮಿಥಿಲೆಗೆ ಬಂದು ಜನಕನ ರಾಜ್ಯಮಂ ತನ್ನ ಕಿಱಿ ಯವ್ಮನಪ್ಪ ಕನಕಂಗೆ ಕೊಟ್ಟು, ಜನಕನುಂ ವಿದೇಹಿಯುಂ ಬೆರಸು ರಥನೂಪುರ ಚಕ್ರವಾಳಪುರಕ್ಕೆ ಪೋಗಿ, ವಿದ್ಯಾಧರವಿಭೂತಿಯೊಳ್ ಸುಖದೊಳಿರ್ದನನ್ನೆಗಮಿತ್ತ ಲೊಂದು ದಿವಸಂ—

ರಥೋದ್ಧತ ॥ ಉರ್ವರಾಧಿಪತಿ ಕಂಡನರ್ಚನಾ ।
ಪೂರ್ವಕಂ ದಶರಥಾವನೀಶ್ವರಂ ॥
ಸರ್ವಭೂತಹಿತ ನಾಮಧೇಯರಂ ।
ಸರ್ವಭೂತ ಹಿತ ಸಾಧು ಮುಖ್ಯರಂ ॥ ೫೩ ॥

ಅಂತು ಕಂಡು ಗುರುಭಕ್ತಿ ಪೂರ್ವಕಂ ವಂದಿಸಿ—

ಕಂ ॥ ಎನ್ನ ಭವಾವಳಿಯಂ ದಯೆ
ಯಿನ್ನಿಮ್ಮಡಿ ಬೆಸಸಿಮೆಂದು ಕೈಮುಗಿದಿರೆ ಕಿಂ ॥
ಚಿನ್ನಮಿತ ಕಂಧರಂ ಪದ
ಸನ್ನಿಧಿಯೊಳ್ ದಶರಥಂಗೆ ಮುನಿಪತಿಯೆಂದಂ ॥ ೫೪ ॥

ಮೊದಲಿಲ್ಲೆನಿಪ್ಪ ಸಂಸಾ
ರದಲ್ಲಿ ಸುಖದುಃಖಮಂ ಚತುರ್ಗತಿಯೊಳ್ ನೂ ॥
ಣದೆ ತಿರಿದು ಶುಭಾಶುಭ ಕ
ರ್ಮದ ಫಲಮಂ ನಗುತುಮಳುತುಮುಣುತುಂ ಬಂದೈ ॥ ೫೫ ॥

ಅಂತನಂತಮಾದ ಭವಾವಳಿಯಿಂ ತಿರಿತರುತ್ತುವಿಭವಕ್ಕೆಂಟನೆಯ ಭವ ದೊಳೊರ್ಮೆ ಸೇನಾಪುರಮೆಂಬ ಪುರದೊಳ್—

ಕಂ ॥ ಮುನಿಚರ್ಯಾ ವಿಘ್ನದೊಳಂ
ಜಿನಧರ್ಮದ್ವೇಷ ಮತಿಯೊಳಂ ದುರ್ಗತಿಯೊಳ್ ॥

ಜನಿಯಿಸಿ ದುರಂತ ದುಃಖಮು
ನನುಭವಿಸಿದೆ ವಕ್ರಭಾವಮಬಲಿಸದಾರಂ ॥ ೫೬ ॥

ಅಂತೆತ್ತಾನುಂ [1]ಸವಿಪಾಕ ನಿರ್ಜರೆಯಿಂ ದುಷ್ಕರ್ಮ ಫಲಮಂ ತವಿಸಿ ನಿಜ ದಿನುಪಶಮಭಾವಮಂ ಪಡೆದದಱ ಫಲದಿಂ ಚಂದ್ರಪುರಮನಾಳ್ವ ಚಂದ್ರನೆಂಬ ನರೇಂದ್ರಂಗಮಾತನ ಮನೋಹಾರಿಣಿ ಧಾರಿಣಿಗಂ ಧಾರಣನೆಂಬ ಮಗನಾದೆ; ನಿನಗೆ ಸುಧರ್ಮೆಯೆಂಬಳ್ [2]ಪತ್ನಿಯಾಗೆ ಜಿನಧರ್ಮಮಂ ಪತ್ತುವಿಡದೆ ನಡೆದು ಚತು ರ್ವಿಧ ದಾನ ಶೂರನಾಗಿ ಶರೀರಭಾರಮನಿಟ್ಟಿಸಿ ಧಾತಕೀ ಷಂಡದ ಮೂಡಣ ಮಂದರ ದುತ್ತರ[3]ಕುರುವಿನೊಳ್ ಪುಟ್ಟಿ ಮೂಱುಪಳಿತೋಪಮಂಬರಮಲ್ಲಿಯ ಸುಖಮನನು ಭವಿಸಿ ದೇವಗತಿವಡೆದು—

ಉ ॥ ಪೂಸದ ಸೌರಭಂ ತವದ ಮೈಸಿರಿ ಬಾಡದ ದಾಮಮುಟ್ಟೊಡಂ ।
ಮಾಸದ ಸೀರೆ ಧಾತುಮಲವಿಲ್ಲದೊಡಲ್ ಪರಿಪೂರ್ಣ ಯೌವನಂ ॥
ಲೇಸೆನಿಸಿರ್ದ ರೂಪು ಶುಭಲಕ್ಷಣವೆಂಬಿವನಪ್ಪುಕೆಯ್ದನಾ ।
ಯಾಸದಿನೀಸಿದೈ ಮೊದಲ ಸಗ್ಗದ ಬಾಟಿಕ್ಕೆಯೆರಟ್ಟಿಡಲ್ಕಳಂ ॥ ೫೭ ॥

ಮತ್ತಮಲ್ಲಿಂದಂ ಬಂದು ಪುಷ್ಕಲಾವತೀ ವಿಷಯದ ಪುಂಡರೀಕಿಣೀ ಪುರಮ ನಾಳ್ವ ನಂದಿಘೋಷ ನರಪತಿಗಮಾತನರಸಿಯಪ್ಪ ವಸುಮತಿಗಂ ನಂದಿವರ್ಧನ ನೆಂಬ ನಂದನನಾದೆ; ನಿನ್ನ ತಂದೆಯಪ್ಪ ನಂದಿಘೋಷನೊಂದುದಿವಸಂ ಕ್ರೀಡಾ ವನಕ್ಕೆ ಪೋಗಿ, ದಿವ್ಯಯೋಗಿಗಳಂ ಕಂಡು, ಧರ್ಮಮಂ ಬೆಸಗೊಂಡು, ಸಂಸಾರ ಶರೀರ ಭೋಗ ನಿರ್ವೇಗ ಪರನಾಗಿ ನಿನಗೆ ರಾಜ್ಯಮಂ ಕೊಟ್ಟು ಯಶೋಧರ ಭಟ್ಟಾರಕರ ಚರಣೋಪಾಂತದೊಳ್ ತಪಶ್ಚರಣ ನಿರತನಾಗಿ ಸಮಾಧಿವಿಧಿಯಿಂ ವಿಗ್ರಹಮನುಟ್ಟಿದು, ಬಟ್ಟಿಯಮಗ್ರಿಮ ನವ ಗ್ರೈವೇಯಕ ಮಧ್ಯನಾಯಕನಾದಂ; ನೀನುಮೊಂದು ಪುಬ್ಬಕೋಟಿ ಕಾಲಮರಸುಗೆಯ್ದು, ಜಿನಧರ್ಮಮಂ ಪತ್ತುವಿಡದೆ ನಡೆದು ಕಡೆಯೊಳಯ್ದನೆಯ ಕಲ್ಪದುಪಪಾತ ತಲ್ಪದೊಳ್ ದೇವನಾದೈ—

ಕಂ ॥ ಅಯ್ದುಂ ಕಲ್ಯಾಣಮನಿ
ತ್ತೆಯ್ದಿಪುದಯ್ದನೆಯ ಗತಿಯನವಯವದಿಂ ತಾ ॥
ನಯ್ದನೆಯ ನಾಕಲೋಕಮ
ನೆಯ್ದಿಪುದು ಜಿನೇಂದ್ರ ಸೇವೆಗಾವುದು ಗಹನಂ ॥ ೫೮ ॥

ಅಂತಲ್ಲಿಯ ಸುಖಮನನುಭವಿಸಿ ಬಂದು ಮುಂದರದಪರವಿದೇಹದ ವಿಜ

---

1. ಸಂವಿಪಾಕ. ಚ. 2. ಸದೃಷ್ಟಿಪತ್ನಿ. ಗ. 3. ಕುರವಕದೊಳ್. ಕ. ಖ. ಗ. ಘ.

ಯಾರ್ಧದ ಶಶಿಪುರಮನಾಳ್ವ ರತ್ನಮಾಲಿಗಂ ವಿದ್ಯುಲ್ಲತೆಗಂ ಸೂರ್ಯಂಜಯನೆಂಬ ಮಗನಾದೆ; ನಿಜಜನಕನಪ್ಪ ರತ್ನಮಾಲಿ ಸಿಂಹಪುರಮನಾಳ್ವ ವಜ್ರಲೋಚನನೊಳ್ ಕಾದಲೆಂದು ಚತುರಂಗ ಬಲ ಸಹಿತನಾಗಿ ಪೋಗುತ್ತಮಿರೆ—

ಕಂ ॥ ಮನದ ಮುನಿಸೆಂಬ ಕಲ್ಬಿಲೆ
ಯನಲೆವ ಮಾಣಿಕ್ಯ ದೀಪಮೆನೆ ದಿವದಿಂದಾ ॥
ತನ ಮುಂದಣ್ಗೆಱಿತಂದಂ
ದಿನಲಕ್ಷ್ಮಿಗೆ ತನ್ನ ದೇಹರುಚಿ ಕುಡೆ ಕೊರ್ವಂ ॥ ೫೯ ॥

ಅಂತುಬಂದು—

ಕಂ ॥ ವಿಗ್ರಹದೊಳ್ ನಿನಗಿನಿತೇ
ಕಾಗ್ರಹವುಱಿ ಮುಳಿಸನೊಂದು ಕಥೆಯಂ ಕೇಳೇ ॥
ಕಾಗ್ರ ಮನದಿಂದಮೆಂದು ಸ
ಮಗ್ರಾವಧಿ ಬೋಧನಮರನಂದಿಂತೆಂದಂ ॥ ೬೦ ॥

ಈ ಭರತದ ವಿಜಯಾರ್ಧ ಮ
ಹೀಭೃತ್ತಟ ತಿಲಕಮೆನಿಪ ಶಶಿಪುರದೊಡೆಯಂ ॥
ಭೂ ಭುವನ ಪ್ರಥಿತ ಯಶಂ
ಶ್ರೀಭೂತಿ ಸುಭೂತಿವೆಸರ ಸುತನಂ ಪಡೆದಂ ॥ ೬೧ ॥

ಉಪಮನ್ಯುವೆಂಬವಂ ತನ
ಗೆ ಪುರೋಹಿತನಾಗೆ ಸಿರಿಯ ಸಿರಿಯಂ ಸುಖದಿಂ ॥
ದುಪಭೋಗಿಸುತ್ತುಮಿರ್ದೊ
ರ್ವ್ಯೆ ಪೊರ್ದಿದಂ ಕಮಲಗರ್ಭ ಯತಿಪತಿ ಪದಮಂ ॥ ೬೨ ॥

ಅಂತಾ ತಪೋನಿಧಿಯ ಸನ್ನಿಧಿಯೊಳ್ ಮಧು ಮದ್ಯ ಮಾಂಸ ನಿವೃತ್ತನಾಗಿ ವರ್ತಿಸುತ್ತಿರ್ಪ ಶ್ರೀಭೂತಿಯಂ ತತ್ಪುರೋಹಿತನಪ್ಪುಪಮನ್ಯು ದುಷ್ಟಮತಿ ನಷ್ಟ ವ್ರತಮ್ಮಾಡಿ, ತಾನುಂ ರಣಮರಣದಿಂ ವಾರಣವಾಗಿ ಮತ್ತಂ ಮರಣಮನೆಯ್ದಿ, ಮುನ್ನಂ ತನ್ನ ಪತಿಯಪ್ಪ ಶ್ರೀಭೂತಿಯ ಮೋಹದಿಂದಾತನ ಸುತನಪ್ಪ ಸುಭೂತಿಗಂ ಯೋಜನಗಂಧಿಗ[1]ಮರಿಂದಮನೆಂಬ ನಂದನನಾಗಿ, ತಾನೊಂದುದಿವಸಂ ಕಮಲಗರ್ಭ ಮಹಾಋಷಿಯ ದರ್ಶನದಿಂ ಜಾತಿಸ್ಮರನಾಗಿ, ತತ್ಸಮಿಾಪದೊಳ್ ತೊಱೆದು ತಪೋ

1. ಮರವಿಂದ. ಕ. ಖ.

ನಿಷ್ಠೆಯೊಳ್ ನೆರೆದು ದೇವನಾಗಿ ಶತಾರ ಕಲ್ಪದೊಳನಲ್ಪ ಸುಖಮನನುಭವಿಸುತಿರ್ದ ನನ್ನೆಗಮಿತ್ತಲ್—

ಕಂ ॥ ಅಂದು ದುರಾಚಾರದ ಫಲ
ದಿಂದಂ ಶ್ರೀಭೂತಿ ಸತ್ತು ಪುಲ್ಲೆಯ ಬಸಿಱೊಳ್ ॥
ಬಂದಂ ಕಾಟಿಕ್ಕಿಚ್ಚರ್ ಸುಡಲ್
ಬೆಂದಂ ಮುಂದಾರಮೆಂಬ ಗಹನಾಂತರದೊಳ್ ॥ ೬೩ ॥

ಅಂತು ಕಟಿದು ಕಾಂಭೋಜದೊಳ್ ಕಿರಿಂಜಯನೆಂಬ ಕಿರಾತನಾಗಿ—

ಕಂ ॥ ಆಡಿದ ಕಾಡೊಳ್ ಜವನೆ
ಚ್ಚಾಡಿದನೆನೆ ಕೊಂದು ತಿಂದು ಕೈಯುಂ ಕಾಲುಂ ॥
ಮೂಡಿದುವು ಪಾತಕಕ್ಕೆನೆ
ಕಾಡೊಡೆಯಂ ಕಟಿದು ಶರ್ಕರಾಪ್ರಭೆಗಿಟಿದಂ ॥ ೬೪ ॥

ಅದನುಪಮನ್ಯುಚರನಪ್ಪ ದೇವನವಧಿಯಿನಱಿದಲ್ಲಿಗೆ ಬಂದು ನಿನಗೆ ಧರ್ಮೋಪದೇಶಂಗೆಯ್ಯೆ ಕೈಕೊಂಡು ನೀನೀಗಳ್ ರತ್ನಮಾಲಿಯಾದೆ; ನಿನಗೆ ಧರ್ಮೋಪದೇಶಂಗೆಯ್ದೆವಾವೆಂದು ಪೇಟಿ, ಕೇಳ್ದದುವೆ ನಿರ್ವೇಗಕಾರಣಮಾಗೆ ಸೂರ್ಯಂಜಯನೆಂಬ ನಿಜ ತನೂಜನಂ ರಾಜ್ಯಮಂ ಕೈಕೊಳ್ವುದೆನಲಾತಂ ತಪೋರಾಜ್ಯಮನಲ್ಲದೊಲ್ಲೆನೆಂಬುದುಂ, ತದಪತ್ಯನಪ್ಪ [1]ಕಲ್ಪಾನಂದಂಗೆ ರಾಜ್ಯಮಂ ಕೊಟ್ಟು ರತ್ನಮಾಲಿ ಸೂರ್ಯಂ ಜಯಂಬೆರಸು ತಿಲಕಸುಂದರ ಮುನಿಗಳ ಸಮಕ್ಷದೊಳ್ ದೀಕ್ಷೆಗೊಂಡನೇಕ ಕಾಲಂ ತಪಂಗೆಯ್ದು ಮಹಾಶುಕ್ರ ಕಲ್ಪದೊಳ್ ಪುಟ್ಟಿ ಪದಿನಾಱು ಸಾಗರೋಪಮಮನಲ್ಲಿಯ ಸುಖಮನನುಭವಿಸಿ ಬಂದಂದಿನ ಸೂರ್ಯಂಜಯನೆ ನೀನೀಗಳ್ ದಶರಥನಾದೆ; ನೀಂ ನಂದಿವರ್ಧನನಾದಂದಿನ ನಿನ್ನ ತಂದೆಯಪ್ಪ ನಂದಿಘೋಷರೆಂಬವರ್ ತೊಱೆದು ನವಗ್ರೈವೇಯಕದೊಳ್ ನೆಲಸಿ ಬಂದು ಸರ್ವಭೂತಹಿತ ಭಟ್ಟಾರಕರಾವಾದೆವಾ ಶ್ರೀಭೂತಿಯುಮುಪಮನ್ಯುವುಂ ಬಂದು ನಿನ್ನ ಮೈದುನರಪ್ಪ ಜನಕನುಂ ಕನಕನುಮಾದರೆಂದು ಬೆಸಸೆ ದಶರಥಂ ವಿಸ್ಮಯಾಕ್ರಾಂತ ಸ್ವಾಂತನಾಗಿ—

ಚ ॥ ಯತಿಪತಿ ಪೇಟಿ ಕೇಳ್ದು ಭವಸಂತತಿಯಂ ಬಗೆದಾ ಜವಂಜವ ।
ಸ್ಥಿತಿಯನನಾದಿಯಂ ಸುಕೃತ ದುಷ್ಕೃತ ಕರ್ಮ ವಿಪಾಕ ಸೌಖ್ಯ ದು ॥
ಸ್ಸ್ಥಿತಿಗಳನುಂಡು ರಾಟಳದ ಗುಂಡಿಗೆಯಂತೆವೊಲಾದೆನೆಂದು ನಿ ।
ವೃತಿಸುಖದತ್ತಲಾಟಿಸಿದನೇಂ ರಘುಸೂನು ಮಹಾನುಭಾವನೋ ॥ ೬೫ ॥

---

1. ಕಲ್ಪಾಮರಂಗೆ. ಕ. ಖ. ಘ. ; ಕಲ್ಪಾಮರಂಗೆ ನಂದಂಗೆ. ಗ.

ಚ ॥ ಅವುಚಲಿದಿನ್ನೆಗಂ ಸವಿದೆನಿಂದ್ರಿಯ ಸೌಖ್ಯಮನಗ್ರ ನಂದನಂ ।
ಕವಚಹರಂ ಜಿತಾಹಿತಬಲಂ ಬಲನನ್ನನಿರಲ್ ಮಹಾಪರಾ ॥
ಭವನಿಮಿದಱಿಂದಮಾವುದೆನಗೆಂದಿರದುತ್ತರಿಸಲ್ಕೊಡರ್ಚಿದಂ ।
ಭವ ಜಲರಾಶಿಯಂ ದಶರಥಂ ಜಿನರೂಪ ವಹಿತ್ರ ಯಾತ್ರೆಯಿಂ ॥ ೬೬ ॥

ಮ ॥ ಪರಪೀಡಾಕರಮೆಂತು ನೋಡುವೊಡಮರ್ಥೋಪಾರ್ಜನಂ ತದ್ದುರಾ ।
ಚರಿತೋದೀರಿತ ದುಃಖ ತಿಕ್ತ ಫಲ ಸೇವಾಕಾಲದಂದೊರ್ವರುಂ ॥
ನೆರವಿಲ್ಲಾ ಧನ ಸೇವೆಯಂದೆ ನೆರವಪ್ಪರ್ ನಂಟರೆಂದಂದು ತಾಂ ।
ಮರುಳಕ್ಕುಂ ಪುರುಳಕ್ಕುಮೇ ಮಱೆದು ಹಾನಾದಾನ ವಿಜ್ಞಾನಮಂ ॥ ೬೭ ॥

ವನಿತಾ ಸಂಕುಲಮುಂ ಷಡಂಗ ಬಲಮುಂ ಭಂಡಾರಮುಂ ವಸ್ತುವಾ ।
ಹನಮುಂ ತನ್ನೊಡವರ್ಪುವಲ್ಲವೊಡವರ್ಕುಂ ಪುಣ್ಯಪಾಪಂಗಳೆಂ ॥
ಬಿನಿತಂ ಭಾವಿಸಿ ತಾನೆ ತನ್ನ ದೆಸೆಯಿಂ ತನ್ನಂದಮಂ [1]ಭಾವಿಸಲ್ ।
ಮನಮಂ ತಾರದೆ ಬಾಹ್ಯಮಂ ಬಯಸುವಂತಶೂನ್ಯನುಂ ಮಾನ್ಯನೇ ॥೬೮॥

ಅಟ್ಟುವೆಣ್ಣಾದೊಡಮೊಂದೆರಟ್ಟಿವಸವೊಂದಾಗಿರ್ದವಂ ನಂಟನೆಂ ।
ದುಟ್ಟುದಂದನ್ಯರನಾಸೆಗೆಯ್ಯಳವಳಿಂ ನಿರ್ವ್ಯಾಕುಳಂ ಪೊಲ್ಲಿವಳ್ ॥
ಪಟ್ಟಿಗಂಜಳ್ ಭರತಾದಿಗಳ್ ಪಲವುಕಾಲಂ ತನ್ನೊಳೋತಿರ್ದವರ್ ।
ಕಟ್ಟಿದಂದಾ ಕ್ಷಣದೊಳ್ ಧರಾರಮಣಿ ಮತ್ತೊರ್ವಂಗೆ ಪುರ್ವಿಕ್ಕುವಳ್ ॥೬೯॥

ಮೃಗಭೂ ಮಿಶ್ರಿತ ಸಾಂದ್ರ ಚಂದನ ರಸಂಗಳ್ ಚಂದನೋಶೀರ ವಾ ।
ರಿಗಳುಂ ನರ್ತಿತ ಹೇಮ ಚಾಮರ ಚಲನ್ಮಂದಾನಿಲಂಗಳ್ ವಿಲಾ ॥
ಸ ಗೃಹಂಗಳ್ ಕಳೆಯಲ್ಕೆ ಸಾಲ್ದಪುವೆ ರಾಗದ್ವೇಷ ವೇಗಂಗಳಿಂ ।
ಬಗೆಯೊಳ್ ಪೆರ್ಚಿದ ತಾಪಮಂ ಕಳೆವವೋಲ್ ಜೈನಾಂಘ್ರಿ ಕಲ್ಪಾಂಘ್ರಿಪಂ ॥

ಕಂ ॥ ಎನಿತೆನಿತಂ [2]ಪುಂಜಿಸಿದೊಡ
ವನಿತನಿತುಂ ಮಣಿಯಲಱಿಯದಣಿಯರಮುರಿಗುಂ ॥
ಧನದಿಂ ಲೋಭಾಗ್ನಿಯನಿಂ
ಧನ ಭಾರದಿನಾವನಗ್ನಿಯಂ ನಂದಿಸುವಂ ॥ ೭೧ ॥

ಜನಕನನರಣ್ಯನಗ್ರಜ
ನನಂತರಥನಿಳೆಯನೊಂದುತಿಂಗಳ ಕೂಸಿಂ ॥
ಗೆನಗಿತ್ತು ತೆಱೆದರೆನ್ನವೊ
ಲಿನವಂಶದೊಳಿಂತು ಮೋಹ ಮೂರ್ಖಿತರೊಳರೇ ॥ ೭೨ ॥

1. ಸಾವಿಸಲ್. ಚ. 2. ಭುಂ. ಕ. ಖ. ; ಭಂ. ಗ.

ಅಕ್ಕರ ॥ ಸಾವ ಪುಟ್ಟುವ ಭಯಮುಂ ಸಂಸಾರಮುಂ ಸಪ್ತಧಾತುಜಮುಂ ದೇಹಸ್ಥಿತಿಯ ।
ನಾವವಸ್ತುವನುಂಡೊಡಂ ತಣಿಯದ ಕಾಂಕ್ಷೆಯಂ ಬಗೆದು ತನ್ನೊ ॥
ಳೀವುದೀ ತೊಡರ್ಪನಗಿದೇಕೆಂದು ದಶರಥಂ ಭಾವಿಸಿ ಭಾವಿತಾತ್ಮನಂ ।
ಭಾವಿತಾತ್ಮನಂ ಪರಮಯೋಗೀಂದ್ರನಂ ಬೀಟಿಕ್ಕೊಂಡಯೋಧ್ಯೆಗೆ ಬಂದನಾಗಳ್ ॥ ೭೩ ॥

ಅಂತರಮನೆಯನಧಿರಾಜಂ ಪೊಕ್ಕು ನಿರ್ವರ್ತಿತ ನಿತ್ಯನಿಯಮನಾಸ್ಥಾನ ಮಂಟಪ ಮಧ್ಯ ಸ್ಥಿತ ಸಿಂಹಾಸನಮನಲಂಕರಿಸಿರ್ಪುದುಂ—

ಚ ॥ ನೆಲಸಿದ ರಾಜಮಂಡಲಿಯ ಮುಂಡಳಿಕರ್ಕಳ ದಂಡನಾಥ ಮುಂ ।
ಡಲಿಯ ನಿಯೋಗಿ ವರ್ಗದ ಪುರೋಹಿತ ವರ್ಗದ ಮಂತ್ರಿ ವರ್ಗದು ॥
ಜ್ವಲ ನವರತ್ನ ಭೂಷಣ ಕಿರೀಟ ಹಟದ್ಪ್ರಚಿಯಿಂದದೇಂ ಪಳಂ ।
ಚಲೆದುದೊ ರಾಜರಾಜಸಭೆ ಕುಂಭಜನೀಂಟಿದ ತೋಯ ರಾಶಿಯಂ ॥ ೭೪ ॥

ಕಂ ॥ ಗುರು ಜನಮುಮಾಪ್ತ ಜನಮುಂ
ಪರಿಜನಮುಂ ಬಂಧುಜನಮುಮಾಶ್ರಿತ ಜನಮುಂ ॥
ಪರಿಜನಮುಂ ತಿಂತಿಣಿಯಾ
ಗಿರೆ ಸಭೆಪೋಲ್ತತ್ತು ರತ್ನಮೇಳಾಪಕಮಂ ॥ ೭೫ ॥

ಅಂತೊಡ್ಡೋಲಗಂಗೊಟ್ಟು ದಶರಥ ಮಹೀನಾಥಂ ನಿಜ ತನೂಭವರಂ ಬರವೇಟ್ಟಿಟ್ಟುವುದುಂ ತದಾಜ್ಞೆಯಂ ತಲೆಯೊಳಾಂತು—

ಚ ॥ ಹಲ ಮುಸಲಾಯುಧಂ ನಡೆವ ತಾರ ನಗೇಂದ್ರಮನೊಂದುಕರ್ಮ್ಮುಗಿಲ್ ।
ಬಳಸಿದವೊಲ್ ವಿರಾಜಿಸೆ ವಿನೀಲಪಟಂ ನಡೆತಂದನೇಕ ಕುಂ ॥
ಡಲಮುದಯಾರ್ಕ ಮಂಡಲಮನೇಳಿಸೆ ಶೇಷನಶೇಷ ಧಾತ್ರಿಯಂ ।
ತಳೆವೆಡೆಯೊಳ್ ನೆರಂಬಡೆದವೋಲಿರೆ ದಕ್ಷಿಣ ವಾಮ ಬಾಹುಗಳ್ ॥ ೭೬ ॥

ಮ ॥ ಘನ ದೋರ್ದಂಡ ವಿಮಂಡಿತಂ ಘನಗದಾ ದಂಡಂ ಬೃಹತ್ಕಾಲದಂ ।
ಡನಿಭಂ ಭೀಕರಮಾಗೆ ಪೀತವಸನಂ ಸಂಧ್ಯಾಂಬುದಂ ಕೋದ ನೀ ॥
ಲನಗೇಂದ್ರಂ ನಡೆತರ್ಪ ಮಾಟಕ್ಕಿಯನುಪೇಂದ್ರಂ ದುರ್ಜಯಂ ರಾಮಚಂ ।
ದ್ರನ ಪಿಂದಂ ನಡೆತಂದನಾಯತ ಸಿತಾಂಭೋಜೇಕ್ಷಣಂ ಲಕ್ಷ್ಮಣಂ ॥ ೭೭ ॥

ಚ ॥ ಇದಿರ್ವರೆ ತತ್ಸಭಾಜನದ ಕಣ್ಮಲರುಂ ಮನಮುಂ ಕೆಲಕ್ಕೆ ವಂ ।
ದೊದವಿದ ಭಕ್ತಿಯಿಂದೆಱಗಿವಂ ಪಿತೃ ಪಾದಯುಗಕ್ಕೆ ರಾಘವಂ ॥

ಪದನಖ ಚಂದ್ರ ಮಂಡಲಿಗೆ ಚಂದ್ರಿಕೆಯಂ ಕುಡೆ ದೇಹದೀಪ್ತಿ ಹಾ।
ರದ ನೆವದಿಂದಮೋಲಗಿಸೆ ತಾರಗೆಯಂ ನಿಜಕಂಠ ಕಂದಳಂ ॥ ೭೮ ॥

ಅನಂತರಂ ಲಕ್ಷ್ಮಣ ಭರತ ಶತ್ರುಘ್ನರ್ ಸರ್ವಾಂಗ ಪ್ರಣತರಪ್ಪುದುಂ ಅನಂತ ಸುಖ ಭೋಗ ಭಾಗಿಗಳಾಗಿಮೆಂದು ಪರಸಿ ಪರ್ಯಂಕ ಪಾರ್ಶ್ವದೊಳಿಕ್ಕಿದ ಮಣಿಮಯಾಸನಂಗಳೊಳ್ ಕುಳ್ಳಿರಿಸಿ ದಶರಥಂ ರಾಮಚಂದ್ರನ ಮುಖಚಂದ್ರಮಂ ನೋಡಿ–

ಚ ॥ ನಿಲೆ ನುಡಿವೀವ ಕಾವ ಧರೆಯಂ ಪ್ರತಿಪಾಲಿಪ ಧರ್ಮವೀಥಿಯಿಂ।
ತೊಲಗದ ಪೆರ್ಮೆಯಂ ತಳೆದ ಪೆರ್ಮಗನಂ ಭುವನಾಧಿಪತ್ಯದೊಳ್ ॥
ನಿಲಿಸಿ ನಿಸರ್ಗ ದುರ್ಗಮೆನಿಸಿರ್ದಪವರ್ಗ ಪಥಕ್ಕೆ ದಾಟಿಯಿ।
ಟ್ಟಲಘು ಪರಾಕ್ರಮಕ್ಕೆ ನೆಲೆಯಾಗದ ಪಾರ್ಥಿವನೇಂ ಕೃತಾರ್ಥನೇ ॥ ೭೯ ॥

ಮ ॥ ನೊಸಲೊಳ್ ಕಣ್ಬಡೆದಂತೆ ಪುತ್ರ ಪಡೆದೆಂ ನಿನ್ನಂ ಸ್ಫುರತ್ತೇಜನಂ।
ವಸುಧಾ ರಾಜ್ಯಮನೊಪ್ಪುಗೊಳ್ ನಿಲಿಸು ನೀನೆನ್ನಂ ತಪೋರಾಜ್ಯದೊಳ್ ॥
ಪಸುಗೂಸಿಂಗೆನಗಿತ್ತು ಮಜ್ಜನಕನೀ ಸಂಪತ್ತಿಯಂ ಪೂಣ್ದು ಸಾ।
ಧಿಸಿದಂ ಸಜ್ಜನತಾ ಶರಣ್ಯನನರಣ್ಯಂ ಮೋಕ್ಷ ಸಂಪತ್ತಿಯಂ ॥ ೮೦ ॥

ಮ ॥ ಸುತ ನಮ್ಮನ್ವಯದೊಳ್ ಪುರಾತನ ಜಗದ್ವಿಖ್ಯಾತ ಭೂನಾಥರೀ।
ಸ್ಥಿತಿಯಿಂ ರಾಜ್ಯ ಸುಖಂಗಳೊಳ್ ತಣಿದು ತತ್ತ್ವಾಭ್ಯಾಸ ವಿಶ್ರಾಂತ ಜೀ॥
ವಿತರಾದರ್ ಮಜ್ಜೆದೀ ಕುಲಕ್ರಮಮನಾನಿಂತ[1]ರ್ದು ಸನ್ಮಾರ್ಗ ಪ।
ದ್ಧತಿಯಂ ಹಾಸ್ಯರಸ ಪ್ರವಾಹ ಭರದಿಂ ಪ್ರಕ್ಷಾಳಿತಮ್ಮಾಜ್ಞೆನೇ ॥ ೮೧ ॥

ಮ ॥ ತಿಲಕಾಕಾರದಿನಿರ್ಕೆ ನಿನ್ನ ನೊಸಲೊಳ್ ಸಾಮ್ರಾಜ್ಯಪಟ್ಟಂ ಧರಾ।
ವಲಯಾಲಂಕೃತಮಕ್ಕೆ ನಿನ್ನ ಭುಜದಂಡಂ ನಿನ್ನ ಮೌಳಿಪ್ರಭಾ ॥
ವಲಿಯಿಂ ಚಿತ್ರಿತಮಕ್ಕೆ ಬೆಳ್ಗೊಡೆ ತಪಶ್ಶ್ರೀಗಾಂ ಮನಂದಂದೆನೆ।
ನ್ನೊಲವಂ ಪಾಲಿಸು ಪಾಟಿಯಲ್ತು ಪಿತೃವಾಕ್ಯೋಲ್ಲಂಘನಂ ರಾಘವಾ ॥೮೨॥

ಚ ॥ ಕಿಡಿವಿಡೆ ಕರ್ಪರಂ ಸುಗಿದು ಮೆಯ್ದೆಗೆದಂ ಕಮಠಾಧಿಪಂ ಪಡ।
ಲ್ವಿಡೆ ಪೆಡೆಗಳ್ ಫಣಿಪ್ರಭು ಮೊಗಂದಿರಿದಂ ದಿಸೆಯಾನೆ ಮಾರ್ಕೊರ॥
ಲ್ವಡೆಯದೆ ತಬ್ಬಿ ಮುಬ್ಬಿದುವಿವರ್ಕತಿಭಾರದೊಳಾದ ಸೇದೆಯಂ।
ಕಿಡಿಸಿ ತನೂಜ ನೀಂ ತಳೆವುದೀ ನೆಲನಂ ನಿಜಬಾಹು ದಂಡದೊಳ್ ॥ ೮೩ ॥

ಎಂಬುದುಂ ರಾಮಚಂದ್ರಂ ಮುಕುಳಿತ ಕರಸರೋಜನಾಗಿ—

---

1. ಡ. ಚ.

ಮ ॥ ಧರೆಯಂ ದ್ವಾದಶ ಚಕ್ರವರ್ತಿಗಳಿಗಿತ್ತಲ್ ದೇವ ನಿವ್ಮಾ ಭುಜಾ ।
ಪರಿಘಕ್ಕೊಪ್ಪಿಸಿ ಬೇಟ್ಟುದಂ ಪಡೆದುವೆತ್ತಾನುಂ ದಿಶಾದಂತಿ ದಿ ॥
ಕ್ಕರಿಣೀ ಪೇಚಕ ಚುರಬನ್ಯೆಕ ಸುಖಮುಂ ಶೇಷೋರಗಂ ಭೋಗಿನೀ ।
ಪರಿರಂಭೋತ್ಸವಮುಂ ಪುರಾಣ ಕಮಠಂ ನಿದ್ರಾಂಗನಾ ಸಂಗಮುಂ ॥ ೪೪ ॥

ಚ ॥ ಬಳವದರಾತಿ ಮಂಡಲಮನಂಡಲೆದುದ್ಧತ ಬಾಹು ದಂಡದಿಂ ।
ದಿಳೆಯನಿಳೀಶ ನೀಂ ತಳೆದುದಂ ರಣ ಬಾಲಕರೆಮ್ಮ ವಂದಿಗರ್ ॥
ತಳೆವರೆ ವಿಶ್ವಲೋಕಮುಮನಶ್ರಮದಿಂ ಪ್ರಬಲ ಪ್ರಭಂಜನಂ ।
ತಳೆವವೊಲಕ್ಷಮಂ ತಳೆಯಲಾರ್ಕುಮೆ ವೀಜನ ಮಂದಮಾರುತಂ ॥ ೪೫ ॥

ಎನೆ ದಶರಥಂ ತನಯನ ವಿನಯ ವಚನಮಂ ಮನದೆ ಕೊಂಡು—

ಮ ॥ ತನಯಂಗೊಪ್ಪಿಸಿ ರಾಜ್ಯಮಂ ನಿಯಮದಿಂ ನಿಲ್ವರ್ ತಪೋರಾಜ್ಯದೊಳ್ ।
ಮನುವಂಶ ಕ್ಷಿತಿನಾಥರೀ ಸ್ಥಿತಿಗೆ ನಿನ್ನಂ ಪ್ರಾರ್ಥಿಸಲ್ವೇಡ ನಂ ॥
ದನ ಸಂಕ್ರಂದನ ವಂದನೀಯ ಪದದೊಳ್ ನಿಲ್ವೆಂ ತಪೋರಾಜ್ಯದೊಳ್ ।
ನಿನಗಸ್ಮದ್ವಚನಂ ವಿಧೇಯಮದಱಿಂ ಕೈಕೊಳ್ ಧರಾಭಾರಮಂ ॥ ೪೬ ॥

ಎಂದಿವುಮೊದಲಾಗೆ ಪಲತೆಱದಿಂ ಮಱುಮಾತಿಂಗೆಡೆಯಿಲ್ಲದಂತು ನುಡಿದೆಂತಾನುಂ ರಾಮನನೊಡಂಬಡಿಸಿ ರಾಜ್ಯಸ್ಥನಪ್ಪಂತು ಮಾಡೆ ತದನಂತರಂ ಭರತಂ ಮುಕುಳಿತ ಕರಸರೋಜನಾಗಿ—

ಚ ॥ ಒಡಲಶುಚಿತ್ವಮಂ ಗತಿ ಚತುಷ್ಟಯದೊಳ್ ದೊರೆಕೊಳ್ವನಿಷ್ಟಮಂ ।
ಕಿಡುವ [1]ಸುಖಂಗಳಿಂ ತಣಿಯದಾಯಸಮಂ ತಿಳಿದಿರ್ದುಮೇನೊ ನಿ ॥
ಮ್ಮಡಿ ನಿಮಗಳ್ಕ ಬಿನ್ನವಿಸಲಿನ್ನೆವರಂ ಸೆಡೆದಿರ್ದೆನಿನ್ನೆರಂ ।
ಬಡೆದೆನಿಳೀಶ ನಿಮ್ಮೊಡನೆ ಸಾಧಿಸುವೆಂ ಪರಮಾರ್ಥ[2]ಸೌಖ್ಯಮಂ ॥ ೪೭ ॥

ಉಪಚಿತ ಸೌಖ್ಯಮೊಂದಧಿಕ ದುಃಖ ಸಮಾಗಮ ಜನ್ಮಭೂಮಿಯೊಂ ।
ದಪಗತ ದೋಷಮೊಂದಖಿಲ ದೋಷ ಸಮನ್ವಿತಮೊಂದತಾಪಮೊಂ ॥
ದಪರಿಮಿತಾನುತಾಪ ಪದಮೊಂದದಱಿಂ [3]ಜಿನಪಾದ ಕಲ್ಪಪಾ ।
ದಪ ಪರಿಸೇವೆಗಂ ಜನಪ ಸಂಪದ ಸೇವೆಗಮಾವುದಂತರಂ ॥ ೪೮ ॥

ಎಂದು ತಱಿಸಂದು ಭರತಂ ಬಿನ್ನವಿಸೆ ತತ್ಸಭೆಯೊಳೊರ್ವಳತಿತ್ವರಿತ

---

1. ಸುಖಂಗಳಂ. ಚ. 2. ತ್ಮ. ಕ ಖ. ಚ. 3. ನಿಜ. ಕ. ಖ. ಗ. ಘ. ಚ.

ಗತಿಯಿಂ ಬಂದು ರಾಮಂಗೆ ರಾಜ್ಯಮನಿತ್ತು ದಶರಥಂ ಭರತಂಬೆರಸು ತಪೋವನಕ್ಕೆ ಪೋಪುದಂ ನಿವೇದಿಸೆ ಕೈಕೆ ವಿಕಳೆಯಾಗಿ—

ಕಂ ॥ ಧರೆಯಂ ರಾಮಂಗಿತ್ತಂ
ಗುರುವಾನಟ್ಟಿಪಿಂದಮಿರ್ದೊಡೆನಗಕ್ಕುಂ ಕೆಂ ॥
ಕರ ಭಾವಮೆಂಬ ಬಗೆಯಿಂ
ಭರತಂಗೊಡರಸಿದುದಕ್ಕುಮಿಾ ನಿರ್ವೇಗಂ ॥ ॥ ೮೯ ॥

ಅವನೀಶ್ವರನೊಡನೆ ತನೂ
ಭವಂ ತಪಂಬಟ್ಟೊಡಾಸೆಯಾರೆನಗೆಂದಾ ॥
ಯುವತಿ ಭಯಚಕಿತೆ ಚಿಂತಾ
ರ್ಣವ ಗರ್ತ ನಿಮಗ್ನೆ ಮಜಿೆದಳೆಮೆಯಿಕ್ಕುವುದಂ ॥ ೯೦ ॥

ತಕ್ಕಟಿಿದೆನಗೆ ಸಪತ್ನಿಯ
ರಿಕ್ಕುಂಗೂಟಿಂಗೆ ಬಯಸಿ ಪಾರ್ದಿರ್ಪ ವಿಷಾ ॥
ದಕ್ಕೆ ಗುರಿಯಪ್ಪ ದುರ್ಯಶ
ಮಕ್ಕುಂ ತನಯಂ ತಪಕ್ಕೆ ಪಕ್ಕಾಗಲೊಡಂ ॥ ॥ ೯೧ ॥

ಎಂದು ಪಲುಂಬಿ ಪಂಬಲಿಸುತ್ತುಮಾ ಸಮಯದೊಳ್—

ಕಂ ॥ ತನಗಿನಿಯನಿತ್ತಮೆಚ್ಚಂ
ನೆನೆದಳ್ ಮಡಗಿಟ್ಟು ಮಜಿೆದ ಧನಮಂ ಬಡವಂ॥
ನೆನೆವಂತೆ ಕಾಂತೆ ಚಿಂತಾ
ಘನಾಂಧಕಾರ ಪ್ರದೀಪ ರೂಪೋಪಮಮಂ ॥ ೯೨ ॥

ಅಂತು ನೆನೆದು ಮನದೊಳ್ ಗುಡಿಗಟ್ಟಿ ಭರತನಂ ರಾಜ್ಯಮೋಹದೊಳ್ ತೊಡರ್ಚಲೆಂದೊಡರ್ಚಿ—

ಚ ॥ ಕನಕ ವಿಭೂಷಣ ಪ್ರಭೆ ತನುಪ್ರಭೆಯಿಂ ತನಿಗೊರ್ವುಗೊರ್ವೆ ಮೋ ।
ಹನಮನೊಡರ್ಚಲೆಂದು ಗುಣ ಹಾನಿಗೆ ಬೆರ್ಚದೆ ಧರ್ಮಹಾನಿಯಂ॥
ನೆನೆಯದೆ ಪಾತ್ರಸೇವೆ ವೃಥೆಯಾದುದೆನಲ್ ಮಲಿನಾಂತರಂಗೆ ಟ ।
ಕ್ಕಿನಸೊಡರಂತೆ ಕೈಕೆ ಪುಗುತಂದಳಿಳಾಧಿಪ ರಮ್ಯ ಹರ್ಮ್ಯಮಂ ॥ ೯೩ ॥

ಕಂ ॥ ಉದ್ವೇಗ ಭರಂ ಸಭೆಗೆ ಜ
ಗದ್ವಲ್ಲಭನಭಿಮತಕ್ಕೆ ವಿಘ್ನಮಪಾಯಂ ॥

ವಿದ್ವಜ್ಜನಕ್ಕೆ ಪಸುಗೆಗೆ
ವಿದ್ವೇಷಣ ವಿದ್ಯೆ ಬರ್ಪ ತೆಱದಿಂ ಬಂದಳ್ ॥ ೪೪ ॥

ಅಂತು ಕೆಲಕ್ಕೆ ಬಂದು—

ಚ ॥ ಅನುಚಿತಮೆಂಬಿದಂ ಬಗೆಗೆ ತಾರದೆ ದುರ್ಯಶಮಕ್ಕುಮೆಂಬಿದಂ ।
ನೆನೆಯದೆ ಕೈಕೆ ದೇವರೆನಗೀವುದು ಬೈಕೆಯ ಮೆಚ್ಚನೆಂಬುದುಂ ॥
ಮನುಕುಲದೊಳ್ ತೊದಳ್ನುಡಿ ಪೊದಟ್ಟಿಮೆ ಬೆರ್ಚದೆ ಬೇಡಿಕೊಳ್ ತಪೋ ।
ವನ ಗಮನಕ್ಕೆ ವಿಘ್ನಕರಮಲ್ಲದುದಂ ಮೃಗಶಾಬ ಲೋಚನೇ ॥ ೪೫ ॥

ಎನೆ ಮನದೆ ಕೊಂಡು—

ಚ ॥ ವದನ ಸುಧಾಂಶು ಬಿಂಬದ ಕಳಂಕದ ಬಿತ್ತುಗಳಂತೆ ವಕ್ತ್ರ ಪ ।
ದ್ಮದ ಮಧುಪಾನಮಂ ಸವಿದು ಸೊರ್ಕಿದ ತುಂಬಿಗಳಂತೆ ನೀಳ್ದುವಾ ॥
ಸುದತಿ ಸಮಗ್ರನಗ್ರಜನಿರಲ್ ಪಟಿಗಂಜದೆ ಪಾಪ ಭೀರುವಾ ।
ಗದೆ ಭರತಂಗೆ ರಾಜ್ಯ ಭರಮಂ ಕುಡವೇಟ್ಟಿ ಮಲೀಮಸೋಕ್ತಿಗಳ್ ॥ ೪೬ ॥

ಕಂ ॥ ದಶರಥನಂ ಕೈಕೆ ಚತು
ರ್ದಶ ವರ್ಷಾವಧಿಯನವನಿಯಂ ಬೇಡೆ ಚತು ॥
ರ್ದಶ ಭುವನಾವಧಿಯೆನೆ ದು
ರ್ಯಶ[1]ಸ್ತಟನ್ನಾದಮಾದಮೇನೊದವಿದುದೋ ॥ ೪೭ ॥

ಕನವನಿಪ ಕಾಳರಾತ್ರಿಯ
ದನಿಯಂತಾ ನೃಪನ ಕಿವಿಗೆ ದುಸ್ಸಹಮಾಯ್ತಾ ॥
ವನಿತೆಯ ನುಡಿ ಕಿಡಿಯಂತಿರೆ
ಮನಕ್ಕೆ ಪಡೆದತ್ತು ವೇದನಾಸ್ವಾದನಮಂ ॥ ೪೮ ॥

ಡೋಲಾಯಮಾನ ಮನನ
ಸ್ತಾಲಾಪಂ ಗತ ಮನೋರಥಂ ದಶರಥನಾ ॥
ಬಾಲೆಯ ದನಿ ಕಿವಿವುಗೆ ಘ್ರನ
ಮ್ಮಾಲೆಯ ದನಿಗೇಳ್ದ ಹಂಸನಂತಳವಟ್ಟಿದಂ ॥ ೪೯ ॥

ಮ ॥ ಎರಡಕ್ಕುಂ ನುಡಿ ಮೆಚ್ಚುಗೊಟ್ಟು ಕುಡದಂದೀ ಕೈಕೆಗಾನಿತ್ತೊಡಂ ।
ಧರೆಯಂ ಸ್ತ್ರೀಜಿತನಾಗಿ ಕೊಟ್ಟನವನೀಶಂ ರಾಮನಿರ್ದಂದದಿಂ ॥

---

1. ಸ್ಫುಟತ್ಪಟಹನಾದಮೇ. ಗ; ರ್ಯಶಃಪಟಹ ಗಭೀರ ನಾದಮೇ. ಘ.

ಭರತಂಗಂಬಪವಾದಮಕ್ಕುಮದಱಿಂದೇನೆಂಬೆನಾನೆಂದು ಮೂ।
ಗರವೋಲ್ ಮೌನದೊಳೊಂದಿ ಪಚ್ಚಬಗೆಯಿಂ ದುಮ್ಮಚ್ಚಮಂ ತಾಳ್ದಿದಂ೧೦೦

ಅಂತು ದಶರಥ ನರನಾಥಂ ದಿವಸದವಸಾನದ ರಥಾಂಗದಂತೆ ಚಿಂತಾಕ್ರಾಂತನಾಗಿರ್ಪುದುಂ—

ಕಂ॥ ಮಜ್ಜನನಿ ನೆಲನನೆನಗ
ಸ್ಮಜ್ಜನಕನನೆರೆದಳಿಂದು ನೊಂದಂ ಭರತಂ॥
ಲಜ್ಜಾನತನಭಿಮಾನದ
ಪಜ್ಜೆಯನೇಂ ತಪ್ಪಿ ಮೆಟ್ಟಲಱಿಗುಮೆ ತಕ್ಕಂ ॥ ೧೦೧॥

ಇಷ್ಟಮೆನಗಲ್ತು ಪತಿಗಮ
ನಿಷ್ಟಂ ಭಾವಿಸಿದಳಿಲ್ಲ ತನಗಂ ದೃಷ್ಟಾ॥
ದೃಷ್ಟ ವಿರೋಧಂ ದುರ್ಣಯ
ಚೇಷ್ಟಿತಮಂ ಜನನಿ ಮುಗ್ಧಮತಿ ತಿಳಿದಪಳೇ ॥ ೧೦೨॥

ಎಂದು ಭರತಂ ವಿಷಾದ ಭರ ತಂದ್ರೀಭೂತ ಚೇತಸನಾಗಿರ್ಪುದುಂ—

ಚ॥ ನುಡಿದಳನಿಷ್ಟಮಂ ನುಡಿದಳನ್ನೆಯಮಂ ಪತಿಗಂ ವಿರುದ್ಧಮಂ।
ನುಡಿದಳಸೇವ್ಯಮಂ ನುಡಿದಳನ್ವಯ ರಾಜ್ಯ ವಿನಾಶ ಹೇತುವಂ॥
ನುಡಿದಳಿನುತ್ತುಮಳ್ಕದೆ ನರೇಂದ್ರ ಸಭಾ ಜನಮಂದು ಕೈಕೆಯಂ।
ನುಡಿದುದು ಮೆಚ್ಚಿದಂದದೊಳೆ ದೋಷಮೆ ದುರ್ಬಲಮಾಗದಿರ್ಕ್ಕುಮೇ॥೧೦೩॥

ಮನದಱಿಪಿಲ್ಲದಂಗನೆಯರೊರ್ವರುಮಿಲ್ಲೆನೆ ಕೈಕೆ ಬೇಡಿ ಮೇ।
ದಿನಿಯನಿದೇಕೆ ಮಾಡಿದಳೊ ಮುಗ್ಧೆ ಸಹೋದರರೊಳ್ ವಿಭೇದಮಂ॥
ತನಗಪವಾದಮಂ ದಶರಥಂಗೆ ವಿಷಾದಮನೀಗಳಾತ್ಮನಂ।
ದನನ ಮನಕ್ಕೆ ಖೇದಮನದೊಂದುಚಿತಾಚರಣ ಪ್ರಮಾದಮಂ ॥ ೧೦೪॥

ಕಂ॥ ಇತರರಳ[1]ವಲ್ಲದಪರಾ
ಜಿತಾ ಸುತಂಗಲ್ಲದೇಕೆ ದೇವಿ ಧರಿತ್ರೀ॥
ಪತಿಯಂ ವಸುಮತಿಯಂ ಜಡ
ಮತಿ ಬೇಡಿದಳೆಂದು ಕೆಲಬರೇಳಿಸಿ ನುಡಿದರ್ ॥ ೧೦೫॥

1· ವಲ್ಲಿ. ಗ.

ಕಂ॥ ಕೀರ್ತಿಸೆ ಧರೆ ತಲೆಗರೆದಿರೆ
ಮೂರ್ತಲೆ ರಾಘವನಮೋಘಶರಮುಂ ವಜ್ರಾ ॥
ವರ್ತಮುಮಲ್ಲದೆ ರಕ್ಷಿಸ
ಲಾರ್ತಪುವೇ ನೆಲನನುಟ್ಟಿದರಂಬುಂ ಬಿಲ್ಲುಂ ॥ ೧೦೬ ॥

ಗುಣಹಾನಿಗೆ ಬೆರ್ಚದೆ ಧಾ
ರಿಣಿಯಂ ಪ್ರಣಯದಿನಿಳೀಶನಿತ್ತೊಡಮೇಂ ಲ ॥
ಕ್ಷ್ಮಣನೀಯಲೀಯನೆಂಬುದ
ನೆಣಿಸಳಿ ಜಡಮತಿಗಳಾಗದಿರ್ಪರೆ ಪೆಂಡಿರ್ ॥ ೧೦೭ ॥

ಸುತಮೋಹದಿನೀ ವಧು ಪತಿ
ಹಿತಮುಂ ಭಾವಿಸಿದಳಿಲ್ಲ ತನಗಮಣಂ ದು ॥
ರ್ಗತಿ ಹೇತುವನತಿಮೋಹಂ
ಗತಿಗಿಡಿಸುಗುಮೆಂಬ ನಾಡನುಡಿ ತಪ್ಪುಗುಮೇ ॥ ೧೦೮ ॥

ಮೋಘಮನಖಿಲ ಪರಿಗ್ರಹ
ದಾಘಮನೀ ಕೈಕೆ ಬೇಡೆ ಧರೆಯಂ ತೃಣದಿಂ॥
ಲಾಘವಮೆನೆ ಬಗೆದೀಗುಂ
ರಾಘವನೌದಾರ್ಯ ತುಂಗನೀಯದುದುಂಟೇ ॥ ೧೦೯ ॥

ಮ॥ಸ್ರ॥ಭರತಂ ಲಜ್ಜಾನತಂ ತಾಯ್ ವಿಕ್ಲಳೆ ದಶರಥಂ ವಿಹ್ವಲಂ ಲಕ್ಷ್ಮಣಂ ಕೋ।
ಪ ರಸಾವೇಶಂ ಸಭಾಮಂಡಲಮಸಕೃದಸದ್ವಾಕ್ಯ ಮುಕ್ತೋಷ್ಮಮಂತಃ ॥
ಪುರವಂತಶ್ಯಾನ್ಯಮಿಂತಿರ್ಪುದುಮುಪಚಿತ ಕಾರುಣ್ಯ ದೃಷ್ಟಿ ಪ್ರಭಾ ನಿ ।
ರ್ಭರ ಪೂರಂ ಪಾರಿಜಾತಂ ಕಡಲ ನಡುವೆ ಕೈವಂದವೋಲ್ ರಾಮನಿರ್ದಂ

ಉ ॥ ತಂದೆಯ ನನ್ನಿ ನಿಲ್ವುದು ಮನೋರಥವಪ್ಪುದು ತಾಯ್ಗೆ ರಾಜ್ಯದೊಳ್ ।
ನಿಂದಪನೆನ್ನ ತಮ್ಮನೊಸೆದಿತ್ತು ಕೃತಾರ್ಥನೆನಪ್ಪೆನೆನ್ನ ಸೈ ॥
ಪಿಂ ದೊರೆಕೊಂಡುದೀ ಪರಮ ಲಾಭವೆನುತ್ತುಮುದಾತ್ತ ಚಿತ್ತನಾ ।
ನಂದಮನಪ್ಪುಕೆಯ್ದು ಪುಲಕೋದ್ಗಮಮಂ ತಳೆದಂ ಹಲಾಯುಧಂ॥೧೧೧॥

ಚ ॥ ಮಗನೆನಿಪಂಗೆ ಮಾತೃಪಿತೃ ಭಕ್ತಿಯೆ ಕೃತ್ಯಮಿಹತ್ರಿಗಂ ಪರ ।
ತ್ರಿಗಮುಪಕಾರಿ ಬೇಱೆ ಪೆಱಿತಾವುದೊ ಚಾರುಚರಿತ್ರಮೆಂದು ಕೀ ॥
ರ್ತಿಗೆ ದೆಸೆ ಸಾಲವೆಂಬಿನೆಗಮರ್ಣವ ಮೇಖಲೆಯಂ ಧರಿತ್ರಿಯಂ ।
[1]ಬಗೆಯನೆ ಬಾಟ್ತಿಗೆಯ್ಯನೆ ಜರತ್ಕೃಣ ಲಾಘವಮೆಂದೆ ರಾಘವಂ ॥೧೧೨॥

1. ಬಗೆದನೆ ಬಾಟಕ್ತಿಗೆಯ್ವನೆ. ಚ.

ಚ ॥ ಅಸದನ್ನುಶಾಸನಂ ಸದವನಂ ನೃಪಲಕ್ಷಣವೊಂದು ಬಾಹು ಸಾ ।
ಹಸಗುಣವೊಂದು ದಾನಗುಣವಿಾಯೆರಡುಂ ನಿಮಿರ್ವಂತು ಪೋಗಿ ಸಾ ॥
ಧಿಸುವೆನರಾತಿ ಮಂಡಲಮನೆನ್ನನುಜಂಗೆನಗಮ್ಮನಿತ್ತುದಂ ।
ವಸುಧೆಯನೀವೆನೆಂದು ಮನದೊಳ್ ತಱಿಸಂದನುದಾತ್ತರಾಘವಂ ॥ ೧೧೩ ॥

ಅಂತು ನಿಶ್ಚಯಿಸಿ ಕೈಕೆಯ ಮುಖಕಮಲ ವಿಲೋಕನಂಗೆಯ್ದು ಮುಕುಳಿತ ಕರಕಮಲನುಂ ವಿಕಸಿತ ಹೃದಯ ಕಮಲನುಮಾಗಿ—

ಚ ॥ ಪುಸಿ ಪೊಲನಲ್ತು ನಾಲಗೆಗೆ ಪಂದೆತನಂ ವೊಱೆಯಲ್ತು ಕೈಯ ಕೂ ।
ರಸಿಗೆ ಕುಲಕ್ರಮಂ ರಘುಕುಲಕ್ಕಿದು ದೇವಿಯರ್ಗೆನ್ನ ದೂಸಱಿಂ ॥
ಪುಸಿನುಡಿಯಂ ಮದೀಯ ಜನಕಂ ನುಡಿದಂದು ಜನಾಪವಾದವೆ ।
ಣ್ಬೆಸೆಗಮನರ್ಗಳಂ ಪರೆಗುಮಾನದನೇಳಿಸೆ ದೈನ್ಯಮಾಗದೇ ॥ ೧೧೪ ॥

ಮ ॥ ಧರೆಯಂ ತಂದೆಯ ನನ್ನಿಗಿತ್ತು ಧರೆಯಂ ಕೈಕೊಂಡೊಡೆನ್ನೊಳ್ಪು ಬೀ ।
ಸರಮಕ್ಕುಂ ಬಗೆ ಕೂಡದಂದು ನಿಮಗಕ್ಕುಂ ಪ್ರಾರ್ಥನಾಭಂಗಮಿಾ ॥
ಯೆರಡುಂ ದುರ್ಣಯವೆನ್ನ ಕೀರ್ತಿಗೆ ಕಲುಂಬಂ ಮಾಡುಗುಂ ರಾಜ್ಯಮಂ ।
ಭರತಂಗಟ್ಟಿಜೊಳಿತ್ತೆನೆನ್ನ ನುಡಿಯಂ ನೀನಿಂತು ನಂಬಂಬಿಕೇ ॥ ೧೧೫ ॥

ಕಂ ॥ ಎನಗೆ ಬೆಸಸಿದೊಡೆ ಸಾಲದೆ
ಜನನಿಯರೀ ಧರೆಯನೆನ್ನ ತಮ್ಮಂಗಾನೀ ॥
ಯೆನೆ ಬೇಡವೇಟ್ಟುದೇ ಮ
ಜ್ಜನಕನನಿಲ್ಲಿವರಮಿಂತಿದಾವುದು ಗಹನಂ ॥ ೧೧೬ ॥

ಎಂದು ತಾಯ ಬಯಕೆಯಂ ತೀರ್ಚಿ—

ಮ ॥ ಜನಕಂ ರಾಜ್ಯಮನೀಯೆ ರಾಮನ ಮುಖಂ ಹರ್ಷಕ್ಕೆ ಪಕ್ಕಾದುದಿ ।
ಲ್ಲನುಜಂಗಯ್ಯನ ನನ್ನಿಯಂ ಸಲಿಸಲೆಂದೀವಲ್ಲಿ ಹರ್ಷಕ್ಕೆ ತಾ ॥
ಯ್ವನೆ ತಾನಾದುದಿದಾವುದಚ್ಚರಿಯೊ ಪೇಟೀವಲ್ಲಿ ಸತ್ವಾತ್ರದೊಳ್ ।
ಧನಮುಂ ಪೋ ನಲಿವಂದದಿಂ ನಲಿವನೇ ಧನ್ಯಂ ಧನಪ್ರಾಪ್ತಿಯೊಳ್ ॥ ೧೧೭ ॥

ತದನಂತರಮುದಾತ್ತರಾಘವಂ ತಂದೆಯ ಮುಖಾರವಿಂದಮುಂ ನೋಡಿ—

ಚ ॥ ಎಡೆಗುಡದಿರ್ದೊಡಂ ಗಗನಮಂಡಲಮುರ್ವರೆ ತಾಳದಿರ್ದೊಡಂ ।
ಮಿಡುಕದೆ ಗಾಳಿ ವೀಯ್ಗರಿದೊಡಂ ಮಳೆಗಳ್ ಮಳೆಗಾಲದಂದಣಂ ॥

ತಡೆದೊಡನುಗ್ಗಿ ತೋಱದೊಡಮುಷ್ಣತೆಯಂ ರಘುವಂಶಜರ್ ತೊದ ।
ಳ್ನುಡಿದೊಡಹಾಹವಕ್ಕೆ ಸೆಡೆದಿರ್ದೊಡಮೆಂತೊ ಜಗಕ್ಕೆ ಜೀವನಂ ॥ ೧೧೮ ॥

ಕಂ ॥ ದೇವರೆನಗಿತ್ತೊಡಂ ವಸು
ಧಾ ವಲಯಮನಾಳ್ವರೆನ್ನತಮ್ಮಂದಿರೆ ಚಿಂ ॥
ತಾ ವಿಷಯಮಲ್ತು ಭರತಂ
ಗೀವುದು ವಸುಮತಿಯನೆಮ್ಮೊಳೆಡೆಗಟ್ಟುಂಟೇ ॥ ೧೧೯ ॥

ಭರತಂ ತಪಕ್ಕೆ ನಡೆಗುಂ
ಧರೆಯೊಳ್ ನಿಲಿಸದೊಡೆ ಸುತನಗಲ್ಕೆಯೊಳಕ್ಕುಂ ॥
ಮರಣಂ ಜನನಿಗೆ ನಿಮಗಂ
ದೊರೆಕೊಳ್ಗುಮದೃಷ್ಟ ಬಾಧೆವೆರಸಪವಾದಂ ॥ ೧೨೦ ॥

ಪ್ರಾಪ್ತಿಯನಸಕಱಿಯಲುಮ
ಪ್ರಾಪ್ತಿಯನಾಗಿಸಲುಮಾಗದದಱಿಂ ದೋಷಾ॥
ವಾಪ್ತಿಯನೇಂ ನಿಮ್ಮನ್ನರ್
ಸುಪ್ತರವೋಲ್ ಮೋಹಮೂರ್ಛೆಯಂ ತಾಳ್ದುವರೇ ॥ ೧೨೧ ॥

ಎಂತುಟು ಶುಭಾಶುಭೋದಯ
ಮಂತುಟನನುಭವಿಪರಾರುಮಿದನಱಿಯುತ್ತುಂ ॥
ಚಿಂತಾಜ್ವರಮಂ ಪಿರಿಯರ್
ಸ್ವಾಂತದೊಳಿರಿಸುವುದೆ ದೇವ ಜಡಮತಿಗಳವೋಲ್ ॥ ೧೨೨ ॥

ಮ ॥ ಪಡೆಮಾತೇಂ ಸುತ ಮೋಹದಿಂ ದಶರಥಂ ಮಾತಾಡಿದಂ ತಪ್ಪನೆಂ ।
ದೊಡೆ ದೇವರ್ಗಪವಾದಮಕ್ಕುಮೆನಗಂ ರಾಮಂ ಗಡಂ ಕೇಳ್ದುಮಾ ॥
ನುಡಿಯಂ ರಾಜ್ಯಮನಾಸೆಗೆಯ್ದನೆನೆ ಸೈನ್ಯಂ ಬರ್ಕುಮಿನ್ನಾಸೆಗೆ ।
ಯ್ದೊಡೆ ನಿಮ್ಮಾಜ್ಞೆಗೆ ತಪ್ಪಿದೆಂ ಸಲಿಸಿನೊರ್ಮಿಂಗೆನ್ನ ವಾಗ್ವೃತ್ತಿಯಂ॥೧೨೩॥

ಮ॥ ಸ್ರ॥ ಪದಿನಾಲ್ಕುಂವರ್ಷಮಂ ತಾಯ್ ತನಯನ ತಪಮಂ ಮಾಣಿಸಲ್ ರಾಜ್ಯಮಂ ಬೇ ।
ಡಿದಳೊಪ್ಪಂ ಮಾಡಿದಳ್ ಸೋದರ ವಿರಹಿತಮೇಬಾಟ್ಟಿ ಸಾಮ್ರಾಜ್ಯ ಸಂಪ॥
ತ್ಪದವುಸ್ತದ್ಭಾಹು ವೀರ್ಯ ಪ್ರಕಟನದೊಲವಿಂದನ್ನೆಗಂ ದಿಗ್ವಿಯೋದ್ಯೋ ।
ಗದಿನೀಗಳ್ ಪೋಗಿ ಬರ್ಪೆಂ ಭರತನ ನೊಸಲೊಳ್ ನಿಲ್ಕೆ ಸಾಮ್ರಾಜ್ಯಪಟ್ಟಂ॥

ಎಂದು ಬಿನ್ನವಿಸಿದ ರಾಘವನಮೋಘ ವಾಕ್ಯ ಮಾಣಿಕ್ಯ ಕಿರಣದಿನಪಸಾರಿತ ಮೋಹಾಂಧಕಾರನಾಗಿ—

ಮ॥ಸ್ರ॥ಪರಮಶ್ರೀ ವಲ್ಲಭಂಗೀ ಚರಮ ತನುಗಿದೇಬಾಟ್ತಿ ನಮ್ಮಾವ ರಾಜ್ಯಂ।
ಪರಮಾಣು ಪ್ರಾಯವೆಂದಾ ತನಯನ ವಿನಯಕ್ಕಂ ನಯಕ್ಕಂ ಗುಣಕ್ಕಂ॥
ಚರಿತಕ್ಕಂ ಬೆಕ್ಕಸಂಬಟ್ಟಧಿಪತಿ ತಳೆಯಂ ತೂಗಿದಂ ಸೂಸುವನ್ನಂ।
ಸುರಚಾಪ ಶ್ರೇಣಿಯಂ ಭಾಸುರ ಮಣಿಗಣ ನಾನಾಂಶು ಕೂಟಂ ಕಿರೀಟಂ॥

ಆ ಸಮಯದೊಳ್ ಭರತಂ ದಶರಥಂಗೆ ಮುಕುಳಿತಾಂಜಲಿ ಪುಟನಿಂತೆಂದಂ—

ಕಂ॥ ಜ್ಯಾಯನ ರಾಜ್ಯಮನಯ್ಯ ಕ
ನೀಯನಪೇಕ್ಷಿಸುವುದುಚಿತಮಲ್ತು ತಪೋರಾ॥
ಜ್ಯಾಯತ್ತಮೆನ್ನ ಚಿತ್ತಂ
ನ್ಯಾಯಾರ್ಜಿತಮಲ್ಲದೆನಿಪ ಧನಮೇಬಂಡಂ ॥ ೧೨೬ ॥

ಹೇಯಮನಱಿದುಂ ರಾಜ್ಯಮ
ನೀಯಲಪೇಕ್ಷಿಸುವಿರೆನಗೆ ನೀವೊಲ್ಲದುದಂ॥
ಶ್ರೇಯಸ್ಕರಮಲ್ಲದುದಂ
ಹೇಯಮುಪಾದೇಯಮೆನಗದೆಂತಾದಪುದೋ ॥ ೧೨೭ ॥

ಎನ್ನೆವರಂ ವೈರಾಗ್ಯಂ
ತನ್ನೊಳ್ ತಲೆದೋಱಿದನ್ನೆವರಮೊಲವಕ್ಕುಂ॥
ತನ್ನಂ ತಾನಱಿದ ಬಟಿ
ಕ್ಕೆನ್ನರ್ಗಂ ವಿಷಯ ಸುಖದೊಳೊಲವಾದಪುದೇ ॥ ೧೨೮ ॥

ಎನೆ ದಶರಥಂ ಭರತನ ಪರಿಚ್ಛೇದಮಂ ಮನದೊಳೆ ಮೆಚ್ಚಿ ತನಯ! ನಿನಗಿದನ್ನೆವರಂ ಸಮಯಮಲ್ಲದೆಂತೆನೆ—

ಕಂ॥ ಪರಮ ಪುರುಷಾರ್ಥಮಿರ್ದುದು
ಚರಮದೊಳನ್ನೆವರಮುಟ್ಟಿದ ಪುರುಷಾರ್ಥದೊಳಾ॥
ಚರಿಸುವುದು ತಕ್ಕುದದಱಿಂ
ಪರಿವಿಡಿಯಂ ತಪ್ಪಲಾರ್ಗಮೇಂ ಬಂದಪುದೇ ॥ ೧೨೯ ॥

ಆದಱಿಂ ನಿನಗೆ ನಿಜಾಗ್ರಜನ ವಚನಮೆ ವಿಧೇಯಮೆನೆ ಮಱುವಾತುಗುಡಲಱಿಯದೆ ಭರತನಿರೆ ರಾಘವನಿಂತೆಂದಂ—

ಉ ॥ ನನ್ನಿಗೆ ಬನ್ನಮಾದೊಡಯಶಂ ಪಿರಿದಪ್ಪುದು ತಂದೆಗೆಂಬಿದಂ ।
ನಿನ್ನ ವಿಯೋಗದಿಂ ಜನನಿಗಪ್ಪುದು ಜೀವ ವಿಯೋಗಮೆಂಬಿದಂ ॥
ನಿನ್ನ ನೆಗಟ್ಟಿಗಂ ಮಹಿಮೆಗಂ ಪಿತೃವಾಕ್ಯಮೆ ಕೃತ್ಯಮೆಂಬಿದಂ ।
ನಿನ್ನೊಳೆ ನೀನೆ ಭಾವಿಸುವುದೇಳಿಸಲಪ್ಪುದಿದಾಗದೆಂಬಿದಂ ॥ ೧೩೦ ॥

ಚ ॥ ಕ್ರಮ ಪರಿಪಾಲನಾರ್ಥಮೆನಗಿತ್ತನಿಳಾಧಿಪನಿತ್ತೆನೆನ್ನ ರಾ ।
ಜ್ಯಮನಧಿರಾಜ ಸತ್ಯ ಪರಿಪಾಲನೆಗಾಂ ನಿನಗಂತಱಿಂದದ ॥
ಕ್ರಮಮಣಮಲ್ತು ನೀಂ ತಳೆವುದೊರ್ಮನದಿಂ ಯುವರಾಜ ರಾಜ್ಯಭಾ ।
ರಮನಧಿರಾಜ ವಾಕ್ಯಮೆನಗಂ ನಿನಗಂ ಕರಣೀಯಮಲ್ಲವೇ ॥ ೧೩೧ ॥

ಎಂದು ರಾಮನನುಜನಂ ರಾಜ್ಯದೊಳ್ ನಿಲ್ಪಂತೆಂತಾನುಮೊಡಂಬಡಿಸೆ ವಿಸ್ಮಯಂಬಟ್ಟು—

ಉ ॥ ಏದೊರೆಯರ್ ಮಹಾಪುರುಷರಾದ್ಯರಿದಂ ಪಿಡಿದೊರ್ವರೊರ್ವರೊಳ್ ।
ಕಾದಿದರೋಡಿದರ್ ಮಡಿದರಲ್ಲದೆ ತಂದೆಯ ನನ್ನಿಗಿತ್ತರಾರ್ ॥
ಮೇದಿನಿಯಂ ಜರತ್ತೃಣಮನೀವವೊಲೆಂದು ಕಡಂಗಿ ಬಣ್ಣಿಸಿ ।
ತ್ತಾದರದಿಂ ಮಹೀಭುಜ ಸಭಾ ವಲಯಂ ಬಲಭದ್ರರಾಮನಂ ॥ ೧೩೨ ॥

ಮ ॥ ಉರ್ವೀನಾಥರನೇಕರುಂ ಮಡಗಿ ಭಂಡಾರಂಗಳಂ ಲೋಭದಿಂ ।
ಪೆರ್ವಾವಾಗಿ ಪಿಶಾಚಮಾಗಿ ಪಲಕಾಲಂ ಕಾದುಕೊಂಡಿರ್ಪರಾ ॥
ರುರ್ವೀಚಕ್ರಮನಿಂತು ಕೊಟ್ಟರನುಜಂಗೆಂದಾ ಸಭಾವಿಷ್ಟರೋ ।
ರೊರ್ವರ್ ಬಣ್ಣಿಸಿದರ್ ಪರಾರ್ಥ ಗುಣ ಕಲ್ಪಾರಾಮನಂ ರಾಮನಂ ॥ ೧೩೩ ॥

ಕಂ ॥ ಕಾಗಿಣಿಗೆ ಮರಂ ಬೀಟಿ
ಲ್ವೋಗಿರ್ಕುಂ ಕಡಲ ಕಡೆವರಂ ನಿಮಿರ್ದ ಮಹೀ ॥
ಭಾಗಮನನುಜಂಗಿತ್ತಂ
ಭಾಗಿಗಳಾರ್ ಸೀರಪಾಣಿಯೊರೆಗಂ ದೊರೆಗಂ ॥ ೧೩೪ ॥

ಎಱಿಗುವುದೂರ್ಧ್ವಜ್ವಲನವೆ
ತೆಱನೆನಿಸಿದ ದೀಪವರ್ತಿ ನಿಧಿಗಾ ನಿಧಿಯಂ ॥
ತೊಱೆದಂ ದಲೆಂದೊಡಾರ್ಪಿನ
ತಱಿಸಲವಂ ಕಂಡನೇಕಕುಂಡಲನೆ ವಲಂ ॥ ೧೩೫ ॥

ವಸುಮತಿಯಂ ಮೃತ್ಪಿಂಡ
ಕ್ಕೆ ಸಮಂಗಂಡಾರೊ ಕೊಟ್ಟು ತಂದೆಯ ಪಟಿಯಂ ॥

ಮಸುಳಿಸಿ ಹಲಿಯವೊಲೆಂಟುಂ
ದೆಸೆವರೆಗಂ ವಿಶದ ಕೀರ್ತಿಯಂ ಪಸರಿಸಿದರ್ ॥ ೧೩೬ ॥

ಕಂ ॥ ಏನಾನುಮನಿತ್ತು ಕೆಲರ್ ।
ದಾನಗುಣಕ್ಕುಂತೆ ಬೆಸೆವರಯ್ಯನ ಸತ್ಯ ॥
ಕ್ಕೇನಯ್ಯ ರಘುಜನಂತಂ
ಭೋನಿಧಿ ವಳಯಿತಮನಿಳೆಯನಿತ್ತವನಾವಂ ॥ ೧೩೭ ॥

ಎಂದು ಪೊಗಲ್ವ ಸಭಾಜನದ ಸ್ತವನಕ್ಕಂ ಭರತಂ ಕ್ರಮುಂದಪ್ಪಿ ಸಾಕೇತ ಸಾಮ್ರಾಜ್ಯ ಪಟ್ಟಮನೊಡಂಬಟ್ಟುದರ್ಕಂ ಲಕ್ಷ್ಮಣಂ ಕಟ್ಟುಕಡೆದು—

ಕಂ ॥ [1]ಅಡೆವೊತ್ತೆ ಕೋಪಶಿಖಿ ಕ
ಣ್ಬೆಡಿಯಂ ಕೆಂಡಮುಮನುಗುಳೆ ಪುರ್ವ[2]ರ್ವಿಸೆ ಮೇ ॥
ಗಡರ್ಪ ಪೊಗೆಯಂತೆ ಕೃಷ್ಣಂ
ಕಡೆಗಾಲದೊಳೊಗೆದ ಧೂಮಕೇತುವೊಲಿರ್ದಂ ॥ ೧೩೮ ॥

ಅಂತು ಕೋಪವಶ ಗತನಾಗಿ—

ಶಾ ॥ ಕಾರಾಗಾರದೊಳಿಂದ್ರನಂ ಸೆಜೆಯಿಡಲ್ ಗೋತ್ರಾದ್ರಿಯಂ ಚಾಳಿಸಲ್ ।
ತಾರಾಮಂಡಲಮುಂ ನೆಲಕ್ಕೆ ನೆಲನಂ ವ್ಯೋಮಕ್ಕೆ ಪಕ್ಕಾಗಿಸಲ್ ॥
ಪಾರಾವಾರದ ನೀರನೀಂಟಲಖಿಳಾಶಾದಂತಿ ದಂತಂಗಳಂ ।
ಬೇರಿಂದಂ ಕಿಳಲಂದದೇಂ ಬಗೆದನೋ ರಕ್ತೇಕ್ಷಣಂ ಲಕ್ಷ್ಮಣಂ ॥ ೧೩೯ ॥

ಕಂ ॥ ಸೌಮಿತ್ರಿ ವಿಲಯಕಾಲ ಮ
ಹಾಮೇಘ ಸ್ಕಂಧ[3] ವಿಕಟ ನರ್ತಿತ ವಿದ್ಯು ॥
ದ್ದಾಮಮಿದೆನೆ ದಂತಾಂಶು
ಸ್ತೋಮಂ ಪೊಳೆದುಳ್ಕಿ ಬೆಟ್ಟವೆಟ್ಟನೆ ನುಡಿದಂ ॥ ೧೪೦ ॥

ಭರತಾವನಿಯಂ ಕೊಟ್ಟಂ
ಭರತಂಗೆ ರಘುಪ್ರವೀರನಯ್ಯನ ನುಡಿಯಂ ॥
ಪರಿಪಾಲಿಸ[4]ಲೆಂಗುಮೆ ಪೇಟುಂ
ಧರೆಯಂ ಬೆಳ್ಕಾಡಿಕೊಂಡರೆಂಗುಂ ಲೋಕಂ ॥ ೧೪೧ ॥

---

1 ಅಡಿ ಗ. ಘ. 2. ರ್ವಿಸಿ ಮೇಗಡರೆ. ಕ. ಖ. ಗ. ಘ. 3. ವಿಕಟ ವರ್ತಿತ. ಕ. ಖ. ಗ; ನಿಕಟ ನರ್ತಿತ. ಘ; ನಿಕಟ ವರ್ತಿತ. ಚ. 4. ಲೇಗುಮೆ. ಗ. ಚ.

ಕಂ ॥ ಕ್ರಮಮನತಿಕ್ರಮಿಸಿ ಪರಾ
ಕ್ರಮಮಿಲ್ಲೆಂದಿಟ್ಟಿಕೆಗೆಯ್ದು ಭರತಂಗಿತ್ತಂ ॥
ದಮಿತಾರಿ ದಶರಥಂ ರಾ
ಜ್ಯಮನೆಂಗುಂ ರಾಮನಿತ್ತನೆಂಗುಮೆ ಲೋಕಂ ॥ ೧೪೨ ॥

ಮ॥ಸ್ರ॥ ನಮಗಕ್ಕುಂ ನಿಸ್ಸಹಾಯಂ ಬಹು[1]ವಿಧದಿನಪಾಯಂ ಸುಖೋಪಾಯಮಕ್ಕುಂ।
ತಮಗೇಕಾಯತ್ತಮಕ್ಕುಂ ಪ್ರಜೆ ಪರಿಜನವೆಂದಬ್ಬೆ ಕೌಟಿಲ್ಯದಿಂ ರಾ ॥
ಜ್ಯಮನೀರೇಟಿಬ್ಬಮಂ ಬೇಡಿದಳಱಿಯದೆ ನೀಮಿತ್ತೊಡಂ ಮಿಕ್ಕರಂ ಮ।
ಟ್ಟಮಿರಲ್ ಪೇಟ್ಪೀಗುಮೇ ರಾಘವ ಕೊಡೆನೆಳಲೊಳ್ ಸಾಗರಾವರ್ತಚಾಪಂ॥

ಎಂದು ಪೊಡೆವ ಸಿಡಿಲಂತೆ ಗರ್ಜಿಸಿ ಮಣಿಮಯಾಸನದಿನೆಟ್ಟು—

ಕಂ ॥ ರೋಮಾಂಚದೊಡನೆ ಸಭೆಗೆ ಮ
ನೋಮುದಮಪ್ಪಂತು ನುಡಿಯೆ ಲಕ್ಷ್ಮಣದೇವಂ ॥
ರಾಮಂ ಪರಾರ್ಥ ಚರಿತ
ಪ್ರೇಮಂ ಕಣ್ಣಿರ್ವುಜರ್ವಿ ನೋಡಿದನಾಗಳ್ ॥ ೧೪೪ ॥

ಪಿರಿಯಣ್ಣನ ಜರ್ವಿಂಗೋ
ಸರಿಸಿದುದಲ್ಲದೊಡೆ ಶಾರ್ಙ್ಗಪಾಣಿಯ ಮುನಿಸುಂ ॥
ಹರನುರಿಗಣ್ಣಿಂ ಲೋಕಮ
ನರಿಗಳಿಗೆಗೆ ಬೂದಿಮಾಟ್ಪುದೊಂದಚ್ಚರಿಯೇ ॥ ೧೪೫ ॥

ಪರಿಹರಿಸಿದನೊದವಿದ ಕೋ
ಪ ರಸಾವೇಶಮನುಪೇಂದ್ರನಣ್ಣನ ಚಿತ್ತಂ ॥
ಕೊರಗಿದಪುದೆಂದುದಾತ್ತಂ
ಪಿರಿಯಂಗಿಚ್ಛಾವಿಘಾತಮಂ ಮಾಡುವನೇ ॥ ೧೪೬ ॥

ದಾರುಣ ಭಾವಮನುಪಸಂ
ಹಾರಿಸಿ ಕಣ್ಣಱಿದು ಮಟ್ಟಮಣ್ಣನ ಕೆಲದೊಳ್ ॥
ವಾರಿಜನಾಭಂ ಗರುಡೋ
ದ್ಗಾರ ಹರಿನ್ಮಣಿಯ ಕೆಲದ ಫಣಿಯವೊಲಿರ್ದಂ ॥ ೧೪೭ ॥

ಅನಂತರಂ ದಶರಥಂಗೆ ರಾಮನಿಂತೆಂದಂ—

---

1. ದಿನದಿ. ಕ. ಖ. ಗ. ಘ.

ಮ ॥ ಇರವೇಟ್ಕುಂ ಪೆಱಪಿಂಗಿ ಪಾಂಗಱಿಯದಾನಿಲ್ಲಿರ್ಪುದುಂ ಸುತ್ತುಗುಂ ।
ಪರಿವಾರಂ ಗುಣಹಾನಿ ನೆಟ್ಟನೆನಗಕ್ಕುಂ ಮುನ್ನಮೆನ್ನಿತ್ತುದುಂ ॥
ಭರತಂ ಪೆತ್ತುದುಮಾಳಮಕ್ಕುಮಪವಾದಾತೋದ್ಯ ನಾದಂ ವಸುಂ ।
ಧರೆ ನಿಲ್ವನ್ನೆವರಂ ದಿಶಾಕರಟಿ ಕರ್ಣಾಸ್ಫಾಲನಂಮಾಡುಗುಂ ॥ ೧೪೮ ॥

ಮ॥ಸ್ರ॥ತಲೆಯೊಳ್ ನಿರ್ಮ್ಮಾಜ್ಜ್ಞೆಯಂ ರನ್ನದ ತಲೆದೊಡವಂ ಪೊತ್ತು ಮೆಯ್ವೆತ್ತ ಬಾಹಾ।
ಬಲದಿಂ ಬೆಂಕೊಂಡಖಂಡಪ್ರಭರನಹಿತರಂ ಸಾಧಿಪೆಂ ವಿದ್ವಿಷನ್ಮಂ ॥
ಡಲಮಂ ಬೀಟಿಕ್ಕಿಂಡೆನೆಂದಯ್ಯನ ಚರಣಯುಗಕ್ಕರ್ಘ್ಯಪಾದ್ಯಂಗಳಂ ನಿ ।
ಸ್ತುಲ ಮೌಳಿ ಸ್ಥೂಲ ಮುಕ್ತಾಫಲ ರುಚಿ ಜಲದಿಂ ರಾಮನುದ್ವಾಮನಿತ್ತಂ ॥

ಅಂತು ವಿನತ ಮಸ್ತಕನಾಗಿ ಸಭೆಯಿನೆಟ್ಟು ಪೋಗೆ—

ಕಂ ॥ ಒಡನೆ ದಶರಥನ ಕಣ್ಗಳ್
ನಡೆದುವು ಕಣ್ಣೊಡನೆ ತಳರ್ದು ನಿಲ್ಲದೆ ಮನಮುಂ ॥
ನಡೆದುದದಱೊಡನೆ ನಿಡುಸುಯ್
ನಡೆದುದು ಸುಯ್ಯೊಡನೆ ನೃಪತಿ ಮೂರ್ಛೆಗೆ ಸಂದಂ ॥ ೧೫೦ ॥

ಮ॥ಸ್ರ॥ಕಡೆಗಣ್ಣಿಂ ಕರ್ಣಮೂಲಕ್ಕೊಗೆದುಗುತರೆ ಬಾಷ್ಪಾಂಬುಗಳ್ ಸುಯ್ಲ ಪೊಯ್ಲಿ ।
ರ್ದೆಡೆಯೊಳ್ [1]ಸಂದೇಹಮುಂ ಪುಟ್ಟಿಸೆ ಮಿಡುಕುವ ತಾಣಂಗಳಲ್ಲಲ್ಲಿ ಸತ್ವಂ ॥
ಗಿಡೆ ಧೈರ್ಯಂಗೆಟ್ಟು ಸಂಸಾರಮನುಜಿದ ಮಹಾಸತ್ವನುಂ ಮೂರ್ಛೆವೋದಂ ।
ಗಡ ಜನ್ಮಾರಣ್ಯದೊಳ್ ಮಿಕ್ಕರನಟಲಿಸದೇ ಮೋಹದಾವಾಗ್ನಿ [2]ದಾಹಂ ॥೧೫೧॥

ಅಂತು ದಶರಥಂ ಮೂರ್ಛಿತನಾಗೆ—

ಮ॥ಸ್ರ॥ ಪತಿ ಪುತ್ರಂ ಪೋಗೆ ಮೂರ್ಛಾಭರ ಪರವಶನಾಗಿರ್ಪುದುಂ ಕೈಕೆ ಲಜ್ಜಾ ।
ನತೆ ಕಾಂಚೀ ರತ್ನಘಂಟಾ ರವದೊಡನಪವಾದ ಪ್ರಣಾದಂ ದಿಶಾ ಸಂ ॥
ತತಿಯಂ ತಳ್ಪೊಯ್ಯೆ ತಳ್ಪೊಯ್ದೆ ಮೆದುಱುಗಲನೊಟ್ಟೈಸಿ ಬಾಷ್ಪಾಂಬು ಧಾರಾ।
ತತಿ ಮುಕ್ತಾಹಾರಮಂ ಪೆರ್ಮೊಲೆಗೆ ಕುಡೆ ತದಾಸ್ಥಾನದಿಂದೆಟ್ಟು ಪೋದಳ್ ॥

ಅನಂತರಂ—

ಕಂ ॥ ಅನುಜಂ ಸಭೆಯಿನಗಲ್ದ
ಣ್ಣನ ಬಱಿಯಂ ಸಲ್ವ ಸಮಯದೊಳ್ ಬೇಗಂ ಲೋ ॥

---

1. ಸಂದೇಹಮುಂ ಸಂಗಳಿಸೆ ಮಿಡುಕುದಾಣಂ. ಗ. ಘ. 2. ತಾಪಂ. ಕ. ಚ.

ಚನದ ಬಲ್ಮಿಸಲ್ವ ಮನಮುಂ
ತನುವಿನ ಬಲ್ಮಿಸಲ್ವ ನೆಲಿಲನ್ನಿನಿಸಿಲ್ಮಿಕೆಯ್ದುಂ ॥ ೧೫೩ ॥

ಕಂ ॥ ಪ್ರತ್ಯಂತ ದೇಶ ಭೂಭೃದ
ಪತ್ಯರನೆಲ್ಬಿಟ್ಟ ಪುಗಿಸಿ ಕಾಂತಾರ ನಗೋ ॥
ಪತ್ಯಕಮುಂ ಕೌಸಲ್ಯಾ
ಪತ್ಯಂಗೋಲಗಿಪೆನವರ ಹರಿವಿಷ್ಟರಮುಂ ॥ ೧೫೪ ॥

ಎಂದು ಮನದೊಳ್ ಮುಂತಣಮಿರ್ದು ಲಕ್ಷ್ಮಣಂ ಸಭೆಯಿನೆಟ್ಟು ಪೋಪುದುಂ—

ಚ ॥ ಕ್ರಮದೊಡೆಯಂಗೆ ತಂದೆ ಧರೆಯಂ ಕುಡಲೆಂದಿರೆ ದೈವಯೋಗದಿಂ ।
ಸಮನಿಸಿದತ್ತು ಪುಣ್ಯ ಪುರುಷಂಗಮರಣ್ಯ ನಿವಾಸನೆಂದು ಜೇ ॥
ದಮನೊಳಕೊಂಡು ಗದ್ಗದ ರವಂ ನತ ದೀನ ಮುಖಂ ಪ್ರಲಾಪ ಸಂ ।
ಭ್ರಮಮುದಿತಾಶ್ರು ಶೋಕರಸ ಭಾಜನಮಾದುದು ತತ್ಸಭಾ ಜನಂ ॥ ೧೫೫ ॥

ಮಾಲಿನಿ॥ ವಿಗತ ದಿಗಿಭವಾಶಾ ದೇಶಮಸ್ತಂಗತಾರ್ಕಂ ।
ಗಗನ ಪರಿಧಿ ಯಾತ ಪ್ರಾಣವಾತಂ ಶರೀರಂ ॥
ಸೊಗಯಿಸದವೊಲಾಗಳ್ ರಾಘವಂ ಪೋಗೆ ಕಣ್ಗಂ ।
ಬಗೆಗಮಿಲ್ಮಿಕೆಯಾದತ್ತಾ ಸಭಾ ಚಕ್ರವಾಲಂ ॥ ೧೫೬ ॥

ಅನ್ನೆಗಮಾ ವೃತ್ತಾಂತಮೆಲ್ಲಮುಂ ಸುಮಿತ್ರೆ ಕೇಳ್ದಪರಾಜಿತಾ ಮಹಾದೇವಿಯಲ್ಲಿಗೆ ವಂದು—

ಕಂ ॥ ಎರೆದಳ್ ಗಡ ಕೈಕೆ ವಸುಂ
ಧರೆಯಂ ಭರತಂಗೆ ರಾಮನಿತ್ತಂ ಗಡಿದೇಂ ॥
ದೊರೆಕೊಳ್ಗುಮೆ ಕರ್ಣಪರಂ
ಪರಿಯಿಂ ಕೇಳ್ದುದನೆ ನಿಮಗೆ ಪೇೞ್ಬುಂದೆಂ ॥ ೧೫೭ ॥

ಎಂಬುದುಮಪರಾಜಿತೆ ಭಯಚಕಿತ ಚಿತ್ತೆಯಾಗಿ—

ಕಂ ॥ ಎರೆವನ್ನಳೆ ಕೈಕೆ ವಸುಂ
ಧರೆಯಂ ತೃಣವಾಗೆ ಬಗೆದು ಕುಡುವನ್ನನೆ ಮುಂ ॥
ದರಧೈರ್ಯಂ ರಾಮುಂ ನುಡಿ
ದೊರೆಕೊಳ್ಗುಂ ದೈವಘಟನೆಯಿಂದಾಗದುದೇಂ ॥ ೧೫೮ ॥

ಎಂದವರ್ ತವ್ಮೊಳುವ್ಮಳಿಸಿ ನುಡಿಯುತ್ತಿರ್ಪುದುಂ—

ಕಂ ॥ ಐರಾವಣ ಗಜಮುಂ ಜನ
ವಾರಣನೊಂದಾಗಿ ಪುಗುವವೋಲ್ ಪುಗುತಂದರ್ ॥
ಸೀರ ಗದಾ ಹಸ್ತರ್ ಬಲ
ನಾರಾಯಣ ದೇವರಂತವುರದರಮನೆಯಂ ॥ ೧೫೯ ॥

ಅಂತರಮನೆಯುಂ ಪೊಕ್ಕು ಜನನೀಯುಗಳ ಪದಪಯೋಜಕ್ಕೆ ವಿನತರಾಗಿ ಸಮುಚಿತಾಸನದೊಳಿರ್ದು ಲಕ್ಷ್ಮಣದೇವಂ ಶ್ರೀರಾಮದೇವನ ಪರಾರ್ಥ ವೃತ್ತಿಯಂ ಬಿನ್ನವಿಸೆ ಕೇಳ್ದು ಅಪರಾಜಿತಾಮಹಾದೇವಿ ಶೋಕಾನಲ ದಂದಹ್ಯಮಾನ ಮಾನಸೆಯಪ್ಪುದುಂ—

ಕಂ ॥ ಅನವರತ ಬಾಷ್ಪಜಲ ಸೇ
ಚನದಿಂದಪರಾಜಿತಾ ಮಹಾದೇವಿಯ ಲೋ ॥
ಚನಪುತ್ರಿಕೆ ಬೆಳೆಯಿಸಿದುದು
ವನಪಾಲಿಕೆಯಂತೆ ಮೋಹ ಮೂರ್ಛಾ ಲತೆಯಂ ॥ ೧೬೦ ॥

ಚ ॥ ಬಿದಿ ಬೆದಱಟ್ಟಿದಂ ಮಗನೆ ಮುನ್ನ ತವರ್ಮನೆ ನಾಮಶೇಷಮಾ ।
ದುದು ಪತಿಯುಂ ತಪಕ್ಕೆ ನಡೆವಂ ಸುತ ನೀನುಮಗಲ್ದು ಪೋದೊಡಾ ॥
ವುದು ಗತಿ ಜೀವಿಪಂದಮೆನಗಾವುದು ಪೊರ್ದುವೆನಾರನೆಂದು ಗ ।
ದ್ಗದ ರವಮುಣ್ಮೆ ತಂದಳಪರಾಜಿತೆ ಕಣ್ಗೆ ಕದುಷ್ಣ ವಾರಿಯಂ ॥ ೧೬೧ ॥

ಕಂ ॥ ವನಚರ ವನಮೃಗ ವನಖಗ
ವನೇಭ ವನದಹನ ವನವಿಷಾಹಿಗಳಿನಪಾ ॥
ಯನ ಬಹುಳಮಪ್ಪ ವನಮುಂ
ತನೂಭವಂ ಪುಗುವೊಡೆಂತದಂ ಸೈರಿಸುವೆಂ ॥ ೧೬೨ ॥

ಅಗ್ರಸುತನಂ ಸಮಗ್ರ ಗು
ಣಾಗ್ರಣಿಯಂ ರಾಮನನ್ನನಂ ದಶರಥನಂ ॥
ತುಗ್ರಾಟವಿವುಗಿಸಿದ ಮದ
ನ ಗ್ರಹ ಪೀಡಿತರನಾರುಮಂ ಕಂಡಱಿಯೆಂ ॥ ೧೬೩ ॥

ಪರಿಹರಿಸಿ ಪಾಟಿಯಂ ಪಾ
ಪಿ ರಾಮನಂ ಪುಗಿಸಿ ವಿಪಿನಮಂ ನಿಜ ಸುತನಂ ॥

ಕರುಮಾಡಂಬುಗಿಸಿದಪಳ್
ಕರುಣಂಗೆಟ್ಟಾಕೆ ಕೈಕೆ ಕಲ್ಲೆರ್ದೆಯಕ್ಕುಂ ॥ ೧೬೪ ॥

ಕಂ ॥ ಕೊಟ್ಟೊಡೆ ಜನಕಂ ಪಾಟಿಯ
ಬಟ್ಟೆಯನಸಕಟಿದು ಪಿರಿಯನಿರೆ ತಾನುವೊಢಂ ॥
ಒಟ್ಟಂ ಗಡ ರಾಜ್ಯಕ್ಕೆನೆ
ಕೆಟ್ಟಟಿಪರ್ ಭರತನನ್ನರಾರ್ ಮನುಕುಲದೊಳ್ ॥ ೧೬೫ ॥

ಅಸದರ್ಥ ಸ್ವೀಕಾರಂ
ಪಸುಗೆಯೆ ನಿನಗೆಂದು ಬಿಡದೆ ಶತ್ರುಘ್ನಂ ಬಾ ॥
ರಿಸದೆ ಭರತನೊಳೊಡಂಬ
ಟ್ಟು ಸೈರಿಸಿರ್ಪಿರವೆ ಪೇಟಿದೇ ಕೈತವಮಂ ॥ ೧೬೬ ॥

ಮ ॥ ಅನುಕೂಲಂ ಬಿದಿ ಕೈಕೆಗಕ್ರಮದಿನಿತ್ತಂ ರಾಜ್ಯಮಂ ರಾಮದೇ ।
ವನದಂ ಲಕ್ಷ್ಮಣದೇವ ಮಿಾಜುವುದುಮಣ್ಣಂಗಕ್ಕುಮುದ್ವೇಗವೆಂ ॥
ದೆನಸುಂ ಮಿಾಜಿದೆ ಮಾಣ್ದೆ ಮಾಣದೊಡೆ ವಿದ್ವಿಷ್ಟಾಂಗನಾ ಗರ್ಭ ಪಾ ।
ತನಮೇನಾಗದೆ ನೀವಿ ಜೇವೊಡೆಯೆ ನೀನೀ ಸಾಗರಾವರ್ತಮಂ ॥ ೧೬೭ ॥

ಅರಸಂ ಪಾಟಿಗೆ ತಪ್ಪೆ ಪಾವಡರ್ದರಂತುನ್ಮಾದವಾದಂತೆ ಮೆಯ್ ।
ಮರವಟ್ಟಂತೊಡಲಿಂದುಸಿರ್ ತೊಲಗಿದಂತಾ ಸನ್ನಿಪಾತ ಜ್ವರಂ ॥
ದೊರೆಕೊಂಡಂತವಿವೇಕದಿಂದಭಿಜನಂ ವಿದ್ವಜ್ಜನಂ ಮಂಡಲೇ ।
ಶ್ವರ ಸೇನಾಪತಿ ಮಂತ್ರಿ ಮಂಡಲಮದೇಂ ಮಾರ್ಕೊಳ್ಳದಂತಿರ್ಕುಮೇ॥ ೧೬೮॥

ಕಂ ॥ ಅದು ಚಿತ್ರದ ಸಭೆ ಮದ ಸ
ರ್ಪದ ಸಭೆ ತಿರ್ಯಜ್ಮನುಷ್ಯ ಸಭೆ ಪೆಱತೇನ ॥
ಲ್ಲದೊಡೆ ಪೊಱಮಡಿಸಿ ಕಳೆವುದೆ
ಮದೀಯ ನಂದನನನಭಿಜನಾನಂದನನಂ ॥ ೧೬೯ ॥

ಎಂದಟಲುಮೆರ್ದೆವಟಲುಮೊದವೆ ಮಗನ ಮೊಗಮಂ ನೋಡಿ—

ಮ ॥ ಕ್ರಮಮಂ ನೋಡದೆ ನಂಟರಂ ತೊಱೆದು ನಾಡಂ ಬಿಟ್ಟು ಸಪ್ತಾಂಗ ರಾ ।
ಜ್ಯಮನೀಡಾಡಿ ಸಪತ್ನನಂ ನಿಲಿಸಿ ಸಿಂಹಾಸಂದಿಯೊಳ್ ತಾಯ್ಗೆ ದುಃ ॥
ಖಮನುತ್ಪಾದಿಸಿ ಪೋಪುದಾವುದುಚಿತಂ ಪಿಂತಿರ್ಪುದಿಲ್ಲುಯ್ಯದೆ ।
ಮ್ಮುಮನೆಂದಂಬಿಕೆ ಮೆಯ್ಯನೊಕ್ಕು ಏಗಳದ್ಬಾಷ್ಪಾಂಬುವಿಂ ತೇಂಕಿದಳ್ ॥

ಅಂತು ಶೋಕ ವಿಕಳೆಯಾದ ಕೌಶಲ್ಯೆಗೆ ಲಕ್ಷ್ಮೀಧರನಧರ ಕಿಸಲಯದಮೇಲೆ ದಂತಕಾಂತಿ ಲತಾಂತವಾಲೆ ಪಸರಿಸೆ ಮುಕುಳಿತ ಕರ ಸರೋಜನಾಗಿ—

ಮ ॥ ಕಲಿಯುಂ ಚಾಗಿಯುಮಿನ್ನರಾರ್ ಮನುಕುಲರ್ ಮುನ್ನಾದರೆಂಬನ್ನೆಗಂ ।
ನೆಲನುಂ ನೇಸಱುಮುಳ್ಳಿನಂ ನಿಲಿಸಿದಂ ತಕ್ಕೈರ್ಮೆಯಂ ಪೆರ್ಮೆಯಂ ॥
ಕುಲ ನಿಸ್ತಾರಕನೇಕ ಕುಂಡಲನದರ್ಕಾನಂದಮಂ ತಾಳ್ದದಾ ।
ಕುಲಮಂ ತಾಳ್ದುವುದೇ ಮದಗ್ರಜನೊಳಾದೀ ಪೌರುಷಂ ಶೋಚ್ಯಮೇ ॥೧೭೧॥

ಚ ॥ ಚರಮ ಶರೀರನೆಯ್ದುವನೆ ಬಾಧೆಯನುತ್ತಮಸತ್ತ್ವ[1]ನಾರ್ತದೊಳ್ ।
ಪೊರೆವನೆ ಪುಣ್ಯಮೂರ್ತಿಗೆಡಱುಂ ದೊರೆಕೊಳ್ಗುಮೆ ಮೂಱು ಲೋಕಮುಂ ॥
ಧುರದೊಳನಂತವೀರ್ಯನೊಳಿದಿರ್ಚುಗುಮೇ ಬಗೆದೀ ವಿಷಾದಮಂ ।
ಪರಿಹರಿಸಿಂ ಬಳಂ ಪ್ರಬಳನಾದೆಸೆಗುಮ್ಮಳಮೇವುದಂಬಿಕೇ ॥ ೧೭೨ ॥

ಕಂ ॥ ಕೆಲದ ನೆಲದರಸುಮಕ್ಕಳ
ನಲಂಘ್ಯ ಬಲರಂ ತಗುಳ್ದು ಕಳೆದೊಂದೆಡೆಯೊಳ್ ॥
ನೆಲೆವೀಡು ಮಾಡಿ ನಿಮ್ಮಂ
ಬಲಭದ್ರಂ ತರಿಸದಿನಿಸನಂತರಿಸುವನೇ ॥ ೧೭೩ ॥

ಉ ॥ ಪಂಬಲಿಸಲ್ಕೆ ಬೇಡ ಪೆಱತೇಂ ಭರತಂ ಭವದೀಯ ದಿವ್ಯ ಪಾ ।
ದಾಂಬುಜ ಸೇವೆಗೆಮ್ಮಳವಿಗಗ್ಗಳನಲ್ಲದೊಡಂ ಸಮಸ್ತ ಲೋ ॥
ಕಾಂಬಿಕೆ ನಿನ್ಮೊಳಾದಿಸುವೆಸಕ್ಕೆ ಸುಮಿತ್ರೆಯೆ ಸಾಲ್ವಳಗ್ರಜಂ ।
ಗಾಂ ಬೆಸಕೆಯ್ವನಿಂ ತೊಲಗಿಸಿಂ ಮನದೊಳ್ ನಿಮಗಾದ ಖೇದಮಂ ॥೧೭೪॥

ಎಂದು ಸೌಮಿತ್ರಿ ಬಿನ್ನವಿಸೆ ಮನದೊಳವಧಾರಿಸಿ ಕೌಶಲ್ಯೆ ವಿಗತ ಶೋಕ ಶಲ್ಯೆ ನಂದನನ ಮುಖಾರವಿಂದಮಂ ನೋಡಿ—

ಚ ॥ ಸುಚರಿತೆ ಸೀತೆ ನಿನ್ನೊಡನೆ [2]ಬರ್ಪವಳಿರ್ಪವಳಲ್ಲಳಿರ್ಪುದೇ ।
ನುಚಿತಮೆ ಪೇೞ್[3]ವಿಾಕೆಗೊಡನುಯ್ವುದೆನಲ್ ರಘುರಾಮನಂಬಿಕಾ ॥
ವಚನಮನಾತ್ಮಚಿತ್ತದೊಳಿೊಡಂಬಡುವೆತ್ತದನಂತೆ ಗೆಯ್ವೆನೆಂ ।
ದಚಲಿತನಾನತಂ ಪದ ನಖಾಂಶುಗಳಿಂ ತಳೆದಂ ಲಲಾಮಮಂ ॥ ೧೭೫ ॥

ಅಂತು ರಾಮನಪರಾಜಿತಾಮಹಾದೇವಿಯ ಸುಮಿತ್ರಾದೇವಿಯ ಪಾದ ಪಲ್ಲವಂ

---

1. ನಾರ್ಥ. ಗ.; ನರ್ಥ. ಘ. 2. ಬರ್ಪವಳಿರ್ಪವಳಲ್ಲಳಿರಲ್ಕೆ ಬರ್ಪುದೇನುಚಿತಮೆ. ಚ.
3. ವಿಾಕೆಯೊಡ. ಕ. ಖ. ಗ. ಘ.

ಗಳುಮನಾಶೀರ್ವಾದ ಪಾರಿಜಾತ ಸ್ತಬಕಂಗಳುಮನುತ್ತಂಸಂಮಾಟ್ಪುದುಮನಂತರಂ ಲಕ್ಷ್ಮಣಂ ಮಣಿ ಕಿರೀಟ ಕಿರಣದಿಂ ತದೀಯ ಪದ ನಖ ಮಯೂಖಮುಂ ಕೊರ್ವಿಸೆ ಸಾರ್ವಭೌಮನಾಗೆಂದು ಪರಸಿ—

ಮ ॥ ಶಯನ ಕ್ಲೇಶದೊಳನ್ನ ಪಾನ ಗಮನಾಯಾಸಂಗಳೊಳ್ ನಿನ್ನ ಸೇ ।
ದೆಯುಮಂ ನೋಡದತಿಪ್ರಯತ್ನ ಪರಿಚರ್ಯಾರಂಭದಿಂ ಪುತ್ರ ಸೀ ॥
ತೆಯುಮಂ ರಾಮನುಮಂ ಸಮಾಹಿತಮನರ್ಮಾಡೆಂದು ಸಂಪ್ರೀತಿಯಿಂ ।
ಪ್ರಿಯದಿಂ ಪ್ರಾರ್ಥಿಸಿದಳ್ ಗುಣಪ್ರಿಯೆ ಸುಮಿತ್ರಾದೇವಿ ಸೌಮಿತ್ರಿಯಂ ॥೧೭೬॥

ಗುಣಮುಂ ನೋಡದರಣ್ಯಮುಂ ಪುಗಿಸಿದಳ್ ರಾಜ್ಯಾರ್ಹನಂ ಪುತ್ರಕಾ ।
ರಣದಿಂ ಕೈಕೆ ಸುಮಿತ್ರೆ ರಾಮನೊಡವೋಗೆಂದಟ್ಟಿದಳ್ ಪಾಲಿಸಲ್ ॥
ಗುಣಮುಂ ಲಕ್ಷ್ಮಣನಂ ಜಗಂ ಪಟಿವಿನಂ ಜೀಯೆಂಬಿನಂ ಕೇವಲಂ ।
ಗುಣಹೀನರ್ ಗುಣವಂತರನ್ನೆಯಮನೊಪ್ಪಂ ಮಾಟ್ಪುದಾಶ್ಚರ್ಯಮೇ ॥೧೭೭॥

ಅಂತು ರಾಮಲಕ್ಷ್ಮಣರಂಬಿಕೆಯ ಚರಣಾಂಬುಜಂಗಳಂ ಬೀಟ್ಕೊಂಡರ ಮನೆಯಂ ಪೊಱಮಟ್ಟು ಪಾದವಾರ್ಗದಿಂ ವಿಪಣಿವಾರ್ಗದೊಳಗನೆ ವೈದೇಹಿವೆರಸು ಬರ್ಪ ಸಮಯದೊಳ್ ಕೌವರೆಗೊಂಡು ನೆರೆದು ಪರಿತಂದು ನೋಟ್ಪ ಪುರಜನಂಗಳಲ್ಲಿ ಕೆಲಬರಿಂತೆಂದರ್—

ಉ ॥ ಸಂಗಡದಿಂ ಪುರಾಂಗನೆಯರಿಕ್ಕದೆ ಸೇಸೆಯನೇಕೆ ಶಂಖ ನಾ ।
ದಂ ಗಗನಕ್ಕೆ ಲಂಘಿಸದೆ ಮಂಗಲ ತೂರ್ಯ ನಿನಾದಮುಣ್ಮದೆ ॥
ತ್ತಂ ಗುಡಿ ತೋರಣಂ ತುಱುಗಿ ಕಟ್ಟದೆ ಮಂಗಲ ಗೀತ ನಾದಮುಂ ।
ಮಂಗಲ ಪಾಠಕ ಸ್ತುತಿಯುಮಿಲ್ಲದೆ ಭೂಪರದೆತ್ತ ವೋದಪರ್ ॥೧೭೮॥

ಆನೆಯಮೇಲೆ ಬೆಳ್ಗೊಡೆಯನೆತ್ತಿಸಿ ಚಾಮರಮಿಕ್ಕೆ ಚಾರು ಚಂ ।
ದ್ರಾನನೆಯರ್ಕಳಿರ್ಕೆಲದ ಪೆರ್ವಿಡಿಯೊಳ್ ನೆಲಸಿರ್ದು ಸುತ್ತಲುಂ ॥
ದಾನ ಗಜಂ ಘನಾಘನದವೋಲ್ ಬರೆ ಬಾರದೆ ಪಾದವಾರ್ಗದಿಂ ।
ಜಾನಕಿಯುಂ ಬಲಾಚ್ಯುತ[1]ರುಮೇಳಿದರಂದದೆ ಬರ್ಪುದಾವುದೋ ॥ ೧೭೯ ॥

ಶಾ ॥ ಪೌರಸ್ತ್ರೀ ನಯನಪ್ರಭಾ ಸಹಚರಂ ಹಾರಾಂಶು ವಿಸ್ತೀರ್ಣ ವ ।
ಕ್ಷೋರಂಗ ಸ್ಥಲದೊಳ್ ರಸಾಭಿನಯಮುಂ ತೋರ್ಪನ್ನೆಗಂ ವಾಜಿಯಂ ॥
ಧಾರಾ ಪಂಚಕದೊಳ್ ವಿಚಿತ್ರ ಲಯದಿಂ ತಾಮೇಱಿ ಬರ್ಪೀ ಮಹಾ ।
ಧೀರರ್ ಕಾಲ್ನಡೆಯೊಳ್ ನೃಪಾವಸಥದಿಂ ಬರ್ಪಂದಮಾವಂದಮೋ ॥೧೮೦॥

1. ರುಂ (?) ಮಳಿದರಂದದಿನೆತ್ತ ವೋದಪರ್. ಚ.

೫೫ ॥ ಮಂಗಲ ರತ್ನವೇದಿಕೆಯೊಳೋಲಗಸಾಲೆಯೊಳಿಂದು[1]ಕಾಂತ ರಾ ।
ಜಾಂಗಣದೊಳ್ ಗೃಹೋಪವನದೊಳ್ ಗೃಹದೀರ್ಘಿಕೆಯೊಳ್ ವಿಲಾಸಗೇ ॥
ಹಂಗಳೊಳಂಚೆವಿಂಡಿನೊಡನಾಡುವ ಜಾನಕಿ ಪಾದಮಾರ್ಗದಿಂ ।
ದಂಗಡಿ ವೀದಿಯೊಳ್ ಪತಿಯ ಪಿಂತನೆ ಮೆಯ್ಗರೆದೆತ್ತ ಪೋದಪಳ್ ॥ ೧೪೧ ॥

ಮತ್ತಮಲ್ಲಿ ಕೆಲರ್ ನಯ ನಿಪುಣರುಂ ಕಲಾಕುಶಲರುಮುದಾತ್ತರಾಘವನಲ್ಲದೆ ರದಪಲ್ಲವರಾಗದಿಂ ನಿಖಿಲ ಪರಿಜನ ಮನೋರಾಗಮನೊದವಿಸಲುಮವಾರ್ಯ ವೀರ್ಯದಿ ರಯೋಧ್ಯಾ ಸಿಂಹಾಸನಮಂ ಪದುಳಮಿರಿಸಲುಂ, ಕೆಂಚಿದುನ್ನಮಿತ ಭ್ರೂ ಲತಾಂ ಕಲದಿನಖಿಲ ಯಾಚಕ ಮನೋರಥಮಂ ಸಫಲಮ್ಮಾಡಲುಂ, ಭುಜಪ್ರತಾಪ ತಪನ ತಾಪದಿನುದ್ವೃತ್ತ ರಾಜ ಮಂಡಲಮಂ ಮಸುಳಿಸಲುಂ, ನಿಷ್ಕೃಪ ಕೃಪಾಣಧಾರಾ ಜಲಜಲಧಿಯಿಂ ಶರಣಾಗತ ಕುಭೃತ್ಕುಲಮನೊಳಕೊಂಡು ಕಾಯಲುಂ, ನಿಖಿಲ ನಿಕ್ಷ್ವಾಲ ಮಕುಟ ನಿಕಟ ವರ್ತಿ ನಿಜಾಜ್ಞಾಮಾತ್ರದಿಂ ವರ್ಣಾಶ್ರಮ ಚರಿತ್ರಮನವಿಶ್ರಾಂ ತಂ ಮಾಡಲುಂ, ದುರ್ಜಯ ವಜ್ರಾವರ್ತ ಚಾಪ ಟಂಕಾರ ಶರಮೋಕ್ಷ ಹೂಂಕಾರದಿಂ ಶೋಕಲುಂಟಾಕ ವಿಗ್ರಹ ಮದವೀರಗ್ರಹೋಚ್ಚಾಟನಮನೊಡರ್ಚಲುಂ, ಜಗತ್ಪವಿತ್ರ ಚಾರುಚರಿತ್ರದಿಂ ಮನುಸೂತ್ರಮಂ[2]ವಿವರಿಸಲುಂ, ಸಹಜ ಸಾಹಿತ್ಯ ಕಲಾ ಕೌಮುದೀ ವಿಲಾಸದಿಂ ವಿದ್ವಜ್ಜನ ಮನಃಕುಮುದಿನಿಯನಲರ್ಚಲುಂ, ಪ್ರೇಮರಸ ಪುಷ್ಟ ದೃಷ್ಟಿ ಪಾತದಿಂದಭಿಜನಸನಾಭಿಜನನುಂ ಕೃತಾರ್ಥಮ್ಮಾಡಲುಂ, ಪೆಱರ್ ನೆಱೆಯರೆಂದು ಸೈಕೆಯ ಕೈತವಕ್ಕೆ ಕನಲ್ದೊನಲ್ವು ನುಡಿವ ನುಡಿಗಳನಾಲಿಸುತ್ತುಂ ದಿವಸದವಸಾನ ಸಮಯದೊಳ್ ಪುರದ ಪರಭಾಗದ ಅರಭಟ್ಟಾರಕರ ಬಸದಿಯ ಕನಕಪ್ರಾಕಾರಮಂ ಪೊಕ್ಕು–

೫೬ ॥ ಲಲಿತಾ[3]ಕಾರಮದೀಯೆ ನಾಡೆ ನಯನಕ್ಕಾನಂದಮಂ ಮೇರುವಂ।
ಬಲಗೊಳ್ವತ್ರಿತನೂಜನಂತೆ ಬಲಗೊಂಡಂ ಪಂಕಜ ಶ್ರೀಯನಂ ॥
ಡಲೆವನ್ನಂ ನಿಜಪಾದ ವಿನ್ಯಸನ ಸೌಂದರ್ಯಂ ಬುಧ ಪ್ರಸ್ತುತಂ ।
ಬಲಭದ್ರಂ ಜಿನನಾಥ ದಿವ್ಯ ಗೃಹಮಂ ಸಾಹಿತ್ಯವಿದ್ಯಾಧರಂ ॥ ೧೪೨ ॥

ಇದು ಪರಮ ಜಿನಸಮಯ ಕುಮುದಿನೀ ಶರಚ್ಚಂದ್ರ ಬಾಳಚಂದ್ರ
ಮುನೀಂದ್ರ ಚರಣ ನಖ ಕಿರಣ ಚಂದ್ರಿಕಾ ಚಕೋರ ಭಾರತೀ
ಕರ್ಣಪೂರ ಶ್ರೀಮದಭಿನವಪಂಪ ವಿರಚಿತಮಪ್ಪ
ರಾಮಚಂದ್ರ ಚರಿತ ಪುರಾಣದೊಳ್
ವನಪ್ರವೇಶ ವರ್ಣನಂ
—ಷಷ್ಠಾಶ್ವಾಸಂ—

1. ಕಾಂತಧಾರಾಂಗಣ. ಚ. 2. ವಿರಚಿಸಲುಂ ಚ. 3. ಕಾರದಿನೀಯೆ. ಕ. ಖ. ಗ. ಘ. ಚ.

ಕಂ ॥ ಶ್ರೀರಮಣಂ ಬಲಗೊಂಡಖಿ
ಲಾರಾಧ್ಯನ ರತ್ನಭವನಮಂ ಪೊಕ್ಕಂ ನೀ ॥
ಹಾರ ರುಚಿ ರುಚಿರ ಕೀರ್ತಿ
ಶ್ರೀರಮಣಂ ಪೆಂಪುವೆತ್ತನಭಿನವ ಪಂಪಂ ॥ ೧ ॥

ಅಂತು ಜಿನಭವನಮಂ ಪೊಕ್ಕು ಮುಕುಳಿತ ಕರ ಸರೋಜಮುಂ ನೊಸಲ್ಗೆ ತಂದು—

ಕಂ ॥ ಒಡಲುಮನಾತ್ಮನುಮಂ ಬೇ
ರ್ಪಡಿಕುಮವೋರೊಂದಱೊಳಗೆ ಪೊಕ್ಕಿರ್ದುವನೇಂ ॥
ಪಡೆಮಾತರಭಟ್ಟಾರಕ
ರಡಿದಳಿರೊಳ್ ಪೊಳೆವ ನಖರುಚಿ ಕ್ರಕಚಂಗಳ್ ॥ ೨ ॥

ಎಂದು ದರ್ಶನಸುತ್ತಿಗೆಯ್ದು [1]ಜಿನಭವನ ಮಧ್ಯರಂಗಮಂ ರಾಮಲಕ್ಷ್ಮಣರಲಂಕರಿಸಿಪ್ಪುದುಮಾಸಮಯದೊಳ್—

ಮ॥ಪ್ರ॥ಭವಬದ್ಧ ಕ್ರೋಧದಿಂ ಸಂಧಿಸೆ ಪೆಱಗೆ ತಮಂ ಸ್ಥಾನಮಂ ಬಿಟ್ಟು ತೇಜಂ।
ತವೆ ಶೋಕಂ ಚಕ್ರವಾಕಕ್ಕೊಡರಿಸೆ ದಿವಸ ಶ್ರೀಯನೀಡಾಡಿ ಕೈಕೊಂ ॥
ಡವರೋಧ ಸ್ತ್ರೀಯರಂ ಪದ್ಮಿನಿಯರನಿನಿಸುಂ ನೋಡದುತ್ತಾನ ಪಾದಂ।
ದಿವಸೇಂದ್ರಂ ಭೀತಿಯಿಂದಂಬರಮನುಟ್ಟಿದು ವಾರಾಶಿಯಂ ಪೋಗಿ ಪೊಕ್ಕಂ ॥

ಚ ॥ ಸುಗಿದು ತಮುಕ್ಕೆ ಬಿಟ್ಟು ಬಿಸುಪಂ ಪರಿವಾರಮೆನಿಪ್ಪ ಜಕ್ಕವ।
ಕ್ಕಿಗಳ ವಿಯೋಗಮಂ ನೆನೆಯದಬ್ಜಿನಿಯಂ ಕಡುಗೂರ್ಪನಲ್ಲಳಂ ॥
ಬಗೆಯದೆ ಮುಂಡಲಾಗ್ರ ರುಚಿದೋಱದೆ ಭೀತಿಯಿನೋಡಿಪೋಗಿ ತೊ।
ಟ್ಟಗೆ ರವಿ ಸಾರ್ದನಸ್ತಗಿರಿಯಂ ಕ್ಷಣಿಕಂ ಸ್ಥಿರಸಾರನಪ್ಪನೇ ॥ ೪ ॥

ಮ ॥ ದಿನಪಂ ತನ್ನನಗಲ್ದು ಪೋಗೆ ಹರಿದಿಕ್ಕಾಂತಾನನಂ ಕಂದಿದ।
ತ್ತೆನೆ [2]ಮರ್ವುರ್ವಿದುದಾತನೊಳ್ ನೆರೆಯೆ ರಾಗಂ ಪಶ್ಚಿಮಾಶಾ ವಿಳಾ ॥

---

1. ಜಿನಭವನಮುಂ ರಾಜಕುಮಾರರ್ ವಂದನೆಯಂ ಮಾಡಿ ಕುಳ್ಳಿರ್ಪುದುಂ. ಚ.
2. ಮರ್ವರ್ವಿದು. ಚ.

ಸಿನಿಗಾದತ್ತೆನೆ ಸಂಜೆ ರಂಜಿಸಿದುದೇನಾಶ್ಚರ್ಯಮೇ ತಾಳ್ಪರಾ ।
ರಿನಿಯಂ ತನ್ನನಗಲ್ದೊಡಂ ನೆರೆದೊಡಂ ನೀರಾಗಮಂ ರಾಗಮುಂ ॥ ೫ ॥

ಮ ॥ ವಿರಹ ವ್ಯಾಕುಲಮಾಗೆ ಚಕ್ರಮಿಥುನಂ ಸಂಕೋಚಮಂ ತಾಳ್ದೆ ತಾ ।
ವರೆ ಕಾಮಾತುರರುಂ ರಜೋಧಿಕರುಮೇಂ ಭೇದಕ್ಕೆ ಪಕ್ಕಾಗದಿ ॥
ರ್ಪರೆ ದೋಷಾಂಧರೆನುತ್ತವಂ ನಗುವವೋಲ್ ನೆಯ್ದಿಲ್ಲೊಳಂ [1]ಮೇಲ್ಮರ ।
ಲ್ದರಲುತ್ತಿರ್ದುವು ಚಂಚರೀಕ ಮಧುರ ವ್ಯಾಹಾರ ವಾಚಾಲಿತಂ ॥ ೬ ॥

ಕಂ ॥ ಮಿನುಮಿನನೆ ತೋಱೆ ತಾರಗೆ
ಘನತರ ತಿಮಿರಾವಕಾಶಮಾಕಾಶಮದೇಂ ॥
ನೆನೆಯಿಸಿದುದೊ ಕಡಲೊಳ್ ಸೀ ।
ರ್ಪನ್ನಿ ತನುವಂ ಪುದಿಯೆ ತೋರ್ಪ ಕೃಷ್ಣನ ತನುವಂ ॥ ೭ ॥

ಅಂತು ನೇಸರ್ಪಡುವುದುಮಾಸಮಯದೊಳುಮ್ಮಳಿಸಿ ತಮ್ಮಲ್ಲಿಗೆ ವಂದ ಜನ ನಿಯರೊಳ್ ವಿನಯಮಂ ನುಡಿದು ಸಂತೋಷಂಬಡಿಸಿ ಮಗುಟ್ಟಿರಮನೆಗೆ ಕಟ್ಟಿಪಿ ಜಿನಮಂದಿರಕ್ಕೆ ವಂದು, ನಿದ್ರಾ ಮುದ್ರಿತ ಲೋಚನರ್ ನಡುವಿರುಳೆಟ್ಟಿ ಪರಮಜಿನ ಪತಿಯಂ ಬೀಟ್ಕೊಂಡು ಬಿಲ್ಲುಮನಂಬುಮಂ ಕೊಂಡು, ಸೀತೆ ನಡೆದುಬರೆ ಪೊಬಿಲ ನಡುವಣ ಕ್ಷುಲ್ಲಕ ದ್ವಾರದಿಂ ಪೊರಮಟ್ಟು, ದಕ್ಷಿಣಾಭಿಮುಖರಾಗಿ ಪಯಣಂ ಬೋವುದುಮನಂತ ಸಾಮಂತ ಸಂದೋಹಮವರಪಿಂದನೆ ಮಾರ್ಬಟ್ಟಿಯೊಳ್ ಬರ್ಪ ರಂ ಬೆಸಗೊಳುತ್ತುಂ ಬೇಗಮೆಯ್ತಂದು, ದೂರೋತ್ಸಾರಿತ ವಿಚಿತ್ರಾತಪತ್ರ ವಿವಿಧ ವಾಹನರ್ ವಿನಯವಿನಮಿತೋತ್ತಮಾಂಗರೆಂತಾನುಮೆಯ್ದೆ ವಂದೆವೆಂದು ಬಿನ್ನವಿಸೆ, ಸೀತೆ ಸೇದೆವಡುವಳೆಂದು ಮೆಲ್ಲಮೆಲ್ಲನೆ ನಡೆಯುತ್ತಿರ್ದೆವಲ್ಲದಂದಿನ್ನೆವರಂದೂರಂ ಪೋಪೆವೆಂದವರೊಡನೆ ಮಾತಾಡುತ್ತುಮೆಡೆಯೆಡೆಯ ಗ್ರಾಮ ನಗರಂಗಳಂ ನೋಡು ತ್ತುಂ ಕಟ್ಟಿದು ಗಂಭೀರತರಂಗಿಣಿಯ ನೆಯ್ದೆವಂದಲ್ಲಿ ನಿಂದು, ಸಾಮಂತಾದಿಗಳ ನೆಂತಾನುಮೊಡಂಬಡಿಸಿ ನಿಲಿಸಿ, ತೊಱೆಯಂ ಯಾನಪಾತ್ರದಿಂ ದಾಂಟಿ ಪೋಪು ದುಂ, ರಾಮಲಕ್ಷ್ಮಣರಗಲ್ಕೆಗೆ ಸೈರಿಸಲಾರದೆ ಕೆಲಂಬರದುವೆ ನಿರ್ವೇಗಕಾರಣಮಾಗೆ ತನ್ನದೀತೀರದ ಜಿನಾಗಾರದೊಳಿರ್ದ [2]ಶತಕೇತುಗಳೆಂಬ ಗಣಧರಸ್ವಾಮಿಗಳ ಸಮಕ್ಷ ದೊಳ್ ದೀಕ್ಷೆಗೊಂಡಲ್ಲಿಯೆ ನಿಂದರ್; ಕೆಲಬರ್ ವ್ರತವಿಶೇಷಂಗಳಂ ಕೈಕೊಂಡು ಸಾಕೇತಪುರಕ್ಕೆ ವಂದರದೆಲ್ಲಮಂ ದಶರಥ ನರನಾಥಂ ಕೇಳ್ದು—

ಚ ॥ ಸೆಡೆದನೆ ತನ್ನ ಬಂಧುಗಳಗಲ್ಕೆಗೆ ಪುತ್ರ ಕಲತ್ರ ಮೋಹದೊಳ್ ।
ತೊಡರ್ದನೆ ಪಟ್ಟಬಂಧಮನೊಡರ್ಚಿದನೇ ಭರತಂಗೆ ರಾಘವಂ ॥

---

1. ಮಲ್ಮರಲ್ದರಲು ಚ 2. ಶ್ರುತಕೇತು. ಘ.

ನಡೆಯೆ ವನಕ್ಕದಂ ಮಱೆದುವೇಂ[1] ಬೆಸಗೊಂಡನೆ ದೀಕ್ಷೆಗೊಂಡನಾ ।
ಗಡೆ ವಿಭು ಸರ್ವಭೂತಹಿತ ದಿವ್ಯಮುನೀಂದ್ರರ ಪಾದಪಾರ್ಶ್ವದೊಳ್ ॥೮॥

ಅಂತು ದಶರಥಂ ದಶಧರ್ಮನಿರತನಪ್ಪುದುಂ, ಭರತಂ ರಾಜ್ಯಸುಖ ನಿರತನಾದ ನಾಗಳಪರಾಜಿತಾಮಹಾದೇವಿಯುಮುದಾತ್ತರಾಘವನ ವನಪ್ರವೇಶ ಕ್ಲೇಶಾಯಾಸಮಂ ನೆನೆದವಿಶ್ರಾಂತ ವಿಗಳಿತಾಶ್ರು ಸಲಿಲ ಕಲಿಲ ಕಪೋಲ ಯುಗಳೆ ಗದ್ಗದಕಂಠೆಯಾಗಿ—

ಕಂ ॥ ಏನನಿದಂ ನೆಗೆೞ್ದಿಯ್ ಸುತ
ಕಾನನಮಂ ಪೋಗಿ ಪೊಕ್ಕು ಮಂಗಲ ಗೀತ ॥
ಧ್ವಾನಮಿರೆ ಸಿಂಹ ಶರಭ
ಧ್ವಾನಮನಾಲಿಸುವ ಮಹಿಮೆಗಟ್ಟಿಗನಾದೈ ॥೯॥

ಧವಳ ಚಮರರುಹ ಪವನನ
ನವಮಾನಂಗೆಯ್ದು ಕಂದ ನಿಷ್ಕುರ ಚೀರೀ ॥
ರವ ಮುಖರ ಪರುಷ ಕಾನನ
ಪವಮಾನನ ಸೋಂಕನಾಸೆಗೆಯ್ಯಲ್ ಬಗೆದೈ ॥೧೦॥

ಚ ॥ ವನ ಜಲಕೇಳಿಯಂ ಬಿಸುಟು ನಂದನ ನಿರ್ಝರ ಶೈಲಸಾನು ನಂ ।
ದನ ಜಲಕೇಳಿಯೊಳ್ ತೊಡರ್ದೆ ವಾರವಧೂ ಜನ ಮುಗ್ಧ ಸಾಲಕಾ ॥
ನನಮಿರೆ ಸಾಲ ಕಾನನಮನೀಕ್ಷಿಸಲಟ್ಟಿಗನಾದೆ ದಿವ್ಯಭೋ ।
ಜನಮಿರೆ ಕಂದ ಕಂದ ಫಲ ಮೂಲದಿನಾಱಿಸುವೈ ಕ್ಷುಧಾಗ್ನಿಯಂ ॥೧೧॥

ಮುಡಿಯ ಪಯೋಧರಂಗಳ ನಿತಂಬದಳುಂಬಮೆನಿಪ್ಪ ಬಿಣ್ಪಿನಿಂ ।
ಗಡಣದಿನಂಜೆಯೊಳ್ ಗೃಹ ವನೋಪವನ ಸ್ಥಳದೊಳ್ ವಿನೋದ ದಿಂ ॥
ನಡೆವೆಡೆಯೊಳ್ ಬಟಿಲ್ವ ಜನಕಾತ್ಮಜೆಯಂ ರಘುವಂಶರಾಮ ನೀಂ ।
ನಡೆಯಿಸುವಂದಮಾವುದೊ ತನೂಜ ದುರಂತ ವನಾಂತರಾಳದೊಳ್ ॥೧೨॥

ಕಂ ॥ ನಡೆಯಂ ವನ್ಯ ಗಜಂಗಳ
ನಡೆಯೊಳ್ ಸೋಗೆಗಳ ಸೋಗೆಯೊಳ್ ಸೋರ್ಮುಡಿಯಂ ॥
ನುಡಿಯಂ ಕೋಕಿಲ ರುತಿಯೊಳ್
ಪಡಿಯಿಡಲೊಡನುಯ್ವೆ ತನಯ ಜನಕಾತ್ಮಜೆಯಂ ॥೧೩॥

---

1. ಪೆಸಗೊಂಡನೆ. ಕ. ಘ.

ಎಂದತಿಪ್ರಳಾಪಂಗೆಯ್ಯೆ ಸುಮಿತ್ರೆಯುಮೊಡನೆ ಶೋಕಿಸೆ ಕೈಕೆ ಕೇಳ್ದು ತನ ಗತ್ಯಂತ ಶೋಕಾವೇಗಮಾಗೆ—

ಕಂ ॥ ಪತಿ ದೀಕ್ಷೆಗೊಂಡನಪರಾ
ಜಿತೆಗಿನಿವಿರಿದಾಯ್ತು ದುಃಖಭಾರಂ ಧರೆಯಂ ॥
ಸುತನುಮಿಟ್ಟಿಕೆಯ್ದನೀ ದು
ಷ್ಕೃತಮಂ ಸ್ತ್ರೀತ್ವದ ಜಡತ್ವದಿಂದೊಡರಿಸಿದೆಂ ॥ ೧೪ ॥

ಎಂದು ತನ್ನಂ ತಾನೆ ನಿಂದಿಸಿಕೊಂಡು ಭರತನಂ ಬರಿಸಿ ಮಗನೆ ನಿನ್ನ ರಾಜ್ಯಂ ರಾಮಲಕ್ಷ್ಮಣರಿಲ್ಲದೊಪ್ಪಲಱಿಯದವರ ಜನನಿಯರುಮವರ ವಿಯೋಗ ವಿಷಾದ ವೇಗದಿಂ ವಿಗತ ಜೀವಿತೆಯರಪ್ಪರದುಕಾರಣದಿಂ ಬೇಗಮೆಯ್ದೆ ವೋಗಿ ಪೋಗಲೀಯದೆ ನಿಲಿಸಾನುಂ ನಿನ್ನ ಪಿಂದನೆ ಬಂದಪೆನೆಂಬುದುಮಂತೆಗೆಯ್ವೆನೆಂದು ರಾಘವನಂ ಕಟ್ಟಿಪಿ ಬಂದ ಸಾಮಂತರ್ವೆರಸು ತೊಱೆಯಂ ಪಾಯ್ದು ವೋಗಿ ಮುಂದೆ ಕಱಿಂಗಿ ಕಟ್ಟಿಲಿಸಿದ ಕಾನನದ ಬಟ್ಟೆಯೊಳ್ ಜಾನಕಿಯ ಗಮನ ಪರಿಶ್ರಮಮನಾಱಿಸುತಿರ್ದ ರಘುವೀರನಂ ಮುಟ್ಟಿವಂದು ವಾಹನದಿನಿಟ್ಟಿದು ಕಾಲಮೇಲೆ ಕವಿದುಬಿಟ್ಟು—

ಕಂ ॥ ಪುದಿಯೆ ತಮಂ ಮನಮಂ ಮೋ
ಹ ದವಾಗ್ನಿಯ ಧೂಮದಂತೆ ಕರಣ ಬಲ ಪ್ರಾ ॥
ಣದ ಚೇಷ್ಟೆಗೆಟ್ಟು ಭರತಂ
ಪದಾನತಂ ವಿಕಲನಾಗಿ ಮೂರ್ಛೆಗೆ ಸಂದಂ ॥ ೧೫ ॥

ಅಂತು ಮೂರ್ಛಿತನಾಗಿ ಕಿಱಿದಾನುಂ ಬೇಗದಿನೆಂತಾನುಮೆಳ್ಚತ್ತು ಸೀತೆಗಂ ಲಕ್ಷ್ಮಣಂಗಂ ತುಟಿಲ್ಲೆಯ್ದು ನಿಟಲ ತಟ ಘಟಿತ ಮುಕುಳಿತ ಕರಸರೋಜಂ ರಾಮಚಂದ್ರನ ಮುಖಚಂದ್ರನಂ ನೋಡಿ—

ಕಂ ॥ ಅಕ್ರಮದಿನಟ್ಟಿಪಿ ವಸುಧಾ
ಚಕ್ರಮನಾನಾಸೆಗೆಯ್ಯೆ ದುರ್ಯಶಮಾಶಾ ॥
ಚಕ್ರಾವಧಿಯಕ್ಕುಂ ದೋ
ರ್ವಿಕ್ರಮ ಧನ ನಿಮ್ಮ ಮನದೊಳವಧರಿಪುದಿದಂ ॥ ೧೬ ॥

ಅನಯಂ ಮನುಕುಲದೊಳ್ ನಾ
ಭಿ ನರೇಂದ್ರನಿನಿತ್ತಲಾದುದಿಲ್ಲೆನ್ನಿಂದಂ ॥
ಜನಿಯಿಸಿದೊಡೆ ಕುಲ ದೂಷಕ
ನೆನಿಪ್ಪ ಪಾಪಕ್ಕೆ ಪಟ್ಟಿಗೆ ಪಕ್ಕಾಗಿರೆನೇ ॥ ೧೭ ॥

ಚ ॥ ಅನಯದಿನಪ್ಪ ಸಂಪದದಿನಿಲ್ಲಮೆ ನಾಡೆಯುಮಿಂಬುವೆತ್ತುದೆಂ ।
ತೆನೆ ಪಟಿವನ್ನರಿಲ್ಲ ಧನಮಿಲ್ಲದರಂ ದುರಿತಾನುಬಂಧಮಿ ॥
ಲ್ಲನಯದಿನಪ್ಪುವೀಯೆರಡುಮೆಂಬುದನಿಂಬಱಿದೀವೆಮೆಂಬಿರೆಂ ।
ತೆನಗಧಿರಾಜ ರಾಜ್ಯಮನಪೂಜ್ಯಮನಕ್ರಮದಿಂದಮಪ್ಪುದಂ ॥ ೧೮ ॥

ಎಂದು ಬಿನ್ನವಿಸುವನ್ನೆಗಂ ಕೈಕೆಯುಂ ನೂರ್ವರ್ ಸಾಮಂತರೊಡನೆ ಬರೆ ಬರ್ಪಳಂ ಕಂಡು:—

ಕಂ ॥ ಇದಿರೆೞ್ದು ಪರಿದು ಕೈಕೆಯ
ಪದಾಂಬುಜಕ್ಕೆಱಗೆ ರಾಘವಂ ಹರ್ಷದ ಭಾ ॥
ರದಿನುಮ್ಮಳವಾ ಸತಿಗಾ
ದುದು ಮನದೊಳ್ ನೆನೆದು ತನ್ನ ಗೆಯ್ದನ್ನೆಯಮಂ ॥ ೧೯ ॥

ಸ್ಥಾನಚ್ಯುತಿ ಮಾಡಿದಳೆಂ
ಬೀ ನೋವಿಲ್ಲೇಕಕುಂಡಲಂ ಕೈಕೆಗೆ ಪಾ ॥
ದಾನತನಾದಂ ಪದೆಪಿಂ
ಮಾನ ಕಷಾಯಕ್ಕೆ ತಕ್ಕನೆಡೆಗೊಟ್ಟಪನೇ ॥ ೨೦ ॥

ಅಂತು ವಿನಯ ವಿನಮಿತನಾಗಿರ್ದ ಮಗನಂ ತೆಗೆದು ತಟಿಕ್ಕೈಸಿ ಪಲತೆಱದಿಂ ಪ್ರಳಾಪಂಗೆಯ್ದವಿವೇಕದಿನೆನ್ನ ಗೆಯ್ದ ದುರ್ವಿಲಸಿತಕ್ಕೆ ಸೈರಿಸಿ ಮಗನೆ ರಾಜ್ಯಮಂ ಕೈಕೊಳ್ವುದು; ನಿನ್ನ ತಮ್ಮಂದಿರ್ ನಿನಗೆ ಬೆಸಕೆಯ್ದು ಬಾೞ್ವರಿದನುದಾಸೀನಂ ಗೆಯ್ಯದೆ ಮಗುಟಿ ಬಿಜಯಂಗೆಯ್ಯಂಬುದುಮಂಬಿಕೆಗೆ ಮುಕುಳಿತ ಕರಾಂಬುಜಂ ರಾಮನಿಂತೆಂದಂ—

ಕಂ ॥ ಅಕಲಂಕ ಚರಿತ್ರಂ ಕ್ಷ
ತ್ರ ಕುಲೋದ್ಗತನೆರಡನುಸಿರ್ದೊಡೈಹಿಕವಾಮು ॥
ತ್ರಿಕಮಟಿಗುಂ ಕೇವಲಮಂ
ಬಿಕೆ ಪಾತಕಮನೃತದಿಂದಮಗ್ಗಳಮುಂಟೇ ॥ ೨೧ ॥

ಎಂದು ಮತ್ತಮಯ್ಯನ ನನ್ನಿಗೆ ಬನ್ನಮಂ ಪಡೆದು ನಿಮ್ಮೊಳಾದ ವಿನಯಮ ನತಿಕ್ರಮಿಸಿ ತಮ್ಮನಕೈಯ ರಾಜ್ಯಮಂ ಕೊಂಡೊಡೆನ್ನ ನುಡಿ [1]ಕಿತ್ತಡಮಕ್ಕುಂ; ಮಗುಟಿ ನುಡಿಯದಿರಿಮೆಂದು ಭರತನುಮನಾಂ ಕುಡಲ್ಪಡೆದ ರಾಜ್ಯಂ ನಿನಗಕ್ರಮ ಮಣಮಲ್ತು ವಕ್ರಂಬಂದೊಡೆಮ್ಮಾಜ್ಞೆಗೆ ತಪ್ಪಿದೆಯೆಂದು ನಿಲೆ ನುಡಿದು:—

1. ಕೀೞ್ತಡ. ಫ.

ಕಂ ॥ ಬಂಹಿಮವನ್ಮಹಿಮಂ ನಿಜ
ಸಿಂಹ ಕಟೀ ತಟ ವಿಲಾಸಿ ಪರ್ಯಂಕ ತಳಂ ॥
ಸಿಂಹಾಸನವೆನೆ ಭರತಂ
ಗೇಂ ಹಲಿ ಸಾಮ್ರಾಜ್ಯ ಪಟ್ಟಮಂ ಕಟ್ಟಿದನೋ ॥ ೨೨ ॥

ಅಂತು ನಿಜ ವದಾನ್ಯತಾ ಗುಣ ವಿಶುದ್ಧ ಸಿದ್ಧರಸ ಪ್ರವಾಹಕ್ಕೆ ಸೇತುಗಟ್ಟುವಂತೆ ಪಟ್ಟಮಂ ಕಟ್ಟಿ ವಿನಯಮಂ ಮುಂದಿಟ್ಟು—

ಉ ॥ ಈಕ್ಷಿಸುವನ್ನೆಗಂ ಭುವನವಲ್ಲಭ ನಿಮ್ಮ ಪದಾರವಿಂದಮಂ ।
ರಕ್ಷಿಸುವೆಂ ಧರಾವಲಯಮಂ ಭವದಾಜ್ಞೆಗೆ ಬೆರ್ಚಿ ಮನ್ಮನ ॥
ಸ್ಸಾಕ್ಷಿಕವಾನಪೇಕ್ಷಿಸುವೆನಲ್ತುಪಭೋಗಮನೆಂದು ಪೂಣ್ದನೇ ।
ನಕ್ಷತಧೈರ್ಯನೋ ಭರತನೊಲ್ಪನೆ ಲೋಭರತ ಪ್ರಪಂಚಮಂ ॥ ೨೩ ॥

ಅಂತು ಪ್ರತಿಜ್ಞಾರೂಢನಾದ ಭರತನುಮುಂ ಜನನಿಯುಮನುಚಿತಪ್ರತಿಪತ್ತಿಯಿಂ ಮನ್ನಿಸಿ ಪೊಲ್ಲಿ ಕಟ್ಟಿಪಿ ರಾಮಲಕ್ಷ್ಮಣರ್ ಸೀತಾಸಮೇತಂ ಪಯಣಂ ಬೋಪುದುಮಿತ್ತ ಭರತಂ ಕೈಕೆವೆರಸಯೋಧ್ಯೆಯಂ ಪೊಕ್ಕು—

ಮ ॥ ಅಮಳ್ಪಿತ್ತಂತೆ ಸಮಾನಮಾಗೆ ಭರತಂ ಕೊಂಡಾಡಿದಂ ಕ್ಷತ್ರಧ ।
ರ್ಮಮುಮಂ ಧರ್ಮಮುಮಂ ಧರಾವಲಯಮಂ ವಿಕ್ರಾಂತದಿಂ ತಾಳ್ದಿ ಸಂ ॥
ಯಮ ಸಂರಕ್ಷಣ ಸತ್ವದಿಂ ತಳೆದು ದಾನಂ ಪೂಜೆ ಶೀಲೋಪವಾ ।
ಸಮನತ್ಯುನ್ನತರಾದ ರಾಜ ತನಯರ್ ತನ್ನನ್ನರಾರೆಂಬಿನಂ ॥ ೨೪ ॥

ಅಂತು ಭರತಂ ರಾಜ್ಯಸುಖ ಏಮುಖನರಸುಗೆಯ್ಯುತ್ತಿರ್ಪಿನಮಿತ್ತಲ್—

ಉ ॥ ಆತಪ ತಾಪಮಂ ತಳಿರ ಸತ್ತಿಗೆಯಿಂದೆ ತೃಷಾ ವಿಷಾದಮಂ ।
ಶೀತಲ ತೋಯದಿಂದೆ ಪಸಿವಂ ಪರಿಪಕ್ವ ಫಲಂಗಳಿಂದೆ ನಿ ॥
ದ್ರಾತುರ ವೇಗಮಂ ಲತೆಯ ಮಂಟಪದಿಂದೆ ಪಥ ಶ್ರಮಾಂಬುವಂ ।
ಸೀತೆಗೆ ತೂಳ್ದಿದಂ ಕದಳಿಕಾ ದಳ ವೀಜನದಿಂದೆ ರಾಘವಂ ॥ ೨೫ ॥

ಮ ॥ ವನಕೇಳೀ ಗಮನಕ್ಕೆ ದೀಪಕಲಿಕಾ ದೀಪ್ತಿ ಪ್ರತಾನಕ್ಕೆ ವೀ ।
ಜನ ವಾತಕ್ಕೆ ಬಟಿಲ್ವ ಸೀತೆ ಗಮನಾಯಾಸಕ್ಕೆ ಚಂಡಾಂಶು ತಾ ॥
ಪ ನಿರೋಧಕ್ಕೆ ಸಮಗ್ರ ವಾತ ಹತಿಗೇನುಂ ಬೇವಸಂಬಟ್ಟಳಿ ।
ಲ್ಲಿನಿಯಂ ತನ್ನೊಡನುಯ್ವಪಂ ರಘುಜನೆಂಬೀ ರಾಗದುದ್ರೇಕದಿಂ ॥ ೨೬ ॥

ಕಂ ॥ ಪರಲೋತ್ತಿ ಸೈರಿಸುತ್ತುಂ
ಗುರು ಜಘನ ಭರಂಗಳಿಂ ತಡಮ್ಮೆಟ್ಟುತ್ತುಂ ॥
ಚರಣ ಕಮಲಂಗಳಂ ಸಂ
ವರಿಸುತ್ತುಂ ಸೀತೆ ಸೆಡೆದು ಮೆಲ್ಲನೆ ನಡೆದಳ್ ॥ ೨೭ ॥

ಚ ॥ ಒಗೆದ ಕುಚಂಗಳಿಂ ತೊಲಗೆ ಮೇಲುದನೋರಡಿಗೊರ್ಮೆ ಸೀತೆ ಸಾ ।
ವಗಿಸುವ ಕೆಯ್ತುಮುಂ ವದನಚಂದ್ರ ಸುಧಾ ರಸ ಬಿಂದುವೆಂಬಿನಂ ॥
ನೆಗೆದ ಪಥಶ್ರಮಾಂಬು ಕಣಮುಂ ನಸುಬಂಬಲ ಬಾಡಿದಂಗಮುಂ ।
ತ್ರಿಗುಣಿಸೆ ರಾಗಮಂ ಮಗುಟ್ಟು ವೀಕ್ಷಿಸುತುಂ ನಡೆದಂ ರಘೂದ್ವಹಂ ॥

ಮ॥ಸ್ರ॥ಕ್ರಮದಿಂ ಪರ್ಯಂತ ನಾನಾ ಜನಪದ ನಗರ ಗ್ರಾಮ ಪುಣ್ಯಾಶ್ರಮ ಪ್ರಾಂ ।
ತಮೆ ಬೀಡಪ್ಪಂತು ಸೌಮಿತ್ರಿಯ ಸಮುಚಿತ ಪರ್ಯಷ್ಟಿಯಿಂ ಪಿಂಗೆ ಯಾತ್ರಾ ॥
ಶ್ರಮವೇಗಂ ಪಾರಿಯಾತ್ರಾವನಿಯ ನಿಕಟಮಂ ರಾಘವಂ ಜಾನಕೀ ಸ್ಮೇ ।
ರ ಮುಖಾಬ್ಜಾಲೋಕನಂ ಲೋಚನಸುಖ ಮುಖಪಾಥೇಯಮಾಗೆಯ್ದೆ
ವಂದಂ ॥ ೨೯ ॥

ಅಂತೆಯ್ದೆವರ್ಪುದುಂ—

ಮ॥ಸ್ರ॥ಫಲಭಾರಾಕ್ರಾಂತ ಸಾರ್ವರ್ತುಕ ನಿಕಟವನಂ ಮೇಖಲಾಕೀರ್ಣ ವಲ್ಲೀ ।
ನಿಲಯಂ ಗಂಧೇಭ ಗಂಧೋತ್ಕಟಮವಿರಳ ಸ್ಥಾನು ಸ್ಥಳೀ ಪದ್ಮ ನೀಲೋ ॥
ತ್ಪಲ ಷಂಡಂ ಕೂಟಕೋಟಿ ಸ್ಫುರಿತ ಮಣಿ ಮಯೂಖಾವಲೀ ಚಿತ್ರಿತಾಶಾ ।
ವಲಯಂ ಕಣ್ಗಂ ಮನಕ್ಕಂ ಪಡೆದುದು ಪದೆಪಂ ಚಿತ್ರಕೂಟಾಚಲೇಂದ್ರಂ ॥೩೦॥

ಫಣಿಲೋಕಂ ಪಾದಪೀಠಂ ತನಗೆನೆ ರಸೆಯಂ ಮೆಟ್ಟಿ ಮತ್ತಿತ್ತ ತಾರಾ ।
ಗಣಮಂ ತಳ್ಪೊಯ್ದು ಪೇರರ್ವಿಗಳಿನಸದಳಂ ಕಣ್ಗೆ ಜೆಲ್ವಾಗಿ ನಾನಾ ॥
ಮಣಿಕೂಟಂ ಚಿತ್ರಕೂಟಂ ಸೊಗಯಿಸೆ ಪದೆಪಿಂ ಸೀತೆಯುಂ ರಾಮನುಂ ಲ ।
ಕ್ಷ್ಮಣನುಂ ನೋಡುತ್ತುಮುತ್ಸುಂಟಕಿತ ತನುಗಳಾಶೈಲಮಂ ದಾಂಟಿಪೋದರ್ ॥

ಅಂತವರ್ ಚಿತ್ರಕೂಟಾಚಲೇಂದ್ರಮಂ ಬಲದೊಳಿಕ್ಕಿ ಪೋಗಿ ತದನಂತರ ಮವಂತೀ ವಿಷಯದೊಳಗನೆ ಬರುತ್ತುಮದೊಂದು ವಟ ವಿಟಪಿಚ್ಛಾಯಾಚ್ಛಾದಿತ ವಪ್ಪ ತಣ್ಬಟಿಲ ನುಣ್ಬಸಲೆಯೊಳ್ ವಿಶ್ರಮಿಸಿ ಪರಿಶ್ರಮಮನಾಱಿಸುತ್ತುಂ—

ಕಂ ॥ ಫಲಭರಿತಂಗಳ ನೀಕೆ
ಯ್ವೊಲಂಗಳಂ ಕಾವರಿಲ್ಲ ನಿರ್ಜಂತುಕವಿ ॥
ನೆಲನನಿತುಂ ಬೇಡರ ಮೇಣ್
ಕೆಲದರಸರ ಬಾಧೆಯಿಂದೆ ಪಾಟಾಯ್ತಕ್ಕುಂ ॥ ೩೨ ॥

ಎಂದು ನುಡಿಯುತ್ತುನಿರ್ಪಿನವೊರ್ವಂ ಮಾರ್ಬಟ್ಟಿಯೊಳ್ ಬರುತ್ತುಮವರಂ ಕಟ್ಟಿದಿರೊಳೆ ಕಂಡೆಱಗಿ ಪೊಡೆವಟ್ಟು ಮರವಟ್ಟಿರ್ದುದುಂ, ಲಕ್ಷ್ಮಣನವನನಂಜ ದಿರೆಂದನುನಯಮಂ ನುಡಿದೀ ನಾಡೇಕೆ ಪಾಟ್ಗಾದುದೆನೆ ಮುಕುಳಿತಾಂಜಲಿ ಪುಟನಿಂತೆಂದಂ—

ಕಂ ॥ ಇದವಂತಿ ವಿಷಯಮಿಂ ವಿಷ
ಯದೊಳುಂಟುಜ್ಜಯಿನಿಯೆಂಬ ಪೊಟಲದನಾಳ್ವಂ ॥
ಮದವದರಿ ಕರಟಿ ಮಸ್ತಕ
ವಿದಾರಿ ಸಿಂಹೋದರಂ ಪರಾಕ್ರಮಸಿಂಹಂ ॥ ೩೩ ॥

ಆತಂ ತನ್ನ ಸಾಮಂತನಪ್ಪ ವಜ್ರಕರ್ಣಂ ತನಗೆ ಕೈತವದಿಂದೆಱಗುವುದಂ ಕರ್ಣಪರಂಪರೆಯಿಂ ಕೇಳ್ದು ಕಡುಮುಳಿದು—

ಮ ॥ ಸಕಲಜ್ಞಂ ಪೊಱಗಾಗೆ ಕೈಮುಗಿಯೆನೆಂಬೀ ಪೂಣ್ಕೆಯಿಂ ರತ್ನಮು ।
ದ್ರಿಕೆಯೊಳ್ ಕೀಲಿಸಿ ಜೈನಬಿಂಬಮನದೇನುದ್ವೃತ್ತನೋ ನಮ್ರ ಮ ॥
ಸ್ತಕನಪ್ಪಂ ಗಡ ವಜ್ರಕರ್ಣನೆನಗಂ ಕೌಟಿಲ್ಯದಿಂದೆಂದು ಮಾ ।
ನ ಕಷಾಯಾಶಯನಾತನಿರ್ದ ಪುರಮಂ ಸಿಂಹೋದರಂ ಮುತ್ತಿದಂ ॥ ೩೪ ॥

ಅದಱನಾತನೊಳಾದ ಭೀತಿಯಿನೀವಿಷಯಮಿನಿತುಂ ಪಾಟ್ಗಾದುದಾ ದಶಪುರ ಮುಮಿದೆ ದೆಸೆಯದಿಲ್ಲಿಗನತಿದೂರಮೆಂದು ಬಿನ್ನವಿಸಿ ಬೀಟ್ಕೊಂಡು ಪೋಪುದುಂ—

ಮ ॥ ವ್ರತಮಂ ಪಾಲಿಸಿದಂ ಮಹಾಪುರುಷನೆಂಬೀ ಸಂತಸಂಗೆಟ್ಟು ದು ।
ರ್ಮತಿ ಸಿಂಹೋದರನಪ್ರಮತ್ತ ಚರಿತಂಗಾ ವಜ್ರಕರ್ಣಂಗೆ ದು ॥
ಸ್ಥಿತಿಯಂ ಮಾಡುವೆನೆಂದು ಬಂದು ಪುರಮಂ ಮುತ್ತಿರ್ದಪಂ ತನ್ಮದೋ ।
ದ್ಧತನಂ ಬಾರಿಸವೇಟ್ಪುದಲ್ಲದೊಡುಪೇಕ್ಷಾ ದೋಷಮೇನಾಗದೇ ॥ ೩೫ ॥

ಕದನೋದ್ಯೋಗದಿನಾಳ್ದನೆತ್ತಿ ಬರೆಯುಂ ಬೆಳ್ಳುತ್ತು ಬೆನ್ನಿತ್ತನಿ ।
ಲ್ಲ ದೃಢಾತ್ಮಂದಳೆದಂ ಪಲರ್ ಪೊಗಟ್ಪಿನಂ ನಿಶ್ಶಂಕೆಯಿಂ ಪೂಣ್ಕೆದ ॥
ಪ್ಪಿದನಿಲ್ಲೈಹಿಕ ಲಾಭಮಂ ಬಗೆದನಿಲ್ಲೇವೇಳ್ಪೆ ಸದ್ದೃಷ್ಟಿಗ ।
ಲ್ಲದಸದ್ದೃಷ್ಟಿಗೆ ವಜ್ರಕರ್ಣನೆ ವಲಂ ಕೈಯಂ ನೊಸಲ್ಗಯ್ಯದಂ ॥ ೩೬ ॥

ಎನುತ್ತವರಲ್ಲಿಂ [1]ತಳರ್ದು ದಶಪುರಮನೆಯ್ದಿವರ್ದುದುಂ—

---

1. ತಳೆದು. ಚ.

ಉತ್ಪಾಹ ॥ ಹರಿಯ ಬಳನ ನಡುವೆ ಸೀತೆ ಪೊಳೆಯೆ ಚಳ ವಿಲೋಚನಂ ।
ಕರಿಯ ಬಿಳಿಯ ಮುಗಿಲ ನಡುವೆ ಪೊಳೆವ ಮಿಂಚಿನಂದದಿಂ ॥
ಬರೆ ಕಡಂಗಿ ವಜ್ರಕರ್ಣನವರನಾತ್ಮ ರಾಜ ಮಂ ।
ದಿರದ ಪೊನ್ನ ನೆಲೆಯ ಮಾಡದಿದಿರೊಳಿರ್ದು ನೋಡಿದಂ ॥ ೩೭ ॥

ಕಂ ॥ ಅತಿ ಲಲಿತ ಗಮನವತ್ಯಾ
ಯತ ನಯನಮನೂನವಕ್ಷಮಾಜಾನು ವಿಳಂ ॥
ಬಿತ ಬಾಹುಯುಗಲಮಪ್ರಾ
ಕೃತಮಿಾ ಸೌಂದರ್ಯಮಿನ್ನರಂ ಕಂಡಱಿಯೆಂ ॥ ೩೮ ॥

ಕಾರಣ ಪುರುಷರಿವರ್ ಸಾ
ಧಾರಣರಲ್ಲರ್ ತೃಣೀಕೃತ ತ್ರಿಭುವನರೇ ॥
ಕಾರಣವೇಟ್ಟಿಂದರೊ ಬಲ
ನಾರಾಯಣರಪ್ಪರಿನ್ನರುಟ್ಟಿದರುಮೊಳರೇ ॥ ೩೯ ॥

ಎಂದು ನೀಡುಂ ಭಾವಿಸಿ ವಿಸ್ಮಯ ಸ್ತಿಮಿತ ಲೋಚನನಾಗಿ ನೋಡುತ್ತಿರ್ದುದು ಮವರ್ ಪುರದುತ್ತರ ಗೋಪುರದ ಜಿನೇಂದ್ರ ಮಂದಿರಮನೆಯ್ದೆ ವಂದು ಮೂಱು ಸೂಟ್ಪಿಲಗೊಂಡು ಜಗತ್ತ್ರಯ ಪ್ರಭುವಿಂಗಭಿಮುಖರಾಗಿ—

ಕಂ ॥ ಜಯ ಜಿತವೃಜಿನ ಜಿನೇಶ್ವರ
ದಯಾನದೀ ಪುಳಿನ ರಾಜಹಂಸ ಭವಾಂಭೋ ॥
ಧಿಯ ತಡಿಯನೆಯ್ದಿಸೆಮ್ಮಂ
ನಯ ನಿಕ್ಷೇಪ ಪ್ರಮಾಣ ಪಾತ್ರದಿನರುಹಾ ॥ ೪೦ ॥

ನೀವಾಳಮೆಂದು ಕೆಲಬರ್
ಪಾವಂ ಪಿಡಿವಂತೆ ದೇವ ನೀನಲ್ಲದರಂ ॥
ದೇವರಿವರೆಂದು ಪಿಡಿದಿ
ನ್ನೀವಿಧಿವಟ್ಟಪರೊ ಮೋಹ ಮೂರ್ಛೆಯಿನರುಹಾ ॥ ೪೧ ॥

ನಿನಗೆ ರಸಮೊಂದೆ ಶಾಂತಮೆ
ಜಿನೇಂದ್ರ ಮನಮಾ ರಸಾಂಬು ನಿಧಿಯೊಳಗವಗಾ ॥
ಹನ್ನಮಿರ್ದು ಮಿಕ್ಕ ರಸಮಂ
ಕನಸಿನೊಳಂ ನೆನೆಯದಂತು ಮಾಡೆಮರುಗಹಾ ॥ ೪೨ ॥

ಕಂ ॥ ಮಣಿಭೂಷಣ ಭರದಿಂ ತನು
ಕಿಣಮಪ್ಪುದದೇಕೆ ನಿನ್ನ ನಿರ್ಮಲ ಗುಣ ಭೂ ॥
ಷಣಮಂ ದಯೆಗೆಯ್ ಪಡೆವೆಂ
ಪ್ರಣಯಮನಪವರ್ಗ ಲಕ್ಷ್ಮ್ಯಗದಱಿಂದರುಹಾ ॥ ೪೩ ॥

ಸಿಂಗದ ಮಾರ್ದನಿ ಮದಮಾ
ತಂಗಮನಳಱಿಸುವವೋಲ್ ನಿಜ ಪ್ರತಿಬಿಂಬಂ ॥
ಪಿಂಗದೆ ಮನದೊಳ್ ನಿಂದಿರೆ
ಪಿಂಗಿಸುವುದು ಜನನ ಮರಣ ದುಃಖಮನರುಹಾ ॥ ೪೪ ॥

ಮೆಚ್ಚೆಗಡಮಳಿಯೆಗಡ ಬಗೆ
ಬೆಚ್ಚಿರೆ ಬೇಱಾಗೆ ನಿನ್ನ ಪದದೊಳ್ ಮನುಜಂ ॥
ಗುಚ್ಚಗತಿ ನೀಚಗತಿ ವಡೆ
ವಚ್ಚರಿ ಕಣ್ಬೆಱಿವ ತೆಱನನಱಿಪೆಮಗರುಹಾ ॥ ೪೫ ॥

ಜ್ಯಾಯಂಗೆ ನೀನೆ ವಲಮಾ
ದೇಯಂ ನೀನಲ್ಲದನ್ಯ ವಸ್ತುಗಳಿಲ್ಲಂ ॥
ಹೇಯಂಗಳೆಂಬ ತತ್ತ್ವೋ
ಪಾಯಮನೆಮಗೀವುದೇವೆವುಱಿದುವನರುಹಾ ॥ ೪೬ ॥

ನಿತ್ಯಸುಖಮಾತ್ಮ ರೂಪಮ
ನಿತ್ಯಸುಖಂ ಮೋಹರೂಪವೆಂಬ ವಿವೇಕಂ ॥
ಸತ್ಯ ಸ್ವರೂಪಮದಱೊಳ
ಗತ್ಯಂತಾನುಭವ ವಿಭವಮಕ್ಕೆಮಗರುಹಾ ॥ ೪೭ ॥

ಎಂದು ದರ್ಶನಸ್ತುತಿಗೆಯ್ದು ಜಿನಮುಖ ದರ್ಶನದಿಂ ಹರ್ಷಚಿತ್ತರಾಗಿ ಚೈತ್ಯಾಲಯದ ಪಟ್ಟಶಾಲೆಯ ಮುಂದಣ ಪರಿಸೂತ್ರದ ಸುತ್ತಣ ಸರೋವರಂಗಳೊಳಲರ್ದ ತಾವರೆಯ ತನಿಗಂಪಂ ತಟಿಸ್ಪೈಸಿ ತೀಡುವ ತಣ್ಗಾಳಿಯ ಸೋಂಕಿಂ ಗಮನ ಪರಿಶ್ರಮಮನಾಱಿಸುತಿರ್ಪುದುಮಾಗಳಲ್ಲಿಗೆ ವಜ್ರಕರ್ಣನಟ್ಟಿದ ಬಲ್ಮಾನಸರ್ ಬೋನಮಂ ತಂದು ವಿನತರಾಗಿ ಮಾರ್ಬಲಂಬಳಸಿ ಬಿಟ್ಟಿರ್ದ ದೂಸಱಿಂದೆಮ್ಮರಸಂ ವಜ್ರಕರ್ಣಂ ತಾಂ ಬರಲುಂ ನಿಮ್ಮಂ ಬರಿಸಲುಮಱಿಯದೆಮ್ಮನಟ್ಟಿದನೆಂದು ಬಿನ್ನವಿಸಿ ಮಣಿಮಯ ಭಾಜನದೊಳರ್ಘ್ಯಪಾದ್ಯಮಂ ಕೊಟ್ಟಭ್ಯಾಗತ ಪ್ರತಿಪತ್ತಿಗೆಯ್ದುದುಮವರಭ್ಯವಹೃತಿಯಂ ನಿರ್ವರ್ತಿಸಿ ಕೈಘಟ್ಟೆಯುಮಂ ತಾಂಬೂಲಮಂ

ಕೊಂಡು ಬಂದ ಮಾನಸರಂ ವಿಸರ್ಜಿಸಿದನಂತರಂ ದಾಶರಥಿ ಸೌಮಿತ್ರಿಯ ಮೊಗಮಂ ನೋಡಿ—

ಮ॥ಸ್ರ॥ಅನಿಮಿತ್ತಂ ವಜ್ರಕರ್ಣಂ ನಮಗೆ ವಿನಯಮಂ ಮಾಡಿದಂ ಮಾನ್ಯನಾತಂ।
ಗನುದಾತ್ತಂ ಮತ್ತಚಿತ್ತಂ ಮುಳಿದು ಬಳಸಿ ಸಿಂಹೋದರಂ ಕಾದಲೆಂದಿ ॥
ರ್ದನದಂ ನೀಂ ಬಾರಿಸೆಂಬೀ ನುಡಿ ಕವಿವುಗೆ ಸೌಮಿತ್ರಿ ದಿವ್ಯಾಸ್ತ್ರ ಬಾಣಾ।
ಸನಮಂ ಕೈವಾರ್ದನಿಲ್ಲಂತಕನ ಬೆಸದೆ ಕಾಳಾಹಿ ಬರ್ಪಂತೆ ಬಂದಂ ॥೪೮॥

ಅಂತು ಬಂದರಮನೆಯ ಬಾಗಿಲೊಳ್ ನಿಂದು ಪಡಿಯಜನೊಡನೆ ಸಿಂಹೋದರನ ಸಭೆಯನಭಯಂಪೊಕ್ಕು—

ಕಂ ॥ ಎಜಿಗುವುದಂತಿರ್ಕೆಮ ಕಾ
ಯ್ದೆಜಿಗುವ ಸಿಡಿಲಂತೆ ಘನ ರವಂ ಕೈಮಿಗೆ ನಾ ॥
ಡೆಜಿಯಂ ಭರತಂ ಬೆಸಸಿದ
ತೆಜನಂ ಕೇಳೆಂದು ಪೀತವಸನಂ ನುಡಿದಂ ॥ ೪೯ ॥

ಜಿನಪತಿಗಲ್ಲದೆ ಪೊಡೆವಡೆ
ನೆನೆ ದೋಷಿಯೆ ವಜ್ರಕರ್ಣನುಬ್ಬುವುದು ಮುಳಿಸಂ ॥
ವಿನಮದಮರೇಂದ್ರನೆನಿಸಿದ
ಜಿನೇಂದ್ರನೊಳ್ ನಿನಗೆ ಗಂಡ ಮಚ್ಚರಮುಂಟೇ ॥ ೫೦ ॥

ಅವ್ರತಿಕಂಗೆಜಗದ ವೀ
ರ ವ್ರತಮಂ ಕೇಳ್ದು ಹರ್ಷಮಂ ತಾಳ್ದದ ನಿ ॥
ನ್ನಬ್ರಹ್ಮಣ್ಯಂ ವರ್ಯಜ
ನ ವ್ರೀಡಾಕರಮದಂ ವಿಚಾರಿಸವೇಡಾ ॥ ೫೧ ॥

[1]ಸುತ್ತುಬ್ಬುವುದು ಮನ್ನಿಸೆ ಭೂ।
ಪೋತ್ತಮನಾಜ್ಞೆಯನವಜ್ಞೆಗೆಯ್ಯೆ ಕೊಡೆ ನೆಟಿಲ್ ॥
ನೆತ್ತಿಗೆ ಗೆಂಟಕ್ಕುಮಿದಂ
ಮತ್ತೆನಿಸದಿರುಚಿತಮಲ್ತು ಗುಣವಿದ್ವೇಷಂ ॥ ೫೨ ॥

ಎನೆ ಸಿಂಹೋದರಂ ಘನರವಕ್ಕೆ ಸಿಡಿಲ್ದ ಸಿಂಹದಂತೆ ಮುನಿದು—

---

1. ಸುತ್ತುಬ್ಬುವುದು. ಕ. ಖ. ಗ. ಚ.

ಕಂ ॥ ಶ್ರೀಯಮನೆನಗಱಿಪಲುಪಾ
ಧ್ಯಾಯನೆ ತನಗಱಿಯನಱಿವನಪ್ಪೊಡೆ ಭರತಂ ॥
ಜ್ಯಾಯನ ರಾಜ್ಯಮನಯ್ಯ ಕ
ನೀಯಂ ಕೈಕೊಂಡ ತೊಂಡು ತನಗಾವುಚಿತಂ ॥ ೫೩ ॥

ಅಣ್ಣನ ಮಾತಂ ಮನ್ನಿಸಿ
ಕಣ್ಣಱಿದೋಸರಿಸಿದಂ ಜನಾರ್ದನನಿದಿರೊಳ್ ॥
ತಣ್ಣನೆ ಹರಿಪೀಠದೊಳಿ
ರ್ಪಣ್ಣನೆ ತಾಂ ತನ್ನ ಬೀರಮೆನ್ನಱಿಯದುದೇ ॥ ೫೪ ॥

ಎನ್ನಾಳಿನಗೆಱಿಗದೊಡವ
ನನ್ನಿಯಮಿಸುವೆಡೆಗೆ ತಾನುಮೆನಗರಸನೆ ಬಂ ॥
ದೆನ್ನಂ ನಿಯಮಿಸುಗೆಮ ತ
ನ್ನೆನ್ನಳವಂ ಸಮರ ಮುಖದೊಳಱಿಯಲ್ಬರ್ಕುಂ ॥ ೫೫ ॥

ಎನೆ ಲಕ್ಷ್ಮಣಂ ಮಂದಸ್ಮಿತ ಮುಖಾರವಿಂದನಾಗಿ—

ಕಂ ॥ ಅಧಿರಾಜಂಬರೆಗಂ ಕದ
ನ ಧುರೀಣಂ ಗಂಡನಾವನೆನೆ ಮುನಿದು ಘನ ॥
ಪ್ರಧನ ರತಂ ಸಿಂಹೋದರ
ನಧೋಕ್ಷಜಂಗೊರೆಯಿನುರ್ಚಿದಂ ಕೂರಸಿಯಂ ॥ ೫೬ ॥

ಆಗಳದಂ ಕಂಡು ಕಡುಮುಳಿದು—

ಕಂ ॥ ಕಡಿತಲೆಯಂ ತೂಗುತ್ತುಂ
ಕಡಿತಲೆಕಾಱರ್ ಕಡಂಗಿ ಬರೆ ಬಱುಗಯ್ಯೊಳ್ ॥
ತುಡುಕಿ ಪಿಡಿದೆತ್ತಿ ಮುಸಕದಿ
ನೆಡೆಯುಡುಗದೆ ಸಿಲೆಯೊಳಸಗವೊಯ್ದಂ ಪೊಯ್ದಂ ॥ ೫೭ ॥

ಉ ॥ ಒರ್ವರಿನೊರ್ವರಂ ಮುಱಿಯೆ ಮೋದಿದನೊರ್ವರಿನೊರ್ವರಂ ಭುಜಾ ।
ಗರ್ವದಿನೋವದಿಟ್ಟನಱಿಯಟ್ಟಿ ಸಿಡಿಲ್ಪೊಡೆವಂತೆ ಪೊಯ್ದನೋ ॥
ರೊರ್ವರಿನೊರ್ವರೊರ್ವರನಗುರ್ವಿಸಿ ಸೌಳನೆ ಸೀಳ್ದನಂತಿದೇಂ ।
ಮಾರ್ವಲಮಂ ಪಡಲ್ವಡಿಪಳುರ್ಕೆಗೆ ನಿರ್ದಯನೋ ಜನಾರ್ದನಂ ॥ ೫೮ ॥

ಅದಂ ಕಂಡು ಸಿಂಹೋದರಂ ಸಿಗ್ಗಾಗಿ ಸಿಂಹದಂತೆ ಮೇಲ್ವಾಯ್ವುದುಂ—

ಕಂ ॥ ಬಾಳಂ ಬಂಚಿಸಿ ಪಿಡಿದಂ
ಬಾಳಕನಂ ಪಿಡಿವ ಮಾಟ್ಕಿಯಿಂದವನಂ ಬಿ ॥
ಲ್ಲಾಳನೆಟಿದುಯ್ದನಾವಂ
ಕಾಳೆಗದೊಳ್ ಲಕ್ಷ್ಮಣಂಗೆ ಕೂರ್ಪಂ ತೋರ್ಪಂ ॥ ೫೯ ॥

ಆಗಳಾ ಕಳಕಳಕ್ಕೆ ಮುನ್ನೀರೆ ಮೇಱಿದಪ್ಪಿದಂತೆ ಬೆಂದಗುಳ್ದು ಬರ್ಪ ಮಾರ್ಪಡೆಗೆ ಕಡೆಗಾಲದ ಕೃತಾಂತನಂತೆ ಪೆಡಂಮಗುಟ್ಟಿ—

ಕಂ ॥ ಕೂರಾಳಿಂ ಕೂರಾಳಂ
ತೇರಿಂ ತೇರಂ ಕಡಂಗಿ ಹಯದಿಂ ಹಯಮಂ ॥
ವಾರಣದಿಂ ವಾರಣಮುಂ
ನಾರಾಯಣನಿಟ್ಟು ತವಿಸಿದಂ ಮಾರ್ಬಲಮಂ ॥ ೬೦ ॥

ಉ ॥ ಏನುಱಿದಾಂಪುದುಂ ಜವನನೋಲ್ ತವೆ ಕೊಂದನೊ ವೈರಿ ಸೇನೆಯಂ।
ಮಾನವನಂದಮಲ್ಲಮಿದು ದಾನವನಂದಮೆನಲ್ ಬೃಹದ್ಬಲಂ ॥
ಮಾನವರಿಂ ಹಯ ಪ್ರಕರಮಂ ಹಯದಿಂ ರಥಮಂ ರಥಂಗಳಿಂ।
ದಾನೆಯನಿಟ್ಟು ಕೈಗೆ ದೊರೆಕೊಂಡುದೆ ಕೈದುವೆನಲ್ ಜನಾರ್ದನಂ ॥ ೬೧॥

ಅಂತಗುರ್ವುಮದ್ಭುತಮುಮಾಗೆ ಕಾದಿ—

ಮ ॥ ಚಕಿತಾರಾತಿ ಚತುರ್ಬಲಂ ಬಲಯುತಂ ದೋಸ್ತಂಭದೊಳ್ ಸಾಲಭಂ।
ಜಿಕೆವೋಲ್ ರಂಜಿಸೆ ವೀರಲಕ್ಷ್ಮಿ ರಘುವೀರಂ ಲಕ್ಷ್ಮಣಂ ರಾಷ್ಟ್ರಕಂ ॥
ಟಕನಂ ಬಾಲ್ದಲೆಗೊಂಡನುಯ್ದನಿಭಮುಂ ಪಂಚಾನನಂ ಹಸ್ತಿ ಮ।
ಸ್ತಕ ಮಸ್ತಿಷ್ಕ ರಸಾನುರಕ್ತ ರಸನಂ ಮಾರ್ಕೊಂಡು ಕೊಂಡುಯ್ವವೋಲ್ ॥

ಆ ಸಮಯದೊಳ್ ಪರಿಜನಂಬೆರಸು ಕರುಮಾಡದೆರಡನೆಯ ನೆಲೆಯೊಳಿರ್ದು ವಜ್ರಕರ್ಣಂ ಕರ್ಣಾಂತ ವಿಶ್ರಾಂತ ವಿಸ್ಫಾರಿತ ವಿಲೋಚನನಿದೇನೆಂದು ನೋಡುತ್ತುಮಿರೆ—

ಮ॥ಸ್ರ॥ಗಣನಾತೀತಾನ್ಯ ಸೇನಾಂಗಮನನಿತುಮನೇಕಾಂಗದೊಳ್ ಶೂನ್ಯ ಹಸ್ತಂ।
ರಣದೊಳ್ ಸೀಳ್ದೊಟ್ಟಿ ಸಿಂಹೋದರನನುಜದೆ ಕೊಂಡುಯ್ದನುದ್ದಂಡನೀತಂ॥
ಗೆಣೆಯಾವಂ ಗಂಡನೆಂದಾ ಪುರಜನವನಿತುಂ [1]ವಿಸ್ಮಯಾರಕ್ತಾಕ್ಷ ವಿಕ್ಷೇ।
ಪಣಮೆಯ್ತಂದೀಕ್ಷಿಸಿತ್ತುತ್ಸಕ ಸರಭಸ ಯಾನಂ ಗತಾನ್ಯಾವಧಾನಂ॥ ೬೩ ॥

---

1. ವಿಸ್ಮಯಾಕ್ರಾನ್ತ ವಿಕ್ಷೇಪಣ. ಕ. ಖ. ಗ; ವಿಸ್ಮಯತ್ಪಕ್ಷ್ಮ ವಿಕ್ಷೇಪಣ. ಘ.

ಆ ಸಮಯದೊಳ್—

ಕಂ ॥ ಅವಿರಳ ಗಳದಶ್ರು ಜಲ
ಪ್ಲವ ಧೌತ ಕಪೋಲತಳಮವಂತೀಶ್ವರನಂ ॥
ತವುರಂ ಪರಿಪಾಳಿಪುದೆ
ಮ್ಮವತಂಸಮನೆಂದು ಬಂದು ಕಾಲ್ಗೆಱಗುವುದುಂ ॥ ೬೪ ॥

ಮ ॥ ಮಲೆತಿರ್ದಂ ಗಡ ವಜ್ರಕರ್ಣನೊಳದಂ ನೀಂ ಮಾಣಿಸೆಂದಟ್ಟಿದಂ ।
ಕೊಲಲೆಂದಟ್ಟಿದನಿಲ್ಲ ರಾಮನಧಿರಾಜಂ ಚಿಂತೆ ಬೇಡಂತಜಿಂ ॥
ದೆಲೆ ಸಿಂಹೋದರ ಮಾನಿನೀಜನಮೆ ಶೋಕೋದ್ರೇಕಮಂ ಮಾಣಿಮಂ ।
ಜಲಿಮೆಂದಂ ಘನ ದುಂದುಭಿ ಧ್ವನಿಗಳೊಂದಾದಂತೆ ಲಕ್ಷ್ಮೀಧರಂ ॥ ೬೫ ॥

ಅಂತವರ ಮನದ ಶಂಕಾ ಕಳಂಕಮಂ ಕಳೆದು ಸಿಂಹೋದರನನೆಬ್ಬಿದುಯ್ಯುದು ಮವನಿವರ್ ಬಲಾಚ್ಯುತರೆಂದಜಿದು—

ಚ ॥ ಅತಿಬಲನಪ್ಪ ಲಕ್ಷ್ಮಣ ಕುಮಾರನ ವೀರರಸ ಪ್ರವಾಹಸೀ ।
ಪತಿತ ಮಹಾ ಮಹೀರುಹಮೆನಲ್ ನತನಾದನವಂತಿ ವಲ್ಲಭಂ ॥
ಹತ ಸುಮನೋವಿಳಾಸನಪಸಾರಿತ ಮೂಲಬಲಂ ನಿರಸ್ತ ವಿ ।
ಸ್ಮಿತ ನಯನಸ್ತ ಸಾರನವಿಚಾರನಿಳೇಶ್ವರ ಪಾದ ಪಾರ್ಶ್ವದೊಳ್ ॥ ೬೬ ॥

ಆಗಳುದಾತ್ತ ರಾಘವಂ—

ಚ ॥ ಮನದೊಳೆ ಮೆಚ್ಚಿ ಲಕ್ಷ್ಮಣನ ದೋರ್ಬಲ ಗರ್ವಮನಾನತಂಗೆ [1]ಸ ।
ಮ್ಮನದೊಳೆ ಭೀತಿಯಂ ಕಳೆದು ವಿಗ್ರಹದಾಗ್ರಹಮಿರ್ಕೆ ವಜ್ರಕ ॥
ರ್ಣನೊಳನುಬಂಧಮಂ ಮಗುಟಿ ಮಾಟ್ಟುದು ನೀನೆನೆ ಜಾನಕೀ ಪ್ರಿಯಂ ।
ವಿನಮಿತ ಮಸ್ತಕಂ ಮುಗಿದ ಕೈವೆರಸೆಂದನವಂತಿ ವಲ್ಲಭಂ ॥ ೬೭ ॥

ಉ ॥ ದೇವರ ಸಮ್ಮವಾವುಗೆಗಳಂ ಪಿಡಿದೆಂಬುದನಿಂಬುಕೆಯ್ವ ಸ ।
ದ್ಭಾವಮೆ ಸಾಲ್ಗು ನೊಲ್ಲನುಟಿದೇನುಮನೀ ಬೆಸನಂ ನರೇಂದ್ರ ನೀ ॥
ನೀವುದುಪೇಕ್ಷೆಗೆಯ್ವುದುಮಪೇಕ್ಷಿಸುವೆಂ ಫಲ ಮೂಲ ವಲ್ಕಲ ।
ಪ್ರಾವರಣಾದ್ರಿ ಕುಂಜ ವನ ವಾಸ ಪವಿತ್ರ ತಪಶ್ಚರಿತ್ರಮಂ ॥ ೬೮ ॥

ಎಂದು ವಿನ್ನವಿಸುತ್ತಿರ್ದುದುಮಿತ್ತಲ್—

---

1. ಸನ್ಮಸ. ಚ.

ಕಂ ॥ ಬಜುಗಯ್ಯೊಳೊಂದೆ ಮೆಯ್ಯೊಳ್
ಮಜುವಕ್ಕಮನಿಕ್ಕೆ ಗೆಲ್ದು ಸಿಂಹೋದರನಂ ॥
ಸೆಜಿಗೊಂಡುಯ್ದಂ ಕೃಷ್ಣಂ
ಪೆಜಿಂಗೆ ಪೇಱ್ ಬಾಹುವೀರ್ಯವಿನಿತಾದಪುದೇ ॥ ೬೯ ॥

ಎಂದು ಮನದೊಳೆ ನಿಶ್ಚೈಸಿ ಪರಿವೃತ ಕತಿಪಯ ಪರಿಜನಂ ವಜ್ರಕರ್ಣಂ ವಜ್ರಕುಂಡಲ ಮರೀಚಿ ಪಗಲ ಸಿರಿಗೆ ಕಣ್ಪೆಜವಿಮಾಡೆ ದೂರೋತ್ಸಾರಿತ ವಿಚಿತ್ರಾತಪತ್ರ ವಿವಿಧ ವಾಹನಂ ಬಸದಿಯಂ ಬಲಗೊಂಡು ದರ್ಶನಸ್ತುತಿಗೆಯ್ದು ತಿಸಂಭ್ರಮದಿಂ ಬಂದು ಮಣಿಮಕುಟ ಮಯೂಖ ಲೇಖೆ ಪಸರಿಸೆ ದೀಪವರ್ತಿ ನಿಧಿಗೆಜಿಗುವಂತೆಜಿಗುವುದುಂ—

ಮ ॥ ಬಲವದ್ವೈರಿಗಳಲ್ಲಿ ಮುನ್ನೆಟೆದುಕೊಂಡಂತಿರ್ದುವಂ ರಾಮ ಕೋ ।
ಮಲ ಪಾದ ದ್ವಿತಯಂ ನತಂಗೆ ಪಡೆದತ್ತತ್ಯುನ್ನತಾಂಗುಷ್ಠದಿಂ ॥
ಬೆಳಗುತ್ತಿರ್ಪ ನಖಂಗಳಿಂ ತಳದ ಕೆಂಪಿಂ ವಜ್ರಕರ್ಣಂಗೆ ನಿ ।
ಶ್ಚಲಮಪ್ಪಂತಿರೆ ಬೇಗಮುನ್ನತಿಯನುದ್ಯತ್ತೇಜಮಂ ರಾಗಮಂ ॥ ೭೦ ॥

ಕೊಟ್ಟುದು ರಾಗಮಂ ತಳಮುದಂಶುಗಳಿಂ ನಖಪಜ್ಕ್ತಿ ಪಟ್ಟಮಂ ।
ಕಟ್ಟಿದುದುನ್ನತಾಂಗುಲಿ ಸಮುನ್ನತಿಯಿಂ ಚರಣಾನತಂಗೆ ಮುಂ ॥
ದಿಟ್ಟುದು ವಜ್ರಕರ್ಣ ವಸುಧಾ ರಮಣೀ ರಮಣಂಗೆ ತೊಟ್ಟಿನಲ್ ।
ಪುಟ್ಟಿಸಿದತ್ತು ಮೆಯ್ನವಿರ್ಗಳಂ ರಘುವೀರ ವಚಸ್ಸುಧಾರಸಂ ॥ ೭೧ ॥

ಅನಂತರಂ—

ಕಂ ॥ ಎಜಗದೊಡೆ ನೀಚ ವೃತ್ತಿಯ
ನೆಜಗಿದೊಡುನ್ನತಿಯನೀವ ವಿಪರೀತ ಗುಣ ॥
ಕ್ಕೆಜೆವೆಟ್ಟಿನಿಸಿದುಪೇಂದ್ರಂ
ಗೆಜಗಿದನಾದರದೆ ವಜ್ರಕರ್ಣನರೇಂದ್ರಂ ॥ ೭೨ ॥

ಅಂತು ವಿನತನಾಗಿ—

ಕಂ ॥ ಮನಮಂ ಕಾರುಣ್ಯ ರಸಂ
ತನುವಂ ರಾಘವನ ದೇಹರುಚಿ ಪುದಿಯೆ ಸುಧಾ ॥
ವನನಿಧಿಯೊಳ್ ಮುಳುಗಿದವೋ
ಲನುರಕ್ತಂ ಮುಂದೆ ಮುಗಿದ ಕೈವೆರಸಿರ್ದಂ ॥ ೭೩ ॥

ಅಂತು ಸಮುಚಿತ ಪ್ರದೇಶದೊಳಿರ್ದುದುಮಾ ಸಮಯದೊಳ್—

ಕಂ॥ ಭಂಗಿ ಮನಸಿಜನ ಗಾಡಿಗೆ
ಭಂಗಮನೊಡರಿಸೆ ಕಿರೀಟ ಕಿರಣಂ ನಭಮಂ ॥
ರಂಗಿಸೆ ಕೆಱೆದಾನುಂ ಚತು
ರಂಗ ಬಲಂ ಬೆರಸು ವಿದ್ಯುದಂಗಂ ಬಂದಂ ॥ ೭೪ ॥

ಅಂತು ಬಂದು—

ಕಂ ॥ ಶ್ರೀಮುಖ ದರ್ಶನಮೊಡರಿಸೆ
ರೋಮಾಂಚಮನೆಱಗಿ ವಿದ್ಯುದಂಗಂ ಮುನ್ನಂ ॥
ಕಾಮಧ್ವಂಸಿಗೆ ಬಟ್ಟಿಯಂ
ರಾಮಂಗಂ ಲಕ್ಷ್ಮಣಂಗಮಾನತನಾದಂ ॥ ೭೫ ॥

ಅಂತಾನತನಾಗಿ ವಜ್ರಕರ್ಣನ ಕೆಲಮೊಳ್ ಕುಳ್ಳಿರ್ದುದುಂ ಲಕ್ಷ್ಮಣಕುಮಾರ ನೀತನಾರ್ಗೆನೆ ವಿದ್ಯುದಂಗನೆಂಬಂ ಕುಂಡಳಪುರದ ಪರದನುಜ್ಜಯಿನಿಗೆ ಪರದುವೋಗಿ ಕಾಮಲತೆವೆಸರ ಪೆಂಡವಾಸದ ವಿಲಾಸಿನಿಗೆ ವಲ್ಲಭನಾಗಿರ್ದಾಕೆಯತ್ತಣಿಂ ಸಿಂಹೋದರನೆನಗೆ ರತ್ನತ್ರಯಾರಾಧಕಂಗಲ್ಲದೆ ಪೆಱರ್ಗೆಱಗೆನೆಂದುದರ್ಕೆ ಕಡುಮುಳಿದು ಕೊಲಲೆಂದು ಬಂದು ಬಟ್ಟಿಯಟ್ಟಿದುದಂ ಕೇಳ್ದದುವೆ ಪೊಟ್ಟಾಗೆ ದಶಪುರಕ್ಕೆ ಬರುತುಮಿದಿರೊಳೆನ್ನಂ ಕಂಡೆನಗೀವೃತ್ತಾಂತಮಂ ಪೇೞ್ದು ಪೋಗಲೀಯದೆ ಮಗುೞಿ ಬಂದು ನಿನ್ನಾದುದನಪ್ಪೆನೆಂದು ಕದನ ಸಹಾಯನಾಗಿರ್ದನಕಾರಣ ಬಂಧುವೀತನೆಂದು ಬಿನ್ನವಿಸೆ ತದನಂತರಂ ವಜ್ರಕರ್ಣನ ಮೊಗಮಂ ನೋಡಿ ರಾಮದೇವಂ ನಿಜವ್ರತ ಪರಿಪಾಲನ ಪರಿಣಾಮಕ್ಕೆ ಮೆಚ್ಚಿದೆಂ, ಮೆಚ್ಚಿದುದಂ ಬೇಡಿಕೊಳ್ಳೆನೆ ಮಹಾ ಪ್ರಸಾದಮೆಂದಿಂತೆಂದಂ—

ಕಂ ॥ ಪ್ರಾಣೋಪಕಾರಮಂ ಕ
ಲ್ಯಾಣಮನೆನಗಿತ್ತು ದೇವ ತಣಿಯದ ನಿಮ್ಮಾ ॥
ತ್ರಾಣ ಪ್ರವೀಣ [1]ಪರಮ
ಪ್ರಾಣಿ ಹಿತಾಚರಣವಿತರ ಸಾಧಾರಣಮೇ ॥ ೭೬ ॥

ಅಣುವಿಂ ಕೆಱೆದಾದುದು ಧಾ
ರಿಣಿ ದೇವರ ಬಗೆಗೆ ದೇವ ನಿಜ ಸತ್ವಗುಣಂ ॥
ಫಣಿಪತಿಗಮರಿದು ಮನುಜಂ
ಗಣನಾರ್ಹನೆ ಪೊಗಟಿಲೊಂದೆ ನಾಲಗೆಯ ಜಡಂ ॥ ೭೭ ॥

---

1. ಧರ್ಮ. ಚ.

ಕಂ ॥ ದೇವರ ಬರವೆನಗಾದುದು
ದೇವರ ಬರವೆನ್ನಸಯ್ಪಿನಿಂ ದೇವ ಭವ ॥
ತ್ಪೇವೆ ದೊರೆಕೊಂಡುದೆನಗಿ
ನ್ನಾವುದುಮರಿದುಂಟೆ ಬೇಡಿ ಪಡೆವನಿತುವರಂ ॥ ೭೮ ॥

ಅದಱಿಂ ದೇವ ಸಿಂಹೋದರಂಗೆ ಕಾರುಣ್ಯಂಗೆಯ್ವುದೆಂದು ಬಿನ್ನವಿಸೆ ಲಕ್ಷ್ಮೀಧರನದರ್ಕೆ ಮೆಚ್ಚಿ—

ಚ ॥ ಕಡೆದೊಡೆ ಪಾಲ್ಗಡಲ್ ವಿವಿಧವಸ್ತುವನೀಯದೆ ತೇಯೆ ಚಂದನಂ।
ಕುಡದೆ ಸುಗಂಧಮಂ ಪಿಟಿಯೆ ಕರ್ಬಿನಿದಾಗದೆ ಕಾಸೆ ಕಾಂಚನಂ ॥
ಪಡೆಯದೆ ಕಾಂತಿಯಂ ನಿಜದಿನೊಳ್ಕಿದರಪ್ಪವರೆಂತು ಬಾಧೆವ।
ಟ್ಟೊಡಮುಪಕಾರಮಂ ಪೆಱರ್ಗೆ ಮಾಡದೆ ಬಾಧೆಯನೇಕೆ ಮಾಡುವರ್ ॥೭೯॥

ಕಂ ॥ [1]ಇಱಿಯಲ್ಕೆ ಬಗೆದು ಸಿಂಹೋ
ದರನಿರೆಯುಂ ವಜ್ರಕರ್ಣನೊಪ್ಪನೆ ಬಗೆದಂ ॥
ಪರಪೀಡಾ ಕರಣದೊಳೇಂ
ಪರೋಪಕಾರ ಪ್ರಿಯಂಗೆ ಬಗೆ ಬಂದಪುದೇ ॥ ೮೦ ॥

ಎಂದು ನುಡಿದನಂತರಂ ದಾಮೋದರಂ ಸಿಂಹೋದರಂಗಂ ವಜ್ರಕರ್ಣಂಗಂ ಪರಸ್ಪರ ಕರಗ್ರಹಣದಿಂ ಮನದ ಕಲುಷಮಂ ಕಳೆದು, ನಾಡುಮಂ ಬೀಡುಮಂ ಪಚ್ಚುಕೊಟ್ಟು—

ಕಂ ॥ ನುಡಿ ಕಿತ್ತಡವೆನಿಸದೆ ನೇ
ರ್ಪಡುಗಿಡದೆ ನರೇಂದ್ರನಾಜ್ಞೆಯಿಂದಿರ್ದುದಿದಂ ॥
ಕಡೆಗಣಿಸೆ ಬಟಿಕ್ಕಣ್ಣಿನ
ತುಡುವ ಶಿಲೀಮುಖದೊಳುಂಟೆ ಮುಖದಾಕ್ಷಿಣ್ಯಂ ॥ ೮೧ ॥

ಎಂದು ನಿಯಮಿಸುವುದುಂ ವಜ್ರಕರ್ಣಂ ಪರಿಪೂರ್ಣ ಮನೋರಥಂ ದಾಶರಥಿಯಂ ದೇವರೆನ್ನಮನೆಗೆ ಬಿಜಯಂಗೆಯ್ವುದೆಂದುಯ್ವ ಸಮಯದೊಳ್—

ಕಂ ॥ ತುಱುಗಿದುವು ತೋರಣಂ ಕೈ
ನಿಱಿದುವು ಗುಡಿ ಕಿವುಡುವೀಳ್ವಿನಂ ದಿಕ್ಕರಿಗಳ್ ॥
ಪಱೆ ಮೊಳಗಿದುವುನ್ನತಿ ಕ
ಣ್ಪಿಱಿದಂತೆವೊಲಾದುದುತ್ಸವಂ ದಶಪುರದೊಳ್ ॥ ೮೨ ॥

1. "ಅರಿಯಲ್ಕೆ" ಎಂದಿದ್ದಲ್ಲಿ ಪ್ರಾಸವಿರೋಧವಾಗುತ್ತಿರಲಿಲ್ಲ.

ಆ ಸಮಯದೊಳ್ ಸುಟ್ಟ ತೋಱಿ—

ಮ॥ ಸ್ರ॥ ವನಿತಾರತ್ನಂ ದಲಾ ಕೋಮಲೆ ಜನಕಜೆ ರಾಮಂ ದಲಾ ಬರ್ಪ ನೀಹಾ।
ರ ನಗೇಂದ್ರ ಪ್ರಾಂಶು ಸಿಂಹೋದರ ಕದನ ಮದೋದ್ರೇಕ ರೌದ್ರ ಗ್ರಹೋಚ್ಚಾ॥
ಟನ ಮುದ್ರಾ ಮಾಂತ್ರಿಕಂ ಲಕ್ಷ್ಮಣನೆ ದಲೆನುತುಂ ಬೇಗಮೆಯ್ತಂದುಪೌರಾಂ।
ಗನೆಯರ್ ಕರ್ಣಾರ್ವಿನಂ ನೋಡಿದರಲರ್ಗಣೆಯಂ ತಾಗೆ ನೇತ್ರತ್ರಿಭಾಗಂ॥೪೩॥

ಅಂತು ಪೌರಜನದ ಮನದೊಡನೆ ಪುರಮನರಮನೆಯುಮಂ ಪೊಕ್ಕು ಮಣಿಮಯಮಂಟಪದೊಳಕ್ಕಿದ ಮಣಿಮಯಾಸನಮನಲಂಕರಿಸಿ ರಾಮಲಕ್ಷ್ಮಣರಿರ್ದುದುಮಭಿಜನ ಸನಾಭಿಜನ ಸಹಿತನಾನತನನರ್ಘ್ಯ ಮಣಿಭಾಜನದೊಳರ್ಘ್ಯ ಪಾದ್ಯಮಂ ಕೊಟ್ಟು ಸಿಂಹೋದರನುಮನೊಡನೆಯರಸುಮಕ್ಕಳುಮಂ ವಿಚಿತ್ರ ವಸ್ತ್ರಾಭರಣಂಗಳಿಂದಮರ್ಚಿಸಿ ಮಜ್ಜನ ಭೋಜನಾದಿ ಸತ್ಕಾರಮನಂದಿನ ದಿನದೊಳ್ ಮೆಱೆದು ಮಱುದಿವಸಂ ಶುಭಮುಹೂರ್ತದೊಳ್—

ಕಂ ॥ ತನ್ನ ತನುಜೆಯರನೆಣ್ಬ
ರ್ಕನ್ನೆಯರಂ ವಜ್ರಕರ್ಣನುಱಿದರನಿತ್ತರ್ ॥
ಚೆನ್ನೆಯರನವನಿಪಾಲ
ರ್ಮ್ಮನ್ನೂರ್ವರನಲ್ಲಿ ಮದುವೆನಿಂದನುಪೇಂದ್ರಂ ॥ ೪೪ ॥

ಅಂತು ದಶಪುರದೊಳ್ ಸಿಂಹೋದರನನುಜ್ಜಣಿಗೆ ಬೀಟ್ಕೊಳಿಸಿ ಕೆಲವು ದಿವಸಮಿರ್ದಿನಂ—

ಉ ॥ ನೀರಸವಾಗೆ ಬಳ್ಳಿ ಗಿಡು ಪೆರ್ಮರಗಳ್ ಕರಯಂತ್ರ ನಾಳದಿಂ।
ಭೂ ರಸಮೆಲ್ಲಮಂ ತೆಗೆಯೆ ಭಾನು ದವಾನಲ ಧೂಮ ಧೂಸರಂ॥
ಕಾರಿರುಳಂತೆ ಕಟ್ಟಿಗೆ ದೆಸೆ ಬಂದುದು ಬೇಸಗೆಗಾಲಮಸ್ತ ಕಾ।
ಸಾರಕ ಸಾರಮಸ್ತಮಿತ ಮಾರುತನುದ್ಗತ ಚೀರ್ಕಿಕಾ ರುತಂ ॥ ೪೫ ॥

ಕಂ ॥ ಕರೆದುವು ಸೀರುಡುಗಳ್ ಪೆ
ರ್ಮರಂಗಳೆಲೆಯಿಕ್ಕಿ ಕಟಲೆ ಬಿಟ್ಟುವು ತೊಱೆಗಳ್ ॥
ಪರಿಗೆಟ್ಟುವು ಬೆಳ್ವಯಲೊಳ್
ಸರಳಿಸಿದುವು ಮರುಮರೀಚಿಕಾ ವಾಹಂಗಳ್ ॥ ೪೬ ॥

ಸಾರಂ ಕೆಡೆ ಪಾರ್ಥಿವ ಪರಿ
ವಾರಂ ದೆಸೆಗೆಟ್ಟುಪೋಪವೋಲ್ ಪೋದುವು ನಿ ॥

ಸ್ಸಾರ ಸರೋಜಾಕರದಿ
ಸಾರಸ ಕಲಹಂಸ ಚಕ್ರವಾಕ ಕುಟುಂಬಂ ॥ ೮೭ ॥

ಕಂ ॥ ಪರಿವಾರಮೆನಿಪ ಬಹು ಜಲ
ಚರ ಮರಣದಿನಾದ ಖೇದದಿಂದೆರ್ದೆಯೊಡೆದಂ ॥
ತಿರೆ ಕೂಡೆ ಬೀಡೆವರಿದುವು
ನಿರಂತರೋತ್ತಪನ ತಾಪದಿಂ ಪೆರ್ಗಜಿಗಳ್ ॥ ೮೮ ॥

ಉರಿವರಿವ ಬಿಸಿಲ್ ಸುಡೆ ಸೀ
ಕರಿವೋದುಪವೆನಿಸಿ ತುಂಬಿಯುಂ ಕೋಗಿಲೆಯುಂ ॥
ಮರಗಳೆಲೆವಜ್ಜಿಗಳೊಳ್ ಪು
ಯ್ಗರೆದುವು ಪಡುನೇಸಜಿಪ್ಪಿನಂ ಬೇಸಗೆಯೊಳ್ ॥ ೮೯ ॥

ಮ॥ಸ್ರ॥ ಪಿಡಿದಿರ್ದಿಂ ನಲ್ಮೆಯಿಂದೀಕೆಯುಮೆನಗೆ ಕರಂ ಕೂರ್ಪಳೆಂಬೀ ವಿವೇಕಂ ।
ಕೆಡೆ ಜನ್ಮಾವಾಸಮಂ ಪೀಡಿಸಿ ನಳಿನಿಗೆ ನಿಷ್ಕಾರಣಂ ಕಾಯ್ದು ನೋವಂ ॥
ಪಡೆದಂ ಚಂಡಪ್ರಭಂ ವಾರುಣಿಯನನುದಿನಂ ಸೇವಿಸುತ್ತಿರ್ದರಾಗ ।
ಕ್ಕೆಡೆಗೊಟ್ಟುನ್ಮಾರ್ಗದೊಳ್ ವರ್ತಿಸುವ ಕುವಲಯ ದ್ರೋಹನೇಗೆಯ್ದು
ತೋಜಿಂ ॥ ೯೦ ॥

ಪೃಥ್ವಿ॥ ವಿಕಾರಮಿನಿಸಿಲ್ಲೆನಲ್ ಮೆಜ್ಜಿದು ಬಾಹ್ಯಸಾಮಗ್ರಿಯಿಂ ।
ದಕಾರ್ಯಪರನಾಗಿಯುಂ ಪರಮ ಯೋಗಿಯಿರ್ಪಂದದಿಂ ॥
ದಕಂಪಿತ ಶರೀರನಿರ್ದುದು ಜಲಾಶಯೋಪಾಂತದೊಳ್ ।
ಬಕಂ ದರ ನಿಮಿಲಿತಾಂಬಕನಶೇಷ ದೋಷಾಶಯಂ ॥ ೯೧ ॥

ಚ ॥ ಭುವನ ಜನ ಪ್ರಸನ್ನ ಕಮಲಾಕರ ನಿನ್ನ ಪರಾರ್ಥ ಜೀವನಂ ।
ತವುತರೆ ತೀವ್ರ ಕಾಲ ವಶದಿಂದಮೆ ನೀರಸಮಾಯ್ತು ನೀರಜಂ ॥
ಕುವಲಯಮಪ್ಪುಕೆಯ್ದುದು ವಿಷಾದಮನಂಜೆಗೆ ಖೇದಮಾಯ್ತು ಪೋ ।
ದುವು ಪೊಣರ್ವಕ್ಕಿಗಳ್ ವಿಕಳಮಾದುವು ವಿಮಾನ ಕುಳೀರ ಕೋಟಿಗಳ್ ॥

ಚ ॥ ಮೃಗ ಕುಲಮಾಸೆಗೆಯ್ದು ಮೃಗ ತೃಷ್ಣಿಕೆಯಂ ಜಲಮೆಂದು ತೃಷ್ಣೆಯಿಂ ।
ಪಗಲಿಟ್ಟಿವನ್ನೆಗಂ ಪರಿದು ಗಂಟಲುರಂಬರಮಾಜಿ ಬೆಂದೊವಲ್ ॥
ತೆಗಳಿಗೆ ಬೀಟಿ ಬಾಯ್ಗೆ ಕರಿಸಂ ಬರೆ ನಾಲಗೆಗಿಟ್ಟು ನಟ್ಟ ದಿ ।
ಟ್ಟಗಳೊಡನಳ್ಳಿ ಪೊಯ್ಯೆ ನಡೆಗೆಟ್ಟುವು ತೃಷ್ಣೆಯಿನಾರೊ ಬೇಯದರ್ ॥ ೯೩ ॥

ಚ ॥ ದಿನಕರ ತೀವ್ರ ತಾಪಮುರಿಯೆಣ್ಣೆವೊಲಳ್ಪಿ ಶರೀರ ತಾಪದಿಂ ।
ವನರುಹ ಷಂಡಮುಂ ತುರಿಪದಿಂದೊಳವೊಕ್ಕು ಕಡಂಗಿ ಕೆಟ್ಟಿದಂ ॥
ಮುನಿಸಿನಳುರ್ಕೆಯಂ ಪಗೆಯ ನಂಟರೊಳಂ ಕಡುಕೆಯ್ದು ತೋರ್ಪವೋಲ್ ।
ವನಗಜಮೊಟ್ಟಕೊಂಡುದು ಮೃಣಾಳಿಕೆಯಂ ನಿಜಮೂರ್ಧ ಪಿಂಡದೊಳ್ ॥

ಕಂ ॥ ತಪನಾತಪದಿಂ ಚೇಷ್ಟಾ
[1]ಕ್ಷಪಣೆಯನೊಳಕೊಂಡು ಕೋಳ್ಮಿಗಂ ಬೆಳ್ಮಿಗಮಾ ॥
ತ್ಮ ಪುರೋಭಾಗದೊಳಿರ್ದೊಡ
ಮುಪಶಮಿಸಿದುದೊಳ್ಪನೀಗುಮಾತಪ ಯೋಗಂ ॥ ೯೫ ॥

ಉದ ಬಿಂದುಗೆತ್ತು ಗಿರಿ ಸಾ
ನು ದೇಶದೊಳ್ ಕಾಯ್ದ ಬಿದಿರ ಪೊಸಮುತ್ತಂ ನುಂ ॥
ಗಿದ ಸೋಗೆವಿಂಡಣಂ ಮಜು
ಗಿದುವುಂಡಿಗೆ ಬೇಯೆ ಕೆಂಡಮುಂ ನುಂಗಿದವೋಲ್ ॥ ೯೬ ॥

ಮ ॥ ರವಿಕಾಂತೋಪಲ ವಹ್ನಿಯಿಂದಡವಿಗಳ್ ಭಸ್ಮಾವಶೇಷಂಗಳಾ ।
ದುವರಲ್ವೋದುವು ಬೆಟ್ಟುಗಳ್ ನದನದೀ ದ್ರೋಣೀ ಜಲಂ ಕಾಸಿದೆ ॥
ಣ್ಣೆವೊಲುರ್ವೀಟ್ಟಿವು ಮೂಷೆಯಿಟ್ಟ ತೆಱದಿಂ ಗ್ರಾವಸ್ಥಲಂ ಲೋಹವಾ ।
ದುವು ರೇಣುಸ್ಥಲಿ ಕಾಜುವಿ ಟ್ಟಿವು ನಿದಾಘ ದ್ರಾಘಿಮೋದ್ರೇಕದೊಳ್ ॥ ೯೭ ॥

ಬಹುತಾಪಕ್ಕೆ ಬಿಗುರ್ತು ವಿಷ್ಣುಪಡೆವಂ ಮತ್ಸ್ಯಾವತಾರಕ್ಕಿನಂ ।
ತುಹಿನಾದ್ರೀಂದ್ರಮನೊತ್ತುಗೊಂಡು ನಡೆವಂ ದೇವರ್ಕಳಾಗ್ನೇಯಮೆಂ ॥
ದು ಹವಿರ್ಭಾಗಮನೊಲ್ಲದಿಂದುಕಲೆಯಂ ಕೊಳ್ವರ್ ಮೃಡಂ ಪಾರ್ವತೀ ।
ಸ್ಪೃಹೆಯಂ ಬಿಟ್ಟು ಮರುತ್ತರಂಗಿಣಿಯ[2]ನಂದಾಲಿಂಗನಂ ಮಾಡುವಂ ॥ ೯೮ ॥

ಅಂತತಿಪ್ರಬಲಮಾದ ನಿದಾಘ ಸಮಯದೊಳ್—

ಕಂ ॥ ದಿನಮುಂ ಕೆಲವಂ ದಶರಥ
ತನುಜರ್ ದಶಪುರದೊಳಿರ್ದು ಪೋಗಲೊಡಂ ನೊಂ ॥
ದನದರ್ಕೆ ವಜ್ರಕರ್ಣಂ
ವಿನೀತರುತ್ತಮರಗಲ್ಕೆಯಂ ಸೈರಿಪರೇ ॥ ೯೯ ॥

---

1. ಕ್ಷಪಣತೆಯೊಳ. ಚ.
2. ನೊಲ್ವಾ. ಕ. ಖ. ಘ.

ಅಂತು ಸೀತಾಸಮೇತಂ ರಾಮಲಕ್ಷ್ಮಣರ್ ದಕ್ಷಿಣಾಭಿಮುಖರಾಗಿ ಬಲ್ಲಡವಿಯ ಬಟ್ಟೆವಿಡಿದು ನಡೆವೆಡೆಯೊಳ್—

ಕಂ ॥ ರಾಘವನೆನ್ನಂ ತೃಣದಿಂ
ಲಾಘವಮೆನೆ ಬಗೆದನೆಂಬ ಮನದುಮ್ಮಳದಿಂ ॥
ದಾಘಮನೊಳಕೊಂಡಂತೆ ನಿ
ದಾಘದ ಮುಂಬಗಲೆ ತಳೆದುದಿಳೆ ಕಡುಗಾಯ್ಪಂ ॥ ೧೦೦ ॥

ಇನಕುಲ ಸಾಮ್ರಾಜ್ಯ ಶ್ರೀ
ತನಗಲ್ಲದೆ ತಾಳ್ದಲರಿದದಂ ರಾಮುಂ ತ ॥
ನ್ನನುಜಂಗೊಪ್ಪಿಸಿ ಬಂದೊಡೆ
ಕನಲ್ದವೋಲ್ ಚಂಡಭಾನು ಬಿಸುಪಂ ತಳೆದಂ ॥ ೧೦೧ ॥

ಮ ॥ ಇಳೆಯಂ ತಾಳ್ದಿದ ಸತ್ವದಿಂದಮೆನಗಂ ಬಿಲ್ಲಾಳ್ಗಳೆಂಬೇವದಿಂ ।
ಬಳ ನಾರಾಯಣರಂ ನಿಸರ್ಗ ಚಪಲಂ ದಾವಾಗ್ನಿ ಧೂಮ ಧ್ವಜಂ ॥
ಝಳಮಂ ಮೇಲೆ ಕಡಂಗಿ ಪೊಯ್ದುಮಿಟಿಕೆಯ್ದೇನಾನುಮಂ ಕೇಱು[1] ಚಾ ।
ವಳಿಪಂತಾದುದು ಜೀರ್ಣ ಪರ್ಣ ಪರುಷ ಪ್ರಧ್ವಾನದಿಂ ಮಾರುತಂ ॥ ೧೦೨॥

ಚ ॥ ಕಡುವಿಸಿಲುರ್ಚಿ ಕೋಮಲ ಲತಾ ತನು ಬಂಬಲಬಾಡೆ ನಾಡೆ ನೀ ।
ರಡಸಿ ಬಟಿಲ್ದು ಬರ್ಪ ಪದದೊಳ್ ಜನಕಾತ್ಮಜೆ ಮುನ್ನೆ ಬಿಟ್ಟು ಬಂ ॥
ದೊಡೆ ಬಿಡದುರ್ವರಾ ರಮಣಿ ಬೆನ್ನನೆ ಬಂದಪಳೆಂಬ ಶಂಕೆಯಂ ।
ಪಡೆದು ರಘೂದ್ವಹಂಗೆ ಪಡೆದಳ್ ಗಮನಶ್ರಮ ಖಿನ್ನೆ ಖೇದಮಂ ॥ ೧೦೩ ॥

ಅಂತೆಂತಾನುಮೆಯ್ದೆವಂದುಜ್ಜಯಿನಿಯ ಪಡುವಣ ಪೆರ್ವಟಿಯಂ ಕಟ್ಟಿದು ಕುರವಕಮೆಂಬ ಪೊಟಿಲ ನಿಕಟ ವಟ ವಿಟಪಿಚ್ಛಾಯೆಯೊಳ್ ಸೀತೆ ಸೇದೆವಟ್ಟೆರ್ವುದುಂ, ಜಲಾನ್ವೇಷಣ ನಿಮಿತ್ತಂ ಲಕ್ಷ್ಮಣಂ ಬರುತ್ತುಮಿರೆ—

ಮ ॥ ಬನಮೊಂದಿರ್ದುದು ಮುಂದೆ ಕಂತು ವನ ದುರ್ಗಾಕಾರದಿಂದಲ್ಲಿ ತ ।
ದ್ವನಲಕ್ಷ್ಮೀ ಮುಖದಂತೆ ನೀರಜ ವನಂ ಚೆಲ್ವಾಯ್ತುದಂ ಕಾದು ಯೌ ॥
ವನದೈಪ್ತರ್ ಕೆಲರಿರ್ದರಲ್ಲಿಗೆ ದಳನ್ನೀಲಾತಸೀ ಚಂಕನ ।
ತ್ತನು ತೋಯಾಹರಣಾರ್ಥಿ ಬಂದನಭಯಂ ಸೌಮಿತ್ರಿ ಶತ್ರುಂಜಯಂ ॥೧೦೪॥

ಆಗಳಲ್ಲಿ—

---

1. ಜಾವಳಿ. ಗ.

ಕಂ ॥ ಪರಪುಷ್ಟದಂತೆ ಪುಗಲೆಂ
ಬರ ಮಾತಂ ಮಿಱಿ ಲಕ್ಷ್ಮಣಂ ಪೊಕ್ಕು ಸರೋ ॥
ವರಮಂ ಮೊಗೆದಂ ಜಲಮಂ
ಸರೋಜ ವಿಸ್ತೀರ್ಣಪರ್ಣ ಪುಟಿಕಾ ಹಸ್ತಂ ॥ ೧೦೫ ॥

ಅಂತು ನೀರಂ ಮೊಗೆದು ಪೂಗೊಳನಂ ಪೊಱಮಡುವುದುಮಾಸ್ಥಮಯದೊಳ್ ಪಿಡಿಯನೇಱಿ ಕಾಮನ ಕೈಪಿಡಿಯಂತೆ ಬರುತುಂ ಕಣ್ಮೊಲದೊಳ್ ತನ್ನಂ ಕಂಡು ಕಣ್ಪೇಟಂಗೊಂಡು ಕೂರಂಕುಸದ ಪೊಳಿಪಿನೊಡನೆ ಪಾಲೊಳ್ ತೊಳೆದ ಕುಡು ಮಿಂಚಿನ ಗೊಂಚಲಂತೆ ಪೊಳೆದು ಸೋಲದಿಂದೆಳಸಿ ಸುಱಿಯಿಸುವ ಕಡೆಗಣ್ಣ ನೋಟದಿಂ ಮಾಟದ ಗಂಡವರಿಜೆಂದಱಿದೀ ವೇಷಮನಿವಳಿದೇಕೆ ತಾಳ್ದಿದಳೆಂದಱಿಯಲವ ಸರಂ ಗೊಟ್ಟರೆ ಮುಟ್ಟಿ ವಂದು—

ಚ ॥ ಮನದೊಡನೆಕ್ಕೆಯಿಂ ಪರಿಯೆ ಕಣ್ಣಡೆ ನೋಡಿ ಮೃಗಾಕ್ಷಿ ವಾರಿಜಾ।
ಕ್ಷನಕಡುಗಾಡಿಯಂ ಪುರುಷ ವೇಷದ ರಾಜ ತನೂಜೆ ಕಂತು ಮೋ ॥
ಹನ ಶರಮುರ್ಚಿ ಘರ್ಮಜಲ ಕುಟ್ಮಲಮುಂ ಪುಳಕೋದ್ಗಮಂಗಳುಂ।
ತನುಲತೆಯೊಳ್ ಪೊದಱ್ಪೊದವೆ ತಾಳ್ದಿದಳುತ್ಕಳಿಕಾ ವಿಳಾಸಮಂ ॥ ೧೦೬ ॥

ಅಂತು ಕಂತುಶರಮುರ್ಚೆ ಬೆರ್ಚಿ ಶರಣ್ಗೆ ಬರ್ಪಂತೆ ವಾಹನದಿಂದಿಱಿದು ಬಂದೀತನಾದೇಶಪುರುಷನೆಂದಱಿದು ನಿಶ್ಚೈಸಿ ಬೀಡಿಂಗೆ ಬಿಜಯಂಗೆಯ್ಯಮೆಂದು ಕೈಯಂ ಪಿಡಿದೊಡಗೊಂಡು ಪೋಗಿ ಹಂಸತೂಲತಲ್ಪದೊಳ್ ಕುಳ್ಳಿರಿಸಿ ತಾನುಮೊಡನೆಯೆ ಕುಳ್ಳಿರ್ದು ನೀಮಾರ್ಗೇನಿಮಿತ್ತಮಿಲ್ಲಿಗೆ ಬಿಜಯಂಗೆಯ್ದಿರೆಂಬುದುಂ, ಲಕ್ಷ್ಮಣ ದೇವನೆಂದನೆಮ್ಮ ವೃತ್ತಾಂತಮಂ ಬಱಿಕ್ಕೆ ತಿಳಿಯವೇೞ್ಪೆನೀಗಳೆಮ್ಮತ್ತಿಗೆ ನೀರಡಿಸಿ ಬಟಲ್ದಿರ್ದೊಡೆಮ್ಮಣ್ಣನ ಬೆಸದಿಂ ಜಳಾಶಯಮನಱಿಸಿ ಬಂದೆನದಱಿನಿದವಸರ ಮಲ್ಲೆಂಬುದುಮಾಬೆಸಕ್ಕಾನೆ ಸಾಲ್ವೆನೆಂದು ಕಣ್ಗರಗದ ನೀರ್ವೆರಸು ಕೆಲದೊಳಿರ್ದ ಕೆಳದಿಯರನಟ್ಟುವುದುಮಾಕೆಗಳವರಿರ್ದಲ್ಲಿಗೆ ಪೋಗಿ, ಹಿಮ ಸಲಿಲದಿಂ ಗಮನಶ್ರಮ ಮನಾಱಿಸಿ ಮುಂದಿಟ್ಟೊಡಗೊಂಡು ಬಂದು ಮಜ್ಜನ ಭೋಜನಾದಿ ಸತ್ಕಾರಮುಂ ಮೆಱೆವುದುಮಾಕನ್ನೆಯ ಜನನಿಯಪ್ಪ ಪೃಥ್ವೀಮತಿ ಮಹಾದೇವಿ ನಿಜ ಪರಿಜನಮುಂ ಪೋಗಲ್ವೇೞ್ದು ಕಟ್ಟೀಕಾಂತಮಂ ಮಾಟ್ಟುದುಂ, ಜನನಿಯ ಕಣ್ಣಿರಿದು ಕನ್ನೆ ತನ್ನ ಮುನ್ನೆ ತೊಟ್ಟ ಗಂಡವಚ್ಚಮಂ ಕಳೆದು ಕಟಕ ಕಟಿಸೂತ್ರ ವಿಚಿತ್ರಾಭರಣಾದಿ ದಿವ್ಯ ವಸ್ತುಗಳಿಂದಳಂಕರಿಸಿ—

ಕಂ ॥ ರೂಪ ಪರಾವರ್ತನ ವಿ
ದ್ಯಾ ಪರಿಣತಿಯಿಂದಮತನು ರತಿಯಾದವೊಲಾ ॥

ರೂಪವತಿ ಪುರುಷವೇಷಂ।
ಪೋಪುದುಮರ್ಚಿಸಿದ ಕೈದುವಿರ್ಪಂತಿರ್ದಳ್ ॥ ೧೦೬ ॥

ಕಂ॥ ಕ್ರಮ ವಿಕ್ಷೇಪದಿನಂಚೆಗೆ
ಸಮನಿಸೆ ದೈನ್ಯಂ ಲತಾಂಗಿ ಸೀತೆಗೆ ಚೆಲ್ವಿಂ॥
ಸಮನಧಿಕವೆಂಬ ಕೌತುಕ
ಮಮರ್ದಿರೆ ನಡೆತಂದು ಪಾರ್ಶ್ವದೊಳ್ ಕುಳ್ಳಿರ್ದಳ್ ॥ ೧೦೪ ॥

ಅಂತು ಸೀತೆಯ ಸಮೀಪದೊಳ್ ಕುಳ್ಳಿರ್ಪುದುಮಾಸಮಯದೊಳ್—

ಉ॥ ಆ ನಗೆಗಣ್ಗಳಾ ನಿಮಿರ್ದ ಪುರ್ವುಗಳಾ ನಳಿತೋಳ್ಗಳಾ ಸರೋ।
ಜಾನನವಾ ಮದಾಳಿ ಕುಳ ಕುಂತಳವಾ ಕಳಹಂಸ ಯಾನವಾ ॥
ಪೀನ ಕುಚಂಗಳಾ ಕ್ಷಣದೊಳೀಕ್ಷಣಮುಂ ಸೆಜೆಗೆಯ್ಯೆ ಕೃಷ್ಣನಾ।
ಮಾನಿನಿಗಿತ್ತು ತನ್ನಮನಮುಂ ಮರವಾನಸನಂತೆ ತೋಜಿದಂ ॥ ೧೦೯ ॥

ಆ ಸಮಯದೊಳ್ ದಾಶರಥಿ ಪುರುಷ ವೇಷಮಿಾ ಕನ್ನೆಗೇಕಾರಣವಾದುದೆನೆ ಜಗಜ್ಜನಕಂಗೆ ತಜ್ಜನನಿ ಕೈಗಳಂ ಮುಗಿದೀ ಕುರವಕಪುರಮನಾಳ್ವಂ ವಾಲಖಿಲ್ಯ ನೆಂಬನೆಮ್ಮರಸನಾತನ ಮೇಲೆ ವಿಂಧ್ಯಾಟವಿಯೊಳಿರ್ದನವಂಧ್ಯಕೋಪಂ ರೌದ್ರಭೂತಿ ಯೆಂಬಂ ಮ್ಲೇಚ್ಛರಾಜನಸಂಖ್ಯಾತ ಕಿರಾತ ಬಲಂಬೆರಸೆತ್ತಿ ಬಂದು ನಾಡುಂಬೀಡು ಮನಿಜಿುದು ಸೂಜಿಗೊಂಡೆಮ್ಮರಸನಂ ಸೆಜೆವಿಡಿದುಯ್ದನದನವಂತೀ ವಲ್ಲಭಂ ಸಿಂಹೋದರಂ ಕೇಳ್ದೆಮ್ಮರಸನ=ಪುತ್ರಕನೆಂದು ತಾನೀದೇಶಮಂ ಸ್ವೀಕರಿಸಲ್ಬಗೆದೊ ಡೆಮ್ಮಮಂತ್ರಿಮುಖ್ಯಂ ವಾಲಖಿಲ್ಯನರಸಿ ಗರ್ಭಿಣಿಯೆಂದು ಬಿನ್ನವಿಸುವುದುಮದನಾತ ನವಧಾರಿಸಿ ಸಂತೋಷಂಬಟ್ಟು ಗರ್ಭದ ಕೂಸು ಗಂಡುಗೂಸಾದೊಡಾತನೆ ನೆಲ ಕ್ಕೊಡೆಯನೆಂದೊಡಂಬಡುವುದುಮಾತನುಂ ಕೆಲವಾನುಂದಿವಸದಿಂದೀಕನ್ನಿಕೆಯಂ ಪಡೆಯೆ ಮಂತ್ರಿಮುಖ್ಯಂ ಅರಸಿ ಮಗಂಬಡೆದಳೆಂದೊಸಗೆಯಂ ಮಾಡಿ ಕಲ್ಯಾಣ ಮಾಲನೆಂದು ಪೆಸರನಿಟ್ಟು ನಡಪುತ್ತಿರ್ಪಿನಮೊಂದುದಿವಸಂ [1]ದಿವ್ಯಜ್ಞಾನಿಗಳಂ ಕಂಡು ವಾಲಖಿಲ್ಯಂಗೆ ಬಂಧನಮೋಕ್ಷಮಾರಿಂದಕ್ಕುಮೆಂದು ಬೆಸಗೊಳ್ವುದುಮವ ರಿಂತೆಂದರ್—

ಚ॥ ಅಳವಡೆ ಕೊಂಡ ಗಂಡವರಿಜಂ ಬಗೆಗೊಂಡಿರೆ ನೋಡಿ ನೋಡಿದಾ।
ಗಳೆ ವಧುವೆಂದು ನಿಶ್ಚಯಿಸಿ ಕೈವಿಡಿದಾತನೆ ನಿಮ್ಮ ಖೇದಮಂ ॥

---

1. ಅವಧಿಜ್ಞಾನಿಗಳಪ್ಪವರಂ. ಚ.

ಕಳೆದು ನಿರಾಕುಲಂ ಬಿಡಿಸುಗುಂ ಸೆಱೆಯಂ ಪೆಱತೇನೊ ಕಾಣ್ಬೆರಾ ।
ಬಳಯುತನಂ ಪುರೋಪವನ ಷಂಡ ಸಮೀಪ ಸರೋಜ ಷಂಡದೊಳ್ ॥೧೧೦॥

ಎಂದಱಿಪುವುದುಮಂದಿಂದಿತ್ತಲೀ ಸರೋವರಕ್ಕೆ ಕಾಪಂ ಪೇಟ್ದಿಲ್ಲಿಯೆ ಬೀಡಾಗಿರ್ದೆವೆಮ್ಮ, ಪುಣ್ಯೋದಯದಿಂ ನೀವು ಮಿಲ್ಲಿಗೆ ಬಿಜಯಂಗೆಯ್ದಿರೆಂದು ಶೋಕಗದ್ಗದ ಕಂಠೆ ಕಣ್ಣ ನೀರಂ ಸುರಿಯೆ, ಸೀತೆ ಸಂತೈಸೆ ಲಕ್ಷ್ಮಣಂ ಜಾನಕಿಗೆ ಕೈಗಳಂ ಮುಗಿದು—

ಕಂ ॥ ಈಕೆಯ ತಾಯ್ಗುಪಶಮಿಸುಗೆ
ಶೋಕಂ ರಾಘವನ ಕಣೆಗೆ ಮಣಿಗುಂ ರಣದೊಳ್ ॥
ಲೋಕತ್ರಯಮೆನೆ ಶಬರ
ಪತಾಕಿನಿ ಪೆಱತೆಗೆಯದೆಡಱಿ ಬಿಲ್ದೆಗದಪುದೇ ॥ ೧೧೧ ॥

ಅನ್ನೆವರಿವಿಂ ತನೂದರಿ
ಮುನ್ನಿನ ತೆಱದಿಂದಮಿರ್ಕೆ ಬೇಡರ ಪಡೆಯಂ ॥
ಬೆನ್ನಟ್ಟಿ ಬಿಡಿಸಿ ಸೆಱೆಯಂ
ಕನ್ನೆಯನಾಂ ಮದುವೆನಿಲ್ವೆನೆಂದನುಪೇಂದ್ರಂ ॥ ೧೧೨ ॥

ಎಂದು ನುಡಿದವರನೊಡಂಬಡಿಸಿ ಬಲಂಬೆರಸು ನಟ್ಟಿರುಳಿಟ್ಟುಪೋಗಿ ಮೇಖುಲಾತರಂಗಿಣಿಯನುತ್ತರಿಸಿ ತರದಿನೆಡೆಯೆಡೆಯ ನಾಡುಗಳಂ ಕಳೆದು ಪೋಗೆಪೋಗೆ–

ಕಂ ॥ ಸರಳ ಲತಾ ಲಾಸ್ಯ ನಟಂ
ಹರಿಣೀ ರೋಮಂಥ ಬಂಧುರಂ ಲವಲೀ ಮ ॥
ರ್ಮರ ಮುಖರಂ ಕರಿ ಕರ ಶೀ
ಕರ ಶೀತಳಮೆಸಗಿದತ್ತರಣ್ಯ ಸಮೀರಂ ॥ ೧೧೩ ॥

ತಾಂಗಿದುದು ಗಾಳಿಯಂ ದೆಸೆ
ಯಂ ಗವಸಣಿಸಿದುದು ಮೇಗೆ [1]ಮೊಗೆದಾಗಸಮಂ ॥
ನುಂಗಿದುದೆನೆ ಕಲ್ತಲಿಸಿ ಕ
ಱಿಂಗಿದ ಬಲ್ಲಡವಿ ಕಣ್ಗೆ ಪಡೆದುದಗುರ್ವಂ ॥ ೧೧೪ ॥

ಅಂತಗುರ್ವುವೆತ್ತ ವಿಪಿನಮಂ ಪುಗುವಸಮಯದೊಳ್—

---

1. ನೆಗೆದ. ಕ. ಖ. ಗ. ಘ.

ಉ ॥ ತೊಂಡಿನೊಳೆಮ್ಮ ಪೇರಡವಿಯಂ ಪುಗುತಂದಪರೆಂದು ಲುಬ್ಧಕರ್ ।
ತಂಡದೆ ಸುತ್ತಿ ಮುತ್ತಿ ಗೊಲೆಗೊತ್ತಿದನೇ ಧನುವಂ ಸರಲ್ಗಳಂ ॥
ಕೊಂಡನೆ ದಿವ್ಯಬಾಣಧಿಯಿನಪ್ಪಲಿತಂ ನಸುನಕ್ಕು ತನ್ನ ಕೋ ।
ದಂಡ ಕೃತಾಂತ ದಂಡದೊಳೆ ವೋದಿದನೋಡಿಸಿದಂ ಜನಾರ್ದನಂ ॥೧೧೫॥

ಅಂತು ತಮ್ಮ ಕೈಯ ಬಿಲ್ಗಳಿಂ ಬೀಟಿಪೊಯ್ಯೆ ಬೇಡವಡೆ ಬೆಗಡುಗೊಂಡೋಡಿ ಪೋಗಿ ತಮ್ಮಾಳ್ದಂಗವರಳವಿಗಟಿದಳವನಜಿಯೆ ಪೇಟ್ಪುದುಮಾತನತಿಪ್ರಬಲ ಕಿರಾತ ಬಲ ಸಮೇತಂ ಮೇಲೆತ್ತಿಬರ್ಪುದುಮದಂ ಕಂಡು ಕಡುಮುಳಿದು ಸೌಮಿತ್ರಿ ಲಯ ಸಮಯದ ಕಾಳರಾತ್ರಿಯಂತೆ ಸಾಗರಾವರ್ತಮಂ ಜೇವೊಡೆಯೆ ಸಂವರ್ತ ಸಾಗರಾವರ್ತ ಗಂಭೀರ ಘೋಷದಂತೆ ಚಾಪ ಟಂಕಾರ ಘೋಷವೊದವೆ ಕೇಳ್ದು ರೌದ್ರಭೂತಿ ಸಾಮಾನ್ಯಭೂತರಲ್ಲಿವರ್ ಕಾರಣಪುರುಷರೆಂದು ಭಯ ಚಕಿತ ಚಿತ್ತ ನಾಗಿ—

ಕಂ ॥ ಆಗ್ರಹವೊಪ್ಪದಿದೆನಗೆ ಸ
ಮಗ್ರರೊಳನಿವಾರ್ಯ ವೀರ್ಯರಚಲಿತ ಧೈರ್ಯರ್ ॥
ವಿಗ್ರಹಮನುಟಿವೆನಿವರೊಳ
ನುಗ್ರಹಮಂ ಪಡೆವೆನೆಂದು ರಥದಿಂದಿಟಿದಂ ॥ ೧೧೬ ॥

ಅಂತಳವಟಿದು ರಥದಿಂದಿಟಿದುಬಂದು ಬಲಾಚ್ಯುತರ ಮುಂದೆ ನಿಂದು ಕೈಗಳಂ ಮುಗಿದು ಮುನ್ನಮೆನ್ನಜಿಯಮೆಯಿಂದಿನ್ನೆವರಮನ್ನೆಯಮನಾಚರಿಸಿದೆನಿನ್ನಿಮ್ಮ ಬೆಸಸಿದಂದದೊಳೆ ನೆಗಟ್ಪಿನೆಂದು ಸರ್ವಾಂಗ ಪ್ರಣತನಾಗಿರ್ಪುದುಂ, ಲಕ್ಷ್ಮಣ ಕುಮಾರನಂಜದಿರೆಂದಭಯ ವಚನದಿಂದವನ ಮನದ ಭಯಮುಂ ಕಳೆದು ಬಟಿಯಂ ನೀಂ ಸೆಜಿವಿಡಿದಿರ್ದ ವಾಲಖಿಲ್ಯನಂ ತಡೆಯದೊಡಗೊಂಡು ಬಾಯೆಂಬುದುಂ, ಮಹಾ ಪ್ರಸಾದವೆಂದಾಕ್ಷಣದೊಳೆ ಪೋಗಿ ತರ್ಪುದುಮಾತನತಿತ್ವರಿತಗತಿಯಿಂ ಬಂದು—

ಮ ॥ ಬಲನಾರಾಯಣ ದೇಹದೀಪ್ತಿ ತನುವಂ ತಟ್ಟೈಸೆ ಪಾದಾನತಂ ।
ಪಲಕಾಲಂ ಸೆಜಿವೋಗಿ ಬೇಡರೊಡನೊಂದಾಗಿರ್ದ ತದ್ದೋಷ ಪಂ ॥
ಕಿಲತಾ ಕ್ಷಾಲನ ತತ್ಪರಂ ಸುರಸರಿತ್ಕಲ್ಲೋಲಮಂ ಯಾಮುನಾ ।
ಜಲಮಂ ಪೊಕ್ಕಘಮರ್ಷಣಂ ಮುಳಿಗಿದಂತಿರ್ದಂ ಪುರೋಭಾಗದೊಳ್ ॥

ಅಂತು ವಿನತನಾಗಿ ರಾಮ ಪ್ರೇಮ ವಚನಾಮೃತ ವರ್ಷದಿಂ ಹರ್ಷಮಂ ತಾಳ್ದಿ ಮುಕುಲಿತಾಂಜಲಿಪುಟಂ ಮುಂದೆ ನಿಂದಿಂತೆಂದಂ—

ಕಂ ॥ ಅಪರಿಮಿತ ಸೈನಿಕಂ ಸಿಂ
ಹಪರಾಕ್ರಮನೆತ್ತಿಬಂದು ಸಿಂಹೋದರನೆ ॥

ನ್ನ ಪರಾಭವಮಂ ಪಿಂಗಿಸ
ದೆ ಪಿಂಗಿದಂ ರೌದ್ರಭೂತಿಗಿದಿರಾಂಪವರಾರ್ ॥ ೧೧೮ ॥

ಕಂ ॥ ದ್ಯುಮಣಿಗೆ ಕಟ್ಟಿಲೆ ಶರಭ
ಕ್ಕೆ ಮೃಗೇಂದ್ರಂ ಸೆಡೆವ ಮಾಟಕ್ಕೆಯಿಂ ಸೆಡೆದನಿವಂ ॥
ನಿಮಗೆ ಸಮರಕ್ಕೆ ಮಿಕ್ಕರ
ಸುಮಕ್ಕಳಂ ರೌದ್ರಭೂತಿ ಲೆಕ್ಕಂಗೊಳ್ಳಂ ॥ ೧೧೯ ॥

ಜ್ಯಾ ತಾಡನ ಟಂಕಾರದೆ
ಭೀತಿಯನೀತಂಗೆ ಪಡೆದು ಪುರ್ವಿನ ಜರ್ವಿಂ ॥
ಪೋ ತೆಗೆವರೆ ನೀವಲ್ಲದ
ರೀತನಕೈಯೆಂಬ ಜವನ ಬಾಯಿಂದೆನ್ನಂ ॥ ೧೨೦ ॥

ಶಾ ॥ ನಿಮ್ಮಿಂದಾದುದು ಬಂಧಪೋಕ್ಷವೆನಗೀಗಳ್ ವೃತ್ತಿಯೊಳ್ ಜಾತಿಯೊಳ್।
ನಿಮ್ಮಿಂ ನಿಂದೆನಪಾರ ದುಃಖ ಭರಮಂ ನಿಮ್ಮಿಂದಮಾಂ ನೀಗಿದೆಂ ॥
ನಿಮ್ಮಂ ಕಂಡು ಕೃತಾರ್ಥನಾದೆನಿಳೆಯೊಳ್ ಮುನ್ನಾದರಿನ್ನಪ್ಪವರ್ ।
ನಿಮ್ಮನ್ನರ್ ಪೆಜರಾರುದಾತ್ತಚರಿತರ್ ದುರ್ವಾರ ಬಾಹಾಬಲರ್ ॥ ೧೨೧ ॥

ಎಂದು ಬಿನ್ನವಿಸಿ ನೀವೆನ್ನ ಪುರಾಕೃತ ಪುಣ್ಯಮೆ ರೂಪುಗೊಂಡು ಬರ್ಪಂತೆ ಬಂದಿರೇನಿಮಿತ್ತಮೆನಗಿನಿವಿರಿದುಪಕಾರಮನೊಡರ್ಚಿದಿರೆಂಬುದುಂ, ಲಕ್ಷ್ಮಣನದೆಲ್ಲ ಮಂ ನಿನ್ನ ಪೊಟಲ್ಗೆ ಪೋಗಲೊಡಂ ನೀನೆತಿಳಿದಪ್ಪೆಯೆಂದು ರೌದ್ರಭೂತಿಯಂ ನೋಡಿ ವಾಲಖಿಲ್ಯನಂ ಮುಂದಿಟ್ಟುಯ್ದು ಪೊಟಲಂ ಪುಗಿಸಿ ನೀನೀತನ ಪೇಟ್ದುದಂ ಗೆಯ್ದು ಸುಖದಿನಿರಲ್ಲದೊಡೆ ಕಡುಮುಳಿವೆನೆಂದು ನಿಯಮಿಸಿ ಕಟ್ಟಿಪುವುದುಂ, ರೌದ್ರಭೂತಿ ಮಹಾವಿಭೂತಿಯಿಂ ಪೊಟಲಂ ಪುಗಿಸೆ ವಾಲಖಿಲ್ಯಂ ರಾಮಲಕ್ಷ್ಮಣರ ಸಾಹಸಮಂ ಸನಾಭಿಜನ ಪರಿಜನ ಪುರಜನಕ್ಕೆ ಸಹಸ್ರಮುಖದಿಂ ಸ್ತುತಿಯಿಸುತ್ತುಂ ಶುಭಮುಹೂರ್ತದೊಳ್ ಲಕ್ಷ್ಮಣಕುಮಾರಂಗೆ ನಿಜಕನ್ನೆಯೊಳ್ ಮಹೋತ್ಸಾಹದಿಂ ವಿವಾಹಮನೊಡರ್ಚಿ ಸುಖದಿನರಸುಗೆಯ್ಯುತ್ತಿರ್ದನನ್ನೆಗಮಿತ್ತ ರಾಮಲಕ್ಷ್ಮಣರ್ ದಕ್ಷಿಣಾಭಿಮುಖರಾಗಿ ವಿಪಿನದೊಳಗನೆ ನಡೆಯೆ ನಡೆಯೆ—

ಮ ॥ ಭ್ರಮಿತಾಷ್ಟಾಪದಮುಗ್ರ ಖಡ್ಗಮೃಗ ಸಂಘನ್ನಂ ಜರದ್ದಂದಶೂ ।
ಕ ಮುಖ ಶ್ವಾಸ ವಿಷಾಗ್ನಿ ದಗ್ಧ ವಿಪಿನಂ ಮತ್ತೇಭ ವಿಕ್ರೀಡಿತಂ ॥
ತಮದೊಡ್ಡಿಂಬಿನೆಗಂ ಕಱಿಂಗಿ ನಭಮಂ ನುಂಗಿತ್ತು ಪಾಪದ್ಧಿ ಸಂ ।
ಭ್ರಮ ಕೋಲಾಹಲ ಲುಬ್ಧಕಂ ಕಲುಷಿತಾಂತಸ್ಸಿಂಧು ವಿಂಧ್ಯಾಚಲಂ ॥ ೧೨೨॥

ಮ॥ ಸ್ರ॥ನೆಲನಿಲ್ಲಿಂದಿತ್ತಲಿಲ್ಲೆಂಬಿನಮಿನಿತೆ ದಿಶಾಘಾಟಮೆಂಬನ್ನೆಗಂ ಕ।
ಟ್ಟಿಲೆ ಚಂದ್ರಾದಿತ್ಯ ತೇಜಕ್ಕದಿರದಿದಿರನೊಡ್ಡಿರ್ದುದೆಂಬನ್ನೆಗಂ ಕ॥
ಟ್ಟಿಲಿಸುತ್ತಿರ್ದತ್ತು ಕಾಡಾನೆಯ ಕಡುಪುಗಳಿಂ ಸಿಂಹ ಸಂಘಾತದಿಂ ಪೆ।
ರ್ಮುಲಿವಿಂಡಿಂ ಕಣ್ಗಗುರ್ವಂ ಪಡೆದು ಕುಲನಗಸ್ಪರ್ಧಿ ವಿಂಧ್ಯಾಚಲೇಂದ್ರಂ॥

ಆ ನಗೋಪತ್ಯಕದೊಳ್—

ಕಂ॥ ಮಲಯರುಹ ಗಂಧಿ ಮೃಗಮದ
ತಿಲಕೆ ತಮಾಲ ಪ್ರವಾಳ ಕುಂತಲೆ ಪುಳಿನ॥
ಸ್ಥಲ ವಿಪುಲ ಜಘನೆ ಮದಗಜ
ವಿಲಾಸವತಿ ವನಲತಾಂಗಿ ಕಣ್ಗೆಸೆದಿರ್ದಳ್ ॥ ೧೩೪ ॥

ಆ ವಿಂಧ್ಯನಗಮುಂ ದಾಂಟಿ ಪೋಗಿ [1]ತಾವಿಯೆಂಬ ತೊಜ್ಜೆಯಂ ಪಾಯ್ದರುಣೆಯೆಂಬಗ್ರಹಾರಮುಂ ಪೊಕ್ಕದೊಂದು ಗೃಹಮುಂ ಪುಗುವುದುಮಾಗಳಾಗೃಹದ ವಿಪ್ರವಧು—

ಕಂ॥ ಆದೇಯ ರೂಪರಂ ಕಂ
ಡಾದರಿಸಿದಳೇಱಲಿಕ್ಕಿದಳ್ ಸೀತೆಗೆ ಶೀ॥
ತೋದಕದಿಂ ಗಮನ ಶ್ರಮ
ಖೇದಮನಾಱಿಸಿದಳೀನವಳ್ ಶುಭಮತಿಯೋ ॥ ೧೩೫ ॥

ಅನ್ನೆಗಮಾಕೆಯ ಭರ್ತಾರಂ ನಿಜಮಂದಿರಕ್ಕೆ ಬಂದವರಂ ಕಂಡಿವರನೇಕಿಲ್ಲಿ ಪುಗಲಿತ್ತೆಯೆಂದರ್ಘ್ಯ ಪಾನೀಯ ಪಲಾಶ ಕಾಂಡ ಕುಶ ಕುಸುಮ ಹಸ್ತನಪ್ರಶಸ್ತಂ ಕೆಡೆನುಡಿಯೆ—

ಚ॥ ಕಪಿಲನ ಕೈಪೆವಾತು ಕಿವಿಗೆಯ್ತುರೆ ಜಾನಕಿ ಪೋಗಿ ಬಿಚ್ಚತಂ।
ವಿಪಿನದೊಳಿರ್ಪಮಿಾಗೃಹದೊಳಿರ್ದುದಱಿಂದೆನೆ ಕೇಳ್ದು ಲಕ್ಷ್ಮಣಂ॥
ಕುಪಿತಮನಂ ಕಟಾಕ್ಷಿಸುವುದುಂ ದ್ವಿಜನೀತನವಧ್ಯನಲ್ತೆ ಸೈ।
ರಿಪುದನುಜಾತ ನೀಂ ಮುಳಿಯಲಕ್ಕುಮೆ ದುರ್ಬಲರೇನನೆಂದೊಡಂ ॥ ೧೩೬ ॥

ಎಂದು ರಘುವೀರನಲ್ಲಿಂತಳರ್ದು ಪೊಱವೊಟಲಂ ಪೆಱಗಿಕ್ಕಿ ಪೆರ್ವಟ್ಟಿವಿಡಿದು ನಡೆಯುತ್ತುಂ—

---

1. ತಾರಿ. ಗ. ಘ.

ಉ ॥ ಮೂಲ ಸಟಾಳಿಯಿಂದಮುರಗಾಲಯಮಂ ಬಹುಶಾಖೆಯಿಂದಮಿಂ ।
ದ್ಯಾಲಯಮಂ ಪಳಂಚಿ ತಮಮಂ ಸೆಱಿಗೆಯ್ದು ಹಿಮಕ್ಕೆ ಕೊಂಬುಗೊ ॥
ಟ್ಟಾಲವನಗ್ರ ಪಲ್ಲವ ಕರಾಗ್ರ ನಿರುದ್ಧ ಮರುತ್ತರಂಗಿಣೀ ।
ಕೂಲಮನೆಯ್ದಿದರ್ ವಿಜಿತ ಚಂಡಮರೀಚಿ ಮರೀಚಿ ಜಾಲಮಂ ॥ ೧೨೭ ॥

ಅಂತೆಯ್ದಿವರ್ಪುದುಮಾ ವಟ ನಿವಾಸಿಯಪ್ಪಿಭಕರ್ಣದೇವನ ವರಪುಣ್ಯ ಪ್ರಭಾವಕ್ಕೆ ಬೆರ್ಚಿ ಬೆಗಡುಗೊಂಡೋಡಿಪೋಗಿ ವಿಂಧ್ಯಾಟವಿಯೊಳಿರ್ಪ ಯಕ್ಷರಾಜಂ ಕ್ರೀಡಾಪೂತನೆಂಬಂಗೆ ಚಂಡ ಕೋದಂಡ ಧರರಿರ್ವರೆನ್ನಾವಾಸಮಂ ಕೈಕೊಂಡೊಡಾನವರ ದೇಹ ದೀಪ್ತಿಗಲ್ಲಿ ನಿಲಲಳ್ಕಿ ಬಳ್ಕುತ್ತುಂ ನಿಮಗಱಿಪಲ್ ಬಂದೆನೆಂಬುದುಮವಧಿಯಿನವರೀಕಾಲದ ಬಲದೇವ ವಾಸುದೇವರೆಂಬುದುಮನವರ ಬಂದ ತೆಱನುಮನಱಿದವರ್ಗೆ ಸತ್ಕಾರಮನೊಡರ್ಚಲೆಂದು—

ಕಂ ॥ ಕ್ರೀಡಾಪೂತಂ ಪುರಮಂ
ಮಾಡಿದನಳಕಾಪುರಕ್ಕಮಮರಾವತಿಗಂ ॥
ನಾಡೆಯುಮಧಿಕಮೆನಲ್ ಮಣಿ
[1]ಮಾಡ ಪ್ರಾಕಾರ ಗೋಪುರಾಟ್ಟಾಳಕಮಂ ॥ ೧೨೮ ॥

ಪುರದ ಬಹಿಃಪುರದಂತಃ
ಪುರದರಮನೆಯವನಿಪತಿಯ ಮಾಡದ ಹಯಮಂ ॥
ದಿರದಾನೆಸಾಲೆಯಂದಂ
ಬರೆಯಲ್ ಕಂಡರಿಸಲರಿದು ಮಾಂಡವ್ಯಂಗಂ ॥ ೧೨೯ ॥

ಮಟ್ಟಿಗಾಲಂ ಬರೆಯುಂ ಪೆ
ರ್ವಟುವಿನೊಳಂ ಯಕ್ಷವಿಕ್ರಿಯಾ ಜನಿತಮದೇಂ ॥
ಪೊಟಿಲಾದುದೊ ರಘುರಾಮನ
ಪಟುಗಟ್ಟಿದ ಪೊಗಟ್ಟಿವೆತ್ತ ಪುಣ್ಯೋದಯದಿಂ ॥ ೧೩೦ ॥

ಅಂತಪೂರ್ವಮೆನೆ ಪುರಮಂ ವಿಗುರ್ವಿಸಿ—

ಮಂದಾಕ್ರಾಂತ॥ ಕಿಂಕುರ್ವಾಣ ಪ್ರವಣರರೆಬರ್ ಬರ್ಪಿನಂ ಕಾದು ತನ್ನಂ ।
ಬಿಂಕಂ ಪೊಂಕಂ ಗಿಡಿಸೆ ನನೆವಿಲ್ಲಾತನಂ ತೊಟ್ಟ ದಿವ್ಯಾ ॥
ಲಂಕಾರಂಗಳ್ ನಯನ ಸುಖಮುಂ ನೀಡೆ ಬಂದರ್ಘ್ಯಮಂ ಯ ।
ಕ್ಷಂ ಕೊಟ್ಟಂ ರಾಘವನ ಚರಣಕ್ಕಿನ್ನರಾರ್ ಧನ್ಯಜನ್ಮರ್ ॥೧೩೧॥

---

1. ನೀಡ. ಚ.

ಅಂತರ್ಘ್ಯಪಾದ್ಯಮಂ ಕೊಟ್ಟು ಕೈಗಳಂ ಮುಗಿದು—

೨೨ ॥ ಆಸನ್ನಂ ಮಟಿಗಾಲಮೆನ್ನ ಪುರದೊಳ್ ನೀಮನ್ನೆಗಂ ದಿಗ್ವಯ ।
ವ್ಯಾಸಂಗಾರ್ಥಿಗಳಾಗದಿರ್ದು ಚರಿತಾರ್ಥಂಮಾಟ್ಪುದೆನ್ನಂ ಪರಾ ॥
ರ್ಥಾಸೀನಂ ನಿಜವೃತ್ತಮೆಂದು ನುಡಿದೆಂತಾನುಂ ಪ್ರಿಯ ಪ್ರಾರ್ಥನಾ ।
ವ್ಯಾಸಂಗಾರ್ಥಿ ನರೇಂದ್ರನಂ ನಿಲಿಸಿದಂ ಯಕ್ಷಂ ಪರಾರ್ಥಪ್ರಿಯಂ ॥ ೧೩೨ ॥

ಅಂತೆಂತಾನುಂ ನಿಲಿಸಿ ತನ್ನ ವಿಗುರ್ವಿಸಿದ ಪುರಕ್ಕುಯ್ದು—

ಕಂ ॥ ಅರಮನೆಯೊಳ್ ಬಹುವಿಧ ಪರಿ
ಕರ ಪೂರ್ಣದೊಳಿರಿಸಿ ಮಾಡಿದಂ ಯಕ್ಷಂ ದಿ ॥
ಕ್ಕರಿ ಕರ್ಣ ಕುಹರವಂ ಪಟ
ಹರವಂ ತಳ್ಪಾಯ್ಯೆ ರಘುಸುತಂಗಭಿಷವಮಂ ॥ ೧೩೩ ॥

ಅಂತು ರಾಜ್ಯಾಭಿಷೇಕಂಗೆಯ್ದು—

ಕಂ ॥ ಬೇಡದೆ ಬೇಟ್ಪಿನಿತುಮನೆಡೆ
ಮಾಡದೆ ಪದನಱಿದು ತೀರ್ಚಿ ಪರ್ಯಷ್ಟಿಯಲಂ ॥
ಪೋಡದೆ ರಾಮಂಗೊಳ್ಪಂ
ಮಾಡಿದನುಚಿತೋಪಚಾರ ದಕ್ಷಂ ಯಕ್ಷಂ ॥ ೧೩೪ ॥

ಮತ್ತಿತ್ತಲಾ ಕಪಿಲನೆಂದಿನಂದಿನ್ನಾದ.ವಿಪಿನದೊಳ್ ತೊಟಲುತ್ತುಂ—

ಕಂ ॥ ಎನಗಾಡುಂಬೊಲನೀ ಕಾ
ನನವಿದಱೊಳಗಿನ್ನೆವರೆಗಮಾಂ ಕಾಣೆಂ ಲೋ ॥
ಚನ ಹೃದಯ ಹಾರಿ ಪುರಮೊಂ
ದನಿದಂ ಕಂಡೆಂ ದಲೆಂದು ವಿಸ್ಮಿತನಾದಂ ॥ ೧೩೫ ॥

ಆ ಸಮಯದೊಳ್ [1]ಸಮಯಾಭಿಧಾನ ಯಕ್ಷಿ ಪ್ರತ್ಯಕ್ಷಮಾಗೆ ಪುರೋಭಾಗಕ್ಕೆ ಬರೆ ಕಪಿಲಂ ಕಂಡಬ್ಬಾ! ಪೇಟೋಪುರಕ್ಕೆ ಪೆಸರಾವುದಿದರ್ಕಧಿಪತಿಯಾರೆಂಬುದುಂ—

ಕಂ ॥ ರಾಮಪುರಮೆಂಬುದಿದು ರಘು
ರಾಮಂ ಪುರದೊಡೆಯನಖಿಲ ವಸುಧೆಗೆ ಕಲ್ಪಾ ॥
ರಾಮನೆನೆ ಕೊಟ್ಟಪಂ ವಸು
ಧಾಮರ ನೀಂ ಪೋಗಿ ಬೇಡಿಕೊಳ್ ಕಸವರಮಂ ॥ ೧೩೬ ॥

---

1. ಸುಮನಸಾಭಿಧಾನೆ. ಚ.

ಎನೆ ಕಪಿಲಂ ವಿಷಣ್ಣನಪ್ಪುದಱಿಂ ದೇವತೆಗೆ ಕೈಗಳಂ ಮುಗಿದು—

ಚ ॥ ಎನಗವನೀಶ ದರ್ಶನದುಪಾಯಮನಂಬಿಕೆ ಪೇೞ್ವೆಮೆಂಬುದುಂ ।
ಜಿನಗೃಹಮಿರ್ದುದೀ ಪುರದ ಪೂರ್ವವಿಭಾಗದೊಳಿರ್ದರಲ್ಲಿ ಸ ॥
ನ್ಮುನಿಪರುಪಾಸಕ ಕ್ರಮದಿನಲ್ಲಿ ದೃಢವ್ರತನಾಗಿ ಪೋದೊಡಾ ।
ಮುನಿವರರಾಜ್ಞೆಗಡ್ಡವಿಸರಲ್ಲಿಯ ಕಾಪಿನ ಯಕ್ಷರಾಕ್ಷಸರ್ ॥ ೧೩೭ ॥

ಎಂಬುದುಮಾಯಕ್ಷಿ ಬೆಸಸಿದಂದದೊಳೆ ಬಸದಿಗೆ ಬಂದು ಜಿನಮುನಿಗಳಂ ಕಂಡು ಧರ್ಮಮುಂ ಬೆಸಗೊಂಡು ಲಘುಕರ್ಮಿಯಪ್ಪುದಱಿಂದೆ ದರ್ಶನ ಶುದ್ಧನು ಮಣುವ್ರತ ಧಾರಿಯುಮಾಗೆ ಋಷಿನಿವೇದಕನೊಡನೆ ಪೋಗಿ ಗಂಧೋದಕಮನುಯ್ದು ಕೊಟ್ಟು ರಘುವೀರಂಗಿಚ್ಛಾಕಾರಪೂರ್ವಕಂ ಸರ್ವಾಂಗಪ್ರಣತನಾಗಿ ಕಾಣ್ಬುದು ಮಾತಂ ವ್ರತಕ್ಕೆ ಬಂದುದರ್ಕೆ ಮೆಚ್ಚುಗೊಟ್ಟು ಕಟಿಪಿ—

ಚ ॥ ಎಱಗದೆ ಬಾೞ್ತೆಗೆಟ್ಟಿಡೆಗೆ ಪೊಮ್ಮಟಿಯಂ ಧರೆಗಾವ ಕಾಲಮುಂ ।
ಕಱಿದು ಪರಾರ್ಥವೃತ್ತಿಯೊಳೆ ಪಾವನಮಾಗಿರೆ ತನ್ನ ಜೀವನಂ ॥
ತೊಱಿದು ಕಳಂಕ ಪಂಕಿಲತೆಯಂ ಮಟಿಗಾಲದ ಸೊಂಪನೇಳಿಸಲ್ ।
ನೆಱಿದನುಬಂಧಮಂ ಮೆಱಿದನಚ್ಚರಿ ಲಾಂಗಲಪಾಣಿ ಸೀತೆಯೊಳ್ ॥೧೩೮॥

ಅಂತು ರಾಮಲಕ್ಷ್ಮಣರಾ ಯಕ್ಷನ ವಿನಯೋಪಚಾರದಿಂ ಸಮಾಹಿತ ಮನಸ್ಕರಲ್ಲಿರ್ಪುದುಂ—

ಚ ॥ ಮುಗುಳ ತೊಡಂಬೆ ಗಂಟೊಡೆಯೆ ಮಾಂ[illegible]ಿ ಬೆಳ್ಸಳಿ ಪುಟ್ಟಿ ಪುಟ್ಟಿ ಕೇ ।
ದಗೆಗಳ ಸೊರ್ಕು ಚೇತರಿಸೆ ಚಾದಗೆಗಂ=ಚಿರಮಾಗೆ ರಾಗಮಂ ॥
ಚಿಗೆ ಕಿಱುವೀಲಿ ಕಣ್ದೆಱೆಯೆ ಸೋಗೆಗೆ ತಣ್ಣಸುವುಟ್ಟಿ ಬೆಟ್ಟವೇ ।
ಸಗೆಯ ಬಿಸಿಲ್ಗೆ ತೀಡಿದುದು ತಣ್ಣನೆ [illegible]ಣ್ಣನೆ ಪಶ್ಚಿಮಾನಿಲಂ ॥ ೧೩೯ ॥

ಕಂ ॥ ಪರಿತಾಪಂ ಕಿಡೆ ಪುಳಕಾಂ
ಕುರಮೊದವೆ ಲತಾಂಗದೊಳ್ ನದೀ ಲೋಚನೆಗು ॥
ರ್ವರೆಗಾನಂದಾಶ್ರುಗಳು
ಬ್ಬರಮಾದುವು ಪಶ್ಚಿಮಾನಿಲಂ ಸೋಂಕಲೊಡಂ ॥ ೧೪೦ ॥

ಪಸುರ್ಗವಿಲನಾದ ನೀಪದ
ಕುಸುಮಮುಮಂ ದೆಸೆಗೆ ಕಂಪನೆತ್ತುವ ಲೋಧ್ರ ॥
ಪ್ರಸವಮುಮಂ ಸೂಟ್ಸೂಟಿಯೊಳ್
ಪಸವಟ್ಟಂದದೊಳೆ ಮುಸುಱಿ ಮುತ್ತಿದುವಳಿಗಳ್ ॥ ೧೪೧ ॥

ಅಂತು ಘನಸಮಯ ಪ್ರವೇಶಮಖಿಲ ಜನ ಮನೋವಿಕಾಸಕ್ಕವಕಾಶಮಾಗೆ—

ಮ॥ಸ್ರ॥ಅಪರಾಂಭೋರಾಶಿ ವೇಳಾ ವನಮುಮರ ಪುರೋದ್ಯಾನಮಂ ನೋಡಲೇಟ್ಟಂ।
ದಪುದೋ ನೀಲಾಚಲಂಗಳ್ ಕುಲ ಪರಿಭವಮಂ ಪಿಂಗಿಸಲ್ ನಾಕಲೋಕಾ॥
ಧಿಪನೊಳ್ ಮೇಲೆತ್ತಿಕಾದಲ್ ನೆರೆದುವೊ ಬಡಬಾಭೀತಿಯಿಂ ಮೇಣ್ ಶರಣ್ಪೊ।
ಕ್ಕಪುದೋ ನೀರಾಕರಂ ವ್ಯೋಮಮನೆನೆ ನೆಗೆದತ್ತಂದು ನೀಲಾಭ್ರಜಾಲಂ
॥ ೧೪೨ ॥

ಕಂ ॥ ಪಡುವಣ ಕಡಲಿಂದೊಗೆದುದು
ಬಡಬಾಗ್ನಿಯ ಪೊಗೆ ಪೊದಟ್ಟು ಕಿಡಿವೆರಸೆನಲೇಂ॥
ಕುಡಿಮಿಂಚುವೆರಸು ಗಗನಮ
ನಡರ್ದುದೊ ನೀರಂಧ್ರ ನೀಲ ನೀರದ ನಿವಹಂ ॥ ೧೪೩ ॥

ಪೊತ್ತುವ ಬಡಬಾಗ್ನಿಯ ಪೊಗೆ
ಸುತ್ತಿದೊಡುಮ್ಮಳಿಸಿ ಕಟ್ಟಿ ಪಡುವಣ ಕಡಲೊಳ್॥
ನಿತ್ತರಿಸದೆ ನಡೆದುವು ಜಲ
ಮತ್ತ ದ್ವಿಪ ಘಟೆಗಳಿನಿಸಿದುವು ಘನ ಘಟೆಗಳ್ ॥ ೧೪೪ ॥

ಮ॥ಸ್ರ॥ಇದಮೋಘಂ ಮೇಘಕಾಲಂ ಬರೆ ಗಗನ ಗೃಹ ದ್ವಾರದೊಳ್ ತೋರಣಂ ಕ।
ಟ್ಟಿದುದೋ ಮೇಣ್ ಪಂಚರತ್ನಾವಳಿ ವಿಲಸಿತಮಂ ಕಂಠಿಕಾಮಾಲೆಯಂ ತಾ॥
ಳ್ದಿದಳೋ ದಿಗ್ದೇವಿ ಮೇಣ್ ರನ್ನದ ಪೊರಜೆ ನವಾಂಭೋದ ಮಾದ್ಯದ್ಗಜಕ್ಕೆ।
ಕ್ಕಿದುದೋ ಪೇಟಿಂಬಿನಂ ಕಣ್ಗೆಸೆಯದು ಶಬಲಚ್ಛಾಯೆಯಿಂ ಶಕ್ರಚಾಪಂ॥

ಅನಂತರಂ—

ಮ ॥ ವಸುಧಾವಲ್ಲಭೆ ಮೇಘಕಾಲ ವಿಟನೊಳ್ ಸಂಭೋಗಮಂ ಮಾಡೆ ಬ।
ಣ್ಣಿಸರಂ ಪೋರ್ಕುಳಿಯಿಂದಲೇ ಪಱಿದು ಸೂಸಿತ್ತಲ್ಲದಂದೆತ್ತಣಿಂ॥
ಪೊಸಮುತ್ತುಂ ಕಿಸುಗಲ್ಲಳುಂ ಕೆದಱಿ ಕಣ್ಗಿಂಬಾದುವೆಂಬಂತದೇ।
ನೆಸೆದೊಪ್ಪಿರ್ದುವೊ ಸೂಸಿದಾಲಿವರಲುಂ ತಳ್ತಿಂದ್ರಗೋಪಂಗಳುಂ ॥ ೧೪೬ ॥

ಉ ॥ ತೀಡುವ ಪಶ್ಚಿಮಾನಿಲನ ತೀಟದೊಳುತ್ಕಟಮಾಗೆ ರಾಗಮಿ।
ರ್ದೋಡಿದ ಚಂಚುವಂ ತೆಱೆದೆಱಿಂಕೆ ನೆಱಲ್ದಿರೆ ಕಂಠನಾಳಮಂ॥
ನೀಡಿ ವಿಯತ್ತಲಕ್ಕೊಗೆದು ಕಾರ ಮುಗಿಲ್ವನಿಯಂ ಮನಂ ಕುಳಿ।
ರ್ಕೋಡುವಿನಂ ಕರ್ದುಂಕಿ ನಲಿವಾಱಿದುವಾಱಿದುವಂದು ಚಾತಕಂ।

೫ ॥ ರಾಗದ ಬಳ್ಳಿ ಚಾದಗೆಗೆ ಕಾಂಚನ ಚಂಚಲ ಲಾಸ್ಯ ತರ್ಜನಂ।
ಸೋಗೆನವಿಲ್ಗೆ ಮೇಖಲೆ ಘನಾಘನಲಕ್ಷ್ಮ್ಮಿಗೆ ದೀಪಮಾಲೆ ಜಾ ॥
ರಾಗಮನಕ್ಕೆ ಜಂತ್ರದುರಿಯೆಣ್ಣೆ ವಿಯೋಗಿಜನಕ್ಕೆನಲ್ ನಭೋ।
[1]ಭಾಗಮನೆಯ್ದಿ ಬಿತ್ತರಿಸಿದತ್ತು ತಟಿಲ್ಲತೆ ಲಾಸ್ಯಲೀಲೆಯಂ ॥ ೧೪೮ ॥

ಕಂ ॥ ಬಿಡೆ ಕೆಮ್ಮನೆ ಗರ್ಜಿಪ ತ
ಕ್ಕೆಡೆ ತಗದೆಡೆಯೆನ್ನದೆಱಗುವಸ್ಥಿರನಪ್ಪಾ ॥
ಜಡನಚಿರಪ್ರಭೆ ನಿಮಿಷದೊ
ಳಡಂಗುಗುಂ ಬೆಳಗದೆಂತುಮದು ಸತ್ಪಥಮಂ ॥ ೧೪೯ ॥

೬॥ಸ್ರ॥ ಘನಗರ್ಭಾಶಾ ವಧೂ ಪುಂಸವನದೆಸೆವ ತೂರ್ಯಸ್ವನಂ ಚೂಳಿಕಾ ವ।
ರ್ಧನ ಮಾಂಗಲ್ಯಂ ಬಳಾಕಕ್ಕೆಸೆಯೆ ಪಸರಿಪಾತೋದ್ಯ ಘೋಷಂ ವಿದೂರಾ॥
ವನಿಯೊಳ್ ವೈಡೂರ್ಯರತ್ನಂ ಜನಿಯಿಸೆ ನೆಗಟ್ಟಾನಂದಭೇರೀ ರವಂ ತಾನೆನೆ।
ರೋದೋಭಾಗದೊಳ್ ಘೂರ್ಣಿಸಿದುದಭಿನವಾಂಭೋದ ಗಂಭೀರ ನಾದಂ ॥

ಕಂ ॥ ಘನನಿನದಂ ಭಯರಸಮಂ
ಜನಿಯಿಸೆ ನೆನೆಯಿಸಿದರಂದು ಕಳಹಂಸ ಕುಟುಂ ॥
ಬನಿಯಂ ಪ್ರಿಯ ವಿರಹಾಲಂ
ಬನಿಯರ್ ಮೃದುವೆನಿಪ ಮನದೊಳಂ ಗಮನದೊಳಂ ॥ ೧೫೧ ॥

೫ ॥ ಉಗುಳುತ್ತುಂ ಸಿಡಿಲೆಂಬ ತೋರಕಿಡಿಯಂ ಕಾಲೂಱಿ ಭೂಭಾಗದೊಳ್ ।
ಗಗನಾಭೋಗಮನೆಯ್ದಿ ನೀಳ್ದ ಘನವೇಣೀ ಬಂಧಮಂ ಬಿರ್ಚಿ ಮಿಂ ॥
ಚುಗಳೆಂಬುಳ್ಕುವದಾಡೆಗಳ್ ಪೊಳೆಯೆ ಚಂದ್ರಾದಿತ್ಯರಂ ನುಂಗಿ ಬೇ।
ಸಗೆಯಂ ಬೆರ್ಚಿಸಿ ಗರ್ಜಿಸುತ್ತುಮೊಗೆದಂ ಕಾರೆಂಬ ಕಾಳಾಸುರಂ ॥ ೧೫೨ ॥

೫ ॥ ಮದ ಮದಿರಾ ಪ್ರಮತ್ತ ಜನತಾಶಯದಂತೆ ಜಡಾಶಯಂ ಕಲಂ ।
ಕಿದುದು ಮನೋಜ ದೀಪ ಕಳಿಕಾನನದಂತಿರೆ ಕಾನನಂ ಕಱಂ ॥
ಗಿದುದು ವಿರೋಧಿ ವಾಹಿನಿಗಳಂತಿರೆ ವಾಹಿನಿಗಳ್ ಕಡಂಗಿ ಮಿಾ।
ಱಿದುವನುಕೂಲಮಾರ್ಗಮನಿದೇಂ ಮಟಿೆಗಾಲಮಳುಂಬಮಾದುದೋ ॥

ನವವಿಧಮಪ್ಪ ಕಣ್ಬೊಳೆಪು ರಂಜಿಸೆ ಸಂಚಳಿತಾಂಗ ಹಾರದಿಂ।
ವಿವಿಧ ಘನಸ್ವನಕ್ಕೆ ನವಿಲಾಡೆ ಘನಾಘನಲಕ್ಷ್ಮ್ಮಿ ಕೇತಕೇ ॥
ಧವಳ ಕಟಾಕ್ಷೆ ಕಂಡು ರಸಮಗ್ನತೆಯಿಂ ಪುಳಕಾಂಕುರಂಗಳ।
ತ್ಯವಿರಳಮಾಗೆ ಕೊಟ್ಟಳಚಿರಪ್ರಭೆಯೆಂಬ ಸುವರ್ಣ ಮಾಲೆಯಂ ॥ ೧೫೪ ॥

---

1. ಭಾಗದೊಳಂದು. ಕ. ಘ. ಚ.

ಕಂ ॥ [1]ಇಂದೊವರೆನಿಸಿದ ತನಿರಸ
ದಿಂದೊದವಿದ ನೀಲ ಪಾಟಲಚ್ಛವಿಯಿಂ ನು ॥
ಣ್ಪೆಂದೆಸೆವರನೇರಿಲ ಪ
ಣ್ಣಿಂದರಗಿಳಿಗಾವ್ರುದೊಲವನೇಂ ತೊಲಗಿಸಿತೋ ॥ ೧೫೫ ॥

ಶಾ ॥ ಮಾಕಂದಂ ಫಲಹೀನವಾದ ಪದದೊಳ್ ಜಂಬೂರಸಾಸ್ವಾದನ।
ಸ್ವೀಕಾರೋತ್ಸವದಿಂದದಂ ಮಱೆದು ಕೀರಂ ಪ್ರೌಢಿಯಂ ತಾಳ್ದಿದ ॥
ತ್ತೇಕಗ್ರಾಹಿ ಕನಲ್ದು ಚೂತಕಳಿಕಾಸ್ವಾದ ವ್ಯವಚ್ಛೇದದಿಂ।
ಮೂಕೀಭಾವಮನಪ್ಪುಕೆಯ್ದುದು ವಿವೇಕ ವ್ಯಾಕುಲಂ ಕೋಕಿಲಂ ॥ ೧೫೬ ॥

ಮ॥ಸ್ರ॥ಪಸುರ್ವುಲ್ಲಂ ಮೇದು ಸಂದೊಂದೆಡೆಯೊಳಮೊಡಲಿಂಬಿಲ್ಲೆನಲ್ ಕೊರ್ವಿ ಕೆಚ್ಚಲ್
ಕುಸಿವನ್ನಂ ಬೀಗಿ ಪಾಲಂಬಿಱಿವಿಡೆ ಮೊಲೆಯಿಂ ವತ್ಸ ಪೀತಾವಶೇಷಂ ॥
ಪೊಸಗಾರೊಳ್ತಾರಲೊಳ್ ಕಣ್ಣರೆಮುಗಿದಿರೆ ಸೃಕ್ವಂಗಳಿಂ ಸೂಸೆ ಫೇನ।
ಪ್ರಸರಂ ಪೆಲ್ಮೊತ್ತುತುಂ ನಿಂದುದು ವನಮಹಿಷೀ ವೃಂದಮಾನಂದದಿಂದಂ ॥

ಕಂ ॥ ಸುರಿವ ಮಟಿಗಳ್ಕಿ ಗಿರಿ ಕಂ
ದರದೊಳ್ ಮಡಗಿಟ್ಟ ತಮ್ಮ ಶಾಬ ಕದಂಬ ॥
ಕ್ಕರೆಗರ್ಚಿ ಹರಿತ ದೂರ್ವಾಂ
ಕುರಮಂ ಕೊಂಡುಯ್ದುದಂದು ಹರಿಣೀಯೂಥಂ ॥ ೧೫೮ ॥

ಭೋರೆಂದೆಱಗುವ ಜಲಧರ
ಧಾರಾ ಪುಷ್ಕರದಿನಾತ್ಮ ಕರ ಪುಷ್ಕರಮಂ ॥
ಪೂರಿಸಿ ಸಿಂಪಿಣಿಯಂ ಕಾಂ
ತಾರದೊಳಾಡಿದುವು ಕರಿಗಳುಂ ಕರಿಣಿಗಳುಂ ॥ ೧೫೯ ॥

ಮಾರಂ ಬಿರಯಿಗೊಡರ್ಚಿದ
ಮಾರಣ ಹೋಮಾಗ್ನಿಧೂಮ ಪಟಲಂಗಳವೋಲ್ ॥
ಕಾರ ಮುಗಿಲ್ ನೆಗೆದುವು ರತಿ
ನೀರೆಱೆದೋವಿದ ತಮಾಲ ಷಂಡಂಗಳವೋಲ್ ॥ ೧೬೦ ॥

ಪೋಗಿಂ ಪೋಗಿಂ ಮೊಲ್ಲೆಯ
ಪೂಗಣೆದೊಟ್ಟಂ ಮನೋಭವಂ ಬಿರಯಿಗಳೊಂ ॥
ದ್ಯಾಗಿರಿಮೆಂದೊದಱುವವೋಲ್
ಸೋಗೆಗಳಂ ಕೆದಱಿ ಸೋಗೆ ಕೇಗಿದುವಾಗಳ್ ॥ ೧೬೧ ॥

---

1. ಈಂದೊವ. ಚ.

ಕಂ ॥ ಓವದೆ ಕುಡುಮಿಂಚಿನ ಕೈ
ದೀವಿಗೆಗಳನಱಸಿ ಮನ್ಮಥಂ ಬಿರಯಿಗಳಂ ॥
ತೀವಿ ತೆಗೆನೆಱಿದ ಕೇದಗೆ
ವೂವಿನ [1]ಕೊನೆಗಱಿಯ ಸಲಗಿನಂಬಿನೊಳಿಸುವಂ ॥ ೧೬೨ ॥

ಒಲ್ಲದೆ ಬಿಸತಂತು ಜ್ಯಾ
ವಲ್ಲರಿಯಂ ಕುಸುಮಬಾಣಮಂ ಕರ್ವಿನ ಬ ॥
ಲ್ವಿಲ್ಲಂ ಕಾಮಂ ಕಾಮನ
ಬಿಲ್ಲೊಳೆ ಬಿರಯಿಗಳನಟ್ಟಿ ಮೋದಿದನಾಗಳ್ ॥ ೧೬೩ ॥

ಅಂತತಿಪ್ರಬಲಮಾದ ಘನಸಮಯಮತಿಕ್ರಮಿಸೆ ಮೊಲ್ಲೆಯ ಪೂಗುಡಿ ಪಲ್ಲಟಿಸೆಯುಂ, ಗಿರಿಮಲ್ಲಿಗೆ ಬೀತು ಬಿನ್ನನಾಗೆಯುಂ, ಕಡವು ಮೊಗರಾಗಂಗಿಡೆಯುಂ, ಚಾದಗೆ ನವೋದಕ ಕಣ ಭಕ್ಷಣ ವ್ರತಮನುಜ್ಝಿಸೆಯುಂ, ಸೋಗೆನವಿಲ ಪಿಂಡು ತಾಂಡವಕ್ಕಲಸೆಯುಂ, ಹಂಸಮಂಡಲಿ ಮೃಣಾಳ ಕಾಂಡಮಂ ಸವಿದು ಸೊರ್ಕೆಯುಂ, ಗಿರಿ ದರಿ ವನಕ್ಕೆ ನಿರ್ಝರ ಜಲಾಭಿಷವಣಮನೊಡರ್ಚೆಯುಂ, ಪೊನ್ನೆಪೊಸನನೆಯ ಪಸದನದಿನೆಸೆಯೆಯುಂ, ಪೊಂದಾವರೆಯಮಂದ ಮಕರಂದಮನಳಿಗೆ ಬಟ್ಟಿಯಟ್ಟೆಯುಂ, ಅತಿಪ್ರಕಾಶಮಾದ ಶರತ್ಕಾಲವೇಶದೊಳ್—

ಕಂ ॥ ಪೆರೆಯಿಕ್ಕಿ ಪೋದುವಚಿರಾಂ
ಶು ರಸನ ಘನಕಾಲ ವಿಷಧರಂಗಳ್ ಗಗನೋ ॥
ದರ ಗಹ್ವರದೊಳಿನಲ್ ತರ
ತರದಿಂ ಪಸರಿಸಿದುವಂದು ಬಿಳಿಯ ಮುಗಿಲ್ಗಳ್ ॥ ೧೬೪ ॥

ಇರುಳಿಂದುವಿನೊಡವೋಗದೆ
ಶರದದ ಬೆಳ್ದಿಂ[2]ಗಳಹಿಮಕರ ಕರ ತಪ್ತಂ ॥
ತೆರಳೆ ಕೆನೆಗಟ್ಟಿದಂತಿರೆ
ಪೊರೆವೊರೆಗೊಂಡಿರೆ ಮುಗಿಲ್ ಪಗಿಲ್ತುವು ನಭದೊಳ್ ॥ ೧೬೫ ॥

ಉ ॥ ಓವದೆ ಮಾನ ಮೇಷ ವೃಷಭಾದಿಗಳಂ ಕ್ರಮದಿಂ ದಿನಾಧಿಪಂ ।
ಸೇವಿಸಿ ಮತ್ತೆ ಕನ್ನೆಯೊಡಗೂಡಲೊಡಂ ಕಿಡೆ ತನ್ನ ತೇಜಮಿ ॥
ನ್ನಾವುದು ಕಜ್ಜಮೆಂದು ತೊಲೆಯಂ ಜನರಂಜನೆಗೇಱಿ[3] ರಾಗಮಂ ।
ಭೂವಲಯಕ್ಕೆ ಬೀಱಿದನದೇಂ ಪ್ರಭುಮಾಡಿದ ಮಾಯೆ ಸಲ್ಲದೇ ॥ ೧೬೬ ॥

---

1. ಗಱಿಯಸಿಯಲಗಂಬಿನೊ. ಚ. 2. ಗಳಂದಹಿಮಕರ ತಪ್ತಂ. ಕ. ಚ. 3. ತೇಜ. ಗ. ಘ.

ಕಂ ॥ ಈಚ್ಗಡಲೊಳಗೋಲಾಡುವ
ಮಿಾಚ್ಗಳ ಬಳಗಂಗಳೆಂಬಿನಂ ಶರದದ ಬೆ ॥
ಳ್ದಿಚ್ಗಳೊಳಾಡಿದುವು ಚಕೋ
ರಚ್ಗಳ್ ಚಂದ್ರಾಂಶು ಪೂರ್ಣ ಚಂಚು ಪುಟಂಗಳ್ ॥ ೧೬೭ ॥

ಬಳಸಿ ಸುಟಿದಾಡಿ ಕಾಲ್ವಿಡಿ
ದೆಳಸಿ ಕಲಾಲಾಪವೊದವೆ ಜನನಿಯ ನೊಲೆವಾ ॥
ಲ್ಗಳನುಣ್ಬ ಶಿಶುಗಳಂತಿರೆ
ಕಳವೆಯ ಪಾಲ್ದೆನೆಯ ಪಾಲನುಂಡುವು ಗಿಳಿಗಳ್ ॥ ೧೬೮ ॥

ದೂರದೊಳೀಕ್ಷಿಸಿ ತುಂಗಾ
ಕಾರದೊಳೊಂದಿದ ಋಜುತ್ವಮಂ ಪದೆದೆಳಸಿ ॥
ತ್ತಾರಯ್ದು ನೋಡದಂತ
ಸ್ಸಾರತೆಯಂ ಕಾಶ ಕಣಿಶಮಂ ಶುಕಶಾಬಂ ॥ ೧೬೯ ॥

ಆ ಶರತ್ಸಮಯದೊಳ್—

ಮ॥ಸ್ರ॥ ತನಗತ್ಯುತ್ಸಾಹದಿಂ ಯಕ್ಷನ ನೆಗಟ್ಟಿ ಚಿತಾಚಾರಮುಂ ಬೇಟ್ಟಿದಂ ಸ।
ಮ್ಮನದಿಂದಂ ಮಾಟ್ಟಿ ಸಂಪ್ರೀತಿಯುಮನವರತಂ ಹರ್ಷಮುಂ ಮಾಡೆ ಸಾಹಿ॥
ತ್ಯ ನಟೀ ಶೈಲೂಷನತ್ಯುರ್ಜಿತ ಶುಭಚರಿತಂ ಸಜ್ಜನಾಧಾರನಿರ್ದಂ।
ದ್ಯುನದೀ ಫೇನ ಪ್ರತಾನ ಪ್ರಥಿತ ಪೃಥುಯಶಂ ಭಾರತೀ ಕರ್ಣಪೂರಂ॥ ೧೭೦ ॥

ಇದು ಪರಮ ಜಿನಸಮಯ ಕುಮುದಿನೀ ಶರಚ್ಚಂದ್ರ ಬಾಲಚಂದ್ರ
ಮುನೀಂದ್ರ ಚರಣನಖಕಿರಣ ಚಂದ್ರಿಕಾಚಕೋರ ಭಾರತೀ
ಕರ್ಣಪೂರ ಶ್ರೀಮದಭಿನವಪಂಪ ವಿರಚಿತಮಪ್ಪ
ರಾಮಚಂದ್ರ ಚರಿತ ಪುರಾಣದೊಳ್
ಶರದ್ವರ್ಣನಂ
—ಸಪ್ತಮಾಶ್ವಾಸಂ—

ಅಪ್ಪಮಾಶ್ವಾಸಂ

ಕಂ ॥ ಶ್ರೀನಿಲಯನಿಷ್ಟ ವಿಷಯ ಸು
ಖಾನುಭವಂ ಬಡೆದು ದೇವ ನಿರ್ಮಿತನೆನಿಸಿ॥
ರ್ದಾ ನಗರಿಯೊಳಪ್ರಾಕೃತ
ಮಾನಧನಂ ಸುಖದಿನಿರ್ದನಭಿನವ ಪಂಪಂ ॥ ೧ ॥

ಆ ಶರತ್ಸಮಯ ಸಮನಂತರಂ ಗಮನೋತ್ಸುಕ ಚಿತ್ತನಾದ ರಾಮಂಗಮೂಲ್ಯ ಮುಕ್ತಾದಾಮಮುಮಂ ಲಕ್ಷ್ಮಣಂಗೆ ಮಣಿಕುಂಡಲಮುಮಂ ಸೀತಾದೇವಿಗೆ ಚೂಡಾರತ್ನಮುಮಂ ವೀಣಾರತ್ನಮುಮನೋಲಗಿಸಿ, ವಿಷಮಮಾದೆಡೆಗೆನ್ನಂ ನೆನೆವುದೆಂದು ವಿನಯಮಂ ನುಡಿದು ಕೆಱೆದೆಡೆಯಂ ಕಟಿಪಿ ಬೀಟ್ಕೊಂಡು ಬಂದು, ಯಕ್ಷಂ ವೈಕುರ್ವಣಪುರಮನದೃಶ್ಯಂಮಾಡಿ ನಿಜ ನಿವಾಸಕ್ಕೆ ಪೋದನಿತ್ತಲಾ ರಾಮ ಲಕ್ಷ್ಮಣರ್ ಸಿಚ್ಚವಯಣಂಗಳಿಂ ವಿಜಯಪುರದ ಬಹಿರುದ್ಯಾನವನೆಯ್ದೆವರ್ಪ ಸಮಯದೊಳ್—

ಉ ॥ ಮುನ್ನಿನ ಕಾಯ್ಪುಗೆಟ್ಟು ದಶದಿಙ್ಮುಖದಿಂ ಪೆಡಮೆಟ್ಟಿ ರಶ್ಮಿಗಳ್ ।
ತನ್ನೊಳಡಂಗೆ ಚಂಡಕಿರಣಂ ವರುಣಾನಿಯ ಕೈಯ ಕೆಂಬರ ॥
ಲ್ಗನ್ನಡಿಯಂತೆ ದಿಟ್ಟಿಗಳವಟ್ಟರೆ ಪೊರ್ದಿದನಬ್ಜಷಂಡ ಸಂ ।
ಚ್ಛನ್ನಮನುತ್ಕ ಹಂಸ ಮಧುರಸ್ವನಮಂ ಬನಮಂ ರಘೂದ್ವಹಂ ॥ ೨ ॥

ಅಂತತಿಶಯಮಪ್ಪ ವನವಿಲಾಸಮಂ ಸೀತೆಗೆ ತೋಱುತ್ತುಂ ಬಂದದೊಂದು ತಿಳಿಗೊಳದ ತಡಿಯ ತಮಾಲವನ ಲತಾಗೃಹದೊಳ್ ವಿಶ್ರಮಿಸಿರ್ಪುದುಂ—

ಕಂ ॥ ಲತೆವನೆಯೊಳಗಣ ತಣ್ಬಟಿ
ಲ ತಾಣದೊಳ್ ಕುಸುಮದೆಸಳ ಪಸೆಯಂ ಸೀತಾ ॥
ಪತಿಗೆ ಸಮೆದಂ ಸುಮಿತ್ರಾ
ಸುತಂ ಸಹೋದರರೊಳಿಂತತಿಸ್ನೇಹಿತರಾರ್ ॥ ೩ ॥

ಸೌಮಿತ್ರಿಯ ನಿರತಿಶಯ
ಪ್ರೇಮಮನದನಂತುಟಿಂತುಟಿಂಬಂತುಟಿ ನಿ ॥
ದ್ರಾ ಮುದ್ರಿತ ಲೋಚನನಿರೆ
ರಾಮಂ ರಕ್ಷಾನಿಮಿತ್ತಮೆಚ್ಚಿತ್ತಿರ್ದಂ ॥ ೪ ॥

ಅಂತನತಿದೂರದೊಳನತಿಶಯಮಪ್ಪದೊಂದು ಮಾಕಂದ ನಂದನದ ಪೊದ ಱೊಳುಪೇಂದ್ರನಿರ್ಪುದುಮತ್ತಲಾ ಪುರದಧಿಪತಿಯಪ್ಪ ಪೃಥ್ವೀಧರಮಹಾರಾಜಂಗ ಮಾತನ ಮಹಾದೇವಿಯಪ್ಪಿಂದ್ರಾಣಿಗಂ ಪುಟ್ಟಿದ ವನಮಾಲೆಯೆಂಬ ಬಾಲೆ—

ಶಾ ॥ ಗಂಡರ್ ಚೆನ್ನಿಗರನ್ನರಿಲ್ಲ [1]ಕಲಿಬಿಲ್ಲಾಳನ್ನನಿಲ್ಲೆಂದು ಮುಂ ।
ಕಂಡರ್ ಬಣ್ಣಿಸೆ ಕೇಳ್ದು ಕೇಳ್ದು ಕಿವಿವೇಟಂ ಗೊಂಡು ಲಕ್ಷ್ಮೀಧರಂ ॥
ಗಂಡಂ ಪೋ ಮೊಱೆಯಲ್ಲರನ್ಯರೆನಗೆಂಬೀ ಪೂಣ್ಕೆಯಂ ಕನ್ನೆ ಕೈ ।
ಕೊಂಡಳ್ ಗಾಡಿಯನೆಯ್ದೆ ನೋಡಿದವರಾರಾತಂಗೆ ಕಣ್ಗೋಲದರ್ ॥ ೫ ॥

ಅಂತು ವನಮಾಲೆ ಬಗೆಯೊಳ್ಕೊಡಂಬಟ್ಟಂತಾಕೆಯ ಮಾತಾಪಿತೃಗಳುಂ ಲಕ್ಷ್ಮಣಂಗೆ ಕುಡುವಮೆಂದು ನಿಶ್ಚಯಂಗೆಯ್ದು ದಶರಥಂ ತಪಂಬಟ್ಟುದುಮಂ ರಾಮ ಲಕ್ಷ್ಮಣರ್ ಪಱವಟ್ಟುದುಮಂ ಚರವಚನದಿನಱಿದಿಂದ್ರಪುರಮನಾಳ್ವ ಸುಂದರಕು ಮಾರಂಗೆ ತನ್ನಂ ಕುಡಲೆಂದಿರ್ಪುದುಮದಂ ಕೇಳ್ದು ವನದೇವತೆಯನರ್ಚಿಸುವೆನೆಂಬ ನೆವದಿನುಪವಾಸಮಿರ್ದು ಕತಿಪಯ ಪರಿಜನಂ ಬೆರಸು ಮಹಾವಿಭೂತಿಯಿಂ ಬನ ದೊಳಗೆ ಲಕ್ಷ್ಮಣನಿರ್ದ ದೆಸೆಗೆ ಪುಣ್ಯ ಪ್ರೇರಣೆಯಿಂ ಪೋಗಿ ವನದೇವತೆಯನರ್ಚಿಸಿ ಜಾಗರಮಿರ್ದೆಲ್ಲರುಂ ನಿದ್ರಾವಶ ಗತರಾಗೆ ನಿರ್ವೇಗಪರೆ ಶಯ್ಯಾತಲದಿನೆೞ್ದು—

ಮ ॥ ತನುಗಂಧಂ ಬನಮೆಲ್ಲಮಂ ಬಳಸೆ ನೇತ್ರಜ್ಯೋತ್ಸ್ನೆಯುಂ ರತ್ನಮಂ ।
ಡನ ಬಾಲಾತಪಮುಂ ತಮಕ್ಕೆ ತವಿಲಂ ತರ್ಪನ್ನಮೇೞ್ತರ್ಪಳಂ ॥
ವನಲಕ್ಷ್ಮೀವಧುವೋ ಸುರಪ್ರಮದೆಯೋ ವಿದ್ಯಾಧರಸ್ತ್ರೀಯೊ ಪೇ ।
ೞಿನುತುಂ ಕಣ್ಣೆವೆಯಿಕ್ಕದೀಕ್ಷಿಸಿದನಾ ಸ್ತ್ರೀರತ್ನಮಂ ಲಕ್ಷ್ಮಣಂ ॥ ೬ ॥

ಅಂತು ನೀಡುಂ ಭಾವಿಸಿ ನೋಡಿ—

ಮ॥ಸ್ರ॥ ಬನಮೆತ್ತಲ್ ಬಾಲೆಯೆತ್ತಲ್ ನಡುವಿರುಳೊಡನಿಲ್ಲೊರ್ವರುಂ ಭೀತಿಗೆಟ್ಟಾ ।
ವ ನಿವಿತ್ತಂ ಬಂದಳೆಂಬೀ ತೆಱನನಱಿವೆನಾನೆಂದು ಲಕ್ಷ್ಮೀಧರಂ ಬೆ ॥
ನ್ನನೆ ಪೋದಂ ಪೊಕ್ಕಳಾ ಕನ್ನೆಯುಮವನಿ ತಲಾಲಿಂಗಿತಾನೇಕ ಶಾಖಾ ।
ಜನಿತ ಧ್ವಾಂತಾಂತರಾಲ ಪ್ರಬಲ ವಟಮನೇಗೆಯ್ಯದುದ್ವೇಗ ವೇಗಂ ॥ ೭ ॥

ಅಂತಾ ಮರದಡಿಯೊಳಾಕೆ ನಿಂದು ರಾಮಾನುಜನಪ್ಪ ಲಕ್ಷ್ಮಣಕುಮಾರ ನೆತ್ತಾನುವಿಂಬನಕ್ಕೆ ವಿನೋದದಿಂ ಬಂದನಪ್ಪೊಡೀ ವಟ ನಿವಾಸಿನಿಯರಪ್ಪ ದೇವತೆ ಯರಾರಾನುಮುಳ್ಳೊಡೆ ಲಕ್ಷ್ಮಣಕುಮಾರ! ವನಮಾಲೆ ನಿನಗಲ್ಲದೆ ವಧುವಾಗೆನೆಂದು ನೇಲ್ದು ಸತ್ತಳೆಂಬಿದಂ ಮಱೆಯದಱಿಪುವುದೆಂದು ಕರುಣವಾಗೆ ನುಡಿದು—

1. ಕಲಿಗಳ್ ಬಿಲ್ಲಾಳ್ಗಳಿಲ್ಲೆಂದು. ಗ.

ಚ ॥ ಮೃತಿಗಿನಿಸಪ್ಪೊಡಂ ಸೆಡೆಯದೀ ಭವದೊಳ್ ದೊರೆಕೊಂಡುದಿಲ್ಲ ದು ।
ಪ್ಪೃತದೊದವಿಂ ಮನಃಪ್ರಿಯ ಕರಗ್ರಹಣಂ ಮಱುಮೆಯ್ಯೊಳಾದೊಡಂ ॥
ಪತಿಯೆನಗಕ್ಕೆ ಲಕ್ಷ್ಮಣನೆನುತ್ತುಮವಳ್ ಕೊರಲೊಳ್ ತೊಡರ್ಚಿದಳ್ ।
ಲತೆಯನಿದೇವೊಗಟ್ಟಿದೆರಡಿಲ್ಲದ ನಲ್ಮೆಯನಾ ಲತಾಂಗಿಯಾ ॥ ೮ ॥

ಅನಂತರಂ—

ಕಂ ॥ ಬೇಗಂ ಬಂದಾ ವಧು ನೇ
ಲ್ವಾಗಳ್ ನೀನಱಿಸುವಾತನಾನುಟಿ ಮರಣೋ ॥
ದ್ಯೋಗಮನೆಂದು ಘನಧ್ವನಿ
ಸೋಗೆಯ ಕಿವಿಸಾರ್ದುದೆನಿಸಿ ಕೃಷ್ಣಂ ನುಡಿದಂ ॥ ೯ ॥

ಅಂತು ನುಡಿದು—

ಕಂ ॥ ವನಮಾಲಾ ಮಂಡನನಾ
ವನಮಾಲೆಯನಟ್ಟಿಜಿಂದೆ ತಟಿಕ್ಕೈಸಿದನ ॥
ಜ್ಜಿನಿಯಂ ಕರಂಗಳಿಂದ
ಜ್ಜಿನೀಪ್ರಿಯಂ ಚಂಡಭಾನು ತಟಿಕ್ಕೈಸುವವೋಲ್ ॥ ೧೦ ॥

ಅಂತು ನೇಲ್ವಾಕೆಯಂ ತಟಿಕ್ಕೈಸಿ ನೆಗಪಿ—

ಕಂ ॥ ಓಪಳ ಕೊರಲೊಳ್ ಕೋದ ಲ
ತಾ ಪಾಶಮನಂಬುಜೋದರಂ ಕಳೆದು ಸಮು ॥
ದ್ದೀಪಿತ ರಾಗಂ ಮೋಹ ಲ
ತಾ ಪಾಶಮನೊಡನೆ ತನ್ನ ಕೊರಲೊಳ್ ಕೋದಂ ॥ ೧೧ ॥

ಆಗಳತಿ ಸಂಭ್ರಮಮನಪ್ಪುಕೆಯ್ದು—

ಮ ॥ ಹರಿನೀಲಚ್ಛವಿ ಪುಂಡರೀಕ ನಯನಂ ವಿಸ್ತೀರ್ಣ ವಕ್ಷಸ್ಸ್ಥಲಂ ।
ಪರಿವೃತ್ತಾಯತ ಬಾಹು ಪೀವರ ನಿತಂಬಂ ಗಂಡರೊಳ್ ನೀಜನೆಂ ॥
ಬರ ಮಾತಂ ಕಿವಿಯಾರೆ ಕೇಳ್ದು ಕಿವಿವೇಟಂಗೊಂಡು ಕರ್ಣ್ಣಾರ್ವಿನಂ ।
ಹರಿಯಂ ನೋಡಿದಳಾಕೆ ತನ್ನ ಕಡೆಗಣ್ಗಳ್ ಬೀಜಿತೆ ಬೆಳ್ದಿಂಗಳಂ ॥ ೧೨ ॥

ಕಂ ॥ ಬೆಮರ್ವನಿ ಕೈವಿಗೆ ಲಜ್ಜಾ
ನಮಿತಾನನೆ ನಿಮಿರ್ದ ಸುಯ್ಗಳೊಡನೆ ಕಟಾಕ್ಷಂ ॥

ನಿಮಿರ್ದೆಸೆಯೆ ನೋಡಿದಳ್ ಸಂ
ಭ್ರಮದಿಂ ವನಮಾಲೆ ಬಾಲೆ ಪೀತಾಂಬರನಂ ॥ ೧೩ ॥

ಆ ಸಮಯದೊಳ್ ಲಕ್ಷ್ಮಣಕುಮಾರನುಮಾಕೆಯಂ ನೋಡದಂತು ನೋಡೆ—

ಕಂ ॥ ಪಲ್ಲಟಿಸದೆ ಕಣ್ಗಳ್ ನಿಂ
ದಲ್ಲಿಯೆ ನಿಲೆ ತಮ್ಮೊಳೆಳಸಿ ನೋಡುವ ಪದದೊಳ್ ॥
ಫುಲ್ಲಶರಂ ಕೆಳವಾಡಿಯ
ಬಿಲ್ಲಂತಿರ್ದಿಸಗದರಲ ಸರಲಂ ಸುರಿದಂ ॥ ೧೪ ॥

ಚ ॥ ನಡುವಿರುಳಾರುಮಿಲ್ಲದೆಡೆಯೊಳ್ ಕೊರಲೊಳ್ ವಧು ಕೋದು ಬಳ್ಳಿಯಂ ।
ಮಡಿಯಲೊಡರ್ಚಿ ಲಕ್ಷ್ಮಣನಿಮಿತ್ತದಿ[1]ನಾತನೆ ದೈವದೊಂದೊಡಂ ॥
ಬಡಿಕೆಯಿನಾಗಳಾ ಯಿರುಳೊಳಲ್ಲಿಗೆ ತಾಂ ಪಟುವಟ್ಟು ಬಂದು ಕ ।
ಯ್ವಿಡಿದೊಡೆ ಸಾವು ಮಾಣ್ದುದೆನೆ ಸಾಯದರಂ ಕೊಲಲಾರುಮಾರ್ಪರೇ ॥೧೫॥

ಅನಂತರಮಾ ಕಾಂತೆವೆರಸು ಲಕ್ಷ್ಮಣಂ ನಿಜಾಗ್ರಜನಿರ್ದ ಲತಾಗೃಹಕ್ಕೆ ಪೋದನಿತ್ತಲಾ ವನಮಾಲೆಯ ಕೆಳದಿಯರುಮಾಕೆಯಂ ಶಯ್ಯಾತಲದೊಳ್ ಕಾಣದೆ ಬೆಗಡುಗೊಂಡಾ ಬನದೊಳ್ ತೊಟಲ್ದಱಿಸುತ್ತುಂ ಬಂದಲ್ಲಿರ್ದಳಂ ಕಂಡಲ್ಲಿರ್ದ ಮಹಾನುಭಾವರಂ ರಾಮಲಕ್ಷ್ಮಣರಿಂದಱಿದು ಮೈಗಾಪಿನವರ್ ಪರಿತಂದು ತನ ಗಱಿಪುವುದುಂ ಪೃಥ್ವೀಧರ ಮಹಾರಾಜಂ ಕೇಳ್ದು ಪುರದೊಳಷ್ಟಶೋಭೆಯಂ ಮಾಡಿಸಿ ಚತುರಂಗಬಲಂಬೆರಸು ಬೇಗಮಿದಿರ್ವೋಗಿ ರಾಜಭವನಕ್ಕೆಯ್ದಭ್ಯಾಗತ ಪ್ರತಿಪತ್ತಿಯಿಂ ಮನ್ನಿಸಿ ಶುಭದಿನ ಮುಹೂರ್ತದೊಳ್—

ಕಂ ॥ ಉತ್ತಮ ಕನ್ಯಾರತ್ನಮ
ನಿತ್ತಂ ಪೃಥ್ವೀಧರಂ ನರೇಂದ್ರೋತ್ತಮನ ॥
ತ್ಯುತ್ತಮ ವರನೆನಿಸಿದ ಪುರು
ಷೋತ್ತಮ ದೇವಂಗೆ ಕೂಸುಗುಡಲಾರ್ಪಡೆವರ್ ॥ ೧೬ ॥

ಅಂತು ವನಮಾಲೆಗಂ ಚಕ್ರಪಾಣಿಗಂ ಪಾಣಿಗ್ರಹಣಮಪ್ಪುದುಮಾ ಸಮಯದೊಳೊರ್ವಂ ನಂದ್ಯಾವರ್ತಪುರಮನಾಳ್ವತಿವೀರ್ಯನ ದೂತಂ ಬಂದು ದೂರಾವನತ ಮಸ್ತಕಂ ಸಮಸ್ತ ರಾಜಲೋಕಮನೇಕಾಕ್ಷೌಹಿಣೀಬಲಂ ಬೆರಸು ತನ್ನೊಳ್ ಕೂಡೆ ಭರತನ ಮೇಲೆ ನಡೆಯಲಿಂದೆಮ್ಮರಸಂ ನಿಮಗೆ ಬಱಿಯಟ್ಟಿದ ರಾಜಾದೇಶಮೆಂದು ಪೃಥ್ವೀಧರಂಗೆ ಬಿನ್ನವಿಸೆ ಕೇಳ್ದು—

1. ನಾಕೆಯು. ಗ. ಚ.

ಕಂ ॥ ಮುಳಿಸೆಂಬ ವಿಷದ ಬಳ್ಳಿಯ
ತಳರೆನೆ ಪೊಳೆವಧರ ಮಣಿಯ ಮೇಲೆ ಮುಗುಳ್ಪ ॥
ಜ್ವಳಿಪಂತೆ ಮುಗುಳ್ನಗೆ ಪ
ಜ್ವಳಿಸುವಿನಂ ಚಕ್ರಿ ನೋಡಿ ದೂತನ ಮೊಗಮಂ ॥ ೧೭ ॥

ಭರತನುದ್ಯೋಗಮೇನೆಂಬುದುಮಾತನತಿವೀರ್ಯವಲ್ಲಭನಟ್ಟಿದ ದೂತಂ ವಿನೀತಾ ಪುರಮಂ ಪೊಕ್ಕು ಭರತನಂ ಕಂಡು ನಿಮ್ಮನೆಮ್ಮರಸಂ ತನಗಾಳಾಗಿ ಸುಖಮಿರ್ಪು ದೆಂದು ಬೆಸಸಿಯಟ್ಟಿದನಿದು ನಿಮಗುಱುವ ಕಜ್ಜಮದೆಂತೆನೆ—

ಚ ॥ ಬಗೆಯದೆ ಕಾಳೆಗಕ್ಕೆ ಬಗೆದರ್ಪೊಡೆ ನಿಮ್ಮಳವಲ್ಲ ವಂಕದಾ ।
ನೆಗೆ ತುರಗಕ್ಕೆ ತೇರ್ಗೆ ಪವಣಿಲ್ಲ ಪದಾತಿಗೆ ಮೇಱಿಯಿಲ್ಲದಂ ॥
ಬಗೆದುಱಿದಿರ್ಪ ಗಾಂಪನುಟ್ಟಿದಾಳ್ವಿಸಗೆಯ್ವುದು ಬಾಲ್ವ ಬಟ್ಟೆಯಂ ।
ಬಗೆವುದು ಕೇಱಿ ವಿಾಱುವವರಾರತಿವೀರ್ಯನ ಬಾಹುವೀರ್ಯಮಂ ॥ ೧೮ ॥

ಎಂದು ಗದಱಿ ಗರ್ಜಿಸಿದ ದೂತನ ಮಾತಿಂಗೆ ಶತ್ರುಘ್ನಂ ಮುಳಿದು—

ಚ ॥ ಕನಸಿನೊಳಪ್ಪೊಡಂ ಭಯದ ಲೋಭದ ಮಾತು ಮನು ಪ್ರಸೂತರೊಳ್ ।
ಜನಿಯಿಸದಲ್ಪವೀರ್ಯನತಿವೀರ್ಯವೆಸರ್ ತನಗೇವುದಾಹವ ॥
ಕ್ಕೆನಗಿದಿರಾಗಿ ನಿಲ್ವನಿತು ದೋರ್ಬಲಮುಳ್ಳೊಡೆ ತಂದು ಕಾದಿಸಾ ।
ತನನೆಲೆ ದೂತ ಬಿಲ್ವಿಡಿಯಲೀವೆನೆ ಪುಲ್ವಿಡಿವಂತು ಮಾಡುವೆಂ ॥ ೧೯ ॥

ಎಂದೊದಱಿ ದೂತನಂ ಪರಿಭವಿಸಿ ಕಳೆವುದುಂ—

ಕಂ ॥ ಭರತನೊಳತಿವೀರ್ಯಂ ಸಂ
ಗರಕ್ಕೆ ಮೇಲೆತ್ತಿ ಬಂದನೆಂಬಪವಾದಂ ॥
ಪರೆದಂದು ರಘುಕುಲಕ್ಕದೆ
ಪರಾಭವಂ ಪರಿಭವಕ್ಕೆ ಕೋಡೆರಡೊಳವೇ ॥ ೨೦ ॥

ಎಂದು ಮನದೊಳ್ ನಿಶ್ಚಯಿಸಿ ಭರತಂ ಶತ್ರುಘ್ನಂಬೆರಸು ಚತುರಂಗಬಲ ಸಮೇತನಾಗಿ ನಂದ್ಯಾವರ್ತಪುರಕ್ಕೆತ್ತುವುದುಮಾಸಮಯದೊಳ್ ವಿಾಥಿಲೆಯನಾಳ್ವ ಕನಕನುಮುಜ್ಜೆಣಿಯನಾಳ್ವ ಸಿಂಹೋದರನುಮಸಂಖ್ಯಾತಬಲಂಬೆರಸು ತಮ್ಮೊಳ್ ಬಂದುಕೂಡಿದರಿತ್ತ ಪರಿಭವಂಬೆತ್ತುಬಂದ ಚರನ ವಚನಮನತಿವೀರ್ಯಂ ಕೇಳ್ದು ಘನ ಗರ್ಜನೆಯಂ ಕೇಳ್ದ ಸಿಂಹದಂತೆ ಮುಳಿದು ಭರತಂಗಿದಿರೆತ್ತಿ ನಡೆಯಲೊಡರಿಸಿದ ನೆಂಬವಾರ್ತೆಯಂ ವಾಯುಗತಿವೆಸರ ದೂತನಱಿಪೆ ಪೃಥ್ವೀಧರಂ ದೂತನಂ ಮನ್ನಿಸಿ ಕಟ್ಟಿಪಿ ರಾಘವನ ಮೊಗಮಂ ನೋಡಿ ಕಾಳೆಗಮನಾಂ ಪೋಗಿ ಮಾಣಿಸುವೆ

ನೆಂಬುದುಂ ಲಕ್ಷ್ಮಣನದರ್ಕಾನೆ ಸಾಲ್ವೆನೆಂದು ಮನಃಪವನ ಜವಮುಳ್ಳ ವಾಜಿಗಳಂ ಪೂಡಿದ ರಥಮಂ ತರಿಸಿ ಮೂವರುಮೇಱಿ ಪೋಗಿ ನಂದ್ಯಾವರ್ತ ನಗರದ ಪೊಱ ವೊಟಲೊಳ್ ಬೀಡಂ ಬಿಟ್ಟಿರ್ದ ಸಮಯದೊಳ್—

ಕಂ ॥ ಅತಿವೀರ್ಯನ ಶೌರ್ಯಮನ
ಪ್ರತಿಹತಮುಂ ಭರತನಾರ್ ಕುಮಾಱಿಂ ಗೆಲಲು ॥
ದ್ಧತನಂ ಮುನ್ನಮೆ ರಣದೊಳ್
ಹತಪ್ರಭಂ ಮಾಡಿ ಗೆಲ್ವ ಬಗೆಯಂ ಬಗೆಯಿಂ ॥ ೨೧ ॥

ಎನೆ ಜನಕಜೆಗೆ ಮುಕುಲಿತ ಕರ ಸರೋಜನಾಗಿ—

ಕಂ ॥ ಜನನಿ ಬಱುಗಯ್ಯೊಳವನಂ
ಮನೆದೊಟ್ಟಿಂ ಪಿಡಿದು ತರ್ಪ ತೆಱದಿಂ ತಂದ ॥
ಣ್ಣನ ಕಾಲ್ಗೆಱಗಿಸುವೆಂ ಬಗೆ
ವಸಿತುವರಮದಾವ ಗಹನಮೆಂದನುಪೇಂದ್ರಂ ॥ ೨೨ ॥

ಎನೆ ರಾಘವಂ ಕೇಳ್ದು ಭರತಂಗತಿವೀರ್ಯನಂ ನಿಯಮಿಸುವುದಾವ ಗಹನ ಮೆನೆ ಲಕ್ಷ್ಮಣನೆತ್ತಾನುಂ ಭರತನುಂ ಸೋಲ್ತನಪ್ಪೊಡೆ ನಮಗೆ ಕುಲಪರಿಭವ ಮಕ್ಕುಮೆಂಬುದುಂ ರಾಘವನೆಂದನಿಂದಿಂಗೆ ಮೂಱನೆಯ ದಿವಸದಂದು ಶತ್ರುಘ್ನಂ ನಂದ್ಯಾವರ್ತಪುರಕ್ಕೆ ಪರಿಯಿಟ್ಟು ಪಲಬರರಸುಮಕ್ಕಳಂ ಕೊಂದು ಪೊಱವೊಟಿ ಲೊಳಿರ್ದೀಟಿಟ್ಟೂಱನೆಯುಮನಱುವತ್ತು ಸಾಸಿರ ಕುದುರೆಯುಮಂ ಪಿಡಿದುಯ್ದು ನೆಂದು ಪೇಟ್ಪುದುಂ ಮಱುದೆವಸಂ ಪುರಮಂ ಪೊಕ್ಕೊಂದು ಜಿನಮಂದಿರದೊಳಾಯುಧ ಸಮೇತಂ ಸೀತೆಯುಮುಂ ರಘುವೀರನುಮನಿರಿಸಿ ಬಂದು—

ಚ ॥ ಅದಟನತಿಪ್ರಚಂಡ ಬಲನೆನ್ನದೆ ದುರ್ಧರ ದೋಸ್ಸಹಾಯದಿಂ ।
ಕದನ ಧುರೀಣನೊಲ್ಲದೆ ಧನುರ್ಲತೆಯಂ ನಿಜ ದಿವ್ಯ ಬಾಣಮಂ ॥
ಗದೆಯನದೇನುದಾತ್ತನೊ ಜನಾರ್ದನನೊರ್ವನೆ ಪಾಶ ದಂಡಮಿ ।
ಲ್ಲದ ಜವನಂತೆ ನಿಂದನತಿವೀರ್ಯನ ರಾಜಗೃಹೋಪಕಂಠದೊಳ್ ॥ ೨೩ ॥

ಆಗಳಬ್ಜೋದರನಿದಿರ್ಗೆ ಬಂದಾಗಮನ ವೃತ್ತಾಂತಮನಱಿದು—

ಕಂ ॥ ಪಡಿಯಱಿನೊರ್ವಂ ಬಂದಾ
ಗಡೆ ಭರತನ ದೂತನಿರ್ದಪಂ ಬಾಗಿಲೊಳಿಂ ॥
ದೊಡೆ ಬರವೇಟ್ಕೆಂದಂ ಬಱಿ
ಸಿಡಿಲಂ ಬಟ್ಟಿಯಟ್ಟಿ ಬರಿಸುವಂತತಿವೀರ್ಯಂ ॥ ೨೪ ॥

ಅನಂತರಂ ಬಂದು—

ಕಂ॥ ಎಱಿಗದೆ ವಜ್ರಸ್ತಂಭದ
ತೆಱದಿಂದಿರೆ ಮುಳಿಸು ಕಣ್ಣಿ ಕಿಸುಸೆರೆಯಿಂ ಕ॥
ಣ್ಣೆಜೆಯೆ ನಡೆ ನೋಡಿ ಬಂದುದ
ನಱಿಪೆನೆ ದುಂದುಭಿಗಭೀರ ರವನಿಂತೆಂದಂ ॥ ೨೫ ॥

ಉ॥ ಎತ್ತಿ ಬರುತ್ತುಮಿರ್ದ ನಿದಿರಾಂತವರಾರ್ ಭರತೇಶ್ವರಂಗೆ ಭೂ।
ಪೋತ್ತಮನಾಜ್ಞೆಯಂ ತಲೆಯೊಳಾಂತು ಪದಾನತನಾಗಿ ಕಪ್ಪಮಂ॥
ತೆತ್ತುಟಿ ಗಂಡುಗೆಯ್ಯದಿಱಿವಿಟ್ಟಗೆ [1]ಜಟ್ಟಿಗನಾಗಿ ಬಾಟ್ಪುದ।
ತ್ಯುತ್ತಮ ಪಕ್ಷಮಾಂತೊಡಪವರ್ತಿಸುಗುಂ ಕ್ಷಣದಿಂ ನಿಷೇಕಮಂ ॥ ೨೬ ॥

ಕಂ॥ ಆಳಾಗಿ ಬರ್ದುಂಕದೆ ಬಿ
ಲ್ಲಾಳಾಗಿ ಬರ್ದುಂಕಲೊಡರಿಪೊಡೆ ಭರತನ ಕೂ॥
ರ್ವಾಳ ನಸುಮಸೆಗೆ ಬಾಲಮೃ
ಣಾಳಂ ರಿಪುನೃಪರ ಕಂಠನಾಳಂ ಧುರದೊಳ್ ॥ ೨೭ ॥

ಎಂಬುದುಂ ಕಡುಮುಳಿದು—

ಕಂ॥ ಸಿಡಿಲ ದನಿಗೇಳ್ದ ಸಿಂಹಂ
ಸಿಡಿಲ್ದು ನೆಗೆವಂತೆ ಗಜರಿ ಗರ್ಜಿಸಿ ಬಾಳಂ॥
ಜಡಿದೆಯ್ದಿ ಪೊಯ್ವ ಕೈಯಂ
ಪಿಡಿದಾತನ ಬೀರಸಿರಿಯುಮಂ ಕೈವಿಡಿದಂ ॥ ೨೮ ॥

ಶಾ॥ ಮುಂಗಯ್ಯಂ ಪಿಡಿದೊತ್ತಿ ಕೈಯ ಕರವಾಳ್ ಬೀಟ್ಟಿರ್ಪಿನಂ ವಕ್ರ್ರರಂ।
ಧ್ರಂಗಳ್ ಕಾಱುವಿನಂ ಕದುಷ್ಣ ರುಧಿರಾಂಭಃಪೂರಮಂ ಪೊಯ್ದು ಪೊ॥
ಯ್ದುಂಗಯ್ಯಿಂ ಮೊಗಮಂ ಮುಸುಂಬು ಬಿಱುಬಿದ್ದಂಬೋಗೆ ವೀರಂಗೆ ದೋ।
ರ್ಭಂಗಂಮಾಡಿದನೇನಲಂಘ್ಯಬಲನೋ ರಾಮಾನುಜಂ ಲಕ್ಷ್ಮಣಂ ॥ ೨೯ ॥

ಅಂತು ಪರಿಭವಿಸಿ—

ಕಂ॥ ಭರತನೊಳಿದಿರ್ಚಿ ಕಾದುವ
ಭರವಶದಿಂ ಬಂದ ಕಲಿಗಳಿರ್ದೆಡೆಯಿಂ ಸಂ॥
ಚರಿಸಿದೊಡೆ ಮೆಟ್ಟಿ [2]ಕೀಟ್ಪಿಂ
ಶಿರಮಂ ಕೀಟ್ಪಿಂತೆ ವನ್ಯಗಜಮಂಬುಜಮಂ ॥ ೩೦ ॥

---

1. ಬಿಟ್ಟಗ. ಚ. 2. ಸೀಳ್ಪಿಂ. ಚ.

ಎಂದು ಗಜಱಿ ಗರ್ಜಿಸುವುದುಮತಿವೀರ್ಯನೊಳ್ ಕೂಡಿ ಭರತನೊಳ್ ಕಾದ ಲೆಂದು ಬಂದನ್ಯರಾಜನ್ಯಕದೊಳ್ ವಿಜಯನಿವನಜೇಯನೆಂದು ಮನಂಗುಂದೆಯುಂ, ಶಾರ್ದೂಲಂ ಶಾರ್ದೂಲನಂ ಕಂಡ ತೋಳನಂತೊಳಸೋರ್ದು ಸಮರಮುಖ ವಿಮುಖ ನಾಗೆಯುಂ, ಮೃಗಧ್ವಜಂ ಮೃಗಧ್ವಜನೆನಿಸೆಯುಂ, ರಣೋರ್ಮಿ ಭಯರಸೋರ್ಮಿ ಯಂ ನೂರ್ಮಡಿಸೆಯುಂ, ಕಲಭಂ ಕುಸುಮಿತ ಚಂಪಕಾನೋಕಹಮಂ ಕಂಡಳಿ ಕಲಭದಂತೆ ಮೊಗಂ[1]ದಿರಿಪೆಯುಂ, ಕೇಸರಿ ಕೇಸರಿಯಂ ಕಂಡ ಕಾಡಾನೆಯಂ ತೋಸರಿಸೆಯುಂ, ವಜ್ರಧರನಧರನಾಗೆಯುಂ, ಭದ್ರಂ ಭದ್ರಗಜದ ಕಣ್ಮುಟ್ಟಿನೊಳಿರ್ದ ಫಣಿಯಂತೆ ಮಣಿಯೆಯುಂ, ಸುಭದ್ರನಭದ್ರನೆನಿಸೆಯುಂ, ನಂದನಂ ರಣರಸಾ ಸ್ವಾದನಾನಂದನಮನುಟಿಯೆಯುಂ, ಅವಾರ್ಯವೀರ್ಯಂ ಶೌರ್ಯಂಗಿಡೆಯುಂ, ಮಾರಿದ ತ್ತನನುದಾತ್ತನೆನಿಸೆಯುಂ, ಲಂಬೋಷ್ಠಂ ರಕ್ಷರಕ್ಷ ರವ ಮುಕ್ತೋಷ್ಠನಾಗೆಯುಂ, ಪ್ರೌಷ್ಠಿಲಂ ಪ್ರತಿಷ್ಠೆಗಿಡೆಯುಂ, ಮತ್ತಂ ಪೆಱರುಮಱಿಕೆಯ ನರೇಂದ್ರನಂದನರ್ ಪಾವಡರ್ದ ಪಂದೆಯಂತೆವೆಮಿಡುಕದಿರೆಯುಂ—

ಮ ॥ ಅತಿವೀರ್ಯಂ ಹತವೀರ್ಯನಾದನಿವನಂ ಕೊಂಡುಯ್ದಪೆಂ ದೋಷ ದೂ ।
ಷಿತನಂ ದೋರ್ಬಲಮುಳ್ಳರುಳ್ಳೊಡೆನಗಡ್ಡಂಬರ್ಪುದೆಂದಭ್ರ ಗ॥
ರ್ಜಿತಮೆಂಬಂತಿರೆ ಗರ್ಜಿಸುತ್ತುಮೆಟಿದುಯ್ದಂ ಲಕ್ಷ್ಮಣಂ ಹಸ್ತ ಪಾ ।
ದ ತಲೋದ್ಘಟ್ಟನದಿಂ ಪಡಲ್ವಡಿಸುತುಂ ಮಾಱಾಂತ ಸಾಮಂತರಂ ॥ ೩೧ ॥

ಕಡುಕೆಯ್ವಂ ಭರತಂಗಿವಂ ಗಡ ರಣಕ್ರೀಡಾ ರಸಕ್ಕಟ್ಟಿಗಂ ।
ಗಡ ಸಾಕೇತ ಪುರಾಧಿರಾಜ ಪದಮಂ ಕೈಕೊಳ್ವೆನೆಂದೆತ್ತುವಂ ॥
ಗಡ ದುರ್ಲೇಖಮನಟ್ಟುವಂ ಗಡೆನುತುಂ ಱೋಡಾಡಿ ಪುಲ್ಗೋಡನಂ ।
ಪಿಡಿದುಯ್ವಂತೆವೊಲುಯ್ದನಪ್ರತಿಹತಂ ಸೌಮಿತ್ರಿ ಶತ್ರುಂಜಯಂ ॥ ೩೨ ॥

ಅಂತತಿವೀರ್ಯನನಂತವೀರ್ಯನೆಟಿದು ತಂದೊಪ್ಪಿಸುವುದುಂ—

ಶಾ ॥ ಏವೇಟ್ಟಿಂ ಬಲನಿಂ ಕೃಪಾಳು ಪೆಱರಾರಾದ್ರೋಹನಂ ಕಂಡು ರೋ ।
ಷಾವೇಶಂ ತನಗಾದುದೇ ಭರತನಂ ಶತ್ರುಘ್ನನಂ ಕಂಡು ನಂ ॥
ದ್ಯಾವರ್ತಕ್ಕಧಿರಾಜನಾಗಿ ಸುಖದಿಂ ನೀನಿರ್ಪುದೆಂದಂ ಪರಾ ।
ರ್ಥಾವಷ್ಟಂಭಮನಪ್ಪುಕೆಯ್ದವರ್ಗೆ ಮೈತ್ರೀಭಾವಮಾಶ್ಚರ್ಯಮೇ ॥ ೩೩ ॥

ಕಂ ॥ ಅರಸುತನದಟ್ಟಿ ಪಿಂಗಿದು
ದು ರಾಜ್ಯಮಂ ನಿಮ್ಮ ಮೆಚ್ಚಿದವರ್ಗೀವುದಿದಂ ॥
ಪರಿಹರಿಸಿದೆನಾನಿನ್ನೆಂ
ದು ರಾಮಲಕ್ಷ್ಮಣರನಾ ನೃಪಂ ಕ್ಷಮೆಗೊಂಡಂ ॥ ೩೪ ॥

1. ದಿರಿಯೆಯುಂ. ಚ.

ಅಂತು ನಿಶ್ಶಲ್ಯನಾಗಿ ಪೋಗಿ ಶ್ರುತಧಾರಣ ಭಟ್ಟಾರಕರ ಪದಪಾರ್ಶ್ವದೊಳ್—

ಕಂ ॥ ಬೆರ್ಚಿಸೆ ತನ್ನಂ ಕೃಷ್ಣಂ
ಬೆರ್ಚಿಸಿದಂ ಕೃಷ್ಣತನಯನಂ ಜಿನರೂಪಿಂ ॥
ಕೆರ್ಚೀರಿದ ವೈರಾಗ್ಯದ
ಪೆರ್ಚಿಂ ಮುಯ್ಯಂ ಮಗುಟ್ಟುವಂತತಿವೀರ್ಯಂ ॥ ೩೫ ॥

ಚ ॥ ನಿಜಭುಜ ವೀರ್ಯ ಹಾನಿಗೆ ತಪಂಬಡೆ ತಂದೆ ಮಗಂಗೆ ರಾಜ್ಯಮಂ ।
ವಿಜಯರಥಂಗೆ ರಾಮನೊಸೆದೀವುದುಮಾತನ ತಂಗೆಯೊಳ್ ಜಗ ॥
ದ್ವಿಜಯಿಗೆ ಲಕ್ಷ್ಮಣಂಗೆ ರತಿಮಾಲೆಯೊಳಾಯ್ತು ವಿವಾಹಮುತ್ಸವ ।
ಧ್ವಜ ಮಣಿತೋರಣಂ ತುಱುಗೆ ಘೂರ್ಣಿಸೆ ಮಂಗಲತೂರ್ಯ ನಿಸ್ವನಂ॥ ೩೬ ॥

ಆ ವಿವಾಹ ವಿಧಾನಾನಂತರಂ ನಂದ್ಯಾವರ್ತ ನಗರಮನಗಲ್ದು ನಿಚ್ಚವಯಣಂಗಳಿಂ ಕ್ಷೇಮಾಂಜಲಿ ಪುರಕ್ಕೆ ಬಂದಾ ಪೊಟಲ ಪೊಱವೊಟಲ ಮನೋಹರೋದ್ಯಾನದೊಳ್ ದಾಶರಥಿಯುಂ ವೈದೇಹಿಯುಂ ವಿಶ್ರಮಿಸಿರ್ಪುದುಂ, ತತ್ಪುರ ನಿರೀಕ್ಷಣ ನಿಮಿತ್ತಂ ಲಕ್ಷ್ಮಣಂ ರಾಜವೀಥಿಯೊಳಗನೆ ಬರುತ್ತುಮಿರೆ ಪಲರುಮೊಂದೆಡೆಯೊಳಿರ್ದು ಜಿತಪದ್ಮೆಯ ಪಡೆಮಾತಂ ನುಡಿಯುತ್ತುಮಿರೆ ಕೇಳ್ದು ಲಕ್ಷ್ಮಣಂ ಜಿತಪದ್ಮೆಯೆಂಬಳಾರ್ಗೆಂಬುದುಮಾತನ ಸಮುದ್ರಘೋಷಮನಜನಿಸುವ ಗಂಭೀರ ಸ್ವರದೊಳಂ ಭದ್ರಾಕಾರದೊಳಮಿಂತಂ ಕಾರಣಪುರುಷನಾಗಲೆವೇಟ್ಟುಮೆಂದು ನಿಶ್ಚಯಿಸಿ ಪುರಾಣ ಪುರುಷನೊರ್ವನಿಂತೆಂದಂ—

ಕಂ ॥ ಜನಪತಿ ಶತ್ರುಂದಮನಾ
ತನರಸಿ ಕನಕಾಭೆ ತತ್ತನೂಜೆ ಸರೋಜಾ ॥
ನನೆ ಮಸೆದ ಕುಸುಮ ಸಾಯಕ
ಮೆನಿಪಳ್ ಜಿತಪದ್ಮೆ ಪೆಸರೊಳಂ ರೂಪಿನೊಳಂ ॥ ೩೭ ॥

ಆ ಕನ್ಯಾರತ್ನಂ ಪುಟ್ಟಲೊಡನತ್ತ ಶಸ್ತ್ರಶಾಲೆಯೊಳೊಂದು ಶಕ್ತಿ ಪುಟ್ಟಿದುದಾ ಸಮಯದೊಳೊಂದಾಕಾಶವಚನಮಿಂತೆಂದುದೀ ದೇವತಾಧಿಷ್ಠಿತಮಪ್ಪ ಶಕ್ತಿಯಿಂ ಶತ್ರುಂದಮನಿಡುವುದುಮದಂ ಸಂಚಲಿಸದೆ ಬಂಚಿಸಿ ಪಿಡಿದ ಮಹಾಸತ್ವನೀ ರಮಣಿಗಂ ದಕ್ಷಿಣ ಭರತ ಧರಣೀ ರಮಣಿಗಂ ರಮಣನಕ್ಕುಮೆಂಬ ದೇವತಾದೇಶಮಂ ಕೇಳ್ದಾತನಾ ತೆಱದಿನಲ್ಲದೆ ಕಲ್ಯಾಣೋತ್ಸವಮಂ ಮಾಡೆನೆಂದಿರೆ ಕನ್ಯಾಲೋಭದನನೇಕ ರಾಜಸುತರ್ ಬಂದೀಶಕ್ತಿ ಪ್ರಹಾರದಿಂ ಯಮಾಗಾರಮನೆಯ್ದಿದರೆಂದುಪೇಟೆ ಲಕ್ಷ್ಮಣಂ ಕೇಳ್ದದಂ ಗಹನಂಗೆಯ್ಯದಾತನರಮನೆಯ ಬಾಗಿಲ್ಗೆ ಬಂದು ಪಾರ್ಥಿವ

ಪುತ್ರನೊರ್ವಂ ಕನ್ಯಾರ್ಥಿ ಬಂದನೆಂದು ನಿಮ್ಮರಸಂಗಱಿಪೆಂದು ಪಡಿಯಱನ ನಟ್ಟುವುದುಮವಂ ಬಂದು ಬಿನ್ನವಿಸೆ ಬರವೇಟಿಂಬುದುಂ—

ಕಂ ॥ ಸಿರಿಯ ಹರಿನೀಲ ವೇದಿಯ
ನುರಸ್ಥಲಂ ಬೀರಸಿರಿಯ ಮರಕತ ಮಣಿವಿ ॥
ಷ್ಪರಮಂ ಭುಜದ್ವಯಂ ಪೋ
ಲ್ತಿರೆ ಪೊಕ್ಕುಂ ರಾಜಸಭೆಯನಭಯನುಪೇಂದ್ರಂ ॥ ೩೮ ॥

ಅಂತಂಜನ ದಿಕ್ಕುಂಜರದಂತೆ ಬರುತಿರ್ಪುದುಂ—

ಚ ॥ ತನು ಶುಭೆಲಕ್ಷಣಕ್ಕೆ ತವರಾದುದು ನೀಱನೆ ಕಂತುರಾಜನೀ ।
ತನ ತೆಱದಿಂದವಿಾತನೆ ಪೊಡರ್ಪಿನ ಶಕ್ತಿಗೆ ದರ್ಪಭಂಗಮಂ ॥
ಜನಿಯಿಸಲಾರ್ಪನೆನ್ನಸುತೆಗೀತನೆ ವಲ್ಲಭನಕ್ಕುಮೆಂದು ಕ ।
ಣ್ಮನದೊಡನೆಕ್ಕೆಯಿಂ ಪರಿಯೆ ನೋಡಿದನಾ ನೃಪನಬ್ಜನಾಭನಂ ॥ ೩೯ ॥

ಅಂತು ಬಂದು ನೃಪನ ಕೆಲದೊಳಿರ್ದ ಕನ್ಯಾರತ್ನಕ್ಕೆ ಮನಮೆಱಗೆಯು ಮಾತಂಗೆಱಗದೆ ತನಗಿಕ್ಕಿದ ಮಣಿಮಯಾಸನದೊಳ್ ಕುಳ್ಳಿರ್ಪುದುಂ ಕುಮಾರನ ನಿರುಪಮಾಕಾರಮಂ ನೋಡಿ ಕನ್ನೆ ಕಣ್ಪೇಟಂಗೊಂಡು—

ಕಂ ॥ ಜಿತಪದ್ಮೆ ಕಂತುಶರ ಪೀ
ಡಿತ ಜೇತಃಪದ್ಮೆ ಜನಕ ಶಸ್ತ್ರಾಹತಿಯಿಂ ॥
ಹತನಾದೊ[1]ಡೀತನೀತನ
ಗತಿ ಗತಿಯೆನಗೆಂದು ಚಿತ್ತದೊಳ್ ತಱಿಸಂದಳ್ ॥ ೪೦ ॥

ಆ ಸಮಯದೊಳ್ ಶತ್ರುಂದಮಂ ಸೌಮಿತ್ರಿಗಿಂತೆಂದಂ:—ನಿನ್ನಸಕಲಭುವನಾದೇಯಮಪ್ಪ ರೂಪಂ ನೋಡಿ ಮೊಗಂ ನೋಡದಮೋಘಶಕ್ತಿಯಿಂದಿಡಲಿನಗೆ ಬಗೆ ಬಂದಪುದಿಲ್ಲ; ನೀನೀ ಕನ್ನೆಯಾಸೆಯನುಱಿದು ಮಗುಟಿ ಬಿಜಯಂಗೆಯ್ವುದೆನೆ—

ಕಂ ॥ ನಿನ್ನಿಡುವ ಶಕ್ತಿಯಳವುಮ
ನೆನ್ನಳವುಮನೀಗಳಿಂತೆ ತೋರ್ಪಂ ಬೇಗಂ ॥
ತನ್ನಿಮೆನೆ ದೃಷ್ಟಿ ವಿಷಫಣಿ
ಸನ್ನಿಭಮಂ ಶಸ್ತ್ರಶಾಲೆಯಿಂದಂ ತಂದರ್ ॥ ೪೧ ॥

ಅಂತು ತಂದು ವಿವಿಧಾರ್ಚನೆಯಿನರ್ಚಿಸಿ ಮಂತ್ರಪೂತಂ ಮಾಡಿ ಶಸ್ತ್ರಮಂ ಪಿಡಿದು ಸಮಾಹಿತಮತಿಯಾಗೆಂದನತಿದೂರದೊಳಿರಿಸಿ ಸರ್ವಶಕ್ತಿಯಿನಿಡುವುದುಂ—

1. ಡೀತನಲ್ಲದೆ ಗತಿಯಿಲ್ಲೆನಗೆಂದು. ಘ.

ಕಂ ॥ ಕಡೆಗಾಲದ ಸಿಡಿಲಂತಿರೆ
ಕಿಡಿಯಂ ಕಾಱುತ್ತೆ ಕೇಱಿ ಬರೆ ಬಂಚಿಸಿ ತ ॥
ನ್ನೆಡಗೈಯಿಂ ಶಕ್ತಿ ಬಲಂ
ಗಿಡೆ ಪಿಡಿದಿಟ್ಟವನ ಶಕ್ತಿಯಂ ತಲೆವಿಡಿದಂ ॥ ೪೨ ॥

ಆ ಸಮಯದೊಳ್—

ಕಂ ॥ ಪೂಮಟಿಗಳ್ ಕಱಿದುವು ಕುಸು
ಮಾಮೋದಂ ಬಳಸೆ ಭೃಂಗ ರವದೊಡನೆ ದಿಶಾ ॥
ವ್ಯೋಮಾಂತರಮಂ ಸುರ ಭೇ
ರೀ ಮಂದ್ರ ಧ್ವಾನ ಘನರವಂ ಪುದಿವಿನೆಗಂ ॥ ೪೩ ॥

ಪರಿಕಿಸವೇಟ್ಪುದೆ ಲಕ್ಷ್ಮೀ
ಧರನಳವನವಾರ್ಯ ವೀರ್ಯನಾತಂಗೀ ದು ॥
ರ್ಧರ ಶಕ್ತಿ ಗ್ರಹಣಮದಾ
ವರಿದಾಯ್ತೆಂದಮರ ಸಮಿತಿ ಪೊಗಲ್ದತ್ತಾಗಳ್ ॥ ೪೪ ॥

ಅಂತು ಪೊಗಲ್ದ ದಿವ್ಯಧ್ವನಿಯಿಂ ಲಕ್ಷ್ಮಣನೆಂದಱಿದು—

ಕಂ ॥ ಕ್ಷ್ಮಿಯಿಸುವುದೆನ್ನ ಗೆಯ್ದಱಿ
ಯಮೆಗೊರ್ಮಿಂಗೆಂದು ಚಕಿತ ಚಿತ್ತಂ ಶತ್ರುಂ ॥
ದಮನಾಗಳ್ ಸೌಮಿತ್ರಿ
ಕ್ರಮಕ್ಕೆ ವಿಕ್ರಮನನುಟ್ಟಿದು ವಿನಮಿತನಾದಂ ॥ ೪೫ ॥

ಅನಂತರಂ ಸೌಮಿತ್ರಿಯಂ ವಿಚಿತ್ರ ವಸ್ತ್ರಾಭರಣಂಗಳಿಂದರ್ಚಿಸಿ, ಬಹಿರುದ್ಯಾನದೊಳುದಾತ್ತ ರಾಘವನಿರ್ದುದಂ ಲಕ್ಷ್ಮಣಂ ಪೇಟಿ ಕೇಳ್ದು ಕಿಱಿದಾನುಂ ಬಲಂ ಬೆರಸು ಪಾದಮಾರ್ಗದಿಂ ರಾಮಸ್ವಾಮಿಯಲ್ಲಿಗೆ ಬಂದುಪಾಯನಪುರಸ್ಸರಂ ಸರ್ವಾಂಗ ಪ್ರಣತನಾಗಿ ಸೀತಾದೇವಿಗಂ ತುಟಿಲ್ಗೆಯ್ದು ವಂದನಮಾಲಾ ಮನೋಹರಮುಂ ಧ್ವಜರಾಜಿ ವಿರಾಜಿತಮುಂ ಮಂಗಲಾನಕ ಧ್ವಾನ ಭರಿತ ಭುವನಾಂತರಾಲಮುಮುಪಹಾರ ಕುಸುಮ ಮತ್ತ ಮಧುಕರ ಝುಂಕಾರ ಮುಖರಮುಮಪ್ಪ ಪುರಮನರ ಮನೆಯುಮನತಿವಿಭೂತಿಯಿಂ ಪುಗಿಸಿ ಸಮಯೋಚಿತ ವಿವಿಧೋಪಚಾರ ಪರಿಚರ್ಯ ಚಾತುರ್ಯಮಂ ಮೆಱೆದು ಶುಭದಿನಮುಹೂರ್ತದೊಳ್—

ಕಂ ॥ ಪರಿಣಯನಮಾಗೆ ಪದ್ಮೋ
ದರಂಗೆ ಜಿತಪದ್ಮೆಯೊಡನೆ ಮಂಗಲ ಗೀತ ॥
ಸ್ವರದೊಡನೆ ಮಂಗಲಾನಕ
ವಿರುತಿ ಪಳಂಚಿದುದು ಗಗನ ದಿಗವನಿತಲಮಂ ॥ ೪೬ ॥

ಅಂತಲ್ಲಿ ಕತಿಪಯ ದಿನಮಿರ್ದಾ ಮೂವರುಂ ಪೂರ್ವಾಭಿಮುಖದಿಂ ಪಯಣಂ ಬೋಗಿ ವಂಶಸ್ಥಲಮೆಂಬ ಪೊಬಿಲನೆಯ್ದಿ ತತ್ಪವಿಾಪದ ವಂಶಸ್ಥಲ ಗಿರಿದರೀ ದೇಶಮಂ ದಿವಸಾವಸಾನ ಸಮಯದೊಳೆಯ್ದಿ ದೆಸೆಗೆಟ್ಟೋಡುವ ಪೌರಜನಮಂ ರಘುವೀರಂ ಕಂಡಿದೇಕಾರಣಮೋಡಿದಪುದೆಂದು ಬೆಸಗೊಳ್ವುದುಮಿಂದಿಂಗೆ ಮೂಱುದಿನಂ ಮೊದಲ್ಗೊಂಡು ರಾತ್ರಿಸಮಯದೊಳೀ ಶಿಖರಿ ಶಿಖರದೊಳತಿಭಯಂಕರಮುಮತ್ಯದ್ಭುತಮುಮಾಗೆ ಪಲವು ಸಿಡಿಲ ದನಿಗಳೊಂದಾದಂತಶ್ರುತಮಪ್ಪದೊಂದು ರೌದ್ರ ಧ್ವನಿಯಂ ಕೇಳ್ದಂಜಿ ಪೊಬಿಲೆಲ್ಲಂ ಯಥಾಯಥಮಾಗೋಡಿದಪ್ಪುದೆಂದು ಪೇೞ್ವುದುಮಾ ಧ್ವನಿಗೆಯ್ವರಾರೆಂಬುದನಾರಯ್ವೆಮೆಂದಾನಗಮನೇೞ್ದು ನೋೞ್ಪಾಗಳಲ್ಲಿ ಚತುರ್ಮುಖ ಪ್ರತಿಮಾ ಯೋಗದೊಳ್ ನಿಂದು ಶುಭಧ್ಯಾನಮನಪ್ಪುಕೆಯ್ದು ಮಹರ್ಷಿಯರಂ ಕಂಡೆಯ್ದವರ್ಪುದುಮವರಂ ಸುತ್ತಿ ಸುಯ್ಯುತ್ತಿರ್ದ ವಿಷಮ ವಿಷೋರಗಂಗಳು ಮಾಪಾದಮಸ್ತಕಂಬರಮೆಡೆವೞಿಯದೆ ಮುಸುರಿ ಮುತ್ತಿರ್ದ ವಿಷಮವೃಶ್ಚಿಕಂಗಳುಂ ರಾಮಲಕ್ಷ್ಮಣರ ಪುಣ್ಯಪ್ರಭಾವದಿನದೃಶ್ಯಮಪ್ಪುದುಮಾ ಪರ್ವತದ ಸುಗಂಧ ಕುಸುಮಂಗಳಿಂದಮವರನರ್ಚಿಸುತ್ತುಮಿರೆ ನೇಸರ್ಪಡುವುದುಮತಿ ರೌದ್ರಮಪ್ಪ ಭೂತ ಬೇತಾಳ ಸಮೂಹಮುಮನತಿಭಯಂಕರಮಾಗೆ ಗಜಿೞ್ ಗರ್ಜಿಸುವ ಸಿಂಹ ಶರಭ ಶಾರ್ದೂಲಂಗಳುಮನತ್ಯದ್ಭುತಮುಮಗುರ್ವುಮಾಗೆ ಮಿಂಚುಂ ಮೊಬಿಗುಂ ಬೆರಸು ಸುರಿವ ಬಿಸುನೆತ್ತರ ಮಟೆಯುಮುಂ ವಿಗುರ್ವಿಸೆ—

ಕಂ ॥ ಪರಮ ಜಿನಮುನಿಗೆ ಯೋಗಾಂ
ತರಾಯಮಮರೋಪಸರ್ಗದಿಂದಕ್ಕುಮೆ ನಿ ॥
ಷ್ಕರ ಮಾರುತ ಹತಿಯಿಂದಂ
ತರು ಸಂಚಲಿಪಂತೆ ಮೇರು ಸಂಚಲಿಸುಗುಮೇ ॥ ೪೭ ॥

ಅಂತಾ ಮುನಿಗೆ ಮಹೋಪಸರ್ಗಮುಂ ಮಾಪ್ಪ ದೇವನ ಮಹಾರೌದ್ರಾನುಭಾವಮಂ ಕಿಡಿಸಲೆಂದು ತಮ್ಮ ದೇವತಾಧಿಷ್ಠಿತ ಧನುರ್ಯುಗಳಮನೇೞ್ಪಿಸಿ—

ಚ ॥ ಕೆಡೆದುದೊ ಮಂದರಂ ಧರೆಗೆ ಬಿೞ್ದುದೊ ಭಾನುರಥಂ ನಭಸ್ಸ್ಥಲಂ।
ಪಿಡಿಸಿದುದೋ ಧರಿತ್ರಿ ಮೊಬಿಗಿತ್ತೊ ಮಹಾಪ್ರಲಯಾನಲಾರ್ಚಿಯಿಂ ॥
ದೊಡೆದುದೊ ವಜ್ರವೇದಿಕೆಯೆನಲ್ ನಭಮಂ ಪುದಿದತ್ತು ನೀವಿ ಜೇ।
ವೊಡೆಯೆ ಬಲಾಚ್ಯುತರ್ ತ್ರಿಭುವನೈಕಭಯಂ ಕೃತ ಚಾಪ ಟಂಕೃತಂ॥ ೪೮ ॥

ಆರೌದ್ರಧ್ವನಿ ಕರ್ಣಲಗ್ನಮಾಗೆ ಭಗ್ನಾಶಯನಗ್ನಿಪ್ರಭಂ ಹತಪ್ರಭನಾಗಿ ವಿಭಂಗ ಜ್ಞಾನದಿನಿವರೆಂಟನೆಯ ಬಲದೇವ ವಾಸುದೇವರೆಂದಱಿದು ನಿಜ ಜ್ಯೋತಿರ್ಲೋಕಮನೋಡಿ ಪೊಕ್ಕನಿತ್ತಲ್—

ಕಂ॥ ತ್ರಿದಶೋಪಸರ್ಗಮಂ ಬಗೆ
ಯದೆ ಕುಲನಗದಂತೆ ದೇಶಭೂಷಣ ಮುನಿಪರ್ ॥
ಸದಮಲ ಶುಕ್ಲಧ್ಯಾನದೊ
ಳುದಾತ್ತರಿರೆ ಘಾತಿಗಾಯ್ತು ಕದಳೀಘಾತಂ ॥ ೪೯ ॥

ಅಂತು ವಿಗತ ಘಾತಿಚತುಷ್ಟಯರನಂತ[1]ಜ್ಞಾನಾದಿ ನವ ಕೇವಲಲಬ್ಧಿವಡೆವುದುಂ—

ಕಂ॥ ದುಂದುಭಿ ನಿನಾದ ಮುಖರಂ
ಮಂದಾರ ನಮೇರು ವಿಕಚ ಕುಸುಮಾಸಾರಂ ॥
ಸಂದಿಸೆ ಕೇವಲಿ ಪೂಜೆಗೆ
ಬಂದತ್ತು ಚತುರ್ನಿಕಾಯ ದೇವನಿಕಾಯಂ ॥ ೫೦ ॥

ಅಂತು ಬಂದು ಪೂಜಿಸುವುದುಮುದಾತ್ತರಾಘವಂ ಕಿಂಚಿದುನ್ನಮಿತ ಕಂಧರಂ ಮುಕುಲಿತಾಂಜಲಿ ಪುಟಂ ನಿಮಗುಪಸರ್ಗಮಾದ ಮಾರ್ಗಮುಂ ಬೆಸಸಿಮೆನೆ ದೇಶ ಭೂಷಣ ಕೇವಲಿಗಳಿಂತೆಂದು ಬೆಸಸಿದರ್:— ಪದ್ಮಪುರಮನಾಳ್ವ ವಿಜಯಪರ್ವತ ಕ್ಷ್ಮಿಪತಿಯ ಚರ[2]ನಮೃತಸ್ವರನೆಂಬನಾತನ ಕುಲಾಂಗನೆಗೆ ತನಯರುದಿತನುಮನುದಿ ತನುಮೆಂಬರಾದರಾಕೆಯೊಡನಾಪುರದ ವಸುಭೂತಿವೆಸರ ವಸುಧಾಮರಂ ಮಱೆ ವಾಟುತ್ತುಮಿರಲುಪಭೋಗ ರಾಗ ವೇಗದಿಂ ವಿವೇಕ ವಿಕಲೆಯಾಗಿ ಮುಂದಱಿಯ ದೊಂದುದಿವಸಂ ತನ್ನವರನಮೃತಸ್ವರನಿರೆ ನಮಗೆ ಮೆಚ್ಚದಂತೆ ನೆಗಟಿಲ್ಲಾರದೆಂಬು ದುಮಾಪಾಣ್ಬನಮೃತಸ್ವರನಂ ದುರಿತ ಭೀರುವಾಗದಾರುಮಱಿಯದಂತೆ ಕೊಲ್ವು ದುಂ—

ಕಂ॥ ಅಪವಾದಕ್ಕಗಿಯದೆ ನರ
ಕ ಪಾತಮಂ ಬಗೆಯದಾ ಮಹಾಪಾತಕಿ ಮು ॥
ನ್ನುಪಪತಿಯಿಂ ಪತಿಯಂ ಕೊಲಿ
ಸಿ ಪುತ್ರವಧೆಗಂ ಬಟ್ಟಿಕ್ಕೆ ಬಗೆಯಂ ತಂದಳ್ ॥ ೫೧ ॥

ಸ್ವೈರಿಣಿ ಬಗೆಬಂದಾಗಳೆ
ಮಾರಕ್ರೀಡೆಯನೊಡರ್ಚಲೆಂದುಪಪತಿಯಂ
ದಾರಕನಂ ಕೊಲವೇೞ್ದಿಳ್
ದಾರುಣ ಕರ್ಮಕ್ಕೆ ಕಾಮುಕರ್ ಪೇಸುವರೇ ॥ ೫೨ ॥

---

1. ಜ್ಞಾನದಿಂ ನವ ಕೇವಲಲಬ್ಧಿಗಳಂ ಪಡೆವುದುಂ. ಗ. ಘ.
2. ನಮೃತೇಶ್ವರ. ಚ.

ಅಂತು ಪೇಳ್ವುದುಮಾಮಾತನಾಕೆಯ ಸೊಸೆ ಕೇಳ್ದು ತನ್ನ ಪುರುಷನಪ್ಪುದಿತಂ
ಗೆ ಪೇಟಿ ವಸುಭೂತಿಯ ಪೆಂಡತಿಯಪ್ಪ ರತಿಕಾರಿಣಿಯುಮಿರ್ಷ್ಯೆಯಿಂದದನೆ
ಪಿಸುಣ್ಬೇಟಿ ಕೇಳ್ದುದಿತನುಮನುದಿತನುಂ ವಿದಿತ ವೃತ್ತಾಂತರಾಗಿ ವಸುಭೂತಿ
ಗುಪಾಯದಿನಪಾಯಮುಂ ಮಾಟ್ಪುದುಮವಂ ಸತ್ತು ಶಾರ್ದೂಲಾಸ್ಯಮೆಂಬ ಮಹಾ
ಗಹನದೊಳ್ ಕಾಲಜಂಘನೆಂಬ ಶಬರನಾಗಿ ಪುಟ್ಟಿದನೆಂದು ಪೇಟ್ಪು ಮತ್ತಮಿಂ
ತೆಂದು ಬೆಸಸಿದರಾ ಪದ್ಮಪುರದುದ್ಯಾನದೊಳ್ ಸುಮತಿವರ್ಧನರೆಂಬಾಚಾರ್ಯರ್
ಬಂದಿರ್ದರೆಂದು ಋಷಿನಿವೇದಕನಱಿಪೆ ವಿಜಯಪರ್ವತ ಮಹಾರಾಜಂ ಪೂಜೆ
ವೆರಸು ಬಂದರ್ಚಿಸಿ ಪೊಡೆವಟ್ಟು ಕುಳ್ಳಿರ್ದು ಧರ್ಮಮಂ ಕೇಳ್ದು ವೈರಾಗ್ಯಪರನಾಗಿ
ದೀಕ್ಷೆಗೊಳ್ವಂದೊಡನೆ ಸಹೋದರರಪ್ಪುದಿತನುಮನುದಿತನುಂ ದೀಕ್ಷೆಗೊಂಡು ತೀರ್ಥ
ವಂದನಾರ್ಥಂ ಸಮ್ಮೇದಶೈಲಕ್ಕೆ ಪೋಗುತ್ತಿರ್ಪ ಸಮಯದೊಳಾ ಮುನಿ ಯುಗಳ
ಮಂ ಕಂಡು ಭವ ಬದ್ಧ ಕ್ರೋಧದಿಂ ಕಾಲಜಂಘಂ ಕೊಲಲತಿಜಂಘಾಲನಾಗಿ
ಮುಟ್ಟಿವರ್ಪುದುಮವರವನ ಧೂರ್ತ ಚೇಷ್ಟೆಯನಱಿದು—

ಕಂ ॥ ಉಪಸರ್ಗಂ ಪಱಿಪಡುವಿನ
ಮುಪಘನಮಾಹಾರಮೆಂಬಿವಂ ತೊಱೆದು ಸಮುಂ ॥
ತುಪಶಾಂತರ್ ಕೈಯಿಕ್ಕಿರೆ
ಕೃಪಾಳು ತತ್ಪತಿ ದುರಾತ್ಮನಂ ಬಾರಿಸಿದಂ ॥ ೫೩ ॥

ಎಂದು ಬೆಸಸೆ—

ಕಂ ॥ ಅನಿತು ದಯಾಪರತೆ ಕಿರಾ
ತ ನಾಯಕಂಗಾದುದಾವ ಕಾರಣದಿನದಂ ॥
ಮುನಿಮುಖ್ಯ ಬೆಸಸಿಮೆನೆ ದಿ
ವ್ಯನಾದದಿಂ ದಿವ್ಯಯೋಗಿ ಹಲಿಗಿಂತೆಂದಂ ॥ ೫೪ ॥

ಯಕ್ಷನಾಮ ಗ್ರಾಮವಾಸಿಗಳೀಕೋದರರ್ ಸುರೂಪನುಂ ಕರುಷನುಮೆಂಬ
ರಲ್ಲಿಗೊರ್ವಂ ವ್ಯಾಧನೊಂದು ಪಕ್ಕಿಯಂ ಪಿಡಿತರೆ ಕರುಣಿಸಿ ಬೇಡಂಗೆ ಬೆಲೆಗುಡಿಸಿ
ಬಿಡಿಸಿದೊಡಾ ಪಕ್ಷಿಯುಪಶಮಕ್ಕೆ ಪಕ್ಕುಗೊಟ್ಟುಸುವಂ ಬಿಟ್ಟು ಬೇಡವಟ್ಟಗೊಡೆಯ
ನಾದುದಾ ಸುರೂಪನುಂ ಕರುಷನುಂ ಕಟಿದುದಿತನುಮನುದಿತನುಮಾಗಿ ಪುಟ್ಟಿದ
ರಾತನುಂ ಮುನ್ನಿನುಪಕಾರಂ ಕಾರಣಮಾಗೆ ಕೊಲಲೀಯದೆ ನಿಯಮಿಸಿದನೆಂದು
ಬೆಸಸಿ ಮತ್ತಮಿಂತೆಂದರ್—

ಕಂ ॥ ಸದಮಲ ಚರಿತಂತಮ್ಮಿಂ
ದುದಿತೋದಿತಮಾದುದೆನಿಸಿ ಸಂನ್ಯಸನದೆ ಸ ॥
ತ್ತುದಿತಾನುದಿತ ಮುನೀಶ್ವರ
ರುದಾತ್ತರುತ್ಕೃಷ್ಟ ದೇವಗತಿಯಂ ಪಡೆದರ್ ॥ ೫೫ ॥

ಮುತ್ತಿತ್ತಲವರ್ಗಪಾಯಮಂ ಬಗೆದ ಬೇಡಂ ವಿಗತಾಸು ದುರಂತ ದುರ್ಗತಿ ಯೊಳ್ ತೊಟಿಲ್ದೆಂತಾನುಂ ಮನುಷ್ಯಗತಿವೆತ್ತು ತಾಪಸನಾಗಿ ಸತ್ತಾತಂ ಜ್ಯೋತಿ ರ್ಲೋಕದೊಳಗ್ನಿಪ್ರಭನೆಂಬ ದೇವನಾದನಿತ್ತ ಭರತಕ್ಷೇತ್ರದರಿಷ್ಟಪುರಮನಾಳ್ವ ಪ್ರಿಯ ವ್ರತಮಹೀಭುಜಂಗೆ ಪದ್ಮಾವತಿಯುಂ ಕನಕಾಭೆಯುಮೆಂಬರಿರ್ವರರಸಿಯರಾದರಲ್ಲಿ ಪದ್ಮಾವತಿಗೆ ಮುನ್ನಮಮರಗತಿವಡೆದುದಿತಾನುದಿತರಿರ್ವರುಂ ಬಂದು ರತ್ನರಥ ವಿಚಿತ್ರರಥರೆಂಬ ತನಯರಾದರಾ ಜ್ಯೋತಿಷ್ಕನಲ್ಲಿಂ ಬಂದು ಕನಕಾಭೆಗೆ ತನೂಭವ ನನುಂದರನೆಂಬನಾದನಾ ಪ್ರಿಯವ್ರತನುಂ ತನ್ನ ಮಕ್ಕಳ್ಗರಸುತನಮಂ ಕೊಟ್ಟು ತೊಱೆದಾಱುದಿವಸಂ ಸಂನ್ಯಸನಂಗೆಯ್ದು ಸಮಾಧಿ ಮರಣದಿಂ ಸ್ವರ್ಗಕ್ಕೆ ಪೋದನಿತ್ತ ಲರಸುಮಗನೊರ್ವಂ ನಿಜತನೂಭವೆಯಂ ಶ್ರೀಪ್ರಭೆಯಂ ರತ್ನರಥಂಗೆ ಮದುವೆ ಮಾಟ್ಪೆನೆಂದಿರ್ದುದುಮಾಕೆಯನನುಂದರಂ ತನಗೆ ಬೇಡಿ ಪಡೆಯದೆ ಕೂಸುಗುಡ ದಾತನಮೇಲೆತ್ತಿ ಬರ್ಪುದುಂ ರತ್ನರಥನುಂ ವಿಚಿತ್ರರಥನುಂ ಕೇಳ್ದು ಮುಳಿದು ದಾಟಿಯಿಟ್ಟು ಸುತ್ತಿ ಮುತ್ತಿ—

ಕಂ ॥ ಪಿಡಿದು ಪರಿಭವಿಸಿ ಕೊಲ್ಲದೆ
ಕಡಂಗಿ ಪೊಱಮಡಿಸಿ ಕಳೆದು ನಾಡಿಂ ದೈನ್ಯಂ ॥
ಬಡಿಸಿದೊಡನುಂದರಂ [1]ಬ
ಲ್ಪಿಡಿದೇವದಿನುಗ್ರಕೋಪಿ ತಾಪಸನಾದಂ ॥ ೫೬ ॥

ಇತ್ತಲಾ ರತ್ನರಥ ವಿಚಿತ್ರರಥರ್ ಚಿರಕಾಲಮರಸುಗೆಯ್ಯುತ್ತಿರ್ದು ವೈರಾಗ್ಯದಿಂ ತೊಱೆದು ತಪಂಗೆಯ್ದು ಶರೀರಭಾರಮನಿಟ್ಟಿಪಿ ನಾಕಲೋಕ ಸುಖಮನನುಭವಿಸಿ ಬಂದು ಸಿದ್ಧಾರ್ಥನಗರಮನಾಳ್ವ ಕ್ಷೇಮಂಕರ ನರೇಂದ್ರಂಗಂ ವಿಮಲಾದೇವಿಗಂ ದೇಶಭೂಷಣ ಕುಲಭೂಷಣರೆಂಬ ತನಯರಾಗಿರ್ದುದುಮೆಮ್ಮನೆಮ್ಮ ತಂದೆ ವಿದ್ಯಾ ಭ್ಯಾಸ ನಿಮಿತ್ತಂ ಮತ್ತೊಂದು ಪುರದೊಳಿರಿಸೆ ಸಕಲವಿದ್ಯೆಗಳುಮಂ ಸಾಗರಘೋಷ ರೆಂಬುಸಾಧ್ಯಾಯರ್ ಕಲಿಸೆ ಕಲ್ತು ಗುರುಗೃಹಾಗಮನ ಪೂಜಾನಂತರಂ ಮಹಾ ವಿಭೂತಿಯಿನೆಮ್ಮ ಪುರಮಂ ಪುಗುವ ಸಮಯದೊಳ್ ಕೈಗೆಯ್ದು ಕರುವಾಡದ ಮೇಲಿರ್ದ ಕನ್ನೆಯಂ ಕಂಡೆಮಗೆ ಪರಿಣಯನಕ್ಕೆ ತಂದರಸುಮಗಳೆಂದು ಬಗೆದು ಬಯಸಿ ನೋಡುತ್ತರಮನೆಯಂ ಪೊಕ್ಕೆಮ್ಮೊಡವುಟ್ಟಿದಳಿಂದಱಿದು ಪೊಲ್ಲದಂ ಬಗೆದೆ ವೆಂದು ಅದುವೆ ನಿರ್ವೇಗ ನಿಮಿತ್ತಮಾಗೆ ತೊಱೆದು ತಪಂಬಟ್ಟು ಚಾರಣ ಋದ್ಧಿವಡೆದು ಪೋಗಲೊಡಮೆಮಗೆ ಮೂಱುಂಜನ್ಮದೊಳಂ ಜನಕನಾದ ನಿರತಿ ಶಯ ಪ್ರೇಮಾನುಬಂಧದಿಂ ಕ್ಷೇಮಂಕರ ಮಹಾರಾಜನೆಮ್ಮಗಲ್ಕೆಗೆ ಸೈರಿಸಲಾರದೆ

---

1. ಬಲ್ಲಿಡಿದೇವಮನುಗ್ರಕೋಪಿ. ಘ. ; ಬಲ್ಲೆಡಿದೇವನುದಗ್ರ. ಗ; ಬಲ್ಲಿಡಿದಿವಮನುಜಗ್ರ. ಚ.

ಆಹಾರ ಶರೀರ ನಿವೃತ್ತಿಗೆಯ್ದು ಮುಡಿಪಿ [1]ಗರುಡಾಧಿಪನಾಗಿ ಮಹಾಲೋಚನಾಭಿಧಾನಮಂ ಪಡೆದೀಗಳೆಮ್ಮ ಕೇವಲ ಪ್ರಾಪ್ತಿಯನಱಿದು ಪೂಜಿಸಲ್ ಬಂದನೆಂದು ಬೆಸಸಿ—

ಕಂ ॥ ತಾಪಸ ರೂಪಂವಿಗತಾ
ಲಾಪಂ ಮುಂ ಪೇೞ್ದನುಂದರಂ ಕೌಮುದಿಯೆಂ ॥
ಬಾಪುರಮನಗಲದಿರ್ಪಂ
ಕೌಪೀನಧರಂ ಜಟಾಧರಂ ದಂಡಧರಂ ॥ ೫೭ ॥

ಆ ಪುರಪತಿ ಪೊಗೞ್ವುದುಮಾ
ತಾಪಸನಂ ಮದನ ವೇಗೆ ತತ್ಪತಿಗೆ ಮರು ॥
ಚ್ಛಾಪದೊಳಮಧಿಪ ಮಿಥ್ಯಾ
[2]ರೂಪದೊಳಂ ಮಾಡದಿರ್ ಗುಣಾರೋಪಣಮಂ ॥ ೫೮ ॥

ಎನೆ ಸುಮುಖಂ ವಿಮುಖನಾಗೆ—

ಸ್ವಾಗತ ॥ ಕೆಮ್ಮನುಮ್ಮಳಿಸಿ ಕೋಪಿಸದಿರ್ ಮಾಣ್ ।
ನಿಮ್ಮನುಜ್ಞೆ ದೊರೆಕೊಂಡೊಡೆ ಸಾಲ್ಗುಂ ॥
ನಿಮ್ಮ ನಚ್ಚಿನ ತಪೋಧನನಂ ತಂ ।
ದೆಮ್ಮ ಕಾಲ್ಗೆಱಗುವಂತಿರೆ ಮಾಟ್ಪೆಂ ॥ ೫೯ ॥

ಎಂದೊಡಂಬಡಿಸಿ ನಿಜ ತನೂಜೆಯನೇಕಾಂತಕ್ಕೆ ಕರೆದು ತಾಪಸನ ತಪಮುಂ ಕೆಡಿಸುವುಪಾಯಮುಂ ಕಲಿಸಿ ಕಟಿಪುವುದುಂ—

ಕಂ ॥ ಜನನಿಯ ಬೆಸದಿಂ ಸಮ್ಮೋ
ಹನ ವಿದ್ಯೆಯೆ ಮೂರ್ತಿಗೊಂಡು ಬರ್ಪಂತೆವೊಲಾ ॥
ಮುನಿಯಿರ್ದೆಡೆಗೊರ್ವಳೆ ಪೂ
ವಿನ ಪೊಟ್ಟುಱೊಳಾರುಮಿಲ್ಲದೆಡೆಯೊಳ್ ಬಂದಳ್ ॥ ೬೦ ॥

ಆ ಸಮಯದೊಳ್ ಸೂಕ್ತಮುಂ ಜಪಿಯಿಸುತಿರ್ದಾಕೆಯ ಕಾಲ ಪಳಂಚಿನುಂಗುರದಿಂಚರಮತನುಚಾಪ ಟಂಕಾರದಂತೆ ಕಿವಿಯಂ ಪಳಂಚೆ ಜಪಮುಂ ಮಱೆದು ಕಣ್ಣುಂ ತೆಱೆದು ನೋಡಿ ಘನ ಸ್ತನಾದ್ಯವಯವಂಗಳ ಭಂಗಿ ತಪೋಭಂಗಮುಂ ಮಾಡೆ—

---

1. ಗರುಡವಾಹನಾಭಿಧಾನಮುಂ. ಕ. ಖ. ಚ. 2. ಲಾಪ. ಕ. ಘ.

ಕಂ ॥ ಸ್ಮರ ರಾಗಂ ಮನದೊಳ್ ಬೇ
ರ್ವರಿವಿನೆಗಂ ಬ್ರಹ್ಮಚರ್ಯ ನಿಷ್ಠಾಗರಿಮಂ ॥
ಕರಗುವಿನಮೆಳಸೆ ಕಣ್ಗಳ್
ವರಾಕ ಭಿಕ್ಷಾಕನಾಕೆಗಂದಿಂತೆಂದಂ ॥ ೬೧ ॥

ನೀನೀ ಸಂಜೆಯೊಳಂಜದೆ ನೆರಮಿಲ್ಲದೆ ಬಂದ ಬರವಾವುದೆಂಬುದುಮೆಮ್ಮಬ್ಬೆ ನೆವಮಿಲ್ಲದೆನಗೆ ಮುನಿದು ಜಡಿದು ನುಡಿಯೆ ಬಂದು ನಿಮ್ಮಂ ಕಂಡು ಸಂತೋಷದಂತನೆಯ್ದಿದೆನೆನಗೆ ನಿಮ್ಮ ದೀಕ್ಷೆಯಂ ಕುಡುವುದೆನೆ ದಿಟವೆಂದು ಬಗೆದಿದಾವ ಗಹನಮಿಾಗಳೆ ಕೈಕೊಳ್ಳಿಂಬುದುಮಾಕೆ ನಾಂ ಕುಡಗೂಸಪ್ಪೆನದು ಕಾರಣದಿನೆಮ್ಮ ತಾಯಲ್ಲಿಗೆ ಪೋಗಿ ಬೇಡಿಮೆನೆ ಪೆತ್ತ ಮಗಳನೆಮಗೆ ಕುಡಲಱಿಯರೆಂಬುದುಮಾನರಸಿ ನಡಪಿದ ಕುಡಗೂಸೆನೆನ್ನಂ ಕುಡುವರೆಂಬುದುಂ ತಾಪಸಂ [1]ಮದನ ಸಂತಾಪನ ಶರಪಾತಕ್ಕೆ ಸುಗಿದು ಕೈವಿಡಿಯ[2]ಲಡಹಡಿಸುವುದುಂ ನೀಮೇಕೆ ತುರಿಪಂಗೆಯ್ವಿರೆ ಮ್ಮರಸಿಯಂ ಪ್ರಾರ್ಥಿಸಿ ಪೊಡೆವಟ್ಟು ಬೇಡಿಕೊಂಡು ವಿಧಿಪೂರ್ವಕಂ ಮದುವೆನಿಲ್ಪುದೆಂದೊಡಂಬಡೆ ನುಡಿದೊಡಗೊಂಡು ಪೋಪುದುಂ—

ಕಂ ॥ ಕನ್ನೆಯ ಬಱಿಸಂದಿನನೆಂ
ಬನ್ನಂ ಮನಸಿಜನ ಪೂವಿನಂಬಿನ ಮಱೆಯೊಳ್ ॥
ಕನ್ನೆಯ ಬಱಿಸಂದಂ ಮುನಿ
ತನ್ನ ತಪಸ್ತೇಜದೆಸಕಮೊಳಸೋರ್ವಿನೆಗಂ ॥ ೬೨ ॥

ಅಂತು ರಾತ್ರಿಸಮಯದೊಳ್ ರಾಜಪುತ್ರಿಯ ಬಱಿವಿಡಿದು ಬಂದು ರಾಜಸದನಮಂ ಪೊಕ್ಕು ಮದನವೇಗೆಗೆ ಕೈಗಳಂ ಮುಗಿದು ನಿಮ್ಮನಡಪಿದ ಮಗಳಪ್ಪನಾಗದತ್ತೆಯನೆಮಗಿತ್ತು ಕನ್ಯಾದಾನ ಫಲಮಂ ಪಡೆವುದೆಂದು ಸರ್ವಾಂಗ ಪ್ರಣತನಾಗಿರ್ಪುದುಮಾ ಸಮಯದೊಳರಸನರಸಿಯಲ್ಲಿಗೆ ಬಂದು ಗೊರವನಿರವು ಕಂಡು ಕಡುಮುಳಿದು ಪಲತೆಱದಿಂ ಪರಿಭವಿಸೆ ಪೊಱಮಡಿಸಿ ಕಳೆಯೆ—

ಕಂ ॥ ಪರಿಭವಮಂ ಪೊರ್ದಿದ ದು
ಷ್ಪರಿಣತಿಯಿಂ ಕಱಿಪಿ ಕಾಲಮಂ ದುರ್ಗತಿಯೊಳ್ ॥
ತಿರಿತಂದು ಮನುಜ ಗತಿಯೊಳ್
ದುರಂತ ದುಷ್ಕರ್ಮ ಫಲಮನನುಭವಿಸುತ್ತುಂ ॥ ೬೩ ॥

---

1. ಮದನ ಸಂತಾಪನ ಸಮ್ಮೋಹನ ಶರ ತಾಪಕ್ಕೆ. ಘ.
2. ಲಡಹರಿ. ಚ.

ಮತ್ತಂ ತಾಪಸ ರೂಪಂ ಕಳೆದು ಕಾಯ ಕ್ಲೇಶದ ಫಲದಿಂ ಜ್ಯೋತಿಲ್ಲೋಕ ದೊಳಗ್ನಿಪ್ರಭನೆಂಬ ದೇವನಾದನಿತ್ತಲನಂತವೀರ್ಯ ಕೇವಲಿಗಳ ಪೂಜೆಗೆ ಬಂದ ದೇವ ಸಭೆಯೊ[1]ಳೊರ್ವ ದೇವಂ ಮುನಿಸುವ್ರತ ತೀರ್ಥಕರ ಭಟ್ಟಾರಕರ ತೀರ್ಥ ಸಂತಾನ ದೊಳ್ ನಿಮ್ಮಂತೆ ಕೇವಲಿಗಳಾಗಿ ಧರ್ಮೋಪದೇಶಂಗೆಯ್ವರಾರೆಂದು ಬೆಸಗೊಳ್ವುದುಂ–

ಕಂ ॥ ಜಲಜಲಿಸೆ ದಶನ ಕಿರಣಾ
ವಲಿ ಮೃದು ಮಧುರ ಪ್ರಣಾದದಿಂ ಕೇವಲಿ ಕೇ ॥
ವಲಲಬ್ಧಿ ದೇಶಭೂಷಣ
ಕುಲಭೂಷಣ ದಿವ್ಯಮುನಿ ಯುಗಕ್ಕುಕ್ಕುಮೆನಲ್ ॥ ೬೪ ॥

ಅದನಾ ಸಭೆಯೊಳಿರ್ದಗ್ನಿಪ್ರಭದೇವಂ ಕೇಳ್ದಿಮ್ಮೊಳಾದ ಜನ್ಮಾಂತರ ವೈರಮುಂ ವಿಭಂಗಜ್ಞಾನದಿಂದಱಿದೀಗಳೆಮಗೆ ಯೋಗ ವಿಘ್ನೋದ್ಯೋಗದೊಳಿರ್ದು ನೀಂ ಪುಣ್ಯ ಪುರುಷನುಂ ಚರಮದೇಹಧಾರಿಯುಮಪ್ಪುದಱಿಂದೀತಂ ನಿನ್ನ ಮುಳಿಸಿಂಗೆ ಭೀತ ನಾಗಿ ಮುನ್ನಿನ ತನ್ನ ಮುಳಿಸನುಬಿದುಪಶಾಂತ ಸ್ವಾಂತನೀ ಸಭೆಗೆ ಬಂದಿರ್ದ ನೆಂದು ರಾಘವಂಗೆ ಬೆಸಸುವುದುಮದೆಲ್ಲಮುಂ ಗರುಡಾಧಿಪಂ ಕೇಳ್ದು ಸಂತೋಷ ದಂತಮನೆಯ್ದಿ—

ಉ ॥ ಮತ್ತನಯೋಪಸರ್ಗಮನದಿರ್ಪಿದ ನಿನ್ನ ಗುಣಪ್ರತಿಜ್ಞೆ ಲೋ ।
ಕೋತ್ತರಮಾಯ್ತು ನಿನ್ನ ಸಮಯ ಪ್ರತಿಪಾಲನ ಶೀಲ ಶಕ್ತಿ ಸಂ ॥
ಪತ್ತಿಗೆ ಮೆಚ್ಚಿದೆಂ ನೆನೆವುದುಂ ನೆನೆದಾಗಳೆ ಬರ್ಪೆನೆಂದು ಮೆ ।
ಚ್ಚಿತ್ತನಿದೇನಮಾನುಷಮೊ ರಾಘವ ಸಂಚಿತ ಪುಣ್ಯಸಂಚಯಂ ॥ ೬೫ ॥

ಮ॥ಸ್ರ॥ನರನಾಥಂಗಿತ್ತು ತನ್ನಂ ನೆನೆದ ಸಮಯದೊಳ್ ಬರ್ಪೆನಾನೆಂದು ಮೆಚ್ಚಂ।
ಚರಿತಾರ್ಥಂ ಭಕ್ತಿ ಭಾರಾನತ ಮಣಿಮಕುಟಂ ಹರ್ಷ ಬಾಷ್ಪಾಂಬುವರ್ಷಂ ॥
ಗರುಡಂ ಬೀಱಿಕ್ಕೊಂಡು ತತ್ಕೇವಲಿಯ ಪದಪಯೋಜಂಗಳಂ ತನ್ನ ತೊಟ್ಟಾ।
ಭರಣ [2]ಪ್ರದ್ಯೋತಿಯಿಂದಸ್ಖಲಿತಮೆನೆ ನಭಂ ತನ್ನ ಲೋಕಕ್ಕೆ ಪೋದಂ॥ ೬೬ ॥

ಕಂ ॥ ಭೂವಂದ್ಯ ದೇಶ ಭೂಷಣ
ಕೇವಲಿಗಳ ಸಮವಸೃತಿ ವಿಹಾರಿಸಿದುದು ಭ ॥
ವ್ಯಾವಲಿಗಳನಾರ್ಯಾಖಂ
ಡಾವನಿಯೊಳ್ ತಣಿಪಲೆಂದು ಧರ್ಮಾನ್ವಿತದಿಂ ॥ ೬೭ ॥

---

1. ಳೊರ್ವಂದೇವ ಮುನಿ ಸುವ್ರತಮುನಿ ಭಟ್ಟಾರಕರ. ಗ.
2. ಪ್ರದ್ಯೋತಿ ವಂಶಸ್ಖಳಿತಮೆನೆ ನಭಚರಂ. ಚ.

ತದನಂತರಂ ವಂಶಸ್ಥಲಪುರಮನಾಳ್ವ ಸುಪ್ರಭನರೇಂದ್ರಂ ಬಂದು ರಾಮ ಲಕ್ಷ್ಮಣರಂ ಪೂಜಿಸಿ ವಂಶಸ್ಥಲ ನಗೋಪರಿಮ ತಲದೊಳ್ ವಿಚಿತ್ರ ಚೈತ್ಯ ಭವನಂ ಗಳಿಂ ಬಹು ಪ್ರಾಕಾರ ಪ್ರಾಸಾದ ಪಙ್ಕ್ತಿಗಳನೇಕಾಂತ ಕಮನೀಯಮಪ್ಪಂತು ಪೊಟಿಲಂ ಮಾಡಿಸಿ ರಾಮಲಕ್ಷ್ಮಣರನಾ ಪೊಳಲೊಳಿರಿಸಿ ಬೆಸಕೆಯ್ಯುತ್ತಿರೆ ವಂಶ ಸ್ಥಲ ಗಿರಿಗೆ ರಾಮಗಿರಿಯೆಂಬ ಸೆಸರಾಯ್ತು; ಮತ್ತಮವರಲ್ಲಿಂ ತಳರ್ದು ತೆಂಕ ಮೊಗದೆ ನಿಚ್ಚವಯಣಂಗಳಿಂ ಬಂದು ಪೆರ್ವಟಿವಂ ಪೊಕ್ಕು ಕರ್ಣರವೆಯೆಂಬ ತೊಜಿಯಂ ಪಾಯ್ದುದಜಿ ತೆಂಕಣತಡಿಯೊಳೊಂದು ರಮ್ಯಪ್ರದೇಶದೊಳ್ ವಿಶ್ರಮಿ ಸಿರ್ಪುದುಮಲ್ಲಿಗೆ [1]ಸುಗುಪ್ತಿ ಗುಪ್ತರೆಂಬ ಗಗನ ಚಾರಣ ಯುಗಲಂ ಗಗನ ತಲದಿ ನವನಿತಲಕ್ಕವತರಿಸಿ ಮಾಸೋಪವಾಸದ ಪಾರಣೆಯೊಳ್ ಕಾಂತಾರ ಚರ್ಯೆಗೆಬರ್ಪುದು ಮವರಂ ದೂರದೊಳ್ ಕಂಡು—

ಮ॥ಸ್ರ॥ ದೆಸೆಯಂ ಭೂಷಾಂಶುಗಳ್ ಚಿತ್ರಿಸೆ ಪದತಲಮಾತ್ಮೀಯ ಶೋಣಾಂಶುವಿಂದ।
ರ್ಚಿಸೆ ಧಾತ್ರೀ ದೇವಿಯಂ ಸಂಭ್ರಮ ರಸವಶನೇಟ್ಟಿಂದು ಸದ್ಭಕ್ತಿಯಿಂ ವಂ॥
ದಿಸಿ ರಾಗೋತ್ಕಂಠನುಚ್ಚಾಸನದೊಳಿರಿಸಿ ದಿವ್ಯಾರ್ಚನಾ ದ್ರವ್ಯದಿಂದ।
ರ್ಚಿಸಿದಂ ಸಾಹಿತ್ಯ ವಿದ್ಯಾಧರನಮಲಯಶಂ ಭಾರತೀ ಕರ್ಣಪೂರಂ ॥ ೬೮ ॥

ಇದು ಪರಮ ಜಿನಸಮಯ ಕುಮುದಿನೀ ಶರಚ್ಚಂದ್ರ ಬಾಲಚಂದ್ರ
ಮುನೀಂದ್ರ ಚರಣನಖ ಕಿರಣ ಚಂದ್ರಿಕಾ ಚಕೋರ ಭಾರತೀ
ಕರ್ಣಪೂರ ಶ್ರೀಮದಭಿನವಪಂಪ ವಿರಚಿತಮಪ್ಪ
ರಾಮಚಂದ್ರ ಚರಿತ ಪುರಾಣದೊಳ್
ಚಾರಣ ಯುಗಲ ದರ್ಶನವರ್ಣನಂ
ಅಷ್ಟಮಾಶ್ವಾಸಂ

ಕಂ ॥ ಶ್ರೀ ಪದಮನೀವ ಮುನಿಪ
ಶ್ರೀಪದಮಂ [1]ಪರಮಭಕ್ತಿಯಿಂದರ್ಚಿಸಿ ಪು ॥
ಣ್ಯೋಪಾರ್ಜನಮಂ ತಳೆದನಿ
ಳಾಪೂಜಿತ ಚಾರು ಚರಿತನಭಿನವಪಂಪಂ ॥ ೧ ॥

ಅಂತರ್ಚಿಸಿ ವಿಧಿಪೂರ್ವಕಂ ನಿರವದ್ಯಾಹಾರಮುಂ ಕುಡುವುದುಮವರ್ ಸಂಯಮ ಸಂರಕ್ಷಣಾರ್ಥಮಪ್ಪ ಕಾಯಸ್ಥಿತಿಯಂ ನಿರ್ವರ್ತಿಸಿ ಕೈಯೆತ್ತಿಕೊಂ [2]ಡಕ್ಷಯಂ ದಾನಮೆಂಬುದುಂ—

ಕಂ ॥ ಏನೆಸೆದುದೊ ರೈವೃಷ್ಟಿ ಹಿ
ಮಾನಿಲನಳಿ ಮಿಲಿತ ಕುಸುಮವರ್ಷಂ ಸುರ ಭೇ ॥
ರೀನಿನದಂ ದಿವಿಜರಹೋ
ದಾನಶ್ರುತಿ ನೆಗಟೆ ನೆಗಟ್ದ ಪಂಚಾಶ್ಚರ್ಯಂ ॥ ೨ ॥

ಆಗಳವರ ತಪಸ್ಸಾಮರ್ಥ್ಯಕ್ಕೆ ರಾಮಾದಿಗಳ್ ರೋಮಾಂಚ ಕಂಚುಕಿತ ದೇಹರಾಗಿ ಧರ್ಮಕಥಾ ಶ್ರವಣ ಪ್ರಸಂಗದೊಳಿರ್ಪುದುಮವರಿದಿರೊಳಿರ್ದ ವಿಶಾಲ ಸಾಲದ್ರುಮ ಶಾಖಾರೂಢನಾಗಿರ್ದು—

ಉ ॥ ಪೋದ ಭವ ಪ್ರಪಂಚದಜಿತಂ ಮುನಿ ದರ್ಶನಮಾತ್ರದಿಂ ಮನ ।
ಕ್ಕಾದೊಡೆ ಪಾಪ ಸಂಚಯಮನಿನ್ನಪವರ್ತಿಪೆನೆಂದು ಬಂದು ಪಾ ॥
ದೋದಕದೊಳ್ ಪೊರಳ್ದ ಕನಕಪ್ರಭೆವೆತ್ತು ಪದೋಪಕಂಠ ಲ ।
ಗ್ನೋದರ ಮಸ್ತಕಂ ವಿನತಮಿರ್ದುದು ಪರ್ದುಪಶಾಂತ ಚೇತಸಂ ॥ ೩ ॥

ಆಗಳದಂ ಕಂಡು ರಾಘವಂ ಅವರ ತಪಸ್ಸವೃದ್ಧಿಯಂ ಸೀತಗಂ ಸೌಮಿತ್ರಿಗ ಮಭಿವರ್ಣಿಸಿ ಮುನಿಗೆ ಮುಗಿದ ಕೈವೆರಸು ಹಿತಾಹಿತ ವಿವೇಕ ವಿಕಲಮುಂ ವಿಜಾತಿಯುಮಪ್ಪ ವಿಹಂಗಮುಪಶಮಕ್ಕೆ ಬಂದ ಕಾರಣಮೇನೆಂಬುದುಂ, ಚಾರಣ ಋಷಿಯರಿಂತೆಂದು ಬೆಸಸಿದರೀ ಮಹಾಗಹನಂ ಮುನ್ನಂ ಕರ್ಣಕುಂಡಲ ಪ್ರಮುಖ ನಿಖಿಲಗ್ರಾಮಾಕೀರ್ಣಮದನಾಳ್ವಂ ದಂಡಕನೆಂಬರಸನಾತನ ಪೆಂಡತಿ ದುರ್ಮನಸ್ಕೆ ಮಸ್ಕರಿ ಸಮಯಮಂ ಪಿಡಿದಿರ್ಪಳಾದಂಡಕನುಮೊರ್ಮೆ ಪುರಬಹಿಃಪುರದೊಳ್

1. ಪಂಚ ಮುಷ್ಟಿಯಿಂ ವಂದಿಸಿ. ಕ. ಚ.
2. ಡಕ್ಷಯ ದಾನಮಸ್ತೆಂಬುದುಂ. ಗ. ಘ.

ಕಲ್ಲೆಲೆನಿಂದ ಮಹಾಋಷಿಯರಂ. ನೋಡುತ್ತುಂ ಪೋಗಿ ಬೇಂಟೆವಡೆಯದೆ ಬಂದ ವಿವೇಕಿಯಪ್ಪುದಱಿಂದವರಕೊರಲೊಳಿೊಂದು ಸತ್ತ ಪಾವಂ ಸುತ್ತಿ ಪೋದೊಡ ವರುಪಸರ್ಗಂ ಪಿಂಗುವಿನಂ ಕೈಯೆತ್ತೆವೆಂದಿರೆ ಮತ್ತೊಂದು ದಿವಸಮಾ ದೆಸೆಯನೆ ಮೃಗಯಾ ನಿಮಿತ್ತಂ ದಂಡಕಂ ಪೋಗುತ್ತುಮೊರ್ವನವರಕೊರಲೊಳಿರ್ದ ಕಾಳೋರಗನ ಕಳೇಬರಮಂ ಕಳೆವುದಂ ಕಂಡಱಿಯದಂತಿದೇನೆಂದು ಬೆಸಗೊಳ್ವುದುಂ—

ಕಂ ॥ ಆರೆಂದುಮಱಿಯೆನೊರ್ವಂ
ಕ್ರೂರಾತ್ಮಂ ದಿವ್ಯ ಮುನಿಗಿದಂ ಮಾಡಿ ದುರಾ ॥
ಚಾರಂ ನರಕಾಯುಷ್ಯ
ಕ್ಕಾರಂಬಿಗನಾದನೆಂದು ಬೆಟ್ಟುಱಿ ನುಡಿದಂ ॥ ೪ ॥

ದಂಡಕನಾ ನುಡಿಗೆ ಭಯಂ
ಗೊಂಡಂ ಯತಿಪತಿಯ ಧೈರ್ಯಮುಂ ಕಂಡು ಗುಣಂ ॥
ಗೊಂಡಂ ಪದಾನತಂ ಕ್ಷ್ಮೆ
ಗೊಂಡಂ ಭವ್ಯಂಗೆ ಸಹಜಮುಪಶಮಭಾವಂ ॥ ೫ ॥

ಕ್ಷಮಿಯಿಸುವುದೆನ್ನ ಗೆಯ್ದಱಿ
ಯವೆಗೆಂದಡಿಗೆಱಿಗೆ ದಂಡಕಂ ಮುನಿ ನುಡಿದಂ ॥
ಕ್ಷಮಿಯಿಸುವುದೆ ಮುಖ್ಯಂ ಸಂ
ಯಮಕ್ಕೆ ನಿಶ್ಯಲ್ಯನಲ್ಲದಂ ಸಂಯಮಿಯೇ ॥ ೬ ॥

ಚ ॥ ಎಡಪಿದ ಕಲ್ಗೆ ತಾಗಿದ ಮರಕ್ಕೆನಿಸಂ ಮುನಿಸಂ ಮನಕ್ಕೆ ತ।
ರ್ಪೊಡೆ ತರಲಕ್ಕುಮನ್ಯರೊಳಮನ್ಯಭವಂಗಳೊಳಾರ್ತ ರೌದ್ರದಿಂ ॥
ದೊಡರಿಸಿದಾತ್ಮಕರ್ಮಫಲಮಂ ತವಿಪಲ್ಲಿ ಸಹಾಯ ವೃತ್ತಿಯಂ ।
ಪಡೆವ ಸುಹೃಜ್ಜನಕ್ಕೆ ಮುನಿಪಂ ಮುನಿದಂದು ಕೃತಘ್ನನಲ್ಲನೇ ॥ ೭ ॥

ಎಂದಹಿಂಸಾ ರೂಪಮಪ್ಪ ಧರ್ಮಮನುಪದೇಶಂಗೆಯ್ಯೆ ದಂಡಕನದಂ ಕೈಕೊಂಡಾ ಕ್ರಮದೊಳೆ ನಡೆಯುತ್ತುಮಿರೆ—

ಕಂ ॥ ಅರಸಿಯುಮಮಾತ್ಯನುಂ ಪಾ
ಪ ರತರ್ ಮಧು ಮದ್ಯ ಮಾಂಸ ಸೇವಾಸಕ್ತರ್ ॥
ನಿರವದ್ಯಮನರಸನ ಸ
ಚ್ಚರಿತ್ರಮಂ ಕಿಡಿ[1]ಸಲೆಂದು ಮಂತಣಮಿರ್ದರ್ ॥ ೮ ॥

---

1. ಸುವಂತು. ಚ.

ಅಂತು ತಮಗಪಾಯಮನೊಡರ್ಚುವುಪಾಯಮುಂ ಚಿಂತಿಸಿ—

ಕಂ ॥ ಕಳವಂ [1]ಮಿಥ್ಯೆಯನೇಱಿಸಿ
ಕಳತ್ರದೊಳ್ ಪೊಲ್ಲಕೆಯ್ದರೆಂದಿಲ್ಲದುದಂ ॥
ಗಟಿಪಿದೊಡೆ ದಂಡಕಂ ಕಡು
ಮುಳಿದಂ ಋಷಿಯರ್ಗೆ ಮಾಯೆ ಮೋಹಿಸದಾರಂ ॥೯॥

ಪಟಿಗಂಜದೆ ಕರ್ಣೇಜಪ
ರಟಿನುಡಿ ದಿಟವೆಂದೆ ಡಂಗುರಂಬಡಿಯಿಸಿ ಕಾ ॥
ಪಟಿಯೆ ಪೊಱಮಡಿಸಿ ಕಳೆದಂ
ಪೊಟಲಿಂದವಿಚಾರಿ ಜೈನಮುನಿ ಸಂಕುಲಮಂ ॥೧೦॥

ಅಂತು ಋಷಿರೂಪನೂರಂ ಪೊಕ್ಕೊಡೆ ಕೊಲ್ವೆನೆಂದಾಣತಿಯಿಟ್ಟು ಪೊಱಮಡಿಸಿ ಕಳೆವುದುಂ—

ಕಂ ॥ ಅಱಿಯದೆ ಪೊಟಲಂ ಪುಗೆ ಕೆಲ
ರಿಱುಗುಲಿ ಋಷಿಯರ್ಗೆ ಮುನಿದು ತನ್ನಾಜ್ಞೆಗೆ ಬೆ॥
ಟ್ಟುಱಿರೆಂದು ಕೊಂದು ಪಾತಕಿ
ತೆಱೆದಂ ಪುಗಲೆಂದು ನಿರಯದರರೀ ಪುಟಮಂ ॥೧೧॥

ಅಂತು ಋಷಿವಧೆಗೆಯ್ದುತ್ಕಟಮಪ್ಪ ಪಾಪಮಂ ಸದ್ಯಃಫಲರೂಪಮಂ ದಂಡಕನುಪಾರ್ಜಿಸುವುದುಮಿತ್ತ ಮತ್ತೊಂದು ದಿವಸಮಾಪುರಕ್ಕೆ ಮಹಾತಪೋಧನರೇಕವಿಹಾರಿಗಳ್ ಬರುತ್ತುಮಿರೆ ಮಾರ್ಬಟ್ಟಿಯೊಳೊರ್ವಂ ಕಂಡು ಮಗುಟಿ ಬಿಜಯಂಗೆಯ್ಯಿಮೆನಲದೇಕಾರಣಮೆಂಬುದುಮಿಂಪೊಟಲನಾಳ್ವ ನೃಪಂ ನಿಷ್ಕಾರಣಮನೇಕಋಷಿಸಂಘಾತಮಂ ಘಾತಿಸಿದನೆಂಬುದುಮಾನುಡಿಯೊಳೊಗೆದ ಕರುಣಾರಸಮೆಕಲುಷ ಕಿಂಪಾಕ ಬೀಜಮನಂಕುರಿತಮಾಡೆ—

ಮ ॥ ಅರಸಾಂ ಬಾರಿಪರೆನ್ನನಾರೆನಗೆ ಚಾತುರ್ದಂತಮುಂಟೆನ್ನ ದೋಃ।
ಪರಿಘಂ ದುರ್ಧರಮೆಂದು ಸಾಧುಜನಮಂ ನಿಷ್ಕಾರಣಂ ಕೊಂದನೇ ॥
ದುರಿತಕ್ಕಂಜನೆ ದುರ್ಯಶಕ್ಕಗಿಯನೇ ಪೇಟೆಂದು ಕರ್ಣ್‌ಕೆಂಕಮಾ।
ಗಿರೆ ಪುರ್ವರ್ವೆ ಪೊದಟ್ಟಿದಾಮುನಿಗೆ ಸರ್ವಗ್ರಾಸಿ ಕೋಪಾನಲಂ ॥೧೨॥

---

1. ಮಿಥ್ಯೆಯಿ. ಚ 2. ಜ. ಗ.

ಕಂ ॥ ಅರಸನನರಸಿಯ ನೂರಂ
ಪರಿಜನಮುಂ ನಾಡನಡವಿಯಂ ಬೆಟ್ಟೊಳಗಾ ॥
ಗಿರೆ ಮುನಿ ತೇಜೋವೃದ್ಧಿಯಿ
ನುರಿಪಿದನಣಕಕ್ಕೆ ಸವಣನುಂ ಸೈರಿಪನೇ ॥ ೧೩ ॥

ಮ ॥ ಸಕಲತ್ರಂ ಕ್ಷಣಮಾತ್ರದಿಂ ವಿಲಯ ವಹ್ನಿ ಜ್ವಾಲೆವೋಲ್ ಸುಟ್ಟು ದಂ ॥
ಡಕನಂ ನಂದಿದುದಿಲ್ಲ ಪೇಟಿ ಪೆಸರಿಲ್ಲೆಂಬನ್ನೆಗಂ ವಂಶ ರಾ ॥
ಜಕಮಂ ವಾಮಭುಜಾಗ್ರದೊಳ್ ಮುನಿಯ ತೇಜೋವೃದ್ಧಿಯಿಂದಾದ ಪಾ ।
ವಕನಾಸ್ವಾದಿಸಿದತ್ತಿದೇವಿರಿದೊ ಪೇಟೂ ಪಾತಕಂಗೆಂಬಿನಂ ॥ ೧೪ ॥

ಕಂ ॥ ಸುಡುವುದು ಕಿರ್ಚಲ್ಲದೆ ಗತಿ
ಗಿಡಿಸದು ಕೋಪಾಗ್ನಿ ಸುಟ್ಟುವೊಡಲಂ ಗತಿಯಂ ॥
ಗಿಡಿಸಿದುದಾ ಯತಿಗೆನಲೇಂ
ಪಡೆಮಾತಱಿವುಳ್ಳನುಟಿಯದಿರ್ಪನೆ ಮುಳಿಸಂ ॥ ೧೫ ॥

ಅಂತು ಸಾಧುಸಂಘವಧೆಗೆಯಿಸಿದ ವಧುವುಮಮಾತ್ಯನುಂ ವಧಕನಪ್ಪ ದಂಡಕನುಂ ಕ್ರೋಧಕ್ಕೆ ಸಂದ ತಪೋಧನನುಮಘೋಗತಿಗೆ ಸಂದರಾ ದಂಡಕಂ ನರಕ ದಂಡನೆಗೊಳಗಾಗಿ ಬಟಿಯಂ ದುರ್ಗತಿಗಳೊಳ್ ತೊಟಲ್ದೀಗಳ್ ಪರ್ದಾಗಿರ್ದ ನೆನೆ ಕೇಳ್ದದರ್ಕೆ ಖಗಂ ಖೇದಿಸೆ ನೀಂ ಮುನ್ನಮಱಿವುನೆಱೆಯದೆ ನರಕಾದಿ ದುಃಖ ಮನನುಭವಿಸಿದೆ; ನೀನೀಗಳೆಮ್ಮಂ ಕಂಡ ದೂಸಱಿಂ ಕರ್ಮಬಂಧಂ ಶಿಥಿಲವಾದು ದೆಂದದಱಿ ಮನೋವಿಷಾದಮಂ ಕಳೆದದರ್ಕೆ ಲಬ್ಧಿ ದೊರೆಕೊಂಡುದೆಂದಱಿದು ಸಮ್ಯಗ್ದರ್ಶನ ಪೂರ್ವಕಮಣುವ್ರತಮಂ ಕೊಟ್ಟು ರಾಮಲಕ್ಷ್ಮಣರುಮಂ ಸೀತೆಯುಮಂ ಪರಸಿ ಗಗನಚಾರಣರ್ ಪೋಪುದುಂ—

ಚ ॥ ಎನಗಿದು ಕಂದನೆಂದು ಗಳ ಕಂದಳದೊಳ್ ಚರಣದ್ವಯಂಗಳೊಳ್ ॥
ಜನಕಜೆ ಕಂಠಿಕಾ ವಲಯಮುಂ ಮಣಿ ನೂಪುರಮುಂ ತೊಡರ್ಚಿ ಮಂ ॥
ಡನದ ಮಯೂಖ ಲೇಖೆ ಜಡೆಗೊಂಡು ಮಡಲ್ತು ಕವಲ್ತ ಲರ್ಚಿ ದೃ ।
ಗ್ವನರುಹಮಂ ಜಟಾಯುವೆಸರಾದುದದರ್ಕೆ ರಘು ಪ್ರವೀರರಿಂ ॥ ೧೬ ॥

ಅಂತು ರಾಮಲಕ್ಷ್ಮಣರ್ ಸುಗುಪ್ತ ಗುಪ್ತ ಗಗನಚಾರಣರ ತಪಸ್ಸಾಮರ್ಥ್ಯ ದರ್ಶನ ಬಲದಿಂ ಕೃತಾರ್ಥರಾಗಿ ಮಱುದಿವಸಂ ದಂಡಕಾರಣ್ಯದೊಳಗನೆ ದಕ್ಷಿಣಾಭಿ ಮುಖರಾಗಿ ನಡೆದು ಚಲ ವೀಚೀ ಸಂಚಯಮಂ ಕ್ರೌಂಚ ನದಿಯನುತ್ತರಿಸಿ ಸರಿ ತ್ತಟ ವನ ಲತಾ ಗೃಹದೊಳ್ ಸೀತೆ ಬಟಿಲ್ದಳೆಂದು ವಿಶ್ರಮಿಸಿ ಸುಖಮಿರ್ಪುದು ಮಾನದಿಯ ಸಮೀಪದ ಸರ್ವರತ್ನ ಗರ್ಭಮುಪ್ಪ ದಂಡಕ ಗಿರಿಯ ಗುಹಾ ಗೇಹದೊ

ಳೊಂದು ಯೋಜನದೆಂಟನೆಯ ಭಾಗಂ ಖಾತವಾದಲ್ಲಿ ಪಾತಾಳಲಂಕೆಯೆಂಬ ಪುರ
ಮಿರ್ಪುದದನಾಳ್ವಂ ಖರನೆಂಬನಾತನರಸಿ ರಾವಣನ ತಂಗೆ ಚಂದ್ರನಖಿಯೆಂಬಳವರ್ಗೆ
ಶಂಭುಕನುಂ ಸುಂದರನುಮೆಂಬರಿರ್ವರ್ ತನಯರಾದರಲ್ಲಿ ಪಿರಿಯಮಗಂ ಶಂಭುಕಂ
ಪೆಱಗೆ ಪನ್ನೆರಡು ವರ್ಷಂ ನೊದಲ್ಗೊಂಡು ಸೂರ್ಯಹಾಸಾಸಿಯಂ ಸಾಧಿಸುತ್ತಿರ್ಪುದು
ಮಾತಂಗಾಬಾಳನಿತ್ತು ಬೆಸಕೆಯ್ಯಲೆಂದು ಬಂದ ಯಕ್ಷಾಮರ ಸಹಸ್ರಮಾ ಖಡ್ಗರತ್ನ
ಮನವನಿರ್ದ ಬಿದಿರ ಪೊದಱಿ ಮೊದಲೊಳಿರಿಸಿ [1]ಮೇರು ಮಂದಾರ ಸುಮನೋ
ಮಂಜರಿಯಿನರ್ಚಿಸುತಿರ್ಪುದುಮಿತ್ತ ಲಕ್ಷ್ಮಣಂ ವನ ವಿಲಾಸ ನಿರೀಕ್ಷಣ ಕುತೂಹಲ
ನಾಗಿ—

ಕಂ ॥ ಸುಟಿವೆಡೆಗೆ ಖಡ್ಗಸಿದ್ಧಿಗೆ
ಬಟಿಯಟ್ಟಿದ ಪುಣ್ಯ ದೇವತಾ ದೂತನವೋಲ್ ॥
ಸುಟಿಗಾಳಿಯೊಡನೆ ಹರ್ಷದ
ಮಟಿ ಬರೆ ಬಂದತ್ತದೊಂದು ದಿವ್ಯಾಮೋದಂ ॥ ೧೭ ॥

ಇದು ಮನುಜ ಲೋಕ ವನ ಕುಸು
ಮದ ಸೌರಭಮಲ್ತು ದಿವಿಜ ಲೋಕದ ಮಂದಾ ॥
ರದ ಕುಸುಮ ಸೌರಭಂ ಬಂ
ದುದೆತ್ತಣಿಂದೆಂದು ಲಕ್ಷ್ಮಣಂ ಬಟಿಸಂದಂ ॥ ೧೮ ॥

ತನಿಗಂಪಿನ ಬಟಿವಟಿಯಿಂ
ಜನಾರ್ದನಂ ಭೃಂಗದಂತೆ ಸುಮನೋರಾಗಂ ॥
ಜನಿಯಿಸೆ ತಮಾಲ ಪಲ್ಲವ
ತನುರುಚಿ ಪೆರ್ವಿದಿರ ಪೊದಱಿನಂದೈತಂದಂ ॥ ೧೯ ॥

ಸ್ಥಲ ರಕ್ತ ಕಮಲಮಂ ಕೋ
ಮಲ ಪದ ತಳಪದ್ಮರಾಗರುಚಿಯಿಂ ವಂಶ ॥
ಸ್ಥಲಮಂ ತನುಪ್ರಭಾಮಂ
ಡಲದಿಂದೆಂಟನೆಯ ಕೇಶವಂ ದ್ವಿಗುಣಿಸಿದಂ ॥ ೨೦ ॥

ಅಂತು ಬಂದು ಬಿದಿರ ಪೊದಱಿ ಮೊದಲೊಳಮರ ತರು ಸುಮನೋಮಾಲೆ
ಯೊಳಮನರ್ಘ ರತ್ನಮಾಲೆಯೊಳಮರ್ಚಿಸಿರ್ದ ಸೂರ್ಯಹಾಸಾಸಿಗೆ ಕೈಯಂ ನೀಡು
ವುದುಂ—

---

1. ನಮೇರು. ಕ. ಖ. ಘ.

ಕಂ॥ ಜಯಲಕ್ಷ್ಮಿಯ ನಯನೋತ್ಪಲ
ಮಯೂಖಮೆನೆ ತಾನೆ ಬಂದು ಕರ ಕಿಸಲಯ ಕಾಂ॥
ತಿಯಿನೇಂ ರಾಗಂಬೆತ್ತುದೊ
ಜಯಾಸಿ ಪೊಗರಿಟಿಸೆ ಕಿಸುರ ಮಸಿಯಕ್ಕರಮಂ ॥ ೨೧ ॥

ಕಾಳಾಹಿಯೆನಿಪ ಕೃಷ್ಣನ
ತೋಳೊಳ್ ನಿಶ್ವಾಸ ಧೂಮ ಲೇಖಾಕೃತಿಯಿಂ॥
ಬಾಳಾಯತ[1]ಮಿರೆ ಜಡಿದಂ
ಬಾಳೊಡನಲ್ಲಾಡೆ ನೆಟಿಲ ನೆವದಿಂ ದಿನಪಂ ॥ ೨೨ ॥

ಅಂತು ಜಡಿದು ಕರವಾಳ ಕೂರ್ಪಂ ನೋಡಲೆಂದು—

ಕಂ॥ ಬಾಯ್ವಾರೆ ನಿಲೆ ಕುಮಾರಂ
ಪೊಯ್ದೊಡೆ ಕೈಯಳವಿದಾರ ಕೈಯಳವಿಯೆನಲ್॥
ನೆಯ್ದಿಲ ಕಾವಿನ ಪೊದೆಯಂ
ಪೊಯ್ದಂತೊರ್ಮೊದಲೆ ಪಱಿದುದಾ ವಂಶವನಂ ॥ ೨೩ ॥

ಆ ವಂಶವನದೊಡನೆ—

ಕಂ॥ ತಲೆ ಪಱಿದು ಪಾಱಿ ಪಾಱುವ
ತಲೆವರವೆಡೆವಱಿಯದಟ್ಟಿಯಿಂದುಣ್ಮುವಸೃ॥
ಗ್ಜಲಧಾರೆ ನಾಳವೆನೆ ಪಂ
ದಲೆ ಪೋಲ್ತುದು ನಭದೊಳಲರ್ದ ಕೆಂದಾವರೆಯಂ ॥ ೨೪ ॥

ಆಗಳದಂ ಕಂಡು ನಿರಪರಾಧನಂ ಕೊಂದೆನೆಂದು ಮನದೊಳ್ ಲಕ್ಷ್ಮಣಂ ಕಟ್ಟುಕಡೆದು—

ಕಂ॥ ವೇಧಸ್ಸಂಕಲ್ಪಂ ದು
ರ್ಬೋಧಮಿವಂ ನಿಟ್ಟಿಯಿಂ ನಿರೋಧಿಸಿ ತನುವಂ॥
ಸಾಧಿಸಿದೊಡೀ ಕೃಪಾಣಮೆ
ಬಾಧಾಕರಮಾಯ್ತುಜಾ ಕೃಪಾಣೀಯದವೋಲ್ ॥ ೨೫ ॥

ಎಂದು ಕಾರುಣ್ಯಪರನಾಗಿರ್ದುದುಂ ತತ್ಕೈಕ್ಷೇಯಕಮಂ ರಕ್ಷಿಸುವ ಯಕ್ಷಾಮರ ಸಹಸ್ರಮಿನ್ನೆಮಗೆ ನೀನೆ ಪತಿಯೆಂದು ಪೊಡೆವಟ್ಟು ಪೂಜಿಸಿ ಪೋವುದುಂ, ನಿಜಾಗ್ರಜನ ಸಮೀಪಕ್ಕೆ ಬಂದು ಕರವಾಳ ವೃತ್ತಾಂತಮಂ ವಿದಿತಂ ಮಾಡಿ—

1. ಮೆನೆ. ಗ. ಘ. ಚ.

ಕಂ ॥ ಜಳರುಹನಾಭಂ ಕಣ್ಣೊಳ್
ಪೊಳೆದುಳ್ಳುವ ಸೂರ್ಯಹಾಸಮುಂ ಕುಡೆ ಕೈಯೊಳ್ ॥
ಹಳಧರನ ದೇಹರುಚಿ ಮೂ
ವಳಸುವುದುಂ ಚಂದ್ರಹಾಸಮೆನಿಸಿತ್ತಾಗಳ್ ॥ ೨೬ ॥

ಅನ್ನೆಗಮಿತ್ತಲ್—

ಕಂ ॥ ವಿವಿಧಾರ್ಚನೆವೆರಸು ತನೂ
ಭವನಿಂದು ಕೃಪಾಣ ಸಿದ್ಧಿವಡೆದಪನೆಂಬು ॥
ತ್ಸವದಿಂದುಳ್ಳಾಪಾತಮ
ನವಳಂಗಪ್ರಭೆಯಿನಿಟ್ಟಿಸಿ ನಭದಿಂದಿಟ್ಟಿದಳ್ ॥ ೨೭ ॥

ಅಂತು ನಭದಿಂದಿಟ್ಟಿದು—

ಕಂ ॥ ತನಯನ ತಲೆಯೊಂದೆಸೆಯೊಳ್
ತನುವೊಂದೆಸೆಯೊಳ್ ಸಿಡಿಲ್ದು ಕೆಡೆದಿರೆ ಕಂಡಾ ॥
ವನಿತೆ ಭಯರಸದಿನೆರ್ದೆ ಪೌ
ವನೆ ಪಾಱಿ ವಿಷಾದ ವಹ್ನಿಗಿಂಧನಮಾದಳ್ ॥ ೨೮ ॥

ಖರ ನಂದನನಂ ದಶಕಂ
ಧರನಳಿಯನನೆನ್ನ ಶಂಭು ಕುವರನನಾರ್ ಕೊಂ ॥
ದರೆನುತ್ತೆ ಮೋದಿಕೊಂಡಳ್
ಕರದಿಂದಡಿಗಡಿಗೆ ಚಂದ್ರನಖಿ ತೆಳ್ವಸಿಜಿಂ ॥ ೨೯ ॥

ಚ ॥ ಬಜಿಬಜಿಬತ್ತೆ ಬಾಯ್ ಬೆರಲ ಬಾಸುಳ ಪದ್ಧತಿ ಮಧ್ಯದೊಳ್ ಪಗಂ ।
ಡಿಱಿದಿರೆ ಕಣ್ಣ ನೀರ್ಗಳ ಪೊನಲ್ ಕರೆಗಣ್ಮೈ ಕಪೋಲದೊಳ್ ಬಯ ॥
ಲ್ದೊಜೆಯನೊಡರ್ಚಿ ಚಂದ್ರನಖಿ ಶೋಕರಸಾಕುಳ ಚಿತ್ತೆಯಾಗಿ ಮೆ ।
ಯ್ಯಜಿಯಳಿ ಚಿತ್ರಮಲ್ತು ನಿಜಪುತ್ರ ವಿಯೋಗಮನಾರೊ ಸೈರಿಪರ್॥ ೩೦ ॥

ಅನಂತರಮೆಂತಾನುಂ ಮೂರ್ಛೆಯಿಂದೆಚ್ಚಿತ್ತು—

ಕಂ ॥ ತನ್ನಂ ದಂಡಿಸಿ ಬಾಳಂ
ಪನ್ನೆರಡಬ್ದಕ್ಕೆ ಪಡೆದ ಬಾಲಕನಂ ಕೊಂ ॥
ದೆನ್ನೊಳೆಡಱಿದನ ಬೇರೊಳ್
ಬೆನ್ನೀರಂ ಪೊಯ್ವೆನೆಂದು ಬೇಗದಿನೆಟ್ಟಿಳ್ ॥ ೩೧ ॥

ಕಂ ॥ ಒಡನೊಡನೆ ಶೋಕ ರಸಮುಂ
ಕಡುಮುಳಿಸುಂ ತಿಣ್ಣಮಾಗೆ ಖೇಚರಿ ಮೊಬಗಂ ॥
ಸಿಡಿಲಂ ಕೆದಱುವ ಕಲ್ಪದ
ಕಡೆಗಾಲದ ಕೆಂಡವಱೆಯ ಮುಗಿಲವೊಲಿರ್ದಳ್ ॥ ೩೨ ॥

ರೋದನದಿಂ ಸುತನ ಶಿರ
ಶ್ಛೇದನದಟಿಲಾಱುದಾಱುಗುಂ ರಿಪು ರುಧಿರಾ ॥
ಸ್ವಾದನದಿನೆಂದು ವಿಲಯೋ
ತ್ಪಾದನ ಭೈರವಿಯ ಮಸಕಮಂ ಕೈಕೊಂಡಳ್ ॥ ೩೩ ॥

ಅಂತು ಮುಳಿದೆಬ್ಬಿ ಪಜ್ಜೆವಿಡಿದು ನಡೆದು ರಾಮಲಕ್ಷ್ಮಣರಂ ಕಂಡು—

ಚ ॥ ಬಗೆವವರಾರಿದಂ ಖಚರ ಕಾಮಿನಿ ಪುತ್ರ ವಿಯೋಗ ವೇಗಮಂ ।
ಬಗೆಯದೆ ಕಂದನಂ ಬಱಿದೆ ಕೊಂದವನಂ ಕೊಲಲೆಂದು ಪೂಣ್ದುದಂ ॥
ಬಗೆಯದೆ ನೋಡಿ ಲಕ್ಷ್ಮಣನ ಗಾಡಿಗೆ ಸೋಲ್ತೊಡಗೂಡುವಾಸೆಯಂ ।
ಬಗೆದಳ್[1]ದಂತೆ ದಲ್ ಬಗೆವರೇ ವಿಷಯಾಸವ ಮತ್ತರೇನುಮಂ ॥ ೩೪ ॥

ಅಂತು ಕಂತು ಸಂತಾಪದಿನಾವರ್ತನ ಪರಿವರ್ತನಂ ಬಂದು—

ಕಂ ॥ ರೂಪ ಪರಾವರ್ತನ ವಿ
ದ್ಯಾ ಪರಿಣತಿಯಿಂ ವಿಯಚ್ಚರಾಂಗನೆ ಕನ್ಯಾ ॥
ರೂಪಮನೇಂ ತಳೆದಳೊ ತಾ
ರಾಪತಿ ತಾರುಣ್ಯ ಲಕ್ಷ್ಮ್ಯಯಂ ತಾಳ್ದಿದವೋಲ್ ॥ ೩೫ ॥

ನನೆಗಣೆಯಧಿದೇವತೆಯೆಂ
ಬಿನೆಗಂ ಸಾರ್ತಂದು ಕೃತಕ ಶೋಕ ರಸಾಲಂ ॥
ಬಿನಿ ನೆಯ್ವಿಲೆಸಳೊಳಮರ್ದಿನ
ಪನಿ ಬಂದಪುದೆನಿಸಿ ಕಣ್ಣ ನೀರಂ ತಂದಳ್ ॥ ೩೬ ॥

ಆ ರಮಣಿ ಕೃತಕ ಶೋಕಾ
ಸಾರದ ಪೊನಲೊಳಗೆ ಬೆಂಡು ನೆಗೆದಿರ್ದುಮದೇಂ ॥
ರಾರಾಜಿಸಲಾರ್ತಳೊ ತಿಳಿ
ನೀರೊಳಗಣ ಚಂದ್ರಕಲೆಯ ನೆಟಿಲೆಂಬಿನೆಗಂ ॥ ೩೭ ॥

---

1. ದಂತಿನಲ್. ಚ.

ಅಂತು ಶೋಕಿಸುವಳಂ ಕಂಡು—

ಕಂ ॥ ತನಗೆ ಕರುಣಾ ರಸಂ ಸಂ
ಜನಿಯಿಸೆ ಸಾರಣ್ಗೆ ಕರೆದು ಕುಳ್ಳಿರಿಸಿ ಲತಾ ॥
ತನು ಕಣ್ಣಿನಿಯಂ ತೊಡೆದಳ್
ಜನಕಾತ್ಮಜೆ ಕನ್ನೆ ಕಪಟಯೆಂದೆತ್ತಜಿವಳ್ ॥ ೩೮ ।

ಆಗಳಾ ಕನ್ನೆಯಂ ಕರುಣಾರಸ ಪ್ರಸನ್ನ ದೃಷ್ಟಿಯಿಂ ರಘುವೀರಂ ನೋಡಿ—

ಮ ॥ ಸ್ರ ॥ ಬಿಸಿಲುಂ ಬೆಳ್ದಿಂಗಳುಂ ಗಾಳಿಯುಮೊಳಪುಗದತ್ಯುಗ್ರ ಸತ್ವಂಗಳಿಂದ ।
ರ್ವಿಸುವೀ ದುರ್ವಾರ ಕಾಂತಾರಮನಬಲೆಯೆ ನಿಶ್ಶಂಕೆಯಿಂದೆಂತು ಪೊಕ್ಕೈ ॥
ಬಿಸವಂದಂ ಕನ್ನೆ ನಿನ್ನಂದಮನೆಮಗಜಿಪೆಂದಾಜಿರಂಗ ಪ್ರಚಂಡಂ ।
ಬೆಸಗೊಂಡಂ ಬೀಜಿ ದಂತದ್ಯುತಿ ಶರದದ ಬೆಳ್ದಿಂಗಳಂ ರಾಮಚಂದ್ರಂ॥೩೯॥

ಅಂತು ಬೆಸಗೊಳ್ವುದುಂ ಮುಕುಳೀಕೃತಾಂಜಲಿಪುಟಿ ಕೃತಕಿ ಕೃತಾಂತ ನೆನ್ನ ಮಾತಾಪಿತೃಗಳನೊರ್ಮೊದಲೊಳ್ ಮುರಿದುಯ್ಯೆ ನಿಸ್ಸಹಾಯ ವೃತ್ತಿಯಿಂ ನಿತ್ತರಿಸಲಾಜಿದಾನುಮೆನ್ನಂ ಪರಿಚ್ಛೇದಿಸಿ ಪಟುವಂ ಪೊಕ್ಕು ಸಾವೆನೆಂದು ಬರುತ್ತುಂ ನಿಮ್ಮನೆನ್ನ ಪುಣ್ಯೋದಯದಿಂ ಕಂಡೆನೆನ್ನನಿರ್ವರೊಳೊರ್ವರ್ ಗಂಧರ್ವ ವಿವಾಹ ವಿಧಿಯಿಂ ಕೈಕೊಳ್ವುದೆನೆ ಜನಕಜೆ ರಾಮಲಕ್ಷ್ಮಣರ ಮೊಗಮಂ ನೋಡಿ ಮುಗುಳ್ನಗೆ ನಗುವುದುಮದರ್ಕೆ ಸಿಗ್ಗಾಗಿ—

ಕಂ ॥ ಮಗನಳಿದಟಿಲಂ ಪಾತಕಿ
ಬಗೆಯದೆ ಪರಪುರುಷ ಸೇವೆಗಟಿಪುವ ಬಗೆಯಂ ॥
ಬಗೆದಾ ಬಗೆ ಕೂಡದೊಡು
ಬ್ಬಿಗಮಿರ್ಮಡಿಸಿತ್ತು ಖಚರ ವಧುಗಾಕ್ಷಣದೊಳ್ ॥ ೪೦ ॥

ಅಂತು ಮನದೊಳುಮ್ಮಳಿಸಿ—

ಕಂ ॥ ಅವಳಿವರ್ಗೆ ತಕ್ಕುದಂ ಮಾ
ಡುವೆನೆಂಬಾಗ್ರಹದಿನವರ ಕಣ್ಬೊಲನಂ ದಾಂ ॥
ಟುವಿನಂ ನಡೆದು ತಟಲ್ಲತೆ
ಯವೊಲಾಕಾಶಕ್ಕೆ ನೆಗೆದು ಸಾಜಿದಳಾಗಳ್ ॥ ೪೧ ॥

ಅಂತು ಮನೋವೇಗದಿಂ ಪೋಗಿ ಪೊಟಿಲುಮನರಮನೆಯುಮಂ ಪೊಕ್ಕು—

ಹರಿಣಿ ॥ ಪರೆದ ಕಚಮುಂ ಕಣ್ಣಿಂ ಕಯ್ಗಣ್ಮುವಶ್ರು ಜಲಂಗಳುಂ ।
ಬೆರಸು ಬಸಿಱಿಂ ತಿಣ್ಣಂ ಮೋದುತ್ತುಮಾತ್ಮಜ ಶೋಕದಿಂ ॥
ಖರನ ಚರಣೋಪಾಂತ ಕ್ಷೋಣೀಪ್ರದೇಶದೊಳಾ ತನೂ ।
ದರಿ ತನುವನಂದೊಕ್ಕಳ್ ಹಾಹಾ ರವಂ ನೆಗಟ್ಟಿನ್ನೆಗಂ ॥ ೪೨ ॥

ಅಂತು ಶೋಕ ವಿಕಲೆಯಾದ ಚಂದ್ರನಖಿಯಂ ಕಂಡು ಖರನಿದೇನೆಂದು ಬೆಸ ಗೊಳ್ವುದುಂ—

ಮ ॥ ಬಗೆಗಿಂದುಮ್ಮಳಮಾಗೆ ತಲ್ಲಳಿಸಿ ಬಾಳಂ ಸಾಧಿಸುತ್ತಿರ್ದ ಪೆ ।
ರ್ಮಗನಂ ನೋಡುವೆನೆಂದು ಪೋಗಿ ತಲೆ ಬೇಱಾಗಟ್ಟಿ ಬೇಱಾಗೆ ಧಾ ॥
ತ್ರಿಗೆ ಬಿಟ್ಟಿರ್ದೊಡೆ ಕಂಡುಭೋಂಕನೆರ್ದೆ ಬಾಳಂ ಬೀಸಿದಂತಾಗೆ ಮೂ ।
ರ್ಛೆಗೆ ಸಂದೆಂ ಸುಡೆ ಸುತ್ತಿ ಶೋಕದಹನಂ ಜ್ವಾಲಾ ಸಹಸ್ರಂಗಳಿಂ ॥ ೪೩ ॥

ಅಂತು ಮೂರ್ಛೆವೋಗಿ ಕೆಱಿದಾನುಂ ಬೇಗದಿಂ—

ಕಂ ॥ ಚೇತರಿಸಿ ತನಯನಂ ಕೊಂ
ದಾತನ ಬಟಿವಿಡಿದು ಪೋಗಿ ಬಾಳಂ ಕೊಳಲೆಂ ॥
ದಾತನ ಮೇಲ್ವಾಯ್ದೊಡೆ ಪಡೆ
ಮಾತೇಂ ಪರಿಭವಿಸಿ ಕಳೆದನುದ್ಧತನೆನ್ನಂ ॥ ೪೪ ॥

ನಿನಗೆಸತಿಯಾಗಿಯುಂ ತ್ರಿಭು
ವನ ವಿಜಯಿ ದಶಾಸ್ಯನೊಡನೆ ಪುಟ್ಟಿಯುಮಾದ ॥
ತ್ತೆನಗೆ ಪರಿಭವಮೆನಲ್ಕ್ಕಾ
ನ್ನಿನ ಜನ್ಮದ ಕರ್ಮಬಂಧಮುಂ [1]ಮಿಾಱುವರಾರ್ ॥ ೪೫ ॥

ಮ ॥ ಕವಚಂದೊಟ್ಟು ಶರಾಸನಂಬಿಡಿದು ತೂಣೀರಂಗಳಂ ತಾಳ್ದಿ ಮಿಾ ।
ಱುವರಾರೆಮ್ಮುಮನೆಂಬ ದೋರ್ಬಲದಗರ್ವಿಂ [2]ನಿರ್ಭರಾನಂದದಿಂ ॥
ದವರಿರ್ವರ್ ಮನುಜರ್ ತನೂಭವನುಮಂ ಕೊಂದೆನ್ನನಾದಂ ಪರಾ ।
ಭವಮಂ ಪೊರ್ದಿಸಿ ನಿರ್ದಯರ್ ಬಗೆಯದಿರ್ದರ್ ದಂಡಕಾರಣ್ಯದೊಳ್ ॥

ಎನಲೊಡಂ ಶ್ರವಣ ವಿವರದೊಳ್ ತಪ್ತಾಯಸಮುಂ ಪೊಯ್ದಂತೆ ದಾರಕ ವಿದಾರಣಮುಂ ದಾರ ಪರಾಭವಮುಂ ತನಗಟಲನೆರ್ದೆವಟಲುಮನೊದವಿಸೆ—

---

1. ಕಱಿಪವರಾರ್. ಚ. ಗ.

2. ದಿರ್ಭರಾನಂದದಿಂ ಜವನಿ. ಕ. ಖ. ಗ. ಘ. ಚ.

ಕಂ ॥ ಬೀಜದಿನೊಗೆವ ವಿಷಾಂಕುರ
ದೋಜೆಯೆನಲ್ ಖರನ ಶೋಕ ಬೀಜದಿನೊಗೆದು ॥
ತ್ತೇಜಿಸಿದುದು ಕೋಪಾಗ್ನಿ ಶಿ
ಖಾಜಾಲಂ ಕೆದಱೆ ಕಿಡಿಯುಮುಂ ಕೆಂಡಮುಮುಂ ॥ ೪೭ ॥

ಶಾ ॥ ಇವೆ ಕೋಪಾನಲ ಧೂಮ ಲೇಖೆಯೆನೆ ಪುರ್ವುರ್ವೆಟ್ಟು ಜರ್ವಲ್ ತಗು ।
ಳ್ದುವು ಕಣ್ಗಳ್ ಪೊಱವಾಯ್ತು ಕೋಪಶಿಖಿ ಪೊಣ್ಮೈತ್ತೆಂಬಿನಂ ಕೆಂಕಮಾ॥
ದುವು ಕೋಪಾನಲ ತಾಪದಿಂ ರಣ ರಸಂ ದಳ್ಕಿಂದು ಕಾಯ್ದುಕ್ಕುವಂ ।
ತೆವೊಲಾಗಳ್ ಬೆಮರ್ಗಳ್ ಕಪೋಲತಲದೊಳ್ ತಳ್ಪಾಯ್ದುವಾ ದೈತ್ಯನಾ॥

ಅಂತು ರೋಷ ಗ್ರಹಾವೇಶಮನಪ್ಪುಕೆಯ್ದು—

ಕಂ ॥ ತಡೆವುದು ಪಾಟಿಯೆ ಸುತನಂ
ಮಡಿಪಿದನಂ ಸತಿಗೆ ಭಂಗಮಂ ಮಾಡಿದನಂ ॥
ಕಡುಕೆಯ್ದು ಕಾದಿ ರಣದೊಳ್
ಪೆಡತಲೆಯಂ ಮೆಟ್ಟಿ ಕಿಟ್ಟುಕೊಳ್ವೆಂ ತಲೆಯಂ ॥ ೪೯ ॥

ಅನಿಮಿಷರುಂ ದಾನವರುಂ
ಮೊನೆಗೆನಗಿದಿರಲ್ಲರೆಂದೊಡಿದಿರಾಂಪವರೇ ॥
ಮನುಜರವಂದಿರನಾನೊ
ರ್ವನೆ ದೆಸೆಬಲಿಗುಡುವೆನೆಂದು ಬಿಡೆ ಗರ್ಜಿಸಿದಂ ॥ ೫೦ ॥

ಅಂತು ಗರ್ಜಿಸಿ ಕರವಾಳ್ಗೆ ಕೈಯಂ ನೀಡುವುದುಂ ಮಂತ್ರಿಮಂಡಲಮದಂ ಮಾರ್ಕೊಂಡು—

ಕಂ ॥ ಸಾಧಾರಣರಲ್ಲರ್ ವಿ
ದ್ಯಾಧರ ವಲ್ಲಭ ವಿಚಾರಿಸವರುನ್ನತಿಯಂ ॥
ಸಾಧಿಸದೆ ಸೂರ್ಯಹಾಸಂ
[1]ಸಾಧನವಾಯ್ತೆಂದೊಡೇನವರ್ ಮಾನವರೇ ॥ ೫೧ ॥

ಅದಱಿನವರನೇಳಿಸದೆ ಸಕಲ ಸಾಮಂತರಂ ಬರಿಸಿ ಸಮರ ಸನ್ನದ್ಧನಾಗಿ ನಡೆವುದೆ ನಯಮದೆಂತೆನೆ ಸಕಲ ಚಕ್ರವರ್ತಿಗಳುಮರ್ಧಚಕ್ರವರ್ತಿಗಳುಂ ಮನುಷ್ಯರಾಗಿಯುಮೇಕಾಂಗದೊಳಜೇಯರೆಂಬುದು ಸರ್ವಜನ ಸುಪ್ರಸಿದ್ಧಮೆಂದು ಬಿನ್ನವಿಸೆ

---

1. ಸಾಧನೆವೋಯ್ತೆಂ. ಚ.

ಮನದೆ ಕೊಂಡಾಸ್ಪರೂಪಮಂ ದಶಕಂಧರಂಗೆ ಬಿನ್ನಪಂಗೆಯ್ವುದೆಂದು ದೂತರನಟ್ಟಿ ಸಮಸ್ತ ಸಾಮಗ್ರೀಸಹಿತನಾಗಿ—

ಕಂ ॥ ಕನಕಾಚಲ ಚೂಳಿಕೆಯಿಂ
ಕನಲ್ದು ಗರ್ಜಿಸುತುಮೆಬ್ದಿ ಸಿಂಗವವೋಲ್ ಕಾಂ ॥
ಚನ ಪೀಠದಿಂ ಖರಂ ಖ
ಡ್ಗ ನಖರನುತ್ತಂಸ ಕಿರಣ ಕೇಸರನೆಬ್ದಿಂ ॥ ೫೨ ॥

ಪದಿನಾಲ್ ಸಾಸಿರ ನಾಯಕ
ರುದಂಶು ಮಣಿ ಮಕುಟ ಕಿರಣಮೊಡನಂಬರಮಂ ॥
ಪುದಿವಿನಮೊಡನೆಬ್ದಿರ್ ಬಿಂ
ಜದಡವಿಯಂ ಬೇಗೆ ಬಳಸಿದತ್ತೆಂಬಿನೆಗಂ ॥ ೫೩ ॥

ಅಂತಸಂಖ್ಯಾತ ಖಚರ ಸಾಮಂತ ಸೇನೆವೆರಸು ಖರದೂಷಣರ್ ಗಾಳಿಗಿದಿರಂ ನಡೆವ ಮುಗಿಲೊಡ್ಡಿನಂತೆ ಗಗನವೀಥಿವಿಡಿದು ರಾಮಲಕ್ಷ್ಮಣರನಱಿಸಿ ಬರ್ಪ ಸಮಯದೊಳ್ ಸಮುದ್ರ ಘೋಷಮನಜನಿಸುವ ಪಟು ಪಟಹ ಶಂಖ ಕಹಳಾ ರವಂಭೋರೆನೆ ಕೇಳ್ದಿದೇನೆಂದು ಸೀತೆ ಬೆರ್ಚಿ ಬಾರಿಸಿ—

ಕಂ ॥ ದೊರೆಕೊಂಡ ಬಾಳ ಕೂರ್ಪಂ
ಪರಿಕಿಸಲೆಂದಿಱಿಯೆ ಲಕ್ಷ್ಮಣಂ ವಂಶವನಾಂ ॥
ತರಿತನೆನಿಸಿರ್ದು ಸತ್ತನ
ಪರಿಗ್ರಹಂ ಕಾಳೆಗಕ್ಕೆ ಬಂದಪುದಕ್ಕುಂ ॥ ೫೪ ॥

ಎಂದು ಮನದೊಳವಧಾರಿಸಿ—

ಚ ॥ ಗಗನಚರ ಪ್ರಚಂಡ ಬಲಮೆತ್ತಿ ಬರುತ್ತಿರೆ ಕಾಳೆಗಕ್ಕದಂ ।
ಬಗೆದನೆ ಜಾನಕೀಮುಖ ಸರೋರುಹದೊಳ್ ನೆಲಸಿರ್ದ ದೃಷ್ಟಿಯಂ ॥
ತೆಗೆದನೆ ಕಾಲದಂಡಮುಮನೇಳಿಪ ತನ್ನ ಶರಾಸನಕ್ಕೆ ಮೆ ।
ಲ್ಲಗೆ ಕರಶಾಖೆಯಂ ರಘುತನೂಭವನುಯ್ದನಿದೇನುದಾತ್ತನೋ ॥ ೫೫ ॥

ಅಂತು ದಾಶರಥಿ ದಿವ್ಯ ಚಾಪಕ್ಕೆ ಕೈಯನುಯ್ಯೆ ಲಕ್ಷ್ಮಣನಿಂತೆಂದಂ—

ಶಾ ॥ ದೇವರ್ ಬಿಲ್ವಿಡಿವಂತು ಬಲ್ವಡೆಯೆ ವಜ್ರಾವರ್ತ ಚಾಪಕ್ಕೆ ಮೇಣ್ ।
ದೇವೇಂದ್ರಂ ಧರಣೇಂದ್ರ[1]ನಲ್ಲದುಱಿದರ್ ಬಿಲ್ವೊಯ್ದು ನಿಲ್ವನ್ನರಾರ್ ॥

1. ನಲ್ಲನುಱಿ. ಚ.

ದೇವರ್ ಕಾವೊಡಮೆನ್ನ ಕೂರ್ಗಣೆಗಳಂ ಮೆಯ್ಪೆರ್ಚಿ ಮೇಲೆತ್ತಿ ಬಂ।
ದೀ ವಿದ್ಯಾಧರ ಸೈನ್ಯಮಂ ನಿಮಿಷದಿಂ ಪರ್ದಿಂಗೆ ಬಿರ್ದಿಕ್ಕುವೆಂ ॥ ೫೬ ॥

ಎಂದು ಬೆಸನಂ ಪಡೆದು ಮದೀಯ ಮಾತೆಯಂ ಸೀತಾದೇವಿಯನಪಾಯ ಬಹುಳಮಪ್ಪ ಗಹನದೊಳಗಲದಿರ್ಪುದೆತ್ತಾನುಮೆನಗೆ ಧುರಂ ದುರ್ಧರಮಾಗೆ ಸಿಂಹ ನಾದಂಗೆಯ್ಯೆ ಬರ್ಪುದೆಂದು ವಿನಯ ವಚನಮಂ ನುಡಿದು ವಿನಯ ವಿನಮಿತ ನಗ್ರಜನಂ ಬೀಟ್ಕೊಂಡು.

ಕಂ ॥ ಕವಚಮನಾಳಿಸಿ ಪೆಗಲೊಳ್
ತವದೊಣೆಯಂ ಬಿಗಿದು ಬಿಲ್ಲನೇಱಿಸಿ ಟಂಕಾ ॥
ರವಗುರ್ವುವಡೆಯೆ ಜೇವೊಡೆ
ದು ವಿಯಚ್ಚರ ಸೇನೆಗದಿರದಿದಿರಂ ನಡೆದಂ ॥ ೫೭ ॥

ಪೊಕ್ಕಿಸೆ ಮಾರ್ಗಣಮುಂ ಮಱು
ವಕ್ಕದ ನಾಯಕರನಾಜಿಯೊಳ್ಕಂ[1]ಡಿನಿಸುಂ ॥
ತಕ್ಕಟಿದನೆ ಬಗೆಯೊಳ್ [2]ಬೆ
ಳ್ಪಕ್ಕಿಯ ಪಿಂಡಿಂಗವಂದಿರಂ ಸರಿಗಂಡಂ ॥ ೫೮ ॥

ಉರ್ವರೆಯೊಳಿರ್ದಖಂಡಿತ
ದೋರ್ವಲನಂಬಿಕ್ಕೆ ನಭದೊಳಿರ್ದನಿಬರುಮಾ ॥
ರ್ದೊರ್ವನನಿಸೆ ಮಂಜಿನ ಮಟ್ಟೆ
ಪರ್ವತಮಂ ಪರ್ವಿದಂತೆ ಕವಿದುವು ಕಣೆಗಳ್ ॥ ೫೯ ॥

ಗಗನಮೆಡೆನೆಜೆಯ[3]ದೆನಿಸಿದ
ಗಗನೇಚರ ಸೈನ್ಯಮಿಸುವ ಪೊಸಮಸೆಯ ಸರಲ್ ॥
ನಗಧರನ ಮೇಲೆ ಪಾಯ್ದುವು
ನೆಗೆದಗ್ನಿ ಮುಖಕ್ಕೆ ಪಾಯ್ವ ಶಲಭಂಗಳವೋಲ್ ॥ ೬೦ ॥

ಎಡೆಯುಡುಗದೆ ಖಚರರ ಬಿ
ಲ್ವಡೆ ಕಡುಕೆಯ್ದಿಸುವ ಕಣೆಗಳರ್ಕನ ತೇಜಂ ॥
ಕೆಡೆ ಹರಿಯಮೇಲೆ ಸುರಿದುವು
ಬಡಬಾಗ್ನಿಯಮೇಲೆ ಸುರಿವ ಸರಿವಟ್ಟೆಗಳವೋಲ್ ॥ ೬೧ ॥

---

1. ಡನಿಸಂ. ಚ. 2. ಬಿಳ್ಕಿ. ಕ. ಘ. ಚ; ಪೇಳ್ವಕ್ಕಿ. ಗ. 3. ದಂತಿರೆ. ಗ.

ಕಂ ॥ ತಱುದೊಟ್ಟ ಸೂರ್ಯಹಾಸದೆ
ಮಱುವಕ್ಕದ ಪುದಿದು ಪೆಣೆದ ಶರಪಂಜರದಿಂ ॥
ಪೊಱಮಟ್ಟು ಬಿದಿರ ಪೊದಱಿಂ
ಪೊಱಮಟ್ಟ ಮೃಗೇಂದ್ರನಂತಿರಿರ್ದನುಪೇಂದ್ರಂ ॥ ೬೨ ॥

ಅಂತು ಪೊಱಮಟ್ಟು ಪರಿವೇಷಂಗೊಂಡ ಚಂಡಕಿರಣನಂತೆ ಕುಂಡಲಿತ ಕೋದಂಡನಾಗಿ—

ಕಂ ॥ ತೋಡಂ ಬೀಡಂ ಕಾಣ್ಬುದು
ನಾಡೆಯುಮಿರದೆನಿಸಿ ಕೃಷ್ಣನಾರ್ದಿಸೆ ದೆಸೆಗೆ ॥
ಟ್ಟೋಡಿದುದಲ್ಲಾಡಿದುದ
ಳ್ಕಾಡಿದುದೊರ್ವೊರ್ದಲೆ ಖರನ ಬಲವೆನಿತನಿತುಂ ॥ ೬೩ ॥

ಪತ್ತಿ ಜವನಂತೆ ರಿಪು ಬಲ
ಪತ್ತಿಯನಿಸೆ ಲಕ್ಷ್ಮಣಂ ವಿಯಚ್ಚರ ಸೈನ್ಯಂ ॥
ಸತ್ತುದು ಪುಣ್ಬೆತ್ತುದು ಬೆ
ನ್ನಿತ್ತುದು ಪೂಣ್ದೆಱವುದರಿದು ಗರುಡಧ್ವಜನೊಳ್ ॥ ೬೪ ॥

ಇವೆ [1]ದೃಷ್ಟಿ ವಿಷಾಹಿಗಳೀ
ಕವಿತರ್ಪುವೆ ಜವನ ಬೆಸದಿನೆನೆ ನಿಮಿಷಕ್ಕೇಂ ॥
ತವೆ ಪೀರ್ದುವೊ ಖಚರ ಸ್ತ್ರಾ
ಣವಾಯುವಂ ಕೃಷ್ಣನೆಚ್ಚ ನಾರಾಚಂಗಳ್ ॥ ೬೫ ॥

ಇರ್ಮೆಯ್ಗಾಣ್ಬಿನಮಾಂತರ
ನೊರ್ಮೊದಲೊಳೆ ಕಣೆಗಳುರ್ಚಿ ಪೆಣನಂ ಬಿತ್ತಲ್ ॥
[2]ಕಾರ್ಮುಂಚಿದಂತೆ ನೆತ್ತರ
ಪೆರ್ಮಟಿ [3]ಕಱಿದತ್ತುಪೇಂದ್ರನಿಂ ಧುರಧರೆಯೊಳ್ ॥ ೬೬ ॥

ಆವೆಡೆಯಂ ನಟ್ಟುವು ಬಾ
ಣಾವಳಿ ನಟ್ಟಿಡೆಯೆ ತಮಗೆ ನೆಱನೆನೆ ಕೆಡೆದರ್ ॥
ಭೂವಳಯಕ್ಕೆ ವಿಯಚ್ಚರ
ರಾವುದೊ ಲಕ್ಷ್ಮಣನ ಕಣೆಗೆ ಮಣಿಯದ ಸೈನ್ಯಂ ॥ ೬೭ ॥

---

1. ದುಷ್ಟ. ಘ. 2. ಕಾರ್ಮುಚ್ಚಿದಂತೆ. ಚ. 3. ಕೊಂಡತ್ತು. ಗ.

ಶಾ ॥ ಆರೇಸಾಡಿದರಾವ ದಿಜ್ಮುಖದಿನೀ ಕೂರಂಬುಗಳ್ ಬಂದುವೆಂ ।
ದಾರುಂ ಕಾಣ್ಬವರಿಲ್ಲ ನಟ್ಟುದನೆ ಕಾಣ್ಬರ್ ಮಾಯದಂ=ಬಲ್ಲದಂ ॥
ದಾರಾನುಂ ಪೊಱಗಾಗರೇ ಕಣೆಯ ಕೋಳ್ಗಿಂಬಂತು ತನ್ನಂಬು ಸಂ ।
ಹಾರಂಮಾಡೆ ವಿಪಕ್ಷ ಸೈನಿಕಮನಂಭೋಜಾಕ್ಷನೇಸಾಡಿದಂ ॥ ೬೮ ॥

ಮ ॥ ಮೊನೆಯಂಬಲ್ಲಿವು ನಂಜಿನಂಬುಗಳಿನಲ್ [1]ಕೂರಂಬು ಮಾಱುಾಂತರಂ ।
ಮನದಿಂ ಬೇಗದಿನುರ್ಚಿ ಪೋಗೆ ಪೆಣನಂ ಸಾಲಿಟ್ಟವೋಲಾಗೆ ಮೇ ॥
ದಿನಿಯೊಳ್ ಖೇಚರ ಸೇನೆ ಬೀೞಿ ಬಯಲಾದತ್ತಾಗಸಂ ಕೃಷ್ಣನಂ ।
ಬಿನ ಕೃಷ್ಣಾಹಿಯ ಕೋಳ್ಗೆ ಬೆರ್ಚದಿದಿರೊಳ್ ಮೆಯ್ಸಾರ್ಚಿ ಬಾಲ್ವಿನ್ನರಾರ್ ॥

ಕಂ ॥ ಸಿಡಿಲ ಕಡುಗಾಯ್ವು ಸಿಂಗದ
ಪೊಡಪುರ್ ಭೈರವನ ಬಲ್ವು ಮಾರಿಯ ಮಸಕಂ ॥
ಕಡೆಗಾಲದ ಜವನೆಟ್ಟಿರ
ಮೊಡರಿಸೆ ಲಕ್ಷ್ಮಣನಡುರ್ತು ಕಾದುತ್ತಿರ್ದಂ ॥ ೭೦ ॥

ಅನ್ನೆಗಮತ್ತ ರಾವಣಂ ಖರದೂಷಣರಟ್ಟಿದ ಸುದ್ದಿಯಂ ಕೇಳ್ದು ಶಂಭುಕನ ಸಾವಿಂಗಲಿಲ್ದು ಕಡು ಮುಳಿದು—

ಚ ॥ ಬೆದಱಿಸಿದತ್ತು ಕಾರಿರುಳನುರ್ವಿದ ಪುರ್ವಿನ ಗಂಟೆನೊಳ್ ಕಱಂ ।
ಗಿದ ನೊಗಮುಂಜಿಸಿತ್ತು ಕಿಸುಸಂಜೆಯನಾಸುರಮಾಗೆ ಕೆಂಪುವೇ ॥
ಱಿದ ಬಿಡುಗಣ್ಣ ಬಣ್ಣವಱಿಯಟ್ಟಿದುದಟ್ಟುಱಿ ಕಣ್ಣೊಳುಳ್ಳುವು ।
ಳ್ಕದ ತೆಱನಂ ಸಕಂಪವಧರಂ ದಶಕಂಧರ ಚಕ್ರವರ್ತಿಯಾ ॥ ೭೧ ॥

ಅಂತು ಸಂವರ್ತ ಸಮಯದ ಸಮುದ್ರದಂತೆ ಕದಡಿ—

ಚ ॥ ನಿಯಮದಿನಿರ್ದನಂ ನಿರಪರಾಧನನನ್ನೆಯದಿಂದಮೆನ್ನ ತಂ ।
ಗೆಯ ಮಗನಂ ವಿದಾರಿಸಿದನಂ ತಱಿದಾತನ ಮೆಯ್ಯ ರಕ್ತ ವಾ ॥
ರಿಯನೆಱೆದಾಱಿಪೆಂ ಖರನ ಶೋಕ ಕೃಶಾನುವನೆಂದು ಕಾಯ್ದು ದು ।
ರ್ಜಯನಸುರಾಧಿಪಂ ಜಡಿದನಾಸುರಮಂ ನಿಜ ಚಂದ್ರಹಾಸಮಂ ॥ ೭೨ ॥

ಚ ॥ ಒದವಿದ ಕೋಪ ವಹ್ನಿಯುರಿಯುಂ ಪೊಗೆಯುಂ ನೆಗೆವಂತೆ ಪದ್ಮರಾ ।
ಗದ ಹರಿನೀಲದುನ್ಮುಖ ವಿಭೂಷಣ ರಶ್ಮಿ ಪಗಂಡುಗೊಳ್ವಿನಂ ॥
ಕದನ ಮದೋದ್ಧತಂ ಖಚರನಾಯಕರಂ ಬರವೇೞ್ದು ಸಿಂಹ ಪೀ ।
ಠದಿನಿರದೆೞ್ದಿನಸ್ತಮಿತ ಪುಣ್ಯ ದಶಾನನನಾ ದಶಾನನಂ ॥ ೭೩ ॥

1. ತೂಱಂಬು . ಗ. ಚ.

ಅಂತು ಸಿಂಹಾಸನದಿಂದೆಬ್ದು—

ಚ ॥ ಸೆಡೆಯೆ ಹಿಮಪ್ರಭಂ ನಿಜ ಯಶಃಪ್ರಭೆಯಿಂದಿನನಂಶು ಮಾಲೆ ಕೇ ।
ಳ್ವಡೆ ಬಲಗೈಯ ಬಾಳ ಪೊಳೆಪಿಂ ಕಡುಗಟ್ಟಿಲೆ ದೇಹ ದೀಪ್ತಿಯಿಂ ॥
ದೊಡರಿಸೆ ರಾಹು ತನ್ನ ಹರಿನೀಲ ವಿಮಾನಮನೇಱುವಂತಿರಾ ।
ಗಡೆ ಕಡುಕೆಯ್ದು ಪುಷ್ಪಕ ವಿಮಾನಮನೇಱಿದನಿಂದ್ರ ವಿದ್ವಿಷಂ ॥ ೭೪ ॥

ಅನಂತರಂ—

ಮ ॥ ಪ್ರತಿಕೂಲಾನಿಲನಿಂ ಪತಾಕೆ ಮಗುಟಿಂಬಂತಾಗೆ ಕೈಸನ್ನೆಯಿಂ ।
ಶ್ರುತಿಯಂ ಸಾರ್ತರೆ ಪೋಪುದಲ್ತು ನಯಮೆಂಬಂತಾಗಿ ಘಂಟಾ ಠಣ ॥
ತ್ಕೃತಿ ಸಾರ್ತಂದುದು ಪುಣ್ಯದೇವತೆಯ ಕಣ್ಣೀರೆಂಬಿನಂ ಮೇಘ ಸಂ ।
ಹತಿಯಿಂದಲ್ಲುಗೆ ಮುತ್ತು ಪುಷ್ಪಕ ವಿಮಾನಂ ದಂಡಕಾರಣ್ಯಮಂ ॥ ೭೫ ॥

ಆ ಸಮಯದೊಳ್ ದಶಾಸ್ಯನೊಂದು ತಣ್ಬಟಿಲ ತಾಣದೊಳ್ ಬಜಿಸಿಡಿಲ ಬಟಿವಿಡಿದು ಪೊಳೆವ ಕುಡುಮಿಂಚಿನಂತೆ ಬಲಭದ್ರನ ಕೆಲದೊಳಿರ್ದ ಸೀತೆಯಂ ಕಂಡು—

ಕಂ ॥ ಬಲೆ ದೃಷ್ಟಿಗೆ ವಜ್ರದ ಸಂ
ಕಲೆ ಹೃದಯಕ್ಕೆ ನಿಪ ರೂಪವತಿ ಜಾನಕಿ ಕ ॥
ಣ್ಬೊಲದೊಳಿರೆ ಪದ್ಮಪತ್ರದ
ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ ॥ ೭೬ ॥

ಎನಗಾಲೋಕನಮಾತ್ರದಿ
ನನುರಾಗಮನಿತ್ತು ತಮ್ಮ ನೀಲಚ್ಛವಿಯಿಂ ॥
ಮನಮಂ ಋಜುಮಾಡಿದುವೀ
ವನಿತೆಯ ಕೊಂಕಿದ ಕುರುಳ್ಗಳಿದು ಬಿಸವಂದಂ ॥ ೭೭ ॥

ಮೃಗ ಲೋಚನಂಗಳಿರ್ದುವು
ಮೃಗಮಿಲ್ಲಿರ್ದಪುದು ವಟ ಫಲಂ ವಟಮಿಲ್ಲೀ ॥
ಪಗಲುಮೆಸೆವಿಂದುವೆತ್ತಣಿ
ನೊಗೆದುದೊ ಪೇಟಿಂದು ನೋಡಿದಂ ನಗೆಮೊಗವಂ ॥ ೭೮ ॥

ತಳತಳಿಸಿ ಪೊಳೆಯೆ ಸೀತೆಯ
ಚಳ ನಯನಂ ಖಚರ ಚಕ್ರವರ್ತಿಯ ಚಿತ್ತಂ ॥

ಕೊಳದೊಳಗೆಳವಾಳೆ ತೆಱಂ
ಬೊಳೆವಂತೆ ಕಲಂಕಿ ಕದಡಿದತ್ತಾ ಕ್ಷಣದೊಳ್ ॥ ೭೯ ॥

ಕಂ ॥ ಸಿರಿಸದ ಬಾಸಿಗದೊಳ್ ನಲಿ
ವರಿದಾಡುವ ತುಂಬಿಯಂತೆ ಪಾಣ್ಬನ ಕಣ್ಗಳ್ ॥
ಪರಿಮಱಿಯಾಡಿದುವು ತನೂ
ದರಿಯ ತನುವ ಪಾಶಮೆನಿಪ ದೋರ್ವಲ್ಲರಿಯೊಳ್ ॥ ೮೦ ॥

ಸುಟಿಗೊಂಡ ನಾಭಿಕೂಪದ
ಸುಟಿಯಿಂ ಪೊಱಮಡದೆ ಸುಟಿವ ನಯನಂಗಳ ಬೆಂ ॥
ಬಟಿವಿಡಿದು ಪರಿದು ಸುಟಿದುದು
ಸುಟಿಯೊಳಗಣ [1]ಪಱಿಗುಲಂತೆ ಪಾತಕನ ಮನಂ ॥ ೮೧ ॥

ಉ ॥ ಹಾರ ಮರೀಚಿ ಮಂಜರಿ ಸುಧಾರಸ ಧಾರೆ ಸುಧಾಂಶು ಲೇಖೆ ಕ ।
ರ್ಪೂರ ಶಲಾಕೆ ನೇತ್ರಸುಖ ದಾಯಕಮಾದೊರೆತಲ್ಲವೀಕೆ ಶೃಂ ॥
ಗಾರ ಸಮುದ್ರಮಂ ಕಡೆಯೆ ಹೃದ್ಭವನುದ್ಭವೆಯಾದಳೆಂದು ಕ ।
ಣ್ಣಾರೆ ದಶಾಸ್ಯನೀಕ್ಷಿಸಿದನೀಕ್ಷಿಸಿ ಕಣ್ಣಱಿದಾರೆ ಮನ್ಮಥಂ ॥ ೮೨ ॥

ಮ॥ಸ್ರ॥ ಪಲರುಂ ವಿದ್ಯಾಧರಸ್ತ್ರೀಯರುಮಮರಿಯರುಂ [2]ಮಾನವ ಸ್ತ್ರೀಯರುಂ ತ ।
ಮ್ಮೊಲವಿಂ ಮೇಲ್ವಾಯ್ದೊಡಂ ಮುಂಬಗೆಯದ ಬಗೆಯೇನಾದುದೆಂದುದ್ಧತಂ ಮೂ ॥
ದಲಿಸುತ್ತುಂ ರೂಪಿನೊಳ್ ಮಚ್ಚರಿಸುವನೆನಗೆಂದಂಬನಂಬಟ್ಟುವನ್ನಂ ।
ಪಲಕಾಲಕ್ಕೇಸುವೆತ್ತಂ ದಶಮುಖನೆನುತುಂ ಮನ್ಮಥಂ ಮಾಣದೆಚ್ಚಂ ॥ ೮೩ ॥

ಸ್ರ ॥ ಸ್ವಾಂತಂ ಪಂಚೇಷುವಿಂ [3]ದಂತಗೆವುಲವೊಲಪ್ಪಂತು ಕಂದರ್ಪನೆಚ್ಚೆ ।
ಚ್ಚೆಂತುಂ ಕೈವಾರದಟ್ಟಾಸುರವೆನೆ ಮುಳಿದೆಚ್ಚಿಟ್ಟ ಕೋದಂಡದಿಂ ಪೊ ॥
ಯ್ದೆಂತಾನುಂ ನಿನ್ನ ಸೌಂದರ್ಯದಿನೆನಗೊಳಗಾದಂ ದಶಗ್ರೀವನೆಂದಾ ।
ಕಾಂತಾ ರತ್ನಕ್ಕೆ ವೈದೇಹಿಗೆ ಮಕುಟ ಹಟದ್ರತ್ನದಿಂದರ್ಘ್ಯಮಿತ್ತಂ ॥ ೮೪ ॥

[4]ಅಂತು ಬಸದಾಗಿ—

---

1. ಪಱಿಗಲಂತೆ. ಕ. ಖ; ಪಲುಗೊಲಂತೆ. ಚ.
2. ಕೂರ್ತು ಬಂದೀರ್ಷ್ಯೆಯಿಂ. ಚ.
3. ಜಂತಗೆವುಗಿಲವೊಲ್. ಚ.
4. ಅಂತು ವ್ಯಸನವಶ ಗತನಾಗಿ. ಗ. ಘ.

೬ಚ ॥ ನಡೆ ನಡುಗೋಲ್ವರಂ ದಶಮುಖಂ ಮನಮಂ ಸುಮನಶ್ಶಿಲೀಮುಖಂ ।
ನಡೆಗಿಡೆ ಕೀರ್ತಿ ಬಾರ್ತೆಗಿಡೆ ಲಕ್ಷ್ಮಿ ಮೊದಲ್ಗಿಡೆ ಮಾನಸಿಕ್ಕೆ ನೇ ॥
ರ್ಪಡುಗಿಡೆ ಸತ್ಯ ಶೌಚ ಗುಣ ಸಂಪದವೇಳಿದನಾದನೆನ್ನರುಂ ।
ಕಿಡಿಮಸಿಯಾದವೋಲ್ ವಿಷಯ ಲೋಭದಿನೇಳಿದರಾಗದಿರ್ಪರೇ ॥ ೮೫ ॥

ಮ ॥ ವಿಹಿತಾಚಾರಮನನ್ವಯಾಗತ ಗುಣ ಪ್ರಖ್ಯಾತಿಯಂ ದುಷ್ಟ ನಿ ।
ಗ್ರಹ ಶಿಷ್ಟ ಪ್ರತಿಪಾಲನ ಕ್ಷಮತೆಯಂ ಕೈಗಾಯದನ್ಯಾಂಗನಾ ॥
ಸ್ಪೃಹೆಯಂ ತಾಳ್ದಿದನಲ್ತೆ ಕಾಲವಶದಿಂ ಲಂಕೇಶ್ವರಂ ವಿಸ್ಮಯಾ ।
ವಹಮಲ್ತಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ ॥ ೮೬ ॥

ಅಂತು ಮನವೆಳದುವರಿಯೆ—

ಕಂ ॥ ಮದ ಕರಿಯ ದಾನ ಲೇಖೆಗೆ
ಪದೆವ ಮಧುವ್ರತದ ಮಾಟ್ಕಿಯಿಂ ದಶವದನಂ ॥
ಪದೆದಂ ರಘುವೀರನ ಪಾ
ರ್ಶ್ವದ ಸುದತಿಗೆ ವಿಷಯಿ ತನ್ನ ಕೇಡಂ ನೋಡಂ ॥ ೮೭ ॥

ಅವಿವೇಕಿ ದಶಮುಖಂ ದೃ
ಷ್ಟಿ ವಿಷಾಹಿಯ ಪೆಡೆಯ ಮಣಿಶಲಾಕೆಗೆ ಕೈ ನೀ ॥
ಡುವ ಗಾಂಪನಂತೆ ರಘುವೀ
ರ ವಧೂ ಜನಕಜೆಗೆ ಮನದೊಳಟ್ಟಿಪಂ ತಂದಂ ॥ ೮೮ ॥

ಚ ॥ ಪರವಧುಗಾಸೆಗೆಯ್ವುಧಿಕ ಪಾತಕಮೊಂದು ರಘುಪ್ರವೀರನೊಳ್ ।
ಧುರದೊಳಿದಿರ್ಚದೋಸರಿಸಿ ವಂಚಿಸಿ ಸೀತೆಯನುಯ್ವ ಭೀತಿಯೊಂ ॥
ದೆರಡಱೊಳಂ ಜಸಂ ಮಸುಳೆ ತನ್ನವಲೋಕಿನಿಯಂ ದಶಾನನಂ ।
ಸ್ಮರಿಸಿದನಾತ್ಮಸತ್ವ ಗುಣ ಹಾನಿಯೆ ಸೂಚಿಸದೇ ವಿನಾಶಮಂ ॥ ೮೯ ॥

ಅಂತು ನೆನೆಯಲೊಡಮವಲೋಕಿನೀವಿದ್ಯೆ [1]ಮನದೊಡನೆ ಬಂದು ಬೆಸನಾವುದೆನೆ ದಶಮುಖನಿವರಾರೆಂಬುದುಮಯೋಧ್ಯಾ ಸಿಂಹಾಸನಕ್ಕಧಿಪತಿಯುಮಿಕ್ಷ್ವಾಕು ವಂಶ ಸಂಭವನುಮಪ್ಪನರಣ್ಯ ತನೂಭವಂ ದಶರಥ ನರನಾಥಂ ತದಪತ್ಯರಿವರೀಕಾಲದ ಬಲದೇವ ವಾಸುದೇವರ್ ದೇವತಾಧಿಷ್ಠಿತಂಗಳಪ್ಪ ವಜ್ರಾವರ್ತ ಸಾಗರಾವರ್ತ ಚಾಪ ರತ್ನಂಗಳನಪ್ರಯತ್ನದಿಂ ಪಡೆದ ರಾಮಲಕ್ಷ್ಮಣರೆಂಬರ್, ಮಹಾಬಲ

1. ನಮನ. ಚ.

ಪರಾಕ್ರಮರೀಕೆ ರಾಮನ ಮಹಾದೇವಿ ಮಿಥಿಲಾಪುರವರೇಶ್ವರನಪ್ಪ ಹರಿವಂಶದ ಜನಕನ ತನೂಭವೆ ರಥನೂಪುರಚಕ್ರವಾಳಪುರಮನಾಳ್ವ ಚಂಡಬಲ ಪರಾಕ್ರಮನಪ್ಪ ಪ್ರಭಾಮಂಡಲನ ತಂಗೆ ಸೀತಾದೇವಿಯೆಂಬಳೆಂಬುದುಮಿಾಕೆಯನೀತನಿಂದಗಲ್ಚುವುಪಾಯಮಾವುದೆನೆ ದೇವತೆ ಭಯಚಕಿತ ಚಿತ್ತೆಯಾಗಿ—

ಕಂ ॥ ಆರಯ್ಯೆ ವಿರೋಧಂ ಸಾ
ಧಾರಣ ಪುರುಷರೊಳಮುಚಿತಮಲ್ತಧಿಕ ಬಲರ್ ॥
ಕಾರಣಪುರುಷರಿವರ್ ನಿ
ಷ್ಕಾರಣವಿವರೊಳ್ ವಿರೋಧಮಂ ಮಾಡುವುದೇ ॥ ೯೦॥

ಕಾವ ಬೆಸಂ ನಿನ್ನದು ಸಕ
ಲಾವನಿಯನಧರ್ಮನಿರತರಂ ನಿಯಮಿಸಿ ನೀ ॥
ನೀವಿಷಯಕ್ಕೆಜಿಗುವುದುಂ
ಕಾವರೆ ಕಣೆಗೊಂಡರೆಂಬ ನುಡಿಗೆಡೆಯಕ್ಕುಂ ॥ ೯೧ ॥

ಅನ್ನೆಯದಿಂ ನಡೆವವರಂ
ನೀನ್ನಿಯಮಿಸುವೈ ದಶಾಸ್ಯ ಪೆಜನಾವಂ ನಿ ॥
ನ್ನನ್ನಿಯಮಿಸುವಂ ಮುನ್ನೀರ್
ಬೆನ್ನೀರೆನೆ ಬೆರಸಲಣ್ಣ ತಣ್ಣೀರೊಳವೇ ॥ ೯೨ ॥

ಮ ॥ ಪದಿನಾಲ್ಸಾಸಿರ ಮುಖ್ಯ ನಾಯಕರಸಂಖ್ಯಾತಂ ಬಲಂ ಖೇದದಿಂ ।
ದಿದಿರಾದರ್ ಖರ ದೂಷಣರ್ ಬಗೆದನಿಲ್ಲತ್ತಲ್ ಭರಂಗೆಯ್ದು ಕಾ ॥
ದಿದಪಂ ಲಕ್ಷ್ಮಣನಿತ್ತಲೀಕೆಯೊಡನೀತಂ ವೀತ ಶಂಕಂ ವಿನೋ ।
ದದೊಳಿರ್ದಂ ರಘುವೀರ[1]ರಿನ್ನರಿವರೊಳ್ ವಿದ್ವೇಷಣಂ ದೂಷಣಂ ॥ ೯೩ ॥

ಎಂದು ತೆಜೆಯೆ ನುಡಿದುದರ್ಕೆ ಕಡುಮುಳಿದು—

ಕಂ ॥ ಮದನ ಯಶಃಪಟಹ ಧ್ವನಿ
ಪುದಿಯೆ ವಿಯಚ್ಚರನ ಕರ್ಣಮಂ ಹೃದಯ ॥
ಕ್ಕೆಯ್ದಿದುದಿಲ್ಲ ದಿವ್ಯ ವಚನಂ
ಬಿದಿಯಂ ವಿಾಜುಗುವೆ ಪೆಜರ ಪೇಟ್ದುಪದೇಶಂ ॥ ೯೪ ॥

ಕಂ ॥ ಆನೊಂದಂ ಬೆಸಗೊಂಡೊಡೆ
ನೀನೊಂದನಿದೇಕೆ ಪೇಟ್ದಿ ಪೇಟ್ದುದನೇಗೊ ॥

1 ನಿನ್ನಿವರೊಳಂ. ಗ ಘ.

ಳ್ಳೇನೆಂದು ಕೀಱಿ ನುಡಿವೈ
ಮಾನವರಾಂತಪರೆ ಮರುಳೆ ಲಂಕಾಪತಿಯಂ ॥ ೯೫ ॥

ಎಂಬುದುಂ ವಿದ್ಯಾದೇವತೆ ಕನಲ್ದು—

ಕಂ ॥ ಜನಕಜೆಯನುಯ್ಯೆ ದಶರಥ
ತನೂಜರಿಂ ಮರಣಮಾಗಲೆಂದಿರ್ದಪುದೀ ॥
ತನ ಕೈಯಳವಲ್ತು ಪುರಾ
ತನ ಕರ್ಮಾಯತ್ತಮಲ್ತೆ ದೇಹಿಗಳೆಸಕಂ ॥ ೯೬ ॥

ಗೆಲಲೆನಗೆ ರಿಪುಬಲಂ ಬ
ಲ್ವಲಮಾದೊಡೆ ಸಿಂಹನಾದಮಂ ಮಾಟ್ಪಿಂ ಬೆಂ ॥
ಬಲವಾಗಿ ಬರ್ಪುದೆಂದೀ
ಬಲದೇವಂಗಱಿಪಿ ವಾಸುದೇವಂ ಪೋದಂ ॥ ೯೭ ॥

ಎಂದು ರಾವಣಂಗೆ ಪೇೞ್ವುದುಮವಂ ರಣಕ್ಷ್ಮಾಣಿಗೆ ಪೋಗಿ ಲಕ್ಷ್ಮಣಂ ಕೇಳದಂತು ವೈಕುರ್ವಣ ಶಕ್ತಿಯಿಂ ಸಿಂಹನಾದಂಗೆಯ್ಯಿಂಬುದುಂ, ಅಂತೆಗೆಯ್ವೆನೆಂದು ವಿದ್ಯಾದೇವತೆ ಪೋಗಿ ಸಿಂಹನಾದಂಗೆಯ್ವುದುಮಾ ಧ್ವನಿಯಂ ಕೇಳ್ದು—

ಮ ॥ ಧುರದೊಳ್ ದುರ್ಜಯನಾರ್ಗಮೆನ್ನನುಜನೆಂಬೀ ನಿಶ್ಚಯಂಗೆಟ್ಟು ಸಿಂ ।
ಹ ರವಂದೋಱಿದನಾಹವಂ ವಿಷಮಮೆಂಬೀ ವಿಸ್ಮಯಂ ಚಿತ್ತದೊಳ್ ॥
ದೊರೆಕೊಂಡತ್ತು ರಘೂದ್ವಹಂಗಮುಱಿದಂದೆಂತಕ್ಕುಮೋ ಜಾನಕೀ ।
ಹರಣಂ ಕರ್ಮ ವಿಪಾಕಮಾರಬಗೆಗಂ ವೈಕಲ್ಯಮಂ ತಾರದೇ ॥ ೯೮ ॥

ಕಂ ॥ ಕಾಪಂ ಪೇೞ್ದು ಜಟಾಯುವ
ನೋಪಳನಿರವೇೞ್ದು ವೈರಿಬಲಮಂ ತವಿಸಲ್ ॥
ಪೋಪಂತಿರೆ ದಂಡಧರಂ
ಚಾಪಧರಂ ಬಲನವಂಧ್ಯ ಕೋಪಂ ಪೋದಂ ॥ ೯೯ ॥

ಅನ್ನೆಗಮಿತ್ತಲ್—

ಕಂ ॥ ಅಱಿಪಿ ಪರವಧುಗಧೋಗತಿ
ಗಿಱಿವುದನಭಿನಯಿಸುವಂತೆ ಸೀತೆಯ ಸಾರ ॥
ಣ್ಗೆಱಿದಂ ನಭದಿಂ ಖಚರಂ
ಪಱಿಗಂ ಪಾಪಕ್ಕಮಂಜದವರೇಗೆಯ್ಯರ್ ॥ ೧೦೦ ॥

ಕಂ ॥ ದೋಷಿ ಪಿಡಿವಂತೆ ದಿವ್ಯದ
ಕಾಸಿದ ಕುಬುವಂ ಕಡಂಗಿ ಕಾಳೋರಗನಂ ॥
ಕೂಸು ಪಿಡಿವಂತೆ ಪಿಡಿದಂ
ಸಾಸಿಗನವಿವೇಕಿ ಸೀತೆಯಂ ದಶಕಂಠಂ ॥ ೧೦೧ ॥

ಅಂತು ಪಿಡಿದು ನಿಜವಿಮಾನದೊಳಿಟ್ಟು—

ಕಂ ॥ ದಶಮುಖನುನ್ಮುಖನಲಿಪಿಂ
ಶಶಿಮುಖಿಯಂ ಜನಕಸುತೆಯನಾವರಿಸೆ ಚತು ॥
ರ್ದಶ ಭುವನಮನಪವಾದಂ
ಶಶಿಕಲೆಯಂ ಸೈಂಹಿಕೇಯನುಯ್ವಂತುಯ್ದಂ ॥ ೧೦೨ ॥

ಆಗಳದಂ ಜಾತಿಸ್ಮರನಪ್ಪ ಜಟಾಯು ಕಂಡು ಕೋಪಾನಲ ವಿಸ್ಫುಲಿಂಗದಂ ತಾರಕ್ತಂಗಳಾದ ಕಣ್ಗಳಿಂ ನುಂಗುವಂತೆ ನೋಡಿ—

ಕಂ ॥ ಪತಿ ಕಾಪುವೇಟ್ಟಿ ಪೋದಂ
ಸತಿಯಂ ಕಳ್ದುಯ್ದುಪಂ ಖಳಂ ಮಾರ್ಕೊಂಡು ॥
ದ್ಧತನಂ ಮದೀಯ ತುಂಡಾ
ಹತಿಯಿಂ ಶತ ಖಂಡಮಾಗೆ ಮಾಟ್ಪೆನೆನುತ್ತುಂ ॥ ೧೦೩ ॥

ಚ ॥ ಖರ ನಖರಂಗಳಿಂ ನಿಶಿತ ಚಂಚುಗಳಿಂದಿಱಿಯಲ್ಕರುತ್ತು ಸಾ ।
ರ್ತರೆ ನಸು ನಕ್ಕು ಪೊಯ್ಯೆ ಕರದಿಂ ಗಮನೋತ್ಸುಕನಿಂದ್ರವೈರಿ ತ ॥
ನ್ನೆರಡುಮೆಱಿಂಕೆಗಳ್ ಮುಱಿದಿಳಾತಳದೊಳ್ ಕೆಡೆದತ್ತು ವಜ್ರದಿಂ ।
ಸುರಪತಿ ಪೊಯ್ಯೆ ಬೆಟ್ಟು ಕೆಡೆದಂತೆ ಜಟಾಯು ನಭೋವಿಭಾಗದಿಂ ॥೧೦೪॥

ಕಂ ॥ ಪಕ್ಕಿ ಮೊದಲಾಗಿ ಪತಿ ಕಾ
ರ್ಯಕ್ಕನುವಶಮಾಗಿ ತಾಗಿ ರಾವಣನೊಳಡು ॥
ರ್ತಿಕ್ಕತುಳಮಿಱಿದುದೆಂದೊಡೆ
ತಕ್ಕಂ ಪತಿಕಾರ್ಯದೆಡೆಯೊಳೋಸರಿಸುವನೇ ॥ ೧೦೫ ॥

ಉ ॥ ಭೂಮಿಗೆ ಬಿಟ್ಟೆಱಿಂಕೆ ಮುಱಿದಿರ್ದ ವಿಪತ್ತಿಗೆ ನೊಂದುದಿಲ್ಲಣಂ ।
ರಾಮನಗಲ್ಕೆಯಿಂ ಜನನಿಗೇದೊರೆತಕ್ಕುಮೊ ದುಃಖವೇಗಮೆಂ ॥
ಬೀ ಮನದುಮ್ಮಳಂ ತನಗೆ ತಿಣ್ಣಮೆನಲ್ ತೊಱಿದಂತದಂ ಖಗ ।
ಗ್ರಾಮಣಿ ಚಿತ್ತದೊಳ್ ಕಳೆದುದಂಚಿತ ಪಂಚ ಪದಾಕ್ಷರಂಗಳಂ ॥ ೧೦೬ ॥

ಅಂತು ಬಿಟ್ಟು ಜಟಾಯು ಕಂಠಗತ ವಾಯುವಾಗೆ ದಶಕಂಠನುಯ್ವ ಸಮಯದೊಳ್—

ಉ ॥ ಸಿಂಗದ ಕೈಗೆ ಬಿಟ್ಟಿ ಹರಿಣಾಂಗನೆವೋಲಿರ್ದೆಗೆಟ್ಟು ರಾಮಚಂ ।
ದ್ರಾಂಗನೆ ನೀಳ್ದ ಕಣ್ಮಲರ್ಗಳಿಂದುಗೆ ಕಣ್ಬನಿಗಳ್ ಮಡಲ್ತ ಪ ॥
ಕ್ಷ್ಮಾಂಗಳನೊತ್ತಿ ಕಾರ ಮುಗಿಲಿಂದುಗುತರ್ಪ ನವೋದ ಬಿಂದು ಜಾ ।
ಲಂಗಳಿನಲ್ ಬೆಮರ್ತಳಿನಸುಂ ತನುವಲ್ಲಿ ಮುಗುಳ್ತುದೆಂಬಿನಂ ॥ ೧೦೭ ॥

ಚ ॥ ಮನಮೆಳದಾಗೆ ಮನ್ಯು ವಿಗೆ ತಳ್ತೆಮೆಯಿಂ ಕರೆಗಣ್ಮಿ ಸೂಸೆ ಕ ।
ಣ್ಬನಿ ಗಳ ಕಂದಳಂ ಬಿಗಿಯೆ ಗದ್ಗದ ನಿಸ್ವನಮುಣ್ಮಿ ಹಾರವಂ ॥
ಜನಿಯಿಸೆ ಸೀತೆ ಭೀತೆ ದೆಸೆಗೆಟ್ಟಿರ್ದೆಗೆಟ್ಟಟಿ ಪೊಣ್ಮಿದತ್ತು ಮಾ ।
ರ್ದನಿ ದೆಸೆಯೊಳ್ ದಿಗಂಗನೆಯರುಂ ಬಿಡದಂದೊಡನಟ್ಪಿ ಮಾಟಕ್ಕೆಯಿಂ ॥

ಉ ॥ ಭೋಂಕನೆ ಕಂಡು ಸೀತೆ ದಶಕಂಧರನಂ ನೆಲೆವೆರ್ದೆ ಶೋಕವಾ ।
ತಂಕಮೊಡರ್ದೆ ಪುಷ್ಪಕ ವಿಮಾನದ ರತ್ನ ವಿಚಿತ್ರ ಪುತ್ರಿಕಾ ॥
ಸಂಕುಲಮಟ್ಟೊಡಬ್ಬುವು ಬೆಮರ್ತೊಡೆ ಕೂಡೆ ಬೆಮರ್ತುವಾಗಳಾ ।
ಲಂಕೆಯ ಸೂಡನುನ್ನತಿಯ ಕೇಡನವಂಗೆ ನಿವೇದಿಪಂತೆವೋಲ್ ॥ ೧೦೯ ॥

ಕಂ ॥ ಸ್ತನಮಂಡಲಕ್ಕೆ ಪೊಸಮು
ತ್ತಿನ ಹಾರಮನಿತ್ತು ತೋರಕಣ್ಬನಿಯಿಂ ಲೋ ॥
ಚನ ಯುಗಲಮರುಣ ಮಣಿ ಮಂ
ಡನಮಂ ಕವಿಗಿತ್ತುವರುಣರುಚಿ ಮಂಜರಿಯಿಂ ॥ ೧೧೦ ॥

ಚ ॥ ಬಲೆಗೊಳಗಾದ ಸೋಗೆನವಿಲಂತೆ ಭಯಾಕುಳೆ ತನ್ನ ಚಿತ್ತದೊಳ್ ।
ನೆಲಸಿದ ರಾಮನಂ ಬಯಸಿ ನೋಡಲಪೇಕ್ಷಿಸಿ ಬಾಹ್ಯ ದರ್ಶನ ॥
ಕ್ಕಲಸಿದಳೆಂಬಿನಂ ಮುಗಿಯೆ ಕಣ್ಮಲರ್ಗಳ್ ನಸು ಮುಚ್ಚೆವೋಗಿ ತ ।
ಣ್ಣೆಲರಲೆಸಿಂದೆ ಮೂರ್ಛೆದಿಳಿದಳ್ ಮಗುಟ್ಟುಂ ಪೊಱಪೊಣ್ಮೆ ಹಾರವಂ ॥

ಉ ॥ [1]ನೇಸಱ ಸಾರೆ ನಿಬ್ಬರಿಸುವುತ್ಪಲಮಾಲೆಯೆನಿಪ್ಪ ದೃಷ್ಟಿ ವಿ ।
ನ್ಯಾಸಮನೊಯ್ಯನೋಸರಿಸಿ ನಮ್ರ ಶಿರೋಧರೆ ಸೀತೆ ಲೋಕ ಸಂ ॥
ತ್ರಾಸಿಯ ರೂಪು ಪಾದ ನಖ ದರ್ಪಣದೊಳ್ ಪಲವಾಗಿ ತೋಱೆ ಕಂ ।
ಡಾಸತಿ ಬೆರ್ಚಿಮುಚ್ಚಿದಳೆರಟ್ಟಿರದಿಂ ತರಲೇಕ್ಷಣಂಗಳಂ ॥ ೧೧೨ ॥

---

1. ನೇಸಱು. ಕ ಖ.

ಕಂ ॥ ಕ್ರೂರಾತ್ಮಂ ವಂಚಕನವಿ
ಚಾರಿ ದುರಾಚಾರಿ ಬಗೆಯದುಯ್ಪಪನೆನ್ನಂ ॥
ಹಾ ರಾಮಾ ಹಾ ರಾಮಾ
ಬಾರಿಪರಾರೆಂದು ಸೀತೆ ಶೋಕಂಗೆಯ್ದಳ್ ॥ ೧೮೩ ॥

ಅಂತು ಶೋಕಂಗೆಯ್ದ ಸೀತೆಯಂ ದಶಾಸ್ಯನನಂತವೀರ್ಯ ಕೇವಲಿಗಳ ಚರಣೋಪಾಂತದೊಳ್ ಕೈಕೊಂಡ ಪರಾಂಗನಾ ವಿರತಿ ವ್ರತದ ಭಂಗಮಂ ಬಗೆಯದುಯ್ದನನ್ನೆಗಮಿತ್ತಲ್—

ಕಂ ॥ ದೇವೇಂದ್ರನ ವಜ್ರಮನೆ
ನ್ನೀ ವಜ್ರಾವರ್ತ ಚಾಪಮಂ ವಿಾಜುವನಿ ॥
ನ್ನಾವನೆನುತ್ತುಂ ಸಂಗ್ರಾ
ಮಾವನಿಗನುಜನ ಕೆಲಕ್ಕೆ ರಾಮುಂ ಬಂದಂ ॥ ೧೮೪ ॥

ಅಂತು ಬಪ್ಪುದುಂ ಲಕ್ಷ್ಮಣನಪಾಯ ಬಹುಳಮಪ್ಪ ಗಹನದೊಳ್ ದೇವ! ಸೀತಾದೇವಿಯನಗಲ್ಪೇಕೆ ಬಿಜಯಂಗೆಯ್ದಿರೆಂಬುದುಂ, ನಿನ್ನ ಸಿಂಹನಾದಮುಂ ಕೇಳ್ದು ಒಂದೆನೆನೆ ಭವದೀಯ [1]ಪ್ರಸಾದದಿನೆನಗೆ ಬಲ್ಲಲಮಪ್ಪ ಬವರವಿಲ್ಲದಾವನಾನುವೊರ್ವಂ ಮಾಯಾವಿಯ ಮಾಟವಮಕ್ಕುಮದುಕಾರಣಂ ಬೇಗಂ ಬಿಜಯಂಗೆಯ ದಾನೀ ಬವರಮಂ ತೀರ್ಚಿ ನಿಮ್ಮ್ಯೆನ್ನನೆ ಬಂದಪ್ಪನೆಂದು ಬಿನ್ನವಿಸೆ—

ಉ ॥ ತೋಜಿದನಿಲ್ಲ ಸಿಂಹ ರವಮುಂ ಗಡ ಲಕ್ಷ್ಮಣನೆನ್ನ ಚಿತ್ತದೊಳ್ ।
ತೋಜಿದುದಿಲ್ಲ ಬಿಟ್ಟು ಬರಲಾಗದು ಸೀತೆಯನೆಂಬ ನಿರ್ಣಯಂ ॥
ಬೇಜಿಕೆ ಕಡಂಗಿ ಕೆತ್ತಿದಪುದೆನ್ನೆಡಗಣ್ ತಡವಿಲ್ಲದಚ್ಚಿಗಂ ।
ತೋಜಿದೆ ಮಾಣದಿಂತಿದೆನುತುಂ ಮಗುಚ್ಚಿಂ ಮನುವಂತ ಮಂಡನಂ ॥ ೧೮೫ ॥

ಅಂತು ಮಗುಚ್ಚಿ ಬಂದು ಮುನ್ನಮಿರ್ದ ಲತಾಭವನದೊಳ್ ಮನೋವಲ್ಲಭೆಯಂ ಕಾಣದೆ ವಿಪಿನಮುಖಕ್ಕೆ ವಂದ ಪಾದರಸದಂತೆ ಸಿಜ ನಿಸರ್ಗ ಧೈರ್ಯಗುಣಮದ್ಯಸ್ಯಮಾಗೆ—

ಕಂ ॥ ಹಾಹಾ ಜನಕಸುತೇ ವೈ
ದೇಹೀ ವೈದೇಹಿಯೆಂದು ಪುದಿದಿರೆ ಮನಮುಂ ॥
ಮೋಹತಮಂ ದೀಪಂ ವಾ
ತಾಹತಿಯಿಂ ನಂದುವಂತೆ ಮೂರ್ಛೆಗೆ ಸಂದಂ ॥ ೧೮೬ ॥

1 ಪ್ರಭಾಪ. ಚ.

ಅಂತು ಮೂರ್ಛೆವೋಗಿ ಕೆಜಿದಾನುಂ ಬೇಗದಿಂ—

ಚ ॥ ನಸು ಬಿಸುಹೇಜಿ ಮೆಯ್ ಮಗುಚಿ ಕೆತ್ತುವ ತಾಣಮೆ ಕೆತ್ತೆ ಮುಂದಮಾ ।
ದುಸಿರ್ಗಳೆ ನಾಸಿಕಾ ಮುಕುಲದಿಂದಿಸಿಸುಂ ಪೊಜಪೊಣ್ಮೆ ತಳ್ತು ಸಂ ॥
ದಿಸಿದೆಸೆ ಬಿರ್ಚಿ ಕಣ್ಮಲರ್ಗಳುಳ್ಳಲರುತ್ತಿರೆ ಜಾನಕೀ ಯೆನು ।
ತ್ತಿಸಿರ್ದುಸಿರ್ದೆಬ್ಬಿನಾ ರಘುಕುಲಾಂಬರ ಚಂಡಮರೀಚಿ ಮೂರ್ಛೆಯಿಂ॥೧೧೬॥

ಅಂತು ಮೂರ್ಛೆಯಿಂದೆಚ್ಚಿತ್ತು ಸುತ್ತಲುಂ ತೊಜಲ್ಲಜಸುತ್ತುಮುಡವಿಯೊಳ ಗನೆ ಬರುತ್ತುಮಿರ್ದಾಗಳೊಂದೆಡೆಯೊಳಸು ವಿಯೋಗ ಸಂಕಟದಿಂ ಸರಂಗೆಯ್ದು ಜಟಾ ಯುವಂ ಕಂಡು ಸೀತಾಹರಣಮಿದರ್ಕೆ ಮರಣನಿಮಿತ್ತಮಾದುದೆಂದುಬ್ಬೆಗಂಬಟ್ಟು ಸಂಸಾರವಿಷಮ ವಿಷಾಹಾರಮಂ ಪಂಚ ನಮಸ್ಕಾರಮನದರ್ಕೆ ಪೇಜ್ಪಮರಗತಿಯ ನೆಯ್ದಿಸಿ ವೈದೇಹಿಯನಾ ವನಾಂತರದೊಳಿಲ್ಲಿಯುಮಜಸಿ ಕಾಣದೆ—

ಮ ॥ ಕಳಹಂಸಾಲಸ ಯಾನೆಯಂ ಮೃಗಮದಾಮೋದಾಸ್ಯ ನಿಶ್ವಾಸೆಯಂ ।
ತಳಿರೇ ತಾವರೆಯೇ ಮದಾಳಿಕುಲಮೇ ಕರ್ನೆಯ್ದಿಲೇ ಮತ್ತಕೋ ॥
ಕಿಳಮೇ ಕಂಡಿರೆ ಪಲ್ಲವಾಧರೆ ನುನಂಭೋಜಾಸ್ಯೆಯಂ ಭೃಂಗ ಕುಂ ।
ತಳಿಯಂ ಕ್ಕೈರವ ನೇತ್ರೆಯಂ ಪಿಕ ರವ ಪ್ರಖ್ಯಾತೆಯಂ ಸೀತೆಯಂ ॥ ೧೧೭ ॥

ಚ ॥ ಮಲಯಜ ಗಂಧ ಬಂಧುರ ಸರೋರುಹಮಂ ದರಹಾಸ ಚಂದ್ರಿಕಾ ।
ವಿಲಸಿತ ಚಂದ್ರ ಮಂಡಲಮನಾ ರಮಣೇ ರಮಣೀಯ ಲೋಚನೋ ॥
ತ್ಪಲ ಸಹಜ ಪ್ರಸನ್ನ ಕಮಲಾಕರಮಂ ಸ್ಮರರಾಜ ರಾಜ್ಯ ಮಂ ।
ಗಲ ಮಣಿದರ್ಪಣೋಪಮಮನೋಪಳ ವಕ್ತ್ರಮನೆಲ್ಲಿ ಕಾಣ್ಬೆನೋ ॥ ೧೧೮ ॥

ಕಳರುತ ಮತ್ತಕೋಕಿಲಮನೀಕ್ಷಣಮುತ್ಪಲಮುಂ ವಿನೀಲ ಕುಂ ।
ತಳಮಳಿ ಮಾಲೆಯಂ ಕಚಭರಂ ನವಿಲಂ ನಡೆ ಹಂಸಿಯಂ ತಳಂ ॥
ತಳಿರ್ಗಳನಾನನಂ ಕಮಲಮುಂ ನಳಿತೋಳ್ ಲತೆಯಂ ಲತಾಂತ ಕೋ ।
ಮಳೆ ಮಜಿಗೊಂಡು ಮೆಯ್ಗರೆದು ಕಾಡುವ ಕಾರಣಮೇನೊ ಜಾನಕೀ ॥೧೧೯॥

ಎಂದು ಮತ್ತಮಾ ಮದಗಜ ಗಮನೆ ವನ್ಯಗಜ ಬೃಂಹಿತಕ್ಕೆ ತಲ್ಲಳಿಸಿ ತನ್ನಂ ತಬ್ಬಿಸಿದ ಸಲ್ಲಕೀ ನಿಕುಂಜಮುಮನಾ ಚಕೋರ ಲೋಲ ಲೋಚನೆ ವಿಲೋಚನ ಚಂದ್ರಿಕೆಯಿನೊಸರ್ವ ಚಂದ್ರಕಾಂತ ರಯ್ಯಾತಳದ ತಳವಾಸನುದಾಸೀನಂಗೆಯ್ದು ಸಮೆದ ಬಯಲ್ವಾವರೆಯೆಸಳ ಪಸೆಯಿನೆಸೆವ ತಮಾಲ ವನಮಾಲೆಯುಮನಾ ಹೇಮ ತಾಮರಸ ಮುಖಿ ಮುಖಸರೋರ ಸೌರಭಕ್ಕೆಳಸಿ ಬಳಸುವಳಿಮಾಲೆಗೆ ಸುಗಿದು ಸುಯ್ಯನೋಸರಿಸಿದ ಸಪ್ತಚ್ಛದ ಷಂಡಮುಮನಾ ಪೃಥುನಿತಂಬೆ ನಿತಂಬ ಭರ

ಪರಿಸ್ಖಲಿತ ಪದ ವಿನ್ಯಾಸದಿಂದಂಚೆಯಂ ಪಳಂಚಲೆದ ತಣ್ಬೆಜ್ಜುಲ ತಾಣಮುಮನಾ ಲಾವಣ್ಯ ರಸ ತರಂಗಿಣಿ ತಾವರೆಯ ತಳರೆಲೆಯ ಪತ್ರಭಂಗದಿನುತ್ತುಂಗ ಪಯೋಧರ ಮಂ ಪಸಪನಂಗೊಳಿಸಿದ ತಿಳಿಗೊಳದ ತಡಿಯುಮನಾ ಮದಾಳಿ ಪಟಲ ಕುಟಿಲ ಕುಂತಳಿ ಚೆನ್ನೆಯ್ದಿಲೆಸಳ ಚೆನ್ನಪೂಗಳಿಂ ತನ್ನ ತೋರ ಗುರುಳ್ಗಳನಲಂಕರಿಸಿದ ಕಾಸಾರ ತೀರಮುಮನಾ ಸುವರ್ಣಕೇತಕೀ ಸುಗಂಧಿ ಸಹಜ ಸೌರಭದಿಂ ಮೃಗನಾಭಿ ಯನಭಿನಯಿಸಿದ ಲವಂಗ ವನ ವೀಥಿಯುಮನಾ ಶಿರೀಷ ದಾಮ ಕೋಮಲೆ ಸುಮ ನೋವಿಭೂಷಣ ವಿನೋದದಿಂ ಬಿರಿಮುಗುಳನಾಯ್ದು ವನತರು ಲತಾ ವಿತಾನಮು ಮನಾ ಸಂಕಲ್ಪಜನ್ಮ ಜಂಗಮ ಲತಾಂಗಿ ಸಂಭೋಗ ಲೋಭದಿ[1]ನಡಂಗುಜುಚಾಡಿ ಕಾಡಿದ ಚಂದನಲತಾ ಮಂದಿರಮುಮನಾ ಕನಕ ಕದಳೀದಳಶ್ಯಾಮೆ ಕದಳೀದಳ ವ್ಯಜನದ ತಣ್ಗಾಳಿಯಿನನಂಗ ಕೇಳೀ ಪರಿಶ್ರಮಮನಾಜುಸಿದ ಸಂಪಗೆಯ ಚೊಂಪ ಮುಮುಂ ವಿಯೋಗ ಶೋಕಾಕುಲ ಚಿತ್ತನವಲೋಕಿಸುತ್ತುಂ—

ಮ॥ ಎನಿತಾನುಂ ತೆಱದಿಂ ಪಲುಂಬಿ ಪಲವಾಡುತ್ತುಂ ಮನಸ್ತಾಪದಿಂ।
ತನು ಸಂತಾಪಮನಪ್ಪುಕೆಯ್ಯೆ ಬಱಿಲುತ್ತುಂ ಕಂತು ಸಂತಾಪದಿಂ॥
ಮೊನಲುತ್ತುಂ ಕನಲುತ್ತುಮಂದವಿರಳ ಪ್ರಸ್ಫಂದಿ ಬಾಷ್ಪೋದಕಾ।
ನನನಾ ಕಾನನದೊಳ್ ತೊಱಲ್ದು ರಘುರಾಮಂ ಸೀಪವಟ್ಟರ್ಪಿನಂ ॥ ೧೬೧ ॥

ಅನ್ನೆಗಮಿತ್ತಲ್—

ಮ॥ ಎರಡುಂ ತೋಳ್ ನೆರವೊಂದೆ ಬಿಲ್ನೆರವಸಂಖ್ಯಾತಂ ದ್ವಿಷತ್ಸೈನಿ ಯೇ।
ಚರರಂ ಭೂಚರನೊಂದೆಮೆಯ್ಯೊಳಿ ಕೊಲುತ್ತಿರ್ದಪ್ಪನಾನೀತನಂ॥
ಶರಣಾಗೆಂದು ಕುಲಕ್ರಮಾಗತದೊಳಸ್ಮದ್ವೃತ್ತಿಯೊಳ್ ನಿಲ್ಪೆನೀ।
ಶರಣಾಯಾತ ಶರಣ್ಯನಿಂದೆನಗೆ ಕೈಸಾರ್ಗುಂ ಮನೋವಾಂಛಿತಂ ॥ ೧೬೨ ॥

ಎಂದು ತಜ್ಞಸಂದು ಸಂಗ್ರಾಮ ಭೂಮಿಗೆ ಬಂದು

ಕಂ॥ ದೇವ ಭವಚ್ಚರಣಾಂಬುಜ
ಸೇವೆಯೆ ಶರಣೆಂದು ಬಂದೆನೇರ್ವೆಸನಂ ನೀ॥
ನೀವುದೆನಗೆಂದು ಲಕ್ಷ್ಮಣ
ದೇವಂಗೊಳ್ಗಲಿ ವಿರಾಧಿತಂ ನತನಾದಂ॥ ॥ ೧೬೩ ॥

ಅಂತು ಬೆಸನಂ ಬೇಡಿಕೊಂಡು ಬೀಜಕ್ಕೊಂಡು ನೆಲಮುಕ್ಕಿನಂತೆ ನಭಕ್ಕೆ ನೆಗೆದು ಖರನಂ ಸೆರಗಿಲ್ಲದೆ ಮುಟ್ಟಿವಂದು ಮದೀಯ ಜನಕನಂ ಕೊಂದಿಂದು

1. ನತಂಗಿ ಕೊಜಚ್ಚಾಡಿ. ಗ ಘ.

ವರಂ ಪಾತಾಳ ಲಂಕೆಯಂ ಪೊಜಿಮಡದೆ ಬರ್ದುಂಕಿದೆ ಪಲಕಾಲಕ್ಕೆಂತಾನುಂ ಬಯಲ ಬವರಕ್ಕೊಳಗಾದೆ ನೀನಿನ್ನೆತ್ತವೋದಪೆಯೆಂದು ಮೂದಲಿಸಿ ಕಾದುತ್ತುಮಿರೆ -

ಮ ॥ ಮೊರೆಯುತ್ತುಂ ಪರಿಯುತ್ತುಮಿರ್ಪ ರುಧಿರ ಸ್ರೋತಂಗಳಿಂ ಸುತ್ತಲುಂ ।
ನರಲುತ್ತುಂ ಸೊರಳುತ್ತುಮಿರ್ಪ ಭಟರಿಂ ಪಿಟ್ಟಾದ ಪೀಜಾದ ಸಿಂ ॥
ಧುರದಿಂ [1]ತಚ್ಚಿದ ಮುಚ್ಚಿದನ್ಯರಥದಿಂ ಕಣ್ಗಿಂ ಮನಕ್ಕುಂ ಭಯಂ ।
ಕರಮಾದಾಜಿಯೊಳಿಟ್ಟಿ ತಿಂಬ ಜವನೆಂಬಂತಿರ್ದನಬ್ಜೋದರಂ ॥ ೧೩೪ ॥

ಆ ಸಮಯದೊಳ್ ಲಕ್ಷ್ಮಣನಂ ಕಂಡು ವಿರಾಧಿತನಂ ಲೆಕ್ಕಂಗೊಳ್ಳದೆ ಮಾಮಸಕಂಗೊಂಡು—

ಉ ॥ ಪೆಂಡತಿಯಂ ಪರಾಭವಿಸಿದಂ ಸುತನಂ ವಧೆಗೆಯ್ದುನೆನ್ನೊಳಂ ।
ಗಂಡಗುಣಕ್ಕೆ ಮಚ್ಚರಿಸಿ ಸಾರ್ದಿಲೆದಿರ್ದಪನೆಂದು ಬಿಟ್ಟ ಕಣ್ ॥
ಕೆಂಡದ ತಂಡನುಂ ಕೆದಜಿ ಕೋಪದಿನಂದುವಿದೆಚ್ಚು ಕೊಂಡು ಕೋ ।
ದಂಡಮನಕ್ಕೈನುತ್ತೊದಜಿದಂ ಗಗನೇಚರ ತೇಖರಂ ಖರಂ ॥ ೧೩೫ ॥

ಕಂ ॥ ಕವಚಂ ಮಿಂಚಂ ಕಣ್ಣಂ
ಳ್ಕುವ ಸಿಡಿಲಂ ಚಾಪ ಟಂಕೃತಂ ಮೊಜಗಂ ಬೀ ॥
ಜುವಿನಂ ಕಜಿದಂ ಖರನ
ಸ್ಮವರ್ಷಮಂ ನೀಲಘನ ವಿಶಾಲಾಪಘನಂ ॥ ೧೩೬ ॥

ಆಗಳಾತನಿಸುವ ನಿಶಿತ ವಿಶಿಖಂಗಳಂ ಮುಂಡಲಾಗ್ರದಿಂ ಖಂಡಿಸಿ—

ಮ ॥ ನೊನೆಯೊಳ್ ಭೈರವನಂತಗುರ್ವುವಡೆದಂ ರಾಮಾನುಜಂ ಬೀಜಿ ಬಿ ।
ಚ್ಚನೆ ಬಿಟ್ಟಕ್ಷಿಯುಗಂ ತೃತೀಯ ನಯನಕ್ಕಾಕ್ಷೇಪಮಂ ಕೃಷ್ಣ ನ ॥
ರ್ದನಗುರ್ವಂ ತಿರುವಾಯೊಳಿಟ್ಟ ವಿಶಿಖಂ ಕೇಜಿಮ್ಮಾಡೆ ಕಾಲಾಗ್ನಿ ರು ।
ದ್ರನ ಗಂಟಿಕ್ಕಿದ ಪುರ್ವನಂಡಲೆಯೆ ಕೋದಂಡಂ ಭುಜಾದಂಡದೊಳ್ ॥೧೩೭॥

ಉಡಿಯೆಚ್ಚಂ ಧನುವಂ ಸಿಡಿಲ್ದಿನೆಗನೆಚ್ಚಂ ಕೇತುವಂ ಸೂತನಂ ।
ನುಡಿಯೆಚ್ಚಂ ಕಡಿಖಂಡಮಾಗೆ ಮುರಿಯೆಚ್ಚಂ ತೇರನಶ್ವಂಗಳಂ ॥
ಕೆಡೆಯೆಚ್ಚಂ ಬಜಿಯಂ ಖರಂ ಮುಳಿದು ಕೊಂಡುಗ್ರಾಸಿಯಂ ಮೇಲೆ ಪಾ ।
ಯ್ದೊಡೆ ಸೊಯ್ದಂ ತಲೆ ಪಾಜಿ ಬೀಜಿ ರಘುವೀರಂ ಸೂರ್ಯಹಾಸಾಸಿಯಿಂ ॥

---

1. ದಜ್ಜಿದ ತಚ್ಚಿದ. ಚ

ಕಂ ॥ ಸೌಮಿತ್ರಿಯ ಕೋಪಾಗ್ನಿ ಶಿ
ಖಾ ಮಾಲೆಗೆ ಸುಗಿದು ಖರನ ವಿಜಯಶ್ರೀ ಸಂ ॥
ಗ್ರಾಮದೊಳಾಶ್ರಯಿಸಿದಳಾ
ರಾಮಾನುಜ ಭುಜ ಕೃಪಾಣ ಧಾರಾ ಗೃಹಮಂ ॥ ೧೪೯ ॥

ಅನಂತರಂ—

ಕಂ ॥ ಅಗ್ರಜನ ಮರಣ ದುಃಖದೊ
ಳಾಗ್ರಹದಿಂ ಮೇಲೆ ವಾಯ್ದ ದೂಷಣನಂ ನೀ ॥
ರಾಗ್ರೇಸರನಸಿಯಿಂದ
ಗ್ರ ಗ್ರಾಸಂ ಮಾಡಿದಂ ಜವಂಗಾಹವದೊಳ್ ॥ ೧೫೦ ॥

ಆ ಸಮಯದೊಳ್-

ಕಂ ॥ ಸಮಸಿಸಿದತ್ತು ಜಯಶ್ರೀ
ರಮಣಿಗೆ ಪರಿಣಯನಮಪ್ಪುದುಂ ಲಕ್ಷ್ಮಣನೊಳ್ ॥
ಸುಮನೋವರ್ಷ ಸಮನ್ವಿತ
ಮುಮರಾನಕ ನಿನದಮಮರ ಜಯಜಯ ನಿನದಂ ॥ ೧೫೧ ॥

ಅಂತು ಗೆಲ್ಲಂಗೊಂಡು ಕೈದುವಿಕ್ಕಿ ಶರಣೆಂದು ಬಂದ ವಿರೋಧಿ ವಾಹಿನಿಯಂ ವಿರಾಧಿತಂಗೆ ಬೆಸಕೆಯ್ದು ಬಾಚ್ಛಿಂತುಮುವರನವರ ಪೂರ್ವ ವೃತ್ತಿಯೊಳ್ ನಿಲಿಸು ವಂತುಂ ನಿಯಮಿಸಿ ಬರುತ್ತುಂ-

ಚ ॥ ಮದಜಲ ಧಾರೆಯಿಲ್ಲದ ದಿಶಾಗಜದಂತೆ ಸುಧಾಂಶುಲೇಜೆ ಯಿ ।
ಲ್ಲದ ನಭದಂತೆ ಕಲ್ಪಲತೆಯಿಲ್ಲದ ನಂದನದಂತೆ ವೇಲೆಯಿ ॥
ಲ್ಲದ ಕಡಲಂತೆ ಕೇಸರಿಣಿಯಿಲ್ಲದ ಕೇಸರಿಯಂತೆ ಸೀತೆಯಿ ।
ಲ್ಲದ ರಘುವಂಶರಾಮನಿರೆ ನೋಡಿದನಾಕುಲನಾಗಿ ಲಕ್ಷ್ಮಣಂ ॥ ೧೫೨ ॥

ಅಂತು ಮನದೊಳಲ್ಲಾಡುತ್ತುಮೆಯ್ದೆವಂದು ಚರಣಾರವಿಂದ ರಜೋಲಲಾಮ ಲಕ್ಷಿತ ಲಲಾಟನಪ್ಪುದುಮತಿವಿಷಮ ರಣಾಂಗಣದೊಳವ್ರಣ ಕಾಯನುಮಜೇಯನು ಮೆನಿಸಿ ವಿಜಯಶ್ರೀಯೊಡಗೂಡಿದುದರ್ಕೆ ಮನದೊಳೆ ಮೆಚ್ಚಿ ಮುಹುರ್ಮುಹು ರಾಶೀರ್ವಾದ ಮುಖರ ಮುಖನಾದ ರಾಮದೇವನಂ ಲಕ್ಷ್ಮಣಂ ಮದಂಬಿಕೆಯಂ ಕಂಡೆನಿಲ್ಲೆತ್ತಲಿರ್ದಪಳೆಂಬುದುಮಾಂ ನಿನ್ನಲ್ಲಿಗೆ ಬಂದ ಪಿಂದೆ ಸಿಂಹ ಶರಭಾದಿ ರೌದ್ರ ವನಚರಂಗಳುಯ್ವುವೆಂದಜುಯೆನಾವನಾನುಮೊರ್ವಂ ಮಾಯಾವಿ ಕಳ್ವುಯ್ವನೆಂ ದಜುಯೆನಿನ್ನೆವರಮರಣ್ಯದೊಳ್ ತೊಟಿಲ್ದೆಲ್ಲಿಯುಮಜಿಸಿ ಕಂಡೆನಿಲ್ಲೆಂದು ನೊಂದು ನುಡಿವುದುಮದರ್ಕೆ ಲಕ್ಷ್ಮಣಂ ವಿಷಣ್ಣ ಹೃದಯನುದ್ವೀಪಿತ ಕೋಪಶಿಖಿ ಶಿಖಾ ಕಲಾಪನಿಂತೆಂದಂ—

ಉ॥ ಧಾರಿಣಿಯಂ ಮಗುಚ್ಚಿ ಕುಲಪರ್ವತಮಂ ನೆಲೆಯಿಂ ತೆರಳ್ಚಿ ನಿ।
ರ್ನೀರಮೆನಲ್ತುಳುಂಕಿ ಲವಣಾರ್ಣವಮಂ ದಿವಮಂ ನೆಲಕ್ಕೆ ತಂ॥
ದಾರಿದಿರಾಂತೊಡಂ ಜವನ ಬಾರಿಗೆ ಸೋವತನಮಾಗಿರೆ ಮಾಚ್ಪಿನಿ।
ನ್ನಾರೊ ಮದೀಶ ಜಾನಕಿಯನುಯ್ವವರಿಂ ಪೊಱಗೆಲ್ಲಿ ಬಯ್ತ್ತಪರ್॥೧೩೩॥

ಎಂದೊದಱು ನುಡಿವನ್ನೆಗಮಿದಿರಾಗಿ ಬರ್ಪ ಬಲಮನೇಕಕುಂಡಲಂ ಕಂಡಿ ದಾರ ಬಲಮೆನೆ ಲಕ್ಷ್ಮೀಧರನಿದು ವಿರಾಧಿತನೆಂಬ ವಿದ್ಯಾಧರಂ ಘರದೊಳಿನಗೆ ಕದನ ಸಹಾಯನಾಗಿ ಪಾಟಿಯಂ ಪಾಳಿಸಿದನೀಗಳ್ ದೇವ ನಿಜ ಚರಣ ಸೇವಾಸಕ್ತ ಚಿತ್ತನಾಗಿ ಬರುತ್ತಿರ್ದಪನಾತನ ಬಲಮೆಂದಱುಪುವನ್ನೆಗಮೆಯ್ದೆ ವಂದು ರಾಘವನ ಸಾದೋಪಾಂತ ಪ್ರದೇಶದೊಳ್ ಮೆಯ್ಯನಿಕ್ಕಿ ನಿಜ ವೃತ್ತಾಂತಮನಿಂತೆಂದು ಬಿನ್ನ ವಿಸಿದನತಿಪ್ರಚಂಡ ನಿಜಾನುಜ ಭುಜಾದಂಡ ಮಂಡಲಾಗ್ರ ಧಾರಾಹತಿಯಿಂದಮರ ಕಾಮಿನೀ ಪರ್ಯಂಕ ಶೇಖರನಾದ ಖರಂ ಪಾತಾಳ ಲಂಕಾಧಿಪತಿಯಪ್ಪಮದೀಯ ಜನಕನಂ ಚಂದ್ರೋದರ ವಿಯಚ್ಚರೇಂದ್ರನನುಪಾಂಶು ವಧೆಗೆಯ್ದುದುಮೆಮ್ಮ ಪರಿಜನಮೋಡಿಪೋಗಿ ದುರ್ಗಮಮಪ್ಪೀ ವನದುರ್ಗ ಪ್ರದೇಶದೊಳಾವಾಸಮುಂ ಮಾಡಿಕೊಂಡಿರ್ಪುದುಂ ವಿರಾಧಿತ ನಾಮಧೇಯನಪ್ಪಾನುಮಿಲ್ಲಿಯೆ ಬಳಿದು ಕೆಲವು ಕಾಲದಿಂ ಸಾಧಿತ ಸಕಲ ವಿದ್ಯನಾಗಿ ಪಗೆಯಂ ಸಾಧಿಸುವುಪಾಯಮಾವುದೆಂದುವ್ಮಳಿಸುತುಮಿರ್ದೊಂದು ದಿವಸಮೊರ್ವರಂ ದಿವ್ಯಜ್ಞಾನಿಗಳಂ ಕಂಡೆಮ್ಮ ಪೂರ್ವ ವೃತ್ತಿಯೊಳ್ ನಿಲ್ಪುದಕ್ಕುಮಾಗದೆಂಬುದಂ ಬೆಸಸಿವೆನಲವರಿಂತೆಂದರ್—

ಕಂ॥ ಸಂಶಯಮೇಂ ನಿಲ್ಪಯ್ ನಿಜ
ವಂಶಾಗತಮಪ್ಪ ವೃತ್ತಿಯೊಳ್ ಕರವಾಳಂ॥
ವಂಶಚ್ಛೇದಮುಮುಂ ಖರ
ವಂಶಚ್ಛೇದಮುಮನೊಡನೆ ಪಡೆದತಿಬಳನಿಂ ॥೧೩೪॥

ಎಂದು ಬೆಸಸುವುದುಮಾನಂ
ದಿಂದಿತ್ತಲ್ ನಿಮ್ಮ ಬರ್ಪುದಂ ಪಾರ್ದಿರೆ ನೀ॥
ಮಿಂದೆನ್ನ ಪುಣ್ಯದಿಂದೇ
ಬ್ತಿಂದಿರ್ ತೀರ್ಥಂದುದೆನ್ನ ಪಗೆಯುಂ ಬಗೆಯುಂ ॥೧೩೫॥

ಆಳ್ಕೆಸನನೆನಗೆ ದೇವರ್
ಪೇಳ್ವುದು ಕಾರುಣ್ಯದೃಷ್ಟಿಯಿಂದೆನ್ನಂ ಕೈ॥
ಕೊಳ್ವುದು ಬಿನ್ನಪಮಂ ಬಗೆ
ಗೊಳ್ವುದು ಚರಿತಾರ್ಥನಾಗೆ ಮಾಡುವುದೆನ್ನಂ ॥೧೩೬॥

ಎಂದು ಬಿನ್ನವಿಸಿ ರಾಮದೇವನ ಚರಣ ಸೇವಾ ಲಾಭದಿನಮೃತ ಸೇವೆವಡೆ ದಂತೆ ಪರಿತೃಪ್ತನಾದ ವಿರಾಧಿತಂಗೆ ಲಕ್ಷ್ಮೀಧರನೆಂದನೆಮ್ಮಣ್ಣನೆನ್ನ ಕದನ ಕೇಳೀ ವಿಲೋಕನ ಕುತೂಹಲದಿನೆನ್ನಲ್ಲಿಗೆ ವಂದ ಪಿಂದೆ ಜಗನ್ಮಾತೆಯಂ ಸೀತಾದೇವಿಯ ನಾವನಾನುಮೊರ್ವಂ ಮಾಯಾವಿ ಕಳ್ವುಯಿ್ದಾ ಕಾನನದೊಳಿರ್ದಪನಾದೆಸೆಗಗ್ರಜಂ ವ್ಯಗ್ರನಾಗಿರ್ದಪನದಱಿನಿಲ್ಲಿಗೆ ತಕ್ಕ ಪುರುಷರನಱಸಲಟ್ಟುವುದೆನೆ ವಿರಾಧಿತಂ ಕೇಳ್ದು ಕಟ್ಟುಕಡೆದು ಕಾರ್ಯ ಧುರಂಧರರಪ್ಪ ವಿದ್ಯಾಧರರಂ ಬೆಸಸುವುದುಂ—

ಮ॥ ಲತಿಕಾ ಕುಂಜಂಗಳೊಳ್ ಭೂವಿವರ ಕುಹರದೊಳ್ ಘೋರ ಕಾಂತಾರ [ದೊಳ್ ಪ ।
ನ್ಯ॥
ರ್ವತ ಸಾನೂದ್ಯಾನದೊಳ್ ನಿರ್ಝರ ಸರಿದುಪಕಂಠಂಗಳೊಳ್ ಸಾರ ಕಾಸಾ॥
ರ ತಟೀದೇಶಂಗಳೊಳ್ ಪೂಗೊಳದ ತಡಿಗಳೊಳ್ ದಂಡಕಾರಣ್ಯದೊಳ್ ಕೂ ।
ಡೆ ತೊಱಲ್ದರ್ ಕಂಡರಿಲ್ಲಂಬಿಕೆಯನಱಸಿ ವಿದ್ಯಾಧರಾಧೀಶ ಮುಖ್ಯರ್॥೧೩೭॥

ಅಂತವರ್ ಮನೋವೇಗದಿಂ ಪೋಗಿ ಬಂದು ಜಾತಸ್ಫುರೂಪಮುಂ ಬಿನ್ನವಿಸೆ ಬಿನ್ನನಾಗಿರ್ದ ರಾಮಂಗೆ ವಿರಾಧಿತನೆಂದಂ–ಮತ್ಕುಲಾಗತಮುಂ ನಿಸರ್ಗ ದುರ್ಗಮ ಮುಮಪ್ಪ ಪಾತಾಳಲಂಕಾಪುರದೊಳಿರ್ದು ಸೀತಾದೇವಿಯರ ಪಿರಿಯಣ್ಣನಪ್ಪ ಪ್ರಭಾ ಮಂಡಲನಂ ಬರಿಸಿ ಬಱಿಕ್ಕೆ ತಕ್ಕುದಂ ನೆಗಱಲಕ್ಕುಮದರ್ಕಾನೆ ಸಾಲ್ವೆನಲ್ಲಿಗೆ ಬಿಜಯಂಗೆಯ್ವುದೆಂದು ರಾಮಲಕ್ಷ್ಮಣರಂ ರಥಮನೇರಿಸಿಕೊಂಡು ಚತುರಂಗ ಬಲಸಹಿತಂ ನಿತ್ಯಾಲಂಕಾರೋದಯಮಪ್ಪ ಪಾತಾಳಲಂಕಾಪುರಮುಂ ಪುಗುವ ಸಮಯದೊಳ್—

ಕಂ॥ ಪುರಮುಂ ಪುಗಲೀಯದೆ ಸುಂ
ದರನೆಂಬ ಖರ ತನೂಭವಂ ತನ್ನ ಬಲಂ ॥
ಬೆರಸಡ್ಡಂಬರೆ ಮೆಯ್ಗಲಿ
ವಿರಾಧಿತಂ ಜವನ ಮಸಕಮುಂ ಕೈಕೊಂಡಂ ॥ ೧೩೮ ॥

ದೆಸೆ ಮುಸುಳೆ ಭಾನುಬಿಂಬಂ
ಮುಸುಳೆ ವಿರಾಧಿತನ ಚಾಪ ವಿಲಯಾಂಬುದದಿಂ ॥
ಪಸರಿಸಿ ಸುಂದರನೊಳ್ ಭಯ
ರಸ ವರ್ಷಂ ಪೆರ್ಚೆ ಪೆರ್ಚಿದುದು ಶರವರ್ಷಂ ॥ ೧೩೯ ॥

ಖರ ದೂಷಣರವೊಲಂತಕ
ಪುರಮುಂ ಪುಗುವಂತು ಸುಂದರಂ ಗಾಂಪನೆ ಬೆ ॥
ಳ್ಳಿರಲೆಗೆ ಗಜಂ ಮೂಡಿದವೋಲ್
ಭರವಶದಿಂ ಪೊಕ್ಕನೋಡಿ ಲಂಕಾಪುರಮುಂ ॥ ೧೪೦ ॥

ಅಂತವನನವಯವದಿಂದೋಡಿಸಿ ಮಹಾವಿಭೂತಿಯಿಂ ಪುರಮಂ ಪೊಕ್ಕರನ್ನೆಗ ಮಿತ್ತಲಸುರನಾಗಸದೊಳರ್ಣವದ ಮೇಗೆ ಮನೋವೇಗದಿಂ ಪೋಗುತ್ತುಮಿರೆ—

ಶಾ ॥ ಏೇದಂ ಕೈಗಱಿವಾಗೆ ದಿಗ್ವಿವರಮಂ ಹಾಹಾ ರವಂ ತೀವೆ ಬಾ ।
ಸ್ಫೋದ ಸ್ವೇದ ಜಲಂಗಳಿಂ ಕರಗಿ ನೀರಾಗುಕ್ಕುವಂತಾಗೆ ಮೆಯ್ ॥
ವೋದುತ್ತುಂ ಬಸಿಱುಂ ಪರಾಂಗನೆಯನೆನ್ನಂ ಕಳ್ದುಕೊಂಡೀ ಖಳಂ ।
ಪೋದಪ್ಪಂ ಶರಣಪ್ಪುದಾರ್ಪರೆನುತುಂ ವೈದೇಹಿ ಪುಯ್ಯಲ್ಚಿದಳ್ ॥ ೧೪೧ ॥

ಮ ॥ ಭವನಾವಾಸ ನಿವಾಸಿಗಳ್ ಸಕಲ ವಾನವ್ಯಂತರಾವಾಸ ಸಂ ।
ಭವರತ್ಯುಗ್ರ ನವಗ್ರಹಾದಿ ವಿಷಮ ಜ್ಯೋತಿಷ್ಕರಿಂದಾದ್ರಿ ಕ ॥
ಲ್ಪ ವಿಮಾನ ಸ್ಥಿತರೀ ದುರಾಚರಿತನಂ ಮಾಕೊರ್ಗಳ್ಪ್ರದನ್ಯಾಂಗನಾ ।
ವಿವಶಂ ದಾಶರಥಿ ಪ್ರಿಯಪ್ರಮದೆಯಂ ಕೊಂಡುಯ್ವಪಂ ಸೀತೆಯಂ ॥ ೧೪೨ ॥

ಧರಣೀ ರಕ್ಷಣ ದಕ್ಷ ದಕ್ಷಿಣ ಭುಜಂ ಲಕ್ಷ್ಮೀಧರಂ ವೈದುಷಂ ।
ಹರಿವಂಶಂ ಜನಕಂ ಮದೀಯ ಜನಕಂ ವೀರಂ ಪ್ರಭಾಮಂಡಲಂ ॥
ಪಿರಿಯಣ್ಣಂ ರಘುರಾಮನಂಗನೆಯನೆನ್ನಂ ಸೀತೆಯಂ ಪಾತಕಂ ।
ದೊರೆಗೆಟ್ಟುಯ್ವಪನೇವೆನೆಂದು ಸತಿ ಹಾಹಾಕ್ರಂದನಂ ಮಾಡಿದಳ್ ॥ ೧೪೩ ॥

ಅಂತು ಮುಹುರ್ಮುಹುರುದೀರಿತ ರವಮನರ್ಕಜಟಯ ಮಗನಪ್ಪ ರತ್ನಜಟೆ ಕೇಳ್ದು—

ಮ ॥ ಸತಿ ಪುಯ್ಯಲ್ಚಿದಪಳ್ ರಘೂದ್ವಹ ಕುಲಸ್ತ್ರೀ ಸೀತೆ ಪೆಣ್ಪಯ್ಯಲಂ ।
ಶ್ರುತಿ ಕಯ್ಕೊಂಡುದು ಕೇಳ್ದಿವಂ ತೆವಳಿಗಂಡಂದೆನ್ನ ವಿಖ್ಯಾತಿ ದೂ ॥
ಷಿತಮಕ್ಕುಂ ಸೆಜೆಗೊಂಡನಂ ಕದನದೊಳ್ ಬೆಂಕೊಂಡು ಬಾಹಾಬಲೋ ।
ನ್ನತಿಯಂ ಬೀಜುವೆನೆಂದು [1]ಘೂರ್ಮಿಸಿದನೇಂ ಗಂಡಂ ಪರಿಚ್ಛೇದಿಯೋ ॥೧೪೪॥

ಅಂತು ಪರಿಚ್ಛೇದಿಸಿ ರತ್ನಜಟೆ ಬದ್ಧಭ್ರುಕುಟಿ ದಶಾನನನ ವಿಮಾನಕ್ಕಡ್ಡಂ ಬಂದು—

ಕಂ ॥ ಪರಿಹರಿಸಿ ಪಾಱಿಯಂ ಭೂ
ಚರ ಖೇಚರ ಚಕ್ರವರ್ತಿ ರಾವಣ ನೀನೀ ॥
ಪರವಧುಗಱಿಪುವುದುಮಿಹಂ
ಪರವಱಿಗುಂ ನಿನ್ನಮಹಿಮೆಗಿದು ನಡೆವಳಿಯೇ ॥ ೧೪೫ ॥

---

1. ಪೂರ್ಣಿಸಿದ. ಜ. ಗ. ಫ.

ಎಂದು ಮರ್ಮೋದ್ಘಾಟನಂ ಗೆಯ್ದು—

ಕಂ ॥ ಮೂದಲಿಸಿ ಮುಟ್ಟಿವರ್ಪುದು
ಮಾ ದಾನವನರ್ಕಜಟಯನಣ್ಣಿಂಗವನೊಳ್ ॥
ಕಾದದೆ ಕರುಣಿಸಿ ವಿದ್ಯಾ
ಚ್ಛೇದಂ ಗೆಯ್ದುಂ ನಿರಂಕುಶಂ ದಶಕಂಠಂ ॥ ೧೪೬ ॥

ಅಂತು ವಿದ್ಯಾಚ್ಛೇದಂ ಗೆಯ್ವುದುಂ—

ಕಂ ॥ ಅಂಬರದಿನಾತ್ಮವಿದ್ಯಾ
ಡಂಬರಮಸ್ತಮಿಸೆ ಬಿಟ್ಟು ಮೂರ್ಛಾಪನ್ನಂ ॥
ಕಂಬು ದ್ವೀಪದೊಳಳವಟ
ದಂಬರಚರನೆಜಕೆಮುಱಿದ ಪಕ್ಕಿವೊಲಿರ್ದಂ ॥ ೧೪೭ ॥

ಅನ್ನೆಗಮಿತ್ತ ದಶಮುಖಂ ಲಂಕೆಗಭಿಮುಖನಾಗಿ ಪೋಗುತ್ತುಂ—

ಮ ॥ ಬಗೆ ಸಂಭೋಗ ಸುಖಕ್ಕೆ ಕಾತರಿಸೆ ಕಣ್ಗಳ್ ಕೀಜಿ ಸರ್ವಾಂಗಮುಂ ।
ತೆಗೆದಾಲಿಂಗಿಸೆ ಮಾತುಗಳ್ ಮದನರಾಗೋನ್ಮಾದಮುಂ ಬೀಜಿ ಬಾ ॥
ಹುಗಳಾಲಿಂಗನ ಲಾಲಸಂಗಳಿನೆ ಧೈರ್ಯಂಗೆಟ್ಟು ವೇಲ್ಪ್ಪಾಯ್ದು ಜೇ ।
ಷ್ಟೆಗೆ ಪೌಲಸ್ತ್ಯನುಮೊತ್ತುಗೊಟ್ಟನೆನಲಾರಂ ದರ್ಪಕಂ ದಂಡಿಸಂ ॥ ೧೪೮ ॥

ಆಗಳವನಱಿಪಿನಱಿಗೆಯ್ತಕ್ಕೆ ಸೀತೆ ಸೈರಿಸದೆ ನೀನೆನ್ನ ಸೋಂಕಿದೊಡೆ ನಾಲಗೆ ಗಿಬ್ಬು ಸಾವೆನೆಂದು ಪರಿಚ್ಛೇದಿಸಿ ನುಡಿಯೆ ದಶಾಸ್ಯನೋಸರಿಸಿ ಮಹಾಸತಿಯ ಶೀಲ ದಳವನಱಿಯನಪ್ಪುದಱಿನನಂತವೀರ್ಯ ಕೇವಲಿಗಳಿತ್ತ ಪರವಧೂ ವಿರತಿ ವ್ರತ ಪರಿ ಪಾಲನವೆನಗರಿದಾದುದೆನೆ ನಿಸರ್ಗ ರಾಗಿಗಳಪ್ಪ ಪೆಂಡಿರ ಪರಿಣಾಮವೆಲ್ಲಿವರಂ ನಡೆ ದಪ್ಪುದೀಕೆಯನಾವ ತೆಜದೊಳಗೊಡಂಬಡಿಸುವುದಾವ ಗಹನವೆಂದು ತನ್ನಂ ತಾನೆ ಸಂತಯಿಸುತ್ತುಂ ಪೋಪ ಸಮಯದೊಳ್—

ಚ ॥ ಅನುವರದೊಳ್ ಪಲಾಯನಪರರ್ ಗಜಿಸೋಂಕದೆ ಹಸ್ತನುಂ ಪ್ರಹ ।
ಸ್ತನುಮತಿವೇಗದಿಂ ಬರುತುಮಾಗಸದೊಳ್ ದಶಕಂಠನಂ ವಿಲೋ ॥
ಚನ ಪಥ ಪರ್ತಿಯಂ ಜಯಜಯಧ್ವನಿ ಕೈಮಿಗೆ ಮುಟ್ಟಿವಂದವರ್ ।
ವಿನಮಿತ ಮಸ್ತಕರ್ ಮುಕುಳಿತಾಂಜಲಿಗಳ್ ಪೊಡೆವಟ್ಟು ಪೋಪುದುಂ ॥೧೪೯॥

ಆಗಳದಂ ಸೀತೆ ಕಂಡೀತಂ ರಾವಣನೆಂದಱಿದು—

ಕಂ ॥ ಅನಶನಮಂ ಕೈಕೊಂಡಳ್
ಮನದೊಳ್ ಸತಿ ಪತಿಯ ಕುಶಲವಾರ್ತೆಯನಾಂ ಕೇ ॥
ಳ್ದಿನಮುಣ್ಣೆನೆಂದು ನೃಪ ಮಾ
ನಿನಿಯರ್ ಸಜ್ಜಿಸಿಕೆಗಿಂತು [1]ನೋಂತರುಮೊಳರೇ ॥ ೧೫೦ ॥

ಅಂತು ರಾವಣಂ ಲಂಕೆಯನೆಯ್ದುವಂದು ಗೀರ್ವಾಣರಮಣಮೆಂಬ ನಿಜ ವಿನೋದ ವನಮುಂ ಪುಗುವಾಗಳ್—

ಕಂ ॥ ಪುಗದಿರ್ ವನಮಂ ಪೊಕ್ಕೀ
ಮೃಗಾಕ್ಷಿಯಂ ಮಡಗೆ ರಾಮದೂತನಿನೆಮಗ ॥
ಚ್ಚಿಗಮಕ್ಕುಮೆಂದು ಕೈಸ
ನ್ನೆಗೆಯ್ವವೋಲ್ ತಳಿರ ತೊಂಗಲಲುಗಿದುದೆಲರಿಂ ॥ ೧೫೧ ॥

ಅಂತಾ ವನಮಂ ಪೊಕ್ಕಲ್ಲಿಯ ವಿಚಿತ್ರ ಮಣಿಮಯ ಗೇಹದೊಳ್ ವೈದೇಹಿಯ ನಿರಿಸಿ ತಾನುಂ ತನ್ನರಮನೆಯ ಕರುಮಾಡಮುಂ ಪೊಕ್ಕಿರ್ಪುದುಮಾ ಸಮಯದೊಳ್ ಖರದೂಷಣರ ಮರಣವಾರ್ತೆಯಂ ಚಂದ್ರನಖಿ ಚರವಚನದಿಂ ಕೇಳ್ದು—

ಕಂ ॥ ಸುತನಂ ಕೊಂದವನಂ ಕೊ
ಲ್ವ ತಕ್ಕೆಸಿಂ ಪೋಗಿ ನಿಜ ಪರಿಗ್ರಹ ಸಹಿತಂ ॥
ಪತಿಯುಂ ಮೈದುನನುಂ ಪರಿ
ಹೃತ ಜೀವಿತರಾಗೆ ಶೋಕ ವಿಹ್ವಲೆಯಾದಳ್ ॥ ೧೫೨ ॥

ಚ ॥ ಅವಿರಲ ಪಾರಿಹಾರ್ಯ ರುತಿ ಶೋಕ ರುತಿ ಪ್ರತಿಬದ್ಧಮಾಗೆ ಪ ।
ಲ್ಲವ ಪರಿಶೋಭಿ ಪಾಣಿತಲದಿಂ ಬಸಿಜಂ ಬಿಡೆ ಮೋದಿಕೊಳ್ವುದುಂ ॥
ತಿವಳಿಗಳನ್ನವಾಗೆ ಬೆರಲಚ್ಚಿಜಿದಂತಿರೆ ಕಣ್ಣ ನೀರ್ಪೊನಲ್ ।
ಕವಿತರೆ ಬಂದು ಚಂದ್ರನಖಿ ಪೊರ್ದಿದಳಗ್ರಜ ಪಾದ ಮೂಲಮಂ ॥ ೧೫೩ ॥

ಅಂತು ಚಂದ್ರನಖಿ ನಿಖಿಲಾಂತಃಪುರಮುಂ ಮುಂಡೋದರಿಯುಂ ಬೆರಸು ಬಂದು ಮುಂದೆ ಮಹಾಶೋಕಂಗೆಯ್ವುದುಮಾಕೆಗೆ ಸಂಸಾರ ಸ್ವರೂಪಮಂ ತಿಳಿಪಿ ಖರದೂಷಣರಂ ಕೊಂದನನಮೋಘಂ ಕೊಲ್ವೆನೆಂದಚ್ಚಿರಿಯಂ ಬಾರಿಸಿ ಭಗವದರ್ಹದ್ಭವನಂಗಳೊಳ್ ಮಹಾಪೂಜೆಗಳಂ ಮಾಡಿಸಿ ರಾಜಭವನಕ್ಕೆ ಬಂದು ಶಯ್ಯಾಸದನಮಂ ಪೊಕ್ಕು—

---

1. ಸೈದರು. ಚ

ಚ ॥ ತಡೆವುದು ತಕ್ಕುದಲ್ತು ಖರದೂಷಣರಂ ಕಡುಕೆಯ್ದು ಕೊಂದನಂ ।
ಮುಡಿಪುವೆನೆಂಬ ತಕ್ಕುಬಿದು ಸೀತೆಯನೇತೆಱದಿಂದಮೆಂತೊಡಂ ॥
ಬಡಿಸುವೆನೆಂತು ಮೇಳಿಸುವೆನೆಂತು ಮದೀಯ ಮನೋಜ ತಾಪಮಂ ।
ಕಿಡಿಸುವೆನೆಂದು ಪಂಬಲಿಸಿದಂ ಸಲವಂ ಮನದೊಳ್ ದಶಾನನಂ ॥೧೫೪॥

ಉ ॥ ಏತಜ ಸೋಂಕುಮಾವುದಜ ಗಾಡಿಯುಮೊಂದಜ ಕಂಪುಮನ್ನರೊ ।
ಳ್ಪಾತುಮುದೆಂತುಟಪ್ಪ ರಸಮುಂ ತನಗೆಂತುಮಸಹ್ಯಮಾಗೆ ಹೃ ॥
ಜ್ಜಾತನ ಮಾಯೆ ಮೋಹಿಸುವುದುಂ ಬಗೆಯಂ ವಿಗತಾನ್ಯ ಚಿಂತನಾ ।
ಸೀತೆಯ ಚಿಂತೆಯಿಂ ದಶಮುಖಂ ಮರವಾನಸನಂತೆ ತೋಜಿದಂ ॥೧೫೫॥,

ಅಂತು ಚಿಂತಾಕ್ರಾಂತನಾದ ನಿಜಮನೋವಲ್ಲಭನಂ ಮಂಡೋದರಿ ಕಂಡು—

ಚ ॥ ಖರನ ವಿಪತ್ತಿಯೊಳ್ ವಿಕಲನಾದನೆ ಗೆತ್ತಿನಿತೇಕೆ ಪೆಂಡಿರಂ ।
ತಿರೆ ಬಹು ಶೋಕವಿಘಾತಜದಿನಿರ್ದೊಡೆ ಗಂಡಗುಣಕ್ಕೆ ನಾಣೆಯುಂ ॥
ಸರಿಭವನೆಂದಳೆತ್ತಲಜಿವಳ್ ಗಗನೇಚರ ಚಕ್ರಿ ಜಾನಕೀ ।
ವಿರಹ ಕೃಶಾನು ಸುತ್ತಿಸುಡೆ ಚಿತ್ತಮನಾಕುಲನಾದನೆಂಬಿದಂ ॥ ೧೫೬ ॥

ಎನೆ ದಶಗ್ರೀವನೆನ್ನ ಬೇವಸಕ್ಕಿದು ನಿಮಿತ್ತಮಲ್ತು .ನಿನಗೆನ್ನತೆಜಿನನಜಿಯಲಾಗದೆಂದು—

ಕಂ ॥ ಬೆಂಡಾಗೆ ಮನಂ ಮೌನಂ
ಗೊಂಡಿರೆ ವಲ್ಲಭನ ಮನಮನಜಿವಾಗ್ರಹದಿಂ ॥
ಮಂಡೋದರಿ ಮಾಣದೆ ಬೆಸ
ಗೊಂಡಳ್ ಕೌತುಕಮಿದೇಂ ನಿಮಿತ್ತಮೆನುತ್ತುಂ ॥ ೧೫೭ ॥

ಅಂತು ಬೆಸಗೊಳ್ವುದುಂ ಮಜುವಮಾತುಗುಡದೆ ಲಜ್ಜಾರಸ ನಿಮಗ್ನಾನನಂ ದಶಾನನನಿರೆ—

ಉ ॥ ಗಂಡುಡೆಯುಟ್ಟು ಕೈದುವಿಡಿದುಮ್ಮಳಮಂ ನಿನಗುಂಟುಮಾಜ್ಞೆ ಬ ।
ಲ್ಪಂಡಿನ ದೇವ ಮಾನವ ವಿಯಚ್ಚರರೊರ್ವರುಮಿಲ್ಲ ನಿನ್ನದೋ ॥
ರ್ಮಂಡಲಮಿಾ ತ್ರಿಖಂಡಮುಮನಾಕ್ರಮಿಸಿತ್ತಿದು ಪುಷ್ಪ ಕಾಂಡ ಕೋ ।
ದಂಡನ ಗೊಡ್ಡಮುರ್ಚಿರುವೆ [1]ತೋಜಿವೆಯಾತನ ಪೂವಿನಂಬುಗಳ್ ॥೧೫೮॥

1. ತ್ತಾರವರಾ. ಜ್ಞೆ.

ಕಂ ॥ ಸ್ಮರನಂ ಮೆಚ್ಚದ ನಿನ್ನೀ
ಪರಿಜಂ ಕಡೆಗಣಿಸಿ ನಿನಗಮಿನಿ[1]ತಚ್ಚಿಗಮುಂ ॥
ತರಲಾರ್ತ ನೀಜಕಿ ಲೆಪ್ಪದ
ಬರೆಪದ ಕಂಡರಱಪೆಸದ ಪೆಣ್ಣಕ್ಕುಮವಳ್ ॥ ೧೫೯ ॥

ಎಂದಜಿತಸೇನಮುನಿಯದಂತೆ ತೆಜಕೆಯ ನುಡಿಯಿ ಮನದೆ ಕೊಂಡು ಮುಂಡೋದರಿಯ ಮೊಗಮಂ ನೋಡಿ—

ಚ ॥ ಅಜಕಿಪುವ ವಾರ್ತೆಯಲ್ತು ನಿನಗೆನ್ನ ನೆಗಚ್ಚಿಕೆಯ ವಾರ್ತೆ ನೀನೆ ಮು।
ನ್ನಜಕಿದ ಬಜಕಿಕ್ಕದಂ ನಿನಗೆ ವಂಚಿಸಲಾಗದು ತಂದೆ ನಿಂದು ಮುಂ ॥
ದಜಕಿಯದೆ ಸೀತೆಯಂ ಮದನನಾಕೆಯ ದೂಸಜಕಿನೆನ್ನನೆಚ್ಚಪಂ ।
ನೆಜಕಿಗೊಳಿ ಪೂನಿನಂಬಲಗಿನಂಬುಗಳಿಂಬಿನಮುಂಬುಜಾನನೇ ॥ ೧೬೦ ॥

ಎಂದು ಮತ್ತನಿಂತೆಂದನಿಂದು ಪುಷ್ಪಕವಿಮಾನದೊಳ್ ಜಾನಕಿಯನುಜಕಿ ಸೆಜಕಿನಿಡಿದು ಒರುತ್ತುವಾಕೆಯ ಪಜಿಗಜಿದ ಗಾಡಿಯಂ ನೋಡಿ ಮನದೊಳಿನ ಗಜಿಪು ಕೈಗಜಿವಾಗೆ ಸೈರಿಸದೆ ಪೊರ್ದಲ್ತರೆ ನೀನೆನ್ನಂ ಪೊರ್ದಿದೊಡೆ ನಾಲಗೆ ಗಿಬ್ಬು ಸಾನೆನೆಂದು ಜಡಿದು ನುಡಿಯೆ ಸೆಡೆದು ಲಂಕೆಗೆ ತಂದು ಗೀರ್ವಾಣ ರಮಣೋದ್ಯಾನದೊಳಿರಿಸಿ ಬಂದೆನಾ ಕುಂದ ದಳ ಧವಳ ಲೋಚನೆಯ ಲಾವಣ್ಯ ಸುಧಾ ಸೇವೆ ಸಮಸಿಸದಿರೆ ಸಾವು ಸಮಸಿಸುಗುಮೆನೆ ದಶಾನನನ ದಶಾವಸ್ಥೆಯಂ ಕಂಡು ಮುಂಡೋದರಿ ಭಯಂಗೊಂಡು—

ಕಂ ॥ ಅಚಿರ ಪ್ರಭೆಯುಂ ನೆಂಡಿರ
ರುಚಿತ್ವಮುಂ ಕ್ಷಣದಿನಗ್ಗಳಂ ನಿಲ್ಲುಸು ನೇ ॥
ಖಚರೇಂದ್ರ ನಿಜಾಕೃತಿ ಚಿ
ತ್ತ ಚಮತ್ಕೃತಿ ಕಂಡಿದರ್ಕೆ ಸೋಲದರೊಳರೇ ॥ ೧೬೧ ॥

ಎಂದು ಸಂತಸಂಬಡೆ ನುಡಿದಾಕೆಯನೊಡಂಬಡಿಸಲಾನೆ ಸಾಲ್ಕೆನೆಂದು ಸಮಸ್ತಾಂತಃಪುರ ಸೀಮಂತಿನಿಯರ್ನೆರಸು ಸೀತೆಯ ಸವಿವಾಸಕ್ಕೆ ನಂದು—

ಕಂ ॥ ವನಿತೆಯರ ನಯನ ರುಚಿಯಿಂ
ತನು ರುಚಿಯಿಂ ರತ್ನಭೂಷಣಂಗಳ ರುಚಿಯಿಂ ॥
ದಿನಲಕ್ಷ್ಮಿಗೆ ಕೊರ್ವುರ್ವಿದು
ದೆನೆ ಮುಂಡೋದರಿ ವಿಲಾಸದಿಂ ಕುಳ್ಕಿರ್ದಳ್ ॥ ೧೬೨ ॥

---

1. ಪಜಿಗ. ಗ. 2. ಸುಜಿಯದಂತೆ, ಕ. ಜಿ: ಎಂದುಮುನಿಸುನಜಿದು ತೆಜಿಕೆಯಿಂ. ಗ. ಘ.

ಅಂತು ಕುಳ್ಳಿರ್ದುದುಂ—

ಕಂ ॥ ಅನಿಬರರಸಿಯರ ರೂಪುಂ
ಮನಕ್ಕೆ ಸೊಗಯಿಸಿದುದಿಲ್ಲ ಸೀತೆಯ ಕೆಲದೊಳ್ ॥
ದಿನಲಕ್ಷ್ಮ್ಯಯ ಕೆಲದೊಳ್ ಲೋ
ಚನ ಸುಖಮುಂ ಪಡೆಯದಂತೆ ತಾರಾವಿಭವಂ ॥ ೧೬೫ ॥

ಅನಂತರಮಾ ಖಚರಕಾಂತೆ ಜಾನಕಿಯ ಮುಖಸರೋಜಮುಂ ನೋಡಿ—

ಸ ॥ ಪಂಕಜ ಸಂಭವಂ ನಿನಗೆ ಪಾಸಟಿಯಲ್ಲದ ರಾಘವಂಗೆ ನಿ ।
ನ್ನಂ ಕುಡೆ ಕಂಡುಸೈರಿಸದೆ ಚಿತ್ತಭವಂ ದಶಕಂಧರಂಗೆ ಕೊ ॥
ಟ್ಟಂ ಕಡುನೀಜ[1] ನಿನ್ನನನುರೂಪ ವರಂಗೊಡಗೂಡಿ ಲೀಲೆಯಿಂ ॥
ಲಂಕೆಯನಾಳ್ದು ತಾಳ್ದರಸಿವಟ್ಟಮನಾತ್ಮ ಲಲಾಟ ಪಟ್ಟದೊಳ್ ॥ ೧೬೬ ॥

ಈ ನವ ಯೌವನೋದಯಮನೀ ನಯನೋತ್ಸವಮಪ್ಪ ರೂಪಿನು ।
ದ್ದಾನಿಧಿಯನೀ ತನುಚ್ಛವಿಯನೇಂ ಪೊಗಲ್ವಿಪ್ಪುದೊ ಸೋಲ್ತು ಬಂದೊಡಂ ॥
ಮೇನಕೆ ಬಾಚಿತ್ತಿಗೆಯ್ದುದ ದಶಾನನನುಂ ಬಸದಾದನೆಂದೊಡಾರ್ ।
ಜಾನಕಿ ನಿನ್ನವೋಲುಚ್ಚಿದ ಮಾಸಿನಿಯರ್ ಕಡು ಗಾಡಿಕಾರ್ತಿಯರ್ ॥ ೧೬೭ ॥

ಕಂ ॥ ಪದವಿಲ್ಲಂ ನನೆಯಂಬಿನ
ಪೊದೆಯಂ ಪಿಡಿದಿರದ ಪದದೊಳಾನ್ದೋಡಿದೊಡಂ ॥
ಮದನಂಗಂ ಮಾಸಿನಿ ದಶ
ವದನಂಗಂ ರೂಪ ಭೇದಮೇನಾದಪುದೇ ॥ ೧೬೮ ॥

ಚ ॥ ಇಸುವೆಸಕ್ಕೈಸು ಖೇಚರ ಪುರಂಧ್ರಿಯರಂ ಭರಿತ ತ್ರಿಖಂಡದೊಳ್ ।
ಪಸರಿಸು ನಿನ್ನ ಗೋಸಣೆಯನಾಣೆಯನೀ ಖಚರೇಂದ್ರ ವಕ್ಷದೊಳ್ ॥
ವಸಿಯಿಸು ಲಕ್ಷ್ಮ್ಯಪೋಲ್ ವಿಜಯಲಕ್ಷ್ಮ್ಯವೊಲೀತನ ತೋಳ ತಪ್ಪಿನೊಳ್ ॥
ಪೊಸಯಿಸು ನಲ್ಮೆಯಂ ದಿವಸ ಲಕ್ಷ್ಮ್ಯಯನೇಕೆಗೆ ಬಂಜೆಮಾಡುವೈ ॥ ೧೬೯ ॥

ಜನಕಜೆ ನಿನ್ನ ಪೀವರ ಪಯೋಧರ ಮಂಡಲಮುಂ ಮನೋಜ ರಾ ।
ಜನ ವಿಜಯಾಭಿಷೇಕ ಸವನೋತ್ಸವ ಪೂರ್ಣ ಸುವರ್ಣ ಕುಂಭಮುಂ ॥
ನೆನೆಯಿಸುವಂತು ಮಾಡು ಖಚರೇಂದ್ರನ ಕಾತರ ದೃಷ್ಟಿ ಪಾತ ಚಂ ।
ದನ ಘನಸಾರ ಕರ್ದಮ ವಿಲೇಪನದಿಂ ಕರ ಪಲ್ಲವಂಗಳಿಂ ॥ ೧೭೦ ॥

1. ನೀಂ ತಳಿದಪ್ಪರೆ. ಚ. 2. ಮಂ. ಚ. 3. ನೇಕೆಯೊ. ಕ. ಖ. ಗ. ಘ.

ಎನೆ ಜಾನಕಿ ಮಂಡೋದರಿಗೆ ಮನದೊಳಿ ಕನಲ್ದು—

ಮ ॥ ಇದು ಮತ್ತೋನ್ಮತ್ತ ಜಲ್ಪಂ ಕುಲವಧುನರ ಮಾತಲ್ತು ನಿಮ್ಮೊಂದಿಗರ್ ವಂ।
ಸ್ಥ॥ ಶದ ಕೇಡಂ ನೋಡದೊಳ್ಪಂ ಬಗೆಯದೆ ಪಟ್ಟಾಗಂ ಪಾತಕಕ್ಕಂ ಭಯಂ ಗೊ ।
ಳ್ಪದೆ ಪೇಚರ್ ಪೊಲ್ಲ ಮಾತಂ ನುಡಿವಿರಿದು ಮನಂ ನೋಂಪ್ಪಿ ಸಂಕಲ್ಪ ಜಲ್ಪಂ।
ಮದಧೀಶಂ ರಾಮಚಂದ್ರಂ ಪೊಜಗೆನೆ ಪೆಜರೇನಾತೊ ಜಾತಾನುಜಾತರ್ ॥

ಕಂ ॥ ತನಗೆ ಪತಿವ್ರತಮಿಲ್ಲದ
ವನಿತೆ ಕುಲಸ್ತ್ರೀಯೆ ಭಿನ್ನ ಭಾಜನಮಿಂತ ॥
ಸ್ಸನುಚಿತಮಂ ಹರಿವಂಶದ
ವನಿತೆಯರೊಳ್ ನುಡಿಯಲಕ್ಕುಮೇ ನಿಮ್ಮನ್ನರ್ ॥ ೧೭೦ ॥

ಎಂದು ಮಂಡೋದರಿಯಂ ಬಿಡೆನುಡಿವುದುಮಾ ಸಮಯದೊಳ್—

ಮ॥ಸ್ರ॥ ಜಡಿಯುತ್ತುಂ ಚಂದ್ರಹಾಸಾಸಿಯನೆಳಸೆ ತದಾಸ್ಥಾನಮಂ ದಿವ್ಯ ಗಂಧಂ ।
ಕುಡುಮಿಂಚಂ ಬೀಜಿ ವಜ್ರಾಭರಣ ಕಿರಣಮಿಂದ್ರಂಗೆ ಸೌಂದರ್ಯದಿಂ ನೂ ॥
ರ್ಮಡಿ ಮೇಲೆಂಬನ್ನೆಗಂ ಭೋಂಕನೆ ಜನಕ ಸುತಾಲೋಕನೋತ್ಸಂತ ಚಿತ್ತಂ ।
ನಡೆತಂದಂ ದಾನವೇಂದ್ರಂ ಸುರತರು ಸುಮಸೋಮಂಜರೀ ಕರ್ಣಪೂರಂ ॥

ಅಂತು ಬರಲೊಡಂ—

ಕಂ ॥ ಪರಿನೀರೊಳಗಣ ನೆಲಲಂ
ತಿರೆ ತನ್ನಂ ನೋಡಿ ನಡುಗೆ ಜಾನಕಿ ದಶಕಂ ॥
ಧರನಂಜಲಿನುತ್ತಂತಃ
ಪುರಮಂ ಕಣ್ಣಿನ್ನೆಯಿಂದಮಲ್ಲಿಂ ಕಳಿಪಂ ॥ ೧೭೧ ॥

ಅನಂತರಂ ಜಾನಕೀವದನ ವಿನ್ಯಸ್ತ ವಿಲೋಚನಂ ಕಮಲಿನಿಯನೆಳಸುವ ಹಿಮ
ಕರ ಕಿರಣದಂತೆ ದಂತಕಾಂತಿ ಪಸರಿಸೆ ಪೌಲಸ್ತ್ಯನಿಂತೆಂದಂ-

ಉ ॥ ನೂಪುರಮಂ ಪದಕ್ಕೆ ಮಣಿಮೇಖಲೆಯಂ ಜಘನಕ್ಕೆ ಕುಂಕುಮಾ ।
ಲೇಪನಮಂ ಕುಚಕ್ಕೆ ಪಸುರ್ಗಂಕಣಮಂ ನಳಿತೋಳ್ಗೆ ಪತ್ರ ಲೇ ॥
ಖಾ ಪರಿಶೋಭೆಯಂ ನಿಜ ಕಪೋಲ ತಳಕ್ಕೆ ಕುಡಲ್ ಮನೋಜ ಸಂ ।
ತಾಪನ ತಪ್ತಮಾತುರಿಸಿದಪ್ಪುದು ಮನ್ಮನಮಂಬುಜಾನನೇ ॥ ೧೭೨ ॥

ಅನೆಯ ಮೇಲೆ ಬೆಳ್ಗೊಡೆಯ ತನ್ನೆಜಬೊಳ್ ನೆಲಸಿರ್ದೆಲೇ ಸರೋ ।
ಜಾನನೆ ಸೆಂಡವಾಸದ ವಿಳಾಸಿನಿಯರ್ ಬರೆ ನಿನ್ನ ಸುತ್ತಲುಂ ॥

ಜಾನಕಿ ನೋಡ ನಿನ್ನನಗೆಗಣ್[1] ಪರಿತುಷ್ಟಿಯನಪ್ಪುಕೆಯ್ಯ್ ಲಂ ।
ಕಾನಗರೀ ಬಹಿಃಪುರ ನನೋರು ವಿಲಾಸ ವನಂಗಳೀಜುಮಂ ॥ ೧೮೪ ॥

ಚ ॥ ಕುಲನದಿಯಂ ಕುಲಾದ್ರಿ ಶಿಖರಂಗಳ ದಿವ್ಯ ಸರೋವರಂಗಳಂ ।
ಮಲಯ ಗಿರೀಂದ್ರ ಸಾನು ವನಮಂ ಲವಣಾರ್ಣವ ವಜ್ರ ವೇದಿಕಾ ॥
ವಿಲಸನಮಂ ವಿಲೋಚನ ಪಥಾತಿಥಿಮಾಡು ವಿಯದ್ವಿಲಾಸಿನೀ ।
ತಿಲಕ ಮೆನಿಪ್ಪ ಪುಷ್ಪಕ ವಿಮಾನಮನೆನ್ನೊಡನೇಜು ಜಾನಕೀ ॥ ೧೮೫ ॥

ಶಾ ॥ ಎನ್ನೊಳ್ ಪೊರ್ದುಡಿದಿಂದ್ರ ಸಿಂಧುರದ ಕೋಡಿಂದಾದ ಪಲ್ಯಂಕದೊಳ್ ।
ಮುನ್ನಂ ಪದ್ಮಜನಂಚೆಯಂ ತಜಿದು ತುಪ್ಪಟ್ಟೊಂಡು ದಿಕ್ಪಾಲಕರ್ ॥
ಬೆನ್ನಿತ್ತಿಕ್ಕಿದ ಚೀಲದಿಂ ಸಮೆದ ಕೇಳೀತಲ್ಪದೊಳ್ ನಿದ್ರೆಗೆಯ್ ।
ನಿನ್ನಂ ನಿದ್ರೆಯಿನೆಬ್ಬವನ್ನಮಮರೀ ಮಾಂಗಲ್ಯ ಗೀತ ಸ್ವನಂ ॥ ೧೮೬ ॥

ಮ ॥ ಅಸಿರತ್ನಂ ಚಕ್ರರತ್ನಂ ನವನಿಧಿ ಪಲವುಂ ವಿದ್ಯೆ ಕೈಸಾರ್ದುವುಳ್ಳಂ ।
ಜಿಸಿದೆಂ ದಿಕ್ಪಾಲರಂ ಕಟ್ಟಿದೆನುಜದಿದಿರಾದಿಂದ್ರನಂ ಲೀಲೆಯಿಂ ಚಾ ॥
ಳಿಸಿದೆಂ ಕೈಲಾಸಮಂ ದಕ್ಷಿಣ ಭರತ ಧರಾಚಕ್ರಮಂ ಚಕ್ರದಿಂ ಸಾ ।
ಧಿಸಿದೆಂ ಪೌಲಸ್ತ್ಯನಂ ಮಿಾಜುವರೆ ಸಮರದೊಳ್ ಮಾನವರ್ ಮಿಾನಸೇತ್ರೀ ॥

ಶಾ ॥ ಕಾಡಂ ತೂಡೆ ತೊಟ್ಟಿಳ್ದಿ ಕಾಡೊಡಮೆಯಿಂ ಭೋಗೋಪಭೋಗಂಗಳೊಳ್ ।
ನೀಡುಂ ತೃಪ್ತಿಯನೀವ ರಾಘವನೊಳೀಂ ವೈದೇಹಿ ವಿದ್ಯಾಧರ ॥
ಕ್ರೀಡಾಸದ್ಮದೊಳಂಗರಾಗ ವಸನಾದಿ ದ್ರವ್ಯದಿಂ ಮನ್ಮಥ ।
ಕ್ರೀಡಾಸೌಖ್ಯಮನಪ್ಪುಕೆಯ್ದು ಮೆಜಿಕೆ ನೀಂ ನಾನಾವಿನೋದಂಗಳಂ ॥ ೧೮೮ ॥

ಎಂದು ಪರಸಿಂದಾಪರನುಮಾತ್ಮ ಸ್ತವನ ತತ್ಪರನುಮಾಗಿ——

ಕಂ ॥ ಅನುನಯ ಶತಂಗಳಂ ನುಡಿ
ದನುವಶೆ ಮಾಡಲ್ ವಿಯಚ್ಚರೇಂದ್ರನುಮೇನಾ ॥
ರ್ತನೆ ಜನಕಜೆಯಂ ಗಗನಮ
ನನುಲೇಪಂಗೆಯ್ದೊಡಲ್ಲಿ ಮಸಿ ಪತ್ತುಗುಮೇ ॥ ೧೮೯ ॥

ಸಿರಿಯಂ ಮೆಯ್ಸಿರಿಯಂ ಮೆಜಿಕೆ
ದು ರಾವಣಂ ಸತಿಯನೆಜಗಿಸಲ್ ನೆಜಕೆದನೆ ಪೊ ॥
ನ್ನೊರೆಗನ್ಯ ದೀಪಮೆಜಪಂ
ತಿರೆ ಮಾಣಿಕ್ಯ ಪ್ರದೀಪಮೇನೆಜಗುಗುಮೇ ॥ ೧೯೦ ॥

1. ಪರಿತೃಪ್ತಿ. ಗ. ಘ.

ಅಂತಾ ದುರಾತ್ಮನ ದುರುಕ್ತಿಗೆ ಜನಕಸುತೆ ಕಡು[1]ಮುಳಿದು ಮುನಿಸಂ ಮೊಗಕ್ಕೆ ತಾರದೆ—

ಮ ॥ ನುಡಿಯಲ್ ತಕ್ಕುದೆ ಪಾಟಿದಪ್ಪಿ ಪಟಿಗಂ ಪಾಪಕ್ಕಮುಳ್ಳುದೀ ।
ನುಡಿಯಂ ಚಿಃ ಪರದಾರವನ್ಯ ಶಯನ ಸ್ಥಾನಂ ಪೆಱರ್ ಮಿಂದ ನೀರ್ ॥
ಮುಡಿದುತ್ಫುಲ್ಲ ಕದಂಬಕಂ [2]ತೊಡೆದ ಕಾಶ್ಮೀರಾಂಗರಾಗಾದಿಕಂ ।
ಮಡೆಗೂಟುಂ ಬೀಟುಡೆ ಬಾಯ ತಂಬುಲಮಿವಸ್ಪೃಶ್ಯಂಗಳೀನಲ್ಲಮೇ ॥೧೮೧॥

ಕಂ ॥ ಗುಣಹಾನಿಯಿಂದಧೋಗತಿ
ಗುಣದಿಂ ಸ್ವರ್ಗಾಪವರ್ಗ ಸುಖಮಕ್ಕುಮೆನಲ್ ॥
ಗುಣ ಹೀನನ ಸಿರಿಯಿಂದಂ
ಗುಣಿಗಳ ಬಡತನಮೆ ನಾಡೆಯುಂ ಲೇಸಲ್ತೇ ॥ ೧೮೨ ॥

ಮ ॥ ಅಜುನೀರಾಗಿರೆ ತಾಯ್ಮಳಲ್ಪರೆಗಮಿಾ ವಾರಾತಿಯಂ ತುಳ್ಕಲುಂ ।
ತಿಜುಕಲ್ಲಾಡಲುಮಿಾ ತ್ರಿಕೂಟ ಗಿರಿಯಂ ತತ್ಸೂರ್ಯಹಾಸಾಸಿಯಿಂ ॥
ದಿಜಿದಳ್ವಾಡಿಸಲುಂ ದ್ವಿಷನ್ನೃಪರನೇಕಾಕ್ಷೌಹಿಣೀ ಸೇನೆಯಾ ।
ನೆಜಿವಂ ದೋರ್ಬಲ ದೃಪ್ತನಪ್ರತಿಹತಂ ರಾಮಾನುಜಂ ಲಕ್ಷ್ಮಣಂ ॥೧೮೩॥

ಉ ॥ ರಾವಣನಂತವೀರ್ಯಸಿದಿರೊಳ್ ಭುವನ ತ್ರಯವಾಂತೊಡಂ ನೃಪ ।
ಗ್ರಾಮಣಿ ದೋಸ್ಸಹಾಯದೊಳಿ ಗೆಲ್ವನಮೋಘಮುದಾತ್ತ ರಾಘವೋ ॥
ದ್ದಾಮ ತಿಲೀಮುಖಂ ರಣದೊಳನ್ಯ ಸಹಾಯಮನಾಸೆಗೆಯ್ವ ಶಂ ।
ಕಾಮಯ ಪೀಡ್ಯಮಾನರಧಿರಾಜನೊಳಿಕ್ಕುತುಳಕ್ಕೆ ವರ್ಪರೇ ॥ ೧೮೪ ॥

ಆಹವ ದೋಹಳಂ ಮಸುಜಿ ಮತ್ಪತಿಯಿಂದಮಗಲ್ದಿ ತಂದೆ ವೈ ।
ದೇಹಿಯನೆನ್ನನುಕ್ಕೆವದಿನಲ್ಲದೊಡೇಂ ದಶಕಂಠ ರಾಮ ಬಾ ॥
ಣಾಹತಿಯಿಂ ನಭಂಬರೆಗಮಂಬಿಜಿವಿಟ್ಟು ಮಡಲ್ತ ವಿದ್ವಿಷ ।
ಚ್ಛೋಹಿತದಿಂದಕಾಂಡ ಲಯ ಕಾಲದ ಸಂಜೆಮುಗಿಲ್ಗಳಾಗವೇ ॥ ೧೮೫ ॥

ಎಂದು ಮಜುಮಾತಿಂಗೆಡೆಯಿಲ್ಲದಂತು—

ಕಂ ॥ ಬಿಡೆನುಡಿಯೆ ಸೀತೆ ಮುಳಿಸಿನ
ಪಡೆವಾತಂತಿರ್ಕೆ ರಾವಣಂಗೊಲವು ಪದಿ ॥
ರ್ಮಡಿಸಿತ್ತಪ್ಸಿ ರಸಂ ॥
ಬಡೆಗುಂ ವೈಷಯಿಕಸುಖದೊಳಿದು ವಿಸ್ಮಯಮೇ ॥ ೧೮೬ ॥

1 ಮುಳಿದು ಸನ್ಯೋಗಕ್ಕೆ ಸೊಗದಾರದೆ. ಚ ೨. ತೊಜೆತದ. ಖ. ಗ.

ಅಂತು ದಶಕಂಠನಾ ಕಂಬುಕಂಠಿಯ ಕನಲ್ದೊನಲ್ವು ನುಡಿವ ವಚನಮೆ ಸುಗ್ಗಿಯ ಕಳಕಂಠಿಯ ಪುಗಲೆಂಬ ವಕ್ರವಚನದಂತೆ ತನಗೆ ಮದನರಾಗ ಹೇತು ವಾಗೆ—

ಕಂ ॥ ನಯದಿಂದವಿಸಾ ಸರೋರುಹ
ನಯನೆಯನಳವಡಿಸಲಾರ್ತೆನಿಲ್ಲಳವಡಿಪೆಂ ॥
ಭಯದಿಂದಮೆಂದು ವಿದ್ಯಾ
ದಯಿತಂ ಪಡೆದಂ ವಿಕುರ್ವಣಾವೈಭವಮಂ ॥ ೧೪೭ ॥

ಆ ಸಮಯದೊಳ್—

ಕಂ ॥ ರಾಗಾವಿಲರಾಪದ್ಗತ
ರಾಗದರಾರೆಂದು ದಶಮುಖಂಗಱಿಪುವವೋಲ್ ॥
ಆಗಸದಿನಪರ ಸಂಧ್ಯಾ
ರಾಗಾವಿಲನರ್ಕನಪರ ವಾರಿಧಿಗಿಟ್ಟಾದಂ ॥ ೧೪೮ ॥

ಅಂತು ನೇಸರ್ ಪಡಲೊಡಂ—

ಉ ॥ ತೋರ ವೆಣಂಗಳಂ ತಳೆದು ಭೂತಗಣಂ ಕುಣಿದಾಡುವಂತಿರಲ್ ।
ಕ್ರೂರ ಮೃಗಂಗಳವ್ವಳಿಸಿ ಗರ್ಜಿಸಿ ನುಂಗಲೊಡರ್ಚುವಂತು ಭೋ ॥
ಭೋರೆರೆನೆ ರಕ್ತವೃಷ್ಟಿ ಕಱಿವಂತು ಸಿಡಿಲ್ ಪೊಡೆವಂತು ಸುತ್ತಲುಂ ।
ವಾರಿಧಿ ಮೇಱಿದಪ್ಪಿ ಕವಿವಂತು ಬಿಗುರ್ವಿಸಿದಂ ದಶಾನನಂ ॥ ೧೪೯ ॥

ಅಂತು ಬಿಗುರ್ವಿಸುವುದುಂ—

ಕಂ ॥ ಬಗೆಯೊಳ್ ಜೈನ ಪದಂ ನಾ
ಲಗೆಯೊಳ್ ಪಂಚಪದಮಗಲದಿರೆ ರನ್ನದ ದೀ ॥
ವಿಗೆ ಪರುಷ ಪವನ ಪತಿಯಂ
ಬಗೆಯದವೊಲ್ ಸೀತೆ ಬಗೆದಳಿಲ್ಲುಪಹತಿಯಂ ॥ ೧೫೦ ॥

ಆ ಸಮಯದೊಳ್ ಸವಿತೃಮಂಡಲಮುದಯಾಚಲ ಶಿಖಂಡ ಮಾಣಿಕ್ಯ ಮಂಡನಮೆನಿಸೆ ವಿಭೀಷಣ ಪ್ರಮುಖ ಮುಖ್ಯಪುರುಷರ್ ಪೌಲಸ್ತ್ಯನ ಕೆಲಕ್ಕೆ ವಂದು ಖರ ದೂಷಣ ಮರಣ ಶೋಕ ವಿಷಣ್ಣ ಮನರಾಗಿರ್ಪುದುಮನ್ನೆಗಮಿತ್ತ ಕನ್ನೆಮಾಡದ ಮಱೆಯೊಳಿರ್ದು ಸೀತೆ ಶೋಕಂಗೆಯ್ವ ಸರಮಂ ವಿಭೀಷಣಂ ಕೇಳ್ದು ಪುರುಷ ವಿರಹದಿನತಿಪ್ರಲಾಪಂಗೆಯ್ವರಾರೆಂಬುದುಮಾ ಮಾತಂ ಕೇಳ್ದ ಸೀತೆಯಿಂತೆಂದಳ್—

ಚ ॥ ತನಗಿದಿರಾದ ಪೆರ್ವಲಮನೊರ್ವನೆ ಲಕ್ಷ್ಮಣನಾಂತು ಕಾದೆ ತ ।
ಮ್ಮನ ರಣಮುಂ ನಿರೀಕ್ಷಿಸಲಪೇಕ್ಷಿಸಿ ಪೋಗೆ ಪರೋಕ್ಷದೊಳ್ ದಶಾ ॥
ನನನೆಟಿತಂದನಾಂ ಜನಕನಂದನೆಯೆಂ ರಘುವೀರನಪ್ಪ ರಾ ।
ಮನ ವಧು ಸೀತೆಯೆಂ ಪತಿವಿಯೋಗ ಕೃಶಾನು ಸುಡಲ್ಕೆ ಬೆಂದಪೆಂ ॥ ೧೯೧ ॥

ಎನೆ ವಿಭೀಷಣಂ ನೈಮಿತ್ತಿಕಾದೇಶಮಂ ನೆನೆದು ಭಯ ಚಕಿತ ಚಿತ್ತನಾಗಿ---

ಕಂ ॥ ಪರ ಪರಿಗೃಹೀತೆಗಟಿಪಂ
ತರೆ ಪುರುಷಂ ಪುರುಷ ಧರ್ಮಮಟಿಗುಂ ಪಟಿಗುಂ ॥
ಧರೆ ದುರ್ಗತಿ ಸಮನಿಸುಗುಂ
ಪರಿಹರಿಸುವುದಾರುಮದಱಿನೀ ದುರ್ನಯಮಂ ॥ ೧೯೨ ॥

ಎಂದು ಬಿನ್ನವಿಸೆ ಮಾರೀಚನುಮದನೆ ನುಡಿಯೆ—

ಕಂ ॥ ಸ್ತ್ರೀರತ್ನಕ್ಕಾಸಿರೆ ಪೆಜ
ರಾರೊಡೆಯರ್ ಮಿಾಜುವನ್ನರಾರೆನ್ನೀ ದು ॥
ರ್ವಾರ ಭುಜ ಬಲಮನೆಂದವಿ
ಚಾರಿ ದಶಗ್ರೀವನವರ ನೇಳಿಸಿ ನುಡಿವಂ ॥ ೧೯೩ ॥

ಅಂತು ನುಡಿದು ದಾನವಂ ತ್ರಿಜಗದ್ಭೂಷಣ ದಾನಗಜಮನೇಱಿ ಜಾನಕಿ ಯಂ ಪುಷ್ಪಕ ವಿಮಾನಮನೇಱಿಸಿ ನಿಪಿಲ ಸಾಮಂತ ಸೇನೆ ಮುಂದೆ ಪರಿಯೆ ಪುರ ಶ್ರೀ ವಿಲಾಸಮಂ ತನಗೆ ತೋರ್ಪುದುಂ—

ಉ ॥ ಜಾನಕಿ ಜೀವಿತೇಶ್ವರನಗಲ್ಕೆಯೊಳಗ್ಗಳಮಾದ ಖೇದದಿಂ ।
ದೇನುಮಸಹ್ಯಮಾಗೆ ಪುರಮುಂ ಪುರ ಗೋಪುರಮುಂ ಬಹಿಃಪುರೋ ॥
ದ್ಯಾನಮನೀಕ್ಷಿಸಲ್ ಬಗೆ ವಿರೂಕ್ಷಿಸೆ ಕನ್ನಡಿಸಲ್ಕೆ ಸಾಲ್ದಳ ।
ಜ್ಞಾನನೆ ದುಃಖಿತೇ ಮನಸಿ ಸರ್ವಮಸಹ್ಯಮೆನಿಸಿಪ್ಪ ವಾಕ್ಯಮಂ ॥ ೧೯೪ ॥

ಅಂತು ರಾಮಸೀಮಂತಿನಿಯಂ ಪ್ರಮದ ಮದಿರಾ ಪ್ರಮತ್ತಂ ಪ್ರಮದವನ ದೊಳ್ ಸೆಜಗೆಯ್ದು ವಿರಹ ವಿಕಲನಾಗಿರ್ಪುದುಮಾತನ ಕೇಡಂ ವಿಭೀಷಣಂ ಕಂಡು ಭಯಂಗೊಂಡು ಮಂತಣಮಿರ್ದ ಸಮಯದೊಳ್ ಸಂಭಿನ್ನವೆಸರ ಮಂತ್ರಿಮುಖ್ಯಂ ದಿಗ್ಗಜದ ನಿಗ್ಗವಮನುಡಿವಂತೆ ವಿಯಚ್ಚರ ಪತಿಯ ನಚ್ಚಿನ ಖರ ದೂಷಣರಂ ಕೊಂದು ತದಪತ್ಯನಪ್ಪ ಸುಂದರನಂ ಪಾತಾಳಲಂಕೆಯಿಂ ಸೋದು ಕಳೆದು ತದ್ವಿರೋಧಿಯಪ್ಪ ವಿರಾಧಿತನನನ್ವಯಾಗತ ರಾಜ್ಯಲಕ್ಷ್ಮ್ಯಯೊಳ್ ನಿಲಿಸಿ ರಾಮಲಕ್ಷ್ಮಣರ್ ವೈದೇಹಿಯ ಪೋದ ದೆಸೆಯನಱಿಯದುಸಿಕನಿರ್ದರಲ್ಲದೆಯುಂ ವಿಗ್ರಹ ಸಮಗ್ರನಪ್ಪ ಸುಗ್ರೀವಂ

ನಮ್ಮೊಳಾದನುಬಂಧದೊಳ್ ಶಿಥಿಲನಾಗಿರ್ಕುಮಾತನೊಳನುಬಂಧ ಮುಳ್ಳುದಱಿಂ ಹನುಮನನುವೆಮಗಲ್ಲನೆಂಬುದುವಾ ನುಡಿಗೆ ದಶಮುಖಂ ಪರಿಹಾಸ ಮುಖರಮುಖನಾಗಿ—

ಚ ॥ ಕಡಲೊಳಗೊಂದೆರಟ್ ಜಲಕಣಂ ಪವನಾಹತಿಯಿಂ ವಿನಷ್ಟವಾ ।
ದೊಡೆ ಜಲರಾಶಿ ಕುಂದುಗುಮೆ ಮೇಱೆಗೆ ದೂರಮೆನಿಪ್ಪ ನಮ್ಮ ಪೆ ॥
ರ್ವಡೆ ಖರ ದೂಷಣರ್ ಕಟಿಯೆ ಕುಂದುಗುಮೇ ಕಪಿ ಚಿಹ್ನರಿಲ್ಲದೇಂ ।
ಕಿಡುವುದೊ ಭೂಚರರ್ ಧುರದೊಳಾಂಪರೆ ಖೇಚರ ಚಕ್ರವರ್ತಿಯಂ ॥ ೧೯೫ ॥

ಎಂಬುದುವಾ ನುಡಿಯನವಕರ್ಣಿಸಿ ನಿಶಿತ ಪ್ರಜ್ಞನುಮನಾಗತಜ್ಞನುಮಪ್ಪ ಸಹಸ್ರಮತಿ ವಿದ್ಯಾಬಲದೊಳಂ ಭುಜಬಲದೊಳಂ ಷಡಂಗಬಲದೊಳಮತ್ಯಧಿಕನಪ್ಪಶ್ವಗ್ರೀವ ಖೇಚರನಂ ಭೂಚರಂ ತ್ರಿಪಿಷ್ಟನಶ್ರಮದೊಳೆ ಕೊಂದಂ ಭೂಚರರಸಂಖ್ಯಾತ ಖೇಚರರಂ ಕಾದಿ ವಿಧೇಯರಂ ಮಾಡಿಕೊಂಡರೆಂಬುದಾಬಾಲ ಗೋಪಾಲ ಪ್ರಸಿದ್ಧ ಮದಱಿನವರನೇಳಿಸುವುದುಚಿತಮಲ್ತು ಸುಗ್ರೀವಾದಿಗಳುಮಂ ದಾನ ಸನ್ಮಾನಂಗಳಿಂದೆಮಗೆ ಮಾಟ್ಪುದು ಲಂಕೆಗಭೇದ್ಯಮಾಗೆ ವಿದ್ಯಾಪ್ರಾಕಾರಮಂ ಮಾಟ್ಪುದಿಂತು ಬಲಿದಿರ್ಪುದುಂ ವೈದೇಹಿಯ ವಿರಹದಿಂ ರಾಮಂ ವಿಗತದೇಹನಕ್ಕುಮಂತಾಗೆ ಲಕ್ಷ್ಮಣಂಗಂ ಪ್ರಾಣ ಪರಿತ್ಯಾಗಮಕ್ಕುಮೆಂದು ನಿಶ್ಚಯಿಸಿ ನುಡಿಯೆ ವಿಭೀಷಣನಾ ಪ್ರಕಾರದಿಂ ಪ್ರಯತ್ನಪರನಾಗಿರ್ಪುದುಮನ್ನೆಗಮಿತ್ತಲ್—

ಕಂ ॥ ಖರ ದೂಷಣರಿಂ ಪಗೆಯುಂ
ಪರಿಭವಮುಂ ತೀರ್ಗುಮವರ್ಗೆ ಪೇೞ್ವೆನೆನುತ್ತಂ ॥
ಬರುತಂ ಕಾನನದೊಳ್ ವಾ
ನರ ಚಿಹ್ನಂ ಕಂಡನೊಂದು ರಣ ಮಂಡಲಮಂ ॥ ೧೯೬ ॥

ಚತುರಂಗ ಸೇನೆಯುಂ ಜವ
ನತಿಕಾಂಕ್ಷೆಯಿನುಂಡು ಕಾಜಿದಂತಿರ್ದ ರಣ ॥
ಕ್ಷಿತಿ ತಲಮಂ ಕಂಡಂ ನಿಜ
ಸತೀ ವಿಯೋಗಾರ್ತ ಚೇತಸಂ ಸುಗ್ರೀವಂ ॥ ೧೯೭ ॥

ಕಂಡಿದೇನೆಂದು ಬೆಸಗೊಳ್ಳುದುಮದನಱಿವನೊರ್ವನಿಂತೆಂದಂ ಬಲಾಚ್ಯುತರ್ ಬಂದು—

ಕಂ ॥ ಶಂಬುಕನಂ ಕೊಂದಸಿರ
ತ್ನಂ ಬಡೆದರ್ [1]ಚಂದ್ರನಖಿಯ ಪುಯ್ಯಲ್ಗತ್ಯಾ ॥

1. ಶೂರ್ಪನಖಿಯ. ಚ.

ಡಂಬರದಿನೆತ್ತಿ ಬಂದುದ
ನಂಬರಚರ ಬಲಮನೊಂದೆಮೆಯ್ಯೊಳ್ ಕೊಂದರ್ ॥ ೧೯೮ ॥

ಖರ ದೂಷಣರಂ ಕೊಂದರ್
ವಿರಾಧಿತಂಗವನ ಪೂರ್ವ ವೃತ್ತಿಯನಿತ್ತರ್ ॥
ಸೆರಗಿಲ್ಲದವರ್ ಕಾರಣ
ಪುರುಷರ್ ಪಾತಾಳಲಂಕೆಯೊಳ್ ಬಂದಿರ್ದರ್ ॥ ೧೯೯ ॥

ಅನುಜಂ ಲಕ್ಷ್ಮಣನಗ್ರಜ
ನನಂತ ಬಲನಪ್ಪ ರಾಮಚಂದ್ರಂ ಸಕಲಾ ॥
ವನಿ ಪತಿ ತತ್ಪದ ಸೇವೆಯಿ
ನನಾಕುಲಂ ತೀರ್ಗುಮಾರ ಪಗೆಯುಂ ಬಗೆಯುಂ ॥ ೨೦೦ ॥

ಮ ॥ ಗರಲ ಗ್ರೀವನಹೀಂದ್ರಸಿಂದು ಮೃಗಲಕ್ಷ್ಮ್ಮಂ ಶಂಕರಂ ನೀಲಕಂ ।
ಧರನೆಂದೇಳಿಸೆ ತನ್ನ ನಿರ್ಮಲ ಯಶಂ ದಿಕ್ಕಾಮಿನೀ ಮೌಕ್ತಿಕಾ ॥
ಭರಣಂ ಕಾಯಲುವಾಯಲುಂ ನೆಜಿತಿವ ಪುಣ್ಯಾತ್ಮಂ ಪರಾರ್ಥ ಪ್ರಿಯಂ ।
ಪುರುಷಾರ್ಥಾಯತನೈಕ ರತ್ನ ಕಲಶಂ ಸಾಹಿತ್ಯ ವಿದ್ಯಾಧರಂ ॥ ೨೦೧ ॥

ಇದು ಪರಮ ಜಿನಸಮಯ ಕುಮುದಿನೀಶರಚ್ಚಂದ್ರ ಬಾಲಚಂದ್ರ
ಮುನೀಂದ್ರ ಚರಣನಖ ಕಿರಣ ಚಂದ್ರಿಕಾ ಚಕೋರ ಭಾರತೀ
ಕರ್ಣಪೂರ ಶ್ರೀಮದಭಿನವಪಂಪ ವಿರಚಿತಮಪ್ಪ
ರಾಮಚಂದ್ರ ಚರಿತ ಪುರಾಣದೊಳ್
ಸೀತಾಹರಣ ವರ್ಣನಂ
ನವಮಾಶ್ವಾಸಂ.

ದಶಮಾಶ್ವಾಸಂ

ಕಂ ॥ ಶ್ರೀ ಲಲನಾ ಸ್ತನಭರ ನಿಬಿ
ಡಾಲಿಂಗನ ಕುಂಕುಮಾಂಕಿತೋರಸ್ಥಲನು ॥
ರ್ಗೀಲೋಕ ಮಂಡನಂ ಮಹಿ
ಪಾಲಂಬನ ಚಾರು ಚರಿತನಭಿನವಪಂಪಂ ॥ ೧ ॥

ಎನೆ ಮನದೆ ಕೊಂಡು ಸುಗ್ರೀವನೀ ಮಹಾನುಭಾವರಪ್ಪ ರಾಮಲಕ್ಷ್ಮಣರಿ
ನೆನ್ನ ಪಗೆಯುಂ ಬಗೆಯುಂ ತೀರ್ಗುಮೆಂದು ನಿಶ್ಚಯಂಗೆಯ್ದು ನಿಜಾಗಮನಮಂ
ವಿದಿತಂಮಾಟ್ಪಿಂತು ಮುಂದೆ ವಿರಾಧಿತನಲ್ಲಿಗೆ ದೂತನಂ ಕಟಿಪಿ—

ಕಂ ॥ ಬಲ ಸಹಿತಂ ಸುಗ್ರೀವಂ
ಬಲ ನಾರಾಯಣರ ಬಲದೊಳಭಿಮತಮಂ ತೀ ॥
ರ್ಚಲೊಡರ್ಚಿ ವಿಯನ್ಮುಖಮಂ
ವಲಿಮುಖ ಜಯ ವೈಜಯಂತಿ ಚುಂಬಿಸಿ ಬಂದಂ ॥ ೨ ॥

ಅಂತು ಬಂದು ಪುರಮಂ ಪುಗುವ ಸಮಯದೊಳ್ ಲಕ್ಷ್ಮಣನೀತನಾರ್ಗೆನೆ
ವಿರಾಧಿತನೆಂದಂ ಕಿಷ್ಕಿಂಧ ನಗರಾಧಿನಾಥನುಂ ಕಪಿಧ್ವಜ ಕುಲಧ್ವಜನುಂ ಸೂರ್ಯಂ
ಜಯ ಪ್ರಿಯತನೂಜನುಂ ವಾಲಿ ಭಟ್ಟಾರಕರಿಂ ನೇರ್ಗಿಱಿಯನುಮಂಗದನ ಜನಕ
ನುಮಪ್ಪ ಸುಗ್ರೀವಂ ನಿಮ್ಮನೋಲಗಿಸಲ್ ಬಂದನೆಂದು ಬಿನ್ನವಿಸುವನ್ನೆಗಂ—

ಕಂ ॥ ಅವಿಚಲಿತ ಧೈರ್ಯನುತ್ತುಂ
ಗ ವಂಶನಪ್ರತಿಮ ಸಹಜ ಸತ್ವಂ ಕಪಿ ಕೇ ॥
ತುವುದಾತ್ತಂ ಬಂದಂ ನಡೆ
ವ ವರ್ಷಧರ ಶೈಲಮೆಂಬಿನಂ ಸುಗ್ರೀವಂ ॥ ೩ ॥

ಅಂತು ಬಂದು ರಾಮಲಕ್ಷ್ಮಣರ ಚರಣಕಮಲಕ್ಕೆಱಗಿದನಂತರಂ ತನಗೆಱ
ಗಿದ ವಿರಾಧಿತನಂ ಪರಸಿ ಸುಗ್ರೀವಂ ನಿಯಮಿತಾಸನದೊಳಿರ್ದುದುಮುದಾತ್ತ
ರಾಘವಂ—

ಕಂ ॥ ಕುಶಲಮೆ ನಿಮಗೆನೆ ನಿಜ ಪದ
ಕುಶೇಶಯಕ್ಕೆಱಗುವಂತು ಸೈಪಾಯ್ತೆನಗಿಂ ॥
ಕುಶಲಮೆ ನರೇಂದ್ರ ಪೆಜರಿಂ
ಕುಶಲಂ [1]ವಿಪದುಪಹತಂಗೆ ಸಮನಿಸಿದಪುದೇ ॥ ೪ ॥

ಎಂಬುದುಂ ಲಕ್ಷ್ಮೀಧರನಿವರೇನಿಮಿತ್ತಂ ಬಂದರೆನೆ ಜಾಂಬವಂ ಮುಕುಳಿತ ಕರ ಸರೋಜನಿಂತೆಂದಂ---

ಕಂ ॥ ಸುಗ್ರೀವನ ಕುಲವಧು ಕಂ
ಬುಗ್ರೀವೆ ಸುತಾರೆಯೆಂಬಳಾ ಸತಿಯೊಳ್ ತೊ ॥
ಟ್ಟಾಗ್ರಹದಿಂದರಮನೆಯಂ
ಸುಗ್ರೀವನ ರೂಪುಗೊಂಡು ಖಳನೊಳವೊಕ್ಕಂ ॥ ೫ ॥

ಒಳಗಣ ಪೊಜಗಣ ಕಾಪಿನ
ಕುಲ ವೃದ್ಧರುಮಂಗರಕ್ಷರುಂ ಪಡಿಯಜರುಂ ॥
ಖಳನಂ ಸುಗ್ರೀವನೆಗೆ
ತ್ತೊಳವುಗಲಿತ್ತರ್ ವಿಚಿತ್ರಮವನ ಚರಿತ್ರಂ ॥ ೬ ॥

ಒಂದಚ್ಚಿನೊಳೊತ್ತಿದ ತೆಜ
ದಿಂದಿರ್ದೊಡಮವನ ಗೆಯ್ತುಮುಂ ಕಂಡು ಲತಾ ॥
ಸುಂದರಿ ಮಾಯಾವಿಯ ರೂ
ಪೆಂದಜಿದಳ್ ಸತಿಯ ಸೈಪನದನೇವೇಟ್ಟಿಂ ॥ ೭ ॥

ಎಜಿಯನ ಕುಜಿವುಗಳಂ ತ
ನ್ನಜಿವನ್ನವನವನ ತನುವಿನೊಳ್ ಕಾಣದಿವಂ ॥
ಪೆಜನೆಂದಜಿದವನೆರ್ದೆ ಪಡಿ
ದೆಜಿವಿನಮೋವರಿಯ ಪಡಿಯನಾಸತಿ ಕೆತ್ತಳ್ ॥ ೮ ॥

ಹರಿಣಾಕ್ಷಿ ಸೆಜ್ಜೆಜನೆಯೋ
ವರಿಯೊಳ್ ಮೆಯ್ಸುರೆಯೆ ಬಗೆಯೊಳೊಗೆದುಮ್ಮಳದಿಂ ॥
ದೆರೆದಪ್ಪಲ್ ಪಡೆಯದೆ ಖಳ
ನೆರೆದಪ್ಪಿದ ದಂದಶೂಕನಂದದಿನಿರ್ದಂ ॥ ೯ ॥

---

1. ವಿಷದುಪ ಕ. ಗ. ಘ

ಕಂ ॥ ಆ ಸಮಯದೊಳುದ್ಯಾನದಿ
ನೀ ಸುಗ್ರೀವಂ ಸ್ವಕೀಯ ಭವನಕ್ಕೇಟ್ಟಿಂ ॥
ದಾ ಸುಗ್ರೀವನ ಗೊಡ್ಡ
ಕ್ಕಾಸುರಮೆನೆ ಮಸಗಿ ಕಾದಲುದ್ಯತನಾದಂ ॥ ೧೦ ॥

ಅವನುಂ ಬವರಕ್ಕೊಡರಿಸಿ
ದವಸರದೊಳ್ ದಿಟದ ಪುಸಿಯ ಸುಗ್ರೀವನ ಭೇ ॥
ದವನಜಯದೆ ಬಾರಿಸಿದರ್
ಬವರಮನಾಪ್ತ ಪ್ರಧಾನ ಸೇನಾ ಮುಖ್ಯರ್ ॥ ೧೧ ॥

ಮೂವತ್ತಕ್ಷೌಹಿಣಿವೆರ
ಸಾ ವಧುವಂ ಕಾದು ವಾಲಿ ದೇವ ಸುತಂ ರಾ ॥
ಜಾವಸಥದೊಳಿರ್ದಂ ಶೌ
ರ್ಯಾವಸಥಂ ಚಂದ್ರರಶ್ಮಿ ದೋರ್ಬಲ ದೃಪ್ತಂ ॥ ೧೨ ॥

ಆ ಕ್ಷಣದೊಳೇಚಕ್ಷೌಹಿಣೀಬಲಂಬೆರಸಂಗದಕುಮಾರಂ ಮಾಯಾ ಸುಗ್ರೀವನಂ ತಂದೆಯೆಂಬ ಸಂದೆಗದಿಂ ಸ್ವೀಕರಿಸಿ ನಳನನಸಿತೆ ಬಲಂಬೆರಸು ಸುಗ್ರೀವನಂ ಪೊಱವೊಟಿಲೊಳ್ ಸೆಱೆಗೆಯ್ದು ರೆಂದು ನಿಯಮಿಸಿ ಬೇಱೆಕೆವೇಱೆ ಬಲಿದಿರ್ದುದುಮಾ ಸುಗ್ರೀವಂ ಹನುಮನಲ್ಲಿಗೆ ಪೋಗಿ ನಿಜವೃತ್ತಾಂತಮಂ ನೀವೇದಿಸುವುದುಂ—

ಕಂ ॥ ಹನುಮಂ ಮಾಯಾ ಸುಗ್ರೀ
ವನನಿಕ್ಕುವೆನೆಂದು ಬಂದು ಭಾವಿಸಿ ಸುಗ್ರೀ ॥
ವನದಾವನೆಂದುಮಜಯದೆ
ಮುನಿದಜಯವೆ ಮಗುೞ್ಚಿ ಪೋದನೇಳಿದನಾದಂ ॥ ೧೩ ॥

ಅಂತಾತಂ ಪೋಪುದುಮಾ ಸುಗ್ರೀವಂ ನಿಮ್ಮ ದೋರ್ವಲದಗುರ್ವುಮನವ್ಯವ ಹಿತ ಪರಹಿತ ವ್ಯಸನಮುಮುಂ ಕೇಳ್ದು ಸುತಾರಾ ವಿರಹದಿಂ ಚಂಡಕಿರಣ ಕಿರಣಮು ನಾಸೆಗೆಯ್ವಿರುಳ ಚಕ್ರವಾಕದಂತೆ ನಿಮ್ಮ ಚರಣಮೇ ಶರಣೆಂದು ಬಂದನೆಂಬುದು ಮುದಾತ್ತರಾಘವಂ ಲಕ್ಷ್ಮಣನ ವೊಗಮಂ ನೋಡಿ —

ಕಂ ॥ [1]ಎಮ್ಮೊಂದಿಗನೀತನ ಮನ
ದುಮ್ಮಳಮಂ ಕಳೆವುದೆಂದು ಕಾರುಣ್ಯ ಪರಂ ॥
ತಮ್ಮಂಗೆ ನುಡಿದನರ್ಥಿಗ
ಳಮ್ಮನ್ನಿಸುವಟ್ಟಿ ರಾಘವಂಗೆ ನಿಸರ್ಗಂ ॥ ೧೪ ॥

1. ಎಮ್ಮಂದಿಗ. ಚ

ಕಂ ॥ ಈ ದೊರೆಯನುಮಂ ಕಾಡಿದ
ನಾ ದೊರೆಯಂ ಹನುಮನಳ್ಕಿ ಕಾದದೆ ನೆವದಿಂ ॥
ಪೋದನವನಧಿಕನೆನ್ನದೆ
ಕಾದಿ ಕೊಲಲ್ ಬಗೆದನೇನುದಾತ್ತನೊ ರಘುಜಂ ॥ ೧೫ ॥

ಎನೆ ರಾಮಚಂದ್ರನನುಗ್ರಹಕ್ಕೆ ಸುಗ್ರೀವಂ ಸಮಾಹಿತ ಚಿತ್ತನಾಗಿ ವಿರಾಧಿತನ ಮೊಗಮುಂ ನೋಡಿ—

ಮ॥ ವಿರಹ ವ್ಯಾಕುಲರಂತೆ ದೇವರುಸಿರ್ದೀ ವೃತ್ತಾಂತಮೇನೆಂದು ವಾ ।
ಸರ ಚಿಹ್ನಂಗೆ ವಿರಾಧಿತಂ ತಿಳಿಪಿದಂ ಕಾಂತಾರದೊಳ್ ಜಾನಕೀ ॥
ಹರಣಂ ವಂಚನೆಯಿಂದಮಾದತೆಱನಂ ಸಂಗ್ರಾಮಮಾದಂದಮಂ ।
ಖರನುಂ ದೂಷಣನುಂ ಜನಾರ್ದನನ ಕೈಯೊಳ್ ಕಾದಿ ಸತ್ತಂದಮಂ ॥೧೬॥

ಕಂ ॥ ಆರುಯ್ವರೆಂದುಮಜಿಯದೆ
ನಾರಾಯಣನಿರ್ದನಜಿದೊಡುಯ್ವನ ಕರುಳಿಂ ॥
ವೀರಶ್ರೀಗೆ ಭುಜಾಸಿಯ
ಧಾರಾ ಗೃಹದಲ್ಲಿ ತೋರಣಂಗಟ್ಟದಿರಂ ॥ ೧೭ ॥

ಎನೆ ಸುಗ್ರೀವನವಸರಂಬಡೆದು ಸಪ್ತ ದಿವಸಕ್ಕೆ ದೇವಿಯರ ಸುದ್ದಿಯಂ ತರ್ಪೆನೆಂದತಿಪ್ರತಿಜ್ಞೆಗೆಯ್ದು ಬಿನ್ನವಿಸಿ ಮೆಚ್ಚಿ ನಿಚ್ಚ ಪಯಣದಿಂ ಬಲನುಮಚ್ಯುತನುಂ ವಿರಾಧಿತನುಂ ಬೆರಸು ಕಿಷ್ಕಿಂಧಪುರಮನೆಯ್ದಿ ದೂತನನಟ್ಟುವುದುಮಾತಂ ಯಮದೂತನಂತೆ ಬಂದು ಸಾಹಸ ಗತಿಯಂ ಕಂಡು—

ಶಾ ॥ ದೇವರ್ ಕಾವೊಡಮಿಂದು ನಿನ್ನ ಪಗೆಯಂ ಸುಗ್ರೀವ ಕೊಂದೀವೆನೆಂ ।
ದಾ ವೀರಾಗ್ರಣಿ ವಿಗ್ರಹ ವ್ಯಸನದಿಂದೇಟ್ಟಿಂದನಿಂ ಪ್ರಾಣಮಂ ॥
ಕಾವುದ್ಯೋಗಮಿದೊಂದೆ ಮತ್ಪತಿಯ ಪಾದಾಂಭೋಜಮುಂ ಬಂದು ಕಾಣ್ ।
ಜೀವಾಕರ್ಷಣ ವಿದ್ಯೆಯುಂ ಮೆಜ್ಜಿಯದನ್ನಂ ರಾಮ ರೌದ್ರೇಷುಗಳ್ ॥ ೧೮ ॥

ಎಂದು ಗಜಜ್ಜ ಗರ್ಜಿಸಿದ ದೂತನ ಮಾತಿಂಗೆ ಮುಳಿದು ಮುಳಿಸಂ ಮೊಗಕ್ಕೆ ತಾರದೆ—

ಕಂ ॥ ಸೆರಗಂ ಬೆರಗಂ ಬಗೆಯದೆ
ಪುರಮಂ ಪೊಱಮಟ್ಟು ಕೃತಕ ಸುಗ್ರೀವಂ ಕೇ ॥
ಸರಿಯಂತೆ ಗರ್ಜಿಸುತ್ತುಂ
ನಿರಂಕುಶಂ ಮುಟ್ಟಿವಂದನಿದಿರೊಡ್ಡಣಮಂ ॥ ೧೯ ॥

ಕಂ ॥ ಆಜಿಗಿದಿರೆತ್ತಿ ಬರೆ ಮಾ
ಯಾ ಜೀವಿಯನಂದು ಕಂಡು ವಾನರಚಿಹ್ನಂ ॥
ಸ್ತ್ರೀಜಂ ಕೋಪಾನಲನು
ತ್ತೇಜಿಸೆ ಕಾಟ್ಟಿರ್ಚು ನೆಗೆದ ನಗದಂತಿರ್ದಂ ॥ ೨೦ ॥

ಉ ॥ ಆ ಕ್ಷಣದೊಳ್ ಪರಸ್ಪರ ನಿರೀಕ್ಷಣದಿಂ ಮುಳಿಸುಣ್ಮೈ ಪೊಣ್ಮೈ ರ ।
ಕ್ತೇಕ್ಷಣರಾತ್ಮಶಕ್ತಿಗೆ ಶರೀರ ಬಲಕ್ಕನುರೂಪಮಪ್ಪುವಂ ॥
ಲಕ್ಷಣಯುಕ್ತಮಪ್ಪ ಗದೆಯಂ ತಳೆದಿರ್ವರುಮಿರ್ವಲಂ ಬಿಗು ।
ರ್ತೀಕ್ಷಿಸೆ ಮಿಾಱಿದರ್ ವಿಕಟ ಶೃಂಗ ಸಮಗ್ರ ಕುಲಾಚಲಂಗಳಂ ॥ ೨೧ ॥

ಅಂತು ಗದಾಯುಧ ಸನ್ನದ್ಧರ್ ಪಂಚವಿಧ ಸ್ಥಾನಕದೊಳಮಷ್ಟವಿಧ ಚಾರಣೆಯೊಳಮತಿಚಟುಲರಾಗಿ--

ಕಂ ॥ ನಡೆವ ನಡೆ ಪೊಯ್ವ ಗದೆಯಂ
ಬಿಡೆ ಬೀಸುವ ಪೊಯ್ಲನೊಡನೆ ಕಟ್ಟುವ ಕಡುಪುಂ ॥
ಕಡುವಿನ್ನಣಮುಂ ತಮಗಳ
ವಡೆ ತಾಗಿಪರಿಳಿ[1]ಯುಮಾಗಸಂ ತಾಗುವವೋಲ್ ॥ ೨೨ ॥

ಉರವಣೆಯಿಂ ಬಾಹ್ಯಾಭ್ಯಂ
ತರಂಗಳಂ ವಾಮ ದಕ್ಷಿಣಂಗಳನಱಿದೊ ॥
ರ್ವರನೊರ್ವರ್ ಪೊಯ್ಯೆ ಗದಾ
ಪರಿಹರಣಂ ಪಡೆದುದಿರ್ಬಲಕ್ಕಂ ಭಯಮಂ ॥ ೨೩ ॥

ಭರದಿಂ ಪೊಯ್ವುದುಮೋರೊ
ರ್ವರ ಗದೆಯೊಳ್ ಗದೆ ಪಳಂಚೆ ಕಿಡಿ ಸೂಸೆ ರಣಾ ॥
ಜಿರದೊಳಕಾಂಡದ ಕೆಂಡದ
ಸರಿ ಸುರಿವವೊಲಾದುದವರದೇನತಿಬಲರೋ ॥ ೨೪ ॥

ಓರನ್ನರ್ ತಮ್ಮೊಳಗಾ
ಕಾರದಿನಿಸಿತಲ್ತು ಸತ್ವದಿಂ ಸಾಹಸದಿಂ ॥
ದೋರನ್ನರ್ ಬಿನ್ನಣದಿಂ
ಬೀರದಿನೋರನ್ನರನೃತ ಋತ ಸುಗ್ರೀವರ್ ॥ ೨೫ ॥

---

1. ಯೊಳಾಗಸಂ. ಘ.

ಆ ಸಮಯದೊಳ್ ‘ಸಂವರ್ತ ಸಮಯದ ಕೃತಾಂತನಂತೆ ಮಾಮಸಕಂ ಮಸಗಿ—

ಸ್ರ ॥ ಬೀಸುತ್ತುಂ ಕಾಲದಂಡ ಪ್ರತಿಮ ಘನಗದಾ ದಂಡಮುಂ ಕಣ್ಗಳಿಂದಂ।
ಸೂಸುತ್ತುಂ ಕೆಂಡಮುಂ ಮೇಳಿಸೆ ಜಯವಧು ತನ್ನುಚ್ಚ ದೋರ್ದಂಡಮುಂ ಸಂ॥
ತ್ರಾಸಂ ಸೇನಾವ್ಯಯಕ್ಕಂ ಸಮನಿಸೆ ತೆಜಿಪಂ ಪಾರ್ದು ಸುಗ್ರೀವನಂ ಮಾ।
ಯಾ ಸುಗ್ರೀವಂ ಗದಾಪಂಡದಿನಡಸಿ ಸಿಡಿಲ್ ಪೊಯ್ವವೋಲ್ ಕಾಯ್ದು
[ಪೊಯ್ದಂ ॥ ೨೬ ॥

ಆಂತು ಬಸವಟ್ಟಿದು ಬೀಟಿಕೆ ಪೊಯ್ದುದುಂ ಮೂರ್ಛೆಪೋದನಂ ಗತಪ್ರಾಣನೆ ಗೆತ್ತು ಮಾಯಾವಿ ಮಗುಟಿಕೆ ಪೋಪುದುಂ ಜಾಂಬವಾದಿಗಳ ಮಾಪ್ಪಿ ಶಿಶಿರೋಪಚಾರದಿಂದೆಂತಾನುಂ ಮೂರ್ಛೆಯಿಂದೆಬ್ಬಿತ್ತ ಸುಗ್ರೀವನ ಮೊಗಮನುದಾತ್ತ ರಾಘವಂ ನೋಡಿ—

ಕಂ ॥ ತನುವಂ ಭಾವಿಸಿ ನಿನಗಂ
ತನಗಂ ಸಾದೃಶ್ಯನಾದೊಡಕ್ಕುಮಪಾಯಂ ॥
ನಿನಗೆಂದು ಬೆರ್ಚಿದೆಂ ತೀ
ರ್ಚಿನೆ ಮೊನೆಯೊಳ್ ನಾಳೆ ನಿನ್ನ ಪಗೆಯಂ ಬಗೆಯಂ ॥ ೨೭ ॥

ಎಂದು ನುಡಿದು ಮಱು ದೆವಸಂ ರಣಭೂಮಿಗೆ ವಂದು ಮಾಯಾ ಸುಗ್ರೀವನಂ ಕಂಡು—

ಕಂ ॥ ಕಡುಮುಳಿಸಿಂ ಕಟ್ಟಿದಿರೊಳ್।
ನಡೆವೆಡೆಯೊಳ್ ರಾಮನಾತನಂ ಲಕ್ಷ್ಮಣಸಿಂ ॥
ಪಿಡಿಯಿಸಿದಂ ಮೊನೆಯೊಳ್ ಮಾ
ರ್ಪಡೆಗಂಡೊಡೆ ಸೆಡೆವ ಗಂಡನೇ ಸುಗ್ರೀವಂ ॥ ೨೮ ॥

ಆ ಸಮಯದೊಳ್—

ಮ॥ ಸ್ರ ॥ ಮೊನೆಯೊಳ್ ಮಾಱಾಂತ ಚಾತುರ್ಬಲಮನಳಜಿಕೆ ಬೆಂಕೊಂಡು [1]ಕೈ
[ಕೊಂಡು ಸುಗ್ರೀ।
ವನನಾವಂ ಕಾವೊಡಂ ಕೊಂದಪೆನೆನಗಿದಿರಾರೆಂದು ಮೆಯ್ಗೊರ್ಚಿದುದ್ವೃ॥
ತ್ತನನತ್ತಿತ್ತಲ್ ಮಗುಳ್ವೋಗದಿರೆನೆ ರಘುಜಂ ಕೇಳ್ದು ಪೊಯ್ತೊತ್ತ ಪಂಚಾ।
ನನದಂತೆಯ್ತಂದನಾ ಸಾಹಸಗತಿವರೆಗಂ ಗಂಡರೊಳ್ ಗಂಡನಾವಂ ॥ ೨೯ ॥

1. ಮಾರ್ಕೊಂಡು ಕ. ಘ. ಚ.

ಅಂತೆಯ್ವೆವರ್ವುದುಂ

ಕಂ ॥ ಆ ರಾಮನಿದಿರೊಳಾ ವಿ
ದ್ಯಾರೂಪಂ ಪಿಂಗಿ ಪೋಗೆ ಸಾಹಸಗತಿ ತ ॥
ಪ್ತಾರಕ್ತಾಯಸ ಪಿಂಡಂ
ನೀರೊಳಗಬ್ಪಂತೆ ತನ್ನ ತೇಜಂಗೆಟ್ಟಂ ॥ ೩೦ ॥

ಪರಿಹರಿಸಿ ಪೋಗೆ ಮಾಯಾ ।
ಸ್ವರೂಪಮಳವಟ್ಟಿದನಿಲ್ಲ ಮೇಚರಪತಿ ಭೀ ॥
ಕರ ರೂಪಂ ನಿಜದಿಂದಂ
ಪೆರೆಯಿಕ್ಕಿದ ಕೃಷ್ಣಸರ್ಪನಿರ್ಪಂತಿರ್ದಂ ॥ ೩೧ ॥

ಆಗಳಂಗದನವಂ ಕಂಡು ನಿಜ ಬಲ ಸಹಿತಂ ಸುಗ್ರೀವನಂ ಬಂದು ಕೂಡೆ ಲಕ್ಷ್ಮಣದೇವನೆಲವೊ ಸುಗ್ರೀವನಂ ಶರಣ್ಬೊಕ್ಕು ಜೀವಿಸೆನೆ ಮುನಿದು ಸಾಹಸಗತಿ ರಘುವೀರನಂ ಮುಟ್ಟಿವಂದು--

ಕಂ ॥ ಎಂತುಪೆಜಗಿಕ್ಕಿ ಪಗೆಯಂ
ಮುಂತಾದಂತಣ್ಮೆನುತ್ತುಮಿಸೆ ನಗೆ ರಾಮಂ ॥
ದಂತಾಂಶು ನಿಮಿರ್ದುವವನಸು
ವಂ ತೆಗೆಯಲ್ ನಿಮಿರ್ದ ಕಾಲ ಪಾಶಂಗಳವೋಲ್ ॥ ೩೨ ॥

ಅಂತು ನಸುನಕ್ಕು--

ಮ ॥ ತೆಗೆದಂಬಂ ದೊಣೆಯಿಂ ತೊಡರ್ಚಿ ತಿರುವಾಯೊಳ್ ಕರ್ಣಮೂಲಂಬರಂ ।
ತೆಗೆದೇಸಾಡೆ ಬಲಂ ಜಿತಾಹಿತಬಲಂ ತತ್ಸಾಯಕಂ ದೈವಿಕಂ ॥
ತೆಗೆದತ್ತಾತನ ತೋಳೊಳಿರ್ದ ವಿಜಯಶ್ರೀ ಕಾಂತೆಯಂ ಪ್ರಾಣ ವಾ ।
ಯುಗಳಂ ನೆಯ್ದೆಗೆವಂತು ವಾನರಪತಾಕ ಸ್ವಾಂತ ಚಿಂತಾಜ್ವರಂ ॥ ೩೩ ॥

ಅಂತು ಸಾಹಸಗತಿ ಗತಪ್ರಾಣನಾಗೆ—

ಉ ॥ ನೋಡಿದೊಡೋಡಿಪೋಯ್ತುವನ ನಚ್ಚಿನ ವಿದ್ಯೆ ರಘುಪ್ರವೀರನೇ ।
ಸಾಡಿದೊಡೊಂದೆ ಬಾಣಮವನಂ ನಡೆ ನೋಡಿ ನೆಲಕ್ಕೆ ಸೋವತಂ ॥
ಮಾಡಿದುದೆಂದು ತೂಗಿ ತಲೆಯಂ ಪೊಗಬ್ದಿಂ ತನಗಿಷ್ಟ ಸಿದ್ಧಿಯಂ ।
ಮಾಡಿದ ದೃಷ್ಟಿಪಾತ ಶರಪಾತ ಚಮತ್ಕೃತಿಯಂ ಕಪಿಧ್ವಜಂ ॥ ೩೪ ॥

ಆಗಳಖಿಳ ಜಯಜಯ ಧ್ವಾನಮೊದವೆ ರಾಘವನಮೋಘ ಶರಾಸನಮುಂ ಪೂಜಿಸಿ ಕರಸರೋಜಮುಂ ಮುಗಿದು—

ಕಂ ॥ ದೇವರ್ ಬಿಜಯಂಗೆಯ್ದು ಮ
ದಾವಸಥಕ್ಕೆನಗೆ ರಾಗಮುಂ ಕೇಸಡಿ ಕೆಂ ॥
ದಾವರೆವೂವಿಂದೀವುದು
ಸೇವಾಪದವಿಯೊಳೆ ನಿಲಿಪುದೆನ್ನನ್ಯಯಮುಂ ॥ ೩೫ ॥

ಎಂದು ಬಿನ್ನವಿಸಿ ಕಪಿಧ್ವಜಂ ರಘುಕುಲ ಧ್ವಜರಪ್ಪ ರಾಮಲಕ್ಷ್ಮಣರಂ ಮುಂದಿಟ್ಟು ವಂದನ ಮಾಲಾ ಮನೋಹರಮುಂ ಕಿಷ್ಕಿಂಧಪುರಮುಂ ಪುಗುವ ಸಮಯದೊಳ್—

ಶಾ ॥ ಆ ಮುಕ್ತಾಫಲ ಕಾಂತಿಯೊಳ್ ಸೆಣಸುವಂಗಚ್ಛಾಯೆಯಿಂ ರಾಜಿಪಂ ।
ರಾಮಂ ಲಕ್ಷ್ಮಣನಾ ಹರಿನ್ಮಣಿ ಮಯೂಖ ಶ್ಯಾಮನೆಂದೀಕ್ಷ ಣ ॥
ಪ್ರೇಮಂ ಕೈಮಿಗೆ ನೋಟ್ಪಿ ಕಾಮಿನಿಯರಂ ಸಮ್ಮೋಹನಾಸ್ತ್ರಂಗಳಿಂ ।
ಕಾಮಂ ಕರ್ವಿನ ಬಿಲ್ಲೊಳೆಚ್ಚು ಮೆಜ್ಜಿದಂ ಚಾಪಾಗಮ ಪ್ರೌಢಿಯಂ ॥ ೩೬ ॥

ಅಂತು ಪುರಮುಂ ಪೊಕ್ಕರಮನೆಗೆ ಬಿಜಯಂಗೆಯ್ದು ಕರುಮಾಡದ ಮುಂದಣ ಮಣಿಮಂಟಪದೊಳಿಕ್ಕಿದ ಮಣಿಮಯಾಸನಮನಲಂಕರಿಸಿ ರಾಮಲಕ್ಷ್ಮಣರಿರ್ಪುದುಂ ಸುಗ್ರೀವಂ ಮಧುಪರ್ಕ ಪೂರ್ವಕಮಪೂರ್ವ ವಸ್ತು ವಾಹನಂಗಳ ನೋಲಗಿಸಿ—

ಚ ॥ ಪರಿಭವ ಭಾರಮುಂ ಕಳೆದು ಬಾಂಧವ ಪುತ್ರ ಕಲತ್ರ ಮಿತ್ರರೊಳ್ ।
ನೆರಪಿ ಮದನ್ಯಯಾಗತ ಪದ ಸ್ಥಿತಿಯಂ ದಯಗೆಯ್ದೆ ದೇವ ದೇ ॥
ವರ ದಯೆಗೆನ್ನ ವಂಶಮನಿತುಂ ಬೆರಸಾಳ್ಪಿಪಗೆಯ್ದು ಬಾಟ್ಪಿನಿ ।
ನ್ನೆರಡನಮೋಘಮಾಂ ನುಡಿದೊಡುನ್ನತ ರಾಮ ಕೃತಘ್ನನಲ್ಲನೇ ॥ ೩೭ ॥

ಎಂದು ರಾಘವನ ಪದಪಯೋಜ ಸೇವಾ ಪರಮ ಲಾಭಮುಂ ಪಡೆದು—

ಕಂ ॥ ದಿನನಾಥಂಗಲ್ಲದೆ ಪ
ದ್ಮಿನಿಗಳ್ ಮೊಗಮಿಯಾಯದಂತೆ ನಿನಗಲ್ಲದೆ ಸ ॥
ಜ್ಜನವಾಗೆವೆಂದು ರಘುನಂ
ದನ ಕನ್ಯಾವ್ರತದೊಳೆನ್ನ ತನುಜೆಯರಿರ್ದರ್ ॥ ೩೮ ॥

ಎಂದು ಶುಭದಿನ ಮುಹೂರ್ತದೊಳುತ್ಸವಾನಕ ಧ್ವಾನಮೊದವೆ—

ಕಂ ॥ ವನಧಿಗೆ ಕುಲಾಚಲಂ ವಾ
ಹಿನಿಗಳನೀವಂತೆ ವಿಮಾನ ನಯನದ ನಿಜ ನಂ ॥
ದನೆಯರನಿತ್ತಂ ರಘುನಂ
ದನಂಗೆ ರಾಜೀವ ಮುಖಿಯರಂ ಸುಗ್ರೀವಂ ॥ ೩೯ ॥

ಅಂತು ಪನ್ನಿರ್ವರ್ ಖೇಚರ ಕನ್ನೆಯರಂ ಮದುವೆನಿಂದು—

ಕಂ ॥ ನಸು ಸೋಂಕಿಂ ಬಾಲೆಯರಂ
ಬಸದಾಗಿಸಿ ನೆನೆದು ಸೀತೆಯಂ ರಾಮಂ ದೂ ॥
ರಿಸಿದಂ ಚಂದ್ರಿಕೆಯಂ ಸೇ
ವಿಸಿದ ಚಕೋರಕ್ಕೆ ಬಾಚ್ಚಿತ್ತೆಯೇ ತುಹಿನ ಕಣಂ ॥ ೪೦ ॥

ಚ ॥ ತನು ಲತೆಯುಂ ಮರಾಳ ಗತಿಯುಂ ಪಿಕ ನಿಸ್ವನಮುಂ ವಿಯಚ್ಚರಾಂ ।
ಗನೆಯರ ಲೋಚನೋತ್ಪಲಮುಮಾನನ ಹೇಮ ಸರೋಜಮುಂ ಘನ ॥
ಸ್ತನಯುಗ ಕೋಕಮುಂ ಬಗೆಗೆ ಮಾಡದೆ ಖೇದಮನೇಕೆ ಮಾಡುಗುಂ ।
ಜನಕ ಸುತಾ ವಿಯೋಗ ವಿಧುರಂಗೆ ರಘುಪ್ರವರಂಗೆ ರಾಗಮಂ ॥ ೪೧ ॥

ಕಂ ॥ ಜನಕ ತನೂಜೆಯ ಘನಕಚ
ಘನಕುಚ ಘನಜಘನ ಭಾರದಿಂ ಬಳ್ಕುವ ರಾ ॥
ಮನ ಚಿತ್ತಮಿತರ ವನಿತಾ
ಜನದತ್ತಡಿಯೆತ್ತದಿರವಿದೇನಚ್ಚರಿಯೇ ॥ ೪೨ ॥

ಅನುರಾಗಂ ಖಚರಿಯರಿಂ
ಜನಿಯಿಸದಿರೆ ಜನಕರಾಜ ಸುತೆಯಂ ರಾಮಂ ॥
ನೆನೆದಂ ರಾಗೋತ್ಸಂಠಂ
ನೆನೆವಂತಿರೆ ಚೂತ ಕಲಿಕೆಯಂ ಕಲಕಂಠಂ ॥ ೪೩ ॥

ಅಂಬರ ಚರನುಂ ತಾರಾ
ಬಿಂಬಾಧರ ಮಧುರ ಮಧುವನಾಸ್ವಾದಿಸಿ ಚಿ ॥
ತ್ತಂ ಬೆಂಡು ನೆಗೆಯೆ ರಾಗ ರ
ಸಾಂಬುಧಿಯೊಳ್ ಕೂಡೆ ಮೂಡಿ ಮುಳುಗುತ್ತಿರ್ದಂ ॥ ೪೪ ॥

ಅನುರಕ್ತಂ ನಲ್ಲಳನೆಳ
ಸಿ ನಿರ್ದಯಾಲಿಂಗನೋನ್ಮುಖಂ ಸಮರತ ಸಂ ॥
ಜನಿತ ಸುಖಂ ದಿನಮುಖದ
ಬ್ಜಿನಿಗೆಳಸಿದ ಮಧುಕರಂಗೆ ಕಿಂಕರನಾದಂ ॥ ೪೫ ॥

ಅಂತಿಷ್ಟವಿಷಯ ಸುಖ ಸಂತುಷ್ಟನಾಗಿ—

ಕಂ ॥ ಹಿಮಕಿರಣಂ ಸಂಧ್ಯಾರಾ
ಗಮನುಬ್ಬಿವಂತಾಗಳಂತೆ ಸುಗ್ರೀವಂ ರಾ ॥
ಗಮನುಬ್ಬಿದು ರಘುಜನುಪಕಾ
ರಮನಾತ್ಮೀಯ ಪ್ರತಿಜ್ಞೆಯಂ ಸ್ಮರಿಯಿಸಿದಂ ॥ ೪೬ ॥

ಕೃತಮಱಿಯದನೆಂಬೀ ದು
ಶ್ಚ್ರುತಿ ಪರೆಗುಮಸತ್ಯ ದೋಷಮಕ್ಕುಂ ಮುಳಿಗುಂ ॥
ಪ್ರತಿಪನ್ನಿಕೆಗಿಡೆ ದಶರಥ
ಸುತನಾ ವಿಭು ಮುಳಿದವಂಗೆ ಜವನುಂ ಮುಳಿಗುಂ ॥ ೪೭ ॥

ಎಂದು ಮನದೊಳೆ ಮಂತಣವಿರ್ದು—

ಉ ॥ ಚಂಡಬಲಂ ಬಲಾಚ್ಯುತರ ಸೀತೆಯ ಸುದ್ದಿಯನಟ್ಟಿ ಮುಂ ಪ್ರಭಾ ।
ಮಂಡಲನಲ್ಲಿಗಂಬಿಕೆಯ ಸುದ್ದಿಗೆ ನಾಧಿತ ವಿಶ್ವವಿದ್ಯರಂ ॥
ತಂಡದಿನಟ್ಟಿ ಗುಪ್ತಚರರಂ ಕೆಲರಂ ತಱಿಸಂದು ತಾನುಮಾ ।
ಖಂಡಲ ದಿಙ್ಮುಖಂ ಕತಿಪಯಾನುಚರಂ ತಳರ್ದಂ ವಿಯಚ್ಚರಂ ॥ ೪೮ ॥

ಅಂತು ಗದಾಯುಧ ಹಲಾಯುಧರಂ ಬೀೞ್ಕೊಂಡು ಮನಃಪವನವೇಗದಿಂ ಪೋಗುತ್ತುಮಿರೆ—

ಕಂ ॥ ಅನುಕೂಲ ಮಾರುತಾಂದೋ
ಲನದಿಂ ಕೈಸನ್ನೆಗೆಯ್ವವೋಲ್ ಗಿರಿಶಿಖರಾ ॥
ವನಿಯೊಳ್ ಮಿಳ್ಕಿಸಿದುದು ಕೇ
ತನ ಪಲ್ಲವಮೊಂದಶೋಕ ಪಲ್ಲವ ಶೋಣಂ ॥ ೪೯ ॥

ನಗ ಸಾನು ತಲಂ ಮನುಜ
ರ್ಗಗೋಚರಂ ಕಟ್ಟಿ ಗುಡಿಯನಿರ್ದಪರಾರಿ ॥
ಲ್ಲಿಗೆ ಪೋಗಿ ನೋೞ್ಪೆನೆಂಬೀ
ಬಗೆಯಿಂ ಸುಗ್ರೀವನೆಯ್ದಿ ವರ್ಪವಸರದೊಳ್ ॥ ೫೦ ॥

ವಲಿಮುಖ ಕೇತನನಂ ಚಕಿ
ತ ಲೋಚನಂ ರತ್ನಜಟಿ ನಿಜಪ್ರಾಣ ಭಯಾ ॥
ಕುಲಚಿತ್ತಂ ಪೌಲಸ್ತ್ಯಂ
ಕೊಲಲಟ್ಟಿದ ತೀಕ್ಷ್ಣಪುರುಷನೆಂದೀಕ್ಷಿಸಿದಂ ॥ ೫೧ ॥

ಆಗಳಾತನಂ ಸುಗ್ರೀವನೆಯ್ದಿ ವಂದು ನಿನಗಿನಿವಿರಿದವಸ್ಥಾಂತರಮೇಕಾದು ದೆಂದು ಬೆಸಗೊಂಡೊಡದಂ ಸವಿಸ್ತರಮಱಿಯೆ ಪೇೞೆ ಕೇೞ್ದು—

ಕಂ ॥ ವಾನರ ಚಿಹ್ನಂ ತನ್ನಭಿ
ಮಾನಂ ನಿಂದತ್ತು ಪೂರ್ಣ್ಮೆ ಸಂದತ್ತೆನಗೆಂ ॥
ದೇನೊಸೆದನೊ ದಶವದನಂ
ಜಾನಕಿಯಂ ಲಂಕೆಗುಯ್ದನೆಂದಱಿಪಲೊಡಂ ॥ ೫೨ ॥

ಅಂತು ಸಂತೋಷದಂತನೆಯ್ದಿ—

ಕಂ ॥ ಇಡಿದಿರೆ ಸೀತಾವಿರಹದ
ಕಡುಗಟ್ಟಿಲೆ ದಾಶರಥಿಯ ಮಾನಸದೊಳದಂ ॥
ಕೆಡಿಸುವ ಬಗೆಯಿಂ ರತ್ನದ
ಸೊಡರಂ ತರ್ಪಂತೆ ರತ್ನಜಟಿಯಂ ತಂದಂ ॥ ೫೩ ॥

ಅಂತು ತಂದು ಕಾಣಿಸುವುದುಂ—

ಕಂ ॥ ಏಟಿಲ ತಟ ಘಟಿತ ಕರ ಸಂ
ಪುಟಂ ಪಟನ್ಮಣಿಕಿರೀಟ ಮುಂಜರಿಯಿಂದಂ ॥
ಜಟಿಲಿತಮೆನೆ ಪದಪೀಠೀ
ತಟಂ ನರೇಂದ್ರಂಗೆ ರತ್ನಜಟಿ ನತನಾದಂ ॥ ೫೪ ॥

ಅನಂತರಂ ಜನಾರ್ದನನೀತನಾರ್ಗೆನೆ ಸುಗ್ರೀವನಿಂತೆಂದಂ—

ಕಂ ॥ ಅರ್ಕಜಟಿವೆಸರ ಖಚರ ಕು
ಲಾರ್ಕನ ಸುತನಪ್ಪ ರತ್ನಜಟಿ ರಣಕೇೞೀ ॥
ಕರ್ಕಶನಾತ್ಮಾಂಬಿಕೆಯನ
ವರ್ಕೈತವದುಯ್ದರೆಂದು ಬಿನ್ನಪಿಸಿದಪಂ ॥ ೫೫ ॥

ಎಂಬುದುಮುಪಂ ಕೇೞ್ದು—

ಮ ॥ ಬಿದಿ ಕಣ್ಣಿಟ್ಟುವನಾವನಾವನಸುವಂ ಕಾಲಂ ಕಬಿಲ್ಚಲ್ ಕಡಂ ।
ಗಿದನಾವಂ ಯಮಪಾಶದೊಳ್ ತೊಡರ್ದನಾವಂ ದೇವಿಯಂ ಮುಂದುಗಾ॥
ಣದೆ ಕಳ್ದುಯ್ವನೆಂದು ರತ್ನಜಟಿಯಂ ರೋಷಗ್ರಹಾವೇಶ ಗ ।
ದ್ಗದ ಕಂಠಂ ಬೆಸಗೊಂಡನುತ್ತರಲಿತಾರಕ್ತೇಕ್ಷಣಂ ಲಕ್ಷ್ಮಣಂ ॥ ೫೬ ॥

ಅಂತು ಬೆಸಗೊಳ್ವುದುಂ ರತ್ನಜಟಿ ಕೈಗಳಂ ಮುಗಿದು—

ಕಂ ॥ ಸ್ವೈರದಿನಾಂ ಪೋಗುತ್ತಿರೆ
ತಾರಾಪಥದೊಳ್ ಪಳಂಚಿದುದು ಕಿವಿಯಂ ಹಾ ॥
ಹಾರವಮುರಿಯೆಣ್ಣೆಯವೋಲ್
ದೂರಿಸೆ ಬಗೆ ಬಗೆಯೊಳಿಗೆಯೆ ಕಾರುಣ್ಯ ರಸಂ ॥ ೫೭ ॥

ಸ್ರ ॥ ಕಾಮಾಂಧಂ ಕಳ್ದುಕೊಂಡುಯ್ದುಪಸಿದುವೆ ಪದಂ ತೋರ್ಪುದಣ್ಮುಳ್ಳವರ್
[ಸಂ ।
ಗ್ರಾಮಾವಷ್ಟಂಭಮುಂ ಹಾ ಜನಕ ಜನಕ ಹಾ ಲಕ್ಷ್ಮಣಾ ಲಕ್ಷ್ಮಣಾ ಹಾ ॥
ರಾಮಾ ರಾಮಾಯೆನುತ್ತುಂ ಜನಕಜೆ ಬಸಿಱುಂ ಮೋದಿ ಪುಯ್ಯಲ್ಟಿ ಕೇಳ್ದಾ ।
ನಾಮಕ್ಕಾನೆಯ್ದಿದೆಂ ರಾವಣನೊಳಿಜ್ಜಿವ ತಕ್ಕೆಂದಮಣ್ಮಾನ್ಮೆನುತ್ತುಂ ॥ ೫೮ ॥

ಅಂತು ಮೂದಲಿಸಿ ಮುಟ್ಟಿವರ್ಪುದುಂ ಮದೀಯ ಜನಕನೊಳಾದನುಬಂಧಂ ಕಾರಣಮಾಗೆನ್ನೊಳಿಜ್ಜಿಯದೆ ವಿದ್ಯಾಚ್ಛೇದನಂಗೆಯ್ದು ರಾವಣಂ ಸೀತೆಯಂ ಲಂಕೆ ಗುಯ್ದನೆಂದು ಬಿನ್ನವಿಸೆ—

ಕಂ ॥ ರಾವಣನುಯ್ದಂ ಸೀತಾ
ದೇವಿಯನೆನೆ ಕೇಳ್ದು ಮನದೊಳುಮ್ಮಳಿಸಿದನಿ ॥
ಲ್ಲಾ ವಾರ್ತೆವೇೞ್ದಿವಂಗೆ ಮ
ಹೀವಲ್ಲಭನಿತ್ತನಾತನಭಿವಾಂಛಿತಮಂ ॥ ೫೯ ॥

ಮೆಱೆದಂ ಸೀತೆಯ ಸುದ್ದಿಯ
ನಱಿಪಿದ ಖೇಚರನನನ್ವಯಾಗತ ಪದದೊಳ್ ॥
ನಿಱಿಸಿ ಭುಜಬಲದ ಮೆಚ್ಚಿನ
ನೆಱನಂ ರಾಘವನ ಮೈ ಮೆಗಿದು ವಿಸ್ಮಯಮೇ ॥ ೬೦ ॥

ಅಂತು ರತ್ನಜಟಿಯ ಸಪತ್ನರಂ ಪೊಱಮಡಿಸಿ ಕಳೆದು ದೇವೋಪನೀತಪುರ ಕ್ಕರಸುಮಾಡಿ ಕಿಷ್ಕಿಂಧಪುರಕ್ಕೆ ಬಂದು—

ಮ ॥ ನಳ ನೀಲಾಂಗದ ಜಾಂಬವತ್ಪ್ರಮುಖ ಸೇನಾನಾಥರುಂ ಮಂತ್ರಿ ಮಂ ।
ಡಲಮುಂ ಬಂಧುಜನಂಗಳುಂ ಬೆರಸು ಸುಗ್ರೀವಂ ನಿಜಾಸ್ಥಾನಮಂ ॥
ಡಲದೊಳ್ ಕಿಂಕರ ಭಾವದಿಂದಿರೆ ಮೃಗೇಂದ್ರೋತ್ತುಂಗ ಪೀಠಂಗಳೊಳ್ ।
ಬಲನಾರಾಯಣರಿರ್ದರಪ್ರತಿಹತರ್ ಚಂದ್ರಾರ್ಕರಿರ್ಪಂದದಿಂ ॥ ೬೧ ॥

ಆ ಸಮಯದೊಳ್ ಸೌಮಿತ್ರಿ ಸುಗ್ರೀವನ ಮೊಗಮಂ ನೋಡಿ—

ಚ ॥ ಅರಸಿಯ ಸುದ್ದಿಗೇಳ್ಪುಸಿರದಿರ್ಪುದು ಪಾಟಿಯೆ ಪಾರದೆನ್ನ ತೋ ।
ಳ್ನೆರವಲಮಂ ವಿರೋಧಿಬಲಮಂ ತವೆ ಕೊಲ್ವೆಡೆಗಾನೆ ಸಾಲ್ವೆನಿಂ ॥
ಶರನಿಧಿ ತಾಯ್ಮಳಲ್ವರೆಗಮಾನಿಸೆ ಬತ್ತದೆ ಲಂಕೆಗೆತ್ತದಿಂ ।
ತಿರೆ ಸೆರಗೆಂದನೇನಧಟನೋ ರಣಲಂಪಟನೋ ಜನಾರ್ದನಂ ॥ ೬೨ ॥

ಉ ॥ ಲೆಂಕೆಯನೊಕ್ಕಲಿಕ್ಕುವವೊಲಬ್ಬುಜಜಿ ಲಂಕೆಯನೊಕ್ಕಲಿಕ್ಕಿ ಕೇ ।
ಟ್ವಿಂ ಕಡುಪಿಂ ತ್ರಿಕೂಟಗಿರಿಯಂ ದಶಕಂಠನ ಕಂಠನಾಳಮಂ ॥
ಭೋಂಕೆನಲೆಚ್ಚು ಪಾಯ್ವ ಬಿಸುನೆತ್ತರ ಸೇಕದಿನೆನ್ನ ತೋಳ ತೀ ।
ನಂ ಕಳೆವೆಂ ವಿಳಂಬಿಸಿದೊಡೆನ್ನ ನೆಗಟ್ಟಿಗೆ ಬನ್ನಮಾಗದೇ ॥ ೬೩ ॥

ಎಂದು ತಜ್ಞಾಸಂದು ಲಕ್ಷ್ಮಣಂ ನುಡಿಯೆ—

ಕಂ ॥ ಕೆಸುಸಂಜೆವೊರೆದ ಚಂದ್ರಿಕೆ
ಪಸರಿಸಿದಪುದೆನಿಸಿ ರಾಮಚಂದ್ರಂ ಸಭೆಯೊಳ್ ॥
ಪಸರಿಸಿ ನಯನಪ್ರಭೆ ರಂ
ಜಿಸೆ ಜಾಂಬೂನದನ ವದನಮಂ ವೀಕ್ಷಿಸಿದಂ ॥ ೬೪ ॥

ಅಂತು ನೋಡಿ—

ಕಂ ॥ ಜೈನಾಗಮ ಕೋವಿದನಂ ಜಾಂ
ಬೂನದನಂ ಮಧುರ ನಿನದನಂ ಬೆಸಗೊಂಡಂ ॥
ದಾನವನ ವಂಶಮಂ ಲಂ
ಕಾನಗರದ ತೆಱನನತ್ಯುದಾತ್ತಂ ರಘುಜಂ ॥ ೬೫ ॥

ಅಂತು ಬೆಸಗೊಳ್ವುದುಂ ಮುಕುಳಿತಾಂಜಲಿ ಪುಟನಾಗಿ—

ಕಂ ॥ ವಿಪುಲಮತಿ ಸಕಲ ವಿದ್ಯಾ
ನಿಪುಣಂ ಗಣಧರ ನಿರೂಪಿತ ಕ್ರಮದಿಂ ದೈ ॥
ತ್ಯಪತಿ ಪ್ರಸಂಚಮಂ ಶ್ರವ
ಣ ಪಥಾತಿಥಿಮಾಡಲಾಗಳುದ್ಯತನಾದಂ ॥ ೬೬ ॥

ಶ್ರವಣಕ್ಕಮರ್ದಿನ ಸರಿ ಸುರಿ
ವವೊಲಾಗೆ ವಚೋವಿಲಾಸವಾ ಸಭೆಗತ್ಯ ॥
ತ್ಸವಮಂ ಕುಡೆ ನೇರ್ಪಡೆ ಬಿ
ನ್ನವಿಸಿದನಾವರಿಸೆ ದಂತರುಚಿ ತತ್ಸಭೆಯಂ ॥ ೬೭ ॥

ಅದೆಂತೆಂದೊಡೆ ದೇವ ಜಗತ್ತ್ರಿತಯನಾಥನಪ್ಪ ಪುರುಪರಮೇಶ್ವರನ ಧರ್ಮ ತೀರ್ಥ ಪ್ರವರ್ತನಾನಂತರಂ—

ಕಂ ॥ ಪಲಕಾಲಂ ಪೋಪುದುಮಾ
ಕುಲದೊಳ್ ಕೇಯೂರದಂತೆ ರಂಜಿಸೆ ದೋರ್ಮಂ ॥
ಡಲದೊಳ್ ತಳೆದಂ ಭೂಮಂ
ಡಲಮಂ ತ್ರಿದಶಂಜಯಂ ಜಯಶ್ರೀ ರಮಣಂ ॥ ೬೮ ॥

ಕಡುನೀಱಿ ಕಳಾವಿಭವಂ
ಬಡೆದಾ ಭೂಭುಜನೊಳಗ್ರ ಮಹಿಷೀ ಪದಮಂ ॥
ಪಡೆದು ಗುಣಾಬ್ಧಿಗೆ ಪೆರ್ಚಂ
ಪಡೆದಿಳೆಯೊಳ್ ಚಂದ್ರಲೇಖೆವೆಸರಂ ಪಡೆದಳ್ ॥ ೬೯ ॥

ಜಿತಶತ್ರು ವಿಜಯಸಾಗರ
ಸುತರ್ಕಳಂ ಚಂದ್ರಲೇಖೆ ಚಂದ್ರಾದಿತ್ಯ ॥
ಪ್ರತಿಮರನ್ಯೆಂದ್ರಿಯವೋಲ
ಪ್ರತಿಪು ಪ್ರಭರಂ ಪ್ರಸಿದ್ಧರಂ ವಧು ಪಡೆದಳ್ ॥ ೭೦ ॥

ಆ ಸುತರ್ಗನುಕ್ರಮದಿಂ ಪೌದನಪುರವರೇಶ್ವರನಪ್ಪ—

ಕಂ ॥ ಭುಜಸಖನಾ ನಂದ ಮಹೀ
ಭುಜಂಗಮಂಭೋಜಮಾಲೆಗಂ ಪುಟ್ಟಿದವರ್ ॥
ವಿಜಯೆ ಸುಮಂಗಳೆಯೆಂಬರ್
ವಿಜಿತಾಮರ ಕನ್ಯೆಯರ್ಕಳರಸಿಯರಾದರ್ ॥ ೭೧ ॥

ಆ ತ್ರಿದಶಂಜಯ ಮಹೀಭುಜಂ ಪಲಕಾಲಮರಸುಗೆಯ್ದು ವಿಷಯ ವೈರಾಗ್ಯ ಪರನಾಗಿ—

ಮ ॥ ನಿಜಪುತ್ರಂ ಜಿತಶತ್ರುಗಪ್ರತಿಸುಮಂ ಸಾಮ್ರಾಜ್ಯಮಂ ಕೊಟ್ಟು ಭೂ ।
ಭುಜ ರತ್ನಂ ತ್ರಿದಶಂಜಯಂ ತಳೆದಿಳಾಪೂಜ್ಯಂ ತಪೋರಾಜ್ಯಮಂ ॥
ನಿಜಕರ್ಮಾರಿಗಳಂ ಕುಬೇರಗಿರಿಯೊಳ್ ಬೆಂಕೊಂಡು ಮುಕ್ತ್ಯಂಗನಾ ।
ಭುಜ ಪಾಶಕ್ಕೊಳಗಾಗಿ ಪೀರ್ದನೊಲವಿಂ ತದ್ವಕ್ತ್ರ ಸೀಯೂಷಮಂ ॥ ೭೨ ॥

ಶಾ ॥ ಮತ್ತಿತ್ತಲ್ ಜಿತಶತ್ರುವೆಂಬ ಪೆಸರಾಯ್ತನ್ವರ್ಥಮೆಂಬನ್ನಮು ।
ದ್ವೃತ್ತಾರಾತಿಗಳಂ ಭಯಂಗೊಳಿಸಿ ಕಪ್ಪಂಗೊಂಡು ಕೈಯಾಂತವ ॥
ರ್ಗೆತ್ತಂ ಬೇಟ್ಟುದನಿತ್ತು ಮಾಣ್ಪನೆ ಭುಜೋತ್ಪ್ಲಾತಾಸಿ ಧಾರಾಂಬುವಿಂ ।
ದಿತ್ತಂ ಶ್ರೀವಧುಗಂ ಜಯಪ್ರಮದೆಗಂ ವಾರ್ಮಾನುಷೀ ಜನ್ಮಮಂ ॥ ೭೩ ॥

ಕಂ ॥ ವಿಜಿಗೀಷುವೆನಿಸಿದಾ ಭೂ
ಭುಜ ವಲ್ಲಭೆ ಮೇರುಮೇಖಲಾ ಲಕ್ಷ್ಮಿ ಮರು ॥
ತ್ಯುಜಮಂ ಪಡೆದುದೊ ಪೇೞಿನೆ
ವಿಜಯಾಂಬಿಕೆ ಪಡೆದಳಜಿತ ಭಟ್ಟಾರಕರಂ ॥ ೭೪ ॥

ಆ ವನಿತಾನುಜೆ ರೂಪ·ಕ
ಲಾ ವಿಭವ ಖ್ಯಾತೆ ವಿಜಯಸಾಗರನ ಮಹಾ ॥
ದೇವಿ ಸುಮಂಗಲೆ ಪೆತ್ತಳ
ಳಾವಲ್ಲಭನಪ್ಪ ಸಗರ ಚಕ್ರೇಶ್ವರನಂ ॥ ೭೫ ॥

ಜಿನಪತಿಯನೊರ್ವಳೊರ್ವಳ್
ಜನಪತಿಯಂ ಪಡೆದಳೆಂದೊಡಾರ್ ದೊರೆ ವಿಜಯಾಂ ॥
ಗನೆಗೆ ಸುಮಂಗಲೆಗೆ ವೃಥಾ
ಸ್ತನಭರಮಂ ಪೊತ್ತು ಕುಸಿವ ರಾಜಾಂಗನೆಯರ್ ॥ ೭೬ ॥

ಚತುರುದಧಿ ಮೇಖಲಾಲಂ
ಕೃತ ವಸುಧೆಯನಾಳ್ದು ಪಡೆದು ಸುತರಿನ್ನರನಾ ॥
ಜಿತಶತ್ರು ವಿಜಯಸಾಗರ
ರತರ್ಕ್ಯ ಭುಜವೀರ್ಯರರಸುಗೆಯ್ಯುತ್ತಿರ್ದರ್ ॥ ೭೭ ॥

ಆ ಕಾಲದೊಳಜಿತನಾಥ ತೀರ್ಥಾವತಾರಮುಖಿಲ ಪುಣ್ಯ ದಶಾವತಾರಮಾದು ದಂದು ವಿಜಯಾರ್ಧದ ರಥನೂಪುರಚಕ್ರವಾಳಪುರದ ಪೂರ್ಣಘನ ವಿಯಚ್ಚರಂಗೆ ತೋಯದವಾಹನನೆಂಬ ತನೂಜನಾದನತ್ತಲುತ್ತರ ಶ್ರೇಣಿಯೊಳಂಬರತಿಲಕಮೆಂಬ ಪುರದ ಸುಲೋಚನಂಗೆ ಸಹಸ್ರಲೋಚನನಿಂ ಕಿಱಿಯಳುತ್ಪಲನೇತ್ರೆಯೆಂಬ ತನುಜೆ ಯಾದಳಾಕೆಯಂ ಪೂರ್ಣಘನಂ ತೋಯದವಾಹನಂಗೆ ಬೇಡಿಯಟ್ಟಿದೊಡೆ ಚಕ್ರವರ್ತಿಯಪ್ಪ ಸಗರಂಗಗ್ರಮಹಿಷಿಯಕ್ಕುಮೆಂದು ನೈಮಿತ್ತಿಕಾದೇಶದಿಂ ಕುಡ ಲೊಲ್ಲದಿರೆ ಕಡುಮುಳಿದು ಪೂರ್ಣಘನಂ ಲಯಸಮಯದ ಘನಾಘನದಂತೆತ್ತಿ ಬಂ ದಂಬರತಿಲಕಮಂ ಮುತ್ತೆ ಪುತ್ರನಂ ಪುತ್ರಿಯುಮಂ ವಿದ್ಯೆಯಿಂ ಪತತ್ರಿಮಾಡಿ ಪೊಱ ಮಡಿಸಿ ಪೊಱಮಟ್ಟು ಕಾದಿ ಸುಲೋಚನನಮರೀ ವಿಲೋಚನಾತಿಥಿಯಪ್ಪುದುಂ ಪೂರ್ಣಘನನಂಬರತಿಳಕಮಂ ಪೊಕ್ಕು ಕನ್ನೆಯನಜಿಸಿ ಕಾಣದೆ ತನ್ನ ಪೊಬಿಲ್ಗೆ ಪೋದನಿತ್ತಲಾ ಸಹಸ್ರಲೋಚನನುಮುತ್ಪಲನೇತ್ರೆಯುಂ ಶರಭಾಟವಿಯಂ ಪೊಕ್ಕು ವೇತ್ರಾವತೀ ತೀರದೊಳಿರ್ದರನ್ನೆಗಂ ಸಗರನಂ ದುಷ್ಟಾಶ್ವವೆಱಿದು ತಂದಾ ಪಟುವಿ ನೊಳಟಿಸಿಪೋಗೆ ತೊಟಲುತ್ತುಂ ಬಂದು—

ಮ॥ ಮೃಗರಾಜಂಗಗಿದೋಡುವಾನೆಗಡುಪಂ ಮತ್ತದ್ವಿಪಂಗೆತ್ತು ಕಾ ।
ರ್ಮುಗಿಲೊಳ್ ಪೋರ್ವ ಗಜಂಗಳಂ ಶರಭಮುಂ ಬೆಂಕೊಳ್ವ ಭೇರುಂಡವ॥
ಕ್ಕಿಗಳಂ ನೋಡಿದ ನೋಟದಾಸಜುಗಿವನ್ನಂ ಕಂಡನಾಸನ್ನದೊಳ್ ।
ಸಗರಂ ಕನ್ನೆಯುಮುಂ ತದಗ್ರಜನುಮುಂ ವೇತ್ರಾವತೀ ತೀರದೊಳ್ ॥ ೭೪ ॥

ಚಂ॥ ನವ ಶಶಿಲೇಖೆಯುಂ ನವ ದಿನೇಶನುಮಿಲ್ಲಿಗೆ ರಾಹುಗಳ್ಕಿ ಬಂ ।
ದುವೊ ದಿಟವೆಂದು ಸಂದೆಗದಿನಿರ್ವರುಮಂ ನಡೆನೋಲ್ಪಿ ಭೂಭುಜ॥
ಪ್ರವರನ ಚಿತ್ತಮಂ ಸೆಜ್ಜೆಗೆ ತಂದುವು ಸೋಲಿಪ ತಮ್ಮ ಲೀಲೆಯಿಂ ।
ಕುವಲಯ ಮಾಲೆಯಂ ನಗುವ ಬಾಲೆಯ ಲೋಲ ವಿಲೋಚನಾಂಶುಗಳ್॥

ಅಲೆಯದೆಲರ್ ದಿನೇಶ ಕಿರಣಂ ಪುಗದೆಂಬಿನೆಗಂ ಕಜಂಗಿ ಕ ।
ಟ್ಟಿಲಿಸುವ ಕಾನನಾಂತರದೊಳಂಗಜ ಜಂಗಮ ದೀಪಮಾಲೆವೋಲ್॥
ಜಲಜಲಿಸುತ್ತುಮಿರ್ಪ ಖಚರೇಶ್ವರ ಕನ್ಯೆಯನಾಗಳೆಯ್ದಿದಂ ।
ತೊಲಗದೆ ದಿಟ್ಟಿ ನಟ್ಟುನಿಲೆ ಕಣ್ಣೊಳಪಿಂದಮರ್ದಪ್ಪಿಕೊಳ್ವವೋಲ್ ॥ ೮೦ ॥

ಕಿಡಿಸಿದನೇಕೆ ತಾವರೆಯನೀ ಮೊಗಮುಂ ಪಡೆದೇಕೆ ನೆಯ್ದಿಲಂ ।
ಕಿಡಿಸಿದನೀ ತೆಜಂಬೊಳೆವ ಕಣ್ಮಲರಂ ಪಡೆದೇಕೆ ತುಂಬಿಯಂ॥
ಕಿಡಿಸಿದನೀ ವಿನೀಲ ಕುಟಿಲಾಲಕಮಂ ಪಡೆದೇಕೆ ಪದ್ಮಜಂ ।
ಕಿಡಿಸಿದನೀಕೆಯಂ ಪಡೆದು ಜಂಗಮ ಕಲ್ಪಲತಾ ವಿಲಾಸಮಂ ॥ ೮೧ ॥

ಎಂದು ನೀಡುಂ ಭಾವಿಸಿ ನೋಡುತ್ತುಮಿರೆ---

ಕಂ॥ ಎಳಲತೆಯನುಜ್ಜಿದು ತಾವರೆ
ಗೆಳಸುವ ಮರಿದುಂಬಿಯಂದದಿಂದೆಜಗಿದುದಾ॥
ಚಳನಯನೆಯ ತನುಲತೆಯಿಂ
ತಳದರ್ದರಸನ ಕಣ್ ಕುಮಾರಮುಖ ಸರಸಿಜದೊಳ್ ॥ ೮೨ ॥

ಅಂತು ನೋಡಿ—

ಉ॥ ಬಾಲೆ ಶಿರೀಷ ಮಾಲೆಯವೊಲೀಕೆ ಕರಂ ಸುಕುಮಾರೆ ನೀಂ ಕರಂ ।
ಬಾಲನೆ ಕಾನನಂ ಮನುಜ ಖೇಚರ ಗೋಚರಮಲ್ತು ಋಕ್ಷ ಶಾ॥
ರ್ದೂಲ ಮದೇಭ ಸಿಂಹ ಶರಭಾಕುಲಮಿಲ್ಲಿಗೆವರ್ಪ ದುಷ್ಕೃತೋ ।
ನ್ಮೀಲನಮಾವಕಾರಣದಿನಾದುದದಂ ತಿಳಿಪೆಂದನಾ ನೃಪಂ ॥ ೮೩ ॥

ಅಂತು ಬೆಸಗೊಳ್ವುದುಂ ಸಹಸ್ರಲೋಚನಂ ನಿಜವೃತ್ತಾಂತಮಂ ತಿಳಿಪಿ—

ಶಾ ॥ ಈ ನಿನ್ನಾಕೃತಿ ನಿನ್ನ ದುಂದುಭಿ ಗಭೀರ ಧ್ವಾನಮಿಾ ನಿನ್ನ ನೇ ।
ತ್ರಾನಂದೋದಯ ಭದ್ರಲಕ್ಷಣ ಗಣಂ ಪೇಟ್ಪಿಪ್ಪುವೀತಂ ಧರಿ ॥
ತ್ರೀನಾಥಂ ಪೆಜನಲ್ಲನೆಂಬಿನಿತನೀ ಭೀಮಾಟವೀ ದುರ್ಗಮ ।
ಸ್ಥಾನಂಬೊಕ್ಕು ತೊಟಿಲ್ವುದಂ ಬೆಸಸಿದಂ ಲೋಕೈಕ ರಕ್ಷಾಮಣೀ ॥ ೪೪ ॥

ಎಂಬುದುನಾತನಯೋಧ್ಯಾಪತಿಯಿಂ ಸಗರನೆಂಬೆನೆಂದು ತನ್ನ ಬಂದ ತೆಜಿನ ನಱಿಯೆ ತಿಳಿಪೆ ಸಹಸ್ರಲೋಚನಂ ವಿಸ್ಮಯ ಸ್ತಿಮಿತ ಲೋಚನನಾಗಿ—

ಕಂ ॥ ಪಗೆ ತೀರ್ವುದು ಬಗೆ ತೀರ್ವುದು
ಸಗರನನಾಶ್ರಯಿ[1]ಸಿವೆಂದು ಪಿತೃ ಬೆಸಸಿದನ ॥
ಚ್ಚಿಗಮಾಯ್ತು ನಿಮಗವೆಂದು
ಬೈಗಮುಬ್ಬರಮಾಗೆ ಖಚರತನಯಂ ನುಡಿದಂ ॥ ೪೫ ॥

ಆ ನುಡಿಯನವಧಾರಿಸಿ---

ಶಾ ॥ ಖೇದಂ ಮಾಣ್ಗೆ ಶುಭೋದಯಂ ಸಮನಿಕುಂ ಸಂಸಾರಿಗಳ್ಗಿಂತಿದೇ ।
ನಾದಂ ಚೋದ್ಯಮೆ ನಚ್ಚಿ ನಿಮ್ಮ ಜನಕಂ ಪೇಟ್ಪಿಂತುಟಂ ಮಾಟ್ಪಿನಾ ॥
ಹ್ಲಾದಂಬೆತ್ತಿರಿವೆಂದು ಸಂವರಿಸಿ ಮುನ್ನಂ ತನ್ನನೊಟ್ಟೈಸಿ ಬಂ ।
ದಾ ದುಷ್ಟಾಶ್ವದ ಪಜ್ಜೆಗೊಂಡು ನಡೆದಂ ಪಿಂತಿಕ್ಕಿ ಕಾಂತಾರಮಂ ॥ ೪೬ ॥

ಅಂತು ಬರುತಿರ್ಪಿನಂ—

ಕಂ ॥ ಕರೆವಂತಾದುದು ಹಸ್ತ್ಯ
ಶ್ವ ರಥ ಪದಾತಿಗಳ ಕಳಕಳಂ ಧರೆ ನಿಂದಾ ॥
ಧರಣೀಶನಿರ್ದ ದೆಸೆಯಂ
ನಿರೀಕ್ಷಿಪಂತಾದುದೊಗೆದ ಧೂಳೀಜಾಲಂ ॥ ೪೭ ॥

ಅಂತು ನಿಜ ಚತುರ್ಬಲಂ ಬಂದು ಕೂಡಲೊಡಂ ವಿಜಯವಾರಣ ಮಣಿ [2]ಶಾರಿಕೆಯೊಳ್ ಸಹಸ್ರಲೋಚನನುಮುತ್ಪಲನೇತ್ರೆಯುಮುಭಯ ಪಾರ್ಶ್ವಮನಳಂಕರಿಸಿರೆ—

ಚ ॥ ಪುರ ವನಿತಾಜನಂ ಕುಡುವ ಪೂವಿನ ಮಾಲೆಯುಮಂ ಪುರಾಂಗನಾ ।
ತರಳ ಕಟಾಕ್ಷ ಮಾಲೆಯುಮನಾಂತು ದುಕೂಲ ಪಟೀ ಪತಾಕೆಯಿಂ ॥
ಮರಕತ ರತ್ನತೋರಣದಿನೊಪ್ಪುವುದಂ ಪುಗುತಂದನುತ್ಸವಾ ।
ಕರಮನಯೋಧ್ಯೆಯಂ ದಿವಿಜ ನಾಯಕನಂತೆ ಧರಾಧಿನಾಯಕಂ ॥ ೪೮ ॥

1. ಸಲೆಂದು. ಚ. 2. ಸಾರಣಿ. ಚ.

ಅಂತಾಪುರಮುಂ ಪೊಕ್ಕುತ್ಪಲನೇತ್ರೆಯುಂ ಮದುವೆನಿಂದು—

ಕಂ ॥ ನಿಜವಕ್ಷದೊಳಾ ವಧುವಂ
ಭುಜದೊಳ್ ಭೂವಧುವನಿರಿಸಿ ಷಟ್ಖಂಡ ಮಹೀ ॥
ಭುಜ ಪೂಜ್ಯನಮಲ ಕೀರ್ತಿ
ಧ್ವಜಮಂ ದಿಗ್ದಂತಿ ದಂತದೊಳ್ ತೆತ್ತಿಸಿದಂ ॥ ೮೯ ॥

ಪರಚಕ್ರ ಕಾಲಚಕ್ರಂ
ನಿರಸ್ತ ದಿನಕರ ಸಹಸ್ರಕರ ಚಕ್ರಂ ಭಾ ॥
ಸುರ ಚಕ್ರರತ್ನಮೊಗೆದುದು
ಧರಣೀವಲ್ಲಭನ ಶಸ್ತ್ರಶಾಲೋದರದೊಳ್ ॥ ೯೦ ॥

ಬಲವಾಜುಂ ನವನಿಧಿಯುಂ
ಪಲವುಂ ಚಿಹ್ನಂಗಳುಂ ಚತುರ್ದಶ ರತ್ನಾ ॥
ವಲಿಯುಂ ಜನಿಯಿಸೆ ಸಗರಂ
ನೆಲನಂ ಷಟ್ಖಂಡ ಭರತಮಂ ಸಾಧಿಸಿದಂ ॥ ೯೧ ॥

ಅಂತು ಸಿದ್ಧದಿಗ್ವಿಜಯಂ ವಿದ್ಯಾಧರಲೋಕಮುಂ ತನಗೆ ಕುಡೆ ಸಹಸ್ರ ಲೋಚನಂ ನಿಜ ಜನಕನಂ ಕೊಂದವನಂ ಕೊಂದಲ್ಲದೆ ಮಾಣೆನೆಂದಸಂಖ್ಯಾತ ಬಲಸಮೇತಂ ಬಂದು ರಥನೂಪುರಚಕ್ರವಾಳಪುರಮುಂ ಮೂವಳಸಾಗಿ ಮುತ್ತೆ ಸಹಸ್ರಲೋಚನಂ ಸಮರಸಾಧ್ಯನಲ್ಲನೆಂದು ತಱಿಸಂದು ಪೂರ್ಣಘನಂ ನಿಜ ತನೂಜನಪ್ಪ ತೋಯದವಾಹನನಂ ವಿದ್ಯೆಯಿಂದೆ ಹಂಸನಂ ಮಾಡಿ ಕಳಿಪಿ ಮಹಾ ಯುದ್ಧಂಗೆಯ್ದು ಕಱಿಯೆ ಸಹಸ್ರಲೋಚನಂ ತೋಯದವಾಹನನ ಬಱಿಯಂ ಗಳಿವಱಿಯ ಪಾವಿನಂತೆ ತಗುಳುತ್ತುಂ ಬಂದು—

ಕಂ ॥ ಅಟ್ಟುವನ ಮುಳಿಸುಮೋಡುವ
ನಿಟ್ಟಳಮೆನಿಸಿರ್ದ ಭಯಮುಮೊರ್ಮೊದಲೊಳ್ ಪಿಂ ॥
ಪೆಟ್ಟೆದುವು ಬಗೆಯೊಳಚ್ಚರಿ
ಪುಟ್ಟುವಿನಂ ಸಮವಸರಣಮುಂ ಮುಟ್ಟಲೊಡಂ ॥ ೯೨ ॥

ಅಂತಪಗತ ಕಲುಷರಿರ್ವರುಂ ಭಗವದಜಿತಭಟ್ಟಾರಕರ ಸಮವಸರಣ ಭೂಮಿಯಂ ಪೊಕ್ಕು ವಸ್ತುಸ್ತವ ರೂಪಸ್ತವ ಗುಣಸ್ತವಾನಂತರಂ ಮಾನವ ಸಭಾಸದ ನಾಗಿರ್ದ ಸಗರಚಕ್ರವರ್ತಿಯ ಸವಿಾಪವರ್ತಿಗಳಾಗೆ ಗಣಧರ ಮುಖಕಮಲ ದತ್ತ ಲೋಚನಂ ಸಹಸ್ರಲೋಚನಂ—

ಕಂ ॥ ಶ್ರೇಯೋನಿಧಿ ಮತ್ಪಿತೃಗಂ
ತೋಯದವಾಹನನ ಪಿತೃಗವಿಮಾ ಮುಳಿಸೀ ಜ ॥
ನ್ಯಾಯತ್ತಮೊ ಮೇಣ್ ಪೂರ್ವಭ
ವಾಯತ್ತಮೊ ನೆಜಱಿಯೆ ಬೆಸಸಿಮೆನಗಾ ತೆಱನಂ ॥ ೯೩ ॥

ಎನೆ ಗಣಧರರಾಚಾರ್ಯರಿಂತೆಂದು ಬೆಸಸಿದರೀ ಭರತಾರ್ಯಾಖಂಡದ ಷಡರ್ತುಕ ಮೆಂಬ ಪುರದ ಪರದಂ ಭಾವನನೆಂಬನಾತಂ ಹರಿದಾಸನೆಂಬ ತನ್ನ ಮಗಂಗೆ ನಾಲ್ಕುಕೋಟಿ ಕಸವರಮುಂ ಕೊಟ್ಟು ಪರದೇಶಕ್ಕೆ ಪರದುವೋಪುದುಂ ಹರಿದಾಸ ನಾಥನಮುಂ ಕಿಡಿಸಿ ನಿಜಭವನದಿಂ ರಾಜಭವನಕ್ಕೆ ಕನ್ನಮುಂ ಸಮೆದು ತದುಪಾರ್ಜ ನಮೆ ಜೀವಿತಮಾಗಿರ್ದನನ್ನೆಗಂ ಕೆಲವುಕಾಲದಿನಾತನ ತಂದೆಯಪ್ಪ ಭಾವನ ನನೂನ ಧನಮುಂ ಪಡೆದು ರಾತ್ರಿಸಮಯದೊಳ್ ಮನೆಗೆ ಬಂದು ಮಗನ ವಾರ್ತೆ ಯುಂ ಕೇಳ್ದು ಮಗುಟ್ಟಿ ತರಲೆಂದು ಕನ್ನಮುಂ ಪುಗುವುದುಮಾ ಸಮಯದೊಳ್ ಹರಿದಾಸಂ ತನ್ನಂ ಕೊಲಲರಸನಟ್ಟಿದ ತೀಕ್ಷ್ಣಪುರುಷಂ ಬಂದನೆಂದು ಕಯ್ದು ಗೆಯ್ದು ತಮ್ಮೊಳಿಱಿದು ಸತ್ತು ಪರಸ್ಪರ ವಿರೋಧಿಗಳಪ್ಪ ತಿರ್ಯಗ್ಜಾತಿಗಳಾಗಿ ತಮ್ಮೊ ಳೋರೊರ್ವರಂ ಕೊಂದು ತಿಂದು ದುಃಖಪರಂಪರೆಯನೆಯ್ದಿ ಪೆಱತೊಂದು ಜನ್ಮ ದೊಳ್ ಪೂರ್ವವಿದೇಹದ ಪುಂಡರೀಕಿಣೀಪುರದೊಳುತ್ತರನುಮನುತ್ತರನುಮೆಂಬ ಸಹೋದರರಾಗಿ ತಪಂಗೆಯ್ದು ಶತಾರಕಲ್ಪದೊಳ್ ಪುಟ್ಟಿ ಬಂದೀಗಳಾಭಾವನನುಂ ಪೂರ್ಣಘನನಾದಂ ಹರಿದಾಸನುಂ ಸುಲೋಚನನಾದನಂದಿನ ವಿರೋಧಂ ಕಾರಣ ಮಾಗೆ ಸುಲೋಚನಂ ಪೂರ್ಣಘನನ ಕೈಯೊಳ್ ಸತ್ತನೆಂದಿಂತು ತಿಳಿಯೆ ಪೇೞ್ದು—

ಚ ॥ ಪೊಲೆ ಮುಳಿಸೆಂಬುದಾ ಮುಳಿಸು ಪುಟ್ಟಿದ ಪೊಟ್ಟಿಜಿೞಾವನಾದೊಡಂ ।
ಪೊಲೆಯನೆ ಪಾಪಹೇತು ಮುಳಿಸಲ್ಲದೆ ಪೇೞ್ ಪೆಱತುಂಟೆ ಕೋಪದಿಂ ॥
ಕೊಲೆ ದೊರೆಕೊಳ್ಗುಮಾ ಕೊಲೆಯೆ ಪಾತಕಮೆಂಬುದು ಪುಣ್ಯಮೆಂಬುದಾ ।
ಕೊಲೆ ಪೊಲೆ ಪೊರ್ದದಿರ್ಪಿರವೆ ನೀಮದಱಿಂ ತೊಱಿಯಿಂ ವಿರೋಧಮಂ ॥೯೪॥

ಎಂದು ತಿಳಿಪೆ ತದನಂತರಂ—

ಕಂ ॥ ಒಲವೆನಗಿನಿತೇಕೆ ಸಹ
ಸ್ರಲೋಚನನೊಳಾದುದೆಂದು ಬೆಸಗೊಂಡಂ ಚ ॥
ಕ್ರೀಲಲಾಮಂ ಸಗರಂ ಭವ
ಜಲನಿಧಿ ತಾರಕರನಜಿತ ಭಟ್ಟಾರಕರಂ ॥ ೯೫ ॥

ಅಂತು ಬೆಸಗೊಳ್ವುದುಮಶೇಷ ಭಾಷಾತ್ಮಕಮಪ್ಪ ದಿವ್ಯ ಭಾಷೆಯೊಳಿಂತೆಂದು ಬೆಸಸಿದರೀ ಭರತವಿಷಯದ ಪದ್ಮಪುರದೊಳಾರಂಭಿಕನೆಂಬನೊರ್ವಂ ಪಾರ್ಶ್ವನಾತಂಗೆ

ಬಲಿ ಶಿಖಿಗಳೆಂಬಿರ್ವರಂತೀವಾಸಿಗಳಾದರವರ್ ವಿದ್ಯಾಮತ್ಸರಮೆ ತಮಗೆ ವೈರಕಾರಣ ಮಾಗೆ ವರ್ತಿಸುತ್ತಿರ್ದು ಮತ್ತೊಂದು ದಿವಸಂ ಧೇನುವಿಕ್ರಯನಿಮಿತ್ತಮೋರೊರ್ವರನಿಱಿದು ಸತ್ತು—

ಕಂ ॥ ಕಲುಷಮತಿ ಶಬರನಾದಂ
ಬಲಿ ಶಿಖಿಯುಂ ವೃಷಭನಾಗಿ ಶಬರಂ ತನ್ನಂ ॥
ಕೊಲೆ ಮೂಷಕನಾದಂ ಕಱಿ
ದು ಲುಬ್ಧಕಂ ಬದ್ಧರೋಷದಿಂ ಬೆಕ್ಕಾದಂ ॥ ೯೬ ॥

ಅಂತು ಪರಸ್ಪರೋಪಘಾತ [1]ಪರಿಣತಿಯಿಂ—

ಕಂ ॥ ಅನುಭವಿಸಿ ಪಲವು ಕಾಲಮು
ನನಂತ ಭವದೊಳ್ ದುರಂತ ದುಷ್ಕೃತ ಫಲಮಂ ॥
ಜಿನದೇವ ದಿತಂಗಾದರ್
ತನೂಜರವರೊರ್ಮೆ ವಾರಣಾಸೀಪುರದೊಳ್ ॥ ೯೭ ॥

ಅನಂತರಂ ವ್ಯಂತರಗತಿಯೊಳ್ ಸುರೂಪ ಸುಂದರವೆಸರಂ ಪಡೆದಲ್ಲಿಂ ಬಂದು ಸೋಮಪುರದೊಳ್ ಕುಲಂಧರ ಪುಷ್ಯಭೂತಿಗಳೆಂಬರಾಗಿ ಜನಿಯಿಸಿ ಜಾಯಾ ನಿಮಿತ್ತಂ ವೈರ ವೈರಸ್ಯ ಮನಸ್ಸರಾಗಿ ಸಲುತ್ತುಮೊರ್ಮೆ ಪುಣ್ಯವಶದಿನಗಣ್ಯ ಪುಣ್ಯ ಧನರಂ ತಪೋಧನರಂ ಕಂಡುಪಶಾಂತ ಸ್ವಾಂತರಾಗಿ ತೊಱೆದು ಸತ್ತು ಸನತ್ಕು ಮಾರಕಲ್ಪದುಪಪಾತ ಕಲ್ಪದೊಳ್ ಪುಟ್ಟಿ ನಾಕಲೋಕ ಸುಖಮನನುಭವಿಸಿ ಬಂದು ಧಾತಕೀ ಷಂಡದಪರವಿದೇಹದ ವಿಜಯಾವತೀವಿಷಯದ ವಿಜಯಪುರದೊಳ್ ಒಡ ವುಟ್ಟಿದ ಕ್ರೂರಧರನುಮಮರಧರನುಮೆಂಬರಾದರಾ ಪುರಮನಾಳ್ವ ಸಹಸ್ರಶೀರ್ಷ ನೆಂಬನೊಂದು ದಿವಸಮಾನೆವೇಂಟಿಗಡವಿಯಂ ಪೊಕ್ಕು ಪರಸ್ಪರೋಪದ್ರವಕಾರಿ ಗಳಪ್ಪ ಕ್ರೂರಮೃಗಂಗಳುಪಶಮಭಾವದಿಂದಿರೆ ಕಂಡು ಕೌತುಕಂಬಟ್ಟು ತೊಟಿ ಲುತ್ತುಮಲ್ಲಿ ವಿನಯಂಧರ ಕೇವಲಿಗಳಂ ಕಂಡು ತಚ್ಚರಣ ಸಮಕ್ಷದೊಳ್ ದೀಕ್ಷೆ ಯಂ ಕೊಂಡು ವೋಕ್ಷಕ್ಕೆ ವೋದನಿತ್ತಲಾ ಕ್ರೂರಧರನುಮಮರಧರನುಮಾ ಕೇವಲಿಗಳ ಪಾದಪಾರ್ಶ್ವದೊಳ್ ತಪಂಗೆಯ್ದು ಶರೀರಮಂ ತೊಱೆದು ಶತಾರಕಲ್ಪ ದೊಳನಲ್ಪ ಸುಖಮನನುಭವಿಸಿ ಬಂದಾ ಬಲಿಯುಂ ಶಿಖಿಯುಂ ಸಹಸ್ರಲೋಚನನುಂ ತೋಯದವಾಹನನುಮಾದರೆಂದು ಬೆಸಸಿ—

---

1. ಪರಿಣಾಮ ಪರಿಣತಿಯಿಂ. ಕ. ಘ. ಚ.

ಕಂ ॥ ಪರಿಷಜ್ಜನ ಹೃತ್ಕೈರವ
ಮರಲ್ಪಿನಂ ದಿವ್ಯವಚನ ಪರಿಪೂರ್ಣ ಸುಧಾ ॥
ಕರ ರುಚಿ ಪಸರಿಸೆ ಮತ್ತಂ
ನರೇಶ್ವರಂಗಜಿತತೀರ್ಥಕರರಿಂತೆಂದರ್ ॥ ॥ ೯೪ ॥

ಅಂದಿನಾರಂಭಿಕಂ ಋಷಿಯರ್ಗಾಹಾರ ದಾನಮಂ ಕೊಟ್ಟು ಭೋಗಭೂಮಿಯೊಳ್ ಪುಟ್ಟಿ ಬಟಿಯಂ ದಿವಕ್ಕೆ ಸಂದು ದಿವ್ಯಸುಖಮನನುಭವಿಸಿ ಬಂದು ಧಾತಕೀಷಂಡದಪರವಿದೇಹದ ವಿಜಯಾವತೀವಿಷಯದೊಳ್ ಚಕ್ರಪುರಮನಾಳ್ವ ಹರಿವರ್ಮಂಗಂ ಗಾಂಧಾರಿಗಂ ಶ್ರುತಕೀರ್ತಿವೆಸರ ಸುತನಾಗಿ ತಪಂಗೆಯ್ದು ಕಟಿದು ಸ್ವರ್ಗದೊಳ್ ಪುಟ್ಟಿ ಬಂದು ಪೂರ್ವವಿದೇಹದ ರತ್ನಸಂಚಯಪುರಮನಾಳ್ವ ಭಯ ಘೋಷಂಗಂ ಚಂದ್ರಾಯಣಿಗಂ ಪಯೋಬಲನೆಂಬ ಪುತ್ರನಾಗಿ ಪವಿತ್ರ ಚಾರಿತ್ರನಪಗತಪ್ರಾಣಂ ಪ್ರಾಣತಪ್ರಾಪ್ತನಾಗಿ ಮಗುಟಿ ಬಂದು ಪೃಥ್ವೀಧರಪುರಮನಾಳ್ವ ಜಯಂಧರಂಗಂ ವಿಜಯೆಗಂ ಜಯಕೀರ್ತಿವೆಸರ ಮಗನಾಗಿ ರಾಜ್ಯಂಗೆಯ್ದು ಜನಕ ಸೂರಿ ಪಾರ್ಶ್ವದೊಳ್ ಪರಿವ್ರಾಜಕನಾಗಿ ಸಮಾಧಿವೆತ್ತನುತ್ತರೆಗೆ ವೋಗಿ ಬಂದು ನೀನೀಗಳೆರಡನೆಯ ಚಕ್ರವರ್ತಿ ಸಗರನಾದೆ ನಿನಗಾರಂಭಿಕನಾದಂದಿನನುಬಂಧಂ ಕಾರಣಮಾಗೆ ಸಹಸ್ರಲೋಚನನೊಳತಿಪ್ರೀತಿ ಸಮನಿಸಿದುದೆಂದು ಬೆಸಸೆ---

ಕಂ ॥ ಜಿನವಚನಮನಾಲಿಸಿ ಭೀ
ಮನೆಂಬ ರಾಕ್ಷಸಕುಲಾಧಿಪಂ ತೋಯದವಾ ॥
ಹನನ ಪುರಾತನ ಜನ್ಮದ
ಜನಕಂ ಪ್ರೇಮಾನುಬಂಧದಿಂದಿಂತೆಂದಂ ॥ ೯೯ ॥

ಮಗನೆ ವಿಜಯಾರ್ಧನಗದೊಳ್
ಪಗೆವರತಿ ಪ್ರಬಲರವರ ನಡುವಿರೆ ನಿನಗ ॥
ಚ್ಚಿಗಮಕ್ಕುಂ ಪಾವಿನೊಳಂ
ಪಗೆಯೊಳವೊಂದಾಗಿ ಜೀವಿಸಲ್ ಬಂದಪುದೇ ॥ ೧೦೦ ॥

ಸಲವುಂ ದ್ವೀಪಂಗಳ್ ಕ
ಣ್ಮಲರಂ ಸೆಜಿಗೆಯ್ದು ಕಿನ್ನರಾದ್ಯಷ್ಟ ಮರು ॥
ತ್ಕುಲ ನಿಲಯಂಗಳ್ ದಕ್ಷಿಣ
ಜಲಧಿಯೊಳಿರ್ಪುವು ನಿಕಾಮ ಕಮನೀಯಂಗಳ್ ॥ ೧೦೧ ॥

ಆ ದ್ವೀಪಂಗಳೊಳಗೆ ರಾಕ್ಷಸದ್ವೀಪನೆಂಬುದು ಸಪ್ತಶತ ಯೋಜನ ಪ್ರಮಿತ ಮದಜ ನಡುವೆ—

ಮ॥ಸ್ರ॥ಕನಕ ಪ್ರಾಕಾರವೇಟುಂ ಬಳಸಿರೆ ವಿಳಸದ್ಗೋಪುರಾಟ್ಟಾಳಕಂ ನಂ।
ದನವೇಟುಂ ಲೋಚನಾನಂದಮನೊದವಿಸೆ ಸಾರ್ವರ್ತುಕಂ ರಂಜಿಕುಂ ಯೋ॥
ಜನಮೊಂಬತ್ತುದ್ದಮಯ್ದುತ್ತಗಲಮೆನೆ ಶಿರೋಭೂಷಣಾಕಾರಮುದ್ಯ।
ಜ್ಜಿನ ಗೇಹಂ ಸುತ್ತಲುಂ ತಳ್ತಿರೆ ವಿಕಟ ಹಟದ್ರತ್ನ ಕೂಟಂ ತ್ರಿಕೂಟಂ ॥೧೦೨॥

ಆ ತ್ರಿಕೂಟಾಚಲದ ಶಿಖರ ಮಂಡಲದೊಳ್—

ಕಂ ॥ ತ್ರಿಂಶದ್ಯೋಜನ ವಿಸ್ತಾ
ರಂ ಶರದಂಬುಧರ ಧವಲ ಹಾರಂ ಮಣಿ ಹ ॥
ರ್ಮ್ಯಾಂಶು ಸ್ಫಗಿತ ವಿಯಚ್ಚ
ಕ್ರಂ ಶೋಭಾ ಜನ್ಮಭೂಮಿ ಲಂಕಾನಗರಂ ॥ ೧೦೩ ॥

ಆ ನಿರಾತಂಕಮಪ್ಪ ಲಂಕೆಯೊಳ್ ಸುಖದಿನರಸುಗೆಯ್ಯೆಂದು ಭೀಮರಾಕ್ಷಸಂ ಭವಾಂತರ ಸ್ನೇಹದಿಂ ತೋಯದವಾಹನನಂ ತನ್ನ ಪೊಬಿಲ್ಗಯ್ದು ರಾಜ್ಯಾಭಿಷೇಕಂಗೆಯ್ದು ಪಟ್ಟಮಂ ಕಟ್ಟಿ ರಾಕ್ಷಸವಿದ್ಯೆ ಮೊದಲಾಗೆ ಪಲವುಂ ವಿದ್ಯೆಗಳುಮಂ ನವ ಮುಖಾಭರಣ ಪ್ರಮುಖಾನೇಕ ದಿವ್ಯಾಭರಣಂಗಳುಮಂ ನವನಿಧಿವೆರಸುಪಾತಾಳ ಲಂಕೆಯುಮನಿತ್ತು ನಿನಗೆ ರಾಕ್ಷಸಕುಲಮೆ ಕುಲಮಕ್ಕೆಂದು ನಿಯಮಿಸಿ ನಿಜ ಪರಿಗ್ರಹಂಬೆರಸು ದ್ವೀಪಾಂತರಕ್ಕೆ ಪೋದನಿತ್ತ ತೋಯದವಾಹನಂ ನಿಜ ಪರಿಜನಂ ಬೆರಸು ಲಂಕೆಯೊಳರಸುಗೆಯ್ಯುತ್ತುಂ ವಿಜಯಾರ್ಧದ ಕಿನ್ನರಪುರಮನಾಳ್ದ ರತಿ ಮಯೂಖಿಂಗಮನುಮತಿಗಂ ಪುಟ್ಟಿದ ಸುಪ್ರಭೆಯಂ ಮದುವೆಸಿಂದು ಕೆಲವು ಕಾಲದಿಂ ವೈರಾಗ್ಯಪರನಾಗಿ ನಿಜಾಗ್ರ ತನಯನಪ್ಪ ಮಹಾರಾಕ್ಷಸಂಗೆ ರಾಜ್ಯಮನಿತ್ತು ದೀಕ್ಷೆಗೊಂಡು ಮೋಕ್ಷಕ್ಕೆ ಪೋಪುದುಮಿತ್ತಲ್—

ಕಂ ॥ ರಕ್ಷಿಸಿ ವಸುಮತಿಯಂ ಪರ
ಪಕ್ಷಮನಾಕ್ರಮಿಸಿ ವಿಭವದೊಳ್ ತನಗೆ ಸಹ ॥
ಸ್ಪಾಕ್ಷಂ ಸಮನೆನಿಸಿ ಮಹಾ
ರಾಕ್ಷಸನಧಿರಾಜನೆನಿಸಿ ಲಂಕೆಯೊಳಿರ್ದಂ ॥ ೧೦೪ ॥

ಆತಂಗೆ ತನಯರಮರರಾಕ್ಷಸನುಂ ಭಾನುರಾಕ್ಷಸನುಮೆಂಬರಾದರ್ ಆ ಮಹಾರಾಕ್ಷಸನೊಂದುದಿವಸಂ ಕ್ರೀಡಾವನಕ್ಕೆ ಬಂದವಮಂದ ಮಕರಂದ ಲೋಭದಿಂ ದಿರುಳ್ ಮುಗಿದ ಕಮಲ ಕೋಶದಿಂ ಪೊಜಮಡಲಜ್ಞಾಯದುಸಿರ್ಪಿಂಗಿದ ಭೃಂಗನಂ ಕಂಡು—

ಕಂ ॥ ಮರಣಮನೆಯ್ದಿದುದೀ ಷ
ಟ್ಚರಣಂ ಘ್ರಾಣೇಂದ್ರಿಯಕ್ಕೆ ಸೋಲ್ತೆನಲಯ್ದುಂ ॥

ಕರಣದನುಸರಣಮಿಂ ಸಂ
ಸರಣ ವಿಪತ್ಕರಣಮಪ್ಪುದೊಂದಚ್ಚರಿಯೇ ॥ ೧೦೫ ॥

ಎಂದು ಸಂಸಾರ ವೈರಾಗ್ಯಪರನವಧಿಬೋಧರಂ ಶ್ರುತಸಾಗರ ಚಾರಣ ಋಷಿಯರಂ ಕಂಡು ನಿಜವಿಭವ ಕಾರಣಮಂ ಬೆಸಗೊಳ್ವುದುಮವರಿಂತೆಂದು ಬೆಸಸಿದರ್ ಪೌದನಪುರಾಧಿಪಂ ಕನಕರಥಂ ಜಿನಪೂಜೆಯಂ ಮಾಡೆ ನೋಡಿ ನಲಿದು ನರ್ತಿಸಿ ತತ್ಫಲದಿಂ ಕಡೆಯೊಳಪರವಿದೇಹದ ಕಾಂಚನಪುರದೊಳ್ ಯಕ್ಷನಾಗಿ ಸಾಧು ಸಂಘಕ್ಕೆ ಸಮನಿಸಿದುಪಸರ್ಗಮನಪಹರಿಸಿ ತಟಿಲ್ಲಂಘನೆಂಬ ಖೇಚರಂಗಂ ಶ್ರೀಪ್ರಭೆ ಗಮುದಿತನೆಂಬ ಮಗನಾಗಿ ವೈರಾಗ್ಯದಿಂ ತೊಱೆದು ಜಿನಚರಣ ವಂದನಾನಂದದಿಂ ಬಂದ ವಿಕ್ರಮನೆಂಬ ವಿದ್ಯಾಧರನ ವಿಭೂತಿಯಂ ನೋಡಿ ಮನವೆಳಸಿ [1]ವಿಧಾನಂ ಗೆಯ್ದು ಜೀವಿತಾವಸಾನದೊಳೀಶಾನಕಲ್ಪಕ್ಕೆ ಪೋಗಿ ಬಂದು ಮಹಾರಾಕ್ಷಸನಾದೊಡೀ ಮಹಾಮಹಿಮೆ ನಿನಗಾದುದೆಂದು ಪೇೞ್ದ ಕೇಳ್ದು ನಿಜತನೂಜನಪ್ಪಮರರಾಕ್ಷಸಂಗೆ ಲಂಕೆಯಂ ಕೊಟ್ಟು ವಿದ್ಯೆಗಳಂ ವಿಸರ್ಜಿಸಿ ತಪಂಗೆಯ್ದುಪವರ್ಗ ಪ್ರಾಪ್ತನಾದ ನಿತ್ತಲ್—

ಕಂ ॥ ಕರವಾಳ ಕೂರ್ಪಿನಿಂದವು
ರರಾಕ್ಷಸಂ ಕೂರ್ಪುಗಿಡಿಸಿ ತನಗೆಡೆಯುವ ಖೇ ॥
ಚರ ವಲ್ಲಭರಂ ಲಂಕಾ
ಪುರದೊಳ್ ನಿಶ್ಶಂಕನರಸುಗೆಯ್ಯುತ್ತಿರ್ದಂ ॥ ೧೦೬ ॥

ಆ ವಿಪಕ್ಷ ರಾಕ್ಷಸನೆನಿಪ್ಪಮರರಾಕ್ಷಸಂಗಂ ತದನುಜನಪ್ಪ ಭಾನುರಾಕ್ಷಸಂ ಗಂ ಪ್ರತ್ಯೇಕಂ ಪದಿಂಬರ್ ತನಯರಪ್ಪುದುಮವರ ನೋರೊಂದೆ ಪೊಬಲ್ಗರಸುಮಾಡಿ ನಿಸರ್ಗ ವೈರಾಗ್ಯದಿಂ ತೊಱೆದಿರ್ವರುಂ ನಿರ್ವಾಣಕ್ಕೆ ಸಂದಿಂಬಟ್ಟಿಯಮಾ ಸಂತಾನ ದೊಳನೇಕರರಸುಗಳತಿಕ್ರಾಂತರಪ್ಪುದುಂ—

ಕಂ ॥ ಘನ ರುತಿಗೆ ರಾಜಹಂಸಂ
ಮನಮಟ್ಟಿವಂತನ್ಯರಾಜಕಂ ಬೆರ್ಚುವಿನಂ ॥
ಘನ ತೇಜಃಪ್ರಭೆಗಾಳ್ದಂ
ಘನಪ್ರಭಂ ಪ್ರಥಿತಕೀರ್ತಿ ಲಂಕಾಪುರಮಂ ॥ ೧೦೭ ॥

ತದಪತ್ಯಂ—

---

1. ನಿದಾನಂ. ಗ; ನಿಧಾನಂ. ಚ.

ಕಂ ॥ ಧವಲಚ್ಛತ್ರಚ್ಛಾಯೆಯಿ
ನವನೀ ಚಕ್ರಕ್ಕೆ ಚಂಡಕರ ತಾಪಂ ಸಂ ॥
ಭವಿಸದೆನೆ ತನ್ನ ಜಸದಿಂ
ಧವಳಿಸಿದಂ ಧವಳಕೀರ್ತಿ ದಿಗ್ಭಿತ್ತಿಗಳಂ ॥ ೧೦೪ ॥

ಅಂತಾತಂ ಲಂಕೆಯನಾಳುತ್ತುಮಿರೆ ಮತ್ತಿತ್ತ ವಿಜಯಾರ್ಧಗಿರಿಯ ದಕ್ಷಿಣ ಶ್ರೇಣಿಯ ಮೇಘಪುರದ ವಿಯಚ್ಚರೇಂದ್ರನತೀಂದ್ರನೆಂಬಂ ನಿಜ ತನೂಜನಪ್ಪ ಶ್ರೀಕಂಠ ಕುಮಾರನಿಂ ಕಿಱಿಯಳ್ ದೇವಿಲೆಯಂ ರತ್ನಪುರದ ಪೂರ್ವೋತ್ತರಂ ತನ್ನ ಮಗಂ ಪುಷ್ಪೋತ್ತರಂಗೆ ಬೇಡೆ ಕುಡದೆ--

ಕಂ ॥ ದೇವಿಲೆಯಂ ಲಾವಣ್ಯ ರ
ಸಾವಿಲೆಯಂ ಧವಳಕೀರ್ತಿಗುತ್ಸವ ತೂರ್ಯಾ ॥
ರಾವಂ ಗಗನೋದರಮಂ
ತೀವುವಿನಂ ಚಂದ್ರಮುಖಿಯನಿತ್ತನತೀಂದ್ರಂ ॥ ೧೦೯ ॥

ಆತನ ತನೂಭವಂ ಶ್ರೀಕಂಠಕುಮಾರನೊರ್ಮೆ ಮಂದರ ಕಂದರಕ್ಕೆ ಜಿನ ವಂದನಾನಿಮಿತ್ತಂ ಪೋಗಿ ರತ್ನಪುರದ ಮೇಗನೆ ಮೇಘಪುರಕ್ಕೆ ಬರ್ಪ ಸಮಯದೊಳ್ ಪುಷ್ಪೋತ್ತರನ ತಂಗೆ ಪದ್ಮೋತ್ತರೆ ತನ್ನ ಚೆಂಬೊನ್ನ ಕನ್ನೆವಾಡದೊಳ್ ಸುಸ್ವರದಿಂ ಪಾಡುತ್ತುಮಿರ್ಪುದುಂ—

ಮ॥ ಸ್ರ॥ ಜಿತ ಭೃಂಗೀಝಂಕೃತಂ ಸಿರ್ಜಿತ ಮದನ ಧನುರ್ಜ್ಯಾಲತಾ ಟಂಕೃತಂ ತ।
ರ್ಜಿತ ವೀಣಾ ಶಿಂಜಿತಂ ಭಂಜಿತ ರತಿರಮಣೇ ರತ್ನಕಾಂಚೀ ಪ್ರಣಾದಂ ॥
ಶ್ರುತಿಯಂ ತಟಿಸ್ಥಿಸೆ ರೋಮೋದ್ಗತಿಯೊಡನೆ ಗತಿಸ್ತಂಭಮಂ ಖೇಚರಾಧೀ।
ಶ ತನೂಜಂಗಿತ್ತುದಾ ಕನ್ನಿಕೆಯ ಮಧುರ ಸಪ್ತಸ್ವರೋತ್ತಾನ ಗಾನಂ॥ ೧೧೦॥

ಕಂ ॥ ಸ್ವರ ಮಂತ್ರ ದೇವತಾ ನೂ
ಪುರ ರವಮೆನೆ ಕಿವಿಯನೆಯ್ದಿ ಕನ್ಯಾ ಕಲಕಂ ॥
ಶ ರವಂ ಶ್ರೀಕಂಠಂ ರಾ
ಗ ರಸೋತ್ಸಂಶಂ ಪ್ರತಿಷ್ಠೆಯೊಳ್ ಪಾಡಟಿದಂ ॥ ೧೧೧ ॥

ಅಂತಾತಂ ಗೋರಿಯ ಮೃಗದಂತೆಳಸಿ ಬರ್ಪುದುಂ—

ಕಂ ॥ ನೋಡಲೊಡಮಾ ಕುಮಾರನ
ಗಾಡಿಗೆ ಕಣ್ಣೋಲ್ತ ಕನ್ನೆಯಂ ಮನಸಿಜನೇ ॥

ಸಾಡಿದನೆಡೆ[1]ವಡೆದೆನೆ ಪರ
ಪೀಡಾಕರರೇಕೆ ಬಾಧೆವಡಿಸದೆ ಮಾಣ್ಬರ್ ॥ ೧೧೨ ॥

ಅಂತು ಪಶಮಾದ ಕನ್ನೆಯನಶಂಕಿತಂ ಲಂಕೆಗುಯ್ದು ಧವಳಕೀರ್ತಿಯ ಕೆಲ ದೊಳಿರ್ದುದುಮದಂ ಪುಷ್ಪೋತ್ತರನಱಿದು—

ಚ ॥ ಎರೆದೊಡೆ ಕನ್ನೆಯಂ ಕುಡದೆ ಮುನ್ನೆನಗೆನ್ನನುಜಾತೆಯಂ ಕುಲಾ ।
ಚರಣಮನೇನುಮಂ ಬಗೆಯದೆನ್ನಮನೇಳಿಸಿಕೊಂಡು ಪೋದನೆಂ ॥
ಬೆರಡಱಿಯೊಳಂ ಮನಕ್ಕೆ ಮುನಿಸಿರ್ಮಡಿದಳ್ಳಿಸೆ ಲಂಕೆಗೆತ್ತಿದಂ ।
ಧರೆ ಕಿಱಿದೀ ವರೂಥಿನಿಗೆನಲ್ ವಿಲಯಾಂತಕನಂತೆ ಖೇಚರಂ ॥ ೧೧೩ ॥

ಅಂತು ಮೇಲೆತ್ತಿಬರ್ಪುದುಂ ಧವಳಕೀರ್ತಿ ನಯಾನುವರ್ತಿ ಮುನ್ನಂ ಸಾಮಮು ನೊಡರ್ಚಿವೆಂದು ನಿಜಮಹತ್ತರರಂ ಪುಷ್ಪೋತ್ತರನಲ್ಲಿಗಟ್ಟುವುದುಮವರ್ ಬಂದು ಕಂಡುಪಾಯನಪುರಸ್ಸರಮಿಂತೆಂದರ್—

ಮ॥ ಸ್ರ॥ ಅನುರೂಪಂ ಕನ್ನೆಗೀತಂ ಕುಲ ಭುಜಬಲ ವಿದ್ಯಾಬಲ ಖ್ಯಾತ ನಿನ್ನಂ ।
ಗೆ ನಿರಾಲೋಚಂ ಕುಡಲ್ಪೇಱ್ಪುದು ಯುವತಿಯನನ್ಯೋನ್ಯ ಸಂಪ್ರೀತಿಯಿಂದಾ॥
ಯ್ತನುಬಂಧಂ ರಾಗದಿಂದಿನ್ನಿವರ್ಗೆ ಮದುವೆಯುಂ ಮಾಱ್ಪುದೆಂದಟ್ಟಿದಂ ನಿ।
ಮ್ಮನುಜನ್ಮಂ ನಿಮ್ಮನಣ್ಪಂ ಬಯಸಿ ಪದೆಪಿನಿಂದೆಮ್ಮವಿದ್ಯಾಧರೇಂದ್ರಂ ॥೧೧೪॥

ಎನೆ ಮನದೆ ಕೊಂಡು ನಿರುತ್ತರಂ ಪುಷ್ಪೋತ್ತರನೊಡಂಬಟ್ಟು ಮಗುಟಿ ಪೋಪುದುಂ ಶುಭದಿನ ಮುಹೂರ್ತದೊಳ್ ಪದ್ಮೋತ್ತರೆಯಂ ಶ್ರೀಕಂಠಂಗೆ ಮದುವೆ ಮಾಡಿ ಮತ್ತೊಂದು ದಿನಂ ಶ್ರೀಕಂಠನಂ ನಿನಗೆ ವಿಜಯಾರ್ಧ ಮಹೀಧರದೊಳ ಹಿತರೊಡಗೂಡಿರ್ಪುದು ನೀತಿಯಲ್ತದಱಿನನೇಕ ದ್ವೀಪ ಮುಖ್ಯಮಪ್ಪ ವಾನರದ್ವೀಪ ದೊಳೆನ್ನ ಸವಿಾಪದೊಳಿರ್ಪುದೆನೆ ಮನದೆ ಕೊಂಡು ತದ್ದ್ವೀಪನಿರೀಕ್ಷಣನಿಮಿತ್ತಂ ಬರುತ್ತುಮೊಂದೆಡೆಯೊಳ್ ವಾನರಂಗಳಂ ಕಂಡವಂ ತರಿಸಿಕೊಂಡು ಕಿಷ್ಕಿಂಧ ಗಿರಿಯಮೇಲೆ ಪದಿನಾಲ್ಕುಂ ಯೋಜನದ ವಿಸ್ತಾರದ ಪೊಟಲಂ ಮಾಡಿ ಕಿಷ್ಕಿಂಧಪುರ ಮೆಂದು ಪೆಸರನಿಟ್ಟು ಆ ಪುರದೊಳ್ ಪಲಕಾಲಂ ರಾಜ್ಯಂಗೆಯ್ಯುತ್ತುಮಿರ್ದೊಂದು ದಿವಸಂ ನಂದೀಶ್ವರಪೂಜೆಗಚ್ಯುತೇಂದ್ರನೊಡನೆ ಪೋಗುತ್ತುಂ ಮಾನುಷೋತ್ತರ ದ್ವೀಪದಿನತ್ತ ಮನುಷ್ಯರ್ಗೆ ಸಲವಿಲ್ಲಪ್ಪುದಱಿಂ ನಿಜವಿಮಾನಂ ಪೋಗದಿರೆ ಮಗುಟ್ಟು ಬಂದದುವೆ ನಿರ್ವೇಗಕಾರಣಮಾಗೆ ತನ್ನ ಮಗಂ ವಜ್ರಕಂಠಂಗೆ ರಾಜ್ಯಮಂ ಕೊಟ್ಟು ತಪಂಬಟ್ಟು—

---

1. ಯುಡುಗಡೆ. ಗ.

ಕಂ ॥ ನಾಕಾನೋಕಹ ಸುಮನ
ಶ್ರೀಕಂತಾಭರಣಮಾಗೆ ಗಗನ ಶ್ರೀಗಾ ॥
ಶ್ರೀಕಂಠಯೋಗಿ ಮುಕ್ತೆ
ಶ್ರೀಕಂತಾಭರಣಮಾದನನವಧಿಬೋಧಂ ॥ ೧೧೫ ॥

ತತ್ತನಯಂ—

ಕಂ ॥ ಪರಿಪಾಲಿಸಿದಂ ವಾನರ
ಪುರಮಂ ಚಿರಕಾಲಮಹಿತ ಕಂಠ ಗ್ರಹಣಾ ॥
ತುರ ಕರಕೃಪಾಣನಾಹವ
ನಿರಂಕುಶಂ ವಜ್ರಕಂಠನುದ್ಧತ ಕಂಠಂ ॥ ೧೧೬ ॥

ಆತನೊಂದುದಿವಸಂ ತ್ರಿಕಾಲದರ್ಶಿಮಹರ್ಷಿಯರಂ ಕಂಡು ಪೂಜಿಸಿ ಪೊಡೆವಟ್ಟು ಧರ್ಮಶ್ರವಣಾನಂತರಂ ಮದೀಯಜನಕಂಗಚ್ಯುತೇಂದ್ರನೊಳತಿಪ್ರೀತಿ ಸಮನಿಸಿದ ಕಾರಣಮೇನೆಂಬುದುಂ ಮುನೀಂದ್ರರಿಂತೆಂದು ಬೆಸಸಿದರ್ ವೀತಶೋಕಪುರದ ಪರದನರ್ಹದ್ದತ್ತನೆಂಬನಾತನ ತನಯರ್ ಧನದತ್ತ ವಸುದತ್ತರೆಂಬರ್ ತಮ್ಮ್ ತಂದೆ ತಪಸ್ಸ್ಥನಪ್ಪುದುಂ ಸ್ತ್ರೀನಿಮಿತ್ತಂ ತಮ್ಮೊಳಗೆ ಮುಳಿದು ಗುರೂಪದೇಶದಿಂ ಮುಳಿಸನುಬಿಡಿದು ತಪಂಗೆಯ್ದುಂ ನಿಚ್ಯುತೇಂದ್ರನಾದನನುಜನುಮುಮರ ಗತಿವಡೆದು ನಾಕಚ್ಯುತಂ ಶ್ರೀಕಂಠನಾಗಿ ತದಚ್ಯುತೇಂದ್ರ ದರ್ಶನ ಜನಿತ ಜಾತಿಸ್ಮರಂ ವಂದನಾಭಕ್ತಿಯಿನೊಡನೆ ಪೋಗುತ್ತುಂ ಮನುಷ್ಯಕ್ಷೇತ್ರದಿಂದತ್ತಲ್ ತನಗೆ ಸಲವಿಲ್ಲದೊಡದುವೆ ವೈರಾಗ್ಯಕಾರಣಮಾಗೆ ನಿನಗರಸುತನಮನಿತ್ತು ತಪಂಬಟ್ಟನೆಂಬುದುಮದಂ ಕೇಳ್ದು ತಾನುಂ ನಿರ್ವೇಗಪರಾಯಣನಾಗಿ ವಜ್ರಕಂಠಂ ನಿಜತನೂಜನಪ್ಪಿಂದ್ರಾಯುಧಂಗರಸುತನಮನಿತ್ತು ತಪಂಗೆಯ್ದು ಸುಗತಿಪ್ರಾಪ್ತನಾದಂದಿಂಬಟ್ಟಿಯಂ—

ಕಂ ॥ ಅಪರಿಮಿತ ಭುಜಬಲರ್ ವಾ
ಸುಪೂಜ್ಯ ಜಿನ ವೃಷಭ ಸಮವಸರಣಂಬರಮಾ ॥
ಕಪಿಕುಲದೊಳ್ ಕಿಷ್ಕಿಂಧಾ
ಧಿಪರಿಂದ್ರಾಯುಧನಿನಾದರಿತ್ತಲನೇಕರ್ ॥ ೧೧೭ ॥

ಅಲ್ಲಿಂಬಟ್ಟಿಯಮಾ ಕುಲದೊಳಪ್ರತಿಹತ ಪ್ರಭನಮರಪ್ರಭನೆಂಬನಾದನತ್ತಲಂಕೆಗೆ ಧವಳಕೀರ್ತಿಯ ಕುಲದೊಳ್ ಪಲರುಮವಿಶ್ರಾಂತ ವಿಕ್ರಾಂತರತಿಕ್ರಾಂತರಪ್ಪುದುಮಲ್ಲಿಂಬಟ್ಟಿಯಂ ತ್ರಿಕೂಟನೆಂಬನೊಡೆಯನಾದನಾತನ ಸುತೆ ಗುಣವತಿಯನಮರಪ್ರಭಂಗೆ ಮದುವೆಮಾಡಲೆಂದು ಕಿಷ್ಕಿಂಧಪುರಕ್ಕುಯ್ವುದುಮಾಕೆ ವಿವಾಹ

ವೇದಿಕೆಯೊಳ್ ಪಂಚರತ್ನ ವರ್ಣಚೂರ್ಣದಿಂ ಬರೆದ ಲತೆಗಳೊಳಗೆ ವಾನರಂಗಳಂ ಕಂಡು ಬೆಚ್ಚುವುದುಮವರಪ್ರಭನಿವಂ ಬರೆದರಾರೆನೆ ಗೃಹಮಹತ್ತರನಿವಂ ನಿಮ್ಮ ಪೂರ್ವಜನಪ್ಪ ಶ್ರೀಕಂಠಂ ಕೊಂಡಾಡಿದನಪ್ಪುದಱಿಂ ನಿಮ್ಮ ಕುಲದವರುತ್ಸವಂಗಳೊಳಿಂತೆ ಬರೆವರೆನೆ ಮುನಿಸಂ ತೊಱೆದಂತಾದೊಡಿವಂ ಮೆಟ್ಟುವೆಡೆಯೊಳೀಕೆ ಬರೆವಿರೆಂದು ಪತಾಕೆಗಳೊಳಂ ಮಕುಟಂಗಳೊಳಂ ಮಣಿ ಕನಕ ವಿರಚಿತಂಗಳಂ ಕೀಲಿಸಿ ಕೊಂಡಾಡಿ ವಾನರಧ್ವಜರುಂ ವಾನರಕುಲರುಮೆಂಬ ರೂಢಿಯಂ ಮಾಡಿ—

ಕಂ ॥ ಅಮರಪ್ರಭ ಖಚರಂ ತ
ನ್ನ ಮಗಂ ಕಪಿಕೇತುಗಿತ್ತು ಸಿರಿಯಂ ಸಂನ್ಯಾ ॥
ಸಮನಪ್ಪುಕೆಯ್ದು ಮುಕ್ತಿ
ಪ್ರಮುದಾಪ್ರೇಮಾವಲೋಕನಕ್ಕೊಳಗಾದಂ ॥ ೧೧೮ ॥

ಆ ತೇಜದಿಂ ತೊಱೆದು ಪಲರುಮಾ ಕುಲದೊಳಂಬರಚರರ್ ಮುಕ್ತರಾದಿಂ ಬಟ್ಟಿಕ್ಕೆ ಲಂಕೆಗೆ ವಿದ್ಯುತ್ಕೇಶನೆಂಬನಧೀಶನಾದನಾತನ ಮಹಾದೇವಿ ಶ್ರೀಚಂದ್ರೆಗೆ ಸುತಂ ಸುಕೇಶನೆಂಬನಾದನತ್ತಲಾ ವಾನರಧ್ವಜಕುಲದೊಳ್ ಮಹೋದಧಿಯೆಂಬ ನಾದನಾತಂಗಂ ವಿದ್ಯುತ್ಕೇಶಂಗಮತಿ ಪ್ರೀತಿ ಸಮನಿಸಿದುದಾ ವಿದ್ಯುತ್ಕೇಶನೊರ್ಮೆ ವನಕೇಳಿಯೊಳಿರ್ಪುದುಮೊಂದು ವಾನರಂ ಶ್ರೀಚಂದ್ರೆಗಂಗಭಂಗಮಂ ಮಾಡಿ ವಿದ್ಯುತ್ಕೇಶನಿಂದೇಸುವೆತ್ತು ಚಾರಣಋಷಿಯರ ಚರಣೋಪಾಂತಮಂ ಸಾರ್ದಾರಾಧನಾವಿಧಿಯಂ ದೇಹಮಂ ಬಿಟ್ಟು ದೇವಗತಿವಡೆದವಧಿಯಂ ಪ್ರಯೋಗಿಸಿ ಬಂದು ಶರೀರಪೂಜೆಗೆಯ್ವ ಸಮಯದೊಳ್ ವಿದ್ಯುತ್ಕೇಶನುಟ್ಟಿದ ಕಪಿಕುಲಕ್ಕುಪಾಯವು ನೊಡರ್ಚಿ ಕಂಡು ಕಡುಮುಳಿದು ಪರ್ವತಾಕಾರದ ವಾನರಂಗಳನಗುರ್ವು ಪರ್ವಿ ವಿಗುರ್ಪಿಸುವುದುಂ—

ಮ ॥ ಮರನಂ ಕಿಬ್ಬು ನಗಂಗಳಂ ನೆಗಪಿ ರೌದ್ರಾಕಾರದಿಂ ಬರ್ಪ ವಾ ।
ನರರಂ ಕಂಡು ವಿಮುಕ್ತ ಕೇಶಭರ ವಿದ್ಯುತ್ಕೇಶ ವಿದ್ಯಾಧರಂ ॥
ತ್ವರಿತ ಪ್ರಸ್ಖಲಿತ ಪ್ರಯಾಣ ರಭಸಂ ಶುದ್ಧಾಂತ ಕಾಂತಾಜನಂ ।
ಬೆರಸುತ್ತುಂಪಿತನೋಡಿ ದಿವ್ಯಮುನಿ ಪಾದಾಂಭೋಜಮಂ ಪೊರ್ದಿದಂ ॥೧೧೯॥

ಅನ್ನೆಗಂ ಬೆಂಬಟ್ಟಿಯನುಟ್ಟಿಯದೆ ಮುಟ್ಟಿವಂದೀ ಮುಟ್ಟುಗೆಟ್ಟ ದುರಾತ್ಮನಂ ವಿದಾರಿಸುವೆನೆಂದಾ ವಾನರಚರಾಮರಂಗೆ ಮುಳಿಸನುಟ್ಟಿವಂತು ಧರ್ಮೋಪದೇಶಂಗೆಯ್ದು ವಿದ್ಯುತ್ಕೇಶನಂ ನೋಡಿ ನೀಮಿರ್ವರನೇಕಭವದೊಳೋರೊರ್ವರಂ ವಧಿಯಿಸುತ್ತುಂ ಬಂದೆಂತಾನುಂ ಮನುಷ್ಯಾಯುಷ್ಯ ಬಂಧಮಂ ಪಡೆದು ಶ್ರಾವಸ್ತಿ ಪುರದೊಳ್ ನೀಂ ಯಶೋದತ್ತನಾಗಿ ಪುಟ್ಟ ಕರ್ಮೋಪಶಮದಿಂ ಜಿನದೀಕ್ಷೆಯಂ

ಕೈಕೊಂಡುಗ್ರೋಗ್ರ ತಪಂಗೆಯ್ಯುತ್ತುಂ ಕಾಶೀವಿಷಯದೊಳ್ ಧರಣೀಭೂಷಣಮೆಂಬ ಪರ್ವತದ ಮೇಗೆ ಪ್ರತಿಮಾಯೋಗದೊಳಿರ್ದುದುಮಂದು ಬೇಡನಾಗಿ ಪುಟ್ಟಿದೀ ದೇವನುಂ ಮೃಗಯಾನಿಮಿತ್ತಂ ತೊಬಲುತ್ತುಂ ಬಂದ ನಿಮಿತ್ತದಿಂ ನಿನ್ನಂ ಬಯ್ದು ನುಡಿವುದುಂ ನೀನುಂ ಮಾನಕಷಾಯದಿಂ ಕಟ್ಟಿದು ಜ್ಯೋತಿರಮರಗತಿವಡೆದಲ್ಲಿಂ ಬಂದುವಿದ್ಯುತ್ಕೇಶನಾದೆ ಬೇಡನುಂ ಕಟ್ಟಿದು ಕೋಡಗನಾಗಿ ಮುನಿಪ್ರಸಾದದಿಂ ಮಹೋದಧಿವೆಸರ ದೇವನಾದನೆಂಬುದುಂ—

ಕಂ ॥ ದೇಶಿಕರಿಂ ಪೂರ್ವಭವ
ಕ್ಲೇಶಂಗಳನಱಿದು ಕೊಟ್ಟು ತೊಱೆದಂ ವಿದ್ಯು ॥
ತ್ಕೇಶಂ ನಿಜ ತನಯಂಗೆ ಸು
ಕೇಶಂಗರಸಂ ದಿವಕ್ಕೆ ಸಂದಂ ಕಡೆಯೊಳ್ ॥ ೧೨೦ ॥

ಮತ್ತಿತ್ತ ವಾನರದ್ವೀಪಾಧಿಪತಿ ಚಿರಕಾಲಮರಸುಗೆಯ್ದು—

ನವ ನಳಿನ ॥ ಅವಚಱನಿಂದ್ರಿಯ ಸೌಖ್ಯವಿಮಾಯೆ ವಿರಕ್ತಿಯಿಂ ।
ನವನಿಯನಿತ್ತು ನಿಜಾತ್ಮಜಂ ಪ್ರತಿಬಿಂದುಗ ॥
ವ್ಯವಹಿತ ಸೌಖ್ಯಮನೀವುದಂ ಜವನಂ ಪರಾ ।
ಭವನಿಸಿ ಭವೋದಧಿಯಂ ಮಹೋದಧಿ ದಾಂಟಿದಂ ॥ ೧೨೧ ॥

ತದಪತ್ಯಂ ತನ್ನ ಮುಕ್ಕಳಪ್ಪ ಕಿಷ್ಕಿಂಧಂಗಮಂಧ್ರಕಂಗಂ ಜರಾಪರಿಚಯದಿಂ ಸಿರಿಯನವಜ್ಞೆಗೆಯ್ದು ಕೊಟ್ಟು—

ಕಂ ॥ ಪ್ರತಿಬಿಂದು ಜರಾಬಿಂದುಗ
ಳತರ್ಕ್ಯಬಲ ಕಾಲಪುರುಷ[1]ನಿಂ ಸಮನಿಸೆ ಸಂ ॥
ಸೃತಿಯಂ ನಿರ್ಮೂಲಿಸಿ ನಿ
ರ್ವ್ಯತಿಲಕ್ಷ್ಮೀ ವಶ್ಯತಿಲಕ ಬಿಂದುವನಾಂತಂ ॥ ೧೨೨ ॥

ಮತ್ತಿತ್ತ ವಿಜಯಾರ್ಧನಗೋಪತ್ಯಕದಾದಿತ್ಯನಗರಮನಾಳ್ವ—

ಕಂ ॥ ಮಂದರಮಾಲಿ ವಿಯಚ್ಚರ
ನಂದನೆ ಕಡುನೀಜೆ ವಿಮಾಜಿ ಶಕ್ರನ ಶಚಿಯಂ ॥
ಕಂದರ್ಪನ ರತಿಯಂ ತ
ನ್ನಂದಂ ಶ್ರೀಮಾಲೆ ವಿಮಾಜಿದಳ್ ಶೈಶವಮಂ ॥ ೧೨೩ ॥

---

1. ನೊಳ್. ಕ. ಖ. ಗ. ಘ. ಚ.

ಆ ಖಚರಕನ್ಯಾ ಸ್ವಯಂವರಕ್ಕೆ ದಕ್ಷಿಣೋತ್ತರ ಶ್ರೇಣಿಯ ಖಚರಕುಮಾರರುಂ ವಿದ್ಯಾಧರ ಚಕ್ರವರ್ತಿಯಪ್ಪಶನಿವೇಗ ತನೂಭವಂ ವಿಜಯಸಿಂಹನುಂ ಕಪಿಕೇತುಗ ಳಪ್ಪ ಕಿಷ್ಕಿಂಧಾಂಧ್ರಕರುಂ ಲಂಕಾಧಿಪನಪ್ಪ ಸುಕೇಶನುಂ ಮೊದಲಾಗಿ ಪಲಂಬ ರಂಬರಚರಾಧಿರಾಜರ್ ಬಂದು ಪಂಚರತ್ನ ಖಚಿತ ಕಾಂಚನ ಮಂಚದೊಳ್ ಮಹಾ ವಿಭೂತಿಯಿಂದಮಿರೆ—

ಕಂ ॥ ಶ್ರೀವಮಾಲೆ ಮಾಲೆ ಸೂಡಿದ
ಳಾ ಮನ್ಮಥರೂಪನಪ್ಪ ಕಿಷ್ಕಿಂಧ ವಿಯ ॥
ದ್ಧಾಮಿಗೆಡಱಿದನದರ್ಕು
ದ್ದಾಮ ಭುಜಂ ವಿಜಯಸಿಂಹನಾಹವಸಿಂಹಂ ॥ ೧೨೪ ॥

ನೆರೆದ ವಿಯಚ್ಚರರಿರ್ದಂ
ತಿರೆ ತಾನೆ ಕಡಂಗಿ ಪೊಂಗಿ ಮುಂದಱಿಯದೆ ಕಾ ॥
ತರನೀಟ್ಟುಕೊಳ್ವೆನೆಂದಾ
ಹರಿಣಾಕ್ಷಿಯನಿರದೆ ಕಾಳೆಗಕ್ಕೊಡರಿಸಿದಂ ॥ ೧೨೫ ॥

ಆಗಳಂಧ್ರಕ ಸುಕೇಶರ್ ಕೀನಾಶರಂತೆ ದೆಸೆದೆಸೆಗೆ ಮುಸಗಿ ಕಿಷ್ಕಿಂಧನುಮುಂ ಶ್ರೀವಮಾಲೆಯುಮುಂ ಕಿಷ್ಕಿಂಧಪುರಕ್ಕೆ ಕಱಿಪಿ ಕಡುಕೆಯ್ದು ಕಾದುವಾಗಳ್—

ಕಂ ॥ ಅಂಧ್ರಕನಾಕಾಶಂ ನೀ
ರಂಧ್ರಮೆನಲ್ ಸುರಿದು ಸರಲ ಸರಿಯಂ ಜವನೀ ॥
ತಂ ಧ್ರುವನೆಂಬಿನಮಮರಪು
ರಂಧ್ರಿಯರಂ ವಿಜಯಿ ವಿಜಯಸಿಂಹಂಗಿತ್ತಂ ॥ ೧೨೬ ॥

ಅಂತು ಕಾಳೆಗಮುಂ ಗೆಲ್ದು ಸುಕೇಶನುಂ ತಾನುಂ ಕಿಷ್ಕಿಂಧಪುರಮುಂ ಪೊಕ್ಕು ಸಮರ ಸನ್ನದ್ಧರಾಗಿರ್ಪುದುಮಿತ್ತಲಶನಿವೇಗಂ ಸುತನ ಸಾವಂ ಕೇಳ್ದು ಶೋಕ ವೇಗದಿಂ ಕ್ರೋಧವೇಗಮತ್ಯಧಿಕಮಾಗೆ ಗಗನವೀಥಿಯೊಳ್ ಬಂದು ಕಿಷ್ಕಿಂಧಪುರ ಮುಂ ಮೂವಳಸಾಗೆ ಮುತ್ತೆ ಪೊಜಮಟ್ಟು ಕಾದಿ ಯಮಮುಖಮನಂಧ್ರಕಂ ಪುಗು ವುದುಂ ಕಿಷ್ಕಿಂಧ ಸುಕೇಶರತಿಚಕಿತಚಿತ್ತರಾಗಿ ಪೋಗಿ ಪಾತಾಳಲಂಕೆಯಂ ಪೊಕ್ಕಿ ರ್ಪ್ಪುದುಮಶನಿವೇಗಂ ಸುಕೇಶನ ರಾಜಧಾನಿಯಪ್ಪ ಲಂಕೆಯಂ ನಿರ್ಘಾತಂಗೆ ಕೊಟ್ಟು ನಿಜ ರಾಜಧಾನಿಗೆ ಪೋಗಿ ಕತಿಪಯದಿನದೊಳೊರ್ಮೆ ಹಮ್ಮ್ಯಾಗ್ರಭೂಮಿ ಯೊಳಿರ್ದು ನೆಗೆದ ಮುಗಿಲಂ ನೋಡುತ್ತುಮಿರ್ಪುದುಂ—

ಪೃಥ್ವಿ॥ ಘನಂ ಕರಗೆ ಕಂಡು ಕಂಡಶನಿವೇಗ ವಿದ್ಯಾಧರಂ।
ಘನೋಪಲದ ಮಾಟಿಕ್ಕಿಯಿಂ ಕರಗೆ ತೃಷ್ಣೆ ಸಾಮ್ರಾಜ್ಯದೊಳ್॥
ಮನಸ್ವಿ ನಿಲವೇಱ್ದು ತನ್ನ ಸುತನಂ ಸಹಸ್ರಾರನಂ।
ಜಿನೇಂದ್ರ ಮುನಿರೂಪಮಂ ತಳೆದನಸ್ತ ಸಂತಾಪಮಂ ॥ ೧೨೭ ॥

ಅಂತಾತಂ ಜಾತರೂಪಧರನಪ್ಪುದುಮಿತ್ತ ಕಿಷ್ಕಿಂಧನುಂ ಮಧುಪರ್ವತದ ಮೇಲೆ ಪುರಮಂ ಮಾಡಿ ಶ್ರೀಮಾಲೆಯೊಳ್ ಕೂಡಿ ಸುಖಮಿರ್ಪುದುಂ—

ಕಂ॥ ಆ ಕ್ಷೋಣೀಶ್ವರ ವಲ್ಲಭೆ
ಋಕ್ಷಜ ಸೂರ್ಯಜ ತನೂಜರಂ ಪಡೆದು ಸರೋ॥
ಜಾಕ್ಷಿಯನನಂತರಂ ಶುಭ
ಲಕ್ಷಣೆಯಂ ಸೂರ್ಯಮಾಲೆಯಂ ಸತಿ ಪಡೆದಳ್ ॥ ೧೨೮ ॥

ಆಕೆಯಂ ಮೇಘಪುರಮನಾಳ್ವ ಮೇರುಸುತನಪ್ಪ ಸಿಂಹಮರ್ದನಂಗೆ ಕೊಟ್ಟೊಡಾತಂ ಕರ್ಣಪರ್ವತದೊಳ್ ಕರ್ಣಕುಂಡಲಮೆಂಬ ಪುರಮುಂ ಮಾಡಿ ಮನೋರಾಗದಿನಿರ್ಪುದುಮಿತ್ತಲ್—

ಕಂ॥ ಗಗನೇಚರ ಕೈರವ ಕುಲ
ಮೃಗಧರನೆನಿಸಿದ ಸುಕೇಶನಂಗನೆಗಾದರ್॥
ಪಗೆಯನಗೆಯಿತ್ತ್ರಿಲಿಂದ್ರಾ
ಣಿಗೆ ಮಾಲಿ ಸುಮಾಲಿ ಮಾಲ್ಯವಂತ ಸುತರ್ಕಳ್ ॥ ೧೨೯ ॥

ಅಂತವರ್ ನವಯೌವನ ಪ್ರಾಪ್ತರುಂ ಸಾಧಿತ ಸಕಲ ವಿದ್ಯರುಮುವಾರ್ಯ ವೀರ್ಯರುಮಪ್ಪುದಱಿಂ ಮೆಚ್ಚಿದ ದೆಸೆಯೊಳ್ ಮೆಚ್ಚಿದಂತೆ ಬಿಚ್ಚತಂ ಕ್ರೀಡಿಸುತ್ತುಮಿರೆ ಸುಕೇಶನವರಂ ಕರೆದು ದಕ್ಷಿಣ ಸಮುದ್ರಕ್ಕೆ ಪೋಗದಿರಿಮೆಂಬುದುಮವರದೇಕಾರಣಮೆನೆ ಸುಕೇಶನಿಂತೆಂದಂ ತೋಯದವಾಹನನಿಂ ತೊಡಗಿ ನಮ್ಮನ್ವಯಾಗತಮಪ್ಪ ಲಂಕಾಪುರಮನಶನಿವೇಗನೆಬಿದುಕೊಂಡು ನಿರ್ಘಾತಂಗೆ ಕೊಟ್ಟೊಡವನನೇಕವಿದ್ಯೆಗಳಿನಾರ್ಗಂ ದುಷ್ಪ್ರವೇಶಮೆನೆ ಕಾಪಮಂಮಾಡಿ ಬಲಿಷ್ಠನಾಗಿರ್ದನಾತಂ ನಿಮ್ಮಂ ಕಂಡೊಡೆ ಕೊಲ್ಗುಮೆಂದು ಬಾರಿಸಿದೆನೆಂಬುದುಮವರದರ್ಕೆ ಮನದೊಳ್ ಕನಲ್ದು—

ಕಂ॥ ಇನ್ನೆವರಂ ಕುಲ ಪರಿಭವ
ಮನ್ನಿಮ್ಮಡಿ ಪೇಟಿದಿರ್ದಿರಾಲಿಸಿ ತಡೆದಂ॥
ದುನ್ನತಿ ಪಿಂಗುಗುಮೆಂದು
ತ್ಸನ್ನ ಕ್ರೋಧರ್ ದವಾಗ್ನಿಯಂತುರಿದೆಬ್ಬಿರ್ ॥ ೧೩೦ ॥

ಅಂತು ಕಲುಷ ವಶಗತರಸಂಪ್ರಾಪ್ತ ಬಲ ಸಮೇತರಾಗಿ ಪಾತಾಳಲಂಕೆಯಂ ಪೊಜಮಟ್ಟು ಮರುನ್ಮಾರ್ಗದಿಂ ಬಂದಶಂಕಿತರ್ ಲಂಕೆಯಂ ಮುತ್ತುವುದುಂ—

ಕಂ ॥ ಸೆರಗಂ ಬೆರಗಂ ಬಗೆಯದೆ
ಪುರಮಂ ಪೊಜಮಟ್ಟು ಕಾದಿ ಮಾಲಿಯು ಬಾಹಾ ॥
ಪರಿಘ ನಿಶಿತಾಸ್ತ್ರ ಹತಿಯಿಂ
ಸುರಲೋಕ ಪ್ರಾಪ್ತನಾದನಾ ನಿರ್ಘಾತಂ ॥ ೧೩೧ ॥

ಘಾತಿಸಿ ರಣಮುಖದೊಳ್ ನಿ
ರ್ಘಾತನನವರೀಟ್ಟುಕೊಂಡು ಲಂಕಾಪುರಮಂ ॥
ಪಾತಾಳಲಂಕೆಯಿಂ ಪಿತೃ
ಮಾತೃಗಳಂ ಬರಿಸಿ ರಾಜ್ಯಸುಖದಿಂದಿರ್ದರ್ ॥ ೧೩೨ ॥

ಅಂತು ಪಗೆಯನಗೆಯೆತ್ತಿ ಕಳೆದು ಕುಲಪರಿಭವಮುಂ ಪಿಂಗಿಸಿ—

ಕಂ ॥ ಉಭಯ ಶ್ರೇಣಿಯ ಖಚರ
ಪ್ರಭುಗಳ್[1]ನದಟಲೆದು ಕಪ್ಪಮಂ ಕೊಂಡು ಮಹಾ ॥
ವಿಭವಮನೊಳಕೊಂಡರ್ ಪು
ಣ್ಯಭಾಗಿಗಳ್ ಬಾಹುವೀರ್ಯಮನಿವಾರ್ಯಮೆನಲ್ ॥ ೧೩೩ ॥

ಅಂತು ಕೆಲವುಕಾಲಂ ಪೋಪುದುಮವರ ತಂದೆ ಸುಕೇಶನಧಿರಾಜ ಯುವ ರಾಜಪಟ್ಟಮನವರ್ಗೆ ಕಟ್ಟಿ ಕಿಷ್ಕಿಂಧಂಬೆರಸು ತಪಸ್ಸ್ಥನಪ್ಪುದುಂ ಮತ್ತಿತ್ತಲ್ ರಥ ನೂಪುರಚಕ್ರವಾಳಪುರಮನಾಳ್ವ ಸಹಸ್ರಾರ ಖಚರವಲ್ಲಭಂ ನಿಜಮಹಾದೇವಿಗೆಳವಸಿ ಜೊಳಿಂದ್ರನ ವಿಭೂತಿಯಂ ನೋಳ್ಪ ಬಯಕೆ ಸಮನಿಸುವುದುಂ ವಿದ್ಯೆಯಿಂ ತದ್ವಿ ಭೂತಿಯಂ ತೋಱಿ ಬಯಕೆಯಂ ತೀರ್ಚಿ ನವಮಾಸಮಪ್ಪುದುಂ—

ಕಂ ॥ ಜನಿಯಿಸೆ ತನಯಂ ಬಾಂಧವ
ಜನಮಿಂದ್ರ ವಿಭೂತಿಯಂ ತದಂಬಿಕೆ ಮುನ್ನಂ ॥
ಮನದೊಳ್ ಬಯಸಿದುದಱಿಂ
ದ್ರನೆಂದು ಬಿತ್ತರಿಸೆ ನಾಮಕರಣೋತ್ಸವಮಂ ॥ ೧೩೪ ॥

ಆತನನುಕ್ರಮದಿಂ ಬಳೆದು ನವ ಯೌವನ ಪ್ರಾಪ್ತನಾಗಿ ಸಾಧಿತ ಸಕಲ ವಿದ್ಯ ನುಭಯಶ್ರೇಣಿಯಂ ಬಾಯ್ಕೆಳಸಿ ಸಕಲ ಚಕ್ರವರ್ತಿ ಪದಮಂ ಪಡೆದು ತನ್ನ ವಿಜ

---

1. ನಾಟುಂದು. ಗ. ಚ.

ಯಾರ್ಧನಗಮಂ ನಾಕಮೆಂದು ತನ್ನ ಖಚರ ಕಾಂತೆಯರ ನೂರ್ವಶಿ ರಂಭೆ ಸುಕೇಶಿ ಯರೆಂಬ ದೇವಕಾಂತೆಯರೆಂದು ತನ್ನ ವಾರಣಮನ್ಯೈರಾವಣಮೆಂದು ತನ್ನಶ್ವಮನುಚ್ಚೈಶ್ರವಮೆಂದು ತನ್ನನುಚರನಂ ಹರಿಣಕೇಸರಿವೆಸರ ಪಡೆವಳನೆಂದು ತನ್ನ ಗಾಯಕರಂ ತುಂಬುರು ನಾರದರೆಂದು ತನ್ನ ಮುಖ್ಯಪುರುಷರಂ ಲೋಕಪಾಲಕ ರೆಂದು ತನ್ನ ಸಭೆಯಂ ಸುಧರ್ಮಮೆಂದು ತನ್ನ ಸೇನೆಯಂ ದೇವಸೇನೆಯೆಂದು ತನ್ನ ಸಾಮಾನ್ಯಾಯುಧಮಂ ಕುಲಿಶಾಯುಧಮೆಂದು ತನ್ನ ವಿಮಾನಮಂ ಖುತು ವಿಮಾನವೆಂದು ತನ್ನ ಪುರೋಹಿತರನಶ್ವಿನ್ಯಾದ್ಯಷ್ಟವಸುಗಳೆಂದು ತನ್ನ ಕಿನ್ನರ ಪುರದವರ್ಗಳಂ ಕಿನ್ನರರೆಂದು ತನ್ನ ಗಂಧರ್ವಪುರದವರ್ಗಳಂ ಗಂಧರ್ವರೆಂದು ತನ್ನ ಯಕ್ಷಪುರದವರ್ಗಳಂ ಯಕ್ಷರೆಂದು ತನ್ನ ಮಂತ್ರಿಮುಖ್ಯನಂ ಬೃಹಸ್ಪತಿ ಯೆಂದು ತಾನಿಂದ್ರನಲ್ಲದೆಯುಂ ತನ್ನನಿಂದ್ರನಾಗೆ ಬಗೆದು ನಾಲ್ವತ್ತೆಣ್ಭಾಸಿರಮಂತಃ ಪುರಕ್ಕಧಿಪನಾಗಿ ಪುರಾಕೃತ ಪುಣ್ಯಾದಿಂ ಸುಖಮನನುಭವಿಸುತ್ತಿರೆ—

ಉ॥ ಮಾಲಿಗೆ ಕಪ್ಪವಿಾವ ಖಚರರ್ ಪಿಡಿದಿಂದ್ರನ[1]ನೀಯದಾಜ್ಞೆಯಂ।
ಪಾಲಿಸಲೊಲ್ಲದೇಳಿಸುವುದುಂ ಚರರಿಂದಱಿದುಗ್ರ ಕೋಪಮು॥
ನ್ಮೀಲಿಸೆ ಮೇಱಿದಪ್ಪಿದ ಬಲಂಬೆರಸಿಂದ್ರನನಾಗಳುಂತೆ ನಿ।
ರ್ಮೂಲಿಸಲೆಂದು ಕೀಱು ನಡೆದೆಯ್ದಿದನಾ ವಿಜಯಾರ್ಧಶೈಲಮಂ॥ ೧೩೫॥

ಅಂತು ತನ್ನೊಡವುಟ್ಟಿದ ಸುಮಾಲಿ ಮಾಲ್ಯವಂತರುಂ ಕಿಷ್ಕಿಂಧನ ಮಕ್ಕಳಪ್ಪ ಋಕ್ಷಜ ಸೂರ್ಯಜರುಂ ಪೆಱರಱಿಕೆಯ ನಾಯಕರುಂ ಬೆರಸಸಂಖ್ಯಾತ ಸೇನಾಸಮನ್ವಿತನೆತ್ತಿ ಬರ್ಪುದನಿಂದ್ರಂ ಕೇಳ್ದು ರಥನೂಪುರಚಕ್ರವಾಳಪುರದಿಂದಿದಿರೆತ್ತಿ ಬಂದೈರಾವಣಾರೂಢಂ ಲೋಕಪಾಲ ಪುರಸ್ಸರಂ ಮಹಾಯುದ್ಧಂಗೆಯ್ವುದುಂ—

ಕಂ॥ ಮಾಲಿ ಮುಳಿಸಿಂದಮಿಂದ್ರನ
ಮೇಲೆ ನಿಶಾತಾಸ್ತ್ರ ವರ್ಷಮಂ ಕಱಿವುದುಮಾ॥
ಮಾಲಿಯನಿಂದ್ರಂ ದಿವ್ಯ ಶ
ರಾಲಿಯಿನೆಚ್ಚಂತಕಂಗೆ ಬಾಣಸು ಗೆಯ್ದಂ ॥ ೧೩೬॥

ಅದಂ ಕಂಡು ಸುಮಾಲಿ ಮಾಲ್ಯವಂತರುಂ ಋಕ್ಷಜ ಸೂರ್ಯಜರುಂ ಪೆಱರು ಮಱಿಕೆಯ ನಾಯಕರುಂ ಬಿಱುತೋಡಿಪೋಗಿ ಪಾತಾಳಲಂಕೆಯಂ ಪೊಕ್ಕರಾಗ ಳಪಹಾರ ತೂರ್ಯಮಂ ಪೊಯಿಸಿ—

---

1. ನಾತನಾಜ್ಞೆಯಂ. ಗ. ಘ

ಕಂ ॥ ಪ್ರಥಿತ ಪೃಥುಭುಜ ಸಹಾಯಂ
ಮಥಿಯಿಸಿ ರಿಪುಬಲಮನಾಜಿಯೊಳ್ ಪೂರ್ಣ ಮನೋ ॥
ರಥನಿದಿರ್ಗೊಳೆ ಪೌರಜನಂ
ರಥನೂಪುರಚಕ್ರವಾಳಪುರಮಂ ಪೊಕ್ಕಂ ॥ ೧೩೭ ॥

ಅಂತು ಗೆಲ್ಲಂಗೊಂಡು ಯಕ್ಷಪುರಮನಾಳ್ವ ವಿಶ್ರವಸುಗಂ ರೋಹಿಣಿಗಂ ಪುಟ್ಟಿದ ವೈಶ್ರವಣಂಗೆ ಲೋಕಪಾಲವೆಸರ ಪಟ್ಟಮಂ ಕಟ್ಟಿ ಲಂಕೆಯಂ ಕೊಟ್ಟು ಯಮಧರನೆಂಬ ವಿದ್ಯಾಧರಂಗೆ ಲೋಕಪಾಲವೆಸರನಿತ್ತು ಕಿಷ್ಕಿಂಧಪುರಮಂ ಕೊಟ್ಟು ಮತ್ತಂ ತನ್ನನಿಂದ್ರನಾಗಿ ಭಾವಿಸಿ ಸುಖಮಿರ್ಪುದುಮಿತ್ತಲ್—

ಕಂ ॥ ಪಾತಾಳಲಂಕೆಯೊಳ್ ಸಂ
ಪ್ರೀತಿ ಪೊದಟ್ಟಿರೆ ಸುಮಾಲಿ ಖೇಚರ ಪತಿಗಂ ॥
ಪ್ರೀತಿಮತಿಗಂ ಜಗದ್ವಿ
ಖ್ಯಾತಂ ರತ್ನಶ್ರವಂ ತನೂಭವನಾದಂ ॥ ೧೩೮ ॥

ಆತನತಿಪ್ರಖ್ಯಾತನಾಗಿ ಪುಷ್ಪೋತ್ತರಮೆಂಬ ಮಹಾಗಹನದೊಳ್ ವಿದ್ಯೆಗಳಂ ಸಾಧಿಸಿ ಸಿದ್ಧಪರಮೇಷ್ಠಿಗಳಂ ಸ್ತುತಿಯಿಸುತ್ತಿರ್ಪ ಸಮಯದೊಳ್ ಕೌತುಕಮಂಗಳ ಪುರಮನಾಳ್ವಂ ವ್ಯೋಮಭಾನುವೆಂಬಂ ವ್ಯೋಮಚರಂ ನಿಜ ತನೂಜೆಯಪ್ಪ ಕೈಕಸಿಯೆಂಬ ಕನ್ಯಾರತ್ನಮಂ ದಿವ್ಯಮುನಿಮುಖ್ಯರಾದೇಶದಿಂ ತನಗೆ ತಂದು ಕುಡುವುದುಮಲ್ಲಿಯೆ ವಿದ್ಯೆಯಿಂ ಪುಷ್ಪೋತ್ತರಮೆಂಬ ಪೊಟಿಲಂ ಮಾಡಿಸಿ ಪಿತೃಮಾತೃಗಳಂ ಬರಿಸಿ ಶುಭದಿನ ಮುಹೂರ್ತದೊಳಾಕೆಯಂ ಮದುವೆನಿಂದು ನಿರಂತರೋತ್ಸವ ದಿನಿರ್ಪುದುವೊಂದು ದಿವಸಮಾ ಕೈಕಸಿ ಚತುರ್ಥಸ್ನಾನಾನಂತರಂ ನಿಜಮನೋವಲ್ಲಭನ ಸೂಟಿಸ್ಸಿ ವಂದು—

ಕಂ ॥ ಹರಿಯಂ ಹಿಮಕರನಂ ಖರ
ಕರನಂ ಬೆಳಗಪ್ಪ ಜಾವದೊಳ್ ಕನಸಿನೊಳಾ ॥
ಹರಿಣಾಕ್ಷಿ ಕಂಡು ಗೃಹವನ
ಮರಾಳ ಸಾರಸ ರವಂಗಳಿಂದೆಚ್ಚತ್ತಳ್ ॥ ೧೩೯ ॥

ಅಂತುಪ್ಪವಡಿಸಿ ತನ್ನ ಕಂಡ ಕನಸುಗಳನನುಕ್ರಮಂದಪ್ಪದಱಿಪುವುದುಂ—

ಮ ॥ ಭರತಾರ್ಧಕ್ಷಧಿರಾಜನಪ್ಪ ಸುತನಂ ಪೆತ್ತಪ್ಪೆ ತನ್ವಂಗಿ ಕೇ ।
ಸರಿಯಂ ಕಂಡುದರಿಂ ಕಲಾಕುಶಲನಂ ತತ್ವಜ್ಞನಂ ಪೆತ್ತಪ್ಪೆ ॥
ಹರಿಣೀಲೋಚನೆ ನಿಶ್ಚಯಂ ಕನಸಿನೊಳ್ ಶೀತಾಂಶುವಂ ಬಾಲ ಭಾ ।
ಸ್ಕರನಂ ಕಂಡುದಱಿಂದಮೆಂದಱಿಯೆ ಪೇಳ್ದಂ ತತ್ಫಲಪ್ರಾಪ್ತಿಯಂ ॥ ೧೪೦ ॥

ಅಂತು ರತ್ನಶ್ರವಂ ಶುಭಸ್ವಪ್ನ ಫಲನಿರೂಪಣಂ ಮಾಟ್ಟಿದುವುಮಾ ನಿತಂಬಿನಿ ನಿರವಧಿ ಪ್ರಮೋದಮಂ ತಳೆದು ಯಥಾಕ್ರಮದಿನನುದಿನಂ ಗರ್ಭಂ ಬಳೆಯೆ ವಳೆಯೆ—

ಕಂ ॥ ಅಲಸುವುದಿಲ್ಲಾಗುಳಿಕೆಯ
ಪೊಲಸಿಲ್ಲ ಬಯಲ್ಪುದಿಲ್ಲ ಕೃಶತೆಯ ದೆಸೆಯಿ ॥
ಲ್ಲಲಘುಪರಾಕ್ರಮಿ ಬಸಿಱೊಳ್
ನೆಲಸಿದ ಮೆಯ್ಗಲಿ ತನೂಜನೆಂದಱಿಪುವವೋಲ್ ॥ ॥ ೧೪೧ ॥

ಸೂಂಕಾರ ಪೂರ್ವಕಂ ಕ
ಣ್ಣಂ ಕೆಚ್ಚನೆ ಗೆಯ್ದು ದೆಸೆಗಳಂ ನೋಳ್ಪುೞ್ ಮು ॥
ತ್ತಂ ಕೂರಸಿಯೊಳ್ ನಿಜಮುಖ
ಪಂಕಜಮಂ ಸುತನ ದರ್ಪಮಂ ಸೂಚಿಪವೋಲ್ ॥ ೧೪೨ ॥

ಭರತ ತ್ರಿಖಂಡ ಮಂಡಲ
ಪರಿರಕ್ಷಣ ದಕ್ಷನೀ ತನೂಭವನೆಂಬೀ ॥
ಪರಮೋತ್ಸವಮಂ ಪೇೞ್ದಂ
ತಿರೆ ಪುರದೊಳ್ ಕುಸುಮವೃಷ್ಟಿ ಕಱೆದುದು ನಿಚ್ಚಂ ॥ ೧೪೩ ॥

ಚ ॥ ರಣ ರಸಿಕಂ ಜಗದ್ವಿಜಯಿ ಖೇಚರ ಕಾಂತೆಯ ಗರ್ಭದರ್ಭಕಂ ।
ರಣದೊಳನೇಕ ವೈರಿನೃಪರಂ ತವೆ ಕೊಂದು ತದೀಯ ಮಾಂಸದಿಂ ॥
ತಣಿಪುಗುಮೆಮ್ಮನೆಂದು ಪರಮೋತ್ಸವದಿಂ ಪಱೆಗುಟ್ಟಿ ಬಿಚ್ಚತಂ ।
ಕುಣಿದುವು ಭೂತಕೋಟಿ ಗಗನೇಚರ ವಲ್ಲಭ ರಾಜಧಾನಿಯೊಳ್ ॥ ೧೪೪ ॥

ಇಂತಿವಱ ತೋರ್ಕೆಯಿಂ ಗರ್ಭದರ್ಭಕನಳುರ್ಕೆಯುಮುದಟುಮಖಿಲ ಜನ ಪ್ರತೀತಮಾಗೆ ನವಮಾಸಂ ನೆಱೆಯೆ ಕೂಸಂ ಪೆತ್ತು ದಶಮ ದಿನದೊಳ್ ಭೀಮ ನೆಂಬ ರಾಕ್ಷಸಂ ಕೊಟ್ಟ ನವ ಮುಖ ರತ್ನ ಭೂಷಣದ ಮಾಣಿಕಂಗಳೊಳಾತನ ಮುಖಂ ಪ್ರತಿಬಿಂಬಿಸೆ ದಶಮುಖನೆಂದು ಪೆಸರನಿಟ್ಟು ಮತ್ತಂ ಭಾನುಕರ್ಣನುಂ ಚಂದ್ರನಖಿಯುಂ ವಿಭೀಷಣನುಮೆಂಬ ಮಕ್ಕಳನನುಕ್ರಮದಿಂ ಪೆತ್ತೊಡವರ್ ಬಳೆದು ಶೈಶವಮನತಿಕ್ರಮಿಸಿ ಪ್ರಭು ಮಂತ್ರೋತ್ಸಾಹ ಶಕ್ತಿತ್ರಯಮೆ ಮೂರ್ತಿಗೊಂಡಂತೆ ಮೂವರುಮಖಿಲಶಾಸ್ತ್ರ ಪಾರಾವಾರ ಪಾರಗರೊಂದುದಿವಸಮಾಸ್ಥಾಯಿಕಾ ಮಧ್ಯ ನಾಯಕ ರತ್ನಂಗಳಂತಿರ್ದ ಸಮಯದೊಳ್—

ಮ॥ ಶ್ರವಣಾನಂದಮನುಂಟುಮಾಡೆ ಮಣಿಘಂಟಾ ನಿಸ್ವನಂ ಕೇತು ಪ ।
ಲ್ಲವ ಹಸ್ತಾಭಿನಯಂಗಳಂ ಮಣಿ ವಿಮಾನಶ್ರೇಣಿಗಳ್ ಬೀಜಿ ವೈ ॥
ಶ್ರವಣಂ ಕಾಮನ ಬಿಲ್ಗಳಂ ಕೆದಜಿ ಭೂಷಾ ಪಂಚರತ್ನಾಂಶುಗಳ್ ।
ದಿವಿಜೇಂದ್ರಂ ಖಚರೇಂದ್ರನಲ್ಲನೆನೆ ಪೋಗುತ್ತಿರ್ದನಾಕಾಶದೊಳ್ ॥ ೧೪೫ ॥

ಅಂತಾತಂ ತೃಣೀಕೃತ ತ್ರಿಭುವನನಾಗಿ ಪೋಗುತಿರ್ಪುದುಂ ದಶಗ್ರೀವನುದ್ಗ್ರೀವನಾಗಿ ಪೋಗುತ್ತಿರ್ಪನೀತನೆತ್ತಣಾತನೆಂಬುದುಂ ಕೈಕಸಿ ದಶಮುಖಂಗಿಂತೆಂದಳೀತನೆಮ್ಮಕ್ಕನ ಮಗಂ ವೈಶ್ರವಣನೆಂಬನುಭಯ ಶ್ರೇಣಿಗರಸನಪ್ಪಿಂದ್ರನೆಂಬ ವಿದ್ಯಾಧರಚಕ್ರವರ್ತಿ ನಿಮ್ಮ ಪಿರಿಯ ಮುತ್ತಮ್ಮನಪ್ಪ ಮಾಲಿಯಂ ಕೊಂದು ನಮ್ಮನ್ನಯದಿಂ ಬಂದ ಲಂಕೆಯಂ ಕೊಟ್ಟೊಡೀತನದನಾಳುತ್ತಿರ್ಪನಾಮುಮಿಾತಂಗೆ ಭೀತರಾಗಿರ್ಪೆವೆಂದು ದುಃಖಿಂಗೆಯ್ಯೆ ವಿಭೀಷಣಂ ಬಾರಿಸಿ ನಿಮ್ಮ ಪಗೆಯಂ ಬಗೆದಂತೆ ತೀರ್ಚಿ ದಶವದನಂ ನಿಮಗೆ ಸಂತೋಷಮಂ ಮಾಡಲಾರ್ಕುಮೆನ್ನೆಗಂ ನಮ್ಮ ಕುಲಕ್ಕೆ ತಕ್ಕ ವಿದ್ಯೆಗಳಂ ಸಾಧಿಸುವೆನೆಂದು ತಾಯ್ಗೆ ಬಿನ್ನವಿಸಿ ಶುಭದಿನ ಮುಹೂರ್ತದೊಳ್—

ಕಂ॥ ಪಿತೃ ಮಾತೃ ಪಿತಾಮಹರ್ಗಾ
ನತರಾಗಿ ಪಿಶಾಚ ಭೂತ ಕೋಟಿಯಿನತ್ಯ ॥
ದ್ಭುತಮನರಣ್ಯಮನಪ್ರತಿ
ಹತ ಶೌರ್ಯರ್ ಬಂದು ಪೊಕ್ಕರಚಲಿತ ಧೈರ್ಯರ್ ॥ ೧೪೬ ॥

ಆ ಸಾಹಸಿಕರ್ ತತ್ತ್ವ
ಭ್ಯಾಸಮನೊಡರಿಸುವ ಮುನಿಯವೋಲ್ ಪೂರ್ಣ್ಣನ್ಯ ॥
ವ್ಯಾಸಂಗಂ ಕಿಡೆ ಪಲ್ಯಂ
ಕಾಸನದೊಳ್ ಮೂವರುಂ ಯಥಾಕ್ರಮಮಿರ್ದರ್ ॥ ೧೪೭ ॥

ಅಂತು ದಶಕೋಟಿ ಮಂತ್ರದೊಳ್ ಕೂಡಿದ ಷೋಡಶಾಕ್ಷರ ಮಹಾವಿದ್ಯೆಯಂ ಸಾಧಿಸುತ್ತಿರ್ಪುದುಂ ಜಂಬೂದ್ವೀಪಾಧಿಪತಿಯಪ್ಪನಾದ್ಯತನೆಂಬ ದೇವಂ ಭೌಮ ವಿಹಾರದಿಂ ಬಂದವರಂ ಕಂಡು ವಿದ್ಯಾಸಾಧನೆಗೆ ವಿಘ್ನ ಹೇತುಗಳಪ್ಪನೇಕ ವಿಧ ವಿಕುರ್ವಣೆಯಂ ವಿಗುರ್ವಿಸೆಯುಮವರ್ ಮಂದರದಂತಚಲಿತ ಧೈರ್ಯರಾಗಿರ್ದು ವಿದ್ಯೆಗಳಂ ಸಾಧಿಸಿ ಸಿದ್ಧವಿದ್ಯರ್ ಪಂಚ ಪರಮೇಷ್ಠಿಗಳಂ ಪೂಜಿಸಿದಿಂಬಟ್ಟಿಯಂ-

ಕಂ॥ ಅವಿಷ್ಕೃತ ನಿಯಮಂ ತ್ರಿದಿ
ನಾವಧಿಯೊಳಗಣ್ಯ ಪುಣ್ಯ ನಿಲಯಂ ವಿದ್ವಿ ॥
ದ್ವೀವಾಕರ್ಷಣ ಪಟುವಂ
ರಾವಣನುಗ್ರಾಸಿ ರತ್ನಮಂ ಸಾಧಿಸಿದಂ ॥ ೧೪೮ ॥

ಅಂತು ಚಂದ್ರಹಾಸಮಂ ಸಾಧಿಸಿ ವಿದ್ಯೆಯಿಂ ಸ್ವಯಂಪ್ರಭವೆಂಬ ಪೊಟಿಲಂ ಮಾಡಿ ನಿಜ ಪರಿಜನಂಬೆರಸು ಬಂಧುಜನಮಂ ಬರಿಸಿ—

ಕಂ ॥ ಪಲವುಂವಿದ್ಯೆಯೊಳಂ ಭುಜ
ಬಲದೊಳಮಿಾ ದೊರೆಯರಾರುಮಿಲ್ಲೆನಿಸಿ ಸುಹೃ ॥
ತ್ಕುಲಮಂ ಪಾಲಿಸುವಸುಹೃ
ತ್ಕುಲಮಂ ಸಾಧಿಸುವ ಮನದಳುರ್ಕೆಯಿನಿರ್ದಂ ॥ ೧೪೯ ॥

ಅಂತಿರ್ದುದುಮಿತ್ತ ಸುರಸಂಗೀತಕಪುರ ಪ್ರಧಾನಂ ಮಯಂ ತನ್ನ ಮಗಳಪ್ಪ ಮಂಡೋದರಿಯಂ ನೈಮಿತ್ತಿಕಾದೇಶದಿಂ ವಿಮಾನಮನೇಱಿಸಿಕೊಂಡು ಚರ ನಿರೂಪಿತಮಪ್ಪ ಸ್ವಯಂಪ್ರಭ ನಗರಕ್ಕೆ ವಂದು ದಶವದನಂಗೆ ಮಹಾವಿಭೂತಿಯಿಂ ಮದುವೆಯಂ ಮಾಟ್ಪುದುಮನಂತರಂ ಮಯ ಮಾರೀಚಾದಿಗಳಂ ಮನ್ನಿಸಿ ಕಳಿಸಿ ಬಟ್ಟಿಯಂ ತನ್ನ ವಿದ್ಯೆಗಳಂ ವಿಗುರ್ವಿಸಿ ನೋಡಿ ಹರ್ಷದೊಳ್ ಕೂಡಿ ಭೌಮ ವಿಹಾರಕ್ಕೆ ಪೋಗುತ್ತುಂ ಮೇಘಶೃಂಗವೆಂಬ ನಗ ನಿತಂಬದಂಬುಜ ಷಂಡದೊಳ್ ಪದ್ಮೆಯುಂ ವಿದ್ಯುತ್ಪ್ರಭೆಯುಮಶೋಕಲತೆಯುಂ ಮೊದಲಾದಱುಸಾಸಿರ್ವರ್ ಕನ್ನೆಯರ್ ನೀರಾಟಮನಾಡುವುದಂ ಕಂಡು ಮನಂಗೊಂಡಾಕೆಗಳಂ ಗಾಂಧರ್ವ ವಿವಾಹದಿಂ ಸ್ವೀಕರಿಸಲ್ಬಗೆವುದುಂ ಕನ್ನೆಯರಿನಾ ವಾರ್ತೆಯನವರಯ್ಯನಪ್ಪ ಸುರ ಸುಂದರಂ ಕೇಳ್ದು ಕನಕಮಾಲಂಬೆರಸು ಮೇಲೆತ್ತಿಬರ್ಪುದುಂ ಕಾದಿ ನಾಗಪಾಶದಿಂ ಕಟ್ಟಿ ಕೊಲಲೊಲ್ಲದೆ ಬಿಟ್ಟು ಕಳೆದುದರ್ಕೆ ಮೆಚ್ಚಿ—

ಕಂ ॥ ಅನಿಬರ್ ಕನ್ನೆಯರುಮನಾ
ಜನಪತಿ ಪರಿಣಯನ ವಿಭವದಿಂದೀಯೆ ದಶಾ ॥
ನನನೊಸೆದು ಮದುವೆನಿಂದಾ
ತ್ಮನಗರಮಂ ಬಂದು ಪೊಕ್ಕನತ್ಯುತ್ಸವದಿಂ ॥ ೧೫೦ ॥

ಅಂತು ಸ್ವಯಂಪ್ರಭ ನಗರಕ್ಕೆ ವಂದು ಕುಂಭಪುರದ ಮಹೋದರಂಗಂ ಸುರೂಪೆಗಂ ಪುಟ್ಟಿದ ವಿದ್ಯುದ್ವೇಗೆಯಂ ಭಾನುಕರ್ಣಂಗೆ ಮದುವೆಮಾಟ್ಪುದು ಮಾತನಾಕೆಗತಿ ಸ್ನೇಹಿತನಾಗಿ ಕುಂಭಪುರದ ಮಾತುಗಳನಾಗಳುಂ ಮೆಚ್ಚಿ ಕೇಳುತ್ತುಮಿರ್ದೊಡಾತಂಗೆ ಕುಂಭಕರ್ಣಾಭಿಧಾನಮಾಯ್ತು ಮತ್ತಂ ಜ್ಯೋತಿಃಪ್ರಭ ಪುರಮು ನಾಳ್ವ ಶುದ್ಧಕಮಲಂಗಮಾನಂದಮಾಲೆಗಂ ಪುಟ್ಟಿದ ರಾಜೀವಸರಸೆಯೆಂಬ ಕನ್ನೆಯಂ ವಿಭೀಷಣಂಗೆ ಮದುವೆಮಾಡಿ ಸುಖದಿನಿರೆ—

ಕಂ ॥ ಮಂಡೋದರಿ ಪಡೆದಳ್ ಮು
ನ್ನಿಂದಗಿಯಂ ಬಟ್ಟಿಕೆ ಮೇಘವಾಹನನಂ ಶ ॥

ತ್ತುಂದಮರನಮಿತ ಬಲರಂ
ನಂದನರಂ ಪೇಚರಾನ್ವಯಾನಂದನರಂ ॥ ೧೫೧ ॥

ಅವರಾಶಾ ದಂತಿಗೆ ನಿ
ಗ್ಗವಂಗಳಾದಂತೆ ತನಗೆ ನೆರವಾಗೆ ಮಹೋ ॥
ತ್ಸವಮನದೇಂ ತಳೆದನೊ ಖಚ
ರ ವಲ್ಲಭಂ ಕಳೆಯಲೆಂದು ಕುಲ ಪರಿಭವಮಂ ॥ ೧೫೨ ॥

ಉ ॥ ಲಂಕೆಯನನ್ವಯಾಗತವನೆಮ್ಮ ಪಿತಾಮಹನಪ್ಪ ಮಾಲಿಯಂ ।
ಮುಂ ಕಡುಕೆಯ್ದು ಕೊಂದೆಬಿದುಕೊಂಡನನಿಕ್ಕಿದೊಡೆನ್ನ ಬಾಹುವೀ ॥
ರ್ಯಂ ಕಡು ನೊಚ್ಚಿತಕ್ಕುವೆನುತುಂ ಮನದುಮ್ಮಳದಿಂ ಕನಲ್ದು ವೀ ।
ತಾಂಕುಶನೆತ್ತಿದಂ ಮುಳಿದು ಲಂಕೆಗನೂನ ಬಲಂ ದಶಾನನಂ ॥ ೧೫೩ ॥

ಅಂತು ಮಹಾಬಲ ಸಹಿತನಾಗಿ ಲಂಕೆಗೆತ್ತುವುದುಂ ವೈಶ್ರವಣನದಂ ಕೇಳ್ದು ತಾನುಮಿದಿರೆತ್ತಿ ಬಂದುಭಯಬಲಮುಂ ತಾಗಿ ಕಾದುತ್ತುಮಿರೆ ಧನದ, ಯಶವದನನಂ ಮುಟ್ಟಿವಂದು ನೀಂ ಮದೀಯ ಜನನಿಯನುಜೆಯ ತನುಜನಪ್ಪುದರಿಂ ನಿನ್ನೊಳೆನಗೆ ಕಾಳೆಗಮುಚಿತಮಲ್ತು ತೊಲಗಿ ಪೋಗೆಂಬುದುಂ ದಶವದನಂ ನಸುನಕ್ಕು ಕಲಹಕ್ಕೆ ವಂದು ನಣ್ಪುದೋಪ್ಪೊಡವಸರಮಲ್ತು ಕೈದುಗೆಯ್ಯೆಂದು ಕಡುಕೆಯ್ದು ನಿಲ್ದುದುಂ—

ಕಂ ॥ ಮುನಿಸಿಂದಿಸೆ ವೈಶ್ರವಣಂ
ದನುಜನದಂ ಕಡಿದು ಕಳೆದು ನಿಶಿತಾಸ್ತ್ರದಿನಾ ॥
ತನ ತಲೆಯುಮನಿರ್ಬಗಿಯ
ಪ್ಪಿನಮೆಚ್ಚಂ ಮೂರ್ಛೆವೋಗಿ ಬೀಳ್ತಿರ್ಪಿನೆಗಂ ॥ ೧೫೪ ॥

ಅಂತು ಮೂರ್ಛೆವೋದನಂ ವಿಯಚ್ಚರಾನುಚರರ್ ವಿಮಾನದೊಳಿಟ್ಟು ವಿಜಯಾರ್ಧನಗಕ್ಕುಯ್ವುದುಂ ದಶಾನನಂ ಪುಷ್ಪಕ ವಿಮಾನಮಂ ಕಳೆದುಕೊಂಡು ಜಯಪತಾಕೆಯನೆತ್ತಿಸಿ ನಿಜ ಸ್ವಯಂಪ್ರಭಪುರಕ್ಕೆ ಪೋಪುದುಮಿತ್ತಲ್—

ಕಂ ॥ ಸೇನಾಮುಖದೊಳ್ ಭಂಗಮ
ನಾನೆಯ್ದಿದೆನೆಂದು ವಿಶ್ರುತಂ ವೈಶ್ರವಣಂ ॥
ಮಾನಧನಂ ವೈರಾಗ್ಯಾ
ಧೀನ ಮನಂ ಜೈನದೀಕ್ಷೆಯಂ ಕೈಕೊಂಡಂ ॥ ೧೫೫ ॥

ಅಂತು ನಿಶ್ಶಲ್ಯನಾಗಿ ವಿನಯಂಧರ ಚಾರಣರ ಸಮೀಪದೊಳ್ ತಪಂಗೆಯ್ದು ಸವರ್ಗಶ್ರೀಯನಾಲಿಂಗಿಸಿದನಿತ್ತ ದಕ್ಷಿಣಸಮುದ್ರ ವೇಲಾ ನಿವಾಸಿಗಳಪ್ಪ ಇಂದ್ರನ ಸಾಮಂತರೆಲ್ಲರುಮಂ ಬಾಯ್ಕೇಳಿಸಿ ಮತ್ತಮೊರ್ವ್ ಹಸ್ತ ಪ್ರಹಸ್ತ ಸುಮಾಲಿ ಮೌಲ್ಯವಂತ ಪ್ರಮುಖ ಸಹಿತಂ ಪುಷ್ಪಕ ವಿಮಾನಾರೂಢನಾಗಿ ಮಹಾಬಲಂಬೆರಸು ಗಗನಮಾರ್ಗದಿಂ ನಡೆದು—

ಕಂ ॥ ಬಡಗಣ ದೆಸೆಯಂ ಸಾಧಿಸ
ಲೊಡರಿಸಿ ಭೂಚರ ವಿಯಚ್ಚರೇಶ್ವರರಂ ತ ॥
ನ್ನಡಿಗೆರಗಿಸಿ ದಶಕಂಠಂ
ಪಡೆದಂ ದೆಸೆವೆಣ್ಗೆ ಕೀರ್ತಿ ಮಣಿಕಂಠಿಕೆಯಂ ॥ ೧೫೬ ॥

ಅಂತು ನಿಖಿಲ ರಾಜಕಮನದಿರ್ಸಿ ಕಪ್ಪಂಗೊಂಡು ಕೈಲಾಸನಗದ ಸಮ್ಮೋದ ಗಿರಿಯ ನಡುವಣ ಸುರದಾರು ವನೋಪಕಂಠದೊಳ್ ಬೀಡಂ ಬಿಟ್ಟಿರ್ಪುದುಂ—

ಕಂ ॥ ದೆಸೆ ಕಿವುಡುವೀಟ್ಟಿನಂ ತೆರೆ
ಮಸಗಿದ ಮುನ್ನೀರ ಪೆರ್ಚಿದುಳ್ಳೊಳಮುಂ ಬೆ ॥
ರ್ಚಿಸಿ ಕಾರಮುಗಿಲ ಮೊಳಗಂ
ಮಸುಳಿಸಿ ಪೊಣ್ಮಿತ್ತು ಬೃಂಹಿತಂ ಕಾನನದೊಳ್ ॥ ೧೫೭ ॥

ಆ ನಿನದಂ ಕಿವಿಗೆಯ್ತರೆ
ದಾನವಪತಿ ಭದ್ರಗಜದ ಬೃಂಹಿತಮೆಂದಾ ॥
ಕಾನನಮುಂ ಪುಗುತಂದು ಮ
ದಾನೇಕಪದೊಂದು ಪಿರಿಯ ಕಡುಪಂ ಕಂಡಂ ॥ ೧೫೮ ॥

ಆ ಕಾಡಾನೆಯ ಕಡುಪಿನ ನಡುವೆ—

ಚ ॥ ಬಿದಱೆ ಮನಂ ವನಸ್ಥಲದೊಳೊಂದಿಭಮಿರ್ದುದು ಮೂರ್ಧ ಪಿಂಡಮು ।
ಲ್ಲಿದು ಶಿಖರಸ್ಥಲಂ ನಿಟಿಲವಲ್ಲಿದು ಪಾಸಱೆ ಕರ್ಣತಾಳಮು ॥
ಲ್ಲಿದು ಚಲ ಪಕ್ಷಸಂಹತಿ ಮದಪ್ಲವಮಲ್ಲಿದು ನಿರ್ಝರಪ್ಲವಂ ।
ಮದಗಜವಲ್ಲಿದಿಂದ್ರನೊಳಿದಿರ್ಚಿದ ನೀಲ ನಗೇಂದ್ರಮೆಂಬಿನಂ ॥ ೧೫೯ ॥

ಅಂತಿರ್ದ ಸಕಲ ಶುಭಲಕ್ಷಣಾಕಾರಮುಮತ್ಯಾಯತ ಕರಮುಮಿಂದ್ರನೀಲ ಚ್ಛಾಯಮುಂ ಮಹಾಕಾಯಮುಮಪ್ಪ ಭದ್ರಗಜಮುಂ ಕಂಡು ಮನದೆ ಕೊಂಡೆ ನಗೆ ಪಟ್ಟವರ್ಧನಮಾಗಲಿದುವೆ ತಕ್ಕುದೆಂದು ಮುನ್ನಮಿಂದ್ರಂಗಂ ಪಿಡಿಯಲೀಯ ದಶಿವರ್ತಿಯಂ ದಾನವ ಚಕ್ರವರ್ತಿ ವಿದ್ಯೆಯಿನಶ್ರಮದೊಳೆ ಪಿಡಿದಾ ಮಹಾಗಜ

ಮುಂ ತ್ರಿಜಗದ್ಭೂಷಣ ನಾಮಧೇಯಂಪೂಡಿ ಬೀಡಿಂಗೆ ಮಗುಟಿತೆ ಬಪ್ಪುದುಮಾ ಸಮಯದೊಳ್—

ಕಂ ॥ ನೆತ್ತರ ಪನಿಗಳ್ ಮೆಯ್ಯೊಳ್
ಪತ್ತಿರೆ ಭೋರೆಂದು ಬಂದು ಗಗನಸ್ಥಲದಿಂ ॥
ಮತ್ತೊರ್ವಂ ದೂತಂ ಚಲ
ಚಿತ್ತಂ ಸರ್ವಾಂಗ ವಿನಯ ವಿನಮಿತನಾದಂ ॥ ೧೬೦ ॥

ಆಗಿ ದೇವ ಶಾಖಾಬಲಿಯೆಂಬೆನಾಂ ವಾನರಧ್ವಜಾನುಚರನೆಂ ಸೂರ್ಯಜನುಂ ಋಕ್ಷಜನುಂ ನಿನ್ನಾಜ್ಞೆಯಂ ನೆರಂಬಡೆದು ಪಾತಾಳಲಂಕೆಯಿಂದೆತ್ತಿ ಪೋಗಿ ನಿಜಾನ್ವಯಾಗತಮಪ್ಪ ಕಿಷ್ಕಿಂಧಪುರಮಂ ಕೊಳಲೆಂದು ಪರಿದು ಮುತ್ತಿಕೊಳ್ಳುದುಂ ಪೊಱಮಟ್ಟು ಕಾದಿ —

ಕಂ ॥ ವಿಜಿಗೀಷು ಬಲ್ಪಿನಿಂ ಋ
ಕ್ಷಜನಂ ಸೆಜೆವಿಡಿಯೆ ಕಂಡು ಕಾಯ್ದಿಡಜುದ ಸೂ ॥
ರ್ಯಜನಂ ಪುಣ್ಚಡಿಸಿದನೇ
ನಜೇಯ ಭುಜಬಲನೊ ಸಮರದೊಳ್ ಯಮರಾಜಂ ॥ ೧೬೧ ॥

ಆ ಸಮಯದೊಳ್ ಸೂರ್ಯಜನಂ ನಮ್ಮವರ್ ಮಗುಟಿಯೆಮ್ಮನಗರಕ್ಕೆ ನೆಗಪಿ ಕೊಂಡು ಪೋದರಾನುಮಾ ತೆಱನಂ ನಿಮ್ಮಡಿಗಱಪಲ್ ಬಂದೆನೆಂದು ಬಿನ್ನವಿಸೆ—

ಉ ॥ ಆ ನುಡಿಗೇಳ್ದು ಸೈರಿಸದೆ ಕಾಲಿಡಲಾಗಸವೆಯ್ದದೀ ಮಹಾ ।
ಸೇನೆಗೆನಲ್ ಜವಂಗಿಡಿಸಲಾ ಜವಕ್ಷ ಪರಿಯಿಟ್ಟು ಮುತ್ತಿದಂ ॥
ಪೋ ನಿಮಿಷಕ್ಕೆ ಕಿಷ್ಕಿಪುರ ಗೋಪುರಮುಂ ಬಿಡೆ ಸುತ್ತಿಮುತ್ತೆ ನಾ ।
ನಾನಕ ನಿಸ್ವನಂ ದಶ ದಿಶಾನನಮುಂ ಮುಳಿಸಿಂ ದಶಾನನಂ ॥ ೧೬೨ ॥

ಅದಂ ಕಂಡು ಮಾಮಸಕಂಗೊಂಡು ಜವನ ನಾಯಕಂ ಸಾಟೋಪನೆಂಬನಾಟೋಪಂಗಿಡದೆ ಪೊಱಮಟ್ಟು ನೆರೆದು ನಿಲ್ವುದುಮವಂಗೆ ಭಂಗಮುಂ ಖರ ದೂಷಣರ್ ಪಡೆವುದುಮದಂ ಯಮುಂ ಕಂಡು ಸಮರ ಸನ್ನದ್ಧನಾಗಿ ಪೊಱಮಟ್ಟು ತಾಗಿ ದಶಮುಖನ ಶಿಖೀಮುಖಕ್ಕೆ ಸುಗಿದು ಸಮರಮುಖ ಪರಾಙ್ಮುಖನಾಗಿ—

ಕಂ ॥ ಅತಿ ಜಂಘಾಲಂ ಭಯ ಕಂ
ಪಿತ ತನು ನಿಜಪತಿಯನಿಂದ್ರನಂ ಕಂಡು ಪದಾ ॥
ನತನೆಂದಂ ದಶಮುಖನ
ಪ್ರತಿಮಂ ಬವರದೊಳಿದಿರ್ಚುವವರಾರವನಂ ॥ ೧೬೩ ॥

ಕಂ ॥ ಎನೆ ಮುಳಿದಿಂದ್ರಂ ದಶವದ
ನನ ಮೇಲೇಟ್ಟಿರ್ಪ ಮಸಕದಿಂದೇಟ್ಟುದುಮಾ ॥
ತನ ಮಂತ್ರಿಮುಖ್ಯರೆಂದರ್
ನಿನಗಿದು ಪದನಲ್ತು ನೆರೆದು ಕಾದುವುದವನೊಳ್ ॥ ೧೬೪ ॥

ಎಂದವರ್ ನಯಮುಂ ನುಡಿಯೆ ಮಾಣ್ಪೊಡಂಬಟ್ಟು ಯಮುಂಗೆ ಸುರ ಸಂಗೀತಕ ಪುರಮುಂ ಕೊಟ್ಟು ವಿಷಯಾಸಕ್ತ ಚಿತ್ತನಪ್ಪುದಱಿನಂತಃಪುರಮುಂ ಪೊಕ್ಕು ಮೆಯ್ಮಱೆದಿರ್ದನಿತ್ತ ದಶಮುಖಂ ಋಕ್ಷಜ ಸೂರ್ಯಜರ್ಗೆ ಕಿಷ್ಕಿಂಧಪುರಮುಂ ಕೊಟ್ಟು ನಿಜಾನ್ವಯಾಗತಮಪ್ಪ ಲಂಕೆಯಂ ಮಾತಾ ಪಿತೃ ಪಿತಾಮಹ ಸಹಿತಂ ಪುಷ್ಪಕ ವಿಮಾನಾರೂಢನತಿಶಯ ವಿಭೂತಿಯಿಂ ಪೊಕ್ಕು ಸುಖದಿಂದಿರೆ ಕೆಲವು ದಿವಸಕ್ಕೆ—

ಕಂ ॥ ನಿರುಪಮ ಚರಿತ್ರೆ ಸೂರ್ಯಜ
ನರಸಿಯೆನಿಪ್ಪಿಂದುಮಾಲೆ ಪೆತ್ತಳ್ ಲೋಕೋ ॥
ತ್ತರರೆನಿಪ ವಾಲಿ ಸುಗ್ರೀ
ವರುಮಂ ಶ್ರೀಪ್ರಭೆಯುಮಂ ಯಥಾಕ್ರಮದಿಂದಂ ॥ ೧೬೫ ॥

ಅಲಘು ಭುಜರೆನಿಪ ಖೇಚರ
ಕುಲ ತಿಲಕರನಖಿಲ ಶಸ್ತ್ರ ವಿದ್ಯಾವಿದರಂ ॥
ಬಲಯುತರೆನಿಪ್ಪ ಋಕ್ಷಜ
ಕುಲವಧು ನಳ ನೀಳರೆಂಬ ಸುತರಂ ಪಡೆದಳ್ ॥ ೧೬೬ ॥

ಅಂತು ಕೆಲವುಕಾಲಂ ಪೋಪುದುಂ ವಾಲಿ ಸುಗ್ರೀವರನಧಿರಾಜ ಯುವರಾಜ ಪದವಿಯೊಳ್ ನಿಲಿಸಿ ಸೂರ್ಯಜಂ ಪಿಹಿತಾಸ್ರವ ಭಟ್ಟಾರಕರ ಸಮಕ್ಷದೊಳ್ ದೀಕ್ಷೆಯಂ ಕೈಕೊಂಡು ಮೋಕ್ಷಕ್ಕೆ ಪೋದನಿತ್ತಲ್ —

ಕಂ ॥ ಪರಿಣಯನ ನಿಮಿತ್ತಂ ದಶ
ಶಿರನತ್ತಲ್ ಪೋಗೆ ತೆಱಪುವಾರ್ದರ್ದಟಂ ॥
ಖರನಿರದುಯ್ದಂ ಲಂಕಾ
ಪುರದಿಂದಂ ಚಂದ್ರನಖಿಯನಂಬುಜಮುಖಿಯಂ ॥ ೧೬೭ ॥

ಅಂತು ಕಳ್ದುಯ್ದು ದಶಾನನಂಗಾನತನಲ್ಲದ ಚಂದ್ರೋದರನಂ ಯವೋದರಮಂ ಪುಗಿಸಿ ಪಾತಾಳಲಂಕೆಯಂ ಸ್ವೀಕರಿಸಿ ಸುಖದಿನಿರೆಯಿತ್ತ ದಶಾನನಂ ಮದುವೆನಿಂದು ಮಗುಟ್ಟು ವಂದು—

ಚ ॥ ಎನಗಿನಿಸಳ್ಕದೆನ್ನನುಜೆಯಂ ಪಿಡಿದುಯ್ದುನವಂಗೆ ತಕ್ಕುದಂ ।
ಜನಿಯಿಪೆನೆಂದು ಗರ್ಜಿಸೆ ದಶಾನನನಾತನ ಕಾಂತೆ ನಿನ್ನ ಮೆ ॥
ಯ್ದುನನನುರಕ್ತನಾಕೆಗನುರೂಪನಿದಾವುದು ಪೊಲ್ಲಗೆಯ್ದನೀ ।
ಮುನಿಸವಿವೇಕಮೆಂದು ನುಡಿದಳ್ ಮಯ ನಂದನೆ ತದ್ದಶಾಸ್ಯನಂ ॥ ೧೬೮ ॥

ಅದಲ್ಲದೆಯುಂ ನಿನಗೆ ವಿಧೇಯನಲ್ಲದ ಚಂದ್ರೋದರನಂ ಕೊಂದು ನಿಷ್ಕಂಟಕಂ ಮಾಡಿದನಾತನಂ ಮುಳಿದು ನೀಂ ಕೊಂದು ನಿನ್ನನುಜಾತೆಗೆ ವೈಧವ್ಯ ದೀಕ್ಷೆಯಂ ಕುಡುವುದು ಚದುರಲ್ಲೆಂದು ಕಲುಷಮಂ ಕಳೆದಳಿತ್ತ ಚಂದ್ರೋದರನ ಪತ್ನಿಯು ಮಂತರ್ವತ್ನಿಯುಮಪ್ಪನುರಾಧೆ ಪರಿಜನಂಬೆರಸು ಪೋಗಿ ನವಮಾಸಂ ತೀವೆ ಕೂಸುವೆತ್ತೀತಂ ಗರ್ಭದೊಳಿರೆ ಪಗೆಪರಿಂ ಸೇದೆವಟ್ಟಿನೆಂದಾತಂಗೆ ವಿರಾಧಿತನೆಂದು ಪೆಸರನಿಡುವುದುಮಾತನನುಕ್ರಮದಿಂ ಬಳೆದು ಪಗೆಯಂ ಸಾಧಿಸುವುಪಾಯಮಂ ಬಗೆಯುತ್ತಿರ್ಪಿನಮಿತ್ತಲ್—

ಉ ॥ ಮಾನಧನಂ ವಿವೇಕನಿಧಿ ವಾಲಿ ಜಿನಾಗಮ ಕೋವಿದಂ ಪೆಜಂ ।
ಗಾನತನಾಗೆ ದರ್ಶನವಿಶುದ್ಧಿಗೆ ದೂಷಣಮಕ್ಕುಮಂತಜಿಂ ॥
ಜೈನಪದಕ್ಕೆ ಜೈನಮುನಿಗಲ್ಲದೆ ಕೈಮುಗಿಯೆಂ ದಲೆಂದು ಧ ।
ರ್ಮಾನುಗನಪ್ರಮತ್ತ ಚರಿತ ಪ್ರಿಯನಾದನಿದೇನುದಾತ್ತನೋ ॥ ೧೬೯ ॥

ಅನಂತವೀರ್ಯನುಂ ಚರಮದೇಹ ಧಾರಿಯುಮವಕ್ರ ವಿಕ್ರಮನುಮಪ್ಪ ವಾಲಿ ನಿಯಮಸ್ಥನಾಗಿ ಸುಖದಿನಿರ್ಪುದುಮೊಂದು ದಿವಸಮಾತನನುಜೆಯಂ ಶ್ರೀಪ್ರಭೆಯಂ ಬೇಡಿ ದಶಮುಖಂ ಮುಖ್ಯ ಪುರುಷರ ಕಯ್ಯೋಲೆಯನಟ್ಟುವುದುಮುದಂ ತಿಳಿದು ವಾಲಿ ಮಂತ್ರಶಾಲೆಯಂ ಸುಗ್ರೀವಂಬೆರಸು ಪೊಕ್ಕು ಮಂತ್ರಿಮಂಡಲಮು ಮನಾಪ್ತ ಪರಿಜನಮುಮಂ ಬರಿಸಿ—

ಕಂ ॥ ತಗದೆನಗುನ್ಮಾರ್ಗಿಗೆ ಕೂ
ಸುಗುಡಲ್ ದಶಕಂಧರಂ ಮದಾಂಧಂ ಧರ್ಮಾ ॥
ನುಗನಲ್ಲನನುಜೆಯಂ ಕುಡೆ
ತೆಗಟಿಹದೊಳ್ ಪರದೊಳೆನಗೆ ಪಾತಕಮಕ್ಕುಂ ॥ ೧೭೦ ॥

ಕುಡೆ ಕೂಸನುದ್ಧತಂಗಾಂ
ಪೊಡೆವಡುವನಿತಕ್ಕುಮಾದೊಡೆನ್ನ ಚರಿತ್ರಂ ॥
ಕೆಡುಗುಂ ವ್ರತಮಂ ಕೈಕೊಂ
ಡೆಡೆಯೊಳ್ ಬಟ್ಟವನೆ ಭಿನ್ನ ಭಾಜನಮಲ್ತೇ ॥ ೧೭೧ ॥

ಕಂ ॥ ಅದಱಿಂದಾತಂಗಾನೀ
ಯದೆ ಕೂಸಂ ಕಾಳೆಗಕ್ಕೆ ಮೆಯ್ದರೆ ಪಲ ಕಾ ॥
ಲದ ರಾಕ್ಷಸ ವಾನರ ವಂ
ಶದ ನಷ್ಟೆನ್ನಿಂದಮಱಿದುದೆಂಬುದು ಲೋಕಂ ॥ ೧೭೨ ॥

ಅರಸುತನಂಗೆಯ್ವಱಿಪಿಂ
ಧುರದೊಳ್ ಮಾಱುಮಾಂತರೆಲ್ಲರಂ ಮಟ್ಟಿಪುದುಂ ॥
ದೊರೆಕೊಳ್ಗುಂ ಪಾತಕಮಾ
ಸಿರಿಯುಂ ಚಿರಮಲ್ತು ನೀರ ಬೊಬ್ಬುಳಿಕೆಯವೋಲ್ ॥ ೧೭೩ ॥

ಅದಱಿಂ ಪಾಪಕ್ಕಂ ಪಱಿಗಮೆಡೆಗುಡದ ತಪಮನಪ್ಪುಕೆಯ್ದೊಡೆನ್ನ ಕುಲಮುಂ ಚಲಮುಂ ವ್ರತಮುಂ ಕೆಡದೆ ನಡೆಗುಮೆಂದು ತಱಿಸಂದು ಸುಗ್ರೀವಂಗೆ ರಾಜ್ಯಮಂ ಕೊಟ್ಟು ಪರಿಜನಕ್ಕೆ ನಿಶ್ಯಲ್ಯನಾಗಿ [1]ಸದ್ಗರ್ಶನಗಗನಚಂದ್ರರೆಂಬ ಚಾರಣರ ಪಕ್ಕ ದೊಳ್ ತೊಱೆದು ತಪಂಬಟ್ಟು ಘೋರ ವೀರತಪದಿಂ ಋದ್ಧಿಪ್ರಾಪ್ತನಾದಂ—

ಕಂ ॥ ಸುಗ್ರೀವನುಮಿತ್ತಲ್ ಖಚ
ರಾಗ್ರಣಿ ತನ್ನನುಜೆಯಂ ನಯೋಪಾಯಂ ಪಾ ॥
ಣಿಗ್ರಹಣ ಸಹಿತಮಿತ್ತು ದ
ಶಗ್ರೀವಂಗಾತ್ಮಪದವಿಯೊಳ್ ಸುಖಮಿರ್ದಂ ॥ ೧೭೪ ॥

ಅಂತು ದಶವದನಂ ಶ್ರೀಪ್ರಭೆಯಂ ಮದುವೆಸಿಂದು ಮತ್ತೊರ್ಮೆ ನಿತ್ಯಾಲೋಕಪುರಮನಾಳ್ವ ನಿತ್ಯಾಲೋಕನೆಂಬ ವಿದ್ಯಾಧರಂಗಂ ಶ್ರೀದೇವಿಗಂ ಪುಟ್ಟಿದ ರತ್ನಾವಳಿಯಂ ಮದುವೆಸಿಂದು ಮಗುಟ್ಟಿ ಬರ್ಪ ಸಮಯದೊಳ್ ಕೈಲಾಸನಗ ನಿತಂಬಸ್ಥಲದೊಳಿರ್ದ ಮಹಾಮುನಿಯ ಮೇಲೆ ವಿಮಾನಂ ನಡೆಯದೆ ನಿಲ್ವುದುಂ ವಿಸ್ಮಿತ ಮನನಿದೇನೆಂದು ನಿಂದವಲೋಕಿಸೀವಿದ್ಯೆಯಿಂ ವಾಲಿದೇವನಪ್ಪುದನಱಿದಿನ್ನುಮೆನ್ನ ಮೇಲಣ ಮುನಿಸನುಱಿಯದೆ ವಿಮಾನಮಂ ಸ್ತಂಭಿಸಿದೊಡೇನಾದುದೀ ನಗಂಬೆರಸೀಗಳ್ ಕಿಟ್ಟಿಯ್ದು ಸಮುದ್ರದೊಳಿಕ್ಕುವೆನೆಂದು ಪುಷ್ಪಕವಿಮಾನದಿನವನೀತಲಕ್ಕವತರಿಸಿ ಘನಾಪಘನಮುಮಂ ಬಹುಬಾಹುಗಳುಮಂ ವಿಕುರ್ವಿಸಿ ರಸಾತಲಕ್ಕಿಟ್ಟಿದು ಧನದಾಚಲದಧಸ್ಥಲಮನೆಯ್ದಿ—

ಉ ॥ ಸಾಸಿರವಿದ್ಯೆಗಳ್ವೆರಸು ತೋಳ್ಗಳ ತೆರ್ಕೆಗಳಿಂದಳುರ್ಕೆವೆ ।
ತ್ತಾ ಸುರವೈರಿ ಬೆಳ್ಮುಗಿಲನೆತ್ತುವ ಘೋರ ಸಮಾರನಂತೆ ಕೈ ।
ಲಾಸಮನೆತ್ತಿ ಕಾವ ಬಗೆಯಿಂ ಬಹು ರತ್ನಮಯಂಗಳಂ ಜಿನಾ ।
ವಾಸಮನಂದು ವಾಲಿಮುನಿಪುಂಗವನುಂಗುಟದಿಂದಮೊತ್ತಿದಂ ॥ ೧೭೫ ॥

1. ಗಗನಚಾರಣರೆಂಬ. ಚ.

ಅಂತು ಶುಭಪರಿಣಾಮದಿಂ ದಶಮುಖನೊಳಪ್ಪ ಕಲುಷಮಿಲ್ಲದೆ ಕೈಲಾಸ ಶಿಖರಮುಂ ಮೆಲ್ಲನೊತ್ತೆ ಪುಯ್ಯಲಿಡುವ ಸರಮುಂ ಕೇಳ್ದು—

ಕಂ ॥ ಪರಿಜನ ಸಹಿತಂ ಮಂಡೋ
ದರಿ ಬಂದು ಮುನೀಂದ್ರ ರಕ್ಷಿಸೆಂದೆಱಗುವುದುಂ ॥
ಚರಣಾಂಗುಷ್ಠಮನೊಯ್ಯನೆ
ಕರುಣಾರಸ ಸಹಿತನೆತ್ತಿದಂ ಮುನಿಮಹಿತಂ ॥ ೧೭೬ ॥

ಆಗಳಾ ಪುಯ್ಯಲ್ಪುವ ರವಮೇ ಕಾರಣಮಾಗೆ ದಶಮುಖಂಗಂದಿಂದಿತ್ತ ರಾವಣನೆಂಬ ಪೆಸರಾಯ್ತನಂತರಮಾತಂ ರಸಾತಲದಿಂ ಪೊಱಮಟ್ಟು ವಾಲಿಭಟ್ಟಾರಕರಂ ಪೂಜಿಸಿ ಪೊಡೆವಟ್ಟು ತನ್ನ ಪೊಲ್ಲಮೆಯಂ ಕ್ಷಮೆಗೊಂಡು ಕಳೆದು—

ಚ ॥ ಕೆಲದ ಜಿನೇಶ್ವರಾವಸಥಮಂ ಬಲಗೊಂಡೊಳಪೊಕ್ಕು ದೇವನಂ ।
ವಿಲಸಿತ ರತ್ನರಾಶಿಗಳಿನರ್ಚಿಸಿ ಬಾಜಿಸಿದಂ ಲಯತ್ರಯಂ ॥
ಸುಲಲಿತಮಾಗೆ ವಸ್ತು ಗುಣ ರೂಪ ಜಿನಸ್ತವನಾಂಕ ಮಾಲೆಯಂ ।
ಪಲತೆಱಿದಿಂ ರಸಂಬಡೆಯೆ ರಾವಣ ಹಸ್ತದಿನಂದು ರಾವಣಂ ॥ ೧೭೭ ॥

ಅಂತು ನಿರ್ಭರಭಕ್ತಿಯಿಂ ಬಾಜಿಸಾಗಳ್—

ಉ ॥ ಆಸನ ಕಂಪಮಾಗೆ ಫಣಿಪಂ ಫಣಿಲೋಕದಿನಂದು ಬಂದು ಕೈ ।
ಲಾಸ ನಗಕ್ಕೆ ರಾವಣನ ದೇವರೊಳಾದತಿಭಕ್ತಿ ಹರ್ಷಮಂ ॥
ಮಾಸರಮುಂಟುಮಾಡೆ ತನಗಿತ್ತನಿದರ್ಚಲೊಡಂ ಸಮಸ್ತ ದೇ ।
ವಾಸುರ ಮುಖ್ಯನಾಯಕರ್ಗೆ ಜೀವ ವಿಮುಕ್ತಿಯನೀವ ಶಕ್ತಿಯಂ ॥ ೧೭೮ ॥

ಅಂತು ಫಣೀಂದ್ರನೀಯೆ ದಿವ್ಯಶಕ್ತಿಯಂ ಪಡೆದು ಪೋದನಿತ್ತಲಪಕೃತಿಯಂ ಗುರುಗಳೊಡನಾಲೋಚಿಸಿ—

ಕಂ ॥ ಪ್ರಾಯಶ್ಚಿತ್ತಂಗೊಂಡ
ಶ್ರೇಯಮನಪಹರಿಸಿ ವಾಲಿಮುನಿ ಶುಕ್ಲಧ್ಯಾ ॥
ನಾಯತ್ತನಾಗಿ ಮುಕ್ತಿ
ಶ್ರೀ ಯುವತಿಯ ನಿಬಿಡಕುಚಮನಾಲಿಂಗಿಸಿದಂ ॥ ೧೭೯ ॥

ಮತ್ತಿತ್ತ ರಾವಣಂ ನಂಬ್ಯಕಾ ಸುವೇಲಾದಿ ದ್ವೀಪಂಗಳನಾಳ್ವ ಮಹಾಬಲ ವಿಜ್ಞಾನಧರರಂ ಬಾಯ್ಬೇಳಿಸಿ ಕುಂಭಕರ್ಣ ವಿಭೀಷಣರುಮಿಂದಗಿ ಮೇಘವಾಹನರುಂ ಖರ ಮರೀಚಿ ಸುಗ್ರೀವಾಂಗದ ಮರ್ಕಟಧ್ವಜ ಪ್ರಮುಖ ನಿಖಿಲ ವಿದ್ಯಾಧರ ಪರಮೇ

ಶ್ವರರುಂ ಬಳಸಿ ಬರೆ ವಿವಿಧವಾಹನ ವಿಚಿತ್ರಾತಪತ್ರ ಪಾಳಿ ಕೇತನಂಬೆರಸುತ್ತರಾಭಿ ಮುಖಮಿಂದ್ರನವೋಲೆ ನಿಚ್ಚವಯಣದಿಂ ಬರುತ್ತುಂ ರೈವತ ನದೀ ತೀರದೊಳ್ ಬೀಡಂ ಬಿಟ್ಟಾತೊಜೆಯ ಸೈಕತಸ್ಥಳದೊಳ್ ರತ್ನಮಂಟಪಮನೆತ್ತಿಸಿ ಸಿಂಹಾಸನದ ಮೇಲೆ ಮಣಿಮಯ ಜಿನಪ್ರತಿಮೆಯಂ ನಿಲಿಸಿ ಪೂಜಿಸುವ ಸಮಯದೊಳ್—

ಕಂ ॥ ತೀವಿ ಬರೆ ಭೋಂಕನಾ ನದಿ
ರಾವಣನತಿ ಸಂಭ್ರಮಾಕುಲಂ ನೆಗೆದು ನಭ ॥
ಕ್ಯಾವುದು ಕಾರಣದಿಂದೀ
ರೈವತ ನದಿ ಬಂದುದೆಂದು ವಿಸ್ಮಿತನಾದಂ ॥ ೧೪೦ ॥

ಆಗಿ ಕಾಲಮಲ್ಲದ ಕಾಲದೊಳೀ ತೊಜೆ ಬಂದ ಕಾರಣಮನಾರಯ್ವುದೆಂದು ದೂತನನಟ್ಟುವುದುಮಾತನದೆಲ್ಲಮನಱಿದು ಬಂದು ಮಾಹಿಷ್ಮತೀಪುರಾಧೀಶ್ವರಂ ಸಹಸ್ರಬಾಹುವೀ ತೊಜೆಯಂ ಜಂತ್ರಂಗಳಿಂ ಕಟ್ಟಿ ನಿಜಾಂತಃಪುರಸಹಿತಂ ನೀರಾಟ ನಾಡಿ ಜಂತ್ರಂಗಳಂ ಕಳೆಯೆ ಪೊನಲ್ ಕವಿತಂದುದೆಂದು ಬಿನ್ನವಿಸೆ—

ಕಂ ॥ ತ್ರಿಜಗದ್ಭೂಷಣ ಮಾದ್ಯ
ದ್ಗಜಮಂ ಮುಳಿದೇಜೆ ರಾವಣಂ ನಡೆದಸುಹೃ ॥
ದ್ಧ್ವಜಿನಿಯನೋಡಿಸಿ ರಿಪು ಸಾ
ಮಜದೊಡನೆ ಸಹಸ್ರಬಾಹುವಂ ಸೆಜೆಗೆಯ್ದಂ ॥ ೧೪೧ ॥

ಅಂತಾತನಂ ಸೆಜೆಗೆಯ್ದು ನಿಜ ವಿಜಯಶಿಬಿರಕ್ಕೆ ತರ್ಪುದುಮಲ್ಲಿಗಾತನ ತಂದೆವಿರಪ್ಪ ಶತಬಾಹುಗಳೆಂಬ ಜಂಘಚಾರಣರ್ ಧರ್ಮವಾತ್ಸಲ್ಯದಿಂ ಬರ್ಪುದುಂ ದಶಮುಖನಿದಿರೆಟ್ಟಿ ಭಕ್ತಿಭರದಿಂ ವಂದಿಸಿ ಮಣಿಮಯಾಸನದೊಳಿರಿಸಿ ಕೈಗಳಂ ಮುಗಿದು ಬೆಸನಾವುದೆಂಬುದುಂ ನೀಂ ಸೆಜೆಗೆಯ್ದ ಸಮ್ಯಗ್ದೃಷ್ಟಿಯಪ್ಪ ಸಹಸ್ರ ಬಾಹುವಂ ಬಿಡುವುದೆನೆ ಮಹಾಪ್ರಸಾದವೆಂದಾತನಂ ಬರಿಸುವುದುಮಾತಂ ಬಂದು ದಿವ್ಯಮುನಿಗೆ ಪೊಡೆವಟ್ಟು ಕುಳ್ಳಿರ್ಪುದುಂ ಕರಗ್ರಹಣ ಪುರಸ್ಸರಂ ವಿನಯ ವಚನಂ ಗಳಂ ನುಡಿದು ನಿನ್ನ ರಾಜ್ಯದೊಳ್ ನಿಲ್ವುದೆನೆ ನಾಂ ತಪೋರಾಜ್ಯಮನಲ್ಲದೆ ರಾಜ್ಯ ಮನೊಲ್ಲೆನೆಂದು—

ಕಂ ॥ ನಿಜಸುತನಪ್ಪ ಸುಬಾಹುಗೆ
ನಿಜರಾಜ್ಯಮನಿತ್ತು ದೀಕ್ಷೆಯಂ ಕೈಕೊಂಡಂ ॥
ನಿಜ ಜನಕರಪ್ಪ ಶತಬಾ
ಹು ಜಂಘಚಾರಣರ ಕೈಯೊಳಾ ಧರಣೀಶಂ ॥ ೧೪೨ ॥

ಅಂತು ದೀಕ್ಷೆಯಂ ಕೈಕೊಂಡು ಸಹಸ್ರಬಾಹು ಮೋಕ್ಷಕ್ಕೆ ಪೋಪುದುಮಿತ್ತಲ್–

ಕಂ ॥ ಖೇಚರ ವಿಭು ತಾಂ ಮುನ್ನಂ
ಭೂಚರ ಭೂಭುಜರನೆಯ್ದೆ ಸಾಧಿಸಿ ಬಲ್ಮೆಯಂ ।
ಖೇಚರರಂ ಸಾಧಿಪೆನೆಂ
ಬೀ ಚಿತ್ತಂಬೆತ್ತು ವಿಜಯಯಾತ್ರೆಗೆ ತಳರ್ದಂ ॥ ೧೮೩ ॥

ಅಂತು ನಿಖಿಲ ರಾಜಕಮನೊತ್ತಿ ಕಪ್ಪಂಗೊಳುತ್ತುಂ ಧರ್ಮಮಂ ಪ್ರತಿಪಾಲಿಸುತ್ತುಂ ಬರುತ್ತುಮಿರೆ ರಾಜಪುರಮನಾಳ್ವ ಮರುತ್ತೆಂಬರಸಂ ಜೀವ ವಧೆಗೆಯ್ವ ಜನ್ನಮನೊಡರ್ಚಿ ಪೆಱರಾರ್ಗಂ ಪೊಡೆವಡದೆ ಪಲವುಂಪ್ರಾಣಿಗಳಂ ಕೊಂದಪ್ಪನೆಂದು ಕೇಳ್ದಲ್ಲಿಗೆ ಬಂದು ಯಾಗನಿಮಿತ್ತಂ ಯೂಪಸ್ತಂಭಂಗಳೊಳ್ ಕಟ್ಟಿ ಪಸುಗಳಂ ಗೋಳಿಡೆ ಕೊಂದು ಬೇಳ್ವುದಂ ಕಂಡು ಕೊಂಡಂಗಳನೊಡೆದು ಶಾಲೆಗಳಂ ಕೆಡಪಿ ಯೂಪಸ್ತಂಭಂಗಳಂ ಕಡಿದು ಸಂವರ್ತಕಂಮೊದಲಾಗೆ ಸಕಲ ಋತ್ವಿಜರಂ ಬಡಿದು ಕೊಲಲಿರ್ಪ ಸಮಯದೊಳ್ ಮರುತ್ತೆಂಬರಸನತಿಸಂಭ್ರಮದಿಂ ಪರಿತಂದು ರಾವಣನ ಕಾಲಮೇಲೆ ಬಿಟ್ಟು ಕ್ಷಮೆಗೊಂಡು—

ಕಂ ॥ ಕನಕಪ್ರಭೆಯಂ ನಿರ್ಜಿತ
ಕನಕ ಪ್ರಭೆಯಂ ಮರುನ್ನರೇಂದ್ರಂ ನಿಜನಂ ॥
ದನೆಯಂ ಖಚರ ಕುಲಾನಂ
ದನನೆನಿಪ ದಶಾನನಂಗೆ ನಲ್ಮೆಯಿನಿತ್ತಂ ॥ ೧೮೪ ॥

ಅಂತು ಮದುವೆನಿಂದು ಕನಕಪ್ರಭೆಗೆ ಪುಟ್ಟಿದ ತನ್ನ ಮಗಳಪ್ಪ ಸ್ವೀಕೃತ ಚಿತ್ತೆಯಂ ಮಧುರೆಯನಾಳ್ವ ಹರಿವಂಶನ ಮಗನಪ್ಪ ಮಧುವಿಂಗೆ ಕೊಟ್ಟು ದಶವದನಂ ಮಹಾಬಲ ಸಹಿತನಾಗಿ ಪದಿನೆಂಟು ವರ್ಷಕ್ಕೆ ವಿನೀತಾಖಂಡಮಂ ಬಾಯ್ಮೇಳಿಸಿ ಕ್ರಮದಿಂ ಕೈಲಾಸಪರ್ವತಮನೆಯ್ದಿ ವಾಲಿದೇವರ ಸಾಮರ್ಥ್ಯಮಂ ನೆನೆದು ಪೊಗಟ್ಟುತ್ತುಮಾ ನಗದ ನಿತಂಬದೊಳ್ ಬೀಡುವಿಟ್ಟಿರ್ಪುದುಮಿತ್ತಲ್—

ಕಂ ॥ ಪರಿರಕ್ಷಿಸಿ ದೇವೇಂದ್ರನ
ಶರಧಿ ಶರಾಸನ ತನುತ್ರ ತತಿಯಂ ನಳಕೂ ॥
ಬರ ದಿಕ್ಪತಿ ದುರ್ಧರ ಭುಜ
ಪರಿಘಂ ದುರ್ಲಂಘ್ಯ ಪುರದೊಳತಿಬಲನಿರ್ದಂ ॥ ೧೮೫ ॥

ಆತ ರಾವಣಂ ಮೇಲೆತ್ತಿಬರ್ಪುದಂ ನಮ್ಮರಸಂಗಱಿಪೆಂದಟ್ಟಿದ ದೂತನ ವಚನದಿನಿಂದ್ರನದನಱಿದು—

ಶಾ ॥ ಏವಂ ರಾವಣನೆತ್ತಿಬಂದು ಬಲಿದಿರ್ದಾ ಕಯ್ದುವಂ ಕಾದು ವಿ।
ದ್ಯಾವಷ್ಟಂಭದಿನೆಂದು ಮುಂದರ ಮಹೀಭೃನ್ಮೌಖಲಾನಂದನ ॥
ಕ್ಕಾ ವಿದ್ಯಾಧರಚಕ್ರವರ್ತಿ ಜಿನಪೂಜೋತ್ಸಾಹದಿಂ ಪೋದನು।
ದ್ಗ್ರೀವಂ ದೋರ್ವಲ ಗರ್ವದಿಂ ಬಗೆದನಿಲ್ಲಿಂದ್ರಂ ದಶಗ್ರೀವನಂ ॥ ೧೪೬ ॥

ಮತ್ತಿತ್ತ ಚರ ವಚನದಿನಿಂದ್ರನ ಬೆಸಸಿದುದಂ ನಳಕೂಬರಂ ಕೇಳ್ದೊಂದು ಯೋಜನಾಂತರದೊಳಿರ್ದರಂ ನುಂಗುವಂತಪ್ಪ ಬೇತಾಳ ಯಂತ್ರಂಗಳಿಂ ದೂರದೇಶದೊಳಿರ್ದಿಟ್ಟಿಟ್ಟ ತಿಂಬಂತೆ ಘೂತ್ಕಾರ ಮುಖರಂಗಳಪ್ಪ ಮಹೋರಗಂಗಳಿನತಿದೂರದೊಳಟ್ಟ ಸುಡುವ ಕೇಸುರಿಯ ಪ್ರಾಕಾರಂಗಳಿಂ ಮತ್ತಮೆನಿತಾನುಂ ತೆಱದುಪದ್ರವ ಹೇತುಗಳಪ್ಪ ರೌದ್ರಮೃಗಂಗಳಿಂ ತುಱುಗಿ ಶತಯೋಜನೋತ್ಸೇಧಂಬಡೆದ ವಜ್ರ ಸಾಲಮೆಂಬ ಕೋಂಟೆಯಂ ವಿಗುರ್ವಿಸಿ ಪೊಟಿಲ್ಗೆ ದುರ್ಲಂಘ್ಯಪುರಮೆಂಬ ಪೆಸರನನ್ವರ್ಥಂಮಾಡಿ ಪೊಡಪ್ಪುಗಿಡದಿರ್ಪುದುಂ—

ಕಂ ॥ ಅದಱ ತೆಱನಱಿಯದಱಿಯೆಂ
ದುದಾತ್ತಬಲನಂ ಪ್ರಹಸ್ತನಂ ಪೇಟ್ಪುದುಮಂ ॥
ತದನಱಿದು ಬಂದವಂ ದಶ
ವದನಂಗಾದ್ಯಂತಮದಱ[1]ಗುರ್ವಂ ಪೇಟ್ಟಿಂ ॥ ೧೪೭ ॥

ಅಂತು ಪೇಟ್ದು ನಮ್ಮ ಪಡೆಗಲ್ಲಿಯ ಜಂತ್ರಂಗಳಿಂದುಪದ್ರವಮಾಗದಂತು ತೊಲಗಿ ಬಿಟ್ಟು ಬಱಿಕ್ಕದಂ ಕೊಳ್ವತೆಱನಂ ಬಗೆವುದೆಂಬುದುಂ ದಶವದನನಾನುಡಿಯನವಕರ್ಣಿಸಿ ಕೋಂಟೆಯಂ ಕೊಳ್ಳುಪಾಯಮನೆ ಬಗೆಯುತ್ತುಮಿರ್ಪುದುಮಿತ್ತಲ್—

ಕಂ ॥ ನಳಕೂಬರನ ಕುಲಾಂಗನೆ
ವಿಳಾಸವತಿ ರಾವಣಂಗೆ ಪಲಕಾಲಂ ಮು ॥
ನ್ನೆಳಸಿರ್ಪ ಕಾಮಕಾತರೆ
ಕೆಳದಿಗೆ ತಿಳಿವಂತು ತನ್ನ ತೆಱನಂ ಪೇಟ್ದಳ್ ॥ ೧೪೮ ॥

ಅಂತು ವಿದ್ಯಾಧರಪರಮೇಶ್ವರಿ ಚಿತ್ರಮಾಲೆಗೆ ನಿಜಾಭಿಪ್ರಾಯಮಂ ಕಲಿಸಿ ರಾವಣನಲ್ಲಿಗಟ್ಟುವುದುಂ—

ಕಂ ॥ ನೀಲ ಪಟಚ್ಛದೆ ನಿಶೆಯೊಳ್
ಲೋಲೇಕ್ಷಣೆ ಗಗನಮಾರ್ಗದಿಂ ರಾವಣನಿ ॥

1. ತೆಱನಂ. ಗ. ಘ

ರ್ದಾಲಯಮಂ ವಿಜಯಶ್ರೀ
ಲೀಲೆಯಿನಾ ಚಿತ್ರಮಾಲೆ ಬಂದೊಳವೊಕ್ಕಳ್ ॥ ೧೪೯ ॥

ಅಂತು ಪೊಕ್ಕು ರಾವಣನ ಕೆಲಕ್ಕೆ ವಂದು—

ಕಂ ॥ ಉಪರಂಭೆಯೆಂಬಳೆಮ್ಮರ
ಸಿ ಪೋಲಿಪೊಡೆ ರಂಭೆಗಗ್ಗಳಂ ಚೆಲ್ವಿಂದಾ ॥
ರುಪಮೆಗೆ ಪೆಱರೆನಿಪಳ್ ಪೀ
ನಪಯೋಧರೆ ನಿನ್ನ ಸಾರ್ಕೆಗಟ್ಟಿದಳೆನ್ನಂ ॥ ೧೪೦ ॥

ಪಲವುದಿನಂ ನಿನ್ನೊಳ್ ತೊ
ಟ್ಟಿಲವಿಂದಾ ಜೆನ್ನೆ ನಿನ್ನನನವರತಂ ಪಂ ॥
ಬಲಿಸುತ್ತುಂ ಚಿತ್ತೊತ್ತೀದ್ಭವ
ನಲರಂಬುಗಳುರ್ಚಿ ನಾಡೆ ಪಾಡಟ್ಟಿದಿರ್ದಳ್ ॥ ೧೪೧ ॥

ಏವೊಗಳ್ವಿನತನು ವಿದ್ಯಾ
ದೇವತೆ ನಿರತಿಶಯಮೆನಿಪ ರೂಪಿಂ ವಿದ್ಯಾ ॥
ದೇವತೆ ಸಾಮರ್ಥ್ಯದಿನೆನಿ
ಪಾ ವಧು ಬರೆ ದೇವ ನಿನಗೆ ತೀರದುದುಂಟೇ ॥ ೧೪೨ ॥

ಎನೆ ದಶಾನನಂ ಪಟ್ಟಿಯುಂ ಪಾಪಮುಮಪ್ಪ ದುಶ್ಚರಿತ್ರಮನೇವೆನೆಂದು ಮನದೊಳೆ ನಿಶ್ಚಯಿಸಿ ವಿಭೀಷಣನಂ ಬರಿಸಿ ರಹಸ್ಯದೊಳದನಱಿಪುವುದುಮಾತಂ ವಿದ್ಯಾಪ್ರಾಕಾರಮಂ ಕಿಡಿಸುವಂತುಟಂ ಪ್ರತಿವಿದ್ಯೆಯನಾಕೆಯಂ ಬರಿಸಿ ಪುಸಿದು ನಂಬಿಸಿ ಕಲ್ತುಕೊಳ್ವುದೆನೆ ರಾವಣನಾ ದೂದವಿಗೆ ನಿನ್ನ ನುಡಿಗೊಡಂಬಟ್ಟೆನಾಕೆಯಂ ತಾಯೆಂದು ವಕ್ರೋಕ್ತಿಯಿಂ ನುಡಿವುದುಮೂಕ್ಷಣದೊಳೆ ಪೋಗಿ ಬೇಗಂ ತರ್ಪುದುಮುಪರಂಭೆಗೆ ಪುಸಿನಣ್ಪುದೋಱಿ ನಿನಗಮೆನಗಂ ದುರ್ಲಂಘ್ಯಪುರದೊಳ್ ಕೂಟಮಪ್ಪಂತು ಮಾಡೆನೆ ಮನದೆ ಕೊಂಡಂತೆಗೆಯ್ವೆನೆಂದು ಸಾಲವಿದ್ಯಾಭೇದಿನಿಯಂ—

ಕಂ ॥ ಪ್ರತಿವಿದ್ಯೆಯನಾಕೆ ಕುಲ
ಕ್ಷತಿಯಂ ಪತಿಗಪ್ಪ ಹಾನಿಯಂ ಬಗೆಯದೆ ದು ॥
ರ್ಮತಿ ಕೊಟ್ಟಳದೆನ್ನರುಮಂ
ಮತಿಗಿಡುಪುದು ಜೋದ್ಯಮಲ್ತು ಮದನೋನ್ಮಾದಂ ॥ ೧೪೩ ॥

ಅಂತಾಕೆಯ ಕೈಯೊಳಾ ವಿದ್ಯೆಯಂ ಕೊಂಡು ಕಟ್ಟಿಸಿ ಮರುದೆವಸಂ ಸಾಲ ವಿದ್ಯೆಯಂ ಪ್ರತಿವಿದ್ಯೆಯಿಂ ಕೆಡಿಸಿ ದುರ್ಲಂಘ್ಯಪುರಮಂ ರಾವಣಂ ಮುತ್ತುವುದುಂ—

ಕಂ ॥ ಸೆರಗಂ ಬೆರಗಂ ಬಗೆಯದೆ
ಪುರಮಂ ಪೊಱಮಟ್ಟು ಕಾದುವಾಗಳ್ ನಳಕೂ ॥
ಬರನಂ ವಿಭೀಷಣಂ ಮದ
ಕರಿಯಂ ಮೃಗವೈರಿ ಪಿಡಿವ ತೆಱದಿಂ ಪಿಡಿದಂ ॥ ೧೯೪ ॥

ಆ ಸಮಯದೊಳ್—

ಕಂ ॥ ದನುಜಾಧೀಶ್ವರನ ಪುರಾ
ತನ ಪುಣ್ಯದ ಫಲದಿನಾಯುಧಾಗಾರದೊಳೇಂ ॥
ಜನಿಯಿಸಿದುದೊ ವಿದ್ವಿಷ್ಟಾ
ವನಿಪಾಲ ಪ್ರಳಯ ಕಾಲಚಕ್ರಂ ಚಕ್ರಂ ॥ ೧೯೫ ॥

ಅಂತು ಸುದರ್ಶನಚಕ್ರಂ ಪುಟ್ಟುವುದುಂ ರಾವಣಂ ಮಹೋತ್ಸವದಿಂ ಚಕ್ರ ಪೂಜೆಯಂ ಮಾಡಿ ರಹಸ್ಯದಿಂದಾಕೆಯಂ ಕರೆದು ನೀಂ ವಿಶುದ್ಧ ಕುಲದ ಕುಶ ಧ್ವಜಂಗಂ ಮಧುಕಾಂತೆಗಂ ಪುಟ್ಟಿದುದಱಿಂ ನಿಜಕುಲಾಚಾರಮಂ ಬಗೆದು ಶೀಲ ಪರಿಪಾಲನಂಮಾಟ್ಟಿದಂತಲ್ಲದೆಯುಂ ನೀನೆನಗೆ ವಿದ್ಯೋಪದೇಶಂಗೆಯ್ದುದಱಿಂ ಗುರುವಾದೆ ಪೆಱತೇನುಮಂ ಬಗೆಯದೆ ನಳಕೂಬರನೊಳ್ ಕೂಡಿ ಸುಖಮಿರೆಂ ದಾಕೆಯ ದುಷ್ಪರಿಣಾಮಮಂ ಪತ್ತುವಿಡಿಸಿ—

ಕಂ ॥ ನಳಕೂಬರನುಮನಾ ಕ್ಷಣ
ದೊಳೆ ಬರಿಸಿ ನಿಜಾಗ್ರತನಯನಿಂದಗಿಯಿಂದ ॥
ಗ್ಗಳಮೆನೆ ಮನ್ನಿಸಿ ಭಯಮಂ
ಕಳೆದಿತ್ತಂ ಭೃತ್ಯಪದವಿಯಂ ದಶವದನಂ ॥ ೧೯೬ ॥

ಅಂತಾತಂಬೆರಸು—

ಕಂ ॥ ವಿಜಯಾರ್ಧನಗಕ್ಕೆತ್ತಿದ
ನಜೇಯ ದೋಶ್ಶಾಲಿ ರಾವಣಂ ನಿಜ ವಿಜಯ ॥
ಧ್ವಜನಿಗಳಬ್ಜಿಗಳೇಟುಂ
ನಿಜ ಸೀಮಾ ವಜ್ರವೇದಿಯಿಂ ತಳರ್ದುವೆನಲ್ ॥ ೧೯೭ ॥

ಅಂತು ರಾವಣಂ ತನ್ನಮೇಲೆತ್ತಿಬಂದು ರಜತಗಿರಿ ನಿತಂಬದೊಳ್ ಬೀಡಂ ಬಿಟ್ಟನೆಂಬುದನಿಂದ್ರಂ ಕೇಳ್ದು ಸಮರಸನ್ನಾಹ ಭೇರಿಯಂ ಪೊಯಿಸುವುದುಂ—

ಕಂ ॥ ಚತುರಂಬುರಾಶಿಯಂ ಘೂ
ರ್ಣಿತಮೆನೆ ದಿಗ್ವಲಯಮಂ ದಿಶಾ ದ್ವಿರದನ ಬೃಂ ॥
ಹಿತಮೆನೆ ನಭಮಂ ಘನ ಗ
ರ್ಜಿತಮೆನೆ ಪುದಿದತ್ತು ಭೂರಿ ಭೇರೀನಿನದಂ ॥ ೧೯೮ ॥

ಚ ॥ ಕರಿಗಳ ವಾಜಿರಾಜಿಗಳ ತೇರ್ಗಳ ಖೇಚರರೊಡ್ಡಣಕ್ಕಣಂ ।
ಧರೆ ಕಿಱಿದಂಬರಂ ಕಿಱಿದು ಕೇತನಮಾಲಿಕೆಗೆಂಬಿನಂ ವಿಯ ॥
ಚ್ಚರ ಧರಣೀಶ ರತ್ನಮಕುಟಪ್ರಭೆಯಿಂ ದಶದಿಙ್ಮುಖಂಗಳುಂ ।
ಭರಿತಮೆನಿಪ್ಪಿನಂ ನೆರೆದುದಾ ಧ್ವನಿಗಿಂದ್ರನ ರುಂದ್ರಸೈನಿಕಂ ॥ ೧೯೯ ॥

ಅಂತು ನೆರೆದು ರಣಭೂಮಿಯೊಳಿಂದ್ರನ ಬಲಂ ಬಲಿದೊಡ್ಡಿ ನಿಲ್ವುದುಂ ರಾವಣನ ಬಲಂ ರಣರಭಸದಿಂ ಬಂದು ತಾಗುವುದುಂ—

ಕಂ ॥ ಇರ್ಬಲದ ಚತುರ್ಬಲಮುಂ
ದೋರ್ಬಲಮುಂ ಮೆಱೆದು ನೆರೆದು ಕಾದುವ ಪದದೊಳ್ ॥
ಮಾರ್ಬಲಮುಂ ಸುರಸೈನಿಕ
ಮೆಚ್ಚಿಟ್ಟಿದುದಳ್ಕಿ ಬಳ್ಕಿ ಬೆಂಗುಡುವಿನೆಗಂ ॥ ೨೦೦ ॥

ಅಂತು ರಾಕ್ಷಸಬಲಮೆಲ್ಲಮೊಲ್ಲನುಲಿದೋಡುವುದುಂ ಕಂಡು ಮುಖ್ಯನಾಯಕರಪ್ಪ ವಜ್ರವೇಗನುಂ ಹಸ್ತನುಂ ಪ್ರಹಸ್ತನುಂ ಮಾರೀಚನುಂ ಉದ್ಭಟನುಮುಜ್ವಳನುಂ ವಜ್ರನುಂ ಮಹಾಜಲಧರನುಂ ಸಂಧ್ಯಾಭ್ರನುಂ ಕ್ರೂರನುಮೆಂದಿವರ್ ಮೊದಲಾಗೆ ಮಹಾಬಲಸರಾಕ್ರಮರ್ ತಂತಮ್ಮ ಬಲಮುಂ ಪೆಱಗಿಕ್ಕಿ ದಿವಿಜಬಲಮನೆಲ್ಲಂ ಗೆಲೆ ಕಾದುವುದಂ ಕಂಡು ಮೇಘಬಲಿಯುಂ ತಟಿತ್ತುಂಗನುಮದ್ರಿಯುಂ ಸಂಜ್ವಲನುಂ ಪಾವಕನುಂ ಮೊದಲಾಗೆ—

ಕಂ ॥ ಸುರಬಲದ ನಾಯಕರ್ ಸಂ
ಗರದೊಳ್ ರಾವಣನ ಬಲದ ನಾಯಕರಂ ಸಂ ॥
ಹರಿಸೆ ಕೆಲರಂ ಕಪಿಧ್ವಜ
ರರೆಬರ್ ಕಾಲಾಗ್ನಿರುದ್ರನಂತುರಿದೆಬ್ಬರ್ ॥ ೨೦೧ ॥

ಅಲ್ಲಿ ಮಹೋಗ್ರನಂದನಂ ಪ್ರಸನ್ನಕೀರ್ತಿಯುಂ ಮಾಲ್ಯವಂತ ತನೂಭವಂ ಶ್ರೀಮಾಲಿಯುಮೆಡೆವೊಕ್ಕು ದಿವಿಜಬಲಮಂ ಹತ ವಿತತ ಕೋಲಾಹಲಮಂ ಮಾಡಿ

ಕಾದುವುದಂ ಕಂಡು ದಂಡಾಗ್ರನುಂ ಶಿಖಂಡವ್ಯಾಲಿಯುಂ ಶಿಖಂಡಿಯುಂ ಶಿಖಿಯುಂ ಕೇಸರಿಯುಂ ಕನಕನುಂ ಮೃಗಚಿಹ್ನನುಮೆಂಬಿಂದ್ರನಳಿಯಂದಿರ್ ಮೊದಲಾಗೆ ಪಲಬರ್ ಕುಮಾರರ್ ಮೂದಲಿಸಿ ಮುಸುಱಿ ಮುತ್ತುವುದುಂ—

ಕಂ ॥ ಶ್ರೀಮಾಲಿ ನೃಪಕುಮಾರ
ಸ್ತೋಮದ ತಲೆ ಪಱಿದು ಪಾಱಿ ಬೀಱ್ಪಿನೆಗಂ ಸಂ ॥
ಗ್ರಾಮದೊಳೇಸಾಡಿದನಖಿ
ಲಾಮರರಾಗಸದೊಳೊಡನೆ ತಲೆದೂಗುವಿನಂ, ॥ ೨೦೨ ॥

ಅವರಱಿವುದನಿಂದ್ರತನೂ
ಭವನೀಕ್ಷಿಸಿ ಕಲುಷ ವಶಗತಂ ತಾಗಿ ರಣೋ ॥
ತ್ಸವದಿಂದೇಳಿಸಿ ಮೊನೆಯೊಳ್
ಜವನಂ ಶ್ರೀಮಾಲಿಯುಂ ಜಯಂತಂ ಕೊಂದಂ ॥ ೨೦೩ ॥

ಅಂತು ಶ್ರೀಮಾಲಿಯುಂ ಜಯಂತಂ ಕೊಂದು ವಿಜಯ ಪತಾಕೆಯನೆತ್ತಿ ಸುವುದುಮಿಂದ್ರಜಿತ್ತುಮಾರನತಿ ಕುಪಿತನಾಗಿ ಬಂದು ಜಯಂತನೊಳ್ ಪೊಣರ್ವುದನಿಂದ್ರಂ ನೋಡಿ ಕಡುವೇಗದಿಂ—

ಮ ॥ ಮುಳಿದೈರಾವಣ ಗಂಧಸಿಂಧುರಮನಾಗಳ್ ನೂಂಕಿದಂ ವ್ಯೋಮ ಮುಂ ।
ಡಳದೊಳ್ ಬೆಳ್ಗೊಡೆ ಚಂದ್ರಮಂಡಳದ ಚೆಲ್ವಂ ಬೀಱಿ ದಿಕ್ಪಾಲ ಮುಂ ॥
ಡಳಿ ಸುತ್ತಂಬರೆ ಪಾಳಿಕೇತನ ಶತಂಗಳ್ ಮುಂದೆ ಮುಂದೈಸೆ ಮುಂ ।
ಗಳ ಭೇರೀರವಮುಣ್ಮಿ ಪೊಣ್ಮೆ ದಿಸೆಯುಂ ತಳ್ಪೊಯ್ಯೆ ಶಂಖಸ್ವನಂ ॥ ೨೦೪ ॥

ಅಂತಿಂದಗಿಯ ಮೊನೆಗೈರಾವಣಮನಣೆದು ನೂಂಕುವಿಂದ್ರನಂ ದನುಜೇಂದ್ರನ ಸಾರಥಿ ಸನ್ಮತಿ ಕಂಡಿಂತೆಂದಂ—

ಮ ॥ ನಿನಗಿಂದ್ರಂ ದೊರೆ ಸಂಗರಕ್ಕೆ ದೊರೆ ನೀನಿಂದ್ರಂಗೆ ಮತ್ತೊರ್ವರಾ ।
ತನನೇನಾಂಕೆಗೊಳಲ್ ಸಮರ್ಥರೆ ಕುಮಾರಂ ಬಾಲಕಂ ಯುದ್ಧಯೋ ॥
ಗ್ಯನೆ ಕೈಕೊಳ್ವುದು ದೇವರಿಂದಗಿಯಿನೆಂದಾಲೋಲ ಶುಂಡಾಲ ಕೇ ।
ತನವಂ ಚೋದಿಸಿದಂ ದಶಾಸ್ಯರಥಮಂ ಸೂತಂ ಮನೋವೇಗದಿಂ ॥ ೨೦೫ ॥

ಅಂತು ಮುಟ್ಟಿವಂದು ಮೂದಲಿಸಿ ತಾಗುವುದುಂ—

ಕಂ ॥ ಶರಸಂಧಾನದ ವೇಗಂ
ಪರಿಕಿಸಲರಿದೆನಿಸಿ ದಿವಿಜಪತಿಯುಂ ದಶಕಂ ॥

ಧರನುಂ ಕಾಯ್ದಿಸೆ ಪಾಯ್ದುದು
ಶರಮಯಮಾಯ್ತಖಿಲ ಭುವನಮೆನೆ ಶರನಿಕರಂ ॥ ೨೦೬ ॥

ಅಂತಚಿಂತ್ಯ ಯುದ್ಧಂಗೆಯ್ದು ದಾನವೇಂದ್ರನನಿಂದ್ರಂ ಸಾಧಾರಣಾಸ್ತ್ರದೊಳ್ ಗೆಲ್ವುದರಿದೆಂದು—

ಕಂ ॥ ಮುನಿದು ತಮದಂಬಿನಿಂದಿಂ
ದ್ರನಿಸುವುದುಂ ಬೆಳಗಿನಂಬಿನಿಂ ಗೆಲ್ದೊಡೆ ಕಂ ॥
ಡನಲಾಸ್ತ್ರದಿನಿಸೆ ದಿವಿಜಂ
ದನುಜೇಂದ್ರಂ ವಾರುಣಾಸ್ತ್ರದಿಂ ಖಂಡಿಸಿದಂ ॥ ೨೦೭ ॥

ಅಂತು ಖಂಡಿಸೆ ಮತ್ತಂ ಪಲ ತೆಱದ ದಿವ್ಯಶರಂಗಳಿಂದಿಂದ್ರನಿಸುವುದುಂ ದಶಕಂಧರನವಂ ಪ್ರತಿಶರಂಗಳಿಂದಭಿಭವಿಸೆ—

ಕಂ ॥ ದೇವರ್ ಕಾವೊಡಮಿವನಂ
ಸಾವೆಯ್ದಿಸೆನೆಂದು ಮನದೊಳೊದವಿದ ಮುಳಿಸಿಂ ॥
ರಾವಣನ ವರೂಥಕ್ಕೈ
ರಾವಣ ವಾರಣಮನಣೆದು ನೂಂಕಿದನಿಂದ್ರಂ ॥ ೨೦೮ ॥

ಅಂತು ನೂಂಕುವುದುಂ—

ಮ ॥ ನಿಜನೇತ್ರಾಧ್ವದೊಳಾಗಳಾಗಳದಟಂ ಶ್ರೀಮಾಲಿ ಸತ್ತೇವಮುಂ।
ನಿಜವಂಶ ಪ್ರಭುವಪ್ಪ ಮಾಲಿಯನಿವಂ ಮುಂಕೊಂದನೆಂಬೇವಮುಂ।
ನಿಜಕೋಪಾಗ್ನಿಗೆ ಕೊರ್ವನೀಯೆ ದೊರೆಕೊಂಡಂ ದ್ರೋಹನೆಂದೇಱಿದಂ।
ತ್ರಿಜಗದ್ಭೂಷಣ ದಂತಿಯಂ ರಿಪುಚಮೂ ವಿದ್ರಾವಣಂ ರಾವಣಂ ॥ ೨೦೯ ॥

ಅಂತಿರ್ವರುಮೋರೊರ್ವರಾನೆಯಂ ಮುಟ್ಟಿ ನೂಂಕಿ ಮಹಾಯುದ್ಧಂಗೆಯ್ವಾಗಳ್ ರಾವಣಂ ನಿಜವಾರಣದಿನಿಂದ್ರನೈರಾವಣದಮೇಲೆ ಪಾಯ್ದು ಮುಂದಣಾ ಘೋರಣನಂ ಚರಣ ಪ್ರಹಾರದಿಂ ನೆಲಕಿಕ್ಕಿ ಮಾತಂಗದಮೇಲೆ ಪಾಯ್ವ ಸಿಂಹ ದಂತಿಂದ್ರನಮೇಲೆ ಪಾಯ್ದವನಂ ಮೇಲುದಱಿ ಸೆಱಂಗಿನೊಳಡಸಿ ಕಟ್ಟ ಕೊಲ್ವ ನಲ್ಲಿನಂಜದಿರೆಂದಭಯಮನಿತ್ತು—

ಕಂ ॥ ಕರಿಯಂ ಹರಿ ಕೇಸರಿಯಂ
ಶರಭಂ ಶರಭಮನದೊಂದು ಭೇರುಂಡನಡು ॥
ರ್ತಿರದುಯ್ವ ತೆಱದೆ ನಿಜಸಿಂ
ಧುರಕ್ಕೆ ಮಗುಟ್ಟುಯ್ದನಿಂದ್ರನಂ ದನುಜೇಂದ್ರಂ ॥ ೨೧೦ ॥

ಆ ಸಮಯದೊಳಿಂದ್ರನ ಮಗನಪ್ಪ ಜಯಂತನನಿಂದ್ರಜಿತ್ಕುಮಾರಂ ಬಾಪ್ಪಲೆ ದಂದೀಯೆ ರಾವಣನಭಯ ಘೋಷಣೆಯಂ ಮಾಡಿಸಿ ಮಹಾವಿಭವದಿಂ ಬಂದು ಲಂಕೆಯಂ ಪೊಕ್ಕು ಸುಖದಿನಿರೆ—

ಕಂ ॥ ಪರಿಜನಮುಮುಪಾಯನಮುಂ
ಬೆರಸು ಸಹಸ್ರಾರನಾತ್ಮತನಯನ ಮೋಹಂ ॥
ತರೆ ತನ್ನಂ ಬಂದಂ ದಶ
ಶಿರನಲ್ಲಿಗೆ ಮುಂದುಗಾಣ್ಬನೇ ಮೋಹಾಂಧಂ ॥ ೨೧೧ ॥

ಅಂತು ಬಂದು ಲಂಕಾಪುರಮುಂ ಪುಗುವುದುಮುಚಿತ ಪ್ರತಿಪತ್ತಿಯಿಂ ಕಾಣಿಸಿಕೊಂಡು ಸಹಸ್ರಾರನಂ ನಿಜಜನಕನಿಂದಧಿಕವಾಗೆ ಮನ್ನಿಸಿ ಮಣಿಮಯಾಸನದೊಳಿರಿಸಿ ವಿನಯ ವಿನಮಿತಂ ಬೆಸನಾವುದೆನೆ ಸಹಸ್ರಾರನಿಂತೆಂದಂ—

ಕಂ ॥ ನಿನಗೆಡಱಿದಿಂದ್ರನಂ ಗೆ
ಲ್ದು ನಿನ್ನ ಭುಜಬಲದ ಮಹಿಮೆಯಂ ಬೀಱಿದೆ ಜೀ ॥
ಯೆನಿಸಾತನ ಸೆಱೆಯಂ ಬಿ
ಟ್ಟು ನಿನ್ನ ತಕ್ಕೂರ್ಮೆ ಬಣ್ಣಿಸಲ್ ಬಾರದೆನಲ್ ॥ ೨೧೨ ॥

ಎನೆ ದಶಾನನಂ ಮಹಾಪ್ರಸಾದಮಂತಿಗೆಯ್ವೆನೆಂದಿಂದ್ರನಂ ಬರಿಸಿ ನಿಷ್ಕಷಾಯಂ ನಿನ್ನ ರಾಜ್ಯದೊಳ್ ಸುಖಮಿರೆಂದು ಕಱಿಪುವುದುಂ ರಾವಣಂಗೆ ನಿಶ್ಯಲ್ಯನಾಗಿ ತನ್ನ ಪೊಬಿಲ್ಗೆವಂದು ಇಂದುವೆಂಬ ತನ್ನ ಪಿರಿಯಮಗಂಗೆ ರಾಜ್ಯಮುಂ ಕೊಟ್ಟು ತನ್ನ ಮಗನಪ್ಪ ಜಯಂತನುಂ ತನ್ನ ಲೋಕಪಾಲರುಂ ಬೆರಸು ದೀಕ್ಷೆಗೊಂಡು ಮೋಕ್ಷಕ್ಕೆ ಪೋದನಿತ್ತಲಿಂದ್ರನಂ ಗೆಲ್ದ ವಿಯಚ್ಚರೇಂದ್ರಂ ವರುಣನ ಮೇಲೆ ನಡೆಯಲೆಂದು ಸಮಸ್ತ ಸಾಮಂತರಂ ಬರಿಸಿ [1]ಹನುಮರದ್ವೀಪಕ್ಕೆ ದೂತನನಟ್ಟುವುದುಮಾತಂ ಬಂದು ಪ್ರತಿಸೂರ್ಯನುಮಂ ಪವನಂಜಯನುಮಂ ಕಂಡು ನಿಜಾಗಮನ ವೃತ್ತಾಂತಮನರಿಪುವುದುಂ ಪವನಂಜಯನಾಂಜನೇಯನಂ ಬರಿಸಿ—

ಮ॥ ಸ್ರ॥ ವರುಣಂ ಬಾಯ್ವೀಳನೆಂಬೀ ಮುನಿಸನುವಿಸೆ ಮೇಲೆತ್ತಲೆಂದೀಗಳಿಮ್ಮಂ ।
ಬರವೇೞ್ದಂ ದಾನವೇಂದ್ರಂ ತಡೆವುದು ಪದನಲ್ತೊಪ್ಪುಗೊಳ್ ರಾಜ್ಯರಕ್ಷಾ॥
ಭರಮಂ ನೀನೆಂಬುದುಂ ಮಾರುತಿ ಮುಕುಳಿತ ಹಸ್ತಾಂಬುಜಂ ವೀರಲಕ್ಷ್ಮೀ
ಪರಿರಂಭೋತ್ಸಾಹದಿಂದಾ ಬೆಸನನತಿಬಳಂ ತಂದೆಯಂ ಬೇಡಿಕೊಂಡಂ॥೨೧೩

ಅಂತು ಬೆಸನಂ ಬೇಡಿಕೊಂಡು ವಿಮಾನಾರೂಢನಸಂಖ್ಯಾತ ಬಲಸಮೇತಂ ಸಮುದ್ರಮಧ್ಯ ದ್ವೀಪಂಗಳುಮುಂ ಪೊಬಿಲ್ಲುಗಳುಮನಭೀಕ್ಷ್ಣಿಸುತ್ತುಂ ಬರ್ಪ ಸಮಯದೊಳ್ ರಾವಣಂ ಗಗನ ಮಂಡಲದೊಳಿರ್ದು ಹನುಮನ ಬರವಂ ಕಂಡು—

1. ಹನುರುಹದ್ವೀಪಕ್ಕೆ ಕ ಪ.

ಚ ॥ ಇದಿರ್ವರೆ ತಾನುಮುತ್ಸುಕತೆಯಿಂದಿದಿರ್ವಂದು ಮರುತ್ಸುತಂ ಪದ ।
ಕ್ಕೊದವಿದ ಭಕ್ತಿಯಿಂ ಮಣಿಕಿರೀಟ ಮುರೀಚಿಯಿನೀಯೆ ಪಾದ್ಯಮಂ ॥
ಪದೆಪಿನಳುರ್ಕೆಯಿಂ ತೆಗೆದು ತಟ್ಟಿಸೆ ದಾನವ ಚಕ್ರವರ್ತಿಗಾ ।
ದುದು ರಿಪುಚಕ್ರಮಂ ತವಿಪುದಿನ್ನೆನಗಾವರಿದೆಂಬ ಸಂತಸಂ ॥ ೨೧೪ ॥

ಅಂತಾತನಂ ಕಾಣಿಸಿಕೊಂಡು—

ಕಂ ॥ ಆಗಸಮುಂ ದೆಸೆಯುಂ ಭೂ
ಭಾಗಮುಮೆಡೆನೆಜೀಯದೀ ಬಲಕ್ಕೆನೆ ನಡೆದಂ ॥
ಮೇಗಿಲ್ಲದ ಬಲ್ಲಾಳ್ ರಣ
ರಾಗರಸಂ ಕದನ ಕರ್ಕಶಂ ದಶವದನಂ ॥ ೨೧೫ ॥

ಅಂತು ನಡೆದು ಪಾತಾಳಪುಂಡರೀಕಪುರಮಂ ಮೂವಳಸಾಗೆ ಸುತ್ತಿ ಮುತ್ತಿ ವರುಣನತಿಕುಪಿತನಾಗಿ ಪೊಱಮಡುವುದುಮೊಡನೆ—

ಕಂ ॥ ಒರ್ವನೆ ಜವನೆಂಬುದು ಪುಸಿ
ನೂರ್ವರ್ ಜನಿಯಿಸಿದರೆನಿಸಿ ಖಚರಕುಮಾರರ್ ॥
ದೋರ್ವಲದೃಪ್ತರ್ ಪುರಮಂ
ನೂರ್ವರ್ ಸಂಗ್ರಾಮ ಲಂಪಟರ್ ಪೊಱಮಟ್ಟರ್ ॥ ೨೧೬ ॥

ಸಿಂಗದ ಜಂಗುಳಿಯಂತಿರ
ಸುಂಗೊಳೆ ಪೊಱಮಟ್ಟು ಕಾಡೆ ವರುಣ ಕುಮಾರರ್ ॥
ಬೆಂಗೊಟ್ಟುದು ದಶಮುಖ ಚತು
ರಂಗಬಲಂ ಸಮರಮುಖದೊಳವರ್ಗಿದಿರುಂಟೀ ॥ ೨೧೭ ॥

ಅಂತು ಕಾದುತ್ತುಮಿರೆ ಹನುಮನೆಡೆವೊಕ್ಕು ತನ್ನ ಸೇನೆಯಿಂ ರಿಪುಸೇನೆಯಂ ಸುತ್ತಿಮುತ್ತಿ—

ಉ ॥ ವಾನರವಿದ್ಯೆ[1]ಯಂ ತಳೆದು ವಾನರ ರೂಪುಮನಾಂತು ವಿದ್ವಿಷ ।
ತ್ಸೇನೆಯೊಳಾನೆಯುಂ ಕುದುರೆಯುಂ ರಥಮುಂ ಪೃಥು ಗಂಡಶೈಲ ಸಂ ॥
ತಾನದಿನಿಟ್ಟು ಮೋದಿ ತರುರಾಜಿಗಳಿಂ ತವೆ ಕೊಂದನಾರ್ ಮರು ।
ತ್ಸೈನುಗೆ ಕಯ್ದುಗೆಯ್ದು ಕಡುಕೆಯ್ದು ಬರ್ಪುಂಕುವರಾಜಿರಂಗದೊಳ್ ॥೨೧೮॥

---

1. ಯುಂ ಗ.

ಅಂತು ಹನುಮನನುವರದೊಳಾಂತ ಬಲಮುಂ ಕೃತಾಂತನಂತೆ ತವಿಸಿ ರಾಜೀವ ಪುಂಡರೀಕ ಪ್ರಮುಖ ನಿಜಕುಮಾರರ್ ನೂರ್ವರುಮುಂ ಪಿಡಿದು ಕಟ್ಟುವುದುಂ ವರುಣಂ ಕಂಡತಿ ಕುಪಿತನಾಗಿ—

ಕಂ ॥ ನೆನೆಯದೆ ಕಲುಷವಶಂ ನ
ಚ್ಚಿನ ವಿದ್ಯೆಗಳಂ ಕಡಂಗಿ ಕಾದುವ ಪದದೊಳ್ ॥
ದನುಜೇಂದ್ರಂ ಪಿಡಿದಂ ವರು
ಣನನಾವಂ ರಾವಣಂಗೆ ಕೂರ್ಪಂ ತೋರ್ಪಂ ॥ ೬೧೯ ॥

ಅಂತಾತನಂ ಪಿಡಿದು ಕುಂಭಕರ್ಣಂಗೆ ಸೆಜ್ಜೆಯನೊಪ್ಪಿಸಿ ಭುವನೋನ್ಮಾದ ಮೆಂಬುದ್ಯಾನವನದೊಳ್ ಬೀಡಂಬಿಟ್ಟೊಲಗಂಗೊಟ್ಟಿರ್ದು ವರುಣನಂ ಬರಿಸಿ—

ಕಂ ॥ ಕಲಿ ನಾವಂ ಪಿಡಿವಡೆವಂ
ಕಲಹದೊಳಿದು ಭಂಗಮಲ್ತು ನೀಂ ಮುನ್ನಿನವೋಲ್ ॥
ನೆಲಸಿರ್ಪುದು ನಿಜರಾಜ್ಯದೊ
ಳೊಲವಿಂದೆಂದೊಸೆದು ವರುಣನಂ ಮನ್ನಿಸಿದಂ ॥ ೬೨೦ ॥

ಅಂತು ಮನ್ನಿಸಿ ಕರಗ್ರಹಣಂಗೆಯ್ದು ಕಾರುಣ್ಯಮನಜಸ್ರಪುವುದುಂ ವರುಣಂ ಹನುಮನ ಸೆರಗಿಲ್ಲದ ಬಲ್ಲಾಳ್ತನಮಂ ಪೊಗಟ್ಟು ಸತ್ಯವತಿಯೆಂಬ ತನ್ನ ಮಗಳಂ ರಾವಣಂಗೆ ಮಹಾವಿಭವದಿನಿತ್ತು ತನ್ನ ಪೊಬಲ್ಗೆವೋದನಿತ್ತ ರಾವಣಂ ಲಂಕೆಗೆ ವಂದು ಚಂದ್ರನಖಿಯ ಮಗಳಪ್ಪನಂಗಪುಷ್ಪೆಯಂ ಶ್ರೀಶೈಲಂಗೆ ಪರಿಣಯನೋತ್ಸವದಿನಿತ್ತು ಕರ್ಣಕುಂಡಲಪುರಮನಾತಂಗೆ ರಾಜ್ಯಾಭಿಷೇಕಂಗೆಯ್ದು ಕುಡುವುದು ಮಲ್ಲಿಯೆ ಸಹಸ್ರಾಂತಃಪುರ ಪುರಂಧ್ರಿಯರ್ಗೆ ವಲ್ಲಭನಾಗಿ ಸುಗ್ರೀವಂಗಂ ಸುತಾರೆಗಂ ಪುಟ್ಟಿದ ಪದ್ಮರಾಗೆಯಂ ಮದುವೆಸಿಂದು ಸುಖದಿನಿರ್ದನಿತ್ತಲ್—

ಕಂ ॥ ಭರತ ತ್ರಿಖಂಡಮಂ ದಶ
ಶಿರನಾಳ್ವಂ ಚಕ್ರರತ್ನಮುಸಿರತ್ನಂಗಳ್ ॥
ದೊರೆಕೊಂಡುವಖಿಳ ವಿದ್ಯಾ
ಧರ ವಲ್ಲಭರೆಲ್ಲರುಂ ಪದಾನತರಾದರ್ ॥ ೬೨೧ ॥

ಶಾ ॥ ಆ ಕ್ರೋಧೋದ್ಧತನಪ್ಪ ರಾವಣನೊಳಾವಂ ಕಾದುವಂ ಯುದ್ಧದೊಳ್ ।
ಶಕ್ರಂಗಂ ತ್ರಿಜಗದ್ವಿಭೂಷಣ ಗಜಂ ಕೊಂದಿಕ್ಕಲೇಂ ಸಾಲದೇ ॥
ಚಕ್ರಕ್ಕಂ ಪರಚಕ್ರಮುಂಟೆ ಸಕಲೋರ್ವೀಚಕ್ರದೊಳ್ ವಿದ್ವಿಷ ।
ಚ್ಚಕ್ರಂ ತೋರ್ಕುಮೆ ಚಂದ್ರಹಾಸದಿದಿರೊಳ್ ಸೂಜ್ಞಾಂತು ವಿಕ್ರಾಂತಮುಂ ॥ ೬೨೨ ॥

ಮ ॥ ನಿಖಿಲ ಕ್ಷತ್ರಕುಲಂ ವಿಯಚ್ಚರ ಕುಲಂ ಸಂಗ್ರಾಮ ಕೇಳೀ ಪರಾ ।
ಜ್ಮಾಖವಾತ್ಮಪ್ರತಿಬಿಂಬದಂತೆ ಬಬಿಸಂದಾಜ್ಞಾವಿಧೇಯಂ ಗುಹಾ ॥
ಮುಖದಂತೆಂದುದನೆನ್ನದಂದು ನವರಕ್ತಾಸಕ್ತ ನಕ್ತಂಚರೀ ।
ಮುಖದೊಳ್ ಕೂಂಕುವುದಾಂತರಂ ದಶಮುಖೋತ್ಪಾತಾಸಿ ಧಾರಾ ಮುಖಂ
॥ ೨೨೩ ॥

ಮ ॥ ತ್ರಿಜಗದ್ಭೂಷಣ ನಾಮ ಸಾಮಜನನೇಂ ಮಾಱಾಂಪುವೇ ವಿಕ್ಕ ಸಾ ।
ಮಜಮಾ ಯಕ್ಷಸಹಸ್ರ ರಕ್ಷಿತಮನುದ್ಯಚ್ಚಕ್ರಮಂ ಚಂದ್ರಹಾ ॥
ಸ ಜಯೋಗ್ರಾಸಿಯನಾಂಪ ಕೈದುವೊಳವೇ ಕೈಲಾಸಮಂ ಕಿಟ್ಟಿ ತ ।
ದ್ಭುಜಮಂ ಭೂಚರ ಖೇಚರರ್ಕಳ ಭುಜಂಗಳ್ ಪಿಂಗದೇನಾಂಪುವೇ ॥೨೨೪॥

ಮದಮಂ ಭದ್ರಗಜಕ್ಕೆ ರಾಜವೆಸರಂ ಚಂದ್ರಂಗೆ ತೀವ್ರ ಪ್ರತಾ ।
ಪದ ಪೆರ್ಚಂ ತಪನಂಗೆ ತೇಜದೊದವಂ ಸಪ್ತಾರ್ಚಿಗತ್ಯುಗ್ರ ಖ ॥
ಡ್ಡದಗುರ್ವಂ ಗಹನಕ್ಕೆಯುನ್ನತಿಯನೇಟುಂ ಗೋತ್ರ ಭೂಭೃತ್ಕುಲ ।
ಕ್ಕದಟಂ ಸೈರಿಸುವಂ ಪೆಱಂಗೆ ಪೆಜತೇಂ ಲಂಕೇಶ್ವರಂ ಸೈರಿಸಂ ॥ ೨೨೫ ॥

ಕದನ ಕ್ಷೋಣಿಯೊಳೋಡಿದರ್ ಮಡಿದರೆಂಬೀ ವಾರ್ತೆಯಂ ಕಂಡರೆಂ ।
ದುದನೇಗೊಂಡರಿಳೀಶರೆಂಬ ನುಡಿಯಂ ಭೂಭಾಗದೊಳ್ ಕೇಳಲಾ ॥
ದುದು ಗೆಲ್ಪರ್ ಸರಿಗಾದಿದರ್ ಪಗೆವರೆಂಬೀ ವಾರ್ತೆಯಂ ಕೇಳಲಾ ।
ಗದವಂ ವರ್ತಿಸಿದಿಂಬಬಿಕ್ಕೆನೆ ಜಗದ್ವಿದ್ರಾವಣಂ ರಾವಣಂ ॥ ೨೨೬ ॥

ಕಂ ॥ ಆಯುಧವೆನಿತೊಳವವು ದಿ
ವ್ಯಾಯುಧಮವನಳವದಾರ ಕೈಯಳವಾತಂ ॥
ಕಾಯಲ್ ಬರ್ದುಂಕುವರ್ ಕಯ್
ಗಾಯದೊಡಾವಂಗಮೇಂ ನಿಲಲ್ಬಂದಪುದೇ ॥ ೨೨೭ ॥

ಭೀಷಣ ಬಲರಸುಹೃದ್ಬಲ
ಶೋಷಣದಕ್ಷರ್ ನೃಪಾಲ ಶರಣಾಗತ ಸಂ ॥
ತೋಷಕರ ಕುಂಭಕರ್ಣ ವಿ
ಭೀಷಣರೆಂಬರ್ ದಶಾಸ್ಯನೊಡವುಟ್ಟಿದವರ್ ॥ ೨೨೮ ॥

ಉ ॥ ಕಾಲಮನಾಸೆಗೆಯ್ವ ನಿದಿರಿಕ್ಕುವನೆಮ್ಮೊಳಗಾವನೆಂದವರ್ ।
ಕಾಲನನೇಳಿದಂ ಬಗೆವರೀ ನೆಲನಂ ವಿಜಿಗೀಷು ವೃತ್ತಿಯಿಂ ॥

1· ಜಾದಂಡಂಗಳೀ. ಚ.

ಪಾಲಿಸುವರ್ ಸುರಾಸುರ ವಿಯಚ್ಚರ ಸೇನೆಯೊಳಾರ್ಗಮಾಜಿಯೊಳ್ ।
ಸೋಲದ ಮೇಘವಾಹನನುಮಿಂದಗಿಯುಂ ದನುಜೇಂದ್ರ ನಂದನರ್ ॥೨೨೯॥

ಕಂ ॥ ಅವನ ವಿಯಚ್ಚರ ಸೇನೆಯ
ಪವಣನದೇವೇಟ್ಟಿ ಕಯ್ಯುಗೆಯ್ಯದೊಡಮದಂ ॥
ತವೆ ಕೊಲ್ವುದರಿದು ದನುಜನ
ಬವರಂ ಕೈಸಾರೆಯಲ್ತು ಗೆಲ್ಲದ ಬವರಂ ॥ ೨೩೦ ॥

ಬಲದ ಭುಜಬಲದ ವಿದ್ಯಾ
ಬಲದ ಮನೋಬಲದ ಬಲ್ಪಿನಿಂ ನೃಪರಾರ್ಗಂ ॥
ಗೆಲಲರಿಯಂ ದಶಕಂಧರ
ನಲಂಘ್ಯ ವಿಕ್ರಾಂತ ತುಂಗನಮರೇಂದ್ರಂಗಂ ॥ ೨೩೧ ॥

ಎಂಬುದುಂ ಲಕ್ಷ್ಮಣಂ ಮುಳಿಸುವೆರಸಿದ ಮುಗುಳ್ನಗೆ ಪಸರಿಸೆ ಪರಿಹಾಸ ವಚೋವಿಳಾಸದಿನಿಂತೆಂದಂ---

ಮ ॥ ಅದಟಂ ರಾವಣನೆಂಬುದಂ ನುಡಿದು ತೋಱಲ್ವೇಟ್ಟುದೇ ಕಾದಲ ।
ಣ್ಮಾದೆ ಕಳ್ದುಯ್ದುದೆ ಪೇಟ್ಗುಮಂಬಿಕೆಯನಾತಂ ಭೀತನಿಕ್ಷ್ವಾಕು ವಂ ॥
ಶದರಂ ಗೆಲ್ಗುಮೆ ರಾಮರಾವಣರ ಬಲ್ಪಂ ಮೆಲ್ಪುಮಂ ಕಾಣಲ ।
ಪ್ಪುದು ಥಟ್ಟೊತ್ತಿಱಿವಲ್ಲಿ ದಿಟ್ಟದೊಲೆಯಿಂ ತೂಗಿಂ ರಣಕ್ಷ್ಮೋಣಿಯೊಳ್
[॥ ೨೩೨ ॥

ಚ ॥ ನಡೆವುದಿಳೀಶನೊಳ್ ತೊಡರದನ್ನೆಗಮಾತನ ಗಂಡಗರ್ವಮಿ ।
ನ್ನಡೆಗುಮೆ ರಾಮನಂಬು ನೆಱನಂ ನಡೆ ಕಾಲ್ನಡೆಗೆಟ್ಟು ನಿಲ್ಗುಮಾ ॥
ನುಡಿ ತಡಮಲ್ತು ನಾಳೆಯೆ ರಣಾಂಗಣದೊಳ್ ನಡೆ ನೋಡುವಿರ್ ಮರು ।
ಳ್ಪಡೆಯೊಡಗೂಡೆ ತಾಂಡವಮನಾಡುವ ರಾವಣನಟ್ಟಿಯಾಟಮಂ ॥ ೨೩೩ ॥

ಕಂ ॥ ದನುಜೇಂದ್ರನಲ್ಪ ವೀರ್ಯಂ
ಮನುಜೇಂದ್ರನನಂತ ವೀರ್ಯನಣ್ಣಂಗಾವ ॥
ಣ್ಣನುಮಿದಿರೆ ಕರಿಗಳಂ ಗೆ
ಲ್ದನಿತಱಿಯೊಳಿಭವೈರಿ ಶರಭಮಂ ಗೆಲ್ಪುದೇ ॥ ೨೩೪ ॥

ಕಟ್ಟಲೆ ಪಿರಿದಾದೊಡಮೇಂ
ಮಾರ್ತಲೆಯೆ ದಿನಾಧಿಪಂಗೆ ಪಿರಿದಾದೊಡಮೇ ॥
ನಾರ್ತಪುದೆ ವೈರಿ ಸೈನ್ಯಮ
ಡುರ್ತಿಱಿಯಲಜೇಯ ಬಾಹುಬಲನಂ ಬಲನಂ ॥ ೨೩೫ ॥

ಚ ॥ ಹಿತ ಮಿತ ವಾಕ್ಯನಸ್ಖಲಿತ ಧೈರ್ಯಗುಣಂ ಗುಣರತ್ನ ರೋಹಣ ।
ಕ್ಷಿತಿಧರನತ್ಯುದಾತ್ತ ಮಹಿಮಂ ಶರಣಾಗತ ವಜ್ರಪಂಜರಂ ॥
ನತ ನರಪಾಲ ಮೌಳಿ ಹರಿನೀಳಮಣಿ ಪ್ರಚಯ ದ್ವಿರೇಫ ಚುಂ ।
ಬಿತ ಚರಣಾರವಿಂದನವದಾತ ಯಶಂ ಕವಿತಾಮನೋಹರಂ ॥ ॥ ೨೩೬ ॥

ಇದು ಪರಮ ಜಿನಸಮಯ ಕುಮುದಿನೀಶರಚ್ಚಂದ್ರ ಬಾಲಚಂದ್ರ
ಮುನೀಂದ್ರ ಚರಣನಖ ಕಿರಣ ಚಂದ್ರಿಕಾ ಚಕೋರ ಭಾರತೀ
ಕರ್ಣಪೂರ ಶ್ರೀಮದಭಿನವಪಂಪ ವಿರಚಿತಮಪ್ಪ
ರಾಮಚಂದ್ರ ಚರಿತ ಪುರಾಣದೊಳ್
ದಶವದನ ವಂಶವರ್ಣನಂ
ದಶಮಾಶ್ವಾಸಂ.

ಕಂ ॥ ಶ್ರೀವಧುಗೆ ಪೇರುರಂ ಜ
ನ್ಮಾವಾಸಂ ಕೀರ್ತಿವಧುಗೆ ಕೇಳೀಗೃಹಮಾ ॥
ಶಾವಲಯಮೆನೆ ಸಮಸ್ತ ಕ
ಲಾ ವಿಭವಮನಪ್ಪುಕೆಯ್ದುನಭಿನವಪಂಪಂ ॥ ॥ ೧ ॥

ಎಂಬುದುಂ ಜಾಂಬವತ್ಪ್ರಮುಖ ಪ್ರಧಾನರಿಂತೆಂದರ್—

ಚ ॥ ಎಮಗಧಿರಾಜನಾಗಿ ಖಚರೋರ್ವಿಗೆ ವಲ್ಲಭನಾಗಿ ಖೇಚರ ।
ಪ್ರಮದೆಯರಿಂ ಮನಂಗೊಳಿಸಿ ರಾಜ್ಯವಿಲಾಸಮನಪ್ಪುಕೆಯ್ದನಂ ॥
ಕ್ರಮದೊಳಿ ದಂಡವೊಂದುಱೆಯೆ ಭೇದಿಸಿ ತರ್ಪುದು ದೇವಿಯಂ ಪರಾ ।
ಕ್ರಮದೆಡೆಯಲ್ತು ಪೊಲ್ಲದು ದುರಾಗ್ರಹಮಾತನೊಳಾಗ ವಿಗ್ರಹಂ ॥ ೨ ॥

ಅವರಿವರೆನ್ನದಾವ ನೃಪನಂದನರುಂ ದನುಜಂಗೆ ಭೀತಿಯಿಂ ।
ದವನತರಪ್ಪರಲ್ಲದೊಸೆದಾಳ್ವಿಸದಿಂ ನಡೆವನ್ನರಿಲ್ಲನಾ ॥
ಮವರನುಪಾಯದಿಂ ನಮಗೆ ಬೆಂಬಲಮಾಗಿರೆ ಮಾಡಿ ಕೂಡಿಕೊಂ ।
ಡವನೊಡನೆತ್ತಿ ಕಾದುವುದು ಕಾಲ ವಿಲಂಬನಮಾಗಲಾಗದೇ ॥ ೩ ॥

ಎಂಬುದುಂ ರಘುವೀರಸಿಂತೆಂದಂ—

ಕಂ ॥ ಆತಂಗೆ ನೆಜೀಯಲಾಜದ
ಭೀತರ ನೆರಮೇವುದೆನಗೆ ಮೊನೆಯೊಳ್ ದನುಜಂ ॥
ಗಾತಂಕಮನೊಡರಿಸಲನು
ಜಾತ ಭುಜೋತ್ಪಾತ ಖಡ್ಗವಿದೆ ನೆರಮಲ್ತೇ ॥ ೪ ॥

ಚ ॥ ಅಸದನುಶಾಸನಂ ರಘುಕುಲಕ್ಕೆ ಕುಲವ್ರತಮನ್ಯ ಕಾಂತೆಗಾ ।
ಟಿಸಿದ ದುರಾತ್ಮನಂ ರಣದೊಳಣ್ಮಿದನಪ್ಪೊಡಮೋಘ ಬಾಣದಿಂ ॥
ದೆಸೆವಲಿಗೆಯ್ವೆನಳ್ಕಿ ರಣಕೇಳಿಗೆ ಜಾನಕಿಯಂ ದಶಾಸ್ಯನೊ ।
ಪ್ಪಿಸಿದೊಡೆ ಕಾವೆನಿಲ್ಲಿ ನಿಮಗಂ ನಮಗಂ ಪದನಲ್ತು ಮಂತಣಂ ॥ ॥ ೫ ॥

ಎಂಬುದುಂ ಜಾಂಬೂನದಂ ತನ್ನೊಳಿಂತೆಂದಂ—

ಕಂ ॥ ತೃಣಪುರುಷನಾಗಿ ಕಲ್ಪಿಸಿ
ರಣ ರಭಸಮನಪ್ಪುಕೆಯ್ದಪಂ ಬಗೆಯದೆ ರಾ ॥
ವಣನುಮನಿನ್ನುಂ ಮುನ್ನುಂ
ಗಣನಾತೀತ ಪ್ರತಾಪನೀ ರಘುರಾಮಂ ॥ ೬ ॥

ಮ ॥ ಸೆರಗಂ ಪಾರದುದಾತ್ತರಾಘವನ ಮಾತಂ ಕೇಳ್ದು ಜಾಂಬೂನದಂ।
ಪಿರಿದುಂ ವಿಸ್ಮಯಮುತ್ತು ಕಾದಿ ರಣದೊಳ್ ಪೌಲಸ್ತ್ಯನಂ ಗೆಲ್ದ ದು ॥
ರ್ಧರ ಬಾಹಾಬಲಮಂ ಪರೀಕ್ಷಿಸುವೆನೆಂಬೀ ಜಿತ್ತದಿಂ ಪೇಟಿಲಾ।
ತುರನಾದಂ ದನುಜಂಗೆ ದಿವ್ಯಮುನಿಗಳ್ ಮುಂ ಪೇಳ್ದಿ ವೃತ್ತಾಂತಮಂ॥ ೭ ॥

ಅಂತು ಬಗೆದು ರಘುವೀರನ ಮುಖಾರವಿಂದಮಂ ನೋಡಿ ಜಾಂಬೂನದಂ ಮುಕುಲಿತ ಕರಕಮಲನಿಂತೆಂದಂ ದೇವ ಮುನ್ನಮೊರ್ವೆ ದಶಗ್ರೀವನನಂತವೀರ್ಯ ಕೇವಲಿಗಳ ಚರಣೋಪಾಂತದೊಳ್ ಧರ್ಮಮಂ ಕೇಳ್ದು ತದನಂತರಮೆನಗೆ ಪೆಜ್ಜರ ಕೈಯೊಳ್ ಮರಣಮಕ್ಕುಮಾಗದೆಂಬುದಂ ಬೆಸಸಿಮೆನೆ ನಿನಗೆ ಸಿದ್ಧಶೈಲಮನೆತ್ತಿದನ ಕೈಯೊಳ್ ಮರಣಮಕ್ಕುಮೆನೆ ಸಿದ್ಧ ನಗಮನುದ್ಧರಿಸುವ ಮಹಾಸತ್ವನಾವನುಮಿಲ್ಲ ದುದಜ್ಞಾನಿನಗೆ ಮರಣಮಿಲ್ಲೆಂದು ಹರ್ಷಿತಚಿತ್ತನಾದನೆಂಬುದುಂ ಲಕ್ಷ್ಮಣದೇವ ನಿಂತೆಂದಂ—

ಕಂ ॥ ಕುಲನಗಮಂ ನೆಗಪುವ ದೋ
ರ್ಬಲಕ್ಕೆ ನಿರ್ವಾಣಶೈಲಮೇ ಗಹನಮದಂ ॥
ಚಲಿಯಿಸುವೆನಚಲ ವಚನಂ
ಪಲಾಲಮನ್ಪರ್ಥನಾಮಮಲ್ತೆಂಬಿನೆಗಂ ॥ ೮ ॥

ಎಂಬುದುಮಾ ಮಾತಂ ಮನದೇಗೊಂಡು ಜಾಂಬೂನದನುಂ ವಿಮಲಬುದ್ಧಿ ಸುಗ್ರೀವ ನಳ ನೀಲಾರ್ಕಮಾಲಿಗಳಂ ರಹಸ್ಯದಿಂ ರಾಮಲಕ್ಷ್ಮಣರಂ ವಿಮಾನಮ ನೇಱಿಸಿಕೊಂಡು ವಿಯನ್ಮಾರ್ಗದೊಳೆ ಪೋಗಿ ನಿರ್ವಾಣನಗಮನೆಯ್ದಿ ಬಲವಂ ದರ್ಚಿಸೆ ತದನಂತರಂ ಸೌಮಿತ್ರಿ ಸಿದ್ಧಗುಣ ಸ್ತವನಂ ಮಾಡಿ—

ಮ ॥ ಪದ ಘಾತಕ್ಕೆ ಧರಿತ್ರಿ ಬಾಯ್ವಿಡೆ ಭುಜಾದಂಡಂಗಳಂ ಸಾರ್ಚಿ ಬಿ।
ರ್ಚಿದಿಳಾಸಂಧಿಗೆ ಮೆಯ್ಯೊಣರ್ಚಿ ನೆಲೆಯಿಂದಕ್ಕೊಣ ಸತ್ವಂ ತಳ ॥
ರ್ಚಿ ದಶಗ್ರೀವನ ಕಂಠಕಂದಳದ ಬೇರಂ ಕೀಚ್ಚಿವೋಲ್ ಕಿತ್ತಿನೆ।
ತ್ತಿದನೊಟ್ಟೈಸಿದರಿನ್ನರಾರೆನಲುಪೇಂದ್ರಂ ಸಿದ್ಧ ಕೈಲೇಂದ್ರಮಂ ॥ ೯ ॥

ಉ ॥ ಆ ಕುತ್ಕೀಲಮನೊಂದೆ ದಕ್ಷಿಣಭುಜಂ ಪೊತ್ತೆತ್ತೆ ಬಾಹಾಬಲ।
ಕ್ಕೇಕಚ್ಛತ್ರಮದಾಯ್ತು ತತ್ಸಮಯದೊಳ್ ದೇವಾನಕ ಧ್ವಾನಮಾ ॥

ಶಾ ಕುಂಭೋದರ ವರ್ತಿಯಾಯ್ತು ಸುಮನೋವರ್ಷಂ ನದದ್ಭೃಂಗಮಾ ।
ಳಾಕೀರ್ಣಂ ಪೊಸತಾಯ್ತು ಸಾಹಸಧನಂ ಸೌಮಿತ್ರಿ ಸಾಮಾನ್ಯನೇ ॥ ೧೦ ॥

ಅಂತು ಸಿದ್ಧನಗಮನನುದ್ಧರಿಸುವುದುಂ—

ಕಂ ॥ ಗಿರಿ ನಿರ್ಝರ ಪ್ರವಾಹಂ
ಸುರಿದುದು ಭರತತ್ರಿಖಂಡ ರಾಜ್ಯಾಭಿಷವಂ ॥
ದೊರೆಕೊಂಡಪ್ಪುದು ದಶಕಂ
ಧರ ವಧೆಯಿಂದೆಂದು ಮುಂದೆ ತೋರ್ಪಂತಾಗಳ್ ॥ ೧೧ ॥

ಹರಿಯ ಭುಜದಳವನೀಕ್ಷಿಪ
ಸುರ ಸಮಿತಿಗೆ ಬೆಳಗಿದಂತೆ ಕೈದೀವಿಗೆಯಂ ॥
ಗಿರಿಗುಹೆಯಿಂ ಫಣಮಣಿ ಭಾ
ಸುರಂಗಳತಿ ಭಯದಿನುದ್ಪವೊಗೆದುವು ಫಣಿಗಳ್ ॥ ೧೨ ॥

ಪೂಮಟಿಯಂತಲ್ಲೊಕ್ಕುವು
ಪೂಮರಗಳ ಪೂಗಳಚಲಮೇಖಲೆಯಿಂದಾ ॥
ಪೂಮಟಿಯ ಮೊಟಿಗಿನಂತೆ ಗು
ಹಾ ಮುಖದಿಂದುಣ್ಮಿದತ್ತು ಸಿಂಹ ನಿನಾದಂ ॥ ೧೩ ॥

ಆ ಸಮಯದೊಳ್—

ಕಂ ॥ ಸುರ ಕುಸುಮವೃಷ್ಟಿ ಸುರ ತೂ
ರ್ಯ ರವಂ ಸುರ ಜಯಜಯ ಸ್ವನಂ ಕೈಮಿಗೆ ವಾ ॥
ನರಚಿಹ್ನ ಪ್ರಮುಖ ವಿಯ
ಚ್ಚರ ಪತಿಗಳ್ ತಮ್ಮ ಮನದೊಳಚ್ಚರಿವಟ್ಟರ್ ॥ ೧೪ ॥

ಅಂತವರತಿ ವಿಸ್ಮಯಂಬಟ್ಟು ರಾಮಲಕ್ಷ್ಮಣರಂ ಪೂಜಿಸಿ ಪೊಡೆವಟ್ಟು ಭರತ ತ್ರಿಖಂಡ ಮಂಡಲಮಂ ಬಲಗೊಂಡು ವೃಷಭಾದಿ ತೀರ್ಥವಂದನಾನಂದಮಂ ಮನ ದೇಗೊಂಡು ಮಗುಟಿ ಬಂದಾರಾತ್ರಿಯೊಳ್ ಕಿಷ್ಕಿಂಧಪುರಮಂ ಪೊಕ್ಕು ವಿಶ್ರಮಿಸಿ ಮಜುದೆವಸಂ—

ಕಂ ॥ ಅಮರರ್ ಪೂಜಿಸಿದ ಮಹ
ತ್ತ್ವಮುಮಂ ಲಕ್ಷ್ಮಣನ ಸಿದ್ಧ ಶೈಲೇಂದ್ರಮನ ॥
ಶ್ರಮದಿಂದೆತ್ತಿದ ಭುಜವೀ
ರ್ಯಮುಮಂ ಪೊಗಟಿತ್ತುಮಿರ್ಪಿನಂ ಕೆಲರೆಂದರ್ ॥ ೧೫ ॥

ಆ ರಾವಣನುಂ ಮುನ್ನಂ
ತಾರಾದ್ರಿಯನೆತ್ತಿದಿರ್ದನೇ ಭುಜಬಲದಿಂ ॥
ದಾರಧಿಕರೆಂಬುದಂ ಸಮ
ರಾರಂಭದೊಳಲ್ಲದಱಿಯಲೇಂ ಬಂದಪುದೇ ॥ ೧೬ ॥

ಎಂಬುದುಂ—

ಕಂ ॥ ರಾವಣನಗಮುಂ ವಿದ್ಯಾ
ದೇವತೆಗಳ ಬಲದಿನೆತ್ತಿದಂ ಭುಜಬಲದಿಂ ।
ದಾವನುಮೆತ್ತಿದನಿಲ್ಲೀ
ಭೂವಲ್ಲಭನಂದದಿಂದಮೆಂದರ್ ಕೆಲಬರ್ ॥ ೧೭ ॥

ಕೆಲರೀತಂ ರಾವಣನಂ
ಕಲಹದೊಳುಜಿದಿಕ್ಕಿ ಭರತ ಮಂಡಲಮುಂ ದೋ ॥
ರ್ಬಲದಿಂದಮಾಳ್ವನೆಂದರ್
ಕೆಲರಾವಂ ರಾವಣಂಗಿದಿರ್ಚುವನೆಂದರ್ ॥ ೧೮ ॥

ಅಂತವರೋರೊರ್ವರೊಂದೊಂದಂ ನುಡಿಯುತ್ತುಮೊಡನೆ ವರೆ ಸುಗ್ರೀವಾದಿಗಳ್ ಬಂದು ಪೊಡೆವಟ್ಟು ಕುಳ್ಳಿರ್ದುದುಂ ಪದ್ಮದೇವನವರ ಮುಖಪದ್ಮಮಂ ನೋಡಿ—

ಕಂ ॥ ಎಡೆಯಱಿಯದಿನ್ನೆವರೆಗಂ
ತಡೆದನ್ನೆಯನೊಂದೆ ಸಾಲದೇ ಜಾನಕಿಯಿ ॥
ರ್ದೆಡೆಯಱಿದು ಲಂಕೆಗೆತ್ತಿ ಪೆ
ತಡೆಯೆ ಪರಾಕ್ರಮದ ಪೆರ್ಮೆ ಪಱಿಗೆಡೆಯಕ್ಕುಂ ॥ ೧೯ ॥

ಎನೆ ಜಾಂಬವನಿಂತೆಂದಂ—

ಕಂ ॥ ನಯಮುಂ ತಮಗಱಿಪಿದೊಡ
ನ್ನೆಯಮುಂ ಬಿಡದನ್ನರಿಲ್ಲ ರಾಗಾದಿಗಳೀಂ ॥
ನಿಯತಂಗಳೆ ಕನ್ನಡಿಯಂ
ಪ್ರಯತ್ನದಿಂ ಬೆಳಗೆ ಪತ್ತುವಿಡದೆ ಕಲುಂಬಂ ॥ ೨೦ ॥

ಅತಿವರ್ತಿಗಳ್ಕಿ ದಾನವ
ಪತಿಗಱಿಪುವರಿಲ್ಲ ತಕ್ಕುದಂ ಪರಿಜನದೊಳ್ ॥

ಹಿತನಂಜದೆ ಪೇಟ್ದು ಸುಭಾ
ಷಿತಮಂ ಕೈಕೊಳಿಸುಗುಂ ವಿಭೀಷಣನೆ ವಲಂ ॥ ೨೧ ॥

ಹರಿಣಿ ॥ ದನುಜನನುಜಂ ಶುದ್ಧಾಚಾರಂ ವಿಚಾರಪರಂ ಪರಾಂ !
ಗನೆಯನವಸೀನಾಥಂ ತಾಂಗಲ್ಕೆ ತಕ್ಕುದೆ ತಕ್ಕುದಂ ॥
ನೆನೆದು ಕಱಿಪೆಂದೊಪ್ಪಂ ಪೇಟ್ದಣ್ಣನಂ ಜಡಿದಟ್ಟುಗುಂ ।
ಜನಕಸುತೆಯಂ ವಿಾಜಿಂ ದೈತ್ಯಂ ವಿಭೀಷಣನೆಂದುದಂ ॥ ೨೨ ॥

ಉ ॥ ಅಟ್ಟಲೆವೇಱ್ಪುದೊರ್ಮೆಗೆ ವಿಭೀಷಣನಲ್ಲಿಗೆ ನಮ್ಮನಣ್ಪಿನ ।
ಟ್ಟಟ್ಟಿಯ ಮಾತನಟ್ಟಿದೊಡೆ ದೇವಿಯನಾತನ ಮಾತುಗೇಳ್ದು ಬಿ ॥
ಟ್ಟಟ್ಟುಗುಮುರ್ಕಿ ಸೊರ್ಕಿ ದಶಕಂಠನುದಂಚಿತ ಕಂಠನಾಗಿ ಬಿ ।
ಟ್ಟಟ್ಟದೆ ಬೆಟ್ಟವೆಟ್ಟನುಸಿರ್ದಟ್ಟಿದೊಡಿರ್ದಪುದಲ್ತೆ ಕಾಳೆಗಂ ॥ ೨೩ ॥

ಕಂ ॥ ದೂತನನಟ್ಟುವುದೆಂತುಂ
ನೀತಿಯೆ ನಿಜ ಕುಶಲವಾರ್ತೆಗೇಳದೊಡಕ್ಕುಂ ॥
ಸೀತಾದೇವಿಗೆ ಮರಣಮ
ದೇ ತೊದಳತಿದುಃಖ ವೇಗದಿಂದಾಗದುದೇಂ ॥ ೨೪ ॥

ಎಂಬುದುಮಾ ನುಡಿಗೆ ಮಹೋದಧಿಯಿಂತೆಂದಂ—

ಕಂ ॥ ಮಾರುತ ದಿನಕರ ಕರ ಸಂ
ಚಾರಕ್ಕಮಗಮ್ಯಮೆಂಬಿನಂ ವಿದ್ಯಾಪ್ರಾ ॥
ಕಾರಮನೀಗಳೊಡರ್ಚಿದ
ನಾ ರಾಕ್ಷಸಪತಿಯ ಪುರಮನಾವಂ ಪುಗುವಂ ॥ ೨೫ ॥

ಅದಱಿನೀಗಳಿಲ್ಲಿರ್ದ ವಿದ್ಯಾಧರರೊಳೊರ್ವರುಂ ಲಂಕೆಗೆ ಪೋಗಲುಂ ಪೋಗಿ ಕಾರ್ಯಮಂ ತೀರ್ಚಿ ಬರಲುಂ ಸಮರ್ಥರಿಲ್ಲಪ್ಪೊರ್ವನತ್ತಲಿರ್ದಪನಜೇಯ ಬಲನಾಂಜನೇಯನದೆಂತೆನೆ—

ಮ ॥ ದನುಜಂ ಮನ್ನಿಸುವಂ ವಿಭೀಷಣನುಮಾತಂಗೊಳ್ಳಿದಂ ಲಂಕೆಯಂ ।
ಘನ ಬಾಹಾಬಲದಿಂ ವಿಭೇದಿಸಿ ಪುಗಲ್ ಸಾಮರ್ಥ್ಯಮುಂಟಂಜನಾ ॥
ತನಯಂಗಾತನೆ ದೇವಿಯಂ ಬಿಡಿಸಿ ತರ್ಕುಂ ಕಾದಿ ತರ್ಕುಂ ದಶಾ ।
ನನನೊಟ್ಟೈಸಿದನಪ್ಪೊಡೀ ಕೆಲಸಮಾತಂಗಲ್ಲದೇಂ ಸಾಧ್ಯಮೇ ॥ ೨೬ ॥

ಎಂಬುದುಮಾ ನುಡಿಗೆ ಸಂತೋಷಂಬಟ್ಟು ಮಹೋದಧಿಗೆ ಮೆಚ್ಚುಗೊಟ್ಟು ಸುಗ್ರೀವಂ ಗೃಹಭೂತಿಯೆಂಬ ದೂತನಂ ಹನುಮನಲ್ಲಿಗಟ್ಟುವುದುಮಾತಂ ಗಗನ ಮಾರ್ಗದಿಂ ಪೋಗಿ ಹನುಮರ ದ್ವೀಪಮನೆಯ್ದಿ—

ಕಂ ॥ ನಭದಿಂದಮಿಟ್ಟಿದವಂ ರಾ
ಜ ಭವನಮಂ ಪೊಕ್ಕು ಪವನ ಸುತ ಪಾದ ನಖ ॥
ಪ್ರಭೆ ಪಸರಿಸಿ ತನಗೆ ಶಿರೋ
ವಿಭೂಷಣ ಶ್ರೀಯನೀಯೆ ವಿನಮಿತನಾದಂ ॥ ೨೭ ॥

ಆಗಿ ನಿಜಾಗಮನವೃತ್ತಾಂತಮನಿಂತೆಂದು ಬಿನ್ನವಿಸಿದಂ ರಾಮ ಲಕ್ಷ್ಮಣರ್ ದಂಡಕಾರಣ್ಯಕ್ಕೆ ವಂದು ಶಂಭುಕಂ ಸಾಧಿಸಿದ ಸೂರ್ಯಹಾಸಮಂ ಕೊಂಡಾತನಂ ಕೊಂದುದರ್ಕೆ ಪುಯ್ಯಲ್ಗೆವಂದ ಖರ ದೂಷಣರನವರಸೇನೆವೆರಸು ಕೊಂದು ಮಱೆಗೆ ವಂದ ವಿರಾಧಿತನಂ ಪಾತಾಳಲಂಕೆಯೊಳ್ ನಿಲಿಸಿದರೆಂಬುದಂ ಸುಗ್ರೀವಂ ಕೇಳ್ದು-

ಕಂ ॥ ಇವರತಿಬಲರಿವರಿಂದೆ
ನ್ನ ವಿಷಾದಂ ಕೆಡುಗುಮೆಂಬ ಭರವಶದಿಂ ಕಂ ॥
ಡವರಂ ಶರಣಾರ್ಥಿಯೆನೆ
ನ್ನವಸರಮಂ ತೀರ್ಚಿಮೆಂದು ಬಿನ್ನವಿಸುವುದುಂ ॥ ೨೮ ॥

ಶರಣಾಗತ ರಕ್ಷಣ ತ
ತ್ಪರರದನೇಗೊಂಡು ಕಾದಿ ಸಾಹಸ ಗತಿಯಂ ॥
ಶರಹತಿಯಿನಿಕ್ಕಿ ಚಿಂತಾ
ಜ್ವರಮಂ ಸುಗ್ರೀವನಂಗದಿಂ ಪಿಂಗಿಸಿದರ್ ॥ ೨೯ ॥

ಅದಲ್ಲದೆಯುಂ—

ಕಂ ॥ ಉದ್ಧರಿಸಿದನಶ್ರಮದಿಂ
ಸಿದ್ಧ ಶಿಲೋಚ್ಚಯಮನೊಂದೆ ಕರತಲದಿಂದ ॥
ಘ್ರ್ಯೋದ್ಧರಣ ಸಹಿತಮಮರರ್
ಬದ್ಧಾಂಜಲಿಯಪ್ಪಿನಂ ಸುಮಿತ್ರಾಪುತ್ರಂ ॥ ೩೦ ॥

ಎಂದು ಬಿನ್ನವಿಸಿದ ದೂತನ ಮಾತಂ ಕೇಳ್ದು—

ಕಂ ॥ಕಟ್ಟಿದರ್ ಖರ ದೂಷಣರೆಂ
ಬಟಲಂ ಮಾಯಾವಿಯಪ್ಪ ಸಾಹಸ ಗತಿಗಾ ॥
ದಟ್ಟಿವಟ್ಟಿಯೆ ಬೇಗೆವೆಟ್ಟಂ
ಮಟ್ಟಿಯಿಂದಾಱಿದವೊಲಾಱಿದಂ ಪವನ ಸುತಂ ॥ ೩೧ ॥

ಎನಗಮರಿದಪ್ಪ ಸುಗ್ರೀ
ವನ ಪಗೆಯಂ ತೀರ್ಚಿ ಮಾಡಿದುಪಕಾರಕ್ಕೆ ॥
ನ್ನನೆ ರಾಮ ಲಕ್ಷ್ಮಣರ್ಗೀ
ವೆನೆಂದು ನಿಶ್ಚಯಿಸಿದಂ ಪ್ರಭಂಜನ ತನಯಂ ॥ ೩೨ ॥

ಆಗಳಾತನಂತಃಪುರ ಸೀಮಂತಿನೀ ಲಲಾಮೆಯಪ್ಪನಂಗಪುಷ್ಯ ಸಹೋದರ ಪಿತೃ ವಿಯೋಗೋದ್ವೇಗಮುಮನಾತನ ನಯನ ಪುತ್ರಿಕೆಗೆ ಪದ್ಮರಾಗ ಮಣಿ ದರ್ಪಣಮೆನಿಪ್ಪ ಪದ್ಮರಾಗೆ ನಿಜ ಜನಕನಪ್ಪ ಸುಗ್ರೀವನ ಸಂತೋಷದೊಳಾದ ಮನೋರಾಗ ಮುಮನಪ್ಪುಕೆಯ್ಯೆ ಮಱುದಿವಸಂ ಮಂಗಲಾಭರಣ ಭೂಷಿತಂ ಮಣಿಘಂಟಾ ವಿರಾಜಮಾನ ವಿಮಾನಮನೇಱಿ ಕಿಷ್ಕಿಂಧಪುರಾಭಿಮುಖನಾಗಿ ತಳರ್ವುದುಂ—

ಕಂ ॥ ಪವನಸುತ ಸೇನೆ ನಡೆದುದು
ಪವನಪಥಂ ನೆಱಿಯದೆಂಬಿನಂ ದೆಸೆಯೆಲ್ಲಂ ॥
ಕವಿ ಶಬ್ದಂಗಿಡೆ ಕಹಳಾ
ರವದಿಂ ಪಟು ಪಟಹ ಶಂಖ ಭೇರೀ ರವದಿಂ ॥ ೩೩ ॥

ಆ ಸಮಯದೊಳ್ ಮರುತ್ಸುತಾಗಮನೋತ್ಸವಕ್ಕೆ ಪುರದೊಳಷ್ಟಶೋಭೆಯಂ ಮಾಡಿ ಪರಿಜನ ಪುರಜನ ಪುರಸ್ಸರಂ ಸುಗ್ರೀವನಿದಿರ್ಗೊಂಡು ಯಥೋಚಿತ ಪ್ರತಿಪತ್ತಿಯಿಂ ಕಾಣಿಸಿಕೊಂಡು ರಘುತನೂಜ ರಾಜಮಂದಿರಕ್ಕೊಡಗೊಂಡುಯ್ದುದುಂ—

ಕಂ ॥ ಅತಿ ವೃತ್ತಾಯತ ಕರನು
ನ್ನತ ವಂಶಂ ಭದ್ರಲಕ್ಷಣೋಪೇತಂ ಮಾ ॥
ರುತಿ ರಾಮನ ಸಭೆಗೈರಾ
ವತಮಿಂದ್ರನ ಸಭೆಗೆ ಬರ್ಪ ತೆರದಿಂ ಬಂದಂ ॥ ೩೪ ॥

ಅಂತು ಬಂದುಪಾಯನ ಪುರಸ್ಸರಂ ರಾಮ ಲಕ್ಷ್ಮಣರ ಚರಣ ಕಮಲಂಗಳ್ಗೆಱಗಿ ನಳ ನೀಳಾಂಗದ ವಿರಾಧಿತ ಪ್ರಮುಖರಂ ಪ್ರೇಮಾಲಿಂಗನ ಕ್ಷೇಮ ವಚನದಿಂ ಮನ್ನಿಸಿ ಮಣಿಮಯಾಸನದೊಳ್ ಕುಳ್ಳಿರ್ಪುದುಂ ಜಾಂಬವನಿಂತೆಂದಂ—

ಮ ॥ ಕಿರಣಂ ತೀಕ್ಷ್ಣಂ ಕರಂಗೆ ತೀಕ್ಷ್ಣ ನಖರಂ ಸಿಂಗಕ್ಕೆ ವಜ್ರಾಯುಧಂ ।
ಪುರುಹೂತಂಗುರಿಗಣ್ ವೃಷಂಗೆ ರದನಂ ದಿಗ್ದಂತಿಗಾದಂದದಿಂ ॥
ನೆರವಾದಂ ಪವನಾತ್ಮಜಂ ಕದನಕೇಳೀ ಕರ್ಕಶಂ ರಾಮದೋಃ ।
ಪರಿಘಕ್ಕುಂಡಿಗೆ ಸಾಧ್ಯಮಾದುದೆ ವಲಂ ಷಟ್ಖಂಡ ಭೂಮಂಡಲಂ ॥ ೩೫ ॥

ಕಂ ॥ ಈ ಬಲ್ಲಾಳ್ ಹನುಮನ ಬಾ
ಹಾ ಬಲದಿಂ ನಡೆದುದಿನ್ನೆಗಂ ದಶಕಂಠಂ ॥
ಗಾ ಬಿಂಕಮುಮಾ ಬೀರಮು
ಮಾ ಬಿರುದುಮವಂಗೆ ನಡೆಯಲಿನ್ನಜಿದಪುದೇ ॥ ೩೬ ॥

ಎಂಬುದುಮಾ ಸಮಯದೊಳ್ ಸುಗ್ರೀವಂ ಪವಮಾನಸೂನುಗಿಂತೆಂದಂ—

ಉ ॥ ಆನತನಲ್ಲದಂಗೆ ಪದುಳಂ ನಿಲವಿಲ್ಲ ನಿಜಾನ್ಯಯಾಗತ ।
ಸ್ಥಾನದೊಳಾನತಂಗೆ ಭಯಮಿಲ್ಲ ಜಗತ್ತ್ರಯವಾಂತೊಡಂ ಜಯ ॥
ಶ್ರೀನಿಲಯರ್ ಸಹಾಯಮನಪೇಕ್ಷಿಸರಾರ್ಗಮಜೇಯರುದ್ಧತರ್ ।
ಮಾನಧನರ್ ಮಹಾಮಹಿಮರಿಂತಿವರಿರ್ಪರೆ ರಾಮ ಲಕ್ಷ್ಮಣರ್ ॥ ೩೭ ॥

ಈ ಮಹಾನುಭಾವರಪ್ಪೊಡೆ ಮುನ್ನಂ ಸೀತಾಸ್ವಯಂವರದೊಳ್ ದೇವತಾಧಿಷ್ಠಿತಂಗಳಪ್ಪ ವಜ್ರಾವರ್ತಂ ಸಾಗರಾವರ್ತಮೆಂಬ ಚಾಪರತ್ನಂಗಳುಮಂ ಹಲಾಯುಧ ಗದಾಯುಧಂಗಳುಮಂ ನಾಗಪಿಡ್ಗೆಗಳ್ವೆರಸು ಕೊಂಡತಿ ಪ್ರಚಂಡರದಲ್ಲದೆಯುಂ—

ಕಂ ॥ ಕಾರಣ ಪುರುಷರಿವರಸಾ
ಧಾರಣ ರಣಮಲ್ಲರಿಕ್ಕೆ ಸಾಹಸ ಗತಿಯಂ ॥
ಮಾರುತಿ ಶರ ಹತಿಯಿನಸಾ ।
ಧಾರಣಮಪ್ಪೆನ್ನ ಬನ್ನಮಂ ಪಿಂಗಿಸಿದರ್ ॥ ೩೮ ॥

ಎಂಬುದುಮದರ್ಕೆ ಹರ್ಷಿತಚಿತ್ತಂ ಮರುತ್ತನಯಂ ರಾಮಚಂದ್ರಂಗೆ ಮುಕುಲಿತಾಂಜಲಿಯಾಗಿ ದೇವ ಭವಜ್ಜನ್ಮಮಖಿಲ ಜಗದುಪಕಾರ ನಿಮಿತ್ತಮಾದುದದುಕಾರಣದಿಂ—

ಕಂ ॥ ಎಮಗುಚಿತಂ ನಿಜಸೇವಾ
ಪ್ರಮೋದಮಧಿರಾಜ ಪಂಚಭೂತಂಗಳ್ಗಂ ॥
ನಿಮಗಂ ಪ್ರತ್ಯುಪಕಾರ
ಕ್ಷಮರಾರ್ ದೇಹಿಗಳೊಳಂಬಿಕಾ ಸ್ತನ್ಯಕ್ಕಂ ॥ ೩೯ ॥

ಎಂದು ಬಿನ್ನವಿಸೆ—

ಕಂ ॥ ಧೀರ ಪ್ರಕೃತಿಗೆ ಸೌಮ್ಯಾ
ಕಾರಕ್ಕನುಗುಣಮೆನಿಪ್ಪ ನಯ ವಿನಯ ವಚ ॥
ಸ್ಸಾರತೆಗೆ ಮೆಚ್ಚಿ ರಘುಕುಲ
ವೀರಂ ಕಾರುಣ್ಯ ದೃಷ್ಟಿಯಿಂದೀಕ್ಷಿಸಿದಂ ॥ ೪೦ ॥

ಅಪರಿಮಿತಮೆನಿಪ ಕಾರು
ಣ್ಯ ಪಯಸ್ಸಾಗರ ಸಮುದ್ಭವಂಗಳನಿತ್ತಂ ॥
ನೃಪರತ್ನಂ ಭಟರತ್ನಂ
ಗಪೂರ್ವಮುಂ ರತ್ನ ಕರ್ಣಕುಂಡಲ ಯುಗಮುಂ ॥ ೪೧ ॥

ಅಂತು ಮೆಚ್ಚುಗುಡುವುದುಮನಂತರಂ ಮಹೋದಧಿವೆಸರ ವಿದ್ಯಾಧರನಿಂತೆಂದಂ—

ಕಂ ॥ ನೀನಿಲ್ಲದಿನಿಬರುಂ ಲಂ
ಕಾ ನಗರಿಗೆ ಪೋಗಿ ನುಡಿದು ದಶಕಂಧರನೊಳ್ ॥
ಜಾನಕಿಯ ಶುದ್ಧಿಯಂ ಪವ
ಮಾನಜ ತರ್ಪಿಸಕಮಿಲ್ಲದೋಸರಿಸಿರ್ದರ್ ॥ ೪೨ ॥

ಎನೆ ಮನದೆ ಕೊಂಡು ಮಾರುತಿ ಮೇಘರುತಿಯಿನುದಾತ್ತರಾಘವಂಗೆ ಮುಕುಲಿತ ಕರ ಸರೋಜನಾಗಿ—

ಮ ॥ ನಯದಿಂ ತಂದಪೆನೆಂತುಮಿಾಯದೊಡೆ ಬಲ್ಪಿಂ ತಂದಪೆಂ ದೇವ ದೇ ।
ವಿಯನಂತಲ್ಲದೆ ನೋಡಿ ಬರ್ಪುದೆನೆ ಮಾಯಾರೂಪದಿಂ ಪೋಗಿ ಸು ॥
ಧ್ರಿಯನಾಂತರ್ಪವನಲ್ಲನಾನೆ ಕೊಳನಂ ಪೊಕ್ಕಂತೆವೋಲ್ ಮಾಡಿ ಲಂ ।
ಕೆಯುಮಂ ದೈತ್ಯನುಮಂ ಭಯಂಗೊಳಿಸಿ ತರ್ಪೆಂ ಜಾನಕೀಶುದ್ಧಿಯಂ ॥೪೩॥

ಮ॥ ಸ್ರ॥ ತ್ರಿದಶೇಂದ್ರಾರಾತಿ ದೈತ್ಯಂ ಧರೆಯನೆ ರಸೆಗಂದುಯ್ಯೆ ಕೇಳ್ವಾದ ಕಾಯ್ದಿಂ।
ಕದನ ಕ್ರೀಡಾನುರಕ್ತಂ ಮುರರಿಪು ಪಗೆಯಂ ಕೊಂದು ಭೂಕಾಂತೆಯಂ ಸ॥
ಮ್ಮದದಿಂ ತಂದಂತೆ ಲಂಕೇಶ್ವರನನಮರ ವಿದ್ವಿಷ್ಟನಂ ಕೋಪದಿಂದೋ ।
ವದೆ ಕೊಂದಾಂ ತಂದಪೆಂ ದೇವಿಯನೆನಗರಿದೇ ದೇವ ಪೇಟಿನ್ನನೀಗಳ್
[॥ ೪೪ ॥ *

ಎಂದು ಪೂಣ್ದು ನುಡಿದಂಜನಾಸುತಂಗೆ ರಘುವೀರನಿಂತೆಂದಂ—

ಕಂ ॥ ಜನಕಜೆಯ ಸುದ್ದಿಯಂ ತ
ರ್ಪ ನಿಯೋಗಂ ನಿನಗೆ ಮೊನೆಯೊಳಾಟಂದು ದಶಾ ॥
ಸ್ಯನನಿಕ್ಕಿ ದೇವಿಯಂ ತ
ರ್ಪ ನಿಯೋಗಂ ಲಕ್ಷ್ಮಣಂಗೆ ಪುದು ಪೆಜಗ್ರುಂಟೇ ॥ ೪೫ ॥

* ೪೪ನೆಯ ಪದ್ಯವು. ಗ. ಘ. ಗಳಲ್ಲಿ ಮಾತ್ರವಿದೆ.

ಎಂದು ನಿಯಮಿಸಿ ನುಡಿದು—

ಚ ॥ ಅಜಿಪುವರಿಲ್ಲ ತನ್ನ ಕೆಲದೊಳ್ ಮಜಿದಪ್ಪೊಡಮೆನ್ನಗಲ್ಕಿಗಂ।
ಡಜಿಯದವಳ್ ಭಯಾಕುಲತೆಯಿಂದಸುವಂ ಬಿಡುವಂತುಟಪ್ಪ ಬೇ ॥
ಸಜಿನೊಳಕೊಳ್ಗುಮಂತೆಸಗದಂತಿರೆ ಮಾಜ್ಪುದು ಸೀತೆ ದೇಹಮಂ।
ತೊಜಿದ ಬಜಿಕ್ಕೆ ರಕ್ಕಸನನಿಕ್ಕಿದೊಡಿಕ್ಕಿದ ಲೆಕ್ಕಮಕ್ಕುಮೇ ॥ ೪೬ ॥

ಎಂದು ರಘುವೀರನಣುವಂಗೆ ಜಾನಕಿಯ ತನ್ನ ಕುಜಿಪಿನ ವಿನ್ನಾಣಂಗಳ ನಜಿಪಿ—

ಕಂ ॥ ಜನಕಜೆಯ ವದನ ಸರಸಿಜ
ಮನಲರ್ಚಲ್ ವಿರಹ ಖೇದ ತಮುಮಂ ಕಳೆಯಲ್ ॥
ಹನುಮನ ಕೈಯೊಳ್ ರಘುನಂ
ದನನಿತ್ತನುದಂಶುಮಾಲಿ ರವಿ ಮಂಡಲಮುಂ ॥ ೪೭ ॥

ಅಂತಿತ್ತು ತನಗಾಕೆಯ ಚೂಡಾಮಣಿಯಂ ತರ್ಪುದೆಂದು ಬೆಸಸೆ ಮಹಾ ಪ್ರಸಾದಮೆಂದಾ ಕ್ಷಣದೊಳೆ ಬಲಾಚ್ಯುತರ ಪದಂಗಳಂ ಬೀಜಿಪ್ಪೊಂಡತಿ ಪ್ರಬಲಬಲ ಸಮನ್ವಿತಂ ವಿಮಾನಾರೂಢಂ ಪವಮಾನಸೂನು ಪವನಪಥಕ್ಕೆ ನೆಗೆದು ಪೋಗುತ್ತುಂ ಮಹೇಂದ್ರಾಚಲ ಮಧ್ಯದೊಳನತಿಶಯವಾಗಿರ್ದ ಪುರಮುಂ ಕಂಡು—

ಕಂ ॥ ಈಕ್ಷಣ ಸುಖಮಯಮಿದು ಜ
ನ್ಮಕ್ಷೇತ್ರಂ ಗಡ ಮಹೇಂದ್ರ ಪುರಮೆನಗೀ ತುಂ ॥
ಗ ಕ್ಷ್ಮೀಣೀಧರ ಸಾನು ಸ
ಮಕ್ಷದ ಪಲ್ಯಂಕ ಗುಹೆಯೊಳೆಮ್ಮಜ್ಜಿ ಗಡಂ ॥ ೪೮ ॥

ಎನ್ನಂ ಪಡೆದಳ್ ಗಡ ತಾ
ಯನ್ನಡಪಿದರಮಿತ ಗತಿಗಳೆಂಬ ತಪಸ್ಸಂ ॥
ಪನ್ನರ್ ಚಾರಣ ಋಷಿಯರ್
ಮುನ್ನಜಿಪಿದಳೆನಗೆ ಜನನಿ ಪರಿವಿಡಿಯಿಂದಂ ॥ ೪೯ ॥

ಈ ಮಹೇಂದ್ರಪುರಮನಾಳ್ವನೆಮ್ಮ ಮುತ್ತಮ್ಮಂ ಮದೀಯ ಮಾತೆಯ ಗರ್ಭದೊಳಾನಿರ್ಪುದುಮೆನ್ನ ತಾಯ್ವೆರತ್ತೆಯುಂ ಪಾವನನುಂ—

ಕಂ ॥ ಇಲ್ಲದ ದೋಷಮನಿಟ್ಟಜಿ
ವಿಲ್ಲದೆ ಪೊಜಿಮಡಿಸಿ ಕಳೆಯೆ ಶರಣಿಲ್ಲದೆ ತ ॥

ನ್ನಲ್ಲಿಗೆ ಬರೆ ತಾನುಂ ಕೃಪೆ
ಯಿಲ್ಲದೆ ನಿರ್ಬುದ್ಧಿ ಪೊರ್ದಲೀಯದೆ ಕಳಿದಂ ॥ ೫೦ ॥

ಎಂದು ಕಡುಮುಳಿದು—

ಕಂ ॥ ರಣ ಪಟಹ ರವಂ ದಿಗ್ವಾ
ರಣ ಕರ್ಣಾಭ್ಯರ್ಣಮಂ ಪಳಂಚಲೆಯೆ ಸಮಿಾ ॥
ರಣ ತನಯನಪ್ರಮಿತ ಭೀ
ಷಣ ಸೈನ್ಯಂ ಸುತ್ತಿ ಮುತ್ತಿದಂ ತತ್ಪುರಮಂ ॥ ೫೧ ॥

ಆಗಳಾ ಕಳಕಳಂ ಶ್ರುತಿಪಥಮನೆಯ್ದೆ ಘನರವಕ್ಕೆ ಗರ್ಜಿಸಿ ಗುಹೆಯಿಂ ಪೊಱ ಮಡುವ ಮೃಗೇಂದ್ರನಂತೆ ಮಹೇಂದ್ರಂ ಪುರಮಂ ಪೊಱಮಟ್ಟು ಮಱುವಕ್ಕಮನಿಕ್ಕುವ ತಕ್ಕು ಮಿಕ್ಕು ಬರೆ ಕಡಂಗಿ ಕಾದುವಲ್ಲಿ ಮಾರುತಿಯ ವಾಹಿನಿಗೆ ಮಹೇಂದ್ರ ವಾಹಿನಿ ಬೇಸಗೆಯ ವಾಹಿನಿಯಂತೊಳಸೋರ್ವುದುಮುದಂ ಪ್ರಸನ್ನಕೀರ್ತಿ ಕಂಡು ಕದನಕೇಳಿಗತಿವರ್ತಿಯಾಗಿ ತಾಗುವುದುಂ—

ಕಂ ॥ ತೇರಚ್ಚಂ ಮುಱಿಯೆಚ್ಚಂ
ಕೂರಂಬಿಂ ಬಿಲ್ಲ ಗೊಣೆಯುಮುಂ ಪಱಿಯೆಚ್ಚಂ ॥
ಸಾರಥಿಯಂ ಕೆಡೆಯೆಚ್ಚಂ
ಮಾರುತಿಯ ರಣಕ್ಕೆ ತಕ್ಕುಗಿಡದವನಾವಂ ॥ ೫೨ ॥

ಅಂತು ವಿರಥನಾಗಿ ಮತ್ತಂ ಪ್ರಸನ್ನಕೀರ್ತಿ ಮಾನ ಗರ್ವದಿಂ ವಿಮಾನಾರೂಢಂ ರಣಕ್ರೀಡೆಗೊಡರಿಸುವುದುಂ ಶ್ರೀಶೈಳಂ ತದ್ವಿಮಾನಮುಂ ಛಾಯಾಗ್ರಹಣಂಗೆಯ್ಯೆ ನೆಲಕ್ಕೆ ವರ್ಪುದುಂ ಪ್ರಸನ್ನಕೀರ್ತಿಯಂ ಪಿಡಿಯೆ ಮಹೇಂದ್ರನುಮದಂ ಕಂಡು ಕಡುಕೆಯ್ವ ಚಿಂತ್ಯಯುದ್ಧಂಗೆಯ್ದೊಡಾತನುಮಂ ಪಿಡಿದು ನಿಜ ವಿಜಯಶಿಬಿರಕ್ಕಯ್ದು ಮನ್ನಿಸಿ—

ಕಂ ॥ ಸನಯದಿನೆಱಗಿ ಮೃಗೇಂದ್ರಾ
ಸನಮುಂ ಕೊಟ್ಟಮ್ಮ ನಿಮ್ಮ ಮೊಮ್ಮನೆ ನಾನಂ ॥
ಜನೆಗಂ ಪ್ರಭಂಜನಂಗಂ
ಜನಿಯಿಸಿದೆಂ ಹನುಮನೆಂಬೆನೆಂದಱಿಪುವುದುಂ ॥ ೫೩ ॥

ಅದಂ ಕೇಳ್ದಾನಂದಜಲ ಲುಳಿತ ಲೋಚನನತಿ ಪ್ರಮೋದ ಪುಳಕಮಂ ತಳೆದು ಮಹೇಂದ್ರನಿಂದ್ರ ಪದವಿ ದೊರೆಕೊಂಡಂತೆ ಸಂತುಷ್ಟ ಚಿತ್ತನಾಗಿ ಕಿಱಿದುಂ ಬೇಗ ಮಿರ್ದು ನಿನ್ನ ಪುರುಷಾಕಾರಮುಂ ಮನೋಹರಾಕಾರಮುಮವಾರ್ಯ ವೀರ್ಯಮುಮಿ

ನ್ನೆನರಂ ಶ್ರವಣ ಭೂಷಣಮಾಗಿರ್ದುವೀಗಳೆಮಗೆ ಪ್ರತ್ಯಕ್ಷಮಾದುವೆಂದು ಪೊಗಟ್ಟಿ ಪಲತೆಱದಿಂ ಪರಸಿದ ಮಾತಾಮಹಂಗೆ ಮಾರುತಿ ಕೈಗಳಂ ಮುಗಿದು—

ಕಂ ॥ ಕಿಜುಗೂಸು ತನದೊಳಾಜಿಯ
ನಜಯಮೆಯಿಂದಾನೊಡರ್ಚಿದೆಂ ಕ್ಷಮಿಯಿಪುದೆಂ ॥
ದೆಜಗಿದನಣುವಂ ಗುಣಮಂ
ಮೆಜಿವಂಗಪು ವಿನಯಸೊಂಪೆ ಭೂಷಣಮಲ್ತೇ ॥ ೫೪ ॥

ಅಂತು ವಿನಯ ವಿಸಮಿತನಾಗಿ ನಿಮ್ಮಡಿ ನಮ್ಮ ಕಪಿಧ್ವಜ ಕುಲಕ್ಕೆ ಪರ ಮೋಪಕಾರಮಂ ಮಾಡಿದ ರಘುವೀರನ ಬೆಸದಿಂ ಲಂಕೆಗೆ ಪೋದಪ್ಪೆನಾಂ ಬರ್ಪನ್ನಂ ನೀನುಂ ಕಿಷ್ಕಿಂಧಪುರಕ್ಕೆ ಪೋಗಿ ರಾಮಲಕ್ಷ್ಮಣರ ಸೇವಾನುಗ್ರಹಮುಂ ಪಡೆದು ಸುಗ್ರೀವಾದಿಗಳೊಳ್ ಕೂಡಿ ಸುಖಮಿರ್ಪುದೆಂದು ನಿಯಮಿಸಿ ಮಾರುತಿ ಮಾರುತವೇಗದಿಂ ಮಾರುತ ಪಥಕ್ಕೆ ನೆಗೆದು ತೆಂಕಮೊಗವೆ ಪಯಣಂಬೋಪುದು ಮಿತ್ತ ಮಹೇಂದ್ರಂ ಪ್ರಸನ್ನಕೀರ್ತಿವೆರಸು ಹನುಮರದ್ವೀಪಕ್ಕೆ ಪೋಗಿ ಹನುಮ ನರಸುನೆಯಂ ಪುಗುವುದುಂ—

ಕಂ ॥ ಅಂಜನೆಗಳುಂಬಮಾಯ್ತು ಮು
ದಂ ಜನನೀ ಜನಕ ಬಂಧುಜನ ದರ್ಶನದಿಂ ॥
ದಂಜನೆಯಂ ಕಂಡತಿ ಪ
ರ್ಷಂ ಜನಿಯಿಸಿದತ್ತು ಮಾತೃ ಪಿತೃ ಬಂಧುಗಳೊಳ್ ॥ ೫೫ ॥

ಅಂತು ಪರಸ್ಪರ ಕ್ಷೇಮ ಕುಶಲ ಭಾಷಾ ಪುರಸ್ಸರಂ—

ಕಂ ॥ ಜಮರ್ದಪ್ಪೆ ಹರ್ಷ ಪುಳಕೋ
ದ್ಗಮಮುಮಪರ್ಯಾದತ್ತು ಕಡಪರಲ್ದುದೆನಲ್ ಚಿ ॥
ತ್ರಮೆ ದೇಹಿಗಿಷ್ಟ ಸಂಯೋ
ಗಮನಿಷ್ಟ ವಿಯೋಗಮೆರಡೆ ಸುಖ ಜನಕಂಗಳ್ ॥ ೫೬ ॥

ಅಂತು ಸಂತುಷ್ಟರಾಗಿ ಮಹೇಂದ್ರ ಪ್ರಸನ್ನಕೀರ್ತಿಗಳ್ ಕಿಷ್ಕಿಂಧಪುರಕ್ಕೆ ಪೋಗಿ ಬಲ ನಾರಾಯಣರಂ ಕಂಡಾಳ್ತನಮಂ ಕೈಕೊಂಡು ಕಪಿಧ್ವಜರೊಳ್ ಕೂಡಿ ಸುಖದಿನಿರ್ದರಿತ್ತ ಲಾಕಾಶಮಾರ್ಗದೊಳ್ ಪೋಗುತ್ತುಂ—

ಕಂ ॥ ಅಧರಿತ ಕನಕಾಚಲಮಂ
ವಿಧು ರವಿ ಮಂಡಲ ವಿಚುಂಬಿ ಕೂಟಮನಾಶಾ ॥
ವಧಿ ವಿಶ್ರುತಮಂ ಭೋಂಕನೆ
ವಧಿಮುಖ ಪರ್ವತಮನಾಂಜನೇಯಂ ಕಂಡಂ ॥ ೫೭ ॥

ಮ ॥ ಪ್ರತಿಮಾ ಯೋಗ ನಿಯುಕ್ತರೆಂಟು ದಿವಸಂ ಕೈಯೆತ್ತಿವೆಂದಿರ್ದರ ।
ಪ್ರತಿಮರ್ ಚಾರಣರಾ ನಗೋಪರಿಮದೊಳ್ ತತ್ಪಾರ್ಶ್ವದೊಳ್ ಮೂವರ ॥
ಪ್ರತಿರೂಪಾನ್ವಿತೆಯರ್ ಸಿತಾಂಶುಕೆಯರಿರ್ದರ್ ಕನ್ನೆಯರ್ಕಳ್ ಮಧು ।
ವ್ರತ ಮಾಳಾಯತ ವೇಣಿಗಳ್ ಜಪಿಯಿಸುತ್ತುಂ ದಿವ್ಯ ಮಂತ್ರಂಗಳಂ ॥೫೮॥

ಆ ಸಮಯದೊಳ್ ಲಯ ಸಮಯದ ಕೇಸುರಿಯ ಮಸಕಮನಪ್ಪುಕೆಯ್ದು—

ಕಂ ॥ ಚಾರಣ ಯುಗಳಮುಮುಂ ಕ
ನ್ಯಾರತ್ನಂಗಳುಮನಳುರ್ದು ಸುಡಲೊಡರಿಪುದಂ ॥
ದಾರುಣ ದಾವಾನಲನಂ
ಮಾರುತಿ ಜಲವರ್ಷ ವಿದ್ಯೆಯಿಂ ಮಟ್ಟಿಸಿದಂ ॥ ೫೯ ॥

ಆ ಮಹೋಪಸರ್ಗಮಂ ಪಿಂಗಿಸಿ—

ಮಾಲಿನಿ ॥ ಯತಿ ಪತಿಗಳ ಪಾದಾಂಭೋಜಮಂ ಭಕ್ತಿಯಿಂದಂ ।
ಸತತಗತಿ ತನೂಜಂ ಪೂಜಿಸುತ್ತಿರ್ದನಾಗಳ್ ॥
ಕೃತ ನಿಯಮ ನಿಯುಕ್ತಾಚಾರೆಯರ್ ದಿವ್ಯ ಯೋಗಿ ।
ದ್ವಿತಯ ಚರಣ ಪೂಜಾನಂತರಂ ಕನ್ನೆಯರ್ಕಳ್ ॥ ೬೦ ॥

ಮಾರುತಿಯ ಮುಖಾರವಿಂದಮಂ ನೋಡಿ ಮಹಾಮಹಿಮ ನೀಂ ಬಂದೆಮಗ ವಿಂ ಮಹಾ ತಪೋಧನರ್ಗಂ ಸಮನಿಸಿದುಪಸರ್ಗಮಂ ತೊಲಗಿಸಿ ಮಹೋಪ ಕಾರಮಂ ಮಾಡಿದೆಯೆಂದು ಸಂಸ್ತವನ ಪೂರ್ವಕಂ ಮುಕುಲಿತಾಂಜಲಿಗಳಾ ಗಿರ್ಪುದುಂ—

ಕಂ ॥ ಈ ರೌದ್ರಾಟವಿಯೊಳಿದೇ
ಕಾರಣದಿಂದಿರ್ದಿರೆಂದು ವಿಸ್ಮಯ ಚಿತ್ತಂ ॥
ಮಾರುತಿ ಬೆಸಗೊಂಡಂ ಕ
ನ್ಯಾ ರತ್ನಂಗಳನಪಾರ ಕಾರುಣ್ಯ ರಸಂ ॥ ೬೧ ॥

ಅಂತು ಬೆಸಗೊಳ್ವುದುಂ—

ಕಂ ॥ ಅನವದ್ಯ ಚರಿತನೆಂದಱ
ದನಿಬರ ಕಡೆವುಟ್ಟಿದಾಕೆ ಹನುಮಂಗಸ್ಮ ॥
ಜ್ಜನಕಂ ದಧಿಮುಖ ನಗರೀ
ಜನಪತಿ ಗಂಧರ್ವನೆಂಬನಂಬರ ಗಮನಂ ॥ ೬೨ ॥

ಎಂದೆಮ್ಮ ಪೆಸರ್ ಚಿತ್ರಲೇಖೆಯುಂ ವಿದ್ಯುತ್ಪ್ರಭೆಯುಂ ತರಂಗಮಾಲೆಯು ಮೆಂಬುದೆಮ್ಮಂ ವಿಜಯಾರ್ಧನಗ ನಿವಾಸಿಗಳಪ್ಪ ವಿದ್ಯಾಧರರ್ ಮೊದಲಾಗೆ ಪಲ ಬರ್ ಬೇಡೆಯುಂ ಕುಡದಿರ್ಪುದುಮಂಗಾರವೇಗನೆಂಬ ವಿದ್ಯಾಧರನತ್ಯಾಗ್ರಹಂ ಗೆಯ್ದು ಬೇಡುವುದುಮಾತನುಮನುದಾಸೀನಂಗೆಯ್ದೊಂದು ಜಿನಭವನಕ್ಕೆ ವೋಗಿ—

ಕಂ ॥ ಅನುರೂಪನಪ್ಪ ವರನಾ
ವನಪ್ಪನಸ್ಮತ್ತನೂಜೆಯರ್ಗೆಂದಷ್ಟಾಂ ॥
ಗ ನಿಮಿತ್ತಮನಱಿವ ಮಹಾ
ಮುನಿಯಂ ಬೆಸಗೊಂಡನೆಮ್ಮ ಪಿತೃವೊಂದು ದಿನಂ ॥ ೬೩ ॥

ಅಂತು ಬೆಸಗೊಳ್ವುದುಮವರಿಂತೆಂದು ಬೆಸಸಿವರುತ್ತರ ಶ್ರೇಣಿಗೆ ಪ್ರಧಾನನಪ್ಪ ಸಾಹಸಗತಿಯಂ ಕೊಂದಾತಂ ನಿನ್ನ ಪುಕ್ಕಳ್ಗೆ ಭರ್ತಾರನಕ್ಕುಮೆನೆ ಮನದೇಗೊಂಡು ಸಂತೋಷಂಬಟ್ಟೊಸೆದಿರ್ದನಾಮುಮಿಾ ಮಹಾ ವಿಪಿನದೊಳ್ ಮನೋವೇಗವೆಂಬ ವಿದ್ಯೆಯಂ ಸಾಧಿಸುತ್ತುಂ ದ್ವಾದಶ ವರ್ಷಮಿಲ್ಲಿರ್ದು ಪೆಱಗಾಱು ವರ್ಷದಿಂದಾ ವಿದ್ಯೆಯಂ ಸಾಧಿಸಿದೆವೆಮ್ಮಂ ಬೇಡಿ ಪಡೆಯದಂದಿನಂಗಾರವೇಗನೀ ಮಹೋಪ ಸರ್ಗಮಂ ಮಾಡಿದನೆಂದು ಪೇೞೆ ಕೇಳ್ದು—

ಕಂ ॥ ಅತಿಬಲನಸಿಕ್ಕಿ ಸಾಹಸ
ಗತಿಯಂ ಕಿಷ್ಕಿಂಧಪುರದೊಳಿರ್ದಪನತ್ಯಾ ॥
ರ್ಜಿತ ತೇಜಂ ರಾಘವನೆಂ
ದತರ್ಕ್ಯ ಬಲನಱಿಪಿ ಪವನ ತನಯಂ ಪೋದಂ ॥ ೬೪ ॥

ಇತ್ತ ಗಂಧರ್ವಂ ನಿಜ ತನೂಜೆಯರ್ ಸಿದ್ಧವಿದ್ಯೆಯರಾದುದನಱಿದು ಸಂತುಷ್ಟ ಚಿತ್ತನಾಗಿ ತಮ್ಮಲ್ಲಿಗೆ ಬರ್ಪುದಂ ಕನ್ನೆಯರ್ ಕಂಡಿದಿರ್ಗೊಂಡು—

ಕಂ ॥ ಚಲದಲಕ ತಮಾಲ ದಳಂ
ಚಲನಾಶೋಕ ಪ್ರವಾಳದೊಳ್ ಪುಂಜಿಸೆ ಕೋ ॥
ಮಲೆಯರ್ ವಿದ್ಯಾಧರ ಕುಲ
ತಿಲಕಂಗತಿ ಭಕ್ತಿ ಭರದಿನಾನತರಾದರ್ ॥ ೬೫ ॥

ಅಂತು ವಿನತರಾಗಿ—

ಮ ॥ ಸುತೆಯರ್ ಮಾರುತಿ ಪೇೞ್ದುದಂ ತನಗೆ ಪೇೞಲ್ ಕೇಳ್ದು ಗಂಧರ್ವ ರಾ ।
ಜ ತನೂಜಂ ನಿಜ ಸೈನಿಕಂಬೆರಸು ಕಿಷ್ಕಿಂಧಕ್ಕೆ ಬಂದಿತ್ತು ತ ॥

ತ್ಸುತೆಯಮ್ಮೂವರುಮಂ ಪ್ರಶಸ್ತ ದಿನದೊಳ್ ರಾಮಂಗೆ ಪೂರ್ಣಾಳ್ವನ ।
ಕೃತಿಹರ್ಷಂ ಸುಖಮಿರ್ದನತ್ತಲಣುವಂ ಪೋದಂ ವಿಯನ್ಮಾರ್ಗದೊಳ್

॥ ೬೬ ॥

ಅಂತು ಸ್ತೋಗಿ ಲಂಕಾಪುರದ ಬಹಿಃಪುರದೊಳ್ ಬೀಡಂ ಬಿಟ್ಟು ಮುಜು ದಿವಸಂ ಪುರಮಂ ಪುಗುವ ಸಮಯದೊಳ್—

ಮ ॥ ಗೆಲವಂತಿರ್ಕೆಮ ವಾಯುಪುತ್ರನ ಬಲಕ್ಕಂ ಕೋಂಟೆ ವಿದ್ಯಾತ್ಮಕಂ ।
ಸಲವಿಲ್ಲಾದುದಲೋಕದಂತದಜಿ ಮೇಲಿರ್ದುಗ್ರ ಕಾಲೋರಗಾ ॥
ವಲಿ ಭೂತಾವಲಿ ರೌದ್ರ ಸತ್ವ ನಿವಹಂ ಲೋಕಾದ್ಭುತಂ ನಾಡೆ ನೋ ।
ಡಲಗುರ್ವಾದುದು ತದ್ವಿಭೀಷಣ ಕೃತಂ ದುರ್ವಾರ ವೈಕುರ್ವಣಂ ॥ ೬೮ ॥

ಆಗಳದಜಿ ಸ್ವರೂಪಮೆಲ್ಲಮುಂ ಪೃಥುಮತಿಮೆಸರ ಮುಂತ್ರಿ ಬಿನ್ನವಿಸೆ ನೆಜೆಯೆ ಕೇಳ್ದು ಕಲುಷ ವಶಗತನಾಗಿ ವಿಮಾನದಿನವನಿಗವತರಿಸಿ—

ಕಂ ॥ ಎನಗೀ ಪ್ರಾಕಾರ ವಿಭೇ
ದನಮಾಪ್ತಮೊ ಗಹನಮೆಂದು ಕೋಪಾರುಣ ಲೋ ॥
ಚನನನಿಲಸುತಂ ತೊಟ್ಟಂ
ತನುತ್ರಮಂ ವಜ್ರಮಯಮನಪ್ರತಿಹತಮಂ ॥ ೬೯ ॥

ಅಂತು ದಿವ್ಯ ವಜ್ರಕವಚಮಂ ತೊಟ್ಟು—

ಕಂ ॥ ವಿಧಿಪೂರ್ವಕಮಾತ್ಮ ಗದಾ
ಯುಧಮಂ ದೈವಿಕಮನೆತ್ತಿ ಪನುವುಂ ವಜ್ರಾ ॥
ಯುಧದಿಂ ದಿವಿಜೇಂದ್ರಂ ಕುಲ
ಕುಧರಂಗಳನಳಜುತೆ ಸ್ಫೋಯ್ಸು ತೆಜದಿಂ ಸ್ಫೋಯ್ಸಂ ॥ ೭೦ ॥

ಅಂತು ಸ್ಫೋಯ್ದು ವಿದ್ಯಾಪ್ರಾಕಾರಮನೊಡೆವುದುಂ—

ಕಂ ॥ ದ್ವಾರ ನಿಯುಕ್ತಂ ರೌದ್ರಾ
ಕಾರಂ ವಜ್ರಮುಖನೆಂಬ ದನುಜಂ ಸೆರಗಂ ॥
ಪಾರದೆ ತಾಗಿದೊಡವನಂ
ಮಾರುತಿ ನಿಮಿಷಕ್ಕೆ ತೂಂತಿದಂ ಯಮಮುಖದೊಳ್ ॥ ೭೦ ॥

ಅದಂ ತದಾತ್ಮಜೆಯಪ್ಪ ಲಂಕಾಸುಂದರಿ ಭೋಂಕನೆ ಕಂಡು ಕಡುಮುಳಿಮು—

ಚ ॥ ಜನಕನನಿಕ್ಕಿದುದ್ಧತನನಿಕ್ಕುವೆನೆಂದು ಕಡಂಗಿ ಬಂದು ಭೋಂ ।
ಕನೆ ಚರಮಾಂಗನಂ ಪವನ ಸೂನುವನೀಕ್ಷಿಸಿ ಕಣ್ಣಸೋಲಮಾ ॥
ರ್ದನುವಿಸೆ ಶೋಕಮಂ ಮುಳಿಸುಮಂ ಮಜಿಪೆನ್ನುಮನೆನ್ನ ವಿದ್ಯೆಯು !
ಳ್ಪಿನಿತುಮನೀವೆನೆಂದು ಪಟದೊಳ್ ಬರೆದೆಚ್ಚಳವಳ್ ಪತಾಕೆಯಂ ॥ ೭೧ ॥

ಅಂತಿಸುವುದುಂ—

ಕಂ ॥ ಬಾರಿಸಿ ಲೇಖಾರ್ಥಮನವ
ಧಾರಿಸಿ ತಾನುಂ ಮರುಳ್ದು ಕನ್ನೆಯ ಸೌಮ್ಯಾ ॥
ಕಾರಕ್ಕೆ ರಣಾಜಿರದೊಳ್
ವೀರಶ್ರೀವೆರಸು ಮದುವೆನಿಂದಂ ಹನುಮಂ ॥ ೭೨ ॥

ಅಂತು ನಿರತಿಶಯ ರೂಪ ಸಂಪನ್ನೆಯಂ ಲಂಕೆಯೆಂಬ ಕನ್ನೆಯಂ ಮದುವೆನಿಂದು—

ಕಂ ॥ ಪವಮಾನ ಸುತಂ ಸಂಭಿ
ನ್ನ ವಿದ್ಯೆಯಿಂ ಮಾಡಿ ಪೊಬಲನಾಗಸದೊಳ್ ತ ॥
ನ್ನ ವರೂಥಿನಿಯೆಲ್ಲಮನಿರಿ
ಸಿ ನಿಯಚ್ಛರ ಪತಿಯ ಕೆಲಕೆ ಪೋಗಲ್ಬಗೆದಂ ॥ ೭೩ ॥

ತತ್ಪ್ರಪಂಚಮೆಲ್ಲಮಂ ಲಂಕಾಸುಂದರಿ ತಿಳಿದೀ ಬರವಿದೇಕಾರಣಮೆನೆ ರಾಮ ದೇವನ ಬೆಸದಿಂ ಸೀತಾದೇವಿಯ ಸುದ್ದಿಯಂ ತರಲ್ಬಂದೆನೆಂಬುದುಮಾಕೆ ಹನುಮಂಗಿಂತೆಂದಳ್—

ಕಂ ॥ ನಿಮಗೆ ಪುಗಲೀಯದಂತಿರೆ
ಸಮಕಟ್ಟಿದನಿಂದ್ರವೈರಿ ವಿದ್ಯಾಪ್ರಾಕಾ ॥
ರಮನೊಡೆದು ನೀನಿದಂ ವ
ಜ್ರಮುಖನುಮಂ ಕೊಂದೆ ಪುಗುವೆ ಲಂಕಾಪುರಮಂ ॥ ೭೪ ॥

ಪರಮ ದ್ರೋಹನೆ ದಶಕಂ
ಧರಂಗೆ ನೀಂ ಪಗೆವರೊಡನೆ ಕೂಡಿದೆ ಮುನ್ನಂ ॥
ನೆರೆದು ವಿಭೀಷಣನೊಳ್ ತ
ನ್ನಿರೂಪಿತ ಕ್ರಮದೆ ನೆಗಚ್ಚುವಲ್ಲೆಂಬಚ್ಚಿಯಂ ॥ ೭೫ ॥

ಎಂಬುದುಂ—

ಕಂ ॥ ಏಗೊಂಡಾಕೆಯ ಪೇಳ್ದುದ
ನಾಗಡೆ ಕತಿಪಯ ವಿಯಚ್ಚರರ್ಬೆರಸು ಮಹಾ ॥
ಭೋಗಂ ಪೊಕ್ಕಂ ಪುರಮನ
ದೇ ಗಹನಮೊ ಪವನಜಂಗೆ ದುರ್ಗಮಮುಂಟೇ ॥ ೭೬ ॥

ಅಂತು ನಿಶ್ಯಂಕೆಯಿಂ ಲಂಕೆಯುಂ ಪೊಕ್ಕು ವಿಭೀಷಣನಂ ಕಂಡು ಕ್ಷೇಮ ಕುಶಲ ವಾರ್ತಾನಂತರಂ—

ಮ ॥ ಕುಲಮುಂ ಸತ್ಯದ ಶೌಚದಗ್ಗಳಿಕೆಯುಂ ಚಾರಿತ್ರಮುಂ [1]ಚಾಗಮುಂ ।
ಚಲಮುಂ ದೋರ್ಬಲಮುಂ ಕಲಾ ವಿಭವಮುಂ ಕೊಂಡಾಡುವೀ ರಾವಣಂ ॥
ನೆಲನೆಲ್ಲಂ ಪಱಿವನ್ನಮನ್ಯ ವಧುವಂ ದುರ್ಮೋಹದಿಂ ಬಾಚ್ತಿಗೆ ।
ಯ್ಯಲದಂ ಬಾರಿಸದೊಯ್ಕನಿರ್ಪ್ಪುದುಮುಪೇಕ್ಷಾ ದೋಷಮೇನಾಗದೇ ॥ ೭೭ ॥

ಚ ॥ ಎಣಿಸದೆ ತನ್ನ ಶೌಚಗುಣಮುಂ ವ್ರತರಕ್ಷಣಮುಂ ಪರಾಂಗನಾ ।
ಪ್ರಣಯಮನಪ್ಪುಕೆಯ್ಯೆ ಶರಣಾಗತ ರಕ್ಷಣ ದಕ್ಷನಪ್ಪ ದ ॥
ಕ್ಷಿಣ ಭರತ ತ್ರಿಖಂಡ ಧರಣೀಪತಿ ದಾನವ ಚಕ್ರವರ್ತಿ ರಾ ।
ವಣನಿದನಾಗದೆನ್ನದೊಡೆ ನಿನ್ನ ನೆಗಚ್ತಿಗೆ ಬನ್ನಮಾಗದೇ ॥ ೭೮ ॥

ಕಂ ॥ ಇನ್ನಾದೊಡಮೊಪ್ಪಿಸಿ ಸತಿ
ಯನ್ನಿಮ್ಮ ಕುಲಾಪವಾದಮಂ ಕಳೆವುದು ನಿ ॥
ಮ್ಮನ್ನರುಪೇಕ್ಷಿಸೆ ನೆಲನು
ಳ್ಳನ್ನೆವರಂ ದಶಮುಖಂಗೆ ದುರ್ಯಶಮಕ್ಕುಂ ॥ ೭೯ ॥

ಎನೆ ವಿಭೀಷಣನಿಂತೆಂದಂ—

ಮ॥ಸ್ರ॥ ದನುಜೇಂದ್ರಂಗಾಗದೆಂದಾನಿದನಱಿಪದುದಾಸೀನದಿಂ ಮುನ್ನಮೇನಿ ।
ರ್ದೆನೆ ದೃಷ್ಟಾದೃಷ್ಟ ಬಾಧಾಕರಮಿದುವೆ ಪರಪ್ರೇಯಸೀ ಪ್ರೇಮವೆಂದಿಂ ॥
ತೆನಿತಾನುಂ ಹೇತು ದೃಷ್ಟಾಂತಮನಡಿಗಡಿಗಾಂ ತೋಱಿಯುಂ ಪೇಳ್ದುದಂ ಕೇ
ಳನೆ [2]ರಾಗೋದ್ವೇಗ ವೇಗಂ ಸಮನಿಸೆ ಹಿತಮಂ ಸೂಕ್ತಮುಂ ಕೇಳ್ವನಾವಂ
॥ ೮೦ ॥

ಕಂ ॥ ಪನ್ನೊಂದು ದಿವಸಮಿಂದಿಂ
ಗನ್ನ ತ್ಯಾಗದೊಳೆ ದೇವಿ ಕುಲಮುಂ ವ್ರತಮುಂ ॥

---

1. ಚಾರಮುಂ. ಚ.
2. ರಾಗದ್ವೇಷ. ಗ.

ತನ್ನುನ್ನತಿಯಂ ಕಾದೊಡ
ಮಿನ್ನುಂ ವೈರಾಗ್ಯಮಾದುದಿಲ್ಲಗ್ರಜನೊಳ್ ॥ ೮೧ ॥

ಪ್ರಮದ ವನದೊಳಗೆ ಸೆಜ್ಜೆಯಿ
ಟ್ಟು ಮತ್ತಮುಟ್ಟಿಟ್ಟಿಯಟ್ಟುತಿರ್ದಪನುಚಿತ ॥
ಕ್ರಮಮುಂ ಕಾಮುಕರಜ್ಜಿನರೆ
ಸುಮನೋಬಾಣಂಗೆ ತಕ್ಕುಗಿಡದವನಾವಂ ॥ ೮೨ ॥

ಎಂದು ವಿಭೀಷಣಂ ನುಡಿಯೆ ಮರುತ್ಸುತಂ ಕೇಳ್ದು ಕರುಣಾರಸ ವಾಹಿನೀ ಪ್ರವಾಹಮೆಟ್ಟಿದುಯ್ಯೆ ವಿಭೀಷಣನ ಭವನಮುಂ ಪೊರಮಟ್ಟದೃಶ್ಯನಾಗಿ ಪೋಗಿ ಸೀತಾದೇವಿಯಿರ್ದ ಬನಮುಂ ಪೊಕ್ಕು ಮುಂಡೋದರಿವೆರಸು ಪಲಂಬರುಮುಂಬರ ಚರ ನಿತಂಬಿನಿಯರ್ ಬಳಸಿ ದಿನಲಕ್ಷ್ಮ್ಯಯಂ ಬಳಸಿದ ದೀಪಮಾಲೆಯಂತೆ ಕಾಂತಿ ಗೆಟ್ಟಿರೆ ವಿರಹ ವಿಧುರೆಯಾಗಿಯುಂ ಲಾವಣ್ಯರಸ ತರಂಗಿಣೀ ತರಂಗ ಲೇಖೆಯನನು ಕರಿಸಿ ತಳಿರ್ತಶೋಕ ತರು ತಳಮನಲಂಕರಿಸಿ—

ಕಂ ॥ ಪೊಗೆಗೊಂಡ ಚಿತ್ರಲತೆ ದೂ
ಳಿಗೊಂಡ ಪುತ್ತಳಿಗೆ ಮುಂಜುಗೊಂಡಬ್ಜಿನಿ ಕಾ ॥
ರ್ಮುಗಿಲೊಳಕೊಂಡೆಳವೆಜ್ಜೆಯೆನೆ
ವೃಗಲೋಚನೆ ಸೀತೆ ನಾಡೆ ಪಾಡಲ್ಬಿದರ್ದಳ್ ॥ ೮೩ ॥

ಉ ॥ ಶ್ರೀವಧು ಪದ್ಮಸದ್ಮದಿನಗಲ್ಪಳಿದೇಕೆಯೊ ಪೇಳ್ಮಿಮೇಕೆ ವಾ ।
ಕ್ಕ್ರೀವಧುವಂಚೆಯುಂ ತೊಜ್ಜೆದಳೀಕೆಯೊ ಚಂದ್ರಿಕೆ ಚಂದ್ರಬಿಂಬದಿಂ ॥
ಭೂವಲಯಕ್ಕೆ ಬಂದಳಿನುತುಂ ಬಗೆಯೊಳ್ ಪೊಜಸೊಣ್ಮೆ ಸಂಶಯಂ ।
ಪಾವನಿ ವಿಸ್ಮಯ ಸ್ತಿಮಿತ ಲೋಚನನೀಕ್ಷಿಸಿದಂ ವೃಗಾಕ್ಷಿಯಂ ॥ ೮೪ ॥

ಚ ॥ ನಿರುಪಮ ರೂಪೆಯರ್ ಸತಿಯರೀ ದೊರೆಯರ್ ಪೆಜರಾರುಮಿಲ್ಲ ಜೇ ।
ಚರಿಯರ ಸುತ್ತಿನೊಳ್ ಖಚರ ವೀರಭಟರ್ಕಳ ಕಾಪಿನೊಳ್ ಪೆಜರ್ ॥
ತರುಣಿಯರಿರ್ದರಾರ್ ತ್ರಿಭುವನಾಂಬಿಕೆ ಜಾನಕಿ ತಪ್ಪದಪ್ಪಳಂ ।
ತಿರೆ ಕಡುನೀಜ್ಜಿಯಲ್ಲದೊಡೆ ರಾಘವನಂತಿರೆ ಚಿತ್ತವಿಾವನೇ ॥ ೮೫ ॥

ಎಂದು ನಿಶ್ಚಿತ ಮನನಾಗಿ—

ಕಂ ॥ ಜಾನಕಿ ಪೊಜಿಗಾಗಿರೆ ಪವ
ಮಾನಸುತಂ ಕಾಣದಂತು ಪೆಜರಾರುಮಶೋ ॥

ಕಾನೋಕಹ ಕಿಸಲಯ ಸಂ
ತಾನಮನಾಭರಣ ಕಿರಣವೊದವಿಸೆ ಬಂದಂ ॥ ೮೬ ॥

ಅಂತು ಸುಕೃತವೆ ಮೂರ್ತಿಗೊಂಡಂತೆ ಕೆಲಕ್ಕೆ ವಂದು—

ಉ ॥ ಮುನ್ನಜನಂತುಟಂ ಪ್ರಿಯನ ಮುದ್ರಿಕೆಯಂ ತನಗಿತ್ತು ವಾಯು ಪು ।
ತ್ರನ್ನತನಾಗೆ ಕಂಡು ಮಣಿಮುದ್ರಿಕೆಗಂದಿದಿರ್ವಂದ ಪಾಟಚ್ಚಿಯಿಂ ॥
ದನ್ನಯನಾಂಬು ಹರ್ಷಪುಲಕಂ ಪೊಜಪೊಣ್ಮೆ ಮನೋವಿಕಾಸಮಂ ।
ಕನ್ನಡಿಸಿತ್ತು ಸೀತೆಯ ಮುಜಾಂಬುರುಹಂ ದರಹಾಸ ಪೇಶಲಂ ॥ ೮೭ ॥

ಚ ॥ ಕಲಶ ಕುಚಂ ಕದಕ್ಕದಿಸೆ ಸುರ್ಕುಸಿರಿಂ ನಡುಗಿತ್ತು ಚಿತ್ತಮು ।
ಪ್ಪಲರ್ದ ಮುಜಾರವಿಂದ ಮಕರಂದಮೆನಲ್ ಬೆಮರ್ಗಳ್ ಕಪ್ಪೋಲದೊಳ್ ॥
ನೆಲಸಿದುವಂಗ ಕಾಂತಿ ಕುಡಿಮಿಂಚಿನ ಗೊಂಚಲನೊಪ್ಪವಿಟ್ಟವೋಲ್ ।
ಜಲಜಲಿಸಿತ್ತು ಜಾನಕಿಗೆ ಮುದ್ರಿಕೆ ಕೊಟ್ಟುದನಂಗ ಮುದ್ರೆಯಂ ॥ ೮೮ ॥

ಅಂತು ಹರ್ಷರಸ ತರಂಗಿತಾಂತರಂಗೆಯಾಪ ಜಾನಕಿಯಂ ಮಂಡೋದರಿ ಮೊದಲಾಗೆ ಕೆಲದೊಳಿರ್ದ ಖಚರ ಕಾಂತೆಯರ್ ರಾವಣನೊಳಪ್ಪನು[1]ಬಂಧಮನೊಡಂಬಟ್ಟು ಸಂತೋಷಂಬಟ್ಟಳೆಂಬುದುಮಳುಂಬಮೆನೆ ಮುನಿದು—

ಕಂ ॥ ತನಗೆ ಪತಿವ್ರತಮಿಲ್ಲದ
ವನಿತೆ ಕುಲಸ್ತ್ರೀಯೆ ಭಿನ್ನ ಭಾಜನಮಿಂತ ॥
ಪ್ಪನುಚಿತಮಂ ಹರಿವಂಶದ
ವನಿತೆಯರೊಳ್ ನುಡಿಯಲಕ್ಕುಮೇ ನಿಮ್ಮನ್ನರ್ ॥ ೮೯ ॥

ಎನಗೆ ಪರ ಪುರುಷರಸ್ಮ
ಜ್ಜನಕ ಸಹೋದರ ಸಮಾನರೆನಗನುರಾಗಂ ॥
ಜನಿಯಿಸಿದುದು ರಘುಕುಲ ತಿಲ
ಕನ ಬೆಸದಿಂ ಬಂದ ದೂತನಂ ಕಾಣಲೊಡಂ ॥ ೯೦ ॥

ಎನೆ ಮಂಡೋದರಿ ಕೇಳ್ದು—

ಉ ॥ ಅರ್ಣವ ಲಂಘನ ಕ್ಷಮರೆ ಮಾನವರಾರ್ಗಮಭೇದ್ಯಮಪ್ಪುದಂ ।
ಸ್ಪರ್ಣಿಲಯಂಬರಂ ನಿಮಿರ್ದ ವಜ್ರದ ಕೋಂಟೆಯನಾರೊ ಭೇದಿಪರ್ ॥
ನಿರ್ಣಯಮಾಗೆ ರಾಘವನ ಸುದ್ದಿಯನೀಕೆಗೆ ಪೇಳ್ದುದಾಗದೇ ।
ಕರ್ಣ ಪಿಶಾಚಮಿಾ ವಿಕಲಭಾಷೆ ನಿರನ್ನ ವಿಕಾರಮಾಗದೇ ॥ ೯೧ ॥

---

1. ಭವ ಕ. ಏ ಚ.

ಎಂದು ಪೆಂಡವಾಸದ ವಿಲಾಸಿನಿಯರೊಡನೆ ನುಡಿಯುತ್ತಿರ್ದುದುಮಗಣ್ಯ ಲಾವಣ್ಯವತಿ ವೈದೇಹಿ ಪುಣ್ಯಪುರುಷ ನೀನೆನ್ನಪಾರ ದುಃಖಭಾರದಿಂ ನಮೆಯಲೀಯದೆ ಮದೀಯ ಶುಭವಾರ್ತೆಯಂ ತಂದ ದೂಸಱಿಂದೆನಗೆ ನೀಂ ಪ್ರಭಾಮಂಡಲ ನಿಂದಗ್ಗಳಮಪ್ಪ ಸಹೋದರನ್ಮೈ ನಿನ್ನ ಕುಲ ಗೋತ್ರ ನಾಮಂಗಳನೆನಗೆ ತಿಳಿಯಿಪೇಱಿಸಲೊಡಂ

ಕಂ ॥ ಸಿರಗಕ್ಕುಂ ಮೆಯ್ಗಿರೆದಾ
ನಿರಲೆಂದು ನಿಜಸ್ವರೂಪಮಂ ತೋಱುವುದುಂ ॥
ಮರುದಾತ್ಮಜನಂತಃಪುರ ।
ಪುರಂಧ್ರಿಯರ್ ಸೆಡೆದು ನೀತೆಯುಂ ಮುಜಿಗೊಂಡರ್ ॥ ೯೭ ॥

ಅನಂತರಂ ಮರುತ್ತನೂಜಂ ಮುಕುಲಿತ ಕರಸರೋಜನಿಂತೆಂದಂ—

ಚ ॥ ಪಿತೃ ಪವನಂಜಯಂ ಖಚರ ವಲ್ಲಭನಂಜನೆ ಪೆತ್ತ ತಾಯ್ ಮಹಾ ।
ಸತಿ ಹನುಮಂತನೆಂ ಪೆಸರೊಳಾಂ ವಿಜಯಸ್ರಮುದಾ ಪ್ರಿಯಂ ಜಗ ॥
ತ್ಪತಿ ಪತಿ ರಾಮನಾ ಸುಚರಿತಂ ಬೆಸವೇಱಿರ್ಪೊಡೆ ನಿಮ್ಮ ಸುದ್ದಿಗ ।
ಪ್ರತಿಮ ಪತಿವ್ರತಾಚರಣ ಭೂಷಣ ಭೂಷಿತೆ ಬಂದೆನಂಬಿಕೇ ॥ ೯೩ ॥

ಕಂ ॥ ಕಮಲಿನಿಯಂ ಕಲಹಂಸಂ
ಸುಮನೋಮಂಜರಿಯನಳಿ ವನಾಂತ ಸ್ಥಲಿಯಂ ॥
ಸಮದೇಭಂ ನೆನೆವಂ[1]ತನು
ಪಮೆ ನಿಮ್ಮನೆ ನೆನೆದು ದೂರಿಪಂ ರಘುವೀರಂ ॥ ೯೪ ॥

ಎಂದು ವಿನ್ನವಿಸಿ ಮತ್ತಂ ಕೆಲವುಮವಿನ್ನಾಣಂಗಳನಿಂತೆಂದಂ—

ಕಂ ॥ ವಾರಿಜಮುಖಿ ಭೂಪಂ ಗಂ
ಭೀರಾ ವಾಹಿನಿಯ ತೀರದೊಳ್ ನಿಮ್ಮ ಮುಖಾಂ ॥
ಭೋರುಹದೊಳ್ ಪಡಿಯಿಟ್ಟಂ
ಭೋರುಹಮಂ ಪೆಚ್ಚಲೊಲ್ಲನಿಲ್ಲೊರ್ವೆ ಗಡಂ ॥ ೯೫ ॥

ಭರತಂ ಪಿಂದನೆ ಬಂದಂ
ದರಣ್ಯದೊಳ್ ರಾಜ್ಯಭರಮನೊಪ್ಪಿಸಿಪೊಡೆ ಸಂ ॥
ವರಿಸಿ ಪದಿನಾಲ್ಕು ವರ್ಷಂ
ಒರಮಿರ್ಪಂತಾಗೆ ರಾಘವಂ ನಿಯಮಿಸಿದಂ ॥ ೯೬ ॥

1. ತಿರೆ ರನು

ಕಂ ॥ ಸಲಿಲಾಹರಣಾರ್ಥಂ ಪೋ
ಗಿ ಲಕ್ಷ್ಮಣಂ ದೇವಿ ಗಂಡವರಿಜಿಂದಿರ್ದಾ ॥
ಲಲನೆಯ ಕರಗದವಳ ಕೈ
ಯೊಳಟ್ಟಿದಂ ಗಡಮದೊರ್ಮೆ ಶೀತಲ ಜಲಮುಂ ॥ ೯೭ ॥

ಕ್ರೀಡಾಪ್ರೋತಂ ಪೊಟಿಲಂ
ಮಾಡಿ ಘನಾಗಮದೊಳಿರಿಸಿ ಯಕ್ಷಂ ಕೊಟ್ಟಂ ॥
ಚೂಡಾಮಣಿಯಂ ಕದನ
ಕ್ರೀಡೆಗೆ ನೆನೆದಾಗಳಂತೆ ಬಂದಪೆನೆಂದಂ ॥ ೯೮ ॥

ಎಂಬುದುಮನುಭೂತಾರ್ಥಸ್ಮರಣೆಯಿಂ ಮನದ ಸಂಶಯಂ ಪಿಂಗೆ ವ-ನಂ ಗೊಂಡು ಮಾನಿನಿ ಪವಮಾನ ಸೂನುಗಿಂತೆಂದಳ್—

ಸ್ವಾಗತಂ ॥ ಎಂತು ದಾಂಟಿದೆ ಮಹಾರ್ಣವಮಂ ಬಂ !
ದೆಂತು ಪೊಕ್ಕೆ ಪುರಮಂ ರಘುವೀರಂ ॥
ಗೆಂತು ನಿನ್ನೊಡನೆ ಕೂಟಮದಾಯ್ತೆಂ ।
ಬಂತುಟಂ ತಿಳಿಪು ದೋರ್ಬಲಶಾಲೀ ॥ ೯೯ ॥

ಕಂ ॥ ಒಡೆದೆಂ ವಜ್ರದ ಕೋಂಟೆಯ
ನೆಡೆವ-ಡಗದೆ ಬಂದು ವಜ್ರಮುಖನಾಂತಿಱಿಯಲ್ ॥
ಕಡುಕೆಯ್ದೊಡೆ ಕೊಂದೆಂ ನಿ
ನ್ಮಡಿ ಪುರಮಂ ಪೊಕ್ಕು ಬಂದು ಕಂಡೆಂ ನಿಮ್ಮಂ ॥ ೧೦೦ ॥

ಎಂದು ಬಿನ್ನವಿಸಿ ಮತ್ತಮಿಂತೆಂದನಂಬಿಕೆ ದಶಮುಖನ ತಂಗೆ ಚಂದ್ರನಖಿ ಸಿಜ ತನೂಜನಪ್ಪ ಶಂಬುಕನಂ ಸೌಮಿತ್ರಿ ಕೊಂದು ಸೂರ್ಯಹಾಸಾಸಿಯಂ ಕೊಳ್ವ ದುಮುದಂ ಕಂಡಟಿಲ್ದು ತನ್ನ ಗಂಡನಪ್ಪ ಖರಂಗೆ ಪುಯ್ಯಲಿಡುವುದುಮತಿ ಕುಪಿತ ನಾತನಸಂಖ್ಯಾತ ಬಲಸಮೇತನೆತ್ತಿಬಂದು ಲಕ್ಷ್ಮಣನೊಳ್ ಕಾದುತ್ತುಮಿರೆ ದಶಾನನನುಮವರ ಬವರಮಂ ನೋಡಲೆಂದು ಬರುತುಂ ನಿಮ್ಮಂ ಕಂಡು ವಿಪ ರೀತ ಚಿತ್ತನಾಗಿ ಕೈದುಗೆಯ್ಯದೆ ಕೈತವದಿಂ ರಘುವೀರನನಗಲ್ಚಿ ನಿಮ್ಮನುಯ್ವುದು ಮಾ ಕ್ಷಣದೊಳ್ ಲಕ್ಷ್ಮಣನಲ್ಲಿಗೆ ರಾಮದೇವರ್ ಬಿಜಯಂಗೆಯ್ಯೆ ದೇವ ಸೀತಾ ದೇವಿಯನಗಲ್ದು ಪೊಲ್ಲದುಗೆಯ್ದಿರಿವಂದಿರಂ ಕೊಲ್ವುದರ್ಕಾನೆ ಸಾಲ್ವೆಂ ಮಗುಟಿ ಬಿಜಯಂಗೆಯ್ಯಮೆನೆ ಬೇಗಂ ಬಂದು ಮುನ್ನಮಿರ್ದೆಡೆಯೊಳ್ ನಿಮ್ಮಂ ಕಾಣದೆ ಕಾನನದೊಳ್ ತೊಟಿಲ್ದಜಿಸುತ್ತುಮಿರ್ಪನ್ನೆಗಂ ಖರ ದೂಷಣರಂ ಕೊಂದು ಲಕ್ಷ್ಮಣ ನೇಕಾಕಿಯಾಗಿರ್ದಣ್ಣನ ಕೆಲಕ್ಕೆ ಬಂದು ಮದಂಬಿಕೆಯೆಲ್ಲಿರ್ದಳೆಂದು ಬೆಸಗೊಳ್ವ

ದುಮಾಂ ನಿನ್ನಲ್ಲಿಗೆ ಬಂದ ಪಿಂದೆಯಾವನಾನುಮೊರ್ವಂ ಮಾಯಾವಿ ಕೊಂಡುಯ್ದು ನೊ ಕ್ರೂರ ವ್ಯಗಂಗಳುಯ್ದುವೊ ಎಂದಟಲ್ದು ನುಡಿವುದುಂ ಲಕ್ಷ್ಮಣಂ ವಿಷಣ್ಣ ಚಿತ್ತನಾಗಿರ್ಪುದುಮಾ ಸಮಯದೊಳ್ ಶರಣಾಗತಂ ವಿರಾಧಿತ ವಿಯಚ್ಚರಂ ನಿನ್ಮ್ಮ ಸುದ್ದಿಗೆ ಚೆಚ್ಚರವನುಚರರನಟ್ಟಿ ರಾಮ ಲಕ್ಷ್ಮಣರಂ ಪಾತಾಳಲಂಕೆಗುಯ್ದು ಬೆಸಕೆಯ್ಯುತ್ತಿರ್ದಂ ಅನ್ನೆಗಮತ್ತ ಸುಗ್ರೀವಂ ಮಯಾಸುಗ್ರೀವನ ವ್ಯತಿಕರದೊಳ್ ಶರಣಾಗತ ಶರಣ್ಯನಪ್ಪ ರಾಮನಂ ಕಂಡು ತನ್ನ ವೃತ್ತಾಂತಮಂ ಬಿನ್ನವಿಸೆ ನಿನ್ನ ಪಗೆಯಂ ತೀರ್ಚಿದಪೆನೆಂದು ಕಿಷ್ಕಿಂಧ ಪುರಕ್ಕೆ ಬಂದು—

ಕಂ ॥ ಸುಗ್ರೀವನ ಪಗೆ ಮಾಯಾ
ಸುಗ್ರೀವನನುತ್ಪ್ರಚಂಡನಂ ಕೇನಾಶಂ॥
ಗಗ್ರ ಗ್ರಾಸಂಮಾಡಿ ನೃ
ಪಗ್ರಾಮಣಿ ಕಳೆದನೆಮ್ಮ ಕುಲ ಪರಿಭವಮಂ ॥ ೧೦೧ ॥

ಅದಱನೆಮ್ಮ ವಾನರ ಧ್ವಜರಪ್ಪ ವಿದ್ಯಾಧರರೆಲ್ಲಂ ಪ್ರತ್ಯುಪಕಾರ ತತ್ಪರತೆಯಿಂ ದಾಳ್ತನಕ್ಕೆ ಪೂಣ್ದು ರತ್ನಜಟೆಯ ದೆಸೆಯಿಂ ನಿಮ್ಮ ಶುದ್ಧಿಯನಱಿದಿಂಬಱಿಯಂ ಸುಗ್ರೀವನೆನ್ನುವಂ ಬರಿಸಿದೊಡಾನುಮುದಾತ್ತ ರಾಘವನ ಚರಣ ಸೇವೆಯೊಳ್ ನಿಂದೆ ನೀಗಳಖಿಳ ವಿದ್ಯಾಪರಮೇಶ್ವರರಪ್ಪ ವಿದ್ಯಾಧರರ್ ಪಲಂಬರುಮಂ ಮಾಡಿಕೊಂಡು ರಾಮ ಲಕ್ಷ್ಮಣರ್ ಕಿಷ್ಕಿಂಧ ಪುರದೊಳಿರ್ದಟ್ಟಿದೊಡೆ ರಾವಣನೊಳ್ ನುಡಿದು ನಿಮ್ಮ ಸೆಜ್ಜೆಯಂ ಬಿಡಿಸಲ್ ಬಂದೆನಿದು ಮದೀಯ ವೃತ್ತಕಮೆನೆ ಸೀತೆ ಸಂತೋಷಂ ಬಟ್ಟು—

ಕಂ ॥ ಮರುವಾತ್ಮಜ ನಿಮ್ಮನ್ನರ್
ಧುರೀಣರೇಕಾಂಗ ವಿಜಯಿಗಳ್ ಬಹು ವಿದ್ಯಾ ॥
ಪರಮೇಶ್ವರರೆನಿಬರಿಳೀ
ಶ್ವರ ಪಾರ್ಶ್ವದೊಳೆಂದು ಜನಕಸುತೆ ಬೆಸಗೊಂಡಳ್ ॥ ೧೦೨ ॥

ಎನೆ ಮಯನ ಮಗಳ್ ಮಂಡೋದರಿ ಸೀತಾದೇವಿಗಿಂತೆಂದಳ್—

ಉ ॥ ನೂತನರೊಳ್ ಪುರಾತನರೊಳೀತನೊಳಾರ್ ದೊರೆ ನಾಕ ಲೋಕದೊಳ್ ।
ಭೂತಲದೊಳ್ ರಸಾತಲದೊಳೊರ್ವನೆ ದೋರ್ಬಲಶಾಲಿ ಲೋಕ ವಿ ॥
ಖ್ಯಾತನಶೇಷ ವಿದ್ಯೆಗಳೊಳಾತತ ಕೀರ್ತಿ ಮರುತ್ತನೂಜನ ।
ಜಾತನುಖೀ ಪವಣ್ಬಡಿಪೊಡೀತನನೀತನೆ ಪೋಲ್ವನಿನ್ನರಾರ್ ॥ ೧೦೩ ॥

ಈತನ ಪರಾಕ್ರಮದಳುರ್ಕೆಯಂ ಪೇೞ್ವೊಡೆ ಮುನ್ನಮೊರ್ಮೆ ದಶಮುಖಂಗೆ ರಣಮುಖದೊಳಿದಿರ್ಚಿದ ವರುಣನಂ ಪರಾಜ್ಮುಖಂಮಾಡಿ ಗೆಲ್ದು ಕುಡೆ ವಿಯಚ್ಚರ

ಪತಿ ಮೆಚ್ಚಿ ತನ್ನ ತಂಗೆಯಪ್ಪ ಚಂದ್ರನಖಿಯ ಮಗಳನನಂಗಪುಷ್ಪೆಯನೀತಂಗೆ ಮಹಾವಿಭೂತಿಯಿಂ ಮದುವೆಯಂ ಮಾಡಿ ಕೊಂಡಾಡಿ ತನ್ನೊಳೋರನ್ನಂ ಮಾಡಿ ಪೊರೆಯೆ ಪಾಟಿಗೆ ತಪ್ಪಿ—

ಚ ॥ ಬರಿವರೆ ಕರ್ವು ಕೊರ್ವಿ ಕರಮೇಳಿದಮಪ್ಪವೊಲೀತನುಂ ವಿಯ ।
ಚ್ಚರ ಪತಿಯಪ್ಪ ರಾವಣನಿರಲ್ ಕರಮೇಳಿದರಪ್ಪ ಭೂಮಿ ಗೋ ॥
ಚರರೊಳಸೇವ್ಯರೊಳ್ ತನಗೆ ಕಿಂಕರ ಭಾವಮನಪ್ಪುಕೆಯ್ದನೀ ।
ತರಳತೆಯೊಂದುಮಿಲ್ಲದೊಡೆ ಪೋಲ್ಪವರಾರ್ ಪವಮಾನ ಸೂನುವಂ ।೧೦೪॥

ಎನೆ ಹನುಮನೆಂದನುದಾತ್ತ ರಾಘವನ ಗೆಯ್ಮುಪಕೃತಿಗೆ ಪ್ರತ್ಯುಪಕಾರಮುಂ ಗೆಯ್ದಿನ್ನ ಪುರುಷಾಕಾರಮುಂ ಮೆಜಕಿಯಲೆಂದು ಬಂದೆನೀ ಪೊಲ್ಲಮೆಯನೆಂತುಂ ಕಳೆಯಲಪ್ಪುದು ನಿಮಗೆ ಕುಲಮಚಿಯೆ ನೆಲಂ ಪಚಿಯೆ ಮಾನಸಿಕೆಯನೊಕ್ಕ ಪರತ್ರೆಯಂ ಬಗೆಯದೆ ಪರಕಲತ್ರಮನಾಸೆಗೆಯ್ವ ಪೊಲ್ಲಮೆಯುಂ ಕಳೆವಂದಮಾವು ದೆನೆ ಕನಲ್ದು ಮಂಡೋದರಿ ಬೆಟ್ಟವೆಟ್ಟನಿಂತೆಂದಳ್—

ಕಂ ॥ ಅನಿಲ ತನೂಭವ ಸುಗ್ರೀ
ವನುಮಂ ನಿನ್ನಮನವಂಧ್ಯಕೋಪಂ ವಶಕಂ ॥
ಧನಮೋಘಂ ಕೊಲ್ಲದೆ ಮಾ
ಣ್ಬನೆ ಪೇಚಿನೆ ಸೀತೆ ಕಲುಷವಶ ಗತೆಯಾದಳ್ ॥ ೧೦೫ ॥

ಅಂತು ನುಳಿದು—

ಕಂ ॥ ದಾಂಟೆ ಕಡಲಂ ಜಗತ್ತ್ರಯ
ಕಂಟಕನಂ ಕೊಂದು ರಾಮುಲಕ್ಷ್ಮಣರಿರ್ಪ ॥
ತ್ತಿಂಟು ದಿವಸದೊಳೆ ನಿನಗಣ
ಮುಂಟಾಗಿಸುವರ್ ವಿಶೇಷಮಪ್ಪೆರ್ದೆಪಚಲಂ ॥ ೧೦೬ ॥

ಎನೆ ಮಂಡೋದರಿ ಲಯ ಸಮಯದ ಚಂಡಿಕೆಯಂತೆ ಮಾನುಸಕಂವ.ಸಗಿ

ಉ ॥ ಕೇಸುರಿ ಸೂಸೆ ತನ್ನ ಮೊಗದಿಂ ಕಿಡಿ ಬೀಳ್ತಿರೆ ತನ್ನ ಕಣ್ಗಳಿಂ ।
ದಾಸುರಮಾಗೆ ದಾಡೆಗಳೊಡಲ್ ಬಳಿದಂಬರಮುಂ ತಜುಂಬೆ ತ ॥
ನ್ನಾಸುಕರಂ [1]ಕರಂ ದೆಸೆಗಮರ್ವಿಸೆ ಕೈಗಳನೆತ್ತಿ ಪೊಯ್ಯಲೆ ।
ಟ್ಟಾಸಮಯಕ್ಕೆ ತೆಕ್ಕನೆಡೆವೊಕ್ಕನರಿಂಜಯನಂಜನಾ ಸುತಂ ॥ ೧೦೭ ॥

---

1. ಕರಂ ದೆಸೆಗಗುರ್ವಿಸೆ. ಘ: ಗಳಿಂದೆಸೆ ಮಿಗುರ್ವಿಸೆ. ಗ.

ಅದರ್ಕೆ ನಿತ್ತರಿಸದಾಕೆ ಸಭೆಯಿನೆಬ್ದಿ ರಾವಣನ ಕೆಲಕ್ಕೆ ಪೋದಳಿತ್ತ ಪವ
ಮಾನಸೂನು ಜೋನಮಂ ತರಿಸೆ ಸಿದ್ಧಪ್ರತಿಜ್ಞೆಯಾಗಿ—

ಚ ॥ ಸತಿ ಸುಚರಿತ್ರೆ ಪಂಚ ಪರಮೇಷ್ಠಿಗಳಂ ಸ್ತುತಿಗೆಯ್ದು ಭಕ್ತಿಯಿಂ ।
ಯತಿವರರ್ಗನ್ನಮಂ ಮನದೊಳಿತ್ತು ರಘೂದ್ವಹ ಪಾದಪಂಕಜ ॥
ದ್ವಿತಯಮನಿಟ್ಟು ಹೃತ್ಸರಸಿಯೊಳ್ ಜನಕಾತ್ಮಜೆ ದೇವತಾ ವಿನಿ ।
ರ್ಮಿತ ಮಣಿಕುಟ್ಟಿಮ ಸ್ಥಲದೊಳಿರ್ದಮೃತಾನ್ನಮನುಂಡನಂತರಂ ॥ ೧೦೮ ॥

ಕಂ ॥ ಹನುಮಂ ಕೈಮುಗಿದು ಜಗ
ಜ್ಜನನಿ ರಘುಪ್ರವರನಲ್ಲಿಗುಯ್ವೆಂ ನಿಮ್ಮಂ ॥
ಜನಕಾತ್ಮಜೆ ಬಿಜಯಂಗೆ
ಯ್ಯೆನಲದು ತಕ್ಕುರ್ಮೆಯಲ್ಲದೆಂದಿಂತೆಂದಳ್ ॥ ೧೦೯ ॥

ಮ ॥ ಧರಣೀ ವಲ್ಲಭನಾಜ್ಞೆಯಿಲ್ಲದೆನಗೆಂತುಂ ಬರ್ಪುದೌಚಿತ್ಯಮ ।
ಲ್ತರಸಂಗೆನ್ನಿರವಂ ನಿವೇದಿಪುದು ಕಾಲಕ್ಷೇಪಮಂ ಮಾಡಿ ನೀ ॥
ನಿರೆ ದೈತ್ಯೇಂದ್ರನಪಾಯಮಂ ನಿನಗೆ ಮಾಬ್ಕುಂ ಪೋಪುದೆಂದಾ ತನೂ ।
ದರಿ ವೈದೇಹಿ ಮರುತ್ಸುತಂಗೆ ನಿಜ ಚೂಡಾರತ್ನಮಂ ನೀಡಿದಳ್ ॥ ೧೧೦ ॥

ಅಂತು ಚೂಡಾಮಣಿಯನಿತ್ತು ಮತ್ತಂ ಕರ್ಣರವೆಯೆಂಬ ತೊಜೆಯ
ತಡಿಯೊಳ್ ಚಾರಣಯುಗಳಕ್ಕಾಹಾರ ದಾನಮುಂ ಕೊಟ್ಟು ಪಂಚಾಶ್ಚರ್ಯಂಬೆತ್ತುದು
ಮೊದಲಾಗೆ ಪಲವವಿಜ್ಞಾಣಂಗಳಂ ಪೇಚ್ಚು ಮನ್ಯ ಗದ್ಗದ ಕಂಠೆಯುಮಶ್ರುಜಲ
ಲುಲಿತ ಲೋಚನೆಯುಮಾದ ಜಾನಕಿಗೆ ಹನುಮನಿಂತೆಂದಂ—

ದ್ರುತವಿಲಂಬಿತ ॥ ಎನಗಪಾಯಮನಾವನೊಡರ್ಚುವಂ ।
ಮೊನೆಯೊಳಿನ್ನೊಡನಾವನಿದಿರ್ಚುವಂ ॥
ಜನನಿ ರಾಘವನಾಜ್ಞೆಯೆ ಕಾಮದೀ ।
ತನನದಲ್ಲದೊಡೆಲ್ಲಿಯ ರಾವಣಂ ॥ ೧೧೧

ಉ ॥ ಸೀತೆಯ [1]ವಾರ್ತೆದರ್ಪನಿತೆ ಸಾಲ್ವುದು ದೈತ್ಯನ ರಕ್ತಪಾನದಿಂ ।
ಭೂತ ಗಣಂಗಳಂ ತಣಿಪಿ ತಂದಪೆನಾಕೆಯನಂತು ತಾರದಂ ॥
ದಾತತ ಕೀರ್ತಿ ಸಲ್ಲದೆನೆ ಭೂಭುಜನಾಜ್ಞೆಗೆ ಮಾಣ್ದೆನಲ್ಲದಂ ।
ದೇತೊವಳೀ ತ್ರಿಕೂಟ ಕುಧರಂಬೆರಸಂಬಿಕೆ ನಿಮ್ಮನುಯ್ಯನೇ ॥ ೧೧೨ ॥

1 ಸುನಿ. ಗ. ಘ.

ಎಂದು ಬಿನ್ನವಿಸಿ ಬೀಳ್ಕೊಂಡು ತನ್ನೊಳಿಂತೆಂದಂ—

ಮ ॥ ಬರವಂ ಪೋಗುಮನಾರುಮೆತ್ತಲಜಿವರ್ ಬಂದಂತೆ ಪೋದಂದು ದೋಃ ।
ಪರಿಘಂ ದೂಷಿತಮಕ್ಕುಮಿಕ್ಕೆ ಖಲರಂ ಕೆಚ್ಚೀ ಪುರೋದ್ಯಾನಮುಂ ॥
ಪುರಮುಂ ಸುಟ್ಟು ದಶಾಸ್ಯನೆನ್ನನಜಿವಂತಾಂ ಪೋಗಿ ರಾಮಾಂಘ್ರಿ ತಾ ।
ಮರಸಕ್ಕಾನತನಪ್ಪೆನೆಂಬ ಮನಮುಂ ತಂದಂ ಮರುನ್ನಂದನಂ ॥ ೧೧೩ ॥

ಎಂದು ಬಗೆಯುತ್ತುಮಿರ್ಪನ್ನೆಗಮತ್ತ ಮಂಡೋದರಿ ಖಚರ ವಲ್ಲಭನಲ್ಲಿಗೆ ಪೋಗಿ—

ಕಂ ॥ ದೇವ ರಘುರಾಮನಂ ಸು
ಗ್ರೀವಂ ಕೈಕೊಂಡು ಹನುಮನಂ ಬರಿಸಿ ದಶ ॥
ಗ್ರೀವ ಬೆಸವೇೞ್ಕೆ ಕಂಬು
ಗ್ರೀವೆಯ ಜಾನಕಿಯ ಸುದ್ದಿಗಾತಂ ಬಂದಂ ॥ ೧೧೪ ॥

ಅಂತು ಬಂದು—

ಕಂ ॥ ಪ್ರಮದ ವನದೊಳಗೆ ಸೀತೆಯ
ಸಮೀಪದೊಳ್ ಹನುಮನಿರ್ದನೆಂದಜಿಪುವುದುಂ ॥
ಬೆಮರ್ವನಿ ಗಂಡಸ್ಥಲದೊಳ್
ಸಮನಿಸೆ ಕೆಸುಗಣ್ಣಿ ಮಸಗಿದಂ ದಶಕಂಠಂ ॥ ೧೧೫ ॥

ಅಂತು ಮುಳಿದು ಕದನ ಕರ್ಕಶರಪ್ಪ ರಾಕ್ಷಸರಂ ಪೆಸರ್ವೆಸರೊಳೆ ಕರೆದು—

ಮ ॥ ಪ್ರಮದೋದ್ಯಾನದೊಳಾವನಿರ್ವನವನಂ ಕೊಂದಿಕ್ಕಿನೆಂದಾಪವ ।
ಕ್ಷ್ಮಮರಂ ಪೇೞೆ ದಶಾನನಂ ದನುಜರುಂ ಸಾಮಾನ್ಯನೆಂದುದ್ಧತರ್ ॥
ಸಮರ ಕ್ರೀಡೆಗಪೇಕ್ಷೆಗೆಯ್ವು ಪರಿತಂದರ್ ತಂಡದಿಂ ಚಂಡವಿ ।
ಕ್ರಮನೀತಂ ಹನುಮಂತನೆಂದಜಿದೊಡೇನಾರುಂ ಮನಂಗೆಯ್ವರೇ ॥ ೧೧೬ ॥

ಅಂತು ದೆಸೆದೆಸೆಗೆ ಮಸಗಿ ಕವಿತರ್ಪುದುಂ—

ಕಂ ॥ ಆ ದನುಜ ಬಲಮನಾ ವನ
ಪಾದಪಮಂ ಕೆಚ್ಚು ಮೋದಿ ಕೊಲಲೊಡರಿಸಿದಂ ॥
ಕಾದುವ ಬನಮುಂ ಕೀೞ್ವ ವಿ
ನೋದಂಗಳನೆರಡನೊಡನೆ ತೀರ್ಚುವ[1] ಬಗೆಯಿಂ ॥ ೧೧೭ ॥

1. ರ್ಚಿದನಣುವಂ. ಗ.

ಕಂ ॥ ಅಸುಗೆಯ ಪೆರ್ಮರನಂ ಕಿ
ಬ್ಬಿಸಮಬಲಂ ಬೀಬಿಪೊಯ್ಯೆ ಪವಮಾನ ಸುತಂ ।
ಬಿಸುನೆತ್ತರ್ ಕೆಂದಳಿರೆನೆ
ಪಸರಿಸೆ ದಾನವರಶೋಕವನಮೆನೆ ಕೆಡೆದರ್ ॥ ೧೨೪ ॥

ತಾಳ ವನಂಗಳುಮಂ ಹಿಂ
ತಾಳ ಕುಜಂಗಳುಮನೊಡನೆ ಕಿಬ್ತಿಡೆ ದನುಜರ್ ॥
ತಾಳುಂತಟ್ಟುಂ ಕೆಡೆದರ್
[1]ತಾಳ ಕಳೇಬರರಿದೇನುದಾತ್ತನೊ ಹನುಮಂ ॥ ೧೨೫ ॥

ಬರ್ಕೆವಲಸುಗಳೊಳಸುರರ
ತೆರ್ಕೆಯನೆಬ್ಬಿಟ್ಟ ಪೊಯ್ವುದುಂ ಕೋಬ್ಯಾದುಳುಂ ॥
ಬರ್ಕೆಯ ತೊಳೆಯುಂ ಸೂಸಿದು
ವಾರ್ಕಡುಕೆಯ್ದನಿಲಜಂಗೆ ಕೂರ್ಪಂ ತೋರ್ಪರ್ ॥ ೧೨೦ ॥

ತಿಲಕ ತರುವಿಂ ನಿಶಾಚರ
ಬಲಮುಂ ಬಿಡೆ ಪೊಯ್ದು ಕೊಂದು ರಾವಣನ ಯಶ ॥
ಸ್ತಿಲಕಮುಮನವರ ಪೆಂಡಿರ
ತಿಲಕಮುಮಂ ತೊಡೆದನೊಡನೆ ಪವಮಾನ ಸುತಂ ॥ ೧೨೧ ॥

ಅಂತು ಮೇಲೆತ್ತಿಬಂವಸುರ ಸೇನೆಯೆಲ್ಲಮಂ ಪೇಟಿ ಪೆಸರಿಲ್ಲದಂತು ಪೇಸದೆ ಕೊಂದು—

ಕಂ ॥ ಅಮಿತಬಲಂ ಕಿಬ್ತೀಡಾ
ಡೆ ಮರುತ್ತನಯಂ ಮರುನ್ನದೀ ತೀರ ವನ ॥
ದ್ರುಮಮೆನಿಸಿದುವಂಬರದೊಳ್
ನಮೇರು ಮಂದಾರ ಪಾರಿಜಾತ ಕುಜಂಗಳ್ ॥ ೧೨೨ ॥

ಚ ॥ ಸರಲ ತಮಾಲ ತಾಲ ಕದಲೀ ಸಹಕಾರ ಮಹೀರುಹಂಗಳಂ ।
ಪರಶುವೊ ಮೇಘವಹ್ನಿಯೊ ದವಾಗ್ನಿಯೊ ಘೋರ ಸಮೀರನೋ ವನ ॥
ದ್ವಿರದವೊ ತನ್ನ ತೋಳ್ಬಲಮೆನಲ್ ಬನಮಂ ಬಯಲಾಗೆ ಕಿಬ್ತಿನಾ ।
ಸುರಗಿರಿಯಂ ಕಿಬಿಲ್ಗೆಜ್ಜೆವ ಮಾರುತ ಸೂನುಗಿದಾವ ಸಾಹಸಂ ॥ ೧೨೩ ॥

---

1. ತಾಳುದ್ದಂ ಕಳೆವರೇನುದಾತ್ತ. ಘ; ತಾಳುದ್ದಂ ಬರೆ ಕಳೇವರಂ ಪವನಸುತಂ. ಚ.

ಉ ॥ ಕೋಗಿಲೆ ಬೆಚ್ಚಿ ಪಾಱುದುವು ಚೂತ ವನಾವಳಿಯಿಂ ಶುಕವ್ರಜಂ ।
ಪೂಗ ವನಂಗಳಿಂ ಬೆದಱಿ ಪೋದುವು ಬಾಲ ಮರಾಲ ಸಂಕುಲಂ ।
ಪೂಗೊಳದಿಂದಗಲ್ದುವೆನಸುಂ ಪೆಜಪಿಂಗಿದುವನ್ಯದಾಳಿ ಪು ।
ನ್ನಾಗ ವನಂಗಳಿಂ ತಪಿಸೆ ನಂದನಮುಂ ಪವಮಾನ ನಂದನಂ ॥ ೧೩೪ ॥

ಮ ॥ ತನಿಗಂಪಂ ಕೆದಱುತ್ತುಮಿರ್ಪ ಪಳಿಕಿಂದಾಕರ್ಷಣಂಮಾಡಿ ಭೃಂ ।
ಗ ನಿಕಾಯಂಗಳನಂಗಜಂಗೆ ವಿಜಯ ಸ್ತಂಭಂ ವನಶ್ರೀಗೆ ಯೌ ॥
ವನಮೆಂಬಂತೆ ಪೊಗಚ್ತಿಯಂ ತಳೆದುವಂ ಕಿಚ್ತಿಂ ಮರುನ್ನಂದನಂ ।
ಘನಸಾರ ದ್ರುಮಮುಂ ದಶಾನನನ ಕೀರ್ತಿಸ್ತಂಭಮುಂ ಕೀಚ್ತಿಪೋಲ್ ॥ ೧೩೫ ॥

ಪುಗಲಿಲ್ಲೀ ವನದೊಳ್ ಮದೀಯ ಪಿತೃಗೆಂತುಂ ವೈರಮುರ್ವೀಜ ರಾ ।
ಜಗಳೊಳ್ ಗಂಧವಹಂ ಮದೀಯ ಜನಕಂಗೆಂದನ್ಯಯ ದ್ವೇಷಮಂ ॥
ಬಗೆಯೊಳ್ ತಾಳ್ದಿದ ಮಾಚ್ಚಿಯಿಂ ಪವನಜಂ ಕಿಚ್ತಿಂ ಪುರೋದ್ಯಾನಮಂ ।
ಪಗೆ[1]ಯೆತ್ತಾಯ್ತೆನೆ ವಾರ್ತೆಗಲ್ಲಿ ತರು ವಲ್ಲೀ ಗುಲ್ಮವೊಂದಿಲ್ಲೆನಲ್ ॥ ೧೩೬ ॥

ನೆಲನುಚ್ತಿಂತೆಪೊಲಾಗೆ ಕಿಚ್ತಿ ಬನಮಂ ಮಾಜುತಾಂತರುವೆಚ್ಚಿಸೈ ।
ಗ್ಜಲದಿಂ ತಾಯ್ಬೆದೆಗೂಡೆ ಬಿತ್ತಿ ಪೆಣನಂ ಬೇಱೊಂದು ಶೌರ್ಯಾಂಕುರಂ ॥
ತಲೆದೋಱುತ್ತದು ಕೊರ್ವಿ ಕೀರ್ತಿಲತೆಯಾಯ್ತಾ ವಲ್ಲಿಯಿಂದಂಬರ ।
ಸ್ಥಲಮುಂ ಮುದ್ರಿಸಿ ರಾವಣಂಗವುಱಲಂ ತಂದಂ ಮರುನ್ನಂದನಂ ॥ ೧೩೭ ॥

ಉ ॥ ಜಾನಕಿಯಿರ್ದಶೋಕೆಯ ಸವಿಾಪದೊಳಿರ್ದ ಫಲಪ್ರಸೂನ ಸಂ ।
ತಾನ ವಿರಾಜಮಾನ ಕುಜರಾಜಿಯನೋವದೆ ಕಿಚ್ತಿನಿಲ್ಲ ರೂ ॥
ಕ್ಷ್ಮಾಸಿಲಪಾತದಿಂ ತಪನ ತಾಪದಿನಂಬಿಕೆಗಗ್ಗಳಂ ಪರಿ ।
ಮ್ಲಾನತೆಯಕ್ಕುಮೆಂದುಱಿಪಿದಂ ಕೆಲವಂ ಪವನಂಜಯಾತ್ಮಜಂ ॥ ೧೩೮ ॥

ಅಂತು ದಶಾನನಂಗೆ ಯಶೋಭಂಗವಮಾಗೆ ವನಭಂಗಮುಂ ಮಾಚ್ಪುದುಂ ಚರಂ ನಿಶಾಚರನೊರ್ವನತಿ ತ್ವರಿತಗತಿಯಿಂದೆ ಬಂದು—

ಕಂ ॥ ವನ ಪಾಲರನಿಕ್ಕಿಯುಮಾಂ
ತ ನಿಶಾಚರ ಬಲಮನಿಕ್ಕಿಯುಂ ಪವನ ಸುತಂ ॥
ಬನಮಂ ಕಿಚ್ತಿಕ್ಕಿಯುಮಾ
ರೆನಗಿದಿರಾಂಪನ್ನರೆಂದು ಕಡುಕೆಯ್ದಿರ್ದಂ ॥ ೧೩೯ ॥

---

1 ಯಿಂತಾ. ಗ. ಚ.

ಎಂದು ಬಿನ್ನವಿಸೆ—

ಕಂ ॥ ಚರ ವಚನಂ ಕಿವಿಯಂ ಸಾ
ರ್ದರೆ ಘನ ನಿನದಕ್ಕೆ ಕೆಳರ್ದ ಕೇಸರಿವೋಲ್ ಕೇ ॥
ಸರಿಪೀಠದಿನೆಟ್ಟಿಂ ದಶ
ಶಿರನೆರಡುಂ ಪುರ್ವುಮುರ್ವಿ ಗಂಟಿಕ್ಕುವಿನಂ ॥ ೧೩೦ ॥

ಅಂತು ಕಡುಮುಳಿದು ಮೇಲೆ ನಡೆಯಲೊಡರಿಸುವ ತಂದೆಗೆ ಮಾರ್ಕೊಂಡು-

ಕಂ ॥ ಲೋಕಾಧಿಪತಿ ದಶಾನನ
ನೇಕಾಕಿಯಮೇಲೆ ನಡೆದನೆಂಬಪವಾದಂ ॥
ಲೋಕಕ್ಕೆ ಪರಿಯೆ ನಿಜ ಬಾ
ಹಾ ಕೌಕ್ಷೇಯಕದ [1]ಕೂರ್ಪು ನೇರ್ಪಡುಗಿಡುಗುಂ ॥ ೧೩೧ ॥

ಉ ॥ ನೀಂಬರಮುಂಟಿ ದೇವ ಕದನಂ ಪವಮಾನ ತನೂಭವಂ ರಣಾ ।
ಡಂಬರದಿಂದಮಂಜದೊಡೆ ಕೊಂದಪೆನಂಜಿದೊಡಮ್ಮ ನಿಮ್ಮ ಪಾ ॥
ದಾಂಬುರುಹಕ್ಕೆ ತಂದವನನೊಪ್ಪಿಸುವೆಂ ಬೆಸಸೆನ್ನನೆಂದು ಶೌ ।
ರ್ಯಾಂಬುಧಿ ಬೇಡಿದಂ ಬೆಸನನಿಂದಗಿ ದಾನವ ಚಕ್ರವರ್ತಿಯಂ ॥ ೧೩೨ ॥

ಅಂತು ಬೆಸನಂ ಬೇಡಿ ಪಡೆದು ಸಮರ ಸಂರಂಭದಿನಿದಿರ್ಚಿ ಬರ್ಪುದುಂ ಮಾರುತಿ ಕಂಡು ಪೆಱಗಿರಿಸಿಬಂದ ನಿಜವರೂಥಿನಿಯಂ ಬರಿಸಿ ವಿಜಯ ರಥಾರೂಢನಾಗಿ ಲಂಕಾಪುರಮೆಲ್ಲಂ ತಲ್ಲಳಿಪಂತು ಕಾದಿ ಪೆಸರ ನಾಯಕರಂ ಪೇಸೇಟಿ ಕೊಲ್ಪುದುಂ ಕಂಡಿಂದಗಿ ಮುಟ್ಟಿವರ್ಪುದುಂ ತನ್ನೊಳಿಂತೆಂದಂ—

ಉ ॥ ಕಾದುವ ಕೂರ್ಪುದೋರ್ಪ ಬೆಸನಂ ರಘುಜಂ ಬೆಸವೇೞ್ದನಿಲ್ಲ ಮೇ ।
ಲಾದ ನಿಶಾಚರ ಪ್ರಮುಖರೊಳ್ [2]ತಲೆಮೆಟ್ಟಿಜುವಂದಮಾವುದಾ ॥
ನೀ ದನು[3]ಜಾತ್ಮಜಂಗೆ ಪಿಡಿಪಿತ್ತು ದಶಾನನನಳ್ಕಿ ಬಳ್ಕಿ ಲಂ ।
ಕಾ ದಹನಕ್ಕೊಡರ್ಚುವೆನೆನುತ್ತುಮಿದಂ ಬಗೆದಂ ಮರುತ್ಸುತಂ ॥ ೧೩೩ ॥

ಚಂ॥ ಬಗೆಯದೆ ದಾನವಾಧಿಪನ ದೋರ್ಬಲಮುಂ ಖಚರ ಪ್ರವೀರರಂ ।
ಬಗೆಯದೆ ನಚ್ಚಿ ತನ್ನಳವನಿಂದಗಿಗಾಂ ಪಿಡಿಪೀವೆನೆಂಬುದಂ ॥
ಬಗೆದನಿದೇನಪಾರ ಬಲನೋ ರಣಧೀರನೊ ಸಿದ್ಧ ವಿದ್ಯನೋ ।
ಬಗೆವವರಾರಿದಂ ಹನುಮನಂತಿರಖಂಡಿತ ಗಂಡಗರ್ವದಿಂ ॥ ೧೩೪ ॥

---

1. ಕಡುಪು. ಕ. ಖ ಗ. ಘ. 2. ಮು. 3. ನಂದನಂಗೆ.

ಎಂದು ನಿಶ್ಚಯಂಗೆಯ್ದು ತನ್ನ ಬಲಮೆಲ್ಲಮುಂ ಬೀಡಿಂಗೆ ಕಟ್ಟಿಪಿ ಕದನ ಕೇಳಿಗಗಿದನಂದದಿನಿಂದಗಿಗೆ ಪಿಡಿಪೀವುದುಮಾತನಾತನಂ ತಂದು ಕಾಣಿಸಿ ದಶವದನಂಗಿಂತೆಂದನೀತಂ ನಮ್ಮ ವಿದ್ಯಾ ವಿನಿರ್ಮಿತಮಪ್ಪ ವಜ್ರಪ್ರಾಕಾರಮನೊಡೆದು ವಜ್ರಮುಖನಂ ಕೊಂದು ಸೀತಾದೇವಿಯ ಸಮೀಪಕ್ಕೆ ವಂದು ಬನಮನಿತುಮುಂ ಕೆಟ್ಟು ಮೇಲೆಬಂದ ಖಚರ ಬಲಮೆಲ್ಲಮುಂ ಕೊಂದನೀತಂಗೆ ತಕ್ಕುದಂ ದೇವರೆ ಬಲ್ಲಿರೆಂದು ಬಿನ್ನವಿಸೆ--

ಕಂ ॥ ಕಿಸು ಸೆರೆ ಪರಿದಿರೆ ಕಣ್ಣೊಳ್
ನೊಸಲೊಳ್ ಪುರ್ವಡರ್ದು ಪೊಡರೆ ಗಂಡಸ್ಥಲದೊಳ್ ॥
ಪಸರಿಸೆ ಬೆಮರ್ವನಿಗಳ್ ಮುನಿ
ದಸುರೇಂದ್ರಂ ಪವನ ಸುತನನಂದಿಂತೆಂದಂ ॥ ೧೩೫॥

ಚ ॥ ಮಸುಳಿ ನಿಜಾನ್ವವಾಯ ಮಹಿಮೋನ್ನತಿ ನಾಟ್ಕಿಡೆವೋಗೆ ಪಾಟಿಯುಂ ।
ಪಸುಗೆಯುಮೆನ್ನ ಮನ್ನಣೆಯನಿಂವಗಿಯೊಳ್ ಸಮಕಕ್ಷ್ಯನಾಗೆ ರ ॥
ಕ್ಷಿಸಿದುದನೇನುಮಂ ಬಗೆಗೆ ತಾರದೆ ಲಜ್ಜೆಯನೊಕ್ಕು ಬಿಟ್ಟು ಮಾ ।
ನಸಿಕೆಯನಿಂತು ಭೂಚರರ್ಗೆ ಖೇಚರ ನೀಂ ಚರನಾಗಿ ಬರ್ಪುದೇ ॥೧೩೬॥

ಕಂ ॥ ಉಪಕೃತಿಯಂ ನೆನೆಯದೆ ನೀ
ನಪಕೃತಿಯನೊಡರ್ಚಿದ್ಯೆ ದುರಾತ್ಮನೆ ರಿಪು ಭೂ ॥
ಮಿಪರೊಳೊಡಗೂಡಿದ್ಯೆ ದ್ರೋ
ಹ ಪೆಂಪುಗಿಡೆ ದಂಡಿಸಲ್ಕೆವೇಟ್ಪುದೆ ನಿನ್ನಂ ॥ ೧೩೭ ॥

ಎನೆ ಕೆಲದೊಳಿರ್ದ ಕೆಲರ್ ದಾನವರ್ ಪವನಮಾನ ಸೂನುವನಿಂತೆಂದರ್ ಸ್ವಾಮಿದ್ರೋಹನಾಗಿ ಸೇನಾಭಂಗಮಂ ಮಾಡಿ ಪರಬಲನುಂ ಪೊಕ್ಕು ತಕ್ಕನುಟ್ಟುದು ದೋಷಕ್ಕೆ ಪಕ್ಕಾದೆ ಪವನಂಜಯಂಗೆ ಪುಟ್ಟಿದೊಡಿಂತು ಬಟ್ಟಿದಪ್ಪಿ ಗುಣಂಗೆಟ್ಟು ನೆಗಟ್ಪುದು ದೊರೆಕೊಳ್ಳದೆನೆ ಪವಮಾನ ಸೂನು ಮುಳಿದವರನಿಂತೆಂದಂ--

ಕಂ ॥ ತೋಯದ ವಾಹನನನ್ವಯ
ದಾಯತಿ ಕಿಡೆ ಪಾಟಿದಪ್ಪಿ ಪಟಿ ಪೊರ್ದೆ ಪರ ॥
ಸ್ತ್ರೀಯನಪೇಕ್ಷಿಸಿದ ಖಲ
ನ್ಯಾಯಮನಾರಯ್ದು ನೋಡಿಕೊಳ್ಳಿಂ ನಿಮ್ಮೊಳ್ ॥ ೧೩೮ ॥

ಅಜನಂ ದಶಮುಖನುಟ್ಟಿದುದ
ನಜಿಯುತ್ತುಂ ಸಲ್ಲದೆಂದು ಬಾರಿಸದೊಳ್ಪಂ ॥

ಮಱೆದಿರ್ಪುದಱಂ ದೋಷ
ಕ್ಕೆಱವಟ್ಟಿನಿಸಿರ್ದ ಪಾಪಿಗಳ್ ನೀವೆ ವಲಂ ॥ ೧೩೯ ॥

ಸೌಮಿತ್ರಿಯ ಕೈಯೊಳ್ ರಣ
ಭೂಮಿಯೊಳಿರ್ದಪುದು ರಾವಣಂಗಂ ನಿಮಗಂ ॥
ಪೋ ಮರಣಂ ಬಿದಿ ಬರೆದುದ
ನೇಮಾತೇದೊರೆಯರಾದೊಡಂ ತೊಡೆದಪರೇ ॥ ೧೪೦ ॥

ಎಂದು ಪಲತೆಱದಿಂ ನೆಱನೆತ್ತಿ ನುಡಿಯೆ ದಶಮುಖಂ ಮುಳಿದು ಪಲವಂ ಗಱಪಲೀಯದೀತನಂ ರಾಮದೂತನೆಂದು ಗೋಸಣೆಗಳೆದು ಪರಿಭವಿಸಿ ಪೊಱಮಡಿಸಿ ಕಳೆಯಿಮೆನೆ—

ಕಂ ॥ ಸಿಡಿಲ ಪೊಡರ್ಪಾ ಕ್ಷಣದೊಳೆ
ಕೆಡಿವುದು ಕಾಟ್ಕಿರ್ಚು ಬನಮನನಿಲನ ಬೆಸದಿಂ ॥
ಸುಡುವುದು ತೆಗಟಿನಲೇಂ ಕೆಡಿ
ಕೆಡಿವೋದನೊ ಕೋಪತಾಪದಿಂ ಪವನಸುತಂ ॥ ೧೪೧ ॥

ಮ ॥ ಉರಿಲಿಂಗಂ ರಸೆಯಿಂದಮುಂದೊಗೆದುದೋ ಪೇಟಿಂಬಿನಂ ಕಣ್ಣಿ ಕೇ ।
ಸುರಿಗಳ್ ದಳ್ಳಿಸೆ ಕೋಪದಿಂದಮುರಿದೆಟ್ಟಾಸ್ಥಾನದಲ್ಲಿರ್ದ ದು ॥
ರ್ಧರ ವಿದ್ಯಾಧರ ವೀರರಂ ಜವನ ಬಾಯೊಳ್ ತೂಂಕಿದಂ ತನ್ನ ನಿ ।
ಷ್ಠುರ ಪಾದಾಹತಿಯಿಂ ಪ್ರಭಂಜನ ಸುತಂ ಹಸ್ತ ಪ್ರಹಾರಂಗಳಿಂ ॥ ೧೪೨ ॥

ಮ ॥ ಬಿದಿರ್ದೀಡಾಡಿ ಕೆಲಂಬರಂ ಕೆಲಬರಂ ನಿಟ್ಟೆಲ್ಲ ನುರ್ಗಾಗೆ ಕಾ ॥
ಯ್ದೊದೆದೆಬ್ಬಿಟ್ಟಿ ಕೆಲಂಬರಂ ಕೆಲಬರಂ ಬಿಟ್ಟಾಗೆ ಪೊಯ್ದುಣ್ಮಿ ತಾ ॥
ಗಿದರಂ ಸೀಳ್ದು ಕೆಲಂಬರಂ ಕೆಲಬರಂ ಪ್ರೋದ್ವೃತ್ತರಂ ದೈತ್ಯರಂ ।
ತುದಿಗಾಲಂ ಪಿಡಿದೆತ್ತಿ ಪೊಯ್ದು ನೆಲದೊಳ್ ಕೊಂದಂ ಮರುನ್ನಂದನಂ॥೧೪೩॥

ಅಂತು ಕೊಂದು ಕಲ್ಪಾಂತ ಕೃತಾಂತನಂತೆ ಮಾಮಸಕಂಮಸಗಿ ಪೊಡೆವ ಸಿಡಿಲಂತೆ ಸಿಡಿಲ್ದು ಸಿಂಹ ಲಂಘನದಿಂದಂಬರಕ್ಕೆ ನೆಗೆದು—

ಕಂ ॥ ಮನೆಮನೆದಪ್ಪದೆ ನೆಗೆದುದು
ತನಿಗರ್ಚಿನೆ ದಹನ ವಿದ್ಯೆಯಿಂ ಸುಟ್ಟಂ ಪಾ ॥
ವನಿ ಲಂಕೆಯನಸುರಾಧೀ
ಶನ ಮನಮುರಿವನ್ನಮಾನನಂ ಪೊಗೆವನ್ನಂ ॥ ೧೪೪ ॥

ಕಂ ॥ ಬಹುಧೂಮ ಲೇಖೆ ನಿಮಿರ್ದುವು
ಮಿಹಿರಾಧ್ವದೊಳಾಂಜನೇಯನೊಡರಿಸೆ ಲಂಕಾ ॥
ದಹನಮನಸುರೇಂದ್ರ ವಿನಾ
ಶ ಹೇತುಗಳ್ ಧೂಮಕೇತುಗಳ್ ನೆಗೆದುವೆನಲ್ ॥ ೧೪೫ ॥

ಅಸುರೇಂದ್ರಂಗೆ ಕೃತಾಂತನ
ಕೆಸುಗಣ್ಣಿದ ಕಣ್ಣ ಕೆಂಪೆನಲ್ ಕೇಸುರಿ ದ ॥
ಳ್ಕಿಸಿದುದು ಬದ್ಧ ಭ್ರುಕುಟಿವೊ
ಲಸದಳಮರ್ವಿಸಿದುದುರ್ವಿ ಧೂಮ ಸ್ತೋಮಂ ॥ ೧೪೬ ॥

ಚ ॥ ಅಣುವನ ವಹ್ನಿವಿಜ್ಯೆ ಸುಡೆ ಲಂಕೆಯನಲ್ಲಿ ಘಟಚ್ಛಟೆಂಬ ಭೀ ।
ಷಣ ರವಮುಣ್ಮೆ ನೀಳ್ದುರಿಯ ನಾಲಗೆಗಳ್ ದಶಕಂಠ ರಕ್ತದಿಂ ॥
ತಣಿವ ದಿನಂಗಳಾದಪುವು ರಾಮ ಶರಂಗಳಿನೆಂದು ರಾಗದಿಂ ।
ಕುಣಿವ ಕುಕಿಲ್ಪ ಭೈರವಿಯ ರಕ್ತ ಜಟಾ ಪಟಲಂಗಳೆಂಬಿನಂ ॥ ೧೪೭ ॥

ಪುರಹರನೂಡೆ ರ್ಮು ತ್ರಿಪುರಮಂ ಪಲಕಾಲಮುಪೋಷಿತ ವ್ರತಾ ।
ಚರಣದೊಳಿರ್ದನೀಗಳುಪವಾಸದ ಪಾರಣೆ [1]ವಾಯು ಪುತ್ರನಿಂ ॥
ದೊರೆಕೊಳೆ ಲಂಕೆಯಂ ಶಿವಿ ಶಿಖಾವಧಿಯಪ್ಪಿನಮುಂಡು ತೇಗುವಂ ।
ತಿರೆ ಪೊಜಪೊಣ್ಮಿದತ್ತು ಧಗಿಲೆಂಬ ಧಗದ್ಧಗಿಲೆಂಬ ನಿಸ್ಪನಂ ॥ ೧೪೮ ॥

ಮ॥ಸ್ರ॥ ಕರುಮಾಡಂ ಮೇರುವಂ ಪರ್ವಿದುದು ಜಟುಲ ದಾವಾಗ್ನಿಯೆಂಬಂದದಿಂ ನಿಂ
ದುರಿಯುತ್ತಿರ್ದತ್ತದಂ ಸುತ್ತಿಱಿದ ಧವಳ ಹಾರಂ ಸುಧಾವಾರ್ಧಿಯಂ ದು ॥
ಸ್ತರದೌರ್ವ ಜ್ವಾಳಿ ಜಿಹ್ವಾ ಪರಿಕರಮಳುರ್ದತ್ತೆಂಬಿನಂ ಕಣ್ಗೆ[2]ದೇಂ ಭೀ ।
ಕರಮಾಗಿರ್ದತ್ತೊ ಲಂಕಾಪುರಮನುರಿಪೆ ದಿವ್ಯಾಗ್ನಿಯಿಂದಾಂಜನೇಯಂ ॥
[॥ ೧೪೯ ॥

ಉ ॥ ವಾಸುಗಿ ನುಂಗಲೆಂದು ದಶಕಂಧರನಂ ರಸೆಯಿಂ ಧರಾತಲ ।
ಕ್ಕಾಸುರಮಾಗಿ ತನ್ನ ರಸನಾ ದ್ವಿಸಹಸ್ರಮಗುರ್ವನೀಯೆ ಭಾ ॥
ಭಾಸುರ ರತ್ನ ರಂಜಿತ ಸಹಸ್ರ ಫಣಂ ನೆಗೆದಂತೆ ಸುತ್ತಲುಂ ।
ಕೇಸುರಿ ಮಾಲೆ ನಿಂದುರಿಯೆ ಬೆಂದುದು ರಾವಣ ರಾಜಮಂದಿರಂ ॥ ೧೫೦ ॥

ಕಂ ॥ ಗೃಹ ದೀರ್ಘಿಕೆಯಂ ಧಾರಾ
ಗೃಹಮಂ ಬಡಬಾಗ್ನಿಯಂದದಿಂ ರತ್ನ ಶಿಲಾ ॥

---

1. ಯಾಗೆ ಲಂಕೆಯುಂ । ಮರುತಜನೂಡೆ ಪಾವಕನುರಂಬರೆಗಂ ತಣಿದುಂ. ಚ.
2. ಳುಂಬಾ । ಕರಮಾಗಿರ್ದತ್ತು. ಚ.

ಗೃಹಮುಂ ಸಿಡಿಲಂತಿರೆ ಧವ
ಲ ಹಾರಮುಂ ದಾವ ಶಿಖಿವೊಲಳುರ್ದುದು ದಹನಂ ॥ ೧೫೧ ॥

ಕನಕದ ರಜತದ ಕಾಂಸ್ಯದ
ಮನೆ [1]ಮುಟ್ಟುರಿಮುಟ್ಟಿ ಕರಗಿ ಕಣ್ಣೆಟ್ಟುವು ಧೈ ॥
ತ್ಯನ ಸಿಂಹಾಸಂದಿಗೆ ರಾ
ಮನ ವೀರಶ್ರೀ ಕಡಂಗಿ ಕಣ್ಣಿಟ್ಟಳೆನಲ್ ॥ ೧೫೨ ॥

ಚ ॥ ಸುರಿವ ಮದಾಂಬುವಿಂದುರಿಯ ನಾಲಗೆ ತಣ್ಣಸಮಾಗೆ ಬೇಗದಿಂ ।
ಪರಿದುವು ನಿರ್ಝರಂ ಸುರಿವ ಜಂಗಮ ನೀಲ ನಗಂಗಳಿಂಬಿನಂ ॥
ಭರದೊಳೆ ಕಂಭಮಂ ಮುಱಿಯೆ ಪಾಯ್ದು ತೊಡರ್ಪಱಿದಾನೆ ನಾಲೆಗೆ ।
ಯ್ತರೆ ಯಮಜಿಹ್ವೆಯಂತುರಿಯ ನಾಲಗೆ ದಾನವನಂಕದಾನೆಗಳ್ ॥ ೧೫೩ ॥

ಇದು ಕಡೆಗಾಲದಂದಿನಡೆವೊತ್ತಿದ ಪಾವಕನೆಂಬಿನಂ ಪೊದ ।
ಬ್ಬೊದವಿ ಕೃಶಾನು ಸುತ್ತಿ ಸುಡೆ ಮುಂದುರಮುಂ ನೆ[2]ಗೆದುಳ್ಕ ಲಿಂಕರಂ ॥
ಬೆದಱಿಸಿ ಲಾಯಮಂ ಪರಿದು ಮುಂಡಿಗೆಯಂ ಮುಱಿದಾಗಳೀಂ ಬಿಸಿ ।
ಲ್ಗುದುರೆಗಳಂದದಿಂ ಕುದುರೆಗಳ್ ಪಲವುಂ ದೆಸೆ[3]ಬಿಪ್ಪವಾದುವೋ ॥ ೧೫೪ ॥

ಕಂ ॥ ಎನ್ನ ಸುತನತಿಥಿ ಪೂಜೆಯ
ನೆನ್ನಸಖಂಗಿತ್ತನಗ್ನಿಗೆಂದನುಕೂಲಂ ॥
ತನ್ನೊಲವಿಂದೂಡಿದನನಿ
ಲನ್ನಯದಿಂ ಬೀಸಿಬೀಸಿ ಲಂಕಾಪುರಮುಂ ॥ ೧೫೫ ॥

ಆ ಸಮಯದೊಳಗ್ನಿಶಿಖಾ ಮುಖಕ್ಕೆ ದೂರಮಪ್ಪ ಬಕ್ಕಬಯಲ ತಾಣದೊಳ್ ದೊಮ್ಮಲಿಸಿ ನಿಂದು ಬಹುಜನಂಗಳುಮ್ಮಲಿಸಿ ತಮ್ಮೊಳಿಂತೆಂದರ್—

ಚ ॥ ಜನಕಜೆಗಾಸೆಗೆಯ್ದು ಸುಕೃತ ಕ್ಷಯದಿಂ ಜಲವರ್ಷ ವಿದ್ಯೆ ಪ ।
ಟ್ಟನೆ ಪೆಜಪಿಂಗೆ ಪುಷ್ಪಕ ವಿಮಾನಮನೇಱಿ ದಶಾನನಂ ವಧೂ ॥
ಜನ ಸಹಿತಂ ಕೃಶಾನುಗೆ ಭಯಾಕುಲನಪ್ಪುದು ಚೋದ್ಯಮಲ್ತದೆಂ ।
ತೆನೆ ಶುಚಿಯಲ್ಲದಂಗೆ ಬಿಸಕೆಯ್ಗುಮೆ ವಿದ್ಯೆಗಳಾವುವಾದೊಡಂ ॥ ೧೫೬ ॥

ಉ ॥ ಮಾನವದೂತನೆತ್ತ ಜಲರಾಶಿಯನಳ್ಕದೆ ಪಾಯ್ದು ಬರ್ಪುದೆ ।
ತ್ತಾನಲಳುಂಬಮಪ್ಪಸುರ ಸೇನೆಯನೊರ್ವನೆ ಕೊಲ್ವುದೆತ್ತ ಲಂ ॥

---

1. ದಳ್ಳುರಿ. ಗ. 2. ಗಳ್ದಳ್ಕಿಳಂಕರಂ. ಗ; ಗಳ್ದುಳ್ಕ ಳಂಕರಂ. ಚ.
3. ಬಿಳ್ದು ಪೋದುವೋ. ಕ. ಗ. ಘ.

ಕಾ ನಗರಕ್ಕೆ ನಂದನ ವನಕ್ಕೆ ವಿನಾಶಮನೀವುದೆತ್ತಿದೇಂ।
ದಾನವರಾಜ ದುರ್ವಿಲಸಿತೋತ್ಕಟ ಸಂಕಟ ವೇಗಮಾಗದೇ ॥ ೧೫೭ ॥

ಕಂ ॥ ಪ್ರತಿಪಕ್ಷಮುಂಟೆ ಲಂಕಾ
ಪತಿಗಣುವಂ ರಾವಣಂಗಿದಿರ್ಚುವನೆ ಮಹಾ ॥
ಸತಿ ಸೀತೆಯ ಶೋಕಾನಲ
ಹತಿಯಿಂ ಬೆಂದತ್ತು ಕೂಡೆ ಲಂಕಾ ನಗರಂ ॥ ೧೫೮ ॥

ಎಂದು ಪೌರಜನಮುಲಿಯೆ ಲಂಕಾಪುರಮನುರಿಸಿ ಗಗನ ತಲಕ್ಕೆ ನೆಗೆದು ಮಗುಚ್ಚಿ ನಿಜಸೇನೆಯಂ ಕೂಡಿಕೊಂಡು ಗಂಧವಹ ನಂದನಂ ಕಿಷ್ಕಿಂಧ ಪುರಕ್ಕಭಿಮುಖನಾಗಿ—

ಉ ॥ ಮಾರುತ ಮಾರ್ಗಮಂ ಪುದಿಯೆ ಕೇತನ ಪಟ್ಟಿಕೆಗಳ್ ವಿಮಾನ ಘಂ।
ಟಾ ರುತಿಗಳ್ ಜಯಾನಕ ಘನ ಧ್ವನಿಗಳ್ ದೆಸೆಯಂ ಪಳಂಚೆ ಭೂ ॥
ಷಾ ರುಚಿಗಳ್ ದಿನಕ್ಕೆ ತನಿಗೊರ್ವನೊಡರ್ಚಿ ಜಯಾಂಗನಾ ಪ್ರಿಯಂ।
ಮಾರುತಿ ಬಂದನಾ ರಘುತನೂಜ ಮನೋರಥ ಸಿದ್ಧಿ ಬರ್ಪವೋಲ್ ॥ ೧೫೯ ॥

ಅಂತು ಬಂದು ಗಗನ ತಲದಿನವನೀತಲಕ್ಕವತರಿಸಿ ಕಿಷ್ಕಿಂಧಪುರ ಬಹಿಃಪುರದೊಳ್ ಬೀಡಂಬಿಟ್ಟು ಪುರಮಂ ಪುರ ಪುರಂಧ್ರಿಯರ ಮನಮುಮನರಮನೆಯುಮಂ ಪೊಕ್ಕು—

ಉ ॥ ರಾಮಭುಜ ಪ್ರತಾಪ ತಪನೋದಯ ಶೈಲಮುಪಾಂತ ಪರ್ವತ।
ಸ್ತೋಮ ಸಮುನ್ನತಂ ಬರುತುಮಿರ್ದಪುದೆಂಬಿನೆಗಂ ವಿಯಚ್ಚರ ॥
ಗ್ರಾಮಣಿ ಸೂರ್ಯ ವಂಶ ನರಪಾಲ ಶಿರೋಮಣಿಯಿರ್ದ ತತ್ಸಭಾ।
ಭೂಮಿಗೆ ಬಂದನಾಪ್ತ ಖಚರಾನುಚರಂ ಪವನಂಜಯಾತ್ಮಜಂ ॥ ೧೬೦ ॥

ಚ ॥ ಮರಕತ ಕರ್ಣಕುಂಡಲ ಮರೀಚಿಗಳಿಂ ದೆಸೆಗಳ್ ಪಸುರ್ಪುವೆ।
ತ್ತಿರೆ ಮಕುಟ ಪ್ರಭಾ ಪಟಲದಿಂ ಗಗನಂ ಕೆಸುಸಂಜೆ ಪರ್ವಿದಂ ॥
ತಿರೆ ಕನಕಾದ್ರಿಯೊಳ್ ಪೊಳೆವ ತಾರೆಗಳಂದದೆ ತೋರಮುತ್ತಿನೈ।
ಸರಮುರದೊಳ್ ತಳತ್ತಳಿಸೆ ಬಂದನರಿಂಜಯನಂಜನಾಸುತಂ ।೧೬೧॥

ಅಂತು ಬರುತ್ತುಮಿರೆ—

ಚ ॥ ವದನ ವಿಕಾಸದಿಂ ಬರವಿನೇಳ್ತಿರದಿಂದಮೆ ಕಾರ್ಯಸಿದ್ಧಿಯಾ।
ದುದನಱಿದಂಜನಾಸುತ ನಿರೀಕ್ಷಣದಿಂ ರಘುಜಂಗೆ ಹರ್ಷಮಾ ॥

ದುದು ಪರಿಷಜ್ಜನಕ್ಕೆ ಪರಮೋತ್ಸವಮಾದುದು ಲಕ್ಷ್ಮಣಂಗೆ ಕೊ ।
ರ್ದುದು [1]ಮನಂ ಮುದಂಬಡೆಯರಾರಭಿವಾಂಛಿತ ಕಾರ್ಯ ಸಿದ್ಧಿಯಿಂ ॥

ಅಂತು ನಿಜಾಗಮನಮೆ ಸಭಾಜನಮುಂ ಹರ್ಷರಸ ಭಾಜನಮುಂ ಮಾಡೆ—

ಚ ॥ ಪುದಿದಿರೆ ರಾಮಲಕ್ಷ್ಮಣರ ಕಣ್ಬೊಳಿಪುಂ ಬಳಿಸಿರ್ದ ತತ್ಸಭಾ ।
ಸದರ ವಿಲೋಚನ ಪ್ರಭೆಯುಮಾತ್ಮ ಶರೀರಮನಂಜನಾ ಸುತಂ ॥
ವಿದಲಿತ ನೀಲನೀರಜ ವನಂ ನಡೆತಂದವುದೆಂಬಿನಂ ಸಭಾ ।
ಸದನಮನೆಯ್ದಿದಂ ಸಲಿಲ ವೀಚಿಗಳಂ ಗೆಲೆ ಭೂಷಣಾಂಶುಗಳ್ ॥ ೧೬೩ ॥

ಅಂತು ಬಂದು ರಾಘವಂಗೆ ವಿನಯ ವಿನಮಿತನಾಗಿ ಲಕ್ಷ್ಮಣಂಗೆ ತುಟ್ಟಿಲ್ಲಿಯ್ದು ಸಮುಚಿತ ಪ್ರದೇಶದೊಳಿಕ್ಕಿದುತ್ತುಂಗ ಮಣಿಮಯಾಸನಮನಲಂಕರಿಸಿ—

ಕಂ ॥ ಮಣಿಯೆ ವಿರಹಾಂಧಕಾರಂ
ಕುಣಿಯೆ ಜಗತ್ಪತಿಯ ನೇತ್ರ ಪುತ್ರಿಕೆ ಮೆಯ್ಯೊಳ್ ॥
ಪೆಣೆಯೆ ಪುಲಕಾಳಿ ಚೂಡಾ
ಮಣಿಯಂ ಕೊಟ್ಟಂ ನೃಪಂಗೆ ಪವಮಾನ ಸುತಂ ॥ ೧೬೪ ॥

ಅಂತು ಕುಡುವುದುಂ—

ಶಾ ॥ ಆ ರತ್ನಕ್ಕಿದಿರ್ವರ್ಪವೋಲ್ ನೃಪತಿಗಾನಂದಾಶ್ರುಗಳ್ ಬಂದುವಾ ।
ಸ್ತ್ರೀರತ್ನಂ ಪಡೆದಪ್ಪಿದಂತೆ ಪುಲಕಂ ಚೂಡಾಮಣಿ ಸ್ಪರ್ಶದಿಂ ॥
ಧೀರೋದಾತ್ತನ ಮೆಯ್ಯೊಳುಣ್ಮೆದುವು ಸೀತಾ ಶುದ್ಧಿಯಂ ಕೇಳ್ವ ಚೇ ।
ತೋರಾಗಂ ರಘುನಂದನ ಶ್ರುತಿಗೆ ತಂದತ್ತಾಗಳೌತ್ಸುಕ್ಯಮಂ ॥ ೧೬೫ ॥

ಅನಂತರಂ ಮರುನ್ನಂದನಂ ಬಿನ್ನಪಮನವಧಾರಿಸುವುದೆಂದಿಂತೆಂದಂ.—

ಕಂ ॥ ಘನಸಮಯ ಸಮಾಗಮಮುಂ
ಮನದೊಳ್ ನೆನೆಯುತ್ತುಮಿರ್ಪ ಚಾದಗೆವೊಲ್ ಮ ॥
ಜ್ಜನನಿ ನಿಜಾಗಮನಮೆ ಜೀ
ವನಮಾಗಿರೆ ದೇವ ಜೀವಮುಂ ಪಿಡಿದಿರ್ದಳ್ ॥ ೧೬೬ ॥

ಉ ॥ ದೇವ ಪತಿವ್ರತಾ ಗುಣದಿನಗ್ಗಳಮಾವುದುಮುಂಟೆ ಜಾನಕೀ ।
ದೇವಿಗೆ ರಾವಣಂ ಮುಳಿದು ಮಾಬ್ಪುಪಸರ್ಗಮವೆನ್ನವಾದೊಡಂ ॥

---

1. ಮನೋಮುದಂ ಪಡೆಪರಾರಭಿವಾಂಛಿತ ಕಾರ್ಯ ಸಿದ್ಧಿಯಂ. ಕ. ಖ. ಘ. ಚ;
.....ಪಡೆಯರಾ..... ಗ.

ಬೇವಸಮಂ ಮನಕ್ಕೆ ತರಲಾಜವೆ ನಿಮ್ಮಡಿ ನಿಮ್ಮ ಭಕ್ತಿಯಿಂ।
ಪಾವಿನ ಪಲ್ಲ ನಂಜು ಕಿಡುವಂತಿರೆ ಮಾಂತ್ರಿಕ ಮಂತ್ರ ಶಕ್ತಿಯಿಂ ॥ ೧೬೭ ॥

ಎಂದು ಬಿನ್ನವಿಸಿ ಮತ್ತಂ ಕೆಲವವಿನ್ನಾಣಂಗಳನಿಂತೆಂದಂ—

ಮು ॥ ಮುನಿಬ್ಬಂದಾರಕರಪ್ಪ ಚಾರಣ ಯುಗಕ್ಕಾಹಾರಮಂ ದೇವರೀ।
ಯೆ ನದೀತೀರದೊಳಾಯ್ತು ಚೋದ್ಯಮೆನೆ ಪಂಚಾಶ್ಚರ್ಯಮಾ ಯೋಗಿ ವ ॥
ರ್ಶನದಿಂ ದಂಡಕನಾ ಮಹಾಗಹನದೊಳ್ ಪರ್ದಾಗಿ ಪುಟ್ಟರ್ದು ತೊ।
ಟ್ಟನೆ ಜಾತಿಸ್ಮರನಾದನೆಂಬ ಕುಜುಪಂ ಮನ್ಮಾತೆ ಪೇಳ್ದಿಟ್ಟದಳ್ ॥ ೧೬೮ ॥

ಎಂಬುದುಂ ಪ್ರಭಂಜನ ಸುತನ ಪ್ರಧಾನ ಪುರುಷಂ ಸೃಘುಮತಿವೆಸರ ಮಂತ್ರಿ ದಾಶರಥಿಗೆ ಕೈಗಳಂ ಮುಗಿದು.—

ಕಂ ॥ ಅಮಿತಬಲಂ ದೇವರ್ ಬೆಸ
ಸೆ ಮನೋವೇಗದೊಳೆ ಪೋಗಿ ಲಂಕಾ ಪ್ರಾಕಾ ॥
ರಮನೊಡೆದಂ ಕೊಂದಂ ವ
ಜ್ರಮುಖನನಾರ್ ವಲಿಮು[1]ಖ ಧ್ವಜಂಗಿದಿರಾಂಪರ್ ॥ ೧೬೯ ॥

ಬನಮಂ ಕೆಟ್ಟಂ ಪೌಲ
ಸ್ತ್ಯನ ಲಂಕಾಪುರಮನುರಿಪಿದಂ ನಿಮ್ಮ ಬೆಸಂ ॥
ತನಗಿಲ್ಲದಸುರನಂ ಕೊ
ಲ್ಲನೆ ತಾರನೆ ದೇವ ದೇವಿಯಂ ಹನುಮಂತಂ ॥ ೧೭೦ ॥

ಎಂದು ಬಿನ್ನವಿಸೆ ಸುಗ್ರೀವಾದಿಗಳ್ ಹನುಮನ ಭುಜಬಲಕ್ಕೆದಾವ ಗಹನ ವಿತಂಗಸಾಧ್ಯಮಾವುದೆಂದು ಕೊಂಡು ಕೊನೆಯೆ ಮರುನ್ನಂದನಂ ರಘುನಂದನಂಗೆ ಮತ್ತಮಿಂತೆಂದಂ—

ಕಂ ॥ ಆನ್ನಿಮ್ಮ ಸುದ್ದಿಯಂ ಪೇ
ಪ್ಪಿನ್ನಂ ಮಜ್ಜನನಿ ಜೀವಿತಾಶೆಯನಿಬ್ಬಿಕೆ ॥
ಯ್ದನ್ನ ತ್ಯಾಗಂಗೆಯ್ದಳ್
ಮುನ್ನಾದರ್‌ಸತಿಯರಿನ್ನರಾರೆಂಬಿನೆಗಂ ॥ ೧೭೧ ॥

ಅಸುರನ ಮಾಪ್ಪಿಪಕೃತಿಯಿಂ
ದಸುವಂ ಬಿಡುವಂತುಟಕ್ಕುಮುಂಬಿಕೆಗೆ ಬಲ್ ॥

1. ಮಂಗೆ ಕೂರ್ಪಂ ತೋರ್ಪರ್. ಕ. ಗ.

ಕ್ಕಸುರೇಂದ್ರನನಿಕ್ಕಿದೊಡ
ಲ್ಲಿ ಸಾಧ್ಯಮೇಂ ತಕ್ಕುದಲ್ತು ಕಾಲಕ್ಷೇಪಂ ॥ ೧೭೨ ॥

ಎಂಬುದುಮಂಜನಾಸುತನ ಬಿನ್ನಪಮೆ ತನಗೆ ವೀರರಸ ಪ್ರವಾಹಿನಿಗೆ ಸೇತುವಾಗೆ—

ಶಾ ॥ ಈ ವಾರಾಶಿಯನೀಂಟಲೆನ್ನ ಬಡಬಾಸ್ತ್ರಂ ಸಾಲ್ವುದಾರಾಂತೊಡಂ ।
ಜೀವಾಕರ್ಷಣವಿದ್ಯೆಯುಂ ಮೆಱೆವುದೆನ್ನೀ ಚಾಪದಂಡಂ ವಶ ॥
ಗ್ರೀವಂಗಣ್ಣನೆ ಸಾಲ್ವನಿಂ ತಡೆವುದೇತರ್ಕೆಂದು ಸೌಮಿತ್ರಿ ಸು ।
ಗ್ರೀವಂಗೆಂದನುದಂಚಿತ ಭ್ರುಕುಟಿ ಗಂಡೋದ್ಗಾರಿ ಘರ್ಘೋದಕಂ ॥ ೧೭೩ ॥

ಎಂಬುದುಮಾ ನುಡಿಗೊಡಂಬಟ್ಟು ಸುಗ್ರೀವಂ ರಣ ರಸೋದ್ಗ್ರೀವನಾಗಿ—

ಚ ॥ ತಡೆವನಿತೇಕೆ ನಾಳೆ ನಡೆವಂ ರಣಕೇಳಿಗೆ ಬಾಡಬಾಸ್ತ್ರಮಂ ।
ತುಡುವನಿತಚ್ಚಿಗಂ ನಮಗದೇವುದೊ ಲಕ್ಷ್ಮಣದೇವ ನಮ್ಮ ಪೆ ॥
ರ್ವಡೆ ಕಡಲಂ ನಭೋಗಮನ ವಿದ್ಯೆಯೆ ಸೇತುವೆನಲ್ಕೆ ದಾಂಟಿ ಮಾ ।
ರ್ಪಡೆಯನದಿರ್ಪುಗುಂ ರಘುತನೂಜನೊಳಾಜಿಗೆ ಬರ್ಪ ಗಂಡರಾರ್ ॥೧೭೪॥

ಎನೆ ಸಿಂಹನಾದಂ ಸಿಂಹದಂತೆ ಗರ್ಜಿಸಿ—

ಉ ॥ ಒರ್ವನೆ ಪೋಗಿ ಕೆಟ್ಟು ಬನಮುಂ ಪುರಮುಂ ಸುಡೆ ಕಂಡು ತಮ್ಮ ದೋ ।
ರ್ಗರ್ವಮನೊರ್ವರುಂ ಮೆಱೆಯಲಾಱರೆ ಮಾರುತಿಯನ್ನರಿಲ್ಲಿ ನಾ ॥
ನಿರ್ವರಖರ್ವ ದೋರ್ವಲಯುತರ್ ಖಚರಾಧಿಪರಿರ್ದಪರ್ ನಿಶಾ ।
ಟರ್ವಯಲಿಂಗೆ ಬಂದಪರೆ ನಿಂದಪರೇ ರಣರಂಗ ಭೂಮಿಯೊಳ್ ॥ ೧೭೫ ॥

ಎನೆ ವಾಲಿದೇವನ ತನೂಭವಂ ಚಂದ್ರಮರೀಚಿ ದಶನಮರೀಚಿ ವಿದ್ಯುನ್ಮರೀಚಿಯಂ ಪಳಂಚಲೆವಿನಮಿಂತೆಂದಂ—

ಉ ॥ ಮಾರುತಿ ಬುದ್ಧಿವೇಟ್ಟೊಡಮದಂ ಬಗೆಗೊಳ್ಳನೆ ರಾಮನಂಬುಗಳ್ ।
ಕೂರಿದುವೆಂಬಿದೆಂ ಬಗೆಗೆ ತಾರನೆ ಸಂಚಿತ ಪೂರ್ವಕರ್ಮ ದು ॥
ಶ್ರೀರಣೆ ನೇರಿತಂ ನಡೆಯಲೀಗುಮೆ ದುರ್ಮತಿಯಪ್ಪ ರಾವಣಂ ।
ಗೀ ರಣಕೇಳಿ ಮಾರಣಮನೀಯದೆ [1]ಕಮ್ಮನೆ ಸೈತೆ ಪೋಕುಮೇ ॥ ೧೭೬ ॥

ಅದೆಂತೆನೆ ಸಾಧಿತ ಸಕಲವಿದ್ಯರಪ್ಪ ಗಗನಗತಿಯುಂ ಭೂತಪತಿಯುಂ ನಾಗರಾಜನುಂ ಅಶನಿವೇಗನುಂ ಮಹೇಂದ್ರನುಂ ಮೃಗೇಂದ್ರನುಂ ಭೀಮಕುಂಡಲನುಂ

1. ಕಮ್ಮನೆ ಗ. ಘ.

ಪ್ರಭಾಮಂಡಲನುಂ ಪ್ರಸನ್ನಕೀರ್ತಿಯುಂ ತಟಿದ್ಪ್ರಕ್ರನುಂ ವಜ್ರದಂಷ್ಟ್ರನುಂ ವಿದ್ಯು ನ್ಮಾಲಿಯುಂ ರವಿಯುಂ ಕ್ರೂರನುಂ ಅಂಗದನುಂ ಶೂರನುಂ ನಳನುಂ ನೀಲನುಂ ಸುಷೇಣನುಂ ಮಂದರನುಂ ಚಾಂಬವನುಂ ಸಮಿಾರಣನುಂ ಸಿಂಹನಾದನುಂ ವರಾಹ ನುಂ ವಿರಾಧಿತನುಂ ಹನುಮಂತನುಂ ಮತ್ತಂ ಪೆಜಿರಜಿಕೆಯ ವಿದ್ಯಾಬಲ ಗರ್ವಿತರಪ್ಪ ವಿದ್ಯಾಧರರೆಲ್ಲರುಂ ರಾಮಲಕ್ಷ್ಮಣರ ಬೆಸನನೆ ಪಾರುತ್ತುಮಿರ್ದರಿವ ರೋರೊರ್ವರೆ ಮಾರ್ವಲಮಂ ಕೊಲಲುಂ ಗೆಲಲುಂ ನೆಜಿವರಿನ್ನೆಮಗೆ ಪೆಜತು ಮಂತಣಕ್ಕೆಡೆಯಿಲ್ಲನೆ ಕೇಳ್ದೆಲ್ಲರುಮಾತನ ಮಾತನೆ ಮನದೇಗೊಂಡು ವಿಜಯ ಪ್ರಯಾಣ ನಿಶ್ಚಿತ ಮಂತ್ರರಾಗಿರ್ಪುದುಮಾ ಸಮಯದೊಳ್—

ಕಂ ॥ ಕುಸಿದುವು ಕಿರಣಂಗಳ್ ಕಡು
ವಿಸಿಲ ಪೊಡರ್ಪುಡು[1]ಗೆ ವಂದನುಕ್ರಮದಿಂ ತ ॥
ಣ್ಬಿಸಿಲಾಯ್ತನಂತರಂ ಪೊಂ
ಬಿಸಿಲಾದುದು ಪೊರ್ದಿ [2]ಪಟ್ಟೆವೆಟ್ಟಮನರ್ಕಂ ॥ ೧೭೭ ॥

ತಪಸಿಗೆ ಪಿಂಗುವವೋಲಾ
ತಪ ಯೋಗಂ ತಿಣ್ಣಮಾದ ರಾಗೋದಯದಿಂ ॥
ತಪನಂಗೆ ಪಿಂಗಿದತ್ತಾ
ತಪಯೋಗಂ ತಿಣ್ಣವಾಗೆ ಸಂಧ್ಯಾರಾಗಂ ॥ ೧೭೮ ॥

ಆವಂ ಗಡ ವಾರುಣಿಯಂ
ಸೇವಿಸಿ ನಾಣ್ಗೆಡದನುಟ್ಟಿದನಂಬರಮಂ ರಾ ॥
ಜೀವ ಸಖಂ ವಾರುಣಿಯಂ
ಸೇವಿಸಲೊಡಮಾತ್ಮತೇಜಮಸ್ತಮಿಸುವಿನಂ ॥ ೧೭೯ ॥

ದಶವದನನ ಪರಮಾಯು
ರ್ದಶೆಯಂತಸ್ತಮಿಸೆ ಭಾನು ಮಂಡಲಮಾಗಳ್ ॥
ದಶವದನನ ಪಟಿಯಂತಿರೆ
ದಶ ದಿಗ್ವದನಮುಮನುರ್ವಿ ಪರ್ವಿತ್ತು ತಮಂ ॥ ೧೮೦ ॥

ಕುಮುದಕ್ಕೆ ಮಂದಹಾಸಂ
ಸಮನಿಸಿದುದು ಬಿಟ್ಟು ಬಂದು ಸರಸಿಜಮಂ ವಿ ॥

---

1. ಗಿ ಬಂದ. ಕ ಖ. ಗ ಘ. 2. ಪಕ್ಷ ವೇದಿಯ. ಘ.

ಶ್ರಮಿಸೆ ಸಿರಿ ತನ್ನೊಳಾಶ್ಚ
ರ್ಯಮೆ ಜಡರನ್ಯಾಪಕರ್ಷದಿಂ ರಾಗಿಸರೇ ॥ ೧೪೧ ॥

ಕೋಕ ಮಿಥುನಂ ವಿಯೋಗೋ
ದ್ರೇಕಂ ದೋಷಾನುಷಂಗದಿಂ ಸಮನಿಸೆ ಚಿಂ ॥
ತಾಕುಲಿತಮಾದುದಾರ್ಗಂ
ವ್ಯಾಕುಲತೆಯನುಂಟುಮಾಜ್ಯಮಿಷ್ಟ ವಿಯೋಗಂ ॥ ೧೪೨ ॥

ಅಂಬಿಜವಿಡಿವ ತಮೋದಾ
ನಾಂಬುವಿನೊಳ್ ಮುಳುಗಿ ನಿಂದನಭಮೆಂಬ ಮದ ॥
ಸ್ತಂಬೇರಮಮಾಗಳ್ ಸಿ
ಬ್ಬಂ ಬೊಯ್ದುವೊಲಡರಿ ತುಜುಗಿದುವು ತಾರಗೆಗಳ್ ॥ ೧೪೩ ॥

ಪೆಜತೆಗೆವ ತಮಂ ತಟ್ಟಿಮೆ
ದುಜುಗಲೆನಲ್ ಪೂರ್ವ ದಿಗ್ವಧೂ ವದನಂ ಕ ॥
ಣ್ಬೆಜಸಿದಪೊಲದೇಂ ಬೆಳರ್ತುದೊ
ಕೆಜಸಿದೆಡೆ ತುಹಿನಾಂಶು ಬಿಂಬಮುದಯಿಪ ಪದದೊಳ್ ॥ ೧೪೪ ॥

ಅನಂತರಂ ರೋಹಿಣೀರಮಣನುದಯಾಚಲ ಶಿಖಂಡ ಮಣಿ ಮಂಡನನೆನಿಸೆ–

ಕಂ ॥ ಜನಕಜೆಯ ವದನಮಂ ಸಿತ
ವನರುಹಮುಂ ಚಂದ್ರಕಾಂತ ಮಣಿದರ್ಪಣಮುಂ ॥
ನೆನೆಯಿಸಿದುದು ರಾಮಂಗಮ
ರ ನದಿಯ ಕಲಹಂಸನಂ ಸುಧಾಕರ ಬಿಂಬಂ ॥ ೧೪೫ ॥

ಆ ಸಮಯದೊಳುದಾತ್ತ ರಾಘವನುಚಿತ ಸನ್ಮಾನ ದಾನಪುರಸ್ಸರಮಖಿಲವಿದ್ಯಾ ಧರಾಧಿರಾಜರಂ ಬೀಡಿಂಗೆ ಬೆಸಸಿ ನಿರ್ವರ್ತಿತ ಸಂಧ್ಯಾಸಮಯಂ ಶಯ್ಯಾಗೃಹಕ್ಕೆ ಬಿಜಯಂಗೆಯ್ದು ದುಕೂಲ ಪ್ರಚ್ಛದಾಚ್ಛಾದಿತ ವಿಶಾಲ ಹಂಸತೂಲ ತಲ್ಪತಲದೊಳ್ ಸುಖ ಪ್ರಸುಪ್ತನಿರೆ––

ಮ ॥ ಜಿನ ಪೂಜಾವಸರಂ ಪ್ರಭಾತ ಸಮಯಂ ದಿಗ್ಜೈತ್ರಯಾತ್ರಾ ವಿನೋ ।
ದನದಿಂ ರಾಘವ ಮುಖ್ಯ ಮಂಗಲಮನಿಂತೀರ್ಚಲ್ಕೆ ಶಯ್ಯಾ ನಿಕೇ ॥
ತನದಿಂ ನೀನಿರದೇಳ್ವುದೆಂದು ಕರೆವಂತಾದತ್ತು ರಾಜಾಲಯಾ ।
ಬ್ಜಿನಿಯೊಳ್ ಪೊಣ್ಮುವ ಹಂಸ ಸಾರಸ ರಥಾಂಗೋ[1]ತ್ಕಾರ ಕೋಲಾಹಲಂ
[॥೧೪೬ ॥

1. ತ್ಕಾನ. ಕ. ಶ. ೧೪೬ನೆಯ ಪದ್ಯವು ಚ. ದಲ್ಲಿಲ್ಲ.

ಮತ್ತಮಿನಿಸಾನುಂ ಬೇಗದಿಂ--

ಚ ॥ ಕದನ ಮದೋದ್ಧತಂ ಮುಳಿದು ಲಕ್ಷ್ಮಣನಾರ್ದಿಡೆ ವಾಯುವೇಗದಿಂ ।
ತ್ರಿದಶ ವಿರೋಧಿಯಪ್ಪ ದಶಕಂಠನ ವಕ್ಷಮನುರ್ಚಿ ಪೊಂಗಿ ಪೊ ॥
ಣ್ಮಿದ ರುಧಿರಾಂಬುವಿಂದರುಣಮಾದ ಸುದರ್ಶನ ಚಕ್ರದಂತದೇ ।
ನುದಯಿಸಿದತ್ತೊ ಸಾಂಧ್ಯ ಸಮಯಾರುಣಿತಂ ದಿನನಾಥ ಮಂಡಲಂ॥ ೧೪೭ ॥

ಅಂತು ನೇಸಱ್ ಮೂಡುವುದುಂ—

ಮ ॥ ಬಳಭದ್ರಂ ವ್ಯವಹಾರ ಮಂಗಲಮನಾಜ್ಯಾವೇಕ್ಷಣಾದ್ಯುತ್ಸವಂ ।
ಗಳನತ್ಯುತ್ಸವದಿಂದೊಡರ್ಚಿ ಜಿನಪೂಜೋತ್ಸಾಹಮಂ ಮುಖ್ಯ ಮಂ ॥
ಗಳಮಂ ಮಾಟ್ಪಿನುರಾಗಮಂ ಬಗೆಗೆ ತಂದಂ ಭಾರತೀ ಕರ್ಣ ಕುಂ।
ಡಳನಪ್ರಾಕೃತನಪ್ರಮತ್ತ ಚರಿತಂ ಸಾಹಿತ್ಯ ವಿದ್ಯಾಧರಂ ॥ ೧೪೮ ॥

ಇದು ಪರಮ ಜಿನಸಮಯ ಕುಮುದಿನೀ ಶರಚ್ಚಂದ್ರ ಬಾಲಚಂದ್ರ
ಮುನೀಂದ್ರ ಚರಣನಖಕಿರಣ ಚಂದ್ರಿಕಾಚಕೋರ ಭಾರತೀ
ಕರ್ಣಪೂರ ಶ್ರೀಮದಭಿನವಪಂಪ ವಿರಚಿತಮಪ್ಪ
ರಾಮಚಂದ್ರ ಚರಿತ ಪುರಾಣದೊಳ್
ಲಂಕಾದಹನ ವರ್ಣನಂ
ಏಕಾದಶಾಶ್ವಾಸಂ

ಕಂ ॥ ಶ್ರೀಗೆ ನೆಲೆಯೆನಿಪ ನಿಜ ಶ
ಯ್ಯಾಗೃಹದಿಂ ಸ್ನಪನ ರತ್ನಮಂಡಪ ವೇದೀ ॥
ಭಾಗಕ್ಕೆ ಪದತಳಂಗಳ್
ರಾಗಮನೋಲಗಿಸೆ ಬಂದನಭಿನವಪಂಪಂ ॥ ೧ ॥

ಅಂತು ಬಂದು—

ಕಂ ॥ ಸ್ನಪನ ಪವಿತ್ರಂ ಶುಚಿವ
ಸ್ತ್ರ ಪೂತ ಗಾತ್ರಂ ಪ್ರಧಾನ ಮಂತ್ರ ವಿಧಾನಾ ॥
ದ್ಯುಪಚರಿತಾಚಮನಂ ಪಂ
ಚ ಪರಮ ಗುರುಗರ್ಘ್ಯಮೆತ್ತಿದಂ ರಘುರಾಮಂ ॥ ೨ ॥

ತದನಂತರಂ ಮಹಾಪ್ರವಾಹಿನೀ ಸಲಿಲ ಸಂಮಿಶ್ರ ಕರ್ಪೂರ ದಳ ಬಹುಳಕಾಂತಿ ದಂತುರಿತ ಚಂದ್ರಕಾಂತ ಕಲಶಂಗಳಿಂ ಸುರಭಿ ಮಲಯರುಹ ಪಂಕ ಪಿಂಜರಿತ ರಜತ ಶುಕ್ತಿಕೆಗಳಿಂ ಸಜಲ ಧವಳ ಕಲಮಾಕ್ಷತ ಕ್ಷೀರ ಗೌರ ಪಾಂಡುರಿತ ಕರ್ಕೇತನ ಕರಂಡಕಂಗಳಿಂ ನವೀನ ಪ್ರಸೂನ ಮಧು ವಿಲೀನ ಮಧುಕರ ಪಟಲ ಕರ್ಬುರಿತ ರತ್ನಪಟಲಿಕೆಗಳಿಂ ಸುಪಕ್ವ ಭಕ್ಷ್ಯೋಪದಂಶ ಪ್ರಚುರ ಚರು ವಿಚಿತ್ರವರ್ಣ ಶಬಲಿತ ಸುವರ್ಣ ಪರ್ಯಾಣಂಗಳಿಂದುನ್ಮುಖ ಮಯೂಖ ಮಾಣಿಕ್ಯದೀಪ ಕಿರಣಾರುಣಿತ ಮರಕತಮಣಿ ಪುತ್ರಿಕೆಗಳಿಂ ಬಹುಳ ಕಾಲಾಗರುಧೂಮ ಶ್ಯಾಮಲಿತ ಕಲಧೌತ ಧೂಪ ಘಟಂಗಳಿಂ ಕ್ಷೀರಾದಿಸವನ ಪಾವನ ರಸ ವಿಚಿತ್ರಾನೇಕ ಶಾತಕುಂಭ ಕುಂಭಂಗಳಿಂ ಗಂಧಸಲಿಲ ಸಂಭೃತ ವಿಶಾಲ ಹರಿನ್ನೀಲ ಭೃಂಗಾರಂಗಳಿಂ ನಿಜ ಪ್ರಭಾ ಪಟಲ ಪಲ್ಲವಿತ ಶೋಣ ಮಣಿಕಲಶಂಗಳಿಂ ಸ್ಫಟಿಕಮಣಿ ಕಿರಣಜಾಲ ಜಟಿಲಿತ ಮಧ್ಯ ರಂಗದಿಂ ಸಂಗೀತಕ ರಸ ತರಂಗಿತ ಬಾಹ್ಯ ರಂಗದಿಂ ಸ್ಥೂಲ ಮುಕ್ತಾಫಲ ಮುಕುಲಿತ ವಿವಿಧ ರಂಗವಲ್ಲಿಯಿಂ ಮನಂಗೊಳಿಪ ದೇವಪೂಜಾಗೃಹಮಂ ಪೊಕ್ಕು ದರ್ಶನ ಸ್ತವನ ಮುಖರ ಮುಖಂ ಯಥಾವಿಧಿಯಿನಭಿಷವಮಂ ತೀರ್ಚಿ—

ಕಂ ॥ ಸಿರಿಕಂಡದ ಕೋಟ್ಯಕ್ಕಿಸಜಿಂಕೊಳ್
ಬೆರಸಿದ ಕತ್ತುರಿಯ ಸಾರವಣೆ ಬೆಳಗಿದ ಕ ॥

ಪ್ಪುರವಳಿಕಿನ ಸೊಡರ್ಗಳ್ ಸುಂ
ದರಮೆನೆ ಜಿನಪತಿಯನವನಿಪತಿ ಪೂಜಿಸಿದಂ ॥ ೩ ॥

ಸುರಹೊನ್ನೆಯ ವಾಸಂತಿಯ
ಸುರಗಿಯ ಚಂಪಕದ ಕರ್ಣಿಕಾರದ ಪೊಂದಾ ॥
ವರೆಯ ವಿಚಕಿಲದ ನಸು ಬಿರಿ
ದರಲಿಂದರ್ಚಿಸಿದನವನಿಪತಿ ಜಿನಪತಿಯಂ ॥ ೪ ॥

ಚಾರು ಚರು ನಿಚಯದಿಂ ಘನ
ಸಾರಾಗರು ಧೂಮ ಲೇಖೆಯಿಂ ಮಲಯಜ ಕಾ ॥
ಶ್ಮೀರ ರಸದಿಂ ಜಿನೇಂದ್ರನ
ನಾರಾಧಿಸಿದಂ ನರೇಂದ್ರ ಚೂಡಾರತ್ನಂ ॥ ೫ ॥

ಬಾಳೆಯ ಮಾವಿನ ಕವ್ಮಿರ
ದೀಳಿಯ ತನಿವಣ್ಗಳಿಂದಮರ್ಚಿಸಿದಂ ಭೂ ॥
ಪಾಳಂ ನಿರ್ಭರ ಭಕ್ತಿಯ
ಜಾಳಕ್ಕಮೆನೆ ಮೆಯ್ಯೊಳೊಗೆದ ರೋಮಾಂಚಂಗಳ್ ॥ ೬ ॥

ಚ ॥ ಚರು ಮಣಿಪರ್ಯಣಕ್ಕೆ ಬಿಡುಮುತ್ತಿನ ಸೇಸೆಗೆ ಧೂಪ ಭಾಜನ ।
ಕ್ಕರುಣ ಮಣಿಪ್ರದೀಪಿಕೆಗೆ ದಿವ್ಯಫಲಕ್ಕೆ ನಮೇರು ಪುಷ್ಪ ಮಂ ॥
ಜರಿಗೆ ಸುಗಂಧ ಶುಕ್ತಿಕೆಗೆ ಪುಣ್ಯನದೀ ಜಲ ಪೂರ್ಣ ರತ್ನ ಭಾ ।
ಸುರ ಕಲಶಕ್ಕೆ ಮೇಜಿ ಪವಣಿಲ್ಲೆನೆ ಪೂಜಿಸಿದಂ ರಘೂದ್ಭವಂ ॥ ೭ ॥

ಕಂ ॥ ಎನಿತೊಳವಾತಪ ವಾರಣ
ವೆನಿತೊಳವು ವಿಚಿತ್ರ ಪಲ್ಲವಾಂಚಿತ ಮಣಿ ಕೇ ॥
ತನವೆನಿತೊಳವಾಭರಣಮು
ವನಿತರೊಳಂ ರಘುತನೂಭವಂ ಪೂಜಿಸಿದಂ ॥ ೮ ॥

ಅಗರುವ ಧೂಮ ಲತಾ ಶಾ
ಖೆಗಳೊಳ್ ಕಾಯ್ದುಜುಗಲೆಂದು ಬಗೆ ಬೆದಱುವಿನಂ ॥
ಮಗಮಗಿಸುವ ತನಿಗಂಪಿಂ
ಗಗಲದೆ ಮೊಗಸಿದುವು ಮಧುಕರ ಪ್ರಕರಂಗಳ್ ॥ ೯ ॥

ಮರಕತ ಕಲಶಂಗಳ್ ಕೇ
ಸರಿ ಪೀಠಮನುದ್ಗತಾಂಶು ಲೇಖಾ ದೂರ್ವಾಂ ॥

ಕುರದಿಂದರ್ಚಿಸೆ ಮುಕ್ತಾ
ಭರಣಮುಮರ್ಚಿಸಿದುವಂಶ ಜಲ ಧಾರೆಗಳಿಂ ॥ ೧೦ ॥

ಅಂತರ್ಚಿಸಿ ರಾಮಚಂದ್ರಂ ಜಿನೇಂದ್ರ ಮುಖಚಂದ್ರ ನಿರೀಕ್ಷಣ ಹರ್ಷ ಪುಳ ಕಿತ ಸರ್ವಾಂಗನಾನಂದಬಾಷ್ಪ ಸಲಿಲ ವಿಲುಲಿತ ವಿಲೋಚನಂ ನಿಟಿಲತಟ ಘಟಿತ ಕುಟ್ಮಲಿತಾಂಜಲಿಪುಟಂ ವಿನಮಿತ ಶಿರಸ್ಸರೋಜಂ ಗಂಧಸಲಿಲ ಶೇಷಾಕ್ಷತ ಕುಸುಮ ಶೇಖರಂ ಜಿನ ಚರಣ ಚಂದನ ತಿಲಕ ವಿಲಸಿತ ವದನಾರವಿಂದನುಚ್ಚರಿತ ಪುನರ್ದರ್ಶನ ವಾಕ್ಯ ಮಾಣಿಕ್ಯ ಕಂಠಾಭರಣಂ ಜಿನಚರಣಮುಂ ಬೀಟ್ಕೊಂಡು ಜಿನ ಪೂಜಾ ಗೃಹ ಪುರೋಭಾಗದ ಚೌಪಳಿಗೆಯೊಳುತ್ತುಂಗ ಮಣಿಮಯಾಸನಾಸೀನಂ ಸುರಭಿ ಕುಸುಮ ದಾಮ ಸುಗಂಧಾನುಲೇಪನ ದಿವ್ಯ ವಸನ ದಿವ್ಯಾಭರಣ ಭೂಷಿತನಪ್ಪುದುಂ—

ಉ ॥ ಪೂತ ನಮೇರು ಸುತ್ತಿದಳಿಮಂಡಳಿಯಿಂ ರಜತಾದ್ರಿ ನೀಲ ಜೀ ।
ಮೂತ ಕದಂಬದಿಂ ಸುರಗಜಂ [1]ಮದವಟ್ಟಿಯಿನಾರ ದಿಟ್ಟಿಗಂ ॥
ಪ್ರೀತಿಯನುಂಟುಮಾಪ್ಪವೊಲದೇನೆಸೆದಿರ್ದನೊ ದೇಹದೀಪ್ತಿ ಚಂ ।
ದ್ರಾತಪಮಂ ಪಳಂಚಲೆಯೆ ನೀಲ ಪರಿಚ್ಛದದಿಂ ಹಲಾಯುಧಂ ॥ ೧೧ ॥

ಚ ॥ ಎಱಗಿಸಿ ಪಂಚರತ್ನ ರುಚಿಯಿಂ ಸುರ ಚಾಪದ ಜೆಲ್ವನಟ್ಟಿಱಂ ।
ದೆಱಗಿಸಿ ನೋಪ್ಪ ನೋಟಕರ ಲೋಚನ ಪುತ್ರಿಕೆಯಂ ಪೆಱರ್ಗೆ ತಾ ॥
ನೆಱಗದ ಪೆರ್ಮೆಯಂ ತಳೆದುದೆಂದೊಡೆ ಬಣ್ಣಿಪರಾರ್ ಜಿನೇಶ್ವರಂ ।
ಗೆಱಗಿ ಮಹತ್ತ್ವಮಂ ತಳೆದ ರಾಘವ ರತ್ನಹಟತ್ಕಿರೀಟಮಂ ॥ ೧೨ ॥

ಕಂ ॥ ಮರಕತ ಮಣಿ ಕುಂಡಲ ರ
ಶ್ಮಿರೇಖೆಯಿಂ ಗಂಡ ಮಂಡಲಂ ಸೇವಾಳಂ ॥
ಬೊರೆದ ಧವಳಾಬ್ಜ ದಳದಂ
ತಿರೆ ಕಣ್ಗೆಸೆದಂ ನರೇಂದ್ರ ಚೂಡಾರತ್ನಂ ॥ ೧೩ ॥

ಫಣಮಯ್ದಂ ಪಡೆದಂ ತನ
ಗೆಣೆವಡೆದಂ ಶೇಷಸುರ್ವಿಯಂ ತಾಳ್ದನೆನಲ್ ॥
ಮಣಿಮುದ್ರಾ ಫಣಮಣಿ ಕ
ಣ್ಮೊಣರಂ ತಣಿಪಿದುದು ಭುಜಯುಗಂ ರಘುಸುತನಾ ॥ ೧೪ ॥

---

1. ಮದವರ್ಕೆ. ಚ.

ಚ ॥ ತರುಣ ಮೃಣಾಲ ಗರ್ಭ ರುಚಿವೆತ್ತ ರಘೂದ್ವಹ ದೇಹದೀಪ್ತಿ ಮಂ ।
ಜರಿಯನುಪಾಶ್ರಯಂಬಡೆದು ನಿಸ್ತುಲ ಮೌಕ್ತಿಕ ಹಾರಯಷ್ಟಿ ಪೇ ॥
ರುರದೊಳದೇಂ ವಿರಾಜಿಸಿದುದೋ ಜನತಾ ನಯನೋತ್ಪಲೋತ್ಪವಂ ।
ಶರದದ ಸಾಂದ್ರ ಚಂದ್ರರುಚಿಯೊಳ್ ತಲೆದೋಱುವ ತಾರಕಾಳಿವೋಲ್॥೧೫॥

ಅನಂತರಮಲ್ಲಿಂ ತಳರ್ದು—

ಚ ॥ ಚಮರರುಹಂಗಳಂ ತನಗೆರಟಿಕ್ಕಿಲದೊಳ್ ನಡೆತಂದು ಪೇಚರ ।
ಪ್ರಮದೆಯರಿಕ್ಕೆ ಬೆಳ್ಗೊಡೆ ಸುಧಾಕರನಂ ಕೊಱಚಾಡೆ ಮಾಡೆ ರಾ ॥
ಗಮನೆಳೆವೆಣ್ಗೆ ಕೇಸಡಿಯ ಕೆಂಪು ತನುಪ್ರಭೆ ಬೀಱಿ ಚಂದ್ರಿಕಾ ।
ಭ್ರಮೆಯನಿಳಾಧಿಪಂ ನಡೆದನೋಲಗ ಸಾಲೆಗದೊಂದು ಲೀಲೆಯಿಂ ॥ ೧೬ ॥

ಅಂತು ಬಂದು ತನ್ಮಧ್ಯ ಸ್ಫಟಿಕ ಘಟಿತ ವೇದಿಕಾ ಶಿಖಂಡ ಮಂಡನಮೆನಿಪ್ಪ ಸಿಂಹಪೀಠದೊಳವೋಘ ಬಾಣನಪ್ಪುದಾತ್ತರಾಘವನನುಮಧಿರಾಜ ಪಾರ್ಶ್ವ ಮಣಿಮ ಯಾಸನದೊಳ್ ಸಾಗರಾವರ್ತ ಧನುರ್ಜ್ಯಾ ಲತಾ ತಾಡನ ಜನಿತ ಕಿಣ ಕಳಂಕಾಂಕಿತ ಪ್ರಕೋಷ್ಠನಪ್ಪ ಲಕ್ಷ್ಮಣನುಮಿತ್ರಿಪುತ್ರನಂ ಬಳಸಿದ ನಕ್ಷತ್ರ ಮಂಡಲದಂತೆ ವಿವಿಧ ಮಣಿಮಂಡಲ ಮರೀಚಿ ನಭೋಮಂಡಲಮನಾವರಿಸೆ ಸೇನಾಪ್ರಧಾನರ್ ಸಮುಚಿ ತಾಸನದೊಳ್ ಸುಗ್ರೀವಾಂಗದ ನಳ ನೀಲ ಜಾಂಬವ ಹನುಮತ್ಪ್ರಮುಖ ನಿಖಿಲ ಖಚರ ಪರಿವೃಢರುಮಿರ್ಪುದುಮಾ ಸಮಯದೊಳ್ ಪುರೋಹಿತನುಚ್ಚರಿತ ಸ್ವಸ್ತಿ ಶಬ್ದಂ ದೇವ ದಿಗ್ವಿಜಯ ಪ್ರಯಾಣ ಲಗ್ನಮತ್ಯಾಸನ್ನಮೆಂದು ಬಿನ್ನವಿಸೆ ಸೇನಾ ಪ್ರಧಾನಂ ನಳಂ ವಿಜಯ ದುಂದುಭಿಯಂ ಪೊಯ್ಸುವುದುಂ—

ಶಾ ॥ ಲಂಕಾಧೀಶ್ವರ ಕಾಳೆಗಂ ನಿನಗೆ ಲೇಸಲ್ತೆಂತೆನಲ್ ವಾಸುದೇ ।
ವಂ ಕೊಲ್ವಂ ಪ್ರತಿವಾಸುದೇವನನಿದೇಂ ಸಂದೇಹಮೇ ಸೀತೆಯಂ ॥
ನೀಂ ಕೊಟ್ಟಟ್ಟು ಬರ್ದುಂಕಲಾಟಿಸುವೊಡೆಂಬಂತಷ್ಟದಿಗ್ಭಿತ್ತಿಯಂ ।
ಧ್ವಂಕಿಟ್ಟತ್ತು ರಘುಪ್ರವೀರ ವಿಜಯ ಪ್ರಸ್ಥಾನ ಭೇರೀರವಂ ॥ ೧೭ ॥

ಮ ॥ ಕುಲ ಶೈಲಂಗಳ ಪದ್ಮಿನೀಕುಲದ ದೇವೀಸಂಕುಲಂ ಬೆರ್ಚೆ ಪೆ ।
ಳ್ಪಳಿಸುತ್ತುಂ ದೆಸೆಯಾನೆ ಬಿರ್ಚೆ ಕವಿಯಂ ಮಾರ್ತಂಡ ಸಪ್ತಾಶ್ವ ಮಂ ॥
ಡಳಿ ಶಂಕಾಕುಳಿತಂ ಪೆಡಂಮಗುಟೆ ಶಕ್ರಾಲಿಂಗನಂಗೆಯ್ಯೆ ಸಂ ।
ಚಲಿಸುತ್ತುಂ ಶಚಿ ಘೂರ್ಣಿಸಿತ್ತು ವಿಜಯಪ್ರಸ್ಥಾನ ಭೇರೀರವಂ ॥ ೧೮ ॥

ಕಂ ॥ ಬಲಭದ್ರನ ನಿರ್ಮಲ ಕೀ
.ರ್ತಿ ಲತಾ ಕಂದಳಮೆನಿಪ್ಪ ಪನ್ನೆರಡುಂ ಮಂ ॥

ಗಲ ಶಂಖಂಗಳ ದನಿಗಳ್
ಕುಲಗಿರಿ ಕುಂಜದೊಳೊಡರ್ಚಿದುವು ಮಾರ್ದನಿಯಂ ॥ ೧೯ ॥

ಭೋರೆನೆ ಪೊಯ್ವುದುಮಾಜುಂ
ಭೇರಿಗಳುಂ ಕನಕ ಕೋಣ ಹತಿಯಿಂದಂ ಬಂ ॥
ಭಾರವಮೇಂ ನೆಗೆದುದೊ ರಘು
ವೀರ ಜಯಶ್ರೀ ಕಲಾಪಿನೀ ಮೇಘ ರವಂ ॥ ೨೦ ॥

ಆ ಶುಭಮುಹೂರ್ತದೊಳ್—

ಕಂ ॥ ಸುರವಲ್ಲರಿಗಳ್ ಮುಗುಳಂ
ಸುರಿತರ್ಪುವು ರಜತ ಶಿಖರಿ ಶಿಖರದೊಳಿನೆ ಖೇ ॥
ಚರಿಯರ್ ಮುತ್ತಿನ ಸೇಸೆಯ
ನರಸಂಗಿಕ್ಕಿದರಪಾಂಗ ಮಾಲಾಸಹಿತಂ ॥ ೨೧ ॥

ದಧಿ ತಿಲಕ ಪುರಸ್ಸರಮಖಿ
ಳ ಧರಾಧೀಶಂಗೆ ನೀಡಿದಳ್ ಮತ್ತೊರ್ವಳ್ ॥
ವಿಧುವದನೆ ದರ ಸ್ಮಿತಮಂ
ಮಧುಕರ ಝಂಕಾರ ಮುಖರಮುಂ ಬಾಸಿಗಮುಂ ॥ ೨೨ ॥

ಆಗಳಖಿಳ ಜಯಜಯಧ್ವನಿವೆರಸು ಕುಲವೃದ್ಧ ಕುಲಾಂಗನಾಜನದಾಶೀರ್ವಾದಮೊದವೆ ಸಿಂಹವಿಷ್ಟರದಿನೆಬ್ಬಿ—

ಕಂ ॥ ಇರದೊಡನೆಬ್ಬಿ ವಿಯಚ್ಚರ
ಪರಿವೃಢರ ಕಿರೀಟ ರತ್ನರುಚಿಗಳ್ ಗಗನೋ ॥
ದರಮುಂ ಚಿತ್ರಿಸೆ ತಳರ್ದಂ
ನಿರಂಕುಶಂ ಲಕ್ಷ್ಮಣಾನ್ವಿತಂ ರಘುರಾಮಂ ॥ ೨೩ ॥

ಮಂಡಳಿಸಿದತ್ತು ನಿಜ ರುಚಿ
ಮಂಡಲಮಾಗಸದೊಳಿಂಬಿನಂ ಬೆಳ್ಗೊಡೆ ಕ ॥
ಣ್ಗೊಂಡು ಪರಿಭವಿಸಿದುದು ಶಶಿ
ಮಂಡಳಮಂ ಬಂದು ಕಂಡ ಬೆಳ್ದಾವರೆಯಂ ॥ ೨೪ ॥

ಪದಿನಾಜುಂ ಚಮರಜನಮುಂ
ಪದಿನಲುವರ್ ಖಚರ ಕನ್ಯೆಯರ್ ಪೂಗುಡಿವೇ ॥

ಱಿದ ಜಂಗಮ ಲತೆಗಳಿನಲ್
ಬಿದಿರ್ದಿಕ್ಕಿದರೊಡನೆ ಮದನನಂಬಿಕ್ಕುವಿನಂ ॥ ೨೫ ॥

ಚ ॥ ಎಸೆದುದು ಮಂಗಲಾನಕ ಘನಧ್ವನಿ ಮಂಗಲ ಪಾಠಕ ಸ್ವನಂ ।
ಪಸರಿಸಿದತ್ತು ಪೂರ್ಣಕಲಶಂ ಗುಡಿ ವಂದನಮಾಲೆ ಮುಂದೆ ಸಂ ॥
ಧಿಸಿದುವು ಗಾಯನೀ ಮಧುರ ಮಂಗಳ ಗೀತ ರವಂ ಮನಕ್ಕೆ ಸಂ ।
ತಸದೊದವಂ ನಿಮಿರ್ಚಿದುದು ರಾಘವ ದಿಗ್ವಿಜಯ ಪ್ರಯಾಣದೊಳ್ ॥ ೨೬ ॥

ಕಳಶಕುಚಂ ಕದಕ್ಕದಿಸೆ ಕೋಮಲೆಯರ್ ಶಶಿಕಾಂತ ಕಾಂತ ಮಂ ।
ಗಳ ಕಲಶಂಗಳಂ ತಳೆದು ಮಂಗಲ ದರ್ಪಣ ಪಲ್ಲವಾನಕಂ ॥
ಗಳನುಡೆನೂಲ ನೂಪುರದ ಮೆಲ್ಲುಲಿ ಕೈಮಿಗೆ ಪುಣ್ಯ ದೇವತಾ ।
ಕುಳಮೆನೆ ಗಾಡಿವೆತ್ತು ನಡೆದರ್ ಮನುವಂಶ ಜಯಪ್ರಯಾಣದೊಳ್ ॥೨೭॥

ಕಂ ॥ ದುಗುಲದ ಗುಡಿಗಳ ಬೆಂಬಿಡಿ
ದು ಗಾಳಿ ತಣ್ಪೆಡಿದು ತೀಡೆ ಕೈಸನ್ನೆಗಳಿಂ ॥
ಪಗೆವರ್ ಬೆಂಗುಡಿಮೆಂಬಂ
ತೊಗೆದುವು ಮನುವಂಶ ಮಂಡನಂ ನಡೆವೆಡೆಯೊಳ್ ॥ ೨೮ ॥

ಎರಡನೆಯ ಸೂರ್ಯಹಾಸದ
ಪರಿಜಂ ಕೈಕೊಂಡು ಲಕ್ಷ್ಮಣಂ ಬಲಗೆಲದೊಳ್ ॥
ಬರೆ ಬಂದಂ ನಿಜ ಪಾಂಡುರ
ಮರೀಚಿ ಕಣ್ಗೊಳಿಸೆ ರೋಹಿಣೀ ರಮಣನನವೋಲ್ ॥ ೨೯ ॥

ಅಂಗದ ಭುಜಶಿಖರದ ರ
ತ್ನಾಂಗದಮಂ ನಖ ಮಯೂಖ ಮಾಲಿಕೆಯಿಂ ಚೆ ॥
ಲ್ವಿಂಗೆ ನೆಲೆಮಾಡಿ ನಡೆದಂ
ಜಂಗಮ ತಾರಾದ್ರಿಯೆಂಬಿನಂ ಬಲಭದ್ರಂ ॥ ೩೦ ॥

ಅಂತು ರಾಜಭವನಮಂ ಪೊಱಮಟ್ಟು ಪುರೋಭಾಗಕ್ಕೆ ವಂದು--

ಕಂ ॥ ಮುನಿಜನದ ಬಂಧು ಜನದಭಿ
ಜನದಬಲಾಜನದ ಪರಕೆಗಳ್ ಕವಿಯಂ ತೆ ॥
ಕ್ಕನೆ ತೀವೆ ರಥಮನೇಱಿದ
ನಿನವಂಶಜನೇಱೆ ವಿಜಯ ವಧು ನಿಜ ಭುಜಮಂ ॥ ೩೧ ॥

ಆ ಸಮಯದೊಳ್ ನಳ ನೀಲ ಸುಷೇಣ ಪ್ರಸನ್ನಕೀರ್ತಿ ಪ್ರಮುಖ ಮುಖ್ಯ ನಾಯಕರಂ ಸೇನಾಮುಖಕ್ಕೆ ಪೇಟ್ದು ಸುಗ್ರೀವಾಂಗದ ಜಾಂಬವದ್ಗಗನಪತಿ ಭೂತ ಗತಿ ಪ್ರಭೃತಿಗಳಂ ಪಶ್ಚಿಮ ಪ್ರದೇಶದೊಳ್ ನಿಯಮಿಸಿ ತಟದ್ವಕ್ತ್ರ ವಜ್ರದಂಷ್ಟ್ರ ವಿರಾಧಿತ ಮಹೇಂದ್ರರ್ ಮೊದಲಾಗೆ ಪಲಬರುಮಂ ಬಲವಕ್ಕದೊಳ್ ನಿಯೋಜಿಸಿ ಮಂದರ ಸವಿಸಾರ ಸಿಂಹನಾದ ವರಾಹರ್ ಮೊದಲಾದರನೆಡವಕ್ಕದೊಳ್ ನಡೆಯಿಮೆಂದು ಪೇಟ್ದು ಸೌಮಿತ್ರಿ ಸಕಲ ವಿದ್ಯಾಧರ ನಾಯಕರ್ವೆರಸು ತಾನುಂ ಹನುಮನುಂ ದಾಶರಥಿಯ ರಥೋಭಯಪಾರ್ಶ್ವದೊಳಂ ರಥಾರೂಢರ್ ಮೆಯ್ಗಾಪಾಗೆ ನಡೆವುದುಂ—

ಮ ॥ ನಡೆಗೊಂಡತ್ತು ಮದೇಭ ದಾನಜಲ ಧಾರಾಸಾರದಿಂ ಮಾರುತಂ ।
ನಡೆಗೆಟ್ಟರ್ಪಿನಮುತ್ಪತಾಕೆಗಳಿನಾಕಾಶಾಪಗಾ ವೀಚಿ ನೂ ॥
ರ್ಮಡಿಸುತ್ತರ್ಪಿನಮಸ್ತ್ರಶಸ್ತ್ರ ಪಟಲ ಪ್ರದ್ಯೋತದಿಂದಂ ಪಗಲ್ ।
ಕಡುಕೊರ್ವಂ ಪಡೆದಿರ್ಪಿನಂ ರಘುತನೂಜಾಖರ್ವ ಚಾತುರ್ಬಲಂ ॥ ೩೨ ॥

ಕಂ ॥ ಕರಿ ತುರಗ ರಥ ಪದಾತಿಯ
ಪರಿಸಂಖ್ಯೆಯನಱಿಯೆನಲ್ಲಿ ಕೇತನ ಪಟ ಸಂ ॥
ಚರಣಕ್ಕೆ ನಭಂ ಭಟ ಸಂ
ಚರಣಕ್ಕೆ ಧರಿತ್ರಿ ನೆಱಿಯದೆಂಬಿದನಱಿವೆಂ ॥ ೩೩ ॥

ಮ ॥ ನಿಜತೇಜಂ ಪೊಱಗಾಗೆ ಸೈರಿಪನೆ ರಾಮಸ್ವಾಮಿಯೆಂಬಂತೆ ನೀ ।
ರಜ ಮಿತ್ರ ಪ್ರಭೆಯಂ ಪಳಂಚಲೆದು ಸೀತಾದೇವಿಯಂ ಕೊಂಡು ಪೋ ॥
ದ ಜಗತ್ಕಂಟಕ ತೇಜಮಿರ್ದದೆಸೆಯಂ ಪುಟ್ಟಿಂತು ಪತ್ತುಂದಿಶಾ ।
ವ್ರಜಮಂ ಪೂಟ್ದು ಪೊದಟ್ದು ಕೊರ್ವುವಡೆದತ್ತು ತ್ತಾನ ಸೇನಾರಜಂ ॥ ೩೪ ॥

ತೆಣಱುತ್ತುಂ ತಲೆಮಟ್ಟುತಾಳ್ದಿ ಧರೆಯಂ ಸೇನಾಭರಾಕ್ರಾಂತದಿಂ ।
ಫಣಿರಾಜಂ ನಡುನೆತ್ತಿ ಪೊತ್ತಿ ಕೆಡಿವಿಟ್ಟಂತಿರ್ದುದಾಗಳ್ ಫಣಾ ॥
ಮಣಿಚಕ್ರಂ ವಿಷವಹ್ನಿ ಧೂಮಪಟಲಂ ನಿಶ್ವಾಸ ನಿರ್ಯತ್ಸಮಾ ।
ರಣನಿಂ ಪೂರಿಸಿದಂತಿರ್ದುದು ಫಣಾ ಚಕ್ರಾಂಕಿತಂ ಸ್ವಸ್ತಿಕಂ ॥ ೩೫ ॥

ಅಂತಸಂಖ್ಯಾತ ಸೇನಾ ಸಮುದ್ರಂ ದಕ್ಷಿಣಸಮುದ್ರಾಭಿಮುಖಮಾಗಿ ನಡೆದು—

ಕಂ ॥ ವೇಲಾಂಧ ನಗ ನಿತಂಬದ
ವೇಲಾಂಧ ಪುರೋಪಕಂಠಮಂ ಸಾರ್ದುದು ಭೂ ॥

ಪಾಲ ಸ್ಕಂಧಾವಾರಂ
ವೇಲಾವನ ವೀಧಿಯಿಲ್ಲದಂಭೋನಿಧಿಪೋಲ್ ॥ ೩೬ ॥

ಆಗಳಾ ಪುರಾಧಿಪತಿ ಚತುರಂಗ ಸೇನಾಸಮನ್ವಿತಂ ಸಮುದ್ರವೆಸರ ವಿದ್ಯಾಧರಂ ಮುಂದೆ ನಡೆವ ನಳನ ಪಡೆಗೆ ರಣಾನುರಾಗದಿನಡ್ಡಂಬಂದು ನಿಲ್ವುದುಂ—

ಚ ॥ ಭ್ರುಕುಟಿ ಲಲಾಟದೊಳ್ ತನಗೆ ತೋಱದ ಮುನ್ನಮಿದಿರ್ಚಿದನ್ಯ ಸೈ ।
ನಿಕಮನದಿರ್ಸೆ ತನ್ನ ಪಡೆ ತನ್ನ ಪರಾಕ್ರಮ ಗರ್ವದುರ್ವು ಕೌ ॥
ತುಕಮೆನೆ ಕಟ್ಟಿದಂ ಖಚರ ನಾಯಕನಪ್ಪ ಸಮುದ್ರನಂ ಭಯಾ ।
ನಕ ರಸ ಮುದ್ರನಂ ನಳನರಾತಿ ಬಲಾರ್ಣವ ಬಾಡವಾನಳಂ ॥ ೩೭ ॥

ಮ ॥ ಅತಿ ಗಂಭೀರನನರ್ಘ್ಯ ರತ್ನ ಕಟಕಾಧಾರಂ ಮಹಾವಾಹಿನೀ ।
ಪತಿ ಲಕ್ಷ್ಮೀನಿಲಯಂ ನಿಸರ್ಗವಿಭು ಮರ್ಯಾದಾಪರಂ ಲೋಕ ವಿ ॥
ಶ್ರುತ ಸೀಮಾಂತನವಂ ನಿಮಿರ್ಚಿದ ಸಮುದ್ರಂ ಯುದ್ಧದೊಳ್ ಬಂಧನ ।
ಸ್ಥಿತನಾದಂ ತಲೆವಿಲ್ಲೊಳೆಂದೊಡೆ ನಳಂ ಗಂಡಂ ಪೆಜರ್ ಗಂಡರೇ ॥ ೩೮ ॥

ಅಂತಾತನಂ ತಂದು ತನಗೊಪ್ಪಿಸುವುದುಂ ಸಮುದ್ರಂಗಭಯಮುಂ ಕೊಟ್ಟು ಮನ್ನಿಸೆ ಮಱು ದೆವಸಮಾತಂ ತನ್ನ ಸುತೆಯರಂ ಸತ್ಯಶ್ರೀ ಕಮಲೆ ಗುಣಮಾಲೆ ರತ್ನಮಾಲೆಯೆಂಬ ನಾಲ್ವರಂ ಲಕ್ಷ್ಮಣಂಗೆ ಕೊಟ್ಟು ವೈವಾಹಿಕ ಸಂಬಂಧದಿಂ ಭೃತ್ಯ ಪದಮನಪ್ಪುಕೆಯ್ದು ಪೂರ್ವಪದಮುಂ ಪಡೆದು ಮಱು ದೆವಸಮಲ್ಲಿಂದೆ ಮೇಲೆತ್ತಿ ನಡೆವಾಗಳ್—

ಕಂ ॥ ಅಡಿಗೆಱಗಿ ಸುವೇಳಾಚಲ
ದೊಡೆಯಂ ಖಚರಂ ಸುವೇಲನೆಂಬಂ ತನ್ನ ॥
ಕೊಡಮೆಯನಿತ್ತಿಜ್ಜೀವಿಟ್ಟಿಗೆ
ನಡೆದಂ ರಘುಜನ ಮಾರ್ಬಲಕ್ಕೆ ಮಾರ್ಬಲಮುಂಟೇ ॥ ೩೯ ॥

ಅಂತಂದಿನ ದಿವಸಂ ಸುವೇಲಾಚಲದೊಳಿರ್ದು ಮಱು ದೆವಸಂ ಲಂಕಾದ್ವೀಪದ ಸಮೀಪಮಪ್ಪ ಹಂಸದ್ವೀಪಮನೆಯ್ದಿವರ್ಪುದುಮಾ ದ್ವೀಪಾಧಿಪತಿ ನಭಶ್ಚರನಸಂ ಖ್ಯಾತ ಬಲ ಸಮೇತನಾಗಿ ತಾಗುವುದುಂ—

ಕಂ ॥ ಅನುವರದೊಳ್ ಹಂಸದ್ವೀ
ಪ ನಾಥನಂ [1]ದ್ವೀಪಿ ರಥನನಂಜಿಸಿ ದಂಡೋ ॥

1. ಗೆಲ್ದು ರಾಘವಂಗಂ. ಚ.

ಪನತಂಮಾಡಿದ ಯಮು ದಂ
ಡ ನಿಭಮುದಾರಳವೊ ನಳನ ಬಾಹಾದಂಡಂ ॥ ೪೦ ॥

ಅಂತಾ ದ್ವೀಪದೊಳ್ ಬೀಡಂಬಿಟ್ಟು ಲಕ್ಷ್ಮೀಧರಂ ಪ್ರಭಾಮಂಡಲಂಗೆ ಬಟಿಯನಟ್ಟಿ ಪೆಱವುಂದ್ವೀಪಾಂತರದ ವಿದ್ಯಾಧರಾಧಿರಾಜರನಾಜ್ಞಾವಿಧೇಯರಂ ಮಾಡುತ್ತುಮಿರ್ದಿನಮಿತ್ತಲ್—

ಚ ॥ ಅರುಣಮಣಿ ಪ್ರಭಾ ಪಟಲದಿಂದರುಣಾತಪಮಂ ತಗುಳ್ದು ಬಿ ।
ತ್ತರಿಸುವ ಸಿಂಹಪೀಠದೊಳದೇನೆಸೆದಿರ್ದನೊ ರಾಹುಮಂಡಲಂ ॥
ತರುಣ ದಿನೇಶ ಮಂಡಲಮನಾದರಿಸಿರ್ದಪೊಲಿಂದ್ರನೀಲ ಭಾ ।
ಸುರತರ ದೇಹದೀಪ್ತಿ ಪುದಿಯಲ್ಕೆ ದಿಶಾನನಮಂ ದಶಾನನಂ ॥ ೪೧ ॥

ಕಂ ॥ ಉರದಿಂದಗಲದ ಲಕ್ಷ್ಮಿಯ
ತರಲೇಕ್ಷಣ ಮಾಲೆ ಹಾರಲತೆ ದನುಜನ ಪೇ ॥
ರುರದೊಳ್ ಸೊಗಯಿಸಿದುದು ಕಾ
ರಿರುಳೊಳ್ ತಲೆದೋರ್ಪ ತರಳ ತಾರಾವಳಿವೋಲ್ ॥ ೪೨ ॥

ಅಂಗದ ಮಣಿಭೂಷಣ ಕಿರ
ಣಂಗಳ್ ಜಗದೊಳಗಣರಸುಗಳ ಜಯ ವಧುವಂ ॥
ಪಿಂಗದೆ ನಿಲೆಕಟ್ಟುವ ಪಾ
ಶಂಗಳಿವೆನೆ ಭ.ಜದೊಳೇಂ ಮನಂಗೊಳಿಸಿದುವೋ ॥ ೪೩ ॥

ಅವತಂಸ ಪಾರಿಜಾತಾ
ಸವಮಂ ಸವಿದಾಡಿ ಪಾಡುವಳಿಗಳ ನಿನದಂ ॥
ಸವಿವಡೆಯೆ ಸೈರಿಸಂ ಚಮ
ರವಿಕ್ಕುವಬಲೆಯರ ಪಿಂಡುಗಂಕಣದುಲಿಯಂ ॥ ೪೪ ॥

ತನುಜರುಮನುಜರುಮುಚಿತಾ
ಸನದೊಳ್ ಮಂತ್ರಿಗಳುಮಿರೆ ವಿಲಾಸದಿನಿರ್ದಂ ॥
ದನುಜಾಧೀಶಂ ಪ್ರತ್ಯಂ
ತ ನಗಂ ಬಳಸಿರ್ದ ನೀಲ ಕುತ್ಕೀಲದವೋಲ್ ॥ ೪೫ ॥

ಜನಕಸುತೆ ಮನದೊಳಿರೆ ಪರಿ
ಜನಮಿರೆ ನಿಯತ ಪ್ರದೇಶದೊಳ್ ವಿರಹೋದ್ದೀ ॥

ಪನಮುಂ ಮಱೆಯಿಸಿ ದನುಜೇಂ
ದ್ರನಿಂದ್ರನಿರ್ಪಂತಿರೋಲಗಂಗೊಟ್ಟರ್ದಂ ॥ ೪೬ ॥

ಅಂತಿರ್ಪುದುಂ—

ಕಂ ॥ ಚರನೊರ್ವಂ ಬಂದು ವಸುಂ
ಧರೆಯೊಳ್ ಮೆಯ್ಯಿಕ್ಕಿ ಜಯಜಯ ಧ್ವನಿ ಪೊಣ್ಮ್ಮಿ॥
ತ್ತಿರೆ ನಿಂದು ನಿಟಲ ತಟಗತ
ಕರ ಕುಟ್ಮಲನಾಗಳಸುರ ಪತಿಗಿಂತೆಂದಂ ॥ ೪೭ ॥

ಚ ॥ ಭುವನದೊಳಿನ್ನೆಗಂ ಮಱೆದು ಕಂಡಱಿಯೆಂ ದನುಜೇಂದ್ರ ದೇವ ದಾ ।
ನವ ಖಚರಾಧಿನಾಯಕರೊಳಾಹವದೊಳ್ ನಿನಗುರ್ಕಿ ಸೊರ್ಕಿ ವಿಸಾ ॥
ಱುವ ತಲೆದೋಱುವುದ್ಧತರನೀಗಳಿದಚ್ಚರಿ ಕಂಡೆನಾಂ ಮಹೋ ।
ತ್ಸವದೊಳೆ ಬಂದರ್ ಮನುಜರಾಹವ ಕೇಳಿಗೆ ರಾಮಲಕ್ಷ್ಮಣರ್ ॥ ೪೮ ॥

ಮ ॥ ಬಲ ನಾರಾಯಣರಂ ನೆರಂಬಡೆದು ನಿಮ್ಮೊಳ್ ಕಾದುವುದ್ಯೋಗದಿಂ ।
ಪಲವುಂದ್ವೀಪದ ಖೇಚರರ್ ನೆರೆದು ಹಂಸದ್ವೀಪದೊಳ್ ಬಿಟ್ಟು ಮುಂ ॥
ಕಲಹಕ್ಕಲ್ಲದ ನಮ್ಮನೊಲ್ಲದವರೆಲ್ಲಂ ತಮ್ಮೊಳೊಂದಾದರಾ ।
ಕಲಿಗಳ್ ದಾನವ ಚಕ್ರವರ್ತಿ ನಿಜ ದೋರ್ದಂಡಂಬರಂ ಗಂಡರೇ ॥ ೪೯ ॥

ಎಂದು ಬಿನ್ನವಿಸಿದ ಚರನ ವಚನಮನವಧರಿಸಿ ಬೀರಸಿರಿಯ ಬೆಳ್ಪಸದನದ ಬೆಳಗಿನಂತೆ ದಂತಕಾಂತಿ ಪಸರಿಸೆ ಮಂದಸ್ಮಿತ ಮುಖಂ ವಿದ್ಯಾಧರವೀರ ಪ್ರಮುಖ ನಪ್ಪ ದಶಮುಖನಿಂತೆಂದಂ—

ಶಾ ॥ ತಂದೆಂ ಸೀತೆಯನಾಂ ಪರಾಭವಮನೆನ್ನೊಳ್ ಕಾದಿ ನೀಗಲ್ ಮನಂ ।
ದಂದೇಕಾಕಿಗಳೆತ್ತಿ ಬರ್ಪರವರೊಳ್ ಸಂಧಾನಮುಂ ಮಾಡಿ ಮು ॥
ನ್ನೆಂದುಂ ಕಪ್ಪಮನಿತ್ತು ಬಾಪ್ಪಿ ಖಚರರ್ ಕೈವಾರದಿಂ ಕಾದಿಸಲ್ ।
ಬಂದಪ್ಪರ್ ಪರ ಹಸ್ತದಿಂ ಮೊಬನಿಡಲ್ ಬರ್ಪಂತೆ ಕಾಳಾಹಿಯಂ ॥ ೫೦ ॥

ಕಂ ॥ ವ್ಯಗರಾಜಂ ಗರ್ಜಿಪುದುಂ
ನಗದೊಳ್ ಮಾರ್ದನಿಗಳುಣ್ಮವಂತೊಡನೊಡನಿಂ ॥
ದಗಿ ಮೇಘವಾಹನಾದಿಗ
ಳಗುರ್ವು ಪರ್ವುವಿನಮಸುರನೆಂದುದನೆಂದರ್ ॥ ೫೧ ॥

ಅಂತವರ್ ನರ್ಮ ಸಚಿವರಂತಿಚ್ಛೆಯಂ ಪ್ರತಿಪಾಲಿಸಿ ನುಡಿವುದುಮದಂ ಕೇಳ್ದು ನಯ ವಿದ್ಯಾ ವಿನಯ ವಿಭೂಷಣನಪ್ಪ ವಿಭೀಷಣಂ ಬಿನ್ನಪಮನವಧಾರಿಸು ವುದೆಂದಿಂತೆಂದಂ—

ಕಂ ॥ ಇಚ್ಛಾ ಪ್ರತಿಪಾಲನಮುಂ
ತುಚ್ಛಂ ನುಡಿಗುಂ ವಿವೇಕಿ ಪೊಲ್ಲಮೆಗಂಡೇ ॥
ನಾಚ್ಛಾದಿಸುಗುಮೆ ಕಾರ್ಯ ಪ
ರಿಚ್ಛೇದಮನುಭಯ ಲೋಕ ಹಿತಮುಂ ನುಡಿಗುಂ ॥ ೫೨ ॥

ಮತ್ತಕೋಕಿಲ ॥ ಅಶುಚಿ ಲೋಭಿ ಶುಚಿ ಲೋಭಮಿಲ್ಲದಂ।
ವಿಶದ ಶೌಚ ಗುಣಮೊಂದೆ ಕಾರಣಂ ॥
ಕುಶಲ ವೃತ್ತಿಗೆನೆ ಭೂಭುಜಂ ಗುಣಾ।
ತಿಶಯ ಸೂರಿ ಶುಚಿಯಾಗದಿರ್ಪನೇ ॥ ೫೩ ॥

ಕಂ ॥ ಬಗೆ ದೆಸೆಬಿದ್ದಂ ಪರಿವುದು
ಬಗೆಯಂ ಬಗೆದಂತೆ ಪರಿಯಲೀಯದೆ ಪಿರಿಯಂ ॥
ತೆಗೆವುದು ಪಟುಪೊರ್ದದ ಬ
ಟ್ಟಿಗೆ ನಿಜದಿಂದಾರ ಬಗೆಗಳುಂ ನೇರಿದುವೇ ॥ ೫೪ ॥

ಆವಿರುದ್ಧಮಿದೆಂಬಿನಮನು
ಭವಿಸುವುದಿಂದ್ರಿಯ ಸುಖಂಗಳಂ ಮಱೆದುಂ ಮಾ ॥
ಱವು ತನ್ನನವೆಂಬನ್ನೆಗ
ಮವನೀಶ್ವರನಪ್ಪುಕೆಯ್ವುದಿಂದ್ರಿಯ ಜಯಮುಂ ॥ ೫೫ ॥

ಜಡಧಾರೆ ಸೋಂಕೆ ಸಿರಿಗ
ನ್ನಡಿಗೆ ಕಲುಂಬೇಱುವಂತೆ ಸಿರಿಯೊಡೆಯಂಗೇಂ ॥
ಪಡೆಮಾತೊ ಪರ ಕಲತ್ರದ
ತೊಡರ್ಪಿ[1]ನಿಂ ಕರ್ಪುಗೊಳ್ಳದಿರ್ಪುದೆ ತೇಜಂ ॥ ೫೬ ॥

ಸಮನಿಸೆ ದುಶ್ಚರಿತಂ ಬಿಡ
ದ ಮಹೀಪಾಲಂ ಕಳಂಕಮುಂ ಕಳೆಯದ ಚಂ ॥
ದ್ರಮನುಂ ಬಡವಾಗ್ನಿಯನುಪ
ಶಮಿಸದ ಲವಣಾಂಬುರಾಶಿಯುಂ ಜಡರಕ್ಕುಂ ॥ ೫೭ ॥

1. ನೊಳ್ ತಪ್ಪು. ಕ. ಗ; ನಿಂತುಪುರ್. ಚ.

ಕಂ ॥ ಕುಲ ಕಾಂತಾ ಸಂತೋಷಂ
ಕುಲವರ್ಧನ ಹೇತು ಪರವಧೂ ಸಂತೋಷಂ ॥
ಕುಲನಾಶ ಹೇತುವೆಂಬಿದು
ಹಲಧರ ಗೋಪಾಲ ಬಾಲಕ ಪ್ರಖ್ಯಾತಂ ॥ ೫೮ ॥

ಮ ॥ ವಧಮುಂ ಬಂಧನಮುಂ ಪರಾಭವಮುಮುಂಗಚ್ಛೇದಮುಂ ಪೊರ್ದುಗುಂ।
ವಿಧು ವಿಖ್ಯಾತಿ ಕಲುಂಬುಗೊಳ್ಗುಮಪವಾದಾತೋದ್ಯ ನಾದಂ ದಿಶಾ ॥
ವಧಿಯಂ ದಾಂಟುಗುಮನ್ಯ ಜನ್ಮದೊಳಮಕ್ಕುಂ ದುರ್ಗತಿ ಕ್ಲೇಶಮೆಂ।
ದಧಿರಾಜರ್ ಕೆಲರಾಲಿಸರ್ ಮಱೆದಿದುಮನ್ಯ ಪ್ರೇಯಸೀವಾರ್ತೆಯಂ ॥ ೫೯।

ಯಮಪಾಶಂ ಪಗೆವಂಗೆ ಕಲ್ಪಲತೆ ಕೈಯಾಂತಂಗೆನಲ್ ಚಂಡ ವಿ।
ಕ್ರಮಮಂ ಚಾಗದ ಪೆರ್ಮೆಯಂ ಮೆಱೆಯದನ್ಯಸ್ತ್ರೀ ಕಚಾಕರ್ಷಣ ॥
ಶ್ರಮ ಸಂಭೋಗ ವಿಳಾಸಮಂ ಮೆಱೆವ ಬಾಹಾಸಂಗದಿಂ ಪಿಂಗದಿ।
ರ್ಕುಮೆ ವೀರಾಂಗನೆ ಕಡ್ಡಿ ತೋಳ್ವಿಸುಗೆಯೊಳ್ [1]ಮೆಳ್ಪಟ್ಟು ನಿಲ್ವನ್ನಳೇ ॥೬೦॥

ಕಂ ॥ ಪೂವಿನೊಳಂ ಪೋರ್ಕುಳಿ ನವು
ಗೇವುದೊ ಯುದ್ಧಂ ಪ್ರಧಾನ ಪುರುಷ ಕ್ಷಯಮೆಂ ॥
ಬೀ ವಚನಮುಂ ವಿಚಾರಿಪು
ದೀವುದು ಜಾನಕಿಯನುಳಿವುದಸದಾಗ್ರಹಮಂ ॥ ೬೧ ॥

ಪರಿಜನಮುಮಾಪ್ತ ಜನಮುಂ
ಪುರಮುಂ ಬಾಂಧವರುಮಗಲದೊಂದೆಡೆಯೊಳ್ ಸೈ ॥
ತಿರಲಕ್ಕುಂ ಜಾನಕಿಯಂ
ಪರಿಹರಿಸಿದೊಡಲ್ಲದಂ[2]ದಿರಲ್ ಬಂದಪುದೇ ॥ ೬೨ ॥

ಎಂದು ನುಡಿಯಲೊಡಮಿಂದಗಿ ವಿಷ ತರು ಪ್ರಸವದಂತೆ ದಂತಕಾಂತಿ ಪಸರಿಸೆ ವಿಭೀಷಣ ಸುಭಾಷಿತ ದೂಷಣಪರನಿಂತೆಂದಂ—

ಮ ॥ ವನಿತಾರತ್ನಮಯತ್ನಸಾಧ್ಯಮೆನೆ ಕೈಸಾರ್ದತ್ತು ಸೈಪಿಂದದಂ।
ಮನುಜಂಗೀವುದು ಮಂತ್ರವಿಾಯದೊಡಪಾಯಂ ಸಾರ್ಗುಮೆಂಬೀನಯಂ ॥
ಮನದೊಳ್ ಮಚ್ಚರಿಪಂಗೆ ತೋರ್ಕುಮುಟ್ಟಿದಂಗೇಂ ತೋರ್ಕುಮೇ
ಯುದ್ಧ ಸಾ।
ಧ್ಯನೆ ವಿದ್ಯಾಧರ ಸಿದ್ಧ ಕಿನ್ನರ ಚಮೂ ವಿದ್ರಾವಣಂ ರಾವಣಂ ॥ ೬೩ ॥

---

1. ನೇರ್ಪಟ್ಟು. ಗ. ಘ. 2. ತಿರಲ್. ಚ.

ಮ॥ಸ್ರ॥ಬಗೆಯಂ ಶಂಕಾ ತಮಂ ತಳ್ತಿರೆ ತಱಿಸಲವಂ ಕಾಣ್ಬದೇಂ ಮೊಗ್ಗೆ ನೀರ್ಗಾ।
ದಿಗೆ ಮುನ್ನೀರ್ ಕೋಂಟೆ ವಿದ್ಯಾತ್ಮಕವಸುರಬಲಂ ಕಾಪಿನಾಳ್ ತೋಳಬಲ್ಪಿಂ॥
ನೆಗಟ್ಟಾ ತಾರಾದ್ರಿಯಂ ಚಾಲಿಸಿದ ದಶಮುಖಂ ಮುಖ್ಯನೆಂದಂದು ಲಂಕಾ।
ನಗರಕ್ಕಾತಂಕಮಕ್ಕುಂ ಮನುಜ ಬಲದಿನೀ ಕಜ್ಜಮಂ ನೀನೆ ಕಾಣ್ಬೈ ॥೬೪॥

ಪರಚಕ್ರಂ ಚಕ್ರಮಂ ಮಿಾಱುವುದೆ ರಿಪುಬಲಂ ಚಂದ್ರಹಾಸಾಸಿಯಂ ಭೀ।
ಕರಮಂ ಮಾಱಾಂಪುದೇ ಮಾರ್ಪಡೆಗೆ ಪಡೆಯಲಾತಂಕಮಂ ನಮ್ಮ ವಿದ್ಯಾ॥
ಧರ ಸೈನ್ಯಂ ಸಾಲದೇ ಕೆಮ್ಮನೆ ಭಯರಸಮುಂ ತಾಳ್ದುವೈ ಲಕ್ಷ್ಮಣಂ ಸಂ।
ಗರದೊಳ್ ಪೌಲಸ್ತ್ಯನಂ ಗೆಲ್ದಪನೆ ರಣರಸೋತ್ಸುಂಠನಂ ದುಗ್ಧ ಕಂಠಂ ॥೬೫॥

ಎಂಬುದುಂ ವಿಭೀಷಣಂ ಮುಳಿಸಂ ಮೊಗಕ್ಕೆ ತಂದಿಂತೆಂದಂ—

ಕಂ॥ ಅಯಶಕ್ಕಂಜದೆ ನೀಂ ತಂ
ದೆಯ ರಾಜ್ಯಕ್ಕಟಿಪಿ ಕಲಹಮಂ ಬಲ್ಲಿದರೊಳ್ ॥
ಬಯಸುವೆ ಗಾವಿಲ ರಣಭೂ
ಮಿಯೊಳಾರುಮನುಚಿಯಲೀಗುಮೇ ರಾಮಶರಂ ॥ ೬೬ ॥

ತಂದನೆ ಸೀತೆಯನಟ್ಟಿವಂ
ತಂದಂ ಲಂಕಾಪುರಕ್ಕೆ ತನಗಂ ನಮಗಂ ॥
ತಂದಂ ತವಿಲಂ ನಮ್ಮರ
ಸಂ ದೆಸೆಯಂ ಪುದಿಯೆ ದುರ್ಯಶಃಪಟಹ ರವಂ ॥ ೬೭ ॥

ವಟ್ಟಂದೆತ್ತುದು ಬೆಳ್ಳಿಯ
ಬೆಟ್ಟಂ ಬಿಣ್ಪೆಂಗೆನಿಪ್ಪ ಕೋಟಿಕ ಶಿಲೆಯಂ ॥
ಬಟ್ಟಾಡಿದ ಬಾಹಾಬಲ
ವಿಟ್ಟಳವೆಂಟನೆಯ ಕೇಶವಂಗಿದಿರುಂಟೇ ॥ ೬೮ ॥

ಮ ॥ ಕರವಾಳ್ ಸಾಧನಮಾಯ್ತು ಸಾಧಿಸದೆ ಸೈಪಿಂ ಸೂರ್ಯಹಾಸಂ ಧನು।
ಶ್ಶರ ಜಾಲಂ ನೆರಮಾಗೆ ಸಂಹರಿಸಿದಂ ಸೇನಾನ್ವಿತಂ ಯುದ್ಧದೊಳ್ ॥
ಖರನಂ ದೂಷಣನಂ ಪ್ರಸಿದ್ಧರಖಿಳ ದ್ವೀಪಾಧಿಪರ್ ಖೇಚರರ್।
ನೆರೆದಾಳೋಳಿಗೆ ವಂದರಾರ್ಗಮಧಿಕಂ ಸೌಮಿತ್ರಿ ಸಾಮರ್ಥ್ಯದೊಳ್ ॥ ೬೯ ॥

ಉ ॥ ಸಂಧಿಯನುಂಟುಮಾಡುವುದು ಸೀತೆಯನೀವುದು ರಾಮಲಕ್ಷ್ಮಣರ್।
ಬಾಂಧವರಪ್ಪುದಂ ಬಗೆವುದೇಳಸುವಂತವರಾರುಮೇಂ ಸಮ ॥
ಸ್ಕಂಧರೆ ಯುದ್ಧದೊಳ್ ರಣಮನರ್ಥಕಮೆಂತೆನೆ ಕಾದಿದಂದು ನಿ।
ಲ್ಕುಂ ಧರೆ ನಿಲ್ವಿನಂ ಪಟಿ ಜಯಾಪಜಯಂಗಳೊಳಂ ದಶಾನನಾ ॥ ೭೦ ॥

ಶಾ ॥ ಮುಂ ಕೊಟ್ಟಟ್ಟುವುದುತ್ತಮಂ ರಿಪುಬಲಂ ವಾರಾಶಿಯಂ ದಾಂಟದ।
ನ್ನಂ ಕಲ್ಪಾಂತ ಕೃತಾಂತದೂತ ಸದೃಶಂಗಳ್ ರಾಮ ರೌದ್ರೇಷುಗಳ್ ॥
ಲಂಕಾದ್ವಾರ ಕವಾಟಮುಂ ಮುಱಿಯದನ್ನಂ ಲಕ್ಷ್ಮಣ ಜ್ಯಾಲತಾ।
ಟಂಕಾರಂ ಕಿವಿಗೆಯ್ದದನ್ನಮಖಿಲ ಪ್ರಖ್ಯಾತೆಯಂ ಸೀತೆಯಂ ॥ ೭೧ ॥

ಎಂಬುದುಮಾ ನುಡಿಗೆ ಕಾರ್ಮುಗಿಲ ಮೊಱಗಿಂಗೆ ಮಸಗುವ ಪಂಚಾನನ ದಂತೆ ದಶಾನನಂ ದೆಸೆದೆಸೆಗೆ ಮಸಗಿ—

ಕಂ । ಒಜ್ಜೆಯಿಂದಮುರ್ಕೆ ಮಿಂಚಂ
ಕಜ್ಜೆಯುತ್ತುಮಗುರ್ವ ಪರ್ವೆ ವಿಲಯಾಂಬುದದಿಂ ॥
ಪೊರಮಟ್ಟ ಸಿಡಿಲ ಮಸಕಮ
ನುಜ್ಜೆ ಸೆಜ್ಜೆವಿಡಿದತ್ತು ಚಂದ್ರಹಾಸ ಕೃಪಾಣಂ ॥ ೭೨ ॥

ಆಗಳ್ ವಿಭೀಷಣಂ ವಜ್ರಮಯ ಘನ ಗದಾದಂಡಮಂ ಕೊಂಡದಿರದಿದಿ ರೊಳಿಪ್ಪುದುಂ ಕುಲವೃದ್ಧರೆಡೆಪೊಕ್ಕು ನುಡಿವುದುಂ ಕೋಪಮನುಪಸಂಹರಿಸಿ ಮಂದಸ್ಮಿತ ಮುಖಂ ದಶಮುಖನಿಂತೆಂದಂ—

ಮ॥ಸ್ರ॥ ಎನಗಂ ಬಲ್ಲಾಳ್ ಗಡಂ ಮಾನವನಭಿಮತಮಂ ಕೇಳಲಾದತ್ತವಂಗಾ।
ಳ್ತನಮಂ ಪೂಣ್ದೆನ್ನೊಳಂ ದಾಯಿಗತನಮನಿವಂ ತೋರ್ಕೆ ದೋರ್ದಂಡ
ಕಂಡೂ ॥
ಯನಮಂ ಚಂಡಾಸಿ ಸಂಘಟ್ಟದಿನೊಗೆವುರಿಯಿಂ ಮಟ್ಟಿಪೆಂ ಮೂಜು ಕಣ್ಣಾ।
ತನುಮೆನ್ನಂ ವಿಾಜಿ ಮಾಜುಾಂತೊಡೆ ಪಡೆಯದೆ ಸಂತ್ರಾಸಮುಂ ಚಂದ್ರ
ಹಾಸಂ ॥ ೭೩ ॥

ಮ ॥ ಚಪಲಂ ಮೇಳದ ಪಂದೆ ಬೆರ್ಚದಿದಿರೊಳ್ ಮಾತಾಡೆ ಕೋಪಂ ಪೊದ।
ಲ್ವಿಪವಾದಂ ಪರೆವಂತು ಗೋತ್ರ ವಧಮಕ್ಕುಂ ಲಂಕೆಯಿಂದೀತನಂ ॥
ವಿಪರೀತಾತ್ಮನನೀಗಳಿಂತೆ ಕಳೆಯಿಂ ಶಂಕಾಕುಲಂ ಬಾಜ್ತೆಯಾ।
ದಪನೇ ಸಂಗರ ಕೇಳಿಗಿರ್ದೊಡುಪದೇಶಂಗೆಯ್ದಪಂ ಭೀತಿಯಂ ॥ ೭೪ ॥

ಎನಲೊಡಮಶನಿವೇಗ ಚಪಲಾವೇಗ ಸಂಹಾರಕ ವಿದ್ಯುತ್ಪ್ರಮುಖ ಸಾಮಂತ ಸಹಿತಂ ಮೂವತ್ತಕ್ಷೌಹಿಣೀಬಲಂಬೆರಸು—

ಚ ॥ ಉರಿಕೊಳಲಿರ್ದ ಸಾನು ವನದಿಂ ಮದ ಸಿಂಧುರ ಯೂಥ ನಾಥನೋ।
ಸರಿಸುವ ಮಾಟಿಯಿಂ ದಶರಥಾತ್ಮಜರಿಂ ಕಿಡಲಿರ್ದ ಲಂಕೆಯಿಂ ॥

ದಿರದೆ ವಿಭೀಷಣಂ ತೊಲಗಿದಂ ಖಚರಾನ್ವಯ ರಾಜ್ಯಲಕ್ಷ್ಮಿಯಂ ।
ಧರಿಯಿಸಲಿರ್ದ ಪುಣ್ಯನಿಧಿಯಂ ಸುಕೃತಂ ತೊಲಗಿಕ್ಕದಿರ್ಕುಮೇ ॥ ೭೫ ॥

ಮ ॥ ದನುಜೇಂದ್ರಂಗೆ ಮೃಗೇಂದ್ರ ಪೀಠಮೆ ಮಿಗಿಲ್ ಸಾಮರ್ಥ್ಯದಿಂ ಲಕ್ಷ್ಮಿಯಿಂ ।
ತನಗಾರುಂ [1]ಮಿಗಿಲಿಲ್ಲದಂ ಬಗೆದನೇ ಸದ್ವೃತ್ತಮುಂ ಬಿಟ್ಟೊಡ ॥
ಣ್ಣನುಮಂ ಬಿಟ್ಟು ವಿಭೀಷಣಂ ತೊಲಗಿ[2]ದಂ ಪೋತಕ್ಕುದುದ್ವೃತ್ತನ ।
ಪ್ಪನ ಸಂಸರ್ಗದಿನಪ್ಪ ಸಂಪದಮುಮಂ ಸದ್ವೃತ್ತರೇಗೆಯ್ವರೋ ॥ ೭೬ ॥

ಅಂತು ವಿಭೀಷಣಂ ಲಂಕಾದ್ವೀಪಮಂ ಪೊಱಮಟ್ಟು ಹಂಸದ್ವೀಪ ಸವಿಾಪಕ್ಕೆ ವಂದು ನಿಜ ಮಹತ್ತರನಂ ಮುಂದಟ್ಟುವುದುಮಾತಂ ಪೋಗಿ ಪ್ರತೀಹಾರ ಪುರ ಸ್ಸರಂ ರಾಜಭವನಮಂ ಪೊಕ್ಕು ದೂರಾವನತ ಮಸ್ತಕಂ ಸರ್ವಾಂಗ ಪ್ರಣತ ನಾಗಿ ನಿಟಿಲ ತಟ ಘಟಿತ ಕರ ಕಿಸಲಯದಮೇಲೆ ದಂತಕಾಂತಿ ಪಸರಿಸೆ ದೇವ ಬಿನ್ನಪಮನವಧಾರಿಸುವುದೆಂದಿಂತೆಂದಂ—

ಚ ॥ ಮದ ಮದಿರಾ ಪ್ರಮತ್ತ ಹೃದಯಂ ಹಿತಮಂ ತನಗೊಲ್ದು ಪೇೞೆ ಕೇ ।
ಳದೆ ವಿಪರೀತಮಂ ಬಗೆದು ಬಗ್ಗಿಸೆ ರಾವಣನೀ ದುರಾತ್ಮನೊಳ್ ॥
ಪುದುವೆನಗೇವುದೆಂದು ಬರುತಿರ್ದಪನಲ್ತೆ ಶರಣ್ಬುಗಲ್ ಭವ ।
ತ್ಪದ ನಖ ವಜ್ರ ಪಂಜರಮನಾಜಿ ವಿಭೀಷಣನಾ ವಿಭೀಷಣಂ ॥ ೭೭ ॥

ಎಂದು ಮತ್ತಂ ದಶಮುಖನ ಮುಖರತೆಯುಮನುದ್ವೃತ್ತತೆಯುಮುಂ ನೆಱೆಯೆ ಬಿನ್ನವಿಸಿ ಮಾಣ್ಬುದುಮತಿಕ್ರಾಂತ ಪ್ರಮುಖ ಮಂತ್ರಿಮುಖ್ಯರೆಂದರಿವ ರೊಡವುಟ್ಟಿದರಾಗಿಯುಮತಿಸ್ನೇಹಿತರಪ್ಪರ್ ಪುಸಿ ಜಗಳಮಂ ಪೊಣರ್ಚಿ ನಮು ಗುಪಾಯದಿನಪಾಯಮಂ ಬಗೆದು ಬಂದಪ್ಪರಿದಂ ದೇವರವಧಾರಿಸುವುದೆನೆ—

ಚ ॥ ದನುಜರಪಾಯಮಂ ಬಗೆವರೆಂತೆನಗಾ ದಶಕಂಠನುಂ ರಣ ।
ಕ್ಕೆನಗಿದಿರಾಗಲಳ್ಕಿ ಜನಕಾತ್ಮಜೆಯಂ ಕಪಟ ಪ್ರಪಂಚಮಂ ॥
ಜನಿಯಿಸಿಕೊಂಡು ಪೋದನೆನೆ ಕೆಮ್ಮನೆ ಬೆರ್ಚುವುದೇ ಶರಣ್ಗೆವಂ ।
ದನೊಳಭಯ ಪ್ರದಾನಮನೊಡರ್ಚುವುದೇವುದಿದರ್ಕೆ ಮಂತಣಂ ॥ ೭೮ ॥

ಕಂ ॥ ಎರೆದರ್ಗೀಯದೆ ಮಾಱುಮಾಂ
ತರನಿಕ್ಕದೆ ಮಱೆಗೆ ವಂದರಂ ಕಾಯದೆ ಬಾ ॥
ಟ್ಟಿರಮಗನ ಬಾಹುದಂಡಂ
ನಿರರ್ಥಕಂ ವ್ಯರ್ಥಮವನ ಪಾರ್ಥಿವ ಜನ್ಮಂ ॥ ೭೯ ॥

1. ದೊರೆಯಿ. ಕ. 2. ಪೋದಂ ತಕ್ಕನು. ಘ.

ಎಂಬುದುಮಂಜನಾಸುತಂ ಜನಪ್ರವಾದದೊಳಮಿವರ ವಿಪ್ರತಿಪತ್ತಿಯಂ ಕೇಳ
ವದಲ್ಲದೆಯುಂ ವಿಭೀಷಣಂ ಗುಣಾಧಿಕನೆಂಬುದು ಜಗತ್ಪ್ರಸಿದ್ಧಮಾತನೆನಗಸೃಜ್ಜನಃ
ಸೀತಾದೇವಿಯಿರ್ದೆಡೆಯಂ ಪೇಟ್ಪಿನ್ನಂ ಮನ್ನಿಸಿ ಕಟ್ಟಿಪಿದನೆನೆ ರಘುಕುಲಾಂಬು
ದ್ಯುಮಣಿ ವಿಭೀಷಣ ಮಹತ್ತರನಂ ತುಷ್ಟಿದಾನ ಪುರಸ್ಸರಂ ನಿಮ್ಮಾಳ್ದನಂ ತಂದ
ಕಾಣಿಸೆಂದು ವಿಸರ್ಜಿಸುವುದುಮಾತಂ ವಿಭೀಷಣನಂ ಕಂಡು ರಾಮದೇವ
ಕಾರುಣ್ಯಮುಮಂ ಮಹಾಮಹಿಮೆಯುಮಂ ಬಿನ್ನಪಂಗೆಯ್ವುದುಂ—

ಕಂ ॥ ಪಲತೆಱದ ಪಱೆಯ ದನಿ ತೆರೆ
ಯುಲಿಪೆನೆ ಪೊಕ್ಕತ್ತು ಕಟಕಮಂ ನೋಪ್ಪಿರ ಕ ॥
ಣ್ಣಲಸೆ ವಿಭೀಷಣ ವಾಹಿನಿ
ಜಲನಿಧಿಯಂ ಬಂದು ಪುಗುವ ಕುಲವಾಹಿನಿವೋಲ್ ॥ ೮೦

ಆ ಸಮಯದೊಳ್—

ಕಂ ॥ ಇದಿರಟ್ಟಿ ದಿವ್ಯ ವಸನಾಂ
ಗದಾದಿ ಭೂಷಣಮನವನಿಪತಿ ಸುಗ್ರೀವಾಂ ॥
ಗದ ಮುಖ್ಯರನಿದಿರಟ್ಟಿದ
ನುದಾತ್ತರಾಘವನ ಪದೆಪನಾವಂ ಪಡೆವಂ ॥ ೮೧

ಅನಂತರಂ ಕತಿಪಯ ಪರಿಜನ ಪರಿವೃತಂ ಪ್ರಧಾನ ಪುರುಷ ಪುರಸ್ಸರಂ ರಾಜ
ಮಂದಿರಮಂ ಪೊಕ್ಕು—

ಚ ॥ ಮಣಿಮಯ ಭೂಷಣ ಪ್ರಭೆ ಮನಕ್ಕನುರಾಗಮನುಂಟುಮಾಡೆ ರೋ ।
ಹಣಗಿರಿ ವಾರ್ಧಿಯಂ ಮಱೆವುಗಲ್ ನಡೆತಂದಪುದೆಂಬಿನಂ ವಿಭೀ ॥
ಷಣನವನೀಶನಿರ್ದೆಡೆಗೆ ಬಂದು ಪದಾನತನಾಗೆ ಭಾಳದೊಳ್ ।
ಪೆಣೆದು ನಖಾಂಶು ಕಟ್ಟಿದವೊಲಿರ್ದುದು ಖೇಚರ ರಾಜ್ಯಪಟ್ಟಮಂ ॥ ೮೨ ।

ಆಗಳ್—

ಕಂ ॥ ತೆಗೆದಾದರದಿಂ ತಱಿಸ್ಪಿಲೆ
ಸೆ ಗಗನ ಚರನವ್ಯತ ರಸದೊಳೋಲಾಡುವವೋಲ್ ॥
ಸೊಗಯಿಸಿದಂ ಚಂದ್ರಿಕೆಯಂ
ನಗುವ ನರೇಂದ್ರನ ತನುಪ್ರಭಾ ಚಂದ್ರಿಕೆಯಿಂ ॥ ೮೩ ।

ಗುಣಮಂ ಕಡೆಗಣಿಸಿದ ರಾ
ವಣನೊಳ್ ಪುದುವಾಗೆ ಸೊಪ್ಪ ಪಗಲಂತೆ ವಿಭೀ ॥

ಷಣನಮರ ನದಿಯೊಳಘಮ
ರ್ಷಣಮಿರ್ದವೊಲಿರ್ದನಧಿಪನಂಗಪ್ರಭೆಯಿಂ ॥ ೮೪ ॥

ಜನನಾಥನ ಸಮ್ಮುನದಿಂ
ಮನದೊಳ್ ಮೆಯ್ವೆರ್ಚಿ ಸಂತಸಂ ಬಲಗೆಲದೊಳ್ ॥
ತನಗಾಗಳೀಜಲಿಕ್ಕಿದ
ಕನಕಾಸನದೊಳ್ ವಿಭೀಷಣಂ ಕುಳ್ಳಿರ್ದಂ ॥ ೮೫ ॥

ರಾವಣನಿಂದಾದೆರ್ದೆವಟ
ಲಾವಗವೋಸರಿಸೆ ನೃಪನ ದಯೆಯಿಂ ಖಚರಂ ॥
ದಾವಾನಲನಿಂ ಬೆಂದು ಸು
ಧಾವರ್ಷದಿನಾಜ್ಯದಚಲಮಿರ್ಪಂತಿರ್ದಂ ॥ ೮೬ ॥

ಅನಂತರಂ ರಾಮಚಂದ್ರಂ ವಿಭೀಷಣನನುಚಿತ ಸಂಭಾಷಣ ಸುಧಾರಸದಿಂ ತಣಿಪಿ ಬೀಡಿಂಗೆ ಬೆಸಸುವುದುಮನ್ನೆಗಮಿತ್ತಲಪ್ರತಿಮಪ್ರಭಂ ಪ್ರಭಾಮಂಡಲಂ ಸಹ ಸ್ಯಾಕ್ಷೌಹಿಣೀಬಲಂಬೆರಸು ಬಂದು ಕೂಡುವುದುಂ ಮಱುದಿವಸಮಲ್ಲಿಂ ತಳರ್ದು ರಘುವೀರಂ ಸಮುದ್ರತೀರಮನೆಯ್ದಿವರ್ಪುದುಂ—

ಚ ॥ ಶರನಿಧಿ ತೇಜಮುಂ ಜಸಮುಮುಂ ತಲೆಯೊಳ್ ನಿಲೆ ಪೂಣ್ದು ತಾಳ್ದಿದಂ।
ತಿರೆ ತುಜುಗಿರ್ದ ವಿದ್ರುಮ ಲತಾವಳಿ ಶಂಖದ ಬಳ್ಳವಳ್ಳಿ ಬಂ ॥
ಧುರವೆನಿಸಿರ್ದುವಾ ರಘುತನೂಭವನೇಟ್ಟರೆ ಸೇಸೆಯಿಕ್ಕಿದಂ।
ತಿರೆ ತೆರೆಗೈಯೊಳುಚ್ಚಳಿಸಿ ಸೂಸಿದುವಬ್ಧಿಯ ತೋರಮುತ್ತುಗಳ್ ॥ ೮೭ ॥

ಕಂ ॥ ವಾರಿಧಿ ರಘುಜಂಗೆತ್ತಿದ
ನೀರಾಜನ ದೀಪಕಲಿಕೆ ಪೊಳೆದಪುದೆಂಬಂ ॥
ತೋರೊಂದೆಡೆಯೊಳ್ ಪೊಳೆದುವು
ರಾರಾಜಿಪ ಪದ್ಮರಾಗ ರುಚಿ ಮುಂಜರಿಗಳ್ ॥ ೮೮ ॥

ನೆಲೆಯಿಲ್ಲದೆಯುಂ ನೆಲನಂ
ಬಲವಂದುಂ ವೇಲೆಗೊಂಡು ಮೆಯ್ಯಿಕ್ಕೆಯುಮಾ ॥
ಜಲನಿಧಿ ತರಂಗ ಭಂಗಾ
ಕುಲಿತಂ ನೆನೆಯಿಸಿದುದನ್ಯ ರಾಜನ್ಯಕಮಂ ॥ ೮೯ ॥

ಸುಟಿಗಳ್ ನೀರ್ದಿಗುರಿಯವೋಲ್
ಸುಟಿದುವು ತೆರೆ ತೆರೆಯನಟ್ಟಿದುವು ಬಿಟ್ಟದ ಬೆಂ ॥

ಬಟ್ಟಿಯಂ ಬೆಟ್ಟಟ್ಟುವವೋಲ್
ತಟಿ ತಳ್ತವೊಲಿರ್ದುವೊಗೆದ ಮಣಿ ಕಿರಣಂಗಳ್ ॥೯೦

ಆ ಮಹಾಸಮುದ್ರಮಂ ಬಲಾಚ್ಯುತರ್ ನೋಡಿ ಮೆಚ್ಚುತ್ತುಮಿರ್ದುದುಮ ಸಮಯದೊಳ್—

ಚ ॥ ಜಳಧಿಯ ಮೇಲೆ ಬಂದ ಜಲರಾಶಿಯೊ ಪೇಟ್ಟಿಮೆನಿಪ್ಪ ಪೆರ್ಮೆಯಂ ।
ತಳೆದು ಬಲಂ ನಭೋ ಗಮನ ವಿದ್ಯೆಯೆ ಸೇತುವೆನಲ್ ನಲಂ ದ್ವಿಷ ॥
ದ್ಬಳ ವಿಲಯಾನಲಂ ನಡೆಯಿಸಲ್ ನಭದೊಳ್ ನಡೆದತ್ತಿಭೇಂದ್ರ ಸಂ ।
ಕುಳ ಮಕರಂ ಹಯಪ್ರಕರ ವೀಚಿ ವರೂಥ ಕುಳೀರ ಸಂಕುಲಂ ॥೯೧

ಶಾ ॥ ಹೇತಿವ್ರಾತ ಮರೀಚಿ ಖೇಚರ ಕಿರೀಟಾನರ್ಘ್ಯ ರತ್ನಾಂಶು ಭೂ ।
ಷಾ ತೇಜಃಪಟಲಂ ವಿಮಾನ ಬಹುರತ್ನಚ್ಛಾಯೆ ತಳ್ಪೊಯ್ವಿನಂ ॥
ಜ್ಯೋತಿರ್ಮಂಡಲಮೇಕೆ ತೆಂಕನಡೆಯುತ್ತಿರ್ದಪ್ಪುದೆಂಬಂತೆ ಸಂ ।
ಖ್ಯಾತೀತಂ ನಡೆದತ್ತು ರಾಘವ ಮಹಾಸೈನ್ಯಂ ನಭೋಭಾಗದೊಳ್ ॥೯೨

ಉ ॥ ಪಾವನಿ ಜಾಂಬವಾಂಗದ ಸುಷೇಣ ವಿಭೀಷಣ ಚಂದ್ರರಶ್ಮಿ ಸು
ಗ್ರೀವ ವಿಯಚ್ಚರ ಪ್ರಮುಖರೇಱಿದ ರತ್ನವಿಮಾನ ಮಾಲೆ ಶೋ ॥
ಭಾವಹಮಾಗಿ ಸುತ್ತಿ ಬರೆ ತನ್ನ ವಿಮಾನಮನಂಬರಂ ಬಯ ।
ಲ್ದಾವರೆದಾಣದಂತಿರೆಸೆದಂ ರಘುಜಂ ಕಲಹಂಸ ಲೀಲೆಯಿಂ ॥೯೩

ಮ ॥ ಪೊಗೆಯುತ್ತುಂ ಬಡಬಾಗ್ನಿ ರಾವಣಯಶೋ ದುರ್ಗಾಬ್ಧಿಯಂ ಪೀರ್ವ ದಂ
ದುಗದಿಂ ಬಂದಪುದಕ್ಕುಮೆಂಬ ಬಗೆಯಂ ಸೌಮಿತ್ರಿ ಪೀತಾಂಬರಾಂ ॥
ಶುಗಳುಂ ತನ್ನ ತನುಪ್ರಭಾ ಪಟಲಮುಂ ಮಾಪ್ಪಿಂತು ಬಂದಂ ವಿಮಾ ।
ನ ಗಭಸ್ತಿ ಸ್ತಬಕಂ ಪಳಂಚಲೆವಿನಂ ಜ್ವಾಲಾ ಸಹಸ್ರಂಗಳಂ ॥೯೪

ಚ ॥ ಗಣನೆಗಳುಂಬವಿಂ ನೃಪರುಪಾರ್ಜಿತ ಪುಣ್ಯಮೆನಲ್ಕೆ ರಾಮ ಲ ।
ಕ್ಷ್ಮಣರ ವಿಮಾನಮಂ ಬಳಸಿ ಖೇಚರ ರಾಜ ವಿಮಾನ ಸಂಚಯಂ ॥
ಮಣಿಮಯಮಂಬರಸ್ಥಲಮುಮಿಟ್ಟೆಡೆಯೆಂಬಿನಮಂಬುರಾಶಿಯಂ ।
ಕ್ಷಣದೊಳೆ ದಾಂಟಿ ಪೊರ್ದಿದುದು ವೇಲೆಯದೊಂದು ವನಾಂತರಾಲಮಂ ॥೯೫

ಉ ॥ ಬಿಟ್ಟಮನೊಟ್ಟಿ ಬಟ್ಟೆ ನಡೆವಚ್ಚಿಗವೇವುದೊ ವಾರ್ಧಿಯಂ ಮುಗಿ ।
ಲ್ವಟ್ಟಿಯೆ ಬಟ್ಟೆಯಾಗೆ ನಡೆವಚ್ಚರಿವೆತ್ತು ವಿಯಚ್ಚರಾಧಿಪರ್ ॥
ತೊಟ್ಟನೆ ದಾಂಟಿ ವಾರಿಧಿಯನಾ ತಡಿಗೆಯ್ದುವುದುಂ ನಭಕ್ಕೆ ತೂಂ ।
ತಿಟ್ಟನೊಲಾಗೆ ದಳ್ಪಿದುದಾ ಪಡೆಯೊಳ್ ಸೊಱಸೊಣ್ಮುಮೊಡಂ ॥೯೬

ಅಂತು ಸಮುದ್ರಮಂ ದಾಂಟಿ ಲಂಕಾಭಿಮುಖರಾಗಿ ಪಯಣಂಬೋಗಿ ವಿಂಶತಿ ಯೋಜನ ವಿಸ್ತಾರಮ್ಮುಂ ತ್ರಿಂಶದ್ಯೋಜನಾಯಾಮಮುಮಪ್ಪ ರಣಭೂಮಿಯಂ ಕೈಕೊಂಡಿರ್ಪುದುಂ—

ಕಂ ॥ ಅವರವರ್ಗೆ ತಕ್ಕ ಮಣಿಮಯ
ಭವನಮನಧಿರಾಜ ರಾಜಗೃಹಮಂ ಕಡೆಪ ॥
ಟ್ಟವರ್ಗೊಳಗಾಗಿರೆ ಸಂಭಿ
ನ್ನವಿದ್ಯೆಯಿಂ ಸ್ಥಪತಿ ಮಾಡಿ ಕೊಟ್ಟಂ ಬೀಡಂ ॥ ೯೭ ॥

ಗೃಹ ದೀರ್ಘಿಕೆಯಂ ಧಾರಾ
ಗೃಹಮಂ ಗೃಹವನಮನುಪವನಂಗಳನಾರ್ಗಂ ॥
ಸ್ಪೃಹಣೀಯಮಾಗೆ ಪಲವಂ
ಬಹುವಿದ್ಯಾ ಗೃಹಮಹತ್ತರರ್ ಸಮೆದಿತ್ತರ್ ॥ ೯೮ ॥

ಅಂತು ಬೀಡಂಬಿಟ್ಟ ರಾಮಲಕ್ಷ್ಮಣರ ರಾಜಭವನಮಂ ಬಳಸಿ ಸುಗ್ರೀವ ಪ್ರಭಾಮಂಡಲ ಪ್ರಮುಖ ನಿಖಿಲ ಖಚರ ಪರಿಬೃಢರುಮಖಿಲ ಸೇನೆಯುಮನುರೂಪ ಭವನಂಗಳೊಳೆಡೆಯಱಿದು ಬೀಡಂಬಿಟ್ಟಿರ್ಪುದುಂ—

ಚ ॥ ದಿವಿಜ ನದೀ ತರಂಗ ಧವಲಂ ನಿಜ ನಿರ್ಮಲಕೀರ್ತಿ ವಲ್ಲಿ ಭೂ।
ಭುವನನಮನಾವಗಂ ಪುದಿವಿನಂ ವಿಬುಧಾನಳಿಗಪ್ಪಿನಂ ಮಹೋ॥
ತ್ಸವಮಧಿರಾಜ ಪೂಜ್ಯನಭಿರಾಮತೆಯಂ ತಳೆದಂ ಸರಸ್ವತೀ।
ಶ್ರವಣ ವಿಭೂಷಣ ಪ್ರಥಿತ ವಾಗ್ವಿಭವಂ ಕವಿತಾಮನೋಹರಂ ॥ ೯೯ ॥

ಇದು ಪರಮ ಜಿನಸಮಯ ಕುಮುದಿನೀ ಶರಚ್ಚಂದ್ರ ಬಾಲಚಂದ್ರ
ಮುನೀಂದ್ರ ಚರಣನಖ ಕಿರಣ ಚಂದ್ರಿಕಾಚಕೋರ ಭಾರತೀ
ಕರ್ಣಪೂರ ಶ್ರೀಮದಭಿನವಪಂಪ ವಿರಚಿತಮಪ್ಪ
ರಾಮಚಂದ್ರಚರಿತಪುರಾಣದೊಳ್
ಲಂಕಾದಿಗ್ವಿಜಯಪ್ರಯಾಣ ವರ್ಣನಂ
ದ್ವಾದಶಾಶ್ವಾಸಂ

ತ್ರಯೋದಶಾಶ್ವಾಸಂ

ಕಂ ॥ ಶ್ರೀ ಸುಕೃತಕ್ಕಾತ್ಮವಚ
ಶ್ರೀ ಸೂನೃತ ಸಂಪದಕ್ಕೆ ತೊಡನೆನೆ ಜಸವಾ ॥
ಶಾ ಸುದತಿಗೆ ಸಾಹಿತ್ಯ ಕ
ಲಾ ಸುಭಗಂ ಪೆಂಪುವೆತ್ತನಭಿನವಪಂಪಂ ॥ ೧ ॥

ಆ ಸಮಯದೊಳ್—

ಮ॥ಸ್ರ॥ ಜನಿತಾ ಕೋಲಾಹಲಂ ಕಾಹಳ ಬಹುವಿಧ ವಾದ್ಯಸ್ವನಂ ಶಂಖ ಭೇರೀ ।
ಧ್ವನಿ ಹೇಷಾಬೃಂಹಿತಂಗಳ್ ವಿಲಯ ಜಲನಿಧಿ ಧ್ವಾನಮೆಂಬನ್ನೆಗಂ ಭೋಂ॥
ಕನೆ ಕರ್ಣಾಭ್ಯರ್ಣಮಂ ಸಾರ್ತರೆ ಮುನಿದಸುರಂ ಪೊಯ್ಸೆ ಪೊಣ್ಮಿತ್ತು ಚಂಡಾ।
ಶನಿಘೋಷಂ ಲೋಕಮಂ ಮೂವಳಸುವಳಸೆ ಸನ್ನಾಹಭೇರೀ ನಿನಾದಂ ॥೩॥

ಕಂ ॥ ಎನಗೆ ರಣ ರಭಸದಿಂ ಗಡ
ಮನುಜಂ [1]ಮೇಲೆತ್ತಿ ಬಂದನಿಂ ದೋಃಕಂಡೂ ॥
ಯನಮಂ ಕಟಿಲ್ಚಲೆಡೆಯಾ
ಯ್ತೆನುತ್ತುಮುತ್ತರಳ ತಾಮ್ರಲೋಚನನಾದಂ ॥ ೩ ॥

ಆಗಳಾ ಭೇರೀರವಮಂಬರವನಾವರಿಸುವುದುಮತ್ತ ಭಾಸ್ವರಪುರದ ಪಯೋಧರಪುರದ ಕಾಂಚನಪುರದ ಕಂಪನಪುರದ ವ್ಯೋಮಪುರದ ವ್ಯೋಮವಲ್ಲಭಪುರದ ಗಂಧರ್ವಪುರದ ಶಶಿಮಂದಿರಪುರದ ಶಿವಮಂದಿರಪುರದ ಸಿಂಹಪುರದ ಲಕ್ಷ್ಮೀಪುರದ ಮಹಾಶೈಲಪುರದ ಚಕ್ರಪುರದ ಸೀಮಂತಪುರದ ಮಲಯಪುರದ ಶ್ರೀಗುಹಾಪುರದ ಅಶ್ವಪುರದ ಚಂದ್ರಪುರದ ಕಿರಿಂಜಯಪುರದ ಶಶಿಸ್ಥಾಪನಾಪುರದ ಮಾರ್ತಂಡಪುರದ ಸಹಸ್ಥಾಪನಪುರದ ವಿಶಾಲಸ್ಥಾಪನಪುರದ ಜಯಪುರದ ಪರೀಕ್ಷಾಪುರದ ವಿಶ್ವಪುರದ ಶ್ರೀಚಂದ್ರಪುರದ ಗಜಪುರದ ಗೋಪುರದ ಮಹಿಷೀಪುರದ ರತ್ನಪುರದ ವಿದ್ಯಾಧರರ್ ಮೊದಲಾಗೆ ಪಲವುಂಪುರದ ವಿದ್ಯಾಧರರಾಜರೆಲ್ಲಂ ತಂತಮ್ಮ ಸಮಗ್ರ ಸಾಮಗ್ರೀಸಹಿತರಾಗಿ ಬಂದು ಕೂಡುವುದುಮವರಂ ಸನ್ಮಾನ ದಾನಪುರಸ್ಸರಂ ಸಂತೋಷಂಬಡಿಸಿ ಚತುಸ್ತ್ರಿಂಶತ್ಸಹಸ್ರಾಕ್ಷೌಹಿಣೀ ಬಲಂಬೆರಸು ದಶಗ್ರೀವಂ ರಣರಸೋದ್ಗ್ರೀವನಾಗಿರ್ದನಾ ತ್ರಿಖಂಡ ಮಂಡಲಾಧಿಪತಿಯೊಳ್—

1. ಮುನಿದೆತ್ತಿ. ಗ. ಘ. 2. ಮಂಡಲ. ಕ. ಘ.

ಕಂ ॥ ರಣ ರಭಸದಿಂದಮಾವಂ
ಪೊಣರ್ವಂ ಮೂವತ್ತುನಾಲ್ಕು ಸಾಸಿರದಕ್ಷೌ ॥
ಹಿಣಿಗೊಡೆಯನಾದನೊಳ್ ರಾ
ವಣನೊಳ್ ವಿದ್ವಿಷ್ಟಸೈನ್ಯ ವಿದ್ರಾವಣನೊಳ್ ॥ ೪ ॥

ಮತ್ತಿತ್ತ ರಾಮಲಕ್ಷ್ಮಣರ್ ಸಹಸ್ರಾಕ್ಷೌಹಿಣೀಬಲಕ್ಕಧಿಪರಪ್ಪ ಸುಗ್ರೀವ ಪ್ರಭಾ ಮಂಡಲ ಸಮನ್ವಿತರ್ ಸಂಗ್ರಾಮೋತ್ಸುಕ ಚಿತ್ತರಾಗಿ ಪೆಜರುಮತಿಬಲರಪ್ಪ ವಿದ್ಯಾ ಧರರ್ ಬಂದು ಕೂಡುವುದುಮವರನೊಳಕೊಳುತ್ತುಮಿರ್ದರ್ ತದಕ್ಷೌಹಿಣೀ ಪ್ರಮಾಣ ಮೆಂತೆನೆ ಪತ್ತಿಯೆಂದುಂ ಸೇನೆಯೆಂದುಂ ಸೇನಾಮುಖಮೆಂದುಂ ಗುಲ್ಮ ಮೆಂದುಂ ವಾಹಿನಿಯೆಂದುಂ ಪೃತನೆಯೆಂದುಂ ಚಮುವೆಂದುಮಾನೀಕಿನಿಯೆಂದು ಮಿಂತೆಂಟು ತೆಱದಿಂ ಪಡೆಗೆ ಪೆಸರಕ್ಕುಮಲ್ಲಿ—

ಕಂ ॥ ಒಂದಾನೆಯ ಕಾಲ್ಗಾಪಿನೊ
ಳೊಂದು ರಥಂ ಮೂಱು ತುರಗಮಯ್ದುಂ ಕಾಲಾ ॥
ಳೊಂದಾಗಿ ಬಂದು ಮೊನೆಯೊಳ್
ನಿಂದಂದದು ಪತ್ತಿಯೆಂಬ ಪೆಸರಂ ಪಡೆಗುಂ ॥ ೫ ॥

ತ್ರಿಗುಣಂ ಪಿರಿದಕ್ಕುಂ ಪ
ತ್ತಿಗೆ ಸೇನೆಯದಕ್ಕುಮಂತೆ ಸೇನಾಮುಖಮುಂ ॥
ತ್ರಿಗುಣಂ ಪಿರಿದಕ್ಕುಮದಂ
ತ್ರಿಗುಣಿಸಿದೊಡೆ ಗುಲ್ಮಮೆಂಬ ಪೆಸರಂ ಪಡೆಗುಂ ॥ ೬ ॥

ತಿ ಗುಣಿಸೆ ಗುಲ್ಮಮನದು ನೆ
ಟ್ಟಗೆ ವಾಹಿನಿಯಕ್ಕುಮಂತೆ ತದ್ವಾಹಿನಿಯಂ ॥
ತ್ರಿಗುಣಿಪುದುಂ ಪೃತನೆಯದಂ
ತ್ರಿಗುಣಿಸೆ ಪೆಜತೇನೊ ಚಮುವೆನಲ್ ಪೆಸರ್ವಡೆಗುಂ ॥ ೭ ॥

ಈ ನೆಗಟ್ಪ ಚಮೂ ತ್ರಿತಯಮ
ದಾನೀಕಿನಿಯಕ್ಕುಮದು ಪದಿರ್ಮಡಿಸಲೊಡಂ ॥
ತಾನಕ್ಷೌಹಿಣಿಯಕ್ಕುಂ
ಜೈನೋಕ್ತಮನನ್ಯರಿತ್ತಲಱಿವರ್ ಮೂರ್ಖರ್ ॥ ೮ ॥

ಇಂತೆನಿಸಿದಕ್ಷೌಹಿಣಿಯೊಳಗಣಾನೆಗಳುಮಿರ್ಪತ್ತೊಂದು ಸಾಸಿರದೆಂಟುನೂಱೀ ಪ್ಪತ್ತಕ್ಕುಂ ರಥಂಗಳುಮನಿತೆ ಅಕ್ಕುಂ ಕುದುರೆಯಱುವತ್ತಯ್ದು ಸಾಸಿರದಱು

ನೂಱಪತ್ತಕ್ಕುಂ ಕಾಲಾಳುಮೊಂದು ಲಕ್ಷಮುಮೊಂಭತ್ತು ಸಾಸಿರದ ಮೂನೂಱಯ್ವತ್ತಕ್ಕುಂ—

ಕಂ ॥ ಒಂದಕ್ಷೌಹಿಣಿಗಿನಿತ
ಕ್ಕುಂ ದಲ್ ಚತುರಂಗ ಸಂಖ್ಯೆಯೆನೆ ಪಡೆಯೆರಡುಂ ॥
ನಿಂದಿಱಿವೊಡೆ ನೆಲನೆಡೆಗಿಱಿ
ದೆಂದಱಿದಾ ಪಡೆಯ ಪವಣನಱಿವವನಾವಂ ॥ ೯ ॥

ಗಣಿದಿಗನಿನಿತನಿತಕ್ಷೌ
ಹಿಣಿಯೆಂದೆಣಿಸಲ್‌ಸಮರ್ಥನಕ್ಕೆಮ ರಥ ವಾ ॥
ರಣ ವಾಹ ಪದಾತಿಗಳಂ
ಗಣಿಯಿಸಲಾರ್ತಪನೆ ರಾಮ ರಾವಣ ಬಲಮಂ ॥ ೧೦ ॥

ಚ ॥ ಭಗಣದ ಲೆಕ್ಕಮಂ ಮಱೆಯ ನೀರ್ವನಿಯಂ ಪರಮಾಣು ಸಂಖ್ಯೆಯಂ ।
ಗಗನದ ಸೀಮೆಯಂ ಜಳಧಿ ವೀಚಿಗಳಂ ದೆಸೆಯಂತಮಂ ಪವ ॥
ಣ್ಬಗಿಸಲೆರಟ್ಟಲಂಗಳ ಮದದ್ವಿಪ ವಾಹ ವರೂಥ ಕಿಂಕರಾ ।
ದಿಗಳ ಪವಣ್ಗಳಂ ಪವಣಿಸಲ್ ಬಗೆದರ್ಪನೆ ಗಾಂಪನಾಗನೇ ॥ ೧೧ ॥

ಇಂತತಿ ಪ್ರಬಲಮಪ್ಪುಭಯ ಬಲಮುಮಾಯುಧಂಗಳನರ್ಚಿಸುವ ವಿಜಯ ವಾರಣ ವಾಜಿಗಳಂ ಪೂಜಿಸುವ ವೀರ ಸಂನ್ಯಸನಮಿರ್ಪ ಸುಭಟಾಲಾಪಮನಾಲಿಸುವ ರವಳಿ ಘೋಷಿಸುವ ದಂದುಗದಿನಂದಿನಿರುಳಂ ಕಳೆಯೆ ನೇಸರ್ ಮೂಡುವುದುಮಿಂದಗಿ ಬೆಸಸಿದಂದದೊಳ್—

ಕಂ ॥ ಆರೆಮಗಿದಿರ್ಚುವರ್ ಸಮ
ರಾರಂಭಕ್ಕಾಮೆ ಮುಖ್ಯ ನಾಯಕರೆನಿನು ॥
ತ್ತಾರಿಂ ಮುನ್ನಂ ಸೆರಗಂ
ಪಾರದೆ ಹಸ್ತಪ್ರಹಸ್ತರುಜಿದೊಡ್ಡಿರ್ದರ್ ॥ ೧೨ ॥

ಮಾರೀಚಂ ಮೊದಲಾಗೆ ಮ
ಹಾರಥರೊಡನೇಱಿ ಸಿಂಹರಥಮಂ ರಥಿಗಳ್ ॥
ನೀರದ ಗರ್ಜನಮಂ ರಣ
ಭೇರೀರವಮಿಟ್ಟಪೆ ಲಂಕೆಯಂ ಪೊಱಮಟ್ಟರ್ ॥ ೧೩ ॥

ಪುಲಿಯ ರಥದೊಳ್ ಪಲರ್ ಮೆ
ಯ್ಸಲಿಗಳ್ ವಜ್ರೋದರಾದಿ ವೀರ ಪ್ರಮುಖರ್ ॥

ಕಲಹಕ್ಕೆ ನಡೆಯೆ ನಡೆದರ್
ಪಲಂಬರಂಬರ ಚರರ್ ತುರಂಗಮ ದಟಿದೊಳ್ ॥ ೧೪ ॥

ಕರಿ ತುರಗಾರೂಢರ್ ಸಂ
ಗರಕ್ಕೆ ತನಗಂಗರಕ್ಕೆಯೆನಿಸಿದ ವಿದ್ಯಾ ॥
ಧರ ತನಯರೇಟುಕೋಟಿಯು
ಮರೆಬರೆ ರಣಭೂಮಿಗಿಂದ್ರಜಿತು ಪೊಱಮಟ್ಟಂ ॥ ೧೫ ॥

ಇಂದಗಿಯ ಕೆಲದೊಳಹಿತರ
ನಿಂದಗಿದುಗಿವಂತು ಮಾಟ್ಪೆವೆಮಗಳ್ಕದರಾ ॥
ರೆಂದಂಬಂ ತೂಗುತ್ತುಂ
ಬಂದರ್ ಜಿತಶತ್ರು ಮೇಘವಾಹನ ವೀರರ್ ॥ ೧೬ ॥

ಶಾತ ತ್ರಿಶೂಲ ರುಚಿ ತೀ
ವ್ರಾತಪಮಂ ಬೀಜಿಕೆ ಬೀಜಿಕೆ ರಿಪುಬಲ ವಿಲಯೋ ॥
ತ್ಪಾತಮೆನೆ ಕುಂಭಕರ್ಣಂ
ಜ್ಯೋತಿಷ್ಪ್ರಭ ಮಣಿವಿಮಾನದೊಳ್ ಪೊಱಮಟ್ಟಂ ॥ ೧೭ ॥

ಅಂತು ನಿಜ ವಿಜಯಸೇನೆ ಸಂಗ್ರಾಮದೊಳೊಡ್ಡಿ ನಿಲ್ಪುದುಂ :—

ಮ ॥ ಪಿಡಿದುಗ್ರಾಸ್ತ್ರಮನೇಜು ಪುಷ್ಪಕಮನಾಶಾ ಚಕ್ರಮುಂ ಚಕ್ರಮುಂ।
ನಡೆ ನೋಡುತ್ತುಮಪಾರ ಸೈನ್ಯ ಸಹಿತಂ ಪೂರ್ಣೇಂದುವಂ ಪೋಲೆ ಬೆ ॥
ಳ್ಗೊಡೆ ಭೇರೀರವಮೇಕ ಶಂಖ ನಿನದಂ ತಳ್ಪೊಯ್ಯೆ ದಿಕ್ಚಕ್ರಮಂ।
ನಡೆದಂ ದಾನವ ಚಕ್ರವರ್ತಿ ಸಮರಪ್ರಾರಂಭ ಸಂರಂಭದಿಂ ॥ ೧೮ ॥

ಅಂತು ನಡೆವೆಡೆಯೊಳ್—

ಚ ॥ ಒಡೆಯೆ ಸುರಾಲಯಂ ಕೆಡೆಯೆ ಪರ್ವತ ಸಂಕುಲಮುರ್ವರಾ ತಳಂ।
ನಡುಗೆ ದಿಶಾನನಂ ಪೊಗೆಯೆ ಭೂಮಿರುಹಂ ಪ್ರತಿಕೂಲ ವಾಯುವಿಂ ॥
ದುಡಿಯೆ ಖಗಾಳಿ ದುಸ್ಸ್ವರದಿನೂಳಿ ರಣಾಗ್ರಹ ದುರ್ನಯಕ್ಕಣಂ।
ಸೆಡೆಯದೆ ಸಂಗರಾವನಿಗೆ ಮಾನಧನಂ ನಡೆದಂ ದಶಾನನಂ ॥ ೧೯ ॥

ಕಂ ॥ ಸಮರಾರ್ಥಿ ಪೊಣ್ಮುವುತ್ಪಾ
ತಮನಪಶಕುನಂಗಳಂ ದಶಾಸ್ಯಂ ವೀರ ॥

ಪ್ರಮುಖಂ ಬಗೆಯದೆ ಬಂದಂ
ಸಮರಾವನಿಗರ್ಥಿ ದೋಷಮಂ ಬಗೆದಪನೇ ॥ ೨೦ ॥

ಅಂತು ಬಂದೊಡ್ಡಿ ನಿಲ್ವುದುಂ—

ಕಂ ॥ ದನುಜೇಂದ್ರನೊಡ್ಡು [1]ಕರ್ಗನೆ
ಕನಿಯುತ್ತಿರೆ ನೋಡೆ ಕಂಡು ವಾನರಚಿಹ್ನರ್ ॥
ಮುನಿಸನುವಿಸೆ ಕಾದುವ ತ
ಕ್ಕಿನೊಳಾಹವಭೂಮಿಗೆಕ್ಕೆಯಿಂ ನಡೆತಂದರ್ ॥ ೨೧ ॥

ಪಲತೆಱದ ಪಜ್ಜೆಯ ದನಿಗಳ್
ನೆಲೆವೆರ್ಚುವ ಕಡಲ ತೆರೆಯ ತಾರ್ಮುಟ್ಟಿನ ಬ ॥
ಲ್ಲುಲಿಯೆನೆ ಕಲಪ ಕ್ಷ್ಮೋಣಿಗೆ
ಪಲಬರ್ ಸುಭಟರ್ ಕಪಿಧ್ವಜರ್ ಕವಿತಂದರ್ ॥ ೨೨ ॥

ಪಲತೆಱದ ವಾಹನಂಗಳ
ನಲಂಘ್ಯ ವಿಕ್ರಮರೆನಿಪ್ಪ ವಿದ್ಯಾಧರ ವೀ ॥
ರ ಲಲಾಮರೇಱಿ ಸಂಗ್ರಾ
ಮ ಲೋಲುಪರ್ ಸಮರ ಭೂಮಿಗಂದೇಱ್ತಿಂದರ್ ॥ ೨೩ ॥

ನಲ ನೀಲರ್ ಸಮರೋರ್ವಿಗೆ
ವಿಲಯಾಗ್ನಿಗಳಂತೆ ಮುಂತೆ ನಡೆದರ್ ವಿದ್ಯಾ ॥
ಬಲದ ಭುಜಬಲದ ಸೆಣಸಿಂ
ಕಲಿಗಳ್ ಹಸ್ತ ಪ್ರಹಸ್ತರೊಳ್ ತಳ್ತಿಱಿಯಲ್ ॥ ೨೪ ॥

ಅಂಗದ ಕುಮಾರನಾಹವ
ರಂಗದೊಳಾನಿಂದ್ರಜಿತ್ಕುಮಾರಂಗೀವೆಂ ॥
ಭಂಗಮನೆಂದು ಪರಾಕ್ರಮ
ತುಂಗಂ ಕಡುಕೆಯ್ದು ಕದನ ಕೇಳಿಗೆ ಬಂದಂ ॥ ೨೫ ॥

ಅಮಿತ ಚತುರಂಗ ಸೇನಾ
ಸಮನ್ವಿತರ್ ಪ್ಲವಗ ಕೇತುಗಳ್ ಮಾರುತ ಮಾ ॥

---

1. ಕರ್ಗನೆ. ಕ. ಖ.

ರ್ಗಮನೆಳಸಿ ಬಳಸಿ ನಡೆದರ್
ಸಮರ ಕ್ಷ್ಮೋಣಿಗೆ ಸುಷೇಣನುಂ ಜಾಂಬವನುಂ ॥ ೩೬ ॥

ಅಂತು ನಿಜ ನಾಮಾಂಕಿತ ವಿಜಯ ವೈಜಯಂತಿಗಳಂಬರಮನಳ್ಳಿ ಜಾಯೆ ಜಾಂಬವಾಂಗದ ಸುಷೇಣ ಪ್ರಮುಖ ನಿಖಿಲ ವಲೀಮುಖ ಧ್ವಜಪ್ರಧಾನರ್ ರಣರಸಿಕರಾಗಿ ನಡೆದರ್ ಮತ್ತಂ ಪ್ರಭಾಮಂಡಲನುಂ ಮಹೇಂದ್ರನುಂ ಚಂದ್ರಾಭನುಂ ಮಹಾಬಲನುಂ ಸಮುನ್ನತಬಲನುಂ ಸರ್ವಪ್ರಿಯನುಂ ದುರ್ಬುದ್ಧಿಯುಂ ಶರಭನುಂ ಪ್ರೀತಿಂಕರನುಂ ಅನುಂದರನುಂ ದೃಢರಥನುಂ ಕುಮುದಾವರ್ತನುಂ ಸೂರ್ಯ ಜ್ಯೋತಿಯುಂ ವಿಜಯಾಶ್ರಯನುಂ ವಿಮಲಸಾಗರನುಂ ಸನ್ಮಾನನುಂ ರತಿವರ್ಧನನುಮೆಂಬ ಪೆಸರ ನಾಯಕರುತ್ಸಾಯಕರಾಗಿ ನಡೆದರ್ ಮತ್ತಂ—

ಕಂ ॥ ಓರೊರ್ವರ ಚತುರಂಗಮು
ನಾರೆಣಿಸಲ್ ನೆಜಿವರೆನೆ ರಣಾನಕ ರುತಿ ದಿ ॥
ಗ್ವಾರಣಮನೆಯ್ದೆ ಪೇಚರ
ವೀರರಗುರ್ವರ್ವೆ ಸಂಗರೋರ್ವಿಗೆ ಬಂದರ್ ॥ ೩೭ ॥

ಜವದೊಳ್ ದೊರೆಯೆಸಿಸುವ ಖಚ
ರ ವೀರ ಭಟರೇಜಿ ಪುಲಿಯ ರಥಮುಂ ಸಮರೋ ॥
ತ್ಸವದಿಂ ನಡೆದರ್ ದಶವದ
ನ ವರೂಥಿನಿಯಂ ಜವಂಗೆ ಬಾಣಸುಗೆಯ್ಯಲ್ ॥ ೩೮ ॥

ಪ್ರಸ್ತಾರಂ ದೋರ್ಬಲಮುಂ
ದುಸ್ತರಮುಂ ಬೀಜಲೆಂದು ರಣಭೂಮಿಗೆ ತೇ ॥
ಜಸ್ತರಣಿ ನಡೆದನಹಿತ ತ
ಮಸ್ಸ್ತೋಮಮನಳುರೆ ಮುಂಡಲಾಗ್ರ ಮಯೂಖಂ ॥ ೩೯ ॥

ಮತ್ತಂ ವಿಪಕ್ಷಬಲ ಕುಧರಕುಲಿಶ ಪ್ರಹಾರನೆನಿಸಿದ ಪ್ರಸ್ತಾರನುಂ ಕದನಕೇಳೀ ಕೃತಾಂತನೆನಿಸಿದ ಹಿಮವಂತನುಂ ರಿಪುಮನೋಭಂಗನೆನಿಸಿದ ಭಂಗನುಂ ಪ್ರಚಂಡ ಪ್ರತಾಪನೆನಿಸಿದ ಪ್ರಿಯರೂಪನುಮಾದಿಯಾಗೆ ಗಗನಚರ ಗಜಾರೋಹಕರಂಕುಶದ ಮಸೆಗಳ್ ಗಗನ ತಲಮನಾವರಿಸೆ ರಣಕ್ಷ್ಮೋಣಿಗೆ ನಡೆದರ್ ಮತ್ತಂ ಯಮ ಸಮಕಕ್ಷನೆನಿಪ ದುಷ್ಪ್ರೇಕ್ಷನುಂ ರಿಪುಘಟಾ ವಿಘಟನ ಮೃಗೇಂದ್ರನಪ್ಪ ಪೂರ್ಣಚಂದ್ರನುಂ ಪ್ರಥನ ರಥ ಪಯೋಧಿಯಪ್ಪ ಸುವೀಥಿಯುಂ ರಿಪುಹೃದಯ ವಿದಾರಣ ರಣಾನಕ ಸ್ವನನೆನಿಪ್ಪ ನಿಸ್ವನನುಂ ನಿರ್ಜಿತಾನೇಕ ವಿಗ್ರಹನೆನಿಪ್ಪ ಪ್ರಿಯವಿಗ್ರಹನುಂ ಮೊದ

ಲಾಗೆ ಸಿಂಹರಥಮನೇಱಿ ಸಂಗರಾಂಗಣಕ್ಕೆ ನಡೆದರ್ ಮತ್ತಂ ವಿದ್ಯುತ್ಕರ್ಣ ಕಾಲ ಕ್ಷಿತಿಧರ ತರಲ ಸಂಗ್ರಾಮ ಪ್ರಮುಖರಖಿಲ ಘೋಳಾಯಿಲರ್ ಮನೋಜವ ಜಾತ್ಯಶ್ವಂಗಳನೇಱಿ ಕದನಕ್ಷ್ಮೋಣಿಗೆ ನಡೆದರ್ ಮತ್ತಂ—

ಕಂ ॥ ಅನುವರ ಬೂವಿಗೆ ಬಲವಾ
ಹನನುಂ ರವಿ ಹನುಮನುಂ ಪ್ರಚಂಡಾರಿಯುಮು ॥
ಗ್ರನುಮಾದಿಯಾಗೆ ಖೇಚರ
ರನೇಕ ವಾಹನಮನೇಱಿ ನಡೆದರನೇಕರ್ ॥ ೩೦ ॥

ಅಂತು ಸಂಗ್ರಾಮ ಭೂಮಿಗೆ ವಂದು ರಘುವೀರ ಬಲದ ಸೇನಾನಾಯಕರಪ್ಪ ನಳ ನೀಲರ ಪೇಟ್ಟಿಡೆಯೊಳ್ಕೊಡ್ಡಿ ನಿಲ್ಲ್ವುದುಂ—

ಉ ॥ ಅಪ್ರತಿಮ ಪ್ರತಾಪನಿಧಿ ಭೂಷಣರತ್ನ ಹಟತ್ಕಿರೀಟ ರ।
ತ್ನಪ್ರಭೆ ಬೀಱಿ ಬೀಱಿ ಕುಡುಮಿಂಚಿನ ಗೊಂಚಲನುಗ್ರ ಯುದ್ಧ ಕೇ ॥
ಳೀ ಪ್ರಿಯನಪ್ರಮೇಯ ಬಲನುದ್ಗತ ಮುದ್ಗರ ಹಸ್ತನೇಱಿ ರ।
ತ್ನಪ್ರಭಮಂ ವಿಮಾನಮನಗುರ್ವಿಸಿದಂ ನಭದೊಳ್ ವಿಭೀಷಣಂ ॥ ೩೧ ॥

ಮತ್ತಮಾತನ ಸಮಕ್ಷದೊಳ್ ನಿಜಾಕ್ಷೌಹಿಣಿಗಾಗಸವೆಡೆನೆಱಿಯದೆನಿಸಿ—

ಮ ॥ ಬಲ ನಾರಾಯಣರಂ ನಿರೀಕ್ಷಿಸಿ ದಶಗ್ರೀವಂ ರಣ ಕ್ಷ್ಮೋಣಿಯೊಳ್।
ತಲೆಯಂ ತೂಗಿ ಪೊಡರ್ಪುದೋರ್ಪೆನೆನುತುಂ ಬಂದೊಡ್ಡಿ ತಾರಾಭ್ರ ಮಂ ॥
ಡಲಮಂ ಮೂವಳಸಾಗೆ ಮುತ್ತೆ ವಿಲಸದ್ಭೂಷಾ ಪ್ರಭಾಮಂಡಲಂ।
ಬಲ ವಾರಾಶಿಯ ಮಧ್ಯದೊಳ್ ವರುಣನಂತರ್ದಂ ಪ್ರಭಾಮಂಡಲಂ ॥೩೨॥

ಮತ್ತಂ ತತ್ಸವಿಾಪದೊಳಸಂಖ್ಯಾತ ವಾಹಿನೀಸಹಿತನಾಗಿ ನಿಜಕಿರೀಟ ರತ್ನ ಪ್ರಭೆ ನಭಮನಾವರಿಸೆ—

ಕಂ ॥ ಸುಗ್ರೀವಂ ಕಡುಕೆಯ್ದು ದ
ಶಗ್ರೀವನೊಳಱಿಯಲಾನೆ ಸಾಲ್ವೆನೆನುತ್ತುಂ ॥
ವಿಗ್ರಹ ಕಾಂಕ್ಷೆಯಿನಿರ್ದನು
ದಗ್ರಬಲಂ ರತ್ನಮಯ ವಿಮಾನಾರೂಢಂ ॥ ೩೩ ॥

ಮತ್ತಂ ವಿರೋಧಿಬಲ ಸಂವರ್ತ ಸಮಯನೆನಿಪ ಯುದ್ಧಾವರ್ತನುಂ ರಣ ಕ್ರೀಡಾನುಕೃತ ಕೃತಾಂತನೆನಿಪ ವಸಂತನುಂ ರಿಪುಕುಲ ಕುಮುದವನ ರದನಿಯೆನಿಪ

ಕುಮುದನುಂ ಕೀರ್ತಿ ಚಂದನರಸ ಚರ್ಚಿತ ದಿಗಂಗನನೆನಿಸಿದ ಮಹಾರ್ಚಿತನುಂ ವಿದ್ವಿಷ್ಟಕುಲ ಕಾಳೋರಗನೆನಿಪ್ಪುರಗನುಂ ಮೊದಲಾಗೆ ಪಲಬರುಂ ಖಚರ ಪರಿವೃಢ ರಂಬರಮನಾವರಿಸಿ ವಿವಿಧಾಯುಧ ಹಸ್ತರ್ ಜ್ಯೋತಿರಮರ ನಾಯಕರಂತಿರ್ಪುದು ಮಾ ವಿದ್ಯಾಧರಾಧಿರಾಜ ಮಧ್ಯದೊಳ್—

ಕಂ ॥ ಚಾಮರಮನಿಕ್ಕೆ ಖೇಚರ
ಕಾಮಿನಿಯರ್ ಮಣಿವಿಮಾನದೊಳ್ ಮಣಿಮಯ ಘಂ ॥
ಟಾ ಮಧುರ ಧ್ವನಿಯೊಳ್ ಕ
ಲ್ಪಾಮರರಿರ್ಪಂತೆ ರಾಮಲಕ್ಷ್ಮಣರಿರ್ದರ್ ॥ ೩೪ ॥

ಅಂತುಭಯ ಬಲಮುಂ ನೆಲನುವಾಗಸಮುಮೆಡೆನೆಱೆಯದಂತು ಸಮುಚಿತ ವ್ಯೂಹ ಪ್ರತಿವ್ಯೂಹ ಸ್ಥಾಪನೆಗಳಂ ಯಥಾವಿಧಿಯಿಂ ಪ್ರಯೋಗಿಸಿ ತಂತಮ್ಮ ಮೊನೆಯ ನಾಯಕರ ಬಿರುದಿನ ಬೀರವದ್ದಳೆಯ ಪದಿರ ಪಜ್ಜೆಯ ಕಹಳೆಯ ಕಳ ಕಳಂ ಕವಿಶಬ್ದಂಗಿಡೆ ದಿವಮನೆಯ್ದೆ ಮಿಳಿರ್ದು ಮಿಳ್ಪಿಸುವ ಪೆಸರ ಕುಱುಪಿನ ಪಳ ಯಿಗೆಗಳುಂ ಸಂದಣಿಸಿ ಮುಂದೆ ನಿಂದ ಪಲವುಂಸಿಂದಂಗಳುಂ ಕಣ್ಮೊಲಕ್ಕೆ ಬರೆ ಕನಲ್ದೊನಲ್ವು ಕದನಕೇಳೀ ಕುತೂಹಲರಾಗಿರ್ಪುದುಮಿತ್ತ ನಳನೀಲರುಮತ್ತ ಹಸ್ತ ಪ್ರಹಸ್ತರುಮೊಡನೆ ಕಡೆಗಾಲದ ನಂಜಿನ ಪ್ರಲಯ ಪ್ರಭಂಜನಂ ಬೀಸುವಂತೆ ಕೈ ವೀಸುವುದುಂ—

ಚ ॥ ಇಳೆ ಮೊಟಿಗಿತ್ತೊ ಭಾನುರಥಮುರ್ವಿಗೆ ಬಿಬ್ಬುದೊ ಶೇಷಕಂಠ ಕಂ ।
ದಳ ಕಠಿನಾಸ್ಥಿ ನುಬ್ಬಿದುದೊ ಗೋತ್ರನಗಂ ಪಿಳಿಗಿತ್ತೊ ಸಾಗರಂ ॥
ತಳರ್ದುದೊ ಮೇಱೆಯಿಂದಮುಬ್ಬುದಂದಿನಿತದ್ಭುತಮಾದ ನಾದಮು ।
ಗ್ಗಳಿಸದೆನಲ್ ವಿಘೂರ್ಣಿಸಿದುದಿರ್ಬಲದೊಳ್ ಸಮರಾನಕ ಸ್ವನಂ ॥ ೩೫ ॥

ಕಂ ॥ ಕರಿಯೊಳ್ ಕರಿ ಹಯದೊಳ್ ಹಯ
ಮುರುರಥದೊಳ್ ರಥಮುಮಾಳ್ಗಳೊಡನಾಳ್ಗಳ್ ಕಾ ॥
ಯ್ದುರವಣಿಸಿ ತಾಗೆ ತಾಗಿದು
ವೆರಡೊಡ್ಡುಂ ನೆಲದೊಳಾಗಸಂ ತಾಗುವವೋಲ್ ॥ ೩೬ ॥

ಮ॥ಸ್ರ॥ ಧರೆ ಕಂಪಂಗೊಳ್ವಿನಂ ಪೆರ್ವಡೆಗಳೆರಡುಮೋರೊಂದಱೊಳ್ ತಾಗೆ ತೂರ್ಯ್ಯ ।
ಸ್ವರಮುಂ ಕೋದಂಡ ಟಂಕಾರಮುಮಿಭ ರದ ಸಂಘಟ್ಟ ನಿರ್ಘೋಷಮುಂ ಜೋ ॥
ದರ ಬಾಣಾಸಾರ ಘೋರ ಧ್ವನಿಯುಮಸಿ ಖಣತ್ಕಾರಮುಂ ಪರ್ವಿ ರೋ ದೋಂ ।
ತರಮುಂ ಸಂವರ್ತಕಾಲ ಕ್ಷುಭಿತ ಜಲನಿಧಿ ಧ್ವಾನದಂತಾದುದೆತ್ತಂ ॥ ೩೭ ॥

ಮ ॥ ಕರವಾಳೊಳ್ ಕರವಾಳ್ ಪಳಂಚೆ ಕಿಡಿಗಳ್ ಪೇರಾನೆ ಪೇರಾನೆಯೊಳ್ ।
ಭರದಿಂದಂ ಮೊಗಮಿಕ್ಕೆ ದಂತ ಶಕಲಂಗಳ್ ತೇರ್ಗಳೊಳ್ ತೇರ್ಗಳು ॥
ಬ್ಬರಮೇಸಾಡೆ ತುರಂಗ ಕೇತನ ಚಯಂಗಳ್ ಕೊಂತದೊಳ್ ಕೊಂತಮಾ ।
ಸುರಮಪ್ಪಂತೆಡರೊತ್ತೆ ತೋರವೆಣಗಳ್ ಬೀಟ್ಟಿಂದುವುಗ್ರಾಜಿಯೊಳ್ ॥ ೩೮ ॥

ಅಂತುಭಯ ಚತುರಂಗ ಸೇನೆ ಭರಂಗೆಯ್ದು ತಾಗಿ ಥಟ್ಟೊತ್ತಿಜಿವ ಸಮಯದೊಳ್—

ಕಂ ॥ ರಣಗಟ್ಟಿಲೆ ಕೈಮಿಗೆ ಬಿ
ಲ್ಲಣಿ ಕಡುಕೆಯ್ಗುಭಯ ಬಲದೊಳಂಬಿಕ್ಕುವುದುಂ ॥
ಕಣೆ ಕಣೆಯನೊರಸೆ ಕದನಾಂ
ಗಣದೊಳ್ ಕೆಡಿ ಕೆದಜಿದತ್ತು ಕೆಂಡದ ಮಜಿಯಂ ॥ ೩೯ ॥

ಬಾಣಾಂಧಕಾರಮುದ್ಗತ
ಶೋಣಿತ ಸಂಧ್ಯಾಭ್ರಮಸ್ತಮಿತ ರವಿ ಕಿರಣ ॥
ಶ್ರೇಣಿ ಧನುರ್ಬಲ ಸಮರ
ಕ್ಷೋಣಿ ಚಮೂ ಕಾಲರಾತ್ರಿ ಪಡೆದುದಗುರ್ವಂ ॥ ೪೦ ॥

ಮಾರ್ಮಲೆದು ಬಿಲ್ಲ ಬಿತ್ತಿಗ
ರೊರ್ವೊದಲಿಸೆ ಕಣೆಗಳುರ್ಚಿ ಪೋದುವು ನೆಜನಂ ॥
ಧರ್ಮಗುಣ ಚ್ಯುತರನ್ಯರ
ಮರ್ಮ ವಿಭೇದಿಗಳೆನಿಪ್ಪುದೊಂದಚ್ಚರಿಯೇ ॥ ೪೧ ॥

ಎಡೆಗಿಡೆ ಗಗನಂ ಪವನಂ
ನಡೆಗಿಡೆ ಬಿಲ್ವಡೆಗಳಿಸುವ ಕಣೆಗಳ್ ನೆಜನಂ ॥
ಬಿಡೆ ನಟ್ಟು ಸುಭಟರಸುವಂ
ನಡೆಯಿಸಿದುವು ಯಮಪುರಕ್ಕೆ ಯಮದೂತರವೋಲ್ ॥ ೪೨ ॥

ಚ ॥ ರವಿ ಕಿರಣಂಗಳಸ್ತಮಿಸೆ ಕಟ್ಟಿಲೆ ಕೈಮಿಗೆ ಸುತ್ತಿ ಮುತ್ತಿದಿ ।
ಗ್ವಿವರಮನಾಗಸಂ ಪೊಳೆವ ಪೊಂಗಜಿಯಿಂ ಕವಿಲಾಗೆ ಭೋರೆನಲ್ ॥
ಪವನ ಜವಂಗಳರ್ವಲದ ಬಿಲ್ವಡೆ ಪೊಕ್ಕಿಸೆ ಬಾಣ ಸಂಕುಲಂ ।
ಕವಿದುವು [1]ತೋಳೆವಿಂಡು ಕವಿವಂತೆಲೆಯಿಕ್ಕಿದ ಕಾನನಂಗಳಂ ॥ ೪೩ ॥

---

1 ತೋಳೆವಿಂಡು. ಗ. ಘ.

ಚ ॥ ನಡೆಗಿಡೆ ಗಾಳಿ ಪೂಟಿ ಗಗನಸ್ಥಳಿ ತೆಕ್ಕನೆ ತೀವೆ ದಿಙ್ಮುಖಂ ।
ನಡುವಿರುಳಂತೆ ಕಟ್ಟಿಲಿಸೆ ಪಟ್ಟಪಗಲ್ ರಣಮಂ ನಿರೀಕ್ಷಿಸಲ್ ॥
ಪಡೆಯದೆ ದೇವರುಂ ದಿವಿಜಕಾಂತೆಯರುಂ ಬೆಱಗಾಗೆ ಪೂಣೆವೊ ।
ಕ್ಕೊಡನೊಡನಾರ್ದೆರಟ್ಟಿಡೆಯ ಬಿಲ್ಪಡೆ ಬೀಱಿದುದಸ್ತ್ರವಿದ್ಯೆಯಂ ॥ ೪೪ ॥

ಮ ॥ ದೆಸೆಯಂ ನುಂಗಿ ದಿನೇಶನಂ ನೊಣೆದು ರೋದೋಭಾಗಮಂ ಪೀರ್ದು ಸಂ ।
ದಿಸಿ ಮುಂದೈಸಿ ಧನುರ್ಬಲಂಗಳಸೆ ಬಾಣಶ್ರೇಣಿ ಸೇನಾಂಗದೊಳ್ ॥
ಬಿಸುನೆತ್ತರ್ ಪೊಜವೊಣ್ಮೆ ಸೋರ್ತರೆ ಕರುಳ್ ಕಣ್ಣಾಲಿಗಳ್ ಸೂಸೆ ಖಂ ।
ಡಿಸೆ ಕೈಗಳ್ ಕಡಿಖಂಡವಾಗೆ ಕಣಕಾಲ್ಗಳ್ ನಟ್ಟುವುಗ್ರಾಜಿಯೊಳ್॥ ೪೫ ॥

ಕಂ ॥ ತುಡುವಂಬಂ ಬಿಡುವಂಬಂ
ನಡುವಂಬಂ ಕಾಣ್ಬುದಾರ್ಗಮರಿದೆಂಬಿನೆಗಂ ॥
ಕಡುವಿಲ್ಲರ್ ಕಡುಕೆಯ್ದಿಸೆ
ಕಡುವೇಗದೆ ಪರಿದುವರುಣಜಲದ ಪೊನಲ್ಗಳ್ ॥ ೪೬ ॥

ಮ ॥ ಸೆರಗಂ ಪಾರದೆ ಪೂಣೆವೊಕ್ಕು ಪೊಜಮುಯ್ವಂ ತಾಗೆ ಕೈವೇಗಮ ।
ಚ್ಚರಿಯಂ ಪುಟ್ಟಿಸೆ ತೀವಿ ತೊಟ್ಟಿಸುವುದುಂ ನೇರ್ದಿರ್ಕ್ಕೆ ಸರ್ವಾಂಗಮಂ ॥
ಶರಜಾಲಂ ಬಿಸುನೆತ್ತರುಣ್ಮೆ ನೊರೆನೆತ್ತರ್ ಸೂಸೆ ಕರ್ನೆತ್ತರಂ ।
ಬಿರಿವಿಟ್ಟರ್ವಿಸೆ ಕೂಡೆ ಬಿಲ್ಪಡೆ ಪಡಲ್ಪಟ್ಟತ್ತು ಸಂಗ್ರಾಮದೊಳ್ ॥ ೪೭ ॥

ಉ ॥ ಓವದೆ ಬಿಲ್ಲ ಬಿತ್ತಿಗರಡುರ್ತಿಸೆ ರೌದ್ರ ಶರಾಳಿ ರೋಮರೋ ।
ಮಾವಳಿದಪ್ಪದುರ್ಚಿ ಬಿಸುನೆತ್ತರ ಸುಟ್ಟುರೆ ಪರ್ವಿ ವಹ್ನಿ ಜೆ ॥
ಹ್ವಾವಳಿಯಂದವಾಗೆ ತೊವಲಿಕ್ಕಿದ ಪೆರ್ವಟು ಬೇಗೆಗಿರ್ಚಿನೊಳ್ ।
ಬೇವವೊಲಿರ್ದುವಿರ್ವಲದ ಬಿಲ್ಲಣಿಗಳ್ ರಣರಂಗ ಭೂಮಿಯೊಳ್ ॥ ೪೮ ॥

ಚ ॥ ಸ್ತನಿತ ಧನುರ್ಗುಣ ಧ್ವನಿ ಶತಹ್ರದ ಶಸ್ತ್ರಮರೀಚಿ ನಾಡೆ ಕ ।
ರ್ಗನೆ ಕನಿವೊಡ್ಡು ಕಾರಮುಗಿಲಂತಿರೆ ಭೋರನೆ ಕೊಂಡುದಾಗಳಂ ॥
ಬಿನಮಟೆ ರಕ್ತವಾರಿ ಬೆದೆಗೂಡಿಸೆ ಸಾಲಿಡೆ ಪೆರ್ವೆಣಂ ರಣಾ ।
ವನಿತಲಮಿರ್ದುದಂಕುರಿತಮಾದವೊಲೊಕ್ಕ ಕರುಳ್ವಿಣಿಲ್ಗಳಿಂ ॥ ೪೯ ॥

ಮ ॥ ಸತತಂ ಸತ್ಪಥವರ್ತಿಗಳ್ ಋಜುಗಳತ್ಯುತ್ಕೃಷ್ಟ ವಂಶಂಗಳ ।
ನ್ವಿತ ಸದ್ಧರ್ಮ ಗುಣಂಗಳಸ್ತ್ರಶತಿಗಳ್ ನಿಸ್ತ್ರಿಂಶ ಧಾನುಷ್ಕ ಸಂ ॥
ಗತಿಯಿಂದಂ ಪರ ಮರ್ಮಭೇದಿಗಳಿನಲ್ ತೀಕ್ಷ್ಣಂಗಳುಂ ಮಾಂಸ ಲೋ ।
ಹಿತ ವಕ್ತ್ರಂಗಳುಮಾದುವೆನ್ನರುಮನೇಂ ದುಸ್ಸಂಗಮೇಗೆಯ್ಯದೋ ॥ ೫೦ ॥

ಉ ॥ ಅಸುರಮಾಗೆ ಕೈಯ ಕಣೆಗಳ್ ತವುವನ್ನೆಗಮೆಚ್ಚು ಬಿಟ್ಟು ಬಾ ।
ಣಾಸನಮಂ ಕರುತ್ತಿಱಿದು ಕಟ್ಟಿದ ಗೇಣುಡಿವನ್ನಮನ್ಯರ ॥
ಟ್ಟಾಸುರಮಾಗೆ ಕೂರ್ಗಣೆಗಳಿಂದಿಸೆ ಮುಂದಡಿಯಿಟ್ಟು ವೀರ ಸಂ ।
ನ್ಯಾಸದೊಳಪ್ಪರೋಗಣಮನಲ್ಲಿ ಕೆಲರ್ ಬಸದಾಗೆ ಮಾಡಿದರ್ ॥ ೫೧ ॥

ಕಂ ॥ ನೊಸಲೊಳ್ ನಟ್ಟಂಬಂ ಕಿ
ಟ್ಟು ಸುಭಟನುಚ್ಚಳಿಸೆ ಪುಣ್ಣ ಬಾಯಿಂ ನೆತ್ತರ್ ॥
ನೊಸಲುರಿಗಣ್ಣುರಿಯೆನೆ ನ
ರ್ತಿಸುವ ಮರುಳ್ವಡೆಯ ನಡುವೆ ಮೃಡನವೊಲಿರ್ದಂ ॥ ೫೨ ॥

ಅಂತು ಬಿಲ್ವಡೆ ಪಡಲ್ವಡೆ—

ಕಂ ॥ [1]ಜವನೆರ್ದೆ ಬಿರ್ಚುವ ತೆಱದಿಂ
ತವುತರ್ಪುದುಮುಭಯ ಬಲಧನುರ್ಧರ ಸೈನ್ಯಂ ॥
ಜವನೆರ್ಮೆವೋಱುಗಳ್ ತಾ
ಗುವಂತೆ ತಾಗಿದರಡುರ್ತು ಕಡಿತಲೆಕಾಱರ್ ॥ ೫೩ ॥

ಕೆಂಬಲಗೆಯ ಪೊಳೆಪಿಂ ಸಂ
ಧ್ಯಾಂಬುದಮಂ ಪಡೆದು ಜಡಿದು ಕಡಿತಲೆದೂಗು ॥
ತ್ತುಂ ಬಿಡದೆ ಸಿಡಿಲ ಬಳಗವಿ
ದೆಂಬಿನೆಗಂ ತಾಗಿದತ್ತು ಭಾರ್ಗವ ಸೈನ್ಯಂ ॥ ೫೪ ॥

ಆಗಳಿರ್ವಲದ ಕಡಿತಲೆಕಾಱರಲಗಲಗಿನೊಳ್ ಪಳಂಚೆ ತಾಗಿ ನಿರ್ಘಾತವುಪ್ಪರಂ ತಾಳವಟ್ಟವುವಿತಮುಟ್ಟಿತಮೆಂಬ ಪಲವುಂತೆಱದಿಱಿವ ಬಿನ್ನಣದೊಳ್ ನೆಱೆದು ತಾಳುಂತಟ್ಟುಂ ಪೊಯ್ಯೆ ಕಡಿಖಂಡವಾದ ಮೆಯ್ಯುಂ ಕುಣಿಲ್ವಾಱುವ ಮುಂಡಮುಂ ಮುಂಡುವೋದ ಕಯ್ಯುಂ ಕಂಡುವೋದ ತೊಡೆಯುಂ ಪಿಸುಟ್ಟಿ ಕಿಬಿಕ್ಕಿಡೆಯುಂ ಕಣೆವೋದ ಕಣಕಾಲುಂ ದೊಣೆವೋದ ಮೇಗಾಲುಂ ಪಱಿದು ಪಾಯ್ದು ಪಂದಲೆಗಳುಂ ದೆಸೆದೆಸೆಗೆ ತಿಣ್ಣಮಾಗೆ ಸೂಸುವ ಕಣ್ಣಾಲಿಗಳುಂ ಮುಱಿದ ಮೂಳೆಗಳುಂ ಪಱಿದ ಪೊರ್ಕುಟ್ಟಿಗಳುಂ ಸೋರ್ವ ಕರುಳ್ಗಳುಂ ಆರ್ವ ಮರುಳ್ಗಳುಂ ಕೆತ್ತುವ ತನಿಗಂಡಮುಂ ಕುಣಿವ ಮರುಳ್ತಂಡಮುಂ ನೆತ್ತರ ತೊಱೆಯುಂ ನೆಣದ ಪಳ್ಳಂಗಳುಂ ಪೆಣದ ಬಣಂಬೆಗಳುಂ ಕೋಟ್ಟಿದುಳ ಕೋಟಿಕ್ಕಿಸಱುಮಗುರ್ವುವಡೆಯೆ—

---

1. ಜವನೆಲೆ ವೆರ್ಚಿನ. ಗ; ಜವನೆರೆ ಬಚ್ಚಿಪ. ಚ.

ಕಂ ॥ ಪಜ್ಜಿದ ತಲೆ ರಾಗದಿಂ ಬೊ
ಬ್ಬಿಜ್ಜಿದಾರ್ವಿನಮಟ್ಟಿ ಕಟ್ಟಿದಲಗಿಂದಂ ತ ॥
ಳ್ತಿಜ್ಜುವುದುನೊಡನೊಡನೆ ಬಯ
ಲ್ದೊಜ್ಜಿವರಿದುವು ರೌದ್ರ ರಸಮುಮದ್ಭುತ ರಸಮುಂ ॥ ೫೫ ॥

ತಲೆಗರೆಯದಣ್ಮಿ ಸತ್ತರ
ತಲೆಗಳನಟ್ಟಿಯೊಳಮರ್ಚಿಕೊಂಡುಯ್ವಿಡೆಯೊಳ್ ॥
ತಲೆ ತಡವರಲಮರಿಯರೇಂ
ತಲೆಯಂ ತಲೆವಿಡಿದು ಬಿಡದೆ ತಲೆವತ್ತಿದರೋ ॥ ೫೬ ॥

ಅಂತು ಪೇರಣಿ ಪೆಣಮಯಮಾಗೆ ಮೇಜಿದಪ್ಪಿದ ಪೂರ್ವಾಪರ ಪಾರಾವಾರ ವೀಚಿಯ ನಿಚಯಮೆನಿಸಿ—

ಕಂ ॥ ಸೆರಗಂ ಬೆರಗಂ ಬಗೆಯದೆ
ಪೊರೆದಾಳ್ದನ ಜೋಳವಾಳಿ ನಿಲೆ ಗೋಚಾಯ್ಲರ್ ॥
ಪರಿಯಿಪುದುಮೊಂದೆ ನೇಣೊಳ್
ಪರಿವಂತಿರೆ ಪರಿದುವುಭಯ ಬಲದ ಹಯಂಗಳ್ ॥ ೫೭ ॥

ಆಹವ ಕರ್ಕಶರಶ್ವಾ
ರೋಹಕರೊಟ್ಟೈಸಿ ಕೀಜ[1] ಬಿಟ್ಟಿಕ್ಕುವುದುಂ ॥
ಲೋಹಖುರಂಗಳ್ ಪರಿದುವು
ವಾಹಿನಿಯ ತರಂಗಮೆನೆ ತುರಂಗ ಚಯಂಗಳ್ ॥ ೫೮ ॥

ಉ ॥ ಕಟ್ಟಿದ ಪಂಚವರ್ಣ್ಣಿಗೆಯ ಪಟ್ಟಿಯ ತೊಂಗಲೊಳಿಂದ್ರಚಾಪಮಂ ।
ಪುಟ್ಟಿಸಿ ತೊಟ್ಟ ವಜ್ರಕವಚಚ್ಛವಿಯೊಳ್ ಚಪಲಾ ಕಲಾಪಮಂ ॥
ಪುಟ್ಟಿಸಿ ತಾಗಿ ತಟ್ಟಿಜ್ಜಿದು ಲೋಹಿತ ವೃಷ್ಟಿಯನಾಸವಾರಿಗಳ್ ।
ಪುಟ್ಟಿಸೆ ಮೇಜಿದಪ್ಪಿ ಕವಿತಂದುದು ರೌದ್ರರಸಂ ರಣೋರ್ವಿಯೊಳ್ ॥ ೫೯ ॥

ಚ ॥ ಒದವಿದ ಲೋಹವಕ್ಕರೆಯ ವಾಹಕರಿಕ್ಕಿದ ಸೀಸಕಂಗಳೆ ।
ತ್ತಿದ ಕರವಾಳ ವಜ್ರಕವಚಂಗಳ ಕಾಂತಿ ದಿಗಂತರಾಳಮಂ ॥
ಪುದಿವಿನೆಗಂ ಮನಃಪವನ ವೇಗದೆ ನೋಪ್ಪಿರ ಕಣ್ಗಳೊಳ್ ಬಿಸಿ ।
ಲ್ಗುದುರೆಗಳಂದದಿಂ ಕುದುರೆಗಳ್ ಪೊಳೆದುಳ್ಕುದುವರ್ವಲಂಗಳೊಳ್ ॥ ೬೦ ॥

---

1. ಬದ್ದಿಕ್ಕುವುದುಂ. ಚ.

ಅಂತು ಪರಿದು ತಾಗುವುದುಂ---

ಚ ॥ ಜವನರವಾವು ಕೊಂಡುವೆನೆ ಕರ್ಕಡೆ ಕೊಂಡುವು ಚಕ್ರಮೆಯ್ದೆವಂ।
ದುವು ಲಯಕಾಲ ಚಕ್ರಮೆನೆ ನಾಳೆಯ ಕೋಲ್ ಜವನಾಳೆವೆಂಬಿನಂ ॥
ಕವಿದುವು ತೋಮರಂ ಜವನ ಡಾಮರವಾದುವು ಜಾನುದಘ್ನಮಾ।
ದುವು ತರವಾರಿಯಿಂದಿಜಯೆ ಲೋಹಿತವಾರಿಗಳಾಸವಾರಿಗಳ್ ॥ ೬೧ ॥

ಉ ॥ ಪಾಯಿಸಿ ಪೊಯ್ಯೆ ಗೋಬಿಯಿಲರೊರ್ವರನೊರ್ವರಗುರ್ವು ಪರ್ವೆ ಕಾ।
ಳಾಯಸ ಶುಕ್ತಿಯಿಂ ಸಮೆದ ಸೀಸಕದಿಂ ಬಹು ರಾಹು ಮಂಡಲ ॥
ಪ್ರಾಯಮೆನಿಪ್ಪ ದಾನವರ ಪಂದಲೆಗಳ್ ರವಿಮಂಡಲಂಬರಂ।
ಪಾಯೆ ಬಿಸಿಲ್ ಪೊಡರ್ಪುಗಿಡೆ ಪಾಳಿಸಿದತ್ತುಪರಾಗ ಲೀಲೆಯಂ ॥ ೬೨ ॥

ಬಾಳುಡಿ ಪಾಜು ಬೀಟಿ ಪಗಲುಳ್ಕದವೊಲ್ ರುಧಿರಂ ದಿಗಂತಮಂ।
ವೇಳಿಸಿ ಕೊರ್ವಿ ಕಲ್ಪದವಸಾನದ ಸಂಜೆಮುಗಿಲ್ಗಳಂದಮಂ ॥
ಪಾಳಿಸೆ ಸೂಸಿ ಕೋಟ್ಮಿದುಳ ತಂಡಮಿಳಾವಳಯಕ್ಕೆ ಬಿಟ್ಟಿ ತಾ।
ರಾಳಿಗಳಂತಗುರ್ವಿಸೆ ಭಯಂಕರಮಾಯ್ತು ತುರಂಗ ಸಂಗರಂ ॥ ೬೩ ॥

ಕಂ ॥ ತಾಟಿಪ್ಪಂಬರಮುತ್ಸ
ಲ್ಲೋಳಮಸೃಕ್ಸಿಂಧು ಕಾಟ್ಪರಂಬರಿವಿನೆಗಂ ॥
ತಾಳುಂತಟ್ಟುಂಬೊಯ್ದರ್
ಗೋಬಿಯಿಲರ್ ಸುಭಟರಟ್ಟಿಗಳ್ ತೇಂಕುವಿನಂ ॥ ೬೪ ॥

ಉ ॥ ಆಹವ ದೋಹಳಂ ತವುಗೆ ಕೈಮಿಗೆ ಬಾಳಜಿಪೊಯ್ಗು ಬೆರ್ಚದು।
ತ್ಸಾಹಮನಪ್ಪುಕೆಯ್ವಿಜಿದು ಸೋಗದೆ ಮಣ್ಮಟಿಯಾಗೆ ವಾಜಿಯುಂ ॥
ವಾಹಕರುಂ ಮರುಳ್ವಡೆಯುಮಾಗಡೆ ತಮ್ಮೊಡನಾಡೆ ರಾಗದಿಂ।
ವಾಹಕರಟ್ಟಿಯುಂ ತುರಗದಟ್ಟಿಯುಮಾಡಿದುವಾಜಿ ರಂಗದೊಳ್ ॥ ೬೫ ॥

ಚ ॥ ನೆರೆದು ನಿಶಾಟರಿಲ್ವಟಿಯೆ ತಿಂದ ಗಜಂಗಳೆ ನಾವೆಯಾಗೆ ಪುಲ್।
ಮರುಳ ಕುಟುಂಬಮಂ ಪೆಣದ ಕೈಗಳೆ ಪುಟ್ಟುಗಳಾಗೆ ರಾಗದಿಂ ॥
ತೆರೆಯನಡಂಗೆ ಪೊಯ್ದು ಮುಗಿಲುದ್ದಮೆನಲ್ ಪರಿಯುತ್ತುಮಿರ್ಪ ನೆ।
ತ್ತರ ತೊಜಿಯಂ ಮರುಳ್ತೊಟಿಸಿ ಪಾಯಿಸುತಿರ್ದುವು ಯುದ್ಧಭೂಮಿಯೊಳ್
॥ ೬೬ ॥

ಅಂತುಭಯ ಬಲವ ವಾಹಕ ವ್ಯೂಹಮೊರ್ನೋದಲೊಳೆ ಮಣ್ಮಟಿಯಾಗೆ—

ಮ ॥ ಕ್ಷಿತಿಚಕ್ರಂ ನಿಜಭಾರದಿಂ ತೆಣಱದತ್ತೆಂಬನ್ನೆಗಂ ಚಕ್ರ ಚೀ ।
ತ್ಕೃತವಾ ಕಲ್ಪಘನಾಘನ ಸ್ತನಿತಮೆಂಬನ್ನಂ ಧನುರ್ದಂಡ ಟಂ ॥
ಕೃತಮುದ್ದಾಮಮಯಾಟ್ಟಹಾಸ ರಸಮೆಂಬನ್ನಂ ಹಯಾನೀಕ ಹೇ ।
ಷಿತಮತ್ಯದ್ಭುತವಾಗೆ ತಾಗಿದುವು ತೇರ್ ತೇರೊಳ್ ರಣಕ್ಷ್ಮೋಣಿಯೊಳ್ ॥ ೬೭ ॥

ಕಂ ॥ ರಥಿಗಳ್ ರಥಿಗಳನಿಸೆ ಸಾ
ರಥಿಗಳ್ ಸಾರಥಿಗಳೊಡನೆ ತಳ್ತಱಯೆ ಮರು॥
ತ್ಪಥದೊಳ್ ಮಿಳ್ಪಿಸೆ ಪಟಿಯಿಗೆ
ರಥಂ ರಥಂಗಳೊಳಿದಿರ್ಚಿ ತಾಗಿದುವಾಗಳ್ ॥ ೬೮ ॥

ಚ ॥ ಕದನದೊಳಾರ್ದು ಸಾರ್ದಿಸೆ ಮಹಾರಥರಚ್ಚು ಸಿಡಿಲ್ದುದೀಸು ಸೂ ।
ಸಿದುದರಗೀಲ್ ಕಟಿಲ್ದುದು ಮಡಂ ಕಡಿವೋದುವು ಪಾಪೆ ರೂಪುಗೆ॥
ಟ್ಟುದು ನೊಗನೋರೆವೋಯ್ತು ತುರಗಂ ಪಡಲಿಟ್ಟುದು ವೈಜಯಂತಿ ಬಿ ।
ಟ್ಟುದು ರಥ ಚೋದಕರ್ ಮಡಿದರಾಗಳಪಾರ ಶರ ಪ್ರಹಾರದಿಂ ॥ ೬೯ ॥

ಕಂ ॥ ಸಾರಥಿ ಮಡಿದೊಡವುಳ್ಕದೆ
ತೇರಂ ಜೋಡಿಸುತುನೂಂತ ರಥಿಯೊಳ್ ಸೆರಗಂ ॥
ಪಾರದೆ ತಳ್ತಱಯುತ್ತುಂ
ಸಾರಥಿಯುಂ ರಥಿಯುಮಾಗೆ ಕಾದಿದರರಿಬರ್ ॥ ೭೦ ॥

ತಪ್ಪದೆ ರಣಮುಖದೊಳ್ ಮುಂ
ತಪ್ಪದಟರನಿಸೆ ಮಹಾರಥರ್ ಜವನಾಳಂ ॥
ತಪ್ಪ ಕಣೆ ರೋಮರೋಮಂ
ದಪ್ಪದೆ ನಾಂಟಿದುವು ಸೀಂಟಿದುವು ವಿಧಿಲಿಪಿಯಂ ॥ ೭೧ ॥

ಕೃತ ಶಸ್ತ್ರವಿದ್ಯರಪ್ರತಿ
ಹತ ಭುಜಬಲರುಭಯ ಬಲದ ರಥಿಗಳ್ ಗತಜೀ ॥
ವಿತರಾದರ್ ಸಂಗ್ರಾಮದೊ
ಳತಿರಥ ಸಮರಥ ಮಹಾರಥಾರ್ಧರಥರ್ಕಳ್ ॥ ೭೨ ॥

ತೇರೊಡ್ಡು ಗಾಳಿಗೊಡ್ಡಿದ
ನೀರದದೊಡ್ಡಿನವೊಲಾಗೆ ಕೂರಂಕುಶಮಂ ॥
ಚಾರಿಸುತುಮಾನೆಗಳನಾ
ಧೋರಣರಾ ರಣದೊಳಣೆದು ನೂಂಕಿದರಾಗಳ್ ॥ ೭೩ ॥

ಚ ॥ ಮೊಗವಡಮಂ ನಿಷಾದ ಕಳೆದಂಕುಶದಿಂದಣೆದಾರ್ದು ನೂಂಕೆ ಗಾ।
ಳಿಗೆ ಗಜಮೂಡಿದಂತೆ ಪರಿದಾನೆಗಳಾನೆಗಳೊಳ್ ಕಡಂಗಿ ಕಾ ॥
ರ್ಮುಗಿಲವೊಲಟ್ಟ ಮುಟ್ಟ ಕಡುಪಿಂ ಬಿಡೆ ಪೋರ್ದುವು ಕೋಡ ಕೋಟಿಯೊಳ್।
ಲ್ಲುಗುತರೆ ಕೋಳ್ಮಿದುಳ್ಪೆರಸಿ ಮಸ್ತಕ ಪಿಂಡದ ಮೌಕ್ತಿಕೋತ್ಕರಂ ॥ ೭೪ ॥

ನಡುಗೆ ಧರಾತಲಂ ಕದಳಿಕಾ ಪರಿಘ ಪ್ರತಿಘಾತದಿಂ ಮುಗಿಲ್ ।
ಪಡಲಿಡೆ ಕೋಪಮುಂ ಜವಮುಮೇಟ್ಗೆಯುಮಾಸುರಮಪ್ಪಿನಂ ಮದಂ ॥
ಬಿಡುತರೆ ಕೀಲು ತಾಗಿದುವೆರಪ್ಪಡೆಯಾನೆಗಳಾನೆಯೊಳ್ ಸಿಡಿಲ್ ।
[2]ಸಿಡಿಲೊಳೆ ತಾಗಿದಂತೆ ಕೆಡಿ ಬೀಳ್ತುರೆ ತಾಗೆ ರದಂ ರದಂಗಳೊಳ್ ॥ ೭೫ ॥

ವ ॥ ಉಗುವೆಂಟುಂಮದಧಾರೆ ಬಲ್ಸರಿಗಳಂ ದಂತಾಂಶುಗಳ್ ಬಳ್ಕಿಮಿಂ।
ಚುಗಳಂ ಬಿಚ್ಚನೆ ಬಿಟ್ಟ ದಿಟ್ಟೆ ಸಿಡಿಲಂ ಕೀಟ್ಮಾಡೆ ಬಂದೆಯ್ದಿ ಕಾ ॥
ರ್ಮುಗಿಲೊಡ್ಡಂ ಮುಗಿಲೊಡ್ಡು ತಾಗುವವೊಲೈತಂದಾನೆಯೊಡ್ಡಾನೆಯೊ ।
ಡ್ಡುಗಳೊಳ್ ತಾಗಿದುವದ್ಭುತ ಸ್ತನಿತಮೆಂಬನ್ನಂ ಬೃಹದ್ಬೃಂಹಿತಂ ॥ ೭೬ ॥

ಅಂತು ದಂತಿಘಟೆ ದಂತಿಘಟೆಯೊಳಾಂತು ಮೊಗಮಿಕ್ಕೆಯುಂ ಜೋದರ್ ಜೋದರೊಳೀಸಾಡೆಯುಂ ಮಧ್ಯಮ ನಿಷಾದಿಗಳ್ ಮಧ್ಯಮ ನಿಷಾದಿಗಳೊಳಸಿ ಮುಸಲ ಕಣಾಯ ಕಂಪನ ಮುಸುಂಡಿ ಬಿಂಡಿವಾಳ ವಜ್ರಮುಷ್ಟಿ ಮುದ್ಗರ ಚಕ್ರ ಪರಶು ತೋಮರ ಪಾಶಾಂಕುಶಾದಿ ಶಸ್ತ್ರಾಸ್ತ್ರಂಗಳೊಳೆಚ್ಚುಮಿಟ್ಟುಮಿಜಿದುಂ ಪೊಯ್ದು ಮತಿಭಯಂಕರಾಕಾರಮಾಗೆ ಕಾದುವಾಗಳ್—

ಕಂ ॥ ಕೇತನ ದಂಡಾಹತ ಜೀ
ಮೂತ ಘಟಾ ಪಟಲದಿಂ ರದಾಹತ ಮದವ ॥
ನ್ಮಾತಂಗ ಕುಂಭದಿಂ ರಣ
ಭೂತಲದೊಳ್ ಬಿಜ್ಜುವೊಡನೆ ಮೌಕ್ತಿಕ ಮಣಿಗಳ್ ॥ ೭೭ ॥

ಚ ॥ ಕರಿಘಟೆಯಿರ್ಕೆಲಂಬಿಡಿದು ಕತ್ತಿಗೆಯಂ ಜಡಿಯುತ್ತುಮಂಗ ರ।
ಕ್ಷರ ಪಡೆ ತಾಗೆ ಮಾರ್ಪಡೆಯ ಕತ್ತಿಗೆಯೊಳ್ ಜವನೆರ್ಮೆವೋರಿಯಂ ॥
ತಿರೆ ತಲೆಮಟ್ಟು ತಳ್ತಿಜಿದು ಮೆಯ್ಯುಸದಿಂ ಜವನುಂಡು ಕಾಜಿದಂ।
ತಿರೆ ಕಡಿಖಂಡಮಾಗೆ ಕರಮಾಸುರಮಾದುದು ಸಂಗರಾಂಗಣಂ ॥ ೭೮ ॥

ಕಂ ॥ ಕಾಲ್ಗಾಪಿನ ಬಲ್ಲಣಿಯೊಳ್
ಬಲ್ಗೆಯ್ತುದಿನಿಜಿದು ಮಡಿಯೆ ನೆತ್ತರ ತೊಜಿಗಳ್ ॥

1. ಬಸುಟ್ಟು. ಗ. ಚ. 2. ಕಿಡಿಯುಳ್ಳೊಲಾಗೆ ತಾಗಿ.

ಗಲ್ಗಲನೆ ಪರಿಯೆ ಕರುಳ ಪಿ
ಣಿಲ್ಗಳಿ ತೆಪ್ಪಂಗಳಾಗೆ ತೇಂಕಿದರರಿಬರ್ ॥ ೭೯ ॥

ಮ ॥ ಮಣಿಯೇಱಿಂಗೆ ದಿಶಾಗಜಂ ಪೆಳಱಿ ಕೋಡೇಱಿಂಗೆ ಮಾಱುನೆಗಳ್ ।
ರಣದೊಳ್ ಬೆಂಗುಡೆ ಜೋದರಿಚ್ಚ ಪಲವುಂ ನಾರಾಚದೇಱಿಂಗೆ ಬ ॥
ಲ್ಲಣಿಗಳ್ ಬೆಂಗುಡೆ ಕೇತನ ಪ್ರಚಯದಳ್ಳೇಱಿಂಗೆ ನೋಟ್ಪಿಪ್ಪರೋ ।
ಗಣಮುಂ ದೇವರುಮಳ್ಕಿ ವಾರಣ ರಣಂ ಕಣ್ಗೇನಗುರ್ವಾದುದೋ ॥ ೮೦ ॥

ಚ ॥ ಅಗದೊಳಗಂ ಮೊಗಂಬುಗುವವೋಲ್ ಮದದಾನೆಗಳಾನೆಯೊಳ್ ಮೊಗಂ ।
ಬುಗುತರೆ ದಂತದಂಡ ಹತಿಯಿಂ ಬಿಸುನೆತ್ತರ ಧಾರೆಗಳ್ ಭುಗಿ ।
ಲ್ಲುಗಿಲೆನೆ ಪಾಯ್ದು ಪೊಣ್ಮಿದುವು ಕೋಟ್ಮಿದುಳೊಕ್ಕುವು ಬಲ್ಗರುಳ್ಗಳಿ ।
ರ್ಬಗಿಯೆನೆ ದೋಣಿವಿಟ್ಟುದು[1]ರಮುಳ್ದರಿವಿಟ್ಟುದು ಕುಂಭ ಮಂಡಲಂ ॥ ೮೧ ॥

ಇಭಮಿದಿರಾಗಿ ತನ್ನೊಡನೆ ತಳ್ತೆಱಿದಾಜಿಯೊಳಣ್ಮಿ ಸತ್ತನಂ ।
ಸುಭಟನನಾಗಸಕ್ಕೆ ಪಿಡಿದೆತ್ತಿ ಭಯಂಕರಮಾಗೆ ಮಾರ್ಬಲ ॥
ಕ್ಷುಭಿಮುಖಮಾಗಿ ಕೇಱಿ ಪರಿದತ್ತು ಸುರಪ್ರಮದಾಜನಕ್ಕೆ ದು ।
ರ್ಲಭನೆನಿಸಿರ್ದ ವಲ್ಲಭನನಾಪದದೊಳ್ ಪದೆದೀವ ಮಾಟಕ್ಕಿಯಿಂ ॥ ೮೨ ॥

ಕಂ ॥ ಕರಿಗಳ ಹರಿಗಳ ರಥಿಗಳ
ನರರ ಕಬಂಧಂಗಳೊಡನೆ ಭೂತಗಣಂಗಳ್ ॥
ನೆರೆದಾಡಿದುವದ್ಭುತಮಾ
ಸುರಮಚ್ಚರಿ ರೌದ್ರವಾಗೆ ರಣ ಮಂಡಲದೊಳ್ ॥ ೮೩ ॥

ಅಂತು ಮಾಱುಮಾಂತು ಕಾದಿ ಖಚರ ಚಾತುರ್ದಂತಮಂತಕನ ಪುರಮನೆಯ್ದೆ—

ಕಂ ॥ [2]ಬಲಮಱಿದೊಡಳವುಗಱಿದಾ
ಬಲಿಮುಖ ಬಲವಾಸೆಗೆಯ್ಯೆ ನಳ ನೀಳರ ತೋ ॥
ಳ್ವಲಮಂ ಪೊಗಱಿಸಿದರ್ ದೋ
ರ್ಬಲಮಂ ಹಸ್ತಪ್ರಹಸ್ತರಿರ್ವರಲದಿಂದಂ ॥ ೮೪ ॥

ಅಂತು ವಾನರ ಬಲಮೆಲ್ಲಮೊಲ್ಲನುಲಿದೋಡಿ ನಳ ನೀಳರ ಮಱಿಯಂ ಪುಗುವುದುಂ—

---

1. ಶಿರಂ ಬರಿಕೆರ್ದುದು. ಗ. 2. ಪತ್ಯದ್ಭುತ ತರ. ಚ. 3. ೬.ಲಮಱಿದಿರೆ ಮದ ಮಱಿದಿರೆ. ಗ. ಘ.

ಕಂ ॥ ಇಳೆ ನಡುಗುವಿನಂ ರಥಮಂ
ನಳನ ವರೂಥಕ್ಕೆ ಸೈತುನರಿಯಿಸಿ ಕೋಪಾ ॥
ನಳನುದ್ದಮುರಿಯೆ ಹಸ್ತಂ
ಕೆಳದರ್ದಂತಕನಂತೆ ಕಲುಷ ವಶ ಗತನಾದಂ ॥ ೮೫

ಆಗಿ ನಳನಿರೀಕ್ಷಣದಿನನ್ಯಜನ್ಮ ಜನಿತ ಕ್ರೋಧವತ್ಯದ್ಭುತಮಾಗೆ—

ಕಂ ॥ [1]ತ್ರಸ್ತಾರಿ ಧನುರ್ಜ್ಯಾ ನಿನ
ದ ಸ್ತನಿತಂ ಪೊಣ್ಮೆ ನಳನಮೇಲಾ ಕ್ಷಣದೊಳ್ ॥
ದುಸ್ತರ ತೇಜಂ ಕಱಿದಂ
ಹಸ್ತದ ಮಱೆಯೆನಿಸಿ ಹಸ್ತನಂಬಿನ ಮಱೆಯಂ ॥ ೮೬

ಆಗಳವನ ಶರವರ್ಷಮಂ ನಳಂ ಬಡವಾನಳನಂತೆ ತವಿಸಿ—

ಕಂ ॥ ಪೊಜಿಮುಯ್ವಂತಾಪನ್ನಂ
ಪೆಜಱೆಯಂಬಂ ತೀವಿ ತೊಟ್ಟು ಹಸ್ತನ ತಲೆಯಂ ॥
ಪಜಱೆಯಿಚ್ಚಂ ಸಂಗರದೊಳ್
ಮಜುವಕ್ಕಂ ನಳನ ಕಣೆಗೆ ಮಣಿಯದುದುಂಟೀ ॥ ೮೭

ಅಂತು ಹಸ್ತನಸ್ತಮಿಸುವುದುಂ ಪ್ರಹಸ್ತನತಿ ಕುಪಿತನಾಗಿ ನಿಜ ವರೂಥಮಂ ನಳನ ವರೂಥಕ್ಕದಿರದಿದಿರಂ ಪರಿಯಿಸುವುದುಮಾ ಸಮಯದೊಳ್ ನೀಲಂ ನೀಲ ಮೇಘದಂತೆ ಗರ್ಜಿಸಿ ನಳನಂ ಪೆಜಗಿಕ್ಕಿ ನಿಲ್ವುದುಂ—

ಕಂ ॥ [2]ಎಂತು ಪೆಜಗಿಕ್ಕಿ ನಳನಂ
ನೀಂ [3]ತಱಿಸಂದಾಂತೆ ಬಲ್ಪುಗಿಡದಣ್ಮಣ್ಮೆಂ ॥
ದಂತಕನೆ ಮಸಗಿ ಮೇಲೆ
ಟ್ಟಿಂತೆವೊಲಿರ್ದಂ ಪ್ರಹಸ್ತನಪ್ರತಿಮ ಬಲಂ ॥ ೮೮

ಅಂತು ನೆರೆದು ನಿಂದು—

ಕಂ ॥ ಪಾಜುಂಬಳೆಯಿಂದಿಡೆ ಜವ
ಮಾಜಿದೆ ಕಡುವೇಗದಿಂದವೆಯ್ತರ್ಪುದುಮು ॥
ಯ್ದಾಜು ಕಡಿವೋಗಲೆಚ್ಚಂ
ಮಾಜಾಂಪುದು ಮೊಗ್ಗಿ ನಳನುಮಂ ನೀಲನುಮಂ ॥ ೮೯

1. ಪ್ರಸ್ತರಿತ. ಗ. 2. ಆಂತು. ಚ. 3. ತಱಿಸಂದಂತೆ. ಜ.

ಅಂತವನ ನಚ್ಚಿನ ಕೈದುವಂ ಕಡಿಖಂಡಮಾಗೆಚ್ಚು—

ಮ ॥ ಮೊನೆಯಂಬಂ ದೊಣೆಯಿಂದಮುರ್ಚಿ ತಿರುವಾಯೊಳ್ ಸಾರ್ಚಿ ಬೇಗಂ ಪ್ರಹ।
ಸ್ತನ ವಕ್ಷಸ್ಸ್ಥಲಮುಂ ಕರುತ್ತಿಸುವುದುಂ ಕಾಲಾಹಿವೊಲ್ ಕೊಂಡು ತೊ॥
ಟ್ಟನೆ ಬಿನ್ನಂ ಪೊಱಮಟ್ಟು ಪೋಗೆ ಸರಲಿಂ ಮುಂ ಪೋದುದಾಯುಃಪ್ರಭಂ।
ಜನಮೆಂದಂದಿದಿರಾಂಪರಾರ್ ವಿಜಯಲಕ್ಷ್ಮೀ ಲೋಲನಂ ನೀಲನಂ ॥೯೦॥

ಅಂತು ಹಸ್ತಪ್ರಹಸ್ತರಸ್ತಮಿಸೆ—

ಕಂ ॥ ಕಾವೆಂ ನಳನೀಳರ್ ಕೊಲೆ
ಸಾವ ದಶಾನನನ ಬಲಮನಿಂದಿಂಗೆಂಬಂ ॥
ತಾವೃತ ಸಾಂಧ್ಯ ದ್ಯುತಿ ರಾ
ಜೀವ ಸಖಂ ಪಶ್ಚಿಮಾಬ್ಧಿಯೊಳ್ ಮೆಯ್ಗರೆದಂ ॥೯೧॥

ಅಂತು ನೇಸಱುಪಡುವುದುಮುಭಯ ಬಲಮುಪಹಾರ ತೂರ್ಯಮಂ ಪೊಯಿಸಿ ತಂತಮ್ಮ ಬೀಡಿಂಗೆ ಪೋಗಿ ಸಮರ ಪರಿಶ್ರಮವನಾಱಿಸುತ್ತೋಲಗಂಗೊಟ್ಟಪ್ಪುದುಮಾ ಸಮಯದೊಳ್—

ಮ ॥ ನಳನೀಳರ್ ಭುಜ ವೀರ್ಯಮಂ ಮೆಱೆದುದಂ ಹಸ್ತಪ್ರಹಸ್ತರ್ ದ್ವಿಷ।
ದ್ಬಳಮಲ್ಲಾಡುವಿನಂ ಕರುತ್ತಿಱಿದು ದೇವಸ್ತ್ರೀಯರುತ್ಸಂಗ ಮಂ॥
ಗಳ ಪೀಠಸ್ಥಿತರಾದುದಂ ನೆರೆದು ಚಾತುರ್ದಂತಮುಂ ಕಾದಿ ಮು।
ಣ್ಮಾಟಿಯಾದಂದಮುಮುಂ ತಗುಳ್ಪು ಪೊಗಟುತ್ತಿರ್ದರ್ ಕೆಲರ್ ಖೇಚರರ್॥೯೨॥

ಅದಲ್ಲದೆಯುಂ—

ಚ ॥ ಕೆಲರ್ಗನುಲೇಪನಮುಂ ಕೆಲರ್ಗೆ ಭೂಷಣಮುಂ ಕೆಲರ್ಗಾಯುಧಂಗಳಂ।
ಕೆಲರ್ಗೆ ತನುತ್ರಮುಂ ಕೆಲರ್ಗೆ ವಾಜಿಗಳಂ ಕೆಲರ್ಗುನ್ಮದೇಭಮಂ॥
ಕೆಲರ್ಗೆ ವರೂಥಮುಂ ತಡೆಯದಟ್ಟುವ ದಂದುಗದಿಂದಮಂದು [1]ಕಾ।
ಣಲೆ ಬೆಳಗಾದುದಿರ್ವಲದ ನಾಯಕರ್ಗಂ ಕದನಾನುರಾಗದಿಂ ॥೯೩॥

ಅನಂತರಂ—

ಕಂ ॥ ಕದನ ರಸಾಸ್ವಾದನ ಲೋ
ಭದಿನೆರಡುಂ ಪಡೆಯುವೊಡನೆ ಪಾರ್ದಿರ್ದಪುವೆ॥
ನ್ನುದಯಮನಾನಿಂ ತಡೆದಿ
ಪ್ಪುದು ಪದನಲ್ತೆಂದು ದಿನಪನುದಯಂಗೆಯ್ದಂ ॥೯೪॥

1. ಕಣ್ಣಲಿ. ಗ. ಘ.

ಚ ॥ ಜವನಿಕೆಯಂ ನಿಶಾಚರ [1]ಕಬಂಧಮನಾಡಿಸಲಂಧಕಾರಮಂ ।
ರವಿ ಕಳೆದಿಕ್ಕೆ ತನ್ನ ಕರಪಲ್ಲವದಿಂದುಸೆ ಪಿಂಗೆ ಪಣ್ಣಿ ಬಂ ॥
ದುವು ಕರಿ ಕೇಱಿಬಂದುವು ಹಯಂ ರಣಭೂಮಿಗೆ ತೇರ್ ತೆರಳ್ದು ಬಂ ।
ದುವು ತಱಿಸಂದು ಬಂದುವು ಕಡಂಗಿ ಧನುರ್ಬಲಮಿರ್ವಲಂಗಳೊಳ್ ॥೯೫॥

ಅಂತು ಬಂದು ಕೈವೀಸುವುದುಂ—

ಕಂ ॥ ಅಂತುಭಯ ಬಲದ ಚಾತು
ರ್ದಂತಂ ಪೇಸೇಟಿ ಕಾದಿ ದೆಸೆವಲಿಗುಡಲೆಂ ॥
ದಂತಕ[2]ನಡುವುಟ್ಟಿಯನ
ಟ್ಟಂತಿರೆ ಕಡಿಖಂಡಮಾಯ್ತು ರಣ ಮಂಡಲದೊಳ್ ॥ ೯೬ ॥

ಆ ಸಮಯದೊಳ್ ಸಂಗ್ರಾಮ ರಸ ರಸಿಕರಾಗಿ—

ಕಂ ॥ ಮಾರೀಚ ಸಿಂಹ ಕಟಿಗಳ್
ಚಾರಣ ಶುಕ ಮಕರ ವಿಘ್ನ ಶರಪಂಜರ ಗಂ ॥
ಭೀರ ಮದನಾಂಕುಶರ್ ಸಮ
ರಾರಂಭದೊಳಿರ್ದರುಜಿದೆ ವಜ್ರಪ್ರಮುಖರ್ ॥ ೯೭ ॥

ಅಂತಿರ್ದ ಪೌಲಸ್ತ್ಯನ ಪದಿಂಬರ್ ಸಾಮಂತರೊಳಂ ಪ್ರಭಾಮಂಡಲನ ಸಾಮಂತರ್ ಸಂತಾಪನುಂ ಪ್ರಥಿತನುಂ ನಂದನನುಂ ಉದ್ಧತನುಂ ಮಹೋದಧಿಯುಂ ಉದ್ದಾಮಕೀರ್ತಿಯುಂ ವಿಘಟನುಂ ಉದ್ದಾಮನುಂ ಗಜನುಂ ದುರಿತಾಸ್ತ್ರನುಮೆಂಬ ಪದಿಂಬರುಮೋರೊರ್ವರಿಂ ಗಱಿಸನ್ನೆಗೆಯ್ದು ಕಾದುವಲ್ಲಿ—

ಕಂ ॥ ಸಂತಾಪನಂ ವಿರೋಧಿಗೆ
ಸಂತಾಪಮನುಂಟುಮಾಪ್ಪಿ ಬಲ್ಲಾಳಂ ಕ ॥
ಲ್ಪಾಂತ ಕೃತಾಂತನವೊಲ್ ಕೊಂ
ದಂ ತಲ್ಲಳಿಪಂತು ಮಾರ್ಬಲಂ ಮಾರೀಚಂ ॥ ೯೮ ॥

ಉ ॥ ರಾವಣಸೇನೆ ಬಾಜಿಸೆ ಜಯಾನಕಮಂ ರಘುರಾಮ ಸೇನೆಯೊಳ್ ।
ತೀವೆ ಭಯಾನಕಂ ಗಗನ ಮಂಡಲಮಂ ನಿಜ ಚಾಪ ಟಂಕೃತಂ ॥
ಮೂವಳಸಾಗೆ ಮುತ್ತೆ ಮಕರಂ ಬಡವಾಮುಖದನ್ನಮಪ್ಪ ಬಾ ।
ಣಾವಳಿಯಿಂ ಮಹೋದಧಿಯ ಜೀವನಮಂ ತವುವನ್ನವಿಾಂಟಿದಂ ॥ ೯೯ ॥

---

1. ಕದಂಬ. ಚ. 2. ನಡೆ. ಗ.

ಕಂ ॥ ಉದ್ದಾಮನ ಪಂದಲೆ ಪಜೆ
ದುದ್ದಂಪಾಜುವಿನಮಿಸುವುದುಂ ಗಂಭೀರಂ ॥
ಬದ್ದವಣದ ಪಜೆಗಳ್ ಕೆವಿ
ಸದ್ದಂಗಿಡೆ ಪೊಯ್ದುವಿಂದ್ರವೈರಿಯ ಪಡೆಯೊಳ್ ॥ ೧೦೦ ॥

ಸಿಂಹಕಟಿ ರಿಪು ಮದದ್ವಿಪ
ಸಿಂಹಂ ಪ್ರಥಿತನನಜೇಯ ಬಾಹಾಬಲನಂ ॥
ಸಂಹರಿಸಿದಂ ದಶಾಸ್ಯನ
ಸಿಂಹಾಸಂದಿಯನಸಂಚಲಂಮಾಡುವವೋಲ್ ॥ ೧೦೧ ॥

ಅಂತು ನಿಜವರೂಥಿನಿಯ ನಾಲ್ವರುಂ ಮಹಾಸಾಮಂತರಂತಕ ಜಠರಾಗ್ನಿ ಗಾಹುತಿಯಪ್ಪುದುಂ ಘೃತಾಹುತಿವಡೆದ ಹುತವಹನಂತುಲಿದ ಸಾಮಂತರತಿಕುಪಿತರಾಗಿ ರಾವಣನ ವರೂಥಿನಿಯಂ ಗಱಿಸನ್ನೆಗೆಯ್ದು ಲಯ ಸಮಯದ ಭೈರವನ ಭೀಕರಾಕಾರಮನಪ್ಪುಕೆಯ್ದು ಕಡುಕೆಯ್ದು ಕಾದುವಲ್ಲಿ—

ಮ॥ಸ್ರ॥ ಎರಡುಂ ತೇರೊಂದನೊಂದೆಯ್ತರೆ ನಡುಗೆ ನೆಲಂ ನೇಮಿ ಸಂಘಟ್ಟದಿಂದಂ।
ಬರದೊಳ್ ಮತ್ತೇಭ ಸಿಂಹ ಧ್ವಜಮಭಿನಯಮುಂ ಬೀಜೆ ಕೋದಂಡ
ಟಂಕಾ ॥
ರ ರವಂ ಕೈಗಣ್ಮೆ ಸಾರ್ತಂದಿಸೆ ದಶಮುಖ ಸಾಮಂತನಂ ವಿಘ್ನನಂ ತೋ।
ಮರದಿಂದುದ್ದಾಮನಿಟ್ಟಂ ಬಿಡೆ ಕಡುನೆಱನಂ ನಟ್ಟು ತೂಗಾಡುವನ್ನಂ ॥೧೦೨॥

ಕಂ ॥ ಇಡೆ ವಜ್ರಿ ವಜ್ರ ಹತಿಯಿಂ
ಕೆಡೆದ ಕುಲಾಚಲದ ಮಾಟಿಕೆಯಿಂದಂ ವಿಘ್ನಂ ॥
ಕೆಡೆದಂ ತೋಮರ ಹತಿಯಿಂ
ದೊಡನುಣ್ಮೆ ಜಯಾನಕ ಸ್ವನಂ ಕಪಿಬಲದೊಳ್ ॥ ೧೦೩ ॥

ದನುಜೇಂದ್ರನ ಸೇನೆಯ ವ
ಜ್ರನ ದೋರ್ದಂಡಂಗಳಂ ಕುಠಾರಾಯುಧದಿಂ ॥
ಮನುಜೇಂದ್ರನ ಸೇನೆಯ ವಿಘ
ಟನಾಜಿಯೊಳ್ ಪೋಡುಗಾಱನಂತಿರೆ ತಱಿದಂ ॥ ೧೦೪ ॥

ಆ ರಣರಂಗದೊಳುನ್ಮದ
ವಾರಣಮಜಗರಮನಿಕ್ಕುವಂತವಯವದಿಂ ॥
ಚಾರಣನಂ ಕೊಂದಿಕ್ಕಿದ
ನಾರಳವುದ್ಧತನವಾರ್ಯ ಬಾಹಾವೀರ್ಯಂ ॥ ೧೦೫ ॥

ಕಂ॥ ಎಡೆವಲಿಗುಡಲೆಂದಂತಕ
ನಡುವುಟ್ಟಿಯನಟ್ಟ ತೆಜದೆ ತಾರುಂತಟ್ಟುಂ ॥
ಗೆಡೆದಿರೆ ರಣದೊಳ್ ಮತ್ತಂ
ಕಡಿಖಂಡಮದಾಯ್ತು ನೋಡೆ ರಣಮಂಡಲದೊಳ್ ॥ ೧೦೬ ॥*

ಶುಕನಂ ದುರಿತಾಸ್ತ್ರಂ ಕೆಂ
ಶುಕ ವಿಟಪಿಯನಳುರ್ವ ದಾವ ಪಾವಕನಂತಂ ॥
ತಕ ಹೋಮಕುಂಡದೊಳ್ ನೂಂ
ಕೆ ಕಂಡು ಕಾಲಾಗ್ನಿಯಂತೆ ರಾವಣನುರಿದಂ ॥ ೧೦೭ ॥

ಶರ ಪಂಜರನಂ ಯಮ ಕುಂ
ಜರಕ್ಕೆ ಕಡಿಕೊಂಬುಮಾಡಿ ಕಡಿಖಂಡಮೆನಲ್ ॥
ಕರವಾಳಿಂ ನಂದನನಾ
ಜಿರಂಗದೊಳ್ ಪೊಯ್ಯೆ ಪೊಯ್ಪುವುತ್ಸವ ಪಟಹಂ ॥ ೧೦೮ ॥

ಗಜರಿಪು ನಖರ ಪ್ರಕರದೆ
ಗಜಮುಂ ಸೀಳ್ವೊಟ್ಟುವಂತೆ ಮದನಾಂಕುಶನಾ ॥
ತ್ಮ ಜಯಾಸಿಯಿಂದೆ ಕೊಂದಂ
ಗಜನಂ [1] ರಾವಣನ ಸೇನೆ ಸುಗಿದುಗಿವಿನೆಗಂ ॥ ೧೦೯ ॥

ಅಂತೆರಬ್ಬಲಮುಮೊಟ್ಟಜೆಗಿಡದೆ ತಳ್ತಿಜ್ಜಿದು ಪಾಳಿಯನಸಕಟ್ಟಿಯಪಟ್ಟಿಯೆ–

ಉ॥ ಚಂಡ ಪರಾಕ್ರಮರ್ ದನುಜ ನಾಯಕರುಂ ರಣ ರಾಗದಿಂ ಪ್ರಭಾ ।
ಮಂಡಲ ಮುಖ್ಯ ನಾಯಕರುಮೊರ್ವರೊಳೊರ್ವರಿದಿರ್ಚುವಂದದಂ ॥
ಕಂಡು ಕೃಪಾಳು ಮಾಣಿಸುವೆನಿಂದಿನ ಯುದ್ಧಮನೆಂಬ ಮಾಟಿಕ್ಕಿಯಿಂ ।
ಚಂಡಮರೀಚಿ ಪಶ್ಚಿಮ ಪಯೋಧಿಯೊಳೊಯ್ಯನೆ ಮೆಯ್ಯಸಿಕ್ಕಿದಂ ॥ ೧೧೦ ॥

ಅಂತು ನೇಸರ್ ಪಡುವುದುಂ—

ಕಂ ॥ ಅಪಹಾರ ತೂರ್ಯಮುಂ ಪೊಯಿ
ಸಿ ಪಡೆಗಳೆರಡುಂ ರಣೋರ್ವಿಯಿಂದಂ ತಂತ ॥
ಮ್ಮ ಪುರಕ್ಕೆ ವೋದುವಾನಕ
ವಿಪುಲ ರವಂ ಗಗನ ವಿವರಮುಂ ತೀವುವಿನಂ ॥ ೧೧೧ ॥

* ಈ ಪದ್ಯವು ಗ ಪುಸ್ತಕದಲ್ಲಿ ಮಾತ್ರ ಇದೆ. 1. ರಾಘವನ ಸೇನೆ ಸುಗಿದುಗುವಿನೆಗಂ. ಘ.

ಅಂತು ಬೀಡಿಂಗೆ ಪೋಗಿ ಸಂಗ್ರಾಮ ಸಂರಂಭದೊಳುಭಯಬಲಮು ಮಿ ರ್ಪಿನಂ—

ಕಂ ॥ ಮತ್ಕುಲನ ವಿಜಯ ನಾಟ್ಯ ಚ
ಮತ್ಕೃತಿಯಂ ನೋಡಿ ಕಣ್ಗಳಂ ತಣಿಪುವೆನೆಂ ॥
ಬುತ್ಕಂಠತೆಯಿಂದುದಯ ಕು
ಭೃತ್ಕೂಟಮನೇಜ್ಯದಂತಿರನನುದಯಿಸಿದಂ ॥ ೧೧೩ ॥

ಅಂತು ದಿನಪೋದಯಮುಪ್ಪುದುಂ ಪೂರ್ವಕ್ರಮದೊಳುಭಯ ವಾಹಿನಿಯುಂ ರಣಭೂಮಿಗೆ ಬಂದೊಡ್ಡಿನಿಲ್ಲ್ವುದುಂ ದಶಾನನ ಸೇನಾಪತಿಗಳಪ್ಪ ಕುಂಭ ನಿಕುಂಭ ಶಂಭು ಸ್ವಯಂಭು ಚಂಡ ಪ್ರಚಂಡ ಕುಂಡಲ ಹಲಾಹಲ ಪುಷ್ಪಚೂಲ ಧೂಮ ರಾಕ್ಷಸ ಸಂಧ್ಯಾಕ್ಷ ಬಿಂದುಮಾಲಿ ಭೀಮ ಭೀಷಣ ಧವಳಕೇತಿ ವಿಕ್ರಮ ವಿದ್ಯು ಜ್ಜಿಹ್ವ ಸೌಮ್ಯಾನನ ಶಾರ್ದೂಲ ಪ್ರಮುಖರನೇಕರೊಡ್ಡಿ ನಿಲ್ಲ್ವುದುಂ—

ಕಂ ॥ ಮನುವಂಶ ಲಲಾಮನ ರಾ
ಮನ ಮುಂದೆ ಪೊಡರ್ಪುದೋರ್ಪ ಸೈಪೆಮಗಾದ ॥
ತ್ತೆನಃತುಂ ಖೇಚರ ಪಲ್ಲಭ
ರನೇಕರೊದವಿದ ರಣಾನುರಾಗದಿನಿರ್ದರ್ ॥ ೧೧೪ ॥

ಅಂತುದಾತ್ತ ರಾಘವನೊಳ್ ಮಿತ್ರಭಾವದಿಂ ಕೂಡಿದ ವಿದ್ಯಾಧರರಪ್ಪ ಚಂದ್ರಾಭ ಚಂದ್ರಮಾಲಿ ರತಿವರ್ಧನ ಸಿಂಹರಥ ಮೇಘವಾಹನ ಭೀಮು[1]ರವ ಕುಮು ದಾವರ್ತ ಸುಷೇಣ ಜಯಮಿತ್ರ ಮಾನಾರ್ಹ ಮಹೇಂದ್ರ ಮೇಘಪರ್ವತ ಸರ್ವಪ್ರಿಯ ತರಂಗ ತರಲ ಚಪಲಾವೇಗ ವಿದ್ಯುತ್ಪರ್ಣ ಜಯ ವಿಜಯರೆಂಬ ರಣಪ್ರಣಯಿಗಳ್ ತಮತಮಗೆ ಸಮ ಕಕ್ಷರಪ್ಪ ವಿದ್ಯಾಧರ ಪ್ರತಿನಾಯಕರೋರೊರ್ವರೊಳಗುರ್ವು ಮದ್ಭುತಮುಮಾಗೆ ಕಾದುವಲ್ಲಿ—

ಚ ॥ ಉಡಿವ ರಥಂಗಳಿಂ ಮಡಿವ ವಾಜಿಗಳಿಂ ಕಡಿಖಂಡಮಪ್ಪೆರ ।
ಪ್ಪಡೆಯ ಪದಾತಿಯಿಂ ಕೆಡೆವ ವಾರಣದಿಂ ಕುಣಿವಟ್ಟಿಗಾರ್ವ ಬೊ ॥
ಬ್ಬಿಡುವ ಮರುಳ್ಗಳಿಂ ಪರಿವ ಲೋಹಿತದಿಂ ಪರಿದಂಬರಕ್ಕೆ ಧಿಂ ।
ಕಿಡುವ ಶಿರಂಗಳಿಂದತಿ ಭಯಂಕರಮಾದುದು ಸಂಗರಾಂಗಣಂ ॥ ೧೧೫ ॥

ಕಂ ॥ ಪಲವುಂ ದಿನಮಿಂತೆರಡುಂ
ಬಲದ ಮಹಾಬಲ ಪರಾಕ್ರಮರ್ ಕಾದಿ ಮನೋ ॥

1. ರಥ. ಗ.

ಬಲದ ಭುಜಬಲದ ವಿದ್ಯಾ
ಬಲದಳವಂ ನೆಜಱಿಯೆ ಮೆಜ್ಜಿದು ಪಣ್ಮಾಟಿಯಾದರ್ ॥ ೧೧೫ ॥

ಅಂತವರನುದಿನಮನುವರದೊಳಣ್ಮಿ ಕಾದುತ್ತುಮಿರ್ದೊಂದು ದಿವಸಂ—

ಕಂ ॥ ದಾವ ದಹನಕ್ಕೆ ವನ್ಯ ಮೃ
ಗಾವಲಿ ಬೆಂಗುಡುವ ಮಾಟ್ಕೆಯಿಂ ಬೆಂಗುಡೆ ಸು ॥
ಗ್ರೀವನ ಪಡೆ ಸೆಡೆದು ದಶ
ಗ್ರೀವನ ಪೆರ್ವಡೆಗಗುರ್ವುವಡೆದುದು ಸಮರಂ ॥ ೧೧೬ ॥

ಆ ಸಮಯದೊಳ್ ನಿಜ ವರೂಥಿನಿಯಂ ಪೆಜಗಿಕ್ಕೆ—

ಕಂ ॥ ತ್ರಿಪತಾಕೆ ನಿಟಲ ತಟದೊಳ್
ಕಪಿಧ್ವಜಂ ಗಗನ ತಲದೊಳರ್ವಿಸೆ ಕೆಸ್ಕಿಂ ॥
ಧ ಪುರಾಧಿಪನುಜದಿಜ್ಞಯಲ್
ವಿಪಕ್ಷಮಂ ರಥಮನೇಱಿದಂ ಸುಗ್ರೀವಂ ॥ ೧೧೭ ॥

ಅಂತು ರಥಾರೂಢನಾಗಿ ಕಾದಲ್ ಕಡಂಗಿ ಬರ್ಪುದುಂ—

ಕಂ ॥ ಬಾರಿಸಿ ಸುಗ್ರೀವನನು
ಗ್ಗಾರಾತಿ ಬಲಕ್ಕೆ ಲಯಮನೊಡರಿಪ ಬಗೆಯಿಂ ॥
ಮಾರುತಿ ಕರಿಯಿಂ ಪೂಡಿದ
ತೇರಂ ಜವನೇಱುವಂತಿರೇಱಿದನಾಗಳ್ ॥ ೧೧೮ ॥

ದ್ರು॥ವಿ॥ ಮಿಳಿರ್ದು ಮಿಳ್ಪಿಸೆ ವಾನರ ಕೇತನಂ ।
ಪ್ರಳಯ ಕಾಲದ ಮಾರಿಯ ಮೂರಿಯಂ ॥
ತಳೆದು ಮಾರುತಿ ಯೇಱಿದ ತೇರದೇಂ ।
ತಳರ್ದುದೋ ಧರೆ ಕಂಪಿಸುವನ್ನೆಗಂ ॥ ೧೧೯ ॥

ಅಂತು ತಳರ್ದು ಪವಮಾನ ತನೂಭವಂ ಮನಃಪವನ ವೇಗದಿಂ ಕುಂಭ ಕರ್ಣನ ತನೂಭವರಪ್ಪ ಮಾಲಿ ಜಂಬುಮಾಲಿಗಳ ಬಲಮನಳಱಿ ತಾಗುವುದುಂ--

ಶಾ ॥ ಜ್ಯಾ ರಾವಕ್ಕಗಿದಳ್ಕಿ ಬಳ್ಕಿ ದಿಗಿಭಂ ಕೋದಂಡದೊಳ್ ಪೂಡಿಕೊಂ ।
ಡಾರುತ್ತುಂ ನಿಶಿತಾಸ್ತ್ರದಿಂದಿಸೆ ಹನೂಮಂತಂ ದ್ವಿಷತ್ಸೈನೆಯೊಳ್ ॥

ಪೇರಾಳುಂ ತುರಗಂ[1]ಗಳುಂ ರಥಮುಮುನ್ಮತ್ತೇಭಮುಂ ಬಿಟ್ಟುವಾರ್ ।
ವೀರಾಗ್ರೇಸರನಪ್ಪ ಮಾರುತಿಯ ದಿವ್ಯಾಸ್ತ್ರಕ್ಕೆ ಮೆಯ್ಸಾರ್ಚುವರ್ ॥ ೧೮೦ ॥

ಮ ॥ ಪವಮಾನ ಪ್ರಿಯನಂದನಂ ಚರಮ ದೇಹಂ ದೇಹಮಂ ಕೈದುಮು ।
ರ್ಚವು ವಿದ್ಯಾಪರಮೇಶ್ವರಂ ಗಜ ರಥಾರೂಢಂ ಮಹಾ ಧನ್ವಿ ಕಾ ॥
ದುವರಾರಾತನನಂತವೀರ್ಯನಿದಿರೊಳ್ ಮಾಱುಾಂಪುದುಂ ಕೊಂದನಾ ।
ಹವದೊಳ್ ಮಾಲಿಯ ಜಂಬುಮಾಲಿಯ ಮಹಾ ಸಾಮಂತ ಸಂದೋಹ
ಮಂ ॥ ೧೮೧ ॥

ಕಂ ॥ [2]ಜವನೆರ್ದೆ ಬಿರ್ಚಿದುದೆನೆ ದಾ
ನವ ಸೇನೆಗೆ ವಿಲಯ ಸಮಯಮಿಾ ಸಮಯದೆ ಸಂ ॥
ಭವಿಸಿದುದೆನೆ ತವೆ ಕೊಂದಂ
ಪವಮಾನ ಸುತಂಗೆ ಸಂಗರಕ್ಕಿದಿರುಂಟೇ ॥ ೧೮೨ ॥

ಅಂತು ಜಯಜಯಾರಾವದೊಡನೆ ಜಯಜಾಯಾ ರಮಣನಪ್ಪ ಮಾರುತಿ ನಿಜ ನಿಶಿತ ಶರಾಸಾರದಿಂ ತನ್ನ ಸೇನಾ ಕೃಶಾನು ಜ್ವಾಲಾ ಕಲಾಪಮನದಿರ್ದೆ ವಿಲಯ ಸಮಯ ಜ್ವಾಲೆಯಂತೆ ಮಾಲಿ ತಿಣ್ಣಮುರಿದು ನಿಜ ವರೂಥಮಂ ಮಾರುತಿಯ ರಥಕ್ಕೆ ಸೈತುವರಿಯಿಸೆ—

ಕಂ ॥ ಬಿಸಿಲೆಸಕಂಗಿಡೆ ಕಟ್ಟಿಲೆ
ಪಸರಿಸೆ ಮಾರುತಿಯ ತೇರ ಗಜ ಮಸ್ತಕದಿಂ ॥
ಪೊಸಮುತ್ತುಗಳುಗೆ ಕೈಮಿಗೆ
ಬಿಸುನೆತ್ತರ್ ಮಾಲಿ ಕಜಿದನಂಬಿನ ಮಜಿಯಂ ॥ ೧೮೩ ॥

ಅಂತು ಮಾರುತಿಯ ರಥಮಂ ವಿಸುಕಲೀಯದಿಸುವುದುಂ—

ಕಂ ॥ ಸ್ಯಂದನ ಬಂಧನಮಂ ಮಾ
ಟ್ಪಿಂ ದಲಿವಂ ನಮಗಮೆಂದು ಮಾರುತಿ ಮುಳಿದಂ ॥
ಬಿಂದಂ ಖಂಡಿಸಿ ಪೆಜ
ತೊಂದಂಬಿಂದವನ ತಲೆಯುಮಂ ಪಜಿಯೆಚ್ಚಂ ॥ ೧೮೪ ॥

ಅಂತು ಮಾಲಿಯ ತಲೆ ಪಜಿದು ನೆಲಕ್ಕೆ ಬೀಟ್ಟುವುದುಂ—

ಪೃಥ್ವಿ॥ನಿಜಾಗ್ರಜನ ಸಾವು ಬೇವಸಮನಗ್ಗಳಂ ಮಾಟ್ಟುವುದುಂ ।
ಗಜಾರಿ ಘನ ಗರ್ಜನಕ್ಕೆ ಕಡುಕೆಯ್ದು ಮೆಲ್ವಾಯ್ವವೋ ॥

---

1. ರಥ ಶಲವ ಮುತ್ತೇಭಂಗಳುಂ. ಗ. 2. ಜವನೆರೆ ಬರ್ಚಿದುದೆನೆ. ಗ. ಚ.

ಲಜೀಯಬಲ ಜಂಬುಮಾಲಿ ಗದೆಗೊಂಡು ಮೇಲ್ವಾಯ್ದುದುಂ।
ಭುಜಾಸಿಯೊಳೆ [1]ಕೊಂದನಂದವನುಮಂ ಮರುನ್ನಂದನಂ ॥ ೧೫೫ ॥

ಅಂತು ಜಂಬುಮಾಲಿಯಂ ಕೊಂದು ಮುಂದೆ ಧವಳ ಛತ್ರ ಚಾಮರ ಪಾಳಿ ಧ್ವಜ ಶಂಖ ಕಾಹಳ ಪ್ರಮುಖ ರಾಜ್ಯಚಿಹ್ನಂಗಳ್ವೆರಸು ಹಸ್ತ್ಯಶ್ವ ರಥ ಪದಾತಿ ಬಲದಿಂ ವಿದ್ಯಾಧರಾಧಿರಾಜರಿಂ ಪರಿವೃತನಾಗಿರ್ದ ದಶಮುಖನಂ ವಲಿಮುಖ ಧ್ವಜಂ ಕಂಡು—

ಕಂ ॥ ದೊರೆವೆತ್ತ ಸಮರವಿಾಗಳ್
ದೊರೆಕೊಂಡತ್ತೆಂದು ತನ್ನ ರಥಮುಂ ಲಂಕೇ ॥
ಶ್ವರನಿರ್ದೊಡ್ಡಣದತ್ತಲ್
ಪರಿಯಿಸಿದನಿದೇಂ [2]ಪ್ರತಾಪಿಯೋ ಪವನಸುತಂ ॥ ೧೫೬ ॥

ಅಂತು ಪರಿಯಿಸೆ ರಕ್ಕಸವಡೆ ತಕ್ಕುಗೆಟ್ಟು ತಲ್ಲಳಿಸುವಂತೊಟ್ಟೈಸಿ ಕಾದುತ್ತುಂ ಬರ್ಪ ವಲಿಮುಖ ಧ್ವಜನಂ ದಶಮುಖಂ ಕಂಡು ಕಡುಮುಳಿದು ಕಾದಲ್ ಬಗೆಯೆ ಮಯ ತನೂಜರಪ್ಪ ಮಹೋದರ ವಜ್ರೋದರರ್ ದಶಾಸ್ಯನ ಸ್ಯಂದನ ಕ್ಕಡ್ಡಂಬಂದು ಕಾಳಿಗಮಂ ಕೈಕೊಂಡು ಮಹೋದರನಂಗದನೊಳಂ ವಜ್ರೋದರಂ ಹನುಮಂತನೊಳಂ ಸಾಮಾನ್ಯಾಸ್ತ್ರದೊಳಂ ದಿವ್ಯಾಸ್ತ್ರದೊಳಂ ಪಿರಿದುಪೊಟ್ಟು ಕಾದೆ—

ಕಂ ॥ ಅಂಗದನ ಕಣೆ ಮಹೋದರ
ನಂಗದ ಲೋಹಿತಮನೀಂಟೆ ಪಿಂಗೆ ದಶ ಪ್ರಾ ॥
ಣಂಗಳುಮೇಂ ಪಡೆದನೊ ದಿವಿ
ಜಾಂಗನೆಯರ ಪೀವರ ಸ್ತನಾಲಿಂಗನಮಂ ॥ ೧೫೭ ॥

ಅಂತು ಮಹೋದರನಂ ಯವೋದರಮನಂಗದಂ ಪುಗಿಸೆ ತಾನುಮತಿ ಕುಪಿತನಾಗಿ—

ಮ॥ಸ್ರ॥ತಿರುವಾಯೊಳ್ ತೊಟ್ಟು ದಿವ್ಯಾಸ್ತ್ರಮನಿಸೆ ಹನುಮಂ ಸಾಯಕಂ ನಾಂಟೆ ವಜ್ರೋ ।
ದರ ವಕ್ಷೋಭಾಗಮಂ ಬೆಂಗಲಗುಬಳೆಯೆ ಕರ್ನೆತ್ತರಿರ್ಮೆಯ್ಯೊಳಂ ಪಾ ॥
ಯ್ತರೆ ಜೀವಂಬಿಟ್ಟು ಬಾಯಂ ನಯನ ಯುಗಳಮಂ ಬಿಟ್ಟು ಕರ್ವೆಟ್ಟು ಬೀಟ್ವಿಂ ।
ತಿರೆ ಬಿದ್ದಂ ಭೂಮಿಯೊಳ್ ರಾವಣಭುಜ ವಿಜಯಶ್ರೀಯುಮಲ್ಲಾಡುವನ್ನಂ ॥ ೧೫೮ ॥

---

1. ಪೊಯ್ದು ಕೊಂದನವನಂ. ಚ. 2. ಪ್ರಚಂಡನೋ ಹನುಮಂತಂ. ಗ.

ಅಂತು ವಜ್ರೋದರಂ ಸುರ ಸುಂದರೀ ವಿಮಾನೋದರಮನಲಂಕರಿಸೆ—

ಕಂ ॥ ದವ ದಹನಂ ಕಾನನಮಂ
ತವಿಪಂತಿರೆ ಬಾಡವಾನಲಂ ವಾರಿಧಿಯಂ ॥
ತವಿಪಂತಿರೆ ಪವನ ಸುತಂ
ತವಿಸಿದನಗಣಿತಮೆನಿಪ್ಪ ದಾನವ ಬಲಮಂ ॥ ೧೪೯ ॥

ಅಣುವನ [1]ಕೂರ್ಗಣೆಗಳ್ ನಡೆ
ಪೆಣಮುಯವಮಾದತ್ತು ಮೇಱೆ ಪವಣಿಲ್ಲದ ರಾ ॥
ವಣವಡೆ ಪರ್ವಿದ ಮರ್ವಾ
ಕ್ಷಣದೊಳೆ ಕಿಡುವಂತೆ ಚಂಡಕರ ಕರ ಹತಿಯಿಂ ॥ ೧೫೦ ॥

ದಿವ್ಯಾಯುಧಂಗಳಂ ಗೆಲೆ
ದಿವ್ಯಾಯುಧಮಸುರವಡೆಯನನಿಲ ತನೂಜಂ ॥
ಸವ್ಯಾಪಸವ್ಯಮೆಚ್ಚು ರ
ಣ ವ್ಯಸನಿ ಪಿಶಾಚವಡೆಗೆ ಬಾಣಸುಗೆಯ್ದಂ ॥ ೧೫೧ ॥

ಆ ಸಮಯದೊಳ್—

ಉ ॥ ಮಾಲಿಗೆ ಜಂಬುಮಾಲಿಗೆ ಮರುತ್ತನಯಂ ಕುಡೆ ಯುದ್ಧದೊಳ್ ಕೃತಾಂ।
ತಾಲಯಮಂ ನಿಜಾತ್ಮಜರ ಸಾವಿನೊಳುತ್ಕಟಮಾಗೆ ಶೋಕಮು ॥
ಸ್ಮೇಲಿಸೆ ಕೋಪವಾ ಪ್ರಳಯ ಭೈರವನಂತಿರೆ ಕುಂಭಕರ್ಣನಾ।
ಭೀಲಮನೆತ್ತಿ ಪೊತ್ತು ನಡೆದಂ ಕದನಕ್ಕಿದಿರಂ ತ್ರಿಶೂಲಮಂ ॥ ೧೫೨ ॥

ಅಂತು ಕಡಂಗಿ ಬರ್ಪ ಕುಂಭಕರ್ಣನಂ ಕಂಡು ಮಾರುತಿಯಂ ಪೆಱಗಿಕ್ಕಿ ರಘುವೀರನ ಬಲದ ಮಹಾಸಾಮಂತರ್ ಚಂಡನುಂ ಶಶಿಮಂಡಲನುಂ ಬಲಿಯುಂ ಮೊದಲಾಗೆ ಪಲರುಮಡ್ಡಂಬಂದು ತನ್ನ ಬಲಮನಳಱೆ ಕಾದುತ್ತುಮಿರೆ ಕುಂಭಕರ್ಣನತಿ ಕುಪಿತನಾಗಿ ಬೇಗಂ ಪ್ರಕ್ಷೋಭಣ ವಿದ್ಯಾ ಶರದಿಂ ಕಪಿಧ್ವಜರ ಧ್ವಜಿನಿಯೆಯ್ಯಱಿಯದೊಱಗುವಂತು ಮಾಟ್ಪುದುಂ ನಿದ್ರಾಪ್ರಬೋಧಿನಿಯೆಂಬ ದಿವ್ಯಬಾಣದಿಂ ಸುಗ್ರೀವಂ ಹನುಮಂಮೊದಲಾಗೆ ಮಿಕ್ಕ ನಾಯಕರ ನಿದ್ರಾಮುದ್ರೆಯಂ ಕಳೆವುದುಮನಿಬರುಂ ರಕ್ಕಸವಡೆ ಬೆಂಗುಡೆ ಕಾದುತ್ತುಮಿರೆ ಕಂಡು ಕಡುಮುಳಿದು—

---

1. ಮಾರ್ಗಣೆ. ಚ.

ಕಂ ॥ ಚಳಿಯಿಸಲಮುರಾಚಲಮುಂ
ತುಳುಂಕಲಂಭೋನಿಧಾನಮುಂ ದಿನಕೃನ್ಮಂ ॥
ಡಳಮನಿಳಿಗಿಟಿಪಲೆಂದಾ
ಜಿ ೪ಂಪಟಂ ದೆಸೆಗೆ ಮಸಗಿದಂ ದನುಜೇಂದ್ರಂ ॥ ೧೩೩ ॥

ಅಂತು ದಶಗ್ರೀವಂ ಸುಗ್ರೀವನ ಕಂಠಕಂದಳನುಂ ಚಂಡ ಪರಶುವಿಂ ಖಂಡಿಸಲುಂ ಸವಮಾನ ತನೂಭವನ ಪ್ರಾಣಸವಮಾನನಂ ಬಾಹು ರಾಹುಗಾಹಾರಮಿಕ್ಕಲುಂ ಪ್ರಭಾಮಂಡಲನ ಮಂಡಲಾಗ್ರಮುಂ ಚಂದ್ರಹಾಸ ಪ್ರಭಾಮಂಡಲದಿಂ ಹತ ಪ್ರಭಾಮಂಡಲಂಮಾಡಲುಂ ನಳನ ಕೋಪಾನಲನಂ ಖಡ್ಗಧಾರಾ ಜಲದಿಂ ನಂದಿಸಲುಂ ನೀಲನ ನೀಲ ಲೋಹಿತದಿಂ ಭೂತಗಣಮುಂ ತಣಿಪಲುಮುತ್ಕಂಠನಾಗಿ ನಿಜ ವರೂಥಮುಂ ರಿಪುವರೂಥಿನಿಗೆ ಪರಿಯಿಸಲೊಡರಿಸುವುದುಮಾ ಸಮಯದೊಳ್ ಮಂಡೋದರೀ ಜಠರ ಜಾಹ್ನವೀ ವಿಕಸಿತಾರವಿಂದಂ ತಂದೆಯ ಮುಖಾರವಿಂದಮಂ ನೋಡಿ ನಿಟಿಲ ತಟ ಘಟಿತ ಮುಕುಲಿತಾಂಜಲಿ ಪುಟಂ—

ಕಂ ॥ ತ್ರಿ ಪತಾಕೆ ನಿನ್ನ ನಿಟಿಲದೊ
ಳಪಾಂಗದೊಳ್ ಕೆಂಪು ಸಮನಿಪನ್ನೆವರಂ ಸ್ಫೈ ॥
ರಿಪುದೆ ವಲಮೆನಗೆ ಬನ್ನಂ
ನೃಪೇಂದ್ರ ಬನ್ನಕ್ಕೆ ಬೇಜಿ ಕೋಡೆರಡೊಳವೇ ॥ ೧೩೪ ॥

ಉ ॥ ನೀಂಬರೆಗಂ ಕಪಿಧ್ವಜರಸಾಧ್ಯರೆ ನಿನ್ನೊಳಿದಿರ್ಚುವನ್ನನಾ ।
ವಂ ಬೆಸಸೆನ್ನನಂಜಿದೊಡವಂದಿರ ಬಾಚ್ವಿಲೆದಂದಪೆಂ ರಣಾ ॥
ಡಂಬರದಿಂದಮಂಜದೊಡೆ ಪಂದಲೆದಂದಪೆನೆಂದು ಪೂಣ್ದು ಶೌ ।
ರ್ಯಾಂಬುಧಿ ಬೇಡಿದಂ ಬೆಸನನಿಂದಗಿ ದಾನವ ಚಕ್ರವರ್ತಿಯಂ ॥ ೧೩೫ ॥

ಅಂತು ತಂದೆಯಂ ಬೆಸನಂ ಬೇಡಿಕೊಂಡು—

ಕಂ ॥ ಗಿರಿಗಳಿ ಪರಮಾಣುಗಳಿನೆ
ಸರೋಜ ಭವನೀ ಕರೀಂದ್ರಮುಂ ಮಾಡಿದನೆಂ ॥
ದಿರದದಜ ಕಾಯ ಬಲಮುಂ
ನಿರೂಪಿಸಲ್ ನಾಗರಾಜನುಂ ನೆಜ್ಜೆದಪನೇ ॥ ೧೩೬ ॥

ಎಂಬಿನಮಗುರ್ವುವೆತ್ತುದಂ ತ್ರೈಲೋಕ್ಯಕಂಟಕಮೆಂಬಾನೆಯನೇಜಿ ಪ್ರಳಯ ಪ್ರಕ್ಷೋಭವಾದಂತೆ ಮುಳಿದು ಬರೆ ವಾನರಬಲಂ ದೋರ್ವಲಮನುಟ್ಟಿದು

ಪೆಳಱೆ ಸುಗ್ರೀವನುಂ ಪ್ರಭಾಮಂಡಲನುಮಿದಿರ್ಚಲ್ ನೆಱೆದು ನಿಲ್ವುದುಮವರ ನಿಂದ್ರಜಿತ್ತುಮಾರನಿಂತೆಂದಂ—

ಕಂ ॥ ಕಪಿ ವಂಶಕ್ಕೆ ನಿಸರ್ಗಂ
ಚಪಲತೆ ಖಚರೇಂದ್ರನಪ್ಪ ದಶಕಂಠನ ಪಾ ॥
ದ ಪಯೋಜ ಸೇವೆಯಂ ಬಿ
ಟ್ಟು ಪಶುವೆ ನೀಂ ಭೂಚರಂಗೆ ಕಿಂಕರನಾದ್ಯೆ ॥ ೧೩೭ ॥

ಸಿನ್ನಿಂಬನಜ್ಞಾಯದಾಜಿಯೊ
ಳೆನ್ನೊಡನೆ ಪೊಣರ್ಕೆ[1]ಗೆಂದು ಬಂದಪೆ ಮುಳಿದಾಂ ॥
ಸಿನ್ನಂ ಕೊಲ್ವೆಡೆಯೊಳ್ ಕಾ
ವನ್ನರ್ ಕೈಕೊಂಡು ಭೂಮಿ ಗೋಚರರೊಳರೇ ॥ ೧೩೮ ॥

ಎನೆ ಮುಳಿದು—

ಕಂ ॥ ಕಾಳೆಗಮನುಜ್ಞೆಯಿದು ಪೆಂ
ಡಿರ್ಗಾಳೆಗಮಂ ಮಾಜ್ಪಿ ಗಂಡುವಾತುಳ್ಕೊಡೆ ಕೂ ॥
ರ್ವಾಳ ಮಸೆದೋರ್ಪುದೆನಗೆಂ
ದೇಳಿಸಿದಂ ದನುಜತನುಜನಂ ಸುಗ್ರೀವಂ ॥ ೧೩೯ ॥

ಅಂತವರಿರ್ವರುವೋರೊರ್ವರಂ ಮೂದಲಿಸಿ ಕಾದುತಿರ್ದರನ್ನೆಗಮಿತ್ತಲ್—

ಕಂ ॥ ಜನಕಾತ್ಮಜನೊಳ್ ದಶಮುಖ
ತನೂಭವಂ ಮೇಘವಾಹನಂ ಬಿಲ್ವೊಯ್ವಂ ॥
ಬಿನ ಮಟ್ಟಿಯಂ ಲಯಸಮಯದ
ಘನಾಘನಂ ಕಜ್ಜಿವ ಮಾಟ್ಕೆಯಿಂದಂ ಕಜ್ಜಿದಂ ॥ ೧೪೦ ॥

ಅವನೆಚ್ಚಂಬುಗಳಂ ಚಂ
ಡವಿಕ್ರಮಂ ಮಂಡಲಾಗ್ರದಿಂ ಖಂಡಿಸಿದಂ ॥
ಬವರದೊಳಿದಿರಾಂಪವರಾ
ರವಾರ್ಯ ಭುಜವೀರ್ಯನಂ ಪ್ರಭಾಮಂಡಲನಂ ॥ ೧೪೧ ॥

ಅಂತು ನಿಜ ನಿಶಾತ ಶರ ಸಂಘಾತಮಂ ಖಂಡಿಸೆ ಮೇಘವಾಹನನಗ್ನಿಬಾಣ ದಿಂದಿಸುವುದುಮದಂ ಪ್ರಭಾಮಂಡಲಂ ವರುಣಾಸ್ತ್ರದಿಂ ಕಡಿಯೆ ಕಡುಮುಳಿದು—

1. ಗಂತು. ಗ. ಘ.

ಚ ॥ ತಿರುವಿನೊಳಟ್ಟು ಕೂರ್ಗಣೆಗಳಂ ಧನುವಂ ಪೊಱಮುಯ್ವನೆಯ್ದುವಂ।
ತಿರೆ ತೆಗೆದಸ್ತ್ರವಿದ್ಯೆಗಿವನೊಳ್ದೊರೆಯಾರೆನೆ ಮೇಘವಾಹನಂ ॥
ತುರಗಮನೆಚ್ಚು ಸಾರಥಿಯನೆಚ್ಚು ಪತಾಕೆಯನೆಚ್ಚು ಬಿಲ್ಲನೆ।
ಚ್ಚು ರಥಮನೆಚ್ಚು ಪರ್ಚುಪಜಿಮಾಡಿದನಾ ಜನಕಾತ್ಮಜಾತನಂ ॥ ೧೪೨ ॥

ಅಂತು ವಿರಥನಂ ಮಾಡಿ—

ಕಂ ॥ ದನುಜ ಸುತಂ ಪನ್ನಗಶರ
ದಿನಿಸುವುದುಂ ಜನಕಸುತನನದು ಪೆಣೆದಹಿಬಂ ॥
ಧನದಿಂ ಪೊಡರ್ಪುಗುಂದಿಸೆ
ತನುವಂ ಮಜ್ಜಿದಿಳೆಗೆ ಬಿಟ್ಟು ಮೂರ್ಛೆಗೆ ಸಂದಂ ॥ ೧೪೩ ॥

ಅಂತತಿ ಪ್ರಚಂಡ ಬಲಂ ಪ್ರಭಾಮಂಡಲಂ ಮೂರ್ಛಿತನಪ್ಪುದುಮಿತ್ತಲಿಂದ್ರ ಜಿತ್ತುಮಾರಂ ಸುಗ್ರೀವನಂ ವಿರಥನಂ ಮಾಡಿ ಪನ್ನಗಾಸ್ತ್ರದಿಂದಿಸುವುದುಂ—

ಉ ॥ ಕಾಲಡಿಯಿಂ ಕೊರಲ್ವರೆಗಮಿಂದಗಿಯೆಚ್ಚ ಫಣೀಂದ್ರ ಸಾಯಕಂ।
ಕೀಲಿಸಿದಂತೆವೊಲ್ ಬಿಗಿಯೆ ಸುತ್ತುವುದುಂ ಬಸಮುತ್ತು ಮುಚ್ಚಿ ಕ ॥
ಣ್ಣಾಲಿಗಳಚ್ಚೆಗೆಟ್ಟು ಕಪಿಕೇತನನಾಗಳೆ ಮುಚ್ಚೆವೋಗೆ. ಶ।
ಕ್ರಾಲಯಮಂ ಪಳಂಚಿದುದು ದಾನವಸೈನ್ಯ ಜಯಾನಕ ಸ್ವನಂ ॥ ೧೪೪ ॥

ಮತ್ತಿತ್ತಲೊಂದು ಮೊನೆಯೊಳ್—

ಕಂ ॥ ಮಾಯಾ ಯುದ್ಧದೊಳಂ ದಿ
ವ್ಯಾಯುಧ ಯುದ್ಧದೊಳಮಧಿಕ ಬಲರುಭಯ ಬಲಂ ॥
ಜೀಯೆಂಬಿನೆಗಂ ಕಾದಿದ
ರಾಯತಿ ನಿಲೆ ಕುಂಭಕರ್ಣನುಂ ಮಾರುತಿಯುಂ ॥ ೧೪೫ ॥

ರಣಕರ್ಕಶನಸುರ ಕುಲಾ
ಗ್ರಣಿ ವಿರಥಂಮಾಡಿ ವೀರನಂ ಖಚರ ಕುಲಾ ॥
ಗ್ರಣಿಯನವಯವದೊಳಣುವನ
ನಣುವಂ ಪಿಡಿವಂತೆ ಕುಂಭಕರ್ಣಂ ಪಿಡಿದಂ ॥ ೧೪೬ ॥

ಚ ॥ ಅಮಿತ ಪರಾಕ್ರಮ ಪ್ರಥಿತರಪ್ಪ ಕಪಿಧ್ವಜರುಂ ವಿಯಚ್ಚರ।
ಪ್ರಮುಖರುಮೆಯ್ದಿದರ್ ನೆರೆದು ರಾವಣ ಸೇನೆಯೊಳಣ್ಮೆ ಕಾದಿ ಭಂ ॥

ಗಮನಿದು ತಕ್ಕುದನ್ಯರ[1]ವಶರ್ ದಶಕಂಧರನಂ ದಶಾಸ್ಯ ಸೈ ।
ನ್ಯಮನುಜದಿಕ್ಕಿ ಗೆಲ್ವಿಡೆಗೆ ಲಕ್ಷ್ಮಣನೆಂಬುದೊ ರಾಮನೆಂಬುದೋ ॥ ೧೪೭ ॥

ಅಂತಿಂದಗಿ ಮೇಘವಾಹನ ಕುಂಭಕರ್ಣರಿಂ ಸುಗ್ರೀವ ಪ್ರಭಾಮಂಡಲ ಹನು ಮತ್ಪ್ರಮುಖ ಮುಖ್ಯನಾಯಕರ್ಕಳುಂ ನಾಗಪಾಶವಿದ್ಯೆಯಿಂ ಕಟ್ಟುವಡೆದು ಪಟ್ಟೆರ್ದುದುಂ—

ಕಂ ॥ ಅವರಘವಟ್ಟಿರವಂ ತಿಳಿ
ದು ವಿಭೀಷಣನಜುಪಿ ರಾಮ ಲಕ್ಷ್ಮೀಧರರ್ಗೆ ॥
ನ್ನ ವರೂಥಿನಿಯಂ ಕೊಂಡ
ನ್ನೆವರಂ ನೀಮಿರ್ದುದವರನೀಗಳೆ ತರ್ಪೆಂ ॥ ೧೪೮ ॥

ಎಂದು ಬಿನ್ನಪಂಗೆಯ್ದು ವಿಭೀಷಣಂ ರಣ ರಸಿಕನಾಗಿ ಪೋಪುದುಮಂಗದಂ ತಾನುಮೊಡನೆ ಸಂಗ್ರಾಮ ಸಂರಂಭಮನಪ್ಪುಕೆಯ್ದು ಕುಂಭಕರ್ಣನಂ ಮುಟ್ಟಿ ಎಂದು—

ಕಂ ॥ ಸಂಗರದೊಳ್ ಕುಡುವೆಂ ದೋ
ರ್ದಂಗಮನಾವಂಗಮೆಂದು ಕಲುಷಾನಲನಿಂ ॥
ದಂಗದನಂಗೀಕರಿಸಿದ
ನಂಗಾರಮನುಗುಳ್ವ ಕಾರ ಸಿಡಿಲ ಪೊಡರ್ಪಂ ॥ ೧೪೯ ॥

ಅಂತು ಮಾಮಸಕಂಗೊಂಡು ಕೃತಾಂತನಂತೆ ಸಾಧಾರಣಾಸ್ತ್ರದೊಳಂ ದಿವ್ಯಾಸ್ತ್ರದೊಳಂ ಕಾದಿ—

ಕಂ ॥ ಶರಭಂ ಪಿಡಿದ ಮೃಗಾಧೀ
ಶ್ವರನಂ ಭೇರುಂಡನೆಬಿದುಕೊಳ್ವಂತೆ ನಿಶಾ ॥
ಚರ ಕರದಿನಂಗದಂ ಸಂ
ಗರ ರಂಗದೊಳೆಬಿದುಕೊಂಡನನಿಲಾತ್ಮಜನಂ ॥ ೧೫೦ ॥

ಗೆಲೆ ಕಾದಿ ಕುಂಭಕರ್ಣನ
ನಲಂಘ್ಯಬಲನಂಗದಂ ಜಯಶ್ರೀ ನಿಲಯಂ ॥
ಜಲದ ಪಥಕ್ಕೊಗೆದಾ ಕ್ಷಣ
ದೊಳೆ ಮಾರುತಿವೆರಸು ರಘುಜನಲ್ಲಿಗೆ ಬಂದಂ ॥ ೧೫೧ ॥

1. ಪೆಸರ್. ಕ. ಖ. ಘ. ಚ.; ಪಿಸರ್. ಗ.

ಇತ್ತಲಾ ವಿಭೀಷಣನಿಂದಗಿ ಮೇಘವಾಹನರೊಳಾಹವಕ್ಕೊಡರ್ಚುವುದುಮವ ರಿಮ್ಮ ಕಿಱಿಯಮ್ಮನೊಳ್ ಕಾದುವುದು ತಕ್ಕುದಲ್ತು ಪಿಂಗೆ ಭಂಗವಿಲ್ಲೆಂದು ಕೈದು ಗೆಯ್ಯದುಸೇಕ್ಷೆಗೆಯ್ದು ತೊಲಗಿ ಪೋಗೆ ಮುಟ್ಟಿವೋಗಿ ವಿಭೀಷಣಂ ಪನ್ನಗಶರ ವೇಷ್ಟಿತರಾಗಿರ್ದ ಸುಗ್ರೀವ ಪ್ರಭಾಮಂಡಲರಂ ಕಂಡೇನುಂಗೆಯ್ಯಲಱಿಯದೆ ಸಂಭ್ರಮ ಚಿತ್ತನಾಗಿ ನೋಡುತ್ತುಮಿರೆ—

ಕಂ ॥ ಏನುಚಿತಮೆನಗೆ ರಘುಕುಲ
ಹಾನಿಯನೀಕ್ಷಿಸುವುದೆಂದು ಕಡುವೇಗದಿನು ।
ತ್ತಾನಪದಂ ಪೋಪಂತಿರೆ
ಭಾನು ಬಿಸಿಲ್ ಮಸುಟಿ ಪೊಕ್ಕನಪರಾರ್ಣವಮಂ ॥ ೧೫೭ ॥

ಅಂತು ನೇಸರ್ಪಡುವುದುಂ ದಶಾಸ್ಯನಪಹಾರ ತೂರ್ಯಮಂ ಸ್ತೊಯಿಸಿ ಬೀಡಿಂಗೆ ಪೋಪುದುಮಿತ್ತಲ್—

ಕಂ ॥ ಸೌಮಿತ್ರಿ ಮುಕುಲಿತಾಂಜಲಿ
ರಾಮಂಗಿಂತೆಂದನಿವರ್ಗೆ ಪನ್ನಗಶರ [1]ಮೂ ॥
ರ್ಛಾ ಮುದ್ರಾಚ್ಛೇದನದಿಂ
ಕ್ಷೇಮಮನೊಡರಿಸುವುಪಾಯಮಾವುದು ಬೆಸಸಿಂ ॥ ೧೫೮ ॥

ಎನೆ ದಾಶರಥಿ ದಶನಕಾಂತಿ ನಿರ್ವಿಷೀಕರಣ ಮಣಿ ಮಯೂಖದಂತೆ ನಿಮಿರ್ವಿನೆಗಮಿಂತೆಂದಂ—

ದ್ರು ॥ ವಿ ॥ ಇವರುಪದ್ರವಮುಂ ಕ್ಷಣಮಾತ್ರದಿಂ ।
ತವಿಸುಗುಂ ನೆನೆ ಮುಂ ಬರಮಿತ್ತನಂ ॥
ದಿವಿಜನಂ ಪೆಜತೇನೆನೆ ಲಕ್ಷ್ಮಣಂ ।
ಸವಿನಯಂ ನೆನೆದಂ ಬರಮಿತ್ತನಂ ॥ ೧೫೯ ॥

ಕಂ ॥ ನೆನೆವುದುಮಾಸನ ಕಂಪಂ
ಜನಿಯಿಸಿದತ್ತಾಗಳಾ ಮಹಾಲೋಚನನೆಂ ॥
ಬ ನಿಲಿಂಪಂಗೆನೆ ರಘುವೀ
ರನ ಲಕ್ಷ್ಮೀಧರನ ಸೈಪು ಸಾಧಾರಣಮೇ ॥ ೧೬೦ ॥

ತನಗಾಸನ ಕಂಪಂ ತೊ
ಟ್ಟನೆ ಪುಟ್ಟಿ ರಣಪ್ರಪಂಚದೊಳ್ ರಘುವೀರಂ ॥

1. ವಿದ್ಯಾ. ಗ.

ನೆನೆದಪನೆಂದು ಮಹಾಲೋ
ಚನನೊರ್ವೊದಲಜುದನವಧಿ ಲೋಚನದಿಂದಂ ೧೫೬ ॥

ಅಂತದಂ ಗರುಡಾಧಿಪನಪ್ಪ ಮಹಾಲೋಚನನಱಿದು ಬಹು ವಿದ್ಯಾ ಪರಿವಾರಮನುಳ್ಳ ಸಿಂಹವಾಹಿನಿಯುಂ ಗರುಡವಾಹಿನಿಯುಮೆಂಬೆರಡು ವಿದ್ಯೆಗಳುಮಂ ದಿವ್ಯಾಸ್ತ್ರಂಗಳುಮನುಯ್ದು ಕುಡೆಂದು ನಿಜಾನುಚರನಪ್ಪ ಚಿಂತಾವೇಗನೆಂಬ ದೇವಂಗೆ ಬೆಸಸುವುದುಮಾತಂ ಬಂದು ಸಿಂಹವಾಹಿನಿಯಂ ಶ್ರೀರಾಮಂಗೆ ಗರುಡವಾಹಿನಿಯಂ ಲಕ್ಷ್ಮೀಧರಂಗೆ ಸದ್ಭಾವದಿನೀವುದುಂ—

ಕಂ ॥ ಮನ್ನಿಸಿ ಚಿಂತಾವೇಗಮ
ಹೋನ್ನತನಂ ಜೈನ ಪೂಜೆಗೆಯ್ವುತಿಹರ್ಪೋ ॥
ತ್ಪನ್ನ ಪುಲಕಾವಲೀ ಸಂ
ಭನ್ನ ಶರೀರರ್ ಬಲಾಚ್ಯುತರ್ ಬಗೆಗೊಂಡರ್ ೧೫೭ ॥

ಚ ॥ ಪ್ರಣತ ಜಗಜ್ಜನಂ ತ್ರಿಭುವನ ಪ್ರಭು ಕಾವ್ಯಕಲಾ ವಿಲಾಸಿನೀ ।
ಪ್ರಣಯಿ ಪರಾರ್ಥ ಕಲ್ಪತರು ನಮ್ಮ ಮನೋರಥ ಸಿದ್ಧಿ ದೇಶ ಭೂ ॥
ಷಣ ಕುಲಭೂಷಣ ವ್ರತಿ ಪದಾಂಬುಜ ಸೇನೆಯಿನಾದುದೆಂದು ಸ
ದ್ಗುಣ ಮಣಿಭೂಷಣಂ ಪುಲಕಮಂ ತಳೆದಂ ಕವಿತಾ ಮನೋಹರಂ ೧೫೮॥

ಇದು ಪರಮ ಜಿನಸಮಯ ಕುಮುದಿನೀ ಶರಚ್ಚಂದ್ರ ಬಾಲಚಂದ್ರ
ಮುನೀಂದ್ರ ಚರಣ ನಖಕಿರಣ ಚಂದ್ರಿಕಾ ಚಕೋರ ಭಾರತೀ
ಕರ್ಣಪೂರ ಶ್ರೀಮದಭಿನವಪಂಪ ವಿರಚಿತಮಪ್ಪ
ರಾಮಚಂದ್ರಚರಿತ ಪುರಾಣದೊಳ್ ಬಲಾಚ್ಯುತ
ಪುಣ್ಯ ಪ್ರಭಾವೋದಯ ವರ್ಣನಂ
ತ್ರಯೋಧಶಾಶ್ವಾಸಂ

ಕಂ ॥ ಶ್ರೀರಮಣನಿಷ್ಟಸಿದ್ಧಿಗೆ
ಚಾರಣ ಮುನಿ ಸಾದ ಕಲ್ಪಸಾದಪಮೆ ನಲಂ ॥
ಕಾರಣಮಾದುದೆನುತ್ತುಂ
ಚಾರಿತ್ರ ಪವಿತ್ರನೊಸೆದನಭಿನವಪಂಪಂ ॥ ೧ ॥

ಅಲಘು ಮಹಿಮ ಪ್ರಭಾವಂ
ನೆಲೆವೆರ್ಚಿದುದೆಮಗೆ ಯೋಗನಿಷ್ಠಾ ಪರ ನಿ ॥
ಶ್ಚಲರೆನಿಪ ದೇಶಭೂಷಣ
ಕುಲಭೂಷಣ ದಿವ್ಯಯೋಗಿ ದರ್ಶನದಿಂದಂ ॥ ೨ ॥

ಎಂದವರಂ ನಿರ್ಭರ ಭಕ್ತಿಯಿಂ ಸ್ತುತಿಗೆಯ್ಯೆ ಹರ್ಷಭರ ವಿನಮ್ರನಾಗಿ ವರ್ಷ ವರುಣ ಕೃಶಾನು ಬಾಣಂಮೊದಲಾ[1]ಗೆ ಪಲವುಂ ದಿವ್ಯಬಾಣಂಗಳುಮುಂ ಧವಳಛತ್ರ ಚಾಮರಂಗಳುಮುಂ ಸಿಂಹ ಗರುಡಧ್ವಜಂಗಳುಮನಭೇದ್ಯ ಕವಚಂಗಳುಮನನರ್ಘ್ಯ ರತ್ನಭೂಷಣಂಗಳುಮುಂ ರಾಮಲಕ್ಷ್ಮಣರ್ಗೆ ಕೊಟ್ಟು ಚಿಂತಾವೇಗಂ ಮನಃಪವನವೇಗದಿಂ ನಿಜ ನಿವಾಸಕ್ಕೆ ಪೋಪುದುಮಿತ್ತಲ್—

ಕಂ ॥ ಜಿನ ಧರ್ಮದ ಸಾಮರ್ಥ್ಯದಿ
ನಿನಿತು ಮಹಾಮಹಿಮೆ ರಾಮ ಲಕ್ಷ್ಮೀಧರರೊಳ್ ॥
ಜನಿಯಿಸೆ ವಿಸ್ಮಯಮಾದುದು
ಹನುಮಂತ ಪ್ರಮುಖ ನಿಖಿಲ ವಿದ್ಯಾಧರರೊಳ್ ॥ ೩ ॥

ಅನಂತರಮಾ ಗರುಡವಾಹನಿಯ ತನುಪ್ರಭೆ ತಮಮನಭಿಭವಿಸೆ ತತ್ಪಕ್ಷಪಾತ ಜಾತ ವಾತ ಘಾತದಿಂ ನಾಗಪಾಶ ವಿದ್ಯೆ ಸಡಿಲ್ದುಪೋಗೆ ಸುಗ್ರೀವ ಪ್ರಭಾಮಂಡಲರಪಗತ ಮೂರ್ಛಾಪ್ರಪಂಚರ್ ಪ್ರಸನ್ನಮನರ್ ಸಿಂಹ ಗರುಡ ವಾಹನಾರೂಢರಾಗಿರ್ದ ರಾಮಲಕ್ಷ್ಮಣರಲ್ಲಿಗೆ ಬಂದವರ ಪುಣ್ಯಪ್ರಭಾವಕ್ಕೆ ಸಂತೋಷಂಬಟ್ಟು ನಿಮಗೀ ಮಹಾಮಹಿಮೆಯಾದ ವೃತ್ತಾಂತಮಂ ಬೆಸಸಿಮೆನೆ ಶ್ರೀರಾಮದೇವರದೆಲ್ಲಮಂ ನೆಜೆಯೆ ಬೆಸಸುತ್ತುಂ ಬೀಡಿಂಗೆ ಬಿಜಯಂಗೆಯ್ದುಂದಿನಿರುಳಾ ಮಹೋತ್ಸವ ವ್ಯಾಪಾರದೊಳಿರ್ಪುದುಂ—

1. ಗೊಡೆಯು. ಗ. ಘ. ಚ.

ಕಂ ॥ ಇಂದಿನನುವರದೊಳಪಜಯ
ಮುಂ ದನುಜಂಗುಂಟುಮಾಬ್ಜಮಿನ ವಂಶಜನೆಂ ॥
ದಂದಧಿಕ ರಾಗಮುಂ ತಳೆ
ದಂದದಿನಿನನುದಯಶಿಖರಿ ಶೇಖರನಾದಂ ॥ ೪ ॥

ಅಂತು ನೇಸರ್ ಮೂಡುವುದುಂ ದಶವದನನೆಂದಿನಂದದಿಂ ರಣಭೂಮಿಗೆ ವಂದೊಡ್ಡಿ ನಿಲ್ವುದುಮಿತ್ತ ರಾಮಲಕ್ಷ್ಮಣರ್ ನಿರ್ವರ್ತಿತ ನಿತ್ಯನಿಯಮರ್ ದೇವ ನಿತ್ತ ದಿವ್ಯ ಕವಚಮುಂ ತೊಟ್ಟು ದಿವ್ಯಾಭರಣ ಭೂಷಿತರಾಗಿರ್ಪುದುಂ—

ತರಳವೃತ್ತಂ ॥ ದನುಸುತಂ ಕಿಟಿ ತನ್ನನಾ ಮುಳಿಸಿಂ ಮೃಡಾದ್ರಿಯೆ ಸಿಂಹ ವಾ।
ಹಿನಿಯ ರೂಪಿನೊಳಾಹವಕ್ಕೆ ಸಹಾಯಮಾಯ್ತು ರಘೂದ್ವಹಂ ॥
ಗೆನಿಸಿ ಕಾಯ ಬಲಂ ಕನತ್ಕನಕೋಪಲಾಕ್ಷಿ ಬೃಹದ್ಗುಹಾ ।
ನನಮಗುರ್ವಿಸೆ ತುಂಗಶೃಂಗಮೆ ಕೋಜಿತೆದಾಡೆಗಳಾದವೋಲ್ ॥ ೫ ॥

ಚ ॥ ವಿಳಯ ಘನಾಘನಂಗಳೆನೆ ಪಕ್ಷ ಯುಗಂ ನಡೆತರ್ಪ ರೋಹಣಾ ।
ಚಳಮೆನೆ ಪಂಚ ವರ್ಣ ವಿಲಸತ್ತನು ಬಿಚ್ಚನೆ ಬಿಟ್ಟ ದಿಟ್ಟಿಗಳ್ ॥
ಪೊಳೆವುದಿತಾರ್ಕ ಬಿಂಬಮೆನೆ ಚಂಚು ಮರೀಚಿ ಶತಹ್ರದಾಪ್ರಭೋ ।
ಜ್ವಳಮೆನೆ ಭೀಕರಂ ಗರುಡವಾಹನಿ ವಿದ್ಯೆಯ ವಿಕ್ರಿಯಾ ಕ್ರಮಂ ॥ ೬ ॥

ಅಂತಗುರ್ವಾಗೆ ವಿಗುರ್ವಿಸಿದ ಸಿಂಹ ಗರುಡ ವಾಹನಂಗಳನೇಜಿ ಸಿಂಹ ಗರುಡ ಧ್ವಜಂಗಳನೆತ್ತಿಸಿ ದೇವ ನಿರ್ಮಿತಂಗಳಪ್ಪ ಸಿತಾತಪತ್ರಂಗಳಂ ಪಿಡಿಯಿಸಿ ಸುಗ್ರೀವ ಪ್ರಭಾಮಂಡಲ ಮರುತ್ಸುತ ನಿಭೀಷಣ ಪ್ರಮುಖ ನಿಖಿಲ ವಿದ್ಯಾಧರರ್ ಬಳಸಿ ಬರೆ ಸಂಗ್ರಾಮಭೂಮಿಗೆ ಬಂದೆಂದಿನಂದದಿನೊಡ್ಡಿ ನಿಲ್ವುದುಂ—

ಕಂ ॥ ಎರಡೊಡ್ಡುಂ ತಾಗಿ ಭಯಂ
ಕರಮೆನೆ ಕಾದಿದುವು ಪಜ್ಜಿದ ತಲೆ ನೆತ್ತರ ಸು.॥
ಟ್ಟುರೆ ಕಂಡದಿಂಡೆ ಕೋಟ್ಯಿದು
ಳ ರಾಶಿ ನೆಣದುರ್ವು ಪರ್ವೆ ಸಮರಾವನಿಯೊಳ್ ॥ ೭ ॥

ವಾರಣ ಘಟೆಯುಂ ಜೋದರು
ಮಾರೋಹಕರುಂ ತುರಂಗ ದಳಮುಂ ರಥಿಯುಂ ॥
ತೇರುಮೊಡನಟ್ಟಿಯೆ ಪೋಲ್ತ
ತ್ತೀರೊಡ್ಡುಂ ಪವನ ಹತ ಘನಾಘನದೊಡ್ಡಂ ॥ ೮ ॥

ಚ ॥ ಪಲವು ಗಜಂಗಳುಂ ಪಲವು ವಾಜಿಗಳುಂ ಪಲವುಂ ರಥಂಗಳುಂ ।
ಪಲರುಮುದಗ್ರ ವೀರ ಭಟರುಂ ಪಲವುಂ ತೆಱದಾಯುಧಂಗಳಿಂ ॥
ಪಲವು ವಿಧಂಗಳಿಂ ಪಲವುಮೊಡ್ಡಣದಿಂ ಪಲರುಂ ಪೊಗಟ್ವಿನಂ ।
ತೊಲಗದೆ ತಾಗಿ ತಳ್ತಱಿಯೆ ನಾಡೆಯುಮುದ್ಭುತಮಾದುದಾಹವಂ ॥ ೯ ॥

ಆ ಮಹಾಹವದೊಳ್—

ಉ ॥ ವಾನರ ಸೇನೆ ದಾನವರ ಸೇನೆಯನಳ್ಕುಱಿ ಕಾದೆ ಕಂಡು ಪಂ ।
ಚಾನನದಂತೆ ಗರ್ಜಿಸಿ ದಶಾನನನೆಯ್ತರೆ ಬೆಚ್ಚಿ ಪೋಗೆ ದೀ ॥
ನಾನನವಾ ಕಪಿಧ್ವಜನಿ ಬೇಗಮುದಂ ಪೆಱಗಿಕ್ಕಿ ತಾಗಿದಂ ।
ದಾನವ ರಾಜನಂ ಜವನ ಮುಂಬಿವನೆಂಬಿನೆಗಂ ವಿಭೀಷಣಂ ॥ ೧೦ ॥

ಅಂತು ತಾಗುವುದುಂ ಕಡುಮುಳಿದು ರಾವಣಂ ವಿಭೀಷಣಂಗಿಂತೆಂದಂ—

ಕಂ ॥ ಎನ್ನೊಡನೆ ಪುಟ್ಟಿ ಖಚರ ಕು
ಲೋನ್ನತಿ ಕೀಲ್ಪಟ್ಟು [1]ತಕ್ಕುಗಿಡೆ ಕಿಂಕರ ಭಾ ॥
ವಂ ನಿನಗೆ ಸಮನಿಸಿತ್ತು ಕೆ
ಲನ್ನಗುವಿನಮೆಲವೊ ನೀಚ ಭೂ ಗೋಚರರೊಳ್ ॥ ೧೧ ॥

ಅಕ್ಷೀಣಮಪ್ಪ ಸಿರಿಯಂ
ದಕ್ಷಿಣ ಭರತತ್ರಿಖಂಡ ಧರೆಯಂ ಯುವ ರಾ ॥
ಜ ಕ್ಷತ್ರ ಚಾಮರಮನುಱಿ
ದಕ್ಷಮ ದೊರೆಗೆಟ್ಟ ಮಾನವಂಗಾಳಾದ್ಯೆ ॥ ೧೨ ॥

ಎಂದು ಮೂದಲಿಸಿ—

ಕಂ ॥ ತನಗಧಿಕಮಾಗೆ ನುನದೊಳ್
ಮುನಿಸು ವಿಭೀಷಣನನೆಂದನಸುರೇಂದ್ರನದೆಂ ॥
ತನುಜನೊಡನಾಂ ತೊಡರ್ಚುವೆ
ನನುವರಮಂ ಗೋತ್ರ ವಧ ಮಹಾಪಾತಕಮಂ ॥ ೧೩ ॥

ಅದಱಿನೆನ್ನ ಮುಂತಣಿಂ ತೊಲಗಿ ಪೋಗೆಂದ ದಶಮುಖನ ದುರುಕ್ತಿಗೆ ವಿಭೀಷಣಂ ಕೋಪಗ್ರಹಾವೇಶಮನಪ್ಪಕೆಯ್ದು ಹಿತಮನಱಿಪಿದೊಡೆನ್ನಂ ಪೊಱಮಡಿಸಿ ಕಳೆದಂದೆ ನಿನ್ನ ಸುಧರ್ಮಿಕೆಯುಂ ತಕ್ಕೂರ್ಮೆಯುಂ ಪಱಿಪಟ್ಟು ಪೋದು

1. ಮುಟ್ಟು ಚ.

ದಿನ್ನಾದೊಡಂ ತ್ರಿಭುವನ ಸ್ತವನೀಯಮಪ್ಪ ನಮ್ಮ ತೋಯದವಾಹನಾನ್ವಯಕ್ಕೆ ಬನ್ನಮಪ್ಪಂತು ಪರಪ್ರೇಯಸಿಗಟ್ಟಿಪಂ ತಂದ ನಿರ್ಬುದ್ಧಿಕೆಯನುಟ್ಟಿದು ನಿನಗಂ ನಿನ್ನ ವಂಶಕ್ಕಮಕಾಲ ಮೃತ್ಯುವಂ ತಾರದೆ ರಾಮಸ್ವಾಮಿಗೆ ಜಗನ್ಮಾತೆಯಂ ಸೀತಾದೇವಿಯನೊಪ್ಪಿಸಿ ನಿನ್ನ ಸಾಮ್ರಾಜ್ಯಪದವಿಯೊಳ್ ಪದುಳಂನಿಲ್ಲ್ರದೆನೆ ಮುಳಿದು ತಿರುವಾಯೊಳಂಬಂ ತೊಟ್ಟು ಮುಟ್ಟಿವರೆ—

ಕಂ ॥ ತ್ರಿ ಪತಾಕಾ ಭೀಷಣ ತರ
ಲಪನಂ ತೆಗೆದಿಸೆ ವಿಭೀಷಣಂ ರಾವಣ ಕೇ ॥
ರ್ತಿ ಪತಾಕಾ ದಂಡಂಬೆರ
ಸು ಪತಾಕಾ ದಂಡಮುಡಿದು ಕೆಡೆದತ್ತಾಗಳ್ ॥ ೧೪ ॥

ಅಂತು ವಿಭೀಷಣನೇಸಾಡೆ ತಾನುವೊಡನೆ—

ಕಂ ॥ ಸೋದರನ ಧನುರ್ಗುಣಮಂ
ಛೇದಿಸಿದಂ ರೋಷಿ ರಾವಣಂ ಮದ ಮದಿರೋ ॥
ನ್ಮಾದವಶಂ ಧರ್ಮ ಗುಣ
ಚ್ಛೇದನಮಂ ಮಾಟ್ಪುದೆಂಬುದೊಂದಚ್ಚರಿಯೇ ॥ ೧೫ ॥

ಅಂತು ದಶಾನನಂ ನಿಜ ಶರಾಸನಮಂ ಖಂಡಿಸೆ—

ಕಂ ॥ ದಶವದನ ಶರಾಸನಮಂ
ನಿಶಾತ ಶರದಿಂ ವಿಭೀಷಣಂ ಖಂಡಿಸಿದಂ ॥
ದಶವದನನುಂ ವಿಭೀಷಣ
ನ ಶರಾಸನಮಂ ನಿಶಾತ ಶರದಿಂ ಕಡಿದಂ ॥ ೧೬ ॥

ಅಂತು ಕಲುಷ ವಶ ಗತರಾಗಿ—

ಕಂ ॥ ಪಿತೃವುಂ ಪಿತೃವ್ಯನುಂ ಕಾ
ದೆ ತನ್ನೊಳಿಂದಗಿಗೆ ಪಕ್ಷವಾದುದು ಲಂಕಾ ॥
ಪತಿಯೊಡನೆ ತಕ್ಕುದೊರ್ಮರ
ದ ತಿಗುಡು ಮತ್ತೊಂದು ಮರನನೇಂ ಪತ್ತುಗುಮೇ ॥ ೧೭ ॥

ಅಂತು ಇಂದ್ರಜಿತ್ಕುಮಾರನೆಡೆವೊಕ್ಕು ವಿಭೀಷಣನೊಳ್ ಕಾದಲೊಡರಿಸೆ ಲಕ್ಷ್ಮಣಂ ನಿಜ ವರೂಥಮನಾತನ ವರೂಥಕ್ಕಡ್ಡಂನೂಂಕೆ—

ಕಂ ॥ ಇತ್ತಿತ್ತ ಮಗುಟ್ ಮಗುಟಿಂ
ದತ್ತಲ್ ರಾಮಾನುಜನ್ಮನಿಂದಗಿಯೊಳ್ ಕಾ ॥
ದುತ್ತುಮಿರೆ ರಾಘವಂ ಸುಭ
ಟೋತ್ತಮನೊಳ್ ಕುಂಭಕರ್ಣನೊಳ್ ಬಿಲ್ವೊಯ್ದಂ ॥ ೧೮ ॥

ಆ ಸಮಯದೊಳಸಮಯ ವಿಲಯ ಸಮಯ ಸಮುತ್ಪಾದನ ಸಮರ್ಥನಪ್ಪ ಕೃತಾಂತನಂತೆ ಹನುಮಂತಂ ಕುಂಭಕರ್ಣನೊಳ್ ಕಿಷ್ಕಿಂಧಂ ಕೇತುವಿನೊಳ್ ಪ್ರಭಾಮಂಡಲಂ ಮೇಘವಾಹನನೊಳ್ ವಿರಾಧಿತಂ ಮಯನೊಳೂರ್ಜಿತಂ ದೃಢ ರಥನೊಳ್ ಪೆಱರುಮಱೆಯ ಕಪಿಧ್ವಜ ಬಲನಾಯಕರನೇಕರ್ ರಾಕ್ಷಸ ಬಲದ ನಾಯಕರೊಳ್ ಬಿಲ್ವೊಯ್ದು ಬಹು ಕಬಂಧ ನರ್ತನ ಪ್ರಬಂಧಮಗುರ್ವುಮುಸ್ಸುತ ಮುಮಾಗೆ ಮಹಾಯುದ್ಧಂಗೆಯ್ಯುತ್ತುಮಿರ್ಪಿನವಿತ್ತಲ್—

ಕಂ ॥ ಇಂದಗಿ ಸಾಧಾರಣ ಶರ
ಸಂದೋಹದಿನೆಚ್ಚು ಕಾದಲಣಮಾಜಿದೆ ಶ ॥
ತ್ರುಂದಮನೊಳ್ ಲಕ್ಷ್ಮಣನೊಳ್
ತಂದಂ ದಿವ್ಯಾಸ್ತ್ರಗರ್ಭ ಶರಧಿಗೆ ಕೈಯಂ ॥ ೧೯ ॥

ಅಂತು ದಿವ್ಯ ಬಾಣಮಂ ಬಾಣಾಸನದೊಳ್ ಪೂಡಿಕೊಂಡುಪೇಂದ್ರನಸಿಂದ್ರ ಜಿತ್ಕುಮಾರನಸಿಸುವುದುಂ—

ಮ ॥ ಗಗನಾಭೋಗದೊಳಿರ್ದು ನೋಟ್ಪ ಸುರ ಸಂದೋಹಂ ಮಹೋತ್ಸಾಹದಿಂ ।
ಪೊಗಟ್ಪಿನ್ನಂ ತಮದಂಬನರ್ಕಶರದಿಂದಾಶೀವಿಷೋಗ್ರಾಸ್ತ್ರಮಂ ॥
ಖಗರಾಜಾಸ್ತ್ರ ನಿಪಾತದಿಂ ಕಿಡಿಸಿ ದಿವ್ಯಾಸ್ತ್ರಂಗಳಿಂ ಗೆಲ್ದನಿಂ ।
ದಗಿಯಂ ಸಂಹೃತಿ ಕಾಲ ಸಾಂಧ್ಯ ಜಲದಾರಕ್ತೇಕ್ಷಣಂ ಲಕ್ಷ್ಮಣಂ ॥ ೨೦ ॥

ಕಂ ॥ ತ್ರಿದಶೇಂದ್ರ ವಿಜಯಿಯಂ ದಶ
ವದನನನಾಹವದೊಳಿಕ್ಕಲಿರ್ದ ಮಹಾ ವೀ ॥
ರ್ಯದ ಕಣಿಗೆ ಲಕ್ಷ್ಮಣಂಗಾ
ವುದು ಗಹನಮೊ ಗೆಲ್ವುದುಟ್ಟಿದ ರಣಬಾಲಕರಂ ॥ ೨೧ ॥

ಅಂತು ಗೆಲ್ದಿಂದಗಿಯಂ ವಿರಥಂಮಾಡಿ ನೆಲಕ್ಕಿಕ್ಕಿ ನಾಗಪಾಶದೊಳ್ ಕಟ್ಟಿ ವಿರಾಧಿತನ ಕೈಯೊಳ್ ಬೀಡಿಂಗೆ ಕಟ್ಟಿಪುವುದುಮಿತ್ತಲ್—

ಕಂ ॥ ಪೆಱರಳವೆ ರಾಮನೊಳ್ ತ
ಳ್ತಱಿಯಲಿವಂ ರಾವಣಂಗೆ ಶೌರ್ಯದೊಳಂ ನೇ ॥

ಗಿರಿಯನೆನೆ ಕುಂಭಕರ್ಣಂ
ಮೆಱಿದಂ ಕೋದಂಡ ಬಾಹುದಂಡದ ನೆರವಂ ॥ ೨೨ ॥

ಅಂತು ಕದನ ಕರ್ಕಶನಾಗಿ ಕಾದುತ್ತುಮಿರೆ ರಾಘವನವನನೇಳಿದಂಬಗೆದು ದಿವ್ಯ ಬಾಣ ತೂಣೀರಕ್ಕೆ ಕೈಯನುಯ್ಪುದುಂ—

ಸ್ರ॥ ಸಾಮಾನ್ಯಾಸ್ತ್ರಂಗಳಿಂ ಭಂಗಮನೊಡರಿಸಿದಂ ಕುಂಭಕರ್ಣಂಗೆನಲ್ ಸಂ।
ಗ್ರಾಮಾವಷ್ಟಂಭ ಸಂರಂಭದಿನತುಲಬಲಂ ಮಾಜಿ ಮಾಜೂಂಪನಾವಂ ॥
ರಾಮಂ ದಿವ್ಯಾಸ್ತ್ರಮಂ ತೊಟ್ಟೊಡೆ ಕುಲನಗಮಲ್ಲಾಡುಗುಂ ದಿಕ್ಕರೀಂದ್ರ।
ಸ್ತೋಮಂ ಬಾಯ್ವಿಟ್ಟು ಪಿಮ್ಮೆಟ್ಟುಗುಮಿಳಿಗಿಱಿಗುಂ ವ್ಯೋಮದಿಂ ಭಾನು
ಬಿಂಬಂ ॥ ೨೩ ॥

ಅಂತವನ ಶಸ್ತ್ರಾಸ್ತ್ರಮಂ ತನುತ್ರ ಕೋದಂಡ ಪತಾಕಾ ದಂಡಂಗಳಂ ಖಂಡಿಸುವುದುಂ—

ಉ ॥ ಮಿಕ್ಕ ಮಹಾರಥಂ ವಿರಥನಾದನಧೋಕ್ಷಜನಂತೆ ನಾಗ ಪಾ।
ಶಕ್ಕೊಳಗಾದನೀಶ್ವರ ಕಿರೀಟಮೆನಲ್ ರಥದಿಂ ನೆಲಕ್ಕೆ ಪಾ ॥
ಯ್ದಕ್ಕಟ ಬೊಮ್ಮನಂತಿರೆ ರಜೋಮಯನಾದನಿದಿರ್ಚಿ ರಾಮನೊಳ್।
ತಕ್ಕಿನ ಕುಂಭಕರ್ಣನೆನೆ ಮಿಕ್ಕವರಾಂತು ಬರ್ದುಂಕುವನ್ನರಾರ್ ॥ ೨೪ ॥

ಅಂತು ಬಂಧನಕ್ಕೆ ವಂದ ಕುಂಭಕರ್ಣನಂ ಪ್ರಭಾಮಂಡಲಂಗೊಪ್ಪಿಸುವುದುಂ ಪ್ರಭಾಮಂಡಲಂ ಮೇಘವಾಹನನಂ ನಾಗಪಾಶದೊಳ್ ಕಟ್ಟಿ ಕುಂಭಕರ್ಣಂಬೆರಸು ಬೀಡಿಂಗೆ ಪೋದನಿತ್ತಲ್ ಪಿರಿದುಂಬೊಟ್ಟು ಭರಂಗೆಯ್ದು ಕಾದುತ್ತುಮಿರ್ದ ವಿಭೀಷಣನಂ ರಾವಣಂ ನೋಡಿ ಕೊಲಲ್ವೇಡಿ—

ಕಂ ॥ ಶೂಲಾಯುಧದಿಂದಿಡೆ ಲಯ
ಕಾಲೋರಗದಂತೆ ಬರ್ಪುದಂ ಜಯ ಲಕ್ಷ್ಮೀ ॥
ಲೋಲಂ ಲಕ್ಷ್ಮೀಧರನ
ಸ್ತ್ರೀಲಿಗಳಿಂ ಖಂಡಖಂಡಮಾಗಿರೆ ಕಡಿದಂ ॥ ೨೫ ॥

ಅಂತು ಕಡಿದು ವಿಭೀಷಣನಂ ಪೆಱಗಿಕ್ಕಿ ಲಕ್ಷ್ಮಣನೆಡೆಗೋದು ರಾವಣನೊಳ್ ತಾಗುವುದುಂ—

ಕಂ ॥ ನೀಂ ಕಾದೆ ವಿಭೀಷಣನಂ
ಮುಂ ಕೊಲಲೆಂದಿಟ್ಟ ಶೂಲಮಂ ಖಂಡಿಸಿ ನಿ ॥

ನ್ನಂ ಕಾವನಾವನಿನ್ನೆನು
ತುಂ ಕೊಂಡಂ ದಿವ್ಯ ಶಕ್ತಿಯಂ ದಶಕಂಠಂ ॥ ೨೬ ॥

ಅಂತು ಕೊಂಡಭಿಮಂತ್ರಿಸಿ ಸರ್ವಶಕ್ತಿಯಿಂದಿಡುವುದುಂ—

ಚ ॥ ಕುಳಿಕನ ದಾಡೆಯೋ ಜವನ ದಾಡೆಯೊ ಮೇಣ್ ವಿಲಯಾಗ್ನಿ ಜಿಹ್ವೆಯೋ।
ಜಳಧಿಯನೀಂಟುವೌರ್ವ ದಹನಾರ್ಚಿಯೊ ಪೇಟಿನೆ ರೌದ್ರ ರೂಪಮಂ ॥
ತಳೆದು ಕಪಿಧ್ವಜರ್ ನಡುಗುವಂತು ದಶಾನನನಿಟ್ಟ ಶಕ್ತಿನಿ ।
ಶ್ಚಳಮೆನೆ ನಟ್ಟುದಪ್ರತಿಮ ಶಕ್ತಿ ಜನಾರ್ದನ ವೀರ ವಕ್ಷಮಂ ॥ ೨೭ ॥

ಅಂತು ದಿವ್ಯ ಶಕ್ತಿ ನಿಶ್ಯಕ್ತಿಯಪ್ಪಂತು ನಟ್ಟು ನಿಲೆ—

ಕಂ ॥ ಸಮರ ವಿಜಯಾಂಗನಾ ಸಂ
ಗಮ ಜನಿತ ಶ್ರಮದೊಳಾದ ನಿದ್ರೆಯವೋಲ್ ಕ ॥
ಣ್ಣೆಮೆ ಮುಚ್ಚಿ ಮುಚ್ಚಿವೋದಂ
ಕಮಲಾಕ್ಷಂ ದನುಜ ದಿವ್ಯ ಶಸ್ತ್ರಾಹತಿಯಿಂ ॥ ೨೮ ॥

ಅನುವರದೊಳ್ ಸಮ ಬಲನೀ
ತನೆ ದೋರ್ಬಲ ದೃಪ್ತನೆಂಬ ಬಗೆದಾರದೆ ಬಿ ॥
ಟ್ಟನನಿಜ್ಞಿಯಲೊಲ್ವನಿಲ್ಲಾ
ವನೊ ರಾವಣನಂತು ಪಾಟಿಯಂ ಪಾಳಿಸುವಂ ॥ ೨೯ ॥

ಅಂತು ಮೂರ್ಛಿತನಪ್ಪುದುಂ ದಾನವ ಸೇನೆಯೊಳ್ ಘೂರ್ಣಿಸುವ ಜಯಾನಕ ರವಂ ಶ್ರವಣ ವಿವರಮಂ ಸಾರ್ತರೆ ತದ್ವೃತ್ತಾಂತಮಂ ತಿಳಿದು—

ಚ ॥ ಅನುಜನೆ ಮೂರ್ಛೆವೋದಟಿಲೆ ಕೋಪಮನಗ್ಗಳಮುಂಟುಮಾಡೆ ಕೇ ।
ಟ್ಟಿನೊ ಕುಲ ಶೈಲಮಂ ಕುಡಿವೆನೋ ಕಡಲಂ ವಸುಧಾತಲಕ್ಕೆ ತ ॥
ರ್ಪೆನೊ ಶಶಿ ಸೂರ್ಯ ಮಂಡಲಮನೆತ್ತುವೆನೋ ನೆಲನಂ ವಿಯತ್ತಲ ।
ಕ್ಕೆನಗಿದಿರಾವನೆಂದೊದಜ್ಞಾ ರಾವಣನೊಳ್ ಪೊಣರ್ದಂ ರಘೂದ್ವಹಂ ॥೩೦॥

ಮ ॥ ತಿರುವಿಲ್ಲಂಬು ಪತಾಕೆ ವಜ್ರಕವಚಂ ಸೂತಂ ವರೂಥಂ ಹಯೋ ।
ತ್ತರಮೆಂಬಿಂತಿವನಾಗಳಿಚ್ಚು ಕಡಿಖಂಡಂಮಾಡಿ ದಿವ್ಯಾಸ್ತ್ರದಿಂ ॥
ವಿರಥಂಮಾಡಿದನೇಟು ಸೂಲ್ಪರೆಗಮಾವಂ ರಾಮಬಾಣಕ್ಕೆ ನಿ ।
ತ್ತರಿಪಂ ತನ್ನನೆ ಸಂತವಿಟ್ಟನಸುರಂ ಮುಂ ತಾಗಲೇನಾರ್ತನೇ ॥ ೩೧ ॥

ಅಂತು ರಾವಣಂ ಪಲವುಸೂಟ್ ವಿರಥನಾಗಿಯುಮವಿಚ್ಛಿನ್ನ ಕವಚನು ಮವ್ರಣಕಾಯನುಮಪ್ಪುದುಂ—

ಕಂ ॥ ಭೇದಿಪ್ಪುದು ಕುಲಾದ್ರಿಯನೆ
ನ್ನೀ ದಿವ್ಯ ಶರಂಗಳವನ ದೇಹಮನಿನಿಸುಂ ॥
ಭೇದಿಸಿದುವಿಲ್ಲ ವಿಸ್ಮಯ
ಮಾದಪುದಲ್ಪಾಯುವಲ್ಲನಕ್ಕುಂ ದನುಜಂ ॥ ೩೮ ॥

ಎಂದು ಬಗೆಯುತಿರ್ಪಿನಂ—

ಮ ॥ ಇನ ವಂಶೋದ್ಭವನಪ್ಪ ಲಕ್ಷ್ಮಣನ ಮೂರ್ಛಾವೇಗಮುಂ ಪಿಂಗಿಸಲ್ ।
ಮನುವಂಶಂಗೆಡೆಮಾಟ್ಪಿನಿಂದಿನಿರುಳೊಳ್ ಲಕ್ಷ್ಮೀಧರಂ ಗೆಲ್ಗುವಿಂ ॥
ದನುಜಾಧೀಶ್ವರನಿಟ್ಟ ಶಕ್ತಿಯ ಪೊಡರ್ಪಂ ತಕ್ಕುದಲ್ಲಿರ್ಪುದಿ ।
ನ್ನೆನಗೆಂಬಂತೆ ದಿನಾಧಿನಾಥನಪರಾಂಭೋರಾಶಿಯಂ ಪೊರ್ದಿದಂ ॥ ೩೯ ॥

ಅಂತು ನೇಸರ್ಪಡುವುದುಮೆರಡುಂಪಡೆಗಳಪಹಾರ ತೂರ್ಯಮುಂ ಪೊಯಿಸಿ ತಂತಮ್ಮ ಬೀಡಿಂಗೆ ಪೋಪುದುಮಾ ಸಮಯದೊಳ್—

ಮ ॥ ಮನದೊಳ್ ಹರ್ಷ ವಿಷಾದನಾದುವು ದಶಾಸ್ಯಂಗೊರ್ವನಂ ವೈರಿಯಂ ।
ಮೊನೆಯೊಳ್ ಸಾಧಿಸಿದೆಂ ಮಹಾಬಲನನೆಂಬುತ್ಸಾಹದಿಂದಾತ್ಮನಂ ॥
ದನರಪ್ಪಿಂದಗಿ ಮೇಘವಾಹನರುಮಂ ಮತ್ಸೋದರಂ ಕುಂಭಕ ।
ರ್ಣನುಮಂ ಬಾಬ್ದಲೆಗೊಂಡರೆಂದಸದಳಂ ಮೆಯ್ಸೆರ್ಚಿದುಬ್ಬೇಗದಿಂ ॥ ೪೦ ॥

ಅಂತು ಬಗೆ ಬೆದಜಿ ರಾವಣಂ ಲಂಕೆಗೆ ಪೋದನಿತ್ತ ದಾಶರಥಿ ಮೂರ್ಛಿತನಾಗಿರ್ದ ಲಕ್ಷ್ಮಣನಂ ಕಂಡು ತಾನುಂ ಮೂರ್ಛೆವೋಗಿ ನೀಡಜಿಂದೆಚ್ಚಿತ್ತು ಮತ್ತ ಮತಿವಿಹ್ವಲ ಚಿತ್ತನಾಗಿ ತಮ್ಮನನೆಯ್ದೆವರ್ಪುದುಂ ಜಾಂಬವ ಸುಷೇಣ ಪ್ರಮುಖ ಮಂತ್ರಿಗಳಿಂದರ್ ದೇವ ದಿವ್ಯ ಶಸ್ತ್ರದೊಳಾದ ವೇದನೆ ಕರಸ್ಪರ್ಶನದಿನಧಿಕಮಕ್ಕುಂ ಮುಟ್ಟಬೇಡೆಂದು ಬಾರಿಸಿ ನೀವೇಕೆ ವಿಹ್ವಲರಪ್ಪಿರ್ ಸೌಮಿತ್ರಿಯವ್ವೊಡೆಂಟನೆಯ ಕೇಶವನಾತನ ಕೈಯೊಳ್ ರಾವಣಂಗಪಾಯಮಕ್ಕುಮಲ್ಲದೀತಂಗಪಾಯಮಪ್ಪು ದಲ್ತು ದಿವ್ಯಶಸ್ತ್ರ ಪ್ರಹರಣ ಭರಮನಪಹರಿಸುವ ಭೇಷಜ ಪ್ರಯೋಗಮನೊಡರಿಸುವ ಮೆಂದು ಶೋಕೋದ್ರೇಕಮನುಸಶಮಿಸುವುದುಮನಂತರಂ—

ಕಂ ॥ ಸೌಮಿತ್ರಿಯ ಸುತ್ತಣ ರಣ
ಭೂಮಿಯನಿಂಬಾಗೆ ಸಮಜಿ ಕಪಿಕೇತು ಕುಲ ।

ಗ್ರಾಮಣಿ ಸುಗ್ರೀವಂ ವಿ
ದ್ಯಾಮಯಮುಂ ಸಪ್ತ ಗುಪ್ತಿಯಂ ನಿರ್ಮಿಸಿದಂ ॥ ೩೫ ॥

ಅಂತು ನಿರ್ಮಿಸಿದ ವಿದ್ಯಾಪ್ರಾಕಾರಂಗಳ ಬಹಿರಂತಃಪ್ರದೇಶಂಗಳೊಳ್ ಪಲ ಬರ್ ವಿದ್ಯಾಧರರಂ ಕಾಪುವೇಟ್ಪುದುಂ—

ಕಂ ॥ ಚಲಿಯಿಸೆನೆಂದಾದಿಯ ಬಾ
ಗಿಲ ಕಾಪಿನೊಳಸಮ ಸೈನ್ಯನೆಂಟನೆಯ ಕುಲಾ ॥
ಚಲಮೆಂಬಿನಂ ಪ್ರಭಾಮಂ
ಡಲನಿರ್ದಂ ಮಂಡಲಾಗ್ರಮಂ ಜಡಿಯುತ್ತುಂ ॥ ೩೬ ॥

ಎರಡನೆಯ ಬಾಗಿಲೊಳ್ ಸಂ
ಗರಕ್ಕೆ ತಾನಂಗರಕ್ಕೆ ರಘುಜಂಗೆಂಬಂ ॥
ತೆರಡನೆಯ ದಂಡಧರನಂ
ತಿರ್ದನುಜದಂಗದಂ ಗದಾ ದಂಡಧರಂ ॥ ೩೭ ॥

ಮೂಜನೆಯ ನೊಸಲ ಕಣ್ಣಂ
ತೋಜುವೆನಾನಸುರ ಸೇನೆಗೆಂಬಂತಾಗಳ್ ॥
ಮೂಜನೆಯ ಬಾಗಿಲೊಳ್ ಕೈ
[1]ವಿಾಜಿದೆ ಶೂಲಾಯುಧಂ ವಿಭೀಷಣನಿರ್ದಂ ॥ ೩೮ ॥

ಸಮದಂ ಚಾಪಧರಂ ತ
ನ್ನಮಿತ ಬಲಂಬೆರಸು ಮಾರುತಂಗಂ ಪುಗಲಿಂ ॥
ದು ಮರೀಚಿಗಮಣಮರಿದೆನೆ
ಕುಮುದಂ ನಾಲ್ಕನೆಯ ಬಾಗಿಲೊಳ್ ನೆಲೆಸಿದಿರ್ದಂ ॥ ೩೯ ॥

ಪರಚಕ್ರ ವಿಲಯ ಕೇತುವೊ
ಲಿರೆ ಕೊಂತಂ ತನ್ನ ಹಸ್ತದೊಳ್ ತನ್ನ ಬಲಂ ॥
ಬೆರಸು ಸುಷೇಣಂ ಖೇಚರ
ಪರಿವೃಢನಯ್ದನೆಯ ಬಾಗಿಲೊಳ್ ಬಂದಿರ್ದಂ ॥ ೪೦ ॥

ಅಪರಿಮಿತ ಸೈನಿಕಂ ಪಿಡಿ
ದು ಪಿಂಡಿವಾಳಮನಖರ್ವ ಬಾಹಾಗರ್ವಂ ॥

---

1. ಪಾಜಿದೆ. ಗ. ಚ.

ಕ್ಷಪಿತ ರಿಪುಸೈನ್ಯನಿರ್ದಂ
ಕಪಿಕುಲನಾಜನೆಯ ಬಾಗಿಲೊಳ್ ಸುಗ್ರೀವಂ ॥ ೪೧ ॥

ಎನ್ನನತಿಕ್ರಮಿಸಲ್ ನೆಱಿ
ವನ್ನಂ ಪೆಱನಾವನಿರುಳ ಕಾಳೆಗದೊಳಿನು ॥
ತ್ತುನ್ನೀಲಂ ರಣಲೋಲಂ
ತನ್ನ ಬಲಂಬೆರಸು ಕಡೆಯ ಬಾಗಿಲೊಳಿರ್ದಂ ॥ ೪೨ ॥

ಅಂತವರಸಂಖ್ಯಾತ ಬಲಸಮೇತರಾಗಿರ್ಪುದುಮಾ ಪ್ರಾಕಾರದೊಳಗಣ ಮಣಿಮಂಟಪದ ಪೂರ್ವದ್ವಾರದೊಳ್ ಶರಭನುಂ ಪಶ್ಚಿಮದ್ವಾರದೊಳ್ ಚಂದ್ರಮುರೀಚಿಯುಂ ಉತ್ತರದ್ವಾರದೊಳ್ ಜಾಂಬವನುಂ ದಕ್ಷಿಣದ್ವಾರದೊಳ್ ಮಹೇಂದ್ರನುಂ ಅಪಾರ ವೀರಭಟ ಸೇನಾಸಮನ್ವಿತರಾಗಿ ಲಕ್ಷ್ಮಣನಂ ಕೈಕೊಂಡಿರ್ಪುದುಮಿತ್ತ ರಾವಣಂ ನಿಜಾಂತರಂಗದೊಳ್—

ಕಂ ॥ ಸಾಯದೆ ಮಾಣಂ ಲಕ್ಷ್ಮಣ
ನೀಯಿರುಳೊಳೆ ಸಾಯೆ ಸೆಱಿಗಳಂ ಕೊಲ್ಲದೆ ಕೈ ॥
ಗಾಯರವರೆಮಗೆ ಪಿರಿದುಮ
ಪಾಯಂ ಸಮನಿಸಿದುದೆಂದು ಚಿಂತಿಸುತಿರ್ದಂ ॥ ೪೩ ॥

ಅಂತಿರ್ಪುದುಮಿತ್ತ ಸೀತಾದೇವಿ ಶಕ್ತಿಪ್ರಹಾರದಿಂ ಲಕ್ಷ್ಮೀಧರಂ ಮೂರ್ಛಿತನಾಗಿರ್ದನೆಂಬುದಂ ಕೇಳ್ದು ಶೋಕಾನಲ ದಂದಹ್ಯಮಾನ ಮಾನಸೆಯಾಗಿ—

ಕಂ ॥ ಈ ದಿವ್ಯಾಯುಧ ಹತಿಯಿಂ
ದಾದತ್ತು ವಿಪತ್ತಿ ನಿನಗೆ ಲಕ್ಷ್ಮೀಧರ ಧಾ ॥
ತ್ರೀ ದಯಿತನಪ್ಪೆ ನೀನೆಂ
ಬಾದೇಶಮಡೆತ್ತ ಪೋಯ್ತು ಮನುಕುಲ ತಿಲಕಾ ॥ ೪೪ ॥

ಸಾವಂ ರಾವಣನೆಂದರ್
ಕೇವಲಿಗಳ್ ಸಿದ್ಧಶಿಲೆಯನುದ್ಧರಿಸಿದ ಶೌ ॥
ರ್ಯಾವಷ್ಟಂಭನಿನದು ಪುಸಿ
ಸಾವಾದುದೆ ನಿನಗೆ ವೈರಿ ಶಸ್ತ್ರಾಹತಿಯಿಂ ॥ ೪೫ ॥

ಎಂದು ಪಲತೆಱದಿಂ ಪ್ರಲಾಪಂಗೆಯ್ವ ಸೀತೆಯುಂ ವಿನೀತೆ ಖಚರಕಾಂತೆ ಸಂತೈಸಿ ನಿಮಗಿನಿತು ದುಃಖಮೇವುದು ನಿಮ್ಮ ಮೈದುನಂ ವಾಸುದೇವನಪ್ಪುದಱಿಂ ಪ್ರತಿವಾಸುದೇವನಿಂ ಸಾವನೆಯ್ದುವನಲ್ಲನೆಂದಟಿಲನಾಱಿಸುತಿರ್ಪಿನಮಿತ್ತಲ್—

ಕಂ ॥ ಗಗನ ಚರಂ ಲಕ್ಷ್ಮೀಧರ
ನಗಣ್ಯ ಪುಣ್ಯ ಪ್ರಭಾವದಿಂ ಮತ್ತೊರ್ವಂ ॥
ಗಗನ ತಳಂ ನಿಜ ಭೂಷಾಂ
ಶುಗಳಿಂ ಪ್ರಜ್ವಳಿಸುವಂತು ಬೇಗಂ ಬಂದಂ ॥ ೪೬ ॥

ಅಂತು ಬಂದು ಬೀಡಂ ಪುಗುವಲ್ಲಿ ಕಾಪಿನವರಡ್ಡಂಬರ್ಪುದುಮಾತಂ ರಥ ನೂಪುರಚಕ್ರವಾಲಪುರದಿಂ ಕಾಳಿಗದ ಸುದ್ದಿಯಂ ಜನಕನಾರಯ್ಯಲಟ್ಟಿದೊಡೆ ಬಂದೆನೆಂದವರನುಮತದಿಂ ಪ್ರಭಾಮಂಡಲನಂ ಬಂದು ಕಂಡು ತನ್ನ ಬಂದ ಬರವ ನಱಿಪಿ ಸೌಮಿತ್ರಿಯ ಮೂರ್ಛಾಪ್ರಪಂಚಮನವರ ದೆಸೆಯಿನಱಿದಾ ದಿವ್ಯ ಶಕ್ತಿಯಿಂದಾದಪಾಯಮನಪಹರಿಸುವುಪಾಯಮನಾಂ ಬಲ್ಲೆನೆಂಬುದುಂ ಪ್ರಭಾಮಂಡಲಂ ಪ್ರಮೋದ ಮುದಿತ ಹೃದಯನಾತನಂ ರಾಮಸ್ವಾಮಿಯಲ್ಲಿಗುಯ್ವುದುಮಾತಂ ಸಾಷ್ಟಾಂಗ ಪ್ರಣತನಾಗಿ ದೇವ ಭವತ್ಪ್ರಸಾದದಿಂ ಲಕ್ಷ್ಮೀಧರಂಗೆ ಸರ್ವ ಕ್ಷೇಮ ಮಕ್ಕುಮಾ ದೆಸೆಗುಮ್ಮಳಿಸದೆನ್ನ ಬಿನ್ನಪಮನವಧರಿಸುವುದೆಂದಿಂತೆಂದಂ—

ಚ ॥ ನಿರುಪಮ ದೇವನೀತ ಪುರಮೆಮ್ಮ ಪುರಂ ಪುರ ವಲ್ಲಭಂ ಕಲಾ ।
ಪರಿಣತನೆನ್ನ ತಂದೆ ಶಶಿಮಂಡಲನಾನತಿಚಂದ್ರನೆಂಬ ಖೇ ॥
ಚರನೆನದೊರ್ಮೆ ವಾಯು ಪಥದೊಳ್ ಪರಮೋತ್ಸವದಿಂ ವಿಹಾರಿಸು ।
ತ್ತಿರೆ ಪಗೆವಂ ಸಹಸ್ರವಿಜಯಂ ಕಡುಕೆಯ್ದಿದಿರಾಗಿ ತಾಗಿದಂ ॥ ೪೭ ॥

ಅಂತು ತಾಗೆ ಪಿರಿದುಪ್ಪೊಟ್ಟಿರ್ವರುಂ ಭರಂಗೆಯ್ವು ಕಾದುತ್ತಿರ್ದು—

ಕಂ ॥ ಅವನಿಟ್ಟ ಶಕ್ತಿಯಿಂದಾಂ
ಜವಮಟ್ಟಿದು ನಭೋವಿಭಾಗದಿಂ ಸಾಕೇತ ॥
ಕ್ಕವತರಿಸಿ ಮಹೇಂದ್ರೋದ್ಯಾ
ನ ವನದ ತಣ್ಬಟ್ಟಿಲ ತಾಣದೊಳ್ ಬಿಟ್ಟಿರ್ದೆಂ ॥ ೪೮ ॥

ಚ ॥ ಭರತನುಮೆನ್ನ ಪುಣ್ಯವಶದಿಂದಿರದಲ್ಲಿಗೆ ಬಂದು ಮೂರ್ಛೆವೋ ।
ಗಿರೆ ಕೃಪೆಯಿಂದಮೆನ್ನನವಲೋಕಿಸಿ ದಿವ್ಯ ಸುಗಂಧ ತೋಯಮುಂ ॥
ತರಿಸಿ ಮದಂಗದೊಳ್ ತಳಿಯೆ ಶಕ್ತಿಯ ಶಕ್ತಿ ಪೊಡರ್ಪುಗೆಟ್ಟು ಚೆ ।
ಚ್ಚರಮದು ಪಿಂಗೆ ಮುಚ್ಚಿದಿಳಿದೆಂ ಮರವಟ್ಟವನೇಟ್ಪ ಮಾಟಕ್ಕೆಯಿಂ ॥ ೪೯ ॥

ಅಂತು ಮೂರ್ಛೆಯಿಂದೆಟ್ಟಿತ್ತು ಕತಿಪಯ ಪರಿಜನಂಬೆರಸಿರ್ದು ಭರತನಂ ಕಂಡಕಾರಣ ಬಂಧುವಪ್ಪ ನಿನ್ನ ದೂಸಱಿಂದೆನಗೆ ಪುನರ್ಜನ್ಮಮಾದುದೀ ಗಂಧ ಸಲಿಲಕ್ಕಿನಿತು ಸಾಮರ್ಥ್ಯಮಾದ ಕಾರಣಮಂ ಪೇೞ್ವುದೆನೆ ಭರತನಿಂತೆಂದನೆಮ್ಮ

ಪುರಕ್ಕೆ ಮಾರಿಗುತ್ತಂ ನೊದಲಾಗೆ ಪೆಜವುಮಾಗಂತುಕ ಪೀಡೆಗಳಪ್ಪುದುಮಾನ ವರ್ಕೇನುಂಗೆಯ್ಯಲಜಿಯದುಮ್ಮಳಿಸುತ್ತಿರ್ಪುದುಂ ಆ ವ್ಯತಿಕರಮನೆಮ್ಮ ಮಾವಂ ದ್ರೋಣಮೇಘಂ ಕೇಳ್ದು ಬಂದಾ ಗಂಧೋದಕಮಂ ತಳಿದು—

ಕಂ ॥ ಪುರಮುಂ ದೇಶಮುಮುಂ ವ್ಯಾ
ಧಿ ರಹಿತಮಪ್ಪಂತು ಮಾಬ್ಪುದುಂ ಪಿರಿದಪ್ಪ ॥
ಚ್ಚರಿ ತನ್ನ ಚಿತ್ತದೊಳ್ ಪೆ
ರ್ಚಿರೆ ಭರದಿಂ ದ್ರೋಣಮೇಘನಂ ಬೆಸಗೊಂಡೆಂ ॥ ೫೦ ॥

ಅಂತು ಬೆಸಗೊಳ್ವುದುಂ ದ್ರೋಣಮೇಘನಿಂತೆಂದಂ—

ಕಂ ॥ ಪಲವುಂ ವ್ಯಾಧಿಗಳಂ ಮು
ತ್ಕುಲವಧು ನಮೆಯುತ್ತುಮಿರ್ದು ಬಸಿರಾಗಲೊಡಂ ॥
ತೊಲಗೆ [1]ರುಜೆ ಹೃದಯ ಶಲ್ಯಂ
ಲಲನಾರತ್ನಮನದೊಂದು ಕೂಸಂ ಪೆತ್ತಳ್ ॥ ೫೧ ॥

ಆ ಕೂಸಿಂಗದುಕಾರಣದಿಂ ವಿಶಲ್ಯಸೌಂದರಿಯೆಂಬ ಪೆಸರಾದುದಾಕೆಯ ಮಜ್ಜನ ಜಲದಿಂದೆಮ್ಮ ನಾಡುಂ ಬೀಡುಂ ವ್ಯಾಧಿರಹಿತಮಾದುದೆಂಬಿದಂ ದ್ರೋಣ ಮೇಘಂ ಪೇಳ್ದಿನೆಂದು ಭರತಂ ಪೇಟ್ಪುದುಂ—

ಕಂ ॥ ಎನಗಧಿಕಮಾಗೆ ಕೌತುಕ
ವಿನಿತತಿಶಯಮಾಕೆಗಾದ ಕಾರಣಮಂ ಪೇ ॥
ಟಿನಗೆಂದು ಮತ್ತೆಯುಂ ಭರ
ತನನಾಂ ಬೆಸಗೊಂಡೆನಪರಿಮಿತ ಸುಚರಿತನಂ ॥ ೫೨ ॥

ಬೆಸಗೊಳ್ವುದುಂ ಭರತನಿಂತೆಂದನೀ ಪೂರ್ವವಿದೇಹದ ಪುಂಡರೀಕಿಣೀಪುರಮ ನಾಳ್ವಂ ತ್ರಿಭುವನಾನಂದ ಚಕ್ರವರ್ತಿಯೆಂಬನಾತನ ಮಗಳನಂಗಶರೆಯೆಂಬಳ್ ತಿರುವಿಂ ಬರ್ದಂಕೆದನಂಗನರಲಂಬಿನಂತೆ ಕೇಳೀವನದೊಳಗೆ ಸುಟಿಯುತ್ತಿರ್ಪುದು ಮಾ ಸಮಯದೊಳ್ ಪುಷ್ಕಲಾವತೀವಿಷಯದ ವಿಜಯಾರ್ಧಗಿರಿಯ ಪ್ರತಿಷ್ಠಾ ಪುರಮನಾಳ್ವಂ ಪುನರ್ವಸುವೆಂಬ ವಿದ್ಯಾಧರನಾಕೆಯಂ ಕಂಡು ಮದನಶರ ಶಲಾಕಾ ಕೀಲಿತ ಹೃದಯನಾಗಿ ವಿಮಾನದೊಳಿಟ್ಟು ನಭಕ್ಕೆ ನೆಗೆದು ಪೋಪುದುಂ ತ್ರಿಭುವ ನಾನಂದಚಕ್ರವರ್ತಿ ಕೋಪವಶ ವರ್ತಿಯಾಗಿ ಪಲರುಂ ವಿದ್ಯಾಧರ ಪ್ರಮುಖರ ನಾತನ ಮೇಲೆತ್ತವೇಟ್ಪುದುಮವರೊಳ್ ಪುನರ್ವಸು ಕಾದಿ ಬಸವಟಿದನಂಗಶರೆ ಯಂ ಪರ್ಣಲಘು ವಿದ್ಯೆಯಿಂ ನೆಲಕ್ಕಿಟಿಪುವಂತು ಮಾಡಿ ಪೋಪುದುಂ—

1. ರುಜಾ ಹೃಚ್ಛಲ್ಯಂ. ಖ. ಘ..ಚ.

ಕಂ ॥ ಆ ವಿದ್ಯೆ ಗಗನ ತಲದಿಂ
ದಾವಧುವಂ ಮೆಲ್ಲನಿಟ್ಟಿಪಿ ರೌದ್ರ ಮೃಗಂಗ ॥
ಳ್ಗಾವಾಸಮೆನಿಪದೊಂದು ಮ
ಹಾ ವಿಷಮಾಟವಿಯೊಳರಿಸಿ ಪೋದತ್ತಾಗಳ್ ॥ ೫೩ ॥

ಆಕೆಯುಮಾ ಕಾಂತಾರ ನ
ದೀ ಕೂಲದೊಳಿರ್ದು ನೆನೆದು ಪಿತೃ ಮಾತೃಗಳಂ ॥
ಶೋಕಾಕುಲೆ ದುಷ್ಕರ್ಮ ವಿ
ಪಾಕಮಿದೆಂದಂತರಂಗದೊಳ್ ಚಿಂತಿಸಿದಳ್ ॥ ೫೪ ॥

ಧರಣೀಶ್ವರ ಸುತೆಯಾಗಿಯು
ಮರಣ್ಯದೊಳ್ ಬಿಟ್ಟು ಸಾವ ದುಷ್ಕರ್ಮ ಫಲಂ ॥
ದೊರೆಕೊಂಡತ್ತೆನಗಿದನಪ
ಹರಿಪೊಡೆ ಪೆಜತೇಂ ಜಿನೇಂದ್ರ ಚರಣಮೆ ಶರಣಂ ॥ ೫೫ ॥

ಎಂದು ತಜಿಸಂದು ತಪದೊಳ್
ನಿಂದು ಮಹಾನೋಂಪಿಯನಿತುಮಂ ಪಲಕಾಲಂ ॥
ಸಂದಿಸಿ ನೋಂತು ತನೂದರಿ
ಪಿಂದಿಕ್ಕಿದಳಬ್ದಮಂ ಸಹಸ್ರ ತ್ರಯಮುಂ ॥ ೫೬ ॥

ಅಂತು ತನು ತಾಜಿ ತಪಂಗೆಯ್ದನಶನ ದೀಕ್ಷೆಯೊಳಿರ್ದೊಂದು ದೆವಸಂ—

ಕಂ ॥ ನುಂಗೆ ಜರದಜಗರಂ ತ
ನ್ನಂಗಿ ತಪಸ್ವಿನಿ ಸಮಾಧಿ ಸಮನಿಸೆ ಮನದೊಳ್ ॥
ಪಿಂಗದೆ ನೆಲಸಿರೆ ಪಂಚ ಪ
ದಂಗಳ್ ನಾಲಗೆಯೊಳಜಿವೆ ಮೆಯ್ಯಾಗಿರ್ದಳ್ ॥ ೫೭ ॥

ಅಂತಿರ್ದು ಶರೀರಭಾರಮನಿಟ್ಟಿಪಿ ಸನತ್ಕುಮಾರ ಕಲ್ಪದೊಳ್ ಪುಟ್ಟಿ ಸುರ ಲೋಕ ಸುಖಮನನುಭವಿಸಿ ಬಂದೀಗಳೀ ದ್ರೋಣಮೇಘಂಗೆ ಸರ್ವೌಷಧಿ ಪ್ರಾಪ್ತೆ ಯಪ್ಪ ಸುತೆಯಾದಳಾ ಪುನರ್ವಸುವುಂ ಮಗುಟ್ಟಿ ಬಂದು ಮುನ್ನಂ [1]ತನ್ನಿರಿಸಿ ಪೋದ ಪೇರಡವಿಯೊಳನಂಗಶರೆಯಂ ಕಾಣದೆ ತನಗದುವೆ ನಿರ್ವೇಗ ಕಾರಣಮಾಗೆ ತಪಂಬಟ್ಟು—

---

1. ತಂದಿರಿಸಿ. ಕ. ಚ.

ಕಂ ॥ ತನುವಂ [1]ತಪಿಯಿಸಿ ತಪದೊಳ್
ಮುನಿಯದೆ ಮುನಿಯಿಸದೆ ನಡೆದು ಮುನಿಪತಿ ಸಂನ್ಯಾ ॥
ಸನದಿಂ ಸಮಾಧಿ ಸಮನಿಸೆ
ಸನತ್ಕುಮಾರದೊಳಪಾರ ಸುಖದೊಳ್ ತಣಿದಂ ॥ ೫೮ ॥

ನಿರತಿಶಯ ಸುಖ ಸುಧಾಸಾ
ಗರದೊಳ್ ಮನವಾರೆ ಮೂಡಿ ಮುಟ್ಟಾಡುತ್ತುಂ ॥
ಪರಮಾಯುವಂ ಪುನರ್ವಸು
ಚರಾಮರಂ ತೀರ್ಚಿ ಬಂದು ಲಕ್ಷ್ಮಣನಾದಂ ॥ ೫೯ ॥

ಎಂದು ಮನಃಪರ್ಯಯ ಜ್ಞಾನಿಗಳಪ್ಪ ಸರ್ವಭೂತಹಿತ ಭಟ್ಟಾರಕರ್ ತನಗೆ ಪೇಟ್ಟುದನೆನಗೆ ಭರತಂ ಪೇಟ್ದಿನೆಂದತಿಚಂದ್ರ ವಿಯಚ್ಚರಂ ಬಿನ್ನವಿಸೆ ರಾಮ ಚಂದ್ರಂ ಮೆಚ್ಚಿ ಮೆಚ್ಚುಗೊಟ್ಟು ಹನುಮದಂಗದ ಪ್ರಭಾಮಂಡಲರನಾ ಗಂಧೋದಕ ಮಂ ಭರತನಂ ಬೇಡಿ ತನ್ನಿಮೆಂದಟ್ಟುವುದುಮವರ್ ಮನೋವೇಗದಿಂ ದಿವ್ಯ ವಿಮಾನಂಗಳನೇಜ್ಯ ವಿಯನ್ಮಾರ್ಗದಿಂ ಪೋಗಿ ಸಾಕೇತಮಂ ಪೊಕ್ಕು ಭರತನಂ ಕಂಡು—

ಕಂ ॥ ಕಿಜ್ಯಿದಜ್ಯಿಂಳೆ ರಣದ ವಾರ್ತೆಯ
ನಜ್ಯಿಪಿ ದಶಾನನನ ಶಕ್ತಿ ನೆಜ್ಯಿಗೊಳೆ ತನುವಂ ॥
ಮಜ್ಯಿದಿರ್ದಂ ಲಕ್ಷ್ಮಣನೆಂ
ದಜ್ಯಿಪಿದರಂಗದ ಮರುತ್ತನೂಜ ಪ್ರಮುಖರ್ ॥ ೬೦ ॥

ಪ್ರಶಮಿಸುಗುಂ ಲಕ್ಷ್ಮೀಧರ
ನ ಶಕ್ತಿಯಿಂದಾದ ಬಾಧೆ ತಡೆಯದೆ ನೀವಿಂ ॥
ನಿಶೆಯೊಳೆ ತಂದೆಮಗೀವುದು
ವಿಶಲ್ಯಸೌಂದರಿಯ ಮಿಂದ ಗಂಧೋದಕಮಂ ॥ ೬೧ ॥

ಅದಲ್ಲದಂದು ನೇಸರ್ ಮೂಡುವುದುಂ ಲಕ್ಷ್ಮಣಂ ಗತಪ್ರಾಣನಕ್ಕುಮೆನೆ ಭರತ ಶತ್ರುಘ್ನರ್ ಕೇಳ್ದು ರಾವಣನಮೇಲೆ ನಡೆಯಲೊಡರಿಸಿ—

ಕಂ ॥ ಬಿಸಸನದೊಳ್ ದಶಮುಖನಂ
ದೆಸೆವಲಿಗುಡಲೆಂದು ಭರತ ಶತ್ರುಘ್ನರ್ ಸಾ ॥
ಹಸ ಧನ ರಾಜಿ ಕ್ರೀಡಾ
ವಸಥರ್ ಸನ್ನಾಹಭೇರಿಯಂ ಪೊಯಿಸುವುದುಂ ॥ ೬೨ ॥

---

1. ಕ್ಷಪಿಯಿಸಿ. ಗ.

ಆದಂ ಪ್ರಭಾಮಂಡಲಂ ಬಾರಿಸಿ ರಘುವೀರನ ಬೆಸನಿಲ್ಲದೆಮಗೆ ನಿಮ್ಮ ನುಯ್ವುದುಚಿತಮಲ್ತು ನಿಮಗೆ ಲಂಕೆ ದೂರಮುಪ್ಪುದಱಿಂ ಬೇಗಂ ಬರಲ್ಬಾರದೆನೆ ಭರತನಿನ್ನೆಮಗೆ ಕಜ್ಜಮಾವುದೆನೆ ಗಂಧೋದಕಮಂ ತರಿಸಿ ಕೊಟ್ಪೊಡದನುಯ್ದು ಲಕ್ಷ್ಮಣನ ಶಸ್ತ್ರಪೀಡೆಯಂ ಕಳೆವಮೆನೆ ಭರತನಿಂತೆಂದಂ—

ಕಂ ॥ ಸುರಭಿ ಜಲದಿಂದಮೇನಾ
ತರುಣಿಯನೊಡಗೊಂಡು ಪೋವುದಾಕೆಗೆ ಲಕ್ಷ್ಮೀ ॥
ಧರನೆ ವರನೆಂಬುದಂ ಶುಭ
ಚರಿತರ್ ಮುನ್ನೆನಗೆ ದಿವ್ಯಮುನಿಪರ್ ಪೇೞ್ದರ್ ॥ ೬೩ ॥

[1]ಎಂತುಂ ಸ್ತ್ರೀರತ್ನಕ್ಕಾ
ತಂ ತಕ್ಕಂ ಮಿಕ್ಕ[2]ಱನಧಿಕಾರಿಗಳಿಂದ ॥
ತ್ಯಂತ ಹಿತರಂ ಪ್ರಧಾನರ
ನಂತವರೊಡಗೂಡಿ ಕೂಸನೆರೆದಟ್ಟುವುದುಂ ॥ ೬೪ ॥

ಮನ್ನಿಸಿ ಭರತನ ಮಾತಂ
ತನ್ನ ತನೂಭವೆ ವಿಶಲ್ಯಸೌಂದರಿವೆರಸಿ ॥
ತ್ತನ್ನೂರ್ವರ್ ಕನ್ನೆಯರಂ
ಚೆನ್ನೆಯರಂ ದ್ರೋಣಮೇಘನತ್ಯುತ್ಸವದಿಂ ॥ ೬೫ ॥

ಆ ಕನ್ಯಾರತ್ನಂಗಳಂ ಪ್ರಭಾಮಂಡಲಂ ವಿಮಾನಾರೂಢೆಯರ್ಮಾಡಿ ನಕ್ಷತ್ರ ವೀಥಿಯಿಂ ಕ್ಷಣಮಾತ್ರದೊಳೆ ರಣಭೂಮಿಯನೆಯ್ದಿ ವಿಮಾನಂಗಳನವನೀತಲ ಕ್ಕವತರಿಸಿ ಬರ್ಪಲ್ಲಿ ವಿಶಲ್ಯಸೌಂದರಿ ಲಕ್ಷ್ಮಣನನೆನಿತೆನಿತು ಸಾರೆ ವ್ಯೋಕುಮನಿತ ನಿತು ಶಕ್ತಿ ಶಕ್ತಿಗೆಟ್ಟು—

ಮ ॥ ಗಗನಾಭೋಗಮನಾವಗಂ ಬೆಳಗುತುಂ ಜ್ವಾಲಾ ಸಹಸ್ರಂಗಳಂ।
ದುಗುಳುತ್ತುಂ ಕಿಡಿಯಂ ಜನಾರ್ದನನ ವಕ್ಷೋಭಾಗಮಂ ಬಿಟ್ಟು ಮೇ ॥
ಗೊಗೆವಾಗಳ್ ಪವನಾತ್ಮಜಂ ಪಿಡಿಯೆ ದಿವ್ಯಸ್ತ್ರೀಯ ರೂಪಾಗಿ ಕೈ।
ಮುಗಿದೆನ್ನಂ ಬಿಡಿಮೆಂದು ತಲ್ಲಳಿಸಿ ಶಂಕಾತಂಕಮಂ ತಾಳ್ದಿದಳ್ ॥ ೬೬ ॥

ಅಂತು ನಡನಡುಗುತ್ತುಮಾಂ ವಿಜೆಯೆಯೆಂಬೆಂ ಪ್ರಜ್ಞಪ್ತಿವಿದ್ಯೆಯಿಂ ಕಿಱಿ ಯಳೆಂ ಬಾಲಿಭಟ್ಟಾರಕರ್ ಕಾರಣಮಾಗೆ ರಾವಣಂ ಕೈಲಾಸಮನೆತ್ತಿ ಬಟ್ಟಿಕ್ಕೆ ವೀಣೆಯಂ ಬಾಜಿಸಿ ಜಿನ ಗುಣಸ್ತವನಂಗಳಂ ಹರ್ಷಚಿತ್ತದಿಂ ಪಾಡುತ್ತುಮಿರೆ ಧರಣೀಂದ್ರಂಗಾಸನ ಕಂಪಮಾಗೆ ಬಂದು—

---

1. ಅಂತುಂ. ಗ. ಘ; ಉಂತುಂ. ಖ 2. ಱಧಿಕಾರಿಂದಂದ. ಚ

ಕಂ ॥ ಕರಮೊಸೆದು ನೋಡಿ ದಶಕಂ
ಧರನಂ ಹರ್ಷ ಪ್ರಕರ್ಷದಿಂದೆನ್ನಂ ಪೇ ॥
ಚರಪತಿಗೆ ಕೊಟ್ಟನಾಂ ದಶ
ಶಿರನ ಬಿಸಂ[1]ಬಿಡಿದು ತಾಗಿದೆಂ ಲಕ್ಷ್ಮಣನಂ ॥ ೬೭ ॥

ನಾನುವಿಾ ಸರ್ವೌಷಧರ್ಧಿಪ್ರಾಪ್ತೆಯಪ್ಪ ವಿಶಲ್ಯಸೌಂದರಿಯಿಂದಲ್ಲದೆ ಪೋಪೆನಲ್ಲೆನೆನ್ನಂ ಪೋಗಲೀಯಿವೆಮೆನೆ ವಿದ್ಯಾಧರರ್ಗೆಲ್ಲಂ ಚೋದ್ಯಮಾಗೆ ವಿದ್ಯಾದೇವತೆಯನಣುವಂ ಬಿಟ್ಟು ಕಳಿವುದುಮಿತ್ತಲ್—

ಕಂ ॥ ಚಲದಲಕ ಚಯಂ ರಘುಕುಲ
ತಿಲಕನ ಚರಣಾರವಿಂದಮಂ ಮಧುಕರ ಮಂ ॥
ಡಲಿಯಂತೆ ಮುಸುಕೆ ವನಿತಾ
ತಿಲಕಂ ನಡೆತಂದು ವಿನಯ ವಿನಮಿತೆಯಾದಳ್ ॥ ೬೮ ॥

ತದನಂತರಂ—

ಕಂ ॥ ದನುಜೇಂದ್ರನ ವಿಜಯ ಶ್ರೀ
ವನಿತೆಯೊ ಲಕ್ಷ್ಮಣನ ಪುಣ್ಯದೇವತೆಯೋ ಪೇ ॥
ಟಿನೆ ಕೆಲದೊಳ್ ಬಂದಿರ್ದಳ್
ತನುರುಚಿ ಮೂವಳಸುವಳಸೆ ಪರಿಷಜ್ಜನಮಂ ॥ ೬೯ ॥

ಆಗಳಾ ಕನ್ಯಾರತ್ನದ ಕರಸ್ಪರ್ಶನದಿಂ ಪವಿತ್ರ ಸುರಭಿ ಸಲಿಲ ಸೇಚನದಿಂ—

ಕಂ ॥ ಪತ್ತುವಿಡೆ ಮೂರ್ಛೆ ಮುನಿಸ
ಜ್ಜೊತ್ತಿದವೋಲ್ ಮನದಿನಗಲದಿರೆ ಕಣ್ ಕೆಂಪಂ ॥
ಬಿತ್ತರಿಸೆ ಮಸಗಿ ರಾವಣ
ನೆತ್ತಣನೆನುತುಂ ಜನಾರ್ದನಂ ಕುಳ್ಳಿರ್ದಂ ॥ ೭೦ ॥

ಅಂತಿರ್ಪುದುಂ—

ಕಂ ॥ ಅಲರ್ವಂತಿರಿನೋದಯದೊಳ್
ಜಲಜ ವನಂ ರಾಘವಂಗಮಖಿಲ ಜನಕ್ಕಂ ॥
ನೆಲೆವೆರ್ಚಿದುದನುರಾಗಂ
ಜಲರುಹ ನಾಭಂಗೆ ಪಿಂಗೆ ಮೂರ್ಛಾವೇಗಂ ॥ ೭೧ ॥

1. ಬಡೆದು. ಖ. ಗ. ಚ.

ಕಂ ॥ ಆಶೀರ್ನಿನಾದವಾಶಾ
ದೇಶಮನೆಯ್ದಿದುದು ಮಂಗಲಾನಕ ರವಮಾ ॥
ಕಾಶಮನಡರ್ದುದು ಮೂರ್ಛಾ
ಕ್ಲೇಶಂ ಲಕ್ಷ್ಮೀಧರಂಗೆ ಪೆಜಪಿಂಗಲೊಡಂ ॥ ೭೨ ॥

ನಾರಾಯಣನಂ ಮಣಿಮಯ
ನೀರಾಜನ ದೀಪಮಾಲೆ ಬಳಸಿದುವಾಗಳ್ ॥
ಮೇರುವನೊಲ್ಲದೆ ಪಲವುಂ
ತಾರಾವಳಿ ಬಳಸುವಂತೆ ನೀಲಾಚಲಮಂ ॥ ೭೩ ॥

ಆ ಸಮಯದೊಳ್ ಲಕ್ಷ್ಮಣನ ಸಮಕ್ಷದೊಳಿರ್ದ ವಿಶಲ್ಯಸೌಂದರಿ—

ಕಂ ॥ ಅಪಹರಿಸಿ ಶಕ್ತಿ ಬಾಧೆಯ
ನುಪಕಾರಮನುಂಟುಮಾಡಿ ಲಕ್ಷ್ಮಣನೊಳ್ ಪೀ ॥
ನ ಪಯೋಧರೆ ಕಡುಗಾಡಿಯೊ
ಳಪಕಾರಮನತನು ಬಾಧೆಯಂ ಪುಟ್ಟಿಸಿದಳ್ ॥ ೭೪ ॥

ಆಗಳಾ ಕನ್ಯಾರತ್ನಂಬೆರಸು ತಮ್ಮ ತಂದನೂರ್ವರ್ಕನ್ನೆಯರುಮಂ ಮರುನ್ನಂದನಾದಿಗಳ್ ವಿವಾಹವಿಧಿಯಿಂ ಕೈಕೊಳ್ವುದೆನೆ ರಾವಣ ನಿಜಯಾನಂತರಂ ಸಕಲ ಭುವನಾಂಬಿಕೆಯಂ ಸೀತಾದೇವಿಯಂ ತಂದು ರಾಮಸ್ವಾಮಿಗೊಪ್ಪಿಸಿದೊಡಲ್ಲದೆ ಮದುವೆನಿಲ್ಲೆನೆನೆ ತಮ್ಮ ಪೋದ ಬಂದ ವೃತ್ತಾಂತಮುಮಂ ವಿಶಲ್ಯಸೌಂದರಿಯಂ ತಂದ ತೆಜನುಮಂ ತಿಳಿಪಿ ನಿಮ್ಮ ಪುಣ್ಯಪ್ರಭಾವಕ್ಕಿದಾವ ಗಹನಮೆಂದೊಡಂಬಡಿಸೆ ಶುಭ ಮುಹೂರ್ತದೊಳ್ ಲಕ್ಷ್ಮಣನನಿಬರುಮಂ ಮದುವೆನಿಲ್ಲ್ದುಮಿತ್ತಲ್—

ಕಂ ॥ ಚರನಱಿಪೆ ತಮಗೆ ದಶಕಂ
ಧರನ ಮೃಗಾಂಕಾದಿ ಮಂತ್ರಿ ಮುಖ್ಯರ್ ಲಕ್ಷ್ಮೀ ॥
ಧರ ಪುಣ್ಯಶಕ್ತಿಯಂ ದಶ
ಶಿರಂಗದಂ ಪೇಱಲೆಂದು ಬೇಗಂ ಬಂದರ್ ॥ ೭೫ ॥

ಅಂತು ಬಂದು ಸಮುಚಿತಾಸನದೊಳ್ ಕುಳ್ಳಿರ್ದು ಸ್ಫುಟಕುಳಿತಾಂಜಲಿಗಳಾಗಿ—

ಕಂ ॥ ಇರುಳೊಳೆ ವಿಶಲ್ಯಸೌಂದರಿ
ಬರೆ ಶಕ್ತಿ ಪೊಡರ್ಪುಗೆಟ್ಟು ಪೋದುದು ತತ್ಸಂ ॥

ದರಿವೆರಸು ನೂರ್ವರಂ ನೃಪ
ತರುಣಿಯರಂ ದೇವ ಮದುವೆನಿಂದನುಪೇಂದ್ರಂ ॥ ೭೬ ॥

ಎಂದು ಬಿನ್ನವಿಸೆ—

ಕಂ ॥ ಸೀತೆಯನೊಪ್ಪಿಸುವುದು ರಘು
ಜಾತನೊಳೊಡರಿಪುದು ಸಂಧಿಯಂ ಸಂಗ್ರಾಮಂ
ಪೋ ತಕ್ಕುದಲ್ತು ನಮಗವ
ರೇತೆಜಿದೊಳಮಧಿಕರವರನಾರ್ ಗೆಲ್ದಪರೋ ॥ ೭೭ ॥

ಎತ್ತಾನುಂ ಗೆಲ್ದೊಡಮಾ
ಪತ್ತಂ ಪಿಡಿವೆತ್ತ ಕುಂಭಕರ್ಣಾದಿಗಳೊಳ್ ॥
[1]ಮತ್ತೇನೊಡರಿಸುವರ್ ದನು
ಜೋತ್ತಂಸ ಬಟಿಕ್ಕೆ ಗೆಲ್ದೊಡಂ ಫಲಮುಂಟೇ ॥ ೭೮ ॥

ಎನೆ ಘನಾಘನ ನಿನದಮನಾಲಿಸಿದ ಪಂಚಾನನದಂತೆ ದಶಾನನಂ ಕನಲ್ದು—

ಕಂ ॥ ಇಂದ್ರನುಮಂ ಗೆಲ್ದೆನ್ನನು
ಪೇಂದ್ರಂ ಗೆಲ್ಪಪನೆ ಗೆಲ್ದೊಡಂ ಜೀವನಮಾ ॥
ಚಂದ್ರಾರ್ಕಮೆ ವಿಶದ ಯಶ
ಶ್ಚಂದ್ರಿಕೆಗೆ ಕಳಂಕಮಾಗದಂತಿರೆ ನೆಗಟ್ಪೆಂ ॥ ೭೯ ॥

ಅದಱಿಂ ನಿಮ್ಮ ಮಂತಣಕ್ಕವಸರಮಲ್ತುಸಿರದಿರಿಮೆಂದು ಮಂತ್ರಿಗಳಂ ಜಡಿಯೆ ರಾವಣನ ಕಟ್ಟಾಯಕ್ಕೆ ಮಯಂ ವಿಸ್ಮಯಂಬಟ್ಟು ದೇವ ನಮ್ಮ ಸೆಜೆ ಗಪಾಯವಾಗದಂತು ಕಾದಿ ಗೆಲ್ವುದೆನೆ—

ಕಂ ॥ ಮಯನೆಂದುದನೇಗೊಂಡಂ
ನಯ ನಿಪುಣಂ ಪೇಟಿಪ್ಪೊಡಂ ದುರಾಗ್ರಹದಿಂ ಸಂ ॥
ಧಿಯ ಮಾತಂ ಕೈಕೊಳ್ಳನೆ
ಭಯಮಱಿಯಂ ಕದನ ಮದ ವಶಂ ದಶವದನಂ ॥ ೮೦ ॥

ಅಂತಾತನ ನುಡಿಗೊಡಂಬಟ್ಟನಂತರಂ ರಾಮಲಕ್ಷ್ಮಣರ ಪುಣ್ಯ ಪ್ರಭಾವಕ್ಕೆ ವಿಸ್ಮಯಂಬಟ್ಟು ಸಿಂಹ ಗರುಡ ವಾಹನಂಗಳಂ ಪಡೆದು ಸುಗ್ರೀವ ಪ್ರಭಾಮಂಡಲ ಮರುನ್ನಂದನಾದಿಗಳ್ಗೆ ಪನ್ನಗಶರ ಪ್ರಹಾರದಿಂ ಸಮನಿಸಿದಾಸನ್ನ ಮೃತ್ಯುವನಪ ಹರಿಸಿ—

---

1. ಮತ್ತೆನ್ನದೊಡರಿಪರ್ ದನು. ಘ. ಚ.

ಚ ॥ ಅವಯವದಿಂದಮೆನ್ನ ತನುಜಾನುಜರಂ ಪಿಡಿದುಯ್ದರೆನ್ನ ಕೈ ।
ದುವನುರಗೇಂದ್ರನೊಳ್ ಪಡೆದ ಶಕ್ತಿಯನಶ್ರಮದಿಂದೆ ಗೆಲ್ದರಾ ॥
ನವರನಶಲ್ಯರೆಂದುಱದೆ ಕಾದಿದೆನಪ್ಪೊಡೆ ಕಾರ್ಯ ಹಾನಿ ಸಂ ।
ಭವಿಸುಗುಮೆಂದು ತನ್ನ ಮನದೊಳ್ ಪರಿಭಾವಿಸಿದಂ ದಶಾನನಂ ॥ ೮೧ ॥

ಅಂತು ಮನದೊಳ್ ಮಂತಣಮಿರ್ದು ಕಾರ್ಯ ನಿಶ್ಚಯಂಗೆಯ್ದು--

ಕಂ ॥ ಸಾಧಾರಣರಿವರೆನಿಪ ವಿ
ರೋಧಿಗಳುಮನುಱದೆ ನೆಗಟ್ಪುದನುಚಿತಮದಱಿಂ ॥
ಸಾಧಿಸಿ ಬಹುರೂಪಿಣಿಯಂ
ಸಾಧಿಸುವೆಂ ಪಗೆಯನೆಂಬ ಬಗೆಯಂ ಬಗೆದಂ ॥ ೮೨ ॥

ಅಂತು ಬಗೆದು ಲಂಕಾನಗರದೊಳಂ ನಾಡೊಳಂ ಹಿಂಸೆ ಬೇಡೆಂದು ಘೋಸಣೆ ಗಳಿದು ಜಿನಪೂಜೆಯಂ ಪ್ರತಿದಿನಂ ಮಾಟ್ಪಿಂತು ನಿಯಮಿಸಿ ಮಂಡೋದರಿಗಂ ಪೊಟಿಲ್ಲಮೆನಿತುಪಸರ್ಗಮನಾರ್ ಮಾಟಿಪ್ಪೊಡಂ ನಮ್ಮ ಪಡೆಯೊಳ್ ಮಾರ್ಕೊಳ್ಳ ದಂತು ಮಾಟ್ಪುದೆಂದು ಪೇಟ್ದು—

ಕಂ ॥ ಅರಮನೆಯೊಳಗಣ ಜಿನ ಮಂ
ದಿರಕ್ಕೆ ನಡೆತಂದು ಮಂಗಲದ್ರವ್ಯ ಪುರ ॥
ಸ್ಸರಮೊಳಗೆ ಪೊಕ್ಕು ಶಾಂತೀ
ಶ್ವರಂಗೆ ಪದೆಪೊದವೆ ಮಾಡಿ ಸವನೋತ್ಸವಮುಂ ॥ ೮೩ ॥

ತದನಂತರಂ ದಿವ್ಯಾರ್ಚನೆಗಳಿಂದರ್ಚಿಸಿ ಪದ್ಮಾಸನ ಸ್ಥಿತಂ ಸ್ಫಟಿಕಾಕ್ಷ ಮಾಲೆ ಯುಂ ಪಿಡಿದು ದಿವ್ಯ ಮಂತ್ರಂಗಳಂ ಜಪಿಯಿಸುತ್ತಿರ್ದನನ್ನೆಗಂ ಫಾಲ್ಗುನ ನಂದೀ ಶ್ವರಮಾದುದಾಗಳುಭಯಬಲಮುಮುಭಯಘೋಷಣೆಯಂ ಘೋಷಿಸಿ ಕಾಳೆಗಮು ಮಟ್ಟಿದಿರ್ಪುದುಂ—

ಕಂ ॥ ಅಱಿದು ವಿಭೀಷಣನಸುರನ
ತೆಱನಂ ಚರ ವಚನದಿಂದದಂ ರಘುವೀರಂ ॥
ಗಱುಪುವ ಬಗೆಯಿಂ ಬಂದಂ
ಪೆಱನೀತೆಱದಿಂದೆ ಕೂಡೆ ತಿಳಿದವನಾವಂ ॥ ೮೪ ॥

ಅಂತು ಬಂದು ವಿಭೀಷಣನಿಂತೆಂದಂ—

ಚ ॥ ಭುಜ ಬಲಮುಂ ಪವಣ್ಬಡಿಪೊಡಪ್ರತಿಮುಂ ತವಿಲಿಲ್ಲ ದಾನವ ।
ಧ್ವಜಿನಿಗೆ ಚಂದ್ರಹಾಸಮನಿದಿರ್ಚುವ ಚಕ್ರಮನಾಂಕೆಗೊಳ್ವ ಭೂ ॥
ಭುಜ ಸುರ ಖೇಚರ ಪ್ರಮುಖರಿಲ್ಲೆನೆ ರಾಘವದೇವ ದುರ್ಜಯಂ ।
ನಿಜದೊಳೆ ಮತ್ತೆ ಸಾಧಿಸಿದಪಂ ಬಹುರೂಪಿಣಿಯಂ ದಶಾನನಂ ॥ ೮೫ ॥

ಕಂ ॥ ರಾವಣನೊರ್ವನುಮಂ ಧರ
ಣೀವಲ್ಲಭ ಗೆಲ್ವುದರಿದು ಸಾಧಿಸಿ ವಿದ್ಯಾ ॥
ದೇವತೆಯನವಂ ಪಡೆವಂ
ರಾವಣ ಕೋಟಿಯನಿದಿರ್ಚುವವರಾರ್ ಬಲಿಯಂ ॥ ೮೬ ॥

ಅದಱಿಂ ವಿದ್ಯಾಸಾಧನೆವುಗದ ಮುನ್ನಂ ರಾವಣಂಗುಪಸರ್ಗಮನೊಡರ್ಚಿ ಲಂಕಾಪುರಮುಂ ಕೈಕೊಳ್ಳಲಿದವಸರಮೆನೆ ರಘುವೀರನಿಂತೆಂದಂ—

ಚ ॥ ವನಿತೆಗೆ ಕೈದುವಂ ಬಿಸುಟವಂಗಿದಿರಾಗದವಂಗೆ ಭೂಭುಜಂ ।
ಮುನಿವುದು ಪಾಟಿಯಲ್ತು ನಿಯಮ ಸ್ಥಿತನಾಗಿ ದಶಾನನಂ ಜಿನೇಂ ॥
ದ್ರನ ಮಜಿವೊಕ್ಕು ಸಾಧಿಸಿದಪಂ ಗಡ ವಿದ್ಯೆಯನೆಂತೊ ಬಾಧೆಯಂ ।
ಜನಿಯಿಪುದಾತನೊಳ್ ಬಿಸುಡತಕ್ಕುದನಿಂತುಸಿರಲ್ಕೆ ತಕ್ಕುದೇ ॥ ೮೭ ॥

ಎನೆ ವಿಭೀಷಣಾಂಗದಾದಿಗಳೀ ಮಹಾಸತ್ವನಪ್ಪ ರಘುವೀರನನಾಚಾರಮನೆಂತುಮೊಲ್ವನಲ್ಲನದುಕಾರಣದಿನಧಿರಾಜನಱಿಯದಂತು ವಿದ್ಯಾಸಾಧನೆಗೆ ವಿಘ್ನಂ ಮಾಪ್ಪಿಮೆಂದು [1]ನಂದೀಶ್ವರಮಂ ಕಟಿಪಿ ವಿಭೀಷಣಂಬೆರಸು—

ಕಂ ॥ ಮಕರಧ್ವಜ ಮುಖ್ಯರ್ ಖಚ
ರ ಕುಮಾರರ್ ಗಗನ ಮಾರ್ಗದಿಂ ಬಂದು ಬಲಾ ॥
ಧಿಕರಸಮ ಸೈನಿಕರ್ ಮಸ
ಗಿ ಕಪಿಧ್ವಜರುಱಿದೆ ಲಂಕೆಯಂ ಪುಗುತಂದರ್ ॥ ೮೮ ॥

ಒಡೆಯುತ್ತುಂ ಮಾಡಂಗಳ
ನುಡಿಯುತ್ತುಂ ನಂದನಂಗಳಂ ನೀರ್ನೆಲನಂ ॥
ಕೆಡಿಸುತ್ತುಂ ಲಂಕೆಗವರ್
ಪಡೆದರ್ ನಿಶ್ಶಂಕರಳವಿಗಟ್ಟಿದೆರ್ದೆವಚ್ಚಲಂ ॥ ೮೯ ॥

---

1. ನಂದೀಶ್ವರನಂ. ಗ.

ಅಂತು ವಾನರಧ್ವಜ ಸೇನೆ ಲಂಕೆಯಂ ಕದಡಿ ಕಲಂಕೆ ಮಯಂ ಮುಳಿದು ಕಾಳೆಗಕ್ಕೊಡರಿಸೆ ಬಂದು ಮುಂಡೋದರಿ ತಂದೆಯಂ ಬಾರಿಸುವುದುಮಾತಂ ಶುಭ ಪರಿಣಾಮದಿಂ ನಿಜ ಭವನಮಂ ಪೊಕ್ಕಿರೆ ವಾನರ ಸೇನೆಯರಮನೆಯಂ ಪೊಕ್ಕು—

ಕಂ ॥ ಮುನಿದೆಟ್ಟಿದು ತಂದು ನಿಜ ಕುಲ
ವನಿತೆಯರಂ ಬಿಡದೆ ಮೋದಿಯುಂ ಹಾಹಾಕ್ರಂ ॥
ದನಮಂ ಪುಟ್ಟಿಸೆ ಕೇಳ್ದುಂ
ದನುಜಂ ಜಪಿಯಿಸುತುಮಿರ್ದನವ್ಯಗ್ರ ಮನಂ ॥ ೯೦ ॥

ಅಂತಿರ್ಪುದುಮಾ ಜಿನ ಭವನದೊಳ್ ವಸಿಯಿಸುವ ದೇವತೆಗಳೆಲ್ಲಮಿವರಲ್ಲದುದಂ ನೆಗಟ್ಟಿಪ್ಪರೆಂದಗುರ್ವಾಗೆ ಬೇತಾಳ ರೂಪುಗಳಂ ಬಿಗುರ್ವಿಸಿ ಪರಿತಂದು ಮಾರ್ಕೊಂಡು ಮರ್ಕಟಧ್ವಜ ಬಲಕ್ಕೆ ಭಂಗಮಂ ಪಡೆಯೆ ಪೆಜುವುಂ ಜಿನಾವಾಸ ನಿವಾಸಿಗಳಪ್ಪ ದೇವತೆಗಳಾ ಬಲಮಂ ಪೆಜಗಿಕ್ಕೆ ಕಾದಿ ಮುನ್ನಿನ ದೇವತೆಗಳನೋಡಿಸುವುದುಮವು ಪರಿತಂದು ನಿಜಸ್ವಾಮಿಯಪ್ಪ ಪೂರ್ಣಭದ್ರನೆಂಬ ಯಕ್ಷಾಧಿಪಂಗೆ ಪೇಟ್ಪುದುಂ—

ಕಂ ॥ ಮುನಿಪತಿಗಳ ತೆಜದಿಂದನ
ಶನಮಂ ಕೈಕೊಂಡು ಕೈದುವಂ ಬಿಸುಟು ದಶಾ ॥
ನನನಿರೆಯುಂ ಕಾದುವುದ
ರ್ಕೊನಲ್ದವಂ ಮಾಣಿಭದ್ರನಲ್ಲಿಗೆ ಪೋದಂ ॥ ೯೧ ॥

ಅಂತು ಪೋಗಿ ತತ್ಸ್ವರೂಪಮಂ ಪೇಟ್ಪು ತಾನುಮಾತನುಮತಿಕುಪಿತರಾಗಿ ಬಂದು ದೇವತೆಗಳಂ ತೂಳ್ದಿ—

ಕಂ ॥ ಅಭಿಭವಿಸಿ ಕಪಿಧ್ವಜಿನಿಯ
ನಭಯರ್ಪರಿತಂದು ರಾಮಲಕ್ಷ್ಮಣರಂ ಕಂ ॥
ಡು ಭಯಾಕುಲ ಚಿತ್ತರ್ ಮಾ
ಣಿಭದ್ರನುಂ ಪೂರ್ಣಭದ್ರನುಂ ಸ್ತುತಿಯಿಸಿದರ್ ॥ ೯೨ ॥

ಅಂತು ಪೊಗಟ್ಟು ನಿಮ್ಮ ಸಾಮಂತರುಪಶಾಂತನಾಗಿರ್ದ ರಾವಣನ ಪೊಬಿಲನಟ್ಟಿಯೆ ನಿಮ್ಮ ಪುರುಷಾಕಾರಮಟ್ಟಿಗುಮೆನೆ ಲಕ್ಷ್ಮಣನಿಂತೆಂದಂ—

ಕಂ ॥ ಸೀತಾದೇವಿಯನೀ ರಘು
ಜಾತನ ಕುಲವಧುವನಟ್ಟಿ ಕೈತವದಿಂ ತಂ ॥

ದಾತಂಗೆ ಹಿತಂಗೆಯ್ವುದು
ಪೋ ತಕ್ಕುದೊ ತಗದೊ ಬಗೆದು ನೋಡಿಂ ನಿಮ್ಮೊಳ್ ॥ ೯೩ ॥

ನಿಮಗೆಮ್ಮ ಮಾಡಿದಪಕಾ
ರಮಾವುದಕ್ರಮದಿನೆಮ್ಮಮೇಲೆ ಬರಲ್ಕ ॥
ಕ್ಕುಮೆ ಪೇಟಿಮೆಂದ ಲಕ್ಷ್ಮಣ
ನ ಮಾತು ಕಿವಿಗೆಯ್ದೆ ಚಿತ್ತವಿತ್ತಿಂತೆಂದರ್ ॥ ೯೪ ॥

ಲಂಕಾಪುರ ಪ್ರಾಸಾದಂಗಳ್ಗಂ ಚೈತ್ಯಾಲಯಂಗಳ್ಗಂ ನಿಯಮಸ್ಥನಾಗಿರ್ದ ದಶಾನನಂಗಮಿಾಗಳಟಿವಂ ಮಾಡದೆ ವಿದ್ಯಾಸಾಧನೆಗೆ ವಿಘ್ನಂಮಾಡಿಮೆಂದು ರಾಮ ಲಕ್ಷ್ಮಣರಂ ಪರಸಿ—

ಕಂ ॥ ಜಕ್ಕರ್ ಪೂಜಿಸಿ ಪೋದ ಬ
ಟಿಕ್ಕಂಗದನೇಜಿ [1]ಬಾರಿಸುತ್ತಂಕುಶದಿಂ ॥
ದಿಕ್ಕರಿಯನಧಃಕರಿಸುವ
ತಕ್ಕಿನ ಕಿಷ್ಕಿಂಧಮೆಂಬ ನಿಜ ವಾರಣಮಂ ॥ ೯೫ ॥

ಅಂತು ವಾರಣಾರೂಢಂ ಪುರಗೋಪುರಮಂ ಪೊಕ್ಕು—

ಕಂ ॥ ಲಂಕೆಯ ಚೆಲ್ವಂ ನೋಡು
ತ್ತುಂ ಕಿಷ್ಕಿಂಧಾಧಿರಾಜನರಮನೆಯಂ ಪೊ ॥
ಕ್ಕಂ ಕಣ್ಗೆ ತೊಡವೆನಿಪ್ಪುದ
ನಂಕುಶದಾಭರಣದಂಶು ತಟಿಸ್ಫಿಸೆ ನಭಮಂ ॥ ೯೬ ॥

ಅಂತರಮನೆಯಂ ಪೊಕ್ಕು ಸೌಂದರನುಮಿಂದ್ರನುಂ ಮೊದಲಾಗೆ ಫಲಂಬರಂಬರಚರ ಕುಮಾರರ್ಕಳಂ ಬಲಸಹಿತರಾಗಿ ಪೊಱಗಿರಿಸಿ ಶಾಂತಿಜಿನಭವನಮಂ ಬಲಗೊಂಡೊಳಗಂ ಪೊಕ್ಕು ದರ್ಶನ ಸ್ತುತಿಗೆಯ್ದು ನೀಲ ನಗದಂತೆ ನಿಶ್ಚಲನಾಗಿರ್ದ ರಾವಣನಂ ನೋಡಿ—

ಕಂ ॥ ಅಂಗದನೆಂದಂ ರಾಮ ಶ
ರಂಗಳ ಕೋಳ್ಗಿದು ಸುಗಿದು ದಶವದನ ಮನೋ ॥
ಭಂಗಮನೊಳಕೊಂಡೇಕೆ ಜ
ಪಂಗೆಯ್ದಪೆ ನೆನೆಯ ನಿನ್ನ ದುರ್ವಿಲಸಿತಮಂ ॥ ೯೭ ॥

---

1. ಚಾರಿಸುತ್ತುಂಕುಶಮುಂ. ಘ.

ಮ॥ ದುರಭಿಪ್ರಾಯನೆ ಖೇಚರಾನ್ವಯದ ಶುದ್ಧಾಚಾರಮಂ ಬಿಟ್ಟು ಕಾ।
ಪುರುಷಂ ಕಾತರನೆಂದು ಸತ್ಪುರುಷರೆಲ್ಲಂ ದೂಷಿಸುತ್ತಿರ್ಪಿನಂ॥
ಪರದಾರ ಪ್ರಿಯನಾದ ಪಾತಕನೆ ಯುದ್ಧಕ್ಕಳ್ಕಿ ಶುದ್ಧಾತ್ಮನಂ।
ತಿರೆ ಶಾಂತೀಶನ ಮುಂದೆ ಮೆಯ್ಗರೆದಿದೇನಂ ಜಾನಿಸುತ್ತಿರ್ದಪ್ಪೆ ॥ ೯೮ ॥

ಕಂ॥ ಬಲವಟ್ಟಿಯೆ ನಿನ್ನ ಬಾಹಾ
ಬಲಮಂ ಪೆಜಗಿಕ್ಕಿ ವಿದ್ಯೆಯಂ ಸಾಧಿಸಿ ನೀಂ॥
ಗೆಲಲೀನಾರ್ತಪೆ ನಿನ್ನಂ
ಕೊಲಲ್ಕಿ ಜನಿಯಿಸಿದ ರಾಮ ಲಕ್ಷ್ಮೀಧರರಂ ॥ ೯೯ ॥

ಕಿಚ್ಚೆಟ್ಟಿ ಬಟ್ಟಿಕೆ ನಂದಿಸ
ಲಚ್ಚಿಗದಿಂ ಬಾವಿದೋಡುವಂತಿರೆ ಕಣ್ಣಂ॥
ಮುಚ್ಚಿ ಜಪಿಯಿಸುವೆ ರಾಘವ
ನೆಚ್ಚಂಬಿಂ ಕಾಯಲಾರ್ಪುವೇ ದೇವತೆಗಳ್ ॥ ೧೦೦ ॥

ಎಂದು ಪಲತೆಱದಿಂ ನೆಜನೆತ್ತಿ ನುಡಿಯುತ್ತುಮುತ್ತರೀಯ ವಸನಾಂಚಲದಿಂ ನೋದುತ್ತುಮಾತನ ಕೈಯ ಪಳಿಕಿನಕ್ಷಮಾಲೆಯಂ ಪಱಿದೀಡಾಡುತ್ತುಮಿಂತು ಬಹುಪ್ರಕಾರದಿಂ ಪರಿಭವಿಸಿ ಮತ್ತಮಾತನ ಪೆಂಡಿರ ಭೂಷಣಂಗಳಂ ಕಳೆದು ಬಿಸುಡುತ್ತುಮುಲ್ಲದುದಂ ನುಡಿಯುತ್ತುಂ---

ಕಂ॥ ಯುವತಿಯರೋರೊರ್ವರ ತಲೆ
ನವಿರಂ ತಲೆನವಿರೊಳಡಸಿ ಕಟ್ಟುತ್ತುಂ ಮೋ॥
ದುವುದುಂ ದ್ವಿಗುಣಿಸಿದುದು ಹಾ
ರವಂ ಪ್ರತಿಧ್ವನದಿಂ ಜಿನೇಂದ್ರಾಲಯದೊಳ್ ॥ ೧೦೧ ॥

ಅಟ್ಟಿಯೊಳೆ ಜಾನಕಿಯಂ ತಂ
ದಟ್ಟಿಗಂಡನೆ ನಿನ್ನ ಪೆಂಡಿರಂ ನೀಂ ನೋಟ್ಪಿಂ॥
ತೆಟ್ಟೆದುಯ್ದಪೆನಣ್ಮುವೊಡಟ್ಟಿ
ದಟ್ಟಿ ಜಪಮಂ ದನುಜ ತೋರ್ಪುದೆನ್ನೊಳ್ ಕೂರ್ಪಂ ॥ ೧೦೨ ॥

ಎಂದು ಮಾಣದೆ ಮತ್ತಂ---

ಉ॥ ರೋದನಮುಣ್ಮೆ ಪೊಣ್ಮೆ ಕುಟಿಲಾಲಕಮಂ ಪಿಡಿದೀಟ್ಟು ತಂದು ಮಂ।
ಡೋದರಿಯಂ ಮದೀಯ ಪಿತೃಗಂಕೈವ ಚಾಮರಮಿಕ್ಕಲುಯ್ದಪೆಂ॥

ಕಾದುಕೊಳಲ್ ಪೊಡಪ್ಪು ನಿನಗುಳ್ಳೊಡೆ ಜೇತರಿಸೆಂದು ದುಃಖ ಸಂ।
ಪಾದನಮಂ ತದಂಗನೆಯರೊಳ್ ಪಡೆದಂ ರಣತುಂಗನಂಗದಂ ॥ ೧೦೩ ॥

ಅಂತಾತಂ ಪರಿಭವಿಸುವುದುಂ ಮಂಡೋದರಿ ಮೊದಲಾಗೆ ಪಲರುಮಂತಃಪುರ ಕಾಂತೆಯರಿಂತೆಂದರ್—

ಉ ॥ ಸಾಧಿಸಿ ವಿದ್ಯೆಯಂ ಪಡೆವುದೇಂ ನಿಜ ಪಾರ್ಶ್ವದೊಳೆಮ್ಮನಿಂತಿವಂ।
ಬಾಧಿಸಲೆಂತು ನೀಂ ಮಿಡುಕದಿರ್ದಪೆ ಮೂರ್ಛೆಗೆ ಸಂದರಂತೆ ವಿ ॥
ದ್ಯಾಧರ ಚಕ್ರವರ್ತಿ ಶರಣಾ[1]ಗೆಮಗೆಂದು ಶರೀರ ತಾಪ ತ।
ಪ್ತಾಧರಮಟ್ಟುದುಚ್ಚ ರವದಿಂದವರೋಧ ವಧೂ ಕದಂಬಕಂ ॥ ೧೦೪ ॥

ಅಂತತಿ ಪ್ರಳಾಪಮಪ್ಪಂತವರ್ಗಬಲನೆರ್ದೆವಬಲನಂಗದಂ ಪಡೆವುದುಂ ರಾವಣಂ ಧ್ರುವಮಂಡಲದಂತೆ ಚಲಿಯಿಸದೆ ಚಿತ್ತನಿರೋಧಂಗೆಯ್ದು ದಿವ್ಯಮಂತ್ರದಿಂ ವಿದ್ಯೆಯಂ ಸಾಧಿಸುವುದುಂ—

ಕಂ ॥ ಪೊಸಗಾರ ಸಿಡಿಲ ಮಸಕಮ
ನಸಕಟ್ಟಿದು ಕೃತಾಂತ ಜಿಹ್ವೆ ಪೊಡಕರಿಸುವವೋಲ್ ॥
ಬೆಸಸು ಬೆಸಸೆಂದು ಕರಮ
ರ್ದಿಸಿ ಸನ್ನಿದವಾಯ್ತು ವಿದ್ಯೆ ರಾವಣನಿದಿರೊಳ್ ॥ ೧೦೫ ॥

ಅಂತು ಸನ್ನಿಹಿತೆಯಾಗಿ ಚಕ್ರಧರನಪ್ಪ ಲಕ್ಷ್ಮೀಧರನುಂ ಚರಮ ದೇಹ ಧಾರಿಯಪ್ಪ ರಾಮಸ್ವಾಮಿಯುಮುಟ್ಟಿಯುಲುಟ್ಟಿದರನುಟ್ಟಿಯಲೀಯೆನೆನೆ ರಾವಣನುಟ್ಟಿದವರಟ್ಟಿವೆನಗೇವುದೆಂದು ವಿದ್ಯಾದೇವತೆಗೆ ಪೊಡೆವಟ್ಟು ಶಾಂತಿ ಜಿನಭವನಮಂ ಮೂರುಸೂಟ್ ಬಲಗೊಂಡು ಬರ್ಪನ್ನೆಗಮಂಗದಾದಿಗಳ್ ಪೊಱಮಟ್ಟು ಪೋಗಿ ತಮ್ಮ ಬೀಡಂ ಪುಗುವುದುಂ—

ಉ ॥ ಇತ್ತ ದಶಾನನಂ ನಿಜ ವಧೂಜನಮಂ ಕೊಜಿಚಾಡಿ ಕಾಡಿ ದು।
ವ್ವೃತ್ತ ವಿರೋಧಿ ಖೇಚರರನಿಕ್ಕುವ ಬಲ್ಮಳಿಸಿಂದೆ ಬಂದು ಪೊ ॥
ಯ್ಪೆತ್ತಿಭ ವೈರಿಯಂತೊದಜಿ ಕೆಂಗಜಿ ಮೂಡಿದ ಭೃಂಗ ಮಾಲೆ ನೀ।
ಳ್ದತ್ತಿನೆ ನೋಡಿದಂ ಮಯ ತನೂಜೆಯ ಬಾಡಿದ ವಕ್ತ್ರಪದ್ಮಮಂ ॥ ೧೦೬ ॥

ಅಂತಾಕೆವೆರಸು ಸಮಸ್ತಾಂತಃಪುರಮುಮಂ ನೋಡಿ ನಿಮಗಿನಿತು ಭಂಗಮಂ ಮಾಡಿದಂಗದಾದಿಗಳಂ ಭ್ರೂಭಂಗಮಾತ್ರದೊಳೆ ಸೆಜೆಗೆಯ್ದು ತಂದು ನಿಮ್ಮ ಮುಂದೆ

1. ರೆಮು. ಖ. ಗ. ಘ

ಬಹುಪ್ರಕಾರದಿಂ ಪರಿಭವಿಸುವೆನೆಂದು ಸಂತಯಿಸಿ ಶಾಂತಿಜಿನಭವನದೊಳ್ ಮಹಾ ಪೂಜೆಯಂ ಮಾಡಿಸಿ ನಿರ್ವರ್ತಿತ ನಿತ್ಯ ನಿಯಮನಮೃತಾಹಾರಮನಾರೋಗಿಸಿ ತದನಂತರಂ ಬಹುರೂಪಿಣೀ ವಿದ್ಯಾಪ್ರಭಾವಮುಂ ಪರೀಕ್ಷಿಸಿ ಪ್ರಮೋದ ಮುದಿತ ಹೃದಯನಾಗಿ—

ಚ ॥ ಸಮಧಿಕರಾರ್ ಜಗತ್ತ್ರಯದೊಳನ್ನೆನಗೆನ್ನೊಳಿದಿರ್ಚುವನ್ನರಾರ್ ।
ಸಮರದೊಳಿಂದು ತನ್ನ ಭುಜದಂಡಮನೀಕ್ಷಿಸಿ ಜಾನಕೀ ಮುಖಾ ॥
ಬ್ಜಮನವಲೋಕಿಸಲ್ ಕರಮೆ ಕಾತರನಾಗಿ ವಿಯಚ್ಚರಾಧಿಪಂ ।
ಪ್ರಮದ ವನಕ್ಕೆ ಬಂದನರಲಂಬುಗಳಿಲ್ಲದ ಕಾಮನೆಂಬಿನಂ ॥ ೧೦೭ ॥

ಅಂತು ಭೋಂಕನೆ ಬರ್ಪ ರಾವಣನ ಗಂಡಗಾಡಿಯಂ ಕೆಲದೊಳಿರ್ದ ಖಚರ ಕಾಂತೆಯರ್ ಸೀತಾದೇವಿಗೆ ತೋರ್ಪುದುಂ—

ಕಂ ॥ ರಾವಣನ ರೂಪು ಸೀತಾ
ದೇವಿಗೆ ತೃಣಕಲ್ಪಮಾಯ್ತು ಪತಿಭಕ್ತಿಯೊಳಾ ॥
ರೀ ವನಿತೆಯ ತೆಱದಿಂ ಸ
ದ್ಭಾವಮನೊಳಕೊಂಡ ಪುಣ್ಯವತಿಯರ್ ಸತಿಯರ್ ॥ ೧೦೮ ॥

ಏನಂ ಕೇಳ್ದಪೆನೋ ರಘು
ಸೂನುವ ಲಕ್ಷ್ಮಣನ ಪೊಲ್ಲವಾರ್ತೆಯನಿನ್ನೆಂ ॥
ದಾ ನಳಿನಾನನೆ ಬರ್ಪ ದ
ಶಾನನಂ ಕಂಡು ತಾಳ್ದಿದಳ್ ತಲ್ಲಳಮುಂ ॥ ೧೦೯ ॥

ಅಂತು ತಲ್ಲಳಿಸುತಿರ್ದ ಮಾನಿನಿಯನೆಯ್ದಿ ವಂದು ದಶಾನನನಿಂತೆಂದಂ ಬಹು ರೂಪಿಣೀ ವಿದ್ಯೆ ಸಾಧಿತಮಾದುದಿನ್ನೆನಗಸಾಧ್ಯಮಪ್ಪ ಮರುವಕ್ಕಮಿಲ್ಲ ನಿನ್ನ ನಚ್ಚಿನ ರಾಮ[1]ನ ದೆಸೆಯಂ ಬಿಟ್ಟಿನಗೊಡಂಬಟ್ಟು ಸಾಮ್ರಾಜ್ಯ ಸುಖಮನನುಭವಿಸೆನೆ ಸೀತೆ ವಿಹ್ವಲೀಭೂತ ಚಿತ್ತೆಯಾಗಿ—

ಕಂ ॥ ಕರುಣಿಸುವೊಡೆನಗೆ ದಶಕಂ
ಧರ ಧುರದೊಳ್ ರಘುತನೂಜನಾಯುಃಪ್ರಾಣಂ ॥
ಬರೆಗಂ ಬಾರದಿರೆನುತುಂ
ಧರಿತ್ರಿಯೊಳ್ ಮೆಯ್ಯನೊಕ್ಕು ಮೂರ್ಛೆಗೆ ಸಂದಳ್ ॥ ೧೧೦ ॥

---

1. ನಾಸೆಯಂ. ಗ. ಘ.

ಕಂ ॥ ಜಾನಕಿ ಮೂರ್ಛಿತೆಯಾಗೆ ದ
ಶಾನನನನುಕಂಪೆ ಪುಟ್ಟಿ ಕರುಣಿಸಿ ತನ್ನಂ ॥
ತಾನೆ ಪಟುದುಟುದು ಕರ್ಮಾ
ಧೀನ ಸಮುತ್ಪನ್ನ ದುರಘ ದುಷ್ಪರಿಣತಿಯಂ ॥ ೧೧೧ ॥

ಕದಡಿದ ಸಲಿಲಂ ತಿಳಿವಂ
ದದೆ ತನ್ನಿಂ ತಾನೆ ತಿಳಿದ ದಶವದನನಂಗಾ ॥
ದುದು ವೈರಾಗ್ಯಂ ಸೀತೆಯೊ
ಳುದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ ॥ ೧೧೨ ॥

ಪತ್ತುವಿಡದಿರ್ದನೇ ರವಿ
ಪತ್ತಿದ ಸಂಧ್ಯಾನುರಾಗಮುಂ ಮನದಟ್ಟಿಂ ॥
ದೆತ್ತಾನುಂ ಪೊಲ್ಲೆನಿಪುದ
ನುತ್ತಮನಾಚರಿಸಿ ಪತ್ತುವಿಡದಿರ್ದಪನೇ ॥ ೧೧೩ ॥

ಅಂತು ಮನದೊಳೊಗೆದ ಕಾರುಣ್ಯ ರಸಮೆ ಸೀತೆಯೊಳಾದನುರಕ್ತತೆಯುಂ ಕರ್ಚಿ ಕಳೆವುದುಂ ಸ್ವಭಾವ ಪರಿಣತಿಯೊಳ್ ನಿಂದು ಸ್ವಕೀಯಾಪ್ತ ಪುರುಷ ಪರಿಷಜ್ಜನಕ್ಕಿಂತೆಂದಂ—

ಚ ॥ ಗುಣ ಪರಿಪಾಲನಾರ್ಥಮೆನಗಂ ಬಗೆದೋರಿದಳಿಲ್ಲ ದಿವ್ಯ ಭೂ ।
ಷಣ ವಸನಾಂಗರಾಗಮುಮನೊಲ್ಲದೆ ಪೋಚರ ರಾಜ್ಯ ಲಕ್ಷ್ಮ್ಯಯಂ ॥
ತೃಣ ಸಮನಾಗೆ ಭಾವಿಸಿದಳೀ ಸತಿಯುಂ ಮೊದಲಾಗಿ ಪೌರುಷ ।
ಪ್ರಣಯಿಯೆನಿಂತಪೇಕ್ಷಿಸುವೆನೇ ಗುಣಹಾನಿಯನೆನ್ನ ಪಾಪದಿಂ ॥ ೧೧೪ ॥

ಕಂ ॥ ಇವರಂ ಪ್ರಾಣಪ್ರಿಯರಂ
ನೆವಮಿಲ್ಲದೆ ಕರ್ಮವಶಮೆ ನೆವಮೆನೆ ಕಂದ ॥
ರ್ಪ ವಿಮೋಹದಿಂದಗಲ್ಚಿದೆ
ನವಿವೇಕಿಯೆನೆನ್ನ ಕುಲದ ಪೆಂಪಟ್ಟಿನೆಗಂ ॥ ೧೧೫ ॥

ರಾಮನನಗಲ್ಚಿ ತಂದಾ
ನೀ ಮಾನಿನಿಗಿನಿತು ದುಃಖಮಂ ಪುಟ್ಟಿಸಿದೆಂ ॥
ಕಾಮ ವ್ಯಾಮೋಹದಿನಾ
ಶಾ ಮುಖಮುಂ ಪುದಿಯೆ ದುರ್ಯಶಃಪಟಹ ರವಂ ॥ ೧೧೬ ॥

ಚ ॥ ಎನಗೆ ವಿಭೀಷಣಂ ಹಿತಮನಾದರದಿಂದನೆ ಪೇಟಿ ಕೇಳದಾ ।
ತನನವಿನೀತನೆಂ [1]ಗಜಱಿ ಗರ್ಜಿಸಿ ಬಯ್ದನುಜಾತನಂ ವಿನೀ ॥
ತನನಱಿಯಟ್ಟ ದುರ್ವ್ಯಸನಿಯೆಂ ಕಟಿದೆಂ ವ್ಯಸನಾಭಿಭೂತನಾ ।
ವನುಮನುರಾಗ ವೇಗದೆ ಹಿತಾಹಿತ ಚಿಂತೆಯನೇಕೆ ಮಾಡುಗುಂ ॥ ೧೧೭ ॥

ಜಸದಟಿವಂ ಪರಾಭವದ ಪತ್ತುಗೆಯಂ ದೊರೆವೆತ್ತ ತಮ್ಮ ಮಾ ।
ನಸಿಕೆಯ ಕೇಡನುನ್ನತಿಯ ಬನ್ನಮನನ್ಯ ಭವಾನುಬದ್ಧಮು ॥
ಪ್ಪ ಸುಗತಿಯಂ ಸುಹೃಜ್ಜನದ ಬೇವಸಮಂ ಜನತಾಪವಾದಮಂ ।
ವ್ಯಸನಿಗಳಾರುಮೆತ್ತಲಱಿವರ್ ವಿಷಯಾಸವ ಮತ್ತ ಜೇತಸರ್ ॥ ೧೧೮ ॥

ಎಂದುದ್ವೇಗಪರನಾಗಿ ನುಡಿದಾತ್ಮಗತದೊಳಿಂತೆಂದಂ—

ಮ ॥ ಇರದುಯ್ದೊಗಳೆ ಕೊಟ್ಟೊಡೆನ್ನ ಕಡುಪುಂ ಕಟ್ಟಾಯಮುಂ ಬೀರಮುಂ ।
ಬಿರುದುಂ ಬೀಸರಮಕ್ಕುಮೋಸರಿಸಿದಂತಾಗಿರ್ಕುಮಂತಾಗದಂ ॥
ತಿರೆ ದೋರ್ಗರ್ವಮನಿರ್ವಲಂ ಪೊಗಟ್ವಿನಂ ಸೌಮಿತ್ರಿಯಂ ರಾಮನಂ ।
ವಿರಥರ್ಮಾಡಿ ರಣಾಗ್ರದೊಳ್ ಪಿಡಿದು ತಂದಾಂ ಕೊಟ್ಟಪೆಂ ಸೀತೆಯಂ
॥ ೧೧೯ ॥

ಎಂದು ನಿಶ್ಚಯಿಸಿ ನಿಜನಿವಾಸಕ್ಕೆ ವಂದಂಗದ ಪ್ರಭಾಮಂಡಲ ಸುಗ್ರೀವ ಹನುಮದಾದಿಗಳ ದುರಾಚಾರಕ್ಕೆ ಮುಳಿದವಂದಿರಂ ರಾಮನಟಿಯೆ ಕೊಲ್ವೆನೆಂದು [2]ಭರಂಗೆಯ್ವಿರ್ದನಾ ಸಮಯದೊಳ್—

ಕಂ ॥ ಪರಿವೇಷಂ ನಾಡೆ ಭಯಂ
ಕರಮಪ್ಪುದನರ್ಕ ಬಿಂಬದೊಳ್ ನಟ್ಟಿರುಳೊಳ್ ॥
ಸುರಚಾಪಂ ಮೂಡುವುದಂ
ಗಿರಿಶಿಖರಂ ಬಿರಿವುದಂ ನೆಲಂ ನೊಟಿಗುವುದಂ ॥ ೧೨೦ ॥

ಪಡಿಗೆ ಮದಮಪ್ಪುದಂ ಮದ
ಮುಡುಗುವುದಂ ಮದಗಜಕ್ಕೆ ಗೃಹ ದೇವತೆಗಳ್ ॥
ಗಡಣದಿನಟ್ಟುದನಾಗಸ
ವೆಡೆಗೆಟ್ಟರೆ ಧೂಮಕೇತುಗಳ್ ಮೂಡುವುದಂ ॥ ೧೨೧ ॥

---

1. ದು ಬಿಡೆ ಗರ್ಜಿಸಿ ಗ. 2. ಭರವಸಂ. ಖ. ಗ. ಘ.

ಮ॥ಸ್ರ॥ ಪಗಲುಳ್ಕುಂ ಬೀಟ್ಪುದಂ ಧಾರಿಣಿ ನಡುಗುವುದಂ ಪೊಳ್ಕಿನಲ್ ದೀಪ್ತದೊಳ್ ಬ ।
ಳ್ಕುಗಳೂಳುತ್ತಿರ್ಪುದಂ ಕೈದುಗಳುಡಿವುದನಾದಿತ್ಯನುಂ ಚಂದ್ರನುಂ [1]ಮೇ ॥
ಗೊಗೆದಂತಾಗಿರ್ಪುದಂ ಮಾಡದ ಮಣಿಕಲಶಂ ಬೀಟ್ಪುದಂ ಕಂಡು ತಮ್ಮೊಳ್।
ಬಗೆದರ್ ನೈಮಿತ್ತಿಕರ್ ನಾಳಿನ ಕದನದೊಳಕ್ಕುಂ ದಶಾಸ್ಯಂಗಪಾಯಂ ॥ ೧೨೨ ॥

ಎಂದು ನಿಶ್ಚಯಿಸಿ ನುಡಿಯುತ್ತಿರ್ದರಾಗಳಸುರಪತಿ ನಿಜಾಸ್ಥಾನ ಮಂಡಪ ಮಧ್ಯಸ್ಥಿತ ಸಿಂಹಾಸನದೊಳಿರ್ದು ಸೆಜ್ಜೆಯೊಳಿರ್ದ ತನುಜಾನುಜರಂ ನೆನೆದು ಮುಳಿದು ಕಾಳೆಗಕ್ಕೆ ನಡೆಯಲೊಡರಿಸಿ ಶಸ್ತ್ರಶಾಲೆಯಂ ಪುಗುವುದುಮದಂ ಮಂಡೋದರಿ ಕಂಡು ಮಂತ್ರಿಗಳಂ ಕರೆದೀ ರಣಮಂ ಮಾಣ್ಪಂತು ಮಾಟ್ಪುದೆಂದು ಪೇಟ್ಪುದು ಮವರಿಂತೆಂದರಾಮುಂ ಪಲವುಂ ಪರ್ಯಾಯದಿಂ ಪೇಟಿಪ್ಪೊಡಂ ಕೇಳ್ದನಿಲ್ಲಿಲ್ಲಿಗೆ ತಕ್ಕುದಂ ನುಡಿದು ದೇವಿಯರೆಂತಾನುಮೊಡಂಬಡಿಸುವುದೆನೆ ಮಂಡೋದರಿ ರಾವಣನಲ್ಲಿಗೆ ಬಂದೆಱಗಿ ಪೊಡೆವಟ್ಟು—

ಶಾ ॥ ಆನೀ ಜಾನಕಿಯಂ ರಘುಪ್ರಿಯತನೂಜಂಗಿತ್ತು ತರ್ಪೆಂ ಭವ ।
ತ್ಸೂನು ಭ್ರಾತೃಗಳಂ ರಣ ವ್ಯಸನದಿಂ ಸಾವೆಯ್ದುಗುಂ ಬಂಧು ಸಂ ॥
ತಾನಂ ಕಾಳೆಗಮಂ ಬಿಸುಟ್ಪುದೆನೆ ರೋಷಾವೇಶದಿಂ ರಾವಣಂ ।
ನೀನಿಲ್ಲಿಂ ತೊಲಗೆಂದು ಚಪ್ಪರಿಸಿದಂ ಮಂಡೋದರೀ ದೇವಿಯಂ ॥ ೧೨೩ ॥

ಅಂತು ಚಪ್ಪರಿಸೆಯುಂ ಮಾಣದೆ ಮತ್ತಿಂತೆಂದಳ್—

ಕಂ ॥ ಪರವನಿತೆಗಱಿಸಿ ರಣ ದು
ರ್ಧರನೆನಿಸಿರ್ದಶನಿವೇಗನಱಿದುದನಸುರೇ ॥
ಶ್ವರ ನೀನೇನಱಿಯದನೇ
ಪರಿಹರಿಸಲ್ವೇಟ್ಪುದದಱಿನಸದಾಗ್ರಹಮಂ ॥ ೧೨೪ ॥

ಎಂತುಮಿಂತಂಗಳೆಂಟನೆಯರ್ಧಚಕ್ರವರ್ತಿಗಳ್ ನಿನಗೆ ಶತ್ರುಗಳಪ್ಪುದಱಿಂ ನೀನಿವರ ಬವರಮನುಱಿದು ಸಂಧಿಗೊಡಂಬಟ್ಟು ವಿದ್ಯಾಧರ ರಾಜ್ಯ ಸುಖಮನನು ಭವಿಸುವುದೆನೆ ರಾವಣನೆಂದನವಂದಿರೆನಗೆ ಕಾಳೆಗದೊಳ್ ನಿಲ್ವ ಗಂಡರಲ್ಲರದರ್ಕೆ ನೀನಂಜದಿರೆಂದು ನುಡಿದು ಸನ್ನಾಹ ಭೇರಿಯಂ ಪೊಯಿಸುವುದುಂ—

ಕಂ ॥ ಹಿತಮುಂ ಹಿತರಱಿಪಿದೊಡಂ
ಮತಿಗೆಟ್ಟಱಿಕೆಯ್ದನೆಂದು ದಶಮುಖ ಕುಲದೇ ॥

---

1. ಪೆಱ್ಚರಿದಂತಾಗಿರ್ಪುದಂ. ಕ. ಖ. ಗ. ಚ.

ವತೆ ಪುಯ್ಯಲಿಡುವವೋಲ್ ದಿ
ಗ್ವಿತತಿಯನಾವರಿಸಿದತ್ತು ಭೇರೀನಾದಂ ॥ ೧೨೫ ॥

ಆ ಸಮಯದೊಳ್ ಸಿಂಹಾಸನಾರೋಹಣಕ್ಕಿದುವೆ ಚರಮ ಸಮಯಮೆಂ ದಱಿಪುವಂತೆ—

ಉ ॥ ತಾರಗೆಯಂ ತಮಂ ಸೆಱಿಗೆ ತಂದವೊಲರ್ವಿಸೆ ದೇಹ ದೀಪ್ತಿಯೊಳ್ ।
ಹಾರ ಮರೀಚಿ ಮಾಣಿಕದ ಪೆರ್ರ್ಮೊಡವಿಂ ಪೊಱಪೊಣ್ಮ್ವವಂಶುಗಳ್ ॥
ದಾರುಣ ಕೋಪ ಪಾವಕನೆ ತನ್ನೊಡಲಂ ಸುಡುವಂದಮಾಗೆ ಕೋ ।
ಪಾರುಣ ನೇತ್ರನೆಟ್ಟನೊಡನೇಟಿಪ್ಪಿನೆಗಂ ಖಚರೇಂದ್ರ ಮಂಡಲಂ ॥ ೧೨೬ ॥

ಚ ॥ ಅವಯವ ಶೋಭೆಯಂ ಪಡೆವುವಲ್ಲದೆ ಭೂಷಣಮೆನ್ನ ಮಾಟಕ್ಕಿಯಿಂ ।
ದವಯವಮಾಗಿ ವರ್ತಿಸುವುವೇಂ ಪೆಱವೆಂದವನೇಳಿಪಂತೆವೋಲ್ ॥
ನವ ಮುಖಭೂಷಣಂ ದಶಮುಖ ವ್ಯವಹಾರಮನಿತ್ತು ರಾವಣಂ ।
ಗವಿರಲ ಕಾಂತಿಯಿಂ ಬೆಳಗಿದತ್ತು ಸಮಸ್ತ ದಿಶಾ ಮುಖಂಗಳಂ ॥ ೧೨೭ ॥

ಅಂತು ಸಿಂಹಾಸನದಿನೆಟ್ಟು—

ಕಂ ॥ ಚಮರಜಮನಿಕ್ಕೆ ಖಚರ
ಪ್ರಮದಾ ಜನಮುತ್ತಮಾಂಗದೊಳ್ ಬೆಳ್ಗೊಡೆ ಚಂ ॥
ದ್ರಮನಂ ಗೆಲೆ ನಡೆದಂ ವಿ
ಕ್ರಮ ಧವಲಂ ಚಂದ್ರಹಾಸಮಂ ಜಡಿಯುತ್ತುಂ ॥ ೧೨೮ ॥

ಆಗಳಸಮ ಸಮರ ಕೇಳೀ ಕುತೂಹಲರ್ ಖಚರ ಪರಿಬೃಢರ್ ಮಣಿ ಮಕುಟ ಕಾಂತಿ ಪೊದಟ್ಟು ನೀಳ್ದು ಮಿಗೆ ಪರ್ವಿ ಶಕ್ರಧನುವನನುವಿಸೆ ಕೆಳರ್ದ ಕೇಸರಿ ಗಳಂತೆ ನಡೆಯೆಯುಂ ಅಪಾರ ಚತುರಂಗ ಸೇನೆ ಚರಣ ಸಂಚರಣಕ್ಕೆ ನೆಲಂ ನೆಱಿಯದೆಂಬಂತೆ ನಡೆಯೆಯುಂ ಕರಿ ವೃಷಭ ಸಿಂಹ ಗರುಡ ಹಂಸಾದಿ ಮಹಾ ಧ್ವಜಂಗಳೆಡೆಗಿಱಿದು ನಡೆಯೆಯುಂ ವಿವಿಧ ರತ್ನಖಚಿತ ಕನಕ ದಂಡ ಮಂಡಿತ ವಿಚಿತ್ರ ರಾಜಚಿಹ್ನಂಗಳ್ ಮುಂದೆ ಸಂದಣಿಸಿ ನಡೆಯೆಯುಂ ನಡೆವ ಸಮಯದೊಳೊಡ ನೊಡನೆ ನೆಲಂ ವೊಟಿಗೆ ವೊಟಿಗುವ ಪಱಿಯ ದನಿಗಳೆಂದುಂ ಆಕಸ್ಮಿಕಮುದ ಯಿಪ ಧರಾಕಂಪಮಂ ಸೇನಾ ಭರದಿನಾದ ಧರಾಕಂಪಮೆಂದುಂ ಪಸರಿಸುವ ದಿಗ್ದಾಹ ಮನಂಬರಚರ ಕಿರೀಟ ಮಾಣಿಕ್ಯ ಮಯೂಖ ಲೇಖೆಗಳೆಂದುಮವಿರಳಮಾಗೆ ಕವಿದ ಕಾವುಳಮುಂ ಸೇನಾ ರಜೋಜಾಳಮೆಂದುಂ ಪೂಜಾವಾಜಿ ವಿಲೋಚನ ವಿಗಳದಶ್ರು ಬಿಂದುಗಳನಾನಂದಾಶ್ರು ಬಿಂದುಗಳೆಂದುಮೊಱಿಯಿನುರ್ಚುವ ಕೈದುಗಳುಂ ಇದಿರ್ಚಿ

ದರನಿಜೀಯಲುರ್ಚಿದುವೆಂದುಂ ಕಣ್ಣೊಬಲದೊಳ್ ಸುಟಿವ ಕಾಲಾಯಸ ಕಾಲ ಪುರುಷನಂ ಕಾಳೆಗಕ್ಕೆ ಜವಂ ನೆರಂಬಂದಪ್ಪನೆಂದುಮಾಗಸದೊಳೊಗೆವ ಧೂಮ ಕೇತುಗಳಂ ವಿಜಯ ಕೇತುಗಳೆಂದುಂ ಕಣ್ಣೊಳುಳ್ಕುವುಲ್ಕಾಪಾತಮಂ ನಿಜಪ್ರತಾಪಾನಲ ಸ್ಫುಲಿಂಗಂಗಳೆಂದುಮಭೂತ ಪೂರ್ವಮಪ್ಪುತ್ಪಾತಂಗಳನೇನುಮಂ ಬಗೆಯದೆ ಕೋಪಮನೆ ಬಗೆದು—

ಮಾ ಸ್ರ॥ರದನಂಗಳ್ ನಾಲ್ಕಱಿಂದದ್ಭುತಮೆನಿಪ ಸಹಸ್ರ ದ್ವಿಪ ಸ್ಕಂಧದೊಳ್ ಪೂ।
ಡಿದ ವಿದ್ಯಾದೇವತಾ ನಿರ್ಮಿತ ರಥಮನತಿಕ್ಷ್ಮೋಭದಿಂದೇಱಿ ಬಂದಂ ॥
ಕದನ ಕ್ಷ್ಮೋಣೀ ತಲಕ್ಕುನ್ನಮಿತ ಬಹು ಪತಾಕಾ ಪಟಚ್ಛನ್ನ ಮೇಘಾ।
ಸ್ಪದಮಂ ಸಂಗ್ರಾಮ ಭೇರೀರವ ಬಧಿರಿತ ನಾನಾ ದಿಶಾಸ್ಯಂ ದಶಾಸ್ಯಂ ॥ ೧೬೯॥

ಅಂತು ಬಂದು ಸಂಗ್ರಾಮ ಭೂಮಿಯೊಳ್ಕೊಡ್ಡಿ ನಿಲ್ವುದುಂ—

ಕಂ ॥ ಈ ತೋರ್ಪುದಚಲವೋ ಜೀ
ಮೂತವೊ ಪೇಟಿಂದು ಪೊಳೆವುದಂ ಜಾಂಬವನಂ ॥
ಕೌತುಕದಿಂ ಬೆಸಗೊಂಡಂ
ಸೀತಾರಮಣಂ ದಶಾಸ್ಯನೇಱಿದ ರಥಮಂ ॥ ೧೩೦ ॥

ಅಂತು ಬೆಸಗೊಳ್ವುದುಂ ಜಾಂಬವನದು ದೇವ ರಾವಣನ ಬಹುರೂಪಿಣೀ ವಿದ್ಯಾ ವಿನಿರ್ಮಿತ ವರೂಥಮೆಂಬುದುಂ ಲಕ್ಷ್ಮಣಂ ಕೇಳ್ದು ಸನ್ನಾಹ ಭೇರಿಯಂ ಪೊಯಿಸೆ—

ಕಂ ॥ ಆರಾಧಿಸಿ ಪಡೆದಂ ಗಡ
ತೇರಂ ದೋಸ್ಸಾರನಲ್ಲದಂಗೇವ್ರದೊ ಪೇೞ್ ॥
ತೇರೆಂದು ಸಿಂಹ ರಥಮಂ
ಪೀರಶ್ರೀ ರಮಣನೇಱಿದಂ ರಘುವೀರಂ ॥ ೧೩೧ ॥

ವಿಗ್ರಹ ಭೂಮಿಯೊಳಿಂದು ದ
ಶಗ್ರೀವನನಿಕ್ಕಿ ವಿಜಯ ಲಕ್ಷ್ಮಿಯೊಳಾಂ ಸಾ ॥
ಣಿ ಗ್ರಹಣಮನೊಡರಿಪೆನೆಂ
ಬಾಗ್ರಹದಿಂ ಕೃಷ್ಣನೇಱಿದಂ ಸ್ಯಂದನಮಂ ॥ ೧೩೨ ॥

ಅಂತು ಸಿಂಹ ಗರುಡ ವಾಹನೀ ರಥಂಗಳಂ ರಾಮಲಕ್ಷ್ಮಣರೇಱಿ ವಿದ್ಯಾ ಪರಮೇಶ್ವರರಪ್ಪ ವಿದ್ಯಾಧರರಿಂ ಪರಿವೃತರಾಗಿ ಚತುರಂಗ ಬಲ ಸಮನ್ವಿತರ್ ಶುಭ ಶಕುನಂಗಳನಿದಿರ್ಗೊಳುತ್ತುಂ ಸಂಗ್ರಾಮ ಭೂಮಿಗೆ ಬಂದೊಡ್ಡಿ ನಿಲ್ವುದುಂ ರಾವಣಂ

ಕಂಡು ಕೈವೀಸುವುದುಮುಭಯ ಬಲಮುಂ ತಳ್ತು ಕಾದುವಲ್ಲಿ ವಾನರ ಬಲದ ನಳನುಂ ನೀಲನುಂ ಕುಮುದನುಂ ಯೂಥನಾಥನುಮೆಂಬ ನಾಯಕರೊಟ್ಟೈಸಿ ತಳ್ತಿಱಿದು ದನುಜಬಲಮಂ ತವೆ ಕೊಲ್ವುದಂ ಕಂಡು ಮಾರ್ಕೊಂಡು ರಾಕ್ಷಸ ಬಲದ ಮುಖ್ಯ ನಾಯಕರ್ ಕುಂಭನುಂ ವಿಕ್ರಮನುಂ ಮಾಲಿಯುಂ ವೀರನುಂ ಸೂರ್ಯರಥನುಂ ಮೊದಲಾಗೆ ಪಲಂಬರೆಯ್ತಂದು ತಮ್ಮ ಪಡೆಗಭಯಮಪ್ಪಂತು ಕಾದುತ್ತುಮಿರ್ದರತ್ತ ಮತ್ತೊಂದು ಮೊನೆಯೊಳ್ ರಾವಣನ ಬಲದ ಭೂತನುಂ ಸಂಭೂತನುಂ ಕುಟಿಲನುಂ ಕಾಲದಂಡನುಂ ಊರ್ಮಿಯುಂ ತರಂಗನುಂ ವಾನರ ಬಲದೊಳ್ [1]ತಲೆಮುಟ್ಟು ಮಲೆದು ಕಾದುವಲ್ಲಿ—

ಮ ॥ ವನಗಜ ಯೂಥಮಂ ಭರದಿನಟ್ಟುವ ಕೇಸರಿಯಂತೆ ದೈತ್ಯರು ।
ಳ್ಳನಿಬರುಮಂ ಮಹಾರಣದೊಳದ್ಭುತಮಾಗೆ ಕರುತ್ತು ಕಾದಿ ಪಾ ।
ವನಿ ಬಿಱುತೋಡುವಂತೆ ಬೆದಱಟ್ಟುವುದಂ ನಡೆನೋಡಿಕೊಂಡು ಕಾ ।
ಯ್ದನುವಿಸೆ ಮುಟ್ಟಿ ಮೂದಲಿಸಿ ತಾಗಿದನಾಹವ ದುರ್ಜಯಂ ಮಯಂ॥೧೩೩॥

ಅಂತು ತಾಗಿ—

ಕಂ ॥ ಅಯನಯ ಮಯನತಿ ವೇಗದೆ
ಮಯನಿಸೆ ದುರ್ಜಯನೆನಿಪ್ಪ ಮಾರುತಿಗಂ ವಿ ॥
ಸ್ಮಯಮಗ್ಗಳಮಾದುದು [2]ಶರ
ಮಯಮಾದುದು ನೋಡೆ ಕೂಡೆ ದಿಗವನಿ ವಲಯಂ ॥ ೧೩೪ ॥

ಅಂತು ಪುಂಖಾನುಪುಂಖಮಿಸುವುದುಂ—

ಕಂ ॥ ಅವನೆಚ್ಚ ಬಾಣಜಾಲಮ
ನವಯವದಿಂದೆಚ್ಚು ತವಿಪುದುಂ ಮಾರುತಿ ಭೈ ॥
ರವನಂದದಿಂ ತ್ರಿಶೂಲದಿ
ನವನಿಟ್ಟಂ ದನುಜ ಸೇನೆ ಬೊಬ್ಬಿರಿವಿನೆಗಂ ॥ ೧೩೫ ॥

ಅಂತಿಡುವುದುಂ—

ಕಂ ॥ ಶೂಳಾಯುಧಮಂ ನಿಶಿತ ಶ
ರಾಳಿಗಳಿಂ ಪವನ ಸೂನು ಕಡಿದಿಕ್ಕೆ ಮಯಂ ॥

---

1. ತಲೆ ಪಟ್ಟು. ಘ. 2. ರವ ಮಹುದಿಂದಂ ಪುದಿದುದಖಿಳ. ಚ.

ದೋಳಾಯಮಾನ ಚಿತ್ತಂ
ಕಾಳೆಗದ ಪೊಡಪ್ಪುಗೆಟ್ಟು ಮರವಟ್ಟರ್ದಂ ॥ ೧೩೬ ॥

ಅದಂ ಕಂಡು ದಶವದನಂ ಪ್ರಜ್ವಲಿತಮೆಂಬ ದಿವ್ಯ ರಥಮನಟ್ಟುವುದುಮದ ನೇಱಿ ಮಯಂ ಮಹಾಯುದ್ಧಂಗೆಯ್ದು ವಿಜಯ ಶ್ರೀಯನಪ್ಪುಕೆಯ್ದು—

ಕಂ ॥ ಕರಮರಿದು ಮಯನ ಬಾಹಾ
ಪರಿಘೆ ಕ್ಕಿದಿರಿಡುವುದಾರ್ಗಮಾಹವದೊಳ್ ದು ॥
ರ್ಧರನೆನಿಸಿದತುಳ ಬಲನಂ
ನಿರಾಯುಧಂಮಾಡಿದಂ ಮರುನ್ನಂದನನಂ ॥೧೩೭॥

ಅಂತು ಹನುಮನಂ ನಿರಾಯುಧಂಮಾಱ್ಪುದುಂ ಪ್ರಭಾಮಂಡಲಂ ಬಂದೆಡೆ ಗೊಂಡು ತಾಗುವುದುಂ—

ಕಂ ॥ ಧುರದೊಳ್ ಮಯನಾತನುಮುಂ
ವಿರಥಂಮಾಱ್ಪುದುಮದರ್ಕೆ ಸುಗ್ರೀವಂ ಚೆ ॥
ಚ್ಚರಮೊದವಿ ಬಂದು ತಾಗಿದ
ನರಾತಿ ಬಲಮೆಲ್ಲಮೊಲ್ಲನುಲಿದೋಡುವಿನಂ ॥ ೧೩೮ ॥

ಅಂತು ತಾಗುವುದುಮಾತನುಮುಂ ನಿರಸ್ತ್ರಂಮಾಱ್ಪುದುಮಾತನಂ ಪೆಱಗಿಕ್ಕಿ–

ಕಂ ॥ ಉರವಣಿಸಿ ವಿಭೀಷಣನತಿ
ಭರದಿಂ ತಾಗುವುದುಮಾ ಮಹಾಬಲನ ಭುಜಾ ॥
ಪರಿಘಕ್ಕೆ ಕುಂದನಿನಿಸಂ
ದೊರೆಕೊಳಿಸದನೆಂದೊಡೇಂ ಮಯಂ ದುರ್ಜಯನೋ ॥ ೧೩೯ ॥

ಆಗಳಾ ಮಯನ ಮಸಕಮುಂ ದಾಶರಥಿ ಕಂಡು ಕಡು ಮುಳಿದು—

ಕಂ ॥ ಇದು ರಕ್ಕಸರುಸಿರಂ ಪೀ
ರ್ವುದಗ್ರ ಕಾಳಾಹಿಯೆನಿಪ ಬಿಲ್ಲಂ ರಾಮಂ ॥
ಪದುಳಂ ತಂದಂಗುಷ್ಮದ
ಮೊದಲ್ಗೆ ಕೊಪ್ಪಿಂಗೆ ನೂಂಕಿದಂ ಜ್ಯಾಲತೆಯಂ ॥ ೧೪೦ ॥

ಅಂತು ನಿಜ ವಿಜಯ ಧನುರ್ಲತೆಯನೇಱಿಸಿ ನೀವಿ ಜೇವೊಡೆವುದುಂ—

ಕಂ॥ ರಾವಣನ ದಿವ್ಯ ರಥದ ಗ
ಜಾವಳ ಪೆಪ್ಪಳಿಸೆ ಬೆರ್ಚಿ ರವಿಯ ಹಯಂಗಳ್ ॥

ತೀವಿದುದು ಗಗನಮಂ ವ
ಜ್ರಾವರ್ತ ಧನುರ್ಲತಾ ಘನ ಜ್ಯಾರಾವಂ ॥ ೧೪೧ ॥

ಅನಂತರಂ ಸಂವರ್ತ ಸಮಯದತಿವರ್ತಿಯಪ್ಪ ದಂಡಧರನ ಪೊಡರ್ಪನಪ್ಪು ಕೆಯ್ದು ಮಾರ್ಪಡೆಯಂ ಪಡಲ್ವಡಿಸುತ್ತೆ ಬರ್ಪುದಾತ್ತರಾಘವನ ಬಟಿವಿಡಿದ ವಿಭೀಷಣ ಪ್ರಭಾಮಂಡಲ ಮರುನ್ನಂದನ ಸುಗ್ರೀವಾದಿಗಳುಂ ಮಗುಳ್ದು ಕಾದಲ್ ಮನಂಗೆಯ್ದು ಬರೆ ಪದ್ಮದೇವನವರಂ ಪಿಂತಿಕ್ಕಿ ಮಯನಂ ಮುಟ್ಟಿ ವಂದು ಮಹಾ ಯುದ್ಧಂಗೆಯ್ದು—

ಕಂ ॥ ಜನಕ ಸುತನಂ ಮರುನ್ನಂ
ದನನಂ ಸುಗ್ರೀವನಂ ವಿಭೀಷಣನಂ ಗೆ ॥
ಲ್ದನನಂಜಿಸಿ ರಾಮಂ ಜಯ
ವನಿತೆಯ ಕೈವಿಡಿವ ತೆಱದೆ ಮಯನಂ ಪಿಡಿದಂ ॥ ೧೪೨ ॥

ಚ ॥ ಪಿಡಿಯೆ ರಘೂದ್ವಹಂ ಮಯನನೀಕ್ಷಿಸಿ ರಾಕ್ಷಸ ಚಕ್ರವರ್ತಿ ಕಾ ।
ಯ್ವೊಡರಿಸೆ ಕೀಱಿ ತನ್ನ ರಥಮಂ ಪರಿಚೋದಿಸವೇಟ್ದು ರಾಮನೊಳ್ ॥
ತೊಡರಲೊಡರ್ಚಿ ಬರ್ಪ ಪದದೊಳ್ ಮಗುಳಿತ್ತಲಿನುತ್ತುಮೆಯ್ದಿದಂ ।
ಸಿಡಿಲ ಪೊಡರ್ಪುಮಂ ಜವನ ಕೂರ್ಪುಮನೀಟ್ಟುಳಿಗೊಂಡು ಲಕ್ಷ್ಮಣಂ॥೧೪೩॥

ಅಂತು ರಘುನಂದನನ ಸ್ಯಂದನಮಂ ಪೆಱಗಿಕ್ಕಿ—

ಶಾ ॥ ಎತ್ತಾನುಂ ದೊರೆಕೊಂಡೆ ರಾಘವನಮೋಘಾಸ್ತ್ರಕ್ಕೆ ಮಾಱುಾಂಪ ವಿ ।
ಕ್ರಾಂತಂ ಕಾಮುಕ ನಿನ್ನೊಳುಂಟೆ ಕದನಕ್ಕಣ್ಣಂಬರಂ ಗಂಡರಾರ್ ॥
ಮುಂತಾಗೆನ್ನೊಳಿದಿರ್ಚು ಕೂರ್ಗಣೆಯ ಕೂರ್ಪಂ ತೋರ್ಪೆನಣ್ಮೈಂದು ಕ ।
ಲ್ಪಾಂತೋದ್ಯಾಂತಕನಂತೆ ಗರ್ಜಿಸಿದನಾರಕ್ತೇಕ್ಷಣಂ ಲಕ್ಷ್ಮಣಂ ॥ ೧೪೪ ॥

ಅಂತು ಗಜರಿ ಗರ್ಜಿಸುವುದುಂ ಘನ ಗರ್ಜನೆಗೇಳ್ದ ಕೇಸರಿಯಂತೆ ಕೆಳರ್ದು—

ಕಂ ॥ ಕರಿಗಳ್ ಸಾಸಿರದೊಳ್ ಪೂ
ಡಿ ರಥಂ ಜಂಗಮ ಕುಲಾದ್ರಿ ಬರ್ಪಂತೆ ಭಯಂ ॥
ಕರಮಾಗೆ ಬಂದು ದಶಕಂ
ಧರನಾಸುರಮಾಗೆ ತಾಗಿದಂ ಲಕ್ಷ್ಮಣನಂ ॥ ೧೪೫ ॥

ಅಗಳೆಱಂಕೆಯ ಬೆಟ್ಟಂ
ಬೇಗಂ ಬರ್ಪಂತೆ ಬಂದು ಲಕ್ಷ್ಮಣನ ರಥಂ ॥

ತಾಗಿದುದು ಗರುಡ ವಾಹಿನಿ
ಸಾಗರಮುಚ್ಚಳಿಸೆ ಪಕ್ಷ ಪವನಾಹತಿಯಿಂ ॥ ೧೪೬ ॥

ಅಂತವರ್ ತಮ್ಮ ರಥಮನನತಿದೂರದೊಳಿರಿಸಿ—

ಕಂ ॥ ಇವು ದೃಷ್ಟಿ ವಿಷಾಹಿಯ ಗರ
ಳ ವಹ್ನಿ ಜಿಹ್ವಾ ವಿಭಾಸವೆನೆ ಕಣ್ಗಳ ಕೆಂ ॥
ಪವರೊರ್ವರೊರ್ವರಂ ಪ್ರಾ
ಣ ವಾಯುವಂ ನುಂಗುವಂತೆ ನೋಡಿದರಾಗಳ್ ॥ ೧೪೭ ॥

ಅಂತವರಿರ್ವರುವೋರೊರ್ವರಂ ಜನ್ಮಾಂತರ ಜನಿತ ಕಲುಷ ವಶಗತರಾಗಿ ನೀಡುಂ ನೋಡೆ ತದನಂತರಂ ಲಕ್ಷ್ಮೀಧರಂ ದಶಕಂಧರನನಿಂತೆಂದಂ—

ಕಂ ॥ ಪಲ ದಿವಸಕ್ಕೆತ್ತಾನುಂ
ಕಲಹಕ್ಕೊಳಗಾದೆ ನಿನ್ನ ಬಾಟ್ಪಾಸೆಯ ಪಂ ॥
ಬಲನಿನ್ನುಟಿ ರಘುವೀರನ
ಚಲನಾಬ್ಜಕ್ಕೆಱಗಿ ಪಡೆಯ ಮೃತ್ಯುಂಜಯಮಂ ॥ ೧೪೮ ॥

ಎನೆ ದಶಮುಖಂ ಮುನಿದಿಂತೆಂದಂ—

ಕಂ ॥ ತ್ರಿಜಗದೊಳುಳ್ಳಱಿಕೆಯ ಭೂ
ಭುಜರಂ ಭುಜ ಬಲದಿನೆನ್ನ ಕಾಲ್ಗೆಱಗಿಸಿದೆಂ ॥
ನಿಜ ತನುಗೆಱಗಿಸುವೆನಥೋ
ಕ್ಷಜ ನಿಮಿಷಾರ್ಧದೊಳೆ ಪರ್ದುಮಂ ಕಾಗೆಯುಮಂ ॥ ೧೪೯ ॥

ಎಂದು ಬಿಡೆನುಡಿದು ಕೈದುಗೆಯ್ಯೆಂದು ಮೂದಲಿಸಿ ನಿಜವಿಜಯ ಚಾಪಂಗಳನೇಱಿಸಿ ನೀವಿ ಜೇವೊಡೆವುದುಂ—

ಮ ॥ ದಿನಕೃನ್ಮಂಡಲಮಂ ಪಳಂಚಿ ಕುಲ ಭೂಭೃತ್ಕೂಟದೊಳ್ ಬೇರೆ ಮಾ ।
ರ್ದನಿಯಂ ಪುಟ್ಟಿಸಿ ಲೋಕ ಪಾಲರ ಮನಕ್ಕಾತಂಕಮುಂ ತಂದು ಕೂ ॥
ಡೆ ನಭೋಮಂಡಲಮಂ ದಿಶಾ ವಲಯಮಂ ತಟಿಪ್ಪಾಯ್ದು ಪೊಣ್ಮಿತ್ತು ಪೇಂ ।
ದ್ರನ ದೈತ್ಯೇಂದ್ರನ ದಿವ್ಯ ಚಾಪ ವಿಪುಲ ಜ್ಯಾಘಾತ ಘೋರ ಸ್ವನಂ ॥ ೧೫೦ ॥

ಅಂತು ಸಮರ ಸನ್ನದ್ಧರಾಗಿ—

ಕಂ ॥ ಅಯ್ದುಂ ಸ್ಥಾನದೊಳಂ ನಿಂ
ದಯ್ದುಂ ತೆಱದೇಸಿನೋಜೆವೆತ್ತ ಪ್ರತಿಮರ್ ॥

ಕಾಯ್ದಿಸೆ ದೆಸೆ ಮಸುಳ್ವಿನೆಗಂ
ಪಾಯ್ದುವು ಪುಂಖಾನುಪುಂಖಮಸ್ತ್ರಾವಳಿಗಳ್ ॥ ೧೫೧ ॥

ದನುಜೇಂದ್ರನ ಗಜ ರಥಮುಂ
ಮನುಜೇಂದ್ರನ ಗರುಡ ರಥಮು[1]ಮೆವೆ ಮಿಡುಕದೆ ನಿ ॥
ಲ್ಪಿನಮವರೆಚ್ಚಂಬುಗಳಂ
ದನುವರದೊಳ್ ಪಡೆದುವೊಡನೆ ಶರ ಪಂಜರಮಂ ॥ ೧೫೨ ॥

ಓರೊರ್ವರೆಚ್ಚ ಕಣೆಗಳ
ನೋರೊರ್ವರ್ ಕಡಿದು ಮಾಣದಿಸೆ ಮಾರ್ಮುಗಿಲಿಂ ॥
ದೋರಂತೆ ಪಾಯ್ವ ಪುಷ್ಕರ
ಧಾರಾ ಸಂದೋಹದಂತೆ ಪಾಯ್ದುವು ಕಣೆಗಳ್ ॥ ೧೫೩ ॥

ಪುರುಷೋತ್ತಮನಿಸೆ ದಶಕಂ
ಧರನಂ ಕೂರ್ಗಣೆಗಳುರ್ಚಲಾಜಿವೆ ದಶಕಂ ॥
ಧರನಿಸೆ ನಿಶಿತಾಸ್ತ್ರಂಗಳ್
ಪುರುಷೋತ್ತಮ ತನುವನುರ್ಚಲಾಜಿವೆ ಧುರದೊಳ್ ॥ ೧೫೪ ॥

ನೆಜ್ಜಿದುದು ನಿನ್ನ ನಿಷೇಕಂ
ನೆಜಗೊಳ್ಳದೆ ಮಾಣವೆನ್ನ ಬಾಣಾವಳಿಗಳ್ ॥
ಗಜ್ಜಿ ಸೋಂಕದೆ ಪೋಗೆನುತುಂ
ಗಜ್ಜಿ ಗಜ್ಜಿಯಂ ಸೋಂಕಿ ಪರಿಯೆ ಲಕ್ಷ್ಮಣನೆಚ್ಚಂ ॥ ೧೫೫ ॥

ಚ ॥ ಸಮಧಿಕರಸ್ತ್ರ ಶಸ್ತ್ರ ಬಲದೊಳ್ ದೃಢಕಾಯದೊಳತ್ಯುದಗ್ರ ವಿ ।
ಕ್ರಮದೊಳನಂತ ವೀರ್ಯದೊಳನೇಕ ವಿಧ ಪ್ರಧನಂಗಳೊಳ್ ಧನು ॥
ಶ್ರಮದೊಳಪಾರ ಪೌರುಷದೊಳಾದೊಡಮೇಂ ಪ್ರತಿ ವಾಸುದೇವನೊಳ್ ।
ಸಮನಿಸಿದಾಯುರಂತನೆ ಜಯಪ್ರದಮಾದುದು ವಾಸುದೇವನೊಳ್ ॥೧೫೬॥

ಕಂ ॥ ರಾವಣ ಲಕ್ಷ್ಮಣರತಿ ರೋ
ಷಾವೇಶದಿನೆಚ್ಚುಮಿಟ್ಟುಮಿಜ್ಜಿದುಂ ಪೊಯ್ದುಂ ॥
ನೋವಂ ಸಾವಂ ಬಗೆಯದೆ
ದೇವರ್ಕಳ ನೆರವಿ ನೋಡೆ ಕಾದುತ್ತಿರ್ದರ್ ॥ ೧೫೭ ॥

---

1. ಮೆಲೆ ಮಿಡುಕದೆ. ಖ. ಗ. ಘ. ಚ. 2. ದುವು. ಗ. ಘ. ಚ.

ಕಂ ॥ ಸಾಧಾರಣಾಸ್ತ್ರದಿಂದಮ
ಸಾಧಾರಣಮಪ್ಪ ಯುದ್ಧಮಂ ಮಾಡಿಯುಮೇಂ ॥
ಸಾಧಿಸಲಣಮಾಜಿನೆ ಲ
ಕ್ಷ್ಮೀಧರನಂ ಕದನ ಕರ್ಕಶಂ ದಶವದನಂ ॥ ೧೫೮ ॥

ಅಂತಚಿಂತ್ಯ ಯುದ್ಧಂಗೆಯ್ದು ಲಕ್ಷ್ಮಣನಂ ಗೆಲಲ್ ನೆಱೆಯದೆ ವಿದ್ಯಾಯುದ್ಧಮಂ ಪೊಣರ್ಚಿ ದಿವ್ಯಾಸ್ತ್ರಮನಭಿಮಂತ್ರಿಸಿಕೊಂಡಿಸುವುದುಂ—

ಚ ॥ ಪೊಗೆ ಪೊಱಪೊಣ್ಮೆ ಸೂಸೆ ಕೆಡಿಗಳ್ ಗರಳಾನಲನಿಂ ಜಗಂಗಳಂ ।
ಬಗೆಯದೆ ನುಂಗಲೆಂದು ಪರಿತಂದಪುದಂತಕನಾಜ್ಞೆಯಿಂದಮಿಂ ॥
ಪಗೆವಡೆಗಿಲ್ಲ ಜೀವನಮೆನಲ್ ದಶಕಂಧರನೆಚ್ಚ ರೌದ್ರ ಪ ।
ನ್ನಗ ಶರಮಂ ಗರುತ್ಮ ಶರದಿಂ ಬಿಱುತೋಡಿಸಿದಂ ಜನಾರ್ದನಂ ॥ ೧೫೯ ॥

ಲಯಸಮಯಂ ಜಗಕ್ಕೆ ಪೆಱತಾವುದೊ ರಾವಣನುಗ್ರ ಕೋಪ ವ ।
ಹ್ನಿಯೆ ವಿಲಯಾನಲಂ ಮುಳಿಸೆ ಕಲ್ಪ ವಿರಾಮಮೆನಲ್ ಸಹಸ್ರ ಜಿ ॥
ಹ್ವೆಯೊಳಮಜಾಂಡಮಂ ಪುದಿದು ಬರ್ಪ ದಶಾಸ್ಯನ ವಹ್ನಿ ಬಾಣಮಂ ।
ಜಯ ರಮಣೀರಮಂ ತವಿಸಿದಂ ಹರಿ ವಾರುಣ ದಿವ್ಯ ಬಾಣದಿಂ ॥ ೧೬೦ ॥

ಇಸೆ ತಮದಂಬಿನಿಂ ದಶಮುಖಂ ತಪನಾಸ್ತ್ರದಿನದ್ರಿ ಬಾಣದಿಂ ।
ದಿಸೆ ದನುಜಾಧಿಪಂ ಕುಲಿಶ ಸಾಯಕದಿಂ ತರು ದಿವ್ಯ ಬಾಣದಿಂ ॥
ದಿಸೆ ಖಚರಂ ಕುಠಾರ ಶರದಿಂದಭಿಮಂತ್ರಿಸಿ ಮೇಘ ಬಾಣದಿಂ ।
ದಿಸೆ ದಶಕಂಧರಂ ಪವನ ಸಾಯಕದಿಂ ತಱುದಂ ಗದಾಯುಧಂ ॥ ೧೬೧ ॥

ಕಂ ॥ ಇವು ಮೊದಲಾಗಿರೆ ನಿಜ ದಿ
ವ್ಯ ವಿಶಿಖಮಂ ಮತ್ತಮಾಜಿಯೊಳ್ ಪಲವಂ ದಾ ॥
ನವ ರಿಪು ಭಂಜಿಸೆ ನಿಜ ದಿ
ವ್ಯ ವಿಶಿಖದಿಂ ದೆಸೆಗೆ ಮಸಗಿದಂ ದಶವದನಂ ॥ ೧೬೨ ॥

ಅಂತು ಮುಳಿದು ದಿವ್ಯ ಬಾಣದಿಂ ಲಕ್ಷ್ಮಣನಂ ಗೆಲಲ್ ನೆಱೆಯದೆ—

ಚ ॥ ಸಿಡಿಮಿಡಿಗೊಂಡು ತನ್ನ ಕಲುಷೋಗ್ರ ಕೃಶಾನುವೆ ತನ್ನ ದೇಹಮಂ ।
ಸುಡೆ ನಿಲಲಾಱದುಮ್ಮಳಿಸಿ ಲಕ್ಷ್ಮಣ ದೇವನ ದಿವ್ಯ ಬಾಣದಿಂ ॥
ಕೆಡೆ ನಿಜ ದಿವ್ಯ ಬಾಣದೆಸಕಂ ಮಸಕಂಗಿಡದಿಂದ್ರ ವಿದ್ವಿಷಂ ।
ಪಡೆದನಪಾರಮಂ ತನುಗಳಂ ಬಹುರೂಪಿಣಿಯೆಂಬ ವಿದ್ಯೆಯಿಂ ॥ ೧೬೩ ॥

ಕಂ ॥ ಆ ವಿದ್ಯೆಯ ಸಾಮರ್ಥ್ಯಮ
ನೇವಣ್ಣಿಸುವೆಂ ಜನಾರ್ದನಂಗಾಕ್ಷಣದೊಳ್ ॥
ರಾವಣ ಮಯಮಾಯ್ತಖಿಲ ಧ
ರಾ ವಲಯಂ ಗಗನ ವಲಯಮಾಶಾ ವಲಯಂ ॥ ೧೬೪ ॥

ರಾವಣರನೇಕರುಂ ಯು
ದ್ಧಾವಷ್ಟಂಭ ಪ್ರಚಂಡ ದೋರ್ದಂಡರಗು ॥
ರ್ವಾವರಿಸೆ ಸುತ್ತಿ ಮುತ್ತೆ ಜ
ಯಾವಸಥಂ ಲಕ್ಷ್ಮಣಂ ರಣೋತ್ಸುಕನಾದಂ ॥ ೧೬೫ ॥

ಅಂತು ಸೌಮಿತ್ರಿಯಂ ಸುತ್ತಿ ಮುತ್ತಿ—

ಕಂ ॥ ಇಟ್ಟರ್ ಕೆಲರಿಜ್ಜಿದರ್ ಕೆಲ
ರೊಟ್ಟಜೆಯಿಂ ಬಂದು ತಾಗಿದರ್ ಕೆಲರಂಬಂ ॥
ತೊಟ್ಟರ್ ಕೆಲರಟ್ಟಿಜುಕಿ ಬೊ
ಬ್ಬಿಟ್ಟರ್ ಕೆಲರಾಜಿ ರಂಗದೊಳ್ ಪೌಲಸ್ತ್ಯರ್ ॥ ೧೬೬ ॥

ಅಂತಗುರ್ವಾಗೆ ಬಿಗುರ್ವಿಸಿ ಕಾದುವಲ್ಲಿ—

ಮ ॥ ಅನಿತುಂ ರಾವಣ ಕೋಟಿ ಕೋಟಿ ತೆಱದಿಂ ದಿವ್ಯಾಸ್ತ್ರ ಶಸ್ತ್ರಂಗಳಿಂ ।
ಮುನಿದೆಯ್ತಂದಿಸೆ ಪೊಯ್ಯೆ ತಳ್ತಿಜ್ಜಿಯೆ ತಳ್ಕೇಸಾಡಿದಂ ಕೋಟಿಗೊ ॥
ರ್ವನೆ ಬಿಲ್ಗೊಂಡು ಪುನರ್ಭವಂ[1]ಗಳವು ಕೋಟಾಕೋಟಿಗಳ್ ಪಾಜಿ ಬೀ ।
ಟ್ಟಿನೆಗಂ ಪಂದಲೆಗಳ್ ಧನುರ್ಧರ ಧುರೀಣಂ ದುರ್ಧರಂ ಲಕ್ಷ್ಮಣಂ ॥೧೬೭॥

ಶರ ಸಂಧಾನದ ವೇಗಮಂ ಪೊಗಟಿಲಾವಂ ಸಾಲ್ವಪಂ ಕೋಟಿ ದೈ ।
ತ್ಯರನಾಂತೊರ್ವನೆ ದೀಪ ಮಾಲಿಕೆಗಳಂ ಚಂಡಾನಿಲಂ ನಂದಿಪಂ ॥
ತಿರೆ ಮೆಯ್ವೆರ್ಚಿದುವಂ ತುಷಾರ ಕಣಮಂ ಚಂಡಾಂಶು ನಿರ್ಮೂಲಿಪಂ ।
ತಿರೆ ನಿರ್ಮೂಲಿಸಿದಂ ನಿಶಾತ ಶರ ಸಂಘಾತಂಗಳಿಂ ಲಕ್ಷ್ಮಣಂ ॥ ೧೬೮ ॥

ಕಂ ॥ ರಾವಣ ಕೋಟಿಯ ತಲೆ ಕೆಂ
ದಾವರೆಯಂ ಕೆದಱಿದಂತೆ ರಣ ಮಂಡಲಮಂ ॥
ತೀವೆ ತೆಗೆದೆಚ್ಚು ಲಕ್ಷ್ಮಣ
ದೇವನವೋಲ್ ಕೋಟಿ ಭಟನೆನಿಪ್ಪವನಾವಂ ॥ ೧೬೯ ॥

---

1. ಮಗುಟಃ. ಕ. ಖ.

ಮ ॥ ಸಮರ ಕ್ಷ್ಮೋಣಿಯನೆಯ್ದೆ ರಾವಣ ಶಿರಂಗಳ್ ತೀವಿ ತಟ್ಟಿಪ್ಪಿಯ್ದನು।
ಕ್ರಮದಿಂ ಪುಂಜಿಸಿ ರೌದ್ರಮಾದುವು ಸುಮಿತ್ರಾಪುತ್ರ ಬಾಣಾಸನಾ ॥
ಶ್ರಮದೊಳ್ ವಿಶ್ರಮಿಸಿರ್ಪ ಯೋಗಿನಿ [1]ಜಯ ಶ್ರೀವಿಶ್ರುತಾಕಾಶ ಲಿಂ।
ಗಮನಾರಕ್ತ ಸರೋಜ ಸಂತತಿಗಳಿಂದಭ್ಯರ್ಚನಂಗೆಯ್ದವೋಲ್ ॥ ೧೭೦ ॥

ಅಂತಗರ್ವಾಗೆ ಬಿಗುರ್ವಿಸಿ ಕಾದುವಲ್ಲಿ ರಾವಣನ ತಲೆಗೆ ನೆಲನುಮಾಕಾಶಮುಮೆಡೆನೆಱೆಯದೆನೆ ತಱುಮೊಟ್ಟಿ ರಾವಣಂ ಬಹುರೂಪಿಣೀ ವಿದ್ಯೆಯನುಱುದು ಮುಳಿಸನುಱಿಯದೆ ಚಂದ್ರಹಾಸದಿನಿಱಿಯೆ ಲಕ್ಷ್ಮಣಂ ಸೂರ್ಯಹಾಸದಿನದರ್ಕೆ ಭಂಗಮನೊಡರ್ಚಿ ಕೆರ್ಚೀಱಿದ ಕೋಪದಿಂ ಮನಂಬೆರ್ಚಿ—

ಮ ॥ ದೊಣೆಯಿಂದಂ ತೆಗೆಯಲ್ಕೆ ಮರ್ವು ನಭಮಂ ಪರ್ವಿತ್ತು ದಿವ್ಯಾಸ್ತ್ರಮಂ।
ಗೊಣೆಯಕ್ಕುಯ್ಯಲೊಡಂ ದಿನಾಧಿಪನ ತೇಜಂ ಪಿಂಗಿಪೋದತ್ತು ರಾ ॥
ವಣನೇಸಾಡಿದೊಡಾಯ್ತು ರಾತ್ರಿಸಮಯಂ ಸಮ್ಮೋಹನಾಸ್ತ್ರಕ್ಕೆ ಲ।
ಕ್ಷ್ಮಣ ವೀರಂ ಪ್ರತಿಕಾರ ಮಂತ್ರ ವಿಕಲಂ ವಿಭ್ರಾಂತನಾಗಿರ್ದಿನಂ ॥ ೧೭೧ ॥

ಅನ್ನೆಗಮಿತ್ತ ಚಂದ್ರವರ್ಧನ ವಿಯಚ್ಚರೇಂದ್ರನ ಮಗಳ್ದಿರೆಣ್ಬರ್ ಕನ್ನೆಯರ್ ಮಣಿಮಯ ವಿತಾನ ವಿರಾಜಮಾನ ವಿಮಾನಾರೂಢೆಯರ್ ವಿಯನ್ಮಾರ್ಗದಿಂ ಬಂದು ಲಕ್ಷ್ಮಣನಂ ನೋಡುತ್ತುಮಿರೆ ದೇವಾಪ್ಸರೋಗಣಿಕೆಯರಾಕೆಗಳಂ ನೀಮಾರ್ಗೇನಿಮಿತ್ತಮಿಲ್ಲಿಗೆ ಬಂದಿರೆಂದು ಬೆಸಗೊಳ್ವುದುಮವರಿಂತೆಂದರ್ ಸೀತಾಸ್ವಯಂವರಕ್ಕೆ ಮದೀಯ ಜನಕನೊಡಗೊಂಡು ಪೋಗಿ ಲಕ್ಷ್ಮಣನಂ ಕಂಡು ಮನದೆ ಕೊಂಡೆಮ್ಮನೀತಂಗೆ ಕೊಟ್ಟಿನೆಂಬುದುಮೆಮಗೀತನೆ ಪುರುಷನಪ್ಪುದಱಿನೀತನನು ವರವೆಂತಾದಪುದೆಂಬುದಂ ನೋಡಲ್ ಬಂದೆವೆನೆ ಲಕ್ಷ್ಮಣನಾ ಮಾತಂ ಕೇಳ್ದಾಕೆಗಳನಳ್ಕರ್ತು ನೋಟ್ಪುದುಮವರ್ ಸಮಯೋಚಿತಮನಱಿದು ಸಮ್ಮೋಹನ ಶರ ಶಕ್ತಿಯನೀ ಮಂತ್ರದಿಂ ಕಿಡಿಸೆಂದುಚ್ಚರಿಸುವುದುಮಾ ಮಂತ್ರದಿನಭಿಮಂತ್ರಿಸಿ—

ಚ ॥ ಶರಧಿಯನುರ್ಚಿ ಪಿಂಗಿದುದು ಭೋಂಕನೆ ಕಟ್ಟಲೆ ದಿವ್ಯ ಬಾಣಮುಂ।
ತರೆ ತಿರುವಿಂಗೆ ತೀವ್ರಕಿರಣಂ ತಲೆದೋಱುದನಾರ್ದು ಪಂಕಜೋ ॥
ದರನಿಸೆ ರಾತ್ರಿ ಪಿಂಗಿ ಪಗಲಪ್ಪುದುಮಾದುದು ಸಂತಸಂ ಸುರಾ।
ಸುರರ್ಗವಲೋಕಿಸಲ್ ಪಡೆದೆವೆಂದವರಿರ್ವರ ದೋರ್ವಲಂಗಳಂ ॥೧೭೨॥

ಅಂತು ಸಮ್ಮೋಹನಾಸ್ತ್ರಂ ಕೂರ್ಪುಗಿಡೆ ಪೊಡರ್ಪುಗಿಡದೆ ರಾವಣಂ ವಿಘ್ನವಿನಾಯಕಾಸ್ತ್ರದಿಂದಿಸುವುದುಮದಂ ಲಕ್ಷ್ಮಣಂ ಸಿದ್ಧಾರ್ಥ ವಿದ್ಯಾಶಿಲೀಮುಖದಿಂ ಪರಾಙ್ಮುಖಮಾಟ್ಪುದುಂ—

---

1. ಚಯ. ಗ. ಘ. ಚ.

ಕಂ ॥ ಎನಿತಂ ಕೊಂಡಾಡುವೆ ನೀ
ತನ ಮಸಕಮನೀಗಳಿಂತೆ [1]ಕಿಡಿಸುವೆನೆಂದಾ ॥
ದನುಜೇಂದ್ರಂ ರೋಷ ಹುತಾ
ಶನನೆರ್ದೆಯೊಳ್ ತಿಣ್ಣಮುರಿಯೆ ಕಿಡಿಕಿಡಿವೋದಂ ॥ ೧೭೩ ॥

ಅಂತತಿ ಪ್ರಬಲ ಕಲುಷ ವಶಗತನಾಗಿ—

ಮ ॥ ಪರಚಕ್ರ ಕ್ಷಯ ಕಾಲಚಕ್ರಮೆನಿಸಿರ್ದಾತ್ಮೀಯ ಚಕ್ರಕ್ಕೆ ಖೇ ।
ಚರ ಚಕ್ರೇಶ್ವರನುಯ್ಯೆ ಕೈಯನದು ತೇಜಶ್ಚಕ್ರದಿಂ ಕೋಟಿ ಭಾ ॥
ಸ್ಫುರಚಕ್ರ ಪ್ರಭೆಯಂ ಪಳಂಚಲೆದು ಕೈಗೆಯ್ತಂದು ಲೋಕೈಕ ಭೀ ।
ಕರಮಾಟಂದುದು ನೀಲ ಮೇಘ ನಿಕಟ ಪ್ರಸ್ಫಾರ ದಂಭೋಳಿವೋಲ್ ॥೧೭೪॥

ಅಂತು ವೀರಪುರುಷ ರತ್ನನೆನಿಪ ರಾವಣನ ಕೈಗೆ ಚಕ್ರರತ್ನಂ ಬರ್ಪುದುಮುದಂ ಲಕ್ಷ್ಮಣಂ ಕೋವರ ಚಕ್ರಮಂ ಬಗೆವಂತೆ ಬಗೆದು—

ಉ ॥ ಭೇದಿಪೆನೀ ದಶಾನನನ ಚಕ್ರಮನೀತನ ಕಂಠ ನಾಳಮಂ ।
ಭೇದಿಸಿ ತೋರ್ಪೆನೆನ್ನ ಭುಜ ವೀರ್ಯಮನೆಂದು ಕಡಂಗಿ ವಿಕ್ರಮಾ ॥
ಸಾದಿತ ವಿಶ್ವಲೋಕ ವಿಜಯಂ ಕುಲಿಶಾಸ್ತ್ರದ ಪಿಳ್ಳು ನಾರಿಯೊಳ್ ।
ಕೋದು ಕದಂಪನೆಯ್ದೆ ಧನುವಂ ತೆಗೆದರ್ವಿಸಿದಂ ಜನಾರ್ದನಂ ॥ ೧೭೫ ॥

ಮ॥ಸ್ರ॥ ಕಡಿಖಂಡಂಮಾಡುವೆಂ ಚಕ್ರಮನೆಡೆಯೊಳಿನುತ್ತುಂ ಧನುರ್ದಂಡಮಂ ಜೇ।
ವೊಡೆಗೆಯ್ದು ಗ್ರಾಸ್ತ್ರಮಂ ಸಂಧಿಸಿ ತಿರುವಿನೊಳಾಲೀಢದೊಳ್ ನಿಂದು ಕೋಲುಂ॥
ಕಡೆಗಣ್ಣುಂ ಕೈಯುಮಿಂಬಾಗಿರೆ ತೆಗೆನೆಱಿದವ್ಯಗ್ರನೇಕಾಗ್ರ ಚಿತ್ತಂ ।
ಬಡೆದಿರ್ದಂ ಚಂದ್ರ ಚೂಡಂ ತ್ರಿಪುರಮನಿಸಲೆಂದಿರ್ದವೋಲ್ ರಾಮ
ಚಂದ್ರಂ ॥ ೧೭೬ ॥

ಉ ॥ ದಂಡಧರಂಬೊಲಿರ್ದನಭಿವೀಕ್ಷಿಸುತುಂ ಶತ ಖಂಡಮಪ್ಪಿನಂ ।
ಖಂಡಿಸುವೆಂ ವಿಯಚ್ಚರನನಚ್ಚಿನ ಚಕ್ರಮನೆಂದು ಘರ್ಮ್ಮವಾ ॥
ರ್ಮ್ಮಂಡಲಿ ಗಂಡ ಮಂಡಲದಿನಲ್ಲುಗೆ ಲೋಹಿತ ಲೋಚನಂ ಪ್ರಭಾ ।
ಮಂಡಲನೆತ್ತಿ ಚಂಡ ಭುಜದಂಡ ವಿಮಂಡಿತ ಮಂಡಲಾಗ್ರಮಂ ॥ ೧೭೭ ॥

ಕಂ ॥ ಇಡೆ ದಶವದನನ ಚಕ್ರದ
ಪೊಡರ್ಪನಾಂ ಕಿಡಿಪೆನೆಂದು ಶೂಲಾಯುಧಮಂ ॥
ಪಿಡಿದೆತ್ತಿ ಸೂಸೆ ಕಣ್ಗಳ್
ಕಿಡಿಯಂ ಭೈರವನವೋಲ್ ವಿಭೀಷಣನಿರ್ದಂ ॥ ೧೭೮ ॥

---

1. ನೆರಪುವೆ. ಗ. ಘ ಚ

ಕಂ ॥ ಪುಡಿಪುಡಿಮಾಟ್ಪಿಂ ಚಕ್ರಮ
ನೆಡೆಯೊಳೆ ಲಕ್ಷ್ಮಣನನೆಯ್ದಲೀಯೆನೆನುತ್ತುಂ ॥
ಪಿಡಿದೆತ್ತಿ ಗದೆಯನಿರ್ದಂ
ಕಡೆಗಾಲದ ಪೊಡೆವ ಪಿಡಿಲವೋಲ್ ಸುಗ್ರೀವಂ ॥ ೧೭೯ ॥

ಇರೆ ವಾಮಹಸ್ತದೊಳ್ ಬಿಲ್
ತಿರುವಂ ಗೊಲೆಗೊತ್ತಿ ಚಕ್ರಮಂ ಜೆಲ್ಲಿಸುವೆಂ ॥
ಬರಲೀಯೆನೆಂದು ಲಾಂಗಲ
ಶರಂಗಳಂ ಪಿಡಿದು ಪವನನಂದನನಿರ್ದಂ ॥ ೧೮೦ ॥

ವಿಕ್ರಮ ಕರ್ಕಶನೀತನೆ
ಶಕ್ರನೆನಲ್ ಪಿಂಗದಂಗದಂ ವಜ್ರದ ರು ॥
ಕ್ಷತ್ರಂ ದೆಸೆಯಂ ದಳ್ಳಿಸೆ
ಚಕ್ರಮನಾಕ್ರಮಿಸಲೆಂದು ತಜ್ಞಿಸಂದಿರ್ದಂ ॥ ೧೮೧ ॥

ಅಂತವರ್ ಸಹಸ್ರ ಯಕ್ಷ ರಕ್ಷಿತಮಪ್ಪ ಸುದರ್ಶನ ಚಕ್ರದ ಬರವನಭಿವೀಕ್ಷಿಸುತ್ತಿರ್ಪುದುಮತ್ತ ದಶಮುಖಂ ಲಕ್ಷ್ಮಣಂಗಭಿಮುಖನಾಗಿ—

ಕಂ ॥ ಅಟ್ಟಿಗಂಡಿನೊಳೇಂ ಕೈದುವ
ನುಟ್ಟಿ ಶಕ್ತಿಯೊಳಾದ ಸಾವನೆಂತಾನುಂ ಮುಂ ॥
ಕಟ್ಟಿದಿಂ ಸಾಯದಿರಾಂತರ
ನುಟ್ಟಿವಂತಾಡುಗುಮೆ ಚಕ್ರ ಧಾರಾಚಕ್ರಂ ॥ ೧೮೨ ॥

ಎಂದು ಮೂದಲಿಸಿ—

ಕಂ ॥ ತಿರಿಪೆ ಧರಾಚಕ್ರಂ ಕೋ
ವರ ಚಕ್ರದ ತೆಱದೆ ತಿರಿದುದೆಂಟುಂದೆಸೆ ತ ॥
ಳ್ತುರಿದುವು ಚಕ್ರದ ಬಿಸುಪಿಂ
ಸುರ ಸಂಕುಲಮಗಿದು ತೆಗೆದುದಿರ್ದೆಡೆಯಿಂದಂ ॥ ೧೮೩ ॥

ಆಗಳದಂ ಕಂಡು—

ಉ ॥ ಕಾವವರಾರೊ ಲಕ್ಷ್ಮಣನನಕ್ಕಟ ಸೀತೆಯ ಬೇವಸಕ್ಕೆ ಕಾ ।
ಲಾವಧಿಯಾದುದಿಲ್ಲೆನೆ ಸುರಾಸುರ ಮಂಡಲಮಾರೆ ಹರ್ಷದಿಂ ॥
ರಾವಣ ಸೈನಿಕಂ ಕಪಿ ಬಲಂ ಬಿಜುತೋಡುವಿನಂ ತ್ರಿಲೋಕ ವಿ ।
ದ್ರಾವಣನಿಟ್ಟನಾ ಖಚರ ಚಕ್ರಿ ಸುದರ್ಶನ ದಿವ್ಯಚಕ್ರದಿಂ ॥ ೧೮೪ ॥

ಅಂತಿಸುವುದುಮಾ ಚಕ್ರರತ್ನಂ ತನ್ನನಾಕ್ರಮಿಸಲಿರ್ದ ಹನುಮಾಂಗದಾದಿಗಳ ದಿವ್ಯಾಯುಧಂಗಳನೊಟ್ಟಯಿಸಿ ಲಕ್ಷ್ಮೀಧರನಂ ಮುಟ್ಟಿವಂದು ಮೂಱು ಸೂಲ್ ಬಲಗೊಂಡಾತನ ಬಲದ ಮುಯ್ಪಿನ ಕೆಲದೊಳಿರ್ದುದುಮದಂ ಲಕ್ಷ್ಮೀಧರನನವ ಲೋಕಿಸುತ್ತುಮಿರೆ ರಾಮಸ್ವಾಮಿ ಕಂಡು ಲಕ್ಷ್ಮಣ ನಿನಗೆ ಚಕ್ರರತ್ನಂ ದೊರೆಕೊಂಡುದದನೆ ಕೊಂಡಿಡೆಂದು ಬೆಸಸುವುದುಮದರ್ಕೆ ಲಕ್ಷ್ಮಣಂ ದಕ್ಷಿಣ ಭರತ ಧಾತ್ರಿಗಭಂ ಹಸ್ತಮೆನಿಪ್ಪ ತನ್ನ ದಕ್ಷಿಣ ಹಸ್ತಮಂ ನೀಡೆ—

ಕಂ ॥ ಲಂಕಾಧೀಶನ ಜಯವಧು
ಪಂಕಜ ನಾಭಂಗೆ [1]ಕೂರ್ತು ರಣ ಮುಖದೆಡೆಯೊಳ್ ॥
ಮುಂ ಕೊಟ್ಟಟ್ಟಿದ ರತ್ನದ
ಕಂಕಣಮೆಂಬಂತೆ ಕೈಗೆ ವಂದುದು ಚಕ್ರಂ ॥ ೧೮೫ ॥

ಆಗಳ್ ಚಕ್ರಪಾಣಿ ಖಚರ ಚಕ್ರವರ್ತಿಯನಿಂತೆಂದಂ—

*ಮಲ್ಲಿಕಾ ॥ ನಿನ್ನ ನಚ್ಚಿನ ಚಕ್ರಮುಂ ಬೆಸಕೆಯ್ಯಲೊಲ್ಲದೆ ಬಿಟ್ಟುಬಂ ।
ದೆನ್ನನಾಶ್ರಯಿಸಿತ್ತು ಕೆಮ್ಮನೆ ಕಾದಿ ಸಾಯದೆ ಲಂಕೆಯೊಳ್ ॥
ನಿನ್ನ ಪುತ್ರ ಕಳತ್ರ ಮಿತ್ರರೊಳೊಂದಿ ರಾಜ ವಿಭೂತಿಯೊಳ್ ।
ಮುನ್ನಿನಂತಿರು ಬೇಡಿ ಕೊಂಡಭಯ ಪ್ರದಾನಮನಣ್ಣನೊಳ್ ॥ ೧೮೬ ॥

ಕಂ ॥ ಅಸದಾಗ್ರಹಮಂ ಬಿಸುಟೊ
ಪ್ಪಿಸು ಸೀತಾದೇವಿಯಂ ಜಗಜ್ಜನನಿಯನ ॥
ರ್ಚಿಸು ರಾಮಸ್ವಾಮಿಯ ಚರ
ಣ ಸರೋರುಹಮಂ ಕಿರೀಟ ಮಣಿ ಮಂಜರಿಯಿಂ ॥ ೧೮೭ ॥

ಎನೆ ದಶಮುಖಂ ಕೋಪ ಶಿಖಿಯಿಂ ನಂದುವ ಸೊಡರಂತುದ್ದಮುರಿದು—

ಮ ॥ ಎಲೆ ಪಾರುಂಬಳೆ ಪೋಗೆ ಪೋದುದೆ ಸುಮಿತ್ರಾಪುತ್ರ ಮತ್ಪೌರುಷಂ ।
ಪಲವಂ ನೀಂ ಗಿಳಿಯಂದದಿಂ ಗಟಪದಿರ್ ಕೈಲಾಸಮಂ ತೂಗಿದೀ ॥
ತೊಲೆಯೊಳ್ ದಕ್ಷಿಣಬಾಹು ದಂಡದೊಳಿದಿರ್ಚಲ್ ಗಂಡನಾರೆಂದು ಮೆ ।
ಯ್ಗಲಿ ಪಾಯ್ದಂ ರಥದಿಂ ನೆಲಕ್ಕೆ ಜಡಿಯುತ್ತುಂ ಚಂದ್ರಹಾಸಾಸಿಯಂ ॥ ೧೮೮ ॥

ಅಂತು ಪೊಡಪ್ಪುಗಿಡದತಿ ಭರದಿನಿಱಿಯಲನುಗೆಯ್ದು ಬರ್ಪುದಂ ಕಂಡು ಕೋಟಿಕ ಶಿಲೆಯನೆತ್ತಿದ ಮಹಾಸತ್ವಂ ಸುದರ್ಶನ ಚಕ್ರದಿಂದಿಡುವುದುಂ—

---

1. ಸೋಲ್ತು ಮನದೊಲವಿಂದಂ. ಗ. * ಮಲ್ಲಿಕಾಮಾಲೆ.

ಮ ॥ ಹೃದಯಂ ಸೀತಾನಿಮಿತ್ತಂ ಮನಸಿಜನಿಸೆ ಪಂಚೇಷುವಿಂ ಭಿನ್ನಮಾಗಿ ।
ರ್ದುದಱಿಂ ಲಕ್ಷ್ಮೀಧರಂ ಕೋಪದಿನಿಡೆ ಪೆಱತೇಂ ಚಕ್ರರತ್ನಕ್ಕೆ ಸಾಡಾ ॥
ದುದೆನಲ್ ನಟ್ಟುರ್ಚಿ ಬೆನ್ನಿಂ ಪೊಱಮಡೆ ವಿಗತ ಪ್ರಾಣನಾ ದಾನವೇಂದ್ರಂ ।
ತ್ರಿದಶೇಂದ್ರಂ ವಜ್ರದಿಂದಿಟ್ಟೊಡೆ ನಡುಗೆ ನೆಲಂ ಬೆಟ್ಟು ಬೀೞ್ಪಂತೆ ಬಿೞ್ದಂ ॥೧೪೯॥

ಅಂತು ಚಕ್ರಹತಿಯಿಂ ಧರಾತಲದೊಳ್ ಬಿೞ್ದು—

ಚ ॥ ಅಸುರನನರ್ಘ್ಯ ಶೋಣಮಣಿ ಭೂಷಣ ದೀಧಿತಿಯೊಳ್ ಕಿರೀಟದೊಳ್ ।
ಮಿಸುಗುವ ಪದ್ಮರಾಗ ರುಚಿಯೊಳ್ ಪೊಜಪೊಣ್ಮುವ ರಕ್ತ ವಾರಿಯೊಳ್ ॥
ಮುಸುಕಿ ರಣಾವಲೋಕನ ಕುತೂಹಲದಿಂ ನೆರೆದಪ್ಸರೋಗಣ ।
ಕ್ಷಸುರ ಕುಲಾಧಿದೇವತೆ ಚಿತಾನಲನಿಂ ಸುಡುವಂತೆ· ತೋಱಿದಂ । ೧೯೦ ॥

ಮ॥ಸ್ರ॥ ಅಸಿರತ್ನಂ ಚಕ್ರರತ್ನಂಬಡೆದನಮಿತ ಶಸ್ತ್ರಾಧಿದೈವಂಗಳಂ ಸಾ ।
ಧಿಸಿದಂ ಕೈಲಾಸಮಂ ಚಾಲಿಸಿದನಖಿಲ ದಿಕ್ಪಾಲರಂ ಗೆಲ್ದನಂತ ॥
ಪ್ಪಸುರೇಂದ್ರಂ ತನ್ನ ಶಸ್ತ್ರಾನನದೊಳೆ ಮರಣ ಪ್ರಾಪ್ತನಾದಂ [1]ದಲಂದ ।
ನ್ಯ ಸತೀ ಸಂಭೋಗ ಕೇಳೀ ರತರುಱಿದವರ್ಗಳ್ ಸಾವುದಿನ್ನಾವ
ಚೋದ್ಯಂ ॥ ೧೯೧ ॥

ಅಂತು ದಶಾನನಂ ಯವಮಾನನಮಂ ಪುಗುವುದುಂ—

ಚ ॥ ಸುರಿದುದು ಪುಷ್ಪವೃಷ್ಟಿ ಸುರ ದುಂದುಭಿ ಘೂರ್ಣಿಸಿದತ್ತು ಪೇಂದ್ರನಂ ।
ಪರಸಿದುದಱ್ತಿಱಿಂ ಸುರಗಣಂ ಮಿಳಿರ್ದತ್ತು ಜಯಧ್ವಜಂ ನಿಶಾ ॥
ಚರ ಬಲಮೋಡಿದತ್ತಭಯ ಘೋಷಣಮುಣ್ಮೆದುದಬ್ಧಿ ಘೋಷಮಂ ।
ಪರಿಭವಿಸಿತ್ತು ವಾನರ ಪತಾಕಿನಿಯೊಳ್ ವಿಜಯಾನಕ ಸ್ವನಂ ॥ ೧೯೨ ॥

ಆಗಳವನೀತಲದೊಳ್ ಬಿೞ್ದಿರ್ದ ರಾವಣನಂ ವಿಭೀಷಣಂ ಕಂಡು ಸಹೋದರ ಸ್ನೇಹಂ ಕಾರಣಮಾಗೆ ಮೂರ್ಛೆವೋಗಿ ಶೀತಲ ಕ್ರಿಯೆಯಿನೆಂತಾನುಮೆೞ್ಚತ್ತು ಮತ್ತಮತಿ ಪ್ರಲಾಪಂಗೆಯ್ದು ಶೋಕ ವಿಕಲನಾಗಿರ್ದನಿತ್ತ ರಾವಣಂಗೆ ಮರಣ ಮಾದುದನಱಿದು ರಂಭೆಯುಂ ಚಂದ್ರಾನನೆಯುಂ ಚಂದ್ರಿಕೆಯುಂ ಪ್ರವರೆಯು ಮೂರ್ವಶಿಯುಂ ಮಂಡೋದರಿಯುಂ ಕಮಲೆಯುಂ ಕಮಲಾನನೆಯುಂ ರುಕ್ಮಿಣಿಯುಂ ರತ್ನಮಾಲೆಯುಂ ಶ್ರೀಮತಿಯುಂ ಶ್ರೀಮಾಲೆಯುಂ ಶ್ರೀಕಾಂತೆಯುಂ ಸಂಧ್ಯಾಮಾಲೆಯುಂ ತಟನ್ಮಾಲೆಯುಂ ಅನಂಗಸೌಂದರಿಯುಮಾನಂದೆಯುಂ ವಸುಂಧರಿಯುಂ ಪ್ರಭಾವತಿಯುಂ ಪದ್ಮಾವತಿಯುಂ ಭಾನುಮತಿಯುಂ ಧೃತಿಯುಂ ಮನೋ

1. ದಲೆಂದಂದ ಸತೀ. ಗ. ಘ. ಚ.

ವೇಗೆಯುಂ ರತಿಕಾಂತೆಯುಮೆಂದಿವರ್ ಮೊದಲಾಗೆ [1]ನಾಲ್ವತ್ತೆಣ್ಸಾಸಿರಮಂತಃ
ಪುರ ಪುರಂಧ್ರಿಯರ್ ಬೇಗಂ ಬಂದಾತನ ಕಳೇಬರಮಂ ಕಂಡು ತಟಿಸ್ಪೃಸಿ ಕೊಂಡು
ಮೂರ್ಛೆವೋಗಿ ನೀಡಲುಂದೆಬ್ಬಿತ್ತು ವಿಷಾದ ವಹ್ನಿಗಾಜ್ಯಾಹುತಿಗಳಾಗಿ—

ಕಂ ॥ ನಿನ್ನಂತವುರದ ಕಾಂತೆಯ
ರನ್ನೋಡದೆ ನುಡಿಯದೆಂಬುಕೆಯ್ಯದೆ ಪದೆಪಿಂ ॥
ಮನ್ನಿಸದೆ ಮುಳಿದ ತೆಱದಿಂ
ನಿನ್ನಿರ್ದಿರವಾವ ಕಾರಣಂ ಖಚರಪತೀ ॥ ೧೯೩ ॥

ಚ ॥ ಕರಿ ಹರಿ ಹಂಸ ವಿಮಾನ ಮಕರಾದಿ ಮಹಾಧ್ವಜವಾರ ಮುಂದೆ ಪೇಟ್ ।
ಪರಿವುವೊ ನಿನ್ನ ಬೆಳ್ಗೊಡೆಯ ತಣ್ಣೆಲಿಲೊಳ್ ನಿಲಲಾರೊ ಯೋಗ್ಯರಾರ್ ॥
ಸುರ ನರ ಕಿನ್ನರೋರಗರನಾಳ್ವೆಸಕೆಯ್ಸುವುದಾತ್ತರಿನ್ನದಾರ್ ।
ಭರತ ವಸುಂಧರಾ ವಲಯಮಂ ಪರಿರಕ್ಷಿಸುವರ್ ದಶಾನನಾ ॥ ೧೯೪ ॥

ಉ ॥ ದುರ್ಮತಿ ಧಾತ್ರನಿಂ ನಿನಗೆ ದುಸ್ಥಿತಿ ಸಾರ್ದುದು ನಿನ್ನ ಪೆಂಡಿರಿ ।
ನ್ನಾರ್ಮಧು ಮಾಸದೊಳ್ ನಿಜ ವಿನೋದ ವನಂಗಳ ಪಾದಪಂಗಳೊಳ್ ॥
ಪೆರ್ಮೊಲೆಯೊತ್ತಿನಿಂ ಕುರ ವಕಕ್ಕೆ ವಿಕಾಸಮನುಂಟುಮಾಪ್ಪರಿ ।
ನ್ನಾರ್ಮಧು ಬಿಂದು ಸೇಕದೊಳೆ ಕೇಸರದೊಳ್ ಪಡೆವರ್ ವಿಕಾಸಮಂ ॥ ೧೯೫ ॥

ಮ ॥ ದಿವಮಂ ನೀಂ ಪುಗೆ ಖೇಚರೇಂದ್ರ ತರಳಾಪಾಂಗ ಪ್ರಭಾ ಪಾತದಿಂ ।
ದವರೋಧಾಂಗನೆಯರ್ಕಳಾ ತಿಲಕದೊಳ್ ಪೂಗೊಂಚಲಂ ಮಾಪ್ಪರಿ ॥
ನ್ನವನೀವಲ್ಲಭ ನಿನ್ನ ನಂದನದಶೋಕಾನೋಕಹಕ್ಕಾರೊ ಪ ।
ಲ್ಲವಮಂ ಪುಟ್ಟಿಸುವರ್ ವಿಲಾಸವತಿಯರ್ ಪಾದ ಪ್ರಹಾರಂಗಳಿಂ ॥ ೧೯೬ ॥

ಉ ॥ ಇಂ ಕಡುಕೆಯ್ದು ದಿಕ್ಪತಿಗಳಳ್ಕುವಿನಂ ತ್ರಿಜಗದ್ವಿಭೂಷಣ ।
ಕ್ಯಂಕುಶಮಿಕ್ಕಿ ದಿಗ್ಗಜಮನೋಡಿಸಲುಂ ವಿಜಯಾರ್ಧ ಶೈಲದಿಂ ॥
ತೆಂಕಣ ಧಾತ್ರಿಯಂ ತನಗೆ ಕಂಕಣದಂತಿರೆ ಕೈಗೆ ಮಾಡಲುಂ ।
ಲಂಕೆಯನಾಳಲುಂ ನೆಱೆವ ಖೇಚರ ವಲ್ಲಭನಾರ್ ದಶಾನನಾ ॥ ೧೯೭ ॥

ಕಂ ॥ ಬಾಳೆಯನಂಜಿಸಿ ಭುಜ ಬಲ
ಶಾಳಿಯನೋಡಿಸಿ ಸಹಸ್ರ ಬಾಹುವನಿನ್ನಾರ್ ॥
ಬಾಳಮಸೆಯಿಂ ದಶಾನನ
ಕೇಟೂಳ್ಯಾಡುವರೊ ನೆಲದೊಳುಳ್ಳರಸುಗಳಂ ॥ ೧೯೮ ॥

---

1. ಪದಿನಾರ್ ಸಾಸಿರಂ. ಚ.

ಕಂ॥ ದಿವಿಜ ಭವನಕ್ಕೆ ಹಾ ದಾ
ನವೇಂದ್ರ ನೀನತಿಥಿಯಾದೆ ತುಡುವವರಿನ್ನಾರ್ ॥
ನವ ಮುಖಭೂಷಣಮಂ ಸ್ವೈ
ರ ವಿಹಾರದಿನೇಱುವನ್ನರಾರ್ ಪುಷ್ಪಕಮಂ ॥ ೧೯೯ ॥

ಉ॥ ಅತ್ತ ಸುರಾಸುರರ್ ನೆರೆದು ಬೊಬ್ಬಿಡೆ ನೀಂ ಕಿಜುಗುಂಡನೆತ್ತುವಂ।
ತೆತ್ತಿದ ಬನ್ನಪುಂ ಬಗೆಗೆ ತಂದು ಕುಬೇರ ಗಿರೀಂದ್ರವಿಷ್ಯೆ ಮೆ॥
ಯ್ವೆತ್ತಿರೆ ನಿರ್ಝರಚ್ಛಲದಿನೋಕುಳಿಯಾಡುವಿನಂ ದಶಾಸ್ಯ ದೇ।
ವೋತ್ತಮ ಕಾಮಿನೀಜನದ ತೋಳ್ವಲೆಯೊಳ್ ತೊಡರಲ್ತೆ ತಕ್ಕುದೇ॥ ೨೦೦ ॥

ಎತ್ತುವಿನಂ ಮಹೋತ್ಸವ ಪತಾಕೆಗಳುತ್ಸವ ತೂರ್ಯ ನಿಸ್ವನಂ।
ಬಿತ್ತರಿಪನ್ನಮಂತಕನ ಬಾರಿಗೆ ಸೋವತಮಾದೆ ದೇವ ದು॥
ರ್ವೃತ್ತ ವಿರೋಧಿ ನಿರ್ದಲನ ಕಾಳೆಗದೊಳ್ ಪಿಡಿಪೆತ್ತ ಸತ್ತ ಬೆ।
ನ್ನಿತ್ತ ವಿರೋಧಿ ಭೂಭುಜರ ಖೇಚರ ರಾಜರ ರಾಜಧಾನಿಯೊಳ್ ॥ ೨೦೧ ॥

ಎಂದತಿಪ್ರಲಾಪಂಗೆಯ್ಯುತ್ತುಂ ರಾವಣನ ಚರಣೋಪಾಂತದೊಳ್ ಮೆಯ್ಯ ನೀಡಾಡಿ ಹಾಹಾ ದಶಾಸ್ಯ ಕೀರ್ತಿ ವಲ್ಲರೀ ವಲಯಿತ ದಿಶಾಸ್ಯ ಹಾಹಾ ವಿಲಾಸ ಮಕರ ಧ್ವಜ ಖೇಚರಕುಲ ಧ್ವಜ ಹಾಹಾ ತ್ರಿಲೋಕ ವಿಜಯಸ್ತಂಭ ಜಯಶ್ರೀ ಸಾಲ ಭಂಜಿಕಾ ರಂಜಿತ ಭುಜಸ್ತಂಭ ಹಾಹಾ ದುರ್ವಾರ ದೈತ್ಯ ದರ್ಪ ವಿಧ್ವಂಸ ಸರಸ್ವತೀ ಕರ್ಣಾವತಂಸ ಹಾಹಾ ರಿಪು ನೃಪತಿ ಕಟಕ ವಿಟಪಿ ಕುಠಾರ ಖಚರ ಕಾಮಿನೀ ಪಯೋಧರ ಮಧ್ಯ ರಾಜಿತ ತರಳ ತಾರಹಾರ ಹಾಹಾ ವನಿತಾ ಯೌವನವನ ವಸಂತ ಅನವರತ ಚತುರ್ವಿಧ ಪುರುಷಾರ್ಥ ಚಿಂತಿತ ಸ್ವಾಂತ ನಿನ್ನಂತಃಪುರದ ಕಾಂತಾಜನದ ಕದಂಪಿನೊಳ್ ಮೃಗಮದ ಪತ್ರಲೇಖೆಯಂ ಬರೆಯಲುಂ ಬಾಹು ಲತೆಯೊಳ್ ಪಿಂಡುಗಂಕಣಮನೇಱಿಸಲುಂ ಘನ ಸ್ತನಮಂಡಲದೊಳ್ ಮಲಯ ರುಹ ಚರ್ಚೆಯನೊಡರ್ಚಲುಂ ನಿತಂಬ ಬಿಂಬದೊಳ್ ನೂಲ ತೊಂಗಲನೊಡ ರ್ಚಲುಂ ಪದ ಪಯೋಜದೊಳ್ ಮಣಿ ನೂಪುರಮನಳವಡಿಸಲುಮತಿ ಪರಿಚಯದಿ ನಲಸಿದಂತೆ ದಿವಿಜ ಕಾಂತಾಸಂಭೋಗ ಲೀಲಾಲಸನಾಗಿ—

ಕಂ॥ ದಿಗಿಭಕ್ಕೆ ಕುಲಾದ್ರಿಗೆ ಪ
ನ್ನಗ ಪತಿಗತಿ ಭಾರಮಾಗೆ ಭೂಭಾರಮನೇ॥
ಕೆಗಡಂ ನೀನೊಪ್ಪಿಸಿ ವ
ಜ್ರಿಗೆ ತಲ್ಲಳವಾಗೆ ದಿವಕೆ ದಾಟಿಯನಿಟ್ಟೈ ॥ ೨೦೨ ॥

ಎಂದು ಬಹುವಿಧದಿಂ ಪಳವಿಸುವ ಪೌಲಸ್ತ್ಯನ ಕುಲಸ್ತ್ರೀಯರಂ ಕಂಡು ರಾಮ ಸ್ವಾಮಿ ಕರುಣಿಸಿ ರಾವಣಂಗೀ ಮರಣಮಿಾತನ ದುರ್ವ್ಯಸನದಿಂದಾದುದಲ್ಲದೆಮ್ಮಿಂ ದಾದುದಲ್ತಾರ್ಗಾದೊಡಂ ಸಂಸಾರ ಸ್ವರೂಪಮಿಂತುಟೆ ವಲಮಾರ ಜೀವನಮುಂ ಜವ್ವನಮುಂ ಧನ ಧಾನ್ಯಮುಮಿಷ್ಟಸಂಯೋಗಮುಂ ಕ್ಷಣದೆ ನಶ್ವರಂಗಳದಱಿಂ ದವರ್ಗಬಿಲದಲಸದೆ ಸ್ಥೈರಿಸುವುದೆಂದವರುಮಂ ವಿಭೀಷಣನುಮಂ ಸಂತಯಿಸಿ—

ಕಂ ॥ ಬವರಂಗೆಯ್ವಾತಂಗಾ
ಯ್ತವಸಾನಂ ತಕ್ಕುದಲ್ತು ಪಗೆಗೊಳ್ವುದು ಮಿ ॥
ಕ್ಕವರೊಳ್ ನಮಗೆಂದಂ ರಾ
ಘವಂಗೆ ಸಚ್ಚರಿತದೆಸಕಮೊಂದಚ್ಚರಿಯೇ ॥ ೨೦೩ ॥

ಎಂದು ತಾನುಂ ಲಕ್ಷ್ಮಣನುಮಾನೆಯನೇಱಿ ಪಲರ್ ಸಾಮಂತರ್ ಬಳಸಿ ಬರೆ ಮಂಡೋದರಿಯ ಸಮಿಾಪಕ್ಕೆ ಬಂದಾಕೆಯ ಶೋಕಮಂ ಸಂಸಾರ ಸ್ವರೂಪ ಮುಂ ಪೇೞ್ದು ಪಿಂಗಿಸಿ ಬಬಿಯಂ ಕರ್ಪೂರಾಗರು ಗೋಶೀರ್ಷ ಚಂದನಾದಿಗಳಿಂ ರಾವಣನಂ ಯಥಾವಿಧಿಯಿಂ ಸಂಸ್ಕರಿಸಿ ತದನಂತರಮಿಂದಗಿ ಮೇಘವಾಹನ ಕುಂಭ ಕರ್ಣ ಮಯ ಮಾರೀಚಾದಿಗಳಂ ಬರಿಸಿ ಸೆಜ್ಜೆಯಂ ಬಿಡಿಸಿ ಪಲತೆಱದಿನವರ ಶೋಕ ಮನುಪಶಮಿಯಿಸಿ—

ಕಂ ॥ ರಾವಣನೊರ್ವನೆ ಕಬ್ಬಿದಂ
ನೀವಿನಿಬರುಮಬ್ಬಿಱಿಂ ವಿಭೀಷಣನೊಳ್ ಸ ॥
ದ್ಭಾವಮನೆ ಮೆಜ್ಜಿದು ಖಚರ
ಶ್ರೀ ವಿಭವಮನೆಂದಿನಂದದಿಂದನುಭವಿಸಿಂ ॥ ೨೦೪ ॥

ಎಂಬುದುಂ ಕುಂಭಕರ್ಣಾದಿಗಳ್ ರಾಮಲಕ್ಷ್ಮಣರ ನಿಷ್ಕಷಾಯತ್ವಮುಮಂ ಸಂಸಾರ ಭೀರುತ್ವಮುಮಂ ಧೈರ್ಯಮುಮಂ ಬಾಹುವೀರ್ಯಮುಮಂ ಮೆಚ್ಚಿ ಪೊಗ ೞ್ದಿನ್ನೆಮಗೆ ಸಂಸಾರ ಸುಖಂ ಸಾಲ್ಗುಮೆಂದು ಭೋಗ ನಿರ್ವೇಗ ಪರರಾಗಿ ನುಡಿದು ರಾಮಲಕ್ಷ್ಮಣರ್ವೆರಸು ಪದ್ಮಸರೋವರದೊಳ್ ಜಲದಾನ ಕ್ರಿಯೆಯಂ ನಿರ್ವರ್ತಿಸಿ ದಿಂಬಬಿಯಂ ನೇಸರ್ ಪಡುವ ಸಮಯದೊಳ್—

ಕಂ ॥ ಅನುಪಮರಱುಸಾಸಿರ್ವರ್
ಮುನಿಗಳ್ವೆರಸಪ್ರಮೇಯ ಮುನಿ ನಾಥರ್ ಬಂ ॥
ದಿನ ಪಥದಿಂ ಲಂಕೆಯನಂ
ದನ ವನ ಮಧ್ಯದೊಳೆ ನಿಯಮ ನಿಯಮಿತರಿರ್ದರ್ ॥ ೨೦೫ ॥

ಅಂತಿಪ್ಪುದುಂ—

ಕಂ ॥ ಪ್ರಕಟಿಸಿದುದು ಶುಕ್ಲ ಧ್ಯಾ
ನ ಕೃಶಾನು ಜ್ವಾಲೆಯಿಂದವರ್ ಸುಡೆ ಮೂಲ ॥
ಪ್ರಕೃತಿಗಳೊಳ್ ಘಾತಿಗಳಂ
ಸಕಲ ಪದಾರ್ಥಾವಭಾಸಿ ಕೇವಲ ಬೋಧಂ ॥ ೨೦೬ ॥

ಇತ್ತ ಧಾತಕೀಷಂಡದೊಳ್ ತೀರ್ಥಂಕರ ಕುಮಾರ ಜನ್ಮೋತ್ಸವಮಪ್ಪುದುಂ ಚತುರ್ನಿಕಾಯ ದೇವನಿಕಾಯಂ ಭಗವಜ್ಜನ್ಮಾಭಿಷವಣಮಂ ತೀರ್ಚಿ ಲಂಕೆಯ ಮೇಲೆ ಬರುತ್ತುಂ ಕುಸುಮಾಯುಧೋದ್ಯಾನದೊಳ್ ಸರ್ವಜ್ಞತ್ವಮಂ ಪೆತ್ತಿರ್ದಪ್ರ ಮೇಯ ಭಟ್ಟಾರಕರಂ ಕಂಡು ಬಲಗೊಂಡು ಪೊಡೆವಟ್ಟು ಪೂಜಿಸುವ ಸಮಯ ದೊಳ್ ಭೋಂಕನೆ ಪಸರಿಸುವ ಶಂಖ ಪಟಹಾದಿ ವಿವಿಧ ವಾದ್ಯ ರವಂಗಳಂ ರಾಮಲಕ್ಷ್ಮಣರುಂ ವಾನರಧ್ವಜರುಂ ಕೇಳ್ದು ಜಿನ ಪೂಜೋತ್ಸವ ಪಟಹ ರವಂಗ ಳೆಂದಱಿದಿಂದ್ರಜಿನ್ಮೇಘವಾಹನ ಕುಂಭಕರ್ಣಾದಿಗಳಿಂ ಪರಿವೃತರಾಗಿ ಭಟ್ಟಾರಕ ರಿರ್ದೆಡೆಗೆ ವೋಗಿ—

ಉ ॥ ಆ ರಘುವಂಶ ಕೇತು ಬಲಗೊಂಡು ಲಲಾಟದೊಳೊಪ್ಪೆ ಹಸ್ತ ಪಂ ।
ಕೇರುಹ ಕುಟ್ಮಲಂ ವಿನಮಿತಂ ವಿವಿಧಾರ್ಚನೆಯಿಂದಘೌಘ ಸಂ ॥
ಹಾರಕರಂ ಭವಾಂಬುನಿಧಿ ತಾರಕರಂ ನೆಗಳ್ದಿಪ್ರಮೇಯ ಭ ।
ಟ್ಟಾರಕರಂ ರಘುಪ್ರವರನರ್ಚಿಸಿದಂ ಕವಿತಾ ಮನೋಹರಂ ॥ ೨೦೭ ॥

ಇದು ಪರಮ ಜಿನಸಮಯ ಕುಮುದಿನೀಶರಚ್ಚಂದ್ರ ಬಾಲಚಂದ್ರ
ಮುನೀಂದ್ರ ಚರಣನಖ ಕಿರಣ ಚಂದ್ರಿಕಾ ಚಕೋರ ಭಾರತೀ
ಕರ್ಣಪೂರ ಶ್ರೀಮದಭಿನವಪಂಪ ವಿರಚಿತಮಪ್ಪ
ರಾಮಚಂದ್ರ ಚರಿತ ಪುರಾಣದೊಳ್
ರಘುವೀರ ವಿಜಯವರ್ಣನಂ
ಚತುರ್ದಶಾಶ್ವಾಸಂ.

ಕಂ ॥ ಶ್ರೀರಾಮಾ ರಮಣಂ ವಾ
ಕ್ಶೀರಾಮಾ ವಲ್ಲಭಂ ಯಶಶ್ರೀ ಕಾಂತಂ ॥
ವೀರಶ್ರೀ ಪತಿ ಮುನಿ ಬೃಂ
ದಾರಕ ಪದ ವಿನತನಾದನಭಿನವ ಪಂಪಂ ॥ ೧ ॥

ಅಂತು ನಿರ್ಭರ ಭಕ್ತಿಯಿಂ ವಂದಿಸಿ ಸಂಸಾರ ಕ್ಷಯ ಕಾರಣಮಪ್ಪ ಧರ್ಮಮುಮನಾಪ್ತ ಗುಣಂಗಳುಮಂ ಜೀವಾದಿ ತತ್ವಭೇದಂಗಳುಮಂ ಭಟ್ಟಾರಕರ್ ಬೆಸಸೆ ಕೇಳ್ದು ಸಂತುಷ್ಟ ಚಿತ್ತನಾದನನಂತರಮಿಂದ್ರಜಿನ್ಮೇಘವಾಹನ ಕುಂಭಕರ್ಣ ಮಯ ಮಾರೀಚಾದಿಗಳ್ ತಂತಮ್ಮ ಭವಾಂತರಮನವರ್ ಬೆಸಸೆ ಕೇಳ್ದಲ್ಲಿಯೆ ದೀಕ್ಷೆಗೊಂಡರ್ ಮಂಡೋದರಿಯುಂ ನಾಲ್ವತ್ತಿಣ್ಪಾಸಿರ ವಿದ್ಯಾಧರಿಯರ್ವೆರಸು ಶಶಿಕಾಂತಾರ್ಯಿಕಾ ಸಮಕ್ಷದೊಳ್ ದೀಕ್ಷೆಗೊಂಡು ಶುಭಧ್ಯಾನ ತಾತ್ಪರ್ಯದಿನಿರ್ದಳಿತ್ತಲ್ ಪುನರ್ನವಸಾಕ್ಷರಂಗೆಯ್ದು ಮಗುಟ್ಟಿ ಸುಗ್ರೀವಾಂಗದ ಪ್ರಭಾಮಂಡಲ ಮರುತ್ಸುತ ವಿರಾಧಿತ ಪ್ರಮುಖ ವಿದ್ಯಾಧರ ಪರಿವೃತರ್ ತ್ರಿಜಗದ್ಭೂಷಣ ಗಜಾರೂಢರಾಗಿ—

ಮ॥ ಸ್ರ॥ ಗುಡಿಯುಂ ಸಿಂದಂಗಳುಂ ಮುಂದುರುವರಿಯೆ ದಿನಾಧೀಶ ಬಿಂಬಂಬರಂ ಧಿಂ।
ಕಿಡೆ ಶಂಘ ಧ್ವಾನಮಾಶಾ ವಿವರಮನಿತುಮಂ ತೀವೆ ಭೇರೀರವಂ ಬೆ ॥
ಳ್ಗೊಡೆಯುಂ ಚಿತ್ರಾತಪತ್ರಂಗಳುಮಜನಿಸೆ ಚಂಡಾಂಶುವಂ ಮುಟ್ಟಿವಂದರ್।
ಕಡುಚೆಲ್ವಂ ಪೆತ್ತ ಲಂಕಾಪುರದುಪವನಮಂ ರಾಮ ಲಕ್ಷ್ಮೀಧರರ್ಕಳ್ ॥ ೨ ॥

ಅಂತು ಬಂದು—

ಉ॥ ಜಕ್ಕರ ಕಾಪಿನೊಳ್ ನಡೆಯೆ ಮುಂದೆ ಸುದರ್ಶನ ಚಕ್ರ ರತ್ನಮಿ।
ರ್ಪಕ್ಕದೊಳಂ ವಿಯಚ್ಚರ ಕುಲಪ್ರಭುಗಳ್ ಬರೆ ಭೂಷಣಾಂಶುಗಳ್ ॥
ತೆಕ್ಕನೆ ತೀವುವಂತು ನಭಮಂ ದನುಜಾಧಿಪ ರಾಜಧಾನಿಯಂ।
ಪೊಕ್ಕರಯೋಧ್ಯೆಯಂ ಪುಗುವವೋಲಸಮಾನ ಬಲರ್ ಬಲಾಚ್ಯುತರ್ ॥ ೩ ॥

ಅಂತು ಪುರಮಂ ಪೊಕ್ಕು ರಾಜವೀಥಿಯೊಳಗನೆ ಸೀತಾದರ್ಶನೋತ್ಸುಕನಾಗಿ ಬರ್ಪ ರಾಮಸ್ವಾಮಿಯ ಮನಮನಱಿದು ಚಾಮರಗ್ರಾಹಿಣಿಯರ್ ದೇವ ಸೀತಾದೇವಿಯರಿತ್ತಲೀ ಪುಷ್ಪಪ್ರಕೀರ್ಣಕಮೆಂಬ ನಗದ ನಂದನದೊಳರ್ದರೆಂದು ಬಿನ್ನವಿಸುವುದುಮಾದೆಸೆಗೆ ವಿಜಯವಾರಣಮನಣೆದು ನೂಂಕೆ ರಾಘವಂ ಬರ್ಪ

ಸಮಯದೊಳ್ ಸೀತಾದೇವಿಯ ಕೆಲದೊಳಿರ್ದ ಪೇಚರಿಯರ್ ತನ್ನ ಬರವನಱಿಪು ವನ್ನೆಗಮೆಯ್ದೆವಂದು—

ಕಂ ॥ ಬಂಬಲನೆ ಬಾಡಿ ಮಂಜಿಱಿ
ದಂಬುಜ ಲತೆಯಂತಿರಿರ್ದ ಜಾನಕಿಯಂ ನೀ ॥
ಲಾಂಬರನೀಕ್ಷಿಸಿ ವಿಜಯ
ಸ್ತಂಬೇರಮದಿಂ ಸಮುತ್ಸುಕಂ ಧರೆಗಿಟ್ಟಿದಂ ॥ ೪ ॥

ಅಂತಾನೆಯಿಂದಿಟ್ಟಿದು ಬರ್ಪ ವಲ್ಲಭ ವಿಲೋಕನ ಜನಿತ ಸಂಭ್ರಮದಿನಾಕಂಪ ನಮನಪ್ಪುಕೆಯ್ದು—

ಕಂ ॥ ಇದಿರ್ವಂದು ಕೈಗಳಂ ಮುಗಿ
ಮುದಯಿಸೆ ಪುಲಕಂಗಳುಣ್ಮೆ ಘರ್ಮ ಜಲಂಗಳ್ ॥
ಪದ ಪದ್ಮಕ್ಕೆಱಜಿಗಿರ್ದಳ್
ಕೆದಱಿದ ಕುರುಳೋಳಿ ಮಜಸೆ ಮಱಿದುಂಬಿಗಳಂ ॥ ೫ ॥

ಆ ಸಮಯದೊಳ್—

ಚ ॥ ಸತಿಯ ಪತಿವ್ರತಾಗುಣ ಸಮೃದ್ಧಿಗೆ ದರ್ಶನ ಶುದ್ಧಿಗಟ್ಟಿಜಂ ।
ಸ್ತುತಿಯಿಸಿ ನಿರ್ಜರರ್ ಕಱಿದು ಪೂಮಱಿಯಂ ವಸನಾಂಗರಾಗದಿಂ ॥
ದತಿಶಯ ದಿವ್ಯಭೂಷಣ ಗಣಂಗಳಿನರ್ಚಿಸೆ ನೋಡಿ ನಾಡೆ ವಿ ।
ಸ್ಮಿತಮನರಾಗಿ ಜಾನಕಿಗೆ ಕೈಮುಗಿದರ್ ಖಚರಾಧಿನಾಯಕರ್ ॥ ೬ ॥

ಕಂ ॥ ಜಾನಕಿಯ ಶೀಲಮಂ ದಿವಿ
ಜಾನೀಕಂ ಮೆಚ್ಚಿ ಪೊಗಟ್ಟು ಪೂಜಿಸೆ ರಾಮಂ ॥
ಗಾನಂದ ಪುಲಕಮಾದುವು
ಮಾನಿನಿಯರ್ ಮಹಿಮೆಗಿಂತು ನೋಂತರುಮೊಳರೇ ॥ ೭ ॥

ಅನಂತರಂ ಲಕ್ಷ್ಮೀಧರಂ ತನಗೆಱಗಿ ಪೊಡೆವಟ್ಟೊಡಾತನಂ ಪರಸಿ ಮನ್ನಿಸಿ ಮಿತ್ತಂ ಕರಂ ಸೇದೆವಟ್ಟಿರೆಂದು ಮನ್ಯುಮಿಕ್ಕು ಶೋಕಿಸುತ್ತಿರ್ಪುದುಂ ಲಕ್ಷ್ಮಣನುಂ ರಾಮನುಂ ಸಂತಯಿಸಿದಿಂಬಱಿಯಂ ಪ್ರಭಾಮಂಡಲನಂ ಕಂಡು ಪೊಡೆವಟ್ಟೊಡಾತ ನತಿ ಪ್ರೀತಿಯಿಂ ಪರಸಿ ಸೀತಾದೇವಿಗೆ ಸುಗ್ರೀವ ನಳ ನೀಲಾಂಗದ ಮರುತ್ಸುತ ಚಂದ್ರಾಭ ಸುಷೇಣ ಜಾಂಬವಾದಿಗಳಂ ಪೆಸರ್ವೆಸರೊಳೆ ಪೇಟ್ಪು ತೋಱಿ ಸಂತೋಷಮಂ ಮಾಡೆ—

ಮ॥ ಸ್ರ॥ ಸತಿಯುಂ ತಾನುಂ ಮದಾಂಧ ದ್ವಿಪಮನೊಡನೆ ಬಂದೇಱಿ ವಿದ್ಯಾಧರಾಧೀ।
ಶ ತನೂಜರ್ ಸುತ್ತಲುಂ ಮಂಡಳಿಸಿ ನಡೆಯೆ ಬೀಱೊಂದು ಪೂರ್ಣೇಂದು
ಬಿಂಬಾ ॥
ಕೃತಿಯಿಂ ಶ್ವೇತಾತಪತ್ರಂ ಸೊಗಯಿಸೆ ದೆಸೆಯಂ ತೀವೆ ತೂರ್ಯಪ್ರಣಾನಂ।
ಜಿತ ಶಕ್ರಾವಾಸಮಂ ರಾವಣನರಮನೆಯಂ ರಾಘವಂ ಬಂದು ಪೊಕ್ಕಂ॥ ೮ ॥

ಕಂ ॥ ತ್ರಿಜಗದ್ಭೂಷಣ ಮಾದ್ಯ
ದ್ಗಜಮ್ಮಂ ಕಾಲ್ಗೋದು ಪೊಳೆಯಿಸುತ್ತಂಕುಶಮಂ ॥
ವಿಜಿಗೀಷು ಲಕ್ಷ್ಮಣಂ ಮದ
ಗಜದಡಕಿಲಿದೆನಿಸಿ ಪೊಕ್ಕನೊಡನರಮನೆಯಂ ॥ ೯ ॥

ಅಂತರಮನೆಯಂ ಪೊಕ್ಕಲ್ಲಿಯ ಶಾನ್ತಿ ಜಿನ ಭವನಮಂ ರಾಮಲಕ್ಷ್ಮಣರ್ ಸಕಲ ವಿದ್ಯಾಧರ ಸಹಿತಂ ಬಲಗೊಂಡು ಜಿನಪತಿಯಂ ಸ್ತುತಿ ಶತಂಗಳಿಂ ಸ್ತುತಿಯಿಸಿ ದಿವ್ಯಾರ್ಚನೆಗಳಿಂದರ್ಚಿಸಿದಿಂಬಱಿಕ್ಕೆ ಸಹಸ್ರಾಂತಃಪುರ ಪ್ರಧಾನೆಯಪ್ಪ ವಿದಗ್ಧೆ ವೆಸರ ತನ್ನ ಮಹಾದೇವಿಯಂ ವಿಭೀಷಣಂ ರಾಮಸ್ವಾಮಿಯಲ್ಲಿಗಟ್ಟುವುದುಮಾ ಮಹಾನುಭಾವೆ ಬಂದು ರಾಮಲಕ್ಷ್ಮಣರ್ಗಂ ಸೀತಾದೇವಿಗಮೆಱಗಿ ಪೊಡೆವಟ್ಟಿಮ್ಮರ ಮನೆಗೇಗಟ್ಟಿನ್ನಿಂ ಕಾಲ್ಗರ್ಚುವೆನೆಂಬವಸರದೊಳ್ ವಿಭೀಷಣನುಂ ಬಂದು ಬಿಜಯಂ ಗೆಯ್ಸಮೆಂದು ಸಿಂಹ ಗರ್ಗುಡವಾಹನಾರೂಢರಂ ಮಹಾವಿಭೂತಿಯಿಂ ನಿಜರಾಜಭವನ ಕ್ಕಯ್ದು ಸಿಂಹಾಸನದೊಳಿರಿಸಿ ಮಣಿಭಾಜನದೊಳರ್ಘ್ಯಪಾದ್ಯಮಂ ಕೊಟ್ಟು—

ಕಂ ॥ ಅವರ್ಗೆ ವಿಭೀಷಣನತ್ಯ
ತ್ನವದಿಂ ಬಿರ್ದಿಕ್ಕಿ ದಿವ್ಯಮಣಿ ಭೂಷಣ ದಿ ॥
ವ್ಯ ವಿಲೇಪನ ದಿವ್ಯಾಂಬರ
ನಿವಹಮನೋಲಗಿಸಿ ವಿನಯಮಂ ಪ್ರಕಟಿಸಿದಂ ॥ ೧೦ ॥

ಅಂತು ನಿರಂತರೋತ್ಸವದಿಂ ಕತಿಪಯ ದಿನಂ ಪೋದಿಂಬಱಿಯುವೊಂದು ಶುಭದಿನ ಮುಹೂರ್ತದೊಳ್—

ಮ ॥ ಬೆಸಕೆಯ್ದಪ್ಪುದು ಚಕ್ರರತ್ನಮಖಿಲೋರ್ವೀಚಕ್ರಮಂ ನೀಮೆ ಪಾ ।
ಲಿಸಿಮಾಳೋಳಿಯೊಳಿರ್ಕೆ ರಾಜ ಕುಲಮೆಂದುತ್ಸಾಹ ತೂರ್ಯ ಸ್ವನಂ ॥
ದೆಸೆಯಂ ತೀವೆ ವಿಭೀಷಣಂ ಬೆರಸು ಸುಗ್ರೀವಾದಿಗಳ್ ರಾಘವಂ ।
ಗೆ ಸುಮಿತ್ರಾತನಯಂಗೆ ರಾಜ್ಯ ಸವನ ಪ್ರೋತ್ಸಾಹಮಂ। ಮಾಡಿದರ್ ॥ ೧೧ ॥

ಅಂತು ಪೂರ್ವ ಜನ್ಮ ಸಂಚಿತ ಸುಕೃತದಿಂ ದಿವ್ಯಾಯುಧ ವಸ್ತುವಾಹನಂ ಗಳುಮಂ ದಿವ್ಯ ಸ್ತ್ರೀಯರುಮಂ ಸ್ವೀಕರಿಸಿ ಮುನ್ನೆ ತಮ್ಮ ಬರ್ಪ ಸಮಯದೊಳ್ ಮದುವೆನಿಂದರಸಿಯರಂ ತರಿಸಿ ಶುಭದಿನ ಮುಹೂರ್ತದೊಳ್—

ಕಂ ॥ ಅನತಿಶಯ ರೂಪ ವಿದ್ಯಾ
ವಿನಯ ಸಮನ್ವಿತೆಯರಂ ಮಹೋತ್ಸವ ಪಟಹ ॥
ಧ್ವನಿ ಪೊಣ್ಮೆ ಚಂದ್ರವರ್ಧನ
ತನುಜೆಯರಂ ಪದೆದು ಮದುವೆ ನಿಂದನುಪೇಂದ್ರಂ ॥ ೧೨ ॥

ಅಂತು ರಾಮಲಕ್ಷ್ಮಣರ್ ಸುಖದಿನಲ್ಲಿ ಕೆಲವು ಕಾಲಮಿರ್ದರಿತ್ತಲಿಂದ್ರ ಜಿತು ಮೇಘವಾಹನರ್ ಕೇವಲಜ್ಞಾನಮಂ ಪಡೆದು ನರ್ಮದೆಯ ತಡಿಯೊಳ್ ಮುಕ್ತಿ ಪ್ರಾಪ್ತರಾದರದಱಿಂ [1](ದಾತೊಜೆ ಮೇಘರವೆಯೆಂಬ ಪೆಸರ ತೀರ್ಥಮಾದುದು ತೂರ್ಣಮತಿಯೆಂಬ ನಗ ನಿತಂಬದೊಳ್ ಜಂಬುಮಾಲಿ ತಪಂಗೆಯ್ದಹಮಿಂದ್ರ ಸ್ಥಾನದೊಳ್ ಪುಟ್ಟಿದಂ ಕುಂಭಕರ್ಣಂ ನರ್ಮದೆಯ ತಡಿಯೊಳ್ ಕೇವಲಜ್ಞಾನ ಪ್ರಾಪ್ತನಾಗಿ ಮೋಕ್ಷಕ್ಕೆ ಸಂದುದರಿಂ) ದಾ ಪೊಟಱೆಗೆ ಪೀತರವೆಯೆಂಬ ಪೆಸರಾಯ್ತು ಮಾರೀಚನುಂ ಕಲ್ಪ ಗತನಾದಂ ಮಯನುಮಂಬರ ಚಾರಣತ್ವಮುಮಂ ಸರ್ವೌಷಧರ್ಧಿತ್ವಮುಮನವಧಿಜ್ಞಾನಮುಮುಂ ಪೆತ್ತು ಮಲರಹಿತನಾಗಿ ನೆಗಟ್ಟು ಜೀವಿತಾವಧಿಯೊಳೀಶಾನಕಲ್ಪಕ್ಕೆ ಪೋದಂ[2] (ಮಂಡೋದರೀಗರ್ಭನಿಯರುಮನೇಕ ಕಾಲಂ ದುರ್ಧರ ಕಾಯಕ್ಲೇಶ ತಪದಿಂ ನೋಂಪಿಗಳಂ ಚರಿಯಿಸಿ ವಿಹಾರಿಸುತ್ತಂ ವೈತರಣೀ ನಗ ನಿತಂಬದ ಶಾರ್ದೂಲಗುಹೆಯೊಳಿರ್ದು ಧರ್ಮಧ್ಯಾನದಿಂ ಮುಡಿಪಿ ಬಟಿಯಮಿಶಾನಕಲ್ಪಗತೆಯಾದಳುಟಿದರಸಿಯರುಗ್ರೋಗ್ರ ತಪಂಗೆಯ್ದು ಶುಭ ಧ್ಯಾನದಿಂ ಮುಡಿಪಿ ತಂತಮ್ಮ ಸ್ಥಾನದೊಳ್ ಪುಟ್ಟಿದರ್) ಮತ್ತಿತ್ತ ಲಂಕೆಯೊಳ್ ರಾಮಲಕ್ಷ್ಮಣರ್ ಚಕ್ರವರ್ತಿಗಳಾಗಿ ಸುಖದಿನಿರ್ಪುದುಮಿತ್ತಲ್—

ಕಂ ॥ ನೆನೆದಪರಾಜಿತೆ ರಘುರಾ
ಮನನತಿಶೋಕ ಪ್ರಬಂಧದಿಂದಿರ್ಪುದುಮಾ ॥
ವನಿತೆಯರ ಮನೆಗೆ ಬಂದಂ
ಘನಪಥದಿಂ ಭೋಂಕನಿಟ್ಟಿದು ನಾರದ ಮುನಿಪಂ ॥ ೧೩ ॥

ಅಂತು ಬರ್ಪುದನಪರಾಜಿತಾಮಹಾದೇವಿ ಕಂಡಿದಿರೆಟ್ಟೀಜುಲಿಕ್ಕೆ ಬಟಿಯಮಿಚ್ಛಾಕಾರಂ ಗೆಯ್ವುದುಂ—

ಕಂ ॥ ನಿಮಗಿನಿತು ಶೋಕಮೇಕಾ
ಯ್ತೆಮಗನಿತುಮನಱಿಯೆ ಪೇಟ್ಟಿಮೆನೆ ನಾರದ ದಿ ॥
ವ್ಯಮುನೀಶ್ವರನನಿತುಮನಾ
ಕಮಲಾನನೆ ನೆಱಿಯೆ ತೆಱಿಯೆ ಬಿನ್ನವಿಸುವುದುಂ ॥ ೧೪ ॥

1, 2. ಈ ಭಾಗಗಳು. ಕ. ಖ. ಚ. ಪ್ರತಿಗಳಲ್ಲಿಲ್ಲ.

ಅದಂ ನಾರದನವಧಾರಿಸಿ ರಾಮಲಕ್ಷ್ಮಣರ ಕ್ಷೇಮವಾರ್ತೆಯಂ ನಿಮಗಿಂದೆ ತಂದಪೆನೆಂದಪರಾಜಿತಾಮಹಾದೇವಿಯ ಮನೋವಿಷಾದಮಂ ಕಳೆದು—

ಕಂ ॥ ನೀರದ ಪಥಕ್ಕೆ ಭೋಂಕನೆ
ನಾರದನೊಗೆದೆಯ್ದಿ ಲಂಕೆಯಂ ತನು ರುಚಿ ನೀ ॥
ಹಾರಮನಾದರ್ಪಿಸೆ ಬಲ
ನಾರಾಯಣ ದೇವರಿರ್ದ ಸಭೆಯಂ ಪೊಕ್ಕಂ ॥ ೧೫ ॥

ಅಂತು ಪುಗುವುದುಂ ರಾಮಸ್ವಾಮಿ ನಾರದನಪ್ಪುದನಱಿದು ಬೇಗಮಿದಿರೆಟ್ಟಿ ಮಣಿಮಯಾಸನದೊಳಿರಿಸಿ ಕನಕ ಪಾತ್ರದೊಳರ್ಘ್ಯಮಂ ಕೊಟ್ಟು ನೀವೀ ರಣ ನಿರೀಕ್ಷಣಂ ಮಾಡದೆತ್ತಲಿರ್ದಿರೆಲ್ಲಿಂ ಬಂದಿರೆಂಬುದುಂ ನಾರದನಿಂತೆಂದನಾವಿಮಾ ದೇಶದಿಂ ಪೋಗಿ ಧಾತಕೀಷಂಡದ ಪೂರ್ವವಿದೇಹದ ಸುರೇಂದ್ರರಮಣ ಪುರದೊಳ್ ತೀರ್ಥಕರರ್ ಜನಿಯಿಸಿದೊಡವರ್ಗೆ ಜನ್ಮಾಭಿಷೇಕಮಂ ಸಕಲ ಸುರವರರ್ ಸುರ ಗಿರಿ ಮಸ್ತಕದೊಳ್ ಮಾಟ್ಪುದಂ ನೋಡುತ್ತುಮಿರ್ದೀಗಳಯೋಧ್ಯೆಯಂ ಪೊಕ್ಕು ಅಪರಾಜಿತಾ ಮಹಾದೇವಿಯರುಮಂ ಸುಮಿತ್ರಾದೇವಿಯರುಮಂ ಕಂಡೆವವರ್ ನಿಮ್ಮನೀ ಸಮಯದೊಳ್ ಕಾಣದಿರ್ದೊಡೆ ನಿಶ್ಚಯಂ ಶರೀರತ್ಯಾಗಂಗೆಯ್ವರೆಂದಱಿಪುವುದುಂ—

ಕಂ ॥ ಆ ಮಾತು ಮುಟ್ಟೆ ಕವಿಯಂ
ರಾಮಂಗಂ ಲಕ್ಷ್ಮಣಂಗಮುದ್ವೇಗಂ ನಿ ॥
ಸ್ಸೀಮಂ ಸಮನಿಸೆ ತಮ್ಮಂ
ತಾಮೆ ಕೃಪಾಶೂನ್ಯರೆಂದು ನಿಂದಿಸಿಕೊಂಡರ್ ॥ ೧೬ ॥

ಅಂತು ನಿಜ ಜನನಿಯರನಗಲ್ದು ಬಹುಕಾಲಮತಿಕ್ರಾಂತಮಾದುದೆಂದು ಕಟ್ಟುಕಡೆದು—

ಕಂ ॥ ನಮ್ಮಲ್ಪ ವಿಭವಮಂ ಸುಖ
ಮುಮ್ಮನದೊಳ್ ಬಗೆದು ಬಗೆದೆವಿಲ್ಲುಱ್ದುದನೆಂ ॥
ದುಮ್ಮಳಿಸಿ ವಿಭೀಷಣನಂ
ತಮ್ಮಲ್ಲಿಗೆ ಬರಿಸಿ ರಾಮಲಕ್ಷ್ಮಣರೆಂದರ್ ॥ ೧೭ ॥

ಅವಧಿಯ ವರ್ಷಂಗಳ್ ತೀ
ರ್ದುವಯೋಧ್ಯೆಗೆ ಪೋಗದಂದು ಜನನಿಯರುಂ ಬಾಂ ।
ಧವರುಂ ಖೇದಿಸುವರ್ ಪೋ
ಗವೇಟ್ಪುದೆಂದಱಿಪಿ ತಮ್ಮ ಗಮನೋದ್ಯಮಮಂ ॥ ೧೮ ॥

ಕಂ ॥ ಪವಣಿಲ್ಲದ ಲಂಕೆಯ ಜಿನ
ಭವನಂಗಳೊಳಿಲ್ಲಮರ್ಚನಾ ದ್ರವ್ಯಕ್ಕಂ ॥
ಪವಣಿಲ್ಲೆನೆ ರಾಮಂ ಜಿನ
ಸವನೋತ್ಸವದೊಳ್ ಸುರೇಂದ್ರನಂ ಗೆಲೆವಂದಂ ॥ ೧೯ ॥

ಮಂಗಳ ಪರಿಕರಮಂ ಖಚ
ರಾಂಗನೆಯರ್ ಪಿಡಿದು ಮುಂದೆ ಬರೆ ಮಂಗಳ ವೃ ॥
ತ್ತಂಗಳನೋದುತ್ತುಂ ಬರೆ
ಮಂಗಳ ಪಾಠಕ ನಿಕಾಯಮೆರಡುಂ ಕೆಲದೊಳ್ ॥ ೨೦ ॥

ನಾನಾನಕ ರುತಿ ಸಕಲ ದಿ
ಶಾನನಮಂ ತೀವೆ ರಾಜ ಚಿಹ್ನ ವ್ರಜಮು ॥
ತ್ತಾನಿತಮೆಸೆದಿರೆ ದಿವ್ಯ ವಿ
ಮಾನಮನುತ್ಸವದಿನೇಱಿದಂ ಪುಷ್ಪಕಮಂ ॥ ೨೧ ॥

ಬಲದೊಳ್ ಲಕ್ಷ್ಮೀಧರನೆಡ
ಗೆಲದೊಳ್ ಜಾನಕಿ ಬೆಡಂಗುವೆತ್ತೆಸೆದಿರೆ ಸು ॥
ತ್ತಲುಮಿರೆ ಖಚರ ವಿಮಾನಾ
ವಲಿ ರಾಮಂ ಮಣಿ ವಿಮಾನದೊಳ್ ಕಣ್ಗೆಸೆದಂ ॥ ೨೨ ॥

ಅಂತು ರಾಮಲಕ್ಷ್ಮಣರ್ ಸಾಧಿತ ದಕ್ಷಿಣದಿಗ್ವಿಜಯರ್ ಪ್ರಯಾಣ ಭೇರಿಯಂ ಪೊಯಿಸಿ—

ಕಂ ॥ ಜಂಗಮ ಸರೋವರಂಗಳ
ಭಂಗಿಯನದಟಲೆವ ಖಚರ ಪರಿವೃಢರ ವಿಮಾ ॥
ನಂಗಳ್ಗಿಡೆ ನೆಜಿಯದು ಗಗ
ನಾಂಗಣಮೆಂಬಂತಯೋಧ್ಯೆಗಭಿಮುಖರಾದರ್ ॥ ೨೩ ॥

ಅಂತು ತಳರ್ದು ಜಲಧಿಯಂ ದಾಂಟಿ ದಂಡಕಾರಣ್ಯಮನೆಯ್ದಿ ವಂದು—

ಕಂ ॥ ಚಾರಣಮುನಿ ಯುಗಲಕ್ಕಾ
ಹಾರಮನಿತ್ತೆಡೆಯನಲ್ಲಿ ತಮ್ಮಿರ್ದ ಲತಾ ॥
ಗಾರದ ಪುಲಿಲೆಡೆಯಂ ಸೀ
ತಾ ರಮಣಿಗೆ ಸುಟ್ಟಿ ತೋಱಿದಂ ರಘುವೀರಂ ॥ ೨೪ ॥

ಕಂ ॥ ಜಲಜಾಕ್ಷಿಗೆ ಸೀತೆಗೆ ರಘು
ಕುಲ ತಿಲಕಂ ಸುಟ್ಟ ತೋಱಿದಂ ಮುನ್ನಂ ಕೇ ॥
ವಲ ಲಬ್ಧಿ ದೇಶಭೂಷಣ
ಕುಲಭೂಷಣ ಸಾಧುಗಳ್ಗೆ ಸಮನಿಸಿದೆಡೆಯಂ ॥ ೫೫ ॥

ಅಂತು ಪವನ ಪಥದೊಳ್ ಮನಃಪವನ ನೇಗದಿಂ ಬರ್ಪ ಸಮಯದೊಳ್—

ಕಂ ॥ ಕನಕ ಪ್ರಾಕಾರದೊಳಂ
ವನ ಮಾಲೆಯೊಳಂ ಮನಕ್ಕೆ ವಂದೀ ಪುರಮಾ ॥
ವನದೆಂದು ರಘೂದ್ವಹನಂ
ಜನಕಜೆ ಬೆಸಗೊಂಡಳಂದಯೋಧ್ಯಾಪುರಮಂ ॥ ೬೬ ॥

ಅಂತು ಬೆಸಗೊಳ್ವದುಂ ಶ್ರೀರಾಮದೇವರಿದೆಮ್ಮಯೋಧ್ಯಾಪುರಮೆಂದುಪೇ ಟಿತ್ತುಂ ಪುರ ಬಹಿಃಪುರಮನೆಯ್ದೆ ಬರ್ಪ ಸಮಯದೊಳ್ ನಾನಾವಿಧ ವಿಮಾನಂ ಗಳನೇಱಿ ಬರ್ಪ ವಿದ್ಯಾಧರ ಪರಿವೃಢರಿಂ ಪರಿವೃತನಾಗಿ ಪುಷ್ಪಕ ವಿಮಾನಮನೇಱಿ ಬರ್ಪ ರಾಮಸ್ವಾಮಿಯ ಬರವನಱಿದು ಮಹಾವಿಭೂತಿಯಿಂ ಪ್ರಮೋದ ಮುದಿತ ಹೃದಯರಾಗಿ—

ಕಂ ॥ ಇಭಮಂ ನೀಲಾಚಲ ಸ
ನ್ನಿಭಮಂ ಶತ್ರುಘ್ನ ಸಹಿತಮೇಱಿ ವಿಭೂಷಾ ॥
ಪ್ರಭೆ ನಭಮನಡರೆ ಭರತಂ
ಶುಭ ರತನಿದಿರ್ಗೊಳಲಯೋಧ್ಯೆಯಂ ಪೊಱಮಟ್ಟಂ ॥ ೬೭ ॥

ಅಂತು ಮಹಾವಿಭೂತಿಯಿಂ ಬರ್ಪ ಭರತ ಶತ್ರುಘ್ನರಂ ರಾಮಸ್ವಾಮಿ ಗೆಂಟ ಱೊಳೆ ಕಂಡು ಪುಷ್ಪಕ ವಿಮಾನದಿನವನಿಗವತರಿಸೆ ಭರತ ಶತ್ರುಘ್ನರುಮಾನೆಯಿಂ ದಿಟ್ಟಿದು ಬಂದು ಪಾದ ಪ್ರಾಂತದೊಳ್ ಸರ್ವಾಂಗ ಪ್ರಣತರಾಗಿರ್ದುದುಂ ರಾಮ ಸ್ವಾಮಿ ತೆಗೆದಪ್ಪಿಕೊಂಡು ಪರಸಿದಿಂಬಱಿಕ್ಕೆ ಸೀತಾದೇವಿಗಂ ಲಕ್ಷ್ಮೀಧರಂಗಮನು ಕ್ರಮದಿಂ ಪೊಡೆವಟ್ಟು ಪರಕೆಯಂ ಕೈಕೊಂಡೋರೊರ್ವರ ಕುಶಲ ವಾರ್ತೆಯಂ ಬೆಸಗೊಂಡು ಸಂತುಷ್ಟ ಚಿತ್ತರಾದನಂತರಂ ಸುಗ್ರೀವ ಪ್ರಭಾಮಂಡಲ ಮರುತ್ಸುತಾದಿ ಗಳಂ ಪರಿವೃತರಾಗಿ—

ಮ ॥ ಮಣಿಘಂಟಾ ಮಣಿಕಿಂಕಿಣೀ ಮಣಿವಿತಾನ ಭ್ರಾಜಿಯಂ ನೇತ್ರ ಭೂ ।
ಷಣಮಂ ಲೀಲೆಯಿನೇಱಿ ಪುಷ್ಪಕಮನುದ್ಯತ್ಕೇತನಾನೀಕ ತೋ ॥

ರಣ ಮಾಂಗಲ್ಯ ಸಮೃದ್ಧಮಂ ಭರತ ಶತ್ರುಘ್ನೆರ್ಕಳುಂ ರಾಮುಲ ।
ಕ್ಷ್ಮಣರುಂ ಪೊಕ್ಕರಯೋಧ್ಯೆಯಂ ಪುದಿವಿನಂ ಗಂಭೀರ ಬಂಭಾರವಂ ॥೨೮॥

ಅಂತು ಪುರಮುಂ ಪೊಕ್ಕಪರಾಜಿತಾಮಹಾದೇವಿಯುಮುಂ ಸುಮಿತ್ರಾಮಹಾ ದೇವಿಯುಮುಂ ಕೈಕಾಮಹಾದೇವಿಯುಮುಂ ಸುಪ್ರಭಾಮಹಾದೇವಿಯುಮುಂ ರಾಮ ಲಕ್ಷ್ಮಣರ್ ಕಂಡೆಱಗಿ ಪೊಡೆವಟ್ಟವರವರಾಶೀರ್ವಾದ ಪಾರಿಜಾತ ಕರ್ಣಪೂರದಿನಲಂ ಕರಿಸಿದಿಂಬಱಿಕ್ಕೆ ಸೀತೆ ಸೊಡೆವಡೆ ಪರಸಿ ತಱಿಸ್ಕೈಸಿಕೊಂಡೋರೊರ್ವರ ಕ್ಷೇಮ ಕುಶಲವಾರ್ತೆಯಂ ನುಡಿದಿಷ್ಟ ಸಂಯೋಗದಿಂ ಮನೋರಾಗಮನಪ್ಪುಕೆಯ್ದಿರ್ದಿನಂ--

ಕಂ ॥ ಬಲ ನಾರಾಯಣರುಂ ಭೂ
ತಲಮಂ ಭರತ ತ್ರಿಖಂಡಮಂ ನಿಜ ಬಾಹಾ ॥
ಬಲದಿಂ ರಕ್ಷಿಸಿ ನಿಜ ನಿ
ರ್ಮಲ ಯಶದಿಂ ಭುವನ ಭವನಮಂ ಧವಲಿಸಿದರ್ ॥ ೨೯ ॥

ಅಂತವರ್ ಸುಖದಿನೋಲಗಂಗೊಟ್ಟರ್ದೊಂದು ಶುಭದಿನ ಮುಹೂರ್ತದೊಳ್ ರಾಮಸ್ವಾಮಿ ರಾಕ್ಷಸ ದ್ವೀಪ ಸಹಿತಮುಂ ಲಂಕೆಯಂ ವಿಭೀಷಣಂಗೆ ದೇವಾನೀಕ ಪುರಮುಂ ರತ್ನಜಟಿಗೆ ಕಿಷ್ಕಿಂಧನಗರಮುಂ ಸುಗ್ರೀವಂಗೆ ಶ್ರೀಪರ್ವತನಗರಮುಂ ಹನುಮಂಗೆ ಪಾತಾಳಲಂಕೆಯಂ ವಿರಾಧಿತಂಗೆ ರಥನೂಪುರಚಕ್ರವಾಲಪುರಮುಂ ಪ್ರಭಾಮಂಡಲಂಗೆ ರಾಜ್ಯಾಭಿಷೇಕಂಗೆಯ್ದು ಕೊಟ್ಟು ಮತ್ತಂ ಪೆಱರುಪಕಾರಂಗೆಯ್ದ ವರ್ಗಂ ಪ್ರಾರ್ಥಿಸೆ ಬಂದ ವಿದ್ಯಾಧರರ್ಗಂ ನಾಡಂ ಬೀಡುಮಂ ಕೊಟ್ಟು ಲಕ್ಷ್ಮಣನಂ ತ್ರಿಖಂಡ ಮಂಡಲಕ್ಕಧಿರಾಜನಂ ಮಾಡಿ ಭರತನನಯೋಧ್ಯೆಯಂ ಮುನ್ನಿನಂದದಿಂ ದಾಳ್ವುದೆಂದು ಬೆಸಸೆ—

ಮ॥ ಸ್ರ॥ ಭರತಂ ನಿಮ್ಮಾಜ್ಞೆಯಂ ಮಾಜದೆ ವಸುಮತಿಯಂ ಕಾದುಕೊಂಡಿರ್ದೆನಿನ್ನಾ ।
ನರಸಂ ಕೈಕೊಳ್ವನಲ್ಲೆಂ ವಿಷಯ ಸುಖಮನಾನೊಲ್ಲನಾಂ ಮೋಕ್ಷ ಲಕ್ಷ್ಮೀ ॥
ಪರಿರಂಭೋತ್ಸುಂತನೆಂ ಸಂಸೃತಿಯ ದೆಸೆಗೆ ಬೆಟ್ಟುತ್ತೆನೆಂದಂದು ವೈರಾ ।
ಗ್ಯ ರತಂ ರಾಮುಂಗೆ ಕೈಯಂ ಮುಗಿದೆಱಗಿದನನ್ನಂ ಮಹಾಸತ್ವನಾವಂ ॥೩೦॥

ಅಂತು ತಪಕ್ಕೆ ತಱಿಸಂದು ನುಡಿಯೆ ಶ್ರೀರಾಮದೇವರ್ ಮುನ್ನೆಮಗೆ ಭೂಚರರೆ ಬೆಸಕೆಯ್ದುರೀಗಳ್ ಖೇಚರರುಂ ಬೆಸಕೆಯ್ವರಿಂ ಕೆಲವು ಕಾಲಂ ರಾಜ್ಯ ಸುಖಮನನುಭವಿಸಿ ನಾಮೆಲ್ಲಮೊಡನೆ ತಪಂಬಡುವಮೆನೆ ನಿಮ್ಮಡಿ ನೀಮೆನಗೆ ಕಾರುಣ್ಯಂಗೆಯ್ವೊಡೆನ್ನಂ ಪೋಗಲೀವುದೆನಗಿಂ ತಪಮೆ ಕಾರ್ಯಂ ನೀಮಿದಂ ಮಾಕ್ರೊಳ್ಳ ದಿರಿಮೆಂದು ಮಱುಮಾತಿಂಗೆಡೆಯಿಲ್ಲದಂತತಿ ಪ್ರತಿಜ್ಞೆಗೆಯ್ದು ಬಿನ್ನವಿಸಿ ರಾಜಭವನ

ಮುಂ ಪೊಱಮಟ್ಟು ಪೋಗೆ ಸಂಭ್ರಮದಿಂ ಲಕ್ಷ್ಮೀಧರನುಂ ಕೈಕಾಮಹಾದೇವಿಯುಂ ವೈದೇಹಿಯುಂ ವಿಶಲ್ಯಾಸುಂದರಿಯುಂ ಪಲರುಮಂತಃಪುರ ಪುರಂಧ್ರಿಯರುಂ ಬಱಿಯನೆ ಪೋಗಿ ತಪೋವಿಘ್ನ ಹೇತುಗಳಪ್ಪ ಮಾತುಗಳಂ ನುಡಿಯುತ್ತಿರ್ಪಿನ ಮತ್ತಲಯ್ವನೆಯ ಕ್ರೋಧಿನಿಯೆಂಬ ಮದದೊಳತಿವರ್ತಿಯಾಗಿ--

ಮ ॥ ತ್ರಿಜಗದ್ಭೂಷಣ ವಾರಣಂ ಮುಱಿಯೆ ಪಾಯ್ದಾಲಾನಮಂ ತ್ವಗ್ಜ ಲೋ ।
ಹಜ ಬಂಧಂಗಳನೆಲ್ಲಮಂ ಪಱಿವಿನಂ ಪೊಯ್ದೆತ್ತಿ ಮೊತ್ತಕ್ಕೆ ಕಾ ॥
ಯ್ದು ಜವಂ ಕೊಲ್ವವೊಲೆಯ್ದೆ ಬಂದು ಜನದಿಂ ಗಂಧಾಂಧನಾ ಭೀಮ ಸಾ।
ಮಜಮುಂ ವಿಸ್ಮಯಮಪ್ಪಿನಂ ಭರತನಂ ಕಂಡಾಯ್ತು ಜಾತಿ ಸ್ಮರಂ ॥ ೩೧ ॥

ಅಂತು ಜಾತಿಸ್ಮರನಾಗಿ ಮದೋದ್ರೇಕಮಂ ಬಿಟ್ಟು ಕೈಯನೆಱಲೆವಿಟ್ಟು ಪೊಡೆವಟ್ಟಪ್ಪುದುಂ ಭರತನಾ ಗಜಮುಂ ವೈದೇಹಿಯುಂ ವಿಶಲ್ಯಾಸೌಂದರಿಯುಂ ಬೆರಸೇಱಿ ಮಹಾವಿಭವದಿಂ ರಾಜಭವನಮಂ ಪೊಕ್ಕು ಆನೆಯಿಂದಿಱಿದೆಲ್ಲರುಮೊಡನಾರೋಗಿಸಿ ಸುಖದಿನೊಡ್ಡೋಲಗಂಗೊಟ್ಟರೆ—

ಕಂ ॥ ನಿರುಜಂ ತ್ರಿಜಗದ್ಭೂಷಣ
ಕರಿ ಕವಳಂಗೊಳ್ಳದೆಂದು ಸಾಹಣದ ಮಹ ॥
ತ್ತರರಱಿಪೆ ರಾಮಲಕ್ಷ್ಮೀ
ಧರರ್ಕಳಾ ನುಡಿಗೆ ನಾಡೆ [1]ವಿಸ್ಮಿತರಾದರ್ ॥ ೩೨ ॥

ಆ ಸಮಯದೊಳ್ ಋಷಿ ನಿವೇದಕನತಿತ್ವರಿತ ಗತಿಯಿಂ ಬಂದು ಸರ್ವಾಂಗ ಪ್ರಣತನಾಗಿ ದೇವ ಮಹೇಂದ್ರೋದ್ಯಾನ ವನಕ್ಕೆ ದೇಶಭೂಷಣ ಭಟ್ಟಾರಕರ್ ಬಿಜಯಂಗೆಯ್ದರೆಂದು ಬಿನ್ನವಿಸೆ ಸಿಂಹಾಸನದಿನೆಱ್ದಾ ದೆಸೆಗೆ ಕೈಗಳಂ ಮುಗಿದು—

ಕಂ ॥ ಅವನೀವಲ್ಲಭರಾರ್ ಧ
ರ್ಮ ವತ್ಸಲರ್ ತನ್ನ ತೆಱದಿನೆಂಬನ್ನಂ ರಾ ॥
ಘವ ದೇವನಟ್ಟಿಱಿಂ ಋಷಿ
ನಿವೇದಕಂಗಮರ ಧೇನುವೀವಂತಿತ್ತಂ ॥ ೩೩ ॥

ಅಂತು ಮೆಚ್ಚಿತ್ತು ರಾಮಲಕ್ಷ್ಮಣರುಂ ಭರತ ಶತ್ರುಘ್ನರುಂ ತ್ರಿಜಗದ್ಭೂಷಣ ಗಜಾರೂಢರಾಗಿ ಅಪರಾಜಿತಾಮಹಾದೇವಿ ಮೊದಲಾಗೆ ನಾಲ್ವರ್ ಜನನಿಯರುಂ ಜಾನಕಿ ಮೊದಲಾಗೆ ಸಮಸ್ತಾಂತಃಪುರಮುಂ ಸುಗ್ರೀವಂ ಮೊದಲಾಗೆ ಸಕಲ ವಿದ್ಯಾಧರ ವಲ್ಲಭರುಂ ವಂದನಾಭಕ್ತಿಯಿಂದೊಡನೆ ಬರೆ ಬಂದು ವಾಹನದಿಂದಿಱಿದು

1. ವಿಸ್ಮಯಮುತ್ತರ್. ಗ.

ಗೆಂಟಱೊಳೆ ರಾಜಚಿಹ್ನಂಗಳನಿರಿಸಿ ಭಟ್ಟಾರಕರಂ ಮೂರು ಸೂಟ್ ಬಲಗೊಂಡು ದಿವ್ಯಾರ್ಚನಂಗಳಿಂದರ್ಚಿಸಿ ಸರ್ವಾಂಗ ಪ್ರಣತರಾಗಿ ನಿಜ ನಿಯತ ಸ್ಥಾನದೊಳ್ ಕುಳ್ಳಿರ್ದು ಧರ್ಮ ಶ್ರವಣಾನಂತರಂ ನಾರಾಯಣನೆಂದನೀ ತ್ರಿಜಗದ್ಭೂಷಣ ದ್ವಿರದಂ ಚತುರ್ದಿನಮೇಕಾರಣಂ ಕವಳಂಗೊಳ್ಳದೆಂಬುದಂ ಬೆಸಸಿಮೆನೆ—

ಕಂ ॥ ಅಪವರ್ಗ ಶ್ರೀಯ ಕಟಾ
ಕ್ಷಪಾತವೆಂಬಂತು ದಂತರುಚಿ ನಿಮಿರ್ದಿನಮಿಾ ॥
ದ್ವಿಪಮನ್ಯಜನ್ಮಮಂ ತಿಳಿ
ದುಪಶಮಮುಂ ತಳೆದು ಕವಳಮುಂ ಕೊಳ್ಳದೆನಲ್ ॥ ೩೪ ॥

ಮುಗಿದ ಕರ ಕಿಸಲಯಂಗಳ್
ಸೊಗಯಿಸೆ ಮತ್ತಂ ಮುನೀಂದ್ರ ವೃಂದಾರಕರಂ ॥
ಜಗದಧಿಪಂ ಗಜದ ಭವಾ
ಳಿಗಳಂ ವಿನಮಿತ ಶಿರೋಧರಂ ಬೆಸಗೊಂಡಂ ॥ ೩೫ ॥

ಅಂತು ಬೆಸಗೊಳ್ವುದುಂ ದೇಶಭೂಷಣ ಕೇವಲಿಗಳಿಂತೆಂದು ಬೆಸಸಿದರೀ ವಿನೀತಾನಗರದೊಳ್ ಸುಪ್ರಭಂಗಮಾತನರಸಿ ಪ್ರಹ್ಲಾದಿನಿಗಂ ಸೂರ್ಯೋದಯನುಂ ಚಂದ್ರೋದಯನುಮೆಂಬ ತನೂಜರಾಗಿ ವೃಷಭ ಸ್ವಾಮಿಗಳೊಡನೆ ಪೋಗಿ ತಪಸ್ಥರಾಗಿ ಸೈರಿಸಲಾಱದೆ ಪರೀಷಹ ಭಗ್ನ ಮನರಾಗಿ ಮರೀಚಿಯೊಡನೆ ಕೂಡಿ—

ಕಂ ॥ ತಾಪಸರಾಗಿ ಕುಧರ್ಮ
ವ್ಯಾಪಾರದೊಳೆಸಗಿ ಘೋರ ಸಂಸಾರ ಮಹಾ ॥
ಕೂಪದೊಳಗಟ್ಟು ಪಿರಿದ
ಪ್ಪಾಪತ್ತಂ ಪೆತ್ತನೇಕ ಭವಮುಂ ಬಂದರ್ ॥ ೩೬ ॥

ಅಂತು ಬಾರದ ಭವಮುಂ ಬಂದೆಂತಾನುಂ ಕುರುಜಾಂಗಣ ವಿಷಯದ ಗಜಪುರಮನಾಳ್ವ ಹರಿಪತಿಗಮಾತನರಸಿ ಚಂದ್ರಾನನೆಗಂ ಮುಂ ಪೇೞ್ದ ಚಂದ್ರೋದಯಂ ಕುಲಂಕರನೆಂಬ ಮಗನಾಗಿ ರಾಜ್ಯದೊಳ್ ನಿಂದನಾ ಪುರದೊಳ್ ಸೂರ್ಯೋದಯನುಂ ವಿಶ್ವಾವಸುವೆಂಬ ಪಾರ್ವಂಗೆ ಮೂಢಶ್ರುತಿಯೆಂಬ ಪುತ್ರನಾಗಿ ಕುಲಂಕರನೆಂಬ ನೃಪತಿಗೆ ಪುರೋಹಿತನಾಗೆ ಕುಲಂಕರನುಂ ಹಿಂಸಾಹೇತುಗಳಪ್ಪ ಜನಂಗಳನಿರಿಸಿ ತಾಪಸ ರೂಪ ಧಾರಿಗಳೆ ಗುರುಗಳೆಂಬ ನಂಬುಗೆಯಂ ಮಾಡಿ ನಡೆಯಿಸುತ್ತಿರ್ಪಿನಂ ಕುಲಂಕರನರಸಿ ದುಶ್ಶೀಲೆ ಶ್ರೀಮತಿಯೆಂಬ ಪಾಣ್ಬೆ ಮೆಚ್ಚಿದರೊಡನೆ ಮೆಚ್ಚಿದಂತೆ ವಿಷಯ ಸುಖಮನನುಭವಿಸಲೆಂದು—

ಕಂ ॥ ಜಾತಿಯ ನೀತಿಯ ಸೈಪಿನ
ಮಾತಡಿಗಿಡೆ ಪತಿಯುಮಂ ಪುರೋಹಿತನುಮನಾ ॥
ಸಾತಕೆ ವಿಷದಿಂ ಕೊಂದಳ್
ಕೌತುಕಮೆ ವಿವೇಕ ವಿಕಲರೀನಂ ಮಾಡರ್ ॥ ೩೭ ॥

ಅಂತು ಸತ್ತು ಕುಲಂಕರನುಂ ಮೂಢಶ್ರುತಿಯುಮನುಕ್ರಮದಿಂ ಮೊಲನುಂ ಮುಂಗುರಿಯುಮಾಗಿ ಪುಟ್ಟಿ ಸತ್ತು ಬಜಿಯಂ ಮೂಢಶ್ರುತಿ ಶುಂಡಾಲನಾಗಿ ಕುಲಂಕರಂ ದರ್ದುರನಾಗಿ ಪುಟ್ಟಿ ತನ್ನನಾ ಶುಂಡಾಲಂ ಮೆಟ್ಟಿ ಸತ್ತೆಸಡಿಯಾಗಿ ಪುಟ್ಟಿ ಆ ಶುಂಡಾಲಂ ಸತ್ತು ಕಾಗೆಯಾಗಿ ತನ್ನಂ ತಿನೆ ಸತ್ತೆಸಡಿ ಕುಕ್ಕುಟನಾಯ್ತಾ ಕಾಗೆ ಸತ್ತು ಬಿಡಾಲನಾದುದಾ ಬಿಡಾಲಂ ಮುನ್ನಿನ ಕುಕ್ಕುಟನಂ ತಿಂದುದೀ ತೆಱದಿಂ ಕುಲಂಕರಂ ಮೂಱು ಸೂಱ್ ಕುಕ್ಕುಟನಾಗಿ ಪುಟ್ಟಿ ಮೂಢಶ್ರುತಿಯುಂ ಬಿಡಾಲನಾಗಿ ಮೂಱುಸೂಱ್ ಪುಟ್ಟಿ ತಿನೆ ಸತ್ತು ಕುಲಂಕರಂ ವಿಾನಾದಂ ಮೂಢಶ್ರುತಿ ಸತ್ತು ಮೊಸಳೆಯಾದಂ—

ಕಂ ॥ ಆರಿತ್ತಜೀವರ್ ಕರ್ಮ
ಪ್ರೇರಣೆಯಂ ಪಗೆಯೆ ಕೆಳೆಯನಕ್ಕುಂ ಕೆಳೆಯುಂ ॥
ಕ್ರೂರ ರಿಪುವೆನಿಸಿ ಬರ್ಕುಂ
ಬಾರದ ಭವಮಂ ವಿಚಿತ್ರವಿಾ ಸಂಸಾರಂ ॥ ೩೮ ॥

ಅಂತು ಮೊಸಳೆಯಾದ ಮೂಢಶ್ರುತಿಯುಮಂ ವಿಾನಾದ ಕುಲಂಕರನುಮಂ ವಿಾಂಗುಲಿ ಕೊಲೆ ಸತ್ತು ರಾಜಗೃಹದೊಳ್ ಜಲೂಕೆಯೆಂಬ ಪಾರ್ವತಿಗಂ ಬಹ್ವಾಶನೆಂಬ ಪಾರ್ವಂಗಂ ಮೂಢಶ್ರುತಿ ವಿನೋದನೆಂಬ ಮಗನಾದನಾ ವಿಾನಾಗಿ ಸತ್ತ ಕುಲಂಕರನುಮವರ್ಗೆ ರಮಣನೆಂಬ ನಂದನನಾಗಿ ಬಳೆದು ದೇಶಾಂತರಕ್ಕೆ ಪೋಗಿ ವೇದವಿದನಾಗಿ ಮಗುೞ್ದಿ ಬರುತ್ತುಂ ನಿಜಗ್ರಾಮಮಪ್ಪ ರಾಜಗೃಹದ ಪೊಱ ವೊಬಲನೆಯ್ದಿ ವರ್ಷ ಸಮಯದೊಳ್ ನೇಸರ್ ಪಡುವುದುಮಂಧಕಾರಮತಿ ಪ್ರಬಲಮಾಗೆ ಬರಲಜೀಯದೆ ಯಕ್ಷ ಗೃಹದೊಳ್ ವಸಿಯಿಸಿರ್ಪುದುಂ—

ಕಂ ॥ ಆ ರಮಣನಗ್ರಜಾತ ಮ
ನೋರಮೆ ಸಮಿತಾಭಿಧಾನೆ ಪಾಣ್ಬನ ಬರವಂ ॥
ಪಾರುತ್ತಡಂಗಿ ಯಕ್ಷಾ
ಗಾರಮನವಳಂಧಕಾರಮಂ ಪೊಕ್ಕಿರ್ದಳ್ ॥ ೩೯ ॥

ಅಂತಿರ್ಪುದುಮಾಕೆಯಲ್ಲಿಗೆ ಬರುತ್ತಿರ್ದಶೋಕದತ್ತನೆಂಬ ಪಾಣ್ಬನಂ ತಳಾಱರ್ ಪಿಡಿದು ಕೊಲ್ವುದುಂ ವಿನೋದಂ ತನ್ನ ಪಾರ್ವಂತಿಯ ದುಶ್ಚರಿತ್ರಮನಱಿವ

ನಪ್ಪುದಱಿನಾಕೆಯ ಬಟ್ಟಿಯನೆ ಬಂದುಟ್ಟಿದಿರ್ದು ಯಕ್ಷಾಗಾರದೊಳಿರ್ದಾಕೆಯೊಳ್ ನುಡಿಯುತ್ತಿರ್ದ ತನ್ನ ತಮ್ಮನಪ್ಪ ರಮಣನಂ ಪಾಣ್ಬನೆಂದೆ ಬಗೆದು ಕೊಂದಾಕೆಯಂ ಮನೆಗೆ ತಂದಾಳುತ್ತಿರ್ದು ತಾನುಮಾಕೆಯ ಕೈಯೊಳ್ ಸತ್ತು ಸಂಸಾರದೊಳ್ ತೊಟಲ್ದು ಮಹಾಗಹನದೊಳಿರ್ವರುಂ ಮಹಿಷಂಗಳಾಗಿ ಕಾದಿ ಸತ್ತು ಮತ್ತಂ ಕರಡಿಗಳಾಗಿ ಪುಟ್ಟಿ ಬೇಗೆಗಿರ್ಚಲ್ಕೆ ಸತ್ತು—

ಕಂ ॥ ಗಿರಿ ದರಿಗಳ ವನದೊಳ್ ಬೇ
ಡರ ಬಸಿಜೊಳ್ ಬಂದು ಪಾಪಮುಂ ಸಾಲ್ವನಿತಂ ॥
ನೆರೆಪಿ ಕಡೆಗಾಲದೊಳ್ ವನ
ಚರರ್ಕಳಂದೊಡನೆ ಸತ್ತು ಪುಲ್ಲೆಗಳಾದರ್ ॥ ೪೦ ॥

ಮತ್ಸರಮುಂ ಜಿನ ಮತದೊಳ್
ವತ್ಸಲತೆಯನುಂಟುಮಾಡಿ ಕುಮುಶದೊಳಮವರ್ ॥
ಕುತ್ಸಿತ ಯೋನಿಗಳೊಳ್ ಬೀ
ಭತ್ಸು ಶರೀರಂಗಳಾಗಿ ತಿರಿತರುತಿರ್ದರ್ ॥ ೪೧ ॥

ಅಂತು ಪುಲ್ಲೆಗಳಾಗಿ ಪುಟ್ಟುವುದುಮವಂ ಬೇಡನ್ನೊರ್ವಂ ಪಿಡಿದು ನಡಪುತ್ತು ಮಿರ್ದನನ್ನೆಗಮತ್ತ ಸ್ವಯಂಭೂತಿರಥನೆಂಬ ಮಹೀನಾಥಂ ವಿಮಲ ಜಿನನಾಥರಂ ವಂದಿಸಿ ಬರುತ್ತುಮಾ ಪುಲ್ಲೆಗಳಂ ಬೇಡನಿಂ ಬೇಡಿಕೊಂಡು ನಿಜ ರಾಜಭವನದೊಳಗಣ ಜಿನಾಲಯದೊಳಿರಿಸಿ ನಡಪುತ್ತುಮಿರ್ಪುದುಮಲ್ಲಿ ರಮಣನಪ್ಪ ಪುಲ್ಲೆ ಋಷಿಯರ ಸಂಯೋಗದಿಂದುಪಶಮ ಚಿತ್ತನಾಗಿ ಸತ್ತು ದೇವಲೋಕಕ್ಕೆ ಪೋಯ್ತು ಮತ್ತಂ ವಿನೋದನಪ್ಪ ಪುಲ್ಲೆ ಸತ್ತು ತಿರ್ಯಗ್ಗತಿಯೊಳ್ ತಿರ್ರನೆ ತಿರಿದೆಂತಾನುಂ ಕರ್ಮೋಪಶಮದಿಂ ಕಾಂಪಿಲ್ಯ ನಗರದೊಳ್ ಧನದತ್ತನೆಂಬ ಪರದನಾಗಿ ಪುಟ್ಟಿ ಮೂವತ್ತೆರಡು ಕೋಟಿ ಧನಕ್ಕಧಿನಾಥನಾಗಿರ್ದನಾ ಧನದತ್ತಂಗಮಾತನ ಕುಲಸ್ತ್ರೀ ವಾರುಣಿಗಂ ರಮಣನಪ್ಪ ದೇವಂ ದಿವದಿಂ ಬಂದು ಭೂಷಣನೆಂಬ ಮಗನಾಗೆ ನೈಮಿತ್ತಿಕರೀತನವಶ್ಯಂ ಜಿನ ಮುನಿಗಳಂ ಕಂಡಾಗಳೆ ತಪಂಬಡುವನೆನೆ ಧನದತ್ತನಾ ಮಾತಂ ಕೇಳ್ದು—

ಕಂ ॥ ತನುಜ ಸ್ನೇಹದಿನವನಂ
ಮುನಿಪತಿಗಳ್ ಕಾಣದಂತು ಮಾಡದ ಮೇಗಂ ॥
ಗನೆವೆರಸು ಸುಖದಿನಿರಿಸಿದ
ನೆನೆ ಚಿತ್ರಮೆ ಸಹಜಮಲ್ತೆ ಪುತ್ರಸ್ನೇಹಂ ॥ ೪೨ ॥

ಅಂತು ಸುಖದಿನಿರ್ದೊಂದು ದಿವಸಂ ಭೂಷಣಂ ಶ್ರೀಧರ ಭಟ್ಟಾರಕರಂ ವಂದಿಸಲೆಂದು ಪೋಪ ದೇವರ್ಕಳನಾಕಾಶದೊಳ್ ಕಂಡು ಜಾತಿಸ್ಮರನಾಗಿ ಭಟ್ಟಾರಕರಂ ಬಂದಿಸಲೆಂದು ಮಾಡದಿಂದಿಟ್ಟಿದು ಬರುತ್ತುಂ ಸರ್ಪದಷ್ಟನಾಗಿ ಸತ್ತು ಮಹೇಂದ್ರ ಕಲ್ಪಕ್ಕೆ ಪೋಗಿ ಮಗುಟ್ಟಿ ಬಂದು ಪುಷ್ಕರ ದ್ವೀಪದ ಚಂದ್ರಾದಿತ್ಯ ಪುರಮನಾಳ್ವ ಪ್ರಕಾಶಯಶಂಗಮುದಿತೆಗಂ ಜಗದ್ದ್ಯುತಿವೆಸರ ಸುತನಾಗಿ ರಾಜ್ಯಂಗೆಯ್ಯುತ್ತುಂ—

ಕಂ ॥ ಜಿನ ಗದಿತ ಮಾರ್ಗದಿಂ ಜಿನ
ಮುನಿಗನ್ನಮನಿತ್ತು ದೇವ [1]ಕುರು ಭೂತಲ ಸಂ ॥
ಜನಿತಂ ತತ್ಸುಖದೊಳ್ ತ
ಣ್ಣನೆ ತಣಿದೀಶಾನ ಕಲ್ಪದೊಳ್ ಜನಿಯಿಸಿದಂ ॥ ೪೩ ॥

ಕಿಡದ [2]ಪರಮಾತ್ಮ ಸುಖಮುಂ
ಕುಡುವ ಮಹಾಮಹಿಮೆವಡೆದ ಸಾಧು ಪದಂಗಳ್ ॥
ಕಿಡುವ ಸುರಲೋಕ ಸುಖಮುಂ
ಕುಡುವುದದೇ ಗಹನಮೆನಿಸಿ ಕಲ್ಪಜನಾದಂ ॥ ೪೪ ॥

ಅಂತೀಶಾನಕಲ್ಪದೊಳನಲ್ಪ ಸುಖಮನನುಭವಿಸಿ ಬಂದು ಜಂಬೂದ್ವೀಪದ ಪರವಿದೇಹದ ನಂದ್ಯಾವರ್ತ ಪುರಮನಾಳ್ವ ಚಲನೆಂಬ ಚಕ್ರವರ್ತಿಗಮಾತನ ಮಹಾದೇವಿ ಬಾಲಹರಿಣಿಗಮಭಿರಾಮನೆಂಬ ಮಗನಾಗಿ—

ಕಂ ॥ ಅಜ್ಞಾದಾತಂ ಸಂಸಾರದ
ತೆಜನಂ ತೊಜ್ಞೆಯಲ್ಕೆ ಬಗೆಯೆ ಬಲ್ಲಾಳ್ತನದಿಂ ॥
ತುಜುಗೆವೆಗಣ್ಣೊಳ್ವೆಂಡಿರ್
ಸೆಜೆವಿಡಿದರ್ ಸುತ್ತಿ ಮುತ್ತಿ ಮೂಸಾಸಿರ್ವರ್ ॥ ೪೫ ॥

ಅಂತು ತನ್ನಂ ತಮ್ಮಯ್ಯನಪ್ಪ ಚಕ್ರವರ್ತಿಯ ಪೆಸದಿಂ ಬಳಸಿಕೊಂಡಿರ್ದ ಕನ್ನಿಯರಂ ಪುಲ್ಲಿಣೆಯಾಗೆ ಬಗೆದು—

ಕಂ ॥ ಜಿನ ಧರ್ಮದ ಪೆರ್ಮೆಯೆ ನಿಲೆ
ಮನದೊಳ್ ಬಾಲೆಯರ್ಗೆ ಧರ್ಮಮಂ ಪೇಟ್ಟುತ್ತುಂ ॥
ಮನೆಯೊಳ್ ಮುನಿಯವೊಲಿರ್ದಂ
ತನಗಳವಡೆ ಋಷಿ ಗುಣಂಗಳೆನಿತೊಳವನಿತುಂ ॥ ೪೬ ॥

---

1. ಕುಲ. ಗ. 2. ಪವರ್ಗದ. ಗ. ಫ.

ಅಂತು ಸಮ್ಯಕ್ತ್ವ ಶುದ್ಧನಾಗಿ ಸಂನ್ಯಸನಂಗೆಯ್ದು ಪಂಚ ನಮಸ್ಕಾರ ಪರಿಣತಂ ಶರೀರ ಭಾರಮನಿಟ್ಟಿಪಿ ಬ್ರಹ್ಮೋತ್ತರ ಕಲ್ಪದೊಳ್ ದೇವನಾಗಿ ಪುಟ್ಟುವುದುಂ—

ಕಂ ॥ ಇತ್ತಲ್ ಮುಂ ಪೇಟ್ಟಾ ಧನ
ದತ್ತಂ ಸತ್ಯಾ=ಜವಂಜವೀ ಜಲಧಿಯೊಳಾ ॥
ಟಿತ್ತೇಟಿತ್ತಿರ್ದಂ ದು
ರ್ವೃತ್ತಂಗೆ ದುರಂತ ದುಃಖಮಪ್ಪುದು ಪಿರಿದೇ ॥ ೪೭ ॥

ಅಂತಾತಂ ಸಂಸಾರದೊಳ್ ತೊಟಿಲ್ದು ಬಂದು ಪೌದನಪುರದೊಳಗ್ನಿಮುಖನೆಂಬ ಪರದಂಗಮಾತನ ಪರದಿತಿ ಶಕುನಿಗಂ ಮೃದುಮತಿವೆಸರ ಸುತನಾಗಿ ಕಿತವನಾಗೆ ಪೊಱಮಡಿಸಿ ಕಟ್ಟಿಯೆ ಪೋಗಿ ಋಷಿಯರಂ ಸಾರ್ದು ಸಾಕ್ಷರಿಕನಾಗಿ ಮಗುಟ್ಟಿ ಬಂದು ಮಾತಾಪಿತೃಗಳೊಳ್ ಕೂಡಿ ಸಂತೋಷದಿನಿರ್ದು ವಸಂತೆಯುಂ ರಮಣಿಯುಮೆಂಬಿರ್ವರ್ ಗಣಿಕೆಯರ್ಗಾಸಕ್ತನಾಗಿ ಧನಮಂ ನಿಧುವನಕ್ಕೆ ಸಲಿಸಿ ವಿಕಲಮತಿಯಾದ ಮೃದುಮತಿ ಸ್ತೇಯಮೆ ತನಗೆ ಜೀವನೋಪಾಯಮಾಗೆ ನೆಗಟ್ಟುತ್ತುಮೊಂದು ದಿವಸಂ ಶಶಾಂಕಪುರಮನಾಳ್ವ ನಂದಿವರ್ಧನನರಮನೆಯಂ ಪೊಕ್ಕು ಕಟಲೆಂದುಟ್ಟಿದರ್ದ ಸಮಯದೊಳ್ ನಂದಿವರ್ಧನಂ ಶಶಾಂಕಮುಖ ಭಟ್ಟಾರಕರ್ ಬೆಸಸೆ ಧರ್ಮಮಂ ಕೇಳ್ದು ನಿರ್ವೇಗಪರನಾಗಿ ಮನೆಗೆವಂದು ತನ್ನರಸಿಗಾಂ ತಪಸ್ಥನಪ್ಪೆಂ ನೀನುಬ್ಬೆಗಂ ಬಡದಿರೆಂದು ನುಡಿವುದುಂ ಕೇಳ್ದು ಮೃದುಮತಿವೆಸರನ್ವರ್ಥಮಾಗೆ ಸಂಸಾರ ಭೀರುವಾಗಿ ತತ್ತಪೋನಿಧಿಯ ಸನ್ನಿಧಿಯೊಳ್ ತೊಱೆದು ತಪಂಗೆಯ್ಯುತ್ತುಮಿರ್ಪುದುಮಿತ್ತಲಾಲೋಕಪುರದ ಪರಿಸರದ ಪರ್ವತದ ಮೇಲೆ—

ಕಂ ॥ ಗುಣನಿಧಿಗಳ್ ನಾಮದೊಳಂ
ಗುಣನಿಧಿಗಳ್ ಗಗನ ಚಾರಣರ್ ಶೈಲ ಶಿರೋ ॥
ಮಣಿಯೆನೆ ಕೈಯೆತ್ತದೆ ಮುನಿ
ಗಣ ಪೂಜ್ಯರ್ ಪೂಣ್ದು ನಾಲ್ಕು ತಿಂಗ[1]ಳನಿರ್ದರ್ ॥ ೪೮ ॥

ಅವರಂ ಪೂಜಿಸಿ ಪೋದರ್
ದಿವಕ್ಕೆ ದಿವಿಜರ್ಕಳವರುಮಾ ಪರ್ವತದಿಂ ॥
ಪವನ ಪಥಾತಿಥಿಯಾದರ್
ದಿವಸಾವಧಿ ಪಿಂಗಿಪೋಗೆ ಪರಮಾತಿಥಿಗಳ್ ॥ ೪೯ ॥

1. ಳ್ಮಿಂದರ್. ಗ. ಘ.

ಮತ್ತಿತ್ತ ಮೃದುಮತಿಗಳುಗ್ರೋಗ್ರ ತಪಂಗೆಯ್ದುತಿ ಕ್ಷಪಿತ ಕಾಯರಾಲೋಕ ನಗರಕ್ಕೆ ಚರಿಗೆಗೆ ಪೋದೊಡಾ ಪೊಬಲನಾಳ್ವರಸಂ ಮೊದಲಾಗೆ ಪಲಬರುಮಾ ಚಾರಣರೆಗೆತ್ತೀ ರುಷಿಯರ್ ನಾಲ್ಕು ತಿಂಗಳ್ವರಂ ಕೈಯಿಕ್ಕಿ ನಿಂದರಿವರ ತಪದ ಪೆರ್ಮೆಗೆ ದೇವರ್ಕಳ್ ಪೂಜಿಸಿ ಪೋದರ್ ಗಡವೆಂದು ಪೊಗಟ್ಟು ತಮ್ಮಂ ಪೂಜಿಸಿ ಕೊಂಡಾಡೆ ಮಾಯೆಯಿಂ ಪೂಜಿಸಿದ ಪೂಜೆಗೆ ಮುಯ್ಯಾಂತು—

ಕಂ ॥ ಅಟ್ಟಿಪಿಲ್ಲದ ಜಿನ ಧರ್ಮದೊ
ಳಟ್ಟಿಪಿಂದಾಹಾರ ಕಾಂಕ್ಷೆಯಿಂ ನಾಯೆಯ ಬೆಂ ॥
ಬಟ್ಟಿಸಂದು ತಪಂಗೆಯ್ದೊಡ
ಲಟ್ಟಿವಿನೊಳಭಿರಾಮನಿರ್ದ ದಿವಮಂ ಪೊಕ್ಕಂ ॥ ೫೦ ॥

ಅಂತು ಪುಗುವುದುಂ ಮೃದುಮತಿಯನಭಿರಾಮ ಚರಾಮರಂ ಕಂಡತಿ ಸ್ನೇಹಿತನಾಗಿ ಸುಖದಿನಿರ್ದು—

ಕಂ ॥ ದಿವದಿಂ ಪರಮಾಯುಷ್ಯಂ
ತವೆ ಮಾಯಾತಪದ ಫಲದೆ ಮೃದುಮತಿ ಚರನಾ ॥
ದಿವಿಜಂ ಕುಂಜರಗಿರಿ ಸಾ
ನು ವನ ನಿಕುಂಜಕ್ಕೆ ವಂದು ಕುಂಜರನಾದಂ ॥ ೫೧ ॥

ಅನಂತರಮಭಿರಾಮಚರಂ ಬ್ರಹ್ಮೋತ್ತರ ಕಲ್ಪದಿಂ ಬಂದು ದಶರಥ ಮಹೀ ನಾಥಂಗಂ ಕೈಕಾಮಹಾದೇವಿಗಮಿಾ ಭರತನೆಂಬ ಮಗನಾದನೀತನಂ ತ್ರಿಜಗ ದ್ಭೂಷಣ ಗಜಂ ಕಂಡು ಜಾತಿಸ್ಮರಂ ಸಂಸಾರ ಭೀರುವಾದುದಱಿಂ ಬ್ರತಂಗೊಂಡು ಸುಗತಿವುಗಲಿರ್ದುದೆಂದು—

ಕಂ ॥ ಆನೆಯ ಭರತನ ಭವ ಸಂ
ತಾನಂಗಳನಱಿಪೆ ದೇಶಭೂಷಣ ದಿವ್ಯ ॥
ಜ್ಞಾನಿಗಳಾಲಿಸಿ ವಿಸ್ಮಿತ
ಮಾನಸರಾದರ್ ಬಲಾಚ್ಯುತ ಪ್ರಮುಖರ್ಕಳ್ ॥ ೫೨ ॥

ಆ ಸಮಯದೊಳ್—

ಉ ॥ ಹಸ್ತಿಯ ತನ್ನ ಮುನ್ನಿನ ಭವಾವಳಿಯೆಲ್ಲಮನೆಯ್ದೆ ಪೇೞೆ ಲೋ ।
ಕಸ್ತುತ ದೇಶಭೂಷಣ ಮಹಾಮುನಿಪುಂಗವರಾ ಜವಂಜವ ॥
ತ್ರಸ್ತಮನಂ ತಪಶ್ಚರಣ ಲೋಭರತಂ ಭರತಂ ಭವಾಬ್ಧಿಯಂ ।
ದುಸ್ತರಮಂ ಸಮುತ್ತರಿಸಲುತ್ಸುಕ ವೃತ್ತಿಯನುಂಟುಮಾಡಿದಂ ॥ ೫೩ ॥

ಕಂ ॥ ಬಾರದ ಭವನೊಂದಿಲ್ಲೆನೆ
ನಾರಕ ತಿರ್ಯಙ್ಮಾನುಷ್ಯ ಗತಿಯೊಳ್ ಬಂದೆಂ ॥
ಸಾರದೆ ಜಿನ ಚರಣಮನಿ
ನ್ನಾರಾಧಿಸಿ ಪಡೆವೆನಮೃತ ಸುಖ ಸಂಪದಮಂ ॥ ೫೪ ॥

ಎಂದು ತಱಿಸಂದು ಭರತಂ ಸಹಸ್ರತ್ರಯ ರಾಜಪುತ್ರರ್ ಸಹಿತಂ ತಪಸ್ಥನಾದಂ ಕೈಕೆಯುಂ ಮುನ್ನೂರ್ವರ್ ಸ್ತ್ರೀಯರ್ವೆರಸು ಪೋಗಿ ಪೃಥುಮತಿ ಗಂತಿಯರ ಪಕ್ಕದೆ ಸಮ್ಯಕ್ತ್ವ ಪೂರ್ವಕಂ ತಪಂಗೊಂಡಳಾ ತ್ರಿಜಗದ್ಭೂಷಣ ಗಜಂ ಸಮ್ಯಕ್ತ್ವ ಪೂರ್ವಕಮಣುವ್ರತಮನಲ್ಲಿಯೆ ಕೈಕೊಂಡು ಪಲವು ನೋಂಪಿಗಳಂ ನೋಂತು ಸಂನ್ಯಸನದಿಂ ಮುಡಿಪಿ ಬ್ರಹ್ಮೋತ್ತರಕಲ್ಪಗತಮಾಯ್ತು ಭರತಮುನಿಗಳುಂ ಚತುರಂಗುಲ ಚಾರಣ ಋದ್ಧಿಪ್ರಾಪ್ತರಾಗಿ ವಿಹಾರಿಸಿ ಕೇವಲಜ್ಞಾನ ಪ್ರಾಪ್ತರಾಗಿ ಮೋಕ್ಷಕ್ಕೆ ಪೋದರಿತ್ತಲ್ ಸಿದ್ಧಾರ್ಥನುಂ ರತಿವರ್ಧನನುಂ ಮೊದಲಾಗೆ ಭರತನೊಡನೆ ತಪಂಗೊಂಡ ಮೂಸಾಸಿರ್ವರುಂ ತಂತಮಗೆ ತಕ್ಕ ಸ್ಥಾನದೊಳ್ ಪುಟ್ಟಿ ಸುಖದಿನಿರ್ಪುದುಮಿತ್ತ ಕೈಕಾಗಣಿನಿಯರುಮನಶನದೆ ತಪದೊಳ್ ನೆಗಟ್ಟು ಜೀವಿತಾಂತ್ಯದೊಳ್ ಸೌಧರ್ಮಕಲ್ಪದೊಳ್ ಪುಟ್ಟಿದರ್—

ಕಂ ॥ ಪರಿಪಾಲಿಸಿ ಧರೆಯಂ ಖೇ
ಚರ ಭೂಚರ ಭೂಪರಾಳ್ವಿಸಂ ಗೆಯ್ಯೆ ನಿರಂ ॥
ತರ ಸುಖದಿನಿತ್ತಲಮರೇ
ಶ್ವರ ನಿಭವಂ ಬಡೆದು ರಾಮಲಕ್ಷ್ಮಣರಿರ್ದರ್ ॥ ೫೫ ॥

ಅಂತು ಸುಖದಿನಿರ್ದೊಂದು ದಿವಸಂ ರಾಘವಂ ಶತ್ರುಘ್ನಂಗೆ ಸಾಕೇತ ಪುರಾರ್ಧಮನಕ್ಕೆ ಪೌದನಪುರಾರ್ಧಮನಕ್ಕೆ ಪುಂಡರೀಕಿಣೀಪುರಮನಕ್ಕೆ ರಾಜಗೃಹಪುರಮನಕ್ಕೆ ನಿನ್ನ ಮೆಚ್ಚಿದುದಂ ಬೇಡಿಕೊಳ್ಳೆಂಬುದುಮಿದಾವುದುಮನೊಲ್ಲೆನುತ್ತರ ಮಧುರೆಯಂ ದಯೆಗೆಯ್ಯಿಮೆಂದು ಬಿನ್ನವಿಸೆ ರಾಮದೇವರೆಂದರುತ್ತರಮಧುರೆಯನಾಳ್ವ ಮಧುವಿಂಗಮರೇಂದ್ರನಿತ್ತ ಶೂಲಾಯುಧಂ ಮಱುವಕ್ಕದ ಮೇಲೆ ಬಿಟ್ಟಕ್ಕಿ ದೊಡೆ ಸಾಸಿರ್ವರಂ ಕೊಂದು ಮಗುಟಿ ಕೈಗೆವರ್ದುದದಲ್ಲದೆಯುಮಾತನ ತನೂಭವಂ ಲವಣಾರ್ಣವನೆಂಬವಂ ರಾವಣನಳಿಯನವನನಾರುಂ ಗೆಲಲ್ ಬಾರದು ನೀನಾಪೊಟಲೊಳೆಂತಿರ್ದಪೆಯೆನೆ ಶತ್ರುಘ್ನನಾಗ್ರಹದಿನದನೆ ಬೇಡಿಕೊಳ್ವುದುಂ ಲಕ್ಷ್ಮೀಧರಂ ತನ್ನ ವಜ್ರಕವಚಮುಮುಂ ಸಾಗರಾವರ್ತ ಶರಾಸನಮುಮನಗ್ನಿಮುಖ ಶಿಲೀಮುಖಮುಮಂ ಕೊಟ್ಟು ಕಟಿಪುವುದುಂ ಮಹಾಬಲ ಸಮೇತನಾಗಿ ಪುಣ್ಯ ಭಾಗೆಯೆಂಬ ತೊಱೆಯನೆಯ್ದಿ ತನ್ನದೀತೀರದೊಳ್ ಬೀಡಂ ಬಿಟ್ಟಿರ್ದುದುಂ ಗುಪ್ತ ಚರನೊರ್ವನತಿ ತ್ವರಿತಗತಿಯಿಂ ಬಂದು ದೂರಾವನತ ಮಸ್ತಕಂ—

ಕಂ ॥ ಮಧು ಮಧುರೆಯೊಳಿರೆ ಶೂಲಾ
ಯುಧಮಾ ಪುರವರದ ಪೂರ್ವ ನಂದನ ವನದೊಳ್ ॥
ವಧುವುಂ ತಾನುಂ ರತಿಸುಖ
ಮಧುಸೇವಾ ಮತ್ತರತ್ತ ಮೆಯ್ಯ್ಮಱೆದಿರ್ದರ್ ॥ ೫೬ ॥

ಎಂದು ಬಿನ್ನವಿಸೆ ಶತ್ರುಘ್ನಂ ಮನದೆ ಕೊಂಡೊಂದು ಲಕ್ಕ ಕುದುರೆವೆರಸು ದಾಟಿಯಿಟ್ಟು ಮಧುವಿರ್ದ ಬನಮಂ ಮುತ್ತಿ ಪೊಱವೊಟಲೊಳಿರ್ದಿರಂ ಪೇಸೇಟಿ ಕೊಲ್ವುದಂ ಮಧು ಕೇಳ್ದು ವನದಿಂ ಪೊಱಮಟ್ಟು ಯುದ್ಧಂಗೆಯ್ವ ಸಮಯದೊಳ್ ಸೇನಾಪತಿ ಕೃತಾಂತ ವಕ್ತ್ರಂ ಮಧು ತನೂಭವನಪ್ಪ ಲವಣಾರ್ಣವನ ಜೀವನಮಂ ಬಡಬಾನಲನಂತೆ ತವಿಸಿ ಕೃತಾಂತ ವಕ್ತ್ರಕ್ಕೆ ಸೋವತಂಮಾಱ್ಪುದು ಮದಂ ಕಂಡು ಮಧು ಮುಳಿದು ಬಂದು ಶತ್ರುಘ್ನಂ ಕಾದಲೆಯ್ತು ರ್ಪುದುಂ ತನ್ನ ಶೂಲಾಯುಧಮತ್ತಲಿರ್ದುದುಮಂ ತನ್ನ ಸುತಂ ಸತ್ತುದುಮಂ ಬಗೆದು ತನ್ನ ಸಾವಂ ನಿಶ್ಚಯಿಸಿ ಕೈದುವಿಂಗೆ ಕೈಯನುಯ್ಯದೆ ವಿರೋಧಿಬಲದಾಯುಧಕ್ಕೆ ಮೆಯ್ಯ ನೊಪ್ಪಿಸಿ ತನ್ನ ಸಹಸ್ರ ಕುಂತಲಮಂ ಪಂಚಮುಷ್ಟಿಯಿಂ ಪಱಿದುಕೊಂಡು ಬಾಹ್ಯಾಭ್ಯಂತರ ಪರಿಗ್ರಹಂಗಳಂ ಪರಿತ್ಯಾಗಂಗೆಯ್ದು ಮಹಾವ್ರತಮನೇಱಿಸಿಕೊಂಡು ಸಂನ್ಯಸನದಿಂ ಪ್ರಾಣ ಪರಿತ್ಯಾಗಂಗೆಯ್ದು ಸನತ್ಕುಮಾರ ಕಲ್ಪಕ್ಕೆ ಸಂದನಿತ್ತಲ್—

ಕಂ ॥ ಪಗೆಯಂ ಸಾಧಿಸಿ ರಿಪು ವನಿ
ತೆಗಿತ್ತು ವೈಧವ್ಯ ದೀಕ್ಷೆಯಂ ಶತ್ರುಘ್ನಂ ॥
ಬಗೆದ ಬಗೆ ಕೂಡೆ ಜಯ ಲ
ಕ್ಷ್ಮಿಗೆ ವಲ್ಲಭನಾಗಿ ಮಧುರೆಯೊಳ್ ಸುಖಮಿರ್ದಂ ॥ ೫೭ ॥

ಇತ್ತ ವಿಜಯಾರ್ಧ ಪರ್ವತದ ದಕ್ಷಿಣ ಶ್ರೇಣಿಯ ರತ್ನಪುರಮನಾಳ್ವ ರತ್ನರಥಂಗಂ ಚಂದ್ರಾನನೆಗಂ ಪುಟ್ಟಿದ ಕನ್ಯಾರತ್ನಮಂ ಮನೋರಮೆಯನಾರ್ಗೆ ಕುಡುವ ಮೆಂದು ನಾರದನಂ ಬೆಸಗೊಳ್ವುದುಂ ತ್ರಿಖಂಡ ಮಂಡಲಾಧಿಪತಿಯಪ್ಪ ಲಕ್ಷ್ಮೀಧರಂಗೆ ಕುಡುವುದೆನೆ ರತ್ನರಥನುಮವನ ಮಕ್ಕಳಪ್ಪ ಹರಿಯುಂ ಮನೋವೇಗನುಂ ನೊದಲಾಗೆಲ್ಲರುಂ ಕೇಳ್ದು ಕಲುಷವಶ ಗತರಾಗಿ—

ಕಂ ॥ ಕೆಳೆಯು ಪಗೆಯೊಡನೆ ಪಗೆಯಂ
ಬಳೆಯಿಪುದಂ ಬಿಟ್ಟು ಕೂಸುಗೊಟ್ಟನುನಯಮಂ ॥
ಬಳೆಯಿಸುವುದೆಂದು ನುಡಿದೀ
ಗಟಿಪಂ ನಮ್ಮಳವನಱಿಯಲೊಡರಿಸಿ ನುಡಿದಂ ॥ ೫೮ ॥

ಎಂದು ಕಿಡೆನುಡಿದು ಪೊಜಮಡಿಸಿ ಕಳೆಯೆ ಕಡುಮುಳಿದು ನಾರದಂ ಮನೋರಮೆಯ ರೂಪಂ ಪಟದೊಳ್ ಬರೆದು ಲಕ್ಷ್ಮಣಂಗೆ ತೋಱಿ ತನ್ನಂ ಪರಿಭವಿಸಿದುದುಮಂ ಪೇೞ್ದು ಕೇಳ್ದು—

ಕಂ ॥ ನೆಲನೆಡೆ ನೆಱಿಯದು ಭೂಚರ
ಬಲಕ್ಕೆ ಖೇಚರ ಬಲಕ್ಕೆ ನಭಮೆಯ್ದುದಿನಲ್ ॥
ಬಲಭದ್ರಯುತಂ ಲಕ್ಷ್ಮಣ
ನಲಂಘ್ಯಬಲನೆತ್ತಿ ಮುತ್ತಿದಂ ತತ್ಪುರಮಂ ॥ ೫೯ ॥

ಅಂತು ರತ್ನಪುರಮಂ ಮುತ್ತುವುದುಂ ರತ್ನರಥಂ ತನ್ನ ಮಕ್ಕಳ್ವೆರಸು ಮಹಾಯುದ್ಧಂಗೆಯ್ದು ವಿರಥನಾಗಿ ಬೆನ್ನೀಯೆ ಬೆನ್ನನೆ ಪರಿತಂದು—

ಕಂ ॥ ಕಡುಗಲಿತನದಿಂದೆನ್ನಂ
ಬಿಡೆನುಡಿದು ಪೊಡರ್ಪನುೞಿದು ಬೆಳ್ಕೆರಲೆಯಪ್ಪೋಲ್ ॥
[1]ಕಡುಗಲಿಗಳಾದಿರೆನುತುಂ
ತೊಡೆಯಂ ಪೊಯ್ದಾರ್ದು ನಾರದಂ ನರ್ತಿಸಿದಂ ॥ ೬೦ ॥

ಅಂತು ಮುಟ್ಟಿ ಮೂದಲಿಸಿ ಪೋಗಲೆಡೆಗೆಟ್ಟು ಮಗುೞ್ದು ಬಂದು ಲಕ್ಷ್ಮಣಂಗೆ ಪೊಡೆವಟ್ಟು ಮನೋರಮೆಯಂ ಕೊಟ್ಟು ರಾಮಂಗೆ ಶ್ರೀಕಾಂತೆಯಂ ಕೊಟ್ಟಾಕ್ಷಿಸನನಪ್ಪುಕೆಯ್ವುದುಮಾತಂ ಬೆರಸು ದಕ್ಷಿಣಶ್ರೇಣಿಯೆಲ್ಲಮಂ ಬಾಯ್ಕೇೞಿಸಿ ನಿಖಿಲ ತ್ರಿಖಂಡ ವಲ್ಲಭನಾಗಿ ವಿಶಲ್ಯಾಸೌಂದರಿಯುಂ ರೂಪವತಿಯುಂ ವನಮಾಲೆಯುಂ ಕಲ್ಯಾಣಮಾಲೆಯುಂ ರತಿಮಾಲೆಯುಂ ಜಿತಪದ್ಮೆಯುಮಭಯಮತಿಯುಂ ಮನೋರಮೆಯುಮೆಂಬೆಣ್ಬರ್ ಕನ್ನೆಯರ್ಗಂ ಮಹಾದೇವೀಪಟ್ಟಮಂ ಕಟ್ಟಿ—

ಕಂ ॥ ಇವರಾದಿಯಾಗೆ ಲಕ್ಷ್ಮಣ
ನವಾರ್ಯ ಶೌರ್ಯಂ ವಿವಾಹ ಮಾಂಗಲ್ಯ ಮಹೋ ॥
ತ್ಸವದಿಂ [2]ಪದಿನೆಣ್ಬ್ಬಾಸಿರ
ಮುವರೋಧ ವಧೂಜನಕ್ಕೆ ವಲ್ಲಭನಾದಂ ॥ ೬೧ ॥

ಆ ಮಹಾಬಲ ಪರಾಕ್ರಮನಪ್ಪ ರಾಘವದೇವನುಂ ಜನಕಸುತೆಯುಂ ಪ್ರಭಾವತಿಯುಂ ರತಿಯುಂ ಶ್ರೀಕಾಂತೆಯುಮೆಂಬ ನಾಲ್ವರ್ ಮಹಾದೇವಿಯರ್ ಮೊದಲಾಗೆಯೆಣ್ಬಾಸಿರಮಂತಃಪುರಕ್ಕಧಿಪನಾದನಿಂತು ರಾಮಲಕ್ಷ್ಮಣರ್ ಪಲಕಾಲಂ ರಾಜ್ಯ ಸುಖಮನನುಭವಿಸುತ್ತಿರೆ ಲಕ್ಷ್ಮಣನ ಮನೋವಲ್ಲಭೆ ವಿಶಲ್ಯಾಸೌಂದರಿಗೆ

1. ಕಡುಗಡಿಯರಾದಿರೆ. ಚ. 2. ಪದಿನಾಸ್ರಾಸಿರ. ಖ.

ಶ್ರೀಧರಂ ರೂಪವತಿಗೆ ಪೃಥ್ವೀತಿಲಕಂ ವನಮಾಲೆಗರ್ಜುನಂ ಕಲ್ಯಾಣಮಾಲೆಗೆ ಮಂಗಲಂ ರತಿಮಾಲೆಗೆ ಶ್ರೀಕೇಳಿ ಜಿತಪದ್ಮೆಗೆ ವಿಮಲಪ್ರಭಂ ಅಭಯಮತಿಗೆ ಸತ್ಯಕೀರ್ತಿ ಮನೋರಮೆಗೆ ಸುಪಾರ್ಶ್ವನೆಂಬ ಮಕ್ಕಳಾದರಿಂತರ್ಧ ಚಕ್ರವರ್ತಿಯ ಮಕ್ಕಳೆಣ್ಬರುಮನುದಿನ ಪ್ರವರ್ಧಮಾನ ಮನೋಹರಾಕಾರರಾಗಿ ಬಳೆಯುತ್ತುಮಿರೆ ಮತ್ತೊಂದು ದಿವಸಂ—

ಕಂ ॥ ಜನಕಸುತೆ ನಾಲ್ಕು ನೀರ್ ಮಿಂ
ದು ನಾಡೆ ಬೆಳ್ವಸದನಂ ವಿರಾಜಿಸೆ ಕಾಂಚೀ ॥
ನಿನದಂ ಕೈಮಿಗೆ ಲಕ್ಷ್ಮೀ
ವನಿತೆಯವೋಲ್ ಸೆಜ್ಜೆವನೆಗೆ ಬಿಜಯಂಗೆಯ್ದಳ್ ॥ ೬೨ ॥

ಅಂತು ಸೂಟ್ಸಿವಂದು ನಿಶಾವಸಾನ ಸಮಯದೊಳ್—

ಕಂ ॥ ಶರಭ ದ್ವಿತಯಂ ನಿಜ ಮುಖ
ಸರೋಜಮಂ ಬಂದು ಪುಗುವುದಂ ಪುಷ್ಪಕದಿಂ ॥
ಧರಣಿಗೆ ಬೀಟ್ಟಿರ್ಪುದನಾ
ಹರಿಣೇಕ್ಷಣೆ ಸೀತೆ ಕಂಡಳೆರಡಂ ಕನಸಂ ॥ ೬೩ ॥

ಅಂತು ಕಂಡ ಸ್ವಪ್ನಂಗಳಂ ರಾಮಸ್ವಾಮಿಗಜಿಪುವುದುಂ—

ಕಂ ॥ ಅಮಿತ ಪರಾಕ್ರಮರಿವರೆನಿ
ಪ ಮಕ್ಕಳಂ ಪಡೆವೆ ಶರಭಯುಗ ದರ್ಶನದಿಂ ॥
ಕಮಲಾನನೆ ಮತ್ತಿನ ಕನ
ಸು ಮನೋಹರಮಲ್ತು ಖೇದಮಂ ಪುಟ್ಟಿಸುಗುಂ ॥ ೬೪ ॥

ಎಂದು ಕನಸಿನ ಫಲಮಂ ಪೇಟ್ದಿರ್ವರುಮೇವಯಿಸುತ್ತುಮಿರೆ ಕೆಲವು ದಿವಸಕ್ಕೆ ಸೀತೆಗೆ ಗರ್ಭಚಿಹ್ನಂಗಳ್ ತೋಜಿದುವಾ ಮಹಾನುಭಾವೆಗೆ ಜಿನ ಪೂಜೋತ್ಸವ ಮಂಮಾಟ್ಪ ಬಯಕೆ ಸಮನಿಸೆ ಜಿನಮಹಾಮಹಮಂ ಮಹೇಂದ್ರೋದ್ಯಾನದ ಜಿನಾಲಯಂಗಳೊಳೆಲ್ಲಮನುದಿನಂ ಮಾಡುತ್ತುಮಿರಲೊಂದು ದಿವಸಂ—

ಕಂ ॥ ಕಟ್ಟಿದುದಂ ಕಳೆವವರಾರ್
ನೆಟ್ಟನೆ ಸತ್ಪಥದೊಳಿಸಗೆಯುಂ ಬೇವಸವೆಂ ॥
ಟ್ಟಿಟ್ಟುವುದಂ ಸೂಚಿಪವೋಲ್
ಪುಟ್ಟಿದುದಾ ಸತಿಗೆ ದಕ್ಷಿಣಾಕ್ಷಿ ಸ್ಪಂದಂ ॥ ೬೫ ॥

ಆಗಳಾ ದುರ್ನಯಕ್ಕೆ ಸೀತೆ ಭಯಸ್ಥೆಯಾಗಿ ಗೃಹ ಮಹತ್ತರನಂ ಕರೆದಾರೇನಂ ಬೇಡಿದೊಡವರ್ಗದಂ ಕುಡುವುದೆಂದು ಪೇಟ್ದು ತಾನುಮನುದಿನಂ ಜಿನಾಭಿಷೇಕ ಮುಮಂ ಜಿನಪೂಜೆಗಳುಮಂ ಮಾಡುತ್ತುಮಿರಲೊಂದುದಿವಸಂ [1]ಜನಪದ ಜನಂ ಬಂದು ಬಿನ್ನವಿಸಲಣ್ಮಾದಿರೆ ರಾಮಸ್ವಾಮಿ ನಿಮ್ಮ ಬಂದ ಕಾರ್ಯಮನಂಜದೆ ಪೇಟ್ಮೆಂಬುದುಂ ಪ್ರಜೆಗಳನುಮತದಿಂ ವಿಜಯನೆಂಬ ಮಹತ್ತರನಿಂತೆಂದಂ—

ಚ ॥ ವ್ಯಸನಿ ದುರಾತ್ಮನಪ್ಪ ದನುಜಂ ಕರಮೆಡ್ಡಮೆನಿಪ್ಪ ಸೀತೆಗಾ ।
ಟಿಸಿ ಪಿಡಿದುಯ್ದೊಡಾ ಖಲ ನಿವಾಸದೊಳಿನ್ನೆಗಮಿರ್ದಳಂ ವಿಚಾ ॥
ರಿಸದೊಡಗೂಡಿ ಮುನ್ನಿನವೊಲಿರ್ಪುದು ಪಾಟಿಯೆ ಲೋಕ ಸೀಮೆಯಂ ।
ವಸುಧೆಗಧೀಶನೇಳಿಸುವುದುಂ ಪ್ರತಿಪಾಲಿಪರಾರೊ ಧರ್ಮಮಂ ॥ ೬೬ ॥

ಎಂಬುದುಂ ರಾಮನದಂ ಕೇಳ್ದು—

ಕಂ ॥ ಜನಮೆಂದಂತುಟಿ ಭಾವಿಸ
ದನಯಮನಾಂ ನೆಗಟ್ಟಿನೆಂದು ಪಶ್ಚಾತ್ತಾಪಂ ॥

---

1. ಇಲ್ಲಿ ಗ. ಘ. ಪುಸ್ತಕಗಳ ಪಾಠವು ಮುಂದೆ ಬರೆದಿರುವಂತಿದೆ:—

ಮು॥ಸ್ರ॥ ಉಜಿತಿದಂಡಾಧ್ಯಕ್ಷನಕಂ ಪಾಮರ ಕುಲದೊಳಗೊರ್ವಂ ಬಿಸುಟ್ಟೋಪಳಂ ಮು ।
ತ್ತಜುದಿಂಗಳ್ ಪೋಗೆ ಕೂಡಿರ್ದಿರವನಜುದು ದಂಡಕ್ಕೆ ಸರ್ವಸ್ವಮುಂ ಬಿ ॥
ಳ್ಕುಜುವನ್ನಂ ಬೇಡಲಂತೊಕ್ಕಲಿಗರ ಬಳಗಂ ತಮ್ಮೊಳೊಂದಾಗಿ ಲೋಕ ।
ಕ್ಕೆಜಿಯಂ ರಾಮಂಗೆ ನಾಮಿಮ್ಮೊಜಿಯಿಡುವಮೆನುತ್ತಂದಯೋಧ್ಯಕ್ಕೆ ಬಂದರ್ ॥

ಅಂತು ಬಂದವಸರಂಬಡೆದರಮನೆಯಂ ಪೊಕ್ಕು ರಾಮಂಗೆ ತಮ್ಮ ಬಂದಕಾರ್ಯ ಮುಂ ಬಿನ್ನವಿಪುದುಮುದಂ ವಿಚಾರಿಸಿ ನ್ಯಾಯದಿಂ ಸಂತೋಷಮುಪ್ಪಂತವರ್ಗೆ ನುಡಿಯು ಲಸಿತರೊಳ್ ನಿಲ್ಲದೆ ಮತ್ತಮೊಕ್ಕಲಿಗನ ತಲೆಯೊಳ್ ಮರುಳುಂಟೆಂಬುದಂ ನನ್ನಿ ಮಾಡಿ ರಾಘವಂಗಿಂತೆಂದರ್—

ವ್ಯಸನಿ ದುರಾತ್ಮನಪ್ಪ ದನುಜಂ.....(ಇತ್ಯಾದಿ)

ಅಂತುಮಲ್ಲದೆ ದುರಾಚಾರನಪ್ಪ ರಾವಣನ ಕೆಲದೊಳಿರ್ದ ಜಾನಕಿಯುಂ ತಂದು ಮಹಾದೇವೀಪಟ್ಟಂಗಟ್ಟಿ ಕೈಕೊಂಡಿರಂತಪ್ಪೊಡದುವುಂ ದೋಷಮಾಗಲಿವೇಟ್ಕುಮೆನಲದಂ ರಾಮುಂ ಕೇಳ್ದು—

ತನಗಧಿಕಮಾಗೆ ರಘುನಂ
ದನನುಬ್ಬರಮೆನಿಸೆ ತಳಿದನಂದುಬ್ಬೆಗಮುಂ ॥ ೬೬ ॥

ಜಸಮುಂ ಧರ್ಮ್ಮುಮುಟ್ಟುವಂ
ದಿಸಗುವುದೇಳಿದಿಕೆಯೆಂದು ವೈದೇಹಿಯುಮಂ ॥
ಬಿಸುಡಲ್ ಬಗೆದಂ ಮನುವಂ
ಶ ಸಮುದ್ಭವರಾರುಮುಚಿತಮಂ ವಿಾಱುವರೇ ॥ ೬೭ ॥

ಅಂತು ರಾಮಸ್ವಾಮಿ ಸೀತಾದೇವಿಗತಿಸ್ನೇಹಿತನಾಗಿಯುಂ ಜನಾಪವಾದಕ್ಕೆ ಸೆಡೆದು ಪರಿಹರಿಸಲೊಡರಿಸಿ ಲಕ್ಷ್ಮಣನಂ ಬರಿಸಿ ಕಟ್ಟೀಕಾಂತದೊಳಾ ವ್ಯತಿಕರಮನಱಿಪೆ ಸೌಮಿತ್ರಿ ಕೇಳ್ದು ಕಡುಮುಳಿದು ನಿಮ್ಮಡಿಗಳವಿವೇಕಿಗಳಂತರ್ಥ ನಾಶಾದಿ ವಚನ ಪಂಚಕಂಗಳಂ ನುಡಿಯಲಾಗದದನಿಂತೇಕೆ ನುಡಿವಿರೆಂದು ಮತ್ತಮಿಂತೆಂದಂ–

ಕಂ ॥ ಸತಿ ಸೀತಾದೇವಿ ಪತಿ
ವ್ರತಾದಿ ಗುಣ ರತ್ನಭೂಷಣಾಲಂಕೃತೆ ತ ॥
ತ್ಪತಿಯೊಳವಗುಣಮನೂರ್ಜಿತ
ಮತಿಗಳ್ ನಿಮ್ಮನ್ನರುಸಿರ್ವುದನುಚಿತಮಲ್ತೇ ॥ ೬೯ ॥

ಎನೆ ಲಕ್ಷ್ಮಣಂಗೆ ರಾಮಸ್ವಾಮಿಯಿಂತೆಂದಂ—

ಕಂ ॥ ಪುರುದೇವಂ ಮೊದಲಾಗಿರೆ
ದೊರೆವೆತ್ತಿಕ್ಷ್ವಾಕು ವಂಶದವನೀಶರೊಳಾಂ ॥
ಬರಮಿಲ್ಲ ದುಶ್ಚರಿತ್ರಂ
ದೊರೆಕೊಂಡಂದೆನ್ನ ಪೌರುಷಂ ದೊರೆಗಿಡದೇ ॥ ೭೦ ॥

ಅದಱಿಂ ನೀನಿದಂ ಮಾಕೊಳ್ಳದಿರೆಂಬುದುಂ ಲಕ್ಷ್ಮೀಧರನಿಂತೆಂದಂ—

ಕಂ ॥ ಸೀತೆ ಗುಣಂಗಿಡೆ ಸಕಲ ಧ
ರಾತಲವೊಡನಟ್ಟಿಗುಮಲ್ಲದಂದಾ ಸತಿಯಂ ॥
ಪ್ರೀತಿಯಿನರ್ಚಿಸಿ ದಿವಿಜ
ವ್ರಾತಂ ಕಱಿಗುಮೆ ನರೇಂದ್ರ ಪೂವಿನ ಮಟ್ಟಿಯಂ ॥ ೭೧ ॥

ಎಂದೆನಿತಾನುಮುಂ ರಾಮಸ್ವಾಮಿಗೆ ನುಡಿದೀ ಪೊಲ್ಲವಾತಂ ಪರೆಪಿದೊಕ್ಕಲಿಗರ ನಾಲಗೆಯಂ ಕಿಟ್ಟಿಕ್ಕುವೆನೆಂಬುದುಂ ಲಕ್ಷ್ಮಣನ ಕೈಯಂ ಪಿಡಿದಿದನೊಂದಂ

ಮಾಕೊರ್ಳ್ಕದಿರೆಂದು ತನ್ನಮೇಲೆ ಸೂರುಳ್ದು ಮಾರ್ನುಡಿಯದಂತು ಮಾಡಿ ಕೃತಾಂತ ವಕ್ತ್ರನಂ ಕರೆದು ಸೀತೆಯನೊರ್ವಳನೇ ಬೇಗಮುಯ್ದು ಭೀಮಾಟವಿಯೊಳಕ್ಕಿ ಬಾರೆಂದು ಪೇಟ್ಪುದುಮಾ ಮಾತಂ ಲಕ್ಷ್ಮಣಂ ಕೇಳ್ದು ತಲ್ಲಳಿಸಿ ರಾಮಸ್ವಾಮಿಯ ಪಾದಾರವಿಂದಕ್ಕೆ ವಿನತನಾಗಿ ಮತ್ತಮಿಂತೆಂದಂ—

ಚ॥ ಜನಕ ತನೂಜೆ ನೆಟ್ಟನೆ ಮಹಾಸತಿ ಗರ್ಭಿಣಿ ಪಾಪಭೀರು ಕಾ।
ನನಮತಿ ರೌದ್ರಮಲ್ಲಿ ಪಟಿಗಂಜದೆ ಪಾತಕಮಕ್ಕುಮೆಂಬಿದಂ॥
ನೆನೆಯದೆ ಬಾಯ್ಗೆ ಬಂದ ತೆಱದಿಂ ಪೆಱರೆಂದೊಡೆ ಕೇಳ್ದ ಬೆಟ್ಟವೆ।
ಟ್ಟನೆ ಬಿಸುಡೆಂದು ನಿಷ್ಕರುಣ ವೃತ್ತಿಯಿನಿಂತುಸಿರಲ್ಕೆ ತಕ್ಕುದೇ ॥ ೭೨॥

[1]ಎಂದಟಲ್ದು ನುಡಿದಟ್ಟ ಕಟಿಯದೆನಗೆ ಕ್ಷಮಿಯಿಸುವುದೆನೆ ರಾಘವನಿಂತೆಂದಂ—

ಕಂ॥ ಪಟಿಯಕ್ಕೆ ಪಾಪಮಕ್ಕೆಮ
ಪಟುಗಟಿಪುವೆನೆನಗೆ ಕೂರ್ಪೊಡುಸಿರದಿರಿನ್ನೆಂ॥
ದಟಿಲದೆ ಸೀತೆಯ ಪಂಬಲ
ನುಟಿದೇಂ ಲೋಕಾಪವಾದ ಭೀರುವೊ ರಾಮಂ ॥ ೭೩॥

ಅಂತು ಸೌಮಿತ್ರಿಯನುಬ್ಬೆಗಂ ಬಡದಿರೆಂದು ಬಾರಿಸಲೊಡಂ ಸಭೆಯಿನೆಟ್ಟು ಪೋಪುದುಮನಂತರಂ ಕೃತಾಂತವಕ್ತ್ರನಂ ರಾಮಸ್ವಾಮಿಯೆಂದನಯೋಧ್ಯಾನಗರದ ಸಮ್ಮೇದ ಪರ್ವತದ ಸಮೀಪದೆಡೆಯ ಜಿನಾಲಯಂಗಳಂ ವಂದಿಸಿ ನಿಮ್ಮ ಬಯಕೆಯಂ ತೀರ್ಚಿ ಬರ್ಪಂ ಬನ್ನಿಮೆಂದು ಸೀತೆಯನೊಡಗೊಂಡು ಪೋಗಿ ಭೀಮಾಟವಿಯೊಳ್ ನಿರ್ಜಂತುಕ ಪ್ರದೇಶದೊಳ್ ಬಿಟ್ಟು ಬರ್ಪುದೆನೆ—

ಕಂ॥ ಸೇವೆಯೆ ಕಷ್ಟಂ ಸೀತಾ
ದೇವಿಯನೀಡಾಡಿ ಬರ್ಪುದಡವಿಯೊಳೆನೆ [2]ದೋ।
ಷಾವಿಲಮನಳ್ಕಿ ರಾಘವ
ದೇವಂಗೆ ಕೃತಾಂತವಕ್ತ್ರನದನೇಗೊಂಡಂ ॥ ೭೪॥

ಅಂತು ಬೆಸನಂ ಕೈಕೊಂಡು ಸೀತಾದೇವಿಯ ಕೆಲಕ್ಕೆ ಬಂದು—

---

1. ಎಂದು ನುಡಿದಟಲ್ದು ಸೀತಾದೇವಿಯಂ ಪತಿವ್ರತಾಗುಣ ಮಣಿ ಮಂಡನೆಯನಟ್ಟಿ.
2. ದೋಷಾವಿಲನುಮಳ್ಕಿ. ಚ. ಗ. ಘ

ಕಂ ॥ ರಾಮಂ ಕಲಿಸಿದ ತೆಱದಿಂ
ರಾಮೆಗೆ ಪುಸಿನುಡಿದು ರಥಮನೇಱಿಸಿ ಕೊಂಡಾ ॥
ಭೀಮಾಟವಿಯಂ ಕರಿ ಹರಿ
ಭೀಮಾಟನಮಂ ಕೃತಾಂತಮುಖನೆಯ್ತಂದಂ ॥ ೭೫ ॥

ಆ ಮಹಾಗಹನಮಂ ಪೊಕ್ಕು ತನ್ಮಧ್ಯ ನಿರ್ಝರ ವಾರಿಧಾರಾ ಪರೀತ ಗಿರಿ ದರೀ ಪ್ರದೇಶದೊಳ್ ಮಹಾಸತಿಯಂ ರಥದಿಂದಿಱಿಪಿ ಮನ್ಯು ಗದ್ಗದ ಕಂಠನಾಗಿ ಕಣ್ಣೀರ್ಗಳಂ ನೆಗಪುವುದುಂ ಕೃತಾಂತವಕ್ತ್ರನಂ ಸೀತಾದೇವಿ ಕಂಡಿದೇಕೆ ಶೋಕಂಗೆಯ್ದಪೆ ಪೇಱಿಂದೊಡಾತನೆಂದನಬ್ಬಾ ನಿಮ್ಮಮೇಲೆ ಲೋಕಮೆಲ್ಲಮಭಿಯೋಗಮನಿಟ್ಟೊಡರಸಂ ನಿಮ್ಮನಡವಿಯೊಳ್ ಬಿಸುಟ್ಟು ಬರವೇೞ್ದೊಡಿಲ್ಲಿಗೆ ತಂದೆನೆನೆ ಸೀತಾದೇವಿ ಕೇಳ್ದು ಮೂರ್ಛೆವೋಗಿ ಕೆಱಿದುಂ ಬೇಗದಿಂ ಚೇತರಿಸಿ ಕೃತಾಂತವಕ್ತ್ರಂಗಿಂತೆಂದಳ್ ರಾಮದೇವರ್ ಸಕಲ ವಸುಧಾ ತಲಮಂ ನ್ಯಾಯದಿಂ ಪ್ರತಿಪಾಲಿಸುವುದು ದೇವ ಗುರು ಪೂಜೆಯಂ ಮಱೆಯದಿರ್ಪುದು ಜನಾಪವಾದ ಭಯದಿಂದೆನ್ನಂ ಬಿಸುಟ್ಟಂತೆ ಮಿಥ್ಯಾದೃಷ್ಟಿಗಳ ನುಡಿಯಂ ಕೇೞ್ವರ್ಹತ್ಪರಮೇಶ್ವರ ಶ್ರೀಧರ್ಮಮಂ ಬಿಸುಡದಿರ್ಪುದೆನಗೆ ದಯೆಗೆಯ್ವರಪ್ಪೊಡೆಂದಳೆಂಬುದಂ ಮಱೆಯದೆ ಪೇಱಿಂದು ಬಾಷ್ಪ ಜಲ ಲುಲಿತ ಲೋಚನೆ ತಲೆಯಂ ಬಾಗಿ ನೆಲನಂ ಬರೆಯುತ್ತುಮಿರ್ದಳಂ ಕೃತಾಂತ ವಕ್ತ್ರಂ ನೋಡಿ—

ಕಂ ॥ ತರುಣಿಯನಂತರ್ವತ್ನಿಯ
ನರಣ್ಯದೊಳ್ ಬಿಸುಡವೇೞ್ದೊಡೀ ಬೆಸನಂ ಕಾ ॥
ಪುರುಷನೆನೇಗೊಂಡೆಂ ಕಿಂ
ಕರ ಭಾವದಿನಪ್ರಶಸ್ತಮಾವುದುಮುಂಟೇ ॥ ೭೬ ॥

ಎಂದು ತನ್ನಂ ತಾನೆ ನಿಂದಿಸಿಕೊಂಡು ಕಣ್ಣೀರ್ಗಳಂ ಸಿಡಿಯುತ್ತುಂ ಸೀತಾದೇವಿಗೆ ಕ್ಷಮಿಯಿಸುವುದೆಂದು ಪೊಡೆವಟ್ಟು ಬೀೞ್ಕೊಂಡಯೋಧ್ಯೆಗೆ ಪೋದ ನಿತ್ತಲ್—

ಕಂ ॥ ಗುಣವತಿ ರಾಘವನಂ ಲ
ಕ್ಷ್ಮಣನಂ ನೆನೆ ನೆನೆದು ಶೋಕ ಪಾವಕನೆರ್ದೆಯೊಳ್ ॥
ಮಣಿಯದೆ ದಳ್ಳಿಸೆ ಕಣ್ಗಳ
ಪೊಣರಿಂ ಕಣ್ಬನಿಗಳುಣ್ಮೆ ದೆಸೆಗೆಟ್ಟರ್ದಳ್ ॥ ೭೭ ॥

ಅಂತಿಷ್ಟ ವಿಯೋಗ ವಿಕಲೆ ದಶ ದಿಶಾಮುಖ ದತ್ತ ದೃಷ್ಟಿ ಪೆಱರಾರುಮಂ ಕಾಣದೆ—

ಕಂ ॥ ಜಿನ ಮುನಿಯಂ ಪೆಱವುಂ ಪ್ರಾ
ಣಿ ನಿಕಾಯಮನಕ್ಕೆ ನಾಡೆ ನೋಯಿಸಿದೆಂ ಮು ॥
ನ್ನಿನ ಜನ್ಮದೊಳಂತಲ್ಲದೊ
ಡೆನಗಿನಿವಿರಿದೊಂದವಸ್ಥೆ ಬಱುದಾದಪುದೇ ॥ ೭೮ ॥

ಎಂದು ಜಿನಾಗಮ ಕುಶಲೆಯಪ್ಪುದಱಿಂ ತನ್ನಂ ತಾನೆ ನಿಂದಿಸಿಕೊಂಡು ಸಂತಯಿಸಿ—

ಚ ॥ ಅಡವಿಯೊಳೂರೊಳಾವೆಡೆಯೊಳಾದೊಡಮೆನ್ನರುಮಪ್ಪ ಕಾಲದೊಳ್ ।
ಕಿಡುವರೆ ಕೇಡು [1]ಮೂಡಿದವರಪ್ಪೊಡೆ ನಿರ್ಮಲ ಜೈನ ಧರ್ಮಮಂ ॥
ಪಿಡಿದುಪಸರ್ಗಮಂ ಬಗೆಯದಾಗಮದಿಷ್ಟದಿನೆನ್ನ ಜೀವಮಂ ।
ಬಿಡುವೆನಮೋಘಮೆಂದು ತೊಱೆದಳ್ ಜನಕಾತ್ಮಜೆ ಶೋಕ ವೇಗಮಂ ॥೭೯॥

ಅಂತು ವಿಗತ ಶೋಕವೇಗೆ ಮಹಾಋಷಿಯರ್ಕಳ್ ಮಹಾಗಹನದೊಳ್ ತಪಂಗೆಯ್ದುಪವರ್ಗಮಂ ಸಾಧಿಸುವರದಱಿಂದೆನಗಮಿಾ ಪ್ರದೇಶಮೊಳ್ಳಿತ್ತು ಸಮನಿಸಿತ್ತು ನೋಂತುಂ ಪಸಿದುಮುಂತ್ಯದೊಳ್ ಸಂನ್ಯಸನದಿಂ ಪರತ್ರೆಯಂ ಸಾಧಿಸುವೆನೆಂದು ಪರಮಾಗಮ ಭಾವನೆಯಿಂದಿರ್ಪನ್ನೆಗಮಾ ಪ್ರಸ್ತಾವದೊಳ್—

ಕಂ ॥ ಜನಕ ತನೂಜೆಯ ಸುಕೃತವೆ
ಮನುಷ್ಯ ರೂಪಾಗಿ ಬರ್ಪ ತೆಱದಿಂ ನೃಪನಂ ॥
ದನನೊರ್ವನಾ ಮಹಾಕಾ
ನನಕ್ಕೆ ಬಲಸಹಿತಮಾನೆವೇಂಟಿಗೆ ಬಂದಂ ॥ ೮೦ ॥

ಅಂತು ಬಂದನತಿ ದೂರದೊಳ್—

ಕಂ ॥ ವನ ದೇವತೆಯೋ ಲಕ್ಷ್ಮಿಯೊ
ವನಿತೆಯೊ ದಿವದಿಂದಮಿಱಿದ ಮೇನಕೆಯೋ ಪೇ ॥
ಱೆನುತುಂ ಜಾನಕಿಯಂ ಲೋ
ಚನ ಪಥದೊಳ್ ಮುಂದೆ ವಜ್ರಜಂಘಂ ಕಂಡಂ ॥ ೮೧ ॥

ಅಂತು ಕಂಡೆಯ್ದೆ ವಂದು ವಿಸ್ಮಯ ಸ್ತಿಮಿತ ಲೋಚನನಬ್ಬಾ ನೀಮಾರ್ಗೇ ನಿಮಿತ್ತಮಿಾ ಕಾನನದೊಳಿರ್ದಿರೆಂಬುದುಮನವದ್ಯ ಚರಿತನೆಂದಱಿದಿಂತೆಂದಳಾಂ

1. ಮೂಡಲವರಪ್ಪೊಡೆ ಗ.

ಜನಕ ತನೂಜೆಯೆಂ ಪ್ರಭಾಮಂಡಲನನುಜೆಯೆಂ ರಾಮಸ್ವಾಮಿಯ ಭಾರ್ಯೆ ಸೀತಾ ದೇವಿಯೆಂಬೆನೆನ್ನಮೇಲೆ ಜನಪದ ಜನಂ ಪೊಲ್ಲನಪ್ಪ ರಾವಣನುಯ್ದಳಂ ತಂದು ವಿಚಾರಿಸದೆ ಮಹಾದೇವೀಪಟ್ಟಂಗಟ್ಟುವುದಾವುಚಿತಮೆಂದಿಟ್ಟಳವಿಟ್ಟು ನುಡಿಯೆ ಲೋಕಾಪವಾದಕ್ಕೆ ರಾಮಸ್ವಾಮಿ ನಾಣ್ಚಿ ಕೃತಾಂತವಕ್ತ್ರನೆಂಬ ಪಡೆವಳನಂ ಕರೆದು ಸಮ್ಮೇದಂ ಮೊದಲಾದ ತೀರ್ಥಸ್ಥಾನಂಗಳ ಜಿನಾಲಯಂಗಳಂ ವಂದಿಸಿ ಬರ್ಪ ಮೆಂದು ನಂಬೆ ನುಡಿದೊಡಗೊಂಡುಯ್ದು ಬಿಸುಟ್ಟುಬರ್ಪುದೆಂದೊಡಾತನೆನ್ನಂ ನಿರ ಪರಾಧೆಯಂ ತಂದಿಲ್ಲಿ ಬಿಸುಟು ಪೋದನೆಂದು ಮಹಾದೇವಿ ಕಣ್ಣೀರ್ಗಳಂ ನೆಗಪೆ—

ಕಂ ॥ ಸವಣಿಲ್ಲದ ಸೀತೆಯ ಶೋ
ಕ ವಹ್ನಿಯಂ ಸೂಕ್ತಿ ಸಲಿಲದಿಂದಾಜ್ಞಿಸಿದಂ ॥
ಭವ ವಿಭವದ ಚಪಲತೆಯಂ
ಸವಿಸ್ತರಂ ತಿಳಿಪಿ ವಜ್ರಜಂಘ ನರೇಂದ್ರಂ ॥ ೮೨ ॥

ಅನಂತರಮಿಂತೆಂದನಾಂ ಸೋಮ ವಂಶದರಸಂ ದ್ವಿರದ ವಾಹನಂಗಂ ಸುಬಂಧು ಮಹಾದೇವಿಗಂ ಪುಟ್ಟಿದೆಂ ವಜ್ರಜಂಘನೆಂಬೆಂ ಪುಂಡರೀಕಿಣೀ ಪುರಮನಾಳ್ವೆಂ ಜಿನ ಧರ್ಮ್ಮದ ದೆಸೆಯಿಂ ನೀಮೆನಗೆ ತಂಗೆವಿರಪ್ಪಿರ್ ಬಿಜಯಂಗೆಯ್ಯಿಮೆಂದು ಸಿವಿಗೆಯ ನೇರಿಸಿಕೊಂಡು ಪೋಗಿ ಕಾಂತಾರಮಂ ಕಟ್ಟದನುಕ್ರಮದಿಂ ಪುಂಡರೀಕಿಣೀ ಪುರ ಮನೆಯ್ದಿ ನಿಜ ರಾಜಭವನಮಂ ಪೊಕ್ಕು ಶೀಲವತಿವೆಸರ ನಿಜಾಗ್ರಜೆಯ ಮಾಡ ಕ್ಕುಯ್ದು ರಾಮದೇವರ ಭಾರ್ಯೆ ಜನಕತನೂಜೆ ಪ್ರಭಾಮಂಡಲನ ತಂಗೆ ಸೀತಾ ದೇವಿ ನಮಗಂ ಜಿನಧರ್ಮ್ಮದ ದೆಸೆಯಿಂದೊಡವುಟ್ಟಿದಳೆಂದು ಸಮರ್ಪಿಸಿ ಸೀತಾ ದೇವಿಯಂ ನಿಮಗೆ ಪ್ರಭಾಮಂಡಲನಿಂದಗ್ಗಳವಾಗೆ ಬೆಸಕೆಯ್ವೆನೆಂದು ಸಂತೋಷಂ ಬಡೆ ನುಡಿದು ವಜ್ರಜಂಘಂ ತನ್ನ ಮಾಡಕ್ಕೆ ಪೋದನಿತ್ತಲ್—

ಕಂ ॥ ಜಿನಮುನಿಗಾಹಾರಮನನು
ದಿನಮಿತ್ತು ಜಿನೇಂದ್ರ ಪೂಜೆಯಂ ಮಾಡುತ್ತುಂ ॥
ಮನನೊಸೆದು ಶೀಲವತಿಯುಂ
ಜನಕಜೆಯುಂ ಕೂಡಿ ದಿವಸಮಂ ನಡೆಯಿಸಿದರ್ ॥ ೮೩ ॥

ಇತ್ತಲಾ ಕೃತಾಂತವಕ್ತ್ರಂ ಪೋಗಿ ರಾಘವನಂ ಕಂಡು ಸೀತೆ ಕಲಿಸಿದ ಮಾತೆ ಲ್ಲಮಂ ಪೇಟೆ ಕೇಳ್ದು ಮೂರ್ಛೆವೋಗಿ ನೀಡಱಿಂದೆಚ್ಚತ್ತು ಮತ್ತಮತಿ ಪ್ರಲಾಪಂ ಗೆಯ್ಯೆ ಲಕ್ಷ್ಮಣಂ ಶೋಕ ವಿಕಲನಾಗೆ ಕೃತಾಂತವಕ್ತ್ರನವರ ಶೋಕಮನುಪ ಶಮಿಸುವುದುಂ ರಾಮಚಂದ್ರಂ ಚಂದ್ರಕಲಶನೆಂಬ ಸೀತಾ ಮಹತ್ತರನಂ ಕರೆದು—

ಚ ॥ ಜಿನಪತಿ ಪೂಜೆಯಂ ಮುನಿಜನಕ್ಕೆ ಚತುರ್ವಿಧಮಪ್ಪ ದಾನಮಂ ।
ಜನಕತನೂಜೆ ಪೇೞ್ದ ತೆಱದಿಂ ನೆಗೞ್ದಿಂದು ಪುರೋಹಿತಂಗೆ ಸ ॥
ಜ್ಞನ ಮಹಿತಂಗೆ ಪೇೞ್ದಿನಭಿರಾಮನಶೇಷ ಕಲಾ ಕಲಾಪ ಕೋ ।
ಕನದ ಭವಂ ಪರಾರ್ಥ ಚರಿತಂ ಪ್ರಥಿತಂ ಕವಿತಾಮನೋಹರಂ ॥ ೮೪ ॥

ಇದು ಪರಮ ಜಿನಸಮಯ ಕುಮುದಿನೀ ಶರಚ್ಚಂದ್ರ ಬಾಲಚಂದ್ರ
ಮುನೀಂದ್ರ ಚರಣ ನಖಕಿರಣ ಚಂದ್ರಿಕಾ ಚಕೋರ ಭಾರತೀ
ಕರ್ಣಪೂರ ಶ್ರೀಮದಭಿನವಪಂಪ ವಿರಚಿತಮಪ್ಪ
ರಾಮಚಂದ್ರಚರಿತ ಪುರಾಣದೊಳ್
ಸೀತಾಪರಿತ್ಯಾಗ ವರ್ಣನಂ
ಪಂಚದಶಾಶ್ವಾಸಂ.

ಷೋಡಶಾಶ್ವಾಸಂ

ಕಂ ॥ ಶ್ರೀಕಾಂತಂ ವಿಶದ ಯಶ
ಶ್ರೀಕಾಂತಂ ಚಂದ್ರಕಲಶನಂ ನಿಯಮಿಸಿದಂ ॥
ಸ್ವೀಕೃತ ಸತ್ಸಂಗಂ ದೂ
ರೀಕೃತ ದೋಷಾನುಷಂಗನಭಿನವಪಂಪಂ ॥ ೧ ॥

ಅಂತು ನಿಯಮಿಸುವುದುಂ ಪುರೋಹಿತಂ ಚಂದ್ರಕಲಶನನುದಿನಮಾ ಮಾರ್ಗದಿಂ ನೆಗಟ್ಟುತ್ತುಮಿರ್ಪುದುಮಿತ್ತಲ್—

ಕಂ ॥ ಆ ಸೀತೆ ಪೂರ್ಣಮೆನೆ ನವ
ಮಾಸಂ ಶ್ರವಣ ಪ್ರಸಕ್ತನೆನೆ ತುಹಿನ ಕರಂ ॥
ವಾಸವ ನಿಭರಂ ಶ್ರಾವಣ
ಮಾಸದ ಪುಣ್ಣಿಮೆಯ ಪಗಲೊಳಮಳಂ ಪೆತ್ತಳ್ ॥ ೨ ॥

ಅಂತಮಳಂ ಪೆತ್ತು ಮಹಾವಿಭೂತಿಯಿಂ ಜಾತೋತ್ಸವಮುಂ ಮಾಡಿ ಶುಭ ದಿನ ಮುಹೂರ್ತದೊಳಿರ್ವರ್ ತನೂಭವರ್ಗಂ ಲವನುಂ ಕುಶನುಮೆಂದು ಪೆಸರ ನಿಟ್ಟು ಶುಕ್ಲಪಕ್ಷದ ಚಂದ್ರಮನಂತನುದಿನೋಪಚಯಮನಪ್ಪುಕೆಯ್ದು ಶೈಶವಮ ನಧಃಕರಿಸಿದಿಂಬಲ್ಕೆ—

ಕಂ ॥ ಅವರಂ ಸಿದ್ಧಾರ್ಥಂ ಕಲಿ
ಸುವುದುಂ ಕಲ್ತರ್ ನಿರಂಕುಶರ್ ತಮ್ಮನ್ನರ್ ॥
ಭುವನದೊಳಿಲ್ಲೆಂಬಿನೆಗಂ
ಲವಾಂಕುಶರ್ ಕಲಿಗಳಂ ಚತುಷ್ಷಷ್ಟಿಗಳಂ ॥ ೩ ॥

ಮತ್ತಂ ಶಸ್ತ್ರಾಸ್ತ್ರವಿದ್ಯೆಗಳೆಲ್ಲಮಂ ನೆಱೆಯೆ ಕಲ್ತು ನವ ಯೌವನ ಪ್ರಾಪ್ತ ರಪ್ಪುದುಂ ವಜ್ರಜಂಘಂ ಶಶಿಮಾಲೆಯೆಂಬ ತನ್ನ ಮಗಳ್ವೆರಸು ಮೂವತ್ತಿರ್ವರ್ ಕನ್ನೆಯರಂ ಲವಂಗೆ ಕಲ್ಯಾಣೋತ್ಸವದಿಂ ಮದುವೆಯಂ ಮಾಡಿದಿಂಬಲ್ಕಯಮುಂ ಕುಶಂಗೆ ಪೃಥ್ವೀಪುರಮನಾಳ್ವ ಪೃಥುಗಮಾತನರಸಿಯಪ್ಪವೃತಮತಿಗಂ ಪುಟ್ಟಿದ ಕನಕಮಾಲೆಯಂ ಬೇಡಿ ಪೆರ್ಗಡೆಗಳನಟ್ಟುವುದುಮಾತನಿಂತೆಂದಂ—

ಕಂ ॥ ಎನ್ನ ಮಗಳಂ ಮದೀಯ ಕು
ಲೋನ್ನತಿ ಪೆಱಪಿಂಗುವನ್ನವಜ್ಞಾತ ಕುಲಂ ॥
ಗೆನ್ನನೆರೆದಟ್ಟಿದಂ ಗಡ
ತನ್ನಳವಂ ವಜ್ರಜಂಘನೇಂ ನಚ್ಚಿದನೋ ॥ ೪ ॥

ಎಂದು ಬಂದ ಪೆರ್ಗಡೆಗಳಂ ಗರ್ಜಿಸಿ ವಿಸರ್ಜಿಸುವುದುಮವರ್ ಬಂದವನ ದುರ್ವಿನಯ ವಚನಮಂ ಬಿನ್ನವಿಸೆ ವಜ್ರಜಂಘನತಿ ಕುಪಿತನಾಗಿ ಮೇಲೆತ್ತಿ ಬರ್ಪುದುಂ ವ್ಯಾಘ್ರರಥನೆಂಬ ಪೃಥುವಿನ ಪರಮ ಬಂಧು ಮುಳಿದು ಪೊಣರ್ಕೆಗೆ ಬರ್ಪುದು ಮವನನವಯವದೊಳೆ ಕಾದಿ ಪಿಡಿದು ಕಡುಕೆಯ್ದು ಮಾಱು ಮೇಲೇಱ್ತಿರ್ಪುದುಂ ಪೃಥು ಕೇಳ್ದು ತಾನುಮಿದಿರೆತ್ತಿ ಬರ್ಪುದುಂ ವಜ್ರಜಂಘನಱಿದು ಪುಂಡರೀಕಿಣೀ ಪುರಕ್ಕೆ ತನ್ನ ಮಗಂಗೆ ಬಱಿಯನಟ್ಟುವುದುಮಾತನೊಡನೆ ಸಮಸ್ತ ಸಾಮಗ್ರೀ ಸಹಿತನಾಗಿ—

ಕಂ ॥ ಕನ್ನೆಯನೀಯದ ಪೃಥುವಂ
ಬನ್ನಮನೆಯ್ದಿಸಲೊಡರ್ಚಿ ಮುನಿಸನುವಿಸೆ ತೋ ॥
ರ್ಪಂ ನಮ್ಮ ಕೂರ್ಪನೆಂದು ಸ
ಮುನ್ನತ ವೀರ್ಯರ್ ಲವಾಂಕುಶರ್ ತಱಿಸಂದರ್ ॥ ೫ ॥

ಅಂತು ತಱಿಸಂದು ವಜ್ರಜಂಘನೊಳ್ ಬಂದು ಕೂಡುವುದುಮದಂ ಪೃಥು ಕೇಳ್ದು ವಂಗ ಮಗಧಾದಿ ವಿಷಯದರಸುಮಕ್ಕಳಂ ಕೂಡಿಕೊಂಡಸಂಖ್ಯಾತ ಬಲ ಸಮೇತನಾಗಿ ಪೊಱಮಟ್ಟೊಡ್ಡಿ ನೆಱಿದು ಕಾದಿ ಲವಾಂಕುಶರ್ಗೆ ಸೋಲ್ತೋಡು ವಾಗಳವರಱಿಯದ ಕುಲದವರ್ಗೆ ಬೆನ್ನೀವುದು ನಿಮಗೆ ಪಸುಗೆಯಲ್ತೆಂದು ಮೂದಲಿಸುತ್ತುಂ ಮುಟ್ಟಿವರ್ದುಂ ಪೃಥು ಪೋಗಲೆಡೆಗೆಟ್ಟು ಕೈಮುಗಿದೆನ್ನ ಗೆಯ್ದ ದೋಷಕ್ಕೆ ಕ್ಷಮಿಯಿಸುವುದೆಂದು ವಿನತನಾಗೆ ಲವಾಂಕುಶರ್ ಕ್ಷಮಿಯಿಸುವುದು ಮಾತನವರಂ ತನ್ನ ಪೊಟಲ್ಗಳ್ಗು ಕುಶಂಗೆ ಕನಕಮಾಲೆಯಂ ಕುಡುವುದುಮಾ ಪೊಟಲೊಳೊಂದು ದಿವಸಮಿರ್ದು ಮಱುದಿವಸಂ ವಜ್ರಜಂಘನಂ ಪುಂಡರೀಕಿಣೀ ಪುರಕ್ಕೆ ಕಟಿಸಿ ಲವಾಂಕುಶರ್ ದಿಗ್ವಿಜಯ ಪ್ರಯಾಣ ಭೇರಿಯಂ ಪೊಯಿಸಿ ವಂಗ ಮಗಧ ವಿಷಯಂಗಳಾದಿಯಾಗೆ ಸಕಲ ವಿಷಯಂಗಳಂ ಬಾಯ್ಕೇಳಿಸಿ ಗಂಗೆಯಂ ದಾಂಟಿ ಕೈಲಾಸ ನಗದುತ್ತರ ದಿಗ್ಭಾಗಮನೆಯ್ದಿ ಸಿಂಧುವಂ ಮುಟ್ಟಿವಂದು ಪಶ್ಚಿಮ ಸಮುದ್ರ ತೀರಂಬಿಡಿದು ನಡೆದು ಕಪ್ಪಂಗೊಂಡು ಸಿದ್ಧ ದಿಗ್ವಿಜಯರ್ ಸಕಲ ರಾಜ ಸಮಾಜಂಬೆರಸಿ ಬರೆ ಮಗುೞ್ದು ಬಂದು ಮಹಾವಿಭೂತಿಯಿಂ ಪುಂಡರೀಕಿಣೀಪುರ ಮುಂ ಪೊಕ್ಕು ಸುಖದಿನಿರ್ದುದುಮಿತ್ತಲ್—

ಕಂ ॥ ಜಾನಕಿಯಿರ್ದೆಡೆಯಂ ಹಿಂ
ಸಾನಂದಂ ತಿಳಿದು ನಾರದಂ ಬಂದು ನಭೋ ॥
ಯಾನದೊಳೆ ವಜ್ರಜಂಘ ಮ
ಹೀನಾಥನ ಪುಂಡರೀಕಪುರಮಂ ಪೊಕ್ಕಂ ॥ ೬ ॥

ಅಂತು ಪುರಮಂ ಪೊಕ್ಕು ಲವಾಂಕುಶರಂ ಕಾಣ್ಬುದುಮವರಿಚ್ಛಾಕಾರಂಗೆಯ್ದು ಮಣಿಮಯಾಸನಮಂ ಕುಡುವುದುಂ ರಾಮಲಕ್ಷ್ಮಣರಂತೆ ಮಹಾನುಭಾವರಾಗಿ ಮೆಂದು ಪರಸುವುದುಂ—

ಕಂ ॥ ಅವರ ಕುಲವಾವುದವರಾ
ವವನೀವಲ್ಲಭ ತನೂಭವರ್ ಪೌರುಷಮೇ ॥
ನವರ್ಗೆಂದತಿ ಕೌತುಕದಿಂ
ಲವಾಂಕುಶರ್ ಮಾಯಜೋಗಿಯಂ ಬೆಸಗೊಂಡರ್ ॥ ೭ ॥

ಅಂತು ಬೆಸಗೊಳ್ವುದುಂ ನಾರದನಿಂತೆಂದನವರಿಕ್ಷ್ವಾಕು ವಂಶದ ದಶರಥ ಮಹೀನಾಥನ ತನೂಭವರ್ ಜನಕನ ಮಗಳಪ್ಪ ಸೀತಾದೇವಿ ರಾಮದೇವರ ಮಹಾ ದೇವಿಯಾಗಿ ಸುಖ ಸಂಕಥಾ ವಿನೋದದೊಳಿರಲೊಂದು ದಿವಸಂ ದಶರಥ ಮಹಾ ರಾಜಂ ವೈರಾಗ್ಯ ಪರನಾಗಿ ದೀಕ್ಷೆಗೊಳಲುದ್ಯೋಗಂಗೆಯ್ದು ರಾಮನಂ ಕರೆದು ರಾಜ್ಯಪಟ್ಟಮಂ ಕಟ್ಟಲೆಂದಿರ್ಪುದುಮಾ ಸಮಯದೊಳ್ ಕೈಕಾಮಹಾದೇವಿಯದಂ ಕೇಳ್ದು ಬೇಗಂ ಬಂದು ದೇವರೆನಗೆ ಕಾರುಣ್ಯಂಗೆಯ್ದ ವೆಚ್ಚಂ ದಯೆಗೆಯ್ದುದೆಂದು ಬಿನ್ನಪಂಗೆಯ್ವುದುಂ ತಪೋವಿಘ್ನಮಪ್ಪುದು ಪೊಜಗಾಗೆ ನಿನ್ನ ಮೆಚ್ಚಿದುದಂ ಬೇಡಿ ಕೊಳ್ಳಿಂಬುದುಂ ಭರತಂಗೆ ರಾಜ್ಯಮಂ ಕುಡುವುದೆನೆ ವಿಸ್ಮಯ ಚಿತ್ತನಾಗಿ ದಶರಥ ನೊಂದುಮಂ ನುಡಿಯಲಜುಯದಿರ್ಪುದುಂ ತಂದೆಯ ನನ್ನಿಯಂ ಪಾಲಿಸಲೆಂದು ರಾಮಸ್ವಾಮಿ ಭರತಂಗೆ ರಾಜ್ಯಮನಿತ್ತು ದಂಡಕಾರಣ್ಯದೊಳಿರೆ ರಾವಣಂ ಸೀತಾ ದೇವಿಯಂ ಕಂಡಾಸಕ್ತನಾಗಿ ತನ್ನ ಕುಲಾಚರಣಂಗೆಟ್ಟು ಕಳ್ವುಕೊಂಡು ಪೋದ ನೆಂದಾ ವೃತ್ತಾಂತಮನಾದ್ಯಂತಮೆಯ್ದೆ ಪೇಳ್ದು ಮತ್ತಮಿಂತೆಂದಂ ರಾಮಲಕ್ಷ್ಮಣ ರಜುದು ಸಮಸ್ತ ವಿದ್ಯಾಧರ ಸಹಿತ ಸುಗ್ರೀವ ಪ್ರಭಾಮಂಡಲ ಹನುಮತ್ಸಹಿತರಾ ಗೆತ್ತಿ ಪೋಗಿ ರಾವಣನಂ ಕೊಂದು ತ್ರಿಖಂಡ ಮಂಡಲಾಧಿಪತಿಗಳಾಗಿ ವಿಭೀಷಣಂಗೆ ಲಂಕೆಯ ರಾಜ್ಯಪಟ್ಟಂಗಟ್ಟಿ ದಿಗ್ವಿಜಯಮಂ ಸಾಧಿಸಿ ಮಗುಟ್ಟಿ ಬಂದು ಅಯೋಧ್ಯೆ ಯೊಳ್ ಸುಖದಿಂ ರಾಜ್ಯಂಗೆಯ್ಯುತ್ತಮಿರಲೊಂದು ದಿವಸಂ ರಾಮಂಗೆ ಜನಪದ ಜನಂಗಳ್ ನೆರೆದು ಬಂದು ಸೀತಾದೇವಿಯನೊಳಕೊಂಡಿರಲಾಗದೆಂದಪವಾದಮಂ ಪೊರ್ದಿಸಿ ನುಡಿಯೆ ಲಕ್ಷ್ಮೀಧರನಂ ಕರೆದು ಕಟ್ಟೇಕಾಂತದೊಳ್ ಪೇಟಿ ಲಕ್ಷ್ಮೀ ಧರಂ ಸೀತಾದೇವಿ ಮಹಾಸತಿಯುಂ ಗುಣವತಿಯುಮಪ್ಪುದಱಿಂದೀಗಳೀ ನುಡಿ

ನಿಮಗುಸಿರಲ್ ತಕ್ಕುದಲ್ತೆಂದು ಕರಂ ಪ್ರಾರ್ಥಿಸಿ ದೇವರೆನಗೆ ಕಾರುಣ್ಯಂಗೆಯ್ವೊಡಿ
ದೊಂದಂ ಕ್ಷಮಿಯಿಸುವುದೆಂದೊಡೆಮ್ಮಾಜ್ಞೆಯಂ ವಿಾಜದಿರಿನ್ನುಮಿದರ್ಕೆ ನೀನೇನು
ಮಂ ನುಡಿಯದಿರೆಂದು ಲಕ್ಷ್ಮಣನಂ ಮಾರ್ನುಡಿಯದಂತು ಮಾಡಿ ಜನಪದದ
ಪಬ್ಬಿಗೇವಯಿಸಿ ನೀವಾ ಪರಮೇಶ್ವರಿಯ ಗರ್ಭದೊಳಿರ್ದಂದು ತೊಱೆದು ಕೃತಾಂತ
ವಕ್ತ್ರನೆಂಬ ತನ್ನ ಪಡೆವಳನಂ ಕರೆದು ಪೋಗಿ ಅರಣ್ಯದೊಳೀಡಾಡಿ ಬಾಯೆಂದು
ಪೇೞ್ದುದುಮಾತಂ ತಂದೀಡಾಡಿ ಪೋಪುದುಂ ವಜ್ರಜಂಘಂ ಕಂಡನುಬಂಧ ಸ್ನೇಹ
ದಿಂದೊಡಗೊಂಡು ಬಂದು ಸೀತಾದೇವಿಗೆ ಬೆಸಕೆಯ್ಯುತ್ತಿರ್ಪುದುಂ ನೀಮುಂ ಪುಟ್ಟಿದಿ
ರೆಂಬುದನಱಿದು ಬಂದೆವಾವದುಕಾರಣದಿನವರ್ ನಿಮ್ಮ ತಂದೆವಿರಪ್ಪುದಱಿಂದವರ
ಪರಾಕ್ರಮ ಸೌಂದರ್ಯಮಂ ಪೋಲ್ವರಾಗಿಮೆಂದು ಪರಸಿದೆವೆಂಬುದುಮದಂ ಕೇಳ್ದು
ಕದನಕೇಳಿ ನಿರಂಕುಶನಂಕುಶನಿಂತೆಂದಂ—

ಕಂ ॥ ತಕ್ಕರ ಮಾತಂ ಕೇಳದೆ
ತಕ್ಕಾರ್ಮೆಯನುಟ್ಟಿದು ತೊಱೆದು ಗುಣವತಿಯಂ ಪಾ ॥
ಪಕ್ಕಂಜದ ಜಡ ಮತಿಯಂ
ತಕ್ಕುದೆ ಪೊಗಲಲ್ಕೆ ರಾಮನಂ ನಿರ್ಗುಣನಂ ॥ ೮ ॥

ಎಂದಯೋಧ್ಯಾನಗರವಿಲ್ಲಿಗೆನಿತುಂಟೆಂಬುದುಂ ನಾರದಂ ನೂರಯ್ವತ್ತು
ಯೋಜನಮೆನೆ ಕೇಳ್ದಾ ಕ್ಷಣದೊಳೆ ಸಮಸ್ತ ಬಲಂಬೆರಸೆತ್ತಿ ನಡೆದು ಕತಿಪಯ ದಿನ
ಕ್ಕಯೋಧ್ಯೆಯನೆಯ್ದಿ [1]ಹಸ್ತ್ಯಶ್ವ ರಥ ಪದಾತಿ ಬಲಮನೊಡ್ಡಿ ಲವಾಂಕುಶರ್ ಸಿಂಧುರಾ
ರೂಢರಾಗಿ ಬಹಿಃಪುರದೊಳ್ ಬೀಡಂ ಬಿಡುವುದುಮಿತ್ತ ಸಿದ್ಧಾರ್ಥ ಕ್ಷುಲ್ಲಕ ನಾರದಂ
ಪ್ರಭಾಮಂಡಲನಲ್ಲಿಗೆ ಪೋಗಿ ಲವಾಂಕುಶರ ತೇಜನನೆಲ್ಲಮನಱಿಪುವುದುಮಾತಂ
ವ್ಯಾಕುಲ ಚಿತ್ತನಾಗಿ ಜನಕ ವಿದೇಹಿಗಳ್ವೆರಸು ಪುಂಡರೀಕಿಣೀಪುರಕ್ಕೆ ವರ್ಪುದುಂ
ಸೀತಾದೇವಿ ಕಂಡಿದಿರೆೞ್ದು ತಂದೆಗಂ ತಾಯ್ಗುಮಣ್ಣಂಗಮೆಱಗಿ ಪೊಡೆವಟ್ಟು
ಮನ್ಯುಮಿಕ್ಕು ದುಃಖಂಗೆಯ್ದಿಂಬಱಿಯಂ ಪ್ರಭಾಮಂಡಲಂ ರಾಮಲಕ್ಷ್ಮಣರ
ದೆಸೆಯಿಂ ಕೂಸುಗಳ್ಗಿ ಪ್ರವಾದಮಕ್ಕುಮದಱಿಂದಯೋಧ್ಯೆಗೆ ಪೋಪಂ ಬಿಜಯಂ
ಗೆಯ್ಯಿಮೆಂದು ಸೀತಾದೇವಿಯಂ ಲವಾಂಕುಶರರಸಿಯರಂ ತನ್ನ ವಿಮಾನವು

1. ಬೀಡಂಬಟ್ಟು ರಾಮಲಕ್ಷ್ಮಣರಲ್ಲಿಗೆ ದೂತರನಟ್ಟಿ ಸಮಸ್ತ ನಾಡಂ ಬೀಡುಮನೊಪ್ಪಿಸಿ ಪೋಪು
ದಲ್ಲದೊಡೆ ಬಂದು ಕಾಣ್ಬುದೆಂದು ನುಡಿಯಿಮೆಂಬುದುಮಾ ದೂತರ್ ಬಂದು ರಾಮಲಕ್ಷ್ಮಣರಂ ಕಂಡು
ತದ್ವೃತ್ತಾಂತಮಂ ಬಿನ್ನವಿಸೆ ರಾಮಲಕ್ಷ್ಮಣರಾಕ್ಷೇಪಿಸಿ ಪರ ಚಕ್ರಮನೆಱಗಿಸುವಮಲ್ಲದಾಮೆಱಗುವುದೆಂಬ
ಮಾತಂ ನುಡಿವ ನಿಮ್ಮ ದುರ್ವೃತ್ತಿಕೆಯೊ ಮೆಱ್ ನಿಮ್ಮಾಳ್ಪರ ಪ್ರಾಪ್ತಿಯೊ ಪೇೞಮೆಂದು ಬಂದ
ದೂತರಂ ಪರಿಭವಿಸಿ ಕಳಿವುದುಮವರ್ ಬಂದು ಲವಾಂಕುಶರ್ಗೆ ಬಿನ್ನಹಂಗೆಯ್ಯೆ ಕದನ ಕರ್ಕಶರ್
ಹಸ್ತ್ಯಶ್ವ ರಥ ಪದಾತಿ ಬಲಮನೊಡ್ಡಿ ಲವಾಂಕುಶರ್ ಸಿಂಧುರಾರೂಢರಾಗಿ ಬಹಿಃಪುರದೊಳ್ ನಿಲ್ವುದುಂ;
—ಎಂದು ಕ. ಖ. ಗ. ಘ. ಪುಸ್ತಕಗಳಲ್ಲಿದೆ.

ನೇಱಿಸಿಕೊಂಡು ನಭೋಮಾರ್ಗದಿಂ ಬಂದು ಲವಾಂಕುಶರೊಳ್ ಕೂಡುವುದು ಮಿತ್ತಲ್—

ಕಂ ॥ ಪರಚಕ್ರಮೆಮ್ಮ ಬಾಹಾ
ಪರಿಘಕ್ಕಿದಿರೆತ್ತಿ ಬಂದುದೆಂದತಿ ಕುಪಿತರ್ ॥
ಸೆರಗಂ ಪಾರದಯೋಧ್ಯಾ
ಪುರ ಗೋಪುರಮಂ ಬಲಾಚ್ಯುತರ್ ಪೊಱಮಟ್ಟರ್ ॥ ೯ ॥

ಅಂತು ಪೊಱಮಟ್ಟು ಬಂದು ಕೈವೀಸುವುದುಂ—

ಕಂ ॥ ಕುಲವಾಹಿನಿಯೊಳ್ ತಾಗುವ
ಕುಲ ವಾಹಿನಿಯಂತೆ ತಾಗಿ ಕಳೆದುದು ಜಯಮಂ ॥
ಗೆಲೆ ಕಾದಿ ರಾಮಲಕ್ಷ್ಮಣ
ಬಲಮಂ ಸಂಗ್ರಾಮದೊಳ್ ಲವಾಂಕುಶರ ಬಲಂ ॥ ೧೦ ॥

ಚ ॥ [1]ಲವನ ಬಲಕ್ಕೆ ರಾಘವ ಬಲಂ ಪೆಱಪಿಂಗೆ ಕಡಂಗಿ ರಾಘವಂ ।
ಲವನೊಳಿದಿರ್ಚಿ ರಾಘವನ ಕೇತನಮಂ ಧನುವಂ ವರೂಥಮಂ ।
ಲವನುಡಿಯೆಚ್ಚೊಡಿರ್ವ ವಿರಥಂ ರಘುನಂದನನಾದನಾವನಾ ।
ಹವದೊಳಿದಿರ್ಚಿ ಜೀವಿಸುವವಂ ಲವನಂ ಜವನಂ ಮಹೀಭುಜಂ ॥ ೧೧ ॥

ಉ ॥ ಆಗಳೆ ಮತ್ತಮೊಂದು ರಥಮಂ ರಘುನಂದನನೇಱಿ ಮಾರ್ಗಣ ।
ಕ್ಕಾಗಸಮೆಯ್ದದಂತಿಸುವುದುಂ ತಱಿದೊಟ್ಟಿದನಂತವಂ ಮನೋ ॥
ವೇಗದಿನಸ್ತ್ರ ಸಂತತಿಗಳಿಂ ಸುರ ಸಂತತಿ ರಾಘವಂಗೆ ಚಾ ।
ಪಾಗಮದೊಳ್ ಲವಂ ಶತಸಹಸ್ರ ಗುಣಂ ಮಿಗಿಲಾದನೆಂಬಿನಂ ॥ ೧೨ ॥

ಅಂತು ಸಾಮಾನ್ಯಾಸ್ತ್ರಂಗಳಂ ಖಂಡಿಸೆ ರಾಘವಂ ದಿವ್ಯಾಸ್ತ್ರಂಗಳೊಳಂ ಕಾದಿ ಲವನಂ ಗೆಲಲ್ ನೆಱಿಯದೆ ವಿಸ್ಮಿತ ಚಿತ್ತನಾಗಿರ್ಪನಮಿತ್ತಲ್—

ಕಂ ॥ ಭರವಶದಿಂದಂ ಕುಶನೊಳ್
ನಿರಂಕುಶಂ ಲಕ್ಷ್ಮಣಂ ಪಿತೃವ್ಯಂ ದಶಕಂ ॥
ಧರನೊಳ್ ನೆರೆವಂತಿರೆ ಶರ
ಪರಿಣತಿಯಂ ನೆಱಿಯೆ ಮೆಱಿದು ಕಾದುತ್ತಿರ್ದಂ ॥ ೧೩ ॥

ಅಂತಚಿಂತ್ಯ ಯುದ್ಧಂಗೆಯ್ವ ಸಮಯದೊಳ್—

---

1. ಆವರ್. ಗ. ಘ.

ಕಂ ॥ ಪರಶುವಿನಿಂ ಲಕ್ಷ್ಮೀಧರ
ನುರಗೆಲನನನಂತ ವೀರ್ಯನಂ ಕುಶನಿಡೆ ಕರ್ ॥
ತಿರುಗಿ ಬರೆ ಮಱಿದು ಮೆಯ್ಯಂ
ಪರವಶದಿಂ ಕೇತುದಂಡಮಂ ನೆರ್ಮಿರ್ದಂ ॥ ೧೪ ॥

ಅಂತು ಮೂರ್ಛಿತನಾಗಿ—

ಕಂ ॥ ನೀಡಱಿನೆಚ್ಚತ್ತು ರಣ
ಕ್ರೀಡಾಸಕ್ತಂ ಸರಕ್ತ ಲೋಚನನಿವನಂ
ನಾಡಾಡಿಯ ಕೈದುಗಳಂ
ಕೂಡದು ಗೆಲಲೆಂದು ಚಕ್ರಿ ಚಕ್ರವನಿಟ್ಟಂ ॥ ೧೫ ॥

ಇಡೆ ಕಡುಪಿಂದಂ ಕುಶನಂ
ನಡಲೊಲ್ಲದೆ ಚಕ್ರರತ್ನಮಿರ್ದಿಸೆಗಮದೇ ॥
ನೆಡೆಯಾಡುತಿರ್ದುದೋ ಸಾ
ವೊಡರಿಸದರನಾವ ಕೈದುಗಳುಮುರ್ಚುಗುಮೇ ॥ ೧೬ ॥

ಆಗಳ್ ಅಂಕುಶಂ ನಿರಂಕುಶನೆನಿಸಿ—

ಕಂ ॥ ಸವ್ಯಾಪಸವ್ಯಮೆಚ್ಚು ಪಿ
ತೃವ್ಯನ ಕೈವಿಡಿದ ವಿಜಯ ವಧುವಂ ಕೈಕೊಂ ॥
ಡವ್ಯಾಜ ಶೌರ್ಯನಂಕುಶ
ನವ್ಯುತ್ಪನ್ನನವೊಲಿಂತು ಮೊರೆದಪ್ಪುವನೇ ॥ ೧೭ ॥

ಅಂತಂಕುಶಂ ಗೆಲೆ ಕಾದೆ ಲಕ್ಷ್ಮಣಂ ತನ್ನ ಮನದೊಳ್ ನಮ್ಮ ಪುಣ್ಯಪ್ರಭಾವಂ ತೊಲಗಿದುದೀಗಳಿವರ್ ಬಲದೇವ ವಾಸುದೇವರಾದರೆಮಗಜಯ್ಯರೆಂದು ಸುರಗತಿಯಂ ನಿಶ್ಚಯಿಸಿ ಸಮರ ಸಂರಂಭಮನುಱಿದಿರ್ದುದುಮತ್ತ ಸಿದ್ಧಾರ್ಥ ಕ್ಷುಲ್ಲಕ ನಾರದಂ ನೀರದ ಪಥದೊಳಿರ್ದು ಬಲದೇವ ವಾಸುದೇವರೆಂಬ ಮಹಿಮೆ ನಿಮಗಲ್ಲದೆ ಪೆಱರ್ಗೆ ಸಲ್ಲುದೆ ಪೇಱಿಮೆಂದು ನಗುತ್ತುಂ ಇವರ್ ಸೀತಾದೇವಿಯ ತನೂಜರ್ ಲವಾಂಕುಶರೆಂಬರ್ ತಮ್ಮ ಜನನಿಯಂ ವಿಚಾರಿಸದೆ ಪೊರಮಡಿಸಿ ಕಳೆದಿರೆಂದು ಮುಳಿದು ನಿಮ್ಮನೀತೆಱದಿಂ ಕಾಣಲ್ ಬಂದರೆಂದಱಿವುವುದುಮತಿ ಮುದಿತ ಹೃದಯನಾಗಿ—

ಕಂ ॥ ಧನುವಂ ದಿವ್ಯೇಷುಗಳಂ
ತನುತ್ರಮಂ ಕಳೆದು ಲಕ್ಷ್ಮಣಂ ದಶರಥ ರಾ ॥

ಮನನೆಯ್ದೆ ಬಂದು ಕೈಮುಗಿ
ದು ನಮನ್ಮಣಿಮಯ ಕಿರೀಟನಂದಿಂತೆಂದಂ ॥ ೧೮ ॥

ಈತಂಗಳಿರ್ವರುಂ ರೂ
ಪಾತಿಶಯದೊಳಸಮ ಶೌರ್ಯದೊಳ್ ನಿಮ್ಮನ್ನರ್ ॥
ಸೀತಾದೇವಿಯ ಸೂನುಗ
ಳೀ ತೆಱದಿಂ ಕಾಣಲೆಂದು ಬಂದರ್ ನಿಮ್ಮಂ ॥ ೧೯ ॥

ಎಂದು—

ಚ ॥ ತನಗೆ ಲವಾಂಕುಶಾಗಮನ ವೃತ್ತಕಮಂ ತಿಳಿವಂತು ಪೇೞೆ ತ ।
ನ್ನನುಜನದರ್ಕೆ ವಿಸ್ಮಯಮುಮುತ್ಸುಕ ಭಾವಮುಮಾದಮಪ್ಪುದುಂ ॥
ತನಯರನಾಗಳಂತೆ ಪಡೆದಂತನುರಾಗಮನಪ್ಪುಕೆಯ್ದು ಭೋಂ ।
ಕನೆ ರಥದಿಂದಮಂದಿೞಿದು ಬಂದನುಪೇಂದ್ರ ಯುತಂ ರಘೂದ್ವಹಂ ॥ ೨೦ ॥

ಆ ಸಮಯದೊಳ್—

ಉ ॥ ಅನೆಯ ಮೇಗಣಿಂದಿೞಿದು ಸಂಭ್ರಮದಿಂದಿದಿರ್ವಂದು ರಾಘವಂ ।
ಗಾನತರಾಗಿ ಮೌಳಿಮಣಿ ದೀಪ್ತಿ ಜಲಂಗಳಿನೀಯೆ ಪಾದ್ಯಮಂ ॥
ಸೂನುಗಳಟ್ಟಿಜಿಂ ತೆಗೆದು ತಟ್ಟಿಸಿದಂ ನಿಜದೇಹ ಕಾಂತಿ ಸಂ ।
ತಾನ ಮರುತ್ಪ್ರವಾಹಿನಿಯೊಳಿರ್ವರುಮಂದವಗಾಹಮಿರ್ಪಿನಂ ॥ ೨೧ ॥

ಕಂ॥ ಕ್ರಮದಿಂ ಲವಾಂಕುಶರ್ ವಿ
ಕ್ರಮ ಧನರತಿಹರ್ಷ ಭಾರದಿಂದೆೞಿಗೆ ನಿಜ ॥
ಕ್ರಮ ಯುಗಳಕ್ಕಾಶೀರ್ವಾ
ದ ಮುಖರ ಮುಖನಾದನಾ ಸುಮಿತ್ರಾಪುತ್ರಂ ॥ ೨೨ ॥

ಅಂತು ರಾಮಲಕ್ಷ್ಮಣರ್ ತನೂಭವರಂಗ ಪರಿಷ್ವಂಗ ಸುಖಾನುಭವದಿಂ ತಣಿದು ಲವಾಂಕುಶರ ಪುರುಷಾಕಾರಮಂ ಮನದೆ ಕೊಂಡಾನಂದಬಾಷ್ಪ ಜಲ ಲುಲಿತ ಲೋಚನರುಂ ರೋಮಾಂಚ ಕಂಚುಕಿತ ಶರೀರರುಮಾಗಿರ್ಪಿನಮತ್ತ ಸೀತಾದೇವಿ ತನೂಭವರ ಭುಜಬಲಮುಮಂ ತಂದೆವಿರೊಳೊಂದಿದುದುಮಂ ವಿಮಾ ನಾರೂಢೆ ಕಂಡು ಸಂತೋಷಂಬಟ್ಟು ನಿಯನ್ಯಾರ್ಗದಿಂ ಪುಂಡರೀಕಿಣೀಪುರಕ್ಕೆ ಪೋದಳಿತ್ತ ರಾಮಲಕ್ಷ್ಮಣ ಲವಾಂಕುಶರ್ ಪುಷ್ಪಕ ವಿಮಾನಮನೇೞಿ ಸುಗ್ರೀವ ವಿರಾಧಿತ ವಿಭೀಷಣ ಹನುಮದಂಗದಾದಿ ವಿಯಚ್ಚರರಿಂ ಪೆಱರುಮೞಿಕೆಯ ಭೂಮಿ ಗೋಚರ ಮಹೀಭುಜರಿಂ ಪರಿವೃತರಾಗಿ ಕೈಗೆಯ್ದು ಸಾಕೇತಪುರಮಂ ಪೊಕ್ಕು

ಸುಖದಿನಿರ್ಪುದುನೊಂದು ದಿವಸಂ ಸುಗ್ರೀವ ಸುಷೇಣ ಜಾಂಬವ ಪ್ರಮುಖರಧಿರಾಜ ನಲ್ಲಿಗೆ ಬಂದವಸರಂಬಡೆದು—

ಕಂ ॥ ಪರ ವಿಷಯದೊಳಿರ್ಪುದೆ ಸ
ಚ್ಚರಿತ್ರೆಯಂ ದೇವ ಜಾನಕೀದೇವಿಯನಿಂ ॥
ಬರಿಸುವುದಿದನೇಗೊಳ್ವುದು
ಕರುಣಿಪುದೆಮಗೆಂದು ವಿನಯಮಂ ಪ್ರಕಟಿಸಿದರ್ ॥ ೨೩ ॥

ಎಂದು ಬಿನ್ನವಿಸೆ ರಾಘವನಿಂತೆಂದಂ—

ಕಂ ॥ ಲೋಕಾಪವಾದ ಭಯದಿಂ
ದಾಕೆಯನಾಂ ಕಳೆದೆನವಗುಣಾರೋಪಣದಿಂ ॥
ಪೋ ಕಳೆದೆನೆ ಸಚ್ಚರಿತದೊ
ಳಾಕೆಗೆ ಸಮರಾರುಮಿಲ್ಲದುದನಾನಱಿವೆಂ ॥ ೨೪ ॥

ಅದಱಿನೆಲ್ಲರುಮಱಿಯೆ ದಿವ್ಯದಿನಪವಾದಮಂ ಕಳಿವಂತು ಮಾಟ್ಪುದೆಂಬುದು ಮವರ್ ಮಹಾಪ್ರಸಾದಮೆಂದು ಬೀಟ್ಕೊಂಡು ಪುಂಡರೀಕಿಣೀಪುರಕ್ಕೆ ಬಂದು ಸೀತಾದೇವಿಯಂ ಕಂಡು ಕೈಮುಗಿದು ರಾಮದೇವರ ಕಾರುಣ್ಯಂಗೆಯ್ದು ತೆಱನ ನಱಿಪೆ ವೈದೇಹಿ ವಿಷಯ ವಿರಕ್ತೆ ದಿವ್ಯದೊಳ್ ಶುದ್ಧೆಯಾಗಿ ತಪಂಬಡುವೆನೆಂದು ಮನದೊಳ್ ಪರಿಚ್ಛೇದಿಸಿ ಪುಷ್ಪಕ ವಿಮಾನಮನೇಱಿ ಗಗನ ಮಾರ್ಗದಿಂ ಬಂದ ಯೋಧ್ಯೆಯನೆಯ್ದಿ ನೇಸರ್ ಪಡುವುದುಂ ಮಹೇಂದ್ರೋದ್ಯಾನದೊಳಿರುಳಂ ಕಟಿಪಿ ಮಱುದಿವಸಂ ರಾಘವನಂ ಕಂಡು—

ಮ ॥ ಅವಿಚಾರಂ ಕಳೆದೆನ್ನನಿಂತಿನಿತು ನೋವಂ ಮಾಡಿದಿರ್ ದೇವರೆಂ ।
ದು ವಿಷಾದಂ ಮಿಗೆ ನೊಂದು ಸೀತೆ ನುಡಿದಳ್ ತಾನಂತದಂ ಕೇಳ್ದು ರಾ ॥
ಘವದೇವಂ ಜನತಾಪವಾದ ಭಯದಿಂದೀ ಖೇದಮಂ ಮಾಡಿದೆಂ ।
ಭುವನ ಖ್ಯಾತಮೆನಿಪ್ಪ ನಿನ್ನ ಚರಿತಂ ಪೇಟಿರ್ಗಮಜ್ಞಾತಮೇ ॥ ೨೫ ॥

ಅದಱಿಂ ಲೋಕ ಪ್ರತ್ಯಯಮಪ್ಪಂತು ಮಾಟ್ಪುದೆನೆ ಮಹಾಪ್ರಸಾದಮೆಂದು ಪಿರಿದಪ್ಪದೊಂದು ಕೊಂಡಮನಗುಟಿಸಿ ಚಂದನದಗರುವಿನಿಂಧನಂಗಳುಮಂ ಸು ಗಂಧ ದ್ರವ್ಯಂಗಳುಮನಿಕ್ಕಿ ಕಿರ್ಚಂ ತಗುಟ್ಟಿವುದು ಮಾ ಸಮಯದೊಳ್ ಸಕಲ ಭೂಷಣ ಭಟ್ಟಾರಕರ ಕೇವಲಜ್ಞಾನ ಪೂಜೆಗೆ ಬರ್ಪ ದೇವ ನಿಕಾಯದೊಳ್ ದೇವೇಂದ್ರಂ ಸೀತಾದೇವಿಯ ಮಹೋಪಸರ್ಗಮನಱಿದು ಮೇಘಕೇತನನೆಂಬ ದೇವನಂ ನೀನೀ ಮಹಾಸತಿಯುಪಸರ್ಗಮಂ ಪಿಂಗಿಸಿ ಬರ್ಪುದೆಂದು ನಿಯಮಿಸಿ

ವೋದನಿತ್ತ ಮೇಘಕೇತನನುರಿಯುತ್ತಿರ್ದ ಕುಂಡದ ಸಮೀಪದ ವಿಯನ್ಮಂಡಲದೊಳ್ ವಿಮಾನಾರೂಢನವಲೋಕಿಸುತ್ತಿರ್ದನಾ ಪ್ರಸ್ತಾವದೊಳ್ ಸೀತಾದೇವಿ ತದಗ್ನಿಕುಂಡ ದೀಱುಯಂ ಮೆಟ್ಟಿ—

ಚ ॥ ನೆರೆದ ವಿಯಚ್ಚರಾಮರ ನರ ಪ್ರಮುಖರ್ಕಳುಮೆಯ್ದೆ ಕೇಳೆ ಸು ।
ಸ್ವರಮಿಟುಕೆಯ್ಯೆ ಕೋಕಿಲ ಕಲ ಸ್ವರಮಂ ನುಡಿದಳ್ ವಸುಂಧರಾ ॥
ವರನೆನಿಸಿರ್ದ ರಾಘವನೊಳಲ್ಲದೆ ರಾವಣನಾದಿಯಾಗೆ ಮಿ ।
ಕ್ಕರೊಳಟಿಪಂ ಮನಕ್ಕೆ ತರೆ ಮಾರಣಮಕ್ಕೆನಗೀ ಕೃಶಾನುವಿಂ ॥ ೨೬ ॥

ಎಂದತಿ ಪ್ರತಿಜ್ಞೆಗೆಯ್ದು ಪಂಚಪರಮೇಷ್ಠಿಗಳ್ಗೆ ನಮಸ್ಕಾರಂಗೆಯ್ದು ಧಗದ್ಧಗಿಸಿ ತಿಣ್ಣಮುರಿಯುತ್ತಿರ್ದ ಕುಂಡದೊಳಗೆ ಮೆಯ್ಯನೀಡಾಡೆ—

ಮ ॥ ಮರವಟ್ಟತ್ತು ಮರುದ್ಗಣಂ ಪರಿಜನಂ ಬೆರ್ಚಿತ್ತು ಶೋಕಾಗ್ನಿಯಿಂ ।
ದುರಿದತ್ತಾಪ್ತ ಜನಂ ಲವಾಂಕುಶರೊಳಾದತ್ತಾಕುಲಂ ವಿಹ್ವಲಂ ॥
ಪಿರಿದಾದತ್ತು ರಘೂದ್ವಹಂಗೆ ಪರಿತಾಪಂ ಲಕ್ಷ್ಮಣಂಗಾಗಳು ।
ಬ್ಬರಮಾದತ್ತು ಲತಾಂಗಿ ಸೀತೆ ಪುಗೆ ತೇಜಃಪಿಂಡಮಂ ಕುಂಡಮಂ ॥ ೨೭ ॥

ಅಂತು ಮಹಾಸತಿ ನೀರಂ ಪುಗುವಂತೆ ಕಿರ್ಚಂ ಪುಗುವುದುಂ—

ಕಂ ॥ ಜಳದೇವತೆ ಕೋಡುವ ತಿಳಿ
ಗೊಳದೊಳಗಿರ್ಪಂತೆ ಶೀಲವತಿ ಸೀತೆ ವಿನಿ ॥
ಶ್ಚಳಮಿರೆ ಮನದೊಳ್ ಜಿನಪತಿ
ಚಳಣಂ ದಳ್ಳುರಿಯ ನಡುವೆ ಕೋಡುತ್ತಿರ್ದಳ್ ॥ ೨೮ ॥

ಸತಿಯ ವಿಶುದ್ಧಾಚಾರಂ
ಹುತಾಶನ ಪ್ರಬಲ ದಾಹಿಕಾ ಶಕ್ತಿಯುಮಂ ॥
ಪ್ರತಿಬಂಧಿಸಿದುದು ಜೋದ್ಯಮೆ
ಪತಿವ್ರತಾಗುಣದ ಮಹಿಮೆ ಸಾಧಾರಣಮೇ ॥ ೨೯ ॥

ಆಗಳಾಖಂಡಲನ ಬೆಸದಿನಿರ್ದ ದೇವನಾ ಕುಂಡಮನೆ ಪದ್ಮಷಂಡಂ ಮಾಡಿ ಯಲ್ಲಿ ಸಹಸ್ರ ದಳ ಸುವರ್ಣ ತಾಮರಸಮುಮದಱ ಕರ್ಣಿಕೆಯ ಮೇಲೆ ಸಿಂಹಾಸನ ಮುಮಂ ವಿಗುರ್ವಿಸಿ ತನ್ನ ದೇವಿಯರ್ಕಳಿನಾ ಸರೋವರದೊಳಿರ್ದ ಸೀತಾದೇವಿಯ ನೆತ್ತಿ ತರಿಸಿ ಸಿಂಹಾಸನದೊಳಿರಿಸಿ ತಾನಾಕಾಶದೊಳಿರ್ದು ಲೋಕಕೆಲ್ಲಮಾಶ್ಚರ್ಯ ಮಾಗೆ ಪೂವಿನ ಮಟಿಯಂ ಕಱಿವುದುಮದಂ ಕಂಡು—

ಕಂ ॥ ಜಪಮೆಲ್ಲವೊಂದೆ ಕೊರಲೊಳ್
ಜನಕಾತ್ಮಜೆಯಂ ಪತಿವ್ರತಾಗುಣ ಮಣಿಮಂ ॥
ಡನೆಯಂ ಪೊಗಟ್ಟುದು ಸನ್ಮಾ
ರ್ಗ ನಿರತರಂ ಮೆಚ್ಚಿ ಪೊಗಟಿದಿರ್ಪರುಮೊಳರೇ ॥ ೩೦ ॥

ಪೊಂಜಲಗೆಯಂತೆ ಕೆರ್ಚಿಂ
ದಂ ಜಾನಕಿ ಶುದ್ಧೆಯಾಗೆ ಜನಸ್ಥಿಯ ಕೆಲದೊಳ್ ॥
ಸಂಜಾತ ಪುಲಕ ಕಲಿಕಾ
ರಂಜಿತ ತನುಗಳ್ ಲವಾಂಕುಶರ್ ಕುಳ್ಳಿರ್ದರ್ ॥ ೩೧ ॥

ಮು॥ ಸ್ರ॥ ರಾಮಂ ರೋಮಾಂಚಮಂ ತಾಳ್ದಿದನಣಮೊಸೆದಂ ಲಕ್ಷ್ಮಣಂ ಬಂಧು ವರ್ಗಂ ।
ಪ್ರೇಮಕ್ಕಾವಾಸಮಾದತ್ತಖಿಲ ಪರಿಜನಂ ಹರ್ಷಮಂ ತಾಳ್ದಿದತ್ತು ॥
ದ್ಭಾಮಂ ಪೊಣ್ಮಿತ್ತು ದೇವಾನಕ ರುತಿ ಕುಲ ವೃದ್ಧರ್ಕಳಿಟ್ಟಾಡಿದರ್ ದಿ ।
ವ್ಯಾಮೋದಂ ಗಂಧವಾಹಂ ಸುಟಿದುದು ಪರಸಿತ್ತಟ್ಟಿಜಿಂ ರಾಜಲೋಕಂ॥೩೨॥

ಆಗಳ್ ರಾಮಸ್ವಾಮಿ ಸೀತಾದೇವಿಯ ಸಮೀಪಕ್ಕೆ ಬಂದು—

ಕಂ ॥ ಕ್ಷಮಿಯಿಸುವುದೆನಗೆ ನೀಂ ಮು
ನ್ನಮಿರ್ದ ತೆಱದಿಂ ಮದೀಯ ವಲ್ಲಭೆಯಾಗಿ ॥
ರ್ದಮೃತಾಂಶು ವದನೆ ಸಾಮ್ರಾ
ಜ್ಯ ಮಹಿಮೆಯೊಳ್ ನೆರೆದು ಪಡೆಯ ಸುಖ ಸಂಪದಮಂ ॥ ೩೩ ॥

ಎಂದು ನುಡಿಯೆ ಸೀತಾದೇವಿ ರಾಮಸ್ವಾಮಿಗಿಂತೆಂದಳೆನ್ನ ಮುನ್ನುಪಾರ್ಜಿಸಿದ ಕರ್ಮಮೆನಗೆ ಪಿರಿದಪ್ಪ ದುಃಖಮಂ ಮಾಡಿದೊಡಾ ಕರ್ಮಕ್ಕೆ ಮುಳಿವೆನಲ್ಲದುಟ್ಟುದವರ್ಗದೇಕೆ ಮುಳಿವೆಂ ಕೇಡುಳ್ಳ ಸಂಸಾರದೊಳಪ್ಪುದೇಂ ಕೇಡಿಲ್ಲದ ಮೋಕ್ಷ ಸುಖಕ್ಕೆ ಕಾರಣಮಪ್ಪ ತಪಮಂ ಕೈಕೊಳ್ವೆನೆಂದು ತನ್ನ ಸಹಸ್ರ ಕುಂತಲಂಗಳಂ ಪಱುದು ಮುಂದಿಕ್ಕುವುದುಂ—

ಕಂ ॥ ಸತಿಯ ಪರಿಚ್ಛೇದಮೆ ತನ
ಗತಿ ದುಃಖಮನುಂಟುಮಾಡೆ ಮೋಹ ಗ್ರಹ ಪೀ ॥
ಡಿತನಾಗಿ ರಾಘವಂ ಮೂ
ರ್ಛಿತನಾದಂ ಪ್ರಿಯ ವಿಯೋಗಮಂ ಸೈರಿಪರಾರ್ ॥ ೩೪ ॥

ಅಂತು ಮೂರ್ಛಿತನಾಗಿ ಶೀತಲ ಕ್ರಿಯೆಗಳಿನೆಂತಾನುಮೆಚ್ಚತ್ತನನ್ನೆಗಮಿತ್ತ ವೈದೇಹಿ [1]ಪೃಥುಮತಿ ಕಂತಿಯರ ಪಕ್ಕದೆ ತಪಂಗೊಂಡು ಮಹೇಂದ್ರೋದ್ಯಾನ ವನಕ್ಕೆ ಪೋಗಿ ಸಕಲ ಭೂಷಣ ಕೇವಲಿ ಭಟ್ಟಾರಕರ ಸಭೆಯೊಳಿರ್ದುದುಂ—

ಕಂ ॥ ಮುಚ್ಚೆದಿಳದರಸಿಯೊಳ್ ಬಗೆ
ಬೆಚ್ಚಿರೆ ಶೀಲವತಿ ಸೀತೆ ಪೂಣ್ದುದನೆಂತುಂ ॥
ಪುಚ್ಚಲಿಯಿಳೆನ್ನದಚ್ಚಿಪಿಂ
ಜೆಚ್ಚರಮಾ ಸಭೆಗೆ ರಾಘವಂ ಬಚ್ಚಿಸಂದಂ ॥ ೩೫ ॥

ಅಂತತಿ ವ್ಯಾಮೋಹದಿಂ ಬಂದು ಸಕಲ ಲೋಕಾಧಿಪರಿಂ ಪರಿವೃತರಾಗಿರ್ದ ಸಕಲಭೂಷಣ ಕೇವಲಿಗಳ ಸಭೆಯನೆಯ್ದಲೊಡಂ ರಾಮನ ಮೋಹನೀಯ ಕರ್ಮ ಮುಪಶಮಕ್ಕೆ ಸಲ್ವುದುಮಾನೆಯಿಂದಿಚ್ಚಿದು ಬಂದು ಬಲಗೊಂಡು ಪೊಡೆವಟ್ಟು ಕುಳ್ಳಿರ್ದನಾ ಸಭೆಯೊಳ್ ಪೃಥುಮತಿ ಗಂತಿಯರ ಸಮಕ್ಷದೊಳ್ ದೀಕ್ಷೆಗೊಂಡಿರ್ದ ಸೀತಾದೇವಿಯಂ ಕಂಡು—

ಮ ॥ ತ್ರಿದಶರ್ ಪೂಜಿಸೆ ಮಾನವರ್ ಪೊಗಟ್ಪೆ ಶೌಚಾಚಾರಮುಂ ದಿವ್ಯದಿಂ ।
ವಿದಿತಂಮಾಡಿದರಾರ್ ಮಹಾಸತಿಯರಾರ್ ನಿಮ್ಮಿಂದದಿಂ ಮೋಕ್ಷ ಸಂ ॥
ಪದಮಂ ಮಾಡುವ ದೀಕ್ಷೆಗೊಂಡರಿನುತುಂ ಕೈಕೊಂಡು ಲಕ್ಷ್ಮೀಧರಂ ।
ಮೊದಲಾಗೆಲ್ಲರುಮಚ್ಚರಿಂದೆಱಗಿ ಸೀತಾ ಸಂಸ್ತವಂ ಮಾಡಿದರ್ ॥ ೩೬ ॥

ಅಂತು ಗುಣಸ್ತವನಂಗೆಯ್ದು ದಿವಿಜ ಸಭೆಯೊಳಿರ್ದು ಧರ್ಮಮಂ ಕೇಳ್ದಿಂ ಬಚ್ಚಿಕ್ಕೆ ವಿಭೀಷಣಂ ಸಕಲಭೂಷಣ ಭಟ್ಟಾರಕರ್ಗೆ ಕರ ಕಮಲಮುಂ ಮುಗಿದು ಪೂರ್ವ ಜನ್ಮದೊಳ್ ರಾಮನಾವುದೊಂದು ಪುಣ್ಯಮನುಪಾರ್ಜಿಸಿ ಸಕಲ ವಿದ್ಯೇಗಳಂ ಕಲ್ತು ಮಹಾವಿಭವ ಸಹಿತನಾದಂ ಮತ್ತಂ ಶೌಚಾಚಾರ ಪರಾಯಣನಪ್ಪ ವಿದ್ಯಾಧರ ವಲ್ಲಭಂ ರಾವಣನಾವ ಪಾಪಂಗೆಯ್ದನಾಗಿ ಸೀತಾದೇವಿಗೆ ಮರುಳ್ಗೊಂಡು ಪೋದನಾರ್ಗಮುಸಾಧ್ಯನುಮಭೇದ್ಯನುಂ ಜಗದ್ವಿಜಯಿಯುಮಪ್ಪ ರಾವಣನಂ ಲಕ್ಷ್ಮಣನಾವುದೊಂದು ಪುಣ್ಯಂಗೆಯ್ದನಾಗಿ ಸಂಗ್ರಾಮದೊಳ್ ಕೊಂದು ಭರತ ತ್ರಿಖಂಡ ಮಂಡಲಾಧಿಪತಿಯಾದನದೆಲ್ಲಮಂ ಬೆಸಸಿಮೆನೆ—

ಕಂ ॥ ಮದನಫಣಿ ನಿರ್ವಿಷೀಕರ
ಣ ದಿವ್ಯ ಮಂತ್ರ ಸ್ವನಂ ಜರಾಮರಣ ಶಿಲಾ ॥
ವಿದಳನ ಟಂಕಧ್ವನಿ ಪೊ
ಣ್ಮಿದತ್ತು ಕೇವಲಿಯ ಮಧುರ ಗಂಭೀರ ರವಂ ॥ ೩೭ ॥

---

1. ಪೃಥ್ವೀಮತಿ. ಗ. ಘ. 2. ದೆಸ್ಸ. ಕ. ಖ ಗ. ಘ.

ಈ ಭರತದ ಯಕ್ಷಪುರದ ನಯದತ್ತನೆಂಬ ಪರದಂಗಮಾತನ ಪರದಿತಿ ಸುನಂದೆಗಂ ಪ್ರಥಮ ಜನ್ಮದೊಳ್ ಧನದತ್ತನೆಂಬ ತನೂಜನಾಗಿ ಜಿನಧರ್ಮಮುಂ ಬಿಡದೆ ನಡೆದು ಜೀವಿತಾವಧಿಯೊಳ್ ಸೌಧರ್ಮಕಲ್ಪ ಗತನಾಗಿ ತದಾಯುರವಸಾನ ದೊಳ್ ಶ್ರಾವಸ್ತಿಪುರದ ಪರದಂ ಸಮ್ಯಗ್ದೃಷ್ಟಿ ಮೇರುವೆಂಬಂಗಮಾತನ ಪರದಿತಿ ಧಾರಿಣಿಗಂ ಪದ್ಮರುಚಿವೆಸರ ಮಗನಾಗಿ ಜಿನಮಾರ್ಗದೊಳ್ ನಡೆದು ಕಡೆಯೊ ಳೀಶಾನಕಲ್ಪದೊಳ್ ಪುಟ್ಟಿ ತದಾಯುರಬ್ಧಿಯಂ ತವೆ [1]ಪೀರ್ದಲ್ಲಿಂ ಬಂದಪರ ವಿದೇಹದ ವಿಜಯಾರ್ಧ ನಗದ ನಂದ್ಯಾವರ್ತಪುರಮನಾಳ್ವ ನಂದೀಶ್ವರನೆಂಬ ವಿದ್ಯಾಧರರಂಗಮಾತನರಸಿ ಕನಕಾಭೆಗಂ ನಯನಾನಂದನೆಂಬ ನಂದನನಾಗಿ ವಿದ್ಯಾಧರರಾಜ್ಯ ಸುಖಮನನುಭವಿಸಿ ಭೋಗ ನಿರ್ವೇಗದಿಂ ತಪಸ್ಸ್ಥನಾಗಿ ಪಲ ಕಾಲಂ ತಪಂಗೆಯ್ದು ಸಮಾಧಿಯಂ ಮುಡಿಪಿ ಮಾಹೇಂದ್ರ ಕಲ್ಪಕ್ಕೆ ಪೋಗಿ ಸುರ ಲೋಕ ಸುಖಮನನುಭವಿಸಿ ತದನಂತರಮಲ್ಲಿಂ ಬಂದು ಪೂರ್ವವಿದೇಹದ ಕ್ಷೇಮ ಪುರಮನಾಳ್ವ ವಿಮಲವಾಹನ ಮಹೀಭುಜಂಗಮಾತನಂತಃಪುರ ಪ್ರಧಾನೆ ಪದ್ಮಾ ವತಿಗಂ [2]ಶ್ರೀಚಂದ್ರನೆಂಬ ಕುಮಾರನಾಗಿ ರಾಜ್ಯದೊಳ್ ನಿಂದು ಬಹುಸಹಸ್ರ ಸಂವತ್ಸರಂ ರಾಜ್ಯಂಗೆಯ್ದು ಸಮಾಧಿಗುಪ್ತರೆಂಬಾಚಾರ್ಯರ ಸಮೀಕ್ಷದೊಳ್ ದೀಕ್ಷೆ ಗೊಂಡು ಗ್ರೈವೇಯಕ ತಪಂಗೆಯ್ದು ಬ್ರಹ್ಮಕಲ್ಪಕ್ಕೆ ಪೋಗಿ ಬಂದೀಗಳ್ ರಾಮದೇವನಾದ ನೆಂಬುದುಂ—

ಕಂ ॥ ಬಲಭದ್ರರಾಮ ಜನ್ಮಾ
ವಲಿಯಂ ತಿಳಿವಂತು ಪೇೞ್ದು ಲಕ್ಷ್ಮಣನ ಭವಾ ॥
ವಲಿಯನಮೃತಾಬ್ಧಿ ವೀಚೀ
ಕಲ ಸ್ವರಂ ನೆಗೞೆ ಭುವನ ಗುರುವಿಂತೆಂದಂ ॥ ೩೮ ॥

ಮುನ್ನಂ ಪೇೞ್ದ ಯಕ್ಷಪುರದ ನಯದತ್ತನೆಂಬ ಪರದಂಗೆ ವಸುದತ್ತನೆಂಬ ಮಗನಾಗಿ ಕಾಲಂಗೆಯ್ದು ಮೃಣಾಳಕುಂಡಲ ಪುರಮನಾಳ್ವ ವಿಜಯಸೇನ ಮಹೀ ನಾಥನ ಮಗಂ ಶಂಭುವೆಂಬಂಗೆ ಶ್ರೀಭೂತಿಯೆಂಬ ಪುರೋಹಿತನಾಗಿ ಸನ್ಮಾರ್ಗ ದೊಳ್ ನಡೆದು ನಿಜಸ್ವಾಮಿಯಪ್ಪ ಶಂಭುವಿನ ಕೈಯೊಳ್ ಕನ್ಯಾನಿಮಿತ್ತಂ ಸತ್ತು ದೇವಗತಿವಡೆದಲ್ಲಿಂ ಬಂದು ಪ್ರತಿಷ್ಠಾಪುರದೊಳ್ ಪುನರ್ವಸುವೆಸರ ವಿದ್ಯಾಧರನಾಗಿ ತಪಂಗೆಯ್ದು ದೇವಗತಿಯನಪ್ಪುಕೆಯ್ದಲ್ಲಿಂ ಬಂದೀಗಳ್ ಲಕ್ಷ್ಮಣನಾದನೆಂದು ಬೆಸಸಿ ಬಟ್ಟಾಯಂ ರಾವಣನ ಭವಾವಳಿಯನಿಂತೆಂದು ಬೆಸಸಿದರಾ ಮೃಣಾಳಕುಂಡಲ ಪುರಮನಾಳ್ವ ವಿಜಯಸೇನಂಗಂ ರತ್ನಮಾಲೆಗಂ ಪುಟ್ಟಿ ಶಂಭುವೆಂಬ ದಾರಕನುಂ ಜಿನಧರ್ಮ ನಿರ್ಧಾರಕನುಮಾಗಿ ಮದ್ಯ ಮಧು ಮಾಂಸ ಸೇವನೆಗೆಯ್ದು ನರಕ ತಿರ್ಯ ಗಾದಿ ಗತಿಗಳೊಳ್ ಪಲಕಾಲಂ ತಿರಿತಂದೆಂತಾನುಂ ಪಾಪೋಪಶಮಮಪ್ಪುದುಂ

1. ಬಯ್ತ. ಚ. 2. ಚಂದ್ರಾಭ. ಚ.

ಕುಶಧ್ವಜನೆಂಬ ಪಾರ್ವಂಗಮಾತನ ಪಾರ್ವತಿಗಂ ಭಾಸಕುಂಡಲನೆಂಬ ಮಗನಾಗಿ ಚಿತ್ರಸೇನ ಮುನಿ ಸಮೀಪದೊಳ್ ಜಾತರೂಪ ಧರನಾಗಿ ನಿಷ್ಠೆಯಿಂ ನೆಗಟ್ಟುತ್ತುಂ ವಂದನಾನಿಮಿತ್ತಂ ಸಮ್ಮೇದ ಗಿರೀಂದ್ರದ ಜಿನೇಂದ್ರ ಭವನಂಗಳ್ಗೆ ಪೋಗುತ್ತುಂ ಕನಕನೆಂಬ ವಿದ್ಯಾಧರನ ವಿಭೂತಿಯಂ ಕಂಡು ವಿಸ್ಮಿತನಾಗಿ ಮದೀಯ ತಪಃಫಲದಿ ನೆನಗಮಿಾ ವಿಭೂತಿ ಸಮನಿಸುವುದಕ್ಕೆಂದು ನಿಧಾನ ಪೂರ್ವಕಂ ತಪಂಗೆಯ್ದು ಕಾಲ ಪ್ರಾಪ್ತನಾಗಿ ಸನತ್ಕುಮಾರ ಕಲ್ಪಕ್ಕೆ ಪೋಗಿ ಬಂದೀಗಳ್ ತ್ರಿಖಂಡ ಮಂಡಲಾಧಿ ಪತಿಯಪ್ಪ ರಾವಣನಾದಂ—

ಕಂ ॥ ಎಂದಱಿಪಿ ದಶಾಸ್ಯನ ಭವ
ಸಂದೋಹಮನಖಿಲ ಭುವನ ವಂದ್ಯಂ ಸೀತಾ ॥
ಸುಂದರಿಯ ಭವಮನಱಿಪಲ್
ಮಂದರ ಧೈರ್ಯಂ ಮುನೀಂದ್ರನಂದಿಂತೆಂದಂ ॥ ೩೯ ॥

ಈ ಭರತದ ಯಕ್ಷಪುರದ ಸಾಗರದತ್ತನೆಂಬ ಪರದಂಗಮಾತನ ಪರದಿತಿ ರತ್ನ ಪ್ರಭೆಗಂ ಗುಣವತಿಯೆಂಬ ಮಗಳಾಗಿ ಮಿಥ್ಯಾಭಾವನೆಯಿಂ ಕಾಲಂಗೆಯ್ದಿನಿತಾನುಂ ಕಾಲಂ ತಿರ್ಯಗ್ಗತಿಯೊಳ್ ತಿರಿತಂದು ಕಡೆಯೊಳ್ ಪಿಡಿಯಾಗಿ ಪುಟ್ಟಿ ತೊಟಿಲುತ್ತುಂ ಗಂಗೆಯ ತಡಿಯೊಳೊರ್ಮೆ ತಣ್ಣೀರುಣಲ್ ಪೋಗಿ ಕೆಸರೊಳ್ ಬಿಟ್ಟು ಪೊಱಮಡ ಲಾಱದಿರ್ದ ಸಮಯದೊಳ್ ನಭೋಂಗಣದೊಳ್ ಪೋಗುತ್ತುಂ ತರಂಗತಮನೆಂಬ ವಿದ್ಯಾಧರಂ ಕಂಡು ಸಮೀಪಕ್ಕೆ ಬಂದು ಪಂಚ 'ನಮಸ್ಕಾರಮುಂ ಪೇೞ್ದುದುಮುಪ ಶಮ ಚಿತ್ತದಿಂ ಸತ್ತು ಶ್ರೀಭೂತಿಪುರೋಹಿತಂಗಮಾತನ ಭಾರ್ಯೆ ಸರಸ್ವತಿಗಂ ವೇದ ವತಿಯೆಂಬ ಮಗಳಾಗಿ ತಮ್ಮ ಮನೆಗೆ ಚರ್ಯಾಮಾರ್ಗದಿಂ ಬಂದ ಋಷಿಯರಂ ದೂಷಿಸಿ ನುಡಿಯೆ ತಂದೆ ಬಾರಿಸಿ ಜಿನಧರ್ಮ ಸ್ವರೂಪಮಂ ತಿಳಿಯೆ ಪೇೞ್ದೆ ಕೇೞ್ದು ಜೈನಮಾರ್ಗದಿಂ ನಡೆಯುತ್ತುಮಿರಲಾಕೆಯಂ ಮೂರನೆಯ ಭವದೊಳ್ ರಾವಣ ನಾಗಿ ಪುಟ್ಟುವ ಶಂಭು ಕಂಡು ಕಣ್ಸೋಲ್ತು ಬೇಡಿಯಟ್ಟುವುದುಂ ಶ್ರೀಭೂತಿ ಮಿಥ್ಯಾ ದೃಷ್ಟಿಯೆಂದು ಕೂಸುಗುಡಲೊಲ್ಲದಿರೆ ಮುಳಿದಾತನಂ ಕೊಲಿಸಿ ಮಗುಚ್ದುಮಾ ಶಂಭುವಾಕೆಯಂ ಬೇಡುವುದುನೊಡಂಬಡದೆ ಜನಕ ಶೋಕ ವೇಗದಿನಾತಂಗೆ ಮಱು ಮೆಯ್ವೋಳಾದೊಡಂ ವಿನಾಶ ಹೇತುವಾಗಿ ಜನಿಯಿಸುವೆನಕ್ಕೆಂದು ನಿಧಾನಪೂರ್ವಕಂ ತಪಂಗೆಯ್ದು ಕಟ್ಟಿದು [1]ಬ್ರಹ್ಮಕಲ್ಪದೊಳ್ ಪುಟ್ಟಿ ಬಂದು ಚಿತ್ತೋತ್ಪವೆಯೆಂಬಳಾಗಿ ಪುಟ್ಟಿ ಕ್ರಮದಿನೀಗಳ್ ಸೀತೆಯಾದಳೆಂದು ಬೆಸಸಿ ಪ್ರಭಾಮಂಡಲನ ಭವಾವಳಿಯ ನಿಂತೆಂದು ಬೆಸಸಿದರ್ ಗುಣವರ್ಮನೆಂಬ ಪರದನಾಗಿ ಕುಂಡಲ ಮಂಡಿತನೆಂ ಬರಸನಾಗಿ ಬಟ್ಟಯಂ ಪ್ರಭಾಮಂಡಲನಾದಂ ವಸುದತ್ತನಾದಂದಿನ ಕೆಳೆಯನಪ್ಪ

1. ಬ್ರಹ್ಮೋತ್ತರ. ಪ

ಯಾಜ್ಞವಲ್ಕಿ ವಿಭೀಷಣನಾಗಿ ಪುಟ್ಟಿ ಮುನ್ನಿನ ಕೆಳೆತನಂ ಕಾರಣಮಾಗೆ ಲಕ್ಷ್ಮಣನೊಳ್ ಬಂದು ಕೂಡಿದಂ ಮುನ್ನೆ ಪೇೞ್ದಿ ಪದ್ಮರುಚಿಯ ಕೈಯೊಳ್ ಪಂಚ ನಮಸ್ಕಾರಮಂ ಕೇೞ್ದ ವೃಷಭಂ ರಾಜಪುತ್ರನಾಗಿ ಪುಟ್ಟಿ ತಪಂಗೊಂಡು ಸ್ವರ್ಗದೊಳ್ ಪುಟ್ಟಿಬಂದೀಗಳ್ ಸುಗ್ರೀವನಾಗಿ ಮುನ್ನಿನುಪಕಾರಂ ಕಾರಣಮಾಗೆ ರಾಮಂಗನುವಶನಾಗಿ ಬಿಸಕೆಯ್ದುನೆಂದಿದೆಲ್ಲಮಂ ಸಕಲಭೂಷಣ ಕೇವಲಿಗಳ್ ಸವಿಸ್ತರಂ ರಾಮಂಗೆ ಪೇೞ್ದುಮತ್ತಮಿಂತೆಂದರ್ ಶ್ರೀಭೂತಿಯೆಂಬ ಪುರೋಹಿತನಾದಂದು ರಾವಣನಪ್ಪ ಶಂಭುವಿನ ಕೈಯೊಳ್ ಸತ್ತುದರಿಂದಾ ಮುಳಿಸು ಕಾರಣಮಾಗೆ ಲಕ್ಷ್ಮಣಂ ರಾವಣನಂ ಕೊಂದಂ ಸೀತೆಯುಂ ವೇದವತಿಯಾದಂದು ಮಂಡಲಾಗ್ರ ಪುರದೊಳ್ ಋಷಿಯರ ಮಂಡಲಿಯೊಳಿರ್ದ ಸುದರ್ಶನ ಋಷಿಯರುಮನವರ ತಂಗೆವಿರಪ್ಪ ಸುದರ್ಶನೆಯರೆಂಬ ಕಂತಿಯರುಮಂ ತಮ್ಮೊಳ್ ಪೊರ್ದಿದರಸಿ ಪೊಲ್ಲದಂ ನುಡಿದು ನೆಗೞುತ್ತುಮಿರೆ ವೇದವತಿಯ ಮೊಗದೊಳೊಂದು ಬಾಹು ಪುಟ್ಟಿ ಪೊಲ್ಲರಲ್ಲದರಂ ಪೊಲ್ಲರೆಂದು ನುಡಿದೊಡೀ ಬಾಹಾದುದೆಂದೆಲ್ಲರ್ಗಮಾದ್ಯಂತಂ ತಿಳಿಯೆ ಪೇೞ್ದುಪ್ರಾಯಶ್ಚಿತ್ತಂಗೊಂಡೊಳ್ಳಿತ್ತಾಗಿ ನಡೆದು ಕಡೆಯೊಳ್ ದೇವಲೋಕಕ್ಕೆ ಪೋಗಿ ಬಂದು ತಾನುಮಿಗಳಭಿಯೋಗಕ್ಕೆ ಪಕ್ಕಾದಳೆಂದು ಮತ್ತಮಿಂತೆಂದರ್—

ಚ ॥ ಜಿನಮುನಿಯಕ್ಕೆ ಜೈನನೆನಿಸಿರ್ದವನಕ್ಕೆಮ ಪಾಪ ಬುದ್ಧಿಯಿಂ।
ತನಗೆ ಜಿನೇಂದ್ರ ಧರ್ಮದವರಾರುಮನಾಗದು ದೂಷಿಸಲ್ಕೆ ಕೆ ॥
ಮ್ಮನೆ ಮುನಿವಂಗೆ ಮಚ್ಚರಿಸುವಂಗಱಿವಿಲ್ಲದವಂಗೆ ದೂಷಿಪಂ।
ಗನಿತಿನಿತೆಂದು ಲೆಕ್ಕವಿಡಲೇಂಗಳ ಬರ್ಪುದೆ ಕರ್ಮ ಬಂಧಮಂ ॥ ೪೦ ॥

ಎಂದು ಪೇೞ್ವುದುಮನಂತರಂ ಕೃತಾಂತವಕ್ತ್ರನೆಂತಾನುಂ ರಾಮಸ್ವಾಮಿಯನೊಡಂಬಡಿಸಿ ಪಲಂಬರರಸುಮಕ್ಕಳ್ವೆರಸು ಸಕಲ ಭೂಷಣ ಬೋಧ ನಿಧಿಯ ಸನ್ನಿಧಿಯೊಳ್—

ಕಂ ॥ ಅಱಿದಂದೆ ತೊಱೆಯದಂದೇ
ತಱಿದಱಿವೆಂದಱಿವೆ ತನಗೆ ತೊಡವಾದುದೆನಲ್ ॥
ತೊಱೆದಾ ಕೃತಾಂತವಕ್ತ್ರಂ
ತಱಿಸಂದು ಕೃತಾಂತ ವಕ್ತ್ರಮಂ ಮುದ್ರಿಸಿದಂ ॥ ೪೧ ॥

ಅಂತು ಕೃತಾಂತವಕ್ತ್ರಂ ದೀಕ್ಷೆಗೊಳ್ವುದುಂ ರಾಮನಿನ್ನುಂ ಕೆಲದಿವಸಮಿರ್ದು ದೀಕ್ಷೆಗೊಳ್ವೆಮೆಂದು ನಿಶ್ಚಯಿಸಿ ಭಟ್ಟಾರಕರ್ಗೆ ಸರ್ವಾಂಗ ಪ್ರಣತನಾಗಿ ಸೀತಾಂಬಿಕೆಯರಲ್ಲಿಗೆ ಪೋಗಿ ಲಕ್ಷ್ಮಣಾದಿಗಳ್ವೆರಸು ನಿಶ್ಶಲ್ಯಂಗೆಯ್ದು ದಿವ್ಯ ಮುನಿಯ ಸಭಾಮಂಡಲಮಂ ಪೊಱಮಟ್ಟು—

ಮ ॥ ದಶ ದಿಙ್ಮಂಡಲಮುಂ ಪಳಂಚಲೆಯೆ ಭೇರೀನಿಸ್ವನಂ ರಾಜ ಲೋ ।
ಕ ಶಿರೋಭೂಷಣ ಪಂಚರತ್ನ ರುಚಿ ಲೇಖಾನೀಕದಿಂ ಶಕ್ರ ಚಾ ॥
ಪ ಶತಂಗಳ್ ನೆಲೆವೆರ್ದೆ ಲಕ್ಷ್ಮಣ ಸಮೇತಂ ರಾಮದೇವಂ ಲವಾಂ ।
ಕುಶ ವಕ್ತ್ರಾಂಬುಜ ದತ್ತ ದೃಷ್ಟಿ ಪುರಮುಂ ಪೊಕ್ಕುಂ ಮಹೋತ್ಸಾಹದಿಂ ॥೪೨॥

ಅಂತಯೋಧ್ಯಾಪುರಮಂ ಪೊಕ್ಕು ಸುಖದಿಂ ಕೆಲವುಕಾಲಮಿರ್ದುದುಮತ್ತ ಸೀತಾರ್ಯಿಕೆ ಪಲವುಕಾಲಂ ತಪಂಗೆಯ್ದು ಮೂವತ್ತಾಱು ದಿವಸಂ ಸಂನ್ಯಸನಮಂ ಕೈಕೊಂಡಚ್ಯುತ ಕಲ್ಪದೊಳ್ ಸ್ವಯಂಪ್ರಭನೆಂಬ ವ್ರತೀಂದ್ರನಾಗಿ ಪುಟ್ಟಿದಳ್ ಮತ್ತ ವಿತ್ತ ಕಾಂಚನಪುರಮನಾಳ್ವ ಕಾಂಚನ ರಥಂಗಂ ವಿದ್ಯುನ್ಮಾಲೆಗಂ ಪುಟ್ಟಿದ ಮಂದಾಕಿನಿಯುಂ ಚಂದ್ರವಕ್ತ್ರೆಯುಮೆಂಬ ಕನ್ನೆಯರ್ ಸ್ವಯಂವರಕ್ಕೆ ನೆರೆದರಸುಮಕ್ಕಳೊಳೊರ್ವರುಮಂ ಮೆಚ್ಚದೆ ಲವಂಗೆ ಮಂದಾಕಿನಿ ಮಾಲೆಯಂ ಸೂಡಿದಳಂಕುಶಂಗೆ ಚಂದ್ರವಕ್ತ್ರೆ ಮಾಲೆಯಂ ಸೂಡಿದಳಾ ಸಭೆಯೊಳಿರ್ದ ಲಕ್ಷ್ಮಣನೆಣ್ಬರ್ ಕುಮಾರರು ಮದಂ ಕಂಡು ನಿರ್ವೇಗ ಪರಾಯಣರಾಗಿ ಮಹಾಬಲ ಭಟ್ಟಾರಕರ ಪಕ್ಕದೆ ದೀಕ್ಷೆಯಂ ಕೈಕೊಂಡರಿತ್ತ ವಿದ್ಯಾಧರ ರಾಜ್ಯ ಸುಖಮನೆನಿತಾನುಂ ಕಾಲಂ ಪ್ರಭಾಮಂಡಲನನುಭವಿಸಿ ಕರುಮಾಡದೇಱನೆಯ ನೆಲೆಯೊಳಿರ್ದಲ್ಲಿ ಸಿಡಿಲ್ ಪೊಡೆಯೆ ಸತ್ತು ದೇವ ಕುರುವಿನೊಳ್ ಪುಟ್ಟದನಿತ್ತ ಹನುಮಂ ಕರ್ಣಕುಂಡಲಪುರದೊಳಗರಸುಗೆಯ್ಯುತ್ತುಂ ಪಲಕಾಲಮಿರ್ದೊಂದು ದಿವಸಂ ಕೃಷ್ಣಪಕ್ಷದಿರುಳ್ ಮಣಿಮಾಡದೊಳಿರ್ದು ಗಗನ ತಲದಿಂ ಬೀೞ್ತಿರ್ಪುಲ್ಕಮಂ ಕಂಡು ಸಂಸಾರಿಗಳ ಧನಮುಂ ಜೀವನಮುಂ ಜೌವನಮುಮಿಂತೆ ಕ್ಷಣದಿಂದಧ್ರುವಂಗಳೆಂದು ಬಗೆದು ನಿರ್ವೇಗ ಪರನಾಗಿ [1]ಸುಶ್ರುತನೆಂಬ ತನ್ನ ಮಗಂಗೆ ರಾಜ್ಯಮಂ ಕೊಟ್ಟು ವಿದ್ಯುದ್ವ್ಯುತಿಯೊದಲಾಗೇೞ್ನೂಱ್ವ್ವರಿಯ್ವದಿಂಬರ್ ವಿದ್ಯಾಧರ ವಲ್ಲಭರ್ವೆರಸು ಧರ್ಮಾಭರಣರೆಂಬ ಚಾರಣಋಷಿಯರ ಸಮಕ್ಷದೊಳ್ ದೀಕ್ಷೆಯಂ ಕೊಂಡಂ ಹನುಮನರಸಿಯರೆಲ್ಲಂ ಸುಮತಿ ಗಂತಿಯರ ಪಕ್ಕದೊಳ್ ತಪಸ್ಸ್ಥೆಯರಾದರ್ ಹನುಮಮುನಿ ಘಾತಿಯುಮನಘಾತಿಯುಮಂ ಕೆಡಿಸಿ ನಿರ್ವಾಣ ಪ್ರಾಪ್ತನಾದಂ—

ಕಂ ॥ ಇತ್ತ ಬಲದೇವನುಂ ಪುರು
ಷೋತ್ತಮನುಮನೇಕ ವತ್ಸರಂ ರಾಜ್ಯ ಸುಖಾ ॥
ಯತ್ತಮನರ್ ನಿರವಧಿ ಸಂ
ಪತ್ತಿಗೆ ನೆಲೆಯೆನಿಸಿ ನಾಡೆ ನಲಿಯುತ್ತಿರ್ದರ್ ॥ ೪೩ ॥

ಅಂತಿರ್ದುದುಮತ್ತಲೊರ್ಮೆ ಸುರ ಪರಿಷನ್ಮಧ್ಯ ವರ್ತಿ ಸೌಧರ್ಮೇಂದ್ರಂ ಧರ್ಮ ನಿರೂಪಣ ಪ್ರವಣನಿಂತೆಂದಂ—

---

1. ಸುವ್ರತ. ಪ.

ಕಂ ॥ ಮನುಜ ಗತಿ ಗತಿಗಳೊಳ್ ಪಾ
ವನಮೆಂತೆನೆ ಮಿಕ್ಕ ಗತಿಗಳಪವರ್ಗ ಶ್ರೀ ॥
ಸ್ತನಮಂಡಲ ಗಾಢಾಲಿಂ
ಗನ ಸೌಖ್ಯಮನೀಯಲಾಜವಪ್ಪುದಜಿಂದಂ ॥ ೪೪ ॥

ಎಂಬುದುಮಾ ಸಭೆಯೊಳಿರ್ದ ಸಮ್ಯಗ್ದೃಷ್ಟಿಯಪ್ಪ ವಿಭಾವಸುವೆಂಬ ದೇವಂ—

ಕಂ ॥ ಮಳ ರಹಿತಮಪ್ಪ ತಪಮಂ
ತಳೆದಪವರ್ಗಕ್ಕೆ ಸಲ್ವ ಮಾನವ ಗತಿಯಂ ॥
ತಳಿವೊಡೆ ದಿವಿಜಾಯುಷ್ಯಂ
ಗಳಿಯಿಪ ತೆಜನಾವುದೆಂದು ಸಂಭ್ರಮಿಸುವುದುಂ ॥ ೪೫ ॥

ಅದಂ ಕಂಡಾಗಳ್ ಮತ್ತೊರ್ವಂ ಗೀರ್ವಾಣನಿಂತೆಂದಂ—

ಕಂ ॥ ಮನುಜ ಗತಿವಡೆವುದುತ್ತಮ
ಮೆನಿಸಿಯುಮಾ ಬ್ರಹ್ಮಕಲ್ಪದಿಂ ಬಂದುಂ ರಾ ॥
ಮನದೇಕೆ ದೀಕ್ಷೆಗೊಳ್ಳಂ
ಮನುಷ್ಯ ಭವಮೊಂದೆ ದೀಕ್ಷೆಗೇಂ ಕಾರಣಮೇ ॥ ೪೬ ॥

ಎನೆ ವಿಭಾವಸುವೆಂಬಂ ಲಕ್ಷ್ಮಣನೊಳಾದ ಸ್ನೇಹಂ ಕಾರಣಮಾಗೆ ತಪಮನುಪೇಕ್ಷಿಸಿರ್ದಂ—

ಕಂ । ಎಂತುಂ ಪೂರ್ವಭವ ಸ್ನೇ
ಹಂ ತೊಜೆಯಲ್ಬರ್ಪುದಲ್ತು ಲಕ್ಷ್ಮಣನ ವಿಯೋ ॥
ಗಂ ತನಗಾದೊಡೆ ರಾಮಂ
ಸಂತಾಪಮನತಿ ವಿಷಾದಮಂ ಕೈಕೊಳ್ಗುಂ ॥ ೪೭ ॥

ಲಕ್ಷ್ಮಣನುಮಂತೆ ರಾಮಂಗತಿಸ್ನೇಹಿತನಾತನಗಲ್ವಾಗಳೆ ಸಾಗುವೆನೆ ನಿಸರ್ಗ ರಾಗಿಗಳಪ್ಪುದಜಿಂ ರಾಮಲಕ್ಷ್ಮಣರ ಸ್ನೇಹಮಂ ನೋಡಲರ್ಥಿಗಳಾಗಿ ರತ್ನ ಚೂಲನುಮಮೃತಚೂಲನುಮೆಂಬ ದೇವರಿರ್ವರುಮಯೋಧ್ಯಾಪುರಕ್ಕೆ ಬಂದು—

ವ॥ಸ್ರ ಪರಲೋಕ ಪ್ರಾಪ್ತನಾದಂ ದಶರಥ ಸುತನೆಂಬಂತು ರಾಜಾಲಯಂ ಶೋ।
ಕ ರಸಾಂಭೋರಾಶಿಯೊಳ್ ಭೋಂಕನೆ ಮುಳುಗಿದುದೆಂಬಂತು ಹಸ್ತಚ್ಛಟಾಜ॥

ರ್ಧುರ ಮಧ್ಯಂ ಪೆಂಡವಾಸಂ ಗಗನ ವಿವರಮಂ ರೋದನೋನ್ನಾದದಿಂದಂ।
ಭರಿತಂ ಮಾಪ್ಪಂತು ವೈಕುರ್ವಣ ಪರಿಣತಿಯಂ ಬೀಱಿದಂ ರತ್ನಚೂಲಂ॥೪೮॥

ಮ ॥ ಬಲದೇವಾಕೃತಿಯಂ ಸರಾಗನಮರಂ ನಿಷ್ಪ್ರಾಣಮುಂ ವಿಕ್ರಿಯಾ।
ಬಲದಿಂ ನಿರ್ಮಿಸೆ ಕಂಡು ಲಕ್ಷ್ಮಣನದಂ ನಿಸ್ಸೀಮ ಶೋಕಂ ಭಯಾ ॥
ಕುಲಿತಂ ಹಾ ನಿನದಾನುಗಂ ಕ್ಷಣದೆ ಜೀವಂ ಪೋಗೆ ಬಿಟ್ಟಿಂ ಧರಾ।
ತಲದೊಳ್ ಹರ್ಷ ವಿಷಾದ ವೇಗದೊದವಿಂ ಸಾವಪ್ಪುದಾಶ್ಚರ್ಯಮೇ ॥ ೪೯ ॥

ಅಂತು ಕಾಲಪ್ರಾಪ್ತನಪ್ಪುದುಂ ಲಕ್ಷ್ಮಣನಂತಃಪುರ ಪುರಂಧ್ರಿಯರ್ ಕಂಡತಿ ಪ್ರಲಾಪಂ ಗೆಯ್ವುದಂ ರಾಮಂ ಕೇಳ್ದು ಮೂರ್ಛಿತನಾಗಿ ನೀಡಱಿಂದೆಬ್ಬಿತ್ತು ಗತಪ್ರಾಣನಾದ ಲಕ್ಷ್ಮಣನ ಕೆಲಕ್ಕೆ ಪೋಗಿ ಮಗುಟ್ಟಿಂ ಮೂರ್ಛಾಗತನಾಗಿ ಮತ್ತಮೆಬ್ಬಿತ್ತು ಪಲತೆಱದಿಂ ಪ್ರಲಾಪಂಗೆಯ್ದು.—

ಕಂ ॥ ಹಾ ತಮ್ಮನೆ ನಿನ್ನುಮನಾ
ಪಾತಕಿ ಬಿದಿ ಕೊಂಡುಪೋದನೇವೆನೆನುತ್ತುಂ ॥
ಸೀತಾಪತಿ ಪೂರ್ವ ಭವ
ಪ್ರೀತಿಯಿನತಿಶೋಕ ವೇಗ ವಿಹ್ವಲನಾದಂ ॥ ೫೦ ॥

ಅಂತಚಿಂತ್ಯ ದುಃಖಾಭಿಭೂತನಾಗಿ ಶೋಕಂಗೆಯ್ಯುತ್ತುಮಿರೆ ಲವಾಂಕುಶರ್ ಕಂಡದುವೆ [1]ನಿರ್ವೇಗ ಕಾರಣಮಾಗೆ ಬಂದು ರಾಮಸ್ವಾಮಿಗೆ ಪೊಡೆವಟ್ಟು ಬೀಟ್ಕೊಂಡು ಮಹೇಂದ್ರೋದ್ಯಾನದಮೃತೇಶ್ವರ ಭಟ್ಟಾರಕರ ಪಕ್ಕದೆ ತಪಸ್ಸ್ಥರಾಗಿರ್ದರಿತ್ತ ರಾಮನ ಶೋಕಮಂ ವಿಭೀಷಣಂ ಬಂದು ಸಂಸಾರದನಿತ್ಯತೆಯಂ ಪೇೞ್ದು ಪಶಮಿಸಲಾಱದಿರೆ ಸುಗ್ರೀವಾದಿಗಳ್ ನೆರೆದು ಬಂದು ಲಕ್ಷ್ಮಣನ ಶವಮಂ ದಹಿಸುವಮೆಂಬುದುಂ—

ಕಂ ॥ ಅವರಂ ಪಲತೆಱದಿಂ ಬ
ಯ್ದು ವೊಯ್ದು ಲಕ್ಷ್ಮಣನ ಪೆಣನನಾ ಕ್ಷಣದೊಳ್ ನಾ ॥
ನಿವರ ಸಮೀಪದೊಳಿರಲೆಂ
ತುವಾಗದೆಂದೆತ್ತಿಕೊಂಡು ರಾಮಂ ಪೋದಂ ॥ ೫೧ ॥

ಮ॥ಸ್ರ॥ ಮರುಳಾದಂ ವಾಸುದೇವರಿ ಕಱಿದೊಡೆ ಬಲದೇವಂ ಪೆಣಕ್ಕೆತ್ತು ವಸ್ತ್ರಾ।
ಭರಣ ಸ್ರಕ್ಚಂದನಾಲೇಪನ ಪರಿಕರಮುಂ ಪೊತ್ತುಕೊಂಡಿರ್ದಪಂ ತ ॥
ಚ್ಚರಮಾಂಗಂ ವಿಶ್ವ ವಿದ್ಯಾವಿದನೆನೆ ವಿಕಲಂಮಾಪ್ಪುದಾಶ್ಚರ್ಯಮೇ ಮಿ।
ಕ್ಕರನಜ್ಞಾನಾಸವಾಸ್ವಾದಿತ ಜಡರನೆಲೇ ಮೋಹ ಮೂರ್ಛಾತಿರೇಕಂ ॥೫೨॥

---

1. ವೈರಾಗ್ಯ ಚ.

ಕಂ॥ ಬಗೆಗಿಡಿಸೆ ಮೋಹನೀಯಂ
ನಗಧರ ಶವಧಾರಿಯಾಗೆ ಷಣ್ಮಾಸಮದೇಂ ॥
ನೆಗಟ್ಟಿದೊ ಸಲೆ ಬಲದೇವನ
ಪೆಗಲ ಪೆಣಂ ಕುಂದದೆಂಬ ನಾಲ್ನುಡಿ ಜಗದೊಳ್ ॥ ೫೩ ॥

ಅಂತು ರಾಮಸ್ವಾಮಿ ರಾಜ್ಯ ರಕ್ಷಣಮಂ ಮಱೆದು ಲಕ್ಷ್ಮಣ ವಿಯೋಗದಿಂ ವಿಕಲನಾಗಿರೆ ಕೆಲದ ನೆಲದರಸುಮಕ್ಕಳ್ ಪೊಡರ್ಪುಗೆಟ್ಟು ಮಟ್ಟಮಿರ್ದುದುಮಿತ್ತ ಲಿಂದಗಿಯ ಮಗನಪ್ಪ ವಜ್ರಮಾಲಿ ಸುಂದರನ ಮಗನಪ್ಪ ಚಾರುರತ್ನಂಬೆರಸು ಪಲರುಮಂ ಕೂಡಿಕೊಂಡಯೋಧ್ಯೆಗಾಸನ್ನಮಾಗೆ ಬೀಡಂಬಿಟ್ಟುದಂ ರಾಮಂ ವಚನ ಪರಂಪರೆಯಿಂ ಕೇಳ್ದು ಲಕ್ಷ್ಮಣನಂ ಬಿಟ್ಟು ಪೋಗಲಾಱದತಿ ದುಃಖಿತನುಂ ಕಲುಷ ವಶಗತನುಮಾಗಿ ನಿಜ ವಜ್ರಾವರ್ತ ಚಾಪಮುಮನಗ್ನಿಮುಖ ಶಿಲೀಮುಖಮುಮಂ ನೋಡುತ್ತುಮಿರೆ ದೇವಗತಿವಡೆದ ಜಟಾಯುವುಂ ಕೃತಾಂತವಕ್ತ್ರನುಮಾಸನಚಂಪ ಮಾಗಲವಧಿಬೋಧದಿಂ ಲಕ್ಷ್ಮಣಂ ಮರಣಪ್ರಾಪ್ತನಪ್ಪುದುಂ ರಾಮಂ ಶೋಕಾಭಿ ಭೂತನಾಗಿರೆ ಪಗೆವಡೆಯಿಱಿಯಲೆಂದು ಬಂದಯೋಧ್ಯೆಯಂ ಬಳಸಿ ಬಿಟ್ಟರ್ದುದನಱಿ ದಿರ್ವರ್ ದೇವರುಂ ಬಂದು ಮಾರ್ಪಡೆಯನೋಡಿಸುವುದುಂ ವಜ್ರಮಾಲಿಯುಂ ಚಾರುರತ್ನನುಂ ತಮಗದುವೆ ನಿರ್ವೇಗ ಕಾರಣಮಾಗೆ ಪಲಬರರಸುಮಕ್ಕಳ್ಗೆರಸು ರತಿವೇಗ ಭಟ್ಟಾರಕರ ಪಕ್ಕದೆ ತಪಸ್ಸ್ಥರಾದರಿತ್ತ ಕೃತಾಂತವಕ್ತ್ರ ಜಟಾಯು ದೇವರ್ಕಳ್ ರಾಮನಲ್ಲಿಗೆ ಬಂದು—

ಕಂ॥ ಎನಿತಾನುಂ ತೆಱದಿಂ ಧ
ರ್ಮ ನಿರೂಪಣೆಗೆಯ್ದುಮೆಂತುಮೇನಾರ್ತರೆ ರಾ ॥
ಮನ ವಿಕಲತೆಗಿಡಿಸಲ್ ಮು
ನ್ನಿನ ಭವದನುಬಂಧಮಂ ಕಟಲ್ಚುವರೊಳರೇ ॥ ೫೪ ॥

ಅಂತು ಧರ್ಮವಾತ್ಸಲ್ಯದಿಂ ರಾಮನ ವೈಕಲ್ಯಮುಂ ಕಳೆಯಲೆಂದೊಂದೆಡೆ ಯೊಳ್ ನಯನ ಪಥದೊಳಿರ್ದು—

ಮಾಸ್ರ॥ ಕಲನೊಂದಂ ತೀವಿ ನೀರಂ ಪೊಸೆದು ಸಿಕತದೊಳ್ ಗಾಣಮಂ ಪೊಯ್ದು ಮತ್ತಂ ।
ಶಿಲೆಯೊಳ್ ಧಾನ್ಯಂಗಳಂ ಬಿತ್ತಿಯುಮೊಣಗಿದ ಭೂಜಕ್ಕೆ ನೀರ್ವೊಯ್ವುದುಂ ಕೋ ॥
ಟಲೆವಟ್ಟೇ ನಿಷ್ಫಲೋದ್ಯೋಗಮನೊಡರಿಪುದೇನೆಂಬುದುಂ ದೇವರೆಂದರ್ ।
ಬಲದೇವಂಗಣ್ಣ ನೀನೀ ಪೆಣನನಲುಪಿನಿಂ ಪೊತ್ತಿರಲ್ ಬರ್ಪುದುಂಟೇ ॥ ೫೫ ॥

ಎನೆ ಮುನಿದಮಾಂಗಲ್ಯ ವಚನಮನೇಕೆ ನುಡಿದಿರೆಂದಾ ಕೃತಾಂತವಕ್ತ್ರನೊಳ್ ನುಡಿಯುತ್ತಿರ್ಪನ್ನೆಗಂ ಜಟಾಯುದೇವನೊಂದು ಪೆಣನಂ ಪೊತ್ತು ಮುಂದಣ್ಗೆವರೆ ರಾಮಂ ಕಂಡೀ ಮೃತಕಮಂ ನಿಷ್ಪ್ರಯೋಜನಮಿಂತೇಕೆ ಪೊತ್ತು ತೊಟಲ್ದಪೆಯೆನೆ ಜಟಾಯುದೇವಂ ನೀನೀ ಪೆಣನಂ ಪೊತ್ತು ತೊಟಲ್ವುದೇನಿಮಿತ್ತಮೆಂದು ತೋಱು ನುಡಿವುದುಂ—

ಕಂ ॥ ಎಂತಾನುಂ ಪಲವುಂ ದೃ
ಷ್ಟಾಂತಮನೆನಿತಾನುಮುಪಮೆಯಂ ತದ್ವಿಜರ್ ॥
ಮುಂ ತೋಱು ತೋಱು ಚಿತ್ತ
ಭ್ರಾಂತಿಯುಮಂ ಹಳಿಯ ಪಟುಯುಮುಂ ಪಿಂಗಿಸಿದರ್ ॥ ೫೬ ॥

ಅಂತಪಗತ ಮೋಹನಾದ ರಾಮುಂಗೆ ದೇವರಿರ್ವರುಂ ತಮ್ಮ ದಿವ್ಯ ಸ್ವರೂಪಮುಂ ತೋಱು ಮತ್ತಮಿಂತೆಂದರೆಮಗಾಸನ ಕಂಪಮಪ್ಪುದುಂ ನಿಮಗಾದುಪಸರ್ಗಮ ನಱುದು ಬಂದು ನಿಮ್ಮ ಮೇಲೆತ್ತಿ ಬಂದ ಪಗೆವರನೋಡಿಸುವುದುಮವರದುವೆ ನಿರ್ವೇಗ ಕಾರಣಮಾಗೆ ಪಲಂಬರರಸುಮಕ್ಕಳ್ವೆರಸು ತಪಂಬಟ್ಟರೆಂಬುದುಂ—

ಕಂ ॥ ಮುಗಿಲ ಮಱೆಪೋದ ಚಂಡಾಂ
ಶುಗೆ ಕಾಳಕೆಪೋದ ಪೊಂಗೆ ಪೊಗೆಪೋದ ಕೃಶಾ ॥
ನುಗೆ ಸಮನಾದಂ ಮೋಹಂ
ಬಗೆಯಿಂ ಪೊಱಮಟ್ಟು ಪೋಗೆ ದಶರಥರಾಮಂ ॥ ೫೭ ॥

ಅಂತಕಲುಷ ಹೃದಯನಾಗಿ—

ಕಂ ॥ ಎನ್ನುಮನಾನಱಿಯದೆ ಚಿಃ
ಬನ್ನಕ್ಕೊಳಗಾದೆನೆಂದು ರಘುಕುಲ ತಿಲಕಂ ॥
ತನ್ನಂ ತಾನಱಿದೊಡಲಂ
ತನ್ನಿಂ ಬೇರ್ಪಡಿಸಲಾದಮುತ್ಸುಕನಾದಂ ॥ ೫೮ ॥

ಅಂತು ವೈರಾಗ್ಯ ಪರಾಯಣನಾಗಿ ವಿಭೀಷಣ ಸುಗ್ರೀವ ನಳ ನೀಳ ಜಾಂಬವ ಪ್ರಸನ್ನಕೀರ್ತಿ ವಿರಾಧಿತಾದಿಗಳುಮಂ ಪೆಱವುಂ ಪ್ರಧಾನ ಪುರುಷರೆಲ್ಲರುಮಂ ಬರ ವೇೞ್ದಿಟ್ಟುವುದುಮವರ್ ಬಂದು [1] ಸರಯುವೆಂಬ ತೊಱೆಯ ತಡಿಯೊಳ್ ಲಕ್ಷ್ಮಣ ಶವಮಂ ಯಥಾವಿಧಿಯಿಂ ಸಂಸ್ಕಾರಿಸಿ ಬರ್ಪುದುಮಾಗಳಂತೆ ರಾಮಸ್ವಾಮಿ

1 ಸರಯೂಪ್ರ. ಗ. ಪ.

ಲವನ ಪಿರಿಯ ಮಗಂಗೆ ರಾಜ್ಯಪಟ್ಟಮಂ ಕಟ್ಟಿ ಪಲಂಬರರಸುಮಕ್ಕಳ್ವೆರಸು ಸುವ್ರತ ರೆಂಬ ಚಾರಣರ ಪಕ್ಕದೆ ತಪಸ್ಸ್ಥನಾದಂ ವಿಭೀಷಣನುಂ ನಿಜ ತನೂಭವನಪ್ಪ ಸುಭೂಷಣಂಗೆ ಲಂಕೆಯ ರಾಜ್ಯಮನಿತ್ತು ದೀಕ್ಷೆಯಂ ಕೊಂಡಂ ಸುಗ್ರೀವನು ಮಂಗದಂಗೆ ರಾಜ್ಯಮಂ ಕೊಟ್ಟಲ್ಲಿಯೆ ದೀಕ್ಷೆಯಂ ಕೊಂಡಂ ಶತ್ರುಘ್ನ ನಳ ನೀಳ ವಿರಾಧಿತ ಚಂದ್ರರಶ್ಮಿ ಪ್ರಮುಖರುಂ ರಾಮನೊಡನೆ ಸುವ್ರತಚಾರಣರ ಸಮಕ್ಷ ದೊಳ್ ದೀಕ್ಷೆಯಂ ಕೈಕೊಂಡರಂತಿನಿಬರಂತಃಪುರದ ಕಾಂತೆಯರುಂ ಶ್ರೀಮ ತ್ಯಾರ್ಯಿಕಾ ಸಮಕ್ಷದೊಳ್ ದೀಕ್ಷೆಗೊಂಡರ್ ಮತ್ತಮಾ ರಾಮಯತಿ ಪರಮಾಗಮ ಪ್ರಣೀತ ಮಾರ್ಗದಿಂ—

ಕಂ ॥ ಮೂಲಗುಣೋತ್ತರ [1]ಗುಣದಿಂ
ಶೀಲಮನಳವಡಿಸಿ ಸಮಿತಿಯಂ ಗುಪ್ತಿಗಳಂ ॥
ಪಾಲಿಸಿ ಪಂಚಮಹಾವ್ರತ
ಲೀಲೆಯಿನೆಸೆದಂ ಪ್ರಮಾದಮಿಲ್ಲೆಂಬಿನೆಗಂ ॥ ೫೯ ॥

ಪಿಡಿದು ದಶಧರ್ಮಮಂ ಗೆ
ಲ್ದೊಡತನುವಂ ಕುಸುಮಬಾಣನಂ ಕರ್ವಿನ ಬಿ ॥
ಲ್ಲಿಡದನನದೇಕೆ ಲೋಕಂ
ಕಡಂಗಿ ಬಣ್ಣಿಪುದೊ ರಾಘವ ವ್ರತಿಪತಿಯುಂ ॥ ೬೦ ॥

ಉ ॥ ಮೂಲ ಗುಣಂಗಳಿಂದೆ ದಶಧರ್ಮಮನೇಱಿಸಿ ಕೊಂಡವೋಘ ಬಾ ।
ಣಾಳಿಯನಲ್ಲಿ ತೊಟ್ಟು ನಿಲಲೀಯದೆ ತೂಳ್ದಿ ಪರೀಷಹಂಗಳಂ ॥
ಮೇಳಿಸಿದಂ ಜಯಾಂಗನೆಯನೇಕ ವಿಹಾರದೊಳಾ ಮುನೀಶ್ವರಂ ।
ಮೇಳಿಸೆ ಕೀರ್ತಿ ಕೀರ್ತಿಮುಖದಂತೆ ದಿಶಾ ರದನೀ ರದಂಗಳಂ ॥ ೬೧ ॥

ಕಂ ॥ ಕೇವಲ ಬೋಧೋದಯಮೆಂ
ಬೀ ವಿಭವಂಬೆತ್ತು ಸಕಲರೂಪ ವ್ಯಾಪಾ ॥
ರಾವಗಮ ಸಂಪದಂ ಸ
ರ್ವಾವಧಿ ಪುಟ್ಟಿತ್ತು ರಾಘವ ವ್ರತಿಪತಿಯೊಳ್ ॥ ೬೨ ॥

ಅಂತು ಸರ್ವಾವಧಿಯಂ ಪಡೆದು ಲಕ್ಷ್ಮಣನ ತಮ್ಮ ಮುನ್ನಿನ ಭವಂಗಳು ಮಂ ಲಕ್ಷ್ಮಣನಿರ್ಜತ್ತೊಂದುವರ್ಷಂ ಕುಂದೆ ಪನ್ನಿರ್ವಾಸಿರ ವರ್ಷಮಂ ಜೀವಿಸಿ ಬಜಿಯಮುಳೋಲೋಕ ಗತನಾದುದುಮಂ ಸ್ನೇಹಮಂ ಪರೀಕ್ಷಿಸಲ್ಬಂದ ದೇವಂ ಕಾರಣಮಾಗೆ ಲಕ್ಷ್ಮಣಂ ಸತ್ತನಲ್ಲದಾತಂಗೆ ಪರಮಾಯು ನೆಜೆಯೆ ಸತ್ತನಲ್ಲೆಂ

1. ಗುಣಮಂ. ಚ. ೫೯ ನೆಯ ಪದ್ಯವು ಮಲ್ಲಿನಾಥ ಪುರಾಣದಲ್ಲಿ ೧೧ ನೆಯ ಆಶ್ವಾಸದ ೧೩ ನೆಯ ಪದ್ಯವಾಗಿದೆ.

ಬುದುಮನಱಿದು ರಾಮಭಟ್ಟಾರಕರುಗ್ರೋಗ್ರ ತಪಶ್ಚರಣ ನಿರತರಾಗಿ ದ್ವಾದಶ ದಿನಂಬರ[1]ಮಾಹಾರ ಪರಿತ್ಯಾಗ ಪ್ರತ್ಯಾಖ್ಯಾನಮಂ ಕೈಕೊಂಡು ಪಾರಣೆಯ ದಿನದೊಳ್—

ಕಂ ॥ ನಗರಾರಣ್ಯ ವಿಶೇಷಂ
ಬಗೆಗಿಲ್ಲೆನೆ ಕಾಲ ನಿಯಮದಿಂ ಬನದಿಂ ಚ ॥
ರ್ಯೆಗೆ ಪೊಱಮಟ್ಟಂ ಮುನಿ ತ
ನ್ನ ಗಮನಮಂ ದ್ರುತ ವಿಲಂಬಿತಂ ಪೊರ್ದದೆನಲ್ ॥ ೬೩ ॥

ಅಂತು ಬಂದು [2]ನಂದನಸ್ಥಲಿಯೆಂಬ ಪೊಱಲಂ ಪುಗುವುದುಮಾ ಪುರದ ಜನಮವರ ತಪಃಪ್ರಭಾವಮಂ ದಿವ್ಯ ಶರೀರಮುಂ ನೋಡಿ ಕೌವರೆಗೊಂಡು ಬಟ್ಟಿಸಲ್ವುದುಮದನಾ ಪೊಱಲನಾಳ್ವರಸಂ ಪ್ರತಿನಂದಿ ಕಂಡು ರಾಮಭಟ್ಟಾರಕರನಿದಿರ್ಗೊಳಲ್ ಮಣಿಮಾಡದಿಂದಿಱಿದು ಬರ್ಪನ್ನೆಗಂ ಮಾರ್ಗಮಱಿಯದ ಜನಂಗಳಿಮ್ಮ ಮನೆಗೇಱ್ತನ್ನಿಮೆಂಬುದುಂ ಭಟ್ಟಾರಕರ್ಗೆ ಚರ್ಯಾವಿಘ್ನಮಾದೊಡಾಹಾರಂಗೊಂಡಂತೆ ಸಂತುಷ್ಟ ಚಿತ್ತರಾಗಿ ಪೊಱಲಂ ಪೊಱಮಟ್ಟು ಪೋಪುದುಮಿತ್ತಲ್ ಪ್ರತಿನಂದಿ ರಾಮಭಟ್ಟಾರಕರ್ಗೆ ಚರ್ಯಾವಿಘ್ನಮಾದುದರ್ಕೆ ಮನದೊಳ್ ಚಿಂತಿಸುತಿರ್ಪಿನಮಿತ್ತಲ್—

ಕಂ ॥ ಅನಶನಮಂ ಪನ್ನಿರಡುಂ
ದಿನಂಬರಂ ಪೂಣ್ದು ಮಾಣ್ದನಿಲ್ಲೆನ್ನಿಂದುಂ ॥
ಜನಪದಮಂ ಪುಗೆನೆಂದಾ
ಮುನಿಸತಿ ಕಾಂತಾರ ಭಿಕ್ಷೆಯಂ ಕೈಕೊಂಡಂ ॥ ೬೪ ॥

ಒಂದುದಿನಮಾ ಮಹಾಮುನಿ
ಬೃಂದಾರಕನಿರ್ದ ಕಾನನಕ್ಕೆಱಿದುಯ್ದು ॥
ತ್ತೊಂದು ವಿಷಮಾಶ್ರಮಾ ಪ್ರತಿ
ನಂದಿ ನೃಪಾಲಕನನುಚಿತ ಪರಿಪಾಲಕನಂ ॥ ೬೫ ॥

ಅಂತಾ ಸೂಕಳ ತುರಂಗಮಮತಿವಿಷಮ ಗಮನಮಂ ಪುಗುವುದುಂ ಪ್ರತಿನಂದಿ ಸೂಕಳಗುದುರೆಯಿಂ ನೆಲಕ್ಕೆ ಪಾಯ್ದು ದಿಗವಲೋಕನಂ ಗೆಯ್ದು ಸವಿಾಪದೊಳೊಂದು ಸರೋವರಮಂ ಕಂಡು ಪೊಕ್ಕು ಮಿಂದು ಪೊಂದಾವರೆಯ ಪೂಗಳಿಂ ಪೀಠಿಕೆಯಂ ಸಮೆದು ಜಿನಪ್ರತಿಮೆಯನಲ್ಲಿ ನಿಲಿಸಿಯರ್ಚಿಸುತ್ತಿರ್ಪನ್ನೆಗಮಾತನಂತಃ

---

1. ಶರೀರ ಪರಿತ್ಯಾಗ. ಗ. ಘ. 2. ನಂಶಸ್ಥಲಿ. ಘ.

ಪುರ ಪ್ರಧಾನೆ ಪ್ರಭಾವತಿಯೆಂಬಳಾ ಸೂಕಳಾಶ್ವದ ಪಜ್ಜೆವಿಡಿದು ಬಂದು ತನ್ನರಸನಂ ಕಂಡಾ ಸರೋವರದೊಳ್ ನೀರಾಟಮನಾಡಿ ಬೋನಮನಲ್ಲಿಗೆ ತರಿಸುವುದುಮಾ ಪ್ರಸ್ತಾವದೊಳ್ ರಾಮಭಟ್ಟಾರಕರಿರ್ಪತ್ತುನಾಲ್ಕು ದಿವಸದ ಪಾರಣೆಗೆ ಕಾಂತಾರ. ಭಿಕ್ಷಾಚರ್ಯೆಗಾ ಮಾರ್ಗದಿಂ ಬರ್ಪುದಂ ಪ್ರತಿನಂದಿ ಭೋಂಕನೆ ಕಂಡು ಸಂಭ್ರಮದಿ ನೆಟ್ಟು ಪೊಡೆವಟ್ಟು ನಿಲಿಸಿ ಪಲತೆಱದಿನರ್ಚಿಸಿ ದಿವ್ಯಾಹಾರಮುಂ ಕುಡುವುದುಂ—

ಕಂ ॥ ದೈವೃಷ್ಟಿ ಕುಸುಮ ವರ್ಷಂ
ದೇವರಹೋದಾನ ಘೋಷಣಂ ಹಿಮ ಪವನಂ ॥
ದೇವಾನಕ ರವಮೊದವೆ ಪು
ಹಾ ವಿಸ್ಮಯ ಹೇತುವಾಯ್ತು ಪಂಚಾಶ್ಚರ್ಯಂ ॥ ೬೬ ॥

ಅಂತು ರಾಮಭಟ್ಟಾರಕರ್ ಪೂಜಾಪ್ರಾಪ್ತರಾಗಿ ದುರ್ಧರ ತಪೋಮಾರ್ಗದೊಳ್ ನಡೆದು ಲಕ್ಷ್ಮಣನೆತ್ತಿದ ಸಿದ್ಧಶಿಲೆಯನೇಱಿ [1]ಪ್ರತಿಮಾಯೋಗದಿಂ ಕರ್ಮಕ್ಷಯಂಗೆಯ್ವುದನವಧಿಬೋಧದಿಂ ಸೀತೇಂದ್ರನಱಿದಚ್ಯುತ ಕಲ್ಪದಿಂ ಬಂದು—

ಮಂದಾಕ್ರಾಂತ॥ ತಾನೆಂತಾನುಂ ಪರಮ ಪದಮಂ ಸಾಧಿಪಂ ಮುಂದೆ ಶುಕ್ಲ।
ಧ್ಯಾನಕ್ಕೀವೆಂ ತವಿಲನೆನುತುಂ ರಾಮಯೋಗೀಂದ್ರನಿರ್ದಾ ॥
ಸ್ಥಾನಂಬೊಕ್ಕಂ ಮಕುಟ ರುಚಿ ರೋದ್ದೋಂತಮಂ ತೀವೆ ತಚ್ಛೈ।
ಯ್ವೇನಂ ಮಾಡಂ ವಿನಯ ವಿಕಲಂ ರಾಗಯೋಗ ಪ್ರಮತ್ತಂ ॥ ೬೭ ॥

ಅಂತು ಪೊಕ್ಕಾಜುಂ ಋತುಗಳನಲ್ಲಿ ವಿಗುರ್ವಿಸಿ ತಾನೆ ಸೀತೆಯ ರೂಪಾಗಿ ವಿದ್ಯಾಧರ ಕನ್ಯೆಯರ್ ಬಳಸಿ ಬರೆ ಸಮೀಪಕ್ಕೆ ಬಂದು ನಿಂದು ನೀಮಿನ್ನುಂ ಗತ ವಯಶ್ಶರೀರರಲ್ಲಿರೀ ಮನೋಹರಾಕಾರಮನಕಾರಣಂ ಕಿಡಿಸದಿರಿ[2]ಮೆನ್ನೊಳಮಾ ವಿದ್ಯಾಧರ ಕನ್ಯೆಯರೊಳಂ ಕೂಡಿ ಸುಖಮನನುಭವಿಸಿ ಬಬ್ಳಿಕ್ಕೆ ನೀಮುಮಾನು ಮಾಕೆಗಳುಮೊಡನೆ ತಪಂಬಡುವಮೆಂದು ತಪೋವಿಘ್ನ ಹೇತುಗಳಂತೋಱಿ ನುಡಿಯೆಯುಂ ರಾಮಭಟ್ಟಾರಕರೆಂತುಮಸ್ಖಲಿತ ಚಿತ್ತದಿಂ ಶುಕ್ಲ ಧ್ಯಾನ ಪ್ರವಿಷ್ಟರಾಗಿ ಮಾಘಮಾಸದ ಶುಕ್ಲಪಕ್ಷದ ದ್ವಾದಶಿಯ ಬೆಳಗಪ್ಪ ಜಾವದೊಳ್—

ಉ ॥ ಆವರಿಸಿರ್ದ ಘಾತಿ ಘನ ಕಾಂಡಪಟಂ ಪೆಜಪಿಂಗೆ ದಿವ್ಯ ಭಾ ।
ಷಾವಧುವಿಂಗೆ ರಾಘವ ಯತಿಪ್ರವರಂ ವರನಾಗೆ ನಿರ್ಮಲಂ ॥

---

1. ರಾತ್ರಿ ಪ್ರತಿಮಾಯೋಗಂ. ಗ ಘ.
2. ಮಾನಂದು ನಿಮ್ಮೊಡನೆ ಪುಟ್ಟಿದು ನಿಮಗೆ ಸ್ನೇಹ ವಿಶ್ಲೇಷಮಪ್ಪುಂತು ತಪಂಬಟ್ಟಿನಲ್ಲದೆ ನಿಶ್ಚಯಂ ತಪಂಬಟ್ಟಿನಿಲ್ಲಿನಿತ್ತ ನಿಮ್ಮನೆ ಸಂಬಲಿಸುತ್ತಿರ್ಪಂ—ಎಂದು ಗ. ಘ. ಗಳಲ್ಲಿ ಅಧಿಕವಾಗಿದೆ.

ಕೇವಲಬೋಧಮೆಂಬ ಮಣಿ ದರ್ಪಣಮುಜ್ವಲಿಸಿತ್ತು ತೋರ್ಪಿನಂ ।
ಜೀವಮಜೀವಮೆಂಬಖಿಲ ವಸ್ತುಗಳುಂ ಗುಣ ಪರ್ಯಯಂಗಳುಂ ॥ ೬೮ ॥

ಅಂತು ರಾಮಸ್ವಾಮಿಯ ಕೇವಲಬೋಧೋದಯದೊಡನೆ ತಮಗಾಸನ ಕಂಪಮಪ್ಪುದುಮವಧಿ ಬೋಧದಿಂದಱಿದು—

ಉ ॥ ದುಂದುಭಿ ನಾದಮಾವರಿಸೆ ದಿಕ್ತಟಮುಂ ಚಲ ಕೇತನಂ ವಿಯ ।
ನ್ನಂದನ ಶಂಕೆಯಂ ಪಡೆಯೆ ರತ್ನ ವಿಮಾನ ವಿತಾನದಂಶು ಜಾ ॥
ಲಂ ದಿವಿಜೇಂದ್ರ ಚಾಪದ ವಿಲಾಸಮನೇಳಸೆ ಕಣ್ಗೆವಂದದೇಂ ।
ಬಂದುದೊ ರಾಮಕೇವಲಿಯ ಕೇವಲ ಪೂಜೆಗೆ ದೇವ ಸಂಕುಲಂ ॥ ೬೯ ॥

ಚ ॥ ಭವನಾವಾಸದವರ್ ಪದಿಂಬರಮರೇಂದ್ರರ್ ವ್ಯಂತರಾವಾಸ ಸಂ ।
ಭವರೆಣ್ಬರ್ ಶಶಿ ಸೂರ್ಯರಿರ್ವರುಚಿದರ್ ಪನ್ನಿರ್ವರಿಂದ್ರರ್ ನಭೋ ॥
ವಿವರಂ ತಮ್ಮ ಬಲಕ್ಕೆ ಸಾಲದೆನೆ ಮೂಜುಂಲೋಕಮೊಂದಾಗಿ ಬ ।
ರ್ಪವೊಲೇಂ ಬಂದರೊ ಮಾಪ್ಪ ಕೌತುಕದಿನಾ ಕೈವಲ್ಯ ಮಾಂಗಲ್ಯಮಂ॥೭೦॥

ಅಂತು ಬಂದ ಚತುರ್ನಿಕಾಯ ದೇವನಿಕಾಯದೊಡನೆ ಸೀತೇಂದ್ರನುಂ ರಾಮ ಭಟ್ಟಾರಕರ್ಗೆ ಕೇವಲಜ್ಞಾನ ಪೂಜೆಯಂ ಮಾಡಿ ಪೊಡೆವಟ್ಟು ಲಕ್ಷ್ಮೀಧರಂಗೆ ಧರ್ಮ ಮಂ ಪ್ರತಿಬೋಧಿಸಲೆಂದು ಶರ್ಕರಾಪ್ರಭೆಯೆಂಬ ನರಕಕ್ಕೆ ಪೋಗಿ ನೋಱ್ಪಿನ ಮಲ್ಲಿ ತಮ್ಮೊಳ್ಗೋರೊರ್ವರನನೇಕ ವಿಧದಿಂ ಪೀಡಿಸುತ್ತಿರ್ಪ ನಾರಕರುಮಂ ತೀವ್ರ ವೇದನೆಯಿಂ ನಮೆಯುತ್ತುನಿರ್ದ ರಾವಣನುಮಂ ಲಕ್ಷ್ಮಣನುಮನವರಿರ್ವರಂ ಕಾಡಿಸುತ್ತಿರ್ದ ಶಂಭುಕನುಮಂ ಕಂಡು ಕರುಣದಿನವರ್ಗೆ ಧರ್ಮ್ಮಶ್ರವಣಮಂ ಗೆಯ್ದೊಡಂಬಡಿಸಿ ಸಮ್ಯಕ್ತ್ವಮಂ ಮಜಿಯದಿರಿಮೆಂದು ಪೇೞ್ದವರ ದುಃಖಕ್ಕೆ ಕರ ಮುಬ್ಬೆಗಂಬಟ್ಟು ತನ್ನಿರ್ಪಚ್ಯುತ ಕಲ್ಪಕ್ಕೆ ಪೋಗಿ ಮತ್ತವೊರ್ಮೆ ರಾಮಭಟ್ಟಾರಕರ ಸಮವಸರಣಕ್ಕೆ ಬಂದು ಪೂಜಿಸಿ ಪೊಡೆವಟ್ಟು ಧರ್ಮ್ಮಶ್ರವಣಾನಂತರಂ ದಶರಥಾದಿಗಳ ಗತಿಯಂ ಬೆಸಗೊಳ್ವುದುಂ—

ಕಂ ॥ ಹಿಮಕರ ಮಂಡಲದಿಂದೊಸ
ರ್ವಮರ್ದನೆ ನಿಜಭಾಷೆ ಬೆಸಸಿದರ್ ಕೇವಲಿಗಳ್ ॥
ಸಮನಿಸಿದತ್ತುತ್ತಮ ಸಂ
ಯಮ ಫಲದಿಂ ದಶರಥಂಗೆ ಕಲ್ಪಾವಾಸಂ ॥ ೭೧ ॥

ಮತ್ತಮಪರಾಜಿತೆಗಂ ಕೈಕೆಗಂ ಸುಮಿತ್ರೆಗಂ ಸುಪ್ರಭೆಗಂ ಜನಕಂಗಂ ಕರ್ಮೋಪಶಮದಿಂ ಸುಗತಿ ಸಮನಿಸಿದುದು ಲವಾಂಕುಶರುಮಿಾ ಭವದೊಳೆ ಮುಕ್ತ

ರಪ್ಪರ್ ಪ್ರಭಾಮಂಡಲಂ ಸುಕೌಶಲಪುರಕ್ಕೆ ಪೋಗುತ್ತುಮಾಕಾಶದೊಳೆ ನಾಲ್ಕು ತಿಂಗಳುಪವಾಸಮಿರ್ದ ಮೂವರ್ ಮಹಾಋಷಿಯರಂ ಕಂಡು ಧರಾಮಂಡಲಕ್ಕವ ತರಿಸಿ ವಿಧಿ ಪೂರ್ವಕಮವರ್ಗಾಹಾರ ದಾನಮಂ ಕೊಟ್ಟು ತನ್ನೂರ್ಗೆ ಪೋಗಿ ತಾನುಂ ತನ್ನ ಸುಂದರಮಾಲೆಯೆಂಬರಸಿಯುಂ ಕರುಮಾಡದೊಳಿರ್ದು ಸಿಡಿಲ್ವೊಡೆಯೆ ಸತ್ತಿರ್ವರುಂ ಮುಂದರದ ತೆಂಕಣ ಕುರವದೊಳ್ ಮೂಱು ಪಳಿತೋಪಮಾಯುಷ್ಯರಾಗಿ ಪುಟ್ಟಿದರೆಂದು ಪೇೞ್ದು—

ಕಂ॥ ರಾವಣ ಲಕ್ಷ್ಮಣ ಭಾವಿ ಭ
ವಾವಳಿಯಂ ರಾಮ ದಿವ್ಯ ಮುನಿಪಂ ಶ್ರುತಿ ಸೌ॥
ಖ್ಯಾವಹಮೆನೆ ಮೃದು ಮಧುರಾ
ರಾವಂ ಸೀತಾಚರಾಮರಂಗಿಂತೆಂದಂ ॥ ೭೨ ॥

ರಾವಣನುಂ ಲಕ್ಷ್ಮಣನುಂ ನಿರಯ ವಾಸದಿಂ ಪೊಱಮಟ್ಟು ಬಂದು ಮುಂದರದ ಪೂರ್ವದಿಗ್ಭಾಗದ ವಿಜಯಾವತೀ ಪುರದೊಳ್ ನಂದನೆಂಬೊಕ್ಕಲಿಗಂಗಮಾತನ ಕುಲವಧು ರೋಹಿಣಿಗಮರ್ಹದ್ದಾಸನುಂ ಋಷಿದಾಸನುಮೆಂಬ ತನಯರಾಗಿ ಶ್ರಾವಕ ವ್ರತಂಗಳಂ ಕೈಕೊಂಡು ಕೊಂಡಾಡಿ ನಡೆದನುಕ್ರಮದಿಂ ಜೀವಿತಾವಸಾನದೊಳ್ ದೇವ ಲೋಕಕ್ಕೆ ಪೋಗಿ ಮಗುೞ್ದು ಬಂದು ವಿಜಯಪುರದೊಳ್ ಪುಟ್ಟಿ ಋಷಿಯ ರ್ಗಾಹಾರದಾನಮನಿತ್ತು ಕಾಲಂಗೆಯ್ದು ಹರಿವರ್ಷದೊಳ್ ಪುಟ್ಟಿ ದೇವಲೋಕಕ್ಕೆ ಪೋಗಿ ಬಂದು ಮುನ್ನೆ ಪೇೞ್ದಿ ವಿಜಯಪುರಮನಾಳ್ವ ಕುಮಾರಕೀರ್ತಿಗಮಾತ ನರಸಿ ಲಕ್ಷ್ಮೀಮತಿಗಂ ಜಯಕಾಂತನುಂ ಜಯಪ್ರಭನುಮೆಂಬ ಮಕ್ಕಳಾಗಿ ಪುಟ್ಟಿ—

ಕಂ॥ ಅಂತವರತಿ ಚಿರ ಕಾಲಂ
ಸಂತಸದಿಂ ರಾಜ್ಯ ಸುಖಮನನುಭವಿಸಿ ಬಳಿ॥
ಕ್ಕಂ ತಪದೊಳಿಸಗಿ ಕಡೆಯೊಳ್
ಲಾಂತವ ಕಲ್ಪದೊಳನಲ್ಪ ಸುಖದಿಂದಿರ್ದರ್ ॥ ೭೩ ॥

ನೀನುಮಚ್ಯುತಕಲ್ಪದಿಂ ಬಂದು ಭರತಕ್ಷೇತ್ರದೊಳ್ ಸಕಲ ಚಕ್ರವರ್ತಿಯಾಗಿರ್ಪುದುಂ ಲಾಂತವ ಕಲ್ಪದಿಂದವರ್ ಬಂದು ನಿನಗಿಂದುರಥನುಂ ಮೇಘರಥನುಮೆಂಬ ತನೂಭವರಪ್ಪರವರೊಳಗ್ರ ಸುತನಾಗಿ ಪುಟ್ಟಿದ ದಶಗ್ರೀವಂ ಸಂಸಾರ ಸುಖ ವಿಮುಖನಾಗಿ ತಪಂಗೊಂಡು ಷೋಡಶ ಭಾವನೆಗಳಂ ಭಾವಿಸಿ ಷೋಡಶ ಭವಿಷ್ಯತ್ತೀರ್ಥಕರ ನಾಮಕರ್ಮಮಂ ಕಟ್ಟಿ ವೈಜಯಂತೀ ವಿಮಾನದೊಳ್ ಪುಟ್ಟಿ ಮಗುೞ್ದು ಬಂದು ಭರತಕ್ಷೇತ್ರದ ರತ್ನಪುರದೊಳ್ ತೀರ್ಥಕರ ಕುಮಾರನುಂ ಚಕ್ರವರ್ತಿಯುಮಾಗಿ ಪುಟ್ಟಿ—

ಮ ॥ ಸಕಲೋರ್ವೀತಲ ಚಕ್ರವರ್ತಿ ಪದಮುಂ ಕೈಕೊಂಡದಂ ಬಿಟ್ಟು ತೀ ।
ರ್ಥಕರತ್ವಂ ಬಡೆದಿರ್ಪುದುಂ ಗಣಧರಂ ನೀನಪ್ಪೆ ತದ್ಭಾವಿ ತೀ ॥
ರ್ಥಕರಂಗಂದು ಬಟ್ಟಿಕ್ಕೆ ಮುಕ್ತಿವಡೆವೈ ನೀನೆಂದು ಭಟ್ಟಾರಕರ್ ।
ಸಕಲಜ್ಞರ್ ತಿಳಿವಂತು ಪೇಟಿ ತಳೆದಂ ಸೀತೇಂದ್ರನುತ್ಸಾಹಮಂ ॥ ೭೪ ॥

ಮತ್ತಂ ರಾಮಭಟ್ಟಾರಕರ್ ಲಕ್ಷ್ಮಣಂ ಮೋಕ್ಷಕ್ಕೆ ಪೋಪನ್ನೆಗಮಪ್ಪ ಭವಂ ಗಳನಿಂತೆಂದು ಬೆಸಸಿದರ್ ಮೇಘರಥಂ ತಪಂಬಟ್ಟು ದೇವಗತಿವಡೆದಲ್ಲಿಂ ಬಂದು ಪೃಥ್ವೀಪುರದೊಳ್ ಸುವ್ರತಕೀರ್ತಿಯೆಂಬರಸನಾಗಿ ಮತ್ತಂ ತಪಂಬಟ್ಟು ಷೋಡಶ ಭಾವನೆಗಳಂ ಭಾವಿಸಿ ದೇವಲೋಕಕ್ಕೆ ಪೋಗಿ ದಿವಿಜ ಸುಖಮನನುಭವಿಸಿ ಬಂದು ಪುಷ್ಕರವರ ದ್ವೀಪದ ಪೂರ್ವವಿದೇಹದ ಪದ್ಮಪುರದೊಳ್ ಚಕ್ರವರ್ತಿಯುಂ ತೀರ್ಥಕರ ಕುಮಾರನುಮಾಗಿ ಪುಟ್ಟಿ ರಾಜ್ಯಸುಖಮನೊಲ್ಲದೆ ತಪಂಬಟ್ಟು ತೀರ್ಥಕರ ಜಿನೇಶ್ವರನಾಗಿ ಮೋಕ್ಷಕ್ಕೆ ಪೋಪಂ ನಾಮಿಂದಿಂಗೆರಡುವರ್ಷಕ್ಕೆ ಮೋಕ್ಷಕ್ಕೆ ಪೋಪೆ ವೆಂದು ತಮ್ಮುಮಂ ಪೇಟಿ ಕೇಳ್ದು ಸಂತೋಷದಂತನೆಯ್ದಿ—

ಮ ॥ ಜಳ ಗಂಧಾಕ್ಷತ ಪಾರಿಜಾತ ಸುಮನೋದಾಮಂಗಳಿಂ ರಾಮಕೇ ।
ವಳಿಯಂ ಪೂಜಿಸಿ ಭಕ್ತಿಯಿಂದೆಱಗಿ ಸೀತೇಂದ್ರಂ ವಿಭೂಷಾಂಶು ಮಂ ॥
ಡಳಿಯುಂ ದೇಹ ಮರೀಚಿಯುಂ ಪುದಿಯೆ ರೋದೋಭಾಗಮಂ ಜೆಲ್ವನೀ
ಟ್ಟುಳಿಗೊಂಡಚ್ಯುತ ಕಲ್ಪಮಂ ವಿವಿಧ ಕೇಳೀತಲ್ಪವುಂ ಮುಟ್ಟಿದಂ ॥ ೭೫ ॥

ಇತ್ತ ರಾಮಭಟ್ಟಾರಕರ್—

ಕಂ ॥ ತಮಗೆ ಪದಿನಾಱು ಬಿಲ್ಲು
ದ್ದಮೆನಲ್ ಪದಿನೆಂಟು ಸಾಸಿರಂ ಪರಮಾಯು ॥
ಷ್ಯಮೆನಲ್ ವರ್ತಿಸಿ ಮುಕ್ತಿ
ಪ್ರಮದಾ ಸಂಭೋಗ ಲೋಭ ರತರಾಗಿರ್ದರ್ ॥ ೭೬ ॥

ಅಂತು [1]ಸಮಯ ಸ್ಥಿತಿಯಂ ಪರಿಪಾಲಿಸುತ್ತುಮಿರ್ದು—

ಮ ॥ ಸತತಂ ಪೂಜಿಸೆ ದೇವ ಮರ್ತ್ಯ ಖಚರ ಕ್ಷ್ಮಾಪಾಲಕರ್ ಪಂಚ ವಿಂ ।
ಶತಿ ಸಂವತ್ಸರಮಿಂತೆ ಪೂಜೆವಡೆಯುತ್ತುಂ ಭವ್ಯ ಸಸ್ಯಕ್ಕೆ ನಿ ॥
ರ್ವೃತಿ ಧರ್ಮಾಮೃತ ವೃಷ್ಟಿಯಂ ಕಱೆಯುತುಂ [2]ನಿರ್ಬಾಧ ಬೋಧಂ ಯಶೋ ।
ಲತೆಯಿಂ ಮುದ್ರಿಸಿದಂ ಜಗತ್ತ್ರಿತಯಮಂ ಶ್ರೀರಾಮ ಭಟ್ಟಾರಕಂ ॥ ೭೭ ॥

---

1. ನಿಯಮ. ಚ. ೨. ನಿರ್ವಾಣ. ಗ. ಚ.

ಶಾ॥ ನೀಡುತ್ತುಂ ಕುಮತಕ್ಕೆ ತೇಜದಟಿವಂ ವಿಖ್ಯಾತಿಯಂ ತಾಳ್ದಿದೊ ।
ಳ್ನಾಡಂ ಕೂಡೆ ತೊಟಿಲ್ದು ಭವ್ಯ ಜನಮುಂ ರತ್ನತ್ರಯಾಲಂಕೃತಂ ॥
ಮಾಡುತ್ತುಂ ದೆಸೆವೆಣ್ಗೆ ಧರ್ಮವಿಜಯ ಶ್ರೀ ಕೇಕರಾಲೋಕನ ।
ಕ್ರೀಡಾ ಮಂಡನಮಾಗೆ ಕೇವಲಿ ಕುಬೇರಾದ್ರೀಂದ್ರಮಂ ಮುಟ್ಟಿದಂ ॥ ೭೮ ॥

ಮ॥ ಸ್ರ॥ ಕ್ಷಿತಿಭೃನ್ಮೂರ್ಧಾಭಿಷಿಕ್ತಂ ವಲಮೆನಿಸಿದ ಕೈಲಾಸ ಶೈಲೇಂದ್ರದೊಳ್ ಕ ।
ಲ್ಪತರು ಸ್ತೋಮಂಗಳಿಂ ಮಂಡಲಿಸಿದ ಕನಕಾಂಭೋಜ ಷಂಡಂಗಳಿಂ ಮಂ॥
ಡಿತಮಾದತ್ಯಂತ ಶುದ್ಧ ಸ್ಫಟಿಕ ಮಣಿ ಶಿಲಾಪಟ್ಟದೊಳ್ ರಾಮಚಂದ್ರಂ ।
ಪ್ರತಿಮಾಯೋಗ ಪ್ರಯೋಗಂ ಗುಣಭವನ ಮಣಿಸ್ತಂಭಮಿರ್ಪಂತಿರಿರ್ದಂ॥೭೯॥

ಅಂತಿರ್ದು ಸೂಕ್ಷ್ಮಶರೀರ ಯೋಗದಿಂ ಸೂಕ್ಷ್ಮಕ್ರಿಯಾ ಪ್ರತಿ[1]ಪಾತಿಯೆಂಬ ಪರಮ ಶುಕ್ಲಧ್ಯಾನದೊಳ್ ನೆಲಸಿ ಲಘು ಕರ್ಮ ಪರಿಪಾತನಶಕ್ತಿ ಪ್ರಾಪ್ತಿನಿಮಿತ್ತಂ ದಂಡ ಕವಾಟ ಪ್ರತರ ಲೋಕಪೂರಣ ಕ್ರಿಯೆಗಳಂ ಪ್ರತಿಸಮಯಂ ಪ್ರಯೋಗಿಸಿ ನಾಲ್ಕುಮಘಾತಿಕರ್ಮ ಸ್ಥಿತಿಯ ಕಾಲಮಂ ಸದೃಶಂಮಾಡಿ ಮೂಲ ಶರೀರ ಪ್ರಮಾಣದೊಳೆ ನಿಂದು ವಾಙ್ಮನಃಕಾಯ ಯೋಗಮನಡಂಗಿಸಿ ಸಕಲ ಬದ್ಧಾಶ್ರವ ನಿರೋಧದಿನಯೋಗಿ ಕೇವಲಿ ಗುಣಸ್ಥಾನಮಂ ಪೊರ್ದಿ ಸಮುಚ್ಛಿನ್ನ ಪ್ರಾಣಾಪಾನ ಪ್ರಚಾರಂ ಸಮುಚ್ಛಿನ್ನ ಕ್ರಿಯಾವೃತ್ತಿ ಧ್ಯಾನ ಪ್ರವರ್ತನಾ ಪರನಾಗಿ—

ಕಂ॥ ಪರಿಪೂರ್ಣಮೆನಿಸೆ ಗುಣ ಪರಿ
ಕರಂ ಯಥಾಖ್ಯಾತ ಚರಿತನಾಗಿ ಜಿನಂ ಮು ॥
ಕ್ತಿ ರಮಾ ಕಚ ಗ್ರಹ ಸ್ತನ
ಪರಿರಂಭಾರಂಭ ಕೇಳಿಗುತ್ಸುಕನಾದಂ ॥ ೮೦ ॥

ಆಗಿ ತದುಪಾಂತ ಸಮಯದೊಳನ್ಯತರ ವೇದನೀಯ ದೇವಗತಿ ತತ್ಪ್ರಾಯೋಗ್ಯಾನುಪೂರ್ವ್ಯಾದಾರಿಕ ಶರೀರ ತದ್ಬಂಧನ ಸಂಘಾತ ಸಂಸ್ಥಾನಾಂಗೋಪಾಂಗ ಸಂಹನನ ವರ್ಣ ಗಂಧ ರಸ ಸ್ಪರ್ಶ ಪ್ರಶಸ್ತಾಪ್ರಶಸ್ತ ವಿಹಾಯೋಗತಿ ಗುರು ಲಘೂಪಘಾತ ಪರಘಾತಾತಪೋದ್ಯೋತೋಚ್ಛ್ವಾಸ ನಿಶ್ವಾಸ ಪರ್ಯಾಪ್ತಿ ಪ್ರತ್ಯೇಕ ಶರೀರ ಸ್ಥಿರಾಸ್ಥಿರ ಸುಭಗ ದುರ್ಭಗ ಸುಸ್ವರ ದುಸ್ಸ್ವರಾದೇಯಾನಾದೇಯ ಯಶಸ್ಕೀರ್ತ್ಯಯಶಸ್ಕೀರ್ತಿ ನಿರ್ಮಾಣ ನೀಚೈರ್ಗೋತ್ರಂಗಳೆಂಬೇಪ್ಪತ್ತೆರಡುಂ ಪ್ರಕೃತಿಗಳಂ ದೂರೀಕೃತಂಮಾಡಿ—

ಕಂ॥ ಪ್ರಕೃತಿಗಳಗಲ್ಕೆಯಿಂ ಶು
ಕ್ತಿಕೆಯಿಂ ಪೊಱಮಟ್ಟ ಮೌಕ್ತಿಕಂ ನೀರದ ಮಾ ॥
ಲಿಕೆಯಿಂ ತೊಲಗಿದ ಶಶಿ ಕಾ
ಲಿಕೆಯಿಂ ಬೇರ್ಪಟ್ಟ ಕನಕಮಿರ್ಪಂತಿರ್ದಂ ॥ ೮೧ ॥

1. ಪ್ರತಿ. ಚ.

ಅನಂತರಂ ಚರಮ ಸಮಯದೊಳ್ ಪರಿಶಿಷ್ಟಾನ್ಯತರ ವೇದನೀಯ ಮನು ಷ್ಯಾಯುರ್ಮನುಷ್ಯಗತಿ ಪಂಚೇಂದ್ರಿಯ ಜಾತ್ಯಾನುಪೂರ್ವೀ ತ್ರಸನಾಮ ಬಾದರಪರ್ಯಾ ಪ್ತಕ ಸುಭಗಾದೇಯ ಯಶಸ್ಕೀರ್ತಿ ತೀರ್ಥಂಕರ ನಾಮೋಚ್ಚೈರ್ಗೋತ್ರಂಗಳೆಂಬ ಪದಿ ಮೂಱುಂ ಪ್ರಕೃತಿಗಳುಮೊರ್ಮೆಯೆ ನಿರ್ಮೂಲಮಾಗೆ ಸಕಲ ಸಂಸಾರಭಾರ ದುಃಖ ಭಾರ ಭಂಜನನುಂ ನಿರಂಜನನುಮಾಗಿ—

ಮ ॥ ಕಿಡೆ ನಿಶ್ಶೇಷಮಘಾತಿ ಪಜ್ಜಳಿಸೆ ತನ್ನೆಂಟುಂಗುಣಂ ಕೂಡೆ ನೇ ।
ರ್ಪಡೆ ದೀಪಾರ್ಚಿಗಳಂತಿರೂರ್ಧ್ವಗತಿ ಮೂಱುಂಲೋಕದಿಂ ಮೇಲೆ ಬೆ ॥
ಳ್ಗೊಡೆಯಿರ್ಪಂತೆವೊಲಿರ್ದ ಸಿದ್ಧ ನಿಲಯಕ್ಕಾನಂದದಿಂ ಪೋಗಿ ಕೈ ।
ವಿಡಿದಂ ಶಾಶ್ವತಮಪ್ಪ ಮುಕ್ತಿವಧುವಂ ಶ್ರೀರಾಮಭಟ್ಟಾರಕಂ ॥ ೮೨ ॥

ಅಂತು ರಾಮಭಟ್ಟಾರಕಂ ಪರಮಪದ ಪ್ರಾಪ್ತನಪ್ಪುದುಂ—

ಕಂ ॥ ಪೂಮಟ್ಟೆ ಕಱೆದತ್ತಖಿಲ ದಿ
ಶಾಮುಖಮಂ ದೇವದುಂದುಭಿ ಧ್ವನಿ ತೀವಿ ॥
ತ್ತಾವೋದ ಮತ್ತ ಮಧುಕರ·
ದಾವಮಂ ತೀಡಿತ್ತು ಬಂದು ಮುಂದ ಸವಿಸಾರಂ ॥ ೮೩ ॥

ಇನಿತಮರ ಪಟಹ ಪೇಟಕ
ಮಿನಿತಮರ ವಿಮಾನ ಪಟಲಮಿನಿತಮರ ಪತಾ ॥
ಕಿನಿಯೆಂದು ನೆನೆಯಲರಿದೆನೆ
ಜಿನಪೂಜೆಗೆ ಬಂದರಮರ ಪರಿಬೃಢರಾಗಳ್ ॥ ೮೪ ॥

ಚಿತ್ರಾತಪತ್ರದಿಂ ಶತ
ಪತ್ರ ವನಸ್ಥಲಿಯನಿಟ್ಟಿಪಿ ನಭದೊಳೆ ದೆಸೆಯಂ ॥
ಚಿತ್ರಿಸೆ ಕಿರೀಟ ಕಿರಣಂ
ದ್ವಾತ್ರಿಂಶತ್ತ್ರಿದಶ ಪತಿಗಳಂದೇಟ್ಟಿಂದರ್ ॥ ೮೫ ॥

ಅಂತು ನಿರ್ವಾಣ ಪೂಜೆಗೆ ನಿಖಿಲ ಗೀರ್ವಾಣಪತಿಗಳೇಟ್ಟಿರ್ಪಾಗಳ್—

ಕಂ॥ ಪಳಿಕಿನ ಕೊಡದೊಳ್ ಗಂಗಾ
ಜಳಂಗಳಂ ತೀವಿ ತರ್ಪ ಸುರ ವನಿತೆ ಘನೋ ॥
ಪಳಮುಂ ತಾಳ್ದಿದ ವಿದ್ಯು
ದ್ವಿಳಾಸಮುಂ ನಿಜ ವಿಲಾಸದಿಂ ನುಸುಳಿಸಿದಳ್ ॥ ೮೬ ॥

ಕಂ ॥ ಚಂದನ ಕರ್ದಮು ಶುಕ್ತಿಕೆ
ಕೆಂದಳದೊಳ್ ತಳಿರೊಳೆಸೆವ ಪೂಗೊಂಚಲೆನಲ್ ॥
ಬಂದರ್ ತಾರಾಂತಃಪುರ
ಸುಂದರಿಯರ್ ಪರಮು ಚರಮು ಪೂಜೋತ್ಸವದೊಳ್ ॥ ೮೭ ॥

ಸಿತ ವಿಕಸಿತಾಬ್ಜದೊಳ್ ತೀ
ವಿ ತಂದರೆಳವೆಱಿಯ ಕದಿರನೆಂದೆನಿಪ ಸಿತಾ ॥
ಕ್ಷತಮಂ ದಿಗ್ದೇವತೆಯರ್
ಸಿತ ಲೋಚನ ರುಚಿ ದಿಗಂತಮಂ ಬಳಸುವಿನಂ ॥ ೮೮ ॥

ಉ ॥ ಜ್ಞಾನ ಕೃಶಾನುವಿಂದಮುರಿದಟ್ಟಿದ ಕಾಮನ ಮೋಹನಾಸ್ತ್ರ ಸಂ ।
ತಾನ ಶರಾಸನಾವಳಿಯನೊಪ್ಪಿಸಲೀಕೆಗಳೀ ಜಿನೇಂದ್ರನಾ ॥
ಸ್ಥಾನಿಗೆ ತಂದರಕ್ಕುಮೆನೆ ರಂಜಿಸೆ ಕೆಂದಳದೊಳ್ ಲತಾಂತ ಮಾ ।
ಲಾ ನಿಕುರುಂಬಮಿಕ್ಷುಲತೆ ಬಂದುದು ಕಿನ್ನರ ಕನ್ಯಕಾ ಜನಂ ॥ ೮೯ ॥

ಕಂ ॥ ಕರೆಗಣ್ಮುವ ನಿಜ ಲಾವ
ಣ್ಯ ರಸಂ ಪರಿನಾಳಮಿಕ್ಕಿದತ್ತೆನೆ ತಂದಳ್ ॥
ಸುರ ಸುಂದರಿ ಚಂದನ ರಸ
ಭರಿತಾಯತ ಕೇತಕೀದಲ ದ್ರೋಣಿಗಳಂ ॥ ೯೦ ॥

ತಳೆದನಿಮಿಷ ವಧುಗಳ್ ಕ
ಣ್ಗೊಳಿಸಿದರುನ್ಮಿಷಿತ ಕರ್ಣಿಕಾರ ಲತಾ ಸಂ ॥
ಕುಳಮೆನೆ ಸುವರ್ಣಮಯ ಪರಿ
ಯಳಮಂ ಭಕ್ಷ್ಯೋಪದಂಶ ಚರು ವಿಲಸಿತಮಂ ॥ ೯೧ ॥

ಪೆಡೆವರಲಾವುದೊ ರನ್ನದ
ಸೊಡರಾವುದೊ ಪೇಟ್ಮೆಂಬಿನಂ ಸಂದೆಗದ ॥
ಚ್ಚಿಡಿದಿರೆ ನಾಗಾಂಗನೆಯರ್
ಗಡಣದೆ ಕೈಲಾಸ ಶೈಲಮಂ ಸಾರ್ತಂದರ್ ॥ ೯೨ ॥

ಚ ॥ ಒಗೆದ ಕುಚಂ ಮೊಗಂಗುಡದೆ ಚೆಲ್ವಿನೊಳೇಳಿಸೆ ತತ್ಸಮೀಪದೊಳ್ ।
ಪೊಗೆಮೊಗವಾದವೋಲ್ ತಳೆದ ಧೂಮು ಘಟಂಗಳನುಣ್ಮಿ ಪೊಣ್ಮಿ ತ ॥
ಟ್ಟಿಗರುವ ಧೂಮಲೇಖೆ ಸುರ ಸುಂದರಿಯರ್ ನಡೆತಂದರಂದು ಸು ।
ಯ್ಗೊಗೆವಳಿಮಾಲೆ ತಮ್ಮ ಲುಲಿತಾಲಕದೊಳ್ ತಡವಾದುದೆಂಬಿನಂ ॥ ೯೩ ॥

1, ತೊಡ. ಘ. ಚ.

ಕಂ ॥ ವಿವಿಧ ಫಲಮಾದುವೋರೊಂ
ದೆ ವಲ್ಲಿಗೆನೆ ಚೆಲ್ವುವೆತ್ತುವಮರೀಕರ ಪ ॥
ಲ್ಲವದೊಳ್ ನವೀನ ಕದಲೀ
ನವಾಮ್ರ ನಾರಂಗ ನಾಲಿಕೇರ ಫಲಂಗಳ್ ॥ ೯೪ ॥

ನಿರತಿಶಯಮೆನಿಪ ಧರ್ಮಾ
ನುರಾಗಮಿಾ ತೋರ್ಪುದೆಂಬಿನಂ ಸುರ ವನಿತಾ ॥
ಕರ ಕಿಸಲಯದೊಳ್ ಕುಂಕುಮ
ಪರಿಪೂರ್ಣ ಸುವರ್ಣ ಭಾಜನಂ ರಂಜಿಸುಗುಂ ॥ ೯೫ ॥

ಮ॥ ಜವನಂ ರಾಮಜಿನಂ ಜವಂಗಿಡಿಸಿ ಗೆಲ್ಲಂಗೊಂಡ ಕೈಲಾಸ ಶೈ ।
ಲ ವಿಶಾಲ ಸ್ಫಟಿಕಸ್ಥಲೀ ನಿಕಟಮುಂ ದ್ವಾತ್ರಿಂಶದಿಂದ್ರರ್ಕಳು ॥
ತ್ಸವದಿಂದರ್ಚಿಸುವಾಗಳೇಂ ಕಱಿದುದೋ ಕರ್ಣಾಮೃತಾಸಾರಮುಂ ।
ವಿವಿಧಾತೋದ್ಯ ಲಯಾನುಗಂ ಸುರ [1]ಸತೀಮಂಜೀರಿಕಾ ಶಿಂಜಿತಂ ॥ ೯೬ ॥

ಚ ॥ ಪಿರಿದೆನಿಸಿರ್ದ ರಾಮಕಥೆಯಂ ಕಿಱಿದಾಗಿರೆ ದೇಸಿ ಮಾರ್ಗಮೆಂ ।
ಬೆರಡಱಿೊಳಂ ರಸಂಬಡೆದು ಪಂಡಿತ ಮಂಡಲಿ ಮೆಚ್ಚಿ ನೇರ್ಪುವೆ ॥
ತ್ತಿರಲವಿರೋಧಮಾಗೆ ಕೃತಿವೇಱಿೊಡೆ ಸತ್ಕವಿ ನಾಗಚಂದ್ರನಂ ।
ತಿರೆ ಪೊಱರಾರ್ ಸರಸ್ವತಿ ಕುಡಲ್ ಪಡೆದರ್ ವರಮಂ ಕವೀಶ್ವರರ್ ॥ ೯೭ ॥

ಮ॥ ಕೃತವಿದ್ಯರ್ ಸಮಚಿತ್ತರಾಗಿ ಪದೆಪಿಂದಾರಯ್ದೆ ಕರ್ಣಾಟ ಸಂ ।
ಸ್ಕೃತ ಕಾವ್ಯಂಗಳೊಳರ್ಥದಿಂ ರಚನೆಯಿಂ ನೇರ್ಪಟ್ಟು ವಿದ್ವಚ್ಛಮ ॥
ತ್ಕೃತಿಯಪ್ಪಂತಿರೆ ನಾಗಚಂದ್ರ [2]ವಿಬುಧಂ ಪೇೞ್ದಿಂದದಿಂದಾದ್ಯರ ।
ದ್ಯತನಂ ಪೇೞ್ದಿಭರಾಮ ರಾಮಕಥೆಯಂ ಸೈಪಿಂಗಡರ್ಪಾಗನೇ ॥ ೯೮ ॥

ಇದು ಪರಮ ಜಿನಸಮಯ ಕುಮುದಿನೀ ಶರಚ್ಚಂದ್ರ ಬಾಲಚಂದ್ರ
ಮುನೀಂದ್ರ ಚರಣ ನಖಕಿರಣ ಚಂದ್ರಿಕಾ ಚಕೋರ ಭಾರತೀ
ಕರ್ಣಪೂರ ಶ್ರೀಮದಭಿನವಪೆಂಪ ವಿರಚಿತಮಪ್ಪ
ರಾ ಮ ಚಂ ದ್ರ ಚ ರಿ ತ ಪು ರಾ ಣ ದೊಳ್
ಪರಿನಿರ್ವಾಣ ಕಲ್ಯಾಣೋತ್ಸವ
ವರ್ಣನಂ ಷೋಡಶಾಶ್ವಾಸಂ.

---

1. ನಟೀ. ಖ. ಘ. 2. ಸುಕವೀಂದ್ರರ್ ಪೇೞ್ದಿವೋಲಾದ್ಯರ ದ್ಯತನರ್ ಪೇೞ್ದ.....
.....ಗರೀ. ಚ

ಸಂಪೂರ್ಣಂ.

ರಾಮಚಂದ್ರಚರಿತಪುರಾಣದಲ್ಲಿಯ

ಕ್ಲಿಷ್ಟ ಪದಗಳ ನಿಘಂಟು

[ಸೂಚನೆ:—ಇಲ್ಲಿ ಕೊಟ್ಟಿರುವ ಸಂಖ್ಯೆಗಳಲ್ಲಿ ಮೊದಲನೆಯದು ಆಶ್ವಾಸ ಸಂಖ್ಯೆ, ಎರಡನೆಯದು ಪದ್ಯಸಂಖ್ಯೆ. (ವ.=ವಚನ; ಸಂ.=ಸಂಸ್ಕೃತ.)]

ಅ

ಅಂಕ—ಯುದ್ಧ, ೮–೧೮.
ಅಂಕಮಾಲೆ—ಬಿರುದುಗಳ ಸಾಲು, ೧—೧೦೭ ವ.
ಅಕ್ಷೂಣ (ಸಂ.)–ಕಡಿಮೆಯಾಗದ, ೧೧–೯.
ಅಖರ್ವ (ಸಂ.)—ಕಡಿಮೆಯಲ್ಲದ, ೧೨–೩೨.
ಅಗ (ಸಂ.)—ಬೆಟ್ಟ, ೧೧—೧೭.
ಅಗ್ಗಳಿಕೆ—ಮಹಿಮೆ, ಅತಿಶಯ, ೧—೪೨
ಅಂಗಚಿತ್ತ—ಬಹುಮಾನ, ೫–೧೩ ವ.
ಅಂಗದ (ಸಂ.)—ಭುಜಕೀರ್ತಿ, ೫–೪೨ ವ.
ಅಂಗರಕ್ಕೆ—(ಸಂ. ಅಂಗರಕ್ಷಾ), ೧೩—೧೫.
ಅಗಿ—ಭಯಪಡು, ೧೦—೭೮.
ಅಗುವ್ವ—ಭಯ, ೪–೫೪ ವ.
ಅಗುಂದಲೆ—ಅಧಿಕ, ೩–೬೭ ವ.
ಅಗೆ—ಮೊಳಕೆ, ೩–೧೩೮.
ಅಗೆಯೆತ್ತು—ಮೂಲೋತ್ಪಾಟನ ಮಾಡು, ೧೦—೧೨೯.
ಅಘಮರ್ಷಣ (ಸಂ.)—ಪಾಪ ಪರಿಹಾರಕ, ೭—೧೧೭.
ಅಘಹಟ್ಟಂ—ಪಾಪವನ್ನು ಹೊಂದಿದನು, ೪–೮೫.
ಅಚ್ಚಿಗ—ಕೇಡು, ೯–೧೧೫; ಕಷ್ಟ, ೧೪–೧೦೦.
ಅಂಚಿರ—ಅಸ್ಥಿರ, ೭–೧೩೯.
ಅಜನಿಸು—ತಿರಸ್ಕರಿಸು, ೨–೩.
ಅಜ್ಜಗಾಪು—ಬೆಂಗಾವಲು, ೨–೩೯.
ಅಂಜನದಿಕ್ (ಸಂ.)—ಪಶ್ಚಿಮ, ೮–೩೩ ವ.
ಅಟ್ಟಟ್ಟ—ದೂತ, ೧೧–೨೩.
ಅಟ್ಟಳೆ—ಬುರುಜು, (ಸಂ. ಅಟ್ಟಾಲ), ೧–೧೧೬.
ಅಟ್ಟಾಸುರ—ಅತಿಭಯಂಕರ, ೯–೪೪.
ಅಟ್ಟಾಳಕ (ಸಂ)—ಬುರುಜು, ೭—೧೨೮.
ಅಟ್ಟಿ—ಮುಂಡ, ೯–೨೪.
ಅಡಂಗುಜುಚಾಡು—ಕಣ್ಣುಮುಚ್ಚಾಡು, ೯—೧೨೦ ವ.
ಅಡಪ—ಅಡಕೆಲೆ ಚೀಲ, ೩–೪೧.
ಅಡಪಡಿಸು—ತ್ವರೆಪಡು, ೪–೬೧ ವ.
ಅಡ್ಡವಿಸು—ಅಡ್ಡಿಮಾಡು, ೭—೧೩೭.
ಅಡಿಯೂಡಿ—ಪಾದಕ್ಕೆ ಬಳಿದುಕೊಂಡು, ೫–೪೨ ವ.
ಅಡುತ್ರು—ಅವರಿಸಿ, ೯–೭೦.
ಅಡುವುಟ್ಟಿ—ಅಡುವ+ಪುಟ್ಟಿ (ಹುಗ್ಗಿ), ೧೩–೯೬.
ಅಡೆವೊತ್ತು—(ಅಡೆ=ಪಕ್ಷವಾಗುವಂತೆ) ಬಲವಾಗಿ (ಪೊತ್ತು) ಜ್ವಲಿಸು, ೪–೫೪ ವ.
ಅಣಕ—ಎತ್ತಿಹಾಕೆ ಮಾತನಾಡುವಿಕೆ, ೯–೧೩.
ಅಣಿಯರಂ—ಹೆಚ್ಚಾಗಿ, ೬–೭೧.
ಅಣುವ—(ಸಂ. ಹನೂಮಾನ್), ೧೧–೧೫೮.
ಅಣೆ—ತಿವಿ, ೧೩—೭೪.
ಅತಂದ್ರ (ಸಂ.)—ಆಲಸ್ಯರಹಿತ, ಜಾಗರೂಕ, ೨—೧೪.
ಅತಸೀ (ಸಂ.)—ಅಗಸೆ, ೭–೧೦೪.
ಅಂತರ್ವತ್ನೀ (ಸಂ.)—ಗರ್ಭಿಣಿ, ೩–೧೦೯.
ಅಂತರಾಯ (ಸಂ.) ವಿಘ್ನ, ೮–೪೭.
ಅಂತರಿಸು—ತಡಮಾಡು, ೬–೧೭೩.
ಅಂತೇವಾಸಿ (ಸಂ.)—ಶಿಷ್ಯ, ೧೦–೯೫ ವ.

ಅದಟಲೆ—ಧಿಕ್ಕರಿಸು, ೧–೧೩೭.
ಅದ್ಯತನರು—ಈಗಿನವರು, ೧–೩೩.
ಅಧಿರ್ಪು—ಅಲ್ಲಾಡಿಸು, ೧–೨೨.
ಅಧೃಣಿಕರಿಸು—ಕಳೆ, ೧೬–೨ ವ.
ಅನವದ್ಯರ್—ದೋಷವಿಲ್ಲದವರು, ೧—೩.
ಅನ್ವವಾಯ (ಸಂ.) ವಂಶ, ೧೧–೧೩೬.
ಅನುವರ—ಯುದ್ಧ, ೧೦—೨೧೮ ವ.
ಅನುವಿಸು—ಅನುಕರಿಸು, ತೋರ್ಪಡು, ೫–೧೩೩.
ಅನುಷಂಗ (ಸಂ.)—ಸಂಬಂಧ, ೧೬—೧.
ಅನೇಕಪ (ಸಂ.)—ಆನೆ, ೧೦—೧೫೮.
ಅನೋಕಹ (ಸಂ.)—ಮರ, ೧೦–೧೧೫.
ಅಪಘನ (ಸಂ.)—ಅಂಗ, ಅವಯವ, ೬–೫೩; ದೇಹ, ೧೦–೧೭೪ ವ.
ಅಪಹರಿಸುಗುಂ—ಅಪಹರಿಸಲ್ಪಡುವುದು, ೧—೭೨.
ಅಪಹಾರ—ನಿಲ್ಲಿಸುವಿಕೆ (ಉಪಸಂಹಾರ), ೪–೭೧.
ಅಪೂರ್ವ ಭಿತ್ತಿ—ಅಪೂರ್ವವಾದ ಪ್ರಕಾಶ, ೧—೧೨೮.
ಅಪ್ಪೈಸು—ಒಪ್ಪಿಸು (ಅರ್ಪಿಸು), ೨೭–೪೯.
ಅಬ್ರಹ್ಮಣ್ಯ (ಸಂ.)—ಜೀವಹಿಂಸೆ ಕೂಡದೆಂಬ ಮಾತು, ೭–೫೧.
ಅಬ್ಬಾ—(ಸಂ. ಅಂಬಾ)—ಅಮ್ಮಾ, ೭–೧೩೫ ವ.
ಅಂಬರಿವಿಡು—ಧಾರಾಕಾರವಾಗಿ ಸುರಿ, ೬–೪೯.
ಅಂಬುಗಂಡಿ—ಜಲಮಾರ್ಗ, ೧–೧೧೬.
ಅಭ್ಯರ್ಣ (ಸಂ.)—ಸಮೀಪ, ೧೩–೨.
ಅಭಿಜನ (ಸಂ.)—ಕುಲದಲ್ಲಿ ಶ್ರೇಷ್ಠನು, ೬–೧೬೪; ವಂಶ, ೬–೧೬೯.
ಅಭಿಭವಿಸು—ತಿರಸ್ಕರಿಸು, ೧೦—೨೦೭ ವ.
ಅಭಿಯೋಗ (ಸಂ.)–ಅಪವಾದ, ೧೫–೭೫ವ.
ಅಭಿಷವ (ಸಂ.)—ಅಭಿಷೇಕ, ೭–೧೩೩.
ಅಮುರ್ದು—(ಸಂ. ಅಮೃತ), ೧೦–೬೭.
ಅಮುಳ್ಗಳು—ಅವಳಿ ಮುಕ್ಕಳು, (ಸಂ. ಯಮಳ), ೩–೧೪೪.
ಅಮ್ಮ—ಅಯ್ಯ, ೧೧–೪೯ ವ.
ಅಮೂರ್ತ (ಸಂ.)—ದೇಹವಿಲ್ಲದುದು, ೧–೪೬.
ಅಯ (ಸಂ.)—ಶುಭ, ೧೪–೧೩೪.
ಅರಮಗ—ರಾಜಪುತ್ರ, ೧೨–೭೯.
ಅರರೀಪುಟ (ಸಂ.)–ಕದದ ರೆಕ್ಕೆ, ೪—೧೧೨.
ಅರವಾವು—ಮಹಾಸರ್ಪ (ಅರಸು+ಪಾವು), ೧೩–೬೧.
ಅರಿಂದಮ (ಸಂ.)—ಶತ್ರುಗಳನ್ನು ನಿಗ್ರಹಿಸುವವನು, ೫–೧೨.
ಅರಿಯಂ—ಅಸಾಧ್ಯನು, ೧೦–೨೩೧.
ಅಱ—ಧರ್ಮ, ೬—೧೭.
ಅಱಿಕೆ—ಪ್ರಸಿದ್ಧಿ, ೧೪—೧೪ ವ.
ಅಱಿಯಮೆ—ಅಜ್ಞಾನ, ೯–೬.
ಅಱುಗುಲಿ—ಹಿಂಸಕ, ೯–೧೧.
ಅಱುನೀರ್—ಬತ್ತಿದ ನೀರು, ೯—೧೪೩.
ಅಲರ್ಚು—ಅರಳಿಸು, ವಿಸ್ತರಿಸು, ೯–೧೬.
ಅಲಂಪು—ಸೊಬಗು, ೧—೧೦೦.
ಅಲವರಿಕೆ—ಪಟ್ಟುಹಿಡಿತ, ೧—೭೫.
ಅವಚಱು—ಜುಗುಪ್ಸೆ, ೧೦–೧೩೧; ಜುಗುಪ್ಸೆಪಡು, ೬–೬೬.
ಅವಟಯಿಸು—ಉಂಟುಮಾಡು, ೨–೧೩ ವ.
ಅವತಂಸ (ಸಂ.)—ಕರ್ಣಾಭರಣ, ೧–೯೪.
ಅವದಾತ (ಸಂ.)—ಬೆಳ್ಳಗಿರುವ, ೧೦–೨೩೬.
ಅವಧಿಬೋಧ (ಸಂ.)—ಅವಧಿಜ್ಞಾನ (ಜೈನ ಪರಿಭಾಷೆ), ೧೬—೫೨ ವ.
ಅವಯವದಿಂದ—ಸೇನಾಸಮೇತನಾಗಿ, ೯—೧೪೦ ವ.
ಅವರೋಧ (ಸಂ.)—ರಾಣಿವಾಸ, ಅಂತಃಪುರ, ೧೪—೧೧೬
ಅವಷ್ಟಂಭ (ಸಂ.)—ಸ್ಥೈರ್ಯ, ೪—೪೭; ಗರ್ವ, ೮—೩೩.
ಅವಸರ—ಸಂದರ್ಭ, ೧೧–೨೮.
ಅವ್ವಳಿಸು—ವ್ಯಾಪಿಸು, ೫–೭೫.

ಅವಿತಥ (ಸಂ.)—ನಿಶ್ಚಯ, ೨—೬೨.
ಅವಿನಾಣ—ಕುರುಹು, ೧೧—೪೬ ವ. (ಸಂ. ಅಭಿಜ್ಞಾನ).
ಅರ್ವಿ—ಗಿರಿನದೀ ಪ್ರವಾಹ, ೭—೩೧.
ಅರ್ವಿಸು—ಪ್ರಸರಿಸು, ೧—೭೧.
ಅಶನಿ (ಸಂ.)—ಸಿಡಿಲು, ೧೩—೨.
ಅಶೀತಿ (ಸಂ.)—ಎಂಬತ್ತು, ೧—೪೪.
ಅಷ್ಟಾಪದ (ಸಂ.)—ಶರಭ, ೭—೧೨೨.
ಅಸಕಟು—ಕೈವಿಾರು, ೬—೧೩೧.
ಅಸಗ—ಅಗಸ, ೭—೫೭.
ಅಸಿಯ ಬಾಸೆ—ಸೂಕ್ಷ್ಮವಾದ ರೋಮರಾಜಿ, ೩—೧೩೩.
ಅಸುಗೆ—(ಸಂ. ಅಶೋಕ), ೧೧—೧೧೪.
ಅಸುಂಗೊಳ್—ಕೊಲ್ಲು, ೧೦—೨೧೬.
ಅಸೃಕ್ (ಸಂ.)—ರಕ್ತ, ೯—೨೪.
ಅಳಜು—ಭಯ, ೧೩—೧೩೨ ವ.
ಅಳವಡಿಸು—ಸರಿಮಾಡಿಕೊಳ್ಳು, ೫—೬೦.
ಅಳವಿ—ಪ್ರಮಾಣ, ೧—೬೪.
ಅಳ್ಗಿಡಿ—ಸಣ್ಣಕೆಡಿ, ೩—೫೯; ಅಳ್ಕಿಜು (=ಸ್ವಲ್ಪತಿವಿ), ೩—೬೦ ವ; ಅಳ್ಗುಡಿ, ೩—೪೪; ಅಳ್ಕೇಜು (=ಸಣ್ಣಗಾಯ), ೧೩—೪೦; ಅಳ್ಕೆರ್ದೆ, ೧—೧೦೪; (ಅಳ್=ಸೂಕ್ಷ್ಮವಾದ).
ಅಳುಕ್ಕೆ—ಆವರಿಸುವಿಕೆ, ೫—೩೨.
ಅಳುಂಬಂ—ಅತಿಶಯ, ೬—೪.
ಅಳ್ಕುಜಿ—ಭಯಪಡುವಂತೆ, ೪—೬೧.
ಅಳ್ವು—ಸುಡು, ೭—೯೪.
ಅಟಲ್—ದುಃಖ, ೪—೧೦೬.
ಅಟ್ಕಿರ್ತು—ಪ್ರೀತಿಸಿ, ೬—೪೪ ವ.
ಅಟು—ಕೇಳ್ತನ, ೧೪—೧೦೨.
ಅಟು ಗ್ಗಂಡ—ಸುಳ್ಳುಶೂರ, ೧೪—೧೦೨.
ಅಟುಪು—ದೂಷಣೆ, ೧೪—೧೩ ವ; ಆಸೆ, ೧೬—೫೫.
ಅಟುಯೆ—ಅಳಿಯಿಸಲ್ಪಡಲು, ೧೧—೩೧.
ಅಟ್ಟು—ಕ್ಷೀಣವಾಗು, ೧೬—೪೯.

ಆ

ಆಕೃಷ್ಟಿ—ಆಕರ್ಷಣ, ೩—೭೩.
ಆಂಕೆಗೊಳ್—ಪ್ರತಿಭಟಿಸು, ೧೦—೨೦೫
ಆರ್ಗೆ—ಯಾರ ಮಗ? ೭—೭೫ ವ.
ಆಘಾಟ (ಸಂ)—ತುದಿ, ೭—೧೨೩.
ಆರ್ಜವರ್—ಋಜುಸ್ವಭಾವರು, ೧—೬೦.
ಆಟಂದು—ಅಪೇಕ್ಷಿಸಿ, ೧೧—೪೫.
ಆಟಸು—ಅಪೇಕ್ಷಿಸು, ೬—೧೯ ವ.
ಆಡುಂಬೊಲ—ಕ್ರೀಡಾಸ್ಥಾನ, ೧—೧೦೧.
ಆತಪವಾರಣ (ಸಂ.)—ಕೊಡೆ, ೧೨—೮.
ಆರ್ತ—ಮನಃಪೀಡೆ, ೬—೧೭೨.
ಆರ್ತು—ಕೂಗಿ ಕರೆದು, ೩—೧೩೭.
ಆದರ್ಪಿಸು—ಪ್ರತಿಭಟಿಸು, ೧೫—೧೫.
ಆದಲೆ—ಅಗ್ರಭಾಗ, ೨—೧೨.
ಆದೇಶ (ಸಂ.)—ವಿಧಿ, ೧೪—೪೪.
ಆದೊರೆಯ—ಅಂತಹ, ೧—೩೬.
ಆಧೋರಣ (ಸಂ.)—ಮಾವಟಿಗ, ೧೦—೨೦೯ ವ.
ಆನಕ (ಸಂ.)—ಭೇರಿ, ೧೬—೩೨.
ಆನೆಗಡುಪು—ಆನೆಗಳ ಗುಂಪು, ೩—೫೭.
ಆಂಬರಂ—ನನ್ನವರೆಗೂ, ೧೫—೭೦.
ಆಭೀಲ (ಸಂ.)—ಕಷ್ಟಕರವಾದ, ೧೩—೧೩೨
ಆಭೋಗ (ಸಂ.)—ವಿಸ್ತಾರ, ೭—೧೫೨.
ಆಮುತ್ರಿಕ (ಸಂ.)—ಪರಲೋಕ ಸಂಬಂಧವಾದ, ೭—೨೧.
ಆಯತಿ—ಉನ್ನತಿ, ೧೩—೧೪೪.
ಆಯಾಮ (ಸಂ.)—ಉದ್ದ, ೧೨—೯೬ ವ.
ಆರಯ್—ವಿಚಾರಮಾಡು, ೧—೩೩.
ಆರವೆ—ಕೈತೋಟ, (ಸಂ. ಆರಾಮ), ೩—೧೧೯.
ಆರಾತೀಯ—ಪ್ರಾಚೀನ, ೧—೯೧.
ಆಲಾನ (ಸಂ.)—ಆನೆಯನ್ನು ಕಟ್ಟುವ ಕಂಬ ೧೫—೩೧.
ಆಲೀಢ (ಸಂ.)—ಯುದ್ಧಮಾಡುವಾಗ ನಿಲ್ಲುವ ಒಂದು ಕ್ರಮ, ೧೪—೧೭೬.

ಆವಲ್—ಕಮಲ ವಿಶೇಷ, ೧—೧೦೪.
ಆವಿಲ(ಸಂ.)—ಒಂಡು, ಕಲ್ಮಷ, ೧—೩೪.
ಆಶಯ (ಸಂ.)—ಅಭಿಪ್ರಾಯ, ೧—೨೮
ಆಶಾ (ಸಂ.)—ದಿಕ್ಕು, ೬—೧೫೬.
ಆಸಱ್—ಆಯಾಸ, ೧೦—೭೮.
ಆಸಂದಿ (ಸಂ.)—ಪೀಠ, ೬—೧೭೦.
ಆಸನ್ನ (ಸಂ.)—ಸವಿಾಪ, ೧೬—೫೩ ವ.
ಆಸವ (ಸಂ.)—ಮದ್ಯ, ೯—೩೪.
ಆಸವಾರಿ—ಕುದುರೆ ಸವಾರ, ೪—೧೧೩.
ಆಸುರಂ(ಸಂ.)—ಘೋರ, ೧—೭೦.
ಆಸೆ—ದಿಕ್ಕು, (ಸಂ. ಆಶಾ), ೬—೯೦.
ಆರ್ಹಂತ್ಯ (ಸಂ.)—ಜಿನೇಶ್ವರ, ೧—೧.
ಆಳಂ—ವ್ಯರ್ಥ, ೬—೧೪೮.
ಆಳರ್ಪಿಸು—ಪ್ರತಿಭಟಿಸು, ೧—೯೫
ಆಳಿಸು—ಬಂಧಿಸು, ೯—೫೭.
ಆಳ್ವಿಸ—ಸೇವೆ, ಊಳಿಗ ೧೪—೧೯೪.

ಇ

ಇಂಗಡಲ್—ಕ್ಷೀರ ಸಮುದ್ರ, ೧—೧೧೩.
ಇಚ್ಛಾಕಾರ (ಸಂ.)—ಅತಿಥಿ ಸತ್ಕಾರ, ೧೫—೧೩ ವ
ಇಟ್ಟಳ—ಸಾಂದ್ರ, ೧೨—೭೮.
ಇಟ್ಟಳವಿಟ್ಟು—ಆಕ್ಷೇಪಿಸಿ, ೧೫—೪೧ ವ.
ಇಟ್ಟಿಡೆ—ಇಕ್ಕಟ್ಟು, ೧೨—೯೫.
ಇಂದಗಿ—ಇಂದ್ರಜಿತು, ೧೦—೧೫೧.
ಇಂದ್ರಗೋಪ(ಸಂ)—ಮಳೆಗಾಲದ ಕೆಂಪು ಹುಳು, ೭—೧೪೬.
ಇಂದ್ರಚಾಪ (ಸಂ.)—ಕಾಮನ ಬಿಲ್ಲು, ೧೩—೫೯.
ಇದಿರಾಂಪನ್ನರ್—ಎದುರು ಬೀಳುವವರು, ೧೧—೧೨೯.
ಇಂದೊವರ್—ರುಚಿಯಾದ ಒಗರು, ೭—೧೫೫.
ಇಂಧನ (ಸಂ.)—ಸೌದೆ, ೯—೨೮.
ಇನ (ಸಂ.)—ಸೂರ್ಯ, ೧೪—೩೩.
ಇನಿವಿರಿದು—ಇಷ್ಟು ದೊಡ್ಡದು, (ಇನಿತು+ಪಿರಿದು), ೭—೧೨೧ ವ.
ಇನಿವಿಲ್—(ಸಿಹಿಯಾದ ಬಿಲ್ಲು), ಕಬ್ಬಿನ ಜಲ್ಲೆ, ೧—೧೬.
ಇಪ್ಪೋಡು—ದ್ರವಹೀನವಾಗು, ೭—೧೪೭. (ಇಪ್ಪು=ರಸ, ದ್ರವ).
ಇಂಬಟಿಕ್ಕೆ—ತರುವಾಯ, ೧೬—೨ ವ.
ಇಂಬು—ವಿಸ್ತಾರ, ೧—೨೯; ಲೇಸು, ೭—೧೮; ಸ್ಥಿತಿ, ೧೩—೧೩೮.
ಇಱುವಿಟ್ಟ—ಸೇವಾಕಾರ್ಯ, ೮—೨೬.
ಇಱುಪೆ—ಇರುವೆ, ೪—೪೭.
ಇಲ್ಲಮೆ—ಅಭಾವ, ೭—೧೮.
ಇಷು (ಸಂ.)—ಬಾಣ, ೧೬—೧೮
ಇಸುವೆಸ—ಆಜ್ಞಾಕಾರ್ಯ, ೬—೧೭೪.
ಇಳಿದಾಯ್ತು—ವೇಗಹೀನವಾಯ್ತು, ೫—೪೬.
ಇಱಿಕೆ—ಕೇಳು, ೬—೧೫೬.
ಇಱಿಕೆಯ್—ಕೇಳುಮಾಡು, ೧—೧೪.

ಈ

ಈಕ್ಷಣ (ಸಂ.)—ಕಣ್ಣು, ೭—೧೦೯.
ಈಂಗಡಲ್—ಕ್ಷೀರಸಮುದ್ರ, (ಇನಿದು+ಕಡಲ್), ೭—೧೬೭.
ಈಂಟು—ಕುಡಿ, ೬—೧೩೯.
ಈದೊರೆತು—ಈ ಪ್ರಕಾರವುಳ್ಳ, ೯—೪೨.
ಈರೊಂಬದಿಂಬರ್—ಹದಿನೆಂಟು ಮಂದಿ, ೫—೧೦೫.
ಈಸು—ಇರ್ಚಿ, ಮೂಕೇಮರ, (ಸಂ. ಈಷಾ), ೧೩—೬೯.
ಈಟಿಂ—ಆಪಹರಿಸು, ೫—೭೮.

ಉ

ಉಕ್ಕೆವ—(ಸಂ.)ಉತ್ಸವ, ೫—೭೮.
ಉಗಿಬಗಿ—ಸೀಳು, ೨—೫೫ ವ.
ಉಡಿ—ಮುರಿ, ೪—೬೧.
ಉಂಡಿಗೆ—ಗಂಟಲು, ೭—೯೬.
ಉತ್ಕ (ಸಂ.)—ಮುದಿಸಿದ, ೮—೨.
ಉತ್ಕಳಿಕಾ (ಸಂ.)—ಕುತೂಹಲ, ೭—೧೦೬.
ಉತ್ತಂಸ (ಸಂ.)—ಶಿರೋಭೂಷಣ, ೬—೧೭೫ ವ.
ಉತ್ಸಂಗ (ಸಂ.)—ತೊಡೆ, ೩—೭೯.

ಉತ್ತಾರ (ಸಂ.)—ಉಚ್ಚಸ್ವರ, ೧೧—೧೪೬.
ಉಂತೆ—ನಿಷ್ಕಾರಣವಾಗಿ, ೨—೬೯.
ಉತ್ಪೇಧ (ಸಂ.)—ಎತ್ತರ, ೧—೪೯ ವ.
ಉದ (ಸಂ.)—ನೀರು, ೭—೯೬.
ಉದವಾಸ (ಸಂ.)—ನೀರಿನಲ್ಲಿರಿಸುವಿಕೆ, ೨—೫೯.
ಉನ್ಮಿಷಿತ (ಸಂ.)—ಅರಳಿದ, ೧೬—೯೧.
ಉಪತ್ಯಕ (ಸಂ.)—ಪರ್ವತಸಮೀಪ ಭೂಮಿ, ೬—೧೫೪.
ಉಪದಂಶ (ಸಂ.)—ನಂಜಿಕೊಳ್ಳುವ ವಸ್ತು, ಚಟ್ನಿ ಮೊದಲಾದುದು, ೧೨—೨ ವ
ಉಪಧಾನ (ಸಂ.)—ತಲೆದಿಂಬು, ೫—೩೦ವ.
ಉಪರಾಗ (ಸಂ.)—(ಸೂರ್ಯಚಂದ್ರರ) ಗ್ರಹಣ, ೧೩—೬೨.
ಉಪಸರ್ಗ (ಸಂ.)—ಬಾಧೆ, ೪—೫.
ಉಪ್ಪವಡಿಸು—ಹಾಸಿಗೆಯಿಂದೇಳು, ೧೦—೧೩೯ ವ.
ಉಪಾದೇಯ (ಸಂ.)—ಅಂಗೀಕರಿಸತಕ್ಕುದು, ೬—೧೨೭.
ಉಪಾಂಶು ವಧ (ಸಂ.)—ಗುಟ್ಟಾಗಿ ಕೊಲ್ಲುವಿಕೆ, ೯—೧೩೩ ವ.
ಉಬ್ಬೆಗ—ಮನೋವ್ಯಥೆ, (ಸಂ. ಉದ್ವೇಗ), ೧—೭೭.
ಉಮ್ಮಚ್ಚ—ಬುದ್ಧಿಭ್ರಮೆ, (ಸಂ. ಉನ್ಮತ್ತ), ೬—೧೦೦.
ಉಮ್ಮಳಂ—ಚಿಂತೆ, ೧—೪೧.
ಉರವಣೆ—ದಿಟ್ಟತನ, ೧—೩೭.
ಉರಿವರಿವ—ಜ್ವಾಲೆಯನ್ನು ಹರಿಯಿಸುವ, ೭—೪೯.
ಉಱದರ್—ಅಸಮಗ್ರರು, ಕೊರತೆಯುಳ್ಳವರು, ೫—೨೫.
ಉಱದೆ—ವಿಚಾರಮಾಡದೆ, ೩—೪೭; ಲಕ್ಷ್ಯಮಾಡದೆ, ೧೧—೧೪; ಹೆಚ್ಚಾಗಿ, ೧೩—೧೨.
ಉಱುವ—ವಿಚಾರಮಾಡಬೇಕಾದ, ೪—೧೭ ವ.
ಉರ್ವು—ಉತ್ಸಾಹ, ೪—೧೬; ಆಧಿಕ್ಯ, ೧೪—೭.
ಉಷೆ—ಉಷಃಕಾಲ, ೧೩—೯೫.
ಉಳ್ಕ—ಕೊಳ್ಳಿ, (ಸಂ. ಉಲ್ಕಾ), ೪—೧೦೪.
ಉಳ್ಳೊಳ—ಮಹಾ ಘೋಷ, ೧೦—೧೫೭.
ಊಳ್—ಕೂಗು, ೧೪—೧೨೨.

ಋ

ಋಜು (ಸಂ.)—ನೇರ, ೫—೬೫

ಎ

ಎಕ್ಕತುಳ—ಬಂದುಸಮ, ೯—೧೦೫.
ಎಕ್ಕಸರ—ಒಂಟಿಕೆಯ ಹಾರ, ೧—೧೨೧.
ಎಕ್ಕೆಯಿಂ—ಒಟ್ಟಾಗಿ, ೭—೧೦೬.
ಎಗ್ಗು—ಅಪಮಾನ, ೨—೭೨.
ಎಡಪು—ಎಡವು, ೯—೭.
ಎಡ್ಡಂ—ಮನೋಹರ, ೫—೧೩೮.
ಎಡೆಗಟ್ಟು—ಭೇದ, ೬—೧೧೯.
ಎಡೆನೆಜಕೆ—ಅಡಕವಾಗು, ೧೫—೨೩.
ಎಡೆಮಡಗದೆ—ಎಡೆಬಿಡದೆ, ೧೧—೧೮೦.
ಎಡೆಯುಡುಗದೆ—ಎಡೆಬಿಡದೆ, ೯—೬೧.
ಎರ್ದೆವಟಿಲ್—ಮನೋವ್ಯಥೆ, ೧—೭೨.
ಎನ್ನಂ—ಎಂತಹುದು, ೧೧—೧೬೭.
ಎಂಬುಕೆಯ್—ಅಂಗೀಕರಿಸು, ೭—೬೮. (ಎಂಬುದಂ+ಕೆಯ್).
ಎಜಿಕ—ಮೋಹ, ೨—೧೮ ವ.
ಎಜಗು—ಪ್ರೀತಿಯಿಂದ ಸೇರು, ೫—೭೧.
ಎಜೆವಟ್ಟು—ಆಶ್ರಯ, ೪—೪೧.
ಎಸಡಿ—ನಳ್ಳಿ, ಏಡಿ, ೧೫—೩೭ ವ.
ಎಳವಾಳೆ—ಬಾಳೆಯ ಮಾನು, ೫—೬೯.
ಎಳವೆ—ಬಾಲ್ಯ, ೩—೨.
ಎಳಸು—ಆವರಿಸು, ೩—೧೧೩.
ಎಳ್ತರ—ಆಡಂಬರ, ೯—೭೦.
ಎಳೆ—ಭೂಮಿ, (ಸಂ. ಇಳಾ), ೨—೨೪.
ಎಱಿಲಿಕ್ಕು—ನೇತಾಡಗಟ್ಟು, ೧—೧೨೭.
ಎಟಿಕುಳಿ—ಆಕರ್ಷಣ, ೫—೬೧.

ಏ

ಏಗೊಳ್—ಅಂಗೀಕರಿಸು, ೫—೨೬.
ಏತೊದಳ್—ತಡವರಿಸಲೇಕೆ? ೧೧–೧೧೨.
ಏನಃ (ಸಂ.)–ಪಾಪ, ೧–೨.
ಏಬಂಡಂ–ಯಾವ ದ್ರವ್ಯ, (ಸಂ.ಭಾಂಡಂ), ೬—೧೨೬.
ಏರಂಡ ಕಾಂಡ (ಸಂ.)–ಹರಳುಗಿಡದ ಕಡ್ಡಿ, ೫–೮೬ ವ.
ಏಜಲಿಕ್ಕು–ಪೀಠವನ್ನು ಕೊಡು, ೧೫–೧೩ ವ.
ಏಱು—ಕಟ್ಟಿ, ೧೬—೨೫ ವ.
ಏಱು—ಗಾಯ, ೨–೫೫; ಹೊಡೆತ, ೧೩–೮೦
ಏವಂ—ಏನುಮಾಡುವನು, ೧೦—೧೮೬; ವ್ಯರ್ಥ, ೨—೭೩.
ಏವಯಿಸು—ವ್ಯಥೆಪಡು, ೧೬—೭ ವ.
ಏವುದು—ಯಾವುದು, ೬–೧೭೨.
ಏರ್ವೆಸ—ಯುದ್ಧಕಾರ್ಯ, ೯—೧೨೩.
ಏಳಿದ—ನಿಕೃಷ್ಟ, ೬—೧೭೯.
ಏಳಿದಿಕೆ–ತಿರಸ್ಕಾರ, ೧೫–೬೮.
ಏಳಿಸು—ತಿರಸ್ಕರಿಸು, ೬–೧೦೫.
ಏಟ್ಟರ—ಆಡಂಬರ, ೧೧–೧೬೨.

ಓ

ಒಕ್ಕಳ್–ಹಾಕಿದಳು, ೯–೪೨.
ಒರ್ಚವಡಿಯ—ಒಳಗೊಂದು ಹೊರಗೊಂದು ವಿಧದ, ೪–೧೩.
ಒಟ್ಟಜೆ—ಶೌರ್ಯೋದ್ರೇಕ, ೪–೧೧೫; ಗುಂಪು, ೧೩–೧೦೯ ವ.
ಒಟ್ಟೈಸು—ನೂಕು, ತಳ್ಳು, ೩–೭೮.
ಒಡ್ಡಣ—ವ್ಯೂಹ, ೧೪–೯.
ಒನಲ್–ಕೋಪಿಸು, ೩–೧೫.
ಒರೆ—ಸಾವ್ಯ, ೬–೧೩೪.

ಓ

ಓಜೆ—ಶ್ರಮ, ೩–೧೦೭.
ಓಜೆವಿಡಿ—ಪರಸ್ಪರ ಒಂದೇ ಶ್ರಮವಾಗಿರುವಂತೆ ನಡೆಯುವ ಜೋಡಿ ಹೆಣ್ಣಾನೆ, ೨–೧೧, (ಓಜೆಯ+ಪಿಡಿ).
ಓವದೆ—ಲಕ್ಷ್ಯಮಾಡದೆ, ೧–೨೨.
ಓವರಿ—ಒಳಭಾಗ, ೧೦–೮.

ಔ

ಔರ್ವಜ್ವಲನ (ಸಂ.)–ಬಡಬಾಗ್ನಿ, ೧–೧೨೨.

ಕ

ಕರ್ಕಡೆ—ಆಯುಧ ವಿಶೇಷ, ೧೩–೬೧.
ಕರ್ಕೇತನ—ಬೆಳ್ಳಿ, ೫–೧೧೨.
ಕಚ (ಸಂ.)—ಕೂಡಲು, ೨—೧೯.
ಕಚ್ಚಟೆ—ಕೌಪೀನ, ೪–೮೧.
ಕಂಚುಕ (ಸಂ.) ಅಂಗಿ, ೨—೨.
ಕಟ್ಟಾಯ—ನಿಷ್ಕರ್ಷೆ, ೧೪–೭೯ ವ
ಕಟ್ಟಿಕಡೆ—ವ್ಯಾಕುಲಪಡು, ೬–೧೩೭ ವ.
ಕಡಂಗು–ಉತ್ಸಾಹಪಡು, ೧೦—೧೨೫.
ಕಡವು—ಕಡಹದ ಮರ, (ಸಂ. ಕದಂಬ), ೭–೧೬೩ ವ.
ಕಡ್ಡವಾರಂ—ಗದಾಯುದ್ಧ, ೩–೨೮.
ಕಂಡರಿಸು—ಕೆತ್ತನೆಯ ಕೆಲಸ ಮಾಡು, ೩–೧೫೬.
ಕಡಿತಲೆ—ಖಡ್ಗ, ೪–೯.
ಕಡುಕೆಯ್—ತೀವ್ರವಾಗು, ೧೧—೧೨೦.
ಕಂಡು–ತುಂಡು,(ಸಂ.ಖಂಡ), ೧೩–೫೪ವ.
ಕಂಡೂಯನ (ಸಂ.)–ನವೆ, ೧೨—೭೩.
ಕಡ್ಡಿ—ದುಷ್ಟೆ, ೧೨–೬೦.
ಕಣ್ಬರಿ—ವಿವೇಕ, ೨–೫೩.
ಕರ್ಣದೂಷಿಕೆ—ಕುದುರೆಯ ರೋಗ ವಿಶೇಷ, ೪–೬೬.
ಕಣ್ಣಾವುದು–ನಿರೀಕ್ಷಿಸುವುದು, ೧–೧೦೩.
ಕಣೆ—ಗಣೆ, (ಸಂ.ಖನಿ), ೧೪—೨೧.
ಕಣಿಶ (ಸಂ.)—ತೆನೆ, ೩—೮೩ ವ.
ಕರ್ಣಕಾರ(ಸಂ.)—ಬೆಟ್ಟದಾವರೆ, ೧೨—೪.
ಕಣ್ಬೇಲಿ—ನವಿಲು ಗರಿ, ೪—೧೧೬.
ಕಣೆ—ಬಾಣ, ೧೦—೧೦೭ ವ.
ಕಣೆವೋದ ಕಣಕಾಲ್—ಬಾಣವು ನುಗ್ಗಿಹೋದ ಕೆಳಕಾಲು, ೧೩–೫೪ ವ.

ಕಣ್ಣೆವಿ— (ಕಣ್ಣು ಬಿಡುವಿಕೆ), ಪ್ರಕಾಶ, ೩–೭೫ ವ.

ಕರ್ಣೇಜಪ(ಸಂ.)–ಚಾಡಿಕೋರ, ೯—೧೦.

ಕಣ್ಪೊಲ—ದೃಷ್ಟಿಗೋಚರ, ೫–೨೭.

ಕತ್ತರಿ ವಾಣಿ—ಸೋಕಿದರೆ ಕತ್ತರಿಸುವ ನೀರು. ೩–೪೮.

ಕತ್ತರಿಸು—ನೇರವಾಗಿ ಮಾಡು, ೪—೧೦೮.

ಕತಿಪಯ (ಸಂ.)—ಕೆಲವು, ೧೦—೧೨೬ ವ.

ಕತ್ತಿಗೆ–ಖಡ್ಗ ವಿಶೇಷ, (ಸಂ. ಕರ್ತಿಕಾ), ೪–೧೭.

ಕಂತಿ—ಯೋಗಿನಿ, ೬–೭೫ ವ.

ಕದಪು } —ಕೆನ್ನೆ, ೩—೧೦೪, ೫—೧೦೯.
ಕದಂಪು }

ಕದಳಿಕಾ(ಸಂ.)—ಧ್ವಜ, ೧೩–೭೫.

ಕಂದಳ (ಸಂ.)—ಮೊಳಕೆ, ೬—೭೪.

ಕದುಷ್ಣ (ಸಂ.)—ಸ್ವಲ್ಪ ಬಿಸಿ, ೬—೧೬೧.

ಕರ್ದುಕು—ಕುಟುಕು, ೧—೧೨೭.

ಕನವನಿಪ–ಭಯಂಕರವಾದ, ೬–೯೪.

ಕನಿ—ಪ್ರಕಾಶಿಸು, ೧೩–೨೧.

ಕನೀಯ—ಕನಿಷ್ಠ, ಚಿಕ್ಕವನು, ೬—೧೨೬,

ಕನ್ನೆವಾಡ—ಕನ್ನಿಕೆಯರ ಅಂತಃಪುರ, ೪—೮೨.

ಕಪ್ಪಡ—(ಹರಕು) ಬಟ್ಟೆ, ೬—೭೫ ವ.

ಕರ್ಪರ (ಸಂ.)—ಕಪಾಲ, ಬೆನ್ನು ಚಿಪ್ಪು, ೫—೪೭.

ಕಂಬುಗ್ರೀವೆ—ಶಂಖದಂತೆ ಕೊರಲುಳ್ಳವಳು, ೧೧—೧೧೪.

ಕರ್ಬುರಿತ (ಸಂ.)—ಚಿತ್ರವರ್ಣವುಳ್ಳ, ೧೨—೨ ವ.

ಕರ್ಬೊನ್ನ—ಕಬ್ಬಿಣದ, ೪—೧೨.

ಕಮಠ (ಸಂ.)—ಕೂರ್ಮ, ಆವೆ, ೬–೪೪.

ಕಮ್ಮನೆ—ಸುಮ್ಮನೆ, ೧೧—೧೭೬.

ಕಮ್ಮರ—ಕಮರಿಕೆಯೆಂಬ ಹಣ್ಣು, ೧೩–೬.

ಕರವಾಳ (ಸಂ.)—ಕತ್ತಿ, ೧೩—೧೦೪.

ಕರಿಸಂ—ಒಣಗುವಿಕೆ, ೭–೯೩.

ಕರುತ್ತು—ಉದ್ದೇಶಿಸಿ, ೪–೧೭.

ಕರುಮಾಡ—ಉಸ್ಪರಿಗೆ, ೧—೧೨೫.

ಕರುವಿಡು—ಎರಕಹೊಯ್, ೧—೧೦೦.

ಕರೆಗಣ್ಮ—ವಿಶಿವಿಸಾರು, ೧—೨೯.

ಕಱುಂಗು—ಕಪ್ಪಾಗು, ೧—೧೧೦.

ಕಲ—ಮಡಕೆ, ಪಾತ್ರೆ, ೧೬—೫೫.

ಕಲ (ಸಂ.)—ಇಂಪಾದ, ೧೬—೩೮.

ಕಲಧೌತ (ಸಂ.), ಚಿನ್ನ, ಬೆಳ್ಳಿ, ೧೨—೨ ವ.

ಕಲಾಪ (ಸಂ.)—ಗುಂಪು, ೨—೨.

ಕಲಿಕಾ (ಸಂ.)—ಮೊಗ್ಗು, ೭—೨೬.

ಕಲಿಲ (ಸಂ.)—ಬೆರೆತಿರುವ, ಕೂಡಿದ, ೫–೪೮.

ಕಲುಂಬು–(ಕೆಲುಬು), ಮಾಲಿನ್ಯ, ೬—೧೧೫.

ಕವಚಹರಂ(ಸಂ.)–(ಕವಚವನ್ನು ತೊಟ್ಟು ಕೊಳ್ಳತಕ್ಕ), ಪ್ರಾಪ್ತವಯಸ್ಕ, ೬–೬೬.

ಕವರ್ತೆ—ಸರ್ವಸ್ವಾಪಹಾರ, ೪–೩೮.

ಕವರ್ದು–ಸರ್ವಸ್ವವನ್ನೂ ಅಪಹರಿಸಿ. ೩–೪೧

ಕವಿಲ್—ಕಪಿಲವರ್ಣ, ೧೩–೪೩.

ಕರ್ವೆಟ್ಟು—ನೀಲಾಚಲ, ೧೩—೧೨೮.

ಕಸವರ—ಚಿನ್ನ, ೬–೩೪ವ.

ಕಟಲ್ಲು—ನಾಶಮಾಡು, ೧—೧೪.

ಕಟಲೆಬೀಱ್—ಎಲೆಯುದುರಿ ಬರಲಾಗು, ೭–೮೬

ಕಟುಯೆ—ಸಾಯಲು, ೧೦—೯೧ ವ.

ಕ್ರಕಚ (ಸಂ.)—ಗರಗಸ, ೭—೨.

ಕ್ರಮವಿಕ್ಷೇಪ (ಸಂ.)–ಹಜ್ಜೆಯಿಡುವುದು, ೭—೧೦೮.

ಕ್ರಮೇಳಕ (ಸಂ.)—ಬಂಟಿ, ೬—೩೭.

ಕ್ಷಪಣೆ—ಅಭಾವ, ೭—೯೫.

ಕ್ಷಪಿತ (ಸಂ.)–ನಾಶಮಾಡಲ್ಪಟ್ಟ, ೧೪–೪೧.

ಕಾಗಿಣಿ—ಕವಡೆ, ೬–೧೩೪.

ಕಾಂಡ (ಸಂ.)—ದಂಟು, ೭—೧೨೫.

ಕಾಂಡಪಟ (ಸಂ.)–ಪರದೆ, ತೆರೆ,೧೬–೩೮.

ಕಾತರ—ದುಡುಕು, ೧೦—೧೨೫.

ಕಾರ್ತಸ್ವರ(ಸಂ.)—ಚಿನ್ನ, ೧—೧೭.

ಕಾಲ್ಗಚ್ಚು—ಕಾಲನ್ನು ತೊಳೆ, ೧೫–೯ ವ.

ಕಾಲಾಯಸ (ಸಂ.)—ಕಬ್ಬಿಣ, ೧—೩೭.
ಕಾಲ್ಗಾಪು—ಬೆಂಗಾವಲು, ೨—೧೧
ಕಾಲಿಕೆ } —ಕಪ್ಪು, ಕಲ್ಮಷ, ೧೬—೪೧,
ಕಾಳಿಕೆ } ೧೬—೫೭.
ಕಾಲ್ಗೋದು—ವಾಹನವನ್ನೇರಿ. ೨—೧೧
ಕಾಶ (ಸಂ.)—ಕಾಚಿಯ ಹುಲ್ಲು, ೩—೪೩ ವ.
ಕಾಶ್ಮೀರ(ಸಂ.)—ಕುಂಕುಮಕೇಸರ,೧೨—೫.
ಕಾಳರಾತ್ರಿ (ಸಂ.)—ಮಾರಿ, ೭—೧೧೫ ವ
ಕಾಟ್ಪರ—ಕಾಡಿನ ಪ್ರವಾಹ, ೧—೧೭.
ಕಿಂಕಿರಾತಂ (ಸಂ.)—ಅಶೋಕವೃಕ್ಷ
೪—೪೯.
ಕಿಣ (ಸಂ.)—ಜಡ್ಡುಗಟ್ಟುವುದು, ೭—೪೩.
ಕಿತವ (ಸಂ.)—ಜೂಜುಗಾರ, ಧೂರ್ತ,
ವಂಚಕ, ೧೫—೪೭ ವ.
ಕಿತ್ತಡ—ಜುಗುಪ್ಸೆ, ೭—೪೧.
ಕಿಂಪಾಕ (ಸಂ.)—ವಿಷವೃಕ್ಷವಿಶೇಷ,
೯—೧೧ ವ.
ಕಿಶೋರ (ಸಂ.)—ಮರಿ, ೧—೧೦೭ ವ.
ಕಿಸುಗಣ್ಣು—ಕೋಪಿಸು, ೧—೧೧೭
ಕಿಸುರ್—ಕಲಹ, ೩—೧೯.
ಕೀರ್ತಿಮುಖ(ಸಂ.)—ಅಣಸು, ಕೊಂಬಿಗೆ
ಸಿಕ್ಕಿಸುವ ಒಂದು ಬಗೆ ಒಡವೆ, ೧—೧೪೧.
ಕೀನಾಶ (ಸಂ.)—ಯಮ, ೧೦—೧೭೫ ವ.
ಕೀರ (ಸಂ.)—ಗಿಳಿ, ೭—೧೫೬.
ಕೀಟು—ಕಟ್ಟುಮಿಾರಿ ನುಗ್ಗು, ೧—೧೧೫.
ಕೀಟ್—ಕುದುರೆಯ ಕಡಿವಾಣ, ೧೧-೧೧೫.
ಕುಂಚ—ಚಾಮರವಿಶೇಷ, ೩—೪೧.
ಕುಂಜರ (ಸಂ.)—ಆನೆ, ೧೫—೫೧.
ಕುಟ್ಮಳ (ಸಂ.)—ಮೊಗ್ಗು, ೧೨—೪೭.
ಕುಟ್ಮಮ (ಸಂ)—ನೆಲಗಟ್ಟು, ೩—೧೧೭.
ಕುಡಗೂಸು—ಕನ್ಯೆ, ಮದುವೆಯಾಗಿಲ್ಲ
ದವಳು, ೪—೬೧ ವ.
ಕುಣಿಲ್ವಾಜು—ಕುಣಿದು ಹಾರು,
೧೩—೫೪ ವ.
ಕುತ್ಕೀಲ (ಸಂ.)—ಪರ್ವತ, ೧೧—೧೦.
ಕುತ್ತುಂಗಜು—ಕಿರಿದಾದ ಎಸಳು, ೨—೧೩ವ.
ಕುತ್ತುಜು—ಪೊದರು, ೧—೪೧ ವ.
ಕುಭೃತ್ (ಸಂ.)—ಬೆಟ್ಟ, ೧೩—೧೧೨
ಕುರವ—ಪ್ರದೇಶ, ೧೬—೭೧ ವ.
ಕುಳೀರ (ಸಂ)—ಏಡಿ, ನಳ್ಳಿ, ೧—೩೦.
ಕುಟು—ಹಳ್ಳ, ೧—೪೧ ವ.
ಕುಟು—ಕುಡು, ಗಟ್ಟಿ, ೯—೧೦೧
ಕೂಂಕು—ತಳ್ಳು, ಹೊಗಿಸು, ೧೦—೨೨೩.
ಕೂರ್ಚ (ಸಂ.)—ಗಡ್ಡ, ೨—೨
ಕೂಟ (ಸಂ.)—ಕೋಡುಗಲ್ಲು, ೨—೧೪
ಕೂಟಪಾಕಳ (ಸಂ.)—ಗಜರೋಗ ವಿಶೇಷ,
೪—೬೬.
ಕೂರ್ತು—ಪ್ರೀತಿಸಿ, ೨—೧೯.
ಕೂರ್ಪು—ಶೌರ್ಯ, ೭—೫೯.
ಕೂರ್ವಾಳ್—ಹರಿತವಾದ ಕತ್ತಿ,
(ಕೂರಿತ್ತು+ಬಾಳ್), ೮—೨೭.
ಕೃಪಾಣ (ಸಂ.)—ಕತ್ತಿ, ೧—೧೦೭ ವ.
ಕೆಂಕ—ಕೆಂಪು, ೯—೧೨.
ಕೆತ್ತು—ಅದಿರು, ೧೩—೫೪ ವ.
ಕೆಂಬಟ್ಟಿ—(ಕೆಚ್ಚನೆ+ಪಟ್ಟಿ), ಕೆಂಪು ರೇಷ್ಮೆ,
೩—೬೭ವ.
ಕೆಯ್ವೊಲ—ಗದ್ದೆ, ೧—೧೦೭.
ಕೆಲ—ಸಮಿಾಪ, ೬—೧೪ ವ.
ಕೆಳರ್—ಕೋಪಿಸು, ೪—೧೦೭.
ಕೆಳವಾಡಿ—ಒಂದು ಬಗೆಯ ಕಬ್ಬು, ೮—೧೪.
ಕೇಕರ (ಸಂ.)—ಒಂದುಬಗೆಯ ನೋಟ,
೫—೭೧.
ಕೇರ್—ಗೋಡೆ, ೫—೧೧೩.
ಕೇವಲಬೋಧ (ಸಂ.)—ಕೇವಲಜ್ಞಾನ
(ಜೈನ ಪರಿಭಾಷೆ), ೧೬—೬೨.
ಕೇವಲಿ (ಸಂ.)—ಜಿನ ಸಿದ್ಧ, ೧—೮.
ಕೇಸಡಿ—ಕೆಂಪಾದ ಪಾದ, ೩—೧೧೬
ಕೇಸುರಿ—ಕೆಂಪಾದ ಉರಿ, ೧೧—೧೦೭.
ಕೈ—ಸೊಂಡಿಲು, ೧—೯೫.
ಕೈಗಟ್ಟ—ಗಂಧ, ೭—೪೭ವ.
ಕೈಗಟ್ಟುವು—ಅತಿಶಯ, ೯—೧೪೧.

ಕೈಗೆಯ್—ಒಡವೆಗಳನ್ನಿಟ್ಟುಕೊಳ್ಳು, ೮—೫೬ ವ.
ಕೈತವ (ಸಂ.)—ವಂಚನೆ, ೬—೧೬೬
ಕೈನಿಜ್ಜು—ಕೈಯೆತ್ತು, ೪—೨೬.
ಕೈಪಿಡಿ—ಕನ್ನಡಿ, ೭—೧೦೫ ವ.
ಕೈಪೆ—ಕಹಿ, ೭—೧೨೬.
ಕೈಯಳವಿ—ಶಕ್ತಿಸಾಧ್ಯ, ೪—೩೬.
ಕೈಯಾಂತಂ—ಕೈಯೊಡ್ಡಿದವನು, ಯಾಚಕ, ೧೨—೬೦.
ಕೈವಂದ—ಫಲಿತವಾದ, ೫—೧೨೯.
ಕೈವಲ್ಯ (ಸಂ.)—ಮೋಕ್ಷ, ೧—೫.
ಕೈವಾರ—ಮುಖಸ್ತುತಿ, ೧೨—೫೦.
ಕೊಂಡಾಡು—ಪ್ರಖ್ಯಾತಿ ಪಡಿಸು, ೭—೨೪.
ಕೊಂಡುಕೊನೆ—ಸ್ತುತಿಸು, ೧೧—೧೭೦ ವ.
ಕೊಡೆನೆಗೆ—ಒಂದುಕಡೆಯ ಭಾರದಿಂದ ಮತ್ತೊಂದು ಕಡೆ ಮೇಲಕ್ಕೆ ಏಳು, ೩—೧೨೯.
ಕೊನರು—ಕುಡಿ, ೩—೮೦.
ಕೊಪ್ಪು—ಬಿಲ್ಲಿನ ತುದಿ, ೫—೮೭
ಕೊಂಬು—ಆಶ್ರಯ, ೭—೧೨೭
ಕೊರಗು—ರಸ ವಿಹೀನವಾಗು, ೧—೧೬.
ಕೊಳರ್ವಕ್ಕೆ—ಜಲಪಕ್ಷಿ (ಸಾರಸ), ೩—೮೧ ವ.
ಕೊಳ್ಕೊಡೆ—ಬಾಂಧವ್ಯ, ೨—೭.
ಕೋಕನದ (ಸಂ.)—ಕೆಂದಾವರೆ, ೬—೪೧.
ಕೋಟಲೆ—ಬಾಧೆ, ೧೬—೫೫.
ಕೋಟ (ಸಂ.)—ಕೊನೆಯ ಭಾಗ, ೧—೪೨.
ಕೋಡಿಡು—ಹುರುಡುಮಾಡು, ಸ್ಪರ್ಧಿಪಡು, ೧—೨೩.
ಕೋಡುವ—ತಣ್ಣಗಿರುವ, ೧೬—೨೮.
ಕೋಣ (ಸಂ.)—ವಾದ್ಯವನ್ನು ಬಾರಿಸುವ ಕಡ್ಡಿ, ೧೨—೨೦.
ಕೋದ—ಪೋಣಿಸಿದ, ೬—೭೭
ಕೋರಕಿತ (ಸಂ.)—ಮೊಗ್ಗು ಬಿಟ್ಟ, ೬—೪೮ ವ.
ಕೋವಣ—(ಸಂ. ಕೌಪೀನ), ೩—೧೯

ಕೋವರ ಚಕ್ರ—ಕುಂಬಾರನ ಚಕ್ರ, ೧೪—೧೭೪ವ.
ಕೋಳ್—ಏಟು, ೯—೬೮,೬೯.
ಕೋಟುಗ್—ಕೊಂಬಿನಿಂದ ತಿವಿ, ೧೩—೭೪.
ಕೋಟ್ಮಿಗ—ಘಾತುಕ ಮೃಗ, ೧—೭೩.
ಕೋಟ್ಮಿದುಳ್—ಹಸಿಯಾಗಿರುವ ಮಿದುಳು, ೧೧—೧೨೦.
ಕೋಟಿಕ್ಕಿಸಜ್ಜು—ತಣ್ಣನೆಯ ಕೆಸರು, ೧೨—೩.
ಕೌಕ್ಷೇಯಕ (ಸಂ.)—ಕತ್ತಿ, ೯—೨೫ ವ.
ಕೌಮುದೀ(ಸಂ.)—ಬೆಳ್ಪಿಂಗಳು, ೬—೧೪೧ ವ.
ಕೌವರೆ—ಸಡಗರ, ೬—೧೭೭ವ.
ಕೌಶಿಕ (ಸಂ.)—ಗೂಬೆ, ೧—೩೧.

ಖ

ಖರಕರ(ಸಂ.)—ತೀಕ್ಷ್ಣಕಿರಣವುಳ್ಳವನು. ಸೂರ್ಯ, ೧೦—೧೩೯.
ಖಾತ (ಸಂ.)—ಆಳ, ೯—೧೬ ವ.

ಗ

ಗಂಡಶೈಲ(ಸಂ.)—ಗುಂಡುಕಲ್ಲು,೧೦—೨೧೪
ಗಂಡುವರಿಜು—ಪುರುಷಾಕಾರ, ೩—೩೪.
ಗತ ಪ್ರತ್ಯಾಗತ (ಸಂ.)—ಅನುಲೋಮ ವಿಲೋಮ, ಮೊದಲಿನಿಂದ ಕೊನೆಗೂ ಕೊನೆಯಿಂದ ಮೊದಲಿಗೂ, ೧—೨೫
ಗರ್ತ (ಸಂ.)—ಹಳ್ಳ, ೬—೯೦.
ಗದಿತ (ಸಂ.)—ಹೇಳಲ್ಪಟ್ಟ, ೧೫—೪೩.
ಗರಿಮ(ಸಂ.)—ಗುರುತ್ವ,ಹೆಚ್ಚಿಕೆ, ೪—೬೧.
ಗರುಡೋದ್ಗಾರ ಮಣಿ(ಸಂ.)—ಪಚ್ಚೆಮಣಿ, ೫—೯೯.
ಗಜಾಸನ್ನೆ—ಗರಿಯಿಂದ ಮಾಡುವ ಸಂಜ್ಞೆ. ೧೩—೯೭ ವ.
ಗಳಿವಟ್ಟು—ತೆಕ್ಕೆಹಾಕಿಕೊಂಡಿರುವ, ೧೦—೯೧ವ.
ಗಾಡಿ—ಬಿಡಗು,೩—೩೯.
ಗಾಂಪ—ಮೂಢ, ೧—೧೨೫.
ಗಾರುಡ (ಸಂ.)—ಗರುಡ ಮಂತ್ರ, ಹಾವನ್ನು ಹಿಡಿಯಲು ತಕ್ಕ ಮಂತ್ರ, ೫—೮೧.

ಗಾವಿಲ—ಮೂಢ (ಸಂ. ಗ್ರಾವಿಣ), ೧೩—೬೬.
ಗಾಳು—ಮದಿಸಿದವಳು (ವನು), ೨—೧೯.
ಗ್ರಾವ (ಸಂ.)—ಕಲ್ಲು, ೭—೯೭
ಗುಂಜತ್ (ಸಂ.)—ಧ್ವನಿಮಾಡುತ್ತಿರುವ, ೨—೫೪.
ಗುಡಿ—ಧ್ವಜಪಟ, ೧೦—೫೦.
ಗುಡಿಗಟ್ಟು — ಸುತ್ತಿಕೊಳ್ಳು, (ಪರಿವೇಷ ಕಟ್ಟು), ೫—೨೭.
ಗುಂಡಿಗೆ—ಕಮಂಡಲು (ಸಂ. ಕುಂಡಿಕಾ), ೪, ೮೧; ಗಡಿಗೆ, ೬—೬೫.
ಗುಪ್ತಿ (ಸಂ.)—ಪೌಳಿಗೋಡೆ, ೧೪—೩೫.
ಗುಲ್ಮ (ಸಂ.)—ಪೊದರು, ೧—೧೦೨
ಗೆಂಟು—ದೂರ, ೭—೫೨.
ಗೆಡೆ—ಸ್ನೇಹ, ೩—೧೪೩.
ಗೆಡೆವಕ್ಕಿ—ಚಕ್ರವಾಕ, ೪—೬.
ಗೆತ್ತು—ತಿಳಿದುಕೊಂಡು (ಧಾತು, 'ಗಿಜು'), ೯—೧೫೬.
ಗೇಣ್—ಉದ್ದವಾದ ಚೂರಿ, ೧೩—೫೧.
ಗ್ರೈವೇಯಕ (ಸಂ)—ಕೊರಳ'ಹಾರ, ೫—೧೩೪.
ಗೊಡ್ಡ—ದುಶ್ಚೇಷ್ಟೆ, ೬—೧೮.
ಗೊಣೆಯ—ಬಿಲ್ಲಿನ ಮಿಣಿ (ಮೌರ್ವಿ), ೧೧—೫೨.
ಗೊಂದಳವೆಕ್ಕಣ—[ಗೊಂದಳ=ಗುಂಪು, ಪೆಕ್ಕಣ, (ಸಂ. ಪ್ರೇಕ್ಷಣ)=ನೋಟ], ಒಂದು ಬಗೆಯ ನಾಟಕ, ೩—೧೧೬.
ಗೊರವ—ತಪಸ್ವಿ, ೯—೬೨ ವ
ಗೊಲೆ—ಬಿಲ್ಲಿನ ತುದಿ, ೪—೫೭.
ಗೋತ್ರ (ಸಂ.)—ಬೆಟ್ಟ, ೧೦—೨೨೫
ಗೋರಿಯ ಮೃಗ—ಗಾನಕ್ಕೆ ಬೆರಗಾಗುವ ಜಿಂಕೆ, ೧೦—೧೧೧ ವ.
ಗೋಶೀರ್ಷ (ಸಂ.)—ಚಂದನ ವಿಶೇಷ, ೧೪—೨೦೩ನ
ಗೋಸಣಿಗಳೆ—ಡಂಗುರಹೊಡೆ, (ಸಂ. ಘೋಷಣಾ), ೧೪—೪೨ ವ.
ಗೋಟುಯಾಯ್ಲ / ಗೋಟುಯಾಯಿಲ — ಕುದುರೆಯ ಸವಾರ, (ಸಂ. ಘೋಟಾರೂಢ); ೧೩—೫೭, ೧೩—೬೨.

ಘ

ಘಟ್ಟವಳ್ತಿ—ಗಂಧದವಳು. ೧—೧೧೯.
ಘಟಿ—ಆನೆಯ ಗುಂಪು, ೧೩—೨೯ ವ
ಘನಸಾರ (ಸಂ.)—ಪಚ್ಚ ಕರ್ಪೂರ, ೧೧—೧೨೫.
ಘನಾಘನ (ಸಂ.)—ಮೇಘ, ೬—೧೭೯.
ಘನೋಪಲ (ಸಂ.)—ಆಲಿಕಲ್ಲು, ೧೦—೧೨೭
ಘೋಣ—ಮೂಗು, ೪—೧೦೮.
ಘೋಟುಯಾಯಿಲ—ಕುದುರೆಯ ಸವಾರ. ೧೩—೨೯ ವ.

ಚ

ಚಂಕನತ್ (ಸಂ.)—ಬಹಳ ಪ್ರಕಾಶಿಸುತ್ತಿರುವ, ೭—೧೦೪
ಚಂಚರೀಕ (ಸಂ.)—ಭ್ರಮರ, ೧—೨೧.
ಚರ್ಚಿತ (ಸಂ.)—ಬಳಿಯಲ್ಪಟ್ಟ, ೧೩—೫೩ ವ.
ಚಂಚು (ಸಂ.)—ಕೊಕ್ಕು, ೧೪—೬.
ಚರ್ಚೆ—ಬಳಿಯುವಿಕೆ, ೧—೧೪.
ಚಪಲಾ (ಸಂ.)—ಮಿಂಚು, ೪—೧೧೭
ಚಪ್ಪರಿಸು—ಗದರಿಸು, ೪—೮೨.
ಚರಿಗೆ / ಚರ್ಯೆ — ಜೈನ ವ್ರತಿಯ ಭಿಕ್ಷೆ, ೧೫—೪೯ ವ.; ೧೬—೬೭.
ಚಲನ—ಚರಣ, ಪಾದ. ೧೧—೬೫
ಚಲ್ಲವಾಡು—ಪರಿಹಾಸವಾಡು, ೩—೪೧ ವ.
ಚಷಕ (ಸಂ.)—ಬಟ್ಟಲು. ೧—೧೦೭ ವ.
ಚಳಣ (ಸಂ)—ಚರಣ. ಪಾದ, ೧೬—೨೪.
ಚಾಗಿ—(ಸಂ. ತ್ಯಾಗಿ), ೫—೨.
ಚಾತುರ್ದಂತ (ಸಂ.)—ಚತುರಂಗ ಸೇನೆ, ೯—೧೨.
ಚಾವಳಿಸು—ಅಲ್ಲಗಳೆ. ೭—೧೦೭.
ಚೀರಿಕಾ / ಚೀರೀ (ಸಂ.)-ರೋಷಂಕರಿಸುವ ಒಂದು ಹುಳು. ೭—೪೫; ೭—೧೦.
ಚೂಳಿಕಾ (ಸಂ.)—ನಾಟಕಾರಂಭ, ೭—೧೫೦.
ಚೂಳಿಕೆ—ಅಗ್ರಭಾಗ, ೯—೫೨.

ಚೆಚ್ಚರ—ಎಚ್ಚರಿಕೆ, ಜಾಗರೂಕತೆ, ೧೬–೩೫.
ಚೀಲಾಂಚಲ (ಸಂ.)—ಬಟ್ಟೆಯ ಕೊನೆ, ೩—೧೧೩.
ಚೋದಿಸು—ನಡೆಯಿಸು, ೩—೫೨.
ಚೌಕಂಡ—(ಸಂ. ಚತುಷ್ಪಂಡ), ಮನೆಯ ತೊಟ್ಟ, ೩–೩೭.
ಚೌಪಳಿಗೆ—ಹಜಾರ, ೫–೩೪ ವ.
ಚೌವಟ್ಟ—(ಸಂ. ಚತುಷ್ಪಥ), ಬೀದಿಯ ಚೌಕ, ೫–೧೦೪.

ಛ

ಛಲ (ಸಂ.)—ನೆಪ, ೧—೨೪.

ಜ

ಜಕ್ಕ—(ಸಂ. ಯಕ್ಷ), ೧೪—೯೫
ಜಕ್ಕುಲಿಸು—ವ್ಯಾಪಿಸು, ೩–೧೩೩ ವ.
ಜಂಘಾಲಂ (ಸಂ.)—ಓಡುವುದಕ್ಕೆ ಬಲವಾದ ಕಾಲುಳ್ಳವನು, ೧೮–೧೬೩.
ಜನತಾ (ಸಂ.)—ಜನ ಸಮೂಹ, ೧—೬.
ಜನ್ನ—(ಸಂ. ಯಜ್ಞ), ೧೦–೧೪೩ ವ.
ಜರಗು—ಚಿನ್ನಬೆಳ್ಳಿ ಮೊದಲಾದುವು ಸೇರಿರುವ ಕೆಸರು, ೫–೨೦.
ಜಲಕನೆ—ತಟ್ಟನೆ, ೫—೪.
ಜವಜವಂಜವ (ಸಂ.)—ಸಂಸಾರ, ೧೫–೪೭.
ಜವನಿಕೆ—ಪರದೆ, ತೆರೆ (ಸಂ. ಯವನಿಕಾ), ೧೩—೯೫.
ಜವ್ವು—ಹುಬ್ಬು ಹಾರಿಸು, ೭–೧೨೦.
ಜಾಗ—ಪಚ್ಚೆ, ೫–೧೧೨.
ಜಾಯಾ (ಸಂ.)—ಹೆಂಡತಿ, ೪–೭೩.
ಜ್ಯಾಯ—ಜ್ಯೇಷ್ಠ, ದೊಡ್ಡವನು, ೬—೧೨೬.
ಜೀಮೂತ (ಸಂ.)—ಮೇಘ, ೧೨–೧೧.
ಜೀವನ (ಸಂ.)—ಬದುಕುವಿಕೆ, ನೀರು, ೧೩–೯೯.
ಜೇನೆಯರ್—ಜೇನು ತುಪ್ಪ, ೨—೧೪.
ಜೊನ್ನ—ಬೆಳದಿಂಗಳು (ಸಂ. ಜ್ಯೋತ್ಸ್ನಾ), ೪—೪೪.
ಜೊಂಪ—ಮಂಟಪ, ಗೊಂಚಲು, ೧–೧೧೦.
ಜೋಳವಾಳಿ—(ಜೋಳದ+ಪಾಳಿ), ದಣಿಯ ಪೋಷಣೆಯ ಋಣ, ೧೩–೫೭.

ಟ

ಟಂಕ (ಸಂ.)ಕಲ್ಲನ್ನು ಒಡೆಯುವ ಉಳಿ, ೧೩—೩೭.
ಟಕ್ಕು—ವಂಚನೆ, ೩–೩೯.

ಡ

ಡವಕೆ—ಪೀಕದಾನಿ, ೩–೪೧.
ಡಾಮರ (ಸಂ.)—ಲಗ್ಗೆ, ದಂಗೆ, ೧೩–೬೧.

ತ

ತಕ್ಕು—ಪೆರ್ಮೆ, ಮಹತ್ತ್ವ, ೬–೯೧.
ತಕ್ಕೂರ್ಮೆ—ಯೋಗ್ಯತೆ, ೬–೧೭೧.
ತಗದು—ತಕ್ಕುದಲ್ಲ, ೧೦—೧೭೦.
ತಗುಳ್—ಹಿಂದಟ್ಟು, ೩—೪೭.
ತಡ–ಅನುರೂಪ, ೫–೧೧೫; ಕಾಲವಿಳಂಬ, ೧೦–೨೩೩.
ತಡಮೆಟ್ಟು—ಮೆಲ್ಲಗೆ ನಡೆ, ೭–೨೭.
ತಣ್ಣಿಸು—ತಂಪು, ೭–೧೩೯.
ತಣ್ಬೊಡರ್–(ತಣ್ಣಿತು+ಸೊಡರ್), ತಂಪಾಗಿರುವ ದೀಪ, ೩–೩೯.
ತಂದಲ್—ಸೋನೆ, ಚಿಮುಕಿಸುವಿಕೆ, ೪–೨೯.
ತನಿ ಸೋಂಕು–ಪೂರ್ಣ ಅಥವಾ ಗಾಢವಾದ ಸ್ಪರ್ಶ, ೫–೧೧೦.
ತನುತ್ರ (ಸಂ.)—ಕವಚ, ೧೦–೧೪೫
ತಪನ (ಸಂ.)—ಸೂರ್ಯ, ೬–೧೪೧ ವ.
ತಪನೀಯ (ಸಂ.)—ಚಿನ್ನ, ೧—೭೧ ವ.
ತಮಾಲ ಪ್ರವಾಳ (ಸಂ.)—ಹೊಂಗೆಯ ಚಿಗುರು, ೭—೧೨೪.
ತರವಾರಿ–ಖಡ್ಗ, ೧೩—೬೧.
ತಱಿಸಂದು—ನಿಶ್ಚಯಿಸಿ, ೧—೩೬.
ತಱುಂಬು—ತಡೆ, ನಿಲ್ಲಿಸು, ೧೧—೧೦೭.
ತಲೆದುಡುಗೆ—ಶಿರೋಭೂಷಣ, ೬–೪೮ ವ.

ತಲೆವಿಲ್—(ಬಿಲ್ಲು+ತಲೆ), ಬಿಲ್ಲಿನ ತುದಿ, ೧೨–೩೮, (ಧನುಷ್ಕೋಟಿ).
ತವದೊಣೆ–ಅಕ್ಷಯವಾದ ಬತ್ತಳಿಕೆ, ೯–೫೭.
ತವಿಲ್—ನಾಶ, ೮–೬.
ತವುತಾರವು—(ತವುತರ್=ಮುತ್ತಿಬರು), ಮುತ್ತಿಬಾರವು, ೧—೫೪.
ತಳರಡಿ—ತಪ್ಪುಹೆಜ್ಜೆ, ೩–೧೪೦.
ತಳವೆಳಗು—ಬೆರಗು, ೫—೬೧.
ತಳ್ವು—ತಡ, ೫—೨೯.
ತಟ್ಟು—ಆಲಿಂಗನ, ೯–೧೬೭.
ತಟ್ಟಿ—ಕೊಡೆ, ೧೨–೯೦.
ತ್ರಸ್ತಾರಿ (ಸಂ.)—ಭಯಪಡಿಸಲ್ಪಟ್ಟ ಶತ್ರುವುಳ್ಳ, ೧೩—೮೬.
ತಾಂಗು—ತಗ್ಗಿಸು, ೫–೬೩.
ತಾಮ್ರುಟ್ಟು—ಎದುರೇಟು, ೧೩–೨೨.
ತಾರ (ಸಂ.)—ಬೆಳ್ಳಿ, ೬–೭೬.
ತಾರಗೆ–ನಕ್ಷತ್ರ, (ಸಂ. ತಾರಕಾ), ೬–೭೮.
ತಾರಲ್—ಪೊದರು, ೭–೧೫೭.
ತಾರಶೈಲ (ಸಂ.)—ಬೆಳ್ಳಿಯಬೆಟ್ಟ, ಕೈಲಾಸ ಪರ್ವತ, ೩–೧೬೦.
ತಾಳವಟ್ಟ—ಒಂದು ಬಗೆಯ ಹೊಡೆತ, ೧೩–೫೪ವ.
ತಾಟುಂ–ಓಲೆಯ ಮುರ, ೧೩—೬೪.
ತಿಗ್ಮಾಂಶು (ಸಂ.)—ಸೂರ್ಯ, ೩—೯೧.
ತಿಗುರಿ—ಚಕ್ರ, ೪–೧೦೭; ಸುಳಿ, ೧೨–೯೦.
ತಿಣ್ಣ—(ಸಂ. ತೀಕ್ಷ್ಣ), ೧೩–೫೪ ವ.
ತಿರಿ—ತಿರುಗಾಡು, ೬—೫೫.
ತಿರುವಾಯ್—ಬಿಲ್ಲು, ೧೩–೯೦.
ತಿಱುಕಲ್—ಅಣ್ಣಿಕಲ್ಲು, ೩—೭೭.
ತಿಸರ—ಮೂರೆಳೆಯ ಸರ, ೩—೧೦೬.
ತ್ರಿಪತಾಕೆ—ಹಣೆಯ ಮೂರು ಗೀರು, ೧೩—೧೧೭.
ತೀರ್ಚಿ—ನಿರ್ಮಿಸಿ, ೪–೧೧೩.
ತೀಟ—ಬೀಸುವಿಕೆ, ೬—೧೫
ತೀನ—ತೀಟೆ, ನವೆ, ೧೦—೬೩.
ತೀರಮೆ—ಸಾಕಾದುದು, ೯—೧೦೩.
ತುಡುಕು—ತ್ವರೆಯಿಂದ ಹಿಡಿ, ೫–೬೯.
ತುಂಬುರ—ತೂಬುರಿ ಕಡ್ಡಿ, ೪–೩೯.
ತುಜುಂಗಲು—ಗುಂಪು, ೨—೧೩ ವ.
ತುಟಿಲ್ಗೆಯ್—ನಮಸ್ಕರಿಸು, ೬–೪೮ ವ.
ತೂಣೀರ (ಸಂ.)—ಬತ್ತಳಿಕೆ, ೧೪–೨೭ ವ.
ತೂಂತು—ತುರುಕು, ೧೦–೨೨೩.
ತೂರ್ಯ (ಸಂ.)—ತುತ್ತುರಿ, ೭—೧೫೦.
ತೂಳ್ದು—ಧ್ವಂಸಮಾಡು, ೧–೨೧.
ತೆಕ್ಕೆ—ಪರಂಪರೆ, ೪–೫೫.
ತೆಗಳಿ (ಗೆ)—ಕೂದಲು ಉದುರುವ ರೋಗ ವಿಶೇಷ, (ಕರುಗಳ ಮೈಯಲ್ಲಾಗುವ ತೆವಡೆರೋಗ), ೭—೯೩. (‘ಕರುಗಳಿಗೆ ತೆವಡೆ ಹತ್ತಿದೆ’ ಎಂದು ರೂಢಿ).
ತೆಣಜು—ನೋವಿನಿಂದ ನರಳು, ೧೨–೩೫.
ತೆತ್ತಿಸು—ಪೋಣಿಸು, ೧೦–೮೯.
ತೆಜಂಬೊಳಿ—ಸ್ಪಷ್ಟವಾಗಿ ಪ್ರಕಾಶಿಸು, ೩–೭೫ವ.
ತೆಜಿ—ಕಪ್ಪು, ೬–೧೧.
ತೆವಳೆ—ಉದಾಸೀನ ಭಾವ, ೯–೧೪೪.
ತೇಂಕು—ತೇಲು, ೬—೧೭೦.
ತೊಂಗಲ್—ಗೊಂಚಲು, ೩–೬೭.
ತೊಡಂಬೆ—ಹೂ ಕಾಯಿಗಳ ತೊಟ್ಟು, ೧—೮೩.
ತೊಂಡು—ಸ್ವೇಚ್ಛಾವೃತ್ತಿ; ೭–೫೩.
ತೊದಳ್—ಸುಳ್ಳು, ೬–೯೫
ತೊನೆ—ತೂಗಾಡು, ೧—೧೦೭ ವ.
ತೊಲೆ—ತಕ್ಕಡಿ, ತುಲಾರಾಶಿ, (ಸಂ. ತುಲಾ), ೭—೧೬೬; ಸಮಾನ, ೧೪–೧೪೮.
ತೊವರ್—ಒಗರು, ೭–೧೫೫.
ತೋಟ—ಜಗಳ, ೧–೭೫.
ತೋಮರ (ಸಂ.)—ಕೊಡತಿಯಂತಿರುವ ಆಯುಧ, ೧೩—೬೧
ತೋಳಿ—ಒಂದು ಜಾತಿಯ ಹಕ್ಕಿ, ೧೩–೪೩.
ತೋಳ್ವೆರಗು—ಭುಜಾಲಿಂಗನ, ೩–೯ ವ.

ಥ

ಥಟ್ಟು—ಗುಂಪು, ೧೦–೨೩೨

ದ

ದಂತ ಶಲ್ಯ (ಸಂ.)—ದಂತದ ಚಿಕ್ಕೆ, ೪–೬೦.
ದತ್ತಿ—ದಾನ, ೪–೧೦೧.
ದಂತುರಿತ (ಸಂ.)–ದಟ್ಟವಾದ, ೧೨—೨ ವ.
ದಂದಶೂಕ (ಸಂ.)–ಹಾವು, ೧–೧೦೭ ವ.
ದಂದುಗ—ಕ್ಲೇಶ, ೧೩–೧೧ ವ.
ದರ್ದುರ (ಸಂ.)—ಕಪ್ಪೆ, ೧೫–೩೭ ವ.
ದರ್ಪಕ (ಸಂ.)–ಮನ್ಮಥ, ೧–೨೦.
ದರಸಿವಾಲಿತ (ಸಂ.)—ಸ್ವಲ್ಪ ಮುಚ್ಚಿದ, ೭—೯೧.
ದರಿ—ಕಂಡಿ, ೧೩—೪೧.
ದಳತ್ (ಸಂ.)–ಚಿಗುರುತ್ತಿರುವ, ೭–೧೦೪.
ದಳ್ಳಿಸು—ಪ್ರಜ್ವಲಿಸು, ೫—೭೪.
ದಾಳು(ಸಂ.)—ತಪಿಸುವ ಸ್ಥಿತಿ, ೬–೧೦೯.
ದಾಮು (ಸಂ.)—ಸರ, ೫—೧೧೫.
ದಾರಕ (ಸಂ.)—ಮಗ, ೮—೫೨.
ದಾಸೇರಕ (ಸಂ)–ದಾಸಿಯ ಮಗ, ೨–೬೦.
ದ್ರಾಘಿಮ (ಸಂ.)–ಉದ್ದವಾಗಿರುವಿಕೆ, ೭–೯೭.
ದಿಕ್ಕುಮಾರರು—ದಿಕ್ಪಾಲಕರು, ೨—೯.
ದಿವ್ಯ (ಸಂ.)—ಬೆಂಕಿಮುಟ್ಟುವುದು ಮೊದಲಾದ ಕಷ್ಟಕಾರ್ಯಗಳಿಂದ ಮಾಡುವ ಪ್ರಮಾಣ, ೧೬–೨೪ ವ.
ದಿವ್ಯಭಾಷಾ (ಸಂ.) ಜೈನ ದಿವ್ಯ ವಾಣಿ, ೧೬—೬೮.
ದ್ವಿರೇಫ (ಸಂ.)—ತುಂಬಿ, ೧೦–೨೩೬.
ದೀರ್ಘಿಕೆ—ಬಾವಿ, ೫—೩೪.
ದೀಧಿತಿ (ಸಂ.)–ಕಾಂತಿ, ೧೪—೧೯೦
ದೀವದ—ಸಾಕಿದ, ೫—೭೫ ವ.
ದುರ್ಗಕಂಠ (ಸಂ.)—ಹಾಲು ಕುಡಿಯುವವನು, ಮಗು, ೧೨—೬೫.
ದುಗುಲ–ಬಟ್ಟೆ, (ಸಂ. ದುಕೂಲ), ೨–೨೮.
ದ್ಯುಮಣಿ (ಸಂ.)—ಸೂರ್ಯ, ೭—೧೧೯.
ದ್ರುತವಿಲಂಬಿತ (ಸಂ.)—ಬೇಗ ಮತ್ತು ತಡ, ೧೬—೬೩
ದೂದವಿ–ದೂತಿ, (ತಲೆಹಿಡುಕಿ), ೪–೧೦ ವ.
ದೂರಿಸು—ಅನುತಾಪ ಪಡು, ೧೦–೯೪.
ದೂರೋತ್ಸಾರಿತ (ಸಂ.)—ದೂರಕ್ಕೆ ಕಳುಹಿಸಿದ, ೭—೬೯ ವ.
ದೂಸಜುತ್—ನಿಮಿತ್ತ, ೩–೨೩.
ದೆಸೆಬಿದ್ದ–ದಿಕ್ಕನ್ನು ತಗುಲಿದ(ಸಂ.ದಿಶಾವಿದ್ಧ) ೩–೧೩೪.
ದೇಸಿ—ಸೌಂದರ್ಯ, ೧–೧೨೬.
ದೇಸಿಗ—ಪರದೇಶದವನು, ೩—೪೭.
ದೊಣೆ—ಬತ್ತಳಿಕೆ, ೧—೧೦೭ ವ.
ದೊಣೆವೋದ—ತೂತುಬಿದ್ದ, ೧೩–೫೪ ವ.
ದೊಮ್ಮಳಿಸು—ಗಾಬರಿಪಡು, ೧೧–೧೫೫ ವ.
ದೊರೆ—ಸಮಾನ, ಪ್ರಾಪ್ತಿ, ಪ್ರಸಿದ್ಧಿ, ೪–೯೮; ೫–೨೦; ೬–೧೩೪.
ದೋಹಳ–ಅಭಿಲಾಷೆ, ಬಯಕೆ, ೯–೧೪೫.

ಧ

ಧರ್ಮ—ಸತ್ಕರ್ಮ, ಧನುಸ್ಸು, ೧–೨೦.
ಧ್ವಜಿನಿ (ಸಂ.)—ಸೈನ್ಯ, ೧೦—೧೯೭.
ಧಾತ್ರೀ(ಸಂ.)—ಭೂಮಿ, ದಾದಿ, ೩—೧೨೫.
ಧಾರಾಪಂಚಕ (ಸಂ.)—ಕುದುರೆಯ ಐದು ಬಗೆಯ ನಡಿಗೆ, ೬—೧೪೦.

ನ

ನಕ್ತಂಚರೀ(ಸಂ.)—ರಾಕ್ಷಸಿ, ೧೦—೨೨೩.
ನಖರ (ಸಂ.)—ಉಗುರು, ೧೧—೩೫.
ನಚ್ಚು—ನಂಬಿಕೆ, ಮೆಚ್ಚು, ೧೪—೧೦೯ ವ.
ನಣ್ಪು—ನಂಟತನ, ೧೦–೧೧೪.
ನದತ್ (ಸಂ.)—ಧ್ವನಿಮಾಡುತ್ತಿರುವ, ೧೧—೧೦.
ನನ್ನಿ—ಸತ್ಯ, ೬—೧೧೧.
ನನೆಕೊನೆಯೇರು—ಚಿಗುರು, ೫–೫೦.
ನಮೇರು (ಸಂ.)—ಸುರಗಿಗಿಡ, ೫–೭೧
ನಲಿವರಿ—ಸಂತೋಷದಿಂದ ಓಡಿಯಾಡು, ೪–೫೭.
ನರ್ಮ (ಸಂ.)—ಪರಿಹಾಸ ವಚನ, ೧೨–೫೧ ವ.

ನವಿರ್—ಕೂದಲು, ೬—೫೧.
ನಳಿದು—ಬಗ್ಗಿ, ಜಗ್ಗಿ, ೫—೮೭.
ನಾಡಾಡಿ—ಹಳ್ಳಿಯವನು, ೧—೯೯.
ನಾಂದೀ (ಸಂ.)—ಮಂಗಳ, ೧—೩೩.
ನಾಳಿ—ಬಾಣ ವಿಶೇಷ, ೧೩—೬೧.
ನಾಟ್ಟುಡಿ—ಲೋಕೋಕ್ತಿ, ೧೬—೫೩.
ನಿಕಟ (ಸಂ.)—ಸವಿಾಪ, ೬—೧೪೦.
ನಿಗ್ಗವ—ಗಜದಂತ, ೧೦—೧೫೨.
ನಿರ್ಗಡಿ—ವಿಚಾರ ಶೂನ್ಯ, ೬—೩೫.
ನಿರ್ಘಾತ (ಸಂ.)—ಹೊಡೆತ, ೧೩—೫೪ ವ.
ನಿಚೋಳಕ (ಸಂ.)—ಕವಚ, ೫—೮೬.
ನಿಟಲ (ಸಂ.)—ಹಣೆ, ೧೭—೪೭.
ನಿತ್ತರಿಸು—ಸಹಿಸು, ೪—೭೪.
ನಿದಾಘ (ಸಂ.)—ಬಿಸಿಲು ಕಾಲ, ೭—೯೮ ವ.
ನಿಧುವನ (ಸಂ)—ಸ್ತ್ರೀ ಸಂಯೋಗ, ೧೫—೪೭ವ.
ನಿಪ್ಪೊಸತು—ಬಹಳ ಹೊಸದು, ೩—೭೨.
ನಿಬ್ಬರಿಸು—ಮುಚ್ಚು, ೯—೧೧೨.
ನಿರಯ—ನರಕ, ೧೬—೭೨ ವ.
ನಿರಸ್ತ (ಸಂ.)—ನಾಶವಾದ, ೭—೬೬.
ನಿರ್ವೃತಿ (ಸಂ.)—ಮೋಕ್ಷ, ೧೦—೧೨೨.
ನಿರ್ವೇಗ (ಸಂ.)—ದುಃಖ. ೬—೮೯.
ನಿಶ್ಮಲ್ಯಂ—ಮನಸ್ಸಿಗೆ ಕೊರತೆಯಿಲ್ಲದವನು, ೧೦—೧೭೩ ವ.
ನಿಷ್ಪಂದರ್—ಅಲುಗದವರು, ೫—೬೫.
ನಿಷಾದಿ (ಸಂ.)—ಮಾವಟಿಗ, ೧೩—೭೪.
ನಿಷೇಕ (ಸಂ.)—ಆಯುಸ್ಸು, ೧—೮೨; ಸುರಿಯುವಿಕೆ, ೧೪—೧೫೫.
ನಿಳಿಂಪರು—ದೇವತೆಗಳು, ೩—೮೯ ವ.
ನೀರ್ಗಾದಿಗೆ—ಕಂದಕ, (ಸಂ ನೀರ ಖಾತಿಕಾ), ೧—೧೧೩.
ನೀಡಜ್ರ್—ಮೂರ್ಛೆ, ೧೪—೧೯೨ ವ.
ನೀಡುಂ—ಅತಿಶಯ, ೯—೧೭೮.
ನೀರ್ದಿಗುರಿ—ಜಲಾವರ್ತ, ನೀರ್ಸುಳಿ, ೧೨—೯೦.
ನೀಪ (ಸಂ.)—ಕಡಹದ ಮರ, ೭—೧೪೧.
ನೀರಂಜಿಸು—ಒಪ್ಪವಿಡು, ಸಾಣೆಯಿಡು, ೫—೪೧.
ನೀರಡಸು—ಬಾಯಾರು, ೭—೧೦೬ ವ.
ನೀರದ (ಸಂ.)—ಮೇಘ, ೧೩—೭೩.
ನೀರಂಧ್ರ (ಸಂ.)—ದಟ್ಟ, ೧೦—೧೨೬.
ನೀಜೀಜು—ಲಾವಣ್ಯವನ್ನು ಹೊಂದು, ೫—೬.
ನೀಲೀರಾಗ—ಸ್ಥಿರ ಪ್ರೀತಿ. ೧೪—೧೧೨.
ನೀಹಾರ (ಸಂ.)—ಹಿಮ, ೭—೧.
ನುಜ್ಜು—ಪುಡಿಮಾಡು, ೧೩—೩೫.
ನೂಪುರ (ಸಂ.)—ಕಾಲ್ಕಡಗ, ೩—೩೪.
ನೂಲ್—ಒಡ್ಡಾಣ, ೫—೧೨೭ ವ.
ನೆಣ—ಕೊಬ್ಬು, ೧೩—೫೪ ವ.
ನೆಮರ್ು—ಒರಗಿಕೊಳ್ಳು, ೫—೧೧೯.
ನೆಜಿ—ಮರ್ಮಸ್ಥಾನ, ೪—೬೩, ಮರ್ಮ, ಗುಟ್ಟು, ೧೧—೧೪೦ ವ.
ನೆಜಲ್—ಜೋಲು ಬೀಳು, ೭—೧೪೭.
ನೆಜಿಗೊಳ್—ಸರ್ವಸ್ವ ಹರಣ, ೯—೧೬೦.
ನೆಜಿಯೆ—ಸಂಪೂರ್ಣವಾಗುವಂತೆ, ೧—೪೦.
ನೆಲಮಾಡ—ಉಪ್ಪರಿಗೆ, ೧—೧೨೬.
ನೆಲಮುಕ್ಕು—ಪಿಶಾಚ (?), ೯—೧೨೩ ವ.
ನೆಲೆ—ಅಂತಸ್ತು, ಸ್ಥಾನ, ಸ್ಥೈರ್ಯ ೧—೧೨೬.
ನೆಲೆವೆಚರ್ು—ಮೇರೆ ಮಾರು, ೧—೨೯.
ನೇಗಿರ್ಜುಯ—ಸಾಕ್ಷಾತ್ತು ತಮ್ಮ, ೯—೧೫.
ನೇಣು—ಹಗ್ಗ, ೩—೫೩.
ನೇತ್ರ ಪುತ್ರಿಕಾ (ಸಂ.)—ಕಣ್ಣುಪಾಪೆ, ೧—೧೧೨ ವ.
ನೇರ್ಪಡುಕೆಡು—ಋಜುತ್ವವನ್ನು ಬಿಡು, ೭—೮೧.
ನೇವಿ (ಸಂ)—ಗಾಲಿಯ ಪಟ್ಟಿ, ೧೩—೧೦೨.
ನೇರ್—ಕತ್ತರಿಸು, ೧೪—೪೭.
ನೇರಿದಂ—ಋಜು ಸ್ವಭಾವದವನು, ೪—೧೩.
ನೇಜು—ನೇತುಹಾಕು, ೪—೮೯ ವ.
ನೇವಾಳ—ಸರ, ೭—೪೧.
ನೇಸಜ್ರ್—ಸೂರ್ಯ, ೬—೧೭೧.
ನೈಮಿತ್ತಿಕ (ಸಂ.)—ಶಕುನ ಹೇಳುವವನು, ೩—೩೨.

ನೊಚ್ಚಿತು—ಅಮೋಘ, ೧೦–೧೫೩.
ನೊಣೆ—ನುಂಗು, ೧೩—೪೫.
ನೊಸಲ್—ಹಣೆ, ೬—೮೦.
ನೋಡಿರೆ—ನೋಡಿದಿರಾ?, ೩–೧೬.
ನೋಂಪಿ—ವ್ರತ, ೧೫—೧೨ ವ.

ಪ

ಪಕ್ಕರೆ (ಕುದುರೆಯ) ಜೂಲು, ೧೩–೬೦.
ಪಕ್ಷ (ಸಂ.)—ರೆಕ್ಕೆ, ಮತ, ೧—೨೪.
ಪಕ್ಷ್ಮ (ಸಂ.)—ರೆಪ್ಪೆ, ೭—೬೩.
ಪಕ್ಕ—ಗುರಿ, ೧—೧೨೨.
ಪಗಂಡಿಜಿ—ಚೆನ್ನಾಗಿ ತೋರುವಂತೆ ವ್ಯಾಪಿಸು, ೯–೩೦.
ಪಗಂಡು—ಚೆನ್ನಾಗಿ ತೋರುವಿಕೆ, ೯–೭೩.
ಪಗಿಲ್—ಸೇರಿಕೊಳ್ಳು, ವ್ಯಾಪಿಸು, ೭–೧೬೫.
ಪಚ್ಚಬಗೆ—ಒಡೆದುಹೋದ ಮನಸ್ಸು, ೬—೧೦೦.
ಪಚ್ಚು—ಭಾಗಮಾಡಿ, ೭—೮೦ ವ.
ಪಜ್ಜೆ—ಹಜ್ಜೆ (ಸಂ. ಪದ್ಯಾ), ೧೬–೬೫ ವ.
ಪಟವಾಸ (ಸಂ.)—ಗಂದದ ಹುಡಿ, ೪–೨೭.
ಪಟ್ಟವೆಟಿ—ಪಟ್ಟವನ್ನು ತಪ್ಪಿಸು, ೧–೧೯.
ಪಟ್ಟಶಾಲೆ—ಪಡಸಾಲೆ, ೭–೪೭ ವ.
ಪಟ್ಟಳಿಗೆ—(ಬಿಳಿಯ) ಪಟ್ಟಿಸೀರೆ, ೩–೭೨.
ಪಟ್ಟು—ಮಲಗಿ, ೧೩—೧೪೭ ವ.
ಪಟ್ಟಿ—ರೇಷ್ಮೆ, ೧೩—೫೯.
ಪಡಲ್ವಡು—ಪರಿಹರಿಸು, ೨—೨೦; ಚದರಿ ಹೋಗು, ೪—೪೮.
ಪಡಲಿಗೆ—ಧಾನ್ಯಗಳ ಮೊಳಕೆಗಳಿರುವ ಶರಾವೆ (ಸಂ. ಪಟಲಿಕಾ), ೫—೧೧೨
ಪಡಿ—(ಸಂ. ಪ್ರತಿ), ಸಮಾನ, ೧೦—೮.
ಪಡಿದೆಜಿ—ಬಾಗಿಲು ತೆರೆ, ೧೦–೮.
ಪಡಿಯಿಡು—ಹೋಲಿಸು, ೭—೧೩.
ಪಡೆಮಾತು—ಲೋಕೋಕ್ತಿ, ೧—೧೧೩.
ಪಣ್ಣು—ಸಿದ್ಧಪಡಿಸು, ೨—೧೧.
ಪತತ್ರಿ (ಸಂ.)—ಪಕ್ಷಿ, ೧೦—೭೭ ವ.
ಪತ್ತುವಿಡು—ಬೇರೆಯಾಗು, ೫—೪೨.
ಪದ—ಹದ, ತಕ್ಕುದು, ೧೩—೯೪.
ಪದಂಗುಟ್ಟು—ಉಚ್ಚರಿಸು, ೩—೭೫ ವ.
ಪಂದರ—ಚಪ್ಪರ, ೪–೬೦.
ಪಂದಲೆ—(ಪಚ್ಚನೆ+ತಲೆ), ಹೊಸದಾಗಿ ಕತ್ತರಿಸಿದ ತಲೆ, ೯—೨೪.
ಪದ್ಮಷಂಡ (ಸಂ.)–ಸರೋವರ, ೧೨–೨೯ವ
ಪದಿಂಬರ್—ಹತ್ತು ಮಂದಿ, ೧೩–೯೭ ವ.
ಪದಿರ ಪಜಿ—ನಾನಾವಿಧ ಶಬ್ದವನ್ನು ಕೊಡುವ ಹರೆ (ತಬಟೆ), ೧೩–೩೪ ವ
ಪರ್ದು—ಹದ್ದು, ೯–೫೬.
ಪದುಳ—ನೆಮ್ಮದಿ, ೫–೮೭.
ಪದೆಪು—ಪ್ರೀತಿ, ಸಂತೋಷ, ೩–೧೬೧.
ಪಂದೆ—ಹೇಡಿ, ೩–೧೫೦.
ಪನ್ನಿರ್ಗಾಸಿರ—ಹನ್ನೆರಡು ಸಾವಿರ, ೧೬–೬೨ ವ.
ಪರಕೆ—ಆಶೀರ್ವಾದ, ೧೫–೨೭ ವ.
ಪರತ್ರೆ—ಸ್ವರ್ಗಲೋಕ, ೧೯–೧೦೪ ವ.
ಪರದ—ವ್ಯಾಪಾರಿ, ೧೦–೯೩ ವ.
ಪರಪುಷ್ಪ (ಸಂ.)—ಕೋಗಿಲೆ, ೭–೧೦೫.
ಪರಭೃತ (ಸಂ.)—ಕೋಗಿಲೆ, ೧–೨೩.
ಪರಭಾಗ(ಸಂ)–ಹೆಚ್ಚಾದ ಕಾಂತಿ, ೩–೬೭ವ
ಪರ್ಯಣ (ಸಂ.)—ತಟ್ಟಿ, ೧೨–೨ ವ.
ಪರ್ಯಂತ (ಸಂ.)—ಸಮೀಪ, ೭–೨೯.
ಪರ್ಯಷ್ಟಿ(ಸಂ.)—ಸೇವೆ, ೭–೨೯.
ಪರಿಕಾರ—ಹರಿಕಾರ, ೪–೧೧೮.
ಪರಿಘ (ಸಂ.)—ಲಾಳವಿಂಡಿಗೆ, ೬–೮೪; ಕಬ್ಬಿಣದ ಆಯುಧ, ೧೩–೭೫.
ಪರಿಚ್ಛದ (ಸಂ.)—ಮೇಲು ಹೊದಿಕೆ, ೧೨–೧೧.
ಪರಿಚ್ಛೇದಿಸಿ—ನಿಷ್ಕರ್ಷಿಸಿ, ೧–೩೬.
ಪರಿಣತಿ (ಸಂ.)—ಫಲ, ೧೦–೯೬ ವ.
ಪರಿನಾಳ—ಕಾಲುವೆ, ೧೬–೯೦.
ಪರಿಮುಜಿಯಾಡು—ಹಾರಾಡು, ೯–೮೦.
ಪರಿಯಳ—ಹರಿವಾಣ, ೧೬—೯೧.
ಪರಿರಂಭ (ಸಂ.)—ಆಲಿಂಗನ, ೬–೮೪.
ಪರಿವೃಢ (ಸಂ.)—ಅಧಿಪತಿ, ೧೨–೧೬ ವ.

ಪರಿಸೂತ್ರ (ಸಂ.)—ಮಧ್ಯಭಾಗ, ೭–೪೭ ವ.
ಪಜ್ಜಿಪಡು—ಕೊನೆಗಾಣು, ೧–೧೨೨.
ಪರೀಷಹ (ಸಂ.)–ಶೀತೋಷ್ಣ ಸುಖ ದುಃಖಾದಿ ದ್ವಂದ್ವಗಳು, ೧೬–೬೧.
ಪಱಿ—ಹರೆ, ತಬಟೆ, ೭–೮೨.
ಪಲಗೆ—ಗುರಾಣಿ, (ಸಂ. ಫಲಕ), ೧೩–೫೪.
ಪಲ್ಯಂಕ (ಸಂ.)—ಮಂಚ, ೧೦–೧೪೭.
ಪಲ್ಲಣಿಸು—ಜೀನು ಹಾಕು, (ಸಂ. ಪಲ್ಯಯನ), ೪–೧೧೯ ವ.
ಪಲಾಲ (ಸಂ.)—ಜಳ್ಳು, ೧೧–೮.
ಪಲಾಶ (ಸಂ.)—ಎಲೆ, ೭–೧೨೫ ವ.
ಪವಣ್–(ಸಂ. ಪ್ರಮಾಣ), ಅಳತೆ, ೧–೫೪.
ಪಸದನ—ಅಲಂಕಾರ, (ಸಂ. ಪ್ರಸಾಧನ), ೩–೭೨.
ಪಸರ—ಅಂಗಡಿ, ೧–೧೨೧.
ಪಸಲೆ—ಹುಲ್ಲು ಮೈದಾನ. ೭–೩೧ ವ.
ಪಸವಡು—ಆಸೆಪಡು, ೭–೧೪೧.
ಪಸುರ್ಗವಿಲ—ಹಸುರು ಮತ್ತು ಕಪಿಲ ವರ್ಣವುಳ್ಳ, ೭–೧೪೧.
ಪಸುಗೆ—ಪಾಲು, ಹಂಚಿಕೆ, ೪–೧೧.
ಪಳಂಚಿನುಂಗುರ—ಮುದ್ರೆಯುಂಗುರ, ೫–೧೨೩ ಪ.
ಪಳಂಚು—ಚೆನ್ನಾಗಿ ಸೇರು, ೧–೭೧ ವ.
ಪಳ್ಳನೆ—ಬೇಗ, ೧೧–೧೫೬.
ಪಳಿಕು—(ಸಂ. ಸ್ಫಟಿಕ), ೧೧–೧೨೫.
ಪಟಯಿಗೆ—ಧ್ವಜ, ೧–೧೧೬.
ಪಟ್ಟಿ—ನಾಯನ್ನು ಅಟ್ಟುವಿಕೆ, ೩–೫೮ ವ. ನಿಂದೆ, ೪–೮೩.
ಪಟ್ಟಿವಾವುಗೆ—ಪಾದರಕ್ಷೆ, (ಸಂ. ಪ್ರತಿಪಾದುಕಾ), ೩–೭೫.
ಪಟ್ಟು—ಅರಣ್ಯ, ೭–೧೩೦.
ಪಟ್ಟಿಕ್ಕಿ—ಶಯನ ಸ್ಥಾನ, ೧೧–೧೭೭.
ಪಟ್ಟಿಕ್ಕೆವೆಟ್ಟ—ಆಸ್ಥಾದ್ರಿ, ೧೧–೧೭೭.
ಪ್ರಕೋಷ್ಠ (ಸಂ.)—ಮೊಳಕೈಯಿಂದ ಮಣಿಕಟ್ಟಿನ ವರೆಗಿರುವ ತೋಳಿನ ಭಾಗ, ೧೨–೧೬ ವ.
ಪ್ರಗ್ರಹ (ಸಂ.)—ಬಂದೀಖಾನೆ, ೪–೧೨೯.
ಪ್ರಚ್ಛದ (ಸಂ.)—ಹಚ್ಚಡ, ೧೧–೧೪೫ ವ.
ಪ್ರತ್ಯಂತ (ಸಂ.)—ಸಮೀಪ, ೬–೧೫೪.
ಪ್ರತ್ಯನೀಕ (ಸಂ.)—ಶತ್ರು, ೧–೪೪ ವ.
ಪ್ರತ್ಯಾಖ್ಯಾನ (ಸಂ.)—ತಿರಸ್ಕಾರ, ೧೬–೬೨ ವ.
ಪ್ರತಿಪತ್ತಿ (ಸಂ.)—ಗೌರವ, ೪–೫೨ ವ.
ಪ್ರತಿಪಸ್ನಿಕೆ—ವಿವೇಕ, ೧೦—೪೭.
ಪ್ರತೀಹಾರಕ (ಸಂ.)—ದ್ವಾರಪಾಲಕ, ೨–೨.
ಪ್ರದೀಪ(ಸಂ.)—ದೊಡ್ಡ ದೀಪ, ೬–೯೨.
ಪ್ರಧನ (ಸಂ.)—ಯುದ್ಧ, ೧–೨೩.
ಪ್ರಪಂಚ (ಸಂ)—(ವೃತ್ತಾಂತ) ವಿಸ್ತಾರ, ೬–೩೧ ವ.
ಪ್ರಪಾ (ಸಂ.)—ಅರವಟ್ಟಿಗೆ, ೧–೧೦೩.
ಪ್ರಭಂಜನ (ಸಂ.)—ವಾಯು, ೬–೮೫.
ಪ್ರವಣ (ಸಂ.)—ಪಾಂಡಿತ್ಯ, ೧–೨೪.
ಪ್ರಸವ (ಸಂ.)—ಹೂ, ೭–೧೪೧.
ಪ್ರಸಾಧನ (ಸಂ.)—ಅಲಂಕಾರ, ೧–೧೧೨ವ.
ಪ್ರಸ್ತಾವ (ಸಂ.)—ಸಂದರ್ಭ, ೧೫–೭೯ ವ
ಪ್ಲವಗ (ಸಂ.)—ಕಪಿ, ೧೩–೨೬.
ಪಾಂಗು—ರೀತಿ, ೬–೧೪೮.
ಪಾಡು—ಅವಸ್ಥೆ, ೧೦–೧೧೧.
ಪಾಣ್ಬ—ವ್ಯಭಿಚಾರಿ, ೧೫–೩೯.
ಪಾತ್ರ (ಸಂ.)—ಯಾನ ಪಾತ್ರ, ಹಡಗು, ೭–೪೦.
ಪಾಪೆ—ಬೊಂಬೆ, ೪–೧೨.
ಪಾರಿಹಾರ್ಯ (ಸಂ.)—ಕಡಗ, ೩—೬೪.
ಪಾಜುಂಬಳೆ—ಚಕ್ರ, ೫–೩೨.
ಪಾರ್ವಂತಿ | ಪಾರ್ವಿತಿ | —ಬ್ರಾಹ್ಮಣಸ್ತ್ರೀ, ೧೩–೩೯ ವ. ೧೫–೩೮ ವ
ಪಾಸಱಿ—ಹಾಸುಗಲ್ಲು, ೪–೧೭.

ಪಾಂಸು (ಸಂ)—ಧೂಳಿ. ೧—೧೦.
ಪಾಳಿ (ಸಂ.)—ಬಾವುಟ, ೨—೧೨.
ಪಾಟಿ—ಕ್ರಮ, ೪—೧೧.
ಪ್ರಾಕೃತ (ಸಂ.) ಸಾಮಾನ್ಯ ಮನುಷ್ಯ. ೫—೭೨.
ಪ್ರಾವರಣ (ಸಂ.)—ಹೊದೆವ ಬಟ್ಟೆ. ೭—೬೮.
ಪಿಂಜರಿತ (ಸಂ.)—ಹೊಂಬಣ್ಣದ. ೧೨—೨ ವ
ಪಿಟ್ಟಾದ ಪೀಜೂದ—ಏಸ್ಕಾರವಾಗಿರುವ, ೯—೧೨೪.
ಪಿಡಿ—ಹೆಣ್ಣಾನೆ, ೭—೧೦೫ ವ.
ಪಿಡಿಪು—ಹಿಡಿದುಕೊಳ್ಳುವಿಕೆ, ೧೧—೧೩೩.
ಪಿಂಡಿವಾಳ (ಸಂ.)—ಆಯುಧ ವಿಶೇಷ, ೧೪—೪೧.
ಪಿಡಿಸು—ಹಿಡಿಸು, ೬—೪೮.
ಪಿಂಡುಗಂಕಣ—ಒಟ್ಟಾಗಿ ಕೂಡಿಸಿದ ಕೈಬಳೆ, ೩—೧೦೬.
ಪಿಣಿಲ್—ಒಂದನ್ನೊಂದು ಹೆಣೆದುಕೊಂಡಿರುವ ಬಳ್ಳಿ ಮುಂತಾದುದು, ೧೩—೪೯.
ಪಿತೃವ್ಯ (ಸಂ.)—(ತಂದೆಯ ಸಹೋದರ). ಚಿಕ್ಕಪ್ಪ, ೧೬—೧೩.
ಪಿಷ್ಟಾತಕ (ಸಂ.)—ಬುಕ್ಕೆಹಿಟ್ಟು, ಗಂಧದ ಹುಡಿ, ೪—೨೭.
ಪಿಸುಣ—ಚಾಡಿ, ೩—೧೯
ಪಿಸುಟ್ಟು—ಹಿಸಿದು ಹೋದ, ೧೩—೫೪ ವ.
ಪಿಳಿಗು—ಪೀಳಿ ಹೋಗು, ೧೩—೩೫.
ಪಿಳ್ಳು—ಬಾಣದ ಮೂಲಭಾಗ, ೧೪—೧೭೫.
ಪಿಟಿ—ಹಿಂಡು, ೧—೯೪
ಪೀಲಿ—ನವಿಲ ಗರಿ, ೫—೪೪.
ಪೀಲಿದಟಿ—ನವಿಲ್ಗರಿಯ ಕೊಡೆ, ೧—೧೦೭ವ.
ಪುಗಲ್—ಪ್ರವೇಶಿಸಕೂಡದು, ಕೋಗಿಲೆಯು ದನಿ, ೭—೧೦೫.
ಪುಚ್ಚಟಿ—ಕೇಡು, ೧೬—೩೫.
ಪುಟ್ಟು—ನೀರನ್ನು ಬಗೆಯುವ ಹುಟ್ಟು, ೧೩—೬೬.
ಪುಣ್ಪಡಿಸು—ಗಾಯವಾಡು, ೧೦—೧೬೧.
ಪುತ್ತಳಿಗೆ—ಬೊಂಬೆ, ೧೧—೬೩.
ಪುದಿವು—ಆವರಣ, ೪—೧೨೪ ವ
ಪುದು—ಸಮಾನ, ೨—೬೬; ಒಡನೆ ಸೇರಿರುವ, ೧೨—೭೭.
ಪುದುವಾಟ್—ಕೂಡಿಕೊಂಡಿರು, ೧೨—೪೪.
ಪುಯ್ಯಲಿಡು—ಕೂಗು, ೪—೧೦೬.
ಪುರಂಧ್ರಿ (ಸಂ.)—ಹೆಂಗಸು, ೧೦—೧೨೬.
ಪುರಿದಂತೆ—ಹುರಿದ ಹಾಗೆ, ೧—೧೬.
ಪುರುಷಾಕಾರ (ಸಂ)—ಪ್ರತಿಷ್ಠೆ, ಗೌರವ, ೧೧—೫೩ ವ.
ಪುರುಹೂತ (ಸಂ.)—ಇಂದ್ರ, ೧೧—೭೫.
ಪುಲ್ಲೋಡ—(ಪುಲ್=)ತೃಣದಂತೆ ಅಲ್ಪವಾದ (ಕೋಡ=) ಕೋತಿ, ೮—೩೨.
ಪುಟಿಲ್—ಮುಳಲ ದಿಣ್ಣೆ, (ಸಂ. ಪುಲಿನ.) ೧೫—೨೪.
ಪೂಣ್ಕೆ—ಪ್ರತಿಜ್ಞೆ, ೪—೧೦೫.
ಪೂವಲಿ—ಪುಷ್ಪೋಪಹಾರ, ಹೂವನ್ನು ಚೆಲ್ಲುವುದು, ೬—೪೭.
ಪೆರ್ಗಡೆ—ಹೆಗ್ಗಡೆ, ಮುಖಂಡ, ೧೬—೩೪.
ಪೆಜಿ—ಚಂದ್ರ, ೪—೧೧೯.
ಪೆಳಜು—ಭಯಪಡು, ೫—೧೦೨.
ಪೆಟ್ಪಳಿಸು—ನಡುಗು, ೧೪—೧೪೧.
ಪೇಚಕ (ಸಂ.)—ಆನೆಯ ಬಾಲದ ಬುಡ, ೬—೪೪.
ಪೇಟಕ (ಸಂ.)—ಸಮೂಹ, ೧೬—೪೪.
ಪೇರಣೆ—ಕುಣಿತ, ೧೩—೫೬ ವ.
ಪೇಶಲ (ಸಂ.)—ಸುಂದರವಾದ, ೧೨—೪೭.
ಪೇಸೇಟ್—ಜುಗುಪ್ಸೆಯಾಗು, ೧೧—೧೩೨ವ.
ಪ್ರೇಯಸಿ (ಸಂ.)—ಪ್ರಿಯಳು, ೧೨—೫೯.
ಪೊಂಕ—ವಿಕಾಸ, ೭—೧೩೧, ('ಪೊಂಗು' ಧಾತುವಿನ ಭಾವನಾಮ).
ಪೊಗೆವ—ಹೊಗೆಯಾಡುವ, ೧೧—೧೪೪
ಪೊಂಗೆ—ಚಿನ್ನಕ್ಕೆ, ೧೬—೫೭.
ಪೊಂಜಲಗೆ—(ಪೊನ್+ಸಲಗೆ)—ಚಿನ್ನದ ಸಲಾಕೆ, ೧೬—೩೧.

ಪೊಡಪ್ಪು—ಶೌರ್ಯ, ಹೆಚ್ಚಿಕೆ, ೧—೧೩೮; ವೇಗ, ೪—೧೯.
ಪೊಡೆವಡು—ನವಯಸ್ಕರಿಸು, ೧—೯೭.
ಪೊಣಚ್ಚು—ಯುದ್ಧಮಾಡು, ೧೧—೯.
ಪೊಣರ್—ಯುಗ್ಮ, ಜೊತೆ, ೧೫—೭೮.
ಪೊಣರ್ವಕ್ಕಿ—ಚಕ್ರವಾಕ, ೭—೯೨.
ಪೊದಟ್ಟು—ವ್ಯಾಪಿಸು, ೧—೧೦೩.
ಪೊಂದುವರ್—ಸಾಯುವರು, ೯—೮೨.
ಪೊಮ್ಮಗಿಲ್—ಚಿನ್ನದ ಗೋಡೆ (?), ೪—೧೩೦.
ಪೊರಜೆ—ಹೊರಜಿ, ದಪ್ಪವಾದ ಹಗ್ಗ, ೭—೧೪೫.
ಪೊರೆ—ಸೇರು, ಕೂಡು, ೬—೧೭೨.
ಪೊಲನಾಗು—ದೃಷ್ಟಿಗೋಚರವಾಗು. ೧—೩೫.
ಪೊಲ್ಲಕೆಯ್—ಕೆಟ್ಟದ್ದನ್ನಾಲೋಚಿಸು, ೯—೯.
ಪೊಲ್ಲಮೆ—ನೀಚತ್ವ, ೧—೬೧.
ಪೊಲ್ಲಿ—ದುಷ್ಟಳು, ೬—೬೯.
ಪೊಸತಿಕ್ಕು—ಹೊಸ ರೀತಿಯಲ್ಲಿ ಹೊಡೆ, (ಪೊಸತು+ಇಕ್ಕು). ೩—೧೬೦.
ಪೊಸಯಿಸು—ಉಂಟುಮಾಡು, ೩—೧೪೨.
ಪೊಟ್ಟಿಜಿರ್—ಪ್ರಾತಃಕಾಲ, ೧೦—೯೪.
ಪೋಕರ್ಗೆ—ಹೋರಾಡುವವನು, ೭—೧೪೬.
ಪೋಡು—ಪಿಳ್ಳಾಗ, ಹಂಚಿಕೆ, ೧೩—೧೦೪.
ಪೋಡುಗಾಜಿ—ಛೇದಿಸುವವನು, ೪—೪೦.
ಪೋತಕ (ಸಂ.)—ಮರಿ, ೧—೧೨೭.

ಬ

ಬರ್ಕೆವಲಸು—ನೆಲಹಲಸು, ೧೧—೧೨೦.
ಬಗ್ಗಿಸು—ಕೂಗು, ೧೨—೭೭.
ಬಂಚಿಸು—ಮರೆಮಾಚು, ೫—೬೩; ವಂಚಿಸು, ೭—೫೯.
ಬಟ್ಟಾಡು—ಗುಂಡನ್ನು ಆಡಿಸು, ೧೨—೬೮.
ಬಡವಾ (ಸಂ.)—ಸಮುದ್ರದ ಬೆಂಕಿ, ೧೩—೯೯.
ಬಡಿ—ಸಣ್ಣ ದೋಣಿ, ೧—೮೩.
ಬಂಡು—ಮಕರಂದ, ೧—೩೧.
ಬಣಂಬೆ—ಬಣಜಿ, ಗುಂಪು, ೧೩—೫೪ ವ.
ಬದ್ದವಣಂ—ಮಂಗಳ ವಾದ್ಯ, ೪—೨೮.
ಬನ್ನ—ಬಾಧೆ, (ಸಂ. ಭಂಗ), ೨—೨೪.
ಬಂಬಲು—ಸಮೂಹ, ೭—೭೫ ವ.
ಬಯ್ತಬಯ್ಕೆ—ಬಯಸಿದ ಮನೋರಥ, ೪—೨೩.
ಬರ—ವರ, ೧೩—೧೫೪.
ಬಲ್ಲರ—ಬಲವಾದ ಪಿಶಾಚ, ೫—೪೨ ವ. (ಗರ—ಸಂ. ಗ್ರಹ).
ಬಲ್ಲಣಿ—ಬಲವಾದ ಸೈನಿಕರ ಗುಂಪು, ೧೩—೭೯.
ಬಲ್ಲಲ—ಅತಿಶಯ, ೯—೧೧೪ ವ.
ಬಲಿದು—ಬಲಪಡಿಸಿ, ೯—೧೯೫ ವ.
ಬವರ—ಯುದ್ಧ, ೧೦—೨೩೦.
ಬವಸೆ—ಅಪೇಕ್ಷೆ, ೨—೧೬.
ಬಸದಾಪಂ—ವಶವಾದನು, ೯—೧೬೫.
ಬಸನುತ್ತು—ವಶವಾಗಿ, ೧೩—೧೪೪
ಬಂಪಿವುವರ್ (ಸಂ.)—ಹೆಚ್ಚಾದ, ೭—೨೨.
ಬಳ್ಳವಳ್ಳಿ ಪರಂಪರೆ (ಬಳ್ಳಿವಳ್ಳಿ?), ೩—೧೧೫.
ಬಳಾಕ (ಸಂ)—ಹಂಸಪಕ್ಷಿ, ೭—೧೫೦.
ಬಳ್ಳಿ—ನರಿ, ೧೪—೧೭೨.
ಬಟ್ಟಲ್ಕು—ಹಿಂದಿರುಗು, ೬—೧೯ ವ.
ಬಟ್ಟಿವಟು—ಹತ್ತಿರ ಹತ್ತಿರ, ೪—೪೪.
ಬೃಂಹಿತ (ಸಂ)—ಆನೆಯ ಕೂಗು, ೧೦—೧೫೭.
ಬಾಣಸು—ಅಡಿಗೆ, ೧೦—೧೩೬.
ಬಾಣಾಸನ (ಸಂ.)—ಧನುಸ್ಸು, ೧೩—೫೧.
ಬಾಯ್ಕೀಳಿಸು—ಆಜ್ಞಾಧೀನ ಮಾಡು, ೫—೩೩.
ಬಾರಿ—ಏಟು, ೯—೧೩೫.
ಬಾರಿಸು—ತಡೆಮಾಡು, ೧೦—೧೨೯ ವ.
ಬಾಸಣಿಸು—ಮುಚ್ಚು, ೪—೧೨.
ಬಾಸಿಗ—ಮಾಲೆ, ೯—೪೦.
ಬಾಸೆ—ರೋಮ ರಾಜಿ, ೪—೩.
ಬಾಹು—ಬಾವು, ೧೬—೩೯ ವ.

ಬಾಳವಂದ—ಬಾಲದೊಡಿಗೆ, ೩–೧೪೧, (ಸಂ. ಬಾಲಬಂಧ)
ಬಾಳಿ–ವಾಲಿ (ಇಂದ್ರನ ಮಗ), ೧೪–೧೯೪.
ಬಾಳುಡಿ–ಕತ್ತಿಯ ತುಂಡು, ೧೩–೬೩.
ಬಾಟ್ತಿಗೆಯ್—ಲಕ್ಷ್ಯಮಾಡು, ೬–೧೧೨.
ಬಿಗುರ್ವಣೆ—ಭಯ, ೫–೪೬.
ಬಿಚ್ಚತ—(ಸಂ. ವಿಸ್ತೃತ), ವಿಸ್ತಾರವಾಗಿ, ೭–೨೨೬.
ಬಿಂಜ—ಅಡವಿ, ೪–೫೪ ವ.
ಬಿಡೆ—ಬಲವಾಗಿ, ೧೯–೧೩೧.
ಬಿಣ್ಪು—ಭಾರ, ೧–೧೦೭ ವ.
ಬಿತ್ತರಿಗೆ—ಪೀಠ, ೫–೪೨ ವ, (ಸಂ. ವಿಷ್ಟರಕ).
ಬಿತ್ತಿಗ—ಪ್ರೌಢ, ೧೩–೪೧.
ಬಿದಿರ್—ಅಗಲವಾಗಿ ಎರಚು, ೧೧–೧೪೩.
ಬಿದುರ್—ಔತಣ, ೯–೫೬.
ಬಿನ್ನನೆ—ಸುಮ್ಮನೆ, ೭–೧೬೩ ವ.
ಬಿಜುತೋಡು–ಬಿರುಸಾಗಿ ಓಡು, ೪–೪೨೨.
ಬಿಜುಬಿದ್ದಂಬೋಗೆ–ಕಠಿನವಾದ ಹೊಡೆತವನ್ನು ಹೊಂದಲು, ೮–೨೯.
ಬಿಜುವರಿ—ಬಿರುಸಾದ ಓಟ, ೪–೧೦೭.
ಬಿಲ್ಲಣೆ—ಧನುರ್ಧಾರಿ, ೧೩–೩೯.
ಬಿಲ್ಲುಂಬೆಜಗು—ಆತ್ಯಾಶ್ಚರ್ಯಪಡು, ೫–೩೨.
ಬಿಸಸನ—(ಸಂ. ವಿಶಸನ), ಕೊಲ್ಲುವುದು, ೧೪—೬೨.
ಬಿಸವಂದ—ಅಶ್ಚರ್ಯ, ೯—೩೯.
ಬಿಟ್ಟಾಗೆ—ನೆಲಕ್ಕೆ ಬಿದ್ದು ತಗಲುವಂತೆ, ೧೧—೧೪೩.
ಬೀಡು—ಪಟ್ಟಣ, ೧—೧೦೦; ವಾಸಸ್ಥಾನ, ೧—೧೦೧.
ಬೀಡೆವರಿ—ಬಿರುಕು ಬಿಡು, ೭–೯೪.
ಬೀತು—ಮುಗಿದುಹೋಗಿ, ೭–೧೬೩ ವ.
ಬೀಭತ್ಸ (ಸಂ.)—ಅಸಹ್ಯಕರವಾದ, ೧೫—೪೧.
ಬೀಸರ—ವ್ಯರ್ಥ, ೬—೧೧೫.
ಬೀಳ್ತರು—ಈಚೆಗೆ ಬರು, ೧೧—೧೦೭.
ಬೀಟುಡೆ–ಉಟ್ಟು ತೆಗೆದುಹಾಕಿದ ಉಡುಗೆ, ೯—೧೪೧.
ಬೆಕ್ಕಸಮುತ್ತರ್—ಆಶ್ಚರ್ಯಹೊಂದಿದರು, ೧–೭೧.
ಬೆಗಡು–ಭಯ, ಆಶ್ಚರ್ಯ, ೧–೪೧.
ಬೆಟ್ಟವೆಟ್ಟನೆ—ಕಠಿನವಾಗಿ, ೧೧–೨೩.
ಬೆದೆಗೂಡಿಸು—ಬಿತ್ತನೆಗೆ ಸಿದ್ಧಮಾಡು, ೧೩—೪೯.
ಬೆರಗು—ಸಹಾಯ, ೧೦–೧೩೧.
ಬೆಸ–ಅಪ್ಪಣೆ, ೭–೧೦೭ನ.; ಕರ್ತವ್ಯ, ೨–೫೦.
ಬೆಸನ—ಆಜ್ಞೆ, ೪—೪೭ ವ.
ಬೆಸಲೆ—ಹೆರಿಗೆ, ೪–೫೩.
ಬೆಳ್ತನ—ಮೌಢ್ಯ, ೩–೪೪.
ಬೆಳ್ಮಾಡು–ಮೂಢನನ್ನಾಗಿ ಮಾಡು, (ಪುರುಳ್ಮಾಡು), ೬–೧೪೧.
ಬೆಳ್ಮಿಗ–ಏನೂ ತಿಳಿಯದ ಮೃಗ (ದುರ್ಬಲ ಮೃಗ), ೭–೯೫.
ಬೆಟ್ಟುತ್ತರ್—ಭಯಪಟ್ಟವರು, ೧–೭೧.
ಬೆಳ್ಳುಜು—ಭಯಪಡು, ೧–೧೭೧.
ಬೇಟ—ಅಭಿಲಾಷೆ, ೭–೧೦೫ ವ.
ಬೇನಸ—ಚಿಂತೆ, ದುಃಖ, ೧೧–೧೬೭.
ಬೇಟ್ಪುದು—ಬೇಡಿಮುದು, ೧—೯೧.
ಬೈತು—ಮರೆಯಾಗಿ, ೫—೨೯.
ಬೋನ—ಅನ್ನ, ೧೧—೧೦೭ ವ.

ಭ

ಭವ (ಸಂ.)—ಜನ್ಮ, ಹುಟ್ಟು, ೧೫—೩೬.
ಭೃಮರಕ (ಸಂ)–ಜುಲ್ಪಿ ಕೂದಲು, ೬–೪೧.
ಭಾರ್ಗವ (ಸಂ.)—ಧನುರ್ಧಾರಿ (?), ೧೩—೫೪.
ಭಾರತಿಕ (ಸಂ)—ನಟ, ೪—೨೬.
ಭಾವಜ (ಸಂ.)—ಮನ್ಮಥ, ೧—೧೯.
ಭ್ರಾಮಕ (ಸಂ.)—ಅಯಸ್ಕಾಂತ, ೪–೬೩.
ಭೃಂಗಾರ, ೫–೧೩ | ಭೃಂಗಾರಿ, ೩–೯೫ (ಸಂ.)–ಚಿನ್ನದ ಹೂಜಿ.
ಭೇಷಜ (ಸಂ.)—ಔಷಧ, ೧೪—೩೪ ವ.

ಮ

ಮಗಿಲ್—ಪ್ರಾಕಾರ, ೪-೧೩೦.
ಮಟ್ಟ—ಸರಿಯಾಗಿ, ಸುಮ್ಮನೆ, ೬-೧೪೬.
ಮಟ್ಟಮಿರ್—ಶಾಂತವಾಗು, ೫-೯೮.
ಮಡ—ಬಂಡಿಯ ಪಾರಿ (ಹಿಂಭಾಗ), ೧೩-೬೯.
ಮಡಲ್—ಹಬ್ಬು, ೯—೧೬.
ಮಂಡಲಾಗ್ರ (ಸಂ.)—ಕತ್ತಿ, ೭—೪.
ಮಡೆಗೂಟು—ಎಂಜಲನ್ನ, ೯-೧೪೧.
ಮಣ್ಣಟ್ಟಿ—ರೂಪಳಿದ ಸಾವು, ೧೩-೬೫.
ಮಣಿಯೇಜು—ಗಂಟೆಯ ಶಬ್ದ, ೩-೪೧ ವ.
ಮತ್ತವಾರಣ (ಸಂ.)—ಜಗಲಿ, ೩-೩೭.
ಮತ್ತಿನ—ಉಳಿದ, ಇನ್ನೊಂದಾದ, ೧೫-೬೪.
ಮದಪಟ್ಟಕೆ, ೩-೯೪ ।
ಮದವಟ್ಟಿ, ೪-೧೧೯ । ಮದೋದಕದ ಗೆರೆ.
ಮಂದುರಾ (ಸಂ.)—ಕುದುರೆಯ ಲಾಯ, ೪—೧೧೫ ವ.
ಮಂದೈಸು—ದಟ್ಟವಾಗು, ೧೩—೪೫.
ಮನಮೆಳದಾಗು—ಮನಸ್ಸು ಹಿಂಜಗ್ಗು. ೩-೯.
ಮನ್ಮ (ಸಂ.)—ದೈನ್ಯ. ೧೧—೧೧೦ ವ.; ದುಃಖ, ೧೫—೭೫ ವ.
ಮಯೂಖ (ಸಂ.)—ಕಾಂತಿ, ೬—೧೭೫ ವ.
ಮರವಾನಸ—ಮರದಿಂದ ಮಾಡಿದ ಮನುಷ್ಯ. ೫—೫೯.
ಮರ್ಯಾದೆ—ಪದ್ಧತಿ, ೧—೧೩೨.
ಮರುಚ್ಚಾಪ (ಸಂ.)—ಇಂದ್ರನಬಿಲ್ಲು, ಕಾಮನ ಬಿಲ್ಲು, ೪—೫೪.
ಮರುತ್ತರಂಗಿಣಿ (ಸಂ.)—ದೇವನದಿ, (ಗಂಗೆ), ೭—೯೪.
ಮರುವಕ್ಕ—ಶತ್ರು ಪಕ್ಷ, ೧೧—೫೧ ವ.
ಮರುಳ್—ಪಿಶಾಚ, ೧೩—೫೪ ವ.
ಮರುಳ್ದು—ಮೋಹಗೊಂಡು, ೩-೧೬.
ಮಱುಮೆಯ್—ಮುಂದಣ ಜನ್ಮ ೬-೪೪.
ಮಲಂಗು—ಒರಗಿಕೊಳ್ಳು, ೫—೫೭ ವ.
ಮಲೀಮಸ (ಸಂ.)—ಕೊಳೆ, ೬—೯೬.
ಮವ್ವು—ಮಬ್ಬು, ೧—೭೧.
ಮಸ್ಕರಿ (ಸಂ.)—ಸಂನ್ಯಾಸಿ, ೯—೩೮.
ಮಸೂರಿಕಾ (ಸಂ.)—ತೊಗರಿ, ೩-೧೪೫ ವ.
ಮಹ (ಸಂ.)—ಉತ್ಸವ, ೧೫—೬೪ ವ.
ಮಹತ್ತರ (ಸಂ.)—ಸರ್ವಾಧಿಕಾರಿ, ೫-೨೬ ವ.
ಮಟ್ಟು—ಸಂಹಾರಮಾಡು, ೧೦—೧೭೩
ಮಾಟಕೂಟ—ಮನುಷ್ಯಕೃತವಾದ ಜೋಡಣೆ, ೫-೩೫.
ಮಾಡ—ಉಪ್ಪರಿಗೆಯ ಮನೆ, ೭-೧೨೮.
ಮಾರ್ತಂಡ (ಸಂ.)—ಸೂರ್ಯ, ೧೨—೧೪೮.
ಮಾಮಸಕ—ಹೆಚ್ಚು ರೇಗು, ೧೦-೨೫ ವ.
ಮಾರಿಗುತ್ತ—ಮಾರೀರೋಗ, ೧೪-೪೯ ವ. (ಮಾರಿಯು+ಕುತ್ತ).
ಮಾಜಿಚ್ಚಂ—ಪ್ರತಿಯಾಗಿ ಬಾಣಪ್ರಯೋಗ ಮಾಡಿದನು, ೫-೯೦.
ಮಾಸರ—(ಸಂ. ಮಹಾಸ್ವರ), ೧೦—೧೭೮.
ಮಿಡಿ (ಬೆರಳುಗಳನ್ನು) ಹೊಡೆ, ೧—೧೨೯
ಮಿಥ್ಯಾದೃಷ್ಟಿ (ಸಂ.)—ನಾಸ್ತಿಕ, ೧೫—೭೫ ವ.
ಮಿಸುಕು—ಅಲುಗು, ೧೩—೨೨೩ ವ.
ಮಿಸುಗು—ಪ್ರಕಾಶಿಸು, ೧೪—೧೯೦.
ಮಿಹಿರಾಧ್ವ (ಸಂ.)—ಸೂರ್ಯನ ದಾರಿ, ಆಕಾಶ, ೧೧—೧೪೫.
ಮಿಳ್ಳಿಸು—ಚಲಿಸು, ೧—೪೧.
ಮುಖರ (ಸಂ.)—ಶಬ್ದ, ೪—೪೫ ವ.
ಮುಗ್ಧಭಾವ (ಸಂ.)—ಸೌಂದರ್ಯ, ೩-೧೩೧.
ಮುಂಗುರಿ—ಮುಂಗುಸಿ, ೧೫—೩೭ ವ.
ಮುಂಗೋಲ್—ಮುಂಭಾಗ, ೪—೫೩ ವ.
ಮುಚ್ಚೆ—(ಸಂ. ಮೂರ್ಖಾ), ೪—೯೨.
ಮುಂಜಿ—(ಸಂ: ಮೌಂಜಿ), ೪—೪೧.
ಮುಟ್ಟುಗೆಟ್ಟ—ಮುಟ್ಟುವುದಕ್ಕೆ ಯೋಗ್ಯ ನಲ್ಲದ, ೧೦—೧೧೯ ವ.
ಮುಟ್ಟೈಸು—ನಿಲ್ಲಿಸು, ೨—೧೪.
ಮುಡಿ—ಮುಗಿ, ಕೊನೆಗಾಣು, ೧೫—೧೨ ವ.
ಮುಡಿಗವಿದಂತೆ—ಕಿರೀಟವಿಟ್ಟ ಹಾಗೆ, ೩-೬೭ ವ.

ಮುಡಿಪು—ಮುಗಿಯಿಸು, ೮–೫೬ ವ.
ಮುಂಡುಪೋದ–ಕತ್ತರಿಸಲ್ಪಟ್ಟ, ೧೩–೫೪ ವ.
ಮುನ್ನೀರ್— ಸಮುದ್ರ, ೧—೧೨೨.
ಮುಂಬು—ಮುಂದಾಳು, ೧೪–೧೦.
ಮುಯ್ಪು } —ಹೆಗಲು, ೧೪—೧೮೪ ವ.;
ಮುಯ್ವು } ೩—೧೫೦.
ಮುಂಬಗಲ್–ಬೆಳಗಿನ ಹೊತ್ತು, ೭–೧೦೦.
ಮುಸುಂಬು—ಮುಸುಗು (?), ೮–೨೯.
ಮೂರಿ—ಬಳಗ, ೪–೩೮.
ಮೃಗತೃಷ್ಣಿಕಾ (ಸಂ.)–ಬಿಸಿಲ್ಗುದುರೆ ೭–೯೩.
ಮೆಚ್ಚು—ಬಹುಮಾನ, ನಜರು, ೧೫–೩೩ ವ.
ಮೆಯ್ಗರೆ—ಮುರಿಯಾಗು, ಅವಿತುಕೊಳ್ಳು, ೧–೬೦.
ಮೆಯ್ಗಲಿ—ಬಲಿಷ್ಠ, ೫–೪೨.
ಮೆಯ್ವಡೆ—ಶರೀರವನ್ನು ಧರಿಸು, ೧–೪೨.
ಮೆಯ್ಯಿಕ್ಕು—ನಮಸ್ಕರಿಸು, ೨–೨ ವ.
ಮೆಯ್ವೆರ್ಚು—ನೈಯ್ಯುಬ್ಬು, ೫–೬೩
ಮೆಳ್ಪಡು–ಬೆರಗಾಗು, ೧೨–೬೦.
ಮೇಘಡಂಬರ (ಸಂ.)—ಕೊಡೆ, ೫–೧೦೪.
ಮೇಲುದು—ಹೆಂಗಸರು ಹೊದೆದಿರುವ ವಸ್ತ್ರ, ೩–೬೭ ವ.
ಮೇಳಾಪಕ (ಸಂ.)—ಸಮೂಹ, ೪–೯೬.
ಮೇಳಿಸು—ಸೇರಿಕೊಳ್ಳು, ೧–೧೨೭.
ಮೊಗವಡ—ಮೊಕವಾಡ, ೧೩–೭೪.
ಮೊಗಸಾಲೆ—ಮನೆಯ ಮುಂದಿನ ಪಡಸಾಲೆ, ೨–೨ ವ.
ಮೊಗಸು—ಪ್ರಾರಂಭಿಸು, ೧–೭೭.
ಮೊಗ್ಗೆ—ಸಾಧ್ಯವೆ!, ೧–೩೯.
ಮೊನೆ—ಯುದ್ಧ, ೧೩—೫.
ಮೊಜಿ—ನಂಟ, ೬ ೧೧೪.
ಮೊಟಗು—ಗುಡುಗು, ೯–೩೨.
ಮೋದು—ಹೊಡೆ, ೨–೪೫.

ರ

ರಥಾಂಗ (ಸಂ.)—ಚಕ್ರವಾಕ, ೧–೧೨೭.
ರನ್ನವಸರ—ರತ್ನದ ಅಂಗಡಿ, ೧–೧೨೧.
ರವಳಿ—ಕೂಗು, ೧೩–೧೧ ವ.
ರಸೆ—ಭೂಮಿ, ೭–೩೧; ಪಾತಾಳ, ೧೧–೧೫೦.
ರಹಟ–ರಾಟಿ, ೧–೫೭.
ರಾಜಕ—ರಾಜರ ಗುಂಪು, ೫–೭೧.
ರಾಜನ್ಯ (ಸಂ.)—ಕ್ಷತ್ರಿಯ, ೬–೩೮.
ರಾವಣ ಹಸ್ತ (ಸಂ.)—ವಾದ್ಯವಿಶೇಷ, ೧೮–೧೭೭.
ರುಂಜಿ–ಯುದ್ಧ ವಾದ್ಯವಿಶೇಷ, ೪–೫೬.
ರುಂಪ್ರ (ಸಂ.)—ದಟ್ಟ, ೧೮–೧೯೯.
ರೋದಸ್ (ಸಂ.)—ಭೂಮ್ಯಾಕಾಶಗಳು, ೬–೪೨.
ರೋಮಂಥ (ಸಂ.)—ಮೆಲುಕು, ೭–೧೧೩.
ರೈನೃಷ್ಟಿ (ಸಂ.)—ಹೊನ್ನಿನ ಮಳೆ, ೩–೧೩೭.

ಲ

ಲತಾಂತ (ಸಂ.)—ಪುಷ್ಪ, ೫–೧೩.
ಲಂಭೂಷ (ಸಂ.)–ಗೊಂಡೆಗಳಿರುವ ಒಂದು ತೆರದ ಸರ, ೬–೪೩.
ಲವಲೀ (ಸಂ.)—ಅರನೆಲ್ಲಿ, ೭–೧೧೩.
ಲಾಂಗಲ (ಸಂ.)—ನೇಗಿಲು, ೧೪–೧೮೦.
ಲುಂಟಾಕ (ಸಂ.)—ಕಳ್ಳ, ೪—೩೫.
ಲೆಂಕ–ಸೇವಕ, ೧೧–೧೫೪.
ಲೆಂಕೆ–ಸೇವಕಿ, ೧೦–೬೩.
ಲೋಧ್ರ (ಸಂ.)—ಲೊದ್ದಗೆ ಗಿಡ, ೭–೧೪೧.
ಲೋಹವಕ್ಕರಿ–ಲೋಹದ ತಡಿ, ೧೩–೬೦.

ವ

ವಣಿಗ್ವಾಟ (ಸಂ.)—ಅಂಗಡಿಯ ಬೀದಿ, ೧—೧೨೨.
ವಂದನಮಾಲಾ (ಸಂ.)–ತೋರಣ ವಿಶೇಷ, ೮–೪೫ ವ.

ವದಾನ್ಯತಾ (ಸಂ.)—ಔದಾರ್ಯ, ೭–೨೨ ವ.
ವರಾಕ (ಸಂ)—ಅಲ್ಪ, ಶೋಚನೀಯ, ೮–೬೧,
ವರುಣಾನೀ (ಸಂ.)—ಪಶ್ಚಿಮ ದಿಕ್ಕು, ೮–೨.
ವರೂಥಿನೀ (ಸಂ.)—ಸೈನ್ಯ, ೧೩–೧೦೧ ವ.
ವಲೀಮುಖ (ಸಂ.)—ಕಪಿ, ೧೩–೨೬ ವ.
ವಂಶಸ್ಥಲ (ಸಂ.)—ಬಿದಿರು ಮೆಳೆ, ೯–೨೦
ವಹಿತ್ರ (ಸಂ.)—ಹರಿಗೋಲು, ತೆಪ್ಪ, ೬–೬.
ವ್ಯಂತರ (ಸಂ.)—ಪಿಶಾಚ, ೧೦–೯೭ ವ.
ವ್ಯತಿಕರ (ಸಂ.)—ಸಂಬಂಧ, ೧೧–೧೦೦ ವ.
ವ್ಯಸನ (ಸಂ.)—ಆಸಕ್ತಿ, ೪–೪೭.
ವ್ಯಾರ್ಮಾನುಷೀ (ಸಂ)—ಜಲ ನಿವಾಸಿನಿ, ೧೦–೭೩.

ವಾರುಣೀ (ಸಂ.)—ಮದ್ಯ, ೭–೯೦.
ವಿಕಚ (ಸಂ.)—ಅರಳಿದ, ೮—೫೦.
ವಿಕುರ್ವಣೆ—ವಿಕಾರವೇಷ, ೧೦–೧೪೭ ವ.
ವಿಗುರ್ವಿಸು—ಭಯಪಡಿಸು, ೧೦–೧೧೪ ವ.
ವಿಚಕಿಲ (ಸಂ.)—ನುಲ್ಲಿಗೆ, ೫–೧೧೬.
ವಿಜಿಗೀಷು (ಸಂ)—ಜಯಾಪೇಕ್ಷೆಯುಳ್ಳವನು, ೧೦–೭೪.

ವಿತರ್ದಿಕೆ—ಪೀಠ, ೩–೭೦.
ವಿತರಣ (ಸಂ.)—ಔದಾರ್ಯ, ೨–೧.
ವಿತಾನ (ಸಂ.)—ಮೇಲ್ಕಟ್ಟು, ೬–೪೩.
ವಿದ್ರಾವಣ (ಸಂ.)—ಓಡಿಸುವ, ೧೮–೨೦೯.
ವಿದ್ವಿಷ್ಟ (ಸಂ)—ವೈರಿ, ೧೧–೪೪.
ವಿದ್ಧ (ಸಂ.)—ಆಕೃತಿ, ೫–೧೧೩.
ವಿಧುರೆ—ದುಃಖವುಳ್ಳವಳು, ೧೧–೬೨ ವ.
ವಿನ್ಞಾಣ—ಜ್ಞಾಪಕ, (ಸಂ. ವಿಜ್ಞಾನ), ೧೧–೪೬ ವ.

ವಿನೇಯ (ಸಂ.)—ಶಿಷ್ಯ, ೧–೪.
ವಿಪಂಚೀ (ಸಂ.)—ವೀಣೆ, ೫–೬೩.
ವಿಪಣಿ (ಸಂ.)—ಅಂಗಡಿಬೀದಿ, ೬–೧೭೭ವ.
ವಿಪ್ರತಿಪತ್ತಿ (ಸಂ.)—ವಿರೋಧ, ಭೇದ ಭಾವನೆ, ೧೭–೭೯ ವ.
ವಿಷಣ್ಣ (ಸಂ.)—ವ್ಯಸನವುಳ್ಳವನು, ೫–೨೩ವ.
ವಿಷ್ಟರ (ಸಂ.)—ಪೀಠ, ೧–೫೧.
ವಿಸಟಂಬರಿ—ಯಥೇಚ್ಛವಾಗಿ ಆಚರಿಸು, ೧–೧೦೭ ವ.
ವೀಚೀ (ಸಂ.)—ನೀರಿನ ಅಲೆ, ೯–೧೬ ವ.
ವೀತಾಂಕುಶ (ಸಂ.)—ನಿರಂಕುಶ, ೧೦–೧೫೩.
ವೃಜಿನ (ಸಂ.)—ಪಾಪ, ೭–೪೦.
ವೃಷ (ಸಂ.)—ಧರ್ಮ, ಎತ್ತು, ೧–೧೯.
ವೇಲೆ—ದಡ, ವೇಳೆ, ೧೨–೪೯.
ವೈಕುರ್ವಣ (ಸಂ.)—ವಿಕಾರಹೊಂದಿದ, ೫–೯೮.
ವೈಜಯಂತಿ (ಸಂ)—ಧ್ವಜ, ೧೩–೨೬ ವ.

ಶ

ಶರ್ಕರಾಪ್ರಭೆ (ಸಂ.)—ನರಕ ಭೇದ, ೬—೬೪.
ಶತಹ್ರದ (ಸಂ.)—ಮಿಂಚು, ೧೩—೪೯.
ಶಂಪಾ (ಸಂ.)—ಮಿಂಚು, ೫—೭೪.
ಶಫರ (ಸಂ.)—ಒಂದು ಜಾತಿಯ ಮೀನು, ೧—೧೦೭ ವ.
ಶಾತಕುಂಭ (ಸಂ.)—ಚಿನ್ನ, ೧೨—೨ ವ.
ಶಾಬ (ಸಂ.) ಮರಿ, ೬—೯೫.
ಶಾರಿಕೆ—ಆನೆಯ ಮೇಲಣ ಜೀನು, ೧೦—೮೭ ವ.
ಶರ್ವರಿ (ಸಂ.)—ರಾತ್ರಿ, ೫—೧೦೯.
ಶಿರೀಷ (ಸಂ.)—ಬಾಗೆಯ ಹೂ, ೫—೯೫.
ಶಿಲೀಮುಖ (ಸಂ.)—ಬಾಣ, ಭ್ರಮರ, ೪—೭೦.
ಶುಕ್ಲಧ್ಯಾನ (ಸಂ.)—ಜೈನಭಟ್ಟಾರಕರ ಸಮಾಧಿಜ್ಞಾನ, ೧೬—೬೭.
ಶುಕ್ತಿ (ಸಂ.)—ಮುತ್ತಿನ ಚಿಪ್ಪು, ೧೩–೬೨.
ಶುಂಡಾಲ (ಸಂ.)—ಆನೆ, ೧೦—೨೦೫.
ಶುದ್ಧಾಂತ (ಸಂ.)—ರಾಣಿವಾಸ, ೪–೨೪.
ಶುದ್ಧಿ (ಸಂ.)—ಸುದ್ದಿ, ೧೧—೪೨.

ಶೈಲೂಷ (ಸಂ.)—ನಟ, ೭—೧೭೦
ಶೈವಾಲ (ಸಂ.)—ಪಾಚಿ, ೩–೧೩೩ ವ.

ಷ

ಷಂಡ (ಸಂ.)—ಗುಂಪು, ೧೦—೯೮ ವ.

ಸ

ಸಂಕ್ರಂದನ (ಸಂ.)—ಇಂದ್ರ, ೬—೪೬.
ಸಂಕೆ—(ಸಂ. ಶಂಕಾ), ೧—೭೦ ವ.
ಸಂಚಕರ—ಸಂಚಕಾರ, ೫–೨.
ಸಜ್ಜನ (ಸಂ.)—(ಕುಲಸ್ತ್ರೀ), ಹೆಂಡತಿ, ೧೦—೩೮.
ಸಟಾ (ಸಂ.)—ಜಡೆ, ಬೀಳಲು, ೭—೧೨೭.
ಸತ್ತಿಗೆ—ಕೊಡೆ (ಸಂ. ಛತ್ರಿಕಾ), ೭–೨೫.
ಸನಾಭಿ—ಜ್ಞಾತಿ, ೧–೯೦.
ಸಪತ್ನ (ಸಂ.)—ಶತ್ರು, ೧೦—೬೦ ವ.
ಸಪ್ತಾರ್ಚಿ (ಸಂ.)—ಅಗ್ನಿ, ೧೯—೨೫೫
ಸಪ್ತಾಶ್ವ (ಸಂ.)—ಸೂರ್ಯ, ೪—೧೨೯.
ಸಪ್ತಿ (ಸಂ.)—ಕುದುರೆ, ೪—೧೨೯.
ಸಂಬಳ (ಸಂ.)—ಜೀವನ ದ್ರವ್ಯ, ೫—೯.
ಸಮುಕಟ್ಟು—ಸನ್ನಾಹ, ೫–೭೮.
ಸಮವಸರಣ ಭೂಮಿ (ಸಂ.)—ಪುಣ್ಯ ಭೂಮಿ, ೧೦—೯೨.
ಸಮ್ಮನ—(ಸಂ. ಸನ್ಮಾನ), ೩–೧೩೭.
ಸಮಿತಿ (ಸಂ.)—ಸಮೂಹ, ೧೧–೧೨.
ಸಮೆ—ಮಾಡು, ೧೮—೯೩ ವ.
ಸಯ್ಪು—ಪುಣ್ಯ, ೭—೭೮.
ಸರ—ದನಿ, (ಸಂ. ಸ್ವರ), ೧೦—೧೭೫ ವ.
ಸರಳಿಸು—ನೇರವಾಗು, ೭—೪೬.
ಸರಿ–ಜಡಿಮಳೆ, ೧–೪೧.
ಸರಿತ್ (ಸಂ.)—ನದಿ, ೭—೧೧೭.
ಸರೋಜ ಷಂಡ (ಸಂ.)—ಸರೋವರ, ೭—೧೧೦.
ಸಲ್ಲಕೀ (ಸಂ.)—ಆನೆಬೇಲದ ಗಿಡ, ೪—೧೧೯ ವ.
ಸಲಗ–ಸಲಾಕೆ (ಸಂ. ಶಲಾಕಾ), ೭–೧೧೨.
ಸಲವು—ಪ್ರವೇಶ, ೧೦—೧೧೪ ವ.
ಸವನ (ಸಂ.)—ಅಭಿಷೇಕ, ೧—೪೪.
ಸವಣ—(ಸಂ. ಶ್ರಮಣ)—ಜೈನ ಸಂನ್ಯಾಸಿ, ೯—೧೩.
ಸಂವರ್ತ (ಸಂ.)–ಪ್ರಳಯ, ೭–೧೧೫ ವ.
ಸಂವರಿಸು—ಸನ್ನಾಹಿಸು, ೭—೨೭.
ಸರ್ವಾವಧಿ (ಸಂ.)—ಸಕಲರೂಪ ವ್ಯಾಪಾರಗಳನ್ನು ತಿಳಿಯುವ ಜೈನಪ್ರತಿಯ ಸಂಪತ್ತು, ೧೬–೬೨.
ಸಂಸರಣ (ಸಂ.)—ಸಂಸಾರ, ೨—೧೬.
ಸಂಸೃತಿ (ಸಂ.)—ಸಂಸಾರ, ೧೮–೧೨೭.
ಸ್ಕಂಧ (ಸಂ.)—ಹೆಗಲು, ೨—೨೦.
ಸ್ಕಂಧಾವಾರಂ (ಸಂ.)—ಸೇನಾಸನ್ನಿವೇಶ, ೧೭—೩೬.
ಸ್ತನಿತ (ಸಂ.)—ಗುಡುಗು, ೧೩–೪೯
ಸ್ತಬಕ (ಸಂ.)–ಗೊಂಚಲು, ೨–೧೩ ವ.
ಸ್ತಂಬೇರಮು (ಸಂ.)–ಆನೆ, ೧೧—೧೪೩.
ಸ್ಥಪತಿ (ಸಂ.)—ಬಡಗಿ, ೧೭—೯೭.
ಸ್ಥವಿರ (ಸಂ.)–ಮುದುಕ, ೪—೧೧೧.
ಸ್ಯಂದನ (ಸಂ.)—ರಥ, ೫—೪೭ ಪ.
ಸಾಕ್ಷರಿಕ (ಸಂ.)—ಉಪದೇಶಾಕ್ಷರಗಳನ್ನು ಪಡೆದವನು, ೧೪—೪೭ ವ.
ಸಾಕೆ—ಸಮೀಪ, ೧೦—೧೯೦.
ಸಾಗುಂ—ಸಾಯುವನು. ೧೬—೪೭ ವ.
ಸಾಚಿ (ಸಂ.)—ಓರೆ, ೫—೬೫.
ಸಾಧನ (ಸಂ.)–ಸೈನ್ಯ. ೪—೬೩
ಸಾಮಜ (ಸಂ.)—ಆನೆ, ೧೧—೨೨೪.
ಸಾಯಕ (ಸಂ.)—ಬಾಣ, ೮—೩೭.
ಸಾಂಯಾತ್ರಿಕ (ಸಂ.)–ಪಡಗಿನ ವ್ಯಾಪಾರಿ, ೧—೩೦.
ಸಾರಣ್ಗೆ—ಹತ್ತಿರಕ್ಕೆ, ೯—೩೪.
ಸಾರವಣೆ—ಸಾರಣೆ, ಸಾರಿಸುವಿಕೆ, ೧೩–೩.
ಸಾರೆ—ಸಮೀಪಕ್ಕೆ, ೧೪—೬೫ ವ.

ಸಾಲ (ಸಂ.)—ಮತ್ತಿಯಗಿಡ, ೭—೧೧; ಕೋಟೆ, ೧೦—೧೯೨ ವ.
ಸಾಲಭಂಜಿಕೆ—ಚಿನ್ನದ ಬೊಂಬೆ, ೭—೬೨.
ಸಾವಗಿಸು—ಸರಿಮಾಡು, ೫—೪೨.
ಸಾಹಣ (ಸಂ.)—ಆನೆ ಕುದುರೆಗಳನ್ನು ತರಬಿಯತ್ತು ಮಾಡುವುದು, ೧೫—೩೨
ಸ್ಥಾಸಕ(ಸಂ.)—ಬಳಿಯುವಿಕೆ, ೩—೧೧೬
ಸ್ವಾಂತ (ಸಂ)—ಮನಸ್ಸು, ೬—೧೨೨.
ಸಿಕತ—ಮಳಲು, ೧೬—೫೫.
ಸಿಗ್ಗು—ಲಜ್ಜೆ, ೭—೫೮ ವ.
ಸಿಂದ—ಒಂದು ಬಗೆಯ ಬಾವುಟ, ೧೩—೩೪ ವ
ಸಿಂಪಿಣಿ—ಎರಚಾಟ, ೭—೧೫೯.
ಸಿಬ್ಬ—ಆನೆಯ ಮೈಮೇಲಿನ ಮಚ್ಚೆ, ೧೧—೧೪೩.
ಸಿವಿಗೆ—ಪಲ್ಲಕ್ಕಿ, (ಸಂ. ಶಿಬಿಕಾ), ೩—೪೦.
ಸಿಂಹಾಸಂದಿ(ಸಂ.)—ಸಿಂಹಾಸನ, ೧೧—೧೫೨.
ಸೀಕರಿ—ಸುಟ್ಟುಹೋಪ ಸ್ಥಿತಿ, ೧—೧೬.
ಸೀಂಟು—ಒರಸಿಬಿಡು, ೧೩—೭೧.
ಸೀರುಡು—ಜೀರುಂಡೆ, ೭—೪೬.
ಸೀಸಕ—ಯೋಧರ ಟೊಪ್ಪಿಗೆ, (ಸಂ. ಶೀರ್ಷಕ), ೧೩—೬೦.
ಸುಗಿ—ಭಯಪಡು, ೧೦—೧೬೨ ವ.
ಸ್ಫುಟ್ಟ—ಬೆರಳಿನಿಂದ ನಿರ್ದೇಶಿಸಿ, ೧೫—೨೪.
ಸುಟ್ಟುರೆ—ಸುಂಟರ ಗಾಳಿ, ೪—೬೦
ಸುಮನೋದಾಮ (ಸಂ.)—ಪುಷ್ಪಮಾಲಿಕೆ, ೧೬—೭೫.
ಸುಟ್ಟುಗಾಳಿ—ಸುಳಿಯುಂತಿರುವ (ಸುತ್ತುತ್ತಿರುವ) ಗಾಳಿ, ೯—೧೭.
ಸೂಕಳ(ಸಂ.)—ತುಂಟ ಕುದುರೆ, ೪—೧೧೪
ಸೂಡು—ಧರಿಸು, ೩—೪೬; ಸುಡುವಿಕೆ, ೯—೧೦೯.
ಸೂರುಳ್ದು—ಆಣೆಯಿಟ್ಟು, ೧೫—೬೧ ವ.
ಸೂಸಕ—ಸರ, ೧—೧೨೭.
ಸೂಟ್ರ್—ಸರದಿ, ೧೦—೧೩೮ ವ.
ಸೃಕ್ವ (ಸಂ.)—ಕಟ್ಟವಾಯಿ, ೭—೧೫೭.
ಸೆಡೆ—ಹೆದರು, ೧—೭೬.
ಸೆರಗು—ಸಹಾಯ, ೯—೧೯೯.
ಸೆರೆ—ನಾಡಿ (ಸಂ. ಸಿರಾ), ೪—೩೯.
ಸೆಜ್ಜಿ—ಬಂಧ, ೧೧—೧೦೧ ವ.; ಬಂಧನದಲ್ಲಿರುವವರು, ೧೪—೭೯ ವ.
ಸೇಡು—ಸೆಡೆತುಕೊಳ್ಳುವಿಕೆ, ೪—೬೯.
ಸೇದೆ—ಆಯಾಸ, ೬—೮೩.
ಸೇವಾಳ—ಹಾವಸೆ, ಪಾಚಿ, (ಸಂ. ಶೈವಾಲ), ೧೨—೧೩
ಸೇಸೆ—ಅಕ್ಷತೆ, (ಸಂ. ಶೇಷ), ೫—೧೨೮.
ಸ್ತೇಯ (ಸಂ.)—ಕಳ್ಳತನ, ೧೫—೪೭ ವ.
ಸೈತು—ನೇರವಾಗಿ, ೧೩—೪೫.
ಸೈಪು—ಪುಣ್ಯ, ೧೩—೧೧೩.
ಸೈಂಹಿಕೇಯ (ಸಂ.)—ರಾಹು, ೯ ೧೦೨.
ಸೋಗೆ—ನವಿಲು, ೪—೯.
ಸೋರ್ಚು—ಜಾರಿಸು, ನೂಕು, ೭—೪೬.
ಸೋನ್ಮುಡಿ—ಜೋಲುಬಿದ್ದಿರುವ ತಲೆಗೂದಲು, ೨—೧೩ ವ
ಸೋಲ—ವೋಹ; ೧೧—೭೧.
ಸೋವ—ಅಟ್ಟುವ, ೧—೧೦೭.
ಸೋವತ—ಬಲಿದ್ರವ್ಯ, ೯—೧೩೩.
ಸೋರ್ವ—ಜೋಲುವ, ೧—೧೧೨.

ಹ

ಹಟತ್ (ಸಂ.)—ಪ್ರಕಾಶಿಸುತ್ತಿರುವ, ೨—೧೪.
ಹಮ್ಮ್ಯ (ಸಂ.)—ಉಪ್ಪರಿಗೆ, ೧೦—೧೨೬ ವ.
ಹರವರಿ—ಕ್ಷೇತ್ರ, ೧—೬೪.
ಹರಿದಿಕ್ (ಸಂ.)—ಪೂರ್ವದಿಕ್ಕು, ೭—೫.
ಹಸ್ತಚ್ಛಟಾ (ಸಂ.)—ಚಪ್ಪಾಳೆ, ೧೬—೪೮.

ಹಿಂತಾಳ (ಸಂ.)—ಖರ್ಜೂರ ವೃಕ್ಷ, ಓಲೆಯ ಮರ, ೧೧—೧೧೯.

ಹೇತಿ (ಸಂ.)—ಆಯುಧ, ೧೨—೯೨.
ಹೇಯ (ಸಂ.)–ಬಿಡತಕ್ಕದು, ೬–೧೨೭.

ಐದನೆಯ ಆಶ್ವಾಸದ ೪೫ ನೆಯ ಪದ್ಯದಲ್ಲಿಯ ಮನಸಿಜಾದಿ ಪದಗಳ ಸಂಕೇತಾರ್ಥವನ್ನು ಮುಂದಿನ ಸಂಸ್ಕೃತ ಶ್ಲೋಕಗಳಿಂದ ತಿಳಿಯಬಹುದು:—

ಕಂದರ್ಪಃ ಕಂಕಣಂ ಪ್ರೋಕ್ತಂ ರತಿಸ್ಯಾತ್ ಹಾರಯಷ್ಟಿಕಾ ।
ಧನುರ್ಭ್ರೂಲತಿಕಾ ಜ್ಞೇಯಾ ಧಮ್ಮಿಲ್ಲಃ ಪುಷ್ಪಸಾಯಕಃ ॥

ಕಲಕಿಂಕಿಣಿಕಾ ಕಾಂಚೀ ಕೋಕಿಲಸ್ವನ ಉಚ್ಯತೇ ।
ಅಳಿ ಝಂಕೃತಿಕಾ ಜ್ಞೇಯಾ ನೂಪುರಂ ಭಾಸುರಂ ಬುಧೈಃ ॥

ಶುದ್ಧಿಪತ್ರಿಕೆ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
೧೭	೧೭	ಉ॥	ಮ॥
೩೨	೧೫	ದೆಸೆಯಂ ತುವರಂ	ದೆಸೆಯುಂತುವರಂ
೩೨	೨೫	ಸುರೇಂದ್ರ ಮನ್ಯು	ಸುರೇಂದ್ರಮನ್ಯು
೩೭	೨೨	ಸನ್ಯಾ।	ಸಂನ್ಯಾ।
೪೬	೭	ಕಣ್ಣೂರದಂ	ಕಣ್ಣಾರದಂ
೫೧	೨೩	ತಗಳ್ವುದೀ	ತಗುಳ್ವುದೀ
೯೦	೨೭	ಬಟಿವಟಿ'	ಬಟಿ'ವಟಿ'
೧೦೫	೨೪	ನೇಗೊಡಂ	ನೇಗೊಂಡಂ
೧೧೦	೯	ಕರ್ಣಾರ್ಂತ	ಕರ್ಣಾರ್ಂತ
೧೧೦	೧೨	ಉರ್ಗಳ	ಉಗುರ್ಗಳ
೧೧೬	೧೩	ಮನಿಟ್ಟು	ಮನೀಟ್ಟು
೧೩೦	೭	ರಾಮನಾ	ರಾಮನೊ
೧೪೩	೧೭	ಸೂರ್ಯಂ ಜಯಂ	ಸೂರ್ಯಂಜಯಂ
೧೪೪	೨೭	ತೆಜಿದ	ತೊಜಿದ
೧೬೨	೪	ತತ್ಕೂರ್ಮೆ	ತಕ್ಕೂರ್ಮೆ
೧೭೩	೨೭	ಮರುಗಹಾ	ಮಗರುಹಾ
೧೭೪	೯	ಮಳಿಯೆ	ಮುಳಿಯೆ
೧೮೩	೧೧	ಪಿಪಿದಿರ್ದೆಂ	ಪಿಡಿದಿರ್ದೆಂ
೧೮೫	೨೫	ಶತೃಂ	ಶತ್ರುಂ
೧೮೬	೨೧	ಕಣ್ಗರಗ	ತಣ್ಗರಗ
೧೮೯	೨೫	ಮುಳಿಗಿ	ಮುಳುಗಿ
೧೯೮	೪	[1]ಕೊನೆಗಜ'	ಕೊನೆ[1]ಗಜ'

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
೨೧೫	೯	ಮದನ ವೇಗೆ	ಮದನವೇಗೆ
೨೧೮	೪	ಪೊಳಲೊ	ಪೊಬಲೊ
೨೨೨	೧೧	ಗಿಡಿಸಿ	ಕೆಡಿಸಿ
೨೩೫	೨೦	ವುಲವೊ	ವುಗಿಲವೊ
೨೫೭	೧೩	ನೇಸರ್	ನೇಸಱ್

[ಈ ತಪ್ಪನ್ನು ೩೭೮, ೫೯೬, ೪೦೯, ೪೧೫, ೪೫೨, ೪೬೪, ೪೭೮ ನೆಯ ಪುಟಗಳಲ್ಲಿಯೂ ತಿದ್ದುವುದು]

೨೮೨	೨೯	ಘ್ರಾಣೇಂದ್ರಿಯ	ಘ್ರಾಣೇಂದ್ರಿಯ
೨೯೮	೧೪	ಮೊಳಗಂ	ಮೊಬಗಂ
೩೧೫	೪	ಕೂಂಕು	ತೂಂತು
೩೨೪	೫	ನಂಗಪುಷ್ಪೆ	ನಂಗಪುಷ್ಪೆ
೩೪೭	೧೬	ತೂಂಕಿದಂ	ತೂಂತಿದಂ
೩೫೫	೨೫	ನಿಂತೀರ್ಚಲ್ಕೆ	ನಿಂ ತೀರ್ಚಲ್ಕೆ
೩೬೩	೨೧	ಮಟ್ಟುತಾಳ್ದಿ	ಮಟ್ಟು ತಾಳ್ದಿ
೩೬೬	೨೪	ಳುಣ್ಮವಂ	ಳುಣ್ಮುವಂ
೩೮೨	೨	ಘೋಳಾಯಿಲ	ಘೋಟುಯಿಲ
೩೮೫	೧೫	ಲ್ಲೊಳ	ಲ್ಲೋಳ
೪೯೯	೨೬	ಮೆಲ್ವಾಯ್ವ	ಮೇಲ್ವಾಯ್ವ
೪೩೨	೧೪	ಶಾನನಂ	ಶಾನನನಂ
೪೫೪	೧೫	ಶಂಘ	ಶಂಖ

ನಿಘಂಟು

19	29	ವಾಸಸಾನ	ವಾಸಸ್ಥಾನ	23	4	ಜೈನ	ಜೈನ

ಪಂಪರಾಮಾಯಣದ ಕಥೆ

6	9	ಲವಶ್ಯಕ	ಲಾವಶ್ಯಕ	43	23	ಕೊಡುವ್ನೆ	ಕೊಡುವೆ
7	27	ಕುದರೆ	ಕುದುರೆ	43	24	ರಾವಣನನು	ರಾವಣನನ್ನು
13	19	ಸುತ್ತರೆಂದು	ಸುತ್ತರಬೇಕೆಂದು	66	26	ಶಿರೋವಣಿ	ಶಿರೋಮಣಿ
14	19	ಸ್ತ್ರೀತದ	ಸ್ತ್ರೀತ್ವದ	69	12	ನಗರದ	ನಗದ